ಶ್ರೀಚಂದ್ರಸಾಗರ ವರ್ಣಿವಿರಚಿತ

ಶ್ರೀರಾಮಾಯಣ

ಈ ಗ್ರಂಥವು

ಸ್ವಸ್ತಿಶ್ರೀ ಬಿದರೆ ಪಾಯಸಾಗರ ಸ್ವಾಮಿಗಳವರಿಂದ
ಪ್ರಕಟಿಸಲ್ಪಟ್ಟಿತು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

೧೯೩೯ ನೇ ಇಸವಿ

ಬಿ. ಪದ್ಮರಾಜಪಂಡಿತರ ಸ್ವಕೀಯ
ಶ್ರೀ ಭಾರತೀ ಭವನ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.
ಚಾಮರಾಜನಗರ.

[ಕ್ರಯ ೪—೦—೦

ಪ್ರಸ್ತಾವನೆ.

ಜೈನಮತವು ಅನಾದಿಯೆಂಬುವುದಕ್ಕೆ—ಬೌದ್ಧ ಮತದವರು ತಮ್ಮ ಮುಖ್ಯಗ್ರಂಥಗಳಲ್ಲಿ ತೀರ್ಥಂಕರರ ಪದವನ್ನು ಕೂಡ ದೂಷಿಸಿದ್ದಾರೆ. ವೇದವಾದ ತೈತ್ತರಿಯಾರಣ್ಯಕ ಪ್ರಥಮ ಪ್ರಪಾಠಕ ೨೩ ನೇ ಅನುವಾಕದಲ್ಲಿ ಅರುಣಾ ಎಂತಲೂ, ಕೇತುಗಳೆಂತಲೂ, ವಾತರಸನರೆಂತಲೂ, ಮೂರು ವಿಧ ಋಷಿಗಳು ಇದ್ದರೆಂದು ಹೇಳಿಯಿಧೆ. ವಾತರಸನರೆಂದರೆ— ದಿಗಂಬರರು ಸೃಷ್ಟಿಯ ಪ್ರಾರಂಭದಲ್ಲಿ ದಿಗಂಬರ ಋಷಿಗಳ ಪ್ರಶಂಶೆಯು ವೇದದಲ್ಲಿಧೆ. ಆ ೨ ನೇ ಪ್ರಪಾಠಕದ ೭ ನೇ ಅನುವಾಕದಲ್ಲಿ ದಿಗಂಬರರಾದ ಶ್ರವಣರನ್ನು ಕೇಳಿ ಇತರ ಋಷಿಗಳು ಮೋಕ್ಷಧರ್ಮವನ್ನು ತಿಳಿದರೆಂದಿಧೆ. ಭಾಗವತದ ಐದನೇ ಸ್ಕಂಧದಲ್ಲಿಯೂ, ಹನ್ನೊಂದನೇ ಸ್ಕಂಧದಲ್ಲಿಯೂ ಪ್ರಥಮ ತೀರ್ಥಂಕರರಾದ ವೃಷಭದೇವರ ಕಥೆಯಿಧೆ. ರಾಮನು ಜಿನೇಶ್ವರನಂತೆ ಪರಮ ಶಾಂತತ್ವವನ್ನು ಪಡೆಯಬೇಕೆಂದು ಅಪೇಕ್ಷಿಸಿದನೆಂದು ಹೇಳುತ್ತಾರೆ. ಉದಾಹರಣೆ-ವಾಶಿಷ್ಟರಾಮಾಯಣದ ೧೫ನೇ ಅಧ್ಯಾಯದ ೮ನೇ ಶ್ಲೋಕ-

ನಾಹಂರಾಮೋ ನಮೇವಾಂಛಾ ಭಾವೇಷು ನಚ ಮೇಮತಿಃ ।
ಶಾಂತಮಾಶೀತು ಮಿಛ್ಛಾಮಿ ಸ್ವಾತ್ಮನೀವ ಜಿನೋಯಥಾ ॥

ಸ್ವಸ್ತಿಶ್ರೀ ಪಾಯಸಾಗರ ದಿಗಂಬರ ಮುನಿಗಳು ಗೋಕಾಕ್, ಇವರು ಶ್ರೀಚಂದ್ರಸಾಗರವರ್ಣಿಗಳಿಂದ ರಚಿಸಲ್ಪಟ್ಟ ಶ್ರೀರಾಮಾಯಣವನ್ನು ಪ್ರಿಂಟ್ ಮಾಡಿಸಬೇಕೆಂದು ಸ್ವಸ್ತಿಶ್ರೀ ಬಿದರೆ ಪಾಯಸಾಗರ ಸ್ವಾಮಿಗಳವರಿಗೆ ಹೇಳಿದ್ದರಿಂದ ಅವರು ಬಹುಶ್ರಮಪಟ್ಟು ೨ಓಲೆಪ್ರತಿಗಳನ್ನೂ ಅದರಪ್ರಿಂಟಿಗಾಗಿ ದ್ರವ್ಯ ಸಹಾಯಕರನ್ನೂ ಸಂಪಾದಿಸಿ, ಆ ೨ ಓಲೆಪ್ರತಿಗಳನ್ನೂ ಮತ್ತು ಕೈಬರಹದ ಪ್ರತಿಯೊಂದನ್ನೂ ತಂದುಕೊಟ್ಟಿದ್ದರಿಂದ, ಆಪ್ರತಿಗಳ ಸಹಾಯದಿಂದ ಪ್ರಿಂಟ್ ಮಾಡಲ್ಪಟ್ಟಿಧೆ. ಈ ಗ್ರಂಥದ ಕನ್ನಡ ತಾತ್ಪರ್ಯವು ಚಾಮರಾಜನಗರದ ಜ್ಞಾನೇಶ್ವರಪಂಡಿತರಿಂದ ಸಂಕ್ಷೇಪವಾಗಿ ಬರೆಯಲ್ಪಟ್ಟಿಧೆ. ಅದರಲ್ಲಿ ಕೆಲವು ಹೆಚ್ಚು ವಿಷಯಗಳೂ ಸಹ ಸೇರಿಸಲ್ಪಟ್ಟಿಧೆ.

ಬಿ. ಪದ್ಮರಾಜಪಂಡಿತ.

ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ತಾಲ್ಲೋಕು ಬಿದರೆ ಸ್ವಸ್ತಿಶ್ರೀ ಪಾಯಸಾಗರ (ನೇಮಣ್ಣ) ಸ್ವಾಮಿಗಳವರಿಂದ ಪ್ರಿಂಟ್ ಮೂಲಕ ಪ್ರಕಟಿಸಿರುವ ಗ್ರಂಥಗಳು—

ದಶಲಾಕ್ಷಣಿಕ ಧರ್ಮ, ಷೋಡಶಭಾವನೆ, ಜೈನಧರ್ಮಾಮೃತ ಸಾರ, ಸಹಸ್ರನಾಮ, ಚಿನ್ಮಯಚಿಂತಾಮಣಿ, ಅಕಲಂಕಸ್ತೋತ್ರ ಅರ್ಥ ಸಹಿತ, ಭಕ್ತಾಮರ ಅರ್ಥ ಸಹಿತ, ಜ್ಞಾನಾರ್ಣವ ಸಟೀಕಾ, ರತ್ನಾಕರಂಡ ಶ್ರಾವಕಾಚಾರ, ಜೈನಸಿದ್ಧಾಂತ ಪ್ರವೇಶಿಕ ಇವೇ ಮೊದಲಾದ ಗ್ರಂಥಗಳು ಪ್ರಕಟಿಸಲ್ಪಟ್ಟಿರುತ್ತವೆ.

ಈ ಶ್ರೀ ರಾಮಾಯಣವನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸದಾರರಲ್ಲಿ ಬರೆದು ತರಿಸಿಕೊಳ್ಳಬಹುದು.

ಕ್ರಯ 4—0—0] [ಪೋಸ್ಟೇಜು ಅಲಾಯಿದಾ

ಪುರೋಹಿತ ಚಂದ್ರಯ್ಯ,

ಮಂಡ್ಯ (ಮೈಸೂರು ಸಂಸ್ಥಾನ)

ಕ ವಿ ಚ ರಿ ತ್ರೆ.

ಚಂದ್ರಸಾಗರವರ್ಣಿಗಳಿಗೆ ಬಾಲ್ಯದಲ್ಲಿ ಮುದ್ದುಬ್ರಹ್ಮ ಅಥವಾ ಬ್ರಹ್ಮಣಾಂಕನೆಂದು ನಾಮಕರಣ ಮಾಡಿದ್ದರು. ಈ ಕವಿಯ ಜನ್ಮಸ್ಥಳವು ಮೈಸೂರು ಸಂಸ್ಥಾನದ ತುಮಕೂರು ಜಿಲ್ಲಾ ಕೊರಟಗೆರೆ ತಾಲ್ಲೋಕು ತೋವಿನಕೆರೆ. ಇವರ ಪಿತಾಮಹರು ಚಂದ್ರನಾಥರು. ತಂದೆಯ ಹೆಸರು ಚಂದಣ್ಣನವರು. ತಾಯಿಯಹೆಸರು ಪೊಂಬುಜಿಯವರು- ಇವರಿಗೆ ಚಂದ್ರನಾಥ, ಗುಟ್ಟಬ್ರಹ್ಮ, ಪದ್ಮಣ್ಣ ಎಂಬ ಮೂರು ಜನ ಸಹೋದರರಿದ್ದರು. ಇವರ ಪೂರ್ವೀಕರು ಹೊಸಪೇಟೆ ಬಳ್ಳಾರಿ ಲೈನಿನಲ್ಲಿ ತುಂಗಾಭದ್ರಾ ಸಮೀಪದಲ್ಲಿರುವ ಹುಲಿಗೆಯ ಹೆಗ್ಗಡೆಗಳಾಗಿದ್ದು ಕಾರಣಾಂತರದಿಂದ ತೋವಿನಕೆರೆಗೆ ಬಂದು ನೆಲಸಿದರು.

ವಿಕ್ರಮುಂಥರನ ಕಾವ್ಯದಲ್ಲಿ ೧ ನೇ ಸಂಧಿ ೧೩-೧೪ ನೇ ಪದ್ಯಗಳು.

ಮೇರುಶಿಖರಿಗೆ ದಕ್ಷಿಣಾಸೆಯು । ಧಾರುಣಿಯೊಳನುಪಮಥ ಹುಲಿಗೆಯು । ತೋರುತಿಹುದದು ತುಂಗಭದ್ರೆಯ ತೀರದೆಡೆಯಲ್ಲಿ ॥ ಧಾರುಣೀಶನು ಚಂದ್ರನಾಥಕು । ಮಾರ ಚಂದ್ರಪ್ರಭನ ರಮಣಿಯು । ನಾರಿಮಣಿ ಪೊಂಬುಜಿಯು ಸತ್ಕಲೆಗೂಡಿ ಸುಖದಲ್ಲಿ ॥ ಸಾರಿ ತೋವಿನಕೆರೆಯೊಳಿರ್ಪರು । ಚಾರುತರ ಯಿಕ್ಷ್ವಾಕುವಂಶದ । ಸಾರಸಂಯುತರ ವರಗರ್ಭದಿ ಚಾರುಸುತರಾಗಿ ॥ ತೋರುತಿಹ ನಾಲ್ವರೊಳು ಸನ್ಮತಿ । ದೋರಿ ಚರಿಸುವ ಬ್ರಹ್ಮಣಾಂಕನು । ತೋರಿದನಿತರೊಳು ರಚಿಸಿದ ಭಾಮಿನೀಷಟ್ಪದಿಯ ॥

ಈ ಕವಿಯು ಕೆಲವು ಕಾಲ ಗೃಹಸ್ಥಾಶ್ರಮದಲ್ಲಿದ್ದು ವೈರಾಗ್ಯದಿಂದ ಕೊಲ್ಲಾಪುರದ ಚಂದ್ರಪ್ರಭ ಚೈತ್ಯಾಲಯದಲ್ಲಿ ದೀಕ್ಷೆಯನ್ನು ತೆಗೆದುಕೊಂಡ ನಂತರ ಚಂದ್ರಸಾಗರವರ್ಣಿಗಳೆಂದು ಹೆಸರಾಯಿತು. ಇವರು ಶಾಲೀವಾಹನ ಶಕೆ ೧೭೫೭ನೇ ದುರ್ಮುಖಿ ಸಂವತ್ಸರದವರಿಗೆ ಇದ್ದರೆಂದು ತಿಳಿಯಬರುತ್ತದೆ. ಇವರು ರಚಿಸಿರುವ ಜಿನಮುನಿ ಎಂಬ ಗ್ರಂಥದಲ್ಲಿ ತಾವು ಗೃಹಸ್ಥರಾಗಿದ್ದಾಗ ಮನ್ಮಥಕೊರವಂಜಿ, ನಾಗಕುಮಾರಷಟ್ಪದಿ, ಬ್ರಹ್ಮಶತಕ, ಜಿನಭಾರತವೆಂಬ ನಾಲ್ಕು ಗ್ರಂಥಗಳನ್ನೂ, ದೀಕ್ಷೆಯಾದನಂತರ ರುದ್ರನಕಥೆ, ಮುಲ್ಲಾಶಾಸ್ತ್ರ, ಪರಶುರಾಮಭಾರತ, ಭವ್ಯಾಮೃತ, ಚಂದನಾದೇವಿಯಕಥೆ ಎಂಬ ಐದು ಗ್ರಂಥಗಳನ್ನು ಬರೆದಂತೆ ಹೇಳಿದೆ. ಇವುಗಳಲ್ಲದೆ ಇನ್ನೂ ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ಬರೆದಿದ್ದಾರೆ.

ಶ್ರೀ ವೀತರಾಗಾಯ ನಮಃ

ಸ್ವಸ್ತಿಶ್ರೀ ಚಂದ್ರಸಾಗರಕೃತ ಜಿನರಾಮಾಯಣದ ಮುದ್ರಣಕ್ಕಾಗಿ ಧರ್ಮಸಹಾಯ ಮಾಡಿದ ಧರ್ಮಾತ್ಮರುಗಳ ನಾಮಾಂಕಿತಗಳು.

೧೫೧—೦—೦ ಸ್ವಸ್ತಿಶ್ರೀ ೧೦೮ ಜಯಕೀರ್ತಿ ಮಹಾಮುನಿಗಳ ಸಂಘ

೫೧—೦—೦ ಸ್ವಸ್ತಿಶ್ರೀ ೧೦೮ ದೇಶಭೂಷಣ ಮಹಾಮುನಿಗಳು

೨೫—೦—೦ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕರು, ಕೊಲ್ಲಾಪುರಮಠ.

೨೫—೦—೦ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕರು, ಶ್ರವಣಬೆಳ್ಗೊಳಮಠ

೫—೦—೦ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕರು, ಮೂಡಬಿದರೆಮಠ

೫—೦—೦ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕರು, ಕಾರ್ಕಳಮಠ

೫—೦—೦ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕರು, ಸಿಂಹನಗದ್ದೆಮಠ

೧೦೦—೦—೦ ಶ್ರೀಮತಿ ಹರದರಬಂಡಪ್ಪನವರ ಧರ್ಮಪತ್ನಿ
ಲಕ್ಷ್ಮಮ್ಮನವರು ರಾಯಚೂರು

೫೧—೦—೦ ,, ನೇಮಣ್ಣರಾಯಪ್ಪ
ಗೋಟಡಕೆಯವರು ಬೆಳಗಾಂ

೫೧—೦—೦ ,, ವಾಸಪ್ಪಭರಮಪ್ಪಆರವಾಡೆಯವರು ಸಾಂಗ್ಲಿ

೨೫—೦—೦ ,, ಆಣಿಕಾರ್ ಪುಟ್ಟಸ್ವಾಮಯ್ಯನವರು,
ರಿಟೈರ್ಡ್ ಎಕ್ಸಿಕ್ಯೂಟಿವ್ ಎಂಜನಿಯರ್ ಬೆಂಗಳೂರುಸಿಟಿ

೨೫—೦—೦ ,, ಹರದರಭರಣಪ್ಪನಾಗಪ್ಪನವರು ರಾಯಚೂರು

೨೫—೦—೦ ,, ಚಿಂತಾಮಣಿಸಾತಪ್ಪಬಿರಾಜನವರು ರಾಯಭಾಗ

೨೫—೦—೦ ,, ಕಾಳಪ್ಪಾಅಣ್ಣಾಜಿಲಿಂಗಡೆಯವರು ಶಹಪೂರು

೨೫—೦—೦ ,, ರಾವುಸಾಹೇಬ್
ಕಲ್ಲಪ್ಪಾರಾಜಪ್ಪಾಪಾಟೇಲ್‌ರವರು, ಅಳ್ನಾವರ

೨೫—೦—೦ ,, ಮಂಜಪ್ಪಹೆಗ್ಗಡೆಯವರು ಧರ್ಮಸ್ಥಳ.

೨೫—೦—೦ ಶ್ರೀ॥ ತುಮಕೂರುಶಿವದೇವಮ್ಮನವರು ರಾಯಚೂರು

೨೧—೦—೦ ಶ್ರೀಮಾನ್ ಸಮಸ್ತ ಶ್ರಾವಕಮಂಡಲಿಯವರು ಸಾಲಿಗ್ರಾಮ
೨೦—೦—೦ ,, ತವನಪ್ಪಾ ಅಣ್ಣಪ್ಪಾ
ಲೆಂಗಡೆಯವರು, ವೈದ್ಯ ಶಹಪೂರು
೧೫—೦—೦ ,, ಸಮಸ್ತ ಶ್ರಾವಕ ಮಂಡಲಿಯವರು,
ಚಾಮರಾಜನಗರ
೧೨—೦—೦ ,, ಸಮಸ್ತಶ್ರಾವಕಮಂಡಲಿಯವರು ಮಾಯಮ್ಮಚಿಂಚಿಲಿ
೧೧—೦—೦ ,, ಯಶವಂತಶಾಂತಪ್ಪಮಿರಜೆಯವರು ಚಿಕ್ಕೋಡಿ
೧೦—೦—೦ ,, ತವನಪ್ಪ ಕಲ್ಲಪ್ಪ ಅಂಜಿಯವರು ,,
೧೦—೦—೦ ,, ಬೋರ್ಡಿಂಗ್‌ಬಸ್ತಿ ಪದ್ಮರಾಜುರವರು ಹುಬ್ಬಳ್ಳಿ
೧೦—೦—೦ ,, ಅನಂತರಾವುರವರು ಮುಂಟಗಣಿಮಾಸ್ತರ್ ,,
೧೦—೦—೦ ,, ಗಂಗಪ್ಪನವರು ಬೆಳ್ಳೂರು
೧೦—೦—೦ ,, ಕೆ. ಯಸ್. ಧರಣೇಂದ್ರಯ್ಯನವರು ಮೈಸೂರು
೧೦—೦—೦ ,, ಕಟ್ಟೆಮಾರು ರಘುಚಂದ್ರಬಲ್ಲಾಳರು ಮಂಗಳೂರು
೧೦—೦—೦ ,, ಜಿ. ಕೆ. ಡಿ. ಧರಮಯ್ಯನವರು
ಕಬ್ಬಿಣದಅಂಗಡಿ, ಮೈಸೂರು
೧೦—೦—೦ ,, ಕಸ್ತೂರಿ ಪಾಯಪ್ಪನವರು
ಜನರಲ್ ಮರ್ಚೆಂಟ್, ಮಂಡ್ಯ
೧೦—೦—೦ ಸೌಭಾಗ್ಯವತಿ ಲೀಲಾಬಾಯಿಯವರು ಭರ್ತಾರ್
ಶ್ರೀಮಂದರ ಬಾವುಡೇಕರ್, ಕೊಲ್ಹಾಪುರ
೧೨—೦—೦ ಶ್ರೀಮಾನ್ ಚಿಕ್ಕನಾಗಯ್ಯನವರ
ಧರ್ಮಪತ್ನಿ ಬೊಮ್ಮಕ್ಕಮ್ಮನವರು, ಬೆಂಗಳೂರು.
೧೦—೦—೦ ,, ಹರದರ ಚಂದಪ್ಪನವರ
ಧರ್ಮಪತ್ನಿ ಶಿವದೇವಮ್ಮನವರು, ರಾಯಚೂರು.
೧೦—೦—೦ ,, ಸಮಸ್ತಶ್ರಾವಕಮಂಡಲಿಯವರು ರಾಯಭಾಗ
೫—೦—೦ ,, ಶ್ರೀಪಾಲ್‌ನೇಮಿನಾಥರವರುವೈದ್ಯ ಸೋಲಾಪುರ
೫—೦—೦ ,, ಪಂಡಿತ ರಾಮಚಂದ್ರಸುಬ್ರಾವ್
ರವರು ಉಪಾಧ್ಯೆ ಸ್ತವನಿಧಿ
೫—೦—೦ ,, ಪುರೋಹಿತ ಚಂದ್ರಯ್ಯನವರು, ಮಂಡ್ಯ
೫—೦—೦ ,, ಹರದರ ಸಣ್ಣಭರಮಣ್ಣನವರು ರಾಯಚೂರು

೫—೦--೦ ಶ್ರೀಮಾನ್ ಹರದರ ಪದ್ಮರಾಜುಯವರು, ರಾಯಚೂರು
೫—೦—೦ ಶ್ರೀ॥ ತವನವ್ವ ಕಾರಂಜಿಯವರು ಚಿಕ್ಕೋಡಿ
೫—೦—೦ ಶ್ರೀಮಾನ್ ಬಿ. ಕೆ. ನೇರಲೇಕರ್‌ರವರು,
ಹೆಡ್ಮಾಸ್ತರ್, ಚಿಕ್ಕೋಡಿ
೫—೦—೦ ,, ಚಾಮಣ್ಣ ಅನಂತಪ್ಪ ಪತ್ರಾವಳಿಯವರು, ಗೋಕಾಕ
೫—೦—೦ ,, ದುರಿಯಪ್ಪದೇವೇಂದ್ರಪ್ಪಹರ್ದಿಯವರು ನಿಪ್ಪಾಣಿ
೫—೦—೦ ,, ಜಿನ್ನಪ್ಪಾಬಾಳಪ್ಪಾ ಕಮತಿಗೆಯವರು ಅಕೋಳ
೫—೦—೦ ,, ಶ್ರೀಚಂದ್ರನಾಥಸ್ವಾಮಿ
ಧರ್ಮದರ್ಶಿಯವರು, ಶಮನವಾಡೆ
೫—೦—೦ ,, ನೇಮುಗೌಡದೇವಗೌಡಪಾಟೀಲ್‌ರವರು ಬೆಡಿಕ್ಯಾಳ
೫—೦—೦ ,, ತಾತ್ಯಖುಮುಗೊಂಡ ಪಾಟೀಲ್‌ರವರು, ಭೋಜ
೫—೦—೦ ,, ಗಿರಗೌಡ ಭರಮುಗೌಡ ಪಾಟೀಲ್‌ರವರು ,,
೫—೦—೦ ,, ಅಪ್ಪಾರತ್ನಪ್ಪಾ ಚೌಗುಲೆಯವರು ,,
೫—೦—೦ ,, ಬಾಳಗೊಂಡರಾಯಗೊಂಡಪಾಟೀಲ್‌ರವರು ,,
೫—೦—೦ ,, ಪಾಯಗೊಂಡಯದುಗೊಂಡ
ಪಾಟೀಲ್‌ರವರು ಮಾಗೂರು
೫—೦—೦ ,, ನಾನಾಬಾಬಾಜಿಶೆಟ್ಟಿ
ಬಾವುಡೇಕರ್‌ಯವರು ಕೊಲ್ಲಾಪುರ
೫—೦—೦ ,, ಗಣಪತಿ ಬಾಹುಯವರು ,,
೫—೦—೦ ,, ಕಲ್ಲಪ್ಪಾ ಸಖಾರಾಂಜೀರಿಗೆಯವರು ,,
೫—೦—೦ ,, ಭೂಪಾಲಪ್ಪಾಜೀರಿಗೆಯವರು
ಮಾಲಕ ಬಾಗಿಬಂಧು ,,
೫—೦—೦ ,, ಮಲ್ಲಪ್ಪಾ ಜೀರಿಗೆಯವರು ,,
೫—೦—೦ ,, ಗಣಪತಿಬಾಬಾಜಿ ಲಗಾರೆಯವರು ,,
೫—೦—೦ ,, ವಾಸುದೇವ ಅನಂತ
ಬ್ರಹ್ಮದಂಡೆಯವರು ವಕೀಲ್ ,,
೫—೦—೦ ,, ಶಾಂತಪ್ಪಾದಾದಾಹೇರ್ವಾಡೆಯವರು ,,
೫—೦—೦ ,, ಅಪ್ಪಾಜಯ್ಯನವರ ಜ್ವಾಲ್ನಯ್ಯನವರು, ಬೆಳ್ಳೂರು
೫—೦—೦ ,, ಶಾಂತಿ ಬ್ರಹ್ಮಸೂರಯ್ಯನವರು ,,
೫—೦—೦ ,, ಗಂಗ ಪುಟ್ಟಣ್ಣನವರು ,,

೫—೦—೦ ಶ್ರೀಮಾನ್ ಚಿಲ್ಲರೆಅಂಗಡಿ ಮುದ್ದಯ್ಯನವರ
ಹೊನ್ನಯ್ಯನವರು ಬೆಳ್ಳೂರು
೫—೦—೦ ,, ಸ್ಕೂಲ್ಮಾಸ್ಟರ್ ಪಿ. ಎಸ್. ಪದ್ಮರಾಜಯ್ಯನವರು ,,
೫—೦—೦ ,, ಧರಣಯ್ಯನವರ ಶಾಂತರಾಜಯ್ಯನವರು ,,
೫—೦—೦ ,, ಆರ್. ಬಿ. ಪಾರ್ಶ್ವನಾಥಯ್ಯನವರು ಬೆಂಗಳೂರು
೫—೦—೦ ,, ಶ್ಯಾಮರಾಜಪ್ಪನವರು ತುಮಕೂರು
೫—೦—೦ ,, ಅಪ್ಪಣ್ಣಶೆಟ್ರು ಧರಣಶೆಟ್ಟರು ,,
೫—೦—೦ ,, ಟಿ. ಬಿ. ನಾಗರಾಜಯ್ಯನವರು,
ಜೈನಯುವಕಸಂಘ, ,,
೫—೦—೦ ,, ಪಾರಿಸಪ್ಪಬಾಬಣ್ಣಹೇರಿರವರು ಜಮಖಂಡಿ ಹುಬ್ಬಳ್ಳಿ
೫—೦—೦ ,, ಶಿರಸಪ್ಪ ತಿಮಪ್ಪ ಮಾಲಗಿತ್ತಿಯವರು ,,
೫—೦—೦ ,, ಧರಣಪ್ಪನೇಮಿರಾಜಪ್ಪನವರು ಸೂಜಿ ,,
೫—೦—೦ ,, ದೇವೇಂದ್ರಪ್ಪಗೋವಿಂದಪ್ಪದೇಶನೂನ್ಯರವರು ,,
೫—೦—೦ ,, ನಾಭಿರಾಜಪ್ಪ ಭರಮಪ್ಪ ಬಿಳಗಿಯವರು ,,
೫—೦—೦ ,, ಮಲ್ಲಪ್ಪರಾಯಪ್ಪನವರು
ಅವರಾದಿ ಪಾರಿಷ್ಟರ್, ಮಮದಾಪುರ
೫—೦—೦ ಶ್ರೀಮಂತ ಜಾನಕೀಬಾಯಿದೇಶಪಾಂಡೆಯವರು ಅಣ್ಣೀಗೆರೆ
೫—೦—೦ ಶ್ರೀಮಂತ ಪುಷ್ಪಾವತಿಬಾಯಿದೇಶಪಾಂಡೆಯವರು ,,
೫—೦—೦ ಶ್ರೀಮಾನ್ ಪುರದಪ್ಪ ಬಸಪ್ಪ ನವಳ್ಳಿಯವರು ,,
೫—೦—೦ ,, ಭೂಪಾಲ ಬಾಳಪ್ಪ ಬಾಗಿಯವರು
ಪ್ರೊಫೆಸರ್, ಧಾರವಾಡ
೫—೦—೦ ,, ರಾಯಪ್ಪದಾದ ಪತ್ರಾವಳಿಯವರು ,,
೫—೦—೦ ,, ಪದ್ಮಪ್ಪನೀಲಕಂಠಪ್ಪ ಪತ್ರಾವಳಿಯವರು ,,
೫—೦—೦ ,, ನಾಗರಾಜಯ್ಯನವರು ವಕೀಲ್ ಮಂಗಳೂರು
೫—೦—೦ ,, ಬ್ರಹ್ಮಯ್ಯಶೆಟ್ಟರು ಪುತ್ತೂರು
೫—೦—೦ ಶ್ರೀ ಚಲುವಮ್ಮನವರು ನಿಡುವಳ್ಳಿ (ದ. ಕ.)
೫—೦—೦ ಶ್ರೀಮಾನ್ ಬ್ರಹ್ಮಸೂರಯ್ಯನವರು ಸಕಲೇಶಪುರ
೫—೦—೦ ,, ಬಾಳಪ್ಪತಿರಗೋಪಿಯವರು ಕಿರಾಣಿಅಂಗಡಿಸಾಂಗ್ಲಿ

—॥ ಶ್ರೀ ಮುನಿಸುವ್ರತಾಯ ನಮಃ ॥ –

ಶ್ರೀರಾಮಾಯಣ

೧. ಪೀಠಿಕಾಸಂಧಿ

ಕವಿಯು ಶ್ರೀ ಚಂದ್ರಪ್ರಭ ತೀರ್ಥಕರನ್ನೂ, ಸಿದ್ಧ ಪರಮೇಷ್ಠಿಗಳನ್ನೂ, ಆಚಾರ್ಯರನ್ನೂ, ಉಪಾಧ್ಯಾಯರನ್ನೂ, ಸರ್ವಸಾಧುಗಳನ್ನೂ, ಸರಸ್ವತಿ ದೇವಿಯನ್ನೂ, ವೃಷಭಸೇನಾದಿ ಗಣಧರರನ್ನೂ, ಯಕ್ಷರನ್ನೂ, ಮುನಿಗಳನ್ನೂ, ದೇವಗುರು ಶಾಸ್ತ್ರಗಳನ್ನೂ ಸ್ತೋತ್ರಮಾಡಿ, ಸೇನಗಣದ ಲಕ್ಷ್ಮೀಸೇನ ಭಟ್ಟಾರಕರಿಗೆ ನಮಸ್ಕರಿಸಿ, ಗುರುಪಂಡಿತಾಚಾರ್ಯರ ಅಪ್ಪಣೆಯಂತೆ ಗಂಜಾಮ್ ಭವ್ಯರುಗಳು ಕೇಳಿಕ್ಕೊಂಡದ್ದರಿಂದ ರಾಮಾಯಣವನ್ನು ಸಮವಸರಣದಲ್ಲಿ ಗಣಧರರು ಮಗಧರಾಜನಿಗೆ ಅಪ್ಪಣೆ ಕೊಡಿಸಿದಂತೆ ಶ್ರೀ ಚಂದ್ರಸಾಗರರು ಈ ರಾಮಾಯಣವನ್ನು ಹೇಳಿರುತ್ತಾರೆ.

ಪರಮ ವಾಂಛಿತ ಬೋಧವಿಸ್ಫುರ ।
ವರದ ನಿರ್ಮಲ ಭಾವಸನ್ನುತ ।
ನಿರತ ಶಮದಮ ಕಲಿತ ಪುಣ್ಯಾಂಬೋಧಿ ಶಶಿವರನೇ ॥
ಅರಿದು ನಿಮ್ಮಯ ಚರಣಯುಗಕೆ ।
ಶಿರವನಿಡುತಲಿರೆ ಪಾಯಸಾಗರ ।
ಪರಮ ವಾಕ್ಯದಿ ರಾಮಚರಿತೆಯ ಲಿಖಿಸೆ ಮಾತಿನಲೀ ॥

ಸರಸತಿ ಜಾಪಿಸಂ ಜಿನರಾಜೇಂದ್ರ ಪದಾತ್ಮಕ ನನ್ಯಮಾತನಂ ।
ವಿರಸದೊಳಾದರುಂ ಪಸರಿಸದುತ್ತಮ ಯೋಗಿಯು ನಿದಾನನುಂ ॥
ನಿರುತದಿ ಬೋಧಿಪಂ ವರಜಿನೇಶ್ವರನಾಜ್ಞೆಯ ಭವ್ಯ ಸಂಘಕೇ ।
ಭರದಿದರಿಂದೆ ಪೇಳುವವರಾ ಬಿದರೇಯರು ಪಾಯಸಾಗರಂ ॥ ೧ ॥

ಮಗಧದೇಶದ ರಾಜಾಧಿರಾಜನಾದ ಶ್ರೇಣಿಕ ಮಹಾರಾಜನ ಉಪವನದಲ್ಲಿ ಚರನು (ಬೇಸಗೆ ಬಿಸಲಿನಿಂದ ಬಳಲಿ) ಹೇಳುತ್ತಾನೆ.

ತೊರೆಹರಿಯುಡುಗೆ ಕೊಡೆ । ಕೆರೆಬತ್ತಿ ಬೀಡೇರೆ ।
ಬರಿವರಂಬತ್ತೆ ಪಥಿಕರ ಬಾಯ್ಗಳು ॥
ಮರುಗೆ ತಿಮಿನಿಕರಂಗ । ಉರೆ ಕಾಯ್ದ ಕೆಸರನೊಳು ।
ಬಿರುಗಾಳಿಬೀಸೆ ಬೇಸಿಗೆ ಬಂದದು ॥ † ॥
ತರುಗಳೆಲೆಯಿಕ್ಕಿದವು । ಮರುಮರೀಚಿಕೆಗಳಿಗೆ ।
ಹರಿಣಗಳು ನೀರಳ್ಕೆಯಿಂ ನರಿದವು ॥
ಸರಸಿಜಾಕರದೊಳಾ । ದರವುಳಿಯೆ ಮಧುಪಂಗ ।
ಉರಿವರಿಯತಂದು ಬಂದದು ಬೇಸಿಗೆ ॥

ಉಪವನಚರನು ಅತ್ತಿತ್ತಸಂಚರಿಸುತ್ತ ತನ್ನಸಹಚರಿಗೆ ಹೇಳುತ್ತಾನೆ. "ಎಲೆ ನೋಡು ನೋಡು! ಎಡವನ್ನು ಬಲವನ್ನು ನೆಲವನ್ನು ಬೆಂಕಿಯನ್ನು ಒಲೆಯಲ್ಲಿ ಸುಟ್ಟ ಗರಿಕೆಯಂತೆ ಈ ಲತೆಗಳಿವೆ, ಬಿಸಲಿನ ತಾಪದಿಂದ ಸೊಂಡಲನ್ನು ಎತ್ತಿ ಬಳಲಿ ಘೀಳಿಡುತ್ತಾ ಚೇಷ್ಟೆಯನ್ನು ಬಿಟ್ಟು ಜೋಲಿಬಿದ್ದು ಬೆಂದು ಬೆಂಡಾದ ಈ ಶುಂಡಾಲವನ್ನು ನೋಡು. ಪುಷ್ಪಗೊಂಚಲಲ್ಲಿ ಮಧುಪಾನಮಾಡಿ ಮತ್ತಮದಿಸಿದ್ದ ಈ ಆರಡಿಯು ತಾದಾತ್ವಿಕನಂತೆ (ಪಿತರಾರ್ಜಿತ ಆಸ್ತಿಯನ್ನೇ ತಿನ್ನುವನು) ಬಿಸಲಿನಿಂದ ಬೆಂದು ಉಡಗಿವೆವು. ಈಪಂಚಾಸ್ಯವು ಚಂಡರಶ್ಮಿಯ ಆಘಾತದಿಂದ ಕಾದಶಿಲಾಗೃಹದಲ್ಲಿರಲಾರದೆ ಈ ನವಚೂತ ವೃಕ್ಷದ ಕೆಳಗೆ ನಿಂತು ನಾಲಿಗೆಯನ್ನು ನೀಡಿ ಅರ್ಧ ಬಾಯನ್ನು ತೆರದುಕೊಂಡು ಅರಕಣ್ಣನ್ನು ಮುಚ್ಚಿ ಒಡೆಯನಾದ ವರ್ಧಮಾನಸ್ವಾಮಿಯನ್ನು ಧ್ಯಾನಮಾಡುವಂತೆ ಕಾಣುತ್ತೆ."

"ಆ ಸಹಚರಿ—ಎಲೈ ಆರ್ಯನೆ! ಅತ್ತ ನೋಡು. ಈ ಹರಿಣಿಯು ಎರಡು ಕಿವಿಯನ್ನು ನೆಟ್ಟಗೆ ಮಾಡಿಕೊಂಡು ಬೆಚ್ಚಿಬೀರುವ ಕಣ್ಗಳಿಂದ ಕೂಡಿ ಬಾಲವನ್ನು ಕೊಕ್ಕರಿಸಿಕೊಂಡು ಹಾರುತ್ತಾ ಹಾರುತ್ತಾ ಮಾವಿನಮರದ ಕೆಳಗಿರುವ ಸಿಂಹವನ್ನು ಲಕ್ಷಿಸದೆ ಆ ಮಾವಿನಮರದ ನೆರಳಿಗೇನೆ ಹೋಗುತ್ತೆ. ಆಶ್ಚರ್ಯ! ಆಶ್ಚರ್ಯ!" ವನಚರ—ಅತ್ತನೋಡಿ ಅತ್ಯಂತವಾಗಿ ಎಲೆಗಳು ಅಲಗಾಡುತ್ತಿವೆ. ಚಿಗುರು ಮತ್ತು ಹೂವು ಹೀಚು ಕಾಯಿಗಳಿಂದ ಕೂಡಿ ಈ ಆಮ್ರವೃಕ್ಷವು ಇದರಲ್ಲಿ ಸೇರಿರುವ ಆರಗಿಳಿಯ ಕೂಗಿನಿಂದ ವಸಂತರ್ತುತು

ಬಂತೆಂದು ಹೇಳುವದಾಗಿಧೆ. ಆ ಸಹಚರಿ–ಈ ಮರಂದವಾದ ಮಾಕಂದ ವೃಕ್ಷದ ಬಳಿಯಲ್ಲಿರುವ ಕಮಲ ಪುಷ್ಕರಣಿ ಕೊಳವು ತುಂಬಿತುಳುಕುತ್ತಲಿಧೆ. ಹಂಸಪಕ್ಷಿಗಳು ರೆಕ್ಕೆಗಳ ಪಸರಿಸಿ ಈ ಪದ್ಮಕೇಸರಗಳ ಕುಕ್ಕಿ ತಿನುತ್ತಲಿವೆ. ಇದೇನಾಶ್ಚರ್ಯ ! ಇದೇನಾಶ್ಚರ್ಯ ! ಇದೇನು ಈ ವ್ಯಾಘ್ರನು ನಮ್ಮನ್ನು ಪ್ರಿಯಸ್ನೇಹಿತನಂತೆ ನೋಡುತ್ತೆ. ಪುಣ್ಯತತಿಯಂತೆ ನಿರ್ಮಲವಾಗಿ ನಿಂತಿಧೆ ಸುಧಾಕರನಂತೆ ನೋಡುವುದಕ್ಕೆ ಆಹ್ಲಾದಕರವಾಗಿರುತ್ತೆ. ಮರಾಳನಂತೆ ಸರಸ್ಸನ್ನೇ ನೋಡುತ್ತಲಿಧೆ. ಮಲಯಾನಿಲದಂತೆ ಮಂದವಾಗಿ ಸಂಚರಿಸುತ್ತ ಲಿಧೆ. ಇದೇನಾಶ್ಚರ್ಯ. ಆಶ್ಚರ್ಯ!

ವನಚರನು ಹುಬ್ಬನ್ನು ಮೆಲಕ್ಕೆತ್ತಿ ಕಣ್ಣುಗಳನ್ನೂ ಬಾಯನ್ನೂ ದೊಡ್ಡದಾಗಿಭಿಟ್ಟು ಬಿರುಗಣ್ಣನ್ನು ಬಿಡುತ್ತ ಕೈಗಳನ್ನು ಮೇಲಕ್ಕೆತ್ತಿ ಮೂಗಿನ ಮೇಲೆ ಬೆರಳನ್ನಿಟ್ಟು ಬೇಗಬೇಗನೇ ಉಸರನ್ನು ಬಿಡುತ್ತಾ ಶಿಳ್ಳುಹಾಕುತ್ತಾ ಅತ್ತಿತ್ತ ನೋಡಲು ವಿಪುಲಾಚಲವು ಕಣ್ಣಿಗೆಬಿತ್ತು. ಆಗ ವನಚರನಮುಖ ದಲ್ಲಿ ನಗೆಹುಟ್ಟಿ ವಿಕಾಸಉಂಟಾಯಿತು. ತಲೆಯು ದೇಹವು ನೆಟ್ಟಗೆ ನಿಂತು ಮೈಉಬ್ಬಿತು. ರೋಮಾಂಚವಾಯಿತು. ಹಾರುತ್ತಾ ಹಾಡುತ್ತಾ ಕುಣಿಯುತ್ತಾ ಚಪ್ಪಾಳೆಹೊಡೆಯುತ್ತಾ—ತನ್ನ ಪ್ರಿಯಸಹಚರಿಯನ್ನು ಕುರಿತು ನೋಡು, ನೋಡು. ತ್ರಿಲೋಕ ಒಡೆಯನಾದ ಶ್ರೀವರ್ಧಮಾನಸ್ವಾಮಿಯ ಸಮವಶರಣವು ವಿಪುಲಾಚಲದ ಮೇಲೆ ನೆಲಸಿರುತ್ತೆ. ಮೇಲೆ ಮೇಲೆ ನೋಡು. ನೋಡು. ವನಚರಿಯು ಮುಖವನ್ನು ವಿಪುಲಾಚಲದ ಆಕಾಶದ ಕಡೆಗೆಎತ್ತಿ ಕಣ್ಣುಗುಡ್ಡೆಗಳನ್ನು ಮೇಲಕ್ಕೆ ಮಾಡುತ್ತಾ ಮೊಣಕಾಲೂರಿ ಕೈ ಮುಗಿದು ನಮಸ್ಕಾರಮಾಡಿ ಕೀರ್ತನೆ ಹೇಳಿದಳು.

ಕಂ॥ ಘನದುಷ್ಕೃತಬಳ ನಿರ್ವೆ ।
ನಂದಕರಚಾರಿತ್ರಚಿತ್ರಮಾಗಿದೆ ಪೊಗಳ್ಗಂ ॥
ಜಿನನಾಥ ಭವದ್ಗುಣಮಂ ।
ವಿನತೋರ್ವೀಜನಮನಂತ ಮತ್ತ್ರುತಿಸಜ್ಞಾ ॥ * ॥

ವನಚರ— "ಎಲೈ ಪ್ರಿಯಳೆ! ಈ ಮಹಾದೇವನ ಆಗಮನ ವನ್ನು ಮಹಾರಾಜನಿಗೆ ಅರಿಕೆಮಾಡುವುದಕ್ಕೆ ಹೋಗುತ್ತೇನೆ. ನೀನು ಮಹಾ ದೇವನ ದರ್ಶನಕ್ಕೆ ಸನ್ನದ್ಧಳಾಗು" ಎಂದು ಹೇಳಿ ವನಚರನು ಮಗಧದೇಶದ ದೊರೆಯಾದ ಶ್ರೇಣಿಕಮಹಾರಾಜನ ಆಸ್ಥಾನಕ್ಕೆ ಹೋಗಿ ಅಕಾಲದನೂತನ

ಫಲಪುಷ್ಪಗಳನ್ನು ತೆಗೆದುಕೊಂಡು ಹೋಗಿ ರಾಜನ ಮುಂದಿಟ್ಟು ದೊರೆಗೆ ನಮಸ್ಕರಿಸಿ—

ಮಗಧಭುವನರಾಜಾ ಚೇಳಿನೀಪ್ರಾಣಕಾಂತ ।
ವಿಗತವಿಷಮರಾಜಾ ಭವ್ಯಲೋಕೈಕಸಾರ ॥
ಅಗಣಿತಗುಣಧಾಮಾ ಕೀರ್ತಿಕಾಂತಾಪ್ರಸಾರ ।
ನಿಗಮವಿದಿತಭಾವೊ ಸಜ್ಜನಾಂಭೋಧಿಚಂದ್ರ ॥

ಭೋ ! ರಾಜಾಧಿರಾಜ ಮಹಾರಾಜನೇ ! ನಮ್ಮ ಪುರವರ ಬಹಿರುದ್ಯಾನ ಬಹಿರವಸ್ಥಿತ ಪಶ್ಚಿಮ ದಿಗ್ಗತ ವಿಪುಲಾಚಲ ಪರ್ವತದ ಮೇಲೆ ಮಹಾವೀರ ವರ್ಧಮಾನ ಸ್ವಾಮಿಯವರ ಸಮವಶರಣವು ನೆಲಸಿರುತ್ತೆಂತ ಬಿನ್ನಹವನ್ನು ಮಾಡಿದನು.

ಶ್ರೇಣಿಕ ರಾಜನು ಈ ವನಪಾಲಕನ ವಚನವನ್ನು ಕೇಳಿ ಮೇಘಧ್ವನಿಯನ್ನು ಕೇಳಿದ ನವಿಲಿನಂತೆ ಸಂತೋಷದಿಂದ ಕೂಡಿ, ಸಿಂಹಾಸನದಿಂದಿಳಿದು ಏಳು ಹೆಜ್ಜೆಗಳನ್ನಿಟ್ಟು ದೇವರಿಗೆ ನಮಸ್ಕರಿಸಿ, ವನಪಾಲಕನಿಗೆ ಪಾರಿತೋಷಕವನ್ನು ಕೊಟ್ಟು ಆನಂದ ಬಾಷ್ಪದೊಡನೆ ಚೇಳಿನೀ ಮಹಾದೇವಿಗೆ ಈ ಶುಭ ವಚನವನ್ನು ಹೇಳಿ, ಆನಂದಭೇರಿಯನ್ನು ಹೊಡಿಸಿ, ಚೇಳಿನೀ ಮಹಾದೇವಿ ಸಮೇತ ಪರಿಜನ ಪುರಜನ ಅಂತಃಪುರಜನರೊಡಗೂಡಿ ಪಾದಮಾರ್ಗದಿಂದ ನಡೆದು ದೂರದಲ್ಲಿ ವಿಪುಲಾಚಲದ ಮೇಲೆ ಪ್ರಕಾಶಿಸುತ್ತಿರುವ ಸಮವಸರಣವನ್ನು ಚೇಳಿನಿಗೆ ತೋರಿಸಿ, “ ಎಲೈ ಪ್ರಿಯಳೆ ! ಲಾಲಿಸು, ಈ ಪರಿದೃಶ್ಯಮಾನ ಸಮವಸರಣವು ಅನಂತ ಕೋಟಿಸೂರ್ಯಚಂದ್ರರಂತೆ ಪ್ರಕಾಶಿಸುತ್ತಲಿಥೆ. ಈ ಸಮೀಪವರ್ತಿಯಾದ ಚತುರ್ದಿಗ್ಗತ ಮಾನಸ್ತಂಭವು ಬಹುವಿಧ ಕರ್ಮಗಳಿಂದುಂಟಾದ ವಿಕಾರಶಕ್ತಿರೂಪವಾದ ಮಾನಕಷಾಯಗಳನ್ನು ಕಳಿದು, ನಿತ್ಯನಿರ್ವಿಕಲ್ಪ ನಿರ್ವಿಕಾರರೂಪವಾದ ಅಜ್ಞಾನವನ್ನು ಕಳೆದು, ವಾಙ್ಮನ ಗೋಚರಾಪ್ರಮೇಯ ಶುದ್ಧ ಸಮ್ಯಕ್ತ್ವವನ್ನುಂಟು ಮಾಡತಕ್ಕದ್ದಾಗಿಥೆ. ” ಎಂದು ಹೇಳಲಾಗಿ ಚೇಳಿನೀ ಮಹಾದೇವಿಯು “ ಪ್ರಿಯನೆ, ಮತ್ತೆ ಏನು ಫಲಪ್ರಾಪ್ತಿಯು ಮಾನಸ್ತಂಭದಿಂದುಂಟಾಗುತ್ತೆ ? ” ಅದನ್ನು ಹೇಳಬೇಕೆಂದು ಬೇಡಲು ಶ್ರೇಣಿಕ ಮಹಾರಾಜನು ಹೇಳಲುದ್ಯೋಗಿಸಿದನು— “ ಪುರಾಕೃತ ಪಾಪಪರಿಪಾಕದಿಂದ ಯಾರು ತಲೆತಗ್ಗಿಸಿ ಮುಖವು ಬಾಡಿ ಹಣೆ ನರಿಗಟ್ಟಿ ಜೋಲು ಮುಖವಾಗಿ ನೇತ್ರಕಾಂತಿಯು ತೊಲಗಿ,

ಹುಬ್ಬು ಮೇಲೆಯಾಗಿ ರೆಪ್ಪೆಮುಚ್ಚಿ ತೆಗೆಯುತ್ತಾ, ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಾ, ದೇಹವು ಕುಗ್ಗಿ ದುರ್ಬಲದಿಂದ ಕೃಶವಾಗಿ ರಕ್ತಸಂಚಾರವು ಮಂದವಾಗಿ ನಿಟ್ಟುಸುರು ಬಿಡುತ್ತಾ, ಗದ್ಗದಸ್ವರದಿಂದ ಬಾಯಿಬಡಿದುಕೊಳ್ಳುತ್ತಾ ತಲೆಕೆದರಿಕೈಬೆರಳುಗಳನ್ನು ಮುರಿಯುತ್ತಾ, ಎದೆಬಡಿದುಕೊಂಡು ಹೊರಳಾಡಿ ಹುಟ್ಟು ಮೂರ್ಛೆಯುಳ್ಳವರಾಗಿದ್ದವರು ಮಾನಸ್ತಂಭದರ್ಶನವಾದಕ್ಷಣವೆ ಅಂಥಾವರಿಗೆ ಮುಖದಲ್ಲಿ ಕಾಂತಿಹುಟ್ಟಿ ಗೆಲವು ನಗೆ ವಿಕಾಶವುಂಟಾಗಿ ಬಾಯಲ್ಲಿ ಮಾತು ಸ್ಫುಟವಾಗಿಯೂ ಗಟ್ಟಿಯಾಗಿಯೂ ಹೊರಟು ಜಯಘೋಷ ಹರ್ಷಾನಂದವನ್ನು ಮಾಡುವರು. ದೇಹವು ನೆಟ್ಟಗಾಗಿ ಉಬ್ಬಿ ಬಲವಾಗಿಪುಲಕವುಂಟಾಗುವುದು. ” ಎಂದು ಹೇಳುತ್ತಿರುವಾಗ ಸಮವಸರಣವು ಆಸನ್ನವಾಗಲು ಸಮವಸರಣವನ್ನು ಶ್ರೇಣಿಕನು ಚೇಳಿನೀ ಸಮೇತ ಅತಃಪುರ ಪರಿಜನ ಪುರಜನರೊಡನೆ ನೊದಲನೆ ಹಂತವನ್ನು ಹತ್ತಿ ಕೂಡಲೆ ಪುಟಹಾರಿದಂತೆ ೨೦ ಸಾವಿರ ಸೋಪಾನ ಹಾದು ಹೊಕ್ಕು ಸಮವಸರಣದೊಳಗೆ ಪ್ರವೇಶಿಸಿ ರಾಜನು ಸಮವಸರಣಮಧ್ಯಸ್ಥಿತ ತ್ರಿಮೇಖಲಾ ಪೀಠಾಗ್ರ ದೇದೀಪ್ಯಮಾನ ಸುವರ್ಣವರ್ಣ ಸಹಸ್ರಾಷ್ಟದಳ ಕಮಲಕರ್ನಿಕಾಗ್ರಕ್ಕೆ ಸೋಕದೆ ಚತುರಂಗುಲ ಪ್ರಮಾಣದಲ್ಲಿ ನೆಲಸಿರುವ ವರ್ಧಮಾನ ತೀರ್ಥಂಕರರನ್ನು ತ್ರಿಪ್ರದಕ್ಷಿಣಗೈದು ಇಷ್ಟಾರ್ಥಪೂರ್ತಿಯಿಂದ ತೃಪ್ತನಾಗಿ ವೈರಾಗ್ಯದಿಂದೊಡಗೂಡಿ ಮನಸ್ಸಿಗೆ ಉತ್ಸಾಹವು, ಧೈರ್ಯವು, ಸ್ಥೈರ್ಯವು, ಸ್ವಾಸ್ಥ್ಯವು, ಸಹನವು, ತಾಳ್ಮೆಯು, ಪ್ರಸನ್ನತೆಯು ಸಹ ಶ್ರೇಣಿಕನಿಗೆ ಪರಿಪೂರ್ಣವಾಗಿ ಉಂಟಾಗಲಾಗಿ ಧರ್ಮಶಾಸನವಾದ ಸಂಕಲ್ಪವುಂಟಾಗಲು ಉದ್ದೇಶಪೂರ್ವಕವಾಗಿ ದಂಡಾಸನಾರ್ಥವಾಗಿ ಕೈಕಾಲುಗಳನ್ನು ಬಿಟ್ಟು ಸ್ವಾಮಿಯಲ್ಲೇ ದೃಷ್ಟಿಯಿಟ್ಟು ದೂರಾಲೋಚನೆಗೆ ಮನಸ್ಸನ್ನು ಹೋಗಿಸದೆ ಆಂತರ್ಯದೃಷ್ಟಿಯನ್ನು ಸ್ವಾಮಿಯ ಪಾದದಲ್ಲಿಟ್ಟು ಸ್ತೋತ್ರಿಸುತ್ತಾನೆ.

ವೃ॥ ಸಾರದೆಸಾರಮಪ್ಪ ಜಿನಧರ್ಮ ಮನಾತ್ಮನ ಸಾರಮಪ್ಪುದಂ ।
ಸಾರಮಿದೆಂದು ನಂಬಿ ತನಗಲ್ಲದುದಂತನ ಗಪ್ಪದೆಂದು ಕೇಳ್ ॥
ದಾರವಿಹಾರಸೋದರ ಕೃಶೋದರ ಸುಂದರದಾರದಾದಕೋ ।
ದಾರವಿಮೋಹದರ್ೊ ತೊಡರ್ದು ದಾರುಣದುಃಖಮನೆಯ್ದುದಿಕುರ್ವೆ॥

ಶ್ರೀವರ್ಧಮಾನ ಪರಂಧಾಮ ಸುಜ್ಞಾನ ತ್ರಿಲೋಕಾಭಿಮಾನ ನಿಷ್ಕಾಮ ವಿಜ್ಞಾನ ನಿರಾಕಾರ ಸಚ್ಚಿದಾನಂದ ಪ್ರಜ್ಞಾನ ದಿವ್ಯ ಜೀವಾದಿ ನವ

ತತ್ವ ಬೋಧಾಯನಮಾನ ಚರಾಚರಕೃತ ಪ್ರಪಂಚನುಯ ಸಂಸಾರಸಾರಾ ನಾರ ಪರಾಪರ ಪೋತಾಯಮಾನ ಯೋಗಯೋಗಾಂಗ ಸಂಯುಕ್ತಯೋಗ ಮುದ್ರಾಂಚಿತಾಯೋಗ ಸಿದ್ಧಿಪ್ರದಾಯಕಾಯಮಾನ ವೇದವೇದೋಪಾಂ ಗಾಂಗ ಬಾಹ್ಯವೇದವಿವೇಕ ಶೀಲಾಯಮಾನ ಶಾಸ್ತ್ರಾಗಮಪರಿಕಲ್ಪಿತಶಾಸ್ತ್ರ ಚಾರೋಪದೇಶ ಸಾರಾರ್ಥಜ್ಞಾನ ವರ್ಧಮಾನ ಮಹಾವೀರ ಪ್ರಭೋ ನಮೋಸ್ತು ನಮೋಸ್ತು ನಮೋಸ್ತುತೇ.

ಪ್ರಣಮಿತ ಯತಿವೃಂದೋ ಭಾಸುರಾನಂದರೂಪೋ ।
ಪ್ರಣಿತ ನಿಖಿಲದೇವೋ ಭವ್ಯವೃಂದ ಪ್ರದೀಪಃ ॥
ಪ್ರಣವನಿಧಿನಿದಾನೋ ವಿಶ್ವವಿದ್ಯಾವಿನೋದಃ ।
ಗಣಧರನತಪಾದಃ ಪಾತುನೋ ವರ್ಧಮಾನಃ ॥ ‡ ॥

ಅನಂತರ ಚೇಳಿನಿಯು ಸ್ವಾಮಿಯನ್ನು ಸ್ತುತಿಸುತ್ತಾಳೆ.

ನಮೋನಮಃಸದ್ಗುಣ ವಾರಿ ವರ್ಧಮಾನಾಯರಾಕಾಶಶಿನೇ ಜಿನಾಯ ।
ಶ್ರೀವರ್ಧಮಾನಾಯ ಜಿನೇಶ್ವರಾಯ ನಮೋಸ್ತು ತಸ್ಮೈಪರಮಾತ್ಮನೇನಮಃ॥

(ಪದ್ಧಳಿ) ಜಯಜಯ ಭುವನತ್ರಯ ಪರಮದೇವ ।
ದೇವೇಂದ್ರಾಭ್ಯರ್ಚಿತ ಚರಣ ಕಮಲ ।
ಕಮಲ ವಿರಹಿತ ನಿರುಪಮ ದೇಹ ।
ದೇಹಾಶ್ರಿತ ಶುಭಲಕ್ಷಣ ವಿನೂತ ।
ನೂತನ ಸಂಗತ ಕೈವಲ್ಯ ಬೋಧ ।
ಬೋಧ ಪ್ರಕಾಶ ವಸ್ತುಸ್ವರೂಪ ।
ರೂಪಾತಿಶಯಾನ್ವಿತ ವಿತತ ವಿಭವ ।
ಭವನಿವಹ ಪಟಲ ನಿರ್ಮುಕ್ತ ಜೀವ ।

(ವೃತ್ತ) ಕಿವಿಗಳ್ ನಿನ್ನ ಮೃದೋಕ್ತಿಯಂ ಬಯಸಿ ಕೇಳುತ್ತಿರ್ಕೆ ಕಣ್ಗಳ್ ಮಹೋ । ತ್ಸವದಿಂ ನಿನ್ನನೆ ನೋಡುತಿರ್ಕೆ ಸಲೆಕೈಯ್ಗಳ್ ನಿನ್ನ ಪಾದಾರವಿಂ ॥ ದಮಾನಂತರ್ಚಿಸುತಿರ್ಕೆ ಸಂದ ಮನಮೊಂದುಂ ನಿನ್ನ ದಿವ್ಯಸ್ವ ರೂ। ಪಮನಾರಾಧಿಸುತಿರ್ಕೆ ವಿಶ್ರುತ ವಿನೇಯ ಸ್ವಾರ್ಥ ಚಿಂತಾಮಣೀ ॥

ರಾಜದಂಪತಿಗಳಿಬ್ಬರು ಮಹಾದೇವನನ್ನು ಸ್ತುತಿಸಿ ಗಣಧರ ಪರಮೇ ಷ್ಠಿಗಳನ್ನು ಸ್ತುತಿಸಿ ಗಣಧರ ಪರಮೇಷ್ಠಿಗಳನ್ನು ವಂದಿಸಿ ಮನುಷ್ಯ ಕೋ ಷ್ಠದಲ್ಲಿ ಕುಳಿತುಕೊಂಡು ಗಣಧರ ಸ್ವಾಮಿಗಳಾದ ಸುಧರ್ಮ ಮಹಾಯತಿ

ಯನ್ನು ಕುರಿತು ಜಿನ ಧರ್ಮದ ತಿಳವಳಿಕೆಯನ್ನು ಪುನಹ ಕೊಡಬೇಕೆಂದು ಪ್ರಾರ್ಥಿಸಲು ಆಗ ಭಕ್ತವತ್ಸಲರಾದ ಗಣಧರ ಪರಮೇಷ್ಠಿಗಳು ಹೇಳತೊಡಗಿದರು.

ಜಿನೇಶ್ವರೋತ್ತಮರಾದ ಮಹಾವೀರ ವರ್ಧಮಾನ ಸ್ವಾಮಿಯವರ ದಿವ್ಯಧ್ವನಿಯಿಂದ ತಿಳಿಯಬಂದ ಮೋಕ್ಷಮಾರ್ಗಕ್ಕೆ ಸಾಧಕವಾದ ಧರ್ಮಗಳು ಎರಡು ವಿಧವಾಗಿರುವುದು. ೧ ನೇದು ಸಾಗಾರಧರ್ಮವು ಮನೆಯಲ್ಲಿ ವಾಸವಾಗಿ ಆಚರಿಸತಕ್ಕ ಅನುಷ್ಠಾನವು.

೨ ನೇದು ಮನೆಯನ್ನು ಬಿಟ್ಟು ವನವಾಸದಲ್ಲಿ ಆಚರಿಸತಕ್ಕ ಅನುಷ್ಠಾನವು. ಈ ಪ್ರಕಾರವಾಗಿ ಎರಡು ವಿಧವಾಗಿದೆ. ೧ನೇದಾದ ಸಾಗಾರ ಧರ್ಮವು ಹನ್ನೊಂದು ನೆಲೆಯುಳ್ಳದ್ದಾಗಿಧೆ. ೧. ದರ್ಶನಿಕ. ೨. ವ್ರತಿಕ. ೩. ಸಾಮಾಯಿಕ. ೪. ಪ್ರೋಷದೋಪವಾಸ. ೫. ಸಚ್ಚಿತ್ತವಿರತ. ೬. ರಾತ್ರಿ ಭುಕ್ತಿ ವಿರತ. ೭. ಬ್ರಹ್ಮಚಾರಿ. ೮. ಆರಂಭ ನಿವೃತ್ತನು. ೯. ಪರಿಗ್ರಹವಿರತ. ೧೦. ಅನುಮತಿ ನಿವೃತ್ತನು. ೧೧. ಉದ್ದಿಷ್ಟವಿರತ ಎಂಬದಾಗಿ ಶ್ರಾವಕನೆಲೆಯು ೧೧ ಪ್ರಕಾರವಾಗಿಧೆ.

೧ ನೇ ನೆಲೆ ದರ್ಶನೀಕ ನೆಂಬ ಶ್ರಾವಕನು ಜೂಜು, ಮಾಂಸಭಕ್ಷಣೆ, ಸುರಾಪಾನ, ವೇಶ್ಯಾಗಮನ, ಬೇಟೆ, ಪರದಾರಗಮನ, ಕಳ್ಳತನ ಎಂಬ ೭ ವ್ಯಸನಗಳನ್ನು ಬಿಡಬೇಕು. ಅರಳಿ, ಅತ್ತಿ, ಆಲ, ಗೋಣಿ, ಬಸರಿ, ಯಲಚಿ ಮೊದಲಾದ ಹಣ್ಣುಗಳನ್ನೂ, ಜೇನುತುಪ್ಪವನ್ನೂ ತಿನ್ನಬಾರದು. ಮತ್ತು ದೇವತಾಮೂಢ, ಪಾಷಂಡೀಮೂಢ, ಲೋಕಮೂಢ, ಜ್ಞಾನಮದ, ಪೂಜಾಮದ, ಕುಲಮದ, ಜಾತಿಮದ, ಬಲಮದ, ವೃದ್ಧಿಮದ, ತಪೋಮದ, ಶರೀರಮದ ಎಂಬವುಗಳನ್ನು ತ್ಯಜಿಸಿ ಶಂಕಾದಿ ೮ ನ್ನು ತೊರೆದು ಸಮ್ಯಗ್ದರ್ಶನ ಶುದ್ಧನಾಗಿ ಸಂಸಾರ ಶರೀರ ಭೋಗದಲ್ಲಿ ವೈರಾಗ್ಯವುಳ್ಳವನೆ ದರ್ಶನೀಕನೆನಿಸುವನು.

(೨) ನಿರ್ಮಲವಾದ ಪಂಚಾಣುವ್ರತವನ್ನು ಗುಣವ್ರತ ಶಿಕ್ಷಾವ್ರತಗಳನ್ನು ಕೂಡಿ ನಿಶ್ಶಲ್ಯನಾದಂಥಾವನಾಗಿರುವನೆ ಎರಡನೆ ವ್ರತಿಕನೆಂಬ ನೆಲೆಯುಳ್ಳವನು.

(೩) ನಾಲ್ಕಾವರ್ತಿ ತ್ರಿತೀಯ ಆವರ್ತನವನ್ನು ಮಹಾದೇವನ ಮುಂದೆ ಮಾಡಿ ನಾಲ್ಕು ನಮಸ್ಕಾರಮಾಡಿ ಕಾಯೋತ್ಸರ್ಗದಿಂದ ನಿಂತು

ಬಾಹ್ಯಾಭ್ಯಂತರ ಪರಿಗ್ರಹ ಚಿಂತೆಯಿಲ್ಲದೆ ಕೈಮುಗಿದುಕೊಂಡು, ಕೂತುಕೊಂಡು, ಮನೋವಾಕ್ಕಾಯ ಶುದ್ಧಿಯುಳ್ಳವನಾಗಿ ಮೂರು ಕಾಲದಲ್ಲೂ ಸಮತಾಭಾವ ಮಾಡುವವನು ೩ ನೇ ನೆಲೆ ಸಾಮಾಯಿಕನೆನಿಸುವನು.

(೪) ಪ್ರತಿಮಾಸದ ನಾಲ್ಕು ಪರ್ವತಿಥಿಗಳಲ್ಲಿ ಉದಾಸೀನಮಾಡದೆ ತನ್ನ ಶಕ್ತ್ಯನುಸಾರವಾಗಿ ಏಕಭುಕ್ತ ಅಥವಾ ಉಪವಾಸಗಳನ್ನು ಮಾಡುವನು ೪ ನೇ ಪ್ರೋಷದೋಪವಾಸಿಯೆನಿಸುವನು.

(೫) ದಯಾಳುವಾದ ಯಾವ ಮನುಷ್ಯನು ಪಕ್ವವಾಗದ ಫಲಗಳನ್ನು ಎಲೆ ಕುಡಿ ಗೆಡ್ಡೆ ಬಹುಬೀಜ ಇವುಗಳನ್ನು ತಿನ್ನುವುದಿಲ್ಲವೊ ಆತನೆ ೫ ನೇನೆಲೆ ಶ್ರಾವಕ ಸಚಿತ್ತವಿರತನೆನಿಸಿಕೊಳ್ಳುವನು. ಯಾವ ಪುರುಷನಿಂದ ಹಸಿ ವಸ್ತುವು ಬಿಡಲ್ಪಡುತ್ತಿಥೆಯೋ ಅವನಿಂದ ಜಯಿಸುವುದಕ್ಕೆ ಅಶಕ್ಯವಾದ ನಾಲಗೆಯು ಜಯಸಲ್ಪಟ್ಟಿತು. ಆತನಿಂದ ಜಿನೇಶ್ವರನ ವಾಕ್ಕು ಪರಿಪಾಲಿಸಲ್ಪಟ್ಟಿತು.

(೬) ಪ್ರಾಣಿಗಳಲ್ಲಿ ಕಾರುಣ್ಯವಾದ ಬುದ್ಧಿಯುಳ್ಳಂಥಾ ಯಾವೋನು ಅನ್ನ, ಕ್ಷೀರ, ಮೊದಲಾದ ಪಾನ ಖಾದ್ಯ ಅಂಬಲಿ ಮೊದಲಾದ ಲೇಹ್ಯಗಳನ್ನು ರಾತ್ರಿಯಲ್ಲಿ ತಿನ್ನುವುದಿಲ್ಲವೊ ಆತನು ರಾತ್ರಿಭುಕ್ತವಿರತನೆಂಬ ೬ ನೇನೆಲೆ ಶ್ರಾವಕನಾಗಿರುತ್ತಾನೆ. ಯಾವೋನು ರಾತ್ರಿಭೋಜನವನ್ನು ಬಿಡುತ್ತಾನೋ ಅವನಿಂದ ಒಂದು ವರ್ಷದ ಮಧ್ಯದಲ್ಲಿ ೬ ತಿಂಗಳು ಉಪವಾಸ ಮಾಡಿದ ಫಲವು ಬರುವದು.

(೭) ಮಲಬೀಜವಾದ ಸ್ತ್ರೀಮರ್ಮಸ್ಥಾನವನ್ನು ಹೇಸಿಗೆಯಿಂದ ಬಿಟ್ಟು ತನ್ನ ರೇತಸ್ಸನ್ನು ಯಾವವಿಧದಿಂದಲು ಹೊರಕೆಡಯದೆ ಊರ್ಧ್ವಮಂಥಿಯಾಗುತ್ತಾನೋ ಆತನೆ ೭ನೇ ನೆಲೆಯ ಬ್ರಹ್ಮಚಾರಿಯೆಂಬ ಶ್ರಾವಕನಾಗುತ್ತಾನೆ. ಈತನು ಸ್ತ್ರೀಜನರ ಕಡಗಣ್ಣೆಂಬ ಬಾಣದಿಂದ ಹೊಡೆಯಲ್ಪಟ್ಟವನಾದಾಗ್ಯೂ ವಿಕಾರವನ್ನು ಪಡೆಯುವುದಿಲ್ಲವೋ ಆತನೇ ಶೂರರಲ್ಲಿ ಶೂರನು.

(೮) ಪ್ರಾಣಿಗಳನಾಶಕ್ಕೆ ಕಾರಣವಾದ ಸೇವಾವೃತ್ತಿ, ಕೃಷಿ, ವ್ಯಾಪಾರವೇ ಮೊದಲಾದಂಥಾ ಆರಂಭವನ್ನು ಯಾವೋನು ಬಿಡುತ್ತಾನೋ ಆತನೆ ೮ ನೇ ನೆಲೆಯ ಆರಂಭನಿವೃತ್ತನೆಂಬ ಶ್ರಾವಕನೆನಿಸುವನು.

(೯) ಬಾಹ್ಯಪರಿಗ್ರಹಗಳಾದ ಹತ್ತರಲ್ಲಿ ಮಮತ್ವವನ್ನು ಬಿಟ್ಟು

ಮಮತ್ವ ಇಲ್ಲದಿರುವದರಲ್ಲಿ ಅಪೇಕ್ಷೆಯು ಮಾಯವಿಲ್ಲದೇ ಸಂತೋಷದಿಂದ ಕೊಡಿ ಅನ್ಯಚಿತ್ತಪರಿಗ್ರಹವನ್ನು ಬಿಡುವನೆ ೯ ನೇ ನೆಲೆ ಪರಿಗ್ರಹನಿವೃತ್ತ ನೆಂಬ ಶ್ರಾವಕನು.

(೧೦) ಕೃಷ್ಯಾದಿ ಆರಂಭದಲ್ಲಿಯೂ, ಬಾಹ್ಯಾಭ್ಯಂತರ ಪರಿಗ್ರಹ ದಲ್ಲೂ, ಐಹಿಕವಾದ ಪುತ್ರಾದಿಗಳ ವಿವಾಹಾದಿ ಕರ್ಮಗಳಲ್ಲಿಯೂ ಒಡಂಬಡಿಕೆ ಇಲ್ಲವೋ ಆತನು ೧೦ ನೇ ನೆಲೆಯ ಅನುಮತಿವಿರತನೆಂಬ ಶ್ರಾವಕನಾಗಿಧಾನೆ.

(೧೧) ಮನೆಯನ್ನು ಬಿಟ್ಟು ಋಷ್ಯಾಶ್ರಮವನ್ನು ಹೊಂದಿ ಗುರುಸ ಮೀಪದಲ್ಲಿ ವ್ರತವನ್ನು ತೆಗೆದುಕ್ಕೊಂಡು ತಪಸ್ಸ ಮಾಡುತ್ತಾ ವಸ್ತ್ರದ ಖಂಡ ವನ್ನು ಧರಿಸಿ ಭಿಕ್ಷೆಗೆತಿರುಗಿ ಆಹಾರ ತೆಗೆದುಕ್ಕೊಳ್ಳುವನು ಉತ್ಕೃಷ್ಟಶ್ರಾವಕ ನೆನಿಸುವನು. ಹನ್ನೊಂದನೆ ನೆಲೆಯಲ್ಲಿ ೨ ಪ್ರಕಾರವಾಗಿದೆ. ವಸ್ತ್ರವನ್ನು ಧರಿಸು ವನು ಮೊದಲೆಯವನು. ೨ನೇಯವನು ಕೌಪೀನವುಳ್ಳಂಥಾವನು ರಾತ್ರಿಪ್ರತಿಮಾ ಯೋಗವನ್ನು ನಿಯಮದಿಂದ ಮಾಡತಕ್ಕದ್ದಾಗಿದೆ. ತಲೆಕೂದಲನ್ನು ಲೋ ಚಮಾಡಿಸಿ ಪಿಂಛವನ್ನು ಧರಿಸಿ ಕೂತುಕೊಂಡು ಪಾಣಿಪುಟದಲ್ಲಿ ಊಟಮಾ ಡಬೇಕು- ಮನೆಯನ್ನು ಬಿಟ್ಟ ಅನಗಾರರ ಧರ್ಮಾಚರಣೆಯು ಹೇಳಲ್ಪಡುತ್ತೆ

ಶ್ರೇಣಿಕನೆ ಕೇಳ್ಳೆ—ಯತಿಧರ್ಮವು ೧೩ ವಿಧವಾದ ಆಚರಣೆಯುಳ್ಳ ದ್ದಾಗಿದೆ. ಕುಲ ಉತ್ಪತ್ತಿಸ್ಥಾನ ಜೀವಸ್ಥಾನ ಮಾರ್ಗಣಸ್ಥಾನ ಇವುಗ ಳಲ್ಲಿರುವ ಜೀವಸ್ವರೂಪವನ್ನು ನೋಡಿ ಪಾಪಾರಂಭವನ್ನು ಬಿಡತಕ್ಕದ್ದು ಮತ್ತು ಆದರ ಪರಿಣಾಮವು ಅಹಿಂಸಾ ಎಂಬ ಪ್ರಥಮವ್ರತವಾಗಿದೆ.

೨. ರಾಗದ್ವೇಷದಿಂದ ಸುಳ್ಳಾಡದೆ ಇರುವನೆ ೨ ನೆ ಸತ್ಯವ್ರತವಾಗಿದೆ-

೩. ಗ್ರಾಮಾರಣ್ಯ ಪಟ್ಟಣಗಳಲ್ಲಿ ಅನ್ಯರವಸ್ತುಗಳನ್ನು ಕೊಡದೆ ಪರಿ ಗ್ರಹಿಸದಿರುವದೆ ೩ ನೇ ಅಚೌರ್ಯವ್ರತವಾಗಿದೆ.

೪. ಸ್ತ್ರೀಯರ ರೂಪನ್ನು ನೋಡಿ ಮೈಥುನಇಚ್ಛೆಯು ಇಲ್ಲದೆ ಇರು ವದೆಬ್ರಹ್ಮಚರ್ಯವೆಂಬ ೪ ನೇ ವ್ರತವಾಗಿದೆ.

೫. ಸಮಸ್ತವಾದ ಪರಿಗ್ರಹಗಳನ್ನು ಬಿಡುವದೆ ೫ ನೇ ಅಪರಿಗ್ರಹ ವ್ರತವಾಗಿದೆ.

೬. ಹಗಲಿನಲ್ಲಿ ಯುಗ ಪ್ರಮಾಣ ದೃಷ್ಟಿಯಿಟ್ಟು ಪ್ರಾಣಿಯಿಲ್ಲದ ಮಾರ್ಗದಲ್ಲಿ ಸಂಚರಿಸುವದೇ ಈರ್ಯಾಸಮಿತಿಯೆಂಬ ೬ನೇ ವ್ರತವಾಗಿದೆ.

೭. ಹಾಸ್ಯ ಕರ್ಕಶ ಪೈಶೂನ್ಯ ಪರನಿಂದಾತ್ಮಪ್ರಶಂಸಾ ವಚನಗಳನ್ನು

ಆಡದೆ ಯಿರುವುದೆ ೭ ನೇ ಭಾಷಣಾಸಮಿತಿ ಎಂಬ ವ್ರತವಾಗಿದೆ.

೮. ತನ್ನ ಅನುಮೋದವಿಲ್ಲದ ಪ್ರಶಸ್ತವಾದ ಆಹಾರವನ್ನು ಭವ್ಯ ಪ್ರಾಣಿಗಳಿಂದ ತೆಗೆದುಕ್ಕೊಳ್ಳುವುದೆ ಲನೇ ಏಷಣಾಸಮಿತಿಯೆಂಬ ವ್ರತವಾಗಿಥೆ.

೯. ಪುಸ್ತುಕ ಕಮಂಡಲಾದಿಗಳ ಗ್ರಹಣದಲ್ಲಿ ಪ್ರಾಣಿಬಾಧೆಯಾಗ ದಂತೆ ಇಟ್ಟು ತೆಗೆದುಕ್ಕೊಳ್ಳುವುದೆ ೯ ನೇ ಆದಾನ ನಿಕ್ಷೇಪಣಾ ಸಮಿತಿಯೆಂಬ ವ್ರತವಾಗಿಥೆ.

೧೧. ರಾಗದ್ವೇಷಗಳಿಗೆ ಆಕರವಾದ ಭಾವನೆಯನ್ನು ಮಾಡದೆ ಇರುವುದೆ ವ್ಯವಹಾರ ಮನೋಗುಪ್ತಿಯೆಂಬ ೧೧ ನೇ ವ್ರತವಾಗಿಥೆ.

೧೨. ಪಾಪಕ್ಕೆ ಕಾರಣವಾದ ವಿಕಥೆ ಮತ್ತು ರಾಗದ್ವೇಷಕ್ಕೆ ಕಾರಣ ವಾದ ಮಾತನಾಡದೆ ಯಿರುವುದೆ ೧೨ ನೇ ವಾಗುಪ್ತಿವ್ರತವಾಗಿರುತ್ತೆ.

೧೩. ಹಿಂಸಾಸ್ಪದಕ್ಕೆ ಕಾರಣವಾದದ್ದಕ್ಕೆ ಶರೀರಚಲನೆಯನ್ನು ಮಾ ಡದೆ ಇರುವುದೆ ೧೩ ನೇ ಕಾಯಗುಪ್ತಿಯೆಂಬ ೧೩ ನೇ ವ್ರತವಾಗಿಥೆ.

ಈ ಪ್ರಕಾರವಾಗಿ ಸಾಗಾರಾನಗಾರರ ಧರ್ಮಾಚರಣೆಯಾಗಿಥೆ ಎಂಬ ದಾಗಿ ಗಣಧರರು ಹೇಳಲು ರಾಜದಂಪತಿಗಳು ವಿನೀತರಾಗಿ ಕೇಳಿ ಸ್ವಾಮಿಗೆ ಪ್ರಾರ್ಥನೆಯನ್ನು ಮಾಡಿದರು. ಎಲೈ ಭಗವಂತನೇ ! ಈ ಪ್ರಕಾರ ಆಚರಣೆ ಮಾಡಿ ಸದ್ಗತಿಯನ್ನು ಹೊಂದಿದ ಮಹಾನುಭಾವರಾದ ಅಷ್ಟಮ ವಾಸುದೇವ ಪ್ರತಿವಾಸುದೇವ ಬಲದೇವ ನಾರದ ಮೊದಲಾದವರ ಚರಿತ್ರೆಯನ್ನು ಹೇಳಲು ಅನುಗ್ರಹಿಸಬೇಕೆಂದು ಬೇಡಿಕ್ಕೊಳ್ಳಲಾಗಿ ಗಣಧರ ಪರಮೇಷ್ಠಿಗಳು ಅಪ್ಪಣೆ ಕೊಡಿಸಿದರು.

೨. ದೇಶವರ್ಣನೆ.

ಎಲೈ ಮಗಧಾಧೀಶನೇ ! ಕೇಳು.

ಘನಾದಿ ವಾಯುಗಳಿಂದ ಸುತ್ತಲ್ಪಟ್ಟಿರುವ ಮುರಜಾಕಾರವಾಗಿ ನಿಂತಿ ರುವ ಚತುರ್ದಶ ನಾಡಿ ಪ್ರಮಾಣವುಳ್ಳ ಲೋಕದಲ್ಲಿ ಚತುರ್ದಶ ಲೋಕಗಳಿ ರುತ್ತವೆ. ಅಧೋ ಭಾಗದಲ್ಲಿ ನರಕಾದಿಗಳು ಊರ್ಧ್ವಭಾಗದಲ್ಲಿ ಕಲ್ಪಾದಿ ಗಳಾಗಿವುಳ್ಳ ಭೂಲೋಕವು ಮಧ್ಯದಲ್ಲಿರುತ್ತೆ. ಈ ಭೂಮಿಯಲ್ಲಿ ಅಸಂ ಖ್ಯಾತ ದ್ವೀಪಸಮುದ್ರದ ಮಧ್ಯ ಕರ್ಣಿಕಾಕೇಂದ್ರದಲ್ಲಿ ೧ ಲಕ್ಷಯೋಜನ ಪ್ರಮಾಣದ ಜಂಬೂದ್ವೀಪವು ಪ್ರಕಾಶಿಸುತ್ತಲಿಥೆ. ಇದರ ಮಧ್ಯ ಮೇರು

ಪರ್ವತವೆಂಬ ಸುವರ್ಣದ ಚ್ಛಾಯಾಪರ್ವತವು ಇದೆ. ಇದರಮೇಲೆ ಸಾಮನ, ಪಾಂಡುಕ, ನಂದನ, ಭದ್ರಸಾಲಗಳೆಂಬ ನಾಲ್ಕು ವನಗಳು ರಾಜಿಸುತ್ತಿವೆ. ಆವನದಲ್ಲಿ ಕಲ್ಪವೃಕ್ಷ, ಚಿಂತಾರತ್ನ, ಕಾಮಧೇನುಗಳು ಯಾವಾಗಲೂ ನೆಲೆಗೊಂಡಿವೆ. ವನಮಧ್ಯದಲ್ಲಿ ಚೈತ್ಯವೃಕ್ಷಗಳು ಮನೋಹರವಾಗಿ ಕಾಣಿಸುತ್ತಿರುವುವು. ವನಮಧ್ಯದಲ್ಲಿ ನವರತ್ನಮಯವಾದ ಜಿನಪ್ರತಿಮೆಗಳು ಕಣ್ಗೊಳಿಸುತ್ತಿವೆ. ಶುಭ್ರವಾದ ರಜತ ಮಹಾರಜತ ಇಂದ್ರನೀಲ ಮರಕತ ಮಣಿವರ್ಣಗಳುಳ್ಳ ಬಹಳ ದೊಡ್ಡವಾದ ಪ್ರಕಾಶಮಾನವಾದ ಭಿತ್ತಿಸ್ತಂಭಗಳಿಂದ ಕೂಡಿದ ಮಂಡಪ ಶಿಖರಗಳಿಂದ ಕಣ್ಣುಗೊಳಿಸುವ ಮಹಾಮಾನಸ್ತಂಭಗಳಿಂದ ಮೆರೆಯುವ ಪಂಚವರ್ಣಪ್ರಭಾ ಸಮೂಹದಿಂದ ಮಾಡಲ್ಪಟ್ಟಿರುವ ಆಶ್ಚರ್ಯಕರವಾದ ತೋರಣಗಳಿಂದ ಪ್ರಕಾಶಮಾನವಾಗಿ ಸರ್ವಕಾಲದಲ್ಲೂ ಇಡಲ್ಪಟ್ಟಿರುವ ಚಿನ್ನದ ಮಯವಾದ ಧೂಪಘಟದಿಂದ ಹೊರಡುತ್ತಿರುವ ಬಹಳ ಮನೋಹರವಾದ ಪರಿಮಳದಿಂದ ಅಷ್ಟ ದಿಕ್ಕುಗಳಲ್ಲೂ ಘಮಘಮಿಸುತ್ತಿರುವ ಧೂಮದಿಂದ ಪ್ರಕಾಶಮಾನವಾದ, ವಂದನಾರ್ಥವಾಗಿ ಬಂದ ದೇವತಾ ಸ್ತ್ರೀಯರ ಜಯ ಜಯವೆಂಬ ಶಬ್ದದಿಂದ ಕೂಡಿದ ಸುರನರ್ತಕಿಯರ ಕಿಂಕಿಣ ಝೇಂಕಾರದಿಂದಲೂ ಅನಾದಿಯಿಂದ ಘಟಿತವಾದ ಘಂಟಾನಾದದಿಂದ ಹುಟ್ಟಿದ ಓಂಕಾರ ಧ್ವನಿಯಿಂದ ದರ್ಶನಾರ್ಥಿಗಳ ಕಿವಿಗಳನ್ನು ಬಧಿರೀಕೃತವಾಗಿ ಮಾಡುತ್ತಲಿರುವ ಚಕಚಕಾಯಮಾನವಾದ ಜೋತಿರ್ಗಣಗಳಿಂದ ಕಣ್ಗೊಳಿಸುತ್ತಿರುವದಾಗಿಯೂ ಅತ್ಯಂತ ಉನ್ನತವಾದ ಸುವರ್ಣಭಿತ್ತಿಯ ಮೇಲೆ ಅವಲಂಬಿಸಿರುವ ದಶವಿಧ ಧ್ವಜದಿಂದ ಪ್ರಕಾಶಮಾನವಾದ ಮಂಗಳ ಲೋಕೋತ್ತಮ ಶರಣ ಭೂತ ಚೈತ್ಯಾಲಯಗಳಲ್ಲಿ ಶ್ರೀಮತ್ಸರ್ವಜ್ಞ ವೀತರಾಗ ಪರಮಾಪ್ತ ಪದಪ್ರತಿಷ್ಠಾಧಿಷ್ಠಿತ ಶ್ರೀಮದರ್ಹ ಜಿನಬಿಂಬಗಳಿವೆ. ಈ ಬಿಂಬಗಳ ಮುಂದೆ ನಾಗದೇವತೆ ಮತ್ತು ಯಕ್ಷದೇವತೆಗಳು ತಮ್ಮ ತಮ್ಮ ಕರಕಮಲಗಳಲ್ಲಿ ಚಾಮರಗಳನ್ನಿಟ್ಟು ಬೀಸುತ್ತಾ ಸೇವೆಯನ್ನು ಮಾಡುತ್ತಲಿರುವರು. ಈ ಮಹಾ ಬಿಂಬಗಳು ಭವ್ಯರ ಪುಣ್ಯ ಗುಣದಿಂದ ಪ್ರಚೋದಿತವಾಗಿರುವಂತೆ ಪ್ರೇಕ್ಷಕರ ನೋಡುವಂತೆಯೂ ಪ್ರೇಕ್ಷಕರ ನೋಡಿ ನಗುವಂತೆಯೂ ಮತ್ತು ಧರ್ಮವನ್ನು ಹೇಳುವಂತೆಯೂ ತೋರುವುದು. ಭವ್ಯಪ್ರಾಣಿಗಳಾದ ದೇವತೆಗಳಿಂದ ಯಾವಾಗಲೂ ಕಿಕ್ಕಿರದು ತುಂಬಿ ಯಾವಾಗಲೂ ಸ್ವಾಮಿಯ ಶಾಂತಿಗುಣಾಲಪನೆಯು ನಡೆಯುತ್ತಿರುವುದು.

ಈ ಮಹಾ ಪರ್ವತದ ದಕ್ಷಿಣಭಾಗದಲ್ಲಿ ಭರತಕ್ಷೇತ್ರವು ನೆಲೆಗೊಂಡಿರುವದು. ಆದರಲ್ಲಿ ವಿಜಯಾರ್ಧಗಿರಿ ಎಂಬ ರೂಪ್ಯಾಚಲವು ಮಧ್ಯನಿಂತು ಈ ಕ್ಷೇತ್ರವನ್ನು ಎರಡು ಭಾಗ ಮಾಡಿರುವನು. ಅದಕ್ಕೆ ದಕ್ಷಿಣಭಾಗದಲ್ಲಿ ಆರ್ಯಾಖಂಡವಿರುವುದು. ಇದರಲ್ಲಿ ಉತ್ಸರ್ಪಣಿ, ಅವಸರ್ಪಿಣಿ ಎಂಬ ೨ ಕಾಲಗಳಲ್ಲಿ ಸುಷುಮಾದಿಭೇದವು ಇರುವದು. ಇದರಲ್ಲೂ ಒಂದೊಂದುದಪಾ ಹುಂಡಾವಸರ್ಪಿಣಿ ಸಂಭವಿಸುತ್ತೆ. ಇದು ಕೆಟ್ಟಕಾಲವಾಗಿರುತ್ತೆ. ಇದರಲ್ಲಿ ದುಷ್ಷಮವೆಂಬದರಲ್ಲಿ ಭೋಗಭೂಮಿಯು ವಿರಳವಾಗುತ್ತಾ ಬರುತ್ತಿರುವಾಗ ದಶವಿಧ ಕಲ್ಪವೃಕ್ಷವು ಕಡಮೆಯಾಗುತ್ತಾ ಬರುವಾಗ್ಯೆ–ಪ್ರತಿಶೃತಿ, ಸನ್ಮತಿ, ಕ್ಷೇಮಂಕರ, ಕ್ಷೇಮಂಧರ, ಸೀಮಂಕರ, ಸೀಮಂಧರ, ವಿಮಲವಾಹನ, ಚಕ್ಷುಷ್ಮಾ, ಯಶಸ್ವಿ, ಅಭಿಚಂದ್ರ, ಚಂದ್ರಾಭ, ಮರುದ್ದೇವ, ಪ್ರಸೇನಜಿತ್, ನಾಭಿ ಎಂಬಗಳಮನುಗಳಾದರು- ಅವರಲ್ಲಿ ಕೊನೆ ನಾಭಿಮನುಕಾಲದಲ್ಲಿ ನಾಭಿಮನುವಿಗೆ ಮರುದೇವಿಯೆಂಬವಳು ಸತಿಯಾಗಿದ್ದಳು. ಕರ್ಮಭೂಮಿಯು ಬರುವಿಕೆಯಲ್ಲಿ ಒಂದೊಂದಾಗಿ ಕಲ್ಪವೃಕ್ಷಗಳು ಹಾನಿಯಾಗುತ್ತಾ ಬಂದವು- ಆದರಿಂದ ಜನಗಳಿಗೆ ಅವುಗಳಿಂದುಂಟಾಗತಕ್ಕ ಗೃಹಾದಿಸೌಲಭ್ಯಗಳು ಕಡಿಮೆಯಾಗುತ್ತಾ ಬಂದದ್ದರಿಂದ ಸ್ವಾಮಿಯಾದ ವೃಷಭತೀರ್ಥಂಕರರ ಉದಯವನ್ನು ತಿಳಿದು ದೇವೇಂದ್ರನು ಸಾಕೇತದೇಶವನ್ನು ಮಾಡಿ, ಅದರಲ್ಲಿ ಅಯೋಧ್ಯಾಪಟ್ಟಣವನ್ನು ರಚಿಸಿದನು. ಅದರಲ್ಲಿ ನಾಭಿರಾಜನು ಪತ್ನಿಯಾದ ಮರುದೇವಿ ಮಹಾರಾಣಿಯೊಡನೆ ವಾಸಿಸುತ್ತಿದ್ದನು.

ಅಯೋಧ್ಯಾಪಟ್ಟಣದಲ್ಲಿ ಹೇಮಮಯವಾಗಿ ನವರತ್ನಖಚಿತದಿಂದಮಾಡಲ್ಪಟ್ಟ ಕೋಟೆಯ ಮೇಲೆ ರಾಮಣೀಯಕವಾದ ಮುಗಿಲುಮುಟ್ಟುವಂತ ತೆನೆಗಳು ಬಿಡಿಸಲ್ಪಟ್ಟಿದ್ದವು. ಕೋಟೆಯ ಸುತ್ತಲೂ ಇರುವ ಜಲಕಾತೆಯಾದ ರೋ ಮಹಾಭೋಗವತಿಯು ಪಟ್ಟಣದ ಶಿಖರವನ್ನು ಬೆಳಗುತ್ತಲಿದ್ದವು. ಆ ಪಟ್ಟಣದ ಮಧ್ಯದಲ್ಲಿರುವ ಗೃಹಗಳೆಲ್ಲಾ ಅರಮನೆಯಂತೆ ಏಳೆಂಟು ಅಂತಸ್ತುಳ್ಳದಾಗಿದ್ದವು. ಆ ಪಟ್ಟಣದ ಬಹಿರ್ಭಾಗದ ಕೋಟೆಯ ಶಿಖರವು ಮೇರುಪರ್ವತದ ಶಿಖರದಷ್ಟು ಉನ್ನತವಾಗಿ ಜನಗಳ ಕಣ್ಣುಗಳನ್ನು ಆನಂದಗೊಳಿಸುತ್ತಿತ್ತು. ಆ ದೇಶದ ಸ್ತ್ರೀಪುರುಷರುಗಳು ರತಿಸ್ಮರರನ್ನು ಜರೆಯುತ್ತಿದ್ದರು. ಸ್ತ್ರೀಯರುಗಳ ಮುಖಗಳು ಅರಳಿದ ತಾವರೆಯಂತೆಯೂ, ಕೈಬೆರಳುಗಳು ಚೂತಪಲ್ಲವಚಿಗುರಿನಂತೆಯೂ, ಕರತೋಳಗಳು ರಂಭಾತರುವಿಗೆ

ಸಮಾನವಾಗಿಯೂ ಇದ್ದವು. ಮುದ್ದು ಮುಖ, ಮುದ್ದು ನಯನ, ಮುದ್ದು ನಾಸಿಕ, ಮುದ್ದು ನೊಸಲೆ, ಮುದ್ದು ಪದ, ಮುದ್ದು ಹಸ್ತ, ಮುದ್ದು ವಚ ಕರ್ಣಗಳುಳ್ಳ ಮುದ್ದು ಮುದ್ದಾಂಗನೆಯರನ್ನು ನೋಡಿ ಸಂತಸವನ್ನು ಹೊಂದದ ನಾಡಿಗರು ಅಲ್ಲಿ ವಾಸಮಾಡಲಿಲ್ಲ. ಗೃಹಗಳ ಮುಂದಣ ವರಾಂಗದಲ್ಲಿ ಕಟ್ಟಲ್ಪಟ್ಟಿರುವ ಹುಲ್ಲೆಗಳು ಗರಿಕೆಯೆಂದು ಪಚ್ಚೆಯ ಕಲ್ಲನ್ನು ನೋಡಿನೋಡಿ ಭಕ್ಷಿಸದೆ ನಿಂತಿದ್ದವು. ಚಂಪಕ ಶಿರೀಶ, ನಂದ್ಯಾವರ್ತ, ಇರವಂತಿಗೆ, ಜಾಜಿ, ಮಲ್ಲಿಕಾ, ಮರುಗ, ಪಚ್ಚೇತೆನೆ ಮೊದಲಾದ ಪುಷ್ಪಗಳಿಂದ ಗೃಹಾಂಗಳವು ಗಮಗಮಿಸುತ್ತಿತ್ತು. ವಕುಳ, ಅಶೋಕ, ಮಂದಾರ, ಮಾಕಂದ, ಜಂಬೂ ಪನಸ, ದಾಡಿಮ ಮೊದಲಾದ ಫಲಗಳು ನಿರಂತರವು ಕೂಡಿ ಮೆರೆಯುತ್ತಿತ್ತು. ಆ ಪಟ್ಟಣದ ಮಧ್ಯಮಧ್ಯಾಸೀನವಾದ ರಾಜಗೃಹವು ನವರತ್ನಖಚಿತವಾದ ಸುವರ್ಣದಿಂದ ಕಟ್ಟಲ್ಪಟ್ಟಿತ್ತು. ಆಪಟ್ಟದ ಪುರಾಧಿಪತಿಯಾದ ನಾಭಿರಾಜನು ಸತಿಯಾದ ಮರುದೇವಿ ಎಂಬ ಕನ್ಯಾಮಣಿಯೊಡನೆ ಸುಖವಾಗಿ ಕಾಲವನ್ನು ಕಳೆಯುತ್ತಿದ್ದನು. ಅವರಿಗೆ ತ್ರಿಕಾಲಜ್ಞರಾದ ವೃಷಭಸ್ವಾಮಿಯು ಆದನು. ದೇವೇಂದ್ರನು ಆತನಿಗೆ ಗರ್ಭಾವತರಣ ಜನ್ಮಾಭಿಷೇಕ ಕಲ್ಯಾಣ ಮಾಡಿ ಯಶಸ್ವತಿ, ಸುನಂದೆ, ನಾಮದ ಸ್ತ್ರೀಯರನ್ನು ವಿವಾಹಮಾಡಿದನು. ಆಗ ಭರತಕ್ಷೇತ್ರವು ಕರ್ಮಭೂಮಿಯಾದ್ದರಿಂದ ಮನುಷ್ಯರುಗಳ ಸ್ಥಿತಿಗೋಸ್ಕರ ಉಪಯೋಗಿಸುತ್ತಿದ್ದ ಆಅಕೃಷ್ಟಪಚ್ಚೆಗಳು ಬಹಳವಿರಳವಾಗುತ್ತಾ ಬಂದವು, ಪ್ರಜೆಗಳೆಲ್ಲಾ ಜೀವನೋಪಾಯಕ್ಕೆ ರಹವಿಲ್ಲದೆ ವ್ಯಾಕುಲತ್ವವನ್ನು ಹೊಂದಿ ದೀನವಾದ ಧ್ವನಿಯಿಂದ ವೃಷಭಸ್ವಾಮಿಯ ಮುಂದೆ ತಮ್ಮಗಳಕಷ್ಟವನ್ನು ಹೇಳಿಕೊಂಡರು. ಆಗ ಆದಿಪುರುಷನು ತನ್ನ ದಿವ್ಯಜ್ಞಾನದಿಂದ ವಿದೇಹ ಕ್ಷೇತ್ರಗಳಲ್ಲಿ ಇರುವಂತೆ, ಇಲ್ಲಿಯೂ ಜನರಿಗೆ ವೃತ್ತಿಗಳನ್ನು ಕಲ್ಪಿಸಿಕೊಡಬೇಕೆಂದು ತಿಳಿದು, ಇಂದ್ರನನ್ನು ಸ್ಮರಿಸಿದನು.

ಆಗ ದೇವೇಂದ್ರನು ದೇವತೆಗಳೊಡಗೂಡಿ ಬರುವಂಥಾವನಾಗಿ ಸ್ವಾಮಿಗೆ ನಮಸ್ಕರಿಸಿ ಅಪ್ಪಣೆಯನ್ನು ಬೇಡಿದನು. ಸ್ವಾಮಿಯು ಪ್ರಜೆಗಳ ಜೀವನೋಪಾಯಾದಿಗಳನ್ನು ಈ ಕ್ಷೇತ್ರದಲ್ಲಿ ಉಂಟುಮಾಡಬೇಕೆಂತ ಹೇಳಿದರು. ಅನಂತರ ಇಂದ್ರನು ಕೋಸಲಾದಿ ಮಹಾದೇಶಕ್ಕೆ ಎಲ್ಲೆಗಳನ್ನು ನಿರ್ಮಿಸಿದನು- ಈಗ ಪ್ರಸಿದ್ಧವಾಗಿರುವ ಕೌಸಲ, ಅವಂತಿ, ಪುಂಡ್ರ, ಉಗ್ರ, ಅಸ್ಮಕ, ರಮ್ಯಕ, ಕುರು, ಕಾಶಿ, ಕಳಿಂಗ, ಅಂಗ, ವಂಗ, ಸಿಂಹ, ಸಮುದ್ರಕ.

ಕಾಶ್ಮೀರ, ಉಸೇನರ, ಆನರ್ತ, ವತ್ಸ, ಪಾಂಚಾಳ, ಮಾಳವ, ದಶಾನ, ಕಚ್ಛ, ಮಗಧ, ವಿಧರ್ಭ, ಕುರುಜಾಂಗಲ, ಕರಹಾಟ, ಮಹಾರಾಷ್ಟ್ರ, ಸುರಾಷ್ಟ್ರ, ಅಭೀರ, ಕೊಂಕಣ, ವನವಾಸಿ, ಆಂಧ್ರ, ಕರ್ಣಾಟಕ, ಕೋಸಲ, ಚೋಳ, ಕೇರಳ, ಧಾರ್ವ, ಅಭಿಸಾರ, ಸೌವೀರ, ಸುವ್ಯಸೇನ, ಅಪರಾಂತಕ, ವಿದೇಹ, ಸಿಂಧು, ಗಾಂಧಾರ, ಯವನ, ಪಲ್ಲವ, ಕಾಂಭೋಜ, ಆರಟ್ಟ, ಬಾಹ್ಲೀಕ, ತುರುಷ್ಕ, ಶಕ, ಕೇಕಯ, ಹೂಣ, ರೋಮ, ಇವೇ ಮುಂತಾದ ಅನೇಕ ದೇಶಗಳನ್ನು ಗೊತ್ತು ಮಾಡಿ ದೇವಮಾತ್ರಿಕ, ನದಿಮಾತ್ರಿಕ, ಅನೂಪ, ಜಾಂಗಲ, ಸಾಧಾರಣ, ಎಂಬದೇಶಗಳಿಗೆ ಗುರುತುಮಾಡಿ ಉಬ್ಬಕಚರಕ, ಶಭರ, ಮೊದಲಾದ ಅಂತರಾಳದೇಶಗಳು ಆದವು- ಅವುಗಳಲ್ಲಿವಾಸ ಮಾಡುವವರಿಗೆ ಕತ್ತಿ, ಬರವಣಿಗೆ, ಭೂಮಿ, ಗಾಣ, ವ್ಯಾಪಾರ, ಶಾಸ್ತ್ರ, ಇವುಗಳಿಂದ ಜೀವನೋಪಾಯಗಳನ್ನು ವಿಧಾಯಕಮಾಡಿದನು. ಕ್ಷತ್ರಿಯಾದಿ ವರ್ಣಗಳು ಪ್ರಜೆಗಳ ರಕ್ಷಣೋಪಾಯಗಳಿಗಾಗಿ ವಿದಿತವಾಯಿತು. ಕೃತಕೃತ್ಯನಾದಂಥ ವೃಷಭಸ್ವಾಮಿಯು ಆಷಾಢಮಾಸದ ಕೃಷ್ಣಪಕ್ಷದ ಪ್ರಥಮ ದಿವಸದಲ್ಲಿ ಈ ಕೃತಯುಗದ ಆರಂಭವನ್ನು ಮಾಡಿ ಬ್ರಹ್ಮನ ಭಾವವನ್ನು ಪಡೆದನು. ಆಗಲೇ ವಂಶಾದಿಗಳು ಏರ್ಪಟ್ಟವು. ಮಹಾಪುಣ್ಯವುಳ್ಳಂತ ಹರಿಯನ್ನೂ, ಅಕಂಪನನ್ನೂ, ಕಾಶ್ಯಪನನ್ನೂ, ಸೋಮಪ್ರಭನನ್ನೂ ಕರೆದು ಸನ್ಮಾನಮಾಡಿ ದೊರೆಗಳನ್ನಾಗಿ ಮಾಡಿದನು. ಆ ಸ್ವಾಮಿಯ ಮಕ್ಕಳಾದ ಭರತೇಶ್ವರಾದಿ ನೂರೊಂದುಜನ ಮಕ್ಕಳು ಪುನೀತರಾಗಿ ಆವಿರ್ಭವಿಸಿದರು. ಅವರಲ್ಲಿ ಜ್ಯೇಷ್ಠನಾದ ಭರತೇಶ್ವರನು ಚಕ್ರವರ್ತಿಯಾಗಿ ಈ ಕ್ಷೇತ್ರವನ್ನು ಪರಿಪಾಲಿಸಿದ್ದರಿಂದ ಈ ಕ್ಷೇತ್ರವು ಭರತಕ್ಷೇತ್ರವೆಂದು ಪ್ರಸಿದ್ಧಿಯಾಯಿತು.

ಮಹಾದೇವನಾದ ವೃಷಭಸ್ವಾಮಿಯು ವೈರಾಗ್ಯ ಹೊಂದಿ ತಪೋವನಕ್ಕೆತೆರಳಿ, ಪರಿನಿಷ್ಕ್ರಮಣಕಲ್ಯಾಣವನ್ನು ದೇವತೆಗಳಿಂದಪಡೆದು, ದಿವ್ಯಜ್ಞಾನವನ್ನು ಹೊಂದಿ ಕೇವಲಜ್ಞಾನಕಲ್ಯಾಣವನ್ನು ದೇವತೆಗಳಿಂದ ಮಾಡಿಸಿಕೊಂಡು ಅಷ್ಟಕರ್ಮಗಳನ್ನು ಜಯಿಸಿ ಮುಕ್ತನಾದನು. ಆಗ ಇಂದ್ರಾದಿಗಳಿಂದ ಮೋಕ್ಷಕಲ್ಯಾಣಾರಾಧನೆಯು ನಡೆಯಲ್ಪಟ್ಟಿತು. ಅನಂತರ ಅಜಿತ ತೀರ್ಥಂಕರನು ಆವಿರ್ಭವಿಸಿ ಮುಕ್ತನಾದನು- ಇವರ ಅಂತರಾಳದಲ್ಲಿ ಸಗರನೆಂಬ ಚಕ್ರವರ್ತಿಯು ಹುಟ್ಟಿ ನಿರ್ವಾಣಹೊಂದಿದನು. ಅನಂತರ ಶಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ

ಶೀತಳ ತೀರ್ಥಂಕರರು ಹುಟ್ಟಿ ಮುಕ್ತಿಗೆ ಸಂದರು. ಅನಂತರ ಶ್ರೇಯಾಂಸ ತೀರ್ಥಕರು ಆವಿರ್ಭವಿಸಿ ಮುಕ್ತರಾದರು. ಇವರ ಅಂತರಾಳ ಕಾಲದಲ್ಲಿ ಶ್ರೀವಿಜಯನೆಂಬ ಬಲದೇವನೂ, ತ್ರಿಪಿಷ್ಟ ನೆಂಬ ವಾಸುದೇವನೂ, ಅಶ್ವ ಗ್ರೀವನೆಂಬ ಪ್ರತಿವಾಸುದೇವನೂ, ಭೀಮನೆಂಬ ನಾರದನೂ, ಸುಪ್ರತಿಷ್ಟ ನೆಂಬ ರುದ್ರನೂ ಆವಿರ್ಭವಿಸಿ ತಮ್ಮ ತಮ್ಮ ಕರ್ಮಾನುಸಾರ ಗತಿಗಳನ್ನು ಹೊಂದಿದರು. ಅನಂತರ ವಾಸುಪೂಜ್ಯ ತೀರ್ಥಕರು ಜನ್ಮಿಸಿ ಮುಕ್ತಿಗೆ ಸಂದರು. ಇವರ ಅಂತರಾಳ ಕಾಲದಲ್ಲಿ ಅಚಳನೆಂಬ ಬಲದೇವನೂ, ದ್ವಿಪಿಷ್ಟ ನೆಂಬ ವಾಸುದೇವನೂ, ತಾರಕನೆಂಬ ಪ್ರತಿವಾಸುದೇವನೂ, ಮಹಾಭೀಮನೆಂಬ ನಾರದನೂ, ಅಚಳನೆಂಬ ರುದ್ರನೂ ಹುಟ್ಟಿ ತಮ್ಮ ಕರ್ಮಫಲಾನುಸಾರವಾಗಿ ಸದ್ಗತಿ ದುರ್ಗತಿಗಳನ್ನು ಹೊಂದಿದರು- ಅನಂತರ ವಿಮಲ ತೀರ್ಥಕರು ಜನ್ಮಿಸಿ ಮುಕ್ತಿಗೆ ಸಂದರು. ಇವರ ಅಂತರಾಳ ಕಾಲದಲ್ಲಿ ಸುಧರ್ಮನೆಂಬ ಬಲದೇವನೂ, ಸ್ವಯಂಭೂಹು ಎಂಬ ವಾಸುದೇವನೂ, ಮೇರುಕನೆಂಬ ಪ್ರತಿವಾಸುದೇವನೂ, ರುದ್ರನೆಂಬ ನಾರದನೂ, ಪುಂಡರೀಕನೆಂಬ ರುದ್ರನೂ ಸಹ ಹುಟ್ಟಿ ತಮ್ಮ ಕರ್ಮಫಲಾನುಸಾರವಾಗಿ ಉತ್ತರ ಜನ್ಮವನ್ನು ಹೊಂದಿದರು. ಅನಂತರ ಅನಂತ ತೀರ್ಥಕರು ಹುಟ್ಟಿ ಮುಕ್ತಿಗೆ ಸಂದರು. ಅವರ ಅಂತರಾಳ ಕಾಲದಲ್ಲಿ ಸುಪ್ರಭನೆಂಬ ಬಲದೇವನೂ, ಪುರುಷೋತ್ತಮನೆಂಬ ವಾಸುದೇವನೂ, ವಸಸು ಎಂಬ ಪ್ರತಿವಾಸುದೇವನೂ, ಮಹಾರುದ್ರನೆಂಬ ನಾರದನೂ, ಅಜಿತಂಧರನೆಂಬ ರುದ್ರನೂ ಹುಟ್ಟಿ ಅವರವರ ಕರ್ಮಫಲಾನುಸಾರವಾಗಿ ಗತಿಗಳನ್ನು ಹೊಂದಿದರು- ಅನಂತರ ಧರ್ಮನಾಥಸ್ವಾಮಿಯು ಆವಿರ್ಭವಿಸಿ ಮುಕ್ತಿಗೆ ಸಂದರು. ಇವರ ಅಂತರಾಳಕಾಲದಲ್ಲಿ ಸುದರ್ಶನನೆಂಬ ಬಲದೇವನೂ, ಪುರುಷಸಿಂಹನೆಂಬ ವಾಸುದೇವನೂ, ಮದುಕ್ರೀಡನೆಂಬ ಪ್ರತಿವಾಸುದೇವನೂ, ಕಾಳನೆಂಬ ನಾರದನೂ, ಅಜಿತನೆಂಬ ರುದ್ರನೂ ಹುಟ್ಟಿ ಅವರವರ ಕರ್ಮಫಲಾನುಸಾರವಾಗಿ ಗತಿಗೆ ಈಡಾದರು. ಅನಂತರ ಮಘವನೆಂಬ ಚಕ್ರವರ್ತಿಯು ಹುಟ್ಟಿ ಮುಕ್ತಿಗೆ ಸಂದನು. ಅನಂತರ ಸನತ್ಕುಮಾರನೆಂಬ ಚಕ್ರವರ್ತಿಯು ಹುಟ್ಟಿ ಮುಕ್ತಿಗೆ ಸಂದನು. ಅನಂತರ ಶಾಂತಿ ತೀರ್ಥಕರು ಹುಟ್ಟಿ ಚಕ್ರವರ್ತಿತ್ವವನ್ನು ಪಡೆದು ಮುಕ್ತಿಗೆ ಸಂದರು. ಅನಂತರ ಕುಂಥುಜಿನರು ಹುಟ್ಟಿ ಚಕ್ರವರ್ತಿತ್ವವನ್ನು ಪಡೆದು ಮುಕ್ತಿಗೆ ಸಂದರು- ಅನಂತರ ಅರನಾಥಸ್ವಾಮಿಯು ಚಕ್ರವರ್ತಿತ್ವವನ್ನು ಹೊಂದಿ ಮುಕ್ತಿಯನ್ನು ಪಡೆ

ದರು. ಇವರ ಅಂತರಾಳ ಕಾಲದಲ್ಲಿ ಸುಭೌಮನೆಂಬ ಚಕ್ರವರ್ತಿಯು ಹುಟ್ಟಿ ಅಧೋಗತಿಯನ್ನು ಹೊಂದಿದನು. ಅನಂತರ ನಂದಿ ಎಂಬ ಬಲದೇವನೂ, ಪುಂಡರೀಕನೆಂಬ ವಾಸುದೇವನೂ, ನಿಶುಂಭನೆಂಬ ಪ್ರತಿವಾಸುದೇವನೂ, ಮಹಾಕಾಳನೆಂಬ ನಾರದನೂ, ಸಹ ಹುಟ್ಟಿ ತತ್‌ತತ್ ಕರ್ಮಾನುಸಾರವಾಗಿ ಗತಿಯನ್ನು ಹೊಂದಿದರು. ಅನಂತರ ಮಲ್ಲಿ ತೀರ್ಥಕರು ಹುಟ್ಟಿ ಮುಕ್ತಿಗೆ ಸಂದರು. ಇವರ ಅಂತರಾಳದಲ್ಲಿ ಪದ್ಮನೆಂಬ ಚಕ್ರವರ್ತಿಯು ಹುಟ್ಟಿ ಒಳ್ಳೆ ಗತಿಯನ್ನು ಹೊಂದಿದನು. ಅನಂತರ ನಂದಿಮಿತ್ರನೆಂಬ ಬಲದೇವನೂ, ದತ್ತ ನೆಂಬ ವಾಸುದೇವನೂ, ಬಲಿಯೆಂಬ ಪ್ರತಿವಾಸುದೇವನೂ, ದುರ್ಮುಖನೆಂಬ ನಾರದನೂ ಹುಟ್ಟಿ ತಮ್ಮ ತಮ್ಮ ಕರ್ಮಾನುಸಾರ ಗತಿಯನ್ನು ಹೊಂದಿದರು. ಅನಂತರ ಮುನಿಸುವ್ರತ ತೀರ್ಥಕರು ಹುಟ್ಟಿ ಮುಕ್ತಿಗೆ ಸಂದರು. ಅವರ ಅಂತ ರಾಳದಲ್ಲಿ ಹರಿಷೇಣನೆಂಬ ಚಕ್ರವರ್ತಿಯು ಹುಟ್ಟಿ ಸದ್ಗತಿಯನ್ನು ಪಡೆದನು.

ಅನಂತರ ಆ ಇಕ್ಷ್ವಾಕು ವಂಶದಲ್ಲಿ ಪ್ರಸಿದ್ಧನಾದ ರಾಜನು ಸಾಕೇತ ನಗರಕ್ಕೆ ಅಧಿಪತಿಯಾಗಿ ವಿಜಯರಥನೆಂಬ ಹೆಸರನ್ನು ಪಡೆದು ಮಹಾಪರಾ ಕ್ರಮಿಯಾದ ರಾಜನಾಗಿದ್ದನು. ಆತನು ಹೇಮಮಾಲಿನಿಎಂಬ ಲಲನೆಯೊಡನೆ ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಆಸುರೇಂದ್ರನಂತೆ ಕೀರ್ತಿಯನ್ನು ಪಡೆದನು- ಆ ರಾಜದಂಪತಿಗಳಿಗೆ ಸುರೇಂದ್ರಮನ್ಯು ಎಂಬ ಸುಪುತ್ರನು ಜನಿಸಿದನು- ಆ ಮಗುವಿಗೆ ಮೂರುವರ್ಷಗಳು ತುಂಬಲು, ರಾ ಜನಾದ ವಿಜಯರಥನಿಗೆ ವೈರಾಗ್ಯಹುಟ್ಟಲು ಮಗನಿಗೆ ರಾಜ್ಯವನ್ನುಕೊಟ್ಟು ತಾನು ಋಷಿಗಳಲ್ಲಿ ಜಿನದೀಕ್ಷೆಯನ್ನು ತೆಗೆದುಕೊಂಡು ಉಗ್ರೋಗ್ರವಾದ ತಪಸ್ಸನ್ನಾಚರಿಸಿ ಮುಕ್ತಿಯನ್ನು ಪಡೆದನು. ನೃಪಕುಮಾರನಾದ ಸುರೇಂದ್ರ ನು ಬಿದಿಗೆಚಂದ್ರನಂತೆ ಅಭಿವೃದ್ಧಿಯನ್ನು ಹೊಂದುತ್ತಿದ್ದನು. ವಿದ್ಯಾವಂತ ನಾಗಿ, ಶೂರನಾಗಿ, ಸಿರಿಭೋಗದಲ್ಲಿ ಪ್ರಸಿದ್ಧನಾಗಿ ಕೀರ್ತಿಲಕ್ಷ್ಮೀ ಎಂಬಸ್ತ್ರೀ ಯನ್ನು ಪರಿಣಿತನಾಗಿ ಸೌಖ್ಯದಿಂದಿದ್ದನು. ಕಾಲಾನಂತರ ಇವರಿಗೆ ವಜ್ರಬಾಹು ಎಂಬ ಕುಮಾರನು ಉದಿಸಿದನು. ಮಗುವಿಗೆ ಎರಡು ವರ್ಷಗಳಾಗಲು ರಾ ಜನು ರಾಜ್ಯವನ್ನು ಮಗನಿಗೆ ಕೊಟ್ಟು ತಾನು ದೀಕ್ಷಾಬದ್ಧನಾಗಿ ತಪೋಮು ಖನಾದನು. ಅನಂತರ ರಾಜಪುತ್ರನಾದ ವಜ್ರಬಾಹುವು ಸುಲಸೆಯನ್ನು ವಿವಾ ಹವಾಗಿ ಪುರಂದರನೆಂಬ ಮಗನನ್ನು ಪಡೆದನು. ಆ ಮಗುವಿಗೆ ಒಂದು ವರ್ಷವಾಗುತ್ತಲೆ ಅದಕ್ಕೆ ಪಟ್ಟವನ್ನು ಕಟ್ಟಿ ಋಷ್ಯಾಶ್ರಮವನ್ನು ಹೊಂದಿ

ತಪೋನಿಷ್ಠನಾದನು. ಈ ರಾಜಪುತ್ರನು ಬೆಳೆದು ಕಮಲಮಾಲಿನಿ ಎಂಬ ಸತಿಯನ್ನು ಮದುವೆಮಾಡಿಕೊಂಡನು. ಅವಳಿಗೆ ಕೀರ್ತಿಧರನೆಂಬ ಸುತನು ಜನಿಸಿದನು. ಮೊಗುವು ಹುಟ್ಟಿದ ಆರು ತಿಂಗಳಿಗೆ ರಾಜ್ಯಪಟ್ಟವನ್ನು ಮಗುವಿಗೆ ಕಟ್ಟಿ ಧೊರೆಯು ಯೋಗನಿವಾಸಕ್ಕೆ ತೆರಳಿ ತಪಸ್ವಿಯಾದನು. ಆ ಕೀರ್ತಿಧರ ಕುಮಾರನು ಅಭಿವೃದ್ಧಿಯನ್ನು ಹೊಂದಿ ಸಹದೇವಿಯೆಂಬ ಕನ್ನಿಕೆಯನ್ನು ಮದುವೆಯಾಗಿ ಸುಖದಿಂದಿದ್ದಾಗ್ಯೆ ಆ ದಂಪತಿಗಳಿಗೆ ಕೌಸಲನೆಂಬ ಸುಕುಮಾರನು ಆದನು. ಆ ಮೊಗುವಿಗೆ ಮೂರು ತಿಂಗಳು ಆಗುತ್ತಲೇ ಧೊರೆಯು ಧರಣೀ ಭಾರವನ್ನು ಆ ಮೊಗುವಿಗೆ ವಹಿಸಿ, ತಾನು ದೀಕ್ಷಾಬದ್ಧನಾಗಿ ವನವಾಸಕ್ಕೆ ತೆರಳಿದನು. ಆ ಕೌಶಲನು ವಿದ್ಯಾವಿನಯ ಸಂಪನ್ನತ್ವವನ್ನು ಹೊಂದಿ ಕಮಲನೇತ್ರೆಯಾದ ಚಿತ್ರಮಾಲಿನಿಯನ್ನು ಮದುವೆಯಾಗಿ ಸುಖವಾಗಿ ಇರಲಾಗ— ಈ ರಾಜಪುತ್ರನ ತಂದೆಯಾದ ಕೀರ್ತಿಧರನು ತಪೋನಿಷ್ಠನಾಗಿ ಅಲ್ಲಲ್ಲಿ ಸಂಚರಿಸಿಕೊಂಡು ತನ್ನ ಮಗನಿರುವ ಪಟ್ಟಣಕ್ಕೆ ಆಹಾರಾರ್ಥವಾಗಿ ಬರಲು, ಈ ವರ್ತಮಾನವನ್ನು ಆ ಚಿತ್ರಮಾಲಿನಿಯು ಅತ್ತೆಯಾದ ಸಹದೇವಿಗೆ ಹೇಳಿದಳು. ಆ ಸಹದೇವಿಯು ಗಂಡನಾಗಿದ್ದು ಈಗ ಮುನಿಯಾಗಿರುವವನ ದರ್ಶನವನ್ನು ತನ್ನ ಮಗನು ಮಾಡಿದ್ದೇ ಆದರೆ ವಿರಾಗಿಯಾಗಿ ವನವನ್ನು ಹೊಂದುವನೆಂದು ಭಾವಿಸಿ, ಆ ಮುನಿಯನ್ನು ಪಟ್ಟಣದ ಹೊರಕ್ಕೆ ನೂಕಿಬಿಡಬೇಕೆಂತ ಸೇವಕರಿಗೆ ಆಜ್ಞಾಪಿಸಿ ನೂಕಿಸಿ ಬಿಟ್ಟಳು. ಈ ಮುನಿಯನ್ನು ನೂಕಿಸಿದ ವರ್ತಮಾನವನ್ನು ವಸಂತಲತೆಯೆಂಬ ಗೌಡಿಯು ಕೌಶಲನಿಗೆ ಅರಿಕೆಮಾಡಿದ್ದೇನೆಂದರೆ— " ಮೂರು ತಿಂಗಳ ಕಂದನಿಗೆ ರಾಜ್ಯಭಾರವನ್ನು ಕೊಟ್ಟು ದೀಕ್ಷಾಬದ್ಧನಾಗಿದ್ದು ಈಗ ಪಕ್ಷೋಪವಾಸಮಾಡಿ ಅಶನಕ್ಕಾಗಿ ಬಂದ ನಿನ್ನ ತಂದೆಯಾದ ಯತಿಯನ್ನು ನಿನ್ನ ತಾಯಿಯು ನೂಕಿಸಬಹುದೇ ? ಇಂಥಾ ಪಾಪಕೃತ್ಯವು ನಡೆಯಬಹುದೇ " ಎಂದು ಕೌಶಲನಿಗೆ ತಿಳಿಸಲಾಗಿ, ಆತನು ಬಹಳವಾಗಿ ಪರಿತಪಿಸಿ ತನ್ನ ತಾಯಿಯ ದುಷ್ಪರಿಣಾಮಕ್ಕೆ ಬಹಳವಾಗಿ ನೊಂದುಕೊಂಡು ವೈರಾಗ್ಯಪರಾಯಣನಾಗಿ ಆ ಮುನಿಗಳನ್ನು ನೋಡಿದಹೊರತು ಮನೋಹರ ವಸ್ತು ಅಶನಗಳನ್ನು ಬಿಟ್ಟಿರುವೆನೆಂದು ಆ ಧೊರೆಯಾದ ಕೌಶಲನು ಆ ವನಕ್ಕೆ ತಾಮಸಗೊಳ್ಳದೇ ಹೊರಡಲು ಸನ್ನದ್ಧನಾದನು. ಈ ವರ್ತಮಾನವನ್ನು ತಿಳಿದು, ಪುರಜನಗಳೆಲ್ಲಾ ತಮಗೆ ರಾಜನಾಗಿರುವುದಕ್ಕೆ ಯಾರೆಂದು ಕೌಶಲನ ಕೂಡ ಆಲಾಪಮಾಡಲು

ಆ ಮಹಾರಾಜನು ತನ್ನ ಸತಿಯಾದ ಚಿತ್ರಮಾಲಿನಿಗೆ ಗರ್ಭವುಂಟಾಗಿರುತ್ತೆ; ಆ ಗರ್ಭಜನೆ ಮುಂದೀಪುರಿಗೆ ಆರಸನಾಗುವನೆಂದೂ, ಆ ಸುಕುಮಾರನೇ ಸರ್ವಜನಾನಂದವನ್ನುಂಟುಮಾಡುವನೆಂದೂ, ಸಂಪೂರ್ಣವಾಗಿ ಭರವಸೆ ಕೊಟ್ಟು ತಾನು ಮಹರ್ಷಿಯನ್ನು ಸೇರಿ ತಪಸ್ಸನ್ನು ತೆಗೆದುಕೊಂಡು ಧ್ಯಾನಾರೂಢನಾದನು. ಇತ್ತ ಪುರದ ಪರಿಜನ ಪುರಜನ ಅಂತಃಪುರದವರೆಲ್ಲಾ, ಸಹದೇವಿಯ ನಡತೆಗೆ ಹೇಸಿ ಸಹದೇವಿಯನ್ನು ದೂರೀಕರಿಸಲು, ಆ ಸಹದೇವಿಯು ಆಗ್ರಹದಲ್ಲೇ ಮೃತಿಯನ್ನು ಹೊಂದಿ, ಹುಲಿಯ ರೂಪನ್ನು ತಾಳಿದಳು. ಸಂಚರಿಸುತ್ತಿರುವ ಕೌಶಲಮುನಿಯ ದರ್ಶನದಿಂದ ಆ ಹುಲಿಯು ಜಾತಿಸ್ಮರಣೆಯನ್ನು ಹೊಂದಿ ವೈರವನ್ನು ತಾಳಿ ಉಪಸರ್ಗಪಡಿಸಲು ಆ ಮಹರ್ಷಿಯು ಅಷ್ಟಘಾತಿಯ ಘಾತಿಕರ್ಮಗಳಳಿದು ಮೋಕ್ಷಗತಿಯನ್ನು ಹೊಂದಿದನು. ಅತ್ತ ಚಿತ್ರಮಾಲಿನಿಯು ಮಗನನ್ನು ಪಡೆಯಲು ಅವನಿಗೆ ಹಿರಣ್ಯಗರ್ಭನೆಂಬುವನು ಮಗನಾದನು. ಆತನಿಗೆ ಸರಸಿಜೋದರನೆಂಬ ಪುತ್ರನಾದನು. ಆತನಿಗೆ ನಹುಷನೆಂಬ ಮಗನಾದನು. ಆತನಿಗೆ ಸೌಂದರ ನೆಂಬುವನು ಹುಟ್ಟಿದನು- ಆತನಿಗೆ ಸಿಂಹವರೂಥನೆಂಬ ಮಗನಾದನು. ಆತನಿಗೆ ಬ್ರಹ್ಮರಥನೆಂಬ ಮಗನಾದನು- ಆತನಿಗೆ ಶಿಳಿಮುಖನೆಂಬ ಮಗನಾದನು. ಆತನಿಗೆ ಚತುರ್ಮುಖನೆಂಬ ಮಗನಾದನು- ಆತನಿಗೆ ಮಾಂಧಾತನೆಂಬ ಮಗನಾದನು. ಆತನಿಗೆ ವಸಂತತಿಲಕನೆಂಬ ಮಗನಾದನು- ಆತನಿಗೆ ಕುಬೇರದತ್ತ ನೆಂಬ ಮಗನಾದನು- ಆತನಿಗೆ ಹಿರಣ್ಯಗರ್ಭನೆಂಬ ಮಗನಾದನು. ಆತನಿಗೆ ಅರ್ಕರಥನೆಂಬ ಮಗನಾದನು- ಆತನಿಗೆ ರಘುವೀರನೆಂಬ ಮಗನಾದನು. ಆತನಿಗೆ ಅನರಣ್ಯನೆಂಬುವನು ಮಗನಾದನು. ಆತನಿಗೆ ರೂಪಾವತಿ, ಕಳಾವತಿ, ಪೃಥ್ವೀದೇವಿಯರೆಂಬ ಮೂವರು ಭಾರ್ಯೆಯರಾದರು. ಇವರಲ್ಲಿ ರೂಪಾವತಿಗೆ ಅನಂತರಥನೆಂಬ ಮಗನೂ, ಕಳಾವತಿಗೆ ದಶರಥನೆಂಬ ಮಗನೂ ಹುಟ್ಟಿದರು. ಅನಂತರ ಅನರಣ್ಯ ಭೂಪತಿಯು ಹಿರಿಯ ಮಗನಾದ ಅನಂತರಥನಿಗೆ ರಾಜ್ಯವನ್ನು ಕೊಡಲು, ವಹಿಸಿಕೊಳ್ಳದೆ ವೈರಾಗ್ಯಪರಾಯಣನಾಗಿ, ಅನರಣ್ಯನು ಬಾಲನಾದ ದಶರಥನಿಗೆ ಪಟ್ಟವನ್ನು ಕಟ್ಟಿ ತಾನು ದೀಕ್ಷಾಬದ್ಧನಾದನು. ದಶರಥ ಮಹಾರಾಜನು ಹತ್ತು ದಿಕ್ಕುಗಳಿಂದ ಯುದ್ಧಕ್ಕೆ ಬಂದರೂ ಯುದ್ಧಮಾಡುವ ಕೌಶಲ್ಯವನ್ನು ಹೊಂದಿದ್ದುದರಿಂದ ದಶರಥನೆಂಬ ಹೆಸರು ಪ್ರಸಿದ್ಧವಾಯಿತು.

೩. ಸೀತಾ ಸ್ವಯಂವರ.

ಕೇಳೈ ಶ್ರೇಣಿಕ ಮಹಾರಾಜನೆ ! ಇತ್ತ ರೂಪಾವತಿ, ಕಳಾವತಿ, ಪೃಥ್ವೀದೇವಿ ಎಂಬ ಮೂವರೂ ಸಾಕೇತದಲ್ಲಿ ಸುಖವಾಗಿದ್ದರು. ಈ ದಶರಥ ಕುಮಾರನನ್ನು ತೊಟ್ಟಿಲಲ್ಲಿ ಇಟ್ಟು ದಾದಿಯರು ವಂಶಪಾರಂಪರ್ಯ ಬಂದ ಕೀರ್ತನೆಯನ್ನು ಹಾಡುತ್ತಿದ್ದರು. ದಶರಥ ಕುಮಾರನು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದುತ್ತಾ ತನ್ನ ಆಸ್ಯ ಕಮಲದಲ್ಲಿ ಸರಸ್ವತಿಯು ನೆಲಸಿದ್ದಳೋ ಎಂಬಂತೆ ಅರುವತ್ನಾಲ್ಕು ಕಲೆಗಳಲ್ಲಿ ಪ್ರವೀಣನಾಗಿ ಧನುರ್ವಿದ್ಯೆಯಲ್ಲಿ ಅಸಹಾಯ ಶೂರನಾಗಿ ಪ್ರಕಾಶಿಸಿದನು. ಶರೀರದಲ್ಲಿ ಮನ್ಮಥನನ್ನೂ, ನಾಲಿಗೆಯಲ್ಲಿ ಸರಸ್ವತಿಯನ್ನೂ, ಭುಜದಲ್ಲಿ ಜಯಲಕ್ಷ್ಮಿಯನ್ನೂ ಹೊಂದಿದ್ದನು. ಇತ್ತ ಕೋಸಲ ದೇಶದ ಕೌಂಶಂಭೀನಗರಿಗೆ ಉಗ್ರಧ್ವಜನೆಂಬ ಅರಸನಾದನು. ಆತನಿಗೆ ಭದ್ರಾವತಿಯೆಂಬ ಸ್ತ್ರೀಯು ಕಾಂತೆಯಾದಳು. ಇವರಿಗೆ ಕೌಸಲ್ಯೆ, ಸೌಮಿತ್ರೆ ರೆಂಬ ಎರಡು ಸ್ತ್ರೀರತ್ನಗಳು ಉದಯಿಸಿದರು. ಆ ಉಗ್ರಧ್ವಜ ಮಹಾರಾಜನು ಯೌವ್ವನಶಾಲಿಯಾದ ದಶರಥನ ಕೀರ್ತಿಯನ್ನು ಕೇಳಿ ಶುಭದಿನ ಶುಭಲಗ್ನದಲ್ಲಿ ಆ ದಶರಥನಿಗೆ ತನ್ನ ಇಬ್ಬರು ಪುತ್ರಿಯರಾದ ಕೌಸಲ್ಯೆ ಸುಮಿತ್ರೆಯರನ್ನು ಕೊಟ್ಟು ಧಾರಾಪೂರ್ವಕ ಪಾಣಿಗ್ರಹಣ ಮಹೋತ್ಸವವನ್ನು ಮಾಡಿದನು. ಅನಂತರ ದಶರಥಮಹಾರಾಜನು ಆ ಸ್ತ್ರೀಯರೊಡನೆ ಕಾಮಭೋಗ ಸುಖೇಷ್ಟವನ್ನು ಹೊಂದಿ ಸುಖವಾಗಿ ಕಾಲವನ್ನು ಕಳೆಯುತ್ತಿದ್ದನು. ದಶರಥ ಮಹಾರಾಜನು ಉಪವನದ ತಟಾಕಕ್ಕೆ ಈ ಸ್ತ್ರೀಯರೊಡನೆ ಹೋಗಿ ಸುಧಾರಸಾಕಾರಪೂರ್ಣ ಶಶಿ ಮುಖವುಳ್ಳ ಕೌಸಲ್ಯೆ ಸುಮಿತ್ರೆಯರನ್ನು ಜಲಕ್ರೀಡೆಗೆ ಕರೆದು ಹಂಸಪಕ್ಷಿಯು ಸೊಬಗನ್ನನುಸರಿಸಿ ಕೇಳಿಯೊಳಗಿರುತ್ತಿದ್ದನು. ಗಿರಿಗಳಿಗೆ ಈ ಸ್ತ್ರೀಯರುಗಳನ್ನು ಕರೆದುಕೊಂಡು ಹೋಗಿ ಕ್ರೀಡಾವಿನೋದದಲ್ಲಿ ಇರುತ್ತಿದ್ದನು. ದಶರಥನು ತನ್ನ ಕೃಪಾಣದಿಂದ ರಿಪುವಂಶವನ್ನು ಕಡಿದು ಪ್ರಶಸ್ತವಾದ ಯಶಸ್ಸನ್ನು ಅಷ್ಟದಿಕ್ಕುಗಳಲ್ಲಿಯೂ ಮುಟ್ಟುವಂತೆ ರಂಜಿಸಿದನು. ಗಂಧರ್ವಾದಿಗಳು ಈತನ ಗಾನವಿದ್ಯೆಗೆ ಮೈಸೋತು ಹೊಗಳುವರು. ಹೀಗಿರುವಾಗ್ಯೆ ಮಂಗಳದೇಶದಲ್ಲಿ ನೆಲೆಸಿದ್ದ ಅಮರಪುರಕ್ಕೆ ಸಮಾನವಾದ ಮಂಗಳನಗರವೆಂಬ ಪಟ್ಟಣವಿದ್ದಿತು. ಕೋಟೆಯು ಚಿನ್ನದಿಂದ ಮಾಡಲ್ಪಟ್ಟು ಮುಗಿಲನ್ನು ಮುಟ್ಟುವಂತಿದ್ದಿತು. ಈ ಪಟ್ಟಣದಲ್ಲಿ ಕಿತ್ರಾಳೆ, ಅಂಜೂರ,

ಪನಸು, ದಾಡಿಮ, ನಾಗವಲ್ಲಿ, ಜಂಬೀರ, ನಾರ್ಕೇಳಿ, ಚಂಪಕಾ, ಕದಳಿ, ಸಿರೀಸ, ಪುನ್ನಾಗ, ವಕುಳ, ಪಾದರಿ, ಕರವೀರ, ಕುರುವಕ, ಪಾರಿಜಾತಾ, ಸುರಗಿ ಇವೇ ಮೊದಲಾದ ವೃಕ್ಷಗಿಡಗಳಿಂದಲೂ; ಮಲ್ಲಿಗೆ, ಮೊಲ್ಲೆ, ಜಾಜಿ ಮುಂತಾದ ಲತೆಗಳಿಂದಲೂ ಕೂಡಿ ಪರಿಪರಿಯ ಗಮನವನ್ನು ಕೊಡುತ್ತಿದ್ದವು. ಉಪವನದ ಕ್ರೀಡಾರ್ಥವಾದ ಪುಷ್ಕರಣಿಯಲ್ಲಿ ಇರತಕ್ಕ ಜಲವು ಕ್ಷೀರದಂತೆ ಶುಭ್ರವಾಗಿ ಪ್ರೇಕ್ಷಕರಿಗೆ ಕೌತುಕವನ್ನು ಉಂಟುಮಾಡುತ್ತಿದ್ದವು. ಆಉಪ ವನದಲ್ಲಿ ಎಲ್ಲಿ ನೋಡಿದರೂ ಕುಸುರು ತಳಿರು ಎಳೆಗಾಯಿ ಹಣ್ಣುಗಳು ಕಾಣ ಲ್ಪಡುವುವು ಅಲ್ಲಿ ಅರಗಿಳಿ, ಪಿಕದ ಸುಸ್ವರ, ಹಂಸೆಯ ನರ್ತನವು ಕಾಣು ತಲಿದ್ದವು. ಆ ಪುರದಲ್ಲಿ ಶೃಂಗಾರವಾದ ಬೀದಿಗಳ ಎರಡು ಕಡೆಯಲ್ಲಿಯೂ ಹರ್ಮ್ಯಗಳಿಂದ ಕೂಡಿ ಪ್ರೇಕ್ಷಕರ ಕಣ್ಮನಗಳು ಸೆಳೆಯಲ್ಪಡುತ್ತಿದ್ದವು. ಆ ಪುರದ ಮಧ್ಯ ನವರತ್ನ ಖಚಿತವಾದ ದೇವಾಲಯವಿದ್ದಿತು. ಆ ದೇವಾಲ ಯದಲ್ಲಿ ಯಾವಾಗಲೂ ಸಿದ್ಧ ಯಕ್ಷ ಗಂಧರ್ವ ಸ್ತ್ರೀಯರನ್ನು ಜರಿಯುವ ಕಾಮಿನಿಯರು ತಮ್ಮ ಮನೋಹರವಾದ ಕಂಠದಿಂದ ಪರಮ ಜಿನೇಶ್ವರನ ಶಾಂತಿರಸವನ್ನು ಹಾಡುತ್ತಲಿದ್ದರು- ಈ ಮಂಗಳಪುರಕ್ಕೆ ವಿಖ್ಯಾತನಾದ ನೂತನವಾಗಿ ಮಾಡಿದ ನಿರ್ಮಲ ಪುತ್ಥಳಿಯಂತೆ ಹೇಮಪ್ರಭನೆಂಬ ರಾಜನು ಧೊರೆಯಾಗಿದ್ದನು. ಈ ಮಹಾರಾಜನಿಗೆ ರೂಪುಲಾವಣ್ಯದಿಂದ ಕೂಡಿದ ವಿಜ ಯಾಂಗನೆಯು ಪಟ್ಟ ಸ್ತ್ರೀಯಾಗಿದ್ದಳು. ಆ ಮಹಾದೇವಿಯು ನಿತ್ಯದಲ್ಲೂ ಜಿನೇಶ್ವರ ಪಾದಾರವಿಂದ ಗಂಧೋದಕದಿಂದ ಶಿರಸ್ಸೇಚನವನ್ನು ಮಾಡುತ್ತಾ ಮಹಾರಾಜನಿಗೆ ಭಾಗ್ಯಲಕ್ಷ್ಮಿಯಂತೆ ಕಾಮ್ಯಾರ್ಥವನ್ನು ಸಲ್ಲಿಸುತ್ತಾ, ಬಹಳ ದಿವಸ ವ್ರತಾಚರಣೆಯನ್ನು ಮಾಡಿ ಮನೋಹರವಾದ ಮೇನಕೆ, ರಂಭೆ ಯರೆಂಬ ಅಪ್ಸರ ಸ್ತ್ರೀಯರ ರೂಪನ್ನು ಅಪಹರಿಸಿದ ಸುಕುಮಾರಿಯೆಂಬ ಪುತ್ರಿಯನ್ನು ಪಡೆದಳು. ಇವಳಿಗೆ ಮಹಾರಾಜನು ಕೈಕಿಲೆಯೆಂಬ ನಾಮವ ನ್ನಿಟ್ಟು ನಾಮಕರಣ ಮಹೋತ್ಸವವನ್ನು ಮಾಡಿದನು- ಈ ಕನ್ಯಾಮಣಿಯು ದಿನದಿನಕ್ಕೆ ಸುಂದರವಾದ ರೂಪಿನೊಡನೆ ಕಾಮಧೇನುವಿನಂತೆ ಬೆಳೆದು ಸಂಗೀತ ಸಾಹಿತ್ಯ ಕಳಾಲಂಕೃತಳಾಗಿ ಯೌವ್ವನವನ್ನು ಹೊಂದುತ್ತಾ ಬಂದಳು. ಮಂತ್ರಿಯು ಮಹಾರಾಜನ ಸಮೀಪವರ್ತಿಯಾಗಿ ರಾಜಕುಮಾ ರಿಗೆ ಸ್ವಯಂವರವನ್ನು ಮಾಡಿ ವರನನ್ನು ಹೊಂದಿಸಬೇಕೆಂದು ಪೇಳಲು ಕಾ ಲೋಚಿತಜ್ಞನಾದ ಮಹಾರಾಜನು ಒಪ್ಪಿ ತನ್ನ ಮಗಳಿಗೆ ಬರುವಂತೆ ಹೇಳಿ

ಕಳುಹಿಸಿದನು. ಕೂಡಲೇ ಆ ಕೈಕಿಲೆ ಕುಮಾರಿಯು ತಂದೆಯ ಸಮೀಪಕ್ಕೆ ಬಂದು ನಮಸ್ಕರಿಸಿ ಪಿತನಾಜ್ಞೆಯಂತೆ ಉಚಿತಾಸನದಲ್ಲಿ ಕುಳಿತುಕೊಂಡಳು. ಆಗ ದೊರೆಯು—“ ಪ್ರಿಯ ಪುತ್ರಿಯೇ ! ನಿನಗೆ ವರವನ್ನು ಹುಡುಕುವುದಕ್ಕಾಗಿ ಸ್ವಯಂವರವನ್ನು ಏರ್ಪಡಿಸುತ್ತೇನೆ. ನಿನ್ನ ಮನೋಭಾವವು ಹೇಗೆ?” ಎಂಬುದನ್ನು ತಿಳಿಸಬೇಕೆಂದು ರಾಜನು ಹೇಳಲು ಆ ಮಹಾದೇವಿಯು— “ ತಂದೆಯೆ ! ನಾನು ವೀಣೆಯನ್ನು ಭಾಜಿಸಿ ಮುದ್ದುಗೊಳಿಸಿದ ರಾಜನಿಗೆ ನಾಯಕಿಯಾಗಬೇಕೆಂದು ಶಪಥವನ್ನು ಮಾಡಿರುತ್ತೇನೆ. ಇದನ್ನು ಅಭಿಮಾನಿಸಿ ನನ್ನ ಮನಃಕೋರಿಕೆಯನ್ನು ನೆರವೇರಿಸಬೇಕು.” ಎಂದು ಬೇಡಿಕೊಳ್ಳಲು ಅದಕ್ಕೆ ಮಹಾರಾಜನು ಸಂತಸದಿಂದ ಅನುಮೋದಪಟ್ಟು ಸುಕುಮಾರಿಯನ್ನು ಅಂತಃಪುರಕ್ಕೆ ಹೋಗಲು ಅಪ್ಪಣೆಕೊಟ್ಟನು. ಅನಂತರ ಸ್ವಯಂವರ ಮಂಟಪವನ್ನು ರಚಿಸಿ ರಾಜಾಧಿರಾಜರುಗಳ ಆಗಮನಕ್ಕಾಗಿ ಮಹೋತ್ಸವ ಪತ್ರಿಕೆಗಳನ್ನು ಕಳುಹಿಸಿಕೊಟ್ಟನು. ಅನಂತರ ರಾಜಾಧಿರಾಜರುಗಳು ರಥಗಜಾಶ್ವ ಪದಾತಿಗಳೊಡನೆ ಬಂದು ಆ ಪುರದ ಬಹಿರುದ್ಯಾನಸ್ಥಿತ ಸ್ವಯಂವರಮಂಟಪದ ಚತುರ್ದಿಗ್ಭಾಗಗಳ ವೀಥಿಗಳಲ್ಲಿ ಏರ್ಪಡಿಸಿರುವ ಮನೋಹರವಾದ ಗೃಹಗಳಲ್ಲಿ ಇಳಿದುಕೊಂಡರು. ಅನಂತರ ಗೊತ್ತುಮಾಡಲ್ಪಟ್ಟ ದಿನದಲ್ಲಿ ಸ್ವಯಂವರ ಮಂಟಪಕ್ಕೆ ರಾಜರುಗಳು ಅಲಂಕಾರ ಭೂಷಿತರಾಗಿ ಬಂದು ಪೀಠಗಳಲ್ಲಿ ಮಂಡಿಸಿದರು. ಆ ಸಭೆಗೆ ಬಾಲಸೂರ್ಯನಂತೆ ಪ್ರಕಾಶಮಾನನಾದ ದಶರಥನು ಮೇಲ್ಭೂಷಣದಳೆದು ಕೌತುಕಲೀಲೆಯಿಂದ ಬಂದು ಒಂದು ಕಡೆ ಕೂತುಕೊಂಡನು. ಅಷ್ಟರಲ್ಲಿ ದಿವ್ಯಾಂಬರವನ್ನು ಧರಿಸಿ ಮೃಗಮದ ತಿಲಕವನ್ನು ಹಣೆಯಲ್ಲಿಟ್ಟು, ಕರ್ಣಾಭರಣ, ಕಂಠಾಭರಣ, ಹಸ್ತಾಭರಣ, ಪಾದಾಭರಣಗಳನ್ನು ಇಟ್ಟುಕೊಂಡು ಸುವರ್ಣಖಚಿತ ವಡ್ಯಾಣವನ್ನು ಕಟಿಭೂಷಣವನ್ನಾಗಿ ಮಾಡಿ ಕರ್ಪೂರ ವೀಳ್ಯವನ್ನು ಆರೋಹಿಸುತ್ತಾ, ಆ ಕೈಕಿಲೆಯು ಯಾನಾರೂಢಳಾಗಿ ಸಖಿ ಮತ್ತು ಕಂಚುಕಿಯರೊಡನೆ ಸ್ವಯಂವರ ಮಂಟಪಕ್ಕೆ ವೀಣಾಲಂಕೃತಪಾಣಿಯಾಗಿ ಬಂದಳು. ಇತ್ತ ಕುಳಿತುಕೊಂಡಿದ್ದ ರಾಜರುಗಳು ರತಿಯೋ ಪಾದಿಯುಲ್ಲಿರುವ ಕೈಕೆಯನ್ನು ನೋಡಿದ ಕೂಡಲೆ ಮಿಂಚಿನಿಂದ ಹರಿಯಲ್ಪಟ್ಟ ಕಣ್ಣುಗಳುಳ್ಳವರಂತೆ ಮೈಮರೆದು ಕೂತರು. ಆ ರತಿಯು ಕಡಗಣ್ಣೆಂಬ ಸರಳಿನಿಂದ ಚುಚ್ಚಲ್ಪಟ್ಟರೋ ಎಂಬಂತೆ ರಾಜರುಗಳು ತಮ್ಮ ಆಸನದಲ್ಲಿ ಅಲುಗಾಡಿದರು. ಆಗ ಕಂಚುಕಿಯು ಸಭಾಮಧ್ಯ

ದಲ್ಲಿ ನಿಂತು, “ ರಾಜಾಧಿರಾಜರುಗಳೇ! ಯಾರು ಈ ವೀಣೆಯನ್ನು ಬಾಜಿಸಿ ರಾಜಕುಮಾರಿಯನ್ನು ಸಂತೋಷಪಡಿಸುವನೋ ಅವನಿಗೆ ರಾಜಪುತ್ರಿಯಾದ ಕೈಕೆಯು ಕಾಂತೆಯಾಗುವಳು” ಎಂದು ಹೇಳಿದನು.

ಆ ಕೂಡಲೇ ವಾದ್ಯಗಳು ಭೋರ್ಗರೆದವು. ವೀಣೆಯು ಸಭಾಮಧ್ಯ ದಲ್ಲಿ ಇಡಲ್ಪಟ್ಟಿತು. ಅಷ್ಟರಲ್ಲಿ ಭೂಭುಜರೆಲ್ಲಾ ತವಕಪಟ್ಟು ವೀಣೆಯನ್ನು ಧಾರಿಸುವುದಕ್ಕೆ ಪ್ರಯತ್ನಪಟ್ಟರು. ಒಬ್ಬರಾಜನು ವೀಣೆಯನ್ನು ತೆಗೆದು ಕೊಳ್ಳುವುದಕ್ಕೆ ಕೈನೀಡಿ, ರಾಜಪುತ್ರಿಯ ಮುಖಾವಲೋಕನಕ್ಕೆ ಇಟ್ಟ ದೃಷ್ಟಿ ಯನ್ನು ಬಿಡಲಾರದೆ ಹಾಗೆಯೇ ನಿಂತುಕೊಂಡನು. ಇನ್ನೊಬ್ಬ ದೊರೆಯು ವೀಣೆಯನ್ನೆತ್ತಿ ನರ್ತನಕ್ಕೆ ಪ್ರಯತ್ನಪಟ್ಟು ದಿಮಿದಿಮಿಯೆಂದು ಲಾಸ್ಯವನ್ನು ಮಾಡಿದನು. ಅನೇಕ ರಾಜರು ವೀಣೆಯನ್ನು ಬಾರಿಸಲು ಉದ್ಯೋಗಿಸಿ ನಿರಾಶರಾದರು. ಕೆಲವು ರಾಜಪುತ್ರರು ಈವಿದ್ಯಮಾನಗಳನ್ನು ನೋಡಿ ಹ್ರೀ ಮಯರಾಗಿ ಕೂತುಕೊಂಡರು. ಕ್ಷತ್ರಿಯರಲ್ಲಿ ಯಾರೂ ವೀಣಾಗಾನಮಾಡು ವುದರಲ್ಲಿ ಜಯಶೀಲರಾಗದಿದ್ದರಿಂದ ಬ್ರಾಹ್ಮಣ ಸಭೆಯಲ್ಲಿದ್ದವರ್ಯಾರಾದರು ವೀ ಣಾನಾದವನ್ನು ಮಾಡಿ, ರಾಜಪುತ್ರಿಯನ್ನು ಹೊಂದಬಹುದೆಂದು ರಾಜನ ಅಪ್ಪಣೆ ಪ್ರಕಾರ ಕಂಚುಕಿಯು ಶ್ರುತಪಡಿಸಲು, ಬ್ರಾಹ್ಮಣರ ಮಧ್ಯದಲ್ಲಿ ಕುಳಿತ್ತಿದ್ದ ದಶರಥನು ವೀಣೆಯನ್ನು ನೋಡುತ್ತಲಿದ್ದನು. ಆಗ ಬ್ರಾಹ್ಮ ಣರು, ನೀನು ಇದಕ್ಕೆ ಪ್ರಯತ್ನಪಡಬೇಡ. ನಾವು ಜಿಹ್ವಾಪ್ರಿಯರು. ನಮ ಗೇಕೆ ಈ ರಾಜಪುತ್ರಿ ! ಎಂತ ಎಷ್ಟು ತಡೆದರೂ, ದಶರಥನು ವೇದಿಕಾ ಹತ್ತಿರಹೋಗಿ ವೀಣೆಯನ್ನು ತೆಗೆದುಕ್ಕೊಂಡು ಶ್ರುತಿಮಾಡುವುದಕ್ಕೆ ಪ್ರಯತ್ನ ಪಡಲು ರಾಜರುಗಳೆಲ್ಲಾ ಕೈತಟ್ಟಿ ಹಾಸ್ಯಮಾಡಿ ಗಹಗಹಿಸಿ ನಕ್ಕರು. ಹಾಗೂ ದಶರಥನು ಬೇಸರಗೊಳ್ಳದೆ ವೀಣೆಯನ್ನು ಶಾಸ್ತ್ರೋಕ್ತರೀತ್ಯಾ ಭಾಜನಮಾಡಿ ರಾಜಪುತ್ರಿಗೂ, ಸಭಾಸದರರಿಗೂ ಸಂತೋಷಪಡಿಸಿದನು. ಆಗ ರಾಜಪುತ್ರಿ ಯಾದ ಕೈಕಿಲೆಯು ಅತ್ಯಾನಂದದಿಂದ .ದಶರಥನ ಬಳಿಗೆ ಬಂದು ಮಾಲಿಕೆ ಯನ್ನು ಕೊರಳಿನಲ್ಲಿಟ್ಟಳು. ತಕ್ಷಣವೇ ಪಂಚಮಹಾವಾದ್ಯಗಳು ಮಂಗಳ ಧ್ವನಿಯನ್ನು ಮಾಡಿದವು. ಅನಂತರ ವಿವಾಹವಿಧಿಯು ಸಾಂಗವಾಗಿ ನೆರವೇ ರಿಸಲ್ಪಟ್ಟಿತು. ಕ್ಷತ್ರಿಯರೆಲ್ಲರೂ ತಮ್ಮ ತಮ್ಮ ಪಟ್ಟಣಗಳಿಗೆ ತೆರಳಿದರು.

೪. ರಾಮಸ್ವಾಮಿ ಜನನಾ.

ದಶರಥ ಮಹಾರಾಜನು ಕೈಕಿಲೆಯೊಡಗೂಡಿ ಸ್ವಲ್ಪಕಾಲ ಮಾವನ ಮನೆಯಲ್ಲಿ ಸುಖಸಂತೋಷದಿಂದ ಕಳೆದನು. ಇಷ್ಟರಲ್ಲಿ ದಶರಥನು ಕೈಕಿಲೆಯನ್ನು ಸ್ವಯಂವರದಲ್ಲಿ ವೀಣಾವಾದದಿಂದ ಜಯಿಸಿ ಪಾಣಿಗ್ರಹಣಮಾಡಿಕೊಂಡನೆಂಬ ಸಮಾಚಾರವು ದಿಗಂತದವರಿಗೂ ಮುಟ್ಟಲು ಶಿಲ್ಪವಿಷಯದ ಹರಿಪುರದ ಮಹಾರಾಜನಾದ ಮಯೂರಕೇಶನೆಂಬ ರಾಜನ ಪಟ್ಟಸ್ತ್ರೀಯಾದ ಲಕ್ಷ್ಮೀಮತಿ ಮಹಾದೇವಿಯಲ್ಲಿ ಜನಿಸಿದ ಲಕ್ಷ್ಮಣೆಯೆಂಬ ಮಗಳನ್ನು ಹಂಸಧ್ವಜನು ಪರಿಜನ ಪುರಜನರೊಡಗೂಡಿ ಕರೆದುಕೊಂಡು ಬಂದು ದಶರಥನಿಗೆ ಅಗ್ನಿಸಾಕ್ಷಿಕವಾಗಿ ವಿವಾಹಮಾಡಿಕೊಟ್ಟನು. ಅನಂತರದಲ್ಲಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು. ದಶರಥನು ಕೈಕಿಲೆ, ಲಕ್ಷ್ಮಣೆಯರೊಡನೆ ಲೀಲಾವಿನೋದದಿಂದ ಸ್ವಲ್ಪಕಾಲವಿದ್ದು ತನ್ನಪಟ್ಟಣವಾದ ಅಯೋಧ್ಯಾಪುರಿಗೆಹೊರಡಲು, ಈ ನೂತನ ಕಾಂತೆಯರು ತಮ್ಮ ತಮ್ಮ ಪರಿಜನರೊಡಗೂಡಿ ಹೊರಡಲು, ದಶರಥನು ಭರತಚಕ್ರವರ್ತಿ ಪುರಪ್ರವೇಶ ಮಾಡಿದಂತೆ ಅತ್ಯಂತ ವೈಭವದಿಂದ ಅಯೋಧ್ಯಾ ಪಟ್ಟಣವನ್ನು ಹೊಕ್ಕನು.

ಮಹಾರಾಜನ ಬರುವಿಕೆಯಲ್ಲಿ ಆ ಪಟ್ಟಣದ ಜನರೆಲ್ಲಾ ಅತ್ಯಂತ ಆನಂದದಿಂದ ತಳಿರುತೋರಣಗಳಿಂದ ಪಟ್ಟಣವನ್ನು ಅಲಂಕರಿಸಿ, ಮಂಗಳ ಉಪಾಯನ ದ್ರವ್ಯಗಳಿಂದ ಒಡಗೂಡಿ ರಾಜನನ್ನು ಎದುರುಗೊಂಡು ಸ್ವಾಗತಿಸಿ, ಪುರಪ್ರವೇಶವನ್ನು ಮಾಡಿಸಿ ಅರಮನೆಯವರಿಗೂ ಹಿಂಬಾಲಿಸಿ ಬೀಳ್ಕೊಂಡು ತೆರಳಿದರು. ರಾಜನು ಅರಮನೆಯನ್ನು ಪ್ರವೇಶಿಸಲು ಕೌಶಲ್ಯೆ, ಸುಮಿತ್ರೆಯರು ಅತ್ಯಂತ ಹರ್ಷದಿಂದೊಡಗೂಡಿ, ಕೈಕಿಲೆ, ಲಕ್ಷ್ಮಣೆಯರೊಡನೆ ಬಂದ ದಶರಥಮಹಾರಾಜನಿಗೆ ಹಸ್ತಲಾಘವವನ್ನು ಕೊಟ್ಟು ಭದ್ರಾಸನದಲ್ಲಿ ಕುಳ್ಳಿರಿಸಿ, ನೂತನ ರಾಜಸ್ತ್ರೀಯರಿಗೂ ಸನ್ಮಾನಿಸಿ ನೀರಾಜನವನ್ನು ಮಾಡಿ ತಮ್ಮ ಕರ್ತವ್ಯವನ್ನು ಪೂರ್ತಿಗೊಳಿಸಲು ರಾಜನು ಕೌಶಲ್ಯಾದಿಗಳನ್ನು ಮುಗಳ್ನಗೆಯ ನೋಟದಿಂದಸನ್ಮಾನಿಸಿ, ನಿತ್ಯಾನುಷ್ಠಾನಕ್ಕೆ ತೆರಳಿದನು. ಈಕೌಶಲ್ಯಾದಿಗಳು ರಂಭಾದಿ ಅಪ್ಸರ ಸ್ತ್ರೀಯರಂತೆಸದಾ, ಈ ರಾಜನನ್ನು ನಾನಾವಿಧವಾದ ಕಾಮವಿಲಾಸದಿಂದ ತೃಪ್ತಿಪಡಿಸುತ್ತಿದ್ದರು. ಇತರಸಾಮಂತರಾಜರು ಈದಶರಥಮಹಾರಾಜನಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸಿ ಸಾಷ್ಟಾಂಗ ಪ್ರಣತರಾಗಿ ತಮ್ಮ ರಾಜಭಕ್ತಿಯನ್ನು ತೋರ್ಪಡಿಸುತ್ತಲಿದ್ದರು.

ಒಂದುದಿವಸರಾತ್ರಿ ದಶರಥನು ಕೈಕಿಲೆಯ ಶಯನಗೃಹವನ್ನು ಪ್ರವೇಶಿಸಿದ್ದನ್ನು ನೋಡಿ ಕೈಕಿಲೆಯು ಅತ್ಯಾಸಕ್ತಿಯಿಂದ ದಶರಥನ ಹಸ್ತವನ್ನು ಹಿಡಿದುಕೊಂಡು ಭದ್ರಾಸನದಲ್ಲಿ ಕುಳ್ಳಿರಿಸಿ, ಪಾದಕ್ಕೆ ಆನತಳಾಗಿ ಸನ್ಮಾನಿಸಿ ವೀಣೆಯನ್ನು ತೆಗೆದುಕೊಂಡು ರಾಗಾಲಾಪನೆಯನ್ನು ಮಾಡಿ, ರಾಜನನ್ನು ಅತ್ಯಂತ ಸಂತೋಷಪಡಿಸಿ, ಪರ್ಯಂಕಗತನಾದ ರಾಜನನ್ನು ಹಾವಭಾವ ವಿಲಾಸದಿಂದ ಆನಂದಸಾಗರದಲ್ಲಿ ತೇಲಿಸಲು, ರಾಜನು ಆನಂದಪರವಶನಾಗಿ ಕೈಕಿಲೆಯ ಹಸ್ತದಮೇಲೆ ತನ್ನ ಕೈಯನ್ನಿಟ್ಟು ನೀನು ಕೇಳುವ ಎರಡು ಬೇಡಿಕೆಗಳನ್ನು ಸಂಪೂರ್ಣವಾಗಿ ನೆರವೇರಿಸಿಕೊಡುವುದಾಗಿ ಶಪಥವನ್ನು ಮಾಡಿದನು. ಕೈಕಿಲೆಯು ತೃಪ್ತಳಾಗಿ ದೊರೆಗೆ ಸಾಷ್ಟಾಂಗವಾಗಿ ನಮಸ್ಕರಿಸಿ ತನಗೆ ಪ್ರಕೃತ ಬಿದ್ದಾಗ ಪಾದಮೂಲದಲ್ಲಿ ಬೇಡಿಕೊಳ್ಳುವದಾಗಿ ಅರಿಕೆಮಾಡಲಾಗಿ ದೊರೆಯಾದ ದಶರಥನು ಆಗ್ಯೆ ನಿನ್ನ ವರವನ್ನು ಪೂರ್ತಿಸಿ ಕೊಡುವುದಾಗಿ ಮಾತುಕೊಟ್ಟನು. ದಶರಥಮಹಾರಾಜನು ಈ ಸ್ತ್ರೀಯರಿಂದ ಕೂಡಿ ರಾಜಭೋಗ ಇಷ್ಟಸಾಧನೆಗಳಲ್ಲಿ ಮಗ್ನನಾಗಿ ಮತ್ತೊಂದು ಯಾವ ವಸ್ತುವು ತನಗೆ ಅಪ್ರಕೃತವಾಗಿದೆಯೆಂತ ಎಣಿಸಿ ಕಾಲವನ್ನು ಕಳೆಯುತ್ತಲಿದ್ದನು.

ದಶರಥನು ಸುಖವಾಗಿ ಕಾಲಕಳೆಯುತ್ತಿರಲೊಂದು ದಿವಸ ಆಸ್ಥಾನ ಮಂಡಪದಲ್ಲಿರುವಾಗ್ಯೆ ಪದ್ಧತಿಪ್ರಕಾರ ಕೌಸಲ್ಯಾದೇವಿಯು ಬಂದಿರದಿರಲು ದೊರೆಯು ವ್ಯಸ್ತನಾಗಿ ಕಂಚುಕಿಯ ಮುಖವನ್ನು ನೋಡಿ, "ಎಲೈ ಯಾಕೆ ಮಹಾದೇವಿ ಬಂದಿಲ್ಲ. ಯಾತಕ್ಕೆ ಬರಲಿಲ್ಲ. ಮನಸ್ಸಿನ ದುಗಡವೇನು?" ಎಂದು ಕೇಳಲಾಗಿ ಕಂಚುಕಿಯು, "ಪ್ರಭುವೇ! ರಾಣಿಯವರು ವಂದನಾರ್ಥವಾಗಿ ಸಹಸ್ರಕೂಟದ ಬಸದಿಗೆ ಬಿಜಮಾಡಿಸಿ ಅರ್ಹತ್ಪರಮೇಶ್ವರನನ್ನು ಅಷ್ಟಮಂಗಲದಿಂದ ಅರ್ಚಿಸಿ, ಋಷಿಕೋಷ್ಠಕ್ಕೆ ತೆರಳಿ, ಗುರುಗಳಿಗೆ ತ್ರಿಕರಣ ಶುದ್ಧಿಯಿಂದ ನಮಸ್ಕರಿಸಿ, ಸ್ವಚ್ಛದಿಂದ ಸ್ವಲ್ಪಹೊತ್ತು ಧರ್ಮಶ್ರವಣವನ್ನು ಕೇಳಿ ಆನಂದವನ್ನು ಹೊಂದಿ, ಬರುತ್ತಾ ಮಧ್ಯಮಾರ್ಗದಲ್ಲಿದ್ದ ಅಧ್ಯಯನ ಶಾಲೆಯನ್ನು ಹೊಕ್ಕು ಬಾಲರು ಅಧ್ಯಯನಮಾಡುವದನ್ನು ಕೇಳಿ ಬಾಲರ ಆಟಪಾಟಗಳನ್ನು ನೋಡಿ ಹಾಗೆಯೇ ದಯಮಾಡಿಸುತ್ತಾ ವಿದ್ಯಾಭ್ಯಾಸ ಮಾಡುತ್ತಿದ್ದ ಕ್ಷತ್ರಿಯಬಾಲರ ಆವಾಸವನ್ನು ನೋಡಿ ಯಾವುದೋ ಒಂದನ್ನು ನೆನೆದುಕೊಂಡು ಕೇವಲ ಚಿಂತಾಸಕ್ತರಾಗಿ ಅರಮನೆಯನ್ನು ಹೊಕ್ಕು ಸ್ವಂತ ಶಯನ ಗೃಹಕ್ಕೆ ತೆರಳಿ, ಯಾರಿಗೂ ಯಾವ ವಿಧವಾದ ಅಪ್ಪಣೆಯನ್ನು

ಮಾಡದೇ ಪರ್ಯಂಕಗತರಾಗಿಧ್ದಾರೆ. ಮಹಾಸ್ವಾಮಿ! ಎಲ್ಲಾ ದಾಸಿಯರೂ ರಾಣಿಯವರ ಚಿಂತೆಗೆ ಬೆದರಿ ಬೆಂಡಾಗಿದಾರೆ. " ಎಂದು ಬಿನ್ನಹಮಾಡಿ ನಮಸ್ಕರಿಸಿದನು. ಮಹಾರಾಜನು ಕಾತರನಾಗಿ ಯಾವದನ್ನು ಹೇಳದೆ ಸಭಾಸದರಿಗೆ ಅಪ್ಪಣೆಯನ್ನು ನೀಡಿ ಅಂತಃಪುರದ ಕಡೆಗೆ ಹೊರಟು ಕೌಶಲ್ಯೆಯ ಕ್ರೀಡಾಗೃಹಕ್ಕೆ ತೆರಳಿದನು. ರಾಣಿಯು ದೊರೆಯು ಬರುವುದನ್ನು ನೋಡಿ ಎದ್ದು, ತತ್ಕಾಲದಸನ್ಮಾನವನ್ನು ಮಾಡಿ, ಚಿಂತಾಯುಕ್ತವಾದ ಮುಖವನ್ನು ದೊರೆಯ ಪಾದಮೂಲದಲ್ಲಿ ನೀಡಿ ನಿಂತುಕೊಂಡಳು. ಮಹಾರಾಜನು ರಾಣಿಯನ್ನು ತಕ್ಕೈಸಿ, ತಾನೂ ಚಿಂತಾಸಕ್ತನಾಗಿ ಮೆಲ್ಲಿಗೆ ಯಾತಕ್ಕಾಗಿ ಈಪರಿ ವ್ಯಸನವುಳ್ಳವಳಾಗಿರುವೆ ? ಇದನ್ನು ಹೇಳಬೇಕೆಂದು ಬಹಳವಾಗಿ ಬೇಡಿಕೊಂಡನು. ಆಗ ರಾಣಿಯು ಅಶ್ರುಶ್ರಾವದಿಂದ ದೊರೆಯ ಪಾದವನ್ನು ತೊಯಿಸಲು ದೊರೆಯು ಮತ್ತೂ ವ್ಯಗ್ರನಾಗಿ ರಾಣಿಯನ್ನು ಬಹಳವಾಗಿ ಸಂತೈಸಿ, ದುಃಖಕ್ಕೆ ಕಾರಣವನ್ನು ಬೆಸಗೊಳ್ಳಲಾಗ–– ರಾಣಿಯು ತನ್ನ ದುಃಖವನ್ನು ಕಷ್ಟದಿಂದ ತಡೆದುಕೊಂಡು ನಿಧಾನವಾಗಿ ತಾನು ದೇವತಾ ವರದನಾರ್ಥವಾಗಿ ಹೋಗಿ, ಪುನಃ ಅರಮನೆಯ ಪ್ರವೇಶವಾದ ಸನ್ನಿವೇಶನವನ್ನೆಲ್ಲಾ ಅರಿಕೆಮಾಡಿ, ತಾನು ಸ್ತ್ರೀಯಾದದ್ದು ನಾಮ ಮಾತ್ರವಾದದ್ದು. ತನ್ನ ಇರುವಿಕೆಯು ಫಲಕಾರಿಯಾಗಿಲ್ಲ. ಏಕೆಂದರೆ ಸ್ತ್ರೀಧರ್ಮವಾದ ಸಾತ್ತ್ಯನವೆಂದರೆ ಗರ್ಭವಿಲ್ಲದಿದ್ದರಿಂದ ತನ್ನ ಜನ್ಮವು ಬಿಸಲಕುದುರೆಯ ಇರುವಿಕೆಯಂತೆ ಆಗಿರುತ್ತೆಂದು ಹೇಳಲು, ದೊರೆಯು ತಾತ್ಕಾಲೋಚಿತವಾದ್ಯೋಕ್ತಿಗಳಿಂದ ಸಂತೈಸಿ ಪಟ್ಟಸ್ತ್ರೀಯಾದ ಕೌಶಲ್ಯೆಯನ್ನು ಕುಶಲಮಾತಿನಿಂದ ನಗಿಸಿ, ನಿತ್ಯಕರ್ಮಾನುಷ್ಠಾನಕ್ಕೆ ತೆರಳಿದನು.

ಅನುಷ್ಠಾನ ಪರಾಯಣನಾದ ದಶರಥನು ದೇವತಾರ್ಚನೆಯಲ್ಲಿ ಪರಾಯಣನಾಗಿದ್ದರೂ, ಪುತ್ರಾಭಾವಚಿಂತೆಯಿಂದ ಮಗ್ನನಾಗಿ ಕೌಸಲ್ಯೆಯ ಚಿಂತಾಭಾರವನ್ನೆಲ್ಲಾ ತಾನೇ ಹೊತ್ತುಕೊಂಡನು. ಆ ದಿವಸ ವನಪಾಲಕನು ಬಂದು ದೊರೆಯಾದದಶರಥನ ಪಾದಮೂಲದಲ್ಲಿ ಅಕಾಲಫಲಪುಷ್ಪಗಳನ್ನಿಟ್ಟು ನಮಸ್ಕರಿಸಿ, ಮಹಾಯತಿಗಳಾದ ಯಮಧರರು ಶಿಷ್ಯರೊಡಗೊಂಡು ನಮ್ಮ ಬಹಿರುದ್ಯಾನವಾದ ನಂದನವನಕ್ಕೆ ಬಿಜಯಂಗೈದಿಧ್ದಾರೆಂದು ಪ್ರಾರ್ಥನೆಮಾಡಿಕೊಳ್ಳಲು ಅರಸನು ಅವನ್ನು ಕೇಳಿ ಅತ್ಯಾನಂದವನ್ನು ಹೊಂದಿ ವನಪಾಲಕನಿಗೆ ಪಾರಿತೋಷಕ ದ್ರವ್ಯವನ್ನು ಕೊಟ್ಟು, ಭದ್ರಾಸನದಿಂದೆದ್ದು ಏಳು ಹೆಜ್ಜೆ

ಗಳನ್ನಿಟ್ಟು ನಮಸ್ಕರಿಸಿ, ಪಟ್ಟಸ್ತ್ರೀಯರಾದ ಕೌಶಲ್ಯೆ, ಸುಮಿತ್ರೆ, ಕೈಕಿಲೆ, ಲಕ್ಷ್ಮಣೆ, ಎಂಬ ನಾಲ್ಕು ಮಹಾದೇವಿಯರೊಡನೆಯು ಪರಿಜನ ಪುರಜನರೊಡಗೂಡಿ ಹೊರಟು ಯತಿವರರಲ್ಲಿರುವಿಕೆಯು ಕಣ್ಣಿಗೆ ಕಾಣಿಸುತಲೇ ಭಕ್ತಿಯಿಂದ ಬಗ್ಗಿ ಮುನೀಶ್ವರರ ಪಾದವನ್ನು ಅಷ್ಟವಿಧಾರ್ಚನೆಯಿಂದ ಅರ್ಚಿಸಿ, ನಮಸ್ಕರಿಸಿ ಸ್ತೋತ್ರಿಸಿ ನಿರ್ಮಲಚಿತ್ತದಿಂದ ಕುಳಿತುಕೊಂಡನು. ಪಟ್ಟಸ್ತ್ರೀಯರೇ ಮೊದಲಾದ ಸಕಲರು ಮಹಾಯತಿಗಳನ್ನು ಪುಷ್ಪಾದಿಗಳಿಂದ ಅರ್ಚಿಸಿ ನಮಸ್ಕರಿಸಿ ತಮತಮಗೆ ಯೋಗ್ಯವಾದ ಸ್ಥಳದಲ್ಲಿ ಕೂತುಕೊಂಡರು.

ರಾಜನೇಮೊದಲಾದವರೆಲ್ಲ ಸ್ವಲ್ಪಹೊತ್ತು ಧರ್ಮಶ್ರವಣವನ್ನು ಯತಿಶ್ರೇಷ್ಠರಿಂದಕೇಳಿ ಆನಂದಹೊಂದಿದರು. ಅನಂತರ ಮಹಾರಾಜನೆದ್ದು ಪುನಃ ಯತಿಗಳಿಗೆ ನಮಸ್ಕರಿಸಿ ಸಂತಾನಪ್ರಾಪ್ತಿಗೆ ಯಾವವ್ರತವನ್ನು ಆಚರಿಸಬೇಕೆಂದು ಬೇಡಿಕ್ಕೊಳ್ಳಲಾಗಿ, ಕರುಣಾಳುಗಳಾದ ಯತೀಶ್ವರರು ಅನಂತಮಹಾವ್ರತವನ್ನು ಆಚರಿಸಿದರೆ ಸಂತಾನವುಂಟಾಗುವದೆಂದು ಅಪ್ಪಣೆ ಕೊಡಿಸಿದರು. ರಾಜನು ಆವ್ರತವನ್ನು ವಿಧಿವತ್ ಕೇಳಿ, ಪಟ್ಟಸ್ತ್ರೀಯರೊಡನೆ ಯತಿವರರ ಸಮುಖದಲ್ಲಿ ಕೈಕೊಂಡು ಬಂದು ಮಹಾವಿಜೃಂಭಣೆಯಿಂದ ಸದ್ವ್ರತವನ್ನು ಮಾಡುವದಕ್ಕೆ ಪ್ರಾರಂಭಿಸಿ ಸುಖವಾಗಿರುತ್ತಿರಲು, ಸ್ವಲ್ಪ ಕಾಲದಲ್ಲೇ ಒಂದಾನೊಂದುದಿವಸ ರಾತ್ರಿ ಕೌಸಲ್ಯಾದೇವಿಯು ರಾಜನೊಡನೆ ಶಯನವಿನೋದದಿಂದ ಕಾಲಕಳೆದು, ಆರಾತ್ರಿ ಬೆಳಗಿನಜಾವದಲ್ಲಿ ಶುಭಸ್ವಪ್ನಗಳನ್ನು ಕಂಡು ಸುಪ್ರಭಾತಸ್ತವನಗಳಿಂದ ಎಚ್ಚತ್ತು ಶಯನದಿಂದೆದ್ದು ನಿತ್ಯಾನುಷ್ಠಾನವನ್ನು ಮಾಡಿ ಆಸ್ಥಾನದಲ್ಲಿದ್ದ ರಾಜನ ಅರ್ಧಾಸನದಲ್ಲಿ ಕೂತುಕ್ಕೊಂಡು, ತಾನು ಕಂಡ ಸ್ವಪ್ನಗಳನ್ನು ಹೇಳಲು ರಾಜನು ಸಾವಧಾನದಿಂದ ಕೇಳಿ ಹಸನ್ಮುಖನಾಗಿ, ರಾಣಿಯೇ ನಿನ್ನ ಗರ್ಭದಲ್ಲಿ ಅಸಹಾಯಶೂರನಾದ ಪುತ್ರನುದಯಿಸುವನು. ಆತನು ಪರಮಶಾಂತ ಸ್ವಭಾವವುಳ್ಳವನು ಮತ್ತು ಮುಕ್ತಿಯನ್ನು ಪಡೆಯುವಂಥಾವನಾಗುವನು ಎಂದುಹೇಳಲಾಗಿ ಮಹಾರಾಣಿಯಾದ ಕೌಸಲ್ಯಾದೇವಿಯು ಕೇಳಿ ಸಂತೋಷಭರಿತಳಾಗಿ ಮಹಾರಾಜನನ್ನು ಬೀಳ್ಕೊಂಡು ಉಚಿತಾವಸಕ್ಕೆ ತೆರಳಿದನು.

ರಾಜನು ಆಗಾಗ್ಯೆ ನೋಡುತ್ತಲಿರುವ ಕೌಸಲ್ಯಾದೇವಿಯ ಮುಖದಲ್ಲಿ ಯಾವುದೋ ಚಿಂತೆ ಇರಬಹುದೆಂದು ಊಹಿಸಿ ದೇವಿಯನ್ನು ಪ್ರಶ್ನಿಸಲು ಮಹಾದೇವಿ ನಾಚಿಕೆಯಿಂದವೊಡಗೂಡಿ ಅಂತರೀಕ್ಷದಲ್ಲಾಗುವ ಯುದ್ಧವನ್ನು

ನೋಡಬೇಕೆಂಬ ಬಯಕೆಯು ಉಂಟಾಗಿಧೆ ಎಂದು ಹೇಳಲಾಗಿ ರಾಜನು ಮಂತ್ರಿಗಳಿಗೆ ಈ ವಿಷಯವನ್ನು ತಿಳಿಯಪಡಿಸಿ ಅಂಬರದಲ್ಲಿ ಯುದ್ಧ ವಾಗುವದಕ್ಕೆ ತಕ್ಕಪ್ರಯತ್ನವನ್ನು ಕಲ್ಪಿಸಿ ಆಕಾಶಯುದ್ಧದಲ್ಲಿ ನಡೆಯುವ ವರ್ತನೆಯನ್ನು ಕೌಸಲ್ಯಾದೇವಿಯು ನೋಡುವದಕ್ಕೆ ಅವಕಾಶವನ್ನು ಮಾಡಿ ಕೊಟ್ಟನು. ರಾಣಿಯು ನೋಡಿ ಬಯಕೆಯನ್ನು ತೀರಿಸಿಕ್ಕೊಂಡು ಪ್ರಸವಕಾಲ ಪ್ರಾಪ್ತವಾಗಲು—ಚೈತ್ರ ಶುದ್ಧ ನವಮಿ ಶುಭ ದಿವಸ ಶುಭ ಲಗ್ನ ಶುಭ ಮು ಹೂರ್ತದಲ್ಲಿ ನೀಲವರ್ಣ ಪುತ್ಥಳಿಯಂತೆ ಇರುವ ಮನೋಹರವಾದ ಪುತ್ರ ನನ್ನುಹಡೆದಳು. ರಾಜನೇ ಮೊದಲಾದ ಅಂತಃಪುರ ಪರಿಜನ ಪುರಜನರೆಲ್ಲರು ಅತ್ಯಾನಂದವನ್ನು ಹೊಂದಿದರು. ದೊರೆಯು ಪಂಚ ಮಹಾ ವಾದ್ಯಗಳನ್ನು ಮಾಡಿಸಿ ದೇವಸ್ಥಾನಗಳಲ್ಲಿ ಅಭಿಷೇಕಾಷ್ಟವಿಧಾರ್ಚನೆಗಳನ್ನು ಮಾಡಿಸಿ ದಾನ ದಕ್ಷಿಣೆಗಳನ್ನು ಕೊಟ್ಟು ಜಾತಕರ್ಮವನ್ನು ಶಾಸ್ತ್ರರೀತ್ಯಾ ನಡೆಸಿ ಹನ್ನೆರಡನೆ ದಿವಸ ಮಂಗಳಕರನಾದ ಪುತ್ರನಿಗೆ ರಾಮಚಂದ್ರನೆಂಬ ಹೆಸರನ್ನಿಟ್ಟು ನಾಮ ಕರಣಮಹೋತ್ಸವವನ್ನು ಮಾಡಿದನು. ಈ ಪುತ್ರಾವಲೋಕನದಿಂದ ದೊರೆ ಯುಸಂತುಷ್ಟನಾಗಿ ಜಿನರಾಜಸ್ಮರಣೆಯನ್ನು ಮಾಡುತ್ತಾ ಕಾಲವನ್ನು ಕಳೆ ಯುತ್ತಲ್ಲಿದ್ದನು.

೫. ಲಕ್ಷ್ಮಣ, ಭರತ, ಶತೃಘ್ನರ ಜನನಾ

ಎಲೈ ಶ್ರೇಣಿಕ ಮಹಾರಾಜನೇ ಕೇಳುವಂಥಾವನಾಗು— ದಶರಥ ಮಹಾರಾಜನು ಪುತ್ರನಾದ ರಾಮಚಂದ್ರನಿಗೆ ಬಹಿರ್ಯಾನವೇ ಮೊದಲಾದ ಶುಭಕರ್ಮಗಳನ್ನು ಮಾಡುತ್ತಾ, ಐದನೇ ವರ್ಷದಲ್ಲಿ ಚೌಲಕರ್ಮವನ್ನು ಮಾಡಿ ಅಕ್ಷರಾಭ್ಯಾಸವನ್ನೂ ಉಪನಯನವನ್ನೂ ಸಹ ಮಾಡಿಸಿ ಸದಾಚಾರ ಸಂಪನ್ನರಾದ ವಿದ್ವದ್ವರೇಣ್ಯರಿಂದ ಶಾಸ್ತ್ರವನ್ನು ಸಾಂಗವಾಗಿ ಶಿಕ್ಷಿಸಿ ಅಸ್ತ್ರ ವಿದ್ಯವನ್ನುಕಲಿಸುತ್ತಿರಲು ಸುಮಿತ್ರಾದೇವಿಯು ಗರ್ಭವತಿಯಾಗಿ ನವಮಾಸ ತುಂಬಿದನಂತರ ಶುಭಕಾಲ ಶುಭಲಗ್ನದಲ್ಲಿ ಪುತ್ರರತ್ನವನ್ನು ಪ್ರಸವಿಸಿದಳು- ಆಗ ದಶರಥ ಮಹಾರಾಜನು ಅತ್ಯಂತ ಆನಂದಿತನಾಗಿ ಪುರೋಹಿತರನ್ನು ಪರಿಜನ ಪುರಜನರನ್ನು ಕೂಡಿಕ್ಕೊಂಡು ಜಾತಕರ್ಮ ಮಹೋತ್ಸವವನ್ನು ನೆರ ವೇರಿಸಿ ದೀನಾನಾಥರಿಗೆ ಅಶನವಸ್ತ್ರಾದಿಗಳಿಂದ ಸತ್ಕರಿಸಿ ದೇವಸ್ಥಾನಗಳಲ್ಲಿ

ಪಂಚಪರಮೇಷ್ಠಿಗಳಿಗೆ ಪಂಚಾಮೃತಸ್ನಪನ ಪೂರ್ವಕ ಪಂಚಕಲ್ಯಾಣ ಪೂಜೆಯನ್ನು ಪಂಚಮಹಾವಾದ್ಯಗಳು ಭೋರ್ಗರೆಯುತ್ತಲಿರುವಾಗ ನೆರವೇರಿಸಿ, ಹನ್ನೆರಡನೇ ದಿವಸ ಸಹಸ್ರನಾಮಧರನಾದ ಅರ್ಹತ್ಸ್ವಾಮಿಗೆ ಸಹಸ್ರನಾಮ ಪೂಜಾ ಮಹೋತ್ಸವವನ್ನು ಮಾಡಿಸಿ ಮೊಗುವಿಗೆ ಲಕ್ಷ್ಮಣನೆಂಬ ಶುಭನಾಮವನ್ನಿಟ್ಟು ನಾಮಕರ್ಮ ಮಹೋತ್ಸವವನ್ನು ಮಾಡಿದನು. ಅನಂತರ ಕೈಕಿಲೆ ಮಹಾದೇವಿಯು ಒಂದು ಶುಭರಾತ್ರಿಯಲ್ಲಿ ದೊರೆಯೊಡನೆ ಶಯನ ಮಾಡಿ ಆರಾತ್ರಿ ಬೆಳಗಿನ ಜಾವದಲ್ಲಿ ಶುಭ ಸ್ವಪ್ನಗಳನ್ನು ಕಂಡು ಪ್ರಾತಃಕಾಲದ ಸುಪ್ರಭಾತದಿಂದ ಎಚ್ಚತ್ತು ಶಯನದಿಂದೆದ್ದು, ಮಂಗಳದರ್ಶನವನ್ನು ಮಾಡಿ ನಿತ್ಯಾನುಷ್ಠಾನ ನಿರತಳಾದನಂತರ ಮಹಾರಾಜನ ಸನ್ನಿಧಿಗೆ ಬಂದು, ತಾನು ಕಂಡ ಶುಭ ಸ್ವಪ್ನಗಳನ್ನು ಹೇಳಿ ಅದರ ಫಲವನ್ನು ಕೇಳಲಾಗಿ-ರಾಜನು ಸುಪುತ್ರನು ಜನಿಸುವನೆಂತ ಹೇಳಲಾಗಿ ಕೈಕಿಲೆಯು ಕೇಳುತ್ತಾ, ಆನಂದವನ್ನು ಹೊಂದಿ ದೇವತಾಪೂಜೆಗೆ ಹೊರಟಳು. ದೇವಸ್ಥಾನಕ್ಕೆ ಬಂದು ಅನಂತರ ಅರ್ಹತ್ಪರಮೇಶ್ವರನನ್ನು ಪೂಜಿಸಿ, ಗುರುಗಳಲ್ಲಿ ಧರ್ಮಶ್ರವಣವನ್ನು ಸ್ವಲ್ಪಹೊತ್ತು ಕೇಳಿ ಮನೆಗೆ ಬಂದು ಚತುರ್ವಿಧ ದಾನಗಳನ್ನು ಮಾಡುತ್ತಲಿದ್ದು ಕಾಲವನ್ನು ಸುಖವಾಗಿ ಕಳೆಯುತ್ತಿರಲು, ನವಮಾಸ, ನವ ದಿನಗಳು ಪೂರ್ತಿಯಾಗಲು ಚಂದ್ರನ ಪ್ರಕಾಶದಂತೆ ಹೊಳೆಯುತ್ತಿರುವ ಸುಪುತ್ರನನ್ನು ಶುಭವೇಳೆಯಲ್ಲಿ ಪ್ರಸವಿಸಿದಳು. ಈ ಮಂಗಳ ಸಮಾಚಾರವನ್ನು ದೊರೆಯಾದ ದಶರಥಮಹಾರಾಜನು ಕೇಳಿ ಸಂತೋಷಪೂರಿತನಾಗಿ ಶಾಸ್ತ್ರಾನುಸಾರ ಮಂಗಳವಾದ್ಯದೊಡನೆ ಪುರಜನ ಪರಿಜನ ಅಂತಃಪುರ ಜನದೊಡನೆ ಕಲೆತು ದೇವಸ್ಥಾನಗಳಲ್ಲಿ ಜಪತಪಹೋಮಾದಿಗಳನ್ನು ಮಾಡಿಸಿಪುತ್ರನಿಗೆಜಾತಕರ್ಮವನ್ನು ಸಾಂಗೋಪಾಂಗವಾಗಿಮಾಡಿಸಿ ಸಂತುಷ್ಟನಾದನು. ಅನಂತರ ಜನನಾದಿ ದ್ವಾದಶದಿವಸ ಸಹಸ್ರಕೂಟಾಲಯಸ್ಥಿತ ಸಹಸ್ರನಾಮಧಾರಿಗಳಾದ ಜಿನೇಶ್ವರರಿಗೆ ಸಹಸ್ರಾಕ್ಷನಂತೆ ಸಹಸ್ರ ಶುಭನಾಮಗಳ ಪೂಜೋತ್ಸವವನ್ನು ನೆರವೇರಿಸಿ ಚತುರ್ವಿಧದಾನ ತತ್ಪರನಾಗಿ ಶುಭಲಗ್ನದಲ್ಲಿ ಪುತ್ರನಿಗೆ ಭರತನೆಂಬ ನಾಮವನ್ನು ಅತ್ಯಾದರದಿಂದ ಮಾಡಿ ಸುಖದಿಂದ ಪುತ್ರಮುಖಾವಲೋಕನದ ಸಂತೋಷದಿಂದ ಕಾಲವನ್ನುಕಳೆಯುತ್ತಿರಲು ನಾಲ್ಕನೇ ರಾಣಿಯಾದ ಲಕ್ಷ್ಮಣಾಮಹಾದೇವಿಯು ಒಂದಾನೊಂದು ದಿನದ ರಾತ್ರಿಯಲ್ಲಿ ರಾಜನಾದ ದಶರಥಮಹಾರಾಜನ ಆರಾಧನೆಯಲ್ಲಿ ಅನುರಾಗಹೊಂದಿ ಮಹಾ

ರಾಜನೊಡನೆ ಕೂಡಿ ಅತ್ಯಾನಂದವನ್ನು ಹೊಂದಿ ಆನಂದ ನಿದ್ರಾಭರಳಾಗಿ ಆದಿನದ ನಾಲ್ಕನೇ ಜಾವದಲ್ಲಿ ಶುಭಮಂಗಳ ಸ್ವಪ್ನಗಳನ್ನು ಕಂಡು, ವಂದಿಗಳ ಸುಪ್ರಭಾತಗಾನ ಸುಶ್ರಾವ್ಯಗಳಿಂದಎಚ್ಚೆತ್ತು ಮಂಗಳಕರವಾದದರ್ಪಣ ಕಲಶಾದಿಗಳನ್ನು ದರ್ಶನಮಾಡಿ ಶಯನಾಗಾರದಿಂದಹೊರಟು ಮಜ್ಜನಗೃಹಕ್ಕೆಬಂದು, ಸ್ನಾನಮಾಡಿ ಭೂಷಣಾಗಾರಕ್ಕೆ ಚಿತ್ತೈಸಿ ವಸ್ತ್ರಭೂಷಣಾದ್ಯಲಂಕಾರಗಳಿಂದ ಭರಿತಳಾಗಿ ವೈಶ್ವದೇವತೆಗಳ ಪೂಜಾದಿಗಳಮಾಡಿ ರಾಜನ ಅಂತಿಕಿಗೆ ಬಂದು ರಾಜನ ಅರ್ಧಾಸನದಲ್ಲಿ ಪ್ರತಿಷ್ಠಿತಳಾಗಿ ಮುಗಳನಗೆಯಿಂದ ತಾನು ಕಂಡ ಸ್ವಪ್ನಗಳನ್ನು ಹೇಳಲು, ರಾಜನು ಕೇಳಿ ಸಂತೋಷದಿಂದ ರೋಮಾಂಚಿತನಾಗಿ ದೇವಿಗೆ ನೀನು ಸುಪುತ್ರನನ್ನು ಪಡೆಯುವಿ ಎಂಬುವದೆ ಮೊದಲಾದ ಸ್ವಪ್ನಫಲಗಳನ್ನು ಉಸರಲು ರಾಣಿಯು ಸಂತೋಷದಿಂ ಹಿಗ್ಗಿ ರಾಜನಿಗೆ ನಮಸ್ಕರಿಸಿ ಪದ್ಧತಿಪ್ರಕಾರ ಸಖಿಯರೊಡನೆ ದೇವಾಯತನಕ್ಕೆ ತೆರಳಿ, ಮಹಾದೇವನಿಗೆ ಮಹಾಪೂಜೆಯನ್ನು ಮಾಡಿಸಿ ಗುರುಗಳಿಗೆ ಭಕ್ತಿಯಿಂದ ಎರಗಿ ಸಮೀಪದಲ್ಲಿ ಕೂತು, ಕರಕುಟ್ಮಲದಿಂದ ನಮ್ರೀಭೂತವದನಳಾಗಿ ಕಿರಿದುಹೊತ್ತು ಧರ್ಮಶ್ರವಣವನ್ನುಕೇಳಿ, ಚತುರ್ವಿಧ ದಾನಗಳನ್ನು ಕಾಲೋಚಿತವಾಗಿ ಎಸಗಿ ಅರಮನೆಗೆ ಬಂದು ಸುಖಸಂಕಥಾವಿನೋದದಿಂದ ಕಾಲವನ್ನು ನೂಕುತ್ತಿರಲಾಗಿ ಗರ್ಭವು ದಿನದಿನಕ್ಕೆ ಬೆಳೆದು ನವಮಾಸ ವೊಂಭತ್ತು ದಿವಸಗಳು ತುಂಬಲು, ಶುಭಲಗ್ನದಲ್ಲಿ ಸೂರ್ಯನಂತೆ ಹೊಳೆಯುತ್ತಿರುವ ಪುತ್ರನನ್ನು ಹೆತ್ತಳು. ಈ ಆನಂದ ವಾರ್ತೆಯು ದಶರಥಮಹಾರಾಜನಿಗೆ ಮುಟ್ಟುತ್ತಲೇ ಆದರದಿಂದ ಕೂಡಿ ಚತುರ್ದಿಗ್ಗತ ಚತುಷ್ಟಯಾನಂತ ಪರಿಪೂರ್ಣರಾದ ಅರ್ಹತ್ಪರಮೇಶ್ವರರಿಗೆ ಅತ್ಯಂತ ಭಕ್ತಿಪುರಸ್ಸರವಾದ ಪೂಜಾ ಮಹೋತ್ಸವಗಳನ್ನು ಮಾಡಿಸಿ, ಅನಂತ ಪರಿವಾರದೊಡನೆ ಅಪರಿಮಿತವಾದ ದಕ್ಷಿಣೆ, ದಾನಗಳಿಂದ ದೀನಾನಾಥರನ್ನು ಸಂತೋಷಪಡಿಸಿ, ಮೊಗುವಿಗೆ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜಾತಕರ್ಮ ಮಹೋತ್ಸವವನ್ನು ನೆರವೇರಿಸಿ, ಹನ್ನೆರಡನೇ ದಿವಸ ದೇವಾಲಯಗಳಲ್ಲಿ ಅರ್ಹತ್ಪರಮೇಶ್ವರರಿಗೆ ಸಹಸ್ರನಾಮ ಪೂಜಾ ಮಹೋತ್ಸವವನ್ನು ಸಾಂಗವಾಗಿ ನೆರವೇರಿಸಿ, ತ್ರೇತಾಗ್ನ್ಯಾರಾಧನೆಯಾದ ನಂತರ ತ್ರಿಕರಣ ಶುದ್ಧಿಯಿಂದ ತ್ರಿಜಗತ್ಪರಮೇಶ್ವರ ಧ್ಯಾನವನ್ನು ಮಾಡಿ, ಸುಪುತ್ರನಿಗೆ ಕಾಲಾಶ್ರಯ ಕರ್ಮಾಶ್ರಯಾದಿ ದೋಷದಿಂದ ಬಿಡಲ್ಪಟ್ಟ ಶುಭಲಗ್ನ ಶುಭಷಡ್ವರ್ಗದಲ್ಲಿ ಶತ್ರುಘ್ನನೆಂಬ ಅನೋಘ

ನಾದ ನಾಮವನ್ನಿಟ್ಟು, ಚಾತುರ್ವರ್ಣಕ್ಕೂ ಯಥೋಚಿತವಾಗಿ ಆಹಾರಾದಿ ದಾನಗಳನ್ನು ಮಾಡಿಸಿ ಸುಖವಾಗಿ ಕಾಲವನ್ನು ಕಳೆಯುತ್ತಾ, ಈ ಮಕ್ಕಳಿಗೆ ವಯಾನುಸಾರವಾಗಿ ಬಹಿರ್ಯಾನ, ಅನ್ನಪ್ರಾಶನ, ವರ್ಷವರ್ಧನಾದಿಗಳನ್ನು ನಡೆಸಿ, ಪಂಚಮ ವರ್ಷದಲ್ಲಿ ಚೌಲೋಪನಯನವನ್ನು ಮಾಡಿ ಅಕ್ಷರಾಭ್ಯಾಸಮಾಡಿಸಿ, ಗರ್ಭಾದಿ ದಶಮದಲ್ಲಿ ಉಪನಯನವನ್ನು ಮಾಡಿ, ಶಾಸ್ತ್ರಾಧ್ಯಯನದಿಂದ ಪರಿಪೂರ್ಣರನ್ನಾಗಿ ಮಾಡಿ, ಅನಂತರ ಅಸ್ತ್ರ ಶಸ್ತ್ರವಿದ್ಯಗಳಲ್ಲೂ ಪಾರಂಗತರನ್ನಾಗಿ ಮಾಡಿಸುತ್ತಲಿರಲು, ಇವರು ವಿದ್ಯಾಬುದ್ಧಿ ಐಶ್ವರ್ಯ ರೂಪುಗಳಿಂದ ಬಿದಿಗೆ ಚಂದ್ರನಂತೆ ದಿನದಿನಕ್ಕೂ ಕಲಾಭಿ ವೃದ್ಧಿಗಳಿಂದ ವೃದ್ಧಿಹೊಂದುತ್ತಲಿದ್ದರು. ಈ ಭ್ರಾತೃಗಳು ಪರಸ್ಪರ ಪ್ರೀತಿಯುತರಾಗಿದ್ದರು. ಲಕ್ಷ್ಮಣನು ಶ್ರೀರಾಮನಲ್ಲಿ ಕೇವಲ ಭಕ್ತಿಯಿಂದ ಕೂಡಿ ಹಗಲಿರಳು ಅನುಗತನಾಗಿದ್ದನು. ಈ ರಾಜಸಂತತಿಯು ಅಭಿವೃದ್ಧಿಹೊಂದುತ್ತಾ ಪರಮ ಜಿನೇಶ್ವರನ ಪಾದಮೂಲದಲ್ಲಿ ಅನವರತವೂ ಭಕ್ತಿಭರರಾಗಿ ಕಾಲವನ್ನು ಕಳೆಯುತ್ತಲಿತ್ತು.

೬. ಲಂಕಾ ವರ್ಣನೆ.

ರಾಮಲಕ್ಷ್ಮಣರು ಖಡ್ಗ ಗದಾ ತೋಮರ ಧನುರ್ಬಾಣವೇ ಮೊದಲಾದ ಅಸ್ತ್ರಶಸ್ತ್ರ ವಿದ್ಯೆಗಳಲ್ಲಿ ಸಂಪೂರ್ಣ ಪಾರಂಗತರಾಗಿ ರಾಜತಂತ್ರವೆ ಮೂರ್ತಿಮತ್ತಾಗಿಧೆಯೋ ಎಂಬಂತೆ ತೋರುತ್ತಿದ್ದರು. ಇವರು ವಾಸುದೇವ ಬಲದೇವರಾಗುವವರಾದ್ದರಿಂದ ತಕ್ಕಂತೆ ವಿದ್ಯಾ ಪಾರಂಗತರಾಗಿ ಅನ್ಯೋನ್ಯ ಸ್ನೇಹದಿಂದ ಕೂಡಿ ಸುಖವಾಗಿರುತ್ತಿದ್ದರು-

ಎಲೈ ಶ್ರೋತೃಮುಖ್ಯನಾದ ರಾಜನೇ ಇನ್ನೊಂದು ಕಥಾನಕ ವಿಷಯವನ್ನು ಅವಧರಿಸುವನಾಗು !

ಈ ಲವಣಾಬ್ಧಿಯ ದಕ್ಷಿಣ ಭಾಗದಲ್ಲಿ ಅನೇಕ ದ್ವೀಪಗಳಿರುತ್ತವೆ- ಅದರಲ್ಲಿ ಪ್ರಖ್ಯಾತವಾದ ಭೂಭಾಗಕ್ಕೆ ಅನತಿದೂರವರ್ತಿಯಾದ ಒಂದು ದೊಡ್ಡ ದ್ವೀಪವು ಪ್ರಕೃತಿ ಸೌಂದರ್ಯದಿಂದ ನೇತ್ರಗಳನ್ನು ಸೆಳೆಯುತ್ತಲಿಧೆ. ಆ ದ್ವೀಪದಲ್ಲಿ ನಾನಾ ಲತೆಗಳೂ ನಾನಾ ವೃಕ್ಷಗಳೂ ಅಖಂಡವಾದ ಪುಷ್ಪ ಫಲಗಳಸಂದೋಹದಿಂದಕೂಡಿ ಆನಂದದಾಯಕಗಳಾಗಿವೆ- ಭೂಮಂಡಲದಲ್ಲಿ

ಮೂರ್ತಿಮತ್ತಾದ ಪರ್ವತಸ್ಥಿತ ವಸ್ತುಗಳನ್ನೆಲ್ಲಾ ಸೆಳೆದುಕೊಂಡು ಅಖಂಡೈಕೀಭೂತವಾದ ಪ್ರಕೃತಿ ಸಂಪತ್ತಿನಿಂದ ಕೂಡಿ ವಿಸ್ತಾರವಾದ ಮೇಲು ಭಾಗ ಪ್ರದೇಶವುಳ್ಳ ತ್ರಿಕೂಟಾಚಲವು ಕಣ್ಗೆ ಆನಂದದಾಯಕವಾಗಿ ನಿಂತಿರುತ್ತೆ. ಅಲ್ಲಿ ಸಣ್ಣ ಮತ್ತು ದೊಡ್ಡ ನದಿಗಳು ಹುಟ್ಟಿ ನಿರ್ಮಲವಾದ ಜಲಗಳ ಪ್ರವಾಹದಿಂದ ಕೂಡಿ ಹರಿದು ಭೂಪ್ರದೇಶದಲ್ಲೆಲ್ಲಾ ಕಡೆಯಲ್ಲೂ ಸಕಲ ಋತುಗಳಲ್ಲೂ ನದೀಮಾತೃಕಿ, ದೈವಮಾತೃಕಿಗಳಿಂದ ಪುರೋಭಿವೃದ್ಧಿಯನ್ನು ಹೊಂದಿ ಯಾವಾಗಲೂ ಸರ್ವ ಋತುಗಳ ಫಲವೂ ರಾಜನ ಭಯದಿಂದ ಸೇವೆಯಮಾಡಲು ನಿರತವಾಗಿರುವಂತೆ ಕಣ್ಗೆಕಾಣಲ್ಪಡುತ್ತಿವೆ. ಇಂತಹ ಮನೋಹರವಾದ ಭೂಪ್ರದೇಶದಲ್ಲಿ ಏಳುಸುತ್ತಿನ ಕೋಟೆಯಿಂದ ಅತ್ಯಧಿಕವಾದ ಆಶ್ಚರ್ಯದಿಂದ ಪ್ರಜ್ವಲಿತವಾದ ಪುರಿಯು ದೇದೀಪ್ಯಮಾನವಾಗಿರುತ್ತೆ. ಏಳನೇ ಕೋಟೆಯ ಒಳಭಾಗವು ಅಖಂಡವಾದ ಅತ್ಯುನ್ನತವಾದ ಶಾಖೋಪಶಾಖೆಗಳಿಂದ ಕೂಡಿದ ವೃಕ್ಷಗಳು ನಂದನವನದಲ್ಲಿರುವ ಕಲ್ಪಶಾಖೆಯನ್ನು ಅನುಸರಿಸುತ್ತಿರುವಂತೆ ತೋರುವುದು. ಆರನೇ ಕೋಟೆಯ ಒಳಗಿನ ಪ್ರದೇಶವು ಸಾರಸ, ಚೂತ, ಮಾಕಂದ, ಜಂಬೂ ಫಲವೃಕ್ಷಗಳಿಂದ ಕೂಡಿ ನಿರ್ಮಲವಾದ ಸರೋವರಗಳಿಂದ ಒಪ್ಪುತ್ತಲಿತ್ತು. ಐದನೇ ಕೋಟೆಯ ಒಳಪ್ರದೇಶವು ಜಂಬೀರ ನಾರಂಗ, ದಾಡಿಮಾದಿ ವೃಕ್ಷಗಳಿಂದ ಗಂಭೀರವಾಗಿ ನೆರೆದಿತ್ತು. ನಾಲ್ಕನೇ ಕೋಟೆಯ ಒಳಭಾಗವು ಧಾತ್ರಿ ಪನಸಾದಿ ವೃಕ್ಷಗಳಿಂದ ಕೂಡಿ ಮನೋಹರವಾಗಿದ್ದಿತು. ಮೂರನೇ ಕೋಟೆಯೊಳಗಿನ ಪ್ರದೇಶವು ನಿಬಿಡವಾದ ಕ್ರಮ್ಯುಕಾದಿ ಫಲಭರಿತ ಗುಲ್ಮಗಳಿಂದ ಕೂಡಿ ಮನೋರಂಜನೆಯಾಗಿತ್ತು. ಎರಡನೇ ಸಾಲಿನ ಪ್ರದೇಶದಲ್ಲಿ ಸುರಗಿ, ಚಂಪಕ, ಜಾಜಿ, ಮಲ್ಲಿಗೆ, ಶಿರೀಶ, ಶಾವಂತಿ ಕುಂದ, ಸುರಹೊನ್ನೆ, ಪಾರಿಜಾತ ತರುಲತೆಗಳಿಂದ ತುಂಬಿ ತುಳಕುತ್ತಿದ್ದವು. ಮೊದಲನೇ ಪ್ರಾಕಾರದಲ್ಲಿ ಮನೋಹರವಾದ ಪುಷ್ಪವಾಟಿಗಳು, ಕೃತಕ ಸರೋವರಗಳು ಮೊದಲಾದವುಗಳಿಂದ ಕಣ್ಣಿಗೆ ಶೋಭಾಯಮಾನವಾಗಿದ್ದಿತು. ಈರೀತಿಯಾಗಿ ಏಳು ಸುತ್ತಿನ ಕೋಟೆಯಿಂದ ರಾಜಧಾನಿಯು ಅಲಂಕಾರವಾಗಿತ್ತು. ತ್ರಿಕೋಟಿ, ನವಕೋಟಿ, ಶತಕೋಟಿ, ಸಹಸ್ರಕೋಟಿಗಳಿಂದ ಮೆರೆಯುವ ಚೈತ್ಯಾಲಯಗಳಿದ್ದು ಅವುಗಳ ಬಹುಮಧ್ಯ ಭಾಗದಲ್ಲಿ ಅಷ್ಟೋತ್ತರ ಕಲಶಗಳಿಂದ ದಿವಾರಾತ್ರಿಯಲ್ಲೂ, ದೈದೀಪ್ತವಾದ ಅಷ್ಟಾಪದ ಭಿತ್ತಿಗಳಿಂದ ಕೂಡಿದ ಶಾಂತಿರಸೈಕ ಪ್ರಧಾನಮೂರ್ತಿಯಾದ ಶಾಂತಿ ತೀರ್ಥಂ

ಕರರ ಆಲಯವು ನೆಲೆಗೊಂಡಿತ್ತು. ಆ ದೇವಸ್ಥಾನದ ದಿಶಾಭಿತ್ತಿಗಳಮೇಲೆ ಮತ್ತು ಶಿಖರಗಳ ಮೇಲೆ ಮೂರ್ತಿಮತ್ತಾದ ಧ್ವಜಗಳು ಯಾವಾಗಲೂ ಭವ್ಯ ಪ್ರಾಣಿಗಳನ್ನು ಸ್ವಾಗತಿಸುತ್ತಿರುವಂತೆ ಚಲನೆಗಳಿಂದ ಕಾಣಲ್ಪಡುತ್ತಿದ್ದವು. ದೇವಾಲಯಾಂತರ್ಗತ ಪ್ರದೇಶದ ಪ್ರತಿಭಾಗದಲ್ಲೂ ಮುನಿಗಳ ಧರ್ಮೋಪದೇಶ ಧರ್ಮಾಮೃತ ವಚನಾಶೀರ್ವಾದಘೋಷಣೆಯು ಎತ್ತನೋಡಲು ಶಾಂತಿರಸಪ್ರಧಾನವಾದ ಅರ್ಹತ್ಪರಮೇಶ್ವರನ ಸ್ತೋತ್ರಪಠನವು ಕೇಳಿ ಬರುತ್ತಲಿತ್ತು. ಅಲ್ಲಲ್ಲಿ ಪುರಂಧ್ರಿಯರ ಭಗವದ್ಗುಣಾಲಾಪನೆಯುಸಂಗೀತವುಕೇಳಿ ಬರುವುದು. ದೇವಾಲಯದ ಯಾವ ಭಿತ್ತಿಯಲ್ಲೂ ಪಂಚಕಲ್ಯಾಣದ ಚಿತ್ರಗಳು ಲೇಖಿಸಿದ್ದವು. ದೇವಸ್ಥಾನದ ಸುತ್ತಲೂ ಚೈತ್ಯವೃಕ್ಷಗಳು ಶಾಂತಿರಸವನ್ನು ಧ್ವನಿಕರಿಸುತ್ತಿರುವ ಶುಕಪಿಕಗಳಿಂದ ಕೂಡಿ ಆಹ್ಲಾದಕರವಾಗಿದ್ದವು. ಆ ಪಟ್ಟಣವು ಉನ್ನತವಾದ ಸೌಧಗಳಿಂದಲೂ, ಅಧಿಕ ಸಂಪತ್ತಿನಿಂದಲೂ ಕೂಡಿ ಮೆರೆಯುತ್ತಿತ್ತು. ಈ ಪುರಿಯ ಮುಮ್ಮೊಖಕ್ಕೆ ಸಲ್ಲುವ ಪ್ರದೇಶದಲ್ಲಿ ರಾಜನ ಅರಮನೆಯು ಕಣ್ಗೊಳಿಸುತ್ತಿತ್ತು. ಅರಮನೆಯು ರಜತ ಸುವರ್ಣ ವಜ್ರಾದಿಗಳಿಂದ ಮಾಡಿದ ಗೃಹವಾಗಿತ್ತು. ಅದರಲ್ಲಿ ಅಪ್ರತಿಮ ಶೂರನಾದ ರಾವಣನೆಂಬ ರಾಜನು ನೆಲೆಗೊಂಡಿದ್ದನು- ಈ ರಾವಣನಿಗೆ ಕುಂಭಕರ್ಣ, ವಿಭೀಷಣರೆಂಬ ತಮ್ಮಂದಿರೂ, ಶೂರ್ಪನಖಿಯೆಂಬ ಸಹೋದರಿಯೂ ಸಹ ಇದ್ದರು. ಈ ರಾಜನು ಧನುಜವಿದ್ಯೆಯೊಳಗೊಂಡು ಧನುಜಶಿಖಾಮಣಿ ಎಂಬ ಹೆಸರುಳ್ಳವನಾಗಿದ್ದನು. ಈತನು ವಿದ್ಯಾಸಮರ್ಥತೆಯಿಂದ ಹತ್ತು ಮುಖವುಳ್ಳವನಂತೆ ತೋರ್ಪಡಿಸಿಕೊಳ್ಳುತ್ತಿದ್ದನು. ಈತನಿಗೆ ಮಂಡೋದರಿ ಎಂಬ ಸುಂದರಿಯು ಪಟ್ಟಸ್ತ್ರೀಯಾಗಿದ್ದಳು- ಕುಂಭಕರ್ಣನಿಗೆ ವಿದ್ಯುದ್ವೇಗೆ ಎಂಬ ರಾಜಪುತ್ರಿಯು ಮನೋವಲ್ಲಭೆಯಾಗಿದ್ದಳು. ಕಿರಿಯವನಾದ ವಿಭೀಷಣನಿಗೆ ರಾಜೀವಸರಸೆ ಎಂಬವಳು ಪ್ರಾಣವಲ್ಲಭೆಯಾಗಿದ್ದಳು.

ಪಾತಾಳಲಂಕೆಯೆಂಬ ಮತ್ತೊಂದುಪಟ್ಟಣವು ನೆಲಗೊಂಡಿತ್ತು. ಅಲ್ಲಿಗೆ ಈ ದಶಕಂದರನ ಸೋದರತ್ತೆ ಮಕ್ಕಳಾದ ಖರ ದೂಷಣರೆಂಬ ಸಹೋದರರು ರಾಜರಾಗಿದ್ದರು. ದಶಕಂಠನು ತನ್ನ ಸೋದರಿಯಾದ ಶೂರ್ಪನಖಿಯನ್ನು ಖರನಿಗೂ, ತಾಟಕಿಯನ್ನು ದೂಷಣನಿಗೂ ವಿವಾಹಮಾಡಿಕೊಟ್ಟಿದ್ದನು. ಆ ಸ್ತ್ರೀಯರು ತಮ್ಮ ನಾಯಕರಿಗೆ ಮನೋವಲ್ಲಭೆಯರಾಗಿ ಸುಖದಿಂದಿರುತ್ತಿದ್ದರು. ಈ ರಾವಣನಿಗೆ ಮಾರೀಚನೆಂಬವನು ಸೇನಾನಾಯಕನಾಗಿದ್ದನು-

ಈತನಿಗೆ ಚಿತ್ರಾಂಗಿಎಂಬುವಳು ಸತಿಯಾಗಿದ್ದಳು. ಹಸ್ತ ಮತ್ತು ಪ್ರಹಸ್ತರೇ ಮೊದಲಾದ ಹದಿನಾರು ಜನರು ಬಲನಾಯಕರಾಗಿದ್ದರು. ಹಸ್ತನೆಂಬವನಿಗೆ ರತ್ನಾಜಿಎಂಬುವಳು ನಾಯಕಿಯಾಗಿದ್ದಳು. ಪ್ರಹಸ್ತನಿಗೆ ರತ್ನಿ ಎಂಬುವಳು ಸತಿಯಾಗಿದ್ದಳು. ರಾಜನಾದರಾವಣನು ಬಹಳವೈಭವದಿಂದ ಸುಖವಾಗಿರುತ್ತಾ ಜಿನೇಶ್ವರರಪಾದಕಮಲ ಸ್ಮರಣೆಯನ್ನು ಮನದಲ್ಲಿ ಮಾಡುತ್ತಲಿದ್ದನು.

೭. ತೋಯಜನನ್ವಯ

ಎಲೈ ಶ್ರೇಣಿಕಮಹಾರಾಜನೇ ದಶಾನನವಂಶಕ್ಕೆ ಮೂಲಪುರುಷನಾದ ತೋಯಜನಕಥೆಯುವನ್ನು ಕೇಳುವನಾಗು— ಈ ಭರತಕ್ಷೇತ್ರದ ಆರ್ಯಾಖಂಡದಲ್ಲಿ ಕಣ್ಗೊಳಿಸುತ್ತಿರುವ ಸಾಕೇತನಗರಕ್ಕೆ ಶೌರ್ಯೋದಾರ್ಯದಿಂದ ಕೂಡಿದ ತ್ರಿದಶೇಂದ್ರನೆಂಬರಾಜನು ಅಧಿಪತಿಯಾಗಿದ್ದನು. ಆತನಿಗೆ ಚಂದ್ರಲೇಖೆ ಎಂಬ ಕಾಂತಾಮಣಿಯು ಧರ್ಮಪತ್ನಿಯಾಗಿದ್ದಳು. ಅವರೀರ್ವರಿಗೆ ಸೂರ್ಯಚಂದ್ರರೋಪಾದಿಯಲ್ಲಿ ಜಿತಶತ್ರು ಮತ್ತು ಸಾಗರೆಂಬವರು ಪುತ್ರರಾದರು. ತ್ರಿದಶೇಂದ್ರನು ಆ ಇಬ್ಬರು ಮಕ್ಕಳಿಗೂ ವಿವಾಹಮಾಡಲೆನಿಸಿ, ಜಿತಶತ್ರುವಿಗೆ ಜಯೆ ಎಂಬ ನಾರೀಮಣಿಯನ್ನೂ, ಸಾಗರನಿಗೆ ಸುಮಂಗಲೆ ಎಂಬುವಳನ್ನು ಮನೋರಮೆಗಳನ್ನಾಗಿ ಮಾಡಿದನು. ಜಿತಶತ್ರು ಮತ್ತು ಜಯಾದೇವಿಯರಿಗೆ ಅಜಿತತೀರ್ಥಂಕರರು ಉದಯಿಸಿದರು. ಸಾಗರ ಮತ್ತು ಸುಮಂಗಲಾದೇವಿಯರಿಗೆ ಸಗರನೆಂಬ ಪುತ್ರನು ಉದ್ಭವಿಸಿದನು.

ಇತ್ತಲಾಗಿ ವಿಜಯಾರ್ಧಪರ್ವತದಲ್ಲಿ ಪ್ರಸಿದ್ಧಿಹೊಂದಿದ ರಥನೂಪುರಚಕ್ರವಾಳವೆಂಬಪುರವು ಪ್ರಸಿದ್ಧಿಯಾಗಿತ್ತು. ಇದಕ್ಕೆ ಪೂರ್ಣಘನನೆಂಬ ಖಗಪತಿಯು ದೊರೆಯಾಗಿದ್ದನು. ಈರಾಜನಿಗೆ ಪೂರ್ಣೇಂದು ಎಂಬುವಳು ಪಟ್ಟಸ್ತ್ರೀಯಾಗಿ ಮನೋವಲ್ಲಭೆಯಾಗಿದ್ದಳು. ಈ ಈರ್ವರಿಗೂ ತೋಯಜನೆಂಬ ಪುತ್ರನು ಆವಿರ್ಭವಿಸಿದನು. ಇವನು ಸಕಲಕಲಾಪರಿಪೂರ್ಣನಾಗಿ ರಾಕಾಶಶಿಯಂತೆ ಪ್ರಕಾಶಮಾನನಾಗಿದ್ದನು. ಪೂರ್ಣಘನನು ಈತನಿಗೆ ಅಂಬರಪುರದ ಅರಸನಾದ ಸುಲೋಚನನಿಗೂ ಆತನ ಸತಿ ಚಿತ್ರಪ್ರಿಯೆ ಎಂಬ ಇಬ್ಬರಿಗೂ ಹುಟ್ಟಿದ ಸಹಸ್ರಲೋಚನನ ತಂಗಿಯಾದ ಸೌಂದರ್ಯದಿಂದಕೂಡಿದ ಉತ್ಪಲಮಾಲೆಯನ್ನು ವಿವಾಹಮಾಡಬೇಕೆಂದು ಯೋಚಿಸಿ ಉತ್ಪಲಮಾಲೆಯನ್ನು

ತೋಯಜನಿಗೆ ಕೊಡಬೇಕೆಂದು ಉತ್ಪಲಮಾಲೆಯ ತಂದೆಯನ್ನು ಬೇಡಿಕೊಂಡನು. ಈಕೆಯ ತಂದೆಯಾದ ಸುಲೋಚನನು ಈಕೆಯು ಯಾರಿಗೆ ವಿವಾಹವಾಗುವಳೆಂದು ಒಬ್ಬ ಜ್ಯೋತಿಷ್ಕನನ್ನು ಕೇಳಿ, ಆತನು ಇವಳು ಚಕ್ರವರ್ತಿಗೆ ಪತ್ನಿಯಾಗುವಳೆಂದು ಹೇಳಿದ್ದದ್ದರಿಂದ ತೋಯಜನಿಗೆ ಕೊಡಲು ಒಡಂಬಡಲಿಲ್ಲ. ಆದುದರಿಂದ ಪೂರ್ಣಘನನು ಅಂಬರಪುರವನ್ನು ಮುತ್ತಿಗೆ ಹಾಕಿ, ಸುಲೋಚನನನ್ನು ಕೊಂದು, ಅರಮನೆಯಲ್ಲಿ ರಾಜಪುತ್ರಿಯನ್ನು ಹುಡಕಲು ಸಿಕ್ಕಲಿಲ್ಲ. ಅನಂತರ ತನ್ನ ಪಟ್ಟಣಕ್ಕೆ ಹಿಂತಿರುಗಿದನು. ಯುದ್ಧಪ್ರಾರಂಭದಲ್ಲೇ ಉತ್ಪಲಮಾಲೆಯ ಅಂಣನಾದ ಸಹಸ್ರಾಕ್ಷನು ತಂಗಿಯನ್ನು ಕರದುಕೊಂಡು ಶರಬಾ ಎಂಬ ಅಡವಿಗೆ ತಪ್ಪಿಸಿಕ್ಕೊಂಡು ಹೊರಟುಹೋಗಿ ಅಲ್ಲೊಂದು ಚಿಕ್ಕಬೆಟ್ಟದ ಗುಹೆಯಲ್ಲಿ ತಂಗಿಯಾದ ಉತ್ಪಲಮಾಲೆಯೊಡನೆ ಕಂದಮೂಲಗಳನ್ನು ತಿಂದುಕ್ಕೊಂಡು ಕಾಲವನ್ನು ನೂಕುತ್ತಿದ್ದನು.

ಇತ್ತಲಾಗಿ ಸಗರನು ತನ್ನ ಅಡಿಗೆಯವನು ಸಕಾಲದಲ್ಲಿ ಭೋಜನ ಪದಾರ್ಥಗಳನ್ನು ರಸವತ್ತಾಗಿ ಪಕ್ವಮಾಡಲಿಲ್ಲವೆಂದು ಕೋಪಿಸಿ ಆತನನ್ನು ಅಡಿಗೆಮನೆಯಿಂದ ಹೊರಡಿಸಲು ಅಡಿಗೆಯವನು ದೊರೆಯ ಮೇಲೆ ಆಗ್ರಹವನ್ನು ಮಾಡಿಕ್ಕೊಂಡು ನಿರಶನದಿಂದ ದೇಹಭಾರವನ್ನು ತ್ಯಜಿಸಿ ಆರ್ತಧ್ಯಾನದಿಂದ ಚಂದ್ರಗಿರಿಯಲ್ಲಿ ಚಂಚಲನೆಂಬ ವ್ಯಂತರನಾಗಿ ಹುಟ್ಟಿ ಕುವಧಿಯಿಂದ ಹಿಂದಣಜನ್ಮವನ್ನು ನೆನಿಪಿಗೆ ತೆಗೆದುಕ್ಕೊಂಡು ಸಗರನ ಮೇಲೆ ಹಗೆತೀರಿಸಿಕೊಳ್ಳಬೇಕೆಂಬ ಬಯಕೆಯಿಂದ ಅಷ್ಟವರ್ಣದಿಂದಲೂ ರೂಪಿನಿಂದಲೂ ಅಸದೃಶವಾದ ಅಶ್ವರೂಪನ್ನು ವೈಕುರ್ವಣ ವಿದ್ಯದಿಂದ ಹೊಂದಿ ಸಗರ ಮಹಾರಾಜನ ಅರಮನೆ ಮುಂದೆ ನೆಗೆದಾಡುತ್ತಾ ಚಲಿಸುತ್ತಿದ್ದನು. ಈ ಸಮಾಚಾರವು ರಾಜನ ಕಿವಿಗೆ ಮುಟ್ಟಲು ರಾಜನು ಅರಮನೆ ಮುಂದೆ ಬಂದು ಕುಣಿದಾಡುತ್ತಲಿರುವ ಅತಿಚಲ್ವಾದ ಕುದುರೆಯನ್ನು ನೋಡಿ ಅದನ್ನು ಹಿಡಿಯಲು ಪ್ರಯತ್ನಿಸಿದ ಆಕ್ಷಣವೆ ನೆಗೆದಾಡುತ್ತಲಿದ್ದ ಕುದುರೆಯು ಭಯಪಟ್ಟಂತೆ ಸುಮ್ಮನೆನಿಂತಿತು. ದೊರೆಯು ಹಸ್ತಗತವಾಗುತ್ತಲೆ ಇದರ ಮೇಲೆ ಹತ್ತಬೇಕೆಂಬ ಬಯಕೆಯನ್ನು ಮಾಡಿ ಹತ್ತಿ ಕೂಡುತ್ತಲೆ ವಾಯುವೇಗದಿಂದ ಕುದುರೆಯು ಹೊರಟುಹೋಯ್ತು. ಇದನ್ನು ನೋಡಿ ರಾಜಸೇವಾದಳವು ಹಿಂಬಾಲಿಸಿ ಅಲೆದುಅಲೆದು ಬೇಜಾರು ಹೊಂದಿ ಹಾಗೂ ಬಿಡದೆ ಅರಣ್ಯದಲ್ಲಿ ಹುಡುಕುವುದಕ್ಕೆ ಪ್ರಾರಂಭಿಸಿತು.

ಈ ಅಶ್ವವು ಕೊಲ್ಲಲು ಸಾಮರ್ಥ್ಯವಿಲ್ಲದ್ದರಿಂದ ವೃಕ್ಷಗಳಿಂದ ನಿಬಿಡವಾದ ಸಿಂಹ, ಶರಬಾದಿಗಳಿಂದ ಕೂಡಿ ಭಯಂಕರವಾದ ಶರಬಾಟವಿಗೆ ಸಗರನನ್ನು ಬೀಳಿಸಿ ಮಾಯವಾಗಿ ಹೊರಬಿದ್ದಿತು. ರಾಜನಾದ ಸಗರನು ಹೊರಬಿದ್ದು "ಬುದ್ಧಿಃ ಕರ್ಮಾನುಸಾರಿಣಿ" ಎಂಬ ವಚನಕ್ಕೆ ಸರಿಯಾಗಿಧೆಯೆಂದು ಕಂಡಕೇಳದ ವಸ್ತುವಿಗೆ ಬಯಸಿದ್ದಕ್ಕೆ ಇದೇ ಫಲವೆಂದು ಯೋಚಿಸುತ್ತಾ, ಈಆಪತ್ತು ಹ್ಯಾಗೆ ಬಿಡುಗಡೆ ಹೊಂದುತ್ತೋ ಎಂಬ ಚಿಂತೆಯಿಂದ ಎತ್ತಹೋಗಲು ಮಾರ್ಗ ತಿಳಿಯದೇ ನಿಂತು ಜಿನರಾಜಸ್ಮರಣೆಯನ್ನು ಮಾಡತೊಡಗಿದನು. ಅಷ್ಟರಲ್ಲೆ ಸೂರ್ಯನು ಅಸ್ತಮಿಸಿದನು. ವೇತ್ರಾವತಿ ನದಿಯು ಸ್ವಲ್ಪ ದೂರದಲ್ಲಿ ಪ್ರವಹಿಸುವ ಸದ್ದನ್ನು ಕೇಳುತ್ತಾ, ಅದನ್ನೇ ಅನುಸಂಧಾನಮಾಡುತ್ತಾ, ನದಿಯ ಹತ್ತಿರ ಬಂದು ಶುಚಿರ್ಭೂತನಾಗಿ ಅನುಷ್ಠಾನವನ್ನು ಪೂರೈಸಿ ನದಿಯ ದಡದಲ್ಲಿದ್ದ ಗುಡ್ಡದ ಕೊನೆಯಲ್ಲಿ ಸ್ವಲ್ಪ ಬೆಳಕನ್ನು ಕಂಡು, ಆಸ್ಥಳವನ್ನು ಪ್ರವೇಶಿಸಿದ ಕೂಡ್ಲೆ ಮನೋಹರ ರೂಪಸಿಂದ ಕಣ್ಣೆಸೆದ ಉತ್ಪಲ ಮಾಲೆಯನ್ನು ನೋಡಿ ಯಕ್ಷಿದೇವತೆಯೆಂದು ಭಯಭಕ್ತಿಯಿಂದ ಕೂಡಿ ನಿಲ್ಲಲು ಉತ್ಪಲ ಮಾಲೆಯು ಸಗರ ಚಕ್ರಿಯನ್ನು ನೋಡುತ್ತಲೇ ಸಾಕ್ಷಾನ್ಮನ್ಮಥನೇ ಎದುರಿಗೆ ಬಂದನೆಂದು ನೆನೆಸಿ ಚಕ್ಷುಃಪ್ರೀತಿಯೇ ಮೊದಲಾದ ದ್ವಾದಶಾವಸ್ಥೆಯಿಂದ ಪರಿಪೂರ್ಣಳಾದಂತೆ ತೋರಿದಳು. ಅಷ್ಟರಲ್ಲೇ ರಾಜಸೇನಾದಳವು ಅಲೆದು ರಾಜನ ಸಮೀಪವರ್ತಿಯಾಯಿತು. ಅನ್ಯೋನ್ಯವಾಗಿ ಸಂಭವಿಸಿದ ಪೇಚಾಟಗಳನ್ನು ಪರಸ್ಪರವಾಗಿ ಆಡಿ ಮುಗಿಸಿ, ಉತ್ಪಲಮಾಲೆ ಮತ್ತು ಆಕೆಯ ಅಣ್ಣ ಸಹಸ್ರಲೋಚನನ ಸಮಾಚಾರಗಳನ್ನು ಕೇಳಿ ರಾಜನು ಆತನನ್ನು ತಕ್ಕೈಸಿ, ಆ ಇಬ್ಬರನ್ನೂ ಮತ್ತು ಸೇನಾದಳವನ್ನೂ ಕೂಡಿಕೊಂಡು ಸ್ವಂತ ರಾಜಧಾನಿಗೆ ಬಂದು ಅರಮನೆಯನ್ನು ಪ್ರವೇಶಮಾಡಿ, ಅನುಷ್ಠಾನಪರಾಯಣನಾಗಿ, ಚಕ್ರಾದಿ ರತ್ನಗಳು ಆಯುಧಗಾರವೇ ಮೊದಲಾದ ಸ್ಥಳದಲ್ಲಿ ಹುಟ್ಟಿತೆಂಬುವದನ್ನ ತಿಳಿದು ಚಕ್ರರತ್ನಕ್ಕೆ ಪೂಜಾಪುರಸ್ಸರದಿಗಳನ್ನು ಮಾಡಿ ಉತ್ಪಲಮಾಲೆಯನ್ನು ತಾನು ವಿವಾಹಮಾಡಿಕೊಂಡು ರಾಜಕಾರ್ಯದಲ್ಲಿ ನಿರತನಾದನು.

ಸಹಸ್ರಲೋಚನನಿಗೆ ವಿಜಯಾರ್ಧಪರ್ವತದ ನೂರನಲ್ವತ್ತು ಪಟ್ಟಣಗಳ ಅಧಿಪತ್ಯವನ್ನು ಸಗರಚಕ್ರವರ್ತಿಯು ಕೊಡಲು ಸಹಸ್ರಲೋಚನನು ತಮ್ಮ ತಂದೆಯಾದ ಸುಲೋಚನನನ್ನು ಕನ್ಯಾನಿಮಿತ್ತಕ್ಕಾಗಿ ಕೊಂದ ಹಗೆ

ತನವನ್ನು ತೀರಿಸಿಕ್ಕೊಳ್ಳುವುದಕ್ಕಾಗಿ ಪೂರ್ಣಘನನ ಮೇಲೆ ದಂಡೆತ್ತಿಕೊಂಡು ಹೋಗಿ ಆತನ ಪಟ್ಟಣವನ್ನು ಮುತ್ತಿ ಪೂರ್ಣಘನನನ್ನು ಬಂಧಿಸಿ, ಆತನ ಮಗನನ್ನು ಕಾಣದೆ ವಿದ್ಯೆಯಿಂದ ಸರ್ಪಾಕಾರದಲ್ಲಿರುವನೆಂದು ತಿಳಿದು ಅಟ್ಟಿಕ್ಕೊಂಡುಬರಲು, ತೋಯಜನು ಅಜಿತತೀರ್ಥಂಕರರ ಸಮವಸರಣಕ್ಕೆ ನುಗ್ಗಿ ಸ್ವಾಮಿಯನ್ನು ಶರಣುಪಡೆದು, ಮನಃಕಷಾಯವನ್ನು ಕಳೆದು ಧರ್ಮ ಶ್ರವಣದಲ್ಲಿ ನಿರತನಾಗಿದ್ದನು, ಹಿಂಬಾಲಿಸಿಬಂದ ಸಹಸ್ರಲೋಚನನೂಸಹ ಮಾನಸ್ತಂಭದರ್ಶನದಿಂದ ಕಷಾಯರಹಿತನಾಗಿ ಸಮವಸರಣವನ್ನು ಹೊಕ್ಕು, ತ್ರಿಲೋಕಸ್ವಾಮಿಗೆ ತ್ರಿಕರಣ ಶುದ್ಧಿಯಿಂದ ವಂದಿಸಿ, ಸಾವಧಾನ ಚಿತ್ತದಿಂದ ಧರ್ಮಶ್ರವಣವನ್ನು ಕೇಳಿ ಹರ್ಷಚಿತ್ತನಾದನು. ಈ ಇಬ್ಬರೂ ಶತ್ರುಭಾವ ವನ್ನು ತೊರೆದು ಸನ್ಮಿತ್ರ ಭಾವದಲ್ಲಿದ್ದರು. ಆಗ ಸಹಸ್ರಾಕ್ಷನು ಗಣಧರಸ್ವಾ ಮಿಗಳನ್ನು ನಮಸ್ಕರಿಸಿ ಕರಕುಟ್ಮಲಯುತನಾಗಿ ಪೂರ್ಣಘನ ಮತ್ತು ತನ್ನ ತಂದೆಗೂ ವೈರವುಂಟಾಗುವುದಕ್ಕೆ ಕಾರಣವನ್ನು ಅಪ್ಪಣೆಕೊಡಿಸಬೇಕೆಂ ಬುದಾಗಿ ಬೇಡಿಕ್ಕೊಳ್ಳಲು ದಯಾಳುಗಳಾದ ಗಣಧರಪರಮೇಷ್ಠಿಗಳು ಅವಧಿ ಜ್ಞಾನದಿಂದ ತಿಳಿದು ಅಪ್ಪಣೆಕೊಡಿಸಲುದ್ಯುಕ್ತರಾದರು.

ಎಲೈ ಸಹಸ್ರಲೋಚನನೆ ಕೇಳು—ಜಂಬೂದ್ವೀಪದ ಭರತಕ್ಷೇತ್ರದಾ ರ್ಯಾಖಂಡದಲ್ಲಿ ಚಲುವಾಗಿರುವ ಸುರಕರ್ತೃವೆಂಬ ಪುರದೊಳಗೆ ಪ್ರಸಿದ್ಧ ನಾದ ಭಾವನನೆಂಬ ಹರದನಿದ್ದನು. ಆತನು ನಾಲ್ಕು ಕೋಟಿ ಹೊನ್ನಿಗೆ ವಡೆ ಯನಾಗಿ ಆಪಟ್ಟಣದ ವ್ಯಾಪಾರವೆಲ್ಲ ಅವನ ಆಡಳಿತಕ್ಕೆ ಒಳಪಟ್ಟಿತ್ತು. ಈತನಿಗೆ ಹರಿದಾಸನೆಂಬ ಮಗನಿದ್ದನು. ಈತನು ಸಂಪಾದನೆಯಲ್ಲಿ ಆಸಕ್ತ ನಾಗದೆ ಸಪ್ತವ್ಯಸನದಲ್ಲಿ ಪಾರಂಗತನಾಗಿ ತಂದೆಯ ಆಸ್ತಿಗಳನ್ನೆಲ್ಲ ನಟವಿಟ ಗಾಯಕರಿಗೆಕೊಟ್ಟು ನಿರ್ಗತಿಕನಾಗಿ, ತನ್ನ ಮನೆಗೂ ಅರಮನೆ ಭಂಡಾರಕ್ಕೂ ನೆಲದೊಳಗೆ ಗುಪ್ತದ್ವಾರವನ್ನು ಮಾಡಿಸಿ, ಅದರಿಂದ ರಾಜ ಭಂಡಾರವನ್ನು ತಂದು ಕಾಲಕಳೆಯುತ್ತಿದ್ದನು. ಹೀಗಿರಲು ಆತನ ತಂದೆಯು ಮಗನೆಂದು ತಿಳಿಯದೆ ಆಪ್ರಚ್ಛನ್ನ ದ್ವಾರದಿಂದ ಬರುತ್ತಲಿದ್ದ ಮಗನೊಡನೆ ಕಾದಾಡಿ ಉಭಯರೂ ಮರಣವನ್ನೈದಿದರು. ಈ ದುರ್ಮರಣದಿಂದ ತಿರ್ಯಗ್ಗತಿ ಯನ್ನು ಹೊಂದಿ, ಅದರಲ್ಲೂ ಪರಸ್ಪರ ತಿಕ್ಕಾಡಿ ಮೃತಪಟ್ಟು ಸಲ್ಪವಾದ ಪಾಪದಿಂದ ಮನುಷ್ಯ ಜನ್ಮವನ್ನು ಪಡೆದು, ಕಾಲವಶದಿಂದ ತಪಗೈದು ಸಹ ಸ್ರಾರಕಲ್ಪವನ್ನು ಹೊಂದಿ ಆಯುಷ್ಯಾವಸಾನದಲ್ಲಿ ಸ್ವರ್ಗವನ್ನು ಬಿಟ್ಟು

ಭಾವನೆಂಬ ಪರದನೇ ಪೂರ್ಣಘನನಾಗಿ ಹುಟ್ಟಿದನು. ಹರಿದೇವನೆನಿಸಿಕೊಂಡಿದ್ದವನೇ ನಿಮ್ಮ ತಂದೆಯಾದ ಸುಲೋಚನನಾದನು: ಈ ಇಬ್ಬರಿಗೂ ಭವಾಂತರದ ವೈರಸಂಬಂಧದಿಂದ ಈ ಜನ್ಮದಲ್ಲೂ ವೈರವನ್ನು ಮಾಡ ತೊಡಗಿದರು ಎಂದು ಅಪ್ಪಣೆಕೊಡಿಸಲು ಶಾಂತಚಿತ್ತರಾದರು-

ಆ ಸಮವಸರಣ ಸಭೆಯಲ್ಲಿ ಕೂತಿದ್ದ ಸಗರಚಕ್ರವರ್ತಿಯು ಮಹರ್ಷಿಗಳಿಗೆ ಕೈಮುಗಿದು, ಸ್ವಾಮಿ ಸಹಸ್ರಲೋಚನನಿಗೂ ನನಗೂ ಪ್ರೀತಿಯುಂಟಾಗುವುದಕ್ಕೆ ಕಾರಣವೇನೆಂದು ಬೆಸಗೊಳಲು, ಅವರು ಅವಧಿಜ್ಞಾನದಿಂದ ತಿಳಿದು ಅಪ್ಪಣೆಕೊಡಿಸಿದ್ದೇನೆಂದರೆ— ಈ ಭರತಕ್ಷೇತ್ರದ ಆರ್ಯಾಖಂಡದಲ್ಲಿ ಪದ್ಮಪುರವೆಂಬ ಒಂದು ಪಟ್ಟಣವಿತ್ತು. ಅಲ್ಲಿ ಬಾಲಿ ಮತ್ತು ಸೀಬ ಎಂಬಿಬ್ಬರು ಅರ್ಹಂಬಿಕನೆಂಬ ಬ್ರಾಹ್ಮಣನಲ್ಲಿ ವಿದ್ಯಾಭ್ಯಾಸಮಾಡಿ ಅವರಿಬ್ಬರೂ ಪರಸ್ಪರವಾಗಿ ತಾವು ತಾವು ಹೆಚ್ಚು ತಿಳುವಳಿಕೆ ಉಳ್ಳವರೆಂಬುವದಾಗಿ ಜಗಳವಾಡಿ ಸತ್ತರು. ಬಾಲಿಯು ಒಬ್ಬ ಶಬರನಾಗಿ ಹುಟ್ಟಿದನು ಸೀಬನು ಒಂದು ಎತ್ತಾಗಿಹುಟ್ಟಿದನು. ಶಬರನು ಆ ಎತ್ತನ್ನು ಕೊಂದನು. ಸೀಬಿಯು ಒಂದು ಇಲಿಯಾಗಿಹುಟ್ಟಿದನು. ಬಾಲಿಯಾಗಿದ್ದ ಶಬರನು ಸತ್ತು ಬೆಕ್ಕಾಗಿಹುಟ್ಟಿದನು ಈ ಎರಡು ಒಂದಕ್ಕೊಂದು ಜಗಳವಾಡಿ ಸತ್ತು, ವಾರಣಾಸಿಪುರದಲ್ಲಿದ್ದ ಜಿನದೇವದತ್ತನೆಂಬವನಿಗೆ ಎರಡೂ ಮಕ್ಕಳಾಗಿಹುಟ್ಟಿದವು. ಒಬ್ಬನಿಗೆ ಸೂರ್ಪನೆಂತಲೂ ಇನ್ನೊಬ್ಬನಿಗೆ ಸುಂದರನೆಂಬ ಹೆಸರು ಸಹ ಇತ್ತು. ಇವರಿಬ್ಬರೂ ಅಲ್ಲಿ ವಿರೋಧದಿಂದ ಒಬ್ಬಳನ್ನೇ ಇಬ್ಬರೂ ಅಪೇಕ್ಷಿಸಿದರು. ಆ ಸ್ತ್ರೀಯು ಇವರ ನಡತೆಯನ್ನು ನೋಡಿ ಇಬ್ಬರನ್ನೂ ತಿರಸ್ಕರಿಸಿದಳು. ಈ ಇಬ್ಬರೂ ಸ್ವಲ್ಪಪುಣ್ಯದಿಂದ ಪರಿಶುದ್ಧವಾದತಪಸ್ಸನ್ನು ಮಾಡಿದರು. ಅಲ್ಲಿಂದ ನಿರ್ಯಾಣ ಹೊಂದಿ ಸ್ವರ್ಗದಲ್ಲಿ ಇಬ್ಬರೂ ಹುಟ್ಟಿ ಅಲ್ಲಿ ಸುಖವಾಗಿದ್ದು, ಆಯುಷ್ಯಾವಸಾನದಲ್ಲಿ ಧಾತಕೀಷಂಡ ದ್ವೀಪದ ಅಪರವಿದೇಹ ಕ್ಷೇತ್ರದಲ್ಲಿರುವ ವಿಜಯಾವತಿಪಟ್ಟಣದಲ್ಲಿ ಕ್ಯಾರದರ ಮತ್ತು ಅಂಬರದರರೆಂಬ ಇಬ್ಬರು ಸಹೋದರರಾಗಿ ಹುಟ್ಟಿದರು. ಆ ಪಟ್ಟಣದ ದೊರೆಯಾದ ಸಹಸ್ರಶೀರ್ಷನು ಮೃಗಯಾವಿನೋದಾರ್ಥವಾಗಿ ಕಾಡಿಗೆ ಹೋದನು. ಅಲ್ಲಿ ಒಂದೇತರದ ಎರಡು ಆನೆಗಳನ್ನು ನೋಡಿದನು. ಅದನ್ನು ನೋಡಿ ವೈರಾಗ್ಯ ಹುಟ್ಟಿ ವಿಜಯಂಧರ ಕೇವಲಿಗಳಲ್ಲಿ ದೀಕ್ಷಾಬದ್ಧನಾದನು. ಇದನ್ನೆಲ್ಲಾ ಈಕ್ಷಿಸುತ್ತಿದ್ದ ಕ್ಯಾಂಥರ ಅಂಬರಧರರು ವೈರಾಗ್ಯ ಹೊಂದಿ ಇಬ್ಬರೂ ದೀಕ್ಷಾಬದ್ಧರಾದರು- ಅಲ್ಲಿ

ಸಮಾಧಿಮರಣವನ್ನು ಹೊಂದಿ ಸಹಸ್ರಾರಕಲ್ಪದಲ್ಲಿ ಹುಟ್ಟಿ, ಅಲ್ಲಿಂದಚ್ಯುತರಾಗಿ ಬಾಲಿ ಎಂಬುವನೇ ಸಹಸ್ರಲೋಚನನಾದನು. ಆ ವಿದ್ಯಾಗುರುವಾದ ಅರ್ಹಂಬಿಕನೆಂಬುವನು ಕಾಲಾನುಕಾಲದಲ್ಲಿ ಸ್ವರ್ಗಕ್ಕೆ ಹೋಗಿ ಅಲ್ಲಿಂದ ಬಂದು ಜನಕಸೂರಿ ಎಂಬುವನಾಗಿ ಹುಟ್ಟಿ ಈಗ ಸಗರನೆಂಬ ಹೆಸರಿನ ಮೇಲೆ ಚಕ್ರವರ್ತಿಯಾಗಿದ್ದೀಯೇ. ಈತನು ಹಿಂದೆ ನಿನ್ನ ಶಿಷ್ಯನಾದ್ದರಿಂದ ನಿನಗೆ ಸಹಸ್ರಲೋಚನನ ಮೇಲೆ ಪ್ರೀತಿಯುಂಟಾಗಿಧೆ.

ಗಣಧರರ ವಚನವನ್ನು ಲಾಲಿಸುತ್ತಲಿದ್ದು ಅವರ ಸಮೀಪದಲ್ಲೇ ಕುಳಿತ್ತಿದ್ದ ರಾಕ್ಷಸಕುಲಾಧಿನಾಯಕನಾದ ಭೀಮಾಸುರೇಂದ್ರನೆಂಬುವನು ತೋಯಜನ ಭವಾಂತರ ಬಂಧುವರ್ಗದ ಸಂಬಂಧವಿಂದ ಈತನಲ್ಲಿ ಪ್ರೀತಿಮಾಡಿ ತೋಯಜವಾಹನನ್ನು ನೋಡಿ "ಎಲೈ ಮಗನೇ ನಾನು ಹೇಳುವದನ್ನು ಕೇಳುವನಾಗು. ವಿಜಯಾರ್ಧದಲ್ಲಿ ನಿನಗೆ ಹಗೆಗಳು ಬಹಳವಾಗಿಧಾರೆ. ದಕ್ಷಿಣಸಮುದ್ರದಲ್ಲಿ ಶೋಭಾಯಮಾನವಾದ ತ್ರಿಕೂಟ ಪರ್ವತದಂತೆಸೆವ ಲಂಕಾಪಟ್ಟಣವು ಮನೋಹರವಾಗಿಧೆ. ಅದುಸಕಲವಸ್ತುಗಳಿಂದ ತುಂಬಿ ಆವಾಸಕ್ಕೆ ಪ್ರಶಸ್ತವಾಗಿಧೆ. ಅಲ್ಲಿಗೆ ರಾಜನಾಗಿಧೇನೆ. ನನಗೆ ಮಕ್ಕಳುಗಳಿಲ್ಲ. ನಿನಗೆ ಆರಾಜ್ಯವನ್ನು ಕೊಟ್ಟು ಪಟ್ಟಕಟ್ಟುತ್ತೇನೆ" ಎಂದು ಹೇಳಿ ಅವನನ್ನು ಸಮ್ಮತಿಪಡಿಸಿ ಕರೆದುಕ್ಕೊಂಡು ಲಂಕಾಪುರಿಗೆಬಂದು, ಪ್ರಶಸ್ತವಾದ ದಿನದಲ್ಲಿ ರಾಜ್ಯಪಟ್ಟಣವನ್ನು ತೋಯಜನಿಗೆ ಕಟ್ಟಿ, ಸಾಸಿರವಕ್ತ್ರಕಂಠಾಭರಣವನ್ನು ಕೊಟ್ಟು ನವನಿಧಿಯಿಂದ ಕೂಡಿದ ಪಾತಾಳಲಂಕೆಯೊಳಿದ್ದ ಸಮಸ್ತವಸ್ತುಗಳನ್ನು ಪ್ರೀತಿಯಿಂದ ಕೊಟ್ಟು ರಾಕ್ಷಸವಂಶಕ್ಕೆ ಅಧಿಪತಿಯನ್ನಾಗಿ ಮಾಡಿದನು. ಮತ್ತು ಕಂಠಾಭರಣವೇ ಮೊದಲಾದ ಅನೇಕ ವಿದ್ಯೆಗಳನ್ನು ಸಾಧಿಸಿ ಕೊಟ್ಟು ಸಾವಿರಾರು ಮುಖಗಳನ್ನು ಮಾಡಿಕ್ಕೊಳ್ಳುವ ಮಹಾವಿದ್ಯೆವನ್ನು ಸಾಧಿಸಿ ತೋಯಜನು ಸಿದ್ಧಕಾಮನಾದನು. ನರಪುರದರಸನಾದ ಮಯೂಖನೆಂಬುವನಿಗೂ ಆತನಕಾಂತೆ ಅನುಮತಿಎಂಬವಳಿಗೂ ಹುಟ್ಟಿದ್ದ ಸುಂದರಿಯಾದ ಸುಪ್ರಭಾದೇವಿಯನ್ನು ಈ ತೋಯಜನಿಗೆ ತಂದು ವಿವಾಹಮಾಡಿದರು- ಈ ಇಬ್ಬರಿಗೆ ಮಹಾರಾಕ್ಷಸನೆಂಬ ಮಗನಾದನು. ತೋಯಜನಿಗೆ ಕಾಲಲಬ್ಧಿವದಗಿ ರಾಜ್ಯದಲ್ಲಿ ವೈರಾಗ್ಯಹುಟ್ಟಲು, ಮಗನಾದ ಮಹಾರಾಕ್ಷಸನಿಗೆ ರಾಜ್ಯಭಾರವನ್ನು ವಹಿಸಿ ತಪಸ್ಸಿಗೆ ತೆರಳಿದನು. ಮಹಾರಾಕ್ಷಸನು ರಾಜ್ಯಭಾರವನ್ನು ಮಾಡುತ್ತಾ ಸಹಸ್ರಾಕ್ಷನನ್ನು ಎದುರಿಸಿ ಮಂಗಳೆಯೆಂಬ ಸ್ತ್ರೀಯನ್ನು ವಿವಾಹ

ಮಾಡಿಕೊಂಡನು. ಅವರೀರ್ವರಿಗೆ ಅಮರರಾಕ್ಷಸನೆಂಬ ಮತ್ತು ಸಾಸಿರ ಕಂಠನೆಂಬ ಇಬ್ಬರು ಮಕ್ಕಳು ಉತ್ಪನ್ನರಾದರು. ಒಂದಾನೊಂದು ದಿವಸ ಮಹಾರಾಕ್ಷಸನು ಉದ್ಯಾನದಲ್ಲಿ ಸಂಚರಿಸುತ್ತಾ ಪುಷ್ಕರಣಿಯಲ್ಲಿದ್ದ ಕಮಲ ಘ್ರಾಣಕ್ಕೆ ಆಶೆಪಟ್ಟು ವೊಳಗೆಸಿಕ್ಕಿ ಮೃತಿಹೊಂದಿದ ಭ್ರಮರವನ್ನು ನೋಡಿ ಒಂದೊಂದು ಇಂದ್ರಿಯಲೋಭತ್ವದಿಂದ ಒಂದೊಂದುಪ್ರಾಣಿಯು ಅಪಾಯು ವನ್ನು ಹೊಂದುವುದು. ಪಂಚೇಂದ್ರಿಯದಿಂದಕೂಡಿದ ಮನುಷ್ಯನು ಸಂಸಾರ ದಲ್ಲಿ ಇಂದ್ರಿಯ ಲೋಲುಪನಾಗುವದೇನಾಶ್ಚರ್ಯವೆಂದು ನೆನಿಸಿ ವೈರಾಗ್ಯ ಪರಾಯಣನಾದನು. ಅಷ್ಟರಲ್ಲಿ ಚಾರಣಪರಮೇಷ್ಠಿಗಳ ದರ್ಶನವಾಗಲು, ಅವರನ್ನು ನಮಸ್ಕರಿಸಿ ಧರ್ಮವನ್ನುಕೇಳಿ, ಅನಂತರ ಚಾರಣಮಹರ್ಷಿಗಳಿಗೆ ಪುನಹ ವಂದನೆಯನ್ನು ಮಾಡಿ, ಸ್ವಾಮಿ ನನಗೆ ಈ ಸಂಪತ್ತುಗಳು ಬರಲು ಕಾರಣವೇನೆಂದು ಕೇಳಿಕೊಳ್ಳಲು ಆ ಋಷಿಗಳು ತಮ್ಮ ಅವಧಿಜ್ಞಾನದಿಂದ ತಿಳಿದು ಹೇಳಲುದ್ಯುಕ್ತರಾದರು.

"ಎಲೈ ರಾಜನೇ! ಹಿಂದೆ ಪೌದನಾಧಿಪತಿಯಾದ ಕನಕರಥನು ಮಹಾ ಮಹಾಪೂಜೆಯನ್ನು ಮಾಡಿಸುತ್ತಿದ್ದನು. ಆ ಪಟ್ಟಣದಲ್ಲಿ ನೀನು ಒಬ್ಬಹರದ ನಾಗಿ ಜನ್ಮಿಸಿದ್ದೆ. ಆಪೂಜಾವೈಭವವನ್ನು ನೀನು ನೋಡಿ ಸಂತೋಷಾನುಮೋ ದವನ್ನು ಹೊಂದಿ ಕಾಲಗತಿಯನ್ನು ತೀರಿಸಿ, ಅಪರವಿದೇಹದಲ್ಲಿರುವ ಕಾಂಚಿ ಪುರವೆಂಬಪಟ್ಟಣದಲ್ಲಿ ಯಕ್ಷನಾಗಿಹುಟ್ಟಿದೆ- ನೀನು ಆಯಕ್ಷಭವದಲ್ಲಿ ಸಾಧು ಗಳಸಂಘಕ್ಕೆ ಬಂದೊದಗಿದ್ದ ಘೋರೋಪಸರ್ಗವನ್ನು ಪರಿಹರಿಸಿದೆ. ಆಪುಣ್ಯ ಪ್ರಭಾವದಿಂದ ತಟಿರ್ಲಂಘ ಖಗನಿಗೆ ಆತನಕಾಂತೆ ಶ್ರೀಪ್ರಭೆಯೆಂಬುವಳಿಗೆ ಉದಿತನೆಂಬ ಸುತನಾಗಿ ಹುಟ್ಟಿ ಸೌಖ್ಯದಲ್ಲಿ ಜೀವಮಾನವನ್ನು ಕಳಿಯುತ್ತ ಪ್ರಕೃತಿಸ್ಥಿತಿಯನ್ನು ನೋಡಿ ವೈರಾಗ್ಯವನ್ನು ಹೊಂದಿ ತಪಸ್ಸು ಮಾಡುತ್ತಾ ರಾಜಸಂಪತ್ತನ್ನು ನೋಡಿ ನಿದಾನಶಲ್ಯ ಮಾಡಿ, ಈಶಾನ್ಯಕಲ್ಪದಲ್ಲಿ ಜನಿಸಿ ಅಲ್ಲಿಂದ ಆಯುಷ್ಯಾವಸಾನವಲ್ಲಿ ಈ ಮಹಾರಾಕ್ಷಸನಾಮವನ್ನು ಹೊಂದಿ ಜೀ ವಿಸುತ್ತಿದ್ದೀಯೆ" ಎಂಬುದಾಗಿ ಹೇಳಲು ಮಹಾರಾಕ್ಷನು ಮತ್ತಷ್ಟು ವೈರಾಗ್ಯ ವನ್ನು ಹೊಂದಿ ಹಿರಿಯಮಗನಾದ ಅಮರರಾಕ್ಷಸನಿಗೆ ಅಧಿರಾಜಪಟ್ಟವನ್ನೂ ಕಿರಿಯವನಾದ ಸಾಸಿರಶಿರನಿಗೆ ಯೌವ್ವರಾಜ್ಯಪಟ್ಟವನ್ನೂ ಕಟ್ಟಿ ತಪಸ್ಸಿಗೆ ಹೊರಟುಹೋದನು- ಅಲ್ಲಿ ತಪಸ್ಸನ್ನು ಮಾಡಿ ಮುಕ್ತಿಯನ್ನು ಹೊಂದಿದನು- ಈತನ ಮಕ್ಕಳಾದ ಅಮರರಾಕ್ಷಸ ಮತ್ತು ಸಾಸಿರಕಂಠರಿಗೆ ಹತ್ತು ಮಕ್ಕಳು

ಗಳಾದರು. ಇವರು ತಮ್ಮ ಮಕ್ಕಳುಗಳಿಗೆ ಪಟ್ಟವನ್ನು ಕಟ್ಟಿ ವೈರಾಗ್ಯದಿಂದ ತಪಸ್ಸನ್ನು ಮಾಡಿ ಮುಕ್ತಿಗೆ ಸಂದರು. ಹೀಗೇನೆ ಈ ವಂಶದಲ್ಲಿ ಅನೇಕರು ಹುಟ್ಟಿ ನಿರ್ಯಾಣವನ್ನು ಹೊಂದಿದರು. ಅಂತ್ಯದಲ್ಲಿ ಪ್ರಸೇನಜಿತ್ ಅಥವಾ ಪ್ರಸನ್ನಜಿತ್ತನು ಉದಯಿಸಿದನು. ಕಡೆಯಲ್ಲಿ ಶತಗ್ರೀವನು ಲಂಕೆಯಲ್ಲಿ ಶ್ರೇಷ್ಠನಾದ ರಾಜನಾಗಿ ಧರ್ಮವಾಗಿ ಆಳುತ್ತಾ ಪ್ರಜಾರಂಜಕನಾಗಿ ಜಿನೇಶ್ವರರನ್ನು ಸ್ಮರಿಸುತ್ತಾ ಕಾಲವನ್ನು ಕಳಿಯುತ್ತಿದ್ದನು.

೮. ವಾನರ ಕುಲೋತ್ಪತ್ತಿ

ಎಲೈ ಶ್ರೇಣಿಕಮಹಾರಾಜನೇ ವಾನರ ಕುಲೋತ್ಪತ್ತಿಯ ವರ್ಣನೆಯನ್ನು ಮಾಡುವೆನು, ಕೇಳುವನಾಗು—ಶತಗ್ರೀವನು ಲಂಕೆಯನ್ನು ಆಳುತ್ತಿರುವಾಗ ಆತನ ಪಟ್ಟಸ್ತ್ರೀಯಾದ ನೀಲಾಳಿಕೆಯ ಗರ್ಭದಲ್ಲಿ ಧವಳಕೀರ್ತಿಯೆಂಬೊಬ್ಬ ಪುತ್ರನು ಜನಿಸಿದನು. ಆತನು ಸಕಲಕಲಾಪ್ರವೀಣನಾಗಿ ರಾಜ್ಯಭಾರವನ್ನುವಹಿಸಿ ಚಕ್ರವರ್ತಿಯಂತೆ ಏಕಚಕ್ರಾಧಿಪತ್ಯವನ್ನು ಹೊಂದಿ ಪ್ರಸಿದ್ಧನಾಗಿದ್ದನು. ಆತನಿಗೆ ಸಹಸ್ರಾರ್ಧವಕ್ತ್ರನೆಂಬ ರಾಕ್ಷಸರ ಹೆಸರಿದ್ದರೂ ಧವಳಕೀರ್ತಿಯೆಂಬ ನಾಮವು ಸ್ಥಿರವಾಗಿತ್ತು. ಇತ್ತ ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯಲ್ಲಿ ಮೇಘಪುರವೆಂಬ ಪಟ್ಟಣವು ಪ್ರಕಾಶಮಾನವಾಗಿತ್ತು. ಅದಕ್ಕೆ ಅತಿಯಿಂದ್ರಿಯನೆಂಬ ರಾಜನು ಕಳಕಂಠೆ ಎಂಬ ಪಟ್ಟಸ್ತ್ರೀಯೊಡನೆ ರಾಜ್ಯವನ್ನು ಆಳುತ್ತಿದ್ದನು. ಇವರಿಗೆ ಶ್ರೀಕಂಠನೆಂಬ ಮಗನೂ, ದೇವಿಲೆ ಎಂಬ ಮಗಳೂ ಇದ್ದರು. ಅತ್ತ ಮಣಿಪುರವೆಂಬ ಪಟ್ಟಣವಿತ್ತು. ಅದಕ್ಕೆ ಪೂರ್ವೋತ್ತರನೆಂಬುವನು ರಾಜನಾಗಿದ್ದನು. ಅವನಿಗೆ ಪುಷ್ಪೋತ್ತರನೆಂಬ ಮಗನಿದ್ದನು. ಆತನಿಗೆ ದೇವಿಲೆಯನ್ನು ವಿವಾಹಮಾಡಿಕೊಡಬೇಕೆಂದು ಅತಿಯಿಂದ್ರಿಯರಾಜನನ್ನು ಬೇಡಿಕೊಳ್ಳಲಾಗಿ ಆ ರಾಜನು ಈತನಿಗೆ ಕೊಡಲು ಇಷ್ಟಪಡದೆ, ಲಂಕೆಯರಾಜನಾದ ಧವಳಕೀರ್ತಿಮಹಾರಾಜನಿಗೆ ತನ್ನ ಮಗಳಾದ ದೇವಿಲೆಯನ್ನು ಕೊಟ್ಟು ಮದುವೆಮಾಡಿದನು. ಈ ದೇವಿಲೆಯ ಅಣ್ಣನಾದಶ್ರೀಕಂಠನು ಮಂದರಗಿರಿಯಲ್ಲಿರುವ ಚೈತ್ಯಾಲಯಗಳನ್ನು ದರ್ಶನಮಾಡಿಕೊಂಡು, ಮಣಿಪುರದ ಮಾರ್ಗವಾಗಿ ಬರುವಾಗ ಮಣಿಪುರದ ಅರಮನೆಯ ಕರುಮಾಡದಲ್ಲಿ ಪುಷ್ಪೋತ್ತರನ ಸಹೋದರಿಯಾದ ಪದ್ಮೋತ್ತರೆಯು

ವೀಣಾಗಾನವನ್ನು ಮಾಡುತ್ತಿದ್ದಳು. ಶ್ರೀಕಂಠನುಆಗಾನಕ್ಕೆ ಮರುಳಾಗಿ ಅವಳಲ್ಲಿ ಮನಸ್ಸಿಟ್ಟು ಅವಳೆದುರಿನಲ್ಲಿ ನಿಂತನು. ಪದ್ಮೋತ್ತರೆಯು ಈತನರೂಪನ್ನು ನೋಡಿ ವ್ಯಾಮೋಹಿತಳಾದಳು. ಇಬ್ಬರೂ ಪರಸ್ಪರವಾಗಿ ಸ್ನೇಹವನ್ನು ಹೊಂದಿ, ಪುಷ್ಪೋತ್ತರನ ಭೀತಿಯಿಂದ ಹೆದರಿ, ಅಲ್ಲಿಂದ ಆಕೆಗೂಡಿ ಶ್ರೀಕಂಠನುಹೊರಟು ಭಾವನ್ಮೈದನಾದ ಧವಳಕೀರ್ತಿಯ!ಪಟ್ಟಣಕ್ಕೆ ಬಂದರು, ಆಗ ಧವಳಕೀರ್ತಿಯು ಆಇಬ್ಬರನ್ನೂ ಸನ್ಮಾನಿಸಿ ತನ್ನ ಪಟ್ಟಣದಲ್ಲೇ ಕೆಲವುದಿವಸ ಇಟ್ಟುಕೊಂಡಿದ್ದನು. ಪುಷ್ಪೋತ್ತರನು ತನ್ನ ತಂಗಿಯಾದ ಪದ್ಮೋತ್ತರೆಯನ್ನು ತೆಗೆದುಕೊಂಡುಹೋದ ಶ್ರೀಕಂಠನ ಮೇಲೆ ಹಗೆತೀರಿಸಿಕೊಳ್ಳಲು ಲಂಕೆಗೆ ಯುದ್ಧಸನ್ನದ್ಧನಾಗಿ ಬಂದನು. ಆಗ ಧವಳಕೀರ್ತಿಯು ಪುಷ್ಪೋತ್ತರನಿಗೆ, ಶ್ರೀಕಂಠನನ್ನು ಪದ್ಮೋತ್ತರೆಯು ವರನನ್ನಾಗಿ ಆರಿಸಿದ್ದುದು ಉತ್ತಮವಾಗಿರುತ್ತೆಂದು ಸಾಮವಚನದಿಂದ ಸಮಾಧಾನಪಡಿಸಿ ಹಿಂದಕ್ಕೆ ಕಳುಹಿಸಿಕೊಟ್ಟನು. ಈ ಶ್ರೀಕಂಠನಿಗೆ ಮುಂದೇನಾದರೂ ಪುಷ್ಪೋತ್ತರನಿಂದ ಬಾಧೆಬರುವದೆಂದು ಯೋಚಿಸಿ, ತನ್ನ ಸಮಿಾಪವರ್ತಿಯಾದ ಒಂದುಪಟ್ಟಣದಲ್ಲಿ ಇರಿಸಬೇಕೆಂದು ಯೋಚಿಸಿ, ಕಿಷ್ಕಿಂಧಾಪರ್ವತದಲ್ಲಿ ವಸತಿಯನ್ನು ಮಾಡಿ ಅವರನ್ನು ಇಟ್ಟನು. ಒಂದು ದಿನ ಅಚ್ಯುತೇಂದ್ರನು ನಂದೀಶ್ವರ ಪೂಜೆಗಾಗಿ ಹೋಗುತ್ತಿರುವಾಗ, ಈ ಶ್ರೀಕಂಠನನ್ನು ಕಂಡು ಆತನನ್ನು ಜೊತೆಯಲ್ಲಿ ಕರೆದುಕೊಂಡುಹೋಗುತ್ತ ಮಾನುಷೋತ್ತರ ಪರ್ವತದಾಚೆಗೆ ಮನುಷ್ಯರು ಹೋಗಲು ಆಗದಿದ್ದುದರಿಂದ ಆತನನ್ನು ಅಲ್ಲೇ ಬಿಟ್ಟು ಹೊರಡಬೇಕಾಯಿತು. ಇದಕ್ಕೋಸ್ಕರ ಶ್ರೀಕಂಠನಿಗೆ ವೈರಾಗ್ಯಹುಟ್ಟಲು, ಮಗನಾದ ವಜ್ರಕಂಠನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಅನುವಾದನು- ಶ್ರೀಕಂಠನು ತಪಸ್ಸನ್ನಾಚರಿಸಿ ಸದ್ಗತಿಯನ್ನು ಪಡೆದನು ಒಂದು ದಿವಸ ವಜ್ರಕಂಠನು ಚೈತ್ಯಾಲಯಕ್ಕೆ ಹೋಗಿ ಬರುವ ಮಾರ್ಗದಲ್ಲಿ ಚಾರಣಮಹಾಋಷಿಗಳನ್ನು ಕಂಡು ಅವರಿಗೆ ನಮಸ್ಕರಿಸಿ ತನ್ನ ತಂದೆಯಾದ ಶ್ರೀಕಂಠನಿಗೂ ಅಚ್ಯುತೇಂದ್ರನಿಗೂ ಪರಸ್ಪರ ಸ್ನೇಹವಾಗುವದಕ್ಕೆ ಕಾರಣವೇನೆಂದು ಬೆಸಗೊಳ್ಳಲು ದಯಾಪರರಾದ ಚಾರಣರು ಹೇಳಲುದ್ಯುಕ್ತರಾದರು

ಈ ಜಂಬೂದ್ವೀಪದ ಭರತಕ್ಷೇತ್ರದಾರ್ಯಾ ಖಂಡದಲ್ಲಿ ವೀತಶೋಕವೆಂಬಪುರವಿತ್ತು. ಆಪುರದಲ್ಲಿ ಮಹದತ್ತನೆಂಬ ವರದನಿದ್ದನು. ಆತನಿಗೆ ದನದ ಮತ್ತು ವಸುದತ್ತರೆಂಬ ಈರ್ವರು ಮಕ್ಕಳಿದ್ದರು. ಕಾಲಗತಿಯಿಂದ ಕರ್ಮೋಪಶಮವು ಮಹದತ್ತನಿಗುಂಟಾಗಲು ದೀಕ್ಷೆಗೆಹೊರಟುಹೋದನು. ಈ ಈರ್ವ

ರಿಗೂ ಒಬ್ಬ ಸ್ತ್ರೀವಿಷಯವಾಗಿ ವಿವಾದ ಹುಟ್ಟಿ, ವೈರಾಗ್ಯ ಹೊಂದಿ ಇಬ್ಬರು ಪುತ್ರರೂ ಗುರೂಪದೇಶದಲ್ಲಿ ನಿರತರಾಗಿ ತಪಸ್ಸನ್ನಾಚರಿಸಲು ಈ ಇಬ್ಬರೂ ಕಾಲಾವಸಾನದಲ್ಲಿ ಮುಡುಪಿ, ಹಿರಿಯವನಾದ ದನದನು ಅಚ್ಯುತೇಂದ್ರನಾಗಿಯೂ ಅನುಜನು ಸಾದಾರಣದೇವನಾಗಿಯೂ ಆದನು. ಆತನು ಅಲ್ಲಿಂದ ಬಂದು ನಿಮ್ಮ ತಂದೆಯಾದ ಶ್ರೀಕಂಠನೆಂಬುವನಾದನು. ಈರೀತಿ ಭವಾಂತರ ಸ್ನೇಹದಿಂದ ಅಚ್ಯುತೇಂದ್ರನಿಗೂ ನಿನ್ನ ತಂದೆಗೂ ಸ್ನೇಹ ಸಂಬಂಧವುಂಟಾಯಿತೆಂದು ಹೇಳಿದರು. ಈ ವಜ್ರಕಂಠನು ಈ ವಿದ್ಯಮಾನಗಳನ್ನೆಲ್ಲ ಕೇಳಿ ಈ ಸಂಸಾರದಲ್ಲಿ ವಿರಕ್ತನಾಗಿ ತನ್ನ ಮಗನಾದ ಇಂದ್ರಾಯುಧನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ತೆರಳಿದನು. ಹೀಗೆ ವಾಸುಪೂಜ್ಯರ ಕಾಲದವರೆಗೂ ಆ ವಂಶವು ನಡೆದುಬಂದಿಥೆ.

ವಾನರಕುಲದಲ್ಲಿ ಇಂದ್ರಾಯುಧನನಂತರ ಅನೇಕರಾಜರುಗತಿಸಿ ಕಡೆಯಲ್ಲಿ ಅಮರಪ್ರಭನು ಜನಿಸಿದನು. ಈಧವಳಕೀರ್ತಿಯ ವಂಶಪರಂಪರೆಯಲ್ಲೇ ಅನೇಕ ರಾಜರುಗಳು ಹುಟ್ಟಿ ಗತಿಸುತ್ತಾಬಂದಾಗ ಅಲ್ಲಿ ತ್ರಿಕೂಟನೆಂಬ ರಾಜನುಉದಿಸಿದನು. ಆತನ ಚಿತ್ತಪ್ರಿಯೆಗೆ ಗುಣವತಿ ಎಂಬ ಮಗಳಾದಳು. ಗುಣವತಿಯನ್ನು ಅಮರಪ್ರಭನಿಗೆ ಕೊಡಲು ನಿಶ್ಚೈಸಿ ಕಿಷ್ಕಿಂಥ ಪಟ್ಟಣಕ್ಕೆ ಕರೆದುಕೊಂಡು ವಿವಾಹವನ್ನು ಮಾಡಲು ಷುರುಮಾಡಿ ವಿವಾಹ ವೇದಿಯಲ್ಲಿ ಪಂಚರತ್ನ ಚೂರ್ಣದಿಂದ ಬರೆದ ಲತೆಗಳೊಳಗೆ ವಾನರರೂಪುಗಳನ್ನು ನೋಡಿ ಗುಣವತಿಯು ಬೆಚ್ಚಿದಳು. ಇದನ್ನು ನೋಡಿ ಅಮರನು ಇದನ್ನು ಯಾರು ಬರೆದರೆಂದುಕೇಳಲು ಗೃಹಮುಹತ್ತನು "ನಿಮ್ಮಪೂರ್ವಜನಕನಾದ ಶ್ರೀಕಂಠನು ಕೊಂಡಾದಿದನಾದ್ದರಿಂದ ಈ ರೂಪನ್ನು ಉತ್ಸವ ಕಾಲಗಳಲ್ಲಿ ಬರೆಯತಕ್ಕ ಪದ್ಧತಿಯಿಥೆ" ಎಂದು ಹೇಳಲಾಗಿ, ಅಮರಪ್ರಭನು ಇದನ್ನು ಕಾಲುತುಳಿಯುವ ಮಾರ್ಗದಲ್ಲಿ ಬರೆಯದೆ ಪತಾಕೆಗಳಲ್ಲೂ ಮಣಿಮುಕುಟಗಳಲ್ಲಿಯೂ ಕೆತ್ತಿಸಿ ವಾನರಕುಲವೆಂಬುದನ್ನು ಪ್ರಸಿದ್ಧಿಪಡಿಸಿದನು. ಅಮರಪ್ರಭನು ವೈರಾಗ್ಯವನ್ನು ಹೊಂದಿ ತನ್ನ ಪುತ್ರನಾದ ಅತಿಪ್ರಭನೆಂಬವನಿಗೆ ರಾಜ್ಯವನ್ನು ವಹಿಸಿ ತಪಸ್ಸನ್ನು ಮಾಡಿ ಮುಕ್ತಿಯನ್ನು ಪಡೆದನು. ಅತಿಪ್ರಭನೂ ಕೂಡ ರಾಜ್ಯವನ್ನು ತೊರೆದು ತಪೋನಿಷ್ಠನಾಗಿ ಮುಕ್ತಿಗೆ ಸಂದನು. ಲಂಕೆಯಲ್ಲಿ ಹೀಗೆ ಕೆಲವರು ಆಳುತ್ತಾ ಬಂದರು. ಕೊನೆಯಲ್ಲಿ ಆ ವಂಶದಲ್ಲಿ ವಿದ್ಯುತ್ಕೇತು ಎಂಬುವನು ರಾಜನಾದನು. ಆತನಿಗೆ ಶ್ರೀಚಂದ್ರಾಬೆ ಎಂಬ ಲಲನೆಯು ಪ್ರಾಣಕಾಂತೆಯಾ

ದಳು. ಆ ರಾಜರಾಣಿಯರಿಗೆ ಸುಕೇಶನೆಂಬ ಪುತ್ರನು ಜನಿಸಿದನು. ಕಿಷ್ಕಿಂದದಲ್ಲಿ ಒಂದು ದಿನ ರಾಜನಾದ ವಿದ್ಯುತ್ಕೇತುವು ರಾಣಿಯಾದ ಚಂದ್ರಾಭೆಯೊಡನೆ ವನಕೇಳಿ ನಿಮಿತ್ತಾರ್ಥವಾಗಿ ನಂದನವನಕ್ಕೆ ಹೋಗಲು ಅಲ್ಲಿವನಚರನು ಇವರನ್ನು ನೋಡಿ ಹಲ್ಲುಕಿರಿದು ಎಣಕಿಸಿ ಅಂಗಚೇಷ್ಟೆಯನ್ನು ಮಾಡಲು, ವಿದ್ಯುತ್ಕೇತುವು ಅತ್ಯಂತ ಕೋಪದಿಂದ ಕೊಡಿ ಜೀವಿತಾಂತ್ಯದ ಗಾಯವನ್ನು ಮಾಡಲು, ಆಗ ಅದನ್ನು ಒಬ್ಬ ಮುನೀಶ್ವರನು ನೋಡಿ ಕಮಂಡಲದ ನೀರಿನಿಂದ ಪ್ರೋಕ್ಷಿಸಿ ಬೋಧಿಸಲು, ಬಾವಬೋಧದಿಂದ ವನಚರನು ಪಂಚತ್ವವನ್ನು ಪಡೆದು ದೈವಗತಿಗೆ ಸೇರಿ, ತನಗುಂಟಾದ ಕುವಧಿಯಿಂದ ಹಿಂದಲಜನ್ಮವನ್ನು ನೆನೆದು ವಿದ್ಯುತ್ಕೇಶನಿಗೆ ಮುನಿದು, ತನ್ನ ಕುಲಕ್ಕೆಲ್ಲಾ ವೈರವನ್ನು ಮಾಡುತ್ತಾನೆಂದು ಯೋಚಿಸಿ, ವೈಕುರ್ವಣ ವಿದ್ಯೆಯಿಂದ ಪರ್ವತೋನ್ನತವಾದ ವಾನರರೂಪುಗಳನ್ನು ನಿರೂಪಿಸಿ ಈ ಪೂರ್ವೋಕ್ತವಾದ ಪರ್ವತಾಕಾರವಾದ ವಾನರರೂಪಿನಿಂದ ವಿದ್ಯುತ್ಕೇಶನನಿಗೆ ಅತ್ಯುಗ್ರವಾದ ಬಾಧೆಯನ್ನುಪಡಿಸಲು ವಿದ್ಯುತ್ಕೇಶನು ಹೆವರಿ ಚಾರಣರನ್ನು ಮರೆಹೊಕ್ಕನು. ಅಷ್ಟರಲ್ಲಿ ಗುರುಗಳಾದ ಚಾರಣರು ಕ್ಷಮೆಯನ್ನುಂಟುಮಾಡಿ ಆ ದೇವನಿಗೆ ಬೋಧಿಸಲಾಗ ದೇವನು ಕ್ಷಮಾಯುಕ್ತನಾದನು.

ಆಗ ಮುನಿಗಳು ವಿದ್ಯುತ್ಕೇಶನಿಗೂ ಆ ವನಚರ ದೇವನಿಗೂ ವೈರಕಾರಣವುಂಟಾಗುವುದಕ್ಕೆ ನಿಮಿತ್ತವನ್ನು ಹೇಳತೊಡಗಿದರು. " ಪೂರ್ವದಲ್ಲಿಈ ಇಬ್ಬರೂ ವೈರದಲ್ಲಿ ಓರ್ರೋರ್ವರ ಕೊಂದು ಬಹು ಕಲ್ಪದವರಿಗೆ ದುಃಖಪಟ್ಟು ದುರಿತೋಪಶಮನವಾಗಲು, ಈರ್ವರಿಗೂ ಮನುಷ್ಯಾಯುರ್ಬಂಧವಾಗಿ ಅವರಲ್ಲೊಬ್ಬನು ಈಭೂಮಿಯ ಶ್ರಾವಸ್ತಿಪುರವೊಳಗೆ ಅವನೀಶನಾಗಿದ್ದು ಅಲ್ಲಿಂದ ಬಂದು ಕೋಸಲ ದೇಶದೊಳಗಿರುವ ವಸುಂದರ ಪಟ್ಟಣಕ್ಕೆ ಧರಣಿಭೂಷಣನೆಂಬ ದೊರೆಯಾಗಿ ಕಾಲಾನುಕಾಲದಲ್ಲಿ ನಿರ್ವಿಣ್ಣನಾಗಿ ತಪಸ್ಸನ್ನು ಹೊಂದಿ ಪ್ರತಿಮಾಯೋಗದಲ್ಲಿರಲು ಇನ್ನೋರ್ವನು ಭೂಲೋಕದಲ್ಲಿ ಬೇಡನಾಗಿಹುಟ್ಟಿ ಅಲ್ಲಲ್ಲಿಅಲೆದಾಡುತ್ತಾಯಿದ್ದು ಈಪ್ರತಿಮಾಯೋಗಧಾರಿಯನ್ನು ನೋಡಿ, ಪೂರ್ವಜನ್ಮದ ವೈರವನ್ನು ಸಾಧಿಸಿ ನಾನಾವಿಘ್ನವಾಗಿ ಈತನನ್ನು ಬೈಯ್ಯಲು, ಈತಪಸ್ವಿಯಾಗಿರುವನು ಅವನ್ನು ಕೇಳಿ ಕೃದ್ಧನಾಗಿ ಮಾನಕಷಾಯದಿಂದ ಜ್ಯೋತಿರ್ಗತಿಯನ್ನು ಪಡೆದು, ಅಲ್ಲಿಂವಗತಿಸಿ ವಿದ್ಯುತ್ಕೇಶನೆಂಬ ನಾಮವುಳ್ಳವನಾಗಿ ನೀನಾದೆ. ಇನ್ನೊಬ್ಬನು ಶಬರನಾಗಿ ಅಲ್ಲಿಂದ ಸತ್ತು ವನಚರರೂಪಾಗಿ ನಿನ್ನ

ಏಟನಿಂದ ನೊಂದು ಮುನಿಕರುಣದೊಳು ಉತ್ತಮ ಸ್ಥಿತಿಯನ್ನು ಪಡೆದನು" ಆದುದರಿಂದಲೇ ಈ ವಂಶದವರು ಕಪಿಧ್ವಜಗಳನ್ನಿಟ್ಟು ಪೂಜಿಸುತ್ತಿರುವರು. ಮತ್ತು। ಮೌಲಿಗಳಲ್ಲಿ ವಾನರಪ್ರತಿಬಿಂಬವನ್ನು ಇಟ್ಟುಕೊಳ್ಳುತ್ತ ಬಂದರು. ಆದ್ದರಿಂದಲೇ ಇದಕ್ಕೆ ವಾನರದ್ವೀಪವೆಂದು ಹೆಸರಾಯಿತು. ಅಲ್ಲಿ ಇರುವವರಿಗೂ ಇದೇ ವಾಡಿಕೆಯಾಗಿ ಹೆಸರುಗಳು ಬಂದಿತು. ವಿದ್ಯುತ್ಕೇಶನು ಈ ಭವಮಾಲೆಯನ್ನು ಕೇಳಿ ಪುತ್ರನಾದ ಸುಕೇತುರಾಕ್ಷಸನಿಗೆ ರಾಜ್ಯವನ್ನುಕೊಟ್ಟು ತಪೋಧಾರಿಯಾದನು.

ಈಪ್ರಕಾರವಾಗಿ ಕಿಷ್ಕಿಂದಾಪಟ್ಟಣವಿರುತ್ತಿರಲಾಗಿ ಅತ್ತ ವಿಜಯಾರ್ಧ ಪರ್ವತದ ಆದಿತ್ಯಪುರದ ಆದಿತ್ಯನೆಂಬರಾಜನಿಗೆ ಮಂದರಮಾಲಿಕೆ ಎಂಬಸತಿಯಾದಳು. ಇವರಿಗೆ ಶ್ರೀಮಾಲೆಯೆಂಬ ಮಗಳಾದಳು. ಅವಳು ವಿದ್ಯಾರೂಪು ಸಂಪನ್ನೆಯಾಗಲು, ಆತನ ತಂದೆಯು ಇವಳ ಸ್ವಯಂವರವನ್ನು ರಚಿಸಿದನು. ಆಗ ಎಲ್ಲಾ ಖಗರಾಜರೂ, ದ್ವೀಪನಾಯಕರೂ, ಭೂನಾಯಕರೂ, ಬಂದು ಸೇರಿದರು. ಅಲ್ಲಿ ಅಶನಿವೇಗನೆಂಬ ಚಕ್ರವರ್ತಿಗೂ, ಆತನ ನಲ್ಲೆ ಸೌಂಧರಿಗೂ ಉದಯಿಸಿದ ಜಯಸಿಂಹನೆಂಬುವನೂ ಮತ್ತು ಕಿಷ್ಕಿಂಧ ಲಂಕಾಪುರದ ನಾಯಕರುಗಳೂ ಸಭೆಯಲ್ಲಿ ಮೂರ್ತಿಮತ್ತಾಗಿದ್ದರು. ಆಗ ಆದಿತ್ಯರಾಜನು ತನ್ನ ಮಗಳನ್ನು ಶೃಂಗರಿಸಿ ಶ್ರೀಮಾಲೆಯನ್ನು ಸ್ವಯಂವರ ಮಂಟಪಕ್ಕೆ ಕರತಂದು ಎಲ್ಲಾ ರಾಜರುಗಳನ್ನೂ ಮಗಳಿಗೆ ಪರಿಚಯ ಮಾಡಿಕೊಡಬೇಕೆಂತ ಕಂಚುಕಿಗೆ ಆಜ್ಞಾಪಿಸಿದನು. ಆಗ ಕಂಚುಕಿಯು ದೊರೆಗಳ ಬಿರುದಾವಳಿಯನ್ನು ಹೇಳುತ್ತಾ ಬಂದು ಕಿಷ್ಕಿಂದಾದೇಶದ ರಾಜನನ್ನು ಹೊಗಳಿತೋರಿಸಿದಳು. ಆಗ ರಾಜಪುತ್ರಿಯು ಲಂಕೇಶ್ವರನ ನೈದನಾದ ಕಿಷ್ಕಿಂದಾಪತಿಯನ್ನು ನೋಡಿ ಮೂರ್ಛೆಯನ್ನು ಹೊಂದಿದಳು. ಅಷ್ಟರಲ್ಲಿ ಸಖಿಯರ ಶೈತ್ಯೋಪಚಾರದಿಂದ ಎಚ್ಚೆತ್ತು ಕಿಷ್ಕಿಂದಾರಾಜನಿಗೆ ಪುಷ್ಪಮಾಲಿಕೆಯನ್ನುಹಾಕಿದಳು. ಈಕೆಯನ್ನು ವಿಜಯಸಿಂಹನು ನೋಡಿ ಮೋಹಿಸಿ ಜಾತಿ, ಕುಲ, ಕೀರ್ತಿ, ಮಾತು ಮೊದಲಾದವುಗಳಿಗೆ ಭೀತಿಪಡದೆ ತಾನು ಚಕ್ರವರ್ತಿಯ ಮಗನಾದ್ದರಿಂದ ಏನುಬೇಕಾದರೂ ಮಾಡಿ, ರಾಜಕನ್ಯಕೆಯನ್ನು ಹೊಂದಬಹುದೆಂಬ ದುರಾಶೆಯಿಂದ ಯುದ್ಧವನ್ನು ಮಾಡತೊಡಗಿದನು. ಯುದ್ಧದಲ್ಲಿ ವಿಜಯಸಿಂಹನು ಮಡಿದ ಸಮಾಚಾರವನ್ನು ಚಕ್ರೇಶನು ಕೇಳಿ ಇವರುಗಳ ಮೇಲೆ ಯುದ್ಧಕ್ಕೆ ಬಂದನು. ಆಗ ಅಂದ್ರಕನು ಮಡಿದನು. ಕಿಷ್ಕಿಂದಾ, ಲಂಕಾ ಮತ್ತು ರಾಜರು ಕನ್ನಿಕೆಯ

ತಂದೆಯು ಸಹ ಹೆದರಿ ಓಡಿದರು. ಸುಕೇಶನು ಪಾತಾಳಲಂಕೆಯನ್ನು ಹೊಕ್ಕನು. ಅಶನಿವೇಗನು ಲಂಕೆಯನ್ನು ನಿಘಾತನಿಗೆ ಕೊಟ್ಟನು. ಕಿಷ್ಕಿಂಧವನ್ನು ಸಹಸ್ರಾರನಿಗೆ ಕೊಟ್ಟನು- ಕಿಷ್ಕಿಂಧೇಶನು ಅಲ್ಲಿಂದ ಹೊರಟು ಜಂಭುಗಿರಿಯ ಮೇಲೊಂದು ಪಟ್ಟಣವನ್ನುರಚಿಸಿದನು. ಅಲ್ಲಿ ಸತಿಯಾದ ಶ್ರೀಮಾಲೆಯೊಡನೆ ಸುಖವಾಗಿ ಕಾಲವನ್ನು ಕಳೆಯುತ್ತಿರುವಾಗ ಶ್ರೀಮಾಲೆಯು ಸೂರ್ಯಜ, ಜಾಂಬುವಂತ ಎಂಬಿಬ್ಬರು ಪುತ್ರರನ್ನೂ ಸೂರ್ಯಮಾಲೆ ಎಂಬ ಮಗಳನ್ನು ಹಡೆದು ಸುಖವಾಗಿದ್ದಳು. ಇತ್ತ ಮೇಘಪುರದ ಮೇಘಾತ್ಮಜನು ತರುಣಿಯಾದ ಕುಮಾರಿಯನ್ನು ಬಲಕರಸಿಂಹಮರ್ದನ ನೆಂಬುವನಿಗೆ ಕೊಟ್ಟನು. ಇವನು ಕರ್ಣಪರ್ವತದ ಕೊನೇ ಭೂಮಿಯಲ್ಲಿ ಒಂದು ಪಟ್ಟಣವನ್ನು ರಚಿಸಿದನು. ಇದಕ್ಕೆ ಕುಂಡಲಪುರವೆಂದು ಹೆಸರಾಯಿತು- ಈ ಪಟ್ಟಣದಲ್ಲಿ ಸಿಂಹಮರ್ದನನಿದ್ದನು. ಗಗನಚರಾಕುಲಕ್ಕೆ ಮೃಗಧರನೆನಿಪ ಸುಕೇಶನಂಗನೆ ಇಂದ್ರಾಣಿಗೆ ಮಾಲಿ, ಸುಮಾಲಿ, ಮಾಲ್ಯವಂತ ಎಂಬ ಮೂವರು ಮಕ್ಕಳುಗಳಾದರು. ಈ ಮೂವರು ಅಸ್ತ್ರಶಸ್ತ್ರವಿದ್ಯೆಗಳಲ್ಲಿ ಪಾರಂಗತರಾಗಿದ್ದರು- ಒಂದಾನೊಂದು ದಿವಸ ಇವರ ತಂದೆಯಾದ ಸುಕೇಶನು ಮಕ್ಕಳನ್ನು ಕುರಿತು "ನೀವು ಯಾವ ದಿಕ್ಕಿಗಾದರೂ ಸಂಚಾರಕ್ಕೆ ಹೋಗಬಹುದು. ಲಂಕೆಯ ಕಡೆಗೆ ಮಾತ್ರ ಹೋಗಬೇಡಿರಿ" ಎಂದನು. ಅದಕ್ಕೆ ಮಕ್ಕಳು ಕಾರಣವೇನೆಂದು ಬೆಸಗೊಳಲು ಸುಕೇಶನು ಹಿಂದೆ ಸ್ವಯಂವರದಲ್ಲಿ ನಡೆದ ವಿದ್ಯಮಾನವನ್ನು ಅರುಹಿದನು. ಈ ಮಕ್ಕಳು ಕೇಳಿ—ತಡೆಯಲಾರದಷ್ಟು ಕೋಪವುಳ್ಳವರಾಗಿ ಲಂಕೆಗೆ ಹೊರಟು ಪಟ್ಟಣಕ್ಕೆ ಮುತ್ತಿಗೆ ಹಾಕಿ, ಲಂಕಾ ಪಟ್ಟಣವನ್ನೆಲ್ಲಾ ಸೂರೆ ಮಾಡಿ ಪಟ್ಟಣದಲ್ಲಿ ನಿಂತು, ಮಾಲಿಯು ಮಾತಾಪಿತೃಗಳನ್ನೆಲ್ಲಾ ಆ ಪಟ್ಟಣಕ್ಕೆ ಬರಮಾಡಿಕೊಂಡು ತಮ್ಮಂದರೊಡಗೂಡಿ ರಾಜ್ಯಭಾರವನ್ನು ಮಾಡುವುದಕ್ಕೆ ಪ್ರಯತ್ನಪಟ್ಟು ವಿದ್ಯಾಧರರ ಉಭಯ ಶ್ರೇಣಿಗಳಿಂದಲೂ ಕಪ್ಪಕಾಣಿಕೆ ಬರುವಂತೆ ಮಾಡಿಕೊಂಡಿದ್ದನು- ಕಿಷ್ಕಿಂಧಪುರಕ್ಕೆ ಜಾಂಬವನಿರಲು ಎಲ್ಲರೂ ಜಿನರಾಜಸ್ಮರಣೆಯನ್ನು ಮಾಡುತ್ತಾ ಸಂತೋಷದಿಂದಿದ್ದರು.

೯. ದಶಾನನನುದಯ

ಎಲೈ ಶ್ರೇಣಿಕನೇ! ದಶಗ್ರೀವಾರ್ಧ ಚಕ್ರಿಯ ಹುಟ್ಟುವಿಕೆಯನ್ನು ಕೇಳುವವನಾಗು. ಏನೆಂದರೆ—ಲಂಕೆಯಲ್ಲಿ ಮಾಲಿಯು ತಮ್ಮಂದರೊಡನೆ

ರಾಜ್ಯವಾಳುತ್ತಿರಲು ಧನುಜರೆಲ್ಲರೂ ಏಳಿಗೆಯನ್ನು ಹೊಂದಿ ಎಲ್ಲಾ ಖಗರಿಂದಲೂ ಕಪ್ಪವನ್ನು ತೆಗೆದುಕೊಳ್ಳುತ್ತಿದ್ದರು. ಇತ್ತ ಕಿಷ್ಕಿಂಧಾತ್ಮಜರಾದ ಸೂರ್ಯಜ ಮತ್ತು ಜಾಂಬವರು ತಮ್ಮ ಕಿಷ್ಕಿಂಧ ಪಟ್ಟಣದಲ್ಲಿ ಸುಖವಾಗಿ ವಾನರ ವಂಶಜರೊಡನೆ ಬಲಯುತವಾದ ರಾಜ್ಯಭಾರವನ್ನು ಮಾಡುತ್ತಿದ್ದರು. ಸುಕೇಶನು ಕಾಲಾನುಸಾರವಾಗಿ ತನಗುಂಟಾದ ಚಾರಿತ್ರ ಮೋಹನೀಯ ಕರ್ಮೋಪಶಮದಿಂದ ವೈರಾಗ್ಯವನ್ನು ಹೊಂದಿ ಋಷಿಸಮುದಾಯವನ್ನು ಸೇರಿದನು. ಇತ್ತ ರಥನೂಪುರದ ಚಕ್ರವಾಳ ಪಟ್ಟಣದ ರಾಜನಾದ ಸಹಸ್ರಾರ ವಿದ್ಯಾಧರನಿಗೆ ವಿಜಯಾವತಿ ಎಂಬ ಪತ್ನಿಯಾದಳು. ಅವಳು ಗರ್ಭವತಿಯಾಗಿ ಇಂದ್ರವಿಭೂತಿಯನ್ನು ತಾನು ನೋಡಬೇಕೆಂಬ ಬಯಕೆಯನ್ನು ಬಯಿಸಿಕೊಂಡಳು. ಇದನ್ನು ರಾಜನು ಕೇಳಿ ಇಂದ್ರಸಭೆಯ ಪ್ರತಿಕೃತಿಯನ್ನು ಮಾಡಿಸಿ ವಿಜಯಾವತಿಗೆ ತೋರಿಸಿ ಬಯಕೆಯನ್ನು ಪೂರ್ತಿಗೊಳಿಸಿದನು. ಈ ಮಹಾದೇವಿಯು ಗರ್ಭಕಾಲ ಪೂರೈಸಿದೊಡನೆಯೆ ಒಳ್ಳೆಯ ಲಗ್ನದಲ್ಲಿ ಸುಪುತ್ರನನ್ನು ಹಡೆದಳು. ಈ ಪುತ್ರನಿಗೆ ತಂದೆಯಾದ ರಾಜನು ಇಂದ್ರನೆಂಬ ನಾಮಕರಣವನ್ನು ಮಾಡಿದನು. ಅವನು ಬಾಲ್ಯವನ್ನು ಕಳೆದು ಸಕಲ ವಿದ್ಯೆಗಳಲ್ಲೂ ಪಾರಂಗತನಾಗಿ ನವಯೌವ್ವನವನ್ನು ಹೊಂದಿ ಸುಭಾಗ್ಯದಿಂದ ಕೂಡಿದ್ದನು. ಆತನು ತನ್ನ ಕಾಂತೆಯರಿಗೆ ರಂಭೆ, ಮೇನಕಿ, ತಿಲೋತ್ತಮೆ ಮೊದಲಾದ ಹೆಸರುಗಳನ್ನಿಟ್ಟನು ತನ್ನ ಪಟ್ಟದ ಆನೆಗೆ ಐರಾವತವೆಂದು ಕರೆದನು. ಆ ಪಟ್ಟದ ಕುದುರೆಗೆ ಉಚ್ಚೈಶ್ರವಸ್ಸೆಂದು ಹೆಸರಿಟ್ಟನು. ತನ್ನ ಸಭೆಗೆ ಸುಧರ್ಮ ಎಂಬ ನಾಮವನ್ನಿಟ್ಟನು- ತನ್ನ ತಿಂಡಿತೀರ್ಥಗಳಿಗೆ ಅಮೃತವೆಂದು ಸಂಕೇತಮಾಡಿದನು. ತನ್ನ ವನಕ್ಕೆ ನಂದನವನವೆಂದು ಹೆಸರಿಟ್ಟನು. ತನ್ನ ಗಾಯಕರಿಗೆ ತುಂಬುರ ನಾರದರೆಂದು ಹೆಸರಿಟ್ಟನು. ತನ್ನ ಪಟ್ಟಸ್ತ್ರೀಗೆ ಇಂದ್ರಾಣಿಯೆಂದು ಹೆಸರನ್ನೂ ಸಹ ಇಟ್ಟನು. ತನ್ನ ಸೇವಾಜನಗಳಿಗೆ ಲೋಕಪಾಲಕರೆಂದೂ ಹೆಸರನ್ನು ಇಟ್ಟನು. ತನ್ನ ಸೇನೆಗೆ ದೇವಸೇನೆಯೆಂದು ಹೆಸರಿಟ್ಟನು. ತನ್ನ ಅಸ್ತ್ರಕ್ಕೆ ಕುಲಿಶವೆಂದಿಟ್ಟನು- ತನ್ನ ಮಂತ್ರಿಗೆ ಬೃಹಸ್ಪತಿ ಎಂದು ಹೆಸರಿಟ್ಟನು- ಪುರೋಹಿತರಿಗೆ ಅಶ್ವಿನ್ಯಾದ್ಯಷ್ಟವಸುಗಳೆಂದಿಟ್ಟನು. ತನ್ನ ಉಪವನಕ್ಕೆ ಖಾಂಡವನವೆಂದನು. ಹೀಗೆ ದೇವೇಂದ್ರನೇ ತಾನೆಂಬ ಭಾವನೆಮಾಡಿಕೊಂಡು, ಎಲ್ಲಾ ಖಗರಿಂದಲೂ ಕಪ್ಪಗಳನ್ನು ತೆಗೆದುಕೊಳ್ಳುತ್ತಾ ತನ್ನನ್ನು ಇಂದ್ರನೆಂತಲೇ ಕರೆಯಬೇಕೆಂತ ಕಟ್ಟಪ್ಪಣೆಮಾ

ಡಿದನು. ಈತನು ರಾಕ್ಷಸರೆಂಬ ಅನುಜರನ್ನು ತನಗೆ ಶತ್ರುಗಳೆಂದು ಹೇಳಿಕೊಳ್ಳುತ್ತಿದ್ದನು. ಈ ವರ್ತಮಾನವು ಲಂಕೆಯ ರಾಜನಾದ ಮಾಲಿಯ ಕಿವಿಗೆ ಮುಟ್ಟಲು ಅವನು ಇವನ ಸೊಕ್ಕನ್ನು ಮುರಿಯ ಬೇಕೆಂತ ತನ್ನ ದಂಡನ್ನು ಕಿಷ್ಕಿಂಧಾತ್ಮಜರ ಸಹಾಯವನ್ನು ಕೂಡಿಕೊಂಡು ಅಮರಾವತಿ ಎಂಬನೂತನ ಹೆಸರು ಪಡೆದುಕೊಂಡಿದ್ದ ರಥನೂಪುರ ಚಕ್ರವಾಳಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಈ ಸಮಾಚಾರವನ್ನು ಆ ಪಟ್ಟಣದ ರಾಜನಾದ ಇಂದ್ರನು ಕೇಳಿ ಗುಡಿಗುಡಿಸಿ ರೇಗಿ ತನ್ನ ಬಲದಿಂದ ಈ ರಾಕ್ಷಸರನ್ನು ಜಯಿಸಿ ಇವರನ್ನು ಓಡಿಸಿಬಿಟ್ಟನು. ಅಷ್ಟರಲ್ಲಿ ಸುಮ್ಮನಿರದೆ ಲಂಕಾಪುರಿಯವರಿಗೂ ಬಂದು ಲಂಕಾಪಟ್ಟಣಕ್ಕೆ ತನ್ನ ಕಡೆಯವನಾದ ಯಕ್ಷಪುರದ ಅರಸನಾದ ವಿಶ್ವಾವಸು ಎಂಬ ರಾಜನ ಪತ್ನಿ ರೋಹಿಣಿಗೆ ಸುತನಾದ ವೈಶ್ರವಣನೆಂಬುವನನ್ನು ರಾಜನನ್ನಾಗಿ ನಿಲ್ಲಿಸಿ ಆತನಿಗೆ ಪಟ್ಟವನ್ನು ಕಟ್ಟಿದನು. ಮತ್ತು ಕಿಷ್ಕಿಂಧಿಗೆ ಬಂದು ತನ್ನ ಒಬ್ಬ ಸೇನಾ ನಾಯಕನಾದ ಯಮನೆಂಬ ಸಾಮಂತನನ್ನು ದೊರೆಯಾಗಿ ಮಾಡಿದನು.

ಈ ಮಾಲಿ ಸುಮಾಲಿ ಮೊದಲಾದ ರಾಕ್ಷಸರು ಪಾತಾಳಲಂಕೆಯನ್ನು ಸೇರಿದರು- ಸುಮಾಲಿಯ ನಲ್ಲೆಯಾದ ಪ್ರೀತಿಮತಿಗೆ ವಿಷಕಂಠನೆಂಬ ರಾಕ್ಷಸನು ಹುಟ್ಟಿದನು. ಆತನು ಪರಿಶುದ್ಧವಾದ ವಿದ್ಯವನ್ನು ಸಾಧಿಸಬೇಕೆಂದು ಶುಭದಿನದಲ್ಲಿ ಪುಷ್ಪೋತ್ತರವೆಂಬ ಅಡವಿಯಲ್ಲಿ ಪಂಚಪರಮೇಷ್ಠಿಗಳನ್ನು ಆರಾಧಿಸುತ್ತಾ ಸಹಸ್ರಕೂಟಚೈತ್ಯಾಲಯದ ಪ್ರಾಕಾರದಲ್ಲಿ ವ್ರತಾದಿಷ್ಟಿತನಾಗಿ ಪೌಲಸ್ತ್ಯವಿದ್ಯೆಯನ್ನು ಸಾಧನೆಮಾಡಿದನು. ಖಗಸ್ತ್ರೀಯರುಗಳು ದರ್ಶನಾರ್ಥವಾಗಿ ಬರುತ್ತಲಿದ್ದರು. ಈತನು ವಿದ್ಯಾಸಾಧನೆಯಲ್ಲಿ ತತ್ಪರನಾಗಿದ್ದನು ಅತ್ತಲೂ ವಿಜಯಾರ್ಧಪರ್ವತದ ಮಂಗಳನಗರದ ಅಧಿಪತಿಯಾದ ಬೋಮಭಾನು ಎಂಬುವನಿಗೆ ಮುದ್ದುಸತಿಯಾದ ಕಲ್ಯಾಣಿಎಂಬುವಳಿಗೆ ರತಿಯನ್ನು ಧಿಕ್ಕಾರಮಾಡುವ ರೂಪುಳ್ಳ ಕೈಕೆಯೆಂಬ ಮಗಳಿದ್ದಳು- ಆಕೆಯು ನವಯೌವ್ವನಭರಿತಳಾಗಲು ಈಕೆಗೆ ವರನನ್ನು ಹುಡುಕಬೇಕೆಂದು ಯೋಚಿಸಿ ಚಾರಣ ಮಹರ್ಷಿಗಳ ಸನ್ನಿಧಿಗೆ ಬಂದು ನಮುಸ್ಕರಿಸಿ ತನ್ನ ಪುತ್ರಿಗೆ ವರನು ಯಾರಾಗುವನೆಂತ ಬೇಡಿಕ್ಕೊಳ್ಳಲು, ಮಹರ್ಷಿಗಳು ಅಪ್ಪಣೆ ಕೊಡಿಸಿದ್ದೇನೆಂದರೆ— ಪಾತಾಳಲಂಕೆಯವತ್ತಿನಲ್ಲಿರುವ ಪುಷ್ಪೋತ್ತರಅಡವಿಯಲ್ಲಿ ಕಣ್ಗೊಳಿಸುವ ಸಹಸ್ರಕೂಟಚೈತ್ಯಾಲಯದ ಬಹಿರಂಗಣವಲ್ಲಿ ವ್ರತಾದಿಷ್ಟನಾಗಿರುವ ಪುರು

ಷನು ವರನಾಗುವನೆಂದುಹೇಳಲು, ಆತನು ಅಲ್ಲಿಗೆಹೋಗಿ ಆವಿಷಕಂಠನನ್ನು ಕಂಡು ಉಪಚಾರೋಕ್ತಿಯಿಂದ ತನ್ನಪುರಕ್ಕೆ ಕರೆದುಕೊಂಡುಬಂದು ಆತನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು. ಮತ್ತು ಅಳಿಯನಾದ ಈತನಿಗೆ ಅನೇಕ ವಿದ್ಯೆಗಳನ್ನು ಕೊಟ್ಟು ಸಹಾಯಮಾಡಿದನು. ಆ ವಿಷಕಂಠಪೌಲಸ್ತ್ಯನು ವಿದ್ಯಾಬಲದಿಂದ ಆಶ್ಚರ್ಯಕರವಾದ ಒಂದುಪಟ್ಟಣವನ್ನು ಆ ವನದಲ್ಲಿ ನಿರ್ಮಿಸಿದನು. ಅಲ್ಲಿಗೆ ತನ್ನ ತಂದೆತಾಯಿಗಳನ್ನು ಬರಮಾಡಿಕೊಂಡು ತಾನು ಒಲಿಸಿದ ಕೈಕೆಯನ್ನು ತೋರಿಸಿ ಅವರ ಅಪ್ಪಣೆಯನ್ನು ಪಡೆದು ಅಲ್ಲೇ ಸೌಖ್ಯವಾಗಿದ್ದನು. ಹೀಗಿರಲಾಗಿ ಕೈಕೆಯ ಅಗ್ರಜನಾದ ಭಾನುಕುಮಾರನು ತಂಗಿಯನ್ನು ನೋಡಬೇಕೆಂದು ಅಲ್ಲಿಗೆ ಬರಲು ಈ ಪೌಲಸ್ತ್ಯನು ಮರ್ಯಾದೆಯಿಂದ ಬರಮಾಡಿಕೊಂಡು ಆತನನ್ನು ಸತ್ಕರಿಸಿ ರಾಕ್ಷಸವಿದ್ಯಾಸಾಧನೆಯನ್ನು ಆತನಿಗೆ ತಿಳಿಸಿ ತನ್ನ ಪಾತಾಳಲಂಕೆಯಲ್ಲಿ ಆತನನ್ನು ಇಟ್ಟು ಆತನಿಗೆ ಮದುವಾಣಿಯೆಂಬ ಮಾನಿನಿಯನ್ನು ಮದುವೆ ಮಾಡಿದನು. ಆತನು ಆಪಟ್ಟಣದಲ್ಲಿ ಸತಿಯೊಡನೆ ರಾಕ್ಷಸಾಖ್ಯವನ್ನು ಹೊಂದಿ ಸುಖವಾಗಿದ್ದನು.

ಪೌಲಸ್ತ್ಯನ ರಾಣಿಯಾದ ಕೈಕೆಯು ಒಂದಾನೊಂದು ಋತುಸ್ನಾನಾನಂತರ ರಾತ್ರಿಯಲ್ಲಿ ರಾಜನೊಡನೆ ಸಂಭೋಗದಲ್ಲಿದ್ದು ನಿದ್ರಾಪರವಶಳಾಗಿ ಕೊನೆಯರುಝಾವದಲ್ಲಿ ಶುಭಸ್ವಪ್ನವನ್ನು ಕಂಡು ಎಚ್ಚೆತ್ತು ನಿತ್ಯಾನುಷ್ಠಾನವನ್ನು ಮಾಡಿದ ನಂತರ ಪೌಲಸ್ತ್ಯನ ಬಳಿಗೆ ಬಂದು ತಾನು ಕಂಡ ಸ್ವಪ್ನವನ್ನು ತಿಳಿಸಿದಳು. ರಾಜನಾದ ಪೌಲಸ್ತ್ಯನು ಈ ಸ್ವಪ್ನಗಳನ್ನು ಲಾಲಿಸಿ ರಾಣಿಗೆ ಸಂತೋಷದಿಂದ, "ಎಲೈ ರಾಣಿಯೇ ನಿನಗೆ ಸುಪುತ್ರನು ಜನಿಸುವನು. ಆತನು ಭರತಖಂಡತ್ರಯಕ್ಕೆ ಚಕ್ರವರ್ತಿಯಾಗುವನು" ಎಂದು ಹೇಳಲು, ರಾಣಿಯು ಆಹ್ಲಾದಿತಳಾಗಿ ಸ್ವಸ್ಥಾನಕ್ಕೆ ತೆರಳಿದಳು. ಆಕೆಯು ಕ್ರಮವಾಗಿ ಗರ್ಭದಿಂದಕೂಡಿ ಒಂಭತ್ತುತಿಂಗಳು ಒಂಭತ್ತು ದಿವಸ ಕಳೆದ ಮರುದಿನವೇ ಸುಪುತ್ರನನ್ನು ಹಡೆದಳು. ಅದು ಸಿಂಹಲಗ್ನದ ಶುಭ ಷಡ್ವರ್ಗದಲ್ಲಿ ಕೂಡಿದ ಲಗ್ನದವೇಳೆಯಾಗಿತ್ತು. ಪೌಲಸ್ತ್ಯನು ಪರಿಜನದೊಡನೆ ಜಾತಕರ್ಮವನ್ನು ಮಾಡಿ ೧೨ನೇ ದಿವಸ ಸಹಸ್ರನಾಮಪೂಜೆಯನ್ನು ದೇವರಿಗೆಮಾಡಿಸಿ ಆತನಿಗೆ ಅನ್ವರ್ಥವಾದ ದಶಕಂಠನೆಂಬ ಹೆಸರನ್ನು ಇಟ್ಟನು. ಆತನು ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ಅಭಿವೃದ್ಧಿಯಾಗುತ್ತಾ ಇರಲಾಗಿ ಆತನಿಗೆ ಭಾನುಕರ್ಣನೆಂಬ ಸಹೋದರನಾದನು. ಅನಂತರ ಆತನಿಗೆ ಚಂದ್ರನಖಿ ಎಂಬ ಸಹೋ

ದರಿಯು ಹುಟ್ಟಿದಳು. ಈದಶಕಂದರನಿಗೆ ಮೂರನೇ ಸಹೋದರನಾಗಿ ವಿಭೀಷಣನೆಂಬುವನು ಆದನು. ಈ ದಶಕಂದರನಿಗೆ ಪ್ರತಾಪ ಮಹಿಮೆಯಿಂದ ರಾವಳ ಅಥವಾ ರಾವಣನೆಂಬ ಹೆಸರೂ ಸಹ ಆಯಿತು.

ಈ ಸಹೋದರರುಗಳು ಪ್ರಭುಮಂತ್ರೋತ್ಸಾಹ ಶಕ್ತಿಗಳಂತೆ ಪರಸ್ಪರವಾಗಿ ಹೊಂದಿಕೊಂಡು ಶಾಸ್ತ್ರಾಭ್ಯಾಸವನ್ನು ಬಾಲ್ಯದಲ್ಲಿ ಮಾಡಿ ಅಸ್ತ್ರಶಸ್ತ್ರ ವಿದ್ಯಗಳಲ್ಲಿ ಕುಶಲರಾಗಿರುತ್ತಿರಲು ಒಂದಾನೊಂದು ದಿನ, ಕೇಳುವುದಕ್ಕೆ ಆನಂದವಾದ ನಾದವಿಶೇಷದಿಂದ ಕೂಡಿ ಹಸ್ತಪತಾಕಪಲ್ಲವದಂತೆ ಪುಷ್ಪಕ ವಿಮಾನದಲ್ಲಿ ವೈಶ್ರವಣನು ಇಂದ್ರನಂತೆ ಭೂಷಣನಾಗಿ ಲಂಕೆಗೆ ಬರುತ್ತಿರುವುದನ್ನು ಈ ದಶಗ್ರೀವಾದಿಗಳು ನಿರೀಕ್ಷಿಸಿ ಈತನ್ಯಾರೆಂದು ತಾಯಿಯನ್ನು ಕೇಳಲಾಗಿ ಆ ಕೈಕೆಯು ಮಕ್ಕಳಿಗೆ ಹೇಳತೊಡಗಿದಳೇನೆಂದರೆ–ವಿಜಯಾರ್ಧ ಪರ್ವತದ ಉತ್ತರ ಶ್ರೇಣಿಯ ರಥನೂಪುರದ ಅಧಿಪತಿಯಾದ ಇಂದ್ರನೆಂಬ ಖೇಚರನು ತ್ರೈಖಂಡ ಚಕ್ರವರ್ತಿಯಂತೆ ಆವಿರ್ಭವಿಸಿ ನಿಮ್ಮ ಮುತ್ತೈಯ್ಯನಾದ ಮಾಲಿಯೆಂಬ ರಾಜನನ್ನು ಲಂಕೆಯಿಂದ ಓಡಿಸಿ ಈವೈಶ್ರವಣನನ್ನು ಲಂಕೆಗೆ ರಾಜನನ್ನಾಗಿ ಮಾಡಿಟ್ಟನು. ಆ ಮೊದಲುಗೊಂಡು ಈ ಇಂದ್ರನ ಭಯಕ್ಕಾಗಿ ನಮ್ಮ ವಂಶೀಕರು ಹೆದರಿ ಈ ಪರಿಯಲ್ಲಿ ಇರುವೆವೆಂದು ಕಣ್ಣುನೀರನ್ನು ಸುರಿಸುತ್ತಾ ವ್ಯಸನದಿಂದ ಹೇಳಲಾಗಿ ಈವಿವರಗಳನ್ನೆಲ್ಲಾ ದಶಾನನನು ಕೇಳಿ ಬಹಳ ಕೋಪದಿಂದುರಿದು ಈ ಕ್ಷಣ ಇಂದ್ರನನ್ನು ಜಯಿಸಿ ನಮ್ಮ ವಂಶೀಕರ ಪುರಾತನ ಪಟ್ಟಣದಲ್ಲಿ ನಾವು ನೆಲಗೊಳ್ಳಬೇಕೆಂದು ಆರ್ಭಟಿಸುತ್ತಿರಲು, ಕಿರಿಯ ತಮ್ಮನಾದ ವಿಭೀಷಣನು ಈತನ ಮಹತ್ತರವಾದ ಕೋಪವನ್ನು ನೋಡಿ ನಾವು ಕಾಲವನ್ನು ನಿರೀಕ್ಷಿಸಿ ತಕ್ಕ ಸನ್ನಾಹದಿಂದ ಶತ್ರುಗಳನ್ನು ಗೆಲ್ಲಬೇಕೇ ಹೊರತು ಕೋಪದಿಂದ ಮುಂದರಿದದ್ದೇ ಆದರೆ ನಮಗೆ ಬಹಳ ಕೇಡಾಗಬಹುದೆಂದು ಶಾಂತವಚನದಿಂದ ಸ್ವಾಂತಗೊಳಿಸಲು ದಶಕಂಠನು ಕರ್ತವ್ಯತೆಯನ್ನು ಯೋಚಿಸಿ ವಿದ್ಯಾಬಲವನ್ನು ಹೊಂದಬೇಕೆಂದು ತಮ್ಮ ವಂಶಾನುಗತವಾಗಿ ಬಂದಿದ್ದ ವಿದ್ಯಗಳನ್ನು ಸಾಧಿಸಬೇಕೆಂದು ಪಿತ ಪಿತಾಮಹರಿಗೆ ಮತ್ತು ಮಾತೃವಿಗೆ ಭಯಭಕ್ತಿಯಿಂದ ನಮಸ್ಕರಿಸಿ ವಿದ್ಯಾಸಾಧನಾರ್ಥವಾಗಿ ಅಪ್ಪಣೆಯನ್ನು ಪಡೆದು, ವಿದ್ಯಾಪರ್ವತಕ್ಕೆ ಶುಭ ದಿನ ಬಂದು ವಿದ್ಯಾತಪಸ್ಸನ್ನು ಮಾಡಲುಪಕ್ರಮಿಸಿದನು. ಅಲ್ಲಿದ್ದ ಭೂತ ಪಿಶಾಚಗಳು ಈತನ ತಪೋಭಂಗಕ್ಕೆ ವಿಘ್ನಮಾಡಿದರು. ಅದನ್ನು ಗಣನೆಗೆತರದೆ ಶುದ್ಧ ಶಿಲಾತಲದಲ್ಲಿ

ಪಲ್ಯಂಕಾಸನದಿಂದ ಕೂತುಕೊಂಡು ಮುನಿಗಳಂತೆ ನಾಸಿಕಾಗ್ರದಲ್ಲಿ ದೃಷ್ಟಿಯನ್ನಿಟ್ಟು ಸರ್ವಾರ್ಥಚಿಂತಾಮಣಿ ಎಂಬ ಮಹಾ ವಿದ್ಯೆಯನ್ನು ಸಾಧಿಸಲು ಅನುವಾದನು. ಯಾವಾಗಲೂ ಪಂಚಪರಮೇಷ್ಠಿಗಳನ್ನು ಮನದಲ್ಲಿ ತ್ರಿಕಾಲದಲ್ಲೂ ಧ್ಯಾನಿಸುತ್ತಾ ದಶಕೋಟಿ ಮಂತ್ರದ ಪುನಶ್ಚರಣೆಯನ್ನು ಮಾಡಲು ಮಂತ್ರಾಧೀನವಾದ ದೇವತೆಯು ಪ್ರತ್ಯಕ್ಷವಾಗಿ ಆತನಿಗೆ ಅಜೇಯವಾದ ಚಂದ್ರಹಾಸವನ್ನು ಮತ್ತು ಮಂತ್ರಾಸ್ತ್ರಗಳನ್ನು ನವನಿಧಿ ನಿಕ್ಷೇಪಗಳನ್ನು ದಯಪಾಲಿಸಿತು. ಈ ವಿದ್ಯವನ್ನೂ ಐಶ್ವರ್ಯವನ್ನು ದಶಕಂಠನು ಪಡೆದುಕೊಂಡು ಸ್ವಯಂಪ್ರಭೆಯೆಂಬ ತನ್ನ ಪಟ್ಟಣಕ್ಕೆ ಬಂದು ತನ್ನ ಬಂಧುಬಳಗದೊಡನೆ ಕೂಡಿ ಇತರ ರಾಜರುಗಳನ್ನು ಭುಜಬಲದಿಂದ ಸೋಲಿಸುತ್ತಾ ಮುಕ್ತಿಶ್ರೀರಮಣನಾದ ಜಿನೇಶ್ವರನ ಪಾದಕಮಲಗಳನ್ನು ನೆನೆಯುತ್ತಿದ್ದನು.

ರಾವಣನು ರಾಜ್ಯಸಾಧಿಸುವುದು.

ಎಲೈ ಶ್ರೇಣಿಕಮಹಾರಾಜನೇ ದಶಕಂಠಚಕ್ರಿಯು ವೈರಿಗಳನ್ನು ಗೆದ್ದು ರಾಜ್ಯಸಂಪಾದಿಸಿದ ಕ್ರಮವೇನೆಂದರೆ ಕೇಳುವನಾಗು— ಧರಣಿಪತಿಯಾದ ದಶಕಂದರನು ತನ್ನ ಬಾಂಧ್ವೀಕರನ್ನು ಸ್ವಯಂಪ್ರಭಾ ಪಟ್ಟಣದಲ್ಲಿ ಕೂಡಿ ಅನೇಕ ಕೋಟಿ ಧನುಜರನ್ನು, ರಥಗಜಹಯಖಗಾವಳಿಗಳನ್ನು ಕೂಡಿಸುತ್ತಾ ಅನೇಕ ಬಿರುದಾವಳಿಗಳನ್ನು ಹೊಂದುತ್ತಾ ಇರಲಾಗಿ, ಸಂಗೀತಪುರದ ಅರಸನಾದ ಮಯನೆಂಬ ದೊರೆಯು ತನ್ನ ಪಟ್ಟಸ್ತ್ರೀಯಾದ ಚಂಡೋದರಿಯ ಉದರದಲ್ಲಿಜನಿಸಿದ ಮಂಡೋಧರಿಯ ಗಂಡನು ಯಾರಾಗ ಬಹುದೆಂದು ಜ್ಯೋತಿಷ್ಕರಲ್ಲಿ ಪ್ರಶ್ನೆಮಾಡಿ ಅವರಿಂದ ದಶಕಂಠನು ಆಕೆಗೆ ವರನೆಂದು ನಿಶ್ಚಯಿಸಿ, ಆಮಯಮಾರೀಚನು ವಿಮಾನದಲ್ಲಿ ಮಂಡೋಧರಿ ಸಹಿತನಾಗಿ ದಶಕಂಠನ ಪುರವಾದ ಸ್ವಯಂಪ್ರಭಪಟ್ಟಣಕ್ಕೆ ಆಗಮಿಸಿದನು. ಇದನ್ನು ದಶಕಂದರನು ತಿಳಿದು ಮಾರೀಚಾದಿಗಳನ್ನು ಸನ್ಮಾನಿಸಿ ಪುರದಲ್ಲಿ ಶುಭ ದಿವಸ ಮಂಡೋಧರಿಯ ವಿವಾಹವನ್ನು ಮಾಡಿಕೊಂಡನು. ಮತ್ತು ಮಾವನಾದ ಮಾರೀಚನಿಗೆ ಮಂತ್ರಿಪದವಿಯನ್ನೂ ದಳಪತಿತ್ವವನ್ನೂ ವಹಿಸಿದನು. ಹೀಗೆ ಕೆಲವು ದಿವಸ ಕಳೆದು ವಿಮಾನಾರೂಢನಾಗಿ ಆಕಾಶದಲ್ಲಿ ಹೋಗುತ್ತಾ ಮೇರುಶೃಂಕಲವೆಂಬ ಪಟ್ಟಣದ ಉಪವನದಲ್ಲಿ ಪದ್ಮಸರೋವರದೊಳಗೆ ಪದ್ಮಕುಮಾರಿ, ವಿದ್ಯುತ್ಪ್ರಭೆ, ಅಶೋಕೆ ಎಂಬುವರೇ ಮೊದಲಾದ ಸಾಸಿರಕನ್ಯಾಮಣಿಗಳು ನೀರಕೇ

ಳಿಯಲ್ಲಿ ಇರುತ್ತಿರಲು ಆಗ ದಶಕಂಠನು ಆ ಸರೋವರಕ್ಕೆ ಬಂದು ಸ್ವಲ್ಪ ಹೊತ್ತು ನಿಲ್ಲಲಾಗಿ ಆಸ್ತ್ರೀಯರು ಈತನನ್ನು ನೋಡಿ ವ್ಯಾಮೋಹಿತರಾಗಲು ಅವರುಗಳ ಬಂಧುಗಳು ಗಾಂಧರ್ವವಿವಾಹವನ್ನು ಮಾಡಿಕೊಳ್ಳಲು ಸಂಮತಿಸಲು ಈ ವಾರ್ತೆಯನ್ನು ಅವರ ತಂದೆಯಾದ ಸುರಸುಂದರನಿಗೆ ಚರರಮೂಲಕತಿಳಿದುಬರಲು ಆತನು ಕನಕಮಾಲೆಯೆಂಬ ಸ್ತ್ರೀಯೊಡನೆ ಕೂಡಿ ಕೋಪದಿಂದ ಈತನ ಮೇಲೆ ವೈರವನ್ನು ಸಾಧಿಸಲು ಯುದ್ಧಸನ್ನದ್ಧನಾಗಲು ದಶಕಂಠನು ಇದನ್ನು ತಿಳಿದು ಆ ಸುರಸುಂದರ ಮೊದಲಾದವರುಗಳನ್ನು ತಾನು ಸಾಧಿಸಿದ್ದ ನಾಗಪಾಶದಿಂದ ಬಿಗಿದನು. ಅನಂತರ ಸುರಸುಂದರನು ಕನಕಮಾಲೆಯೊಡನೆ ಕೂಡಿ ತನ್ನ ಕುಮಾರಿಯರುಗಳನ್ನು ಧಾರಾಪೂರ್ವಕವಾಗಿ ದಶಕಂಠನಿಗೆ ಪಾಣಿಗ್ರಹಣ ಮಾಡಿಕೊಟ್ಟನು. ದಶಕಂಠನು ಸತಿಮಣಿಯರುಗಳನ್ನು ಕೂಡಿಕೊಂಡು ಸ್ವಂತಪಟ್ಟಣಕ್ಕೆಬಂದು ಮಾತಾ ಪಿತೃಗಳಿಗೆ ವಂದಿಸಿ ಸುಖವಾಗಿರುತ್ತಾ, ತನ್ನ ತಮ್ಮನಾದ ಭಾನುಕರ್ಣನಿಗೆ ವಿವಾಹಮಾಡಬೇಕೆಂದುದ್ದೇಶಿಸಿ ವಿದ್ಯಾಗಿರಿಯ ಮೇಲಿರುವ ಕುಂಭಪುರದ ಅರಸನಾದ ಮಂದಶಕ್ತಿಮಹೋದರನ ಸತಿ ಸುಂದರಾಂಗಿಗೆ ಒಳ್ಳೇ ರೂಪಿನಿಂದ ಹುಟ್ಟಿದ ವಿದ್ಯುದ್ವೇಗೆಯೆಂಬ ಕನ್ಯಾಮಣಿಯನ್ನು ಬೇಡಿಕೊಂಡು ತಂದು ಭಾನುಕರ್ಣನಿಗೆ ವಿವಾಹಮಾಡಿದನು. ಭಾನುಕರ್ಣನು ಕುಂಭಪುರದ ಲಕ್ಷ್ಮಿಗೆ ಅನುಗತನಾದ್ದರಿಂದ ಕುಂಭಕರ್ಣನೆಂಬ ಮತ್ತೊಂದು ನಾಮವನ್ನು ಹೊಂದಿದನು. ದಶಕಂಠನು ನವಯೌವ್ವನರೂಢನಾದ ತನ್ನ ಅನುಜಾತೆಯಾದ ಮಾನಿನಿಮಣಿ ಚಂದ್ರನಖಿಗೆ ವಿವಾಹ ಮಾಡಬೇಕೆಂದು ಎಣಿಸಿ ವರನನ್ನು ಹುಡುಕುತ್ತಿದ್ದನು. ಮತ್ತು ಕಿರಿಯನಾದ ವಿಭೀಷಣನಿಗೆ ವಿವಾಹಮಾಡಲು ಉದ್ಯುಕ್ತನಾಗಿ ಜ್ಯೋತಿಷ್ಪ್ರಭೆಯ ನಗರದ ರಾಜನಾದ ಮಂಗಳನ ಸತಿಯಾದ ಅನಂಗಮಾಲೆಗೆ ಸುತಳಾದ ರಾಜೀವಸರಸಿಯೆಂಬ ಕನ್ಯಾರತ್ನವನ್ನು ಬೇಡಿತಂದು ವಿಭೀಷಣನಿಗೆ ಸ್ವಯಂಪ್ರಭಾನಗರದಲ್ಲಿಯೇ ವಿವಾಹವನ್ನು ಮಾಡಿ ಸುಖದಲ್ಲಿದ್ದನು.

ಎಲೈ ಶ್ರೇಣಿಕಮಹಾರಾಜನೇ ಲಂಕೆಯ ವರ್ಣನೆಯನ್ನು ಮತ್ತು ದಶಕಂಠನ ಮುತ್ತಜ್ಜನಾದ ಮಾಲಿಯ ಪರಾಭವವನ್ನು ಹೇಗೆ ಹಗೆಮಾಡಿ ಲಂಕೆಯನ್ನು ಗೆದ್ದನೆಂಬುದನ್ನು ಕೇಳುವವನಾಗು—ದಶಕಂಠನು ಮಾಲಿಯ ಪಟ್ಟಣದ ಐಶ್ವರ್ಯಕ್ಕೆ ಮನಸೋತು, ವೈಶ್ರವಣನು ರಾಜನಾದದ್ದಕ್ಕೆ ಮನದೊಳು ಬಹಳವಾಗಿ ಅನುತಾಪಪಟ್ಟು ಬಹಳವಾದ ರಾಕ್ಷಸರ ಬಲಗಳನ್ನು ಕೂಡಿ

ಕೊಂಡು ಅನೇಕ ದಂಡುದಾಳಿ ಸಹಿತ ಆ ಪಟ್ಟಣಕ್ಕೆ ಮುತ್ತಿಗೆಯಿಟ್ಟನು. ಈ ವರ್ತಮಾನವನ್ನು ವೈಶ್ರವಣನು ಅನುಚರರಿಂದ ತಿಳಿದು ದಶಕಂಠನಬಲಕ್ಕೆ ಎದುರಾಗಿ ಸೈನ್ಯಗಳನ್ನು ನಿಲ್ಲಿಸಿ ಯುದ್ಧಕ್ಕೆ ಅನುವಾದನು. ಈ ಇಬ್ಬರಿಗೂ ಯುದ್ಧಗಳು ಸ್ವಲ್ಪಹೊತ್ತು ನಡೆದು ಧನುಜೇಂದ್ರನಾದ ದಶಕಂಠನ ಮುಂದೆ ವೈಶ್ರವಣನು ನಿಲ್ಲಲಾರದೆ ತಡೆವಡಿಸಿ ದಶಕಂಠನ ಬಾಣದ ಏಟಿಗೆ ಸೊಕ್ಕಿ ಮೂರ್ಛೆಹೋಗಲು ಈ ವೈಶ್ರವಣನನ್ನು ಆತನ ಪುಷ್ಪಕವಿಮಾನದಲ್ಲಿ ಇಟ್ಟು ಆತನ ಸ್ವಂತಪುರಿಯಾದ ವಿಜಯಾರ್ಧ ಗಿರಿಯಲ್ಲಿರುವ ಪಟ್ಟಣಕ್ಕೆ ಆತನ ಆಪ್ತರು ತೆಗೆದುಕೊಂಡು ಹೋದರು. ಅನಂತರ ವೈಶ್ರವಣನು ಈ ತಿರಸ್ಕಾರ ವನ್ನು ನೆನೆದು ವೈರಾಗ್ಯವನ್ನು ಹೊಂದಿ ತಪೋರಾಜ್ಯಕ್ಕೆ ಅನುವಾದನು.

ದಶಕಂಠನು ತನ್ನಪ್ರಪಿತಾಮಹಾರಾಜ್ಯವಾದ ಲಂಕೆಗೆ ಹೊಕ್ಕು ಬಂದು ಪರಿಜನಪುರಜನರೊಡನೆ ಲಂಕೆಯಲ್ಲಿ ವಾಸಮಾಡುತ್ತಿದ್ದನು. ಅನಂತರಒಂದು ದಿವಸ ಮತ್ತೊಂದು ಕಡೆಗೆ ವಿಜಯಕ್ಕೆ ಹೊರಡಬೇಕೆಂದು ದಶಕಂಠನು ಯೋಚಿಸಿ ವಿಜಯಯಾತ್ರೆಯನ್ನು ಬೆಳೆಸುತ್ತಾ ದಕ್ಷಿಣಸಿಂಧುವೇಳಾನಿವಾಸದ ರಾಜರುಗಳಿಂದ ಕಪ್ಪಕಾಣಿಕೆಗಳನ್ನುಹೊಂದಿ, ಹಸ್ತಪ್ರಹಸ್ತರೆಂಬ ಮಂತ್ರಿಗಳಿಂದ ಕೂಡಿಕೊಂಡು ಬಹುಬಲದಿಂದ ಸೇನಾನಾಯಕರಾದ ಮಾರೀಚಾದಿಗಳನ್ನೊಡಗೊಂಡು ವಿಮಾನದಲ್ಲಿ ಕೂತು ಬಡಗಣದಿಕ್ಕನ್ನು ಸಾಧಿಸಬೇಕೆಂದು ಉತ್ತರದಲ್ಲಿರುವ ರಾಜ್ಯಾಧಿಪತಿಗಳಿಂದ ಕಪ್ಪ ಕಾಣಿಕೆಗಳನ್ನು ಹೊಂದಿ, ಖೇಚರಲೋಕಕ್ಕೆ ಹೋಗಿ ಅವರನ್ನು ಜಯಿಸಿ ಅವರಿಂದಲೂ ನಮಸ್ಕರಿಸಿಕೊಳ್ಳಲ್ಪಟ್ಟವನಾಗಿ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಬರುತ್ತಾ ಕೈಲಾಸಪರ್ವತ ಮತ್ತು ಸಂಮೇಧಶಿಖರಿಗಳ ಮಧ್ಯಭಾಗದಲ್ಲಿರುವ ದೇವದಾರುವೃಕ್ಷದ ವನ ಪ್ರದೇಶದಲ್ಲಿ ಬಲಸಹಿತ ಇಳಿದುಕೊಂಡಿರಲು, ಈತನ ಬಲವನ್ನು ನೋಡಿ, ರಾಜಾಧಿರಾಜರೆಲ್ಲ ಈತನು ಮಹಾನುಭಾವನೆಂತಲೂ ಶರಣಾಗತರಾಗುತ್ತಲಿದ್ದರು. ಅಲ್ಲಿಂದ ಹೊರಟು ಬರುತ್ತಾ ದಾರಿಯಲ್ಲಿ ಒಂದು ಮದದಾನೆಯು ಕೂಗುತ್ತಾ ಬರುತ್ತಿರಲು ಅದನ್ನು ದಶಕಂಠನು ನೋಡಿ ಈ ಪರ್ವತಾಕಾರವಾದ ನೀಲಪರ್ವತದೋಪಾದಿಯಲ್ಲಿರುವ ಶುಭಲಕ್ಷಣವುಳ್ಳ ಮದಗಜವನ್ನು ನೋಡಿ ಸಂತೋಷಪಟ್ಟು ಈ ಗಜವು ಪಟ್ಟವರ್ಧನಕ್ಕೆ ಅಂದರೆ ಪಟ್ಟದಾನೆಗೆ ಯೋಗ್ಯವಾಗಿದೆ ಎಂದು ತನ್ನ ಶಿಬರಕ್ಕೆ ಅದನ್ನು ತೆಗೆದುಕೊಂಡು ತ್ರಿಜಗದ್ಭೂಷಣವೆಂಬ ಹೆಸರನ್ನು ಆ ಆನೆಗಿಟ್ಟನು. ಆ ಸಮಯದಲ್ಲಿ ರಕ್ತಬಿಂದುಗಳಿಂದ

ಕೂಡಿರುವಂತೆ ತೋರಿಬರುವ ರಕ್ತವರ್ಣದ ಆಕಾರವುಳ್ಳ ರೂಕ್ಷಜನರನ್ನು ನೋಡಿದನು. ಅವರು ವಾನರಧ್ವಜಯುಕ್ತರಾಗಿದ್ದರು. ಇವರು ಪಾತಾಳಲಂಕೆ ಯವಂಶಕ್ಕೆ ಅನುಪಟ್ಟ ಕಿಷ್ಕಿಂಧಪರ್ವತದ ಮೇಲಿದ್ದ ಯಮನೆಂಬಸಾಹಸಿಯು ಬಲವಾಗಿತ್ತು. ಈ ಬಲವನ್ನು ದಶಕಂಠನು ನೋಡಿ ತನ್ನ ಸೇನೆಯನ್ನು ಕಿಷ್ಕಿಂಧಪರ್ವತದ ಕಡೆಗೆ ಅಂತರೀಕ್ಷಮಾರ್ಗದಿಂದೊಡ್ಡಲು ಅಲ್ಲಿದ್ದ ಜನರು ಹೆದರಿ ಸೂರ್ಯಜನೆಂಬ ಆ ಪಟ್ಟಣದ ದೊರೆಗೆ ತಿಳುಹಲು ಯಮನು ಬಲಸನ್ನದ್ಧನಾಗಿ ಯುದ್ಧಸನ್ನದ್ಧನಾದನು. ದಶಕಂಠನ ಅಪ್ಪಣೆ ಪ್ರಕಾರ ಕಿಷ್ಕಿಂಧದ ಮೇಲೆ ಯುದ್ಧಮಾಡಿ ಯಮನನ್ನು ಓಡಿಸಿದನು.

ದಶಕಂಠನು ಪಾತಾಳಲಂಕೆಗೆ ಖರಧೂಷಣರನ್ನು ಅಧಿಪತಿಗಳನ್ನಾಗಿಟ್ಟನು. ಯಮನು ತನಗೆ ಕಿಷ್ಕಿಂಧಾಪಟ್ಟಣವನ್ನು ಕೊಟ್ಟಿದ್ದವನು ಇಂದ್ರನೆಂಬುವನಾದ್ದರಿಂದ ಅಲ್ಲಿಗೆಹೋಗಿ ಈವರ್ತನವನ್ನು ಇಂದ್ರನಿಗೆ ಶೃತಪಡಿಸಿದನು ಇಂದ್ರನು ದಶಕಂಠನ ಮೇಲೆ ಯುದ್ಧಮಾಡಲು ಸನ್ನದ್ಧನಾಗಿ ಹೊರಟನು. ಆಗ ಇಂದ್ರನ ಮಂತ್ರಿಯಾದ ಬೃಹಸ್ಪತಿಯು ಧನುಜನಾದ ದಶಕಂಠನ ಸಾಮರ್ಥ್ಯವನ್ನು ತಿಳಿದು ತಮಗೆ ಜಯವುಂಟಾಗಲಾರದೆಂದು ದೊರೆಯಾದ ಇಂದ್ರನಿಗೆ ತಿಳಿಸಿ ದಶಕಂಠನೊಡನೆ ಸಮಾಧಾನಮಾಡಿಕೊಳ್ಳುವಂತೆ ಪ್ರೇರಿಸಿದನು ಆಗ ದಶಕಂಠನು ಆ ಸಮಾಧಾನಾಪ್ತಿಯನ್ನು ಲಾಲಿಸಿ ಸುಮ್ಮನಾದನು. ಆ ಸಂಗೀತಪುರದ ಇಂದ್ರನು ಕಾಮಿಯಾದ್ದರಿಂದ ಯಾವ ಯುದ್ಧದಗೊಡವೆಗೆ ಹೋಗದೆ ಭಾಮೆಯರ ಲಾಲಿತದಲ್ಲಿ ಮನೋಪ್ರೇಮವನ್ನು ಇಟ್ಟುಕೊಂಡು ಇರುತ್ತಿದ್ದನು. ಇತ್ತಲು ದಶಕಂಠನು ಸೂರ್ಯಜನನ್ನು ಕರೆಸಿ ಕಿಷ್ಕಿಂಧಾನಗರವಾದ ಆ ಮಧುಪರ್ವತಕ್ಕೆ ರೂಕ್ಷಜನರನ್ನು ಇರಿಸಿದನು. ಮೊದಲೇ ಜಂಬುಪರ್ವತದ ಮೇಲೆ ಜಾಂಬವನಿರುತ್ತಿರಲು ಈ ಕುಲದವಾನರಾದಿಗಳನ್ನು ರಕ್ಷಿಸುತ್ತಿರಲು ಆ ಕುಲದಲ್ಲಿ ಹುಟ್ಟಿದ ಮದನ ಸಮಲಾವಣ್ಯವುಳ್ಳ ವಾಯುಕುಮಾರನಿಗೆ ನಿಜಸತಿಯಾದ ಅಂಜನಾದೇವಿಗೆ ಹನುಮಂತನೆಂಬಮಗನಾದನು. ಆತನು ಲಾವಣ್ಯಚದುರನು. ಸಮಸ್ತ ವಿದ್ಯಾಶಾಸ್ತ್ರಗಳನ್ನೂ ಕಲಿತು ಪಾಂಡಿತ್ಯವುಳ್ಳವನಾದನು. ಇತ್ತ ತನ್ನ ವಂಶಾನುಗತವಾದ ಪಿತಪಿತಾಮಹರುಗಳ ಅಂತಃಪುರದನಾರಿಯರೆಲ್ಲರನ್ನುಕರೆಸಿ ದಶಕಂಠನು ನಿಜಪುರವಾದ ಲಂಕಾದ್ವೀಪಕ್ಕೆ ಪುಷ್ಪಕವಿಮಾನವನ್ನೇರಿಸಿ ಕರೆದುಕೊಂಡುಬಂದು ಸುಖವಾಗಿದ್ದನು.

ಚಂದ್ರಪುರಾಧಿಪನಾದ ಚಂದ್ರೋದರನು ಸಂಪತ್ತಿನ ಬಲದಿಂದ ವೈರ

ಮಾಡುತ್ತಿರಲು ದಶಕಂಠನು ಆತನನ್ನು ಹಿಡಿದು ತರಬೇಕೆಂದು ಖರದೂಷಣ ರಿಗೆ ಅಪ್ಪಣೆಕೊಡಲು ತಕ್ಷಣವೇ ಖರಧೂಷಣರು ಚಂದ್ರಪುರಕ್ಕೆ ಹೋಗಿ, ದೊರೆಯಾದ ಚಾಂದ್ರೋದರನನ್ನುಕೊಂದು ಆತನ ತಲೆಯನ್ನು ಒಂದು ನಿಮಿ ಷದಲ್ಲಿ ತಂದು ದಶಾನನ ಪಾದಮೂಲದಲ್ಲಿಡಲು, ದಶಾನನು ಮೆಚ್ಚಿ ಖರನಿಗೆ ತನ್ನ ತಂಗಿಯಾದ ಚಂದ್ರನಖಿ ಅಥವಾ ಶೂರ್ಪನಖಿಯನ್ನೂ ಧೂಷಣನಿಗೆ ತನ್ನ ಚಿಕ್ಕಪ್ಪನ ಮಗಳಾದ ಚಿತ್ರೆ ಎಂಬುವಳನ್ನೂ ವಿವಾಹ ಮಾಡಿಕೊಟ್ಟು ಆ ಖರಧೂಷಣರನ್ನು ಪಾತಾಳ ಲಂಕೆಯ ಅಧಿಪತಿಗಳನ್ನಾಗಿ ಕಳುಹಿಸಿಕೊ ಟ್ಟನು. ಅಲ್ಲಿಯ ಹಿಂದಿನ ರಾಜನಾದ ಯಮನು ವಿಪತ್ತಿನಿಂದ ಕೊರಗುತ್ತಾ ಕಾಲವನ್ನು ಕಳೆಯುತ್ತಿರಲು, ಆತನ ನಿಜಪತ್ನಿಯಾದ ರಾಧೆಯ ಗರ್ಭದಲ್ಲಿ ವಿರಾಧಿತನೆಂಬಮಗನು ಹುಟ್ಟಿದನು. ಆತನು ವೈರಿಯಾದ ದಶಕಂಠನಹನನ ಸಾಧನೆಗೋಸ್ಕರ ಕಾಯುತಲಿದ್ದನು. ಆ ಚಂದ್ರೋದರಾತ್ಮಜರು ಜೋತಿಷ್ಕ ರಹೇಳ್ವಿಕೆಯಿಂದ ಮುಂದಕ್ಕೆ ರಾಮ ಲಕ್ಷ್ಮಣರು ದಂಡಕಾಟವಿಗೆ ಬರುವ ರೆಂತಲೂ ಆಗ್ಗೆ ಇವರು ಅವರಿಗೆ ಸಹಾಯಮಾಡಿ ಧನುಜನಾದ ದಶಕಂಠನ ಹಗೆಯನ್ನು ತೀರಿಸಿಕೊಳ್ಳಬಹುದೆಂಬ ವಿಷಯವನ್ನು ತಿಳಿದುಕೊಂಡು ಆಕಾಲ ವನ್ನು ನಿರೀಕ್ಷಿಸುತ್ತಿದ್ದರು. ಇತ್ತ ಲಂಕೆಯೊಳು ದಶಾನನು ಅಪ್ರತಿಹತವಾದ ರಾಜ್ಯಭಾರಮಾಡುತ್ತಿರಲಾಗ ಪಟ್ಟಸ್ತ್ರೀಯಾದ ಮಂಡೋಧರಿಯು ಗರ್ಭವ ನ್ನು ಧರಿಸಿದಳು. ನವಮಾಸ ಪೂರ್ತಿಯಾಗಲು ಪುತ್ರರತ್ನವನ್ನು ಹಡೆದಳು. ರಾವಣನು ಆ ಮೊಗುವಿಗೆ ಇಂದ್ರಜಿತುವೆಂಬ ಹೆಸರಿಟ್ಟನು. ಈ ಇಂದ್ರಜಿತು ವನ್ನು ಅನುಸರಿಸಿ ಶ್ರೀಮಾಲಿ, ಶತ್ರುಂಧ, ಮನುಯೆಂಬ ಸಹೋದರರು ಕ್ರಮ ವಾಗಿ ಹುಟ್ಟಿ ಪ್ರಸಿದ್ಧಿಯಾದರು. ಈ ಮಕ್ಕಳುಗಳು ವಯಸ್ಸಿಗೆ ತಕ್ಕಂತೆ ವಿದ್ಯಾಭ್ಯಾಸಮಾಡಿ ಕುಲಕ್ರಮಾಗತವಾದ ರಾಕ್ಷಸ ವಿದ್ಯಾಪರಿಣತರಾಗಿ ಬಲ ಯುತರಾಗಿದ್ದರು- ಇತ್ತ ಕಪಿಕುಲಾನ್ವಯದಪಟ್ಟಣದಲ್ಲಿ ಸೂರ್ಯಛನಮೋ ಹದ ಪಟ್ಟಸ್ತ್ರೀಯಾದ ಮಾಲಿ ಎಂಬುವಳಿಗೆ ವಾಲಿ ಎಂಬ ದೊಡ್ಡಮಗನೂ ಸುಗ್ರೀವನೆಂಬ ಚಿಕ್ಕಮಗನೂ ಆದರು. ಲೋಕೋತ್ತಮನಾದ ವಾಲಿಯು ಅತಿಬಲಿಷ್ಟನಾಗಿ ರಾಜ್ಯಭಾರಮಾಡತೊಡಗಿದನು- ಅವರಿಬ್ಬರ ಒಡಹುಟ್ಟಿ ದವಳಾಗಿ ಶ್ರೀಪ್ರಭೆಯೆಂಬ ನಾಮದಲ್ಲಿ ಇರುತ್ತಿದ್ದಳು. ರೂಕ್ಷಜನರಪಟ್ಟಣದಲ್ಲಿ ಸುಖೇಶಿ, ನಳ, ನೀಳ, ಮಯರೆಂಬುವರಿದ್ದರು. ಇವರು ಒಬ್ಬರಿಗೊಬ್ಬರು ಬಲಯುತರಾಗಿಯೂ, ವಿದ್ಯಾವಂತರಾಗಿಯೂ, ಕಪಿಕೇತುಗಳಾಗಿಯೂ,

ಕಿಷ್ಕಿಂಧ ಮಧುಪರ್ವತದೊಳಗಿದ್ದುಕೊಂಡು ಅರ್ಹತ್ಪರಮೇಶ್ವರರ ಪಾದ ಭಕ್ತರಾಗಿ ಜಿನಸ್ಮರಣೆಯನ್ನು ಮಾಡುತ್ತಿದ್ದರು.

೧೧. ಇಂದ್ರನನ್ನು ಜಯಿಸಿದ್ದು.

ಕೇಳಿದ್ಯೆ ರಾಜೇಂದ್ರನೇ! ರಣಾಗ್ರಣಿಯಾದ ದಶಕಂಠನು ಭೀಮಭೈರವಕಡುಗಲಿಯಾದ ಇಂದ್ರನನ್ನು ಯುದ್ಧದಲ್ಲಿ ಹಿಡಿದು ಬಂಧಿಸಿದ ವಿವರವನ್ನು ಕೇಳುವವನಾಗು= ಸೂರ್ಯರಜನು ರಾಜ್ಯಸಂಪತ್ತಿನಿಂದ ಕೂಡಿ ಅತುಳವಾದ ಆಗಮಶಾಸ್ತ್ರದಲ್ಲಿ ನಿಪುಣನಾಗಿ ಅಂತರ್ಮುಖದಲ್ಲಿ ತ್ರೈರತ್ನವನ್ನು ತಾಳಿ ತ್ರಿಕರಣಶುದ್ಧನಾಗಿ ಜಿನಶಾಸ್ತ್ರ ಮುನಿಪ್ರೀತನಾಗಿ ದೇವರನ್ನೇ ನೆನೆದು ಸದ್ವ್ರತಗಳನ್ನು ಪಾಲಿಸುತ್ತಿದ್ದನು. ಭೂಲೋಕದಲ್ಲಿ ಶಾಂತತ್ವದಿಂದ ರಾಜ್ಯ ಪರಿಪಾಲಿಸುತ್ತಿರುವನೆಂದು ಪ್ರಸಿದ್ಧವಾಗಿತ್ತು- ಸಮರ್ಥನಾದ ದಶಕಂಠನು ಶ್ರೀಪ್ರಭೆಯನ್ನು ಪರಿಣಯಮಾಡಿಕೊಡಬೇಕೆಂದು ಕಪಿಕುಲ ಸೂರ್ಯನ ಎಡೆಗೆ ವಾರ್ತೆಯನ್ನು ಕಳುಹಿಸಿದನು. ಈ ವಾರ್ತೆಯನ್ನು ತಂದ ಮಂತ್ರಿಯು ಸಭಾಸನ್ನದ್ಧನಾಗಿರುವ ನೃಪನಿಗೆರಗಿ, ಇಂದುಮುಖಿಯಾದ ಶ್ರೀಪ್ರಭೆಯನ್ನು ಕೊಡಲೆಂದು ಕಳುಹಿಸಿದನೆಂದೆನಲು, ದೊರೆಯು ಮಂತ್ರಿಗಳಲ್ಲಿ ಆಲೋಚನೆ ಮಾಡಿ ಖಗಕುಲ ರಾಕ್ಷಸರವಂಶಗಳಿಗೆ ಕನ್ಯಾದಾನಮಾಡಲು ಅಪಕೀರ್ತಿಬರುತ್ತಿಂತ ಸುಮ್ಮನಾದನು. ಸೂರ್ಯರನು ವಿರಕ್ತಿಯನ್ನು ಹೊಂದಿ ರಾಜ್ಯವನ್ನು ಮಗನಾದವಾಲಿಗೆ ಕೊಟ್ಟು ಸುಗ್ರೀವನಿಗೆ ಯುವರಾಜ್ಯಪದವಿಯನ್ನು ಕೊಟ್ಟು ಗಗನಚಂದ್ರರೆಂಬ ಚಾರಣಮಹಾಮುನಿಗಳಲ್ಲಿ ದೀಕ್ಷೆಯನ್ನುಪಡೆದು ಕೈಲಾಸ ಪರ್ವತದಲ್ಲಿ ಉಗ್ರೋಗ್ರ ತಪಸ್ಸಿನಿಂದಿರುತ್ತಿದ್ದನು. ಇತ್ತ ವಾಲಿಯು ದಶಕಂದರನ ಕೇಳ್ವಿಕೆಯಂತೆ ಶ್ರೀಪ್ರಭೆಯನ್ನು ಕೊಟ್ಟು ವಿವಾಹಮಾಡಿದನು.

ಒಂದಾನೊಂದುದಿವಸ ದಶಕಂದರನು ನಿತ್ಯಾಲೋಕದಪುರದರಸನಾದ ನಿತ್ಯಾಲೋಕನೆಂಬವನಿಗೆ ಅಂಗನೆಯಾದ ಶ್ರೀಧರೆಗೆ ಮಗಳಾದ ರತ್ನಾವಳಿಯ ವಿವಾಹಕ್ಕೆ ಬರುವ ಸಮಯದಲ್ಲಿ, ದಶಕಂಠನು ಕೂತುಕೊಂಡಿದ್ದ ಪುಷ್ಪಕ ವಿಮಾನವು ಕೈಲಾಸಪರ್ವತದ ಮೇಲೆ ನಿಂತುಕೊಳ್ಳಲು ಮನಸ್ಸಿನಲ್ಲಿ ಆಶ್ಚರ್ಯವುಳ್ಳವನಾಗಿ ಅವಲೋಕಿನಿ ಎಂಬ ವಿದ್ಯೆಯನ್ನು ಕರೆದು ಯಾತಕ್ಕಾಗಿ ವಿಮಾನವು ನಿಂತುಕೊಂಡಿತೆಂಬುದಾಗಿ ಕೇಳಲಾಗಿ ಆಅವಲೋಕಿನಿಯು ಕನ್ಯೆಯನ್ನು ಕೊಡದೆ ಆಶ್ರಮಯಾದ ಸೂರ್ಯಮುನಿಯು ಈ ಪರ್ವತದಲ್ಲಿ ಇರುವನೆಂದು

ಹೇಳಲಾಗಿ ಈ ರಾವಣನು ಇಳಿದು ಬಲವುದದಿಂದ ವೈವುರೆದು ವೈಕುರ್ವಣ ವಿದ್ಯೆಯ ಬಲದಿಂದ ಸಹಸ್ರಮುಖವನ್ನು ಮಾಡಿಕೊಂಡು ದ್ವಿಗುಣಿತವಾದ ಸಹಸ್ರಕೈಗಳಿಂದ ಗಿರಿಯನ್ನು ಎತ್ತಿ ಸಮುದ್ರಕ್ಕೆ ಇಡುತ್ತೇನೆಂದು ಪರ್ವತ ವನ್ನು ಕೀಳಲು ಕೆಳಗೆ ಕೈಹಾಕಲ್ಕು, ಸೂರ್ಯಮುನಿಯು ಇವನಅಹಂಕಾರವನ್ನು ತಿಳಿದು ತನ್ನ ತಪಶ್ಶಕ್ತಿಯಿಂದ ಪರ್ವತವನ್ನು ಪಾದದಅಂಗುಷ್ಟದಿಂದ ಅಮು ಕಲು ರಾವಣನು ಪರ್ವತದ ಕೆಳಗೆ ಸಿಕ್ಕಿ ಹೊರಗೆ ಬರಲು ಯತ್ನವಿಲ್ಲದೆ ಪೇ ಚಾಡುತ್ತಿರಲು, ರಾವಣನ ಪರಿಜನರು ಪಟ್ಟಸ್ತ್ರೀಯಾದ ಮಂಡೋಧರಿಯು ಸಹ ಆಮುನಿಗೆ ನಮಸ್ಕಾರಮಾಡಿ ವೈಯಿಕ್ಕಿ ಬೇಡಿಕೊಳ್ಳಲು ಕರುಣಾಳು ವಾದ ಮುನಿಯು ಅಂಗುಷ್ಟವನ್ನೆತ್ತಿ ಸುಮ್ಮನಾಗಲು ದಶಕಂಠನು ತನ್ನ ಅನ್ವ ರ್ಥನಾಮವಾದ ರಾವಣನೆಂಬುದನ್ನು ಸ್ಥಿರಪಡಿಸಿಕೊಂಡು ಆಮುನಿಯನ್ನು ಬಲ ಗೊಂಡು ಭಜಿಸಿ ಬೇಡುತ್ತಿರಲಾಗಿ, ಪನ್ನಗಾಧಿಪನು ಅವಧಿಯಿಂದ ಈ ವಿವರ ವನ್ನು ತಿಳಿದುಕೊಂಡು ರಾವಣನನ್ನುನೋಡಲಾಗಿ, ಧರಣೇಂದ್ರನಿಗೆ ದಶಕಂಠ ನು ನಾನಾವಿಧವಾದ ಪ್ರಾರ್ಥನೆಯನ್ನು ಮಾಡಲಾಗಿ, ಧರಣೇಂದ್ರನುಈತನಿಗೆ ಶ್ರೇಷ್ಟವಾದ ಆಯುಧಗಳನ್ನಿತ್ತನು. ಗುರುಗಳಾದ ಸೂರ್ಯಮುನಿಯು ತಾವು ಮಾಡಿದ ತಪೋಭಂಗದಕಾರ್ಯಕ್ಕೆ ಪ್ರಾಯಶ್ಚಿತ್ತವನ್ನು ಮಾಡಿ ಶಿವಲೋಕ ಪ್ರಾಪ್ತರಾದರು.

ಇತ್ತ ರಾವಣನು ಸಕಲಸಂಧ್ಯಾಕಾರ ವೇಳಾದ್ವೀಪಗಳಲ್ಲಿ ವಿದ್ಯಾಧರ ರೊಂದಿಗೆ ಕಾದು ಕಪ್ಪಕಾಣಿಕೆಯನ್ನು ತೆಗೆದ-ಕೊಂಡು ಬರುತ್ತಾ ಮಧ್ಯದಲ್ಲಿ ಅನೇಕ ರಾಜರುಗಳಿಂದಲೂ ಕಪ್ಪವನ್ನು ತೆಗೆದುಕೊಂಡು ಬರುತ್ತಿದ್ದನು. ಹೀಗೆ ಬರುತ್ತಾ ರೈವತನದಿ ಬಳಿ ಬಂದು ಆ ನದಿಯ ಪಕ್ಕದಲ್ಲಿ ಮರಳುಗುಡ್ಡೆ ಯಮೇಲೆ ರತ್ನಮಂಟಪವನ್ನಿರಿಸಿ ಅದರ ಮಧ್ಯದಲ್ಲಿ ರತ್ನಬಿಂಬವನ್ನಿರಿಸಿ ಪೂ ಜೆಯನ್ನು ಮಾಡುತ್ತಿರುವ ಸಮಯದಲ್ಲಿ ತೊರೆಯು ಪ್ರವಾಹದಿಂದೊಡಗೂ ಡಲು ರಾವಣನು ಸಂಭ್ರಮಾಕುಲನಾಗಿ ನೆಗೆದು ಆಶ್ಚರ್ಯದಿಂದ ಆಕಾಶದಲ್ಲಿ ನಿಂತು, ಯಾತಕ್ಕೆ ಈ ರೀತಿ ಪ್ರವಾಹವು ಬಂದಿತೆಂದು ವಿಚಾರಮಾಡಲು, ಮಹೇಶಪಟ್ಟಣದಧಿಪತಿ ಸಾಹಸ್ರಕರನು ತ್ವರೆಯಮಧ್ಯದಲ್ಲಿ ನೀರನ್ನುತಡೆದು ಅಲ್ಲಿ ಅಂತಃಪುರದ ಕಾಂತೆಯರೊಡನೆ ಜಲಕ್ರೀಡೆಯನ್ನಾಡಿ ಅದಾದ ನಂತರ ನೀರನ್ನು ಬಿಟ್ಟನೆಂಬುವುದನ್ನು ತಿಳಿದು ದಶಕಂಠನು ಕೋಪಿಸಿ ಜಗದ್ಭೂಷಣ ನೆಂಬ ಆನೆಯನ್ನೇರಿ ಆದೊರೆಯೊಂದಿಗೆ ಯುದ್ಧಮಾಡಿ ರಣರಂಗದಲ್ಲಿ ಅಜ

ನನ್ನು ನಾಗಪಾಶದಿಂದ ಬಂಧಿಸಿ ನಿಜಶಿಬಿರಕ್ಕೆ ತಂದಿಟ್ಟನು. ಆಗ ಆ ರಾಜನ ಪಟ್ಟಸ್ತ್ರೀಯರುಗಳು ಬಂದು ಜಂಗಚಾರಣರೆಂಬಮುನಿಗಳಿಗೆ ಬೇಡಿಕೊಳ್ಳಲು ಅವರು ಕರುಣವಿಟ್ಟು ದಶಕಂಠನ ಬೀಡನ್ನು ಮುಟ್ಟಲು ಶತಕರ್ಮನು ಬಂದು ನಮಸ್ಕಾರಮಾಡಿ, ರಾವಣನು ಮುನಿಗಳನ್ನು ಪೀಠದಲ್ಲಿ ಕುಳ್ಳಿರಿಸಿ ಬಂದ ಕಾರಣವನ್ನು ಪ್ರಾರ್ಥಿಸಲು, ಮುನಿಗಳು "ಸಹಸ್ರಕರರಾಜನು ಸಮ್ಯಗ್ದೃಷ್ಟಿಯು ಆತನನ್ನು ವಧಿಸಲು ಯೋಗ್ಯನಲ್ಲ" ವೆಂದು ಹೇಳಲು ಗುರುವಾಕ್ಯವನ್ನು ಕೇಳಿ ಅಪರಾಧಿಯನ್ನು ಕಾರಾಗೃಹವಾಸಕ್ಕೆ ಅಣಿಮಾಡಿದನು. ಅನಂತರ ದಶಕಂಠನು ತನಗೆತಾನೇ ಸಂತೈಸಿಕೊಂಡು ಸಾಸಿರಕರನಿಗೆ ಭೂಷಣಾದಿಗಳನ್ನು ಕೊಟ್ಟು ಸಂತೈಸಿ ತನ್ನ ರಾಜ್ಯಕ್ಕೆ ಹೋಗಬಹುದೆಂದು ಕಳುಹಿಸಿಕೊಟ್ಟನು. ಆಗ ಶತಬಾಹುವು ತಾನು ರಾಜ್ಯಭಾರ ಮಾಡುವುದಿಲ್ಲವೆಂದು ವಿರಕ್ತಿಯನ್ನು ಹೊಂದಿ ಮಗನಾದ ಸುಭಾಹುವಿಗೆ ರಾಜ್ಯವನ್ನು ಕೊಟ್ಟು ದೀಕ್ಷೆಪಡೆದನು.

ರಾವಣನು ಭೂಮಿಯನ್ನು ಸಾಧಿಸುತ್ತಾ ಖಗಪತಿಗಳನ್ನು ಕರಿಸಿ ಅವರಿಂದ ಕಪ್ಪವನ್ನು ತೆಗೆದುಕೊಳ್ಳುತ್ತಾ ಬರುವಮಾರ್ಗದಲ್ಲಿ ಗಾಜಪುರವೆಂಬ ಪಟ್ಟಣವು ಸಿಕ್ಕಿತು. ಅದನ್ನು ಆಳುವ ಮರುತನೆಂಬರಾಜನು ಮಿಥ್ಯಾದೃಷ್ಟಿಯಾಗಿ ಪ್ರಾಣಿಹಿಂಸೆಮಯವಾದ ಯಜ್ಞವನ್ನು ಮಾಡಬೇಕೆಂದು ಅನೇಕ ಮೂಕಪ್ರಾಣಿಗಳನ್ನು ಯೂಪಸ್ತಂಭದಲ್ಲಿ ಕಟ್ಟಿಸಿದ್ದನು- ಆ ತಿರ್ಯಕ್‌ಪ್ರಾಣಗಳು ಭಯಪಟ್ಟು ಗೋಳಿಡುತ್ತಿರಲು ರಾವಣನು ಅದನ್ನು ನೋಡಿ, ಯೂಪಸ್ತಂಭಗಳನ್ನು ಕಿತ್ತು ಪ್ರಾಣಿಗಳನ್ನು ಸ್ವೇಚ್ಛೆಯಾಗಿ ಹೋಗುವಂತೆ ಅಪ್ಪಣೆ ಕೊಡಿಸಿದನು. ಮರುತನು ಈ ವಿಷಯವನ್ನು ತಿಳಿದು ರಾವಣನ ಚರಣಾಬ್ಜಗಳಿಗೆ ನಮಸ್ಕರಿಸಿ ತನ್ನ ಪುತ್ರಿಯಾದ ಕನಕಪ್ರಭೆಯನ್ನು ಈ ರಾಕ್ಷಸನಿಗೆ ವಿವಾಹ ಮಾಡಿಕೊಟ್ಟನು. ಮಧುರಾಪುರಿಯ ದೊರೆಯಾದ ಮಹಾಬಲನು ೧೮ ವರ್ಷದ ಕನ್ನಿಕೆಯನ್ನು ಒಪ್ಪಿಸಿದನು. ಈ ರೀತಿ ದಶಕಂಠನು ಕೈಲಾಸಾಚಲಕ್ಕೆ ಸಮೀಪದಲ್ಲಿರುವ ತಪ್ಪಲಲ್ಲಿ ಬೀಡನ್ನು ಬಿಟ್ಟುಕೊಂಡಿದ್ದನು. ನಳಕೂಬರನೆಂಬ ರಾಜನು ಆಸಮೀಪದಲ್ಲಿ ದುರ್ಲಂಗ್ಯವಾದ ಪಟ್ಟಣದಲ್ಲಿ ರಾಜ್ಯಭಾರಮಾಡುತ್ತಿದ್ದನು. ರಾವಣನು ಬಂದು ನೆಲೆಸಿರುವ ವಾರ್ತೆಯು ರಾಜನಾದ ಇಂದ್ರನಿಗೆ ದೂತಮುಖದಿಂದ ಗೊತ್ತಾಯಿತು. ಇಂದ್ರನು ಈ ರಾಕ್ಷಸನು ಬಂದನೇ ಎಂದು ಹೀಯ್ಯಾಳಿಸಿದನು. ನಳಕೂಬರನು ಈ ದಶಕಂಠನ ಬೀಡಿನಸುತ್ತಾ ಭೇತಾಳಗಳನ್ನು ಸುತ್ತಿಟ್ಟನು. ಮತ್ತು ತನ್ನ ಪಟ್ಟಣದಸುತ್ತಾ

ಬೆಂಕಿಯರಾಶಿಗಳು ಹುಟ್ಟಿ ಉರಿಯುವಂತೆ ಮಾಡಿ ತನ್ನ ಕೋಟೆಗೆ ಯಾರೂ ಪ್ರವೇಶಿಸುವುದಕ್ಕೆ ಆಗದಂತೆ ಮಾಡಿಸಿದನು. ಇದನ್ನು ತಿಳಿದು ದಶಕಂಠನ ಮಂತ್ರಿಯಾದ ಪ್ರಹಸ್ತನು ದೊರೆಯಾದ ರಾಕ್ಷಸ ದಶಕಂಠನಿಗೆ ಅರಿಕೆಮಾಡಿದನು. ಹೀಗಿರಲು ನಳಕೂಬರನ ಕುಲವಧುವಾದ ದೈತೆಯು ದಶಕಂದರನ ಕೂಡಬೇಕೆಂಬಆಸೆಯುಳ್ಳವಳಾಗಿದ್ದಳು. ಯಾಕೆಂದರೆ ಹಿಂದೆ ಕೈಲಾಸಾಚಲವನ್ನು ದಶಕಂದರನು ಕೀಳುವಸಂದರ್ಭದಲ್ಲಿ ಈ ದೈತೆಯು ಆ ದಶಕಂಠನನ್ನು ನೋಡಿ ಆತನಲ್ಲಿ ವಿಶ್ವಾಸವಿಟ್ಟು ಆತನ ರೂಪಿಗೆ ಮರುಳಾಗಿ ಆತನಲ್ಲಿ ಪ್ರೀತಿ ಮಾಡಿದ್ದಳು. ಆದ್ದರಿಂದ ಆ ಸ್ತ್ರೀಯು ತನ್ನ ಹಿರಿಯ ಕಂಚುಕಿಯಾದ ಚಿತ್ರಮಾಲೆ ಎಂಬುವಳನ್ನು ಕರೆದು ತನ್ನ ಮನೋಭಿಪ್ರಾಯವನ್ನು ತಿಳಿಸಿ ಕಾರ್ಯಸಾಧನೆಗಾಗಿ ಸಹಾಯವನ್ನು ಮಾಡುವಂತೆ ಕೇಳಿಕೊಂಡಳು. ಆ ಚಿತ್ರಮಾಲೆಯು ಕಾರ್ಯಸಾಧನೆಗಾಗಿ ಆರಾತ್ರಿ ರಾವಣನ ಬೀಡಿಗೆ ಅಂತರೀಕ್ಷದಿಂದಿಳಿದು ಸಮಯವನ್ನು ಅರಿತು ದಶಕಂಠನನ್ನು ಕಂಡು ರಾವಣನಿಗೆ ತಾನು ಬಂದ ವಿಷಯವನ್ನು ತಿಳಿಸಿದಳು. ಇದನ್ನು ದಶಾಸ್ಯನು ಕೇಳಿ ತನ್ನ ಮನಸ್ಸಿನಲ್ಲಿ ನಳಕೂಬರನಸತಿಗೆ ಉಂಟಾದ ಕೆಟ್ಟಮನಸ್ಸನ್ನು ನೆನೆದು ಪಶ್ಚಾತ್ತಾಪಪಟ್ಟು ಅನುಜನಾದ ವಿಭೀಷಣನನ್ನು ಕರೆದು ರಹಸ್ಯದಲ್ಲಿ ಈವಿದ್ಯಮಾನವನ್ನು ತಿಳಿಸಿದನು. ವಿಭೀಷಣನು "ಈ ರಾಜ್ಯವನ್ನು ಸಾಧಿಸಲು ಕಷ್ಟವಾಗಿರುತ್ತೆ. ಆದೈತೆಯನ್ನು ಕರೆಸಿ ಅವಳಿಂದ ಪಟ್ಟಣದ ಗುಟ್ಟನ್ನು ತಿಳಿದುಕೊಳ್ಳುವುದು ಒಳ್ಳೆಯದು. ಆಕೆಗೆ ಪ್ರೀತಿಪಾತ್ರನಾಗಿರುವಂತೆ ತೋರ್ಪಡಿಸು" ಎಂತಹೇಳಲಾಗಿ ದಶಕಂಠನು ದೈತೆಯನ್ನು ಕರೆದುಕೊಂಡು ಬಾಯೆಂದು ಹೇಳಲಾಗಿ ಆಕೆಯು ಆವಧುವನ್ನು ತಂದುಬಿಟ್ಟಳು. ಆಗದೈತೆಯು ಕೂತುಕೊಂಡಿರುವಾಗ್ಯೆ ದಶಕಂಠನು ಸಲ್ಲದಕೆಲಸಕ್ಕೆ ಅಂಜಿ ಸುಮ್ಮಸುಮ್ಮನೆ ಅವಳನ್ನು ಪ್ರೀತಿಸಿರುವಂತೆ ತೋರ್ಪಡಿಸಿಕೊಳ್ಳುತ್ತಾ, ಈ ದುರ್ಲಂಗ್ಯವಾದ ಕೋಟೆಯೊಳಕ್ಕೆ ಹೋಗುವ ತರಹವನ್ನು ತಿಳಿಸಬೇಕೆಂದು ದಶಕಂಠನು ಕೇಳಿಕೊಳ್ಳಲಾಗಿ ಆ ದೈತೆಯು ಆ ದುರ್ಲಂಗ್ಯವಾದ ಕೋಟೆಯನ್ನು ಜಯಿಸುವ ವಿದ್ಯವನ್ನು ಕೊಡಲು! ರಾಜನು ಅಂಗೀಕರಿಸಿ ಈ ದೈತೆಯನ್ನು ಕುರಿತು, "ಈ ದುರ್ಮಾರ್ಗ ವಿದ್ಯವನ್ನು ನೀನು ಕಲಿತುಕೊಂಡಿರುವುದು ಸರಿಯಲ್ಲ. ಪಾತಿವ್ರತ್ಯವು ಕೇವಲ ಶ್ಲಾಘ್ಯವಾದದ್ದು" ಎಂದು ಅವಳಿಗೆ ಶಾಂತವಚನದಿಂದ ಸುಬುದ್ಧಿಯನ್ನುಂಟುಮಾಡಿ ದೂತೆಯೊಡನೆ ತನ್ನ ಪಟ್ಟಣಕ್ಕೆ ಅವಳು ಹೋಗುವಂತೆ ಮಾಡಿದನು.

ಮರುದಿವಸ ದಶಕಂಠನು ದುರ್ಲಂಘ್ಯ ಕೋಟೆಯನ್ನು ಜಯಿಸುವುದಕ್ಕಾಗಿ ತಮ್ಮನಾದ ವಿಭೀಷಣನನ್ನು ಕಳುಹಿಸಿಕೊಟ್ಟನು. ವಿಭೀಷಣನು ಕೋಟೆಯನ್ನು ಮುತ್ತಿಗೆ ಹಾಕಿ ಒಳಕ್ಕೆ ಪ್ರವೇಶಿಸಿ ಬಲಿಷ್ಟನಾದ ನಳಕೂಬರನನ್ನು ಹಿಡಿದನು. ಅದೇಕಾಲದಲ್ಲಿ ದಶಕಂದರನ ಆಯುಧಶಾಲೆಯೊಳಗೆ ಸೂರ್ಯನಂತೆ ಪ್ರಕಾಶಿಸುತ್ತಲಿರುವ ಸುದರ್ಶನಚಕ್ರವು ಉದಯಿಸಿತು. ಈ ಮಹಾಚಕ್ರಕ್ಕೆ ದಶಕಂದರನು ಪರಿವಾರಸಹಿತಕೂಡಿ ಚಕ್ರರತ್ನಪೂಜೆಯನ್ನು ಮಹಾವಿಜೃಂಭಣೆಯಿಂದಮಾಡಿದನು. ನಳಕೂಬರನಿಗೆಆತನಕಾಮಿನಿಯು ದುರ್ಬುದ್ಧಿಯನ್ನುತಿಳಿಸಿ ಶುದ್ಧವಂಶದವರು ಆಚರಿಸತಕ್ಕವಿಧಾನವನ್ನು ತಿಳಿಸಿ ನಳಕೂಬರನಲ್ಲಿ ಅತ್ಯಂತ ಪ್ರೀತಿಯಿಟ್ಟು ಆತನನ್ನು ಅಣ್ಣನಂತೆ ಭಾವಿಸಿ ಸನ್ಮಾನಿಸಿದನು. ನಳಕೂಬರನು ಸಂತೋಷದಿಂದ ತನ್ನ ಪಟ್ಟಣದಲ್ಲಿ ಸುಖವಾಗಿರುತ್ತಲಿದ್ದನು. ದಶಕಂಠನು ಧನುಜಸಮೂಹವನ್ನೂ ಮತ್ತು ಬಂದ ವಿದ್ಯಾಧರರನ್ನೂ ಸಹ ಕಟ್ಟಿಕೊಂಡು ವಿಜಯಾರ್ಧಪರ್ವತಕ್ಕೆ ಬಂದನು. ಈ ಸಮಾಚಾರವನ್ನು ಅಮರಾವತಿಪಟ್ಟಣದ ಇಂದ್ರನು ಕೇಳಿ, ದಶಕಂಠನೊಂದಿಗೆ ಯುದ್ಧಮಾಡುವುದಕ್ಕೆ ಸನ್ನದ್ಧನಾಗಿ ಹೊರಟು ರಣಭೇರಿಯನ್ನು ನಾಲ್ಕು ಸಮುದ್ರಗಳು ಮೊಳಗುವಂತೆ ಹೊಡಿಸಿದನು. ಅನೇಕ ವಿದ್ಯಾಧರರನ್ನೊಳಗೊಂಡು ಇಂದ್ರನು ಐರಾವತವನ್ನೇರಿ ಯುದ್ಧಕ್ಕೆ ಅಭಿಮುಖನಾದನು. ಇತ್ತ ಹಸ್ತ, ಪ್ರಹಸ್ತ, ವಜ್ರೋದರ, ಜಳೋದರ, ಮಾರೀಚಾದಿಗಳು ಇಂದ್ರನಿಗೆ ಅಭಿಮುಖರಾಗಿ ಯುದ್ಧಕ್ಕೆ ನಿಂತರು. ಆ ದೇವಸೇನೆಗೂ ರಾಕ್ಷಸಸೇನೆಗೂ ಬಲಿಷ್ಟವಾದ ಯುದ್ಧವದಗಿತು. ರಾಕ್ಷಸಬಲವು ಸ್ವಲ್ಪ ಕುಂದುತ್ತ ಬರಲು ಇಂದ್ರಜಿತುವು ಯುದ್ಧಸನ್ನದ್ಧನಾಗುತ್ತಿರಲು ರಾವಣನು ನೋಡಿ ಮುಂದೆ ಬರಲಾಗ ಇಂದ್ರಜಿತುವು ತಾನೇ ಅಭಿಮುಖವಾಗಿ ರಾವಣನನ್ನು ಹಿಂದಕ್ಕೆ ಕಳುಹಿಸಿದನು. ಇಂದ್ರನು ಇಂದ್ರಜಿತುವಿನ ಕೂಡ ಯುದ್ಧಕ್ಕೆ ತೊಡಗಿದನು. ಇಂದ್ರನ ಮಗನಾದ ಜಯಂತನು ತಂದೆಯ ಮುಂದೆ ಇಂದ್ರಜಿತುವಿನ ಕೂಡ ಯುದ್ಧಕ್ಕೆ ನಿಂತನು. ಇಂದ್ರಜಿತುವು ಆ ಜಯಂತನನ್ನು ಹಿಡಿದು ನಾಗಪಾಶದಿಂದ ಬಿಗಿದು ರಥದೊಳಿಟ್ಟು ಧನುಜನ ಬಿಡಾರಕ್ಕೆ ತಂದನು. ಆಗ ಇಂದ್ರನು ಕೋಪದಿಂದ ಕೂಡಿ ಇಂದ್ರಜಿತುವಿನ ಮೇಲೆ ನಾನಾವಿಧವಾದ ಬಾಣಗಳನ್ನು ಬಿಟ್ಟು ರಾಕ್ಷಸರ ದಂಡನ್ನು ಓಡಿಸಲಿಚ್ಛೈಸಿದನು. ಇಂದ್ರಜಿತುವು ದೇವಸೇನೆಯನ್ನು ಹತಮಾಡಿ ಮುಂದುವರಿಯುತ್ತಲಿರಲು ಶಾಕಿನಿಭೂತಗಳೆಲ್ಲಾ ಇಂದ್ರಜಿತುವು ತಮಗೆ ಆಹಾರವನ್ನು

ಒದಗಿಸಿಕೊಟ್ಟನೆಂದು ಬಹಳ ಸಂತೋಷದಿಂದ ಇಂದ್ರಜಿತುವನ್ನು ನಾನಾವಿಧವಾಗಿ ಹೊಗಳುತ್ತಲಿದ್ದವು. ಇಂದ್ರನು ಇಂದ್ರಜಿತುವನ್ನು ನೋಡಿ ಎಲೈ ಹುಡುಗನೇ, ಯಾತಕ್ಕಾಗಿ ಪ್ರಾಣವನ್ನು ಕಳೆದುಕೊಳ್ಳುತ್ತೀಯೇ ಹಿಂದಕ್ಕೆ ಹೋಗೆಂದು ಹೇಳಿ ವಜ್ರವನ್ನು ಈತನ ಮೇಲೆ ಎಸೆದನು. ಆಗ ಇಂದ್ರಜಿತುವು ಇಂದ್ರನನ್ನು ಬಾಣದಿಂದ ಹೊಡೆದು ಹಿಮ್ಮೆಟ್ಟಿಸಿದನು. ಈ ರೀತಿ ಇಂದ್ರನನ್ನು ಓಡಿಸಿ ಧನುಜರ ಬಲದಲ್ಲಿ ಇಂದ್ರಜಿತುವಿನ ಹೆಸರು ಕೊಂಡಾಟಕ್ಕೆ ಬರಲು ಆ ಇಂದ್ರಜಿತುವು ಬಿಡಾರದಲ್ಲಿದ್ದು ಜಿನೇಶ್ವರರಪಾದಕಮಲಗಳನ್ನು ಧ್ಯಾನಿಸುತ್ತಾ ಕುಳಿತ್ತಿದ್ದನು.

೧೨. ವರುಣನ ಜಗಳ.

ಕೇಳಿದ್ಯೆ ರಾಜೇಂದ್ರನಾದ ಶ್ರೇಣಿಕನೇ! ಇಂದ್ರಜಿತುವು ಇಂದ್ರನನ್ನು ಹಿಡಿದು ಬಂಧಿಸಿದ ಕಾರಣದಿಂದ ರಾವಣನ ಮೊದಲನೇ ಮಗನಿಗೆ ಇಂದ್ರಜಿತುವೆಂಬ ಹೆಸರಾಯಿತು. ಇಂದ್ರಜಿತುವು ರಥದ ಮೇಲೆ ತಂವ ಇಂದ್ರನನ್ನು ಪಿತನಾದ ದಶಕಂಠನ ಪಾದದ ಮೇಲೆ ಹೊರಳಿಸಿದನು. ಇಂತಹ ಪರಾಕ್ರಮಿಯಾದ ಮಗನನ್ನು ಹರ್ಷದಿಂದನೋಡಿ ತಕ್ಕೈಸಿದನು. ಇಂದ್ರನ ಬಲದಂಡು ಮತ್ತು ಆತನ ಮೇನಕಿ, ರಂಭೆ, ಊರ್ವಶಿ ಎಂಬ ಹೆಸರುಳ್ಳವರನ್ನೂ ಹಿಡಿದು ತಂದು ಲಂಕಾಪಟ್ಟಣದಲ್ಲಿ ಹಾಕಿಕೊಂಡನು. ಇಂದ್ರನ ಬೇಡಿಕೆಯ ಮೇಲೆ ಜಯಂತನೇ ಮೊದಲಾದ ಸಕಲರೊಡನೆ ಇಂದ್ರನನ್ನು ಸ್ವಾಗತಿಸಿ ಕಳುಹಿಸಿಕೊಟ್ಟನು. ಹೀಗೆ ವಿಜಯದಿಂದ ಆಸ್ಥಾನದಲ್ಲಿ ಮಿತ್ರಾದಿಗಳೊಡನೆ ದಶಕಂಠನು ಕೊತುಕೊಂಡಿರುವಾಗ, ಎಲ್ಲಾ ಅರಸುಗಳು ಕಪ್ಪಕಾಣಿಕೆಗಳನ್ನು ತಂದೊಪ್ಪಿಸಿ ಹೋಗುತ್ತಲಿದ್ದರು. ಆಗ ಈ ತ್ರೈಖಂಡದಲ್ಲಿರುವ ರಾಜರೆಲ್ಲ ನನ್ನಅಧೀನದಲ್ಲಿದ್ದಾರೆ. ಈಗ ಅಖಂಡಸಾಹಸಿಯಾದ ವರುಣನನ್ನು ಗೆಲ್ಲುತ್ತೀನೆನ್ನುತ್ತಾ ಧನುಜಸಭೆಯನ್ನು ನೋಡಲು, ಹಸ್ತನು ಎದ್ದು ಕೈಮುಗಿದು ಅಪ್ಪಣೆಯಾದರೆ ವರುಣನ ಮೇಲೆ ಯುದ್ಧ ಮಾಡಲು ಸನ್ನದ್ಧರಾಗಿರುವೆವೆಂದು ಶೃತಪಡಿಸಿದರು. ದಶಕಂಠನು ಅವನ ಮಂತ್ರಿಗಳ ವಚನಾನುಸಾರ ಪ್ರತಿಸೂರ್ಯ, ಆಂಜನೇಯರನ್ನೂ ಮತ್ತು ಬಲಯುತರಾದ ವಿದ್ಯಾಧರರ ಸೇನೆಯನ್ನೂ ಯುದ್ಧಕ್ಕೆ ಅನುವಾಗಿಮಾಡಿದನು. ವಾನರದ್ವೀಪದೊಡೆಯನಾದ ಪ್ರತಿಸೂರ್ಯನು ವಾಯುದೇವನ ಸಭೆಗೆ ಹೋಗಿ ವರುಣನಮೇಲೆ ಯುದ್ಧಕ್ಕೆ

ಹೊರಡಬೇಕೆಂತ ಆ ಸಹಾಯಕ್ಕೆ ನಿಮ್ಮ ಮಗನನ್ನು ಕಳುಹಿಸಬೇಕೆಂದು ಬೇಡಿಕೊಳ್ಳಲಾಗಿ, ಮರುತನು ಮಾರುತಿಯನ್ನು ಕರೆದು “ನಿನ್ನನ್ನು ಯುದ್ಧ ಸಹಾಯಕ್ಕೆ ಕಳುಹಿಸಬೇಕೆಂದು ರಾಕ್ಷಸರಾಜನಾದ ದಶಕಂಠನು ಹೇಳಿಕಳು ಹಿಸಿರುವುದಾಗಿ” ಹೇಳಲು, ಮಾರುತಿಯು ತಂದೆಗೆ ನಮಸ್ಕರಿಸಿ ವಿಮಾನವ ನ್ನೇರಿಬರುತ್ತಲಿದ್ದಾಗ ಮಾರುತಿಯನ್ನು ದಶಕಂಠನು ನೋಡಿ ಆತನನ್ನು ಸನ್ಮಾ ನಿಸಿ ತನ್ನ ಜೊತೆಯಲ್ಲಿ ಕರೆದುಕೊಂಡು ಯುದ್ಧಾಭಿಮುಖನಾಗಿ ಹೊರಟನು. ಮಾರುತಿಯು ಪಾತಾಳದಲ್ಲಿರುವ ಪುಂಡ್ರಿಕಾಪುರವನ್ನು ಮುತ್ತಿದನು. ತರುಣ ಮಾರುತಿಯನ್ನು ನೋಡುವುದಕ್ಕಾಗಿ ಮುಂದೆ ಬಂದರು. ಯುದ್ಧಕ್ಕೆ ಪ್ರಾ ರಂಭವಾಯಿತು. ಎಲ್ಲಾ ಕಡೆಗಳಲ್ಲೂ ಧನುಜರ ಬಲವು ಹನುಮಂತನನ್ನ ಮುತ್ತಿತು. ವರುಣನಮಕ್ಕಳು ಹಿಡಿಯಲ್ಪಟ್ಟರು. ವರುಣನು ಈ ಸಮಾಚಾರ ವನ್ನು ಕೇಳಿ ತಾನೇ ಯುದ್ಧಕ್ಕೆ ಬಂದು ಕುಂಭಕರ್ಣನ ಮೇಲೆ ಕೈಮಾಡುವು ದಕ್ಕೆ ಪ್ರಯತ್ನಪಟ್ಟನು. ಅನಂತರ ಸೋಲುವೆಗಳನ್ನು ನೋಡಿ ತನ್ನ ಮಂತ್ರಿ ಗಳನ್ನೆಲ್ಲಾ ಸೇರಿಸಿ ಈಗ ಬಂದಿರುವ ಯುದ್ಧಕ್ಕೆ ಯಾವ ರೀತಿ ನಡೆಯಬೇ ಕೆಂದು ಹೇಳಲಾಗಿ ಆತನ ಮಂತ್ರಿಗಳು ಈಗ ದಶಕಂಠನೊಡನೆ ಸಮಾಧಾನ ಪಡುವುದು ಒಳ್ಳೆಯದೆಂದು ಹೇಳಿದರು. ಆಗ ವರುಣನು ಉಪಾಯನದ್ರವ್ಯ ದೊಡನೆ ರಾವಣನನ್ನು ಕಂಡು ಆತನಿಗೆ ತನ್ನ ಮಗಳಾದ ಸತ್ಯವತಿಯನ್ನು ವಿವಾಹಮಾಡಿಕೊಟ್ಟನು. ಅನಂತರ ಸಾಹಸಿಯಾದ ಮಾರುತಿಯ ಸಾಹಸಕ್ಕೆ ಮೆಚ್ಚಿ ಅವನಿಗೂ ಸ್ತ್ರೀಯರೇ ಮೊದಲಾದ ದ್ರವ್ಯಕಾಣಿಕೆಗಳನ್ನು ಕೊಟ್ಟನು. ವರುಣೇಂದ್ರನು ಈ ರೀತಿ ಯುದ್ಧವನ್ನು ನಿಲ್ಲಿಸಿ ಪರಮ ಜಿನೇಶ್ವರರ ಪಾದ ವನ್ನು ನೆನೆಯುತ್ತಾ ಇದ್ದನು.

೧೩. ರಾವಣನ ವೈಭವ

ಎಲೈ ಅರಸೇ, ದಶಕಂದರನು ಚತುರಂಗಬಲದಿಂದ ಕೂಡಿ ಮೆರೆಯು ತ್ತಲಿದ್ದ ವರುಣನನ್ನು ಜಯಿಸಿ ಆತನಿಂದ ಛತ್ರಚಾಮರಾದಿಗಳನ್ನು ಹೊಂದಿ ಅದ್ವಿತೀಯವೈಭವದಲ್ಲಿದ್ದನು. ರಾಜಾಧಿರಾಜರುಗಳು ಸುತ್ತಿಕೊಂಡಿರುವಾಗ ಕುಲಪರ್ವತಗಳು ಮೇರುಪರ್ವತವನ್ನು ಸುತ್ತಿರುವಂತೆ ಕಾಣಲ್ಪಡುತ್ತಿದ್ದನು. ವರುಣನ ಮಗಳು ದಶಕಂಠನನ್ನು ನೋಡಿ ಮನ್ಮಥನನ್ನು ನೋಡಿದ ರತಿ ಯಂತೆ ವ್ಯಾಮೋಹಿತಳಾದಳು. ಸತ್ಯವತಿಯೊಡನೆ ರಾವಣನು ಅತ್ಯಂತ

ಆನಂದಪಟ್ಟನು. ದಶಕಂಠನು ದೇವ ಗುರು ಶಾಸ್ತ್ರಗಳಲ್ಲಿ ಭಕ್ತಿಯುಳ್ಳವನಾಗಿದ್ದನು. ಈತನಿಗೆ ಮಂಡೋಧರಿ, ಪದ್ಮಿನಿ, ವಿದ್ಯುತ್ಪ್ರಭೆ, ಅಶೋಕೆ, ಶ್ರೀಪ್ರಭೆ, ರತ್ನಮಾಲೆ, ಕನಕವಲ್ಲರಿ, ಸತ್ಯವತಿ, ಇವರೇ ಮೊದಲಾದ ಎಂಟುಸಾಸಿರಸ್ತ್ರೀಯರುಗಳು ಕಾಂತೆಯರಾಗಿದ್ದರು. ಈತನು ತನ್ನ ಮಗಳಾದ ಅನಂಗಮಾಲೆಯನ್ನು ಅನಿಲಸುತನಿಗೆ ಕೊಟ್ಟು ವಿವಾಹಮಾಡಿದನು. ಹೀಗೆ ಕೆಲವು ದಿನಗಳು ಕಳೆದನಂತರ ಮಾರುತಿಯೇ ಮೊದಲಾದ ಕಪಿಕುಲವನ್ನು ಸಂತೋಷದಿಂದ ಹಿಂದಕ್ಕೆ ಕಳುಹಿಸಿ, ರಾವಣನು ಅರಹಂತನಸ್ಮರಣೆ ಮಾಡುತ್ತಿದ್ದನು.

೧೪. ಸೀತಾದೇವಿ ಜನನ.

ಎಲೈ ರಾಜೇಂದ್ರನೇ, ಕನಕಪುತ್ಥಳಿಯಂತಿರುವ ಸುಕುಮಾರಿ ಜಾನಕಿಯ ಉತ್ಪತ್ತಿಯನ್ನು ಹೇಳುವೆನು ಕೇಳುವವನಾಗು—ಒಡ್ಡೋಲಗದಲ್ಲಿಎಲ್ಲಾ ದೊರೆಗಳೊಡನೆ ಸಂತೋಷದಿಂದ ರಾಕ್ಷಸೇಂದ್ರನು ಕುಳಿತಿರಲಾಗ ವಂದಿಪಾಠಕರು ಚಕ್ರಿಯ ವೈಭವವನ್ನು ಹೊಗಳುತ್ತಲಿದ್ದರು. ಈ ಮಹಾರಾಜನಿಗೆ ಹನ್ನೆರಡುಸಾವಿರ ಗಂಡುಮಕ್ಕಳೂ, ಎಂಟುಸಾವಿರ ಧನುಜೆಯರೂ ಮತ್ತು ಹದಿನಾರುಸಾವಿರ ಪಟ್ಟಸ್ತ್ರೀಯರಿರುವರೆಂತಲೂ ಈತನಿಗೆ ಎದುರಾದರಾಜರೇ ಭೂಲೋಕದಲ್ಲಿಲ್ಲವೆಂತಲೂ, ಇವನನ್ನು ಕಂಡರೆ ಸಮುದ್ರಾದಿಗಳು ಸೂರ್ಯಚಂದ್ರರು ಅಷ್ಟವಸುಗಳು ಭಯಪಡುವರೆಂತಲೂ ಈತನೇ ಸರ್ವ ಶಕ್ತನೆಂತಲೂ ಅಷ್ಟೈಶ್ವರ್ಯ ಸಂಪನ್ನನೆಂತಲೂ ಹೊಗಳುತ್ತಲಿದ್ದರು. ಮಂಡೋಧರಿಯ ಗರ್ಭದಲ್ಲಿ ಇಂದ್ರಜಿತಾದಿ ನಾಲ್ಕುಜನ ಪುತ್ರರು ನಾಲ್ಕು ಸಮುದ್ರಗಳಂತೆ ಇದ್ದರೂ ತನಗೆ ಒಬ್ಬ ಹೆಣ್ಣು ಮಗಳು ಹುಟ್ಟಲಿಲ್ಲವೆಂತ ವ್ಯಸನವುಳ್ಳವಳಾಗಿದ್ದಳು. ಒಂದಾನೊಂದುದಿನ ಪ್ರಿಯಕಾಂತನಾದ ದಶಕಂಠನೊಡನೆ ತನಗೆ ಮುದ್ದಾದ ಒಂದು ಹೆಣ್ಣುಮಗುವಿಲ್ಲವೆಂದುಹೇಳಿ ಬಹಳವಾಗಿ ಅನುತಾಪಪಟ್ಟಳು. ಈಕೆಯ ಅನುತಾಪವನ್ನು ನೋಡಿ ದಶಕಂಠನು ಕೇಳಿ ತಾನು ಅನುತಪ್ತನಂತೆ ಸುಮ್ಮನೆ ಕೂತುಕೊಂಡನು. ಅನಂತರ ಮಂಡೋಧರಿಯನ್ನು ಕುರಿತು “ ಯಾತಕ್ಕಾಗಿ ಯೋಚಿಸಬೇಕು? ನಮ್ಮ ಜ್ಯೋತಿಷ್ಕರಿಂದ ನಿನಗೆ ಪುತ್ರಿಲಭ್ಯವುಂಟೋ ಇಲ್ಲವೋ? ಎಂಬುದನ್ನು ತಿಳಿದುಕ್ಕೊಳ್ಳೋಣ ” ವೆಂದು ಹೇಳಿ ಜೋಯಿಸರನ್ನು ಬರಮಾಡಿದನು. ಅವರಿಗೆ ಫಲಪುಷ್ಪ ದಕ್ಷಿಣೆಗಳನ್ನಿಟ್ಟು ಈ ಮಂಡೋಧರಿಗೆ ಪುತ್ರಿರತ್ನವುಂಟಾಗುವುದೇ ಎಂದು ಪ್ರಶ್ನೆ ಮಾಡಿದನು. ಆ

ಜ್ಯೋತಿಷ್ಕರು ತತ್ಕಾಲದಲಗ್ನವನ್ನೂ, ಮಂಡೋಧರಿಯು ಹುಟ್ಟಿದಲಗ್ನವನ್ನು ವಿಚಾರಮಾಡಿ ಮಂಡೋಧರಿಗೆ ಒಂದು ಸುತೆಯು ಲಭ್ಯವಾಗುವದೆಂತಲೂ ಅದರಿಂದ ರಾಜ್ಯಕ್ಕೂ ತಂದೆಯಾದ ನಿನಗೂ ಕೆಡಕಾಗುವದೆಂತಲೂ ಜ್ಯೋತಿಜ್ಞಾನದಿಂದ ಹೇಳಿದರು. ಸತಿಯಾದ ಮಂಡೋಧರಿಯು ಮಗುವಾದರೆ ಸಾಕು- ಕೆಲವು ದಿವಸವಾದರೂ ಅದನ್ನು ಮುದ್ದಾಡಿ, ಶೃಂಗರಿಸಿ, ನೋಡಿ, ಮನೋದುಃಖವನ್ನು ಪರಿಹರಿಸಿ ಕೊಳ್ಳುವನೆಂದು ಹೇಳಿದಳು.

ಹೀಗೆ ಕೆಲವು ದಿವಸಗಳು ಕಳೆದನಂತರ ಋತುಸ್ನಾನದ ರಾತ್ರಿ ರಾಜನಾದ ದಶಕಂಠನ ಸಂಬಂಧದಿಂದ ತೃಪ್ತಳಾಗಿ ಸುಖನಿದ್ರೆಯನ್ನು ಮಾಡುತ್ತ ಮಂಡೋಧರಿಯು ಕೊನೆಜಾವದಲ್ಲಿ ಒಂದು ಸ್ವಪ್ನವನ್ನು ಕಂಡಳೇನೆಂದರೆ– ಪ್ರಕಾಶವಾದ ಮಿಂಚು ವದನವನ್ನು ಪ್ರವೇಶಿತೆಂಬುದೇ ಮೊದಲಾದ ಕನಸನ್ನು ಕಂಡು, ವಂದಿಪಾಠಕರ ಸುಪ್ರಭಾತದಿಂದೆಚ್ಚೆತ್ತು ಪರ್ಯಂಕದಿಂದೆದ್ದು ಪ್ರಭಾತ ಅನುಷ್ಠಾನವನ್ನು ಮಾಡಿ ರಾವಣನ ಸುಖಾಸೀನ ಮಂಟಪಕ್ಕೆ ಹೋದಳು. ರಾಜನಾದ ರಾವಣನು ಮಂಡೋಧರಿಯ ಬರುವಿಕೆಯನ್ನು ನೋಡಿ ಸಂತೋಷದಿಂದೆದ್ದು ಸನ್ಮಾನಿಸಿ ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡನು. ಪತಿವ್ರತಾಶಿರೋಮಣಿಯಾದ ಮಂಡೋಧರಿಯು ತಾನು ಕಂಡ ಸ್ವಪ್ನವನ್ನು ಹೇಳಿದಳು. ಅದನ್ನು ಕೇಳಿ ರಾಜನು ನಿನಗೆ ಪುತ್ರಿರತ್ನವುದಯವಾಗುವುದೆಂದು ಹೇಳಿದನು. ಅದಕ್ಕೆ ಮಂಡೋಧರಿಯು ಭಸ್ಮವಾದ ವಿಷಯಕ್ಕೆ ಫಲವೇನೆಂದು ಕೇಳಲಾಗಿ ದೊರೆಯು ನಮ್ಮವಂಶಕ್ಕೆ ಆ ಮಗುವಿನಿಂದ ಕೇಡಾಗಬಹುದೆಂದು ತಿಳಿಯಬರುತ್ತೆಂದು ಹೇಳಲಾಗಿ ಮಂಡೋಧರಿಯು ಹರ್ಷವಿಷಾದದಿಂದೊಡಗೂಡಿ ತನ್ನ ಆವಾಸಕ್ಕೆ ತೆರಳಿದಳು- ಅನಂತರ ಕಾಲಕಾಲಕ್ಕೆ ಗರ್ಭಚಿಹ್ನೆಯು ಕಂಡುಬಂದು ಗರ್ಭವು ಬಲಿಯುತ್ತಾ ಬರಲು, ಮಂಡೋಧರಿಗೆ ದುರ್ಲಕ್ಷಣವಾದ ಬಯಕೆಯು ಹುಟ್ಟಿ ಕಂಗೆಟ್ಟಳು. ಇವನ್ನು ದಶಕಂಠನು ತಿಳಿದು ಮಂಡೋಧರಿಯ ಸಮೀಪವರ್ತಿಯಾಗಿ ಬಯಕೆಯ ಕಾರಣವನ್ನು ಕೇಳಲಾಗಿ ಆಕೆಯುತಿಳಿಸಲಾರದೆ ನಿಮಗೆ ಷೋಡಶಸಹಸ್ರಸ್ತ್ರೀಯರಿರುವಾಗ್ಯೆ ನನ್ನಮೇಲೆ ಯಾತಕ್ಕೆ ಅನುತಾಪಪಡುತ್ತೀರೆಂದು ಹೇಳಲಾಗಿ ದಶಕಂಠನು ಪ್ರೇಮದಿಂದ ಎಲೈ ಮಂಡೋಧರಿಯೇ ಹದಿನಾರು ಸಾವಿರ ಸ್ತ್ರೀಯರುಗಳ ಮೇಲಿರತಕ್ಕ ಪ್ರೇಮವು ಅರ್ಧಭಾಗವಾಗಿಯೂ ಬಾಕಿ ಅರ್ಧವು ನಿನ್ನಲ್ಲಿರುತ್ತೆಂಬುದಾಗಿ ಬಯಕೆಯಕಾರಣವನ್ನು ಕೇಳಿದನು. ಆಕೆಯು ಹೇಳಲು ಏನೂ ತೋಚದೆ

ಪಿತೃವ್ಯನನ್ನು ಕಳುಹಿಸಿಕೊಡಬೇಕೆಂತ ಬೇಡಿಕೊಂಡಳು. ಆಗ ರಾಜನು ಮಾರೀಚನನ್ನು ಕರೆದು,—ಮಂಡೋಧರಿಯ ಯಾವತ್ತಿನ ವಿಷಯಗಳನ್ನೂ ತಿಳಿಸಿ, ಅವಳ ಬಯಕೆಯನ್ನು ಕಂಡುಹಿಡಿದು ಅದನ್ನು ಪರಿಪೂರ್ತಿ ಮಾಡ ಬೇಕೆಂದು ಆಜ್ಞಾಪಿಸಿದನು. ಮಾರೀಚನು ಮಂಡೋಧರಿಯನ್ನು ಕಂಡು ಬಯಕೆಯೇನೆಂಬುದನ್ನು ವಿಚಾರಿಸಲಾಗಿ ಆಕೆಯು ಅತ್ಯಂತ ವ್ಯಸನಗೊಳ್ಳು ತ್ತಾ, ಸ್ವಾಮಿಯಾದ ದಶಕಂಠನ ಹೃದಯರಕ್ತಪಾನಮಾಡಬೇಕೆಂಬ ತನ್ನ ದುಷ್ಟ ಬಯಕೆಯನ್ನು ವ್ಯಸನದಿಂದ ಹೇಳಲು—ಮಾರೀಚನು ತತ್ಕಾಲಕ್ಕೆ ಅನುಕೂಲವಾದ ಮಾತುಗಳನ್ನಾಡಿ, "ನೀನೇತಕ್ಕೆ ವ್ಯಸನಪಡುತ್ತೀಯೆ? ಅದನ್ನು ನಾನು ಪೂರ್ತಿಗೊಳಿಸುವೆನು." ಎಂದು ಹೇಳಿ ದಶಕಂಠನ ರೂಪನ್ನು ವಸ್ತು ವಿಶೇಷದಿಂದ ಮಾಡಿ ಅವನು ನಿದ್ರೆಯಲ್ಲಿರುವಂತೆ ಕಾಣಬರುವ ರೀತಿ ಯಲ್ಲಿರುವಾಗ್ಗೆ ಮಂಡೋಧರಿಯನ್ನು ಕರೆದು, ನೀನು ಹೋಗಿ ಆತನ ಎದೆ ಯನ್ನು ಸೀಳಿ ರಕ್ತಪಾನಮಾಡಬಹುದೆಂದು ಹೇಳಿದ್ದಕ್ಕೆ ಮಂಡೋಧರಿಯು ಶೋಕಿಸಲು ಮಾರೀಚನು ನಿನಗೆ ಅಸಹಾಯಶೂರರಾದ ಮಕ್ಕಳುಗಳಿರು ವಾಗ ಅವನಿಂದೇನು ಆಗಬೇಕೆಂಬ ಮಾತುಗಳನ್ನಾಡಿದನು. ಮಂಡೋಧರಿಯು ಆತನ ತತ್ಕಾಲದ ಮಾತಿನಿಂದಲೂ, ಬಯಕೆಯ ಬಲದಿಂದಲೂ, ದಶಕಂ ಠನ ಪ್ರತಿಕೃತಿಯನ್ನು ನೋಡಿ, ಅವನೇ ದಶಕಂಠನೆಂದು ನೆನೆದು— ಖಡ್ಗ ದಿಂದ ಎದೆಯನ್ನು ಸೀಳಿ ರಕ್ತವನ್ನು ಕುಡಿದು ಮೂರ್ಚಿತಳಾದಳು. ಆಕ್ಷಣ ವೈದ್ಯರು ಬಂದು ಶೈತ್ಯೋಪಚಾರಗಳನ್ನು ನಡೆಸಿ ದಶಕಂಠನನ್ನು ಬರಮಾಡಿ ಆಕೆಗೆ ಆತನನ್ನು ತೋರಿಸಿದ ಮೇಲೆ ಮಂಡೋಧರಿಯು ಸ್ವಲ್ಪ ಸ್ವಲ್ಪವಾಗಿ ಪ್ರಜ್ಞೆಯನ್ನು ಹೊಂದುತ್ತಾ ಬಂದಳು. ಅನಂತರ ದಶಕಂಠನು ಅವಳನ್ನು ತಕ್ಕೈಸಿ ಶಾಂತವಚನದಿಂದ ಸಮಾಧಾನ ಪಡಿಸಿದನು. ಮಂಡೋಧರಿಯು ಹತ್ತನೇಮಾಸದಲ್ಲಿ ಒಂದು ಹೆಣ್ಣು ಮೊಗುವನ್ನು ಪಿತೃಗಂಡ ಲಗ್ನದಲ್ಲಿ ಹಡೆದ ಳು. ಮೊಗುವನ್ನು ನೋಡಲಾಗಿ ಉರಿಗಣ್ಣಿನಿಂದ ಪ್ರಜ್ವಲಿಸುತ್ತಿತ್ತು. ಜ್ಯೋತಿ ಷ್ಕರ ವಚನಾನುಸಾರವಾಗಿ ಈ ಮೊಗುವನ್ನು ಇಲ್ಲಿ ಇಟ್ಟುಕೊಂಡಿದ್ದರೆ ಅಪಾ ಯವೆಂದು ತಂದೆ ತಾಯಿಗಳು ತಿಳಿದು ಮೊಗುವನ್ನು ಅನೇಕ ರತ್ನಗಳನ್ನು ಒಂದು ಮಂದಾಸನದಲ್ಲಿಟ್ಟು ಲಂಕಾದ್ವೀಪದಿಂದ ಹೊರಗೆ ಬದುಕುವುದಕ್ಕೆ ಸಾಧಕವಾದ ಸ್ಥಳದಲ್ಲಿಟ್ಟು ಬರುವಂತೆ ದೂತಿಯರಿಗೆ ನೇಮಿಸಿ ಸತಿಪತಿಗಳು ಜಿನೇಶ್ವರನ ಪಾದಪದ್ಮವನ್ನು ಸ್ಮರಿಸಿದರು.

೧೫. ಸೀತಾದೇವಿ ಬಾಲಲೀಲಾ.

ಎಲೈ ಶ್ರೇಣಿಕ ಮಹಾರಾಜನೇ! ಸೀತಾದೇವಿಯ ಬಾಲಲೀಲಾವರ್ತನವನ್ನು ಹೇಳಲು ಉದ್ಯೋಗಿಸುವೆವು ಸಾವಧಾನದಿಂದ ಕೇಳುವನಾಗು—

ದಶಕಂಠನ ಅಪ್ಪಣೆಯಂತೆ ಧನುಜ ಧೂತಿಯರುಗಳು ಲಂಕಾಪಟ್ಟಣವನ್ನು ಬಿಟ್ಟು ಉತ್ತರದಿಕ್ಕಿಗೆ ಆಗಮಿಸಿ, ಮಿಥಿಲಾಪಟ್ಟಣದ ಬಹಿರುದ್ಯಾನದಲ್ಲಿ ಕಟ್ಟುತ್ತಲಿರುವನೂತನಮಂಟಪದ ಭೂಶೋಧನೆಯಕುಳಿಯಲ್ಲಿ ಆಮಂದಾಸನ ಸಹಿತವಾದಮೊಗುವನ್ನು ಇಟ್ಟು ತಮ್ಮ ನಗರಿಗೆ ಹೊರಟು ಹೋದರು. ಆದಿನ ಬೆಳಗಿನಕಾಲದಲ್ಲಿ ಕೆಲಸ ಮಾಡುವರುಬಂದು ಕುಳಿಯಲ್ಲಿದ್ದ ಮಂದಾಸನವನ್ನು ತೆಗೆದುನೋಡಲಾಗಿ ಅದರೊಳಗೆ ಅತ್ಯಂತ ಸುಂದರವಾದ ಸ್ತ್ರೀಶಿಶುವು ನವರತ್ನದ ಮಧ್ಯದಲ್ಲಿ ಪ್ರಕಾಶಿಸುತ್ತಿತ್ತು. ಇದನ್ನು ನೋಡಿ ಚರರು ಜನಕ ಮಹಾರಾಜನಿಗೆ ವರದಿಯನ್ನು ಮಾಡಲು, ಜನಕನು ಮಂದಾಸನವನ್ನು ತರಿಸಿ ಮೊಗುವನ್ನು ಕಂಡು ಬಹಳ ಸಂತೋಷಪಟ್ಟು ತನ್ನ ಪತ್ನಿಯಾದ ವೈದೇಹಿಗೆ ಹೇಳಿ ಕಳುಹಿಸಿ ಬರಮಾಡಿ ಆಕೆಗೆ ಮೊಗುವನ್ನು ತೋರಿಸಿ, ನಿನ್ನ ಪುಣ್ಯಾನುಸಾರದಿಂದ ಭೂದೇವಿಯು ನಿನಗೆ ಈ ಮೊಗುವನ್ನು ಹೆತ್ತುಕೊಟ್ಟಿರುವಳೆಂದು ಅಪ್ಪಣೆ ಕೊಡಿಸಿದನು. ವೈದೇಹಿಗೆ ತಾನು ಗರ್ಭವತಿಯಾಗಬೇಕೆಂಬ ಆಶೆಯು ಬಹಳ ದಿನದಿಂದಲೂ ಇದ್ದದ್ದರಿಂದ ಅತ್ಯಂತ ಸಂತೋಷದಿಂದ ಅಂಗೀಕರಿಸಿ ತನ್ನ ಆವಾಸಕ್ಕೆ ಗುಟ್ಟಾಗಿ ತೆಗೆದುಕೊಂಡು ಹೋಗಿ ದಾದಿಯನ್ನು ಕರೆದು ತಾನು ಗೂಢಗರ್ಭವಾಗಿ ಹೆತ್ತಿರುವೆನೆಂದು ಹೇಳಿದಳು. ತತ್ಕ್ಷಣವೇ ದಾದಿಯರು ಓಡಿಬಂದು ದೊರೆಯನ್ನು ಕುರಿತು ವೈದೇಹಿಯು ಪುತ್ರಿಯನ್ನು ಹಡೆದಿರುವಳೆಂತಲೂ, ಅದಕ್ಕೆ ತಕ್ಕ ಉತ್ಸವಾದಿಗಳನ್ನು ನಡೆಸಬೇಕೆಂದು ಅರುಹಲು ಜನಕನು ತತ್ಕಾಲೋಚಿತವಾದ ಕಾರ್ಯಗಳನ್ನು ಮಾಡಿದನು. ವೈದೇಹಿಯು ಪ್ರಸೂತಿಕಾ ಗೃಹದಲ್ಲಿ ಮೊಗುವನ್ನು ಇಟ್ಟು ತಾನು ಬಾಣಂತಿಯಂತೆ ಆಚರಿಸುತ್ತಾ ಸಂತೋಷದಲ್ಲಿದ್ದಳು. ಆಗ ಪ್ರತಿದೇವಸ್ಥಾನದಲ್ಲೂ ಮಂಗಳ ವಾದ್ಯಗಳು ಮೊಳಗಿದವು. ಜನಕನ ಆಯುಧಶಾಲೆಯೊಳಗೆ ಅಮೋಘವಾದ ವಜ್ರಾವರ್ತ ಗಾಂಡೀವವೂ, ಜಂತದ ಗೃಧ್ರವೂ ಸಹ ಉತ್ಪನ್ನವಾಗಲು ಇದನ್ನು ಕಂಡು ಜನಕನು ಸಂತೋಷಪಟ್ಟು ಚೀನಚೀನಾಂಬರಗಳನ್ನು ಸುಮಂಗಲಿಯರುಗಳಿಗೆ ಕೊಟ್ಟು, ಭೂರಿದಕ್ಷಿಣೆಗಳನ್ನು ಮನಬಂದಷ್ಟು

ಹಂಚಿ ಜಿನಸ್ನಾನ ಅರ್ಚನಾ ಶೇಷಾ ಶೀರ್ಷನಾಗಿ ಜಾತಕರ್ಮವನ್ನು ಆ ಸ್ತ್ರೀ ರತ್ನಕ್ಕೆ ಮಾಡಿ, ದ್ವಾದಶದಿವಸದಲ್ಲಿ ಭೂಗರ್ಭದಿಂದ ಮೊಗವು ಉದಯಿಸ ದ್ದರಿಂದ ಸೀತೆಯೆಂಬ ನಾಮವನ್ನು ಆ ಸ್ತ್ರೀಮಗುವಿಗೆ ನಾಮಕರಣಮಾಡಿ, ಸಭಾಸದರರಿಗೆಲ್ಲಾ ಕರ್ಪೂರವೀಳ್ಯವನ್ನು ಕೊಡಿಸಿದನು. ವೈದೇಹಿಯು ಮೊ ಗುವನ್ನು ಕೈಗಳಲ್ಲಿ ಎತ್ತಿಕೊಂಡು ಕಣ್ಣಿನಿಂದ ನೋಡುತ್ತಾ, ಕಿವಿಯಿಂದ ಅದರ ತೊದಲನ್ನು ಕೇಳುತ್ತಾ, ಆದರದಿಂದ ಮೊಗುವಿನ ಕೆಂದುಟಿಯನ್ನು ಸವಿಯುತ್ತಾ, ತನ್ನ ಶರೀರವನ್ನು ತಾನೇ ಮರೆತುಬಿಡುವಷ್ಟು ಆನಂದದಿಂದ ಕೂಡಿದಳು. ಮೊಗುವನ್ನು ಚಿನ್ನದ ತೊಟ್ಟಲಿನಲ್ಲಿ ಹಂಸತೂಲಿಕಾಶಯನ ದಲ್ಲಿಟ್ಟು ದಾದಿಯರು ತೂಗಿ ಹಾಡುತ್ತಿರುವಾಗ ತಾನು ಮೆಲ್ಲಗೆ ಎದ್ದು ಮೊ ಗುವನ್ನು ತೊಟ್ಟಲಲ್ಲಿ ನೋಡಿ ತಾನು ಜೋಗಳಿಯನ್ನು ಹಾಡುತ್ತಾ ತೂಗಲು ಅನುಕರಿಸಿದಳು. ಆ ಮೊಗುವು ಕಾಲಕಾಲಕ್ಕೆ ಸರಿಯಾಗಿ ಬಿದಿಗೆ ಚಂದ್ರ ನಂತೆ ಬೆಳಿಯುವದಕ್ಕೆ ಪ್ರಾರಂಭಿಸಿ ಮೊದಲು ವೈದೇಹಿಯನ್ನೂ, ಜನಕನನ್ನೂ ನೋಡಿ ನಗುವುದಕ್ಕೆ ಪ್ರಾರಂಭಿಸಿತು. ಅನಂತರ ವೈದೇಹಿಯ ಕರಪಲ್ಲವ ವನ್ನು ಎಳೆದು ಚೀಪಿಡುತ್ತಿತ್ತು. ಅನಂತರ ಅಂಬಗಾಲಿಡಲು ಪ್ರಾರಂಭಿಸಿತು. ಇದನ್ನು ವೈದೇಹಿಯು ನೋಡಿ ಕೊನೆಯಿಲ್ಲದ ಆನಂದವನ್ನು ಹೊಂದಿ ಬಂದ ಸಖಿಯರಿಗೆಲ್ಲಾ ಮೊಗುವಿನ ವರ್ಣನೆಯನ್ನು ಹೇಳುವುದರಲ್ಲಿ ಕಾಲವೇ ದೊರೆ ಯುತ್ತಿರಲಿಲ್ಲ. ಮೊಗುವು ತೊದಲು ನುಡಿಯಲು ಪ್ರಾರಂಭಿಸಿ ಅರುಹ ಎಂಬ ದೇವರ ನಾಮವನ್ನು ಉಚ್ಚರಿಸುವುದಕ್ಕೆ ಪ್ರಾರಂಭಿಸಿತು. ಈ ನುಡಿಯನ್ನು ಜನಕನು ಕೇಳಿ, ಈ ಸ್ತ್ರೀರತ್ನವು ಅರ್ಹದ್ಭಕ್ತಳೆಂದು ನಿಶ್ಚಯಿಸಿದನು. ಈ ಮೊಗುವು ಹೇಗೆ ಹೇಗೆ ಬೆಳೆಯುವುದಕ್ಕೆ ಪ್ರಾರಂಭಿಸಿತೋ ಹಾಗೆ ಜನಕನು ಈ ಬಾಲೆಗೆ ತಕ್ಕಹಾಗೆ ಶಾಸ್ತ್ರಾಗಮಗಳನ್ನು ಹೇಳಿಸಲು ಪ್ರಾರಂಭಿಸಿ—ಭರತ, ನಾಟಕ, ನೀತಿ, ಕಾವ್ಯ, ವ್ಯಾಕರಣ, ಛಂದಸ್ಸು, ಗಣಿತ, ಅಲಂಕಾರ, ಸೂಪ, ಮುರುಜ, ವೀಣೆ ಮೊದಲಾದ ಸಕಲ ಶಾಸ್ತ್ರಗಳಲ್ಲಿಯೂ ಪಾರಂಗತಳನ್ನಾಗಿ ಮಾಡಿಸಿದನು. ಯಾವಾಗಲೂ ವೈದೇಹಿಗೆ ಸೀತೆಯನ್ನು ನೋಡಿ ಸಂತೋ ಷಪಡತಕ್ಕದ್ದು ವಿನಹಾ ಮತ್ಯಾವ ಕಾರ್ಯವೂ ಇರಲಿಲ್ಲ. ಸೀತಾ ಯೌವ್ವನ ಪ್ರಾದುರ್ಭಾವದಲ್ಲಿ ಈಕೆಗೆ ತಕ್ಕ ವರನ್ಯಾರೆಂಬುವುದೇ ಒಂದು ದೊಡ್ಡ ಪ್ರಶ್ನೆ ಯಾಗಿ ಜನರಲ್ಲಿ ಕಾಣಿಸಿತು. ಅನೇಕರು ಈ ಸೀತೆಗೆ ರಾಮನು ತಕ್ಕ ವರ ನಾಗಿರುವನೆಂತಲೂ ಬಾಕಿ ಯಾವ ನೃಪನೂ ತಕ್ಕ ವರನಲ್ಲವೆಂದೂ ನಿಶ್ಚೈ

ಸಿದರು. ಆಗ ದೊರೆಯು ಮಂತ್ರಿಗಳೊಡನೆ ಈ ಸೀತೆಗೆ ವರನನ್ನು ಹುಡು ಕುವ ಬಗೆ ಹೇಗೆಂತ ಪ್ರಸ್ತಾಪಿಸಿದನು. ಆಗ ಪುರೋಹಿತರ ವಚನಾನುಸಾರ ಮಂತ್ರಿಗಳು ಎಂಟನೇ ಬಲದೇವನಾದ ರಾಮನೇ ಈಕೆಗೆ ಪತಿಯಾಗುವ ನೆಂದು ನಿಶ್ಚೈಸಿದರು. ಈ ವಿಷಯವನ್ನು ಜನಕಮಹಾರಾಜನು ಕೇಳುತ್ತಾ ಕರ್ಮಾರಿಯಾದ ಜಿನೇಶ್ವರನ ಪಾದಕಮಲವನ್ನು ನೆನೆಯುತ್ತಲಿದ್ದನು.

೧೬. ತರಂಗತಮನ ಜಗಳ.

ಎಲೈ ಶ್ರೋತೃಮುಖ್ಯನಾದ ಶ್ರೇಣಿಕನೇ! ಕೇಳುವವನಾಗು. ಜನ ಕನು ಮಂತ್ರಿಗಳ ಆಲೋಚನಾನುಸಾರವಾಗಿ ವಿನೀತಾಪುರದರಸನಾದ ದಶ ರಥಮಹಾರಾಜನಿಗೆ ಉಡಿಗೆ ತೊಡಿಗೆಗಳನ್ನು ಕೊಟ್ಟು ಚಾರರ ಮುಖಾಂತರ ಕುಶಲಪತ್ರವನ್ನು ಬರೆದು ರಾಮಲಕ್ಷ್ಮಣರನ್ನು ತನ್ನ ಸಹಾಯಕ್ಕಾಗಿ ಸ್ವಲ್ಪ ಕಾಲ ಕಳುಹಿಸಿಕೊಡಬೇಕೆಂಬ ಅರ್ಥವುಳ್ಳ ಒಂದು ಪತ್ರವನ್ನು ಬರೆದು ಕಳುಹಿಸಿದನು. ಅಯೋಧ್ಯಾ ಪಟ್ಟಣದ ಸಭಾಮಂಟಪದಲ್ಲಿ ಕೂತಿದ್ದ ದಶರಥ ಮಹಾರಾಜನಿಗೆ ದೂತನು ನಮಸ್ಕಾರ ಮಾಡಿ ಮಿಥಿಳಾ ಪುರಿಯ ಜನಕನ ಮನಸ್ಸನ್ನು ತಿಳಿದ ಸಚಿವರನು ಬಂದಿರುವದಾಗಿ ಹೇಳಲು, ದಶರಥನು ಆ ಮಂತ್ರಿಯನ್ನು ಕುಳ್ಳಿರಿಸಿ ಬಂದ ವಿವರವನ್ನು ವಿಚಾರಿಸಲು ಅನುವಾದನು. ಆ ಜನಕನ ಮಂತ್ರಿಯು ಮತ್ತು ದೂತರು ಉಪಾಯನವನ್ನು ದೊರೆಯ ಪಾದ ಮೂಲದಲ್ಲಿಟ್ಟು ಪತ್ರವನ್ನೊಪ್ಪಿಸಿ ಪ್ರಾರ್ಥನೆಮಾಡಿದರು. ಏನೆಂದರೆ—"ಜನಕ ಮಹಾರಾಜನು ಒಂದು ಯಜ್ಞಕಾರ್ಯವನ್ನು ಮಾಡಲು ಪ್ರಯತ್ನ ಪಟ್ಟಿರುವ ನು. ಅದರ ಬಾಧೆಯಿಲ್ಲದಂತೆ ಯಜ್ಞವನ್ನು ಸಾಂಗವಾಗಿ ನಡೆಸುವುದಕ್ಕೋ ಸ್ಕರ ನಿಮ್ಮ ಮಕ್ಕಳಾದ ರಾಮಲಕ್ಷ್ಮಣರನ್ನು ಕಳುಹಿಸಿಕೊಡಬೇಕೆಂತ ಮಹಾ ರಾಜನಾದ ಜನಕನು ತಮ್ಮನ್ನು ಬೇಡಿಕೊಳ್ಳುತ್ತಾನೆ" ಎಂದು ಹೇಳಿಕೊಂಡರು. ದಶರಥನು ಇವರ ಮಾತನ್ನು ಕೇಳಿ ಬಾಲಕರನ್ನು ರಾಕ್ಷಸರ ಬಾಧೆ ತಡೆಯು ವುದಕ್ಕೆ ಕಳುಹಿಸಬೇಕೆಂದು ಹೇಳಿ ಕಳುಹಿಸಿರುವುದನ್ನು ನೋಡಿದರೆ ತನಗೆ ಆಶ್ಚರ್ಯವುಂಟಾಗುತ್ತೆಂದು ತನ್ನ ಮಂತ್ರಿಗಳನ್ನು ನೋಡಿ ಹೇಳಿದನು. ಮಂತ್ರಿ ಗಳು ದಶರಥನಿಗೆ ಕೈಮುಗಿದು "ರಾಮಲಕ್ಷ್ಮಣರೆಂಬುವರು ತಮಗೆ ಬಾಲರಾ ಗಿದ್ದರೂ ಅವರು ಎಂಟನೇ ಬಲಕೇಶವರಾಗಿರುವರು- ಅವರು ರಾಕ್ಷಸರನ್ನು ಕೊಂದು ಪರಿಶುದ್ಧವಾದ ಯಶಸ್ಸನ್ನು ದಿಕ್ಕುಗಳಲ್ಲಿ ಪ್ರಸರಿಸುವರಾಗಿದ್ದಾರೆ-

ಆದ್ದರಿಂದ ಮಕ್ಕಳನ್ನು ಕಳುಹಿಸಲು ಯಾವ ಅಡ್ಡಿಯೂ ಇಲ್ಲ" ವೆಂದು ಹೇಳಿದರು ದಶರಥನು ಪುನಹ ಮಂತ್ರಿಗಳೊಡನೆ ಒಂದು ಪ್ರಶ್ನೆಯನ್ನು ಮಾಡಿದನು. ಎಲೈ ಮಂತ್ರಿಗಳೇ! ಜನಕನು ಮಾಡುವ ಯಜ್ಞವು ಶಾಸ್ತ್ರ ಸಂಬಂಧವಾದುದಲ್ಲ. ಹಿಂಸಾತ್ಮಕವಾದದ್ದು. ಅದನ್ನು ಸಾಂಗಗೊಳಿಸುವುದಕ್ಕೆ ನಾವು ಮಕ್ಕಳನ್ನು ಕಳುಹಿಸಬಹುದೇ ಎಂದು ಕೇಳಲಾಗಿ ಸುಬುದ್ಧಿಯೆಂಬ ಮಂತ್ರಿಯು ಹೇಳ ತೊಡಗಿದನು- ಸ್ವಾಮಿ ಯಜ್ಞದ ವಿಷಯ ತಮಗೆ ಗೊತ್ತಿರಬಹುದಾದರೂ ನನ್ನ ಮನೋಲೋಲುಪದಿಂದ ತಮ್ಮ ಅಡಿಗಳಲ್ಲಿ ಬೇಡಿಕೊಳ್ಳುತ್ತೇನೆ.

ಪೂರ್ವದಲ್ಲಿ ಅಯೋಧ್ಯಾಪಟ್ಟಣದಲ್ಲಿ ತಮ್ಮ ವಂಶದಲ್ಲೇ ಸಗರನೆಂಬ ಚಕ್ರವರ್ತಿಯಲ್ಲದ ಒಬ್ಬ ದೊರೆಯು ರಾಜ್ಯವಾಳುತ್ತಿದ್ದನು. ಆ ಸಮೀಪವರ್ತಿಯಾದ ಒಂದು ಅಗ್ರಹಾರದಲ್ಲಿ ಕ್ಷೀರಕದಂಭಕಾಚಾರ್ಯನೆಂಬ ವಿದ್ವಾಂಸನಿದ್ದನು- ಆತನು ತನ್ನ ಮಗನಾದ ಪರ್ವತನೆಂಬುವನಿಗೂ, ಇನ್ನೊಬ್ಬನಾದ ನಾರದನೆಂಬುವನಿಗೂ, ಆ ಪಟ್ಟಣದ ದೊರೆಯಾದ ವಸುಯೆಂಬುವನಿಗೂ, ವೇದಾಧ್ಯಯನವನ್ನು ಮಾಡಿಸಿ ಶಾಸ್ತ್ರಪಾಠಗಳನ್ನು ಕಲಿಸುತ್ತಿದ್ದನು- ಆಗ ಒಂದು ದಿನ ಕ್ಷೀರಕದಂಬಕನು ಶಿಷ್ಯರೊಡಗೂಡಿ ದೇವತಾರ್ಚನೆಗೆ ದರ್ಭಪುಷ್ಪಗಳನ್ನು ತರಬೇಕೆಂದ್ಯೋಚಿಸಿ ಉಪವನಕ್ಕೆ ಪ್ರವೇಶಿಸಿದನು. ಅಲ್ಲಿ ವಿದ್ಯಾವಿಖ್ಯಾತರೆಂಬ ಋಷಿಗಳು ತಮ್ಮ ಶಿಷ್ಯರಾದ ಬ್ರಹ್ಮಚಾರಿಗಳಿಗೆ ಜ್ಯೋತಿಶ್ಯಾಸ್ತ್ರವನ್ನುಪದೇಶಿಸಿ ಅವರ ಜ್ಞಾನಪರೀಕ್ಷಾರ್ಥವಾಗಿ ಈ ನಾಲ್ವರನ್ನೂ ತೋರಿಸಿ ಇವರಿಗೆ ಯಾವ ಯಾವ ಭವಿಷ್ಯಫಲಗಳು ಆಗುತ್ತೆಂತ ಕೇಳಿದರು. ಆಗ ಒಬ್ಬ ಶಿಷ್ಯನು ಕ್ಷೀರಕದಂಬಕನ ವಿಷಯವನ್ನು ಕುರಿತು—ಈತನು ಮಹಾವೇದಾ ವಿವೇದ ವೇದಾಧ್ಯಯನಗಳನ್ನು ಮಾಡಿ ತಪೋನಿಷ್ಟನಾಗಿ ಸದ್ಗತಿಯನ್ನು ಹೊಂದುವನು. ವಸು ಎಂಬುವನು ಸತ್ಯವಂತನಾಗಿದ್ದುಕೊಂಡಿದ್ದು, ಪರ್ವತನ ಮಾತಿಗೊಳಗಾಗಿ ದುರ್ಗತಿಯನ್ನು ಹೊಂದುವನು. ಪರ್ವತನು ಹಿಂಸಾತ್ಮಕವಾದ ಯಜ್ಞಕ್ಕೆ ಅನುಸಾರವಾಗಿ ಶ್ರುತ್ಯರ್ತವನ್ನು ಮಾರ್ಪಡಿಸಿ ಮಿಧ್ಯಾಬೋಧನೆಯನ್ನು ಮಾಡಿ ನರಕಕ್ಕೆ ಇಳಿಯುವನು. ನಾರದನು ಶಾಸ್ತ್ರಪರಾಯಣನಾಗಿ ಅಹಿಂಸಾತ್ಮಕ ಧರ್ಮವನ್ನು ವೃದ್ಧಿಗೊಳಿಸಿ ಸದ್ಗತಿಯನ್ನು ಹೊಂದುವನು. ಎಂಬ ವಿವರಣೆಯನ್ನು ಆ ಶಿಷ್ಯರು ಹೇಳುವದನ್ನು ಕ್ಷೀರಕದಂಭಕನು ಕೇಳುತ್ತಾ ಮನಸ್ಸಿನಲ್ಲಿ ಅನುತಾಪವುಳ್ಳವನಾಗಿ ಶಿಷ್ಯರೊಡನೆ ಮನೆಗೆ ಬಂದನು-

ಒಂದಾನೊಂದು ದಿವಸ ನಾರದ ಪರ್ವತರು ಪುಷ್ಪಾರ್ಥವಾಗಿ ಹೋ

ಗುತ್ತಾ, ನಾರದನು ಪರ್ವತನನ್ನು ಕುರಿತು, ಇತ್ತ ಗರ್ಭಿಣಿಯಾದ ರಾಜಸ್ತ್ರೀಯೊಬ್ಬಳು ಹೋದಂತೆಯೂ, ಅವಳು ಕೂತಿದ್ದ ಆನೆಗೆ ಒಂದು ಕಣ್ಣಿಲ್ಲದಂತೆಯೂ ಹೇಳುತ್ತಾ ಬಂದನು. ಹಾಗೇನೆ ಈ ಮಾರ್ಗದಲ್ಲಿ ಏಳುನವಿಲುಗಳು ಹೋಗಿರುತ್ತವೆಯೆಂತಲೂ ಆದರಲ್ಲಿ ಆರುಹೆಣ್ಣುನವಿಲೆಂತಲೂ ಒಂದುಗಂಡು ನವಿಲೆಂತಲೂ ಹೇಳಿದನು. ಇದನ್ನು ಕೇಳಿ ಪರ್ವತನಿಗೆ ಅನುತಾಪಹುಟ್ಟಿತು. ಸ್ವಲ್ಪದೂರ ನಡೆಯಲಾಗಿ ಆರುಹೆಣ್ಣುನವಿಲುಗಳೂ ಒಂದು ಗಂಡು ನವಿಲೂ ಸಹ ಕಣ್ಣಿಗೆ ಬಿದ್ದವು. ಅನಂತರ ಈ ಇಬ್ಬರೂ ಹಿಂತುರಿಗಿ ಬರುವಾಗ್ಯೆ ನಾರದನು ಪರ್ವತನನ್ನು ಕುರಿತು, ಇಲ್ಲಿಂದ ಹೋದ ಸ್ತ್ರೀಯು ಗಂಡು ಮೊಗುವನ್ನು ಹಡೆದಳೆಂದು ಹೇಳಿದನು. ಈ ಮಾತುಗಳನ್ನೆಲ್ಲಾ ಕೇಳಿ ತಂದೆಯಾದ ಕ್ಷೀರಕದಂಭಕನು ಈ ವಿಷಯವಾದ ಬೋಧನೆಯನ್ನು ನನಗೆ ಮಾಡದೆ ದೇಶಾಂತರದಿಂದ ಬಂದ ನಾರದನಿಗೆ ಈ ತಿಳಿವಳಿಕೆಯ ಬೋಧನೆಯನ್ನು ಮಾಡಿದನೆಂದು ತಂದೆಯ ಮೇಲೆ ಕೋಪವುಳ್ಳವನಾಗಿ ಊರಿಗೆ ಬರುತ್ತಿರುವಾಗ ನಾರದನು ಹೇಳಿದವಿಷಯಗಳೆಲ್ಲಾ ನಿಶ್ಚಯವಾಗಿ ತೋರಿಬಂದವು. ಪರ್ವತನು ಮನೆಗೆ ಹೋಗುತ್ತಲೇ ತಾಯಿಯ ಪಾದದಮೇಲೆ ತಲೆಯಿಟ್ಟು ಗೋಳೆಂದನು ಆಕೆಯು ಆತನನ್ನು ಸಮಾಧಾನಪಡಿಸಿ, ಕಾರಣವೇನೆಂದು ಕೇಳಲು, "ನಮ್ಮ ತಂದೆಯು ದೇಶಾಂತರದ ಶಿಷ್ಯನಿಗೆ ಸಕಲ ವಿದ್ಯೆಗಳನ್ನು ಕಲಿಸಿ ನನಗೆಯಾವುದನ್ನೂ ಹೇಳದೆ ಮುಂದಬುದ್ಧಿಗೆ ಆಸ್ಪದಪಡಿಸಿದನು" ಎಂದು ಅಂಗಲಾಚಿ ಬೇಡಿಕೊಂಡನು. ಈ ವರ್ತಮಾನವನ್ನು ತಾಯಿಯು ಕೇಳಿ ಮನದಲ್ಲಿ ಮಗನಿಗಾದ ಕೊರತೆಯನ್ನು ಕುರಿತು ಬಹಳಸಂಕಟಪಟ್ಟಳು. ಆದಿನ ಪತಿಯಾದ ಕ್ಷೀರಕದಂಭಕನಿಗೆ ದೇವಪೂಜ ಪರಿಚರ್ಯವನ್ನು ಮಾಡಿ ಆತನ ಭೋಜನಕ್ಕೆ ಅನುಕೂಲಪಡಿಸಿ ಭೋಜನಾನಂತರ ಆತನಬಳಿಗೆ ತಾಂಬೂಲವನ್ನು ತಂದಿಟ್ಟು ನಿಂತುಕೊಂಡಿರಲು, ಕ್ಷೀರಕದಂಭಕನು ಹೆಂಡತಿಯು ಪದ್ಧತಿಪ್ರಕಾರ ನಡೆಯದೆ ತನ್ನ ಮುಂದೆ ನಿಂತುಕೊಂಡದ್ದನ್ನುನೋಡಿ, ಏನೋ ವಿಶೇಷವಿರಬಹುದೆಂದು ಯೋಚಿಸಿ ಹೆಂಡತಿಯನ್ನು ಕುರಿತು ಸಲ್ಲಾಪವನ್ನುಮಾಡಿದನು. ಹೆಂಡತಿಯು ಸ್ವಲ್ಪಬಗ್ಗಿ, "ನೀವು ಮಗನಾದ ಪರ್ವತನಿಗಿಂತಲೂ ನಾರದನಲ್ಲಿ ಪ್ರೇಮವುಳ್ಳವರಾಗಿರುವರೆಂದು ಪರ್ವತನ ಮೂಲಕ ತಿಳಿದುಕೊಂಡಿದ್ದೇನೆ" ಎಂದುನಮ್ರಾಭೂತಳಾಗಿ ಬೇಡಿಕೊಳ್ಳಲು, ಕ್ಷೀರಕದಂಭಕನು ನಾರದಪರ್ವತರನ್ನು ಕರೆಸಿ ವಿದ್ಯಮಾನವನ್ನು ತಿಳಿದುಕೊಂಡನು.

ಆಗ ಆತನು ನಾರದನನ್ನು ಕುರಿತು "ನೀನು ಭವಿಷ್ಯಹೇಳಿದ್ದು ಹೇಗೆ?" ಎಂದು ಪ್ರಶ್ನಿಸಿದನು. ಅದಕ್ಕೆ ನಾರದನು, "ಆನೆಯ ಹೆಜ್ಜೆಯನ್ನು ಕಂಡು ಆನೆಯು ಈ ಮಾರ್ಗವಾಗಿ ಬಂದಿರುವುದೆಂದು ಕಂಡುಹಿಡಿದೆ. ಒಂದುಮರದ ಕೊನೆಗೆ ಪುಷ್ಪಸಿಕ್ಕಿರುತ್ತಿದ್ದದ್ದನ್ನುನೋಡಿ ಒಬ್ಬ ರಾಜಸ್ತ್ರೀಕುಳಿತಿರಬಹುದೆಂದು ಊಹಿಸಿದೆ. ಅವಳು ಒಂದು ಸ್ಥಳದಲ್ಲಿ ಮರಳಿನಮೇಲೆ ಒಬ್ಬರಲಾಗಿ ಮಲಗಿದ್ದದನ್ನುನೋಡಲು ಗರ್ಭಿಣಿಯಾಕಾರಉದರದ ಗುರ್ತಿನಿಂದಗೊತ್ತಾಯಿತು ಆನೆಯು ಮರದಲ್ಲಿದ್ದ ಸೊಪ್ಪುಗಳನ್ನು ಒಂದೇ ಪಾರ್ಶ್ವದಲ್ಲಿ ತಿಂದಿದ್ದರಿಂದ ಆನೆಗೆ ಒಂದುಭಾಗ ಕಾಣಲಾರದೆಂದು ಯೋಚಿಸಿದೆನು. ಮಾರ್ಗದಲ್ಲಿ ಏಳು ನವಿಲುಗಳ ಪಾದದ ಗುರ್ತು ಇದ್ದದ್ದರಿಂದ ಅದನ್ನು ಕಂಡುಹಿಡಿದೆ. ಅದರಲ್ಲಿ ಒಂದರ ಗರಿಯು ದೊಡ್ಡದಾಗಿ ಮರಳಿನ ಮೇಲೆ ಗುರುತಾದ್ದರಿಂದ ಒಂದು ಗಂಡುನವಿಲೆಂದು ಹೇಳಿದೆ. ಪುರಕ್ಕೆ ಬರುವಾಗ ಊರುಪ್ರವೇಶವಾದ ಕೂಡ್ಲೆ ರಾಜಸೇವಕರು ಸಕ್ಕರೆಬಾಳೇಹಣ್ಣುಗಳನ್ನು ಹಂಚುತ್ತಿದ್ದದ್ದರಿಂದ ಗಂಡುಮಗು ಹುಟ್ಟಿರುವುದೆಂದು" ಹೇಳಿದೆ ಎನಲಾಗಿ ಕ್ಷೀರಕದಂಭಕನು ಹೆಂಡತಿಗೆ ನಾರದನ ಬುದ್ಧಿಯನ್ನು ಮನವರಿಕೆಗೆ ತಂದನು. ಅನಂತರ ಆತನು ಎರಡುಪಕ್ಷಿಗಳನ್ನು ಹಿಟ್ಟಿನಲ್ಲಿಮಾಡಿ, ಇದರ ಶಿರಸ್ಸನ್ನು ಯಾವ ಪ್ರಾಣಿಯೂ ಇಲ್ಲದ ಸ್ಥಳದಲ್ಲಿ ಯಾರಿಗೂ ಕಾಣದಂತೆ ಮುರಿದುತರಬೇಕೆಂದು ಈ ಇಬ್ಬರಿಗೂ ಅಪ್ಪಣೆ ಮಾಡಿ ಕಳುಹಿಸಿಕೊಟ್ಟನು. ಪರ್ವತನು ತನ್ನ ಕೆಲಸವನ್ನು ಅತಿಜಾಗ್ರತೆಯಾಗಿ ಮಾಡಿ ಪೂರೈಸಬೇಕೆಂದು ಯೋಚಿಸಿ ತನ್ನ ಮನೆಯ ಬಹಿರುದ್ಯಾನದಲ್ಲಿ ಯಾರೂಇಲ್ಲದ್ದನ್ನು ನೋಡಿ ಜಾಗ್ರತೆಯಾಗಿ ಪಕ್ಷಿಯ ಕೊರಳನ್ನು ಮುರಿದು ತಂದೆಯಮುಂದಿಟ್ಟನು. ಕ್ಷೀರಕದಂಭಕನು ನಾರದನು ಯಾಕೆ ಬರಲಿಲ್ಲವೆಂದು ಮಗನನ್ನು ಕೇಳಲಾಗಿ, ಪರ್ವತನು "ನಾರದನು ಪೆಚ್ಚುಪೆಚ್ಚಾಗಿ ಹಿಟ್ಟಿನ ಪಕ್ಷಿಯನ್ನು ಕೈಯಲ್ಲಿ ಹಿಡಿದುಕೊಂಡು ಮನೆಯ ಹೊರಬಾಗಲಿನಲ್ಲಿ ದಟ್ಟವಾಗಿ ನಿಂತಿದ್ದಾನೆ" ಎಂದುಹೇಳಿದನು. ಅನಂತರಪರ್ವತನು ತಂದೆಯಅಪ್ಪಣೆಪ್ರಕಾರ ನಾರದನನ್ನು ಕರೆದನು. ಆಗ ಕ್ಷೀರಕದಂಭಕನು ಆ ಇಬ್ಬರನ್ನೂ ನೋಡಿ, ಅವರಕರ್ತವ್ಯವನ್ನು ಕಂಡು ನಾರದನನ್ನು ನೀನು ಯಾತಕ್ಕೆ ಸುಮ್ಮನೆ ನಿಂತಿದ್ದೆಯೆಂದು ಕೇಳಿದನು. ಅದಕ್ಕೆ ನಾರದನು ಯಾವ ಪ್ರಾಣಿಯೂ ಇಲ್ಲದ ಸ್ಥಳ ಯಾವುದೂ ನನಗೆಗೊತ್ತಾಗಲಿಲ್ಲ. ಪ್ರತಿಕ್ಷಣದಲ್ಲೂ ಸೂರ್ಯಚಂದ್ರನಕ್ಷತ್ರಾದಿಗಳೂ ಏಕೇಂದ್ರಿಯಾದಿ ಪ್ರಾಣಿಗಳೂ ಪ್ರತ್ಯಕ್ಷವಾಗಿ ಕಾಣುತ್ತಿರುವಾಗ

ನಾನು ಯಾವಪ್ರಾಣಿಯೂ ಕಾಣದಂತೆ ಹೇಗೆ ನಡೆಸುವುದೆಂದು ಯೋಚಿಸುತ್ತಲಿದ್ದೇನೆಂದು ಹೇಳಿದನು. ಮತ್ತು ಅಹಿಂಸಾತ್ಮಕ ಧರ್ಮವನ್ನು ಉಪದೇಶ ಮಾಡಿದ್ದೀರಿ. ಅದು ಜೀವವಸ್ತುವಿನ ಪ್ರತಿಕೃತಿಯನ್ನು ಕೂಡ ಹಿಂಸೆ ಮಾಡ ಕೂಡದೆಂತ ಅಪ್ಪಣೆಯಾಗಿದೆ. ಹೀಗಿರುವಾಗ್ಗೆ ಈ ಪಿಷ್ಟಪಕ್ಷಿಯ ಹ್ಯಾಗೆ ಕಡಿಯಬೇಕೆಂತ ಯೋಚಿಸುತ್ತಲಿದ್ದೆನೆಂದು ಹೇಳಲಾಗಿ ಕ್ಷೀರಕದಂಭಕನು ಈತನ ಬುದ್ಧಿಯನ್ನು ಕುರಿತು ಸಂತೋಷಪಟ್ಟು ಮಗನ ದುರ್ಬುದ್ಧಿಗೆ ವ್ಯಸನಪಟ್ಟು ಹೆಂಡತಿಯನ್ನು ಕುರಿತು "ನೋಡಿದೆಯಾ? ಈ ಇಬ್ಬರ ಮಾತು ಕಥೆಗಳನ್ನು ಕೇಳಿದೆಯಾ! ತಂದೆಗೆ ಮಗನಿಗಿಂತಲೂ ಶಿಷ್ಯನು ಪ್ರೀಯನಾಗುವನೇ? ಇದನ್ನು ನೀನು ಯೋಚಿಸದೆ ನನ್ನನ್ನು ಪ್ರಶ್ನೆ ಮಾಡುತ್ತೀಯೆ" ಎಂದು ಹೇಳಿ, ವೈರಾಗ್ಯವನ್ನು ಹೊಂದಿ ದೊರೆಯುಮಗನಾದ ವಸುವಿನ ಹತ್ತಿರಕ್ಕೆ ಹೋಗಿ, ಮಗನನ್ನೂ ಹೆಂಡತಿಯನ್ನೂ ಸಹ ಕಾಪಾಡಬೇಕೆಂದು ಹೇಳಿ ನಾರದನಿಗೂ ಉಚಿತವಾದ ವಾಕ್ಯವನ್ನು ಹೇಳಿ ಪಿಹಿತಾಸ್ರವ ಭಟ್ಟಾರಕರ ಸಮೀಪಕ್ಕೆ ಹೋಗಿ ತಪಸ್ಸನ್ನು ತೆಗೆದುಕೊಂಡನು.

ರಾಜಪುತ್ರನಾದವಸುವು ತಂದೆಯಆಧಿಪತ್ಯವನ್ನು ಹೊಂದಿ ವಿನೋದಾರ್ಥವಾಗಿ ವನಪ್ರವೇಶಮಾಡಿ ಬಿಸಲಿನತಾಪಕ್ಕೆ ಸಿಕ್ಕಿ ವಿಶ್ರಾಂತಿಗಾಗಿ ಚೂತವೃಕ್ಷದನೆರಳಿನಲ್ಲಿ ಪವಳಿಸಿದನು. ದೃಷ್ಟಿಯನ್ನು ಅಂತರೀಕ್ಷದಲ್ಲಿಟ್ಟಿರುವಾಗ್ಯೆ ಅಂತರೀಕ್ಷ ಮಾರ್ಗದಲ್ಲಿ ಬಂದ ಪಕ್ಷಿಗಳು ತಾಟಸಿ ಕೆಳಗೆ ಬಿದ್ದು ಹೋಗುತ್ತಿದ್ದವು. ಇದೇನೆಂದು ಯೋಚಿಸಿ ಆಸ್ಥಳವನ್ನು ಪರೀಕ್ಷಿಸಲಾಗಿ ಆಕಾಶಸ್ಫಟಿಕಶಿಲೆಯು ಗೋಚರವಾಯಿತು. ಇದನ್ನು ತೆಗೆದುಕೊಂಡುಬಂದು ಶಿಲ್ಪಿಗಳನ್ನು ಕರೆಸಿ ಅಂತರಂಗವಾಗಿ ಆಸ್ಫಟಿಕದಿಂದ ನಾಲ್ಕುಕಾಲುಗಳನ್ನು ಮಾಡಿಸಿ ಅದರ ಮೇಲೆ ಸಿಂಹಾಸನವನ್ನು ಇರಿಸಿದನು. ಆ ಸ್ಫಟಿಕಶಿಲೆಯು ಕಣ್ಣಿಗೆ ಆಕಾಶದಂತೆ ಕಾಣಬರುತ್ತಲಿದ್ದುದರಿಂದ ಸಿಂಹಾಸನವು ಆಕಾಶದಲ್ಲೇ ನಿಂತಿರುತ್ತದೆ. ಈವಸುವು ಸತ್ಯಸಂಧನಾದ್ದರಿಂದ ಆಕಾಶದಲ್ಲಿ ಈತನ ಸಿಂಹಾಸನವು ನಿಂತಿದೆಯೆಂದು ಪ್ರಸಿದ್ಧಿಯಾಯಿತು. ಪರ್ವತನು ತಂದೆಯಂತೆ ಶಿಷ್ಯರನ್ನು ಕೂಡಿಕೊಂಡು "ಅಜೈರ್ಹೋತವ್ಯಂ" ಎಂಬಶೃತಿಗೆ ಅಜಎಂದರೆ ಮೂರುವರ್ಷದ ಭತ್ತವೆಂತ ಅರ್ಥಹೇಳದೆ, ಅಜವೆಂದರೆ ಆಡೆಂದು ಅಪಾರ್ಥಮಾಡಿ ಹಿಂಸೋಪದೇಶವನ್ನು ಬೋಧಿಸುತ್ತಿದ್ದನು. ಇದನ್ನು ಕೇಳಿ ನಾರದನು ಪರ್ವತನಿಗೆ ಸರಿಯಾದ ಬುದ್ಧಿಯನ್ನು ಹೇಳಿದನು. ಈಬುದ್ಧಿವಾದವನ್ನು ಪರ್ವತನುತಿಳಿದು

ಕೊಳ್ಳಲಾರದೆ ದೂಷಣೆಯೆಂದು ಭಾವಿಸಿ ತಾನು ಹಿಡಿದ ಅರ್ಥವನ್ನು ಪಟ್ಟಾಗಿ ಹಿಡಿದನು. ಇದು ಮಹಾಸಭೆಗೆ ತರಲ್ಪಟ್ಟಿತು. ಪರ್ವತನು ತಮ್ಮ ತಂದೆಯು ಅಜಶಬ್ದಕ್ಕೆ ಆಡೆಂತಲೇ ಅರ್ಥಹೇಳಿದನೆಂತಲೂ ಇದಕ್ಕೆ ರಾಜನಾದ ವಸುವು ಸಾಕ್ಷಿಯಾಗಿದ್ದಾನೆಂದೂ ಹೇಳಿ, ಆ ಸತ್ಯವಸುವನ್ನು ಸಭೆಗೆ ಬರಮಾಡಿದನು. ಆತನು ಗುರುಪತ್ನಿಯ ದಾಕ್ಷಿಣ್ಯಕ್ಕೂ ಗುರುಪುತ್ರನ ಸಹಾಧ್ಯಾಯಕ್ಕೂ ಮರುಳಾಗಿ ಅಜಶಬ್ದಕ್ಕೆ ಕ್ಷೀರಕದಂಭಕನು ಆಡೆಂತಲೇ ಅರ್ಥಹೇಳಿದನೆಂದು ನುಡಿದನು. ಕೂಡಲೇ ಆತನ ಸಿಂಹಾಸನವು ಅಧಃಪತನವಾಯಿತು. ಗ್ರಾಮದೇವತೆಗಳು ಆತನನ್ನು ಪಾತಾಳಕ್ಕೆಳೆದರು. ಮಹಾಜನರೆಲ್ಲ ನಾರದನ ಮಾತುಸತ್ಯವೆಂದೂ ಸನಾತನ ಧರ್ಮ ಅಡಿಯಾದ ಶಾಸ್ತ್ರಕ್ಕೆ ಅನುಸಾರವಾದದ್ದೆಂತಲೂ ಉದ್ಘೋಷಮಾಡಿ ನಾರದನಿಗೆ ಉಪಾಧ್ಯಾಯಪಟ್ಟವನ್ನು ಕೊಟ್ಟು ಪರ್ವತನನ್ನು ಪಟ್ಟಣದಿಂದ ಹೊರಗೆ ಹಾಕಿದರು. ಪರ್ವತನು ವ್ಯಸನದಿಂದ ಕೊರಗಿ ಅನ್ನಾಹಾರವಿಲ್ಲದೆ ಅಲೆಯುತ್ತಿದ್ದನು.

ಇತ್ತ ಸಗರನು ಸುಶೀಲೆಯ ಸ್ವಯಂವರಕ್ಕೆ ಹೋಗಬೇಕೆಂದು ಪ್ರಯತ್ನಿಸಿ ಅಲಂಕರಿಸಿಕೊಂಡು ಕನ್ನಡಿಯನ್ನು ನೋಡುತ್ತಿರುವಾಗ ಒಂದು ಬೆಳಿಯ ಕೂದಲನ್ನು ನೋಡಿದನು. ಅದನ್ನು ನೋಡಿ ವೃದ್ಧನಾದ ನನ್ನನ್ನು ಸುಶೀಲೆಯು ವರಿಸುವಳೇ ಎಂದು ವಿರಕ್ತನಾಗಿ ತಪಸ್ಸಿಗೆ ಹೊರಡಲು ಪ್ರಯತ್ನಪಡುತ್ತಿರುವಾಗ, ಅವನನ್ನು ಸಾಕಿದ ದಾದಿಯಾದ ಮಾಯೆ ಎಂಬುವಳು ಈ ವಿಷಯವನ್ನು ತಿಳಿದು ರಾಜನ ಹತ್ತಿರ ಬಂದು ನಿನಗೆ ನರೆಬಂದಿರುವುದು ಸುಖದನರೆ, ಇದನ್ನುನೋಡಿ ವಿರಕ್ತಿಯನ್ನು ಹೊಂದಿದೆಯಾ. ನಿನಗೇನೆ ಸುಶೀಲೆಯು ಸ್ವಯಂವರದಲ್ಲಿ ಮಾಲೆಹಾಕುವುದಕ್ಕೆ ತಕ್ಕ ಕಾರಣವನ್ನು ಮಾಡುತ್ತೇನೆಂದು ಬರವಸೆಕೊಟ್ಟಳು. ಅದರ ಮೇಲೆ ತಪಸ್ಸಿಗೆ ಹೋಗದೆ ನಿಂತನು. ಇತ್ತ ಈ ದೊರೆಯ ಮಂತ್ರಿಯಾದ ಆಗಂತುಕನೆಂಬುವನು ಒಂದು ಸ್ವಯಂವರಶಾಸ್ತ್ರವನ್ನು ರಚಿಸಿ ಅದರಲ್ಲಿ ಜೇನುತುಪ್ಪದಂತೆ ಕಣ್ಣುಳ್ಳ ಪಾಪಿಗಳನ್ನು ಸೇರಿಸಕೂಡದೆಂದು ಬರೆಸಿದನು. ಈ ಪುಸ್ತಕವು ಸುಶೀಲೆಯ ಸ್ವಯಂವರ ಮಂಟಪವನ್ನು ಕಟ್ಟುವುದಕ್ಕೆ ಭೂಶೋಧನೆ ಮಾಡುವ ಸ್ಥಳದಲ್ಲಿ ಬಚ್ಚಿಟ್ಟನು. ಈ ಪುಸ್ತಕವು ಭೂಶೋಧನೆಯ ಕೆಲಸಗಾರರ ಕೈಗೆ ಸಿಕ್ಕಿ ಅದು ಸುಶೀಲೆಯ ತಂದೆಯ ಕೈಸೇರಿತು. ದೊರೆಯು ಇದನ್ನು ಓದಿಸಿಕೇಳಿ ಸ್ವಯಂವರವಿಧಾನವು ಈ ಪುಸ್ತಕದಲ್ಲಿದ್ದಂತೆ ನಡೆಯಬೇಕೆಂದು ನಿಧಾಯಕವಾಡಿದನು. ಸ್ವಯಂವರ

ಮಂಟಪವನ್ನು ರಚಿಸುವರು ಈ ಶಾಸ್ತ್ರವನ್ನು ರಾತ್ರಿಯ ಹೊತ್ತು ತಿಳುವಳಿಕೆಗಾಗಿ ಓದುತ್ತಲಿದ್ದರು. ಈ ರಾಜಪುತ್ರಿಯ ಸೋದರಮಾವನ ಮಗನಾದ ಮಧುಪಿಂಗಳನೆಂಬುವನು ಇದನ್ನು ಕೇಳಲು ಆಗಾಗ್ಗೆ ಬರುತ್ತಿದ್ದನು. ಅದರಲ್ಲಿ ಜೇನುತುಪ್ಪದ ಕಣ್ಣಿನಂತಿರುವರು ಅಂದರೆ ಮಧುಪಿಂಗಳರು ಬರಬಾರದೆಂದು ಇದ್ದದ್ದನ್ನು ಕೇಳಿ ವಿರಕ್ತಿಯನ್ನು ಹೊಂದಿ ತಪಸ್ಸಿಗೆ ಹೊರಟುಹೋದನು. ಈಮಧುಪಿಂಗಳನಿಗೆ ಮಾಲೆಹಾಕಬೇಕೆಂತ ರಾಜಪುತ್ರಿಯ ತಾಯಿಯು ಮಗಳಿಗೆ ಕಟ್ಟಪ್ಪಣೆಕೊಟ್ಟಿದ್ದಳು- ಸ್ವಯಂವರವು ಪ್ರಾರಂಭವಾಯಿತು.

ಸಗರನ ದಾದಿಯು ರಾಜಪುತ್ರಿಯನ್ನು ಕಂಡು ಬಹಳವಾಗಿ ಸಗರಮಹಾರಾಜನ ರೂಪುಲಾವಣ್ಯ ಸೌಗುಣ್ಯ ಐಶ್ವರ್ಯ ಸೌಜನ್ಯವನ್ನು ವಿವರಿಸಿ ನಿನಗೆ ಆತನೇ ಅನುರೂಪನಾದ ವರನೆಂದು ಪ್ರತಿದಿನವೂ ಒತ್ತಾಯಮಾಡಿ ಹೇಳುತ್ತಿದ್ದಳು. ಸ್ವಯಂವರ ದಿವಸವೂ ಬಂದಿತು. ಆ ದಿವಸ ಅನೇಕ ರಾಜರುಗಳೂ, ಸಗರನೂ ಸಹ ಸ್ವಯಂವರ ಮಂಟಪಕ್ಕೆ ಬಂದು ಸೇರಿದರು. ಅಲಂಕಾರಯುಕ್ತಳಾದ ರಾಜಪುತ್ರಿಯು ಸಭಾಮಂಟಪಕ್ಕೆ ಬಂದು ವರನನ್ನು ಆರಿಸುವುದರಲ್ಲಿ ಆಸಕ್ತಳಾಗಿ ತನ್ನ ತಾಯಿಯ ಕೋರಿಕೆಯಂತೆ ಮಧುಪಿಂಗಳನಿಗೆ ಮಾಲಿಕೆಹಾಕಬೇಕೆಂದು ಎಲ್ಲಿ ಹುಡಿಕಿದರೂ ಸಿಕ್ಕಲಿಲ್ಲ- ದಾದಿಯ ಹೊಗಳಿಕೆಯಿಂದ ಸಗರನನ್ನು ನೋಡಿ ಆತನ ಕೊರಳಿಗೆ ಪುಷ್ಪಮಾಲಿಕೆಯನ್ನು ಹಾಕಿ ವರಿಸಿದಳು. ಸಗರನು ರಾಜಪುತ್ರಿಯಾದ ಸುಶೀಲೆಯಿಂದೊಡಗೂಡಿ ಸುಖವಾಗಿ ಕಾಲವನ್ನು ಕಳೆಯುತ್ತಿದ್ದನು. ಇತ್ತ ಮಧುಪಿಂಗಳನು ತಪೋಬಲನಾಗಿ ಆಹಾರ ನಿಮಿತ್ತವಾಗಿ ಒಂದು ಪಟ್ಟಣಕ್ಕೆ ಬಂದನು. ಅಲ್ಲಿದ್ದ ಅಷ್ಟಾಂಗನಿಮಿತ್ತಜ್ಞರು ಈತನನ್ನು ನೋಡಿ ಈತನು ರಾಜಚಿಹ್ನೆಯುಳ್ಳವನಾಗಿರುವನು. ಈಗ ಇಷ್ಟು ಚಿಕ್ಕತನದಲ್ಲೇ ತಪಸ್ವಿಯಾಗಿರುವದರಿಂದ ಶಾಸ್ತ್ರದಲ್ಲಿ ಈತನಿಗೆ ನಂಬಿಕೆಯು ಇಲ್ಲವೆಂತಲೂ ಅವರ ಗುರುಗಳಲ್ಲಿ ಹೇಳಿದರು. ಗುರುಗಳು ಯೋಚಿಸಿ, ಈತನು ರಾಜಪುತ್ರನೇ ಹೌದು- ಸುಶೀಲೆಯ ನಿಮಿತ್ತವಾಗಿ ಸಗರರಾಜನ ಮೋಸದಿಂದ ಈತನು ತಪಸ್ಸಿಗೆ ಹೋಗಲು ಕಾರಣವಾಯಿತು. ಈತನು ವರಿಸಬೇಕೆಂದಿದ್ದ ಸುಶೀಲೆಯನ್ನು ತಾನೇ ವರಿಸಿದನೆಂದು ಹೇಳುತ್ತಿರುವುದನ್ನು ಮುಂದೆ ಹೋಗುತ್ತಿದ್ದ ಋಷಿಯು ಮನವಿಟ್ಟು ಕೇಳಿ ಆಗ್ರಹಾವಿಷ್ಟನಾಗಿ ಆಹಾರಕ್ಕೆ ಹೋಗದೆ ಹಿಂದಕ್ಕೆ ತಿರುಗಿ ದುಷ್ಪರಿಣಾಮದಿಂದ ನಿರ್ವಾಣಹೊಂದಿ ಅಸುರಕುಲದಲ್ಲಿ ವ್ಯಂತರದೇವನಾಗಿ ಹುಟ್ಟಿದನು-

ಅನಂತರ ಈ ದೇವನು ಅವಧಿಜ್ಞಾನದಿಂದ ತನ್ನ ಹುಟ್ಟುವಿಕೆಯನ್ನು ತಿಳಿದುಕೊಂಡು ಈ ಸಗರನನ್ನು ನರಕಾವಾಸಕ್ಕೆ ಕಳುಹಿಸಬೇಕೆಂದು ಮನಸ್ಸಿಟ್ಟು ತನ್ನ ಕಾರ್ಯಕ್ಕೆ ಅನುಕೂಲವಾದ ವ್ಯಕ್ತಿಯನ್ನು ಹುಡುಕುತ್ತಾ ಇರುವಾಗ ಹಿಂದೆ ಹೇಳಿದ ಪರ್ವತನು ಆಹಾರದಿಂದ ಕಂಗೆಟ್ಟು ಒಂದು ಕೊಳದ ಏರಿಯಮೇಲಿದ್ದ ಒಂದು ಮರದ ಕೆಳಗೆ ಚಿಂತಿಸುತ್ತಾ ಕುಳಿತಿದ್ದದ್ದನ್ನು ನೋಡಿ ಆತನೊಡನೆ ಸ್ನೇಹಬೆಳಿಸಿ, ಆತನ ಪೂರ್ವೋತ್ತರವಿಚಾರವನ್ನು ತಿಳಿದುಕೊಂಡು ಅಜಶಬ್ದಕ್ಕೆ ಆಡೆಂಬ ಅರ್ಥವನ್ನೇ ಸಾರುವುದಕ್ಕಾಗಿ ಮಾಡತಕ್ಕ ಕೆಲವು ಗ್ರಂಥಗಳನ್ನು ಕಲ್ಪಿಸಿಕೊಟ್ಟು ಪರ್ವತನನ್ನು ಒಳಮಾಡಿಕೊಂಡನು- ಹಾಗೆ ಸಗರರಾಜನ ಪಟ್ಟಣಕ್ಕೆ ಬಂದು ಮಾರಿಕಾ ಉಪದ್ರವವನ್ನು ಹರಡಿ ಪರ್ವತನನ್ನು ಆ ರಾಜನ ಹತ್ತಿರ ಕಳುಹಿಸಿ ಹಿಂಸಾಯಜ್ಞ ಮಾಡಿದರೆ ಈ ರೋಗ ಶಾಂತಿಯಾಗುತ್ತೆಂತ ಸಗರನಿಗೆ ಪ್ರೇರೇಪಿಸಿದನು. ಸಗರನು ಈ ಪರ್ವತನ ಮಾತನ್ನು ನಂಬಿ ಹಿಂಸಾಯಜ್ಞಕಾರ್ಯಕ್ಕೆ ಅನುವಾದನು. ಹೀಗೆ ಯಜ್ಞಗಳನ್ನು ಮಾಡುತ್ತಾ ಕೊನೆಯಲ್ಲಿ ಸಗರನು ನರಕಕ್ಕೆ ಇಳಿದನು. ಈಮಾರ್ಗವನ್ನು ಅನುಸರಿಸಿ ಜನಕನು ಈ ಯಜ್ಞವು ಪುಣ್ಯಮಯವೆಂದು ಪ್ರಯತ್ನಪಡುತ್ತಲಿದ್ದಾನೆ. ಜನಕನಮುಖ್ಯೋದ್ದೇಶವೇನೆಂದರೆ—"ಸಮರ್ಥನಾದ ರಾಮನಿಗೆ ಸೀತಾದೇವಿಯನ್ನು ಕೊಡಬೇಕೆಂಬುವುದೇ ಮುಖ್ಯ ಆಶಯವಾಗಿಧೆ. ಆದ್ದರಿಂದ ಈ ಟಿಪ್ಪಣಿ ಮಾಡಿ ರಾಮಲಕ್ಷ್ಮಣರ ಬರುವಿಕೆಗೆ ತಮ್ಮಲ್ಲಿಗೆ ಕಳುಹಿಸಿರುತ್ತಾನೆ" ಎಂಬುದಾಗಿ ಎಲ್ಲಾ ವಿಷಯಗಳನ್ನೂ ತಿಳಿಸಲು, ದಶರಥನು ರಾಮಲಕ್ಷ್ಮಣರನ್ನು ಕರೆಸಿ ಜನಕನು ಹೇಳಿಕಳುಹಿಸಿರುವುದನ್ನು ತಿಳಿಸಿ, ಅವರ ಇಷ್ಟವೇನೆಂದು ಕೇಳಲಾಗಿ ಸಂತೋಷದಿಂದ ರಾಮಲಕ್ಷ್ಮಣರು ಹೋಗಿಬರುತ್ತೇವೆಂದು ತಂದೆಗೆ ಅರಿಕೆಮಾಡಿದರು. ಅನಂತರ ರಾಮಲಕ್ಷ್ಮಣರು ತಾಯಿಂದರಬಳಿಗೆ ಹೋಗಿ ಮಿಥಿಲಾಪಟ್ಟಣಕ್ಕೆ ಹೋಗುವ ವಿಷಯವನ್ನು ತಿಳಿಸಿ ನಮಸ್ಕರಿಸಿ ಅಪ್ಪಣೆಯನ್ನು ಬೇಡಿದರು. ಕೌಸಲ್ಯಾ ದೇವಿಯು ಬಹಳ ಅನುತಾಪಪಟ್ಟಳು. ಸುಮಿತ್ರೆಯೂ, ಕೈಕಿಲೆಯೂ ಸಹ ಈ ಮಕ್ಕಳನ್ನು ಮಿಥಿಳಾಪುರಕ್ಕೆ ಕಳುಹಿಸುವುದಕ್ಕೆ ಒಪ್ಪಿಕೊಂಡ ದಶರಥನ ಮೇಲೆ ಬೇಸರಿಕೆಪಟ್ಟುಕೊಂಡರು. ರಾಮಲಕ್ಷ್ಮಣರು ತಾಯಿಂದರ ಅಪ್ಪಣೆಪಡೆದು ಜನಕಮಹಾರಾಜನಮಂತ್ರಿಯೊಡನೆ ಹೊರಟರು. ಜನಕನು ರಾಮಲಕ್ಷ್ಮಣರ ಬರುವಿಕೆಯನ್ನು ನಿರೀಕ್ಷಿಸಿ, ಪಟ್ಟಣವನ್ನು ತೋರಣಾದಿಗಳಿಂದಲಂಕರಿಸಿ, ಪರಿಜನ

ಪುರಜನರೊಡನೆ ಅವರ ಆಗಮನವನ್ನು ಸ್ವಾಗತೀಕರಿಸಿ ಪಟ್ಟಣಕ್ಕೆ ಕರೆದು ಕೊಂಡು ಬರುತ್ತಲಿರುವಾಗ ಆ ಪಟ್ಟಣದ ಕರುಮಾಡಗಳ ಮೇಲೆ ನಿಂತಿದ್ದ ಸ್ತ್ರೀಯರುಗಳು ರಾಮಲಕ್ಷ್ಮಣರಮೇಲೆ ಪುಷ್ಪದಮಳೆಯನ್ನು ಕರೆದರು. ರಾಮ ಲಕ್ಷ್ಮಣರು ಜನಕನೊಡನೆ ಆತನಅರಮನೆಯಲ್ಲಿದ್ದು ಅನುಷ್ಠಾನ ನಿರತರಾದರು. ಈತನ ಯಜ್ಞಮಂಟಪವನ್ನು ತರಂಗತಮ ರಾಕ್ಷಸನ ಸೇನಾದಳವು ಕೆಡಿಸಲು ಪ್ರಾರಂಭಿಸಿತು- ಇದನ್ನು ಜನಕನ ತಮ್ಮನಾದ ಕನಕರಾಜನು ಇವರ ಮುಂದೆ ಹೋರಾಡಲು ದಳಸಹಿತ ಬಂದು ನಿಂತನು. ಕನಕಸೇನನು ಬಂದದ್ದನ್ನು ನೋಡಿ ತರಂಗತಮನು ಆತನಿಗಭಿಮುಖವಾಗಿ ನಿಂತು ಕನಕಸೇನನನ್ನು ಮೂದಲಿಸಿ, “ ಎಲಾ ಕನಕಸೇನ ! ನೀನು ಹೆಂಗಸರ ವಡವೆಯಾಗಿ ಅವರ ಹಸ್ತಾಭರಣ, ಕಾಲಾಭರಣರೂಪಾಗಿ ನಿಲ್ಲಲು ಯೋಗ್ಯನಲ್ಲದೆ ನಮ್ಮ ರಾಕ್ಷಸರ ಕುಲದಮುಂದೆ ಯುದ್ಧ ಮಾಡಲು ಶಕ್ತನಲ್ಲ ” ಎಂದು ಬಾಣದಿಂದ ಹೊಡೆದು ಹಿಂದಕ್ಕಟ್ಟಿದನು. ಇದನ್ನು ಕಂಡು ಜನಕನು ರಾಕ್ಷಸನಿಗೆದುರಾಗಿ ನಿಂತು ಯುದ್ಧಮಾಡುತ್ತಿರಲು, ರಾಮಲಕ್ಷ್ಮಣರು ಮುಂದೆ ಬಂದರು. ಇವರನ್ನು ಧನುಜನು ನೋಡಿ, “ಎಲೈ ಹುಡುಗರೇ ! ಏತಕ್ಕಾಗಿ ಪ್ರಾಣವನ್ನು ಕಳೆದುಕೊಳ್ಳಲು ಮುಂದಾಗುತ್ತೀರಿ? ನಾನು ಬಾಲಕರಮೇಲೆ ಕೈಮಾಡುವುದಿಲ್ಲ ” ಎಂಬುದಾಗಿ ಹೇಳಿದನು. ಆದಕ್ಕೆ ರಾಮನು ಅಖಂಡವಾದ ಆಕಾಶದಲ್ಲಿ ಬಹು ಚಿಕ್ಕದಾಗಿ ಸೂರ್ಯನು ಪ್ರಕಾಶಿಸುತ್ತಿರುವಂತೆ ಕಾಣುವುದಿಲ್ಲವೇ ? ನಮ್ಮ ಕೂಡ ಯುದ್ಧಕ್ಕೆ ನಿಲ್ಲೆಂದು ಎದುರಾದರು. ಲಕ್ಷ್ಮಣನು ಸಿಂಹನಾದ ಮಾಡುತ್ತಾ ತರಂಗತಮನಮೇಲೆ ಬಾಣವನ್ನು ಬಿಡಲು ತರಂಗತಮನು ಲಕ್ಷ್ಮಣನ ಸಿಂಹನಾದವನ್ನು ಕಂಡು ಈತನು ಹುಡುಗನಾಗಿದ್ದರೂ ಬಲು ಗಟ್ಟಿಗನೆಂದು ಹೇಳುತ್ತಾ ಯುದ್ಧಮಾಡತೊಡಗಿದನು- ಗಧೆಯನ್ನು ತೆಗೆದುಕೊಂಡು ಲಕ್ಷ್ಮಣನಮೇಲೆ ಬಿಡಲು, ಲಕ್ಷ್ಮಣನು ಮೈಮರೆದು ಸ್ವಲ್ಪ ನಿಲ್ಲಲಾಗ—ರಾಮನು ಎದುರಾಗಿ ಬಂದು ಯುದ್ಧಕ್ಕೆ ಪ್ರಾರಂಭಿಸಿದನು. ಲಕ್ಷ್ಮಣನು ಎಚ್ಚೆತ್ತು ಈ ಖೂಳರಾಕ್ಷಸನು ಇನ್ನು ಭೂಲೋಕದಲ್ಲಿ ಇರದಂತೆ ಅಟ್ಟುವೆನೆಂದು ಅಸ್ತ್ರಬಾಣಗಳಿಂದ ಹೊಡೆದು ಕೆಡಹಿದನು. ಅನಂತರ ರಾಮಲಕ್ಷ್ಮಣರು ಅರ್ಹತ್ಪರಮೇಶ್ವರರ ಪಾದಕಮಲವನ್ನು ನೆನೆಯುತ್ತಿದ್ದರು.

೧೭. ಸೀತಾದೇವಿ ಶೃಂಗಾರ

ಕೇಳೈ ಶ್ರೇಣಿಕಮಹಾರಾಜನೇ ! ಆ ರಾಕ್ಷಸನು ಬಾಣದ ಏಟಿನಿಂದ
ಮೂರ್ಛಿತನಾದದ್ದನ್ನು ಲಕ್ಷ್ಮಣನು ನೋಡಿ ಕರುಣದಿಂದ ಶೈತ್ಯೋಪಚಾರ
ಮಾಡಲು ರಾಕ್ಷಸನು ಎದ್ದು ಕುಳಿತನು. ಲಕ್ಷ್ಮಣನು ಅವನನ್ನು ನೋಡಿ,
"ಎಲೈ ಧನುಜನೆ ! ನೀನು ನನ್ನ ಕೂಡ ಯುದ್ಧಮಾಡುವೆಯೋ ?- ಇಲ್ಲವೇ
ನಮ್ಮ ಅಗ್ರಜನಾದ ಶ್ರೀರಾಮನ ಅಡಿಗಳಿಗೆ ನಮಸ್ಕಾರಮಾಡುವೆಯೋ ? "
ಎಂದು ಕೇಳಲಾಗಿ ದಾನವನು ಎದ್ದು ಶ್ರೀರಾಮನ ಪಾದಕ್ಕೆ ಶಿರವನ್ನಿಟ್ಟನು.
ಶ್ರೀರಾಮನು ದಾನವನನ್ನು ಹಿಡಿದೆತ್ತಿ—ನಿನಗೆ ಅಭಯುವನ್ನು ಕೊಟ್ಟಿರುವೆನು
ಒಳ್ಳೆ ಸ್ವಭಾವದಲ್ಲಿರುವನಾಗೆಂದು ಹೇಳಲಾಗಿ ಆ ತರಂಗತಮನು ಸಂತೋಷ
ಹೊಂದಿ ಶ್ರೀರಾಮಲಕ್ಷ್ಮಣರಿಗೆ ಧನುಜವಿದ್ಯಾದಿಗಳಲ್ಲಿ ಘನತರವಾದ ವಸ್ತು
ಗಳನ್ನು ಕೊಟ್ಟು ನಮಸ್ಕರಿಸಲು, ರಾಮಲಕ್ಷ್ಮಣರು ಆತನಿಗುಚಿತವಾದ
ಆಭರಣಾದಿಗಳನ್ನು ಕೊಟ್ಟು ಸಂತೈಸಲಾಗಿ ತರಂಗತಮನು ಸಂತೋಷದಿಂದ
ತನ್ನ ಪುರಕ್ಕೆ ಹೊರಟು ಹೋದನು. ಶ್ರೀರಾಮಲಕ್ಷ್ಮಣರು ಬಂದ ವಿಘ್ನಗ
ಳನ್ನು ಪರಿಹರಿಸಿ ದೈತ್ಯನಿಗೆ ಅಭಯುವನ್ನು ಕೊಟ್ಟಿದ್ದನ್ನು ನೋಡಿ ಜನಕನು
ಮನಸ್ಸಿನಲ್ಲಿ ಈ ಸಹೋದರರಮೇಲೆ ಗೌರವವನ್ನಿಟ್ಟು ಅವರನ್ನು ವಾದ್ಯಸಮೇ
ತವಾಗಿ ತನ್ನ ಪಟ್ಟಣಕ್ಕೆ ಕರೆದುಕೊಂಡು ಬಂದು ದಿವ್ಯಾಸನದಲ್ಲಿ ಕುಳ್ಳಿರಿಸಿ
ಅವರ ಶಿರಸ್ಸಿನ ಮೇಲೆ ರತ್ನವೃಷ್ಟಿಯನ್ನು ಕರೆದು ಭೋಜನಾದಿಗಳಿಂದ
ಸತ್ಕರಿಸಿದನು. ಅನಂತರ ಬಲಕೇಶವರಾದ ರಾಮಲಕ್ಷ್ಮಣರು ತಮ್ಮ ಪಟ್ಟ
ಣಕ್ಕೆ ಹೊರಡಲು ಅನುವಾದಾಗ ಜನಕಮಹಾರಾಜನು ಉಚಿತ ಉಪಾಯನ
ದ್ರವ್ಯಗಳನ್ನು ಕೊಟ್ಟು ಇವರನ್ನು ಬಹಳದೂರದವರಿಗೆ ಹಿಂಬಾಲಿಸಿ ಬಳಗಳಿ
ಸಿದನು. ರಾಮಲಕ್ಷ್ಮಣರು ತಮ್ಮ ತಂದೆಯ ಪಟ್ಟಣಕ್ಕೆ ಬರುವಾಗ ತಂದೆ
ಯಾದ ದಶರಥನು ಗುಡಿತೋರಣಗಳಿಂದ ಪಟ್ಟಣವನ್ನಲಂಕರಿಸಿ ತಾಳಮೇಳ
ದೊಡನೆ ಕೂಡಿ ಅರಮನೆಗೆ, ಕರೆದುಕೊಂಡು ಬಂದನು. ರಾಮಲಕ್ಷ್ಮಣರು
ತಂದೆಯಾದ ದಶರಥನಿಗೆ ನಮಸ್ಕರಿಸಿದನಂತರ ಮಾತೆಯರಾದ ಕೌಸಲ್ಯಾ
ಸುಮಿತ್ರೆಯರ ಆವಾಸಸ್ಥಾನಕ್ಕೆ ಹೋಗಿ ತಾಯಿಯರಿಗೆ ಬೀಳ್ಕೊಂಡು ಅವರ
ಆಶೀರ್ವಾದಗಳನ್ನು ಪಡೆದರು. ಅನಂತರ ಇವರಿಗೆ ತಾವು ಜಯಿಸಿದ ವಿವರ
ಣೆಯನ್ನು ವಿವರಿಸಿದ್ದನ್ನು ಕೇಳಿ ತಂದೆತಾಯಿಗಳು ಅತ್ಯಂತ ಆನಂದಹೊಂದಿ
ದರು. ಇವರಕೂಡ ಬಂದಿದ್ದ ಜನಕನ ಪರಿವಾರದವರು ಇವರ ಅಪ್ಪಣೆಪಡೆದು

ಹೊರಟುಹೋದರು. ಆಷ್ಟರಲ್ಲಿ ಕಂಚುಕಿಯೊಬ್ಬಳು ಅಲ್ಲಿದ್ದು ತಾಯಿಯರಕೂಡ ಇರುತ್ತಲಿದ್ದ ರಾಮಲಕ್ಷ್ಮಣರ ಸಮಕ್ಷಮದಲ್ಲಿ ಆಶ್ಚರ್ಯವರ್ತಮಾನವನ್ನು ಹೇಳುತ್ತೇನೆಂದು ಜಾನಕಿಯ ವರ್ಣನೆಯನ್ನು ಮಾಡಲುಉಪಕ್ರಮಿಸಿದಳು:—“ ಜಾನಕಿಯು ಶ್ರೀರಾಮನಿಗೆ ಒಪ್ಪತಕ್ಕ ಮಡದಿಯಾಗಿರುವಳು. ಜಾನಕಿಯ ರೂಪುವರ್ಣನೆಯನ್ನು ನಾನು ಎಷ್ಟು ಹೇಳಿದರೂ ಸ್ವಲ್ಪವೇ ಆಗುತ್ತೆ- ಆ ಮಹಾದೇವಿಯ ಪಾದಕಮಲಗಳು ಕೂರ್ಮದ ಬೆನ್ನಿನಂತೆ ಉಬ್ಬಿ ಚೂತ ಪಲ್ಲವದಂತಿರುವ ಕಾಲ್ಬೆರಳುಗಳಿಂದ ಕೂಡಿ ನಖಗಳೆಂಬ ಕನ್ನಡಿಯು ಕಣ್ಣು ಗೋಳಿಸುತ್ತಲಿದೆ. ಪಾದಗಳ ವರ್ಣವು ಕೆಂದಾವರೆಯ ವರ್ಣಕ್ಕಿಂತ ಮಿಗಿಲಾಗಿರುತ್ತೆ. ಊರುಗಳು ಬಾಲಕದಳಿಯಂತೆ ಹೊಳೆಯುತ್ತಲಿದೆ. ಟೊಂಕವು ಸಿಂಹದಟೊಂಕದಂತೆ ಅತ್ಯಂತ ಮನೋಹರವಾಗಿದೆ. ಉದರವು ಸುವರ್ಣವರ್ಣವಾದ ವಟಪತ್ರದಂತಿರುತ್ತೆ. ಸ್ತನಗಳು ಸುವರ್ಣಕಲಶದಂತೆ ಕಣ್ಗೊಳಿಸುತ್ತೆ. ಕರಪಲ್ಲವವು ಮಾಕಂದಚೂತಪಲ್ಲವದಂತೆ ಕೆಂಪುಗೂಡಿದ ಬಿಳಪುವರ್ಣವಾಗಿದೆ. ಕಂಠವು ಶಂಖದಂತೆ ಶುಭ್ರ ವರ್ಣವಾಗಿದೆ. ದಂತಪಂಕ್ತಿಗಳು ಕುಂದ ಪುಷ್ಪದಂತೆಶುಭ್ರವಾಗಿರುತ್ತೆ. ಬಿಂಬೋಷ್ಠವು ಬಂಧೂಕಪುಷ್ಪದ ವರ್ಣವನ್ನು ಅನುಸರಿಸಿರುತ್ತೆ. ನೇತ್ರಗಳು ಕನ್ನೈದಿಲೆಪುಷ್ಪವನ್ನು ಧಿಕ್ಕರಿಸುತ್ತೆ. ಶ್ರೋತ್ರಗಳು ದೊಡ್ಡದಾಗಿ ಚಲುವಾಗಿರುತ್ತೆ. ಫಾಲವು ವಿಶಾಲವಾಗಿರುತ್ತೆ. ಕೇಶವು ಭ್ರಮರದಂತೆಯೂ, ಸರ್ಪದಂತೆ ಉದ್ದವಾಗಿಯೂ, ಮುಖವು ಚಂದ್ರನಂತೆ ನೋಡಿದವರ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತೆ. ನಾಸಿಕವು ಚಂಪಕದಂತೆ ಉದ್ದವಾಗಿಯೂ, ಮನೋಹರವಾಗಿಯೂ ಇಧೆ. ಇವಳ ಮನಸ್ಸು ಕಮಲಾಕರದ ಶುಭ್ರವಾದ ನೀರಿನಂತಿರುತ್ತೆ. ಮಾತಿನ ಧ್ವನಿಯು ಕೋಗಿಲೆಯ ಪಂಚಮ ಸ್ವರಕ್ಕಿಂತಲೂ ಇಂಪಾಗಿರುತ್ತೆ. ಇಂಥಾ ಜಾನಕಿಯು ಈ ರಾಮನಿಗೆ ಅನುರೂಪಳಾಗಿದ್ದಾಳೆ” ಎನಲು, ಕೌಶಲ್ಯಾದೇವಿಯು “ಇಂಥಾ ಸೊಸೆಯನ್ನು ಪಡೆಯುವ ಅದೃಷ್ಟವು ನನಗೆ ಇರುತ್ತದೆಯೇ? ” ಎಂದಳು. ಶ್ರೀರಾಮನು ತನ್ನ ಅಭಿಪ್ರಾಯವನ್ನು ಹೇಳದಿದ್ದರೂ, ಹಸಿತವದನನಾದನು. ಲಕ್ಷ್ಮಣನು “ಈಪ್ರಕಾರ ಗುಣವತಿಯಾದ ಸ್ತ್ರೀಯು ನಮ್ಮ ಅಗ್ರಜನಿಗೆ ತಕ್ಕವಳಾಗಿರುವಳು” ಎನಲು, ಕಂಚುಕಿಯು “ ಈ ವೈದೇಹಿಯು ನಿಮ್ಮ ಅಣ್ಣನಿಗೆ ಸಾಧಾರಣವಾಗಿ ದೊರೆಯುವಳೆಂದು ಯೋಚಿಸಬೇಡ. ಸ್ವಯಂವರಮಂಟಪದಲ್ಲಿ ಘನವಾದಧನುಸ್ಸನ್ನೇರಿಸಿ ಗೃಧ್ರವನ್ನು ಹೊಡೆದರೆ ಆಗ ವೈದೇಹಿಯು

ನಿಮ್ಮ ಅಣ್ಣನ ಶರಣಾಗತಳಾಗುವಳು" ಎಂದುಹೇಳಲಾಗ, ಲಕ್ಷ್ಮಣನು "ಇಂಥಾಧನಸ್ಸನ್ನು ಎತ್ತಿ ಉಪಯೋಗಿಸುವುದು ನಮ್ಮವಂಶೀಕರಿಗೆ ಸಹಜವಾಗಿಧೆ ಆದರಲ್ಲೂ ನಮ್ಮಅಣ್ಣನಾದ ಶ್ರೀರಾಮನಸಾಮರ್ಥ್ಯಕ್ಕೆ ಇದು ದೊಡ್ಡದಾಗಿಲ್ಲ" ಎಂದು ಹೇಳಿದನು. ಆಗ ಕೌಸಲ್ಯೆಯು ಕಂಚುಕಿಯನ್ನು ಕುರಿತು "ಈತರಳೆಯಾದ ವೈದೇಹಿಯು ನಮ್ಮಅರಮನೆಯನ್ನು ಅಲಂಕರಿಸಳಾಗುವಳೇ" ಎಂದು ಕೇಳಲಾಗಿ ಕಂಚುಕಿಯು "ಅಂಥಾ ರತ್ನವು ತಮ್ಮ ಅರಮನೆಯನ್ನು ಸೇರದೆ, ಇನ್ನೆಲ್ಲಿ ತಾನೇ ಸೇರೀತು" ಎಂಬುದಾಗಿ ಹೇಳಲಾಗಿ ಕೌಸಲ್ಯೆಯು ಕಂಚುಕಿಗೆ ವಸ್ತ್ರಾಭರಣಗಳನ್ನು ಕೊಟ್ಟು ಸನ್ಮಾನಿಸಿದಳು. ಅನಂತರ ಕೌಸಲ್ಯೆಯು ಅರ್ಹತ್ಪರಮೇಶ್ವರರ ಪಾದಕಮಲಗಳ ಸ್ಮರಣೆಯನ್ನು ಮಾಡುತ್ತಿದ್ದಳು.

೧೮. ಸೀತಾ ಸ್ವಯಂವರ

ಎಲೈಶ್ರೇಣಿಕನೆ ಕೇಳುವವನಾಗು—ಆಮನೋಹರಿಯಾದ ಕಂಚುಕಿಯು ದಶರಥನ ಪಟ್ಟಣವಾದ ಅಯೋಧ್ಯಾಪಟ್ಟಣದಿಂದ ಹೊರಟು ಮಿಥಿಲಾಪಟ್ಟಣವನ್ನು ಬಂದು ಸೇರಿ ಆನಂದದಿಂದ ಅಂತಃಪುರಕ್ಕೆ ಹೋಗಿ ವೈದೇಹಿಯನ್ನು ಕಂಡು ನಮಸ್ಕರಿಸಿ ಅಯೋಧ್ಯಾಪಟ್ಟಣದಲ್ಲಿ ತಾನು ನಡೆಸಿಬಂದ ವಿವರವನ್ನು ಪ್ರಸಿದ್ಧಿಮಾಡಿದಳು. ಅನಂತರ ವೈದೇಹಿಯು ನಮ್ರೀಭೂತಳಾಗಿ ಶ್ರೀರಾಮನನ್ನು ಸೇರತಕ್ಕ ಅದೃಷ್ಟವು ಇಧೆಯೇ ಎನ್ನುತ್ತಿದ್ದಳು. ಅತ್ತ ಅಯೋಧ್ಯಾಪಟ್ಟಣದ ದಶರಥನ ಸಭೆಗೆ ನಾರದರು ಆಗಮಿಸಿದರು. ಆ ಋಷಿಯ ಬರುವಿಕೆಯನ್ನು ದಶರಥನು ಕಂಡು ಸಿಂಹಾಸನದಿಂದೆದ್ದು ಅವರನ್ನು ಮರ್ಯಾದೆಯಿಂದ ಬರಮಾಡಿಕೊಂಡು ರಜತಪೀಠದಲ್ಲಿ ಕುಳ್ಳಿರಿಸಿ ಕುಶಲ ಪ್ರಶ್ನೆಯನ್ನು ಮಾಡಿದನಂತರ ಶ್ರೀರಾಮನಿಗೆ ಮಿಥಿಲಾಪಟ್ಟಣದ ಜಾನಕಿಯು ಒಪ್ಪುವಳಾಗಿದ್ದಾಳೆಂತ ಜನರು ಹೇಳುತ್ತಾರೆಂದು ಹೇಳಿದಾಗ ನಾರದರು ತಾವು ಹೋಗಿ ಆ ಸ್ತ್ರೀರತ್ನವನ್ನು ನೋಡಿ ಬರುವುದಾಗಿ ಹೇಳಿ ದಶರಥನಿಂದ ಸಮ್ಮತಿಯನ್ನು ಪಡೆದು ಮಿಥಿಲಾ ಪಟ್ಟಣಕ್ಕೆ ಬಂದು ಜನಕನ ಸಭೆಗೆ ಬಂದು ಜನಕನನ್ನು ಕಂಡು ಕುಶಲಪ್ರಶ್ನೆಯಾದನಂತರ ಜಾನಕಿಯಾದ ನಿಮ್ಮ ಮಗಳನ್ನು ನೋಡಬೇಕೆಂದು ಹೇಳಿದರು. ಅದಕ್ಕೆ ಜನಕನು ಅಂತಃಪುರಕ್ಕೆ ದಯಮಾಡಿಸಿ ನೋಡಬಹುದೆಂದನು.

ಅನಂತರ ನಾರದರು ಸೀತಾದೇವಿಯಿರುವ ಆವಾಸಕ್ಕೆ ಬರಲು, 'ಆ ಮುನಿಗಿರುವ ಜಡೆ, ಕಮಂಡಲ, ಕಾವಿವಸ್ತ್ರ, ವೀಣೆ ಮೊದಲಾದವುಗಳನ್ನು ನೋಡಿ ಹೆದರಿದಳು. ಅಲ್ಲಿದ್ದ ದಾದಿಯರು ಈ ನಾರದಋುಷಿಯನ್ನು ಧಿಕ್ಕಾರ ಮಾಡಿ ಹೊರಡಿಸಿಬಿಟ್ಟರು. ಇದಕ್ಕೆ ನಾರದಋುಷಿಗಳು ಕೋಪಿಸಿ " ಜಾನಕಿಯಾದ ನಿನ್ನನ್ನು ರಾಕ್ಷಸಾವಾಸಕ್ಕೆ ಎಳೆಸುತ್ತೇನೆ" ಎಂದುಪ್ರತಿಜ್ಞೆಮಾಡಿದರು ಅಲ್ಲಿಂದಹೊರಟು ಲಂಕಾಪಟ್ಟಣಕ್ಕೆಬಂದು ರಾಜನಾದ ದಶಾನನನ್ನು ಕಾಣಲು ದಶಕಂಠನು ಭಯಭಕ್ತಿಯಿಂದೆರಗಿ, ಎಲ್ಲಿಂದ ಬರೋಣವಾಯಿತೆಂದು ಕೇಳಲಾಗ ನಾರದರು "ಮಿಥಿಲಾಪಟ್ಟಣದಿಂದ ಬಂದೆನು. ಅಲ್ಲಿಯರಾಜನಾದಜನಕ ಮಹಾರಾಜನ ಪುತ್ರಿಯು ಭೂಲೋಕದಲ್ಲಿಯೂ, ಸ್ವರ್ಗಲೋಕದಲ್ಲಿಯೂ, ಇರುವ ಎಲ್ಲಾ ಸ್ತ್ರೀಯರಿಗಿಂತಲೂ ಅತಿಶಯವಾದ ರೂಪುಳ್ಳವಳಾಗಿರುವಳು. ಅವಳನ್ನು ಎಷ್ಟು ವರ್ಣಿಸಿದರೂ ಸಾಲದು. ನಿನಗೆ ಆಕೆಯು ಸರಿಯಾದವಳಾಗಿದ್ದಾಳೆ- ನೀನು ಪ್ರಯತ್ನಪಟ್ಟರೆ ಅವಳನ್ನು ಹೊಂದುವದೇನು ದೊಡ್ಡದಾಗಿಲ್ಲ" ಎಂಬುದಾಗಿ ಹೇಳಲಾಗ ದಶಕಂಠನು ಮಂತ್ರಿಯಾದ ಮಾರೀಚನನ್ನು ಕರೆದು "ಮಿಥಿಲಾಪಟ್ಟಣಕ್ಕೆ ನೀನು ಹೋಗಿ, ಜನಕನನ್ನು ಕಂಡು ಆತನ ಮಗಳಾದ ಜಾನಕಿಯನ್ನು ನನಗೆ ವಿವಾಹಮಾಡಬೇಕೆಂತ ಹೇಳಿ ಈ ಕಾರ್ಯವನ್ನು ಪೂರೈಸಬೇಕು" ಎಂದು ಹೇಳಿದನು. ಅನಂತರ ಮಾರೀಚನು ಜನಕನನ್ನು ಕಂಡು ಸ್ತ್ರೀರತ್ನವನ್ನು ರಾವಣನಿಗೆ ಕೊಡಬೇಕೆಂತ ಬೇಡಿಕೊಳ್ಳಲಾಗ ಜನಕನು "ಜಾನಕಿಗೆ ಸ್ವಯಂವರವನ್ನು ಮಾಡುತ್ತೆ. ಸ್ವಯಂವರದಲ್ಲಿ ಧನುರ್ವಿದ್ಯದಿಂದ ಜಯಶೀಲನಾದವನಿಗೆ ಜಾನಕಿಯು ವಿವಾಹವಾಗುವಳು" ಎಂದು ಹೇಳಿದನು. ಅದಕ್ಕೆ ಮಾರೀಚನು ನೀನು ನಿನ್ನ ಮಗಳನ್ನು ರಾವಣನಿಗೆ ಕೊಡದೇ ಇದ್ದರೆ ಪರಸ್ಪರ ವಿರೋಧವಾಗುತ್ತೆಂದು ಹೇಳಲಾಗ ಜನಕನು ಯಾತಕ್ಕೆ ವಿರೋಧ, ಸ್ವಯಂವರದಲ್ಲಿ ಗೆದ್ದು ಪಡೆಯಬಹುದು. ನಾವು ಈ ರೀತಿ ಸ್ವಯಂವರಮಾಡುವುದಾಗಿ ಗೊತ್ತುಮಾಡಿರುವಾಗ ಬೇರೇವಿಧವಾಗಿ ಯೋಚಿಸುವುದು ಸರಿಯಾಗಿಲ್ಲವೆಂತ ಉತ್ತರಕೊಟ್ಟನು. ಮಾರೀಚನು ಅದನ್ನು ಕೇಳಿಕೊಂಡು ಲಂಕಾಪುರಿಗೆ ಹೊರಟುಹೋದನು. ಇತ್ತ ಸೀತಾದೇವಿಯು ರಾಕ್ಷಸನಿಗೆ ತನ್ನನ್ನು ಯಾಚಿಸುವದಕ್ಕಾಗಿ ಮಾರೀಚನು ಬಂದಿದ್ದನೆಂಬ ವಾರ್ತೆಯನ್ನು ಕೇಳಿ ದುಃಖದಿಂದ ಮೂರ್ಛಿತಳಾದಳು. ಆಗ ಸಖಿಯರುಗಳ ಶೈತ್ಯೋಪಚಾರದಿಂದ ಎಚ್ಚೆತ್ತಿದಳು. ಇದನ್ನು ಜನಕನುತಿಳಿದು ಮಗಳಸಮೀಪವನ್ನೈದಿ "ಯಾತಕ್ಕೆ

ವ್ಯಸನಪಡುತ್ತೀಯೆ? ಈ ಗಾಂಡೀವವನ್ನು ಶ್ರೀರಾಮನೊಬ್ಬನು ಎತ್ತಲು ಸಮರ್ಥನಲ್ಲದೆ ಇತರರ್ಯ್ಯಾರಿಗೂ ಸಾಧ್ಯವಿಲ್ಲ. ರಾಮನೇ ನಿನ್ನ ಕಾಂತನಾಗುತ್ತಾನೆ. ಶಾಂತಳಾಗಿರು" ಎಂದು ಹೇಳಿ ಹೊರಟುಹೋದನು.

ಜನಕಮಹಾರಾಜನು ಸ್ವಯಂವರ ಮಂಟಪವನ್ನು ವಜ್ರದಕಂಬಗಳಿಂದಲೂ, ಹವಳದ ಸಾಲ್ಭೋಧಿಗೆಗಳಿಂದಲೂ, ಪಚ್ಚೆಯ ತೊಲೆಗಳಿಂದಲೂ, ಮಾಣಿಕದ ಮುಚ್ಚಳುಗಳಿಂದಲೂ, ನವರತ್ನದ ತೋರಣ ಮೇಲ್ಕಟ್ಟುಗಳಿಂದಲೂ, ಕಸ್ತುರಿಯ ಸಾರಣೆಯಿಂದಲೂ, ಮುತ್ತಿನ ರಂಗೋಲೆಗಳಿಂದಲೂ, ಅಲಂಕರಿಸಿದನು. ಸ್ವಯಂವರದ ಪ್ರತಿಯೊಂದು ಭಿತ್ತಿಯಲ್ಲೂ ಭರತಾದಿ ಮಹಾವೀರರ ಕಲ್ಯಾಣ ಮಂಟಪಗಳು ಬರೆಯಲ್ಪಟ್ಟಿದ್ದವು. ಅಲ್ಲಲ್ಲಿ ಲತೆಗಳಿಂದ ಅಲಂಕರಿಸಲ್ಪಟ್ಟು ನೋಡುವರ ಕಣ್ಣುಗಳು ಕೊಕ್ಕರಿಸುತ್ತಿತ್ತು. ಈ ಮಹಾಸ್ವಯಂವರಕ್ಕೆ ಧಾತ್ರೀಶ್ವರರಾದ ಮಾಳವ, ಗೌಳ, ಕಾಶ್ಮೀರ ಬರ್ಬರ, ತೆಲುಗ, ಕುರು, ಕಾಂಭೋಜ, ಗೂರ್ಜರ, ತೌಳ, ವರಾಳ, ಕರ್ಣಾಟ ಚೀಣಾ ಗಾಂಧಾರ, ಕರಹಾಟ, ಮೊದಲಾದ ಅನೇಕ ದೇಶದ ದೊರೆಗಳು ತಮ್ಮ ಪರಿಜನರೊಡನೆ ಅಲಂಕಾರಯುಕ್ತರಾಗಿ ನೆರೆದಿದ್ದರು. ಪ್ರತಿಯೊಬ್ಬ ರಾಜರೂ ವೈದೇಹಿಯನ್ನು ಹೊಂದಬೇಕೆಂಬ ಸಂಕಲ್ಪವುಳ್ಳವರಾಗಿದ್ದರು. ಪ್ರತಿಕ್ಷಣದಲ್ಲಿಯೂ ತಮ್ಮ ಚಲುವಿಕೆಯು ಜಾನಕಿಯ ಮನಸ್ಸನ್ನು ಸೆಳೆಯಬೇಕೆಂಬ ಯೋಚನೆಯಿಂದ ಪ್ರತಿಕ್ಷಣದಲ್ಲಿಯು ತರಹತರಹ ಅಲಂಕಾರಗಳನ್ನು ಮಾಡಿಕೊಂಡು ದರ್ಪಣದಲ್ಲಿ ತಮ್ಮ ಮುಖದ ಕಾಂತಿಯನ್ನು ನೋಡಿ ಹಿಗ್ಗುತ್ತಿದ್ದರು. ರಾಜರುಗಳು ತಮ್ಮ ಉದಾರತ್ವವು ಜನಕಮಹಾರಾಜನಿಗೂ ಸೀತಾದೇವಿಗೂ ಮುಟ್ಟಬೇಕೆಂದು ಬಂದಂಥಾ ಯಾಚಕರುಗಳಿಗೆ ವಸ್ತ್ರಾಭರಣಗಳನ್ನು ಒಬ್ಬರಿಗೊಬ್ಬರಿಗೆ ಮಿಗಿಲಾಗಿ ಕೊಡುತ್ತಿದ್ದರು. ವಂದಿಗಳನ್ನು ಕರೆದು ತಮ್ಮ ಶೌರ್ಯ ಸಾಹಸಗಳನ್ನು ಹೇಳಿ ಅವರಿಂದ ಹೊಗಳಿಕೆಯನ್ನು ಪಡೆಯಲು ಕುತೂಹಲವುಳ್ಳವರಾಗಿದ್ದರು. ಸ್ವಯಂವರ ಮಂಟಪದಲ್ಲಿ ಎತ್ತ ನೋಡಿದರೂ ಕಣ್ಣಿಗೆ ಆಶ್ಚರ್ಯಕರವಾದ ವರ್ತನವನ್ನು ನೋಡುವುದೇ ಸಾಕಾಗಲಿಲ್ಲ. ಎತ್ತ ಕೇಳಿದರೂ ಸುಶ್ರಾವ್ಯವಾದ ಗಾನಧ್ವನಿಗಳು ಭೋರ್ಗರೆಯುತ್ತಿದ್ದವು. ಎಲ್ಲಿ ಹೋದರೂ ರುಚಿಕರವಾದ ಹಣ್ಣುಹಂಪಲುಗಳು ಹಂಚಲ್ಪಡುತ್ತಿದ್ದವು. ಯಾವ ಪ್ರದೇಶದಿಂದ ಬಂದ ಗಾಳಿಯೂ ಸಂಪೂರ್ಣವಾದ ಮಂದಾರಪುಷ್ಪಗಳ ವಾಸನೆಯನ್ನು ಹರಡುತ್ತಿದ್ದವು. ಸೀತಾದೇವಿಗೆ ಕ್ಲುಪ್ತವಾದ ಸ್ವಯಂವರದ ದಿವಸ

ದಲ್ಲಿ ಸುಗಂಧಮಯವಾದ ಎಣ್ಣೆಯನ್ನು ಸಖಿಯರು ಪುರಂಧ್ರಿಯರು ಹಚ್ಚಿ, ಅಭ್ಯಂಗನವನ್ನು ಮಾಡಿ ತೀರ್ಥನದಿಗಳಿಂದ ತಂದ ಜಲದಿಂದ ಸ್ನಾನಮಾಡಿಸಿ ಅಮೋಘವಾದ ವಸ್ತ್ರಗಳಿಂದ ಅಲಂಕರಿಸುತ್ತಲಿದ್ದರು. ಅನೇಕ ಪುರಂಧ್ರಿಯರು ತಮತಮಗೆ ತೋರಿದ ಅಲಂಕಾರಗಳನ್ನು ಸೀತಾದೇವಿಗೆ ಮಾಡುತ್ತಲಿದ್ದರು. ಈ ದೇವಿಯು ಸರಸ್ವತಿ ಲಕ್ಷ್ಮೀದೇವಿಯರಿಗಿಂತ ಮಿಗಿಲಾಗಿ ಶೋಭಾಯಮಾನವಾಗಿ ಕಾಣುತ್ತಿದ್ದಳು. ಶತಾಶ್ವಗಳಿಂದಕೂಡಿದ ನವರತ್ನಖಚಿತವಾದ ಸುವರ್ಣರಥದ ಮೇಲೆ ಕುಳ್ಳಿರಿಸಿ ಛತ್ರಿಚಾಮರಗಳಿಂದ ಮಹಾದೇವಿಗೆ ಉಪಚರಿಸುತ್ತಾ ಮಂದಾರ ಪುಷ್ಪಗಳನ್ನೆಸೆಯುತ್ತಾ ಸಖಿಯರು ಸ್ವಯಂವರ ಮಂಟಪಕ್ಕೆ ಕರೆದುಕೊಂಡು ಬರುತ್ತಲಿದ್ದರು. ಈ ರಥದ ಮಧ್ಯದಲ್ಲಿ ಆಸೀನಳಾಗಿರುವ ತರುಣೀಮಣಿಯಾದ ಸೀತಾದೇವಿಯು ಜಿನೇಶ್ವರರ ಪಾದಕಮಲವನ್ನು ನೆನೆಯುತ್ತಿದ್ದಳು.

೧೯. ಸೀತಾದೇವಿ ಕಲ್ಯಾಣ.

ಶ್ರೇಣಿಕ ಭೂಪಾಲನೇ ! ಲಾಲಿಸು. ಸೀತಾದೇವಿಯು ಸ್ವಯಂವರ ಮಂಟಪಕ್ಕೆ ಬರುತ್ತಲೇ ಎಲ್ಲಾ ರಾಜರುಗಳೂ ಪಶುಗಳಂತೆ ನೋಡುವುದಕ್ಕೆ ಪ್ರಾರಂಭಿಸಿದರು. ಜಾನಕಿಗೆ ಸುತ್ತಮುತ್ತಲಿರುವ ಸಖಿಯರು ನಾನಾವಿಧವಾಗಿ ಸರಸವಚನಗಳನ್ನಾಡುತ್ತಾ ರಾಜಸಮೂಹದ ಮಧ್ಯಕ್ಕೆ ಕರೆದುಕೊಂಡು ಬಂದರು. ರಾಜನಾದ ಕಾಶ್ಮೀರನು ತನ್ನ ಸರಸಲಾವಣ್ಯವನ್ನು ನೋಡುತ್ತಾಳೆಂದು ಸಡಗರದಿಂದ ಸೀತೆಯ ಮುಖವನ್ನೇ ನೋಡುತ್ತಿದ್ದನು. ಬರ್ಬರನೂ, ಹಮ್ಮೀರನಾದ ಮಾಳವನೂ, ಸೊಗಸಿನ ಘುರ್ಜರ ರಾಜನೂ, ನೇಪಾಳ, ವಿದರ್ಭ ಸೌರಸೇನ ರಾಜರುಗಳೂ ತಮ್ಮ ತಮ್ಮ ವಂದಿಗಳನ್ನು ನೋಡಿ ಸ್ತೋತ್ರಮಾಡಿಸಿಕೊಳ್ಳುತ್ತಲಿದ್ದರು. ಆಗ ರಾಮನು ಲಕ್ಷ್ಮಣನೊಡನೆ ಸಭೆಗೆ ಬಂದಲಂಕರಿಸಿದನು. ಆಗ ಜನಕಮಹಾರಾಜನು ಜಂತದ ಗೃಧ್ರವನ್ನೂ, ಧನುರ್ಬಾಣಗಳನ್ನೂ, ಕನ್ನಡಿಯಂತೆ ಹೊಳೆಯುತ್ತಿರುವ ಔಡಲದ ಎಂಣೆಯನ್ನೂ ತಂದಿಟ್ಟು ಜಂತದ ಗೃಧ್ರವನ್ನು ರಾಟವಾಳದ ಮರಕ್ಕೇರಿಸಲು ಅದು ವಾಯುವೇಗದಿಂದ ಸುತ್ತಲು ಪ್ರಾರಂಭಿಸಿತು. ಜನಕನು ಸಭಾಸ್ಥಿತರಾದಸಕಲರಾಜರ ಸಮಕ್ಷಮದಲ್ಲಿ "ಯಾವ ಸಮರ್ಥನಾದ ರಾಜನಾದರೂ ಈ ಧನುಸ್ಸನ್ನು ಹೆದೆಗೆ ಸೇರಿಸಿ, ಈ ವಜ್ರಾವರ್ತ ಬಾಣದಿಂದ ಎಣ್ಣೆಯಲ್ಲಿ ಸುತ್ತುತ್ತಿರುವ ಗೃಧ್ರದ ರೂಪನ್ನು

ಗುರ್ತಿಸಿ ನಮ್ರಿಭೂತರಾಗಿ ಯಾರು ಆಗೃಧ್ರಯಂತ್ರವನ್ನು ಹೊಡೆದು ಕೆಳಕ್ಕೆ ಕೆಡಹುವರೋ ಆತನೇನೆ ಸೀತಾದೇವಿಗೆ ವರನಾಗುವನು" ಎಂದು ಹೇಳಿದನು. ಅನಂತರ ಕಾಶ್ಮೀರರಾಜನು ತಾನು ಮುಂದಾಗಿ ಹೊರಟು ಚಾಪಕ್ಕೆ ಕೈಹಾಕಿ ಎತ್ತುವುದಕ್ಕೆ ಪ್ರಯತ್ನ ಮಾಡಿ ಹಿಮ್ಮುಖನಾಗಿ ಉರಳಿದನು. ಬರ್ಬರನು ಇದನ್ನು ನೋಡಿ ನಕ್ಕು, ತಾನು ಎತ್ತುತ್ತೇನೆಂದು ಮುಂದಾಳಾದನು. ಆತನು ಹೋಗಿ ಧನುಸ್ಸಿನ ಹತ್ತಿರ ನಿಲ್ಲುತ್ತಲೇ ಆ ಹೆದೆಯು ಸರ್ಪನಂತೆ ಭೋರ್ಗರೆ ಯಲು ಹೆದರಿ ಓಡಿಬಂದನು. ಗುರ್ಜರಾಧಿಪತಿಯು ಇವರನ್ನೆಲ್ಲಾ ಅಲಿಗಳೆದು ತಾನು ಮುಂದಾಗಿ ಧನುಸ್ಸಿಗೆ ಕೈಯಿಡಲು ಹೋಗಿ ಸರ್ಪಾಕಾರವನ್ನು ಕಂಡು ಓಡಿಬಂದನು. ಇತರ ರಾಜರುಗಳೆಲ್ಲಾ ಇದನ್ನು ನೋಡಿ ಸುಮ್ಮನೆ ಕುಳಿತಿದ್ದರು. ಮಾರೀಚನು ಸಮೀಪಕ್ಕೆ ಹೋಗುತ್ತಲೇ ಸರ್ಪವು ಅಟ್ಟಿಕೊಂಡು ಬಂದಂತೆ ಹೆದೆಯು ಕಾಣಿಸಿತು- ಮಾರೀಚನು ಹಿಂದಕ್ಕೆ ಬಂದನು. ದಶಕಂಠನು ಯಾವ ಪ್ರಯತ್ನವನ್ನೂ ಮಾಡಲಿಲ್ಲ- ಜನಕನು ಯಾರೂ ಹೆದೆಯನ್ನು ಏರಿಸಲು ಸಮರ್ಥರಾಗದಿದ್ದದ್ದನ್ನು ನೋಡಿ ಕಳವಳಪಟ್ಟನು. ಅನಂತರ ಶ್ರೀರಾಮನು ಎದ್ದು ಧನುರ್ಬಾಣಗಳ ಸಮೀಪಕ್ಕೆ ಹೋಗಿ ಅದನ್ನು ಮೂರಾವರ್ತಿ ಪ್ರದಕ್ಷಿಸಿ ಪೂಜೆಮಾಡಿ ನಮಸಿದ್ಧೇಭ್ಯಃ ಎಂಬ ಮಂತ್ರವನ್ನು ಪಠಿಸಿ ಧನುಸ್ಸನ್ನು ಹಿಡಿದುಕೊಳ್ಳಲು ಎಲ್ಲಾ ರಾಜರುಗಳೂ ಆಶ್ಚರ್ಯಪಡುತ್ತಿದ್ದರು. ಮಾರೀಚಾದಿಗಳು ಈತನಬಲಕ್ಕೆ ಮೆಚ್ಚಿ ತಲೆತೂಗಿದರು. ರಾಮನು ಹೆದೆಯನ್ನು ವಜ್ರಾವರ್ತದಂಡಕ್ಕೆ ಸೇರಿಸಿ ಬಾಣವನ್ನು ತೆಗೆದುಕೊಂಡು ಔಡಲಎಂಣೆಯಲ್ಲಿ ಪಕ್ಷಿಗೆ ಗುರಿಯಿಟ್ಟು ಬಾಣಪ್ರಯೋಗ ಮಾಡಲಾಗಿ ಆದಂತದಗೃಧ್ರವು ಕಳಚಿ ನೆಲಕ್ಕುರುಳಿತು. ಕೂಡಲೆ ರಾಮನ ಮೇಲೆ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು- ಸೀತಾದೇವಿಯು ನಾಚಿಕೆಯಿಂದ ಆನತಳಾಗಿದ್ದರೂ ಮನಸ್ಸಿನಿಂದ ಪ್ರೇರಿತಳಾಗಿ ವಾರೆನೋಟದಿಂದ ರಾಮನನ್ನು ನೋಡಿ ಮಂದಹಾಸದಿಂದ ಮಂದಾರಮಾಲಿಕೆಯನ್ನು ಶ್ರೀರಾಮನ ಕೊರಳಿಗೆ ಪಂಚಮಹಾಶಬ್ದಗಳು ದಿಕ್ಕನ್ನು ಮುಟ್ಟುತ್ತಿರುವಾಗ ಮಂದಾರಪುಷ್ಪಾಹಾರವನ್ನು ಹಾಕಿದಳು- ಆ ಕಾಲದಲ್ಲಿ ರಾಜಸಭೆಯುವರೂ ಮತ್ತು ಸಕಲರೂ ಜಯಘೋಷಗಳನ್ನು ಮಾಡಿದರು-

ಜನಕನು ವಿವಾಹವನ್ನು ಮಾಡಲೆತ್ನಿಸಿ ಶ್ರೀರಾಮನತಂದೆಯಾದ ದಶರಥನನ್ನೂ, ಆತನ ಅಂತಃಪುರದ ಸ್ತ್ರೀಯರುಗಳನ್ನೂ ಮತ್ತು ಭರತಾದಿಅನುಜ

ರನ್ನೂ ಸಹ ಬರಮಾಡುವುದಕ್ಕೆ ಮಂತ್ರಿಗಳನ್ನು ಅಯೋಧ್ಯಾ ಪಟ್ಟಣಕ್ಕೆ ಕಳುಹಿಸಿದನು. ಆ ಮಂತ್ರಿಗಳು ತ್ವರೆಯಿಂದ ದಶರಥ, ಕೌಶಲ್ಯೆ, ಸುಮಿತ್ರೆ, ಕೈಕಿಲೆ ಮೊದಲಾದವರನ್ನು ಮಿಥಿಲಾಪುರಕ್ಕೆ ಕರೆದುಕೊಂಡುಬಂದರು. ಅನಂತರ ಜನಕನು ದಶರಥಾದಿಗಳನ್ನು ಮರ್ಯಾದೆಯಿಂದ ಬರಮಾಡಿಕೊಂಡು ವಿವಾಹವನ್ನು ಮಾಡಲುದ್ಯುಗಿಸಿದನು. ಶುಭದಿವಸ ಶುಭಲಗ್ನದಲ್ಲಿ ವಿವಾಹ ಮಂಟಪವನ್ನು ರಚಿಸಿ, ವಿಜಯಾರ್ಧ ಪರ್ವತದ ರೇವಮಂದಿರನಗರದ ಅರಸನಾದ ಅಜಾತಶತ್ರುವಿನ ನಾಯಕಿಯಾದ ಚಂದ್ರವರ್ಧನೆಗೆ ಮಕ್ಕಳಾದ ಕೀರ್ತಿಲತೆಯೇ ಮೊದಲಾದ ಎಂಟುಮಂದಿ ಪುತ್ರಿಯರನ್ನು ಕರೆಸಿದನು. ಆಗವಿವಾಹ ಮಂಟಪಕ್ಕೆ ಹರಿವಂಶ, ಕುರುವಂಶ, ಪುರುವಂಶ, ನಾಥವಂಶ, ಮೊದಲಾದ ರಾಜಶ್ರೇಷ್ಠರುಗಳನ್ನೂ ಬರಮಾಡಿಕೊಂಡು ವಿವಾಹ ದಿವಸವನ್ನು ಗೊತ್ತು ಮಾಡಿದರು. ವಿವಾಹದ ದಿವಸ ಶುಭ ಲಗ್ನಕ್ಕೆ ಮೊದಲು ದಶರಥಾದಿಗಳು ರಾಮನೇ ಮೊದಲಾದ ನಾಲ್ವರು ಪುತ್ರರಿಗೂ ಮಂಗಲಸ್ನಾನಮಾಡಿಸಿ ನಾಂದೀ ಮಂಗಲವನ್ನು ನಡೆಸಿದರು. ಸೀತಾದೇವಿ ಮತ್ತು ಕೀರ್ತಿಲತೆಯೇ ಮೊದಲಾದ ಪುತ್ರಿಯರಿಗೂ ಮಂಗಲಸ್ನಾನವನ್ನು ಮಾಡಿಸಿ ನಾಂದೀಮಂಗಲವನ್ನು ನಡೆಸಿ, ಸದ್ಗುಣ ಸಮರ್ಥರಾದ ರಾಮ ಲಕ್ಷ್ಮಣ ಭರತ ಶತೃಘ್ನರನ್ನು ಮಂಗಳ ವೇದಿಕಾಗ್ರದಲ್ಲಿ ಕೂಡಿಸಿ, ಬಲಭಾಗದಲ್ಲಿ ದಶರಥನೂ ಎಡಭಾಗದಲ್ಲಿ ಕೌಶಲ್ಯ ಸುಮಿತ್ರೆ ಕೈಕಿಲೆ ಲಕ್ಷ್ಮಣೆಯರೂ ಕೂತುಕೊಂಡರು. ಕೂಡಲೇ ಸ್ವಸ್ತಿವಾಚಕಗಳು ನಡೆಯಿತು. ಅನಂತರ ಮಧುಪರ್ಕಾದಿ ಕ್ರಿಯೆಗಳನ್ನು ಮಾಡಿ ವೇದಿಕಾ ಮಧ್ಯಕ್ಕೆ ಕರೆದುಕೊಂಡುಹೋಗಿ ರಾಮಾದಿಗಳನ್ನು ತಂಡುಲದ ಮೇಲೆ ನಿಲ್ಲಿಸಿ ಕಾಂಡಪಟವನ್ನು ಬಿಟ್ಟು ಸೀತಾದೇವಿ ಮೊದಲಾದವರನ್ನು ಅವರವರ ವರಗಳ ಮುಂದುಗಡೆ ನಿಲ್ಲಿಸಿ ಮಂಗಳಸ್ತೋತ್ರ ಪಠನೆಗಳಾದನಂತರ ಪರಸ್ಪರ ಮುಖ ನಿರೀಕ್ಷಣಾನಂತರ—ಜನಕನು ವಿದೇಹಿಯನ್ನೊಡಗೂಡಿ ತೀರ್ಥಜಲದಿಂದಲೂ ಮತ್ತು ಜಿನಸ್ನಾನಗಂಧೋದಕದಿಂದಲೂ ರಾಮನಕೈಮೇಲೆ ಸೀತೆಯಹಸ್ತವನ್ನಿಟ್ಟು ಸುವರ್ಣಾದಿಗಳನ್ನಿಟ್ಟು ಧಾರೆಯನ್ನೆರೆದನು. ಸೌಮಿತ್ರಿಗೆ ಆತನಮಾವನಾದ ಅಜಾತಶತ್ರುವು ತನ್ನ ಎಂಟು ಮಂದಿ ಹೆಣ್ಣು ಮಕ್ಕಳನ್ನೂ ಧಾರಾಪೂರ್ವಕವಾಗಿ ಪಾಣಿಗ್ರಹಣ ಮಾಡಿದನು. ಕನಕನಿಗೂ ಸುಪ್ರಭೆಗೂ ಹುಟ್ಟಿದ ಕನಕಪ್ರಭೆಯನ್ನು ಭರತನಿಗೆ ಕೊಟ್ಟು ವಿವಾಹಮಾಡಿದನು. ರಾಮನು ಸೀತೆಯೊಡಗೂಡಿ, ಲಕ್ಷ್ಮೀನಾಥನಾದ ಲಕ್ಷ್ಮಣನು ಕೀರ್ತಿಲತೆ ಮೊದಲಾದವರ

ನ್ನೊಡಗೊಂಡು, ಕೈಕಿಲೆಯ ಪುತ್ರನಾದ ಭರತನು ಕನಕಪ್ರಭೆಯ ಸಮೇತ ಶ್ವಶುರ ಗೃಹದಲ್ಲಿ ಸ್ವಲ್ಪಕಾಲವಿದ್ದು ತಮ್ಮ ತಮ್ಮ ನಾಯಕಿಯರೊಡನೆ ಮಾವಿಂದರ ಬಳುವಳಿ ಸಾಮಾನಿನಿಂದ ಕೂಡಿ ಅಯೋಧ್ಯಾ ಪಟ್ಟಣಕ್ಕೆ ಪಯಣಮಾಡುತ್ತಾ ಪರಮ ಶಾಂತಸ್ವರೂಪನಾದ ಜಿನೇಶ್ವರನನ್ನು ಧ್ಯಾನ ಮಾಡುತ್ತಲಿದ್ದರು.

೨೦. ದಶರಥನ ವಿರಕ್ತಿ.

ಕೇಳಿದ್ಯೆ ರಾಜೇಂದ್ರನೇ! ರಾಮಾದಿ ಸಹೋದರರು ತಮ್ಮ ತಮ್ಮ ಪ್ರಿಯ ಪತ್ನಿಯರಲ್ಲಿ ಅನುರಾಗವುಳ್ಳವರಾಗಿ ಕಾಲವನ್ನು ಕಳೆಯುತ್ತಿದ್ದರು. ಕೆಲವುದಿನಕಳೆದನಂತರ ದಶರಥನು ಸಭಾಸೀನನಾಗಿರಲಾಗಿ ಪುರದ ಬಹಿಃಪ್ರದೇಶದಲ್ಲಿರುವ ಮಹೇಂದ್ರವನಕ್ಕೆ ಭೂತಹಿತಾಖ್ಯಮುನಿಗಳು ನೂರುಜನತಪಸ್ವಿಗಳೊಡನೆ ದಯಮಾಡಿಸಿರುವರೆಂದೂ ಅವರು ತ್ರಿಜ್ಞಾನಧರರಾದ್ದರಿಂದ ಅಕಾಲದಲ್ಲಿ ಫಲರ್ತಳಿರು ಕುಸುಮಗಳು ಆಗಿರುವದೆಂದೂ ಆಫಲ ಪುಷ್ಪಗಳನ್ನು ವನಪಾಲಕನು ರಾಜನ ಪಾದದಮೇಲಿಟ್ಟು ನಮಸ್ಕರಿಸಿದನು. ಆ ವರ್ತಮಾನವನ್ನು ಕೇಳಿ, ದಶರಥಮಹಾರಾಜನು ಅತ್ಯಾನಂದವನ್ನು ಹೊಂದಿ ವನನಿವೇದಕನನ್ನು ವಸ್ತ್ರಭೂಷಣಾದಿಗಳಿಂದಸತ್ಕರಿಸಿ, ತಾನು ಭದ್ರಾಸನದಿಂದೆದ್ದು ಏಳು ಹೆಜ್ಜೆಗಳನ್ನಿಟ್ಟು ಆ ಮಹಾ ಮುನೀಶ್ವರರಿಗೆ ನಮಸ್ಕರಿಸಿ, ಕೌಶಲ್ಯಾದಿ ಅಂತಃಪುರದ ಸ್ತ್ರೀಯರೊಡನೆ ಮತ್ತು ಪರಿಜನ ಪುರಜನರೊಡನೆ ಕಾಲುನಡಗೆಯಿಂದ ಮಹಾಮುನೀಶ್ವರರಿರುವ ಉಪವನಕ್ಕೆ ಬಂದು ಮುನೀಶ್ವರರನ್ನು ಪ್ರದಕ್ಷಿಣೀಕರಿಸಿ ನಮಸ್ಕರಿಸಿ, ಸಾವಧಾನಚಿತ್ತದಿಂದ ಸ್ವಲ್ಪಹೊತ್ತು ಧರ್ಮಶ್ರವಣವನ್ನು ಕೇಳಿದನು. ಅನಂತರ ಸಾಗಾರಧರ್ಮವನ್ನು ಕೇಳಿ ಶಾಂತಮನಸ್ಕನಾಗಿ ತನ್ನ ಹಿಂದಲ ಭವವನ್ನು ತಿಳಿಯಲಿಚ್ಛೆಯುಳ್ಳವನಾಗಿ ಯತಿಗಳಿಗೆ ನಮಸ್ಕರಿಸಿ ತನ್ನ ಭವಾವಳಿಯನ್ನು ಹೇಳಬೇಕೆಂದು ಬೇಡಿಕೊಳ್ಳಲು– "ಎಲೈ ರಾಜನೇ ರಾಟೆಯು ಭವಾವರ್ತದಿಂದ ಸುತ್ತುತ್ತಲಿರುವುದು. ಆಯಾಯಕಾಲದಲ್ಲಿ ಉಂಟಾದ ಕರ್ಮೋಪಶಮನದಿಂದ ಆತ್ಮನು ಸುಖದುಃಖಗಳನ್ನು ಹೊಂದುತ್ತಲಿರುವನು. ನೀನು ಹಿಂದಿಲಿನ ಭವಗಳಲ್ಲಿ ತಿರ್ರುನೆತಿರಿಗಿ ಕರ್ಮೋಪಶಮನದಿಂದ ಚಂದ್ರಪುರದ ದೊರೆಯಾದ ಚಂದ್ರಸೇನನಿಗೆ ಚಂದ್ರಮತಿಎಂಬ ಅರಸಿಯಾದಳು. ಅವರಿಬ್ಬರಿಗೂ ದಾರುಣನೆಂಬ ಹೆಸರುಳ್ಳ ಮಗನಾದನು. ಆತನಿಗೆ

ಸುಧರ್ಮೆಯೆಂಬ ಸ್ತ್ರೀಯನ್ನು ವಿವಾಹಮಾಡಿದರು. ಆತನು ಹಿಂದಲ ಭವದಲ್ಲಿ ನಿಃಕರುಣನೆಂಬ ವನಚರನಾಗಿ ಇದ್ದನು. ಆತನಲ್ಲಿ ಸಮ್ಯಕ್ತ್ವಪ್ರಕೃತಿಯು ಹುಟ್ಟಿ, ಆತನು ಸನ್ಮಾರ್ಗದಲ್ಲಿ ನಡೆಯುತ್ತಾ, ಚತುರ್ವಿಧದಾನವನ್ನು ಸತ್ಪಾತ್ರಕ್ಕೆ ಕೊಡುತ್ತಾ ಅಂತ್ಯದಲ್ಲಿ ಸಮಾಧಿಮರಣವನ್ನು ಹೊಂದಿ-ಧಾತಕೀಷಂಡದ್ವೀಪದ ಪೂರ್ವದಿಕ್ಕಿನ ಮಂದರಾಚಲದಹತ್ತಿರವಿರುವ ಕುರುಕ್ಷೇತ್ರದಲ್ಲಿ ಆರ್ಯನಾಗಿ ಹುಟ್ಟಿ, ಅಲ್ಲಿ ಮೂರುಪಲ್ಯಾಯುಷ್ಯವನ್ನು ಸುಖವಾಗಿ ಕಳೆದು ದೇವತ್ವವನ್ನು ಹೊಂದಿ ಅಲ್ಲಿಬಹಳಕಾಲ ಸುಖವಾಗಿದ್ದು ಆಯುಷ್ಯಾವಸಾನದಲ್ಲಿ ಜಂಬೂದ್ವೀಪದ ಪೂರ್ವವಿದೇಹಕ್ಷೇತ್ರದ ಪುಂಡರೀಕಿಣಿ ಪಟ್ಟಣದ ರಾಜನಾದ ನಂದಿಘೋಷಣನಿಗೆ ವಸುಮತಿಯೆಂಬ ಅರಸಿಇದ್ದಳು. ಅವರೀರ್ವರಿಗೂ ನಂದಿವರ್ಧನನೆಂಬ ಮಗನು ಜನಿಸಿದನು. ಆತನು ಯೌವನಸ್ಥನಾಗಿರುವಾಗ ಆಪಟ್ಟಣದ ಉಪವನಕ್ಕೆ ಯಶೋಧರರೆಂಬ ಮುನೀಶ್ವರರು ಬಂದ ವಾರ್ತೆಯನ್ನುತಿಳಿದು, ನಂದಿಘೋಷಣನು ಯತಿಗಳಸಮೀಪಕ್ಕೆ ಬಂದು ಧರ್ಮವನ್ನು ಕೇಳಿ ವೈರಾಗ್ಯವನ್ನು ಪಡೆದು ರಾಜ್ಯವನ್ನು ನಂದಿವರ್ಧನನಿಗೆ ಒಪ್ಪಿಸಿ, ತಾನು ಮುನಿಗಳ ಸಮೀಪದಲ್ಲಿ ದೀಕ್ಷೆಯನ್ನು ತೆಗೆದುಕೊಂಡು ಇಂದ್ರಿಯಗಳನ್ನು ನಿಗ್ರಹಿಸಿ ಉಗ್ರತರ ತಪಸ್ಸನ್ನು ಮಾಡಿ ಕಾಲಾಂತ್ಯದಲ್ಲಿ ಈ ಶರೀರವನ್ನು ಬಿಟ್ಟು ನವಗ್ರೈವೇಯಕದಮಧ್ಯದಲ್ಲಿ ಅಹಮಿಂದ್ರನಾಗಿ ಹುಟ್ಟಿದನು. ಇತ್ತ ಮಗನಾದ ನಂದಿವರ್ಧನನು ನ್ಯಾಯವಾಗಿ ಪ್ರಜೆಗಳನ್ನು ಪರಿಪಾಲಿಸುತ್ತಾ ವೃದ್ಧಾಪ್ಯದಲ್ಲಿ ತಪಸ್ಸನ್ನುಹೊಂದಿ, ಬ್ರಹ್ಮೇಂದ್ರಕಲ್ಪದಲ್ಲಿ ತ್ರಿದಿವನಾಗಿಹುಟ್ಟಿದನು- ಅನಂತರ ಆಲೋಕವನ್ನು ಬಿಟ್ಟು ಅಪರವಿದೇಹದ ವಿಜಯಾರ್ಧ ಪರ್ವತದ ಮೇಲಿರುವ ಶಿಶುಪುರವನ್ನಾಳುವ ರತ್ನಮಾಲನೆಂಬುವನಾದನು- ಆತನಸತಿ ವಿದ್ಯುಲ್ಲತೆಗೆ ಸೂರ್ಯಂಜಯನೆಂಬ ಮಗನಾದನು. ಜನಕನಾದ ರತ್ನಮಾಲನು ಒಂದುದಿನ ಚತುರ್ಬಲದೊಡನೆ ಕೂಡಿ ತನಗೆ ಉಪಾಯನವನ್ನು ಕೊಡದ ಪರಾಕ್ರಮಿಯಾದ ವಜ್ರಲೋಚನನ ಮೇಲೆ ಯುದ್ಧಕ್ಕೆ ಅನುವಾಗಿಹೊರಟು ಬರುವಾಗ ಆಕಾಶದಿಂದ ಒಬ್ಬನು ನಕ್ಷತ್ರಜ್ಯೋತಿಯಂತೆ ಪ್ರಕಾಶಿಸುತ್ತ ಭೂಲೋಕಕ್ಕೆ ಇಳಿದನು. ಆಗ ರತ್ನಮಾಲನು ಆತನ ರೂಪಿಗೆ ಆಶ್ಚರ್ಯಪಡುತ್ತಾ ಆತನನ್ನೇ ನೋಡುತ್ತಾ ನಿಂತುಕೊಂಡನು- ಆಗ ದೇವನು, " ಎಲೈ ಅರಸೇ ಕೋಪವೆಂಬುವದು ದೊಡ್ಡಮದ್ಯವಾಗಿರುವದು. ಮದ್ಯವನ್ನು ಸ್ವೀಕರಿಸಿದವರು ಯುಕ್ತಾಯುಕ್ತವನ್ನರಿಯದೆ ಕೆಲಸಮಾಡುವರೋ ಹೇಗೋ, ಹಾಗೇ

ಕೋಪವುಳ್ಳವನೂ ಕೂಡ ಯುಕ್ತಾಯುಕ್ತ ಪರಿಜ್ಞಾನರಹಿತನಾಗಿ ಹಿಂಸಾ ಕಾರ್ಯವನ್ನು ಮಾಡಿ ಕಡುದುಃಖವನ್ನು ಹೊಂದುವನು" ಎಂದು ಹೇಳಲು ಅದಕ್ಕೆ ರತ್ನಮಾಲನು "ನಿನ್ನ ರೂಪು ನೋಡುವುದಕ್ಕೆ ಅತ್ಯಂತ ಆಶ್ಚರ್ಯ ವಾಗಿದೆ. ನೀನು ಯಾರು? ಎಲ್ಲಿಂದ ಬಂದೆ? ಎಲ್ಲಿಗೆ ಹೋಗುತ್ತೀಯೇ? ಇದನ್ನು ದಯವಿಟ್ಟು ಹೇಳಬೇಕು" ಎಂದುಕೇಳಿಕೊಂಡನು. ಅದಕ್ಕೆ ಆತನುಹೇಳಿದ್ದೇನೆಂದರೆ—ವಿಜಯಾರ್ಧಪರ್ವತದ ಶಶಿಪುರಕ್ಕೆ ಶ್ರೀಭೂತಿದೊರೆಯಮಗನು ಸುಭೂತಿಯೆಂಬ ಹೆಸರಿನಿಂದ ಶೌರ್ಯಪರಾಕ್ರಮದಿಂದ ಕೂಡಿದ್ದನು. ಆತನಿಗೆ ಪೌರೋಹಿತನೊಬ್ಬನಿದ್ದನು. ಆತನು ಸುಭೂತಿಯನ್ನಾಶ್ರೈಸಿ ಜೀವಿಸುತ್ತಿದ್ದನು ಸುಭೂತಿಯು ಪುರೋಹಿತನಾದ ಉಪಮನ್ಯೆಂಬುವನೊಡನೆ ಸಂಚರಿಸುವಾಗ ಚಾರಣಮಹರ್ಷಿಗಳನ್ನು ಕಂಡು ನಮಸ್ಕರಿಸಿ ಧರ್ಮೋಪದೇಶವನ್ನು ಕೇಳಿ ಅಣುವ್ರತಧಾರಿಗಳಾಗಿದ್ದರು. ಈ ಇಬ್ಬರಲ್ಲಿ ಉಪಮನ್ಯುವು ಸಮ್ಯಕ್ತ್ವದಲ್ಲಿ ನಂಬಿಕೆಯಿಲ್ಲದೆ ಅಣುವ್ರತವನ್ನು ಕುರಿತು ಮಾಡಲು ಶಕ್ತಿಯಿಲ್ಲದೆಖಂಡಿಸುತ್ತ ಪಂಚತ್ವವನ್ನು ಪಡೆದನು. ಪತಿಯಾದ ಸುಭೂತಿಯಮೇಲೆ ಮೋಹದಿಂದ ಈ ಸುಭೂತಿಗೂ ಈತನ ಸತಿಯಾದ ಯೋಜನಗಂಧಿಗೂ ಅರಿಂದವನೆಂಬ ಮಗನಾಗಿ ಹುಟ್ಟಿದನು. ಮತ್ತೆ ಆ ಯತಿಗಳು ಈತನಿಗೆ ಧರ್ಮವನ್ನುಪದೇಶಿಸಲಾಗಿ ಈ ಅರಿಂದವನು ವೈರಾಗ್ಯವನ್ನು ಹೊಂದಿ ತಪಸ್ಸುಪಡೆದು ಶತಾರಕಲ್ಪದಲ್ಲಿ ಜನಿಸಿದನು. ಶ್ರೀಭೂತಿಯು ಮಾಡಿದಪಾಪಸಂಬಂಧದಿಂದ ಸತ್ತು ಮಂದರಾಟವಿಯ ಮಧ್ಯದಲ್ಲಿ ಹುಲ್ಲೇ ಮರಿಯಾಗಿ ಹುಟ್ಟಿ ಕಾಡುಗಿಚ್ಚಿಗೆ ಸಿಕ್ಕಿ ಉರಿಯಿಂದ ಸತ್ತು ಕಾಂಭೋಜದೇಶದ ಬೇಡರಹಳ್ಳಿಯಲ್ಲಿ ಕುಂಜರನೆಂಬವನಾಗಿ ಹುಟ್ಟಿದನು. ಅಲ್ಲಿ ಬಹಳ ಮೃಗಗಳನ್ನು ಸಂಹರಿಸಿ ಎರಡನೇನರಕಕ್ಕೆ ಇಳಿದನು- ಅಲ್ಲಿ ಆತನಿದ್ದಾಗ ಸ್ವರ್ಗದಲ್ಲಿ ಹುಟ್ಟಿದ್ದ ಉಪಮನ್ಯುಚರನಾದ್ದ ದೇವನು ಆ ನಾರಕನಿಗೆ ಬೋಧಿಸಲು ಆತನು ಅಲ್ಲಿಂದ ಜಾರಿ ಧರ್ಮಾನುರಾಗದಿಂದ ರತ್ನಮಾಲನನೆಂಬವನಾಗಿನೀನಾದೆ-* ನಿನಗೆ ಧರ್ಮವನ್ನು ಹೇಳಿದ ದೇವನು ನಾನೆನಲು ರತ್ನಮಾಲನು ತನ್ನ ಮಗನಾದ ಸೂರ್ಯಂಜಯನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೊರಟು ವಿಶ್ರಾಮತಿಲಕ ಸೌಂದರ್ಯರೆಂಬ ಮಹಾಮುನೀಶ್ವರರಲ್ಲಿ ತಪಸ್ಸನ್ನು ತೆಗೆದುಕೊಂಡು ನಿಷ್ಠನಾಗಿ ಮಾಡಿ ಅವ

*ಎಂದಿರುವುದರಲ್ಲಿ ಈ ರತ್ನಮಾಲನು ಬೇರೆ ಇರಬೇಕು. ಏಕೆಂದರೆ ಮುಂದೆ ಶ್ರೀಭೂತಿ ಉಪಮನ್ಯುಗಳು ಜನಕಕನಕರಾಗಿರುತ್ತಾರೆಂದು ಹೇಳಿಧೆ.

ಸ್ಥಾನದಲ್ಲಿ ಮಹಾಶುಕ್ರಕಲ್ಪದಲ್ಲಿ ಹುಟ್ಟಿ ಅಲ್ಲಿನ ಭೋಗೋಪಭೋಗವನ್ನು ಹೊಂದಿ ಅಲ್ಲಿಂದ ಬಂದು ದಶರಥನೆಂಬ ರಾಜನಾದೆ. ನಂದಿವರ್ಧನನಭವದ ಸಂಬಂಧದ ತಂದೆಯೇ ನಂದಿಘೋಷಣನೆಂದು ಹೆಸರಾಂತು ಗ್ರೈವೇಯಕ ಕಲ್ಪದಿಂದ ಅವತರಿಸಿ ಬಂದು ಭೂತಹಿತಾರ್ಥವಾದ ಧರ್ಮವನ್ನು ಅನುಸರಿಸಿ ನಾವು ಮುನಿಗಳಾದವೆಂದೂ ಆಗಿನ ಶ್ರೀಭೂತಿಉಪಮನ್ಯುರಾಗಿದ್ದವರು ನಿನಗೆ ನೈದುನರಾದ ಜನಕ ಕನಕರಾಗಿ ಹುಟ್ಟಿರುವರೆಂದು ಋಷಿಗಳು ಹೇಳಲಾಗಿ ದಶರಥನು ಜನ್ಮಾಂತರದ ಸಂಬಂಧವನ್ನು ನೆನೆದು, ವೈರಾಗ್ಯ ಪರಾಯಣನಾಗಿ ಸಂಸಾರಸ್ಥಿತಿಯನ್ನು ನೆನೆದು ಬೆಂಡಾದನು. ಎಷ್ಟು ದಿವಸ ನಾವು ಇಂದ್ರಿಯ ಲಂಪಟರಾಗಿದ್ದರೂ ತೃಪ್ತಿಯು ಹುಟ್ಟುವುದಿಲ್ಲವೆಂದು ಆಲೋಚಿಸುತ್ತ ಕೌಸಲ್ಯೆಯೊಡಗೂಡಿ ಮನೆಗೆಬಂದ ದಶರಥನನ್ನು ಪುರಜನ ಪರಿಜನರು ನಮಸ್ಕರಿಸಿ ರಾಮಲಕ್ಷ್ಮಣರನ್ನು ಹೊಗಳುತ್ತಿರಲು ದಶರಥನು ಪರಿಶುದ್ಧರಾದ ಜಿನೇಶ್ವರರನ್ನು ಧ್ಯಾನಿಸುತ್ತಲಿದ್ದನು.

೨೧. ರಾಮಚಂದ್ರನು ಪರದೇಶಕ್ಕೆ ಹೋದದ್ದು.

ಕೇಳುವವನಾಗೈ ಶ್ರೇಣಿಕ ಮಹಾರಾಜನೇ! ಆ ದಿವಸ ದಶರಥನು ಕೌಸಲ್ಯಾದೇವಿಯೊಡನೆ ಸರಸಸಲ್ಲಾಪಮಾಡುತ್ತ, ಅಲ್ಲಿಂದ ಹೊರಟು ಸಭಾಸೀನನಾಗಿ ರಾಮನಿಗೆ ಹೇಳಿ ಕಳುಹಿಸಿದನು. ರಾಮಲಕ್ಷ್ಮಣರು ಬಂದು ದಶರಥನ ಪಾದಕ್ಕೆ ನಮಸ್ಕರಿಸಿ ನಿಂತುಕೊಂಡರು. ವೈರಾಗ್ಯಪರಾಯಣನಾದ ದಶರಥನು ರಾಮಚಂದ್ರನಾಸ್ಯವನ್ನು ನೋಡುತ್ತಾ "ಎಲೈ ಮಕ್ಕಳಿರಾ ಪುರುಷನಿಗೆ ಧರ್ಮಾರ್ಥಕಾಮಮೋಕ್ಷಗಳೆಂಬ ಚತುಷ್ಟಯಗಳಿರುತ್ತವೆ. ಈಗ ಧರ್ಮಾರ್ಥ ಕಾಮಗಳು ನನ್ನಿಂದ ಆಚರಿಸಲ್ಪಟ್ಟವು. ಮುಂದೆ ನಾನು ತಪೋಬಲನಾಗಿ ಮೋಕ್ಷವನ್ನು ಹೊಂದಬೇಕಾದದ್ದು ಯುಕ್ತವಾದದ್ದರಿಂದ ಈ ರಾಜ್ಯಭಾರವನ್ನು ಜ್ಯೇಷ್ಠಪುತ್ರನಾದ ನಿನಗೆ ವಹಿಸಿ ಮುಂದಲ ಕೆಲಸಕ್ಕೆ ಅನುವಾಗಿರುವೆನು" ಎಂದು ಹೇಳಿದನು. ರಾಮನು ತಂದೆಯು ಅಗಲಿಹೋಗುವವನೆಂಬ ಚಿಂತೆಯಿಂದ ತಂದೆಗೆ ನಮಸ್ಕರಿಸಿ—"ಸ್ವಾಮಿ! ಭುಜದೊಳಗೆ ಇರತಕ್ಕ ರಾಜ್ಯವನ್ನು ಬಾಲಕರಾದ ನಾವು ಹೊರಬಲ್ಲವೇ?" ಎಂದು ಕೇಳಲಾಗಿ ದೊರೆಯು ಲಕ್ಷ್ಮಣನನ್ನು ನೋಡಿ ಅಗ್ರಜನಿಗೆ ವಿಧೇಯನಾಗಿರಬೇಕೆಂತ ಹೇಳಲು ಲಕ್ಷ್ಮಣನು ಶಿರಬಾಗಿ ಒಪ್ಪಿಕೊಂಡನು. ರಾಮನಿಗೆ ದಶರಥನು—"ಶುಭ

ದಿವಸವಾದ ನಾಳೆ ಶುಭಲಗ್ನದಲ್ಲಿ ನಿನಗೆ ಪಟ್ಟಾಭಿಷೇಕವನ್ನು ಮಾಡುತ್ತೇನೆ" ಎಂದು ಹೇಳಲಾಗಿ ದಶರಥನಿಗೆ ಶ್ರೀರಾಮನು ನಮಸ್ಕರಿಸಿ ತಾಯಿಯಾದ ಕೌಸಲ್ಯಾದೇವಿಯನ್ನು ನೋಡಲು ಲಕ್ಷ್ಮಣನ ಸಹಿತ ತೆರಳಿದನು. ಆ ಪುರ ದೊಳಗೆಲ್ಲಾ ಪ್ರತಿಜನರ ಬಾಯಿಯಲ್ಲೂ ರಾಮನ ಪಟ್ಟಾಭಿಷೇಕವಾಗುವ ಮಾತೇ ಆಗಿತ್ತು. ಈವಿಷಯವನ್ನು ಕೈಕಿಲೆಯ ತೌರ್ಮನೆಯಿಂದ ಬಂದಿದ್ದ ಅವಳ ದಾದಿಯಾದ ಮಾಯಾವಿಯೆಂಬುವಳು ಓಡಿಬಂದು ಕೈಕಿಲೆಗೆ ಈವರ್ತ ಮಾನವನ್ನು ಹೇಳಿದಳು. ಅದಕ್ಕೆ ಕೈಕಿಲೆಯು ಸಂತೋಷದಿಂದ ಅವಳಿಗೆ ಆಭರಣವನ್ನು ಕೊಡುವುದಕ್ಕೆ ಹೋದಳು. ಇದಕ್ಕೆ ದಾದಿಯು ಬಹಳ ಬೆಚ್ಚುಬಿದ್ದು "ಇದೇನು ! ನೀನು ಹೀಗೆ ಮಾಡುವುದು ? ರಾಮನಿಗೆ ಪಟ್ಟಾ ಭಿಷೇಕವಾಗುವುದು ನಿನಗೆ ಸಂತೋಷವೇ? ಹಾಗಾದರೆ ನಾನು ನನ್ನ ಸ್ಥಳಕ್ಕೆ ಹೋಗುವೆನು" ಎಂದಳು. ಹಾಗೇಕೆ ಮಾಡುತ್ತೀಯೆಂದು ಕೈಕಿಲೆಯು ಕೇಳಲು ದಾದಿಯು "ಎಲೈ ದೇವಿಯೆ ! ರಾಮನಿಗೆ ಪಟ್ಟಾಭಿಷೇಕವಾಗುತ್ತಲೇ ಕೌಸ ಲ್ಯೆಯು ರಾಜಮಾತೆಯಾಗಿ ಎಲ್ಲಾ ಗೌರವಕ್ಕೂ ಪಾತ್ರಳಾಗುವಳು. ಲಕ್ಷ್ಮ ಣನು ರಾಮನ ಪ್ರೇಮಪಾತ್ರನಾಗಿರುವುದರಿಂದ ಸೌಮಿತ್ರಿಯು ಕೌಸಲ್ಯೆಗೆ ಪರಮಸ್ನೇಹಿತಳಾಗುವುದು ನಿಶ್ಚಯವೇ ಆಗಿಧೆ. ದಶರಥನು ತಪಸ್ಸಿಗೆ ಹೋದ ಮೇಲೆ ನೀನು ಯಾವ ಗಣನೆಗೆ ಸೇರುತ್ತೀಯೆ ? ನಿನ್ನ ಭರತನು ರಾಮನ ಸೇವಕನಾಗಿ ಕಾಲವನ್ನು ಕಳೆಯಬೇಕು; ಇಲ್ಲದಿದ್ದರೆ ದೇಶಾಂತರಗತನಾಗ ಬೇಕು. ಆಗಿನ ಸ್ಥಿತಿಯಲ್ಲಿ ದೀನಳಾಗಿ ವ್ಯಸನಪಡುತ್ತಿರುವುದನ್ನು ನಾನು ಹೇಗೆ ತಾನೇ ನೋಡಿ ಸೈರಿಸಲಿ. ಈ ದುಃಖಗಳನ್ನು ಕಣ್ಣಿನಿಂದ ನೋಡಿ ಕಿವಿಯಿಂದ ಕೇಳುವುದಕ್ಕೆ ಮುಂಚಿತವೇ ನಾನು ಹೊರಟುಹೋಗುವುದು ಒಳ್ಳೆಯದು" ಎಂದು ಗೋಳಿಟ್ಟು ಕೈಕಿಲೆಯ ಪಾದದ ಮೇಲೆ ಬಿದ್ದು ಹೊರ ಳಾಡಿದಳು. ಕೈಕಿಲೆಯು ಇವಳನ್ನು ಸಮಾಧಾನಪಡಿಸಿ—"ಯಾತಕ್ಕೆ ನೀನು ಹೀಗೆ ಅಳುತ್ತೀಯೆ ? ಶ್ರೀರಾಮನು ತಾಯಿಯಾದ ಕೌಸಲ್ಯೆಯಂತೆ ನನ್ನನ್ನು ಕಾಣುತ್ತಲಿರುವನು. ಆತನಲ್ಲಿ ದೋಷವನ್ನು ವಿವರಿಸುವುದು ಪಾಪಕರವಾ ದದ್ದು" ಎಂದು ಹೇಳಲಾಗಿ, ದೂತಿಯಾದ ಮಾಯಾವಿಯು "ನಿನಗೆ ಜ್ಯೋತಿ ಷ್ಕರು ಈ ಕಾಲದಲ್ಲಿ ಬುದ್ಧಿಭ್ರಮಣೆಯಾಗುತ್ತೆಂತ ಹೇಳಿದ್ದರು. ಅದಕ್ಕೆ ಸರಿ ಯಾಗಿ ಮಾನಾಪಮಾನವೇ ತಿಳಿಯಲಾರದೇ " ಎಂದು ಅತ್ತಳು. ಅದಕ್ಕೆ "ಕೈಕಿಲೆಯು ನಿನ್ನ ಅಭಿಪ್ರಾಯವೇನು ?" ಎಂದು ಕೇಳಲಾಗಿ—''ನಿನ್ನ ಮಗ

ನಾದ ಭರತನಿಗೆ ಈ ರಾಜ್ಯಭಾರವನ್ನು ಕೊಡಬೇಕು. ಹಾಗೆ ಕೊಟ್ಟಮೇಲೂ ರಾಮನು ಪಟ್ಟಣದಲ್ಲಿದ್ದರೆ ಪಿತೂರಿ ನಡೆಸಿ ಭರತನಿಗೆ ಕೆಡಕನ್ನು ಮಾಡುವನು. ಆದುದರಿಂದ ರಾಮನು ವನವಾಸಕ್ಕೆ ಹೊರಡಬೇಕು" ಎಂದು ಹೇಳಲಾಗಿ ಕೈಕೆಲೆಯು ದಾದಿಯು ಮೇಲಿರತಕ್ಕ ಪ್ರೀತಿಗಾಗಿ ಆಕೆಯ ಮಾತನ್ನು ಲಾಲಿಸಿ ಈ ಎರಡು ಕೆಲಸಗಳೂ ಮಹಾರಾಜನಿಂದ ಆಗತಕ್ಕವಾದ್ದರಿಂದ ಮಹಾರಾಜನಿಂದ ನೀನು ಹೇಳುವ ಈ ಎರಡು ಕೆಲಸಗಳನ್ನೂ ಮಾಡಿಸಲು ಸಾಧ್ಯವಿಲ್ಲವೆಂದು ಕೈಕಿಲೆಯುಹೇಳಲಾಗಿ ದಾದಿಯು ನಿನಗೆ ವಿಸ್ಮೃತಿಬಂದಿರುವುದು ನಿಶ್ಚಯವಾಗಿದೆ- ದಶರಥನು ನಿನ್ನನ್ನು ಮೆಚ್ಚಿ ಪೂರ್ವದಲ್ಲಿ ಎರಡುವರಗಳನ್ನು ಕೊಟ್ಟಿದ್ದನ್ನು ಮರೆತೆಯಾ. ಈ ಎರಡುವರಗಳನ್ನು ಈಎರಡುಕೆಲಸಗಳಿಗಾಗಿ ನೀನು ಬೇಡಿಕೊಂಡರೆ ರಾಜನಾದ ದಶರಥನು ನಡೆಸಿಕೊಡದೆ ಮಾತಿನಿಂದ ತಪ್ಪುಹೋಗುವನೇನೆಂದು ಹೇಳಲಾಗಿ ಕೈಕಿಲೆಯು ಸುಮ್ಮನೆ ಕೂತುಕೊಂಡಳು. ದಾದಿಯು ಕೋಪಾವಿಷ್ಟಳಾಗಿ ಕೈಕಿಲೆಯನ್ನು ಕುರಿತು, "ಎಲೇಮೂರ್ಖೇ ನಾನು ಹೇಳಿದಂತೆ ನೀನು ನಡಸದೆ ಇದ್ದರೆ, ಈಗಲೇ ನಾನು ನಿನ್ನಬಳಿಯಿಂದ ಹೊರಟುಹೋಗುವೆನು" ಎಂದು ಹಟಹಿಡಿದಳು.

ಇತ್ತ ಕೌಶಲ್ಯಾದೇವಿಯ ಮನೆಗೆ ರಾಮನು ಲಕ್ಷ್ಮಣನ ಸಹಿತಬಂದು ನಮಸ್ಕರಿಸಿ, ತಂದೆಯು ಅಪ್ಪಣೆಕೊಡಿಸಿದ ಶುಭವರ್ತಮಾನವನ್ನು ಹೇಳಲಾಗಿ ಕೌಸಲ್ಯೆಯು ಅತ್ಯಂತ ಆನಂದಪಟ್ಟು ದಶರಥನ ಅಗಲಿಕೆಗೆ ವ್ಯಸನಪಟ್ಟು ಹರ್ಷವಿಷಾದದಿಂದೊಡಗೂಡಿದಳು. ಅನಂತರ ರಾಮನು ಸತಿಯಾದ ಸೀತಾದೇವಿಯ ಗೃಹಕ್ಕೆಬಂದು ಈಶುಭವರ್ತಮಾನವನ್ನು ಹೇಳಲಾಗಿ ಜಾನಕಿಯು ಸಂತೋಷದಿಂದ ಹಿಗ್ಗಿ ರಾಮನನ್ನು ತಕ್ಕೈಸಿ, "ಸ್ವಾಮಿಯೇ! ನನ್ನನ್ನು ಬಿಟ್ಟು ರಾಜ್ಯಲಕ್ಷ್ಮೀಯನ್ನು ಭಾರ್ಯೆಯನ್ನಾಗಿ ವರಿಸಬೇಕೇ" ಎಂದುಹಸನ್ಮುಖಳಾಗಿ ಕೇಳಿದ್ದಕ್ಕೆ ಶ್ರೀರಾಮನುನಕ್ಕು ಸೀತಾದೇವಿಯನ್ನು ಶಾಂತವಚನದಿಂದ ಆನಂದಗೊಳಿಸಿದನು. ಇತ್ತ ಕೈಕಿಲೆಯು ಮಾಯಾವಿಯ ಮಾತಿನ ಪ್ರಕಾರಮಾಡಲು ಯೋಚಿಸಿ ಕೊನೆಗೆ ಮನಸ್ಸಿನಲ್ಲಿ ಆ ಎರಡುಕಾರ್ಯಗಳನ್ನು ಮಾಡತಕ್ಕದ್ದೆಂದು ನಿಶ್ಚಯಿಸಿ ನಾಯಕನಾದ ದಶರಥನ ಸನ್ನಿಧಿಗೆ ಬಂದಳು. ದಶರಥನು ಅಕಸ್ಮಾತ್ತಾಗಿ ಕೈಕಿಲೆಯು ಕಾರಣವಿಲ್ಲದೆ ಬಂದದ್ದಕ್ಕೆ ಆಶ್ಚರ್ಯಪಡುತ್ತಾ, ರಾಮನ ಪಟ್ಟಾಭಿಷೇಕದ ಉತ್ಸವಕ್ಕೆ ಹೆಚ್ಚು ಉತ್ತೇಜನಕಾರ್ಯ ಮಾಡಬೇಕೆಂದು ಹೇಳುವಳೆಂದು, ಕೈಕಿಲೆಯ ಹಸ್ತವನ್ನು ಹಿಡಿದು ತನ್ನಅರ್ಧಾ

ಸನದಲ್ಲಿ ಕೂಡಿಸಿಕೊಂಡು ಕುಶಲ ಪ್ರಶ್ನೆಮಾಡಲು—ಕೈಕಿಲೆಯು ವ್ಯಸ್ತಳಾಗಿ "ಎಲೈ ಸ್ವಾಮಿಯೇ ತಾವು ನನಗೆ ಅಪ್ಪಣೆಕೊಡಿಸಿ ಶಪಥ ಮಾಡಿರುವ ಎರಡು ವರಗಳು ಜ್ಞಾಪಕದಲ್ಲಿವೆಯೇ?" ಎಂದು ಕೇಳಲಾಗಿ ಜಾಗರೂಕನಾಗಿ ಸತ್ಯ ಸಂಧನಾದ ದಶರಥನು ಓಹೋ! ಅವಶ್ಯವಾಗಿ ನಾನು ವರಗಳನ್ನು ನಡೆಸಿಕೊಡಲು ಸಿದ್ಧನಾಗಿದ್ದೇನೆಂದು ಹೇಳಲಾಗಿ, ಕೈಕಿಲೆಯು ದಶರಥನಿಗೆ "ಒಂದನೇ ವರವೇನೆಂದರೆ–ಭರತನಿಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂಬುದು ಇದನ್ನು ಕೇಳುತ್ತೇನೆ" ದಶರಥನಿಗೆ ತೊಡೆಯ ಮೇಲೆ ಕೂತಿದ್ದ ಕೈಕಿಲೆಯು ಚೇಳಿನ ರೂಪಿನಿಂದ ಸಹಸ್ರಬಾಲದಿಂದ ಕುಟುಕಿದಂತೆ ಬಹಳ ವ್ಯಸ್ತನಾದನು. ಅಷ್ಟರಲ್ಲೇ ಕೈಕಿಲೆಯು "ಎರಡನೇ ವರವೇನೆಂದರೆ–ನಿನ್ನ ಜ್ಯೇಷ್ಠಪುತ್ರನಾದ ರಾಮನು ಈ ಸಂಸ್ಥಾನದಿಂದ ಯಾವ ಸ್ವತ್ತನ್ನು ಹೊಂದದೆ ನಾರ್ಮುಡಿಮಾತ್ರದಿಂದ ಈ ಸ್ಥಳವನ್ನು ಬಿಟ್ಟು ವನವಾಸಕ್ಕೆ ಹನ್ನೆರಡುವರ್ಷ ಹೊರಡ ಬೇಕು" ಎಂಬ ನುಡಿಯನ್ನು ಕೇಳಲಾಗಿ ವೃದ್ಧನಾದದಶರಥನು ಈ ಎರಡು ವಾಕ್ಯಗಳಿಗೆ ಸರಿಯಾಗಿ ಅರ್ಥಹೇಳಲು ಗೊತ್ತಾಗದೆ ವಿಸ್ಮೃತಿಯಿಲ್ಲದೆ ಮೂರ್ಛೆ ಹೊಂದಿ ಆಸನದಿಂದ ಕೆಳಗೆ ಭೂತಳಕ್ಕೆ ಉರುಳಿ ಮೂರ್ಛಿತನಾದನು. ಅಷ್ಟರಲ್ಲಿ ಸುಮ್ಮಸಿರದೆ ಕೈಕಿಲೆಯು "ಇದೇನು! ಹೀಗೆ ಮಾಡುತ್ತೀಯೇ! ನಿನ್ನವಂಶೀಕರು ಆಜೀವಿತಾಂತದವರೆಗೂ ಸತ್ಯಸಂಧರಾಗಿದ್ದರು. ಈಗನೀನುವೃದ್ಧನಾಗಿ ತಿಳುವಳಿಕಸ್ತನಾಗಿ ರಾಜನೀತಿಯನ್ನು ತಿಳಿದವನಾಗಿದ್ದುಕೊಂಡು ಈ ರೀತಿ ಮರುಳಾಟವಾಡುವಿಯಾ?" ಎಂದು ಹೇಳಿದ್ದನ್ನು ಅರ್ಥಜ್ಞಾನವಿಲ್ಲದೆ ಮೂರ್ಛಿತನಾಗಿದ್ದ ದಶರಥನ ಕಿವಿಗೆ ಈ ಶಬ್ದಗಳು ಮುಟ್ಟುತ್ತಲೇ ಸಂಪೂರ್ಣವಾದ ಅಜ್ಞಾನದಿಂದ ಮೂರ್ಛಿತನಾದನು. ಇದನ್ನು ನೋಡಿ ಸೇವಕರೂ, ವೈದ್ಯರೂ ದಶರಥನ ಸುತ್ತಮುತ್ತಲೂ ಸುತ್ತಿಕೊಂಡು ಶೈತ್ಯೋಪಚಾರದಿಂದ ಚೈತನ್ಯ ಒದಗುವುದಕ್ಕೆ ನಾನಾವಿಧವಾದ ಪ್ರಯತ್ನಗಳನ್ನು ಮಾಡತೊಡಗಿದರು. ಆ ಬಳಿಯಲ್ಲಿದ್ದ ಎಲ್ಲಾ ಸೇವಕ ವೈದ್ಯರುಗಳೂ ಈ ದಶರಥನ ಅವಸ್ಥೆಯನ್ನು ನೋಡಿ ದುಃಖಾಕ್ರಾಂತರಾಗಿ ಕಣ್ಣಿನಿಂದ ನೀರು ಸುರಿಸುತ್ತಾ ಯಾವ ಕೆಲಸ ಮಾಡಲೂ ಶಕ್ತರಾಗಲಿಲ್ಲ. ಅಷ್ಟರಲ್ಲಿ ಕೈಕಿಲೆಯು ಸುಮ್ಮನೆ ಇರದೆ ಶ್ರೀರಾಮನನ್ನು ದಶರಥನ ಅಪ್ಪಣೆಯಾಗಿಧೆಯೆಂತ ಜಾಗ್ರತೆಯಾಗಿ ಕರೆದುಕೊಂಡುಬರಬೇಕೆಂದು ಹೇಳಿಕಳುಹಿಸಿದಳು. ಶ್ರೀರಾಮನು ಲಕ್ಷ್ಮಣನೊಡನೆ ರಾಜ್ಯಭಾರವನ್ನು ನಾಳೆಯಿಂದ ತಾನು ಒಹಿಸಿಕೊಳ್ಳುವುದಾಗಿಯೂ, ಲಕ್ಷ್ಮಣನು

ಯುವರಾಜನಾಗಿ ತನಗೆ ಸಹಾಯಕನಾಗಿರಬೇಕೆಂತಲೂ, ನಾನಾವಿಧವಾದ ಸಂತೋಷಕರವಾದ ಮಾತುಗಳನ್ನಾಡುತ್ತಿರುವಾಗ ಕೈಕಿಲೆಯಿಂದ ಕಳುಹಿಸಲ್ಪಟ್ಟ ದೂತರು ಬಂದು ಅವಳು ಹೇಳಿದ್ದಂತೆ ಶ್ರೀರಾಮನ ಮುಂದೆ ಹೇಳಲು ಲಕ್ಷ್ಮಣನನ್ನು ಬಿಟ್ಟು ಶ್ರೀರಾಮನು ತನಗೆ ತಂದೆಯಾದ ದಶರಥನು ಪಟ್ಟಾಭಿಷೇಕದ ವಿಷಯದಲ್ಲಿ ಇನ್ನೂ ಏನನ್ನೋ ಹೇಳಬೇಕೆಂದು ಕರೆಸಿರಬಹುದೆಂಬುದಾಗಿ ತುರುತದಿಂದ ದಶರಥಾವಾಸಕ್ಕೆ ಹೋದನು. ಅಲ್ಲಿ ದಶರಥನು ಮೂರ್ಛಿತನಾಗಿ ಭೂಗತನಾಗಿರುವುದನ್ನೂ, ಸೇವಾದಳವೆಲ್ಲಾ ಕಣ್ಣಿನಿಂದ ನೀರುಸುರಿಸುತ್ತಿರುವುದನ್ನೂ ನೋಡಿ ರಾಮನಮನಸ್ಸು ಅತ್ಯಂತ ಅನುತಾಪವನ್ನು ಹೊಂದಿ, ಯಾವ ಮಾತನ್ನಾಡಲೂ ನಾಲಿಗೆಬರದೆ ನಿಂತುಕೊಂಡನು. ಕೈಕಿಲೆಯು ಶ್ರೀರಾಮನನ್ನು ನೋಡಿ, "ಎಲೈ ರಾಮನೇ! ಈನಮ್ಮ ವಂಶವು ಬಹಳ ಶ್ರೇಷ್ಠವಾದ ಇಕ್ಷ್ವಾಕುವಂಶವು. ಇದರಲ್ಲಿ ಉತ್ಪನ್ನರಾದ ರಾಜರೆಲ್ಲರೂ ಸತ್ಯಸಂಧರಾಗಿದ್ದರು ಮತ್ತು ಪಿತೃಭಕ್ತಿಯುಳ್ಳವರಾಗಿದ್ದರು. ನಿಮ್ಮ ತಂದೆಯಾದ ದಶರಥನು ಮಹಾಶೂರನಾಗಿ ಸತ್ಯಸಂಧನಾಗಿರುವನು. ನೀನು ಆತನಿಗೆ ಜ್ಯೇಷ್ಠಪುತ್ರನಾಗಿ ಲೋಕದಲ್ಲೆಲ್ಲಾ ಖ್ಯಾತಿವಂತನಾಗಿ ಪಿತೃಭಕ್ತಿಯುಳ್ಳವನು. ನಿಮ್ಮ ತಂದೆಯು ಹಿಂದೆ ನನಗೆ ಎರಡುವರಗಳನ್ನು ಕೊಟ್ಟಿದ್ದನು. ಅವುಗಳನ್ನು ಯಾವಕಾಲದಲ್ಲಾದರೂ ಯಾವುದಕ್ಕಾದರೂ ಕೇಳಿಕೊಳ್ಳಬಹುದೆಂದು ಶಪಥಮಾಡಿಕೊಟ್ಟಿದ್ದನು. ಈಗಲೂ ಆ ಶಪಥವನ್ನು ಇಡೇರಿಸುವೆನೆಂದು ಹೇಳಿದನು. ಆದಕ್ಕೆ ನಾನು ಒಂದನೇವರವು ಈರಾಜ್ಯಾಭಿಷೇಕವು ನಿನಗಾಗುವದೆಂದು ಗೊತ್ತುಮಾಡಿರುವದಷ್ಟೇ. ಅದನ್ನು ನನ್ನ ಮಗನಾದ ಭರತನಿಗೆ ಕೊಡಬೇಕೆಂತಲೂ, ಎರಡನೇವರವು ನಿನ್ನನ್ನು ಹನ್ನೆರಡುವರ್ಷವನವಾಸದಲ್ಲಿರಬೇಕೆಂತಲೂ ವರಗಳನ್ನು ಕೇಳಿಕೊಂಡೆನು. ಅದಕ್ಕೆ ನಿನ್ನ ತಂದೆಯಾದ ದಶರಥನು ನಿನ್ನ ಮೇಲಣ ಪ್ರೀತಿಯಿಂದ ನಿನಗೆ ಹೇಳಲು ಮನಸ್ಸಿಲ್ಲದೆ ನಡೆಸದೇ ಇರುವುದಕ್ಕೆ ಆಗದೇ ಮೂರ್ಛಿತನಾದಂತೆ ಭೂಗತ ಶೈಯ್ಯನಾಗಿರುವನು" ಎಂದು ಹೇಳಲು ಈ ಮಾತುಗಳನ್ನು ಶ್ರೀರಾಮನು ಕೇಳಿ ಸಿಡಿಲಿನಿಂದ ಆಹತನಾದವನಂತೆ ನಿಂತುಕೊಂಡಿದ್ದನು. ಕೈಕಿಲೆಯು ಮತ್ತೆ "ಎಲೈ ರಾಮನೇ! ನೀನು ಪಿತೃಭಕ್ತನು. ನಿಮ್ಮ ತಂದೆಯು ಸತ್ಯಸಂಧನಾದ್ದರಿಂದ ನೀನು ನಡಸಲೇ ಬೇಕು. ನಿಮ್ಮ ತಂದೆಯ ಬಾಯಿನಿಂದ ಈ ಮಾತನ್ನು ಕೇಳಬೇಕೆಂದು ಅಪೇಕ್ಷಿಸತಕ್ಕದ್ದಲ್ಲ. ಆತನು ವೃದ್ಧನು ಮತ್ತು ಕಾರ್ಯಾಕಾರ್ಯಪರಿಜ್ಞಾನವಿಲ್ಲ

ದವನು. ಸಂತೋಷದಲ್ಲಿ ಕೊಟ್ಟ ವರಗಳನ್ನು ಸಂತೋಷದಿಂದ ಮಾಡಿತೀರಿಸ ಬೇಕೆಂಬ ಪರಿಜ್ಞಾನವೂ ಸಹ ಆತನಿಗೆ ಇಲ್ಲ. ಚಂಚಲನಾಗಿದ್ದಾನೆ. ನೀನು ಸುಪುತ್ರನಾದುದರಿಂದ ನಾನು ಹೇಳಿದ ವಾಕ್ಯಗಳೇ ಪಿತೃವಾಕ್ಯವೆಂದು ನೆನಿಸಿ ಅದರಂತೆ ನಡೆದುಕೊಳ್ಳುವುದು ಸತ್ಕುಲಪ್ರಸೂತನಾದ ನಿನಗೆ ತಕ್ಕದಾಗಿಧೆ. ಇದಕ್ಕೆ ತಪ್ಪಬೇಡ " ವೆಂದು ಹೇಳಿದಳು. ಇದನ್ನು ಕೇಳಿ ರಾಮನು ಕೈಕಿ ಲಿಗೆನಮಸ್ಕರಿಸಿ "ತಂದೆಗೋಸ್ಕರ ಈವಚನದಂತೆ ನಡೆಯುವದು ನನ್ನ ಕರ್ತ ವ್ಯವಾಗಿದೆ" ಎಂದು ಕೈಕಿಲೆಗೆ ಕೈಮುಗಿದು ಹೇಳಿದನು.

ಅನಂತರ ರಾಮನು ಅಲ್ಲಿಂದ ಹೊರಟು ಕೌಸಲ್ಯಾದೇವಿಯ ಗೃಹಕ್ಕೆ ಬಂದು ಅವಳಿಗೆ ನಮಸ್ಕರಿಸಿ ನಡೆದ ವರ್ತಮಾನವನ್ನು ಹೇಳಲಾಗಿ ಕೌಶಲ್ಯೆ ಯು ಅದನ್ನು ಕೇಳಿ ಮೂರ್ಛಿತಳಾಗಿ ಶೈತ್ಯೋಪಚಾರದಿಂದೆಚ್ಚೆತ್ತುಕೊಂಡು "ನಿಜವಾಗಿಯೂ ನಿಮ್ಮ ತಂದೆಯು ವನವಾಸಕ್ಕೆ ಹೋಗಬೇಕೆಂದು ಅಪ್ಪಣೆ ಕೊಟ್ಟನೇ" ಎಂದು ಅನುತಾಪಪಟ್ಟಳು. ರಾಮನು ಲಕ್ಷ್ಮಣನಿಗೆ ಈ ವಿಷ ಯವನ್ನು ತಿಳಿಸಿ ಸೀತಾಗೃಹಕ್ಕೆ ತೆರಳಿದನು. ಆಗ ಸೀತಾದೇವಿಯು ಗಂಡ ನಿಗೆ ಪಟ್ಟಾಭಿಷೇಕವಾಗುತ್ತೆ. ತನಗೆ ಇಂಥಿಂಥಹ ಅಲಂಕಾರ ಮಾಡಬೇಕೆಂ ದುಸಖಿಯರೊಂದಿಗೆ ಹೇಳಿಕೊಳ್ಳುತ್ತಾ, ಆಗತಾನೇ ಮಂಗಲಸ್ನಾನ ಮಾಡಿ ಶ್ವೇತಾಂಬರವನ್ನುಟ್ಟು ಕನ್ನಡಿಯನ್ನು ನೋಡಿಕೊಂಡು ಮುಖವನ್ನು ಅಂದ ಗೊಳಿಸಿಕೊಳ್ಳುತ್ತಿದ್ದಳು. ರಾಮನು ಸೀತೆಗೆ ಈ ವಿಷಯವನ್ನು ತಿಳಿಸಿದರೆ ವ್ಯಸ ನಪಡುವಳೆಂದು ಸ್ವಲ್ಪಹೊತ್ತು ಸುಮ್ಮನಿದ್ದು ಗತ್ಯಂತರವಿಲ್ಲದೆ ಹಿಂದೆ ನಡೆದ ವಿವರಣವನ್ನೆಲ್ಲಾ ಪ್ರಾಣನಾಯಕಿಯಾದ ಸೀತೆಗೆ ತಿಳಿಸಲಾಗ, ಅವಳ ಅಶ್ರು ಜಲವು ನಾಸಿಕಾಗ್ರದ ಮೇಲೆ ಬೀಳಲು ಅದು ಮುತ್ತಿನ ಮಣಿಯಂತೆ ರಾಮನ ಕಣ್ಣಿಗೆ ಅಂದವಾಗುತ್ತಿದ್ದರೂ, ಅನುತಾಪಪಟ್ಟುಕೊಂಡು " ಎಲೈ ನಾಯಕಿ ಯೇ ! ಏತಕ್ಕಾಗಿ ಈ ಅಲಂಕಾರವನ್ನು ಮಾಡಿಕೊಳ್ಳುತ್ತೀಯೆ ? ನಾನು ಪಟ್ಟ ವಿಲ್ಲದೆ ವನವಾಸಕ್ಕೆ ತೆರಳುವವನಾಗಿದ್ದೇನೆ. ನೀನು ಇಲ್ಲೇ ಅತ್ತೆಯವರ ಬಳಿಯಲ್ಲಿದ್ದರೂ ಇರಬಹುದು; ಇಲ್ಲವಾದರೆ ತಂದೆಯ ಮನೆಯಲ್ಲಿ ಸುಖವಾಗಿ ರಬಹುದು " ಎಂದು ಹೇಳಿದ ನುಡಿಯನ್ನು ಕೇಳಿ ಸೀತೆಯು ಬಹಳ ಬೆಚ್ಚಿ ಅಶ್ರುಜಲಗಳನ್ನು ಬಿಟ್ಟು " ನಾಥನೇ ! ನಿನ್ನನ್ನು ಬಿಟ್ಟು ನಾನು ಅರ್ಧ ಕ್ಷಣ ವೂ ಎಲ್ಲಿಯೂ ಜೀವಿಸಿರಲಾರೆನು. ನೀನೇ ನನ್ನ ಪ್ರಾಣವಾಗಿದ್ದೀಯೆ; ಪ್ರಾಣ ನಾಯುವನ್ನುಬಿಟ್ಟು ನಾನೆಲ್ಲಿಗೆ ಹೋಗುವುದಕ್ಕಾದೀತು? ನೀನಿರತಕ್ಕ ಸ್ಥಳವೇ

ನನ್ನ ಆವಾಸಸ್ಥಳವಾಗಿಧೆ. ನಿನ್ನ ಕೂಡಾಲೆ ಬರುವೆನು" ಎಂದು ಹೇಳಿದಳು ಎಷ್ಟು ಬಗೆಯಿಂದ ರಾಮನು ಅರಣ್ಯವಾಸವು ಕಷ್ಟವೆಂದು ಹೇಳಿದಾಗ್ಯೂ ಸೀತೆಯು ಆತನ ಕೂಡ ಹೊರಡಲು ನಿಶ್ಚೈಸಿದಳು. ಲಕ್ಷ್ಮಣನು ರಾಮನ ಸನ್ನಿಧಿಗೆ ಬಂದು, " ಅಗ್ರಜನಾದ ನಿನ್ನನ್ನು ಬಿಟ್ಟು ನಾನು ಹೇಗೆ ತಾನೇ ಜೀವಿಸಲಿ ? " ಎಂದು ಹೇಳಿ ತಾನೂ ಸಹ ಬರುವ ಅರಣ್ಯವಾಸಕ್ಕೆ ಹೊರಡಲು ಸಿದ್ಧನಾದನು- ಅನಂತರ ಭಂಡಾರದಿಂದ ನಾರು ಬಟ್ಟೆಗಳನ್ನು ತರಿಸಿಕೊಂಡು ಮೂವರೂ ಧರಿಸಿಕೊಂಡು ಕ್ರಮವಾಗಿ ಕೌಸಲ್ಯೆಯ ಮನೆಗೆ ಮೊದಲು ಹೋದರು. ಕೌಸಲ್ಯಾದೇವಿಯು ಇವರ ವೇಷಭೂಷಣವನ್ನು ನೋಡಿ ಬಹಳವಾಗಿ ರೋಧಿಸಿದಳು. ಹಾಗೇನೆ ವಿಸ್ಮೃತಿಯನ್ನು ಹೊಂದಿ ಭೂಗತಶಾಯಿಯಾದಳು. ಅನಂತರ ಇವರು ಸೌಮಿತ್ರೆಯ ಮನೆಗೆ ಹೋಗಿ ವನವಾಸಕ್ಕೆ ಅಪ್ಪಣೆಯನ್ನು ಬೇಡಿದರು. ಸೌಮಿತ್ರೆಯು ವ್ಯಸನವನ್ನು ಅಡಗಿಸಿಕೊಳ್ಳಲು ಸಮರ್ಥಳಾಗದಿದ್ದರೂ ಮಗನಾದ ಲಕ್ಷ್ಮಣನಿಗೆ " ಅಣ್ಣನಾದ ರಾಮನ ಮತ್ತು ಅವನ ಪತ್ನಿಯಾದ ಸೀತಾದೇವಿಯರ ಮನಸ್ಸಿಗೆ ಬೇಸರಿಕೆಯಿಲ್ಲದಂತೆ ನೀನು ನಡೆದುಕೊಳ್ಳಬೇಕು " ಎಂದು ಬುದ್ಧಿವಾದವನ್ನು ಹೇಳಿ ವಿಸ್ಮೃತಿಯನ್ನು ಹೊಂದಿದಳು. ಅನಂತರ ಮೂರ್ಛಾನಿಷ್ಟನಾದ ದಶರಥನ ಸನ್ನಿಧಿಗೆ ಬಂದು ಅವನ ಪಾದಗಳ ಮೇಲೆ ಮೂವರೂ ತಲೆಯಿಟ್ಟು ವನವಾಸಕ್ಕೆ ಅಪ್ಪಣೆಯನ್ನು ಬೇಡಿದರು. ಮೂರ್ಛಿತನಾಗಿ ಆಗತಾನೇ ಸ್ವಲ್ಪ ಎಚ್ಚರವಾಗುತ್ತಿದ್ದ ದಶರಥನ ಕಿವಿಗೆ ಈಮಾತು ಬೀಳಲು ಅದು ಕಿವಿಗೆ ಸಲಾಕಿಯಿಂದ ಚುಚ್ಚಿದಷ್ಟು ವ್ಯಥೆಯನ್ನುಂಟುಮಾಡಿತು- ಹಾಗಾದರೂ ಸೇನಾದಳಸಹಿತ ಹೋಗಬೇಕೆಂದು ಅಪ್ಪಣೆಮಾಡಿದನು. ರಾಮನು ಅದನ್ನಂಗೀಕರಿಸದೆ ಅಪ್ಪಣೆಪಡೆದು ಪ್ರಯಾಣಕ್ಕೆ ಹೊರಟು ಬರುತ್ತಾ, ಕೈಕಿಲೆದೇವಿಯನ್ನು ಕಂಡು ಪ್ರಯಾಣಕ್ಕೆ ಅಪ್ಪಣೆಯನ್ನು ಬೇಡಿದರು. ಆಗ ಕೈಕಿಲೆಯು ಇವರ ಅವಸ್ಥೆಯನ್ನುನೋಡಿ ಅನುತಾಪವುಳ್ಳವಳಾದಳು. ಇವರು ಅರಮನೆಯಿಂದ ಪಾದಮಾರ್ಗದಲ್ಲಿಯೇ ಪಟ್ಟಣದ ಹೊರಗೆ ಹೋಗುತ್ತಿರುವುದನ್ನು ಕಂಡು ಪಟ್ಟಣದ ಜನರೆಲ್ಲಾ ಇವರನ್ನುನೋಡಿ ಅಶ್ರುಪೂರಿತರಾಗಿ ಮುಖವನ್ನು ತಗ್ಗಿಸಿ ಬಹಳವಾಗಿ ಅತ್ತರು. ಪುರಂಧ್ರಿಯರಾದ ಸ್ತ್ರೀಯರು ನಾರುವಸ್ತ್ರವನ್ನುಟ್ಟಿದ್ದ ಜಾನಕಿಯ ಪಾದಗಳ ಮೇಲೆ ಬಿದ್ದು ವ್ಯಸನದಿಂದ ಹೊರಳಾಡಿದರು. ಅನಂತರ ಈ ಮೂವ್ವರು ಪಟ್ಟಣವನ್ನು ಬಿಟ್ಟು ವನಮಾರ್ಗಕ್ಕೆ ತೆರಳದ್ದನ್ನು ನೋಡಿ ದಾರಿಯಲ್ಲಿ ಬರುತ್ತಿದ್ದ

ಸುಮಂಗಲಿಯಾದ ಒಬ್ಬಳು ಸೀತಾದೇವಿಯನ್ನು ನೋಡಿ ಬಿಕ್ಕಿಬಿಕ್ಕಿ ಅತ್ತು "ಈ ಕಲ್ಲು ಮುಳ್ಳುದಾರಿಯಲ್ಲಿ ನಿನ್ನ ಮೃದುವಾದ ಕಾಲು ಹೇಗೆ ಬಂದೀತು? ಈ ಬಿಸಲಿನ ಆಭಸವು ನೆತ್ತಿಯನ್ನು ಸುಡುತ್ತಲಿಧೆ. ತಲೆಯು ಮೇಲೆ ನಾರು ವಸ್ತ್ರವನ್ನು ಹಾಕಿಕೊ" ಎಂತ ಹೇಳಿದ್ದನ್ನು ಕೇಳಿ ಲಕ್ಷ್ಮಣನು ತನ್ನ ಅಣ್ಣನ ಹೆಂಡತಿಗೆ ಬಂದ ಕಷ್ಟವನ್ನು ಕುರಿತು ಏನೂ ಹೇಳಲಾರದೆ ಕಣ್ಣು ನೀರಿನಿಂದ ಹೊದ್ದಿದ್ದ ವಸ್ತ್ರವನ್ನೆಲ್ಲಾ ನೆನಿಸಿದನು. ಇತ್ತ ಭರತನು ಈ ವಿಷಯುಗಳನ್ನೆಲ್ಲಾ ತಿಳಿದು ತಾಯಿಯ ಹತ್ತಿರಕ್ಕೆ ಹೋಗಿ ತಾನು ತಪಸ್ಸಿಗೆ ಹೊರಡಲು ಅಪ್ಪಣೆ ಯನ್ನು ಕೊಡಬೇಕೆಂತ ಕೇಳಿಕ್ಕೊಳ್ಳಲಾಗಿ ಕೈಕಿಲೆಯು ವಜ್ರಾಹತವಾದಂತೆ ವಿಸ್ಮೃತಿಯನ್ನು ಹೊಂದಿ ಏನೂ ಹೇಳಲಾರದವಳಾದಳು. ಆ ಪಟ್ಟಣದ ಪ್ರತಿಯೊಂದು ಪ್ರದೇಶದಲ್ಲೂ ಇದ್ದ ಎಲ್ಲಾ ಜನರ ಬಾಯಿಯಲ್ಲೂ ಕೈಕಿಲೆ ಯ ಪಾಪಕೃತ್ಯವನ್ನು ಹೇಳಿ ಅಲಗಳಿಯುತ್ತಿದ್ದರು. ಕೈಕಿಲೆಯು ಮಗನಾದ ಭರತನನ್ನು ಕರೆದುಕೊಂಡು ಅರಣ್ಯದಲ್ಲಿ ಹೋಗುತ್ತಿದ್ದ ರಾಮನನ್ನು ಕಂಡು, ಹಿಂದಕ್ಕೆ ಬರಬೇಕೆಂದು ಬಹಳವಾಗಿ ಕೇಳಿಕೊಂಡಳು. ಆದರೂ ರಾಮನು "ಹಿಂದಕ್ಕೆ ಬರುವುದು ಕ್ಷತ್ರಿಯರಧರ್ಮಕ್ಕೆ ಸಮನಾದುದಲ್ಲ; ನಿಮ್ಮ ಕೋರಿಕೆ ಯನ್ನು ಪರಿಪಾರಿಸಲೇ ಬೇಕು" ಎಂದು ಹೇಳಿಬಿಟ್ಟನು. ಭರತನು ರಾಮನ ಕಾಲಿಗೆ ಬಿದ್ದು "ತಾನೂ ಸಹ ಶ್ರೀರಾಮನಕೂಡ ಬರುವುದಾಗಿ" ಬೇಡಿಕೊಂ ಡನು- ಆಗ ಶ್ರೀರಾಮನು ಆತನನ್ನು ಒಳ್ಳೆಯಮಾತಿನಿಂದ ಸಂತೈಸಿ ರಾಜ್ಯವು ಅನಾಯಕವಾಗುತ್ತೆಂತ ರಾಜ್ಯಭಾರಮಾಡುವಂತೆ ಹೇಳಿದನು. ಹಾಗೂ ಭರ ತನು ಒಪ್ಪದೆ "ನಿಮ್ಮ ಪಾದಕ ಮುದ್ರೆಗಳನ್ನಾದರೂ ಕೊಟ್ಟರೆ ಸಿಂಹಾಸನದ ಮೇಲಿಟ್ಟು ನಾನು ರಾಜಕಾರ್ಯವನ್ನು ಮಾಡುತ್ತೇನೆ" ಎಂದು ಅಂಗಲಾಚಿ ಬೇಡಿಕೊಳ್ಳಲು ದಯಾಳುವಾದ ರಾಮನು ಅವುಗಳನ್ನು ಆತನಿಗೆ ಕೊಟ್ಟು ತಾಯಿಮಕ್ಕಳನ್ನು ಹಿಂದಕ್ಕೆ ಕಳುಹಿಸಿದನು- ಇತ್ತ ದಶರಥನು ಒದಗಿದ ವ್ಯ ಸನವನ್ನು ತಡೆದುಕೊಳ್ಳಲಾರದೆ ಬಹಳ ಹೊತ್ತು ಚಿಂತಿಸಿ ಅನಂತರ ಸಂಸಾರ ಸ್ಥಿತಿಯನ್ನು ಕುರಿತು ಹೇಯಪಡೆದು ಸಂಯಮಧಾರಿಯಾಗಿ ಆಹಾರ ನಿವೃತ್ತಿ ಹೊಂದಿ ಪಂಚತ್ವವನ್ನು ಹೊಂದಿ ಪಂಚಮಗತಿಯನ್ನು ಪಡೆದನು. ಇತ್ತ ಶ್ರೀ ರಾಮನು ಜಾನಕಿ ಮತ್ತು ಲಕ್ಷ್ಮಣರೊಡನೆ ಹೋಗುತ್ತಿರುವಾಗ ಬಾರಿಬಾರಿ ಗೂ ಕಲ್ಲುಮುಳ್ಳುಗಳನ್ನು ತುಳಿಯಲಾರದೇ ನಿಂತುಕೊಳುತ್ತಾ ಬಿಸಿಲಿನತಾಪ ದಿಂದ ಕೆಂಪಾದ ಮುಖದಲ್ಲಿ ಸುರಿಯುತ್ತಿದ್ದ ಬೆವರುಗಳನ್ನು ಆಗಾಗ್ಯೆವರಿಸಿ

ಕೊಳ್ಳುತ್ತಲಿರುವ ಸೀತಾದೇವಿಯನ್ನು ನೋಡಿ ಬಾಷ್ಪಪೂರಿತನಯನನಾಗಿ, ಅನುತಾಪಪಟ್ಟು ಹಾಗೆಯೇಶಾಂತನಾಗಿ ಆಇಬ್ಬರೊಡನೆ ತಾನೂ ಜಿನೇಶ್ವರರ ಅಡಿದಾವರೆಗಳನ್ನು ನೆನೆಯುತ್ತಲಿದ್ದನು.

೨೨. ಸಿಂಹೋಧರನ ಮರ್ಧನ.

ಕೇಳಿದೈ ಶ್ರೇಣಿಕನೇ ! ಶ್ರೀರಾಮನು ಕಾಂತೆ ಮತ್ತು ತಮ್ಮನೊಡನೆ ಚಲಿಸುತ್ತಾ, ಕೇಶವನ ಆಗ್ರಹವನ್ನು ಶಾಂತಗೊಳಿಸುತ್ತಾ, ವನದಲ್ಲಿವಾಸಮಾಡುತ್ತಿರುವುದನ್ನು ಕೇಳುವನಾಗು—ಶ್ರೀರಾಮನು ಅನುಜ, ಹೆಂಡತಿಯರೊಡನೆ ಅರಣ್ಯದಲ್ಲಿ ರಾತ್ರಿಕಾಲದಲ್ಲಿ ನಕ್ಷತ್ರಗಳ ಬೆಳಕಿನಿಂದ ದಾರಿಯನ್ನು ಕಂಡು ಸಂಚಾರಮಾಡುತ್ತಾ, ಪ್ರಭಾತಕಾಲದಲ್ಲಿ ನದಿಯನ್ನು ನೋಡಿ ಅಲ್ಲಿ ಅನುಷ್ಠಾನವನ್ನು ಮಾಡಿ ಹೋಗುತ್ತಿರಲು, ಬಿಸಲಿನ ಜಳಕ್ಕೆ ಇವರು ಒಂದು ವಟವೃಕ್ಷದ ನೆಳಲಲ್ಲಿ ಅಡಿಯಿಟ್ಟು ನೋಡಲು ಅನೇಕ ಧಾನ್ಯಗಳು ಬೆಳೆದು ಹಾಗೆ ನಿಂತು ಯಾರು ಕುಯ್ಯದಿರುವಾಗ ಅಲ್ಲೊಬ್ಬನು ಇದ್ದು ಇವರಿಗೆ ನಮಸ್ಕಾರವನ್ನುಮಾಡಿ ರಕ್ಷಣೆ ಮಾಡಬೇಕೆಂದು ಬೇಡಿಕೊಂಡನು. ಅದಕ್ಕೆ ಲಕ್ಷ್ಮಣನು ಆತನನ್ನು ಹೆದರಬೇಡವೆಂದುಹೇಳಿ ಈಭೂಮಿಗೆ ಯಾರು ಅರಸಾಗಿದ್ದರು? ಈ ಸ್ಥಳವೆಲ್ಲಾ ಪಾಳಾಗಲು ಕಾರಣವೇನೆಂದು ಕೇಳಲು ಆತನು "ಅವಂತಿ ದೇಶದ ಉಜ್ಜಯಿನಿಪಟ್ಟಣವನ್ನು ಆಳುವ ಸಿಂಹೋಧರನ ಸಾಮಂತಅರಸನಾಗಿದ್ದ ವಜ್ರಕರ್ಣನು ಅರ್ಹಂತನಿಗಲ್ಲದೆ ಇನ್ನೊಬ್ಬನಿಗೆ ಕೈಮುಗಿಯುವದಿಲ್ಲವೆಂದು ವಜ್ರದ ಉಂಗುರದಲ್ಲಿ ಜಿನಬಿಂಬವನ್ನು ಕೆತ್ತಿಸಿ ಕೈಗೆ ಹಾಕಿಕೊಂಡು ಅಧಿರಾಜನಿಗೆ ಕೈಮುಗಿಯುತ್ತಿದ್ದನು. ಇದು ವಂಚನೆಯೆಂದು ಅಧಿರಾಜನಾದ ಸಿಂಹೋಧರನು ಈ ದಶಪುರಕ್ಕೆ ಮುತ್ತಿಗೆಹಾಕಿ ಕಡುಕೋಪದಲ್ಲಿ ಪಟ್ಟಣವನ್ನೆಲ್ಲಾ ಸೂರೆಗೊಂಡು ಜನರನ್ನು ಚದುರಿಸಿಬಿಟ್ಟದ್ದರಿಂದ ಈ ಪಟ್ಟಣವು ಹಾಳಾಗಿ ರಕ್ಷಕರು ಇಲ್ಲದಂತೆ ಆಯಿತು. ವಜ್ರಕರ್ಣನು ಅಣುವ್ರತಧಾರಿಯಾಗಿ ಹಿಂಸೆಗೆಅಂಜಿ ಯುದ್ಧಕ್ಕೆನಿಲ್ಲಲಿಲ್ಲ" ಎಂದು ಆದೂತನು ಹೇಳಿದನು ಸೌಧದಲ್ಲಿ ಕುಳಿತಿದ್ದ ವಜ್ರಕರ್ಣನು ಈ ಮೂವರು ಬರುತ್ತಿದ್ದದ್ದನ್ನು ನೋಡಿ ಆಶ್ಚರ್ಯಪಡುತ್ತಾ, ಇವರು ಕಾರಣಾತ್ಮಕರಲ್ಲದೇ ಸಾಧಾರಣಾತ್ಮಕರಲ್ಲ. ಇವರು ಬಲಕೇಶವರೇ ಸರಿ. ಈ ನಾರಿಮಣಿಯು ಯಾರೋ? ಎಂದು ಯೋಚಿಸುತ್ತಿದ್ದನು. ಈ ಮೂವರು ಪಶ್ಚಿಮದ ಗೋಪುರದ ಸ್ಥಳಕ್ಕೆಬಂದು ಅಲ್ಲಿದ್ದ

ಜಿನಚೈತ್ಯಾಲಯವನ್ನು ಬಲಗೊಂಡು ವಂದಿಸಿ ನಿಂತುಕೊಂಡು ಕೈಮುಗಿದು ದೇವರನ್ನು ಸ್ತುತಿಸುತ್ತಿರುವಾಗ ವಜ್ರಕರ್ಣನು ಧೂತನ ಕೈಯಲ್ಲಿ ಲಡ್ಡು, ಚಕ್ಕುಲಿ, ತರಗು, ತುಪ್ಪ, ಹಾಲು, ಇವುಗಳನ್ನು ಕಳುಹಿಸಿಕೊಟ್ಟನು. ಆಗ ಆತನು ರಾಮನಅಡಿದಾವರೆಗೆ ನಮಸ್ಕರಿಸಿ ಈ ಪದಾರ್ಥಗಳನ್ನು ಅನುಗ್ರಹಿಸ ಬೇಕೆಂದು ಬೇಡಿಕೊಂಡನು ಮತ್ತು ಆ ದೂತನು ಭೀತಿಯಿಂದ ವಜ್ರಕರ್ಣನು ಇಲ್ಲಿ ವಾಸಮಾಡುತ್ತಾನೆಂದೂ; ಆತನು ತಮಗೆ ಫಲಾಹಾರದ ವಸ್ತುಗಳನ್ನು ಕಳುಹಿಸಿದನೆಂದುಹೇಳಿದನು. ಶ್ರೀರಾಮನು ಈ ವಸ್ತುಗಳನ್ನು ಜಾನಕಿಮತ್ತು ಲಕ್ಷ್ಮಣರೊಡನೆ ಭುಂಜಿಸಿ ಕೂತುಕೊಂಡಿರುವಾಗ ವಜ್ರಕರ್ಣನು ಬಂದು ನಮಸ್ಕರಿಸಿ ಸಿಂಹೋಧರನ ಬಾಧೆಯಿಂದ ಈರೀತಿ ತನಗೆ ವದಗಿತೆಂದು ಬೇಡಿ ಕೊಳ್ಳಲು, ರಾಮನು ಲಕ್ಷ್ಮಣನಿಗೆ ಈ ವಿಷಯವನ್ನು ಸರಿಪಡಿಸೆಂದು ಹೇಳ ಲಾಗಿ, ಲಕ್ಷ್ಮಣನು ಆನೆಯ ಮುಂದೆ ಸಿಂಹ ಬರುವಂತೆ ಬರುತ್ತಾ; ಸಿಂಹೋ ಧರನನ್ನು ಅನುಸರಿಸಿ ಬರುತ್ತಿರುವಾಗ ಸಿಂಹೋಧರನ ಬಲವೆಲ್ಲಾ ಲಕ್ಷ್ಮಣ ನನ್ನು ಮುತ್ತಿಕೊಂಡಿತು. ಆಗ ಆ ಬಲವನ್ನೆಲ್ಲಾ ಓಡಿಸಿ ಸಿಂಹೋಧರನನ್ನು ಹಿಂಗೈಮುರಿಕಟ್ಟಿ ಅಣ್ಣನಾದ ರಾಮನ ಕಾಲಿನ ಮೇಲೆ ಕೆಡಹಿದನು- ಆಗ ರಾಮನು ಸಿಂಹೋಧರನನ್ನು ಸಂತೈಸಿ "ವಜ್ರಕರ್ಣನು ಸಮ್ಯಗ್ದೃಷ್ಟಿ ಆತನ ಗೊಡವೆಗೆ ನೀನುಹೋಗಬೇಡ" ಎಂದು ಹೇಳಿಕಳುಹಿಸಿ, ರಾಮನುತಮ್ಮನಾದ ಲಕ್ಷ್ಮಣ ಮತ್ತು ಸೀತಾದೇವಿಯೊಡನೆ ಜಿನೇಶ್ವರರ ಪಾದಕಮಲಗಳನ್ನು ಧ್ಯಾನಮಾಡುತ್ತಿದ್ದನು.

೨೩. ಕಲ್ಯಾಣಮಾಲೆಯನ್ನು ಗೆದ್ದದ್ದು.

ಎಲೈ ರಾಜೇಂದ್ರನೇ ಕೇಳುವವನಾಗು! ಸಿಂಹೋಧರನನ್ನು ಹಿಡಿದು ದಂಡಿಸಿದ ಮೇಲೆ ವಜ್ರಕರ್ಣನು ಬಾಧೆಯಿಲ್ಲದವನಾಗಿ ಲಕ್ಷ್ಮಣನಿಗೆ ಯಾವ ಉಪಕಾರಮಾಡಿ ಕೃತಜ್ಞನಾಗಬೇಕೆಂದು ಯೋಚಿಸಿ, ತನ್ನ ಸತಿಯಾದ ಮನೋರಮೆಗೆ ಹುಟ್ಟಿದ ಸರಸತಿಯರಾದ ಮುನ್ನೂರು ಸುತೆಯರನ್ನು ಧಾರೆ ಯೆರೆದು ವಿವಾಹಮಾಡಿಕೊಟ್ಟನು. ಹೀಗೆ ಕೆಲವುದಿವಸ ಲಕ್ಷ್ಮೀಧರನು ಅವ ರೊಡನೆ ಸುಖದಲ್ಲಿದ್ದನು. ಆಗ ರಾಘವನು ನಾವು ಈ ಪಟ್ಟಣಗಳಲ್ಲಿ ವಾಸ ಮಾಡಿಕೊಂಡಿರುವುದು ಸರಿಯಲ್ಲವೆಂದು ಯೋಚಿಸಿ, ಸೀತಾದೇವಿಯೊಡನೆ ಪ್ರಯಾಣಮಾಡಲು ಸಿದ್ಧನಾದನು. ವೈದೇಹಿಯು ಮೈದುನನನ್ನು ಆತನ ಸ್ತ್ರೀ

ಯರಕೂಡ ವಿಲಾಸದಲ್ಲಿರಬಹುದೆಂದು ಹೇಳಲಾಗಿ ಲಕ್ಷ್ಮಣನು ಒಪ್ಪದೆಇವರ ಕೂಡಲೆ ಪ್ರಯಾಣಬೆಳಿಸಿದನು. ಈಮೂವ್ವರು ಬರುತ್ತಾ ಬಿಸಲಿನತಾಪದಿಂದ ಬಿಸಲ್ಗುದುರೆಯನ್ನು ಕಂಡು ಅಲ್ಲಿ ನೀರಿರಬಹುದೆಂದು ಆಸ್ಥಳಕ್ಕೆ ಬಂದು ಏನನ್ನೂ ಕಾಣದೆ ಹಿಂತಿರುಗಿ ಹೊರಟು ಬಿಸಲಿನ ತಾಪದಿಂದ ಬೆಂಡಾಗಿ ಮುಂದೆ ಸ್ವಲ್ಪ ದೂರ ನಡೆದರು. ಸೀತಾದೇವಿಯು ನಡೆಯಲಾರದೆ ಒಂದು ವೃಕ್ಷದನೆಳಲಿನಲ್ಲಿ ಕೂತುಕೊಂಡಳು. ಅವಳಿಗೆ ತೃಷಿಯಿಂದ ತುಟಿಗಳುವಣಗಿ ನಾಲಿಗೆಯು ನೀರಿಲ್ಲದೆ ಮಾತನಾಡಲು ಶಕ್ತಿಯಿಲ್ಲದೆ ಬಳಲಿ "ನನಗೆ ನೀರನ್ನು ತಂದುಕೊಟ್ಟರೆ ಮುಂದಕ್ಕೆ ಹೋಗಬಹುದು ಇಲ್ಲದಿದ್ದರೆ ನಾನುನಡೆಯಲಾರೆ" ಎಂದು ರಾಘವನ ಕೂಡ ಬಹಳ ಬಳಲಿಕೆಯಿಂದ ಹೇಳಿದಳು- ರಾಘವನು ಲಕ್ಷ್ಮಣನನ್ನು ನೋಡಿ ನೀನು ಹೋಗಿ ನೀರನ್ನು ಹುಡಕಿ ತರಬೇಕೆಂದು ಹೇಳ ಲಾಗ, ಲಕ್ಷ್ಮಣನು ಆ ಕಾಡಿನ ಮಧ್ಯದಲ್ಲಿ ಬಹಳವಾಗಿ ಸುತ್ತಿ ಬಹಳ ಅನುತಾಪಹೊಂದಿ ಬರುವ ದಾರಿಯಲ್ಲಿ ಅಲ್ಲೊಂದು ನೀರಿನಿಂದ ತುಂಬಿದ್ದ ಸುಂದರವಾದ ಕೊಳವನ್ನು ಕಂಡನು. ಆ ಕೊಳಕ್ಕೆ ಹೋಗಿ ನೀರನ್ನು ತೆಗೆದು ಕೊಳ್ಳುವುದಕ್ಕೆ ಪ್ರಯತ್ನಮಾಡಲು, ಆ ಕೊಳದ ಬಳಿಯಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದ ಭಟರು ಗರ್ಜಿಸಿ ನೀರನ್ನು ಮುಟ್ಟಬೇಡವೆಂದು ತಡೆದರು. ಅದಕ್ಕೆ ಲಕ್ಷ್ಮಣನು ಏಕೆಂದು ಕೇಳಲು, ಅವರು " ಈಕೊಳದಲ್ಲಿ ನೀರನ್ನು ತೆಗೆದುಕೊಳ್ಳಬೇಡ. ಬೇರೆ ಕಡೆ ಇರತಕ್ಕ ಕೊಳದಲ್ಲಿ ನೀರನ್ನು ತೆಗೆದುಕೋ" ಎಂದು ದುಂಡಾವರ್ತಿ ಜವಾಬುಹೇಳಲು, ಲಕ್ಷ್ಮಣನು " ಏಕಯ್ಯಾ ಹೀಗೆ ಹೇಳುತ್ತಿಯೇ ? ಪುಣ್ಯಾತ್ಮರು ಧರ್ಮಕ್ಕಾಗಿ ಕೆರೆ, ಭಾವಿಗಳನ್ನು ತೆಗೆದು ಆಗಂತುಕರಿಗೆ ನೀರನ್ನು ಒದಗಿಸಿಕೊಡುತ್ತಾರೆ- ನೀವು ತಡೆಯುವುದು ಸರಿ ಯಲ್ಲ; ನಿಮ್ಮ ಒಡೆಯನ್ಯಾರು ?" ಎಂದು ಕೇಳಿದನು. ಅದಕ್ಕೆ ಅವರು "ಅದ ನ್ನೆಲ್ಲಾ ಕಟ್ಟಿಕ್ಕೊಂಡು ನಿನಗೇನು ? ನೀರನ್ನು ತೆಗೆದುಕೊಳ್ಳಬೇಡ; ನಡಿ " ಎಂತ ಹೇಳಿದರು. ಲಕ್ಷ್ಮಣನು—"ಸರಿಯಾದ ಜವಾಬು ಕೊಡಿ; ನೀವು ಯಾರು?" ಎಂತ ಕೇಳಲಾಗ ಅವರುಗಳು ಈತನ ಮೇಲೆ ಬೀಳುವುದಕ್ಕೆ ಬಂದರು. ಆಗ ಲಕ್ಷ್ಮಣನು ನೀರನ್ನು ತೆಗೆದುಕೊಳ್ಳಲು ಹೋಗುತ್ತಿರಲು ಭಟರುಗಳು ಬಂದು "ಎಷ್ಟು ಹೇಳಿದರೂ ಕೇಳುವುದಿಲ್ಲವೇ ?" ಎನಲು ಲಕ್ಷ್ಮ ಣನು ಒಂದು ಸಣ್ಣದಾದ ಕಡ್ಡಿಯನ್ನೆತ್ತಿಕ್ಕೊಂಡು ಅವರ ಆಯುಧಗಳಿಂದ ಜಗಳಕ್ಕೆ ಬಂದ ಭಟರುಗಳನ್ನೆಲ್ಲಾ ಹೊಡೆದು ಓಡಿಸಿಬಿಟ್ಟನು. ಈ ವರ್ತಮಾ

ನವನ್ನೆಲ್ಲಾ ಭಟರು ಹೋಗಿ ಕಲ್ಯಾಣಮಂದರ ರಾಜನಿಗೆ ಹೇಳಲು ಆತನು ಕೋಪಗೊಂಡು ಕುದುರೆಯ ಮೇಲೆ ಹತ್ತಿ ಖಡ್ಗಾದಿಗಳನ್ನು ಕೈಯ್ಯಲ್ಲಿ ತೆಗೆದುಕೊಂಡು ಲಕ್ಷ್ಮಣನಿಗೆದುರಾಗಿ ಬಂದು ನಿಂತನು. ಲಕ್ಷ್ಮಣನು ಬಂದ ಪುರುಷನ ಆಕಾರವನ್ನು ನೋಡಿ "ನಿನ್ನೊಡನೆ ಯುದ್ಧಮಾಡುವುದು ಸರಿಯಲ್ಲ; ಹೋಗು" ಎಂದನು. ಅದಕ್ಕೆ ಆಗಂತುಕನು ಏಕೆಂದು ಕೇಳಲು—ಲಕ್ಷ್ಮಣನು "ನೀನು ಸ್ತ್ರೀಯಾಗಿದ್ದೀಯೆ" ಎಂದು ಹೇಳಿದನು. ಪುರುಷವೇಷಧಾರಿಯಾಗಿದ್ದ ಕಲ್ಯಾಣಮಾಲೆಯು ಈತನು ಮಹಾಪುರುಷನೆಂದು ತಿಳಿದು ಹರ್ಷದಿಂದ ನಮ್ಮ ಮನೆಗೆ ತಾವು ದಯಮಾಡಿಸಬೇಕೆಂದು ಆತನ ಕೈಯ್ಯನ್ನು ಹಿಡಿದು ಮನೆಗೆ ಕರೆದುಕೊಂಡುಬಂದು ತಾಯಿಯಾದ ಪೃಥ್ವೀದೇವಿಗೆ ನಡೆದ ವಿದ್ಯಮಾನವನ್ನು ತಿಳಿಸಿದಳು. ಪೃಥ್ವೀದೇವಿಯು ನೀವು ಯಾರೆಂದು ಕೇಳಲಾಗಿ ಲಕ್ಷ್ಮಣನು ಸೀತಾದೇವಿಯು ಬಾಯಾರಿಕೆಯಿಂದ ಸಂತಪ್ತಳಾದ್ದರಿಂದ ರಾಘವನ ಅಪ್ಪಣೆ ಮೇರೆ ನೀರನ್ನು ತರುವುದಕ್ಕೆ ಬಂದನೆಂದನು. ಆಗಪೃಥ್ವೀದೇವಿಯು ಅನೇಕ ಫಲಗಳನ್ನೂ ಭಕ್ಷ್ಯಗಳನ್ನೂ ನೀರನ್ನೂ ಸಹ ರಾಘವನ ಸಮೀಪಕ್ಕೆ ಕಳುಹಿಸಿಕೊಟ್ಟಳು. ರಾಘವನು ಸೀತಾದೇವಿಯೊಡನೆ ಫಲಾಹಾರವನ್ನು ಮಾಡಿ ವಿಶ್ರಾಂತಿಯನ್ನು ತೆಗೆದುಕೊಂಡಾಗ ಪೃಥ್ವೀದೇವಿಯು ತನ್ನ ಮಂತ್ರಿಗಳಿಗೆ ರಾಘವನನ್ನು ಕರೆದುಕೊಂಡುಬರುವಂತೆ ಹೇಳಿ ಕಳುಹಿಸಿ ಸೀತಾ ರಾಮ ಲಕ್ಷ್ಮಣರನ್ನು ಮನೆಗೆ ಬರಮಾಡಿಕೊಂಡು ಅವರನ್ನು ಸ್ನಾನ ಭೋಜನಾದಿಗಳಿಂದ ಸತ್ಕರಿಸಿದನಂತರ ತನ್ನ ಮಗಳಿಗೆ ಕಣ್ಣುಸನ್ನೆಮಾಡಲು ಪುರುಷವೇಷವನ್ನು ಬಿಟ್ಟು ಸ್ತ್ರೀಅಲಂಕಾರ ಪೂರಿತಳಾಗಿ ಶುಭ್ರವಾದವಸ್ತ್ರವನ್ನುಟ್ಟು ಸೀತಾದೇವಿಗಿಂತಲೂ ಅಧಿಕವಾದ ರೂಪಿನಿಂದ ತೋರುತ್ತಿರುವಳೋ ಎಂಬಂತೆ ಸೀತೆಯ ಸನ್ನಿಧಿಗೆ ಬಂದು ನಮಸ್ಕರಿಸಿ ಕುಳಿತುಕೊಂಡಳು. ಲಕ್ಷ್ಮಣನು ಇವಳು ಪುರುಷವೇಷವನ್ನು ಹಾಕಿಕೊಳ್ಳುವುದಕ್ಕೆ ಕಾರಣವೇನೆಂದು ಕೇಳಲಾಗಿಪೃಥ್ವೀದೇವಿಯು ರಾಘವನಿಗೆ ಹೇಳತೊಡಗಿದಳು:—

"ಕುರುವಕವೆಂಬ ಪುರವನ್ನಾಳುವ ವಾಲಿಖಿಲ್ಯನನೆಂಬ ಅರಸನ ತರುಣಿ ಪೃಥ್ವೀದೇವಿ ಎಂಬುವಳೇ ನಾನು. ಅತ್ತ ವಿಂಧ್ಯಾಟವಿಯಲ್ಲಿರಲು ತಾಂಬ್ರಚೂಡಾಪಟ್ಟಣದ ಅರಸನಾದ ತಾಂಬ್ರಧ್ವಜನು ಕೋಪದಿಂದ ತನ್ನ ದಂಡನ್ನು ಕೂಡಿಕೊಂಡು ಬಂದು ಈ ಪಟ್ಟಣವನ್ನು ಮುತ್ತಿ ಇಲಿಗಳನ್ನು ಬೆಕ್ಕು ಓಡಿಸಿಬಿಡುವಂತೆ ಎಲ್ಲರನ್ನೂ ಓಡಿಸಿ ವಾಲಿಖಿಲ್ಯನನ್ನು ಸೆರೆಯಲ್ಲಿಟ್ಟನು. ಈ

ವಿಷಯವನ್ನು ಸಿಂಹೋಧರನು ಕೇಳಿ ಯುದ್ಧಕ್ಕೆಬರಲು ತಾಂಬ್ರಧ್ವಜನು ಅವರನ್ನೆಲ್ಲಾ ಅಟ್ಟಿ ಕಳುಹಿಸಿಬಿಟ್ಟನು. ಆತನು ತನ್ನ ಪ್ರಾಣವನ್ನುಳಿಸಿಕೊಂಡು ಆವಂತೀ ದೇಶದ ಕಡೆಗೆ ಹೋದನು. ಆಗ ನಮ್ಮ ಮಂತ್ರಿಗಳು ಜ್ಯೋತಿಷ್ಕರನ್ನು ಕಂಡು ಮುಂದೇನಾಗುತ್ತೆಂತ ಬೇಡಿಕೊಳ್ಳಲು ಅವರು "ವಾಲಿಖಿಲ್ಯನ ಪಟ್ಟವರ್ಧನೆಯಾದ ಪೃಥ್ವೀದೇವಿಯು ಗರ್ಭಿಣಿಯಾಗಿದ್ದಾಳೆ ಅವಳು ಒಂದು ಹೆಣ್ಣುಮಗುವನ್ನು ಹಡೆಯುವಳು. ಅವಳಿಗೆ ಮಂತ್ರಿಗಳು ಕಲ್ಯಾಣಮಾಲಿಯೆಂದು ಹೆಸರಿಟ್ಟು ಸಾಕುವರು" ಎಂದು ಹೇಳಿದರು. ಅದರಂತೆ ಆಯಿತು. ಒಂದಾನೊಂದುಕಾಲದಲ್ಲಿ ಶೀಲಪ್ರಾದರೆಂಬಅವಧಿಜ್ಞಾನಸಂಪನ್ನರು ಈವನಕ್ಕೆ ದಯಮಾಡಿಸಿದರು. ಇದನ್ನು ವನಪಾಲಕರಿಂದ ತಿಳಿದು ಮಹಾಯತಿಗಳ ದರ್ಶನಕ್ಕೆ ನಾವು ಹೋಗಿ ನಮಸ್ಕರಿಸಿ ಧರ್ಮವನ್ನು ಕೇಳಿ ನಮ್ಮ ಅರಸನಿಗೆ ಯಾವಾಗ ಶರೆಯಿಂದ ಬಿಡುಗಡೆಯಾಗುತ್ತೆಂತ ಕೇಳಲಾಗ ಅವರು ಅವಧಿಯಿಂದ ತಿಳಿದು ಈ ಸರಸಿಜಾಕರದಲ್ಲಿ ಯಾವ ಪುರುಷನು ಬಂದು ನೀರನ್ನು ತೆಗೆದುಕೊಳ್ಳುವನೋ ಅವನೇ ನಿಮ್ಮ ಶರೆಯನ್ನು ಬಿಡಿಸಲು ಸಮರ್ಥನೆಂದು ಅಪ್ಪಣೆಕೊಡಿಸಿದರು. ಅದನ್ನುಗೊತ್ತುಮಾಡಬೇಕೆಂತ ನಾನೇ ಆಸರೋವರಕ್ಕೆ ಕಾವಲನ್ನಿಟ್ಟು ಕಾಯಿಸುತ್ತಿದ್ದೆ. ಈಗ ನಮ್ಮಕಷ್ಟವನ್ನು ಪರಿಹರಿಸಬೇಕೆಂದು ಬೇಡಿಕೊಂಡಳು. ರಾಘವನು ಸೌಮಿತ್ರಿಯ ಮುಖವನ್ನು ನೋಡುತ್ತಲೇ ಅವನು ಎದ್ದು ನಮಸ್ಕರಿಸಿ ತಾಂಬ್ರಧ್ವಜನ ಮೇಲೆ ಯುದ್ಧಕ್ಕೆ ಹೋಗುವದಕ್ಕೆ ಅಪ್ಪಣೆಬೇಡಿದನು. ಅನಂತರ ಅಪ್ಪಣೆಯನ್ನು ತೆಗೆದುಕೊಂಡು ತಾಂಬ್ರಧ್ವಜನಪಟ್ಟಣಕ್ಕೆ ದಂಡಮಾರುತದಿಂದ ಹೋದನು. ಆ ಪಟ್ಟಣದ ಕಾವಲಗಾರರು ಹೊಸಬನಾದ ಈತನನ್ನು ಕೋಟೆಯೊಳಕ್ಕೆ ಬಿಡಲು ಒಪ್ಪದೆ ನೀನು ಯಾರೆಂದು ಲಕ್ಷ್ಮಣನನ್ನು ಕೇಳಿದರು. ಅದಕ್ಕೆ ಆತನು "ನಿಮ್ಮಅರಸನಾದ ತಾಂಬ್ರಧ್ವಜನಿಗೆ ಒಂದು ಬುದ್ಧಿವಾದದ ಮಾತನ್ನು ಹೇಳಲು ಬಂದಿರುವೆನು" ಎಂದು ನಗುತ್ತ ಹೇಳಿದನು. ಆಗಭಟರು ಆಯುಧಪಾಣಿಗಳಾಗಿ ಲಕ್ಷ್ಮಣನ ಮೇಲೆ ಬೀಳಲು ಅವನು ಒಂದು ಕೈಕಡ್ಡಿಯಿಂದಲೇ ಅವರನ್ನು ಹೊಡೆದು ಓಡಿಸಿ ಪಟ್ಟಣದೊಳಕ್ಕೆ ನುಗ್ಗಲು ಈ ಸಮಾಚಾರವನ್ನು ರಾಜನಾದ ತಾಂಬ್ರಧ್ವಜನಿಗೆ ಹೇಳಲು ಆತನು ಬಹಳಕೋಪಗೊಂಡು ತಕ್ಷಣವೇ ಚತುರಂಗಬಲವನ್ನು ಹೊರಡಿಸಿ ರಣಭೇರಿಯನ್ನುಹೊಡಿಸಿ ಯುದ್ಧಕ್ಕೆ ಹೊರಟನು. ಲಕ್ಷ್ಮಣನು ತನ್ನ ಮೇಲೆ ಬಿದ್ದ ತಾಂಬ್ರಧ್ವಜನ ಚತುರ್ಬಲವನ್ನು ಹಿಂದಕ್ಕೆ ನೂಕಿ

ಹೊಡೆದೋಡಿಸಿದನು. ಈ ವಿಷಯವನ್ನು ತಾಂಬ್ರಧ್ವಜನು ಕೇಳಿ ಒಬ್ಬಮನುಷ್ಯನು ಇಷ್ಟು ದಂಡನ್ನು ಓಡಿಸಿದ್ದನ್ನು ಕುರಿತು ಆಶ್ಚರ್ಯಪಟ್ಟನು. ಮತ್ತು ಹೆಚ್ಚಾಗಿ ರಥಾಶ್ವಪದಾತಿಗಳನ್ನು ಕಳುಹಲು ಅವರನ್ನೂ ಲಕ್ಷ್ಮಣನು ಹಿಂದಕ್ಕೆ ಹೊಡೆದೋಡಿಸಿಬಿಟ್ಟನು- ಇದನ್ನು ಕೇಳಿ ರಾಜನಾದ ತಾಂಬ್ರಧ್ವಜನು ಲಕ್ಷ್ಮಣನ ಎದುರಾಗಿ ಬಂದು ನಿಲ್ಲಲು, ಲಕ್ಷ್ಮಣನು " ಎಲೈ ತಾಂಬ್ರಧ್ವಜನೇ ! ಕುರುವಕಪುರದದೊರೆಯ ಹೆಂಡತಿಯಾದ ರಾಣಿಪೃಥ್ವೀದೇವಿಯ ಅರಿಕೆಮೇಲೆ ರಾಘವನು ನನ್ನನ್ನು, ನೀನು ಶರೆಯಿಟ್ಟಿರುವ ಆ ಅರಸನನ್ನು ಕರತರಬೇಕೆಂದು ಅಪ್ಪಣೆಕೊಡಿಸಿದ್ದಾನೆ. ಜಾಗ್ರತೆಯಾಗಿ ಬಾ" ಯೆಂದು ಕರೆಯಲಾಗ ತಾಂಬ್ರಧ್ವಜನು ದಳಸಹಿತ ಶಸ್ತ್ರಾಸ್ತ್ರಗಳನ್ನು ಎಸೆಯುತ್ತಾ, ಲಕ್ಷ್ಮಣನ ಮೇಲೆಕಾದಿದನು. ಲಕ್ಷ್ಮಣನು ಇವನ ವರ್ತನೆಯನ್ನು ನೋಡಿ ನಗುತ್ತಾ ಕೈಯಲ್ಲಿದ್ದ ದೊಣ್ಣೆಯಿಂದ ಕುರಿಗಳನ್ನು ಅಟ್ಟುವಂತೆ ಓಡಿಸಿಬಿಟ್ಟನು. ಹಾಗೂ ತಾಂಬ್ರಧ್ವಜನು ಲಕ್ಷ್ಮಣನ ಮೇಲೆ ಬಂದು ಬೀಳಲು ಲಕ್ಷ್ಮಣನು ನಗುತ್ತ ರಾಜನ ರಥಕ್ಕೆ ಕಡ್ಡಿಯಿಂದತಿವಿಯಲು ರಥವುಚೂರುಚೂರಾಯಿತು. ತಾಂಬ್ರಧ್ವಜನು ಮೂರ್ಚೆಹೊಂದಿ ಭೂಗತನಾಗಿ ಬಿದ್ದುಕೊಂಡನು. ಆಗ ಲಕ್ಷ್ಮಣನು ತನ್ನ ವಿದ್ಯಾಸಾಮರ್ಥ್ಯದಿಂದ ಅವನಿಗೆ ಶೈತ್ಯೋಪಚಾರಮಾಡಿ ಏಳಿಸಿಕುಳ್ಳಿರಿಸಿದನು. ಆಗ ತಾಂಬ್ರಧ್ವಜನು ಇವನ ಸದ್ಗುಣಕ್ಕೆ ಆಶ್ಚರ್ಯಪಟ್ಟು, ಇವನ ಕಾಲಿಗೆ ಬಿದ್ದನು- ಆಗ ಲಕ್ಷ್ಮಣನು ಹರ್ಷದಿಂದ ಮೈದಡವಿ ಅಗ್ರಜನ ಸಮೀಪಕ್ಕೆ ವಾಲಿಖಿಲ್ಯನ ಸಹಿತ ತಾಂಬ್ರಧ್ವಜನನ್ನು ಕರೆದುಕೊಂಡು ಹೋಗಿ ಎಲ್ಲರೂ ರಾಘವನಿಗೆ ನಮಸ್ಕರಿಸಿದರು- ರಾಘವನು ಆನಂದದಿಂದ ಲಕ್ಷ್ಮಣನನ್ನು ನೋಡಿ, ವಾಲಿಖಿಲ್ಯ ತಾಂಬ್ರಧ್ವಜರನ್ನು ಗೌರವದಿಂದ ಕಂಡು ಸತ್ಕರಿಸಿದನು ಆಗ ವಾಲಿಖಿಲ್ಯನು ಮತ್ತು ಪೃಥ್ವೀದೇವಿಯು ಶುಭಮುಹೂರ್ತದಲ್ಲಿ ಕೇಶವನಾದ ಲಕ್ಷ್ಮಣನಿಗೆ ಮಗಳಾದ ಕಲ್ಯಾಣಮಾಲೆಯನ್ನು ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಿದರು. ಶ್ರೀರಾಮನು ಸೀತಾಲಕ್ಷ್ಮಣರೊಡನೆ ಪರಮ ಜಿನೇಶ್ವರರ ಪಾದಕಮಲಗಳನ್ನು ನೆನೆಯುತಲಿದ್ದನು.

0

೨೪. ನಗರ ನಿರ್ಮಾಣ.

ಶ್ರೇಣಿಕ ಮಹಾರಾಜನೇ! ಕೇಳುವವನಾಗು. ಕಲ್ಯಾಣಮಾಲೆಯನ್ನು ವಿವಾಹ ಮಾಡಿಕೊಂಡನಂತರ ಲಕ್ಷ್ಮಣನು ಶೂರತನದಿಂದ ತಾಂಬ್ರಧ್ವಜನನ್ನು ಜಯಿಸಿದ ವಿಷಯವನ್ನು ಕುರಿತು ಹೇಳಿದನು. ವಾಲಿಖಿಲ್ಯನು ಕೆಲವು ಕಾಲ ಲಕ್ಷ್ಮಣನನ್ನು ಇರಬೇಕೆಂದು ಹಾರೈಸಿಟ್ಟುಕೊಂಡನು. ಲಕ್ಷ್ಮಣನ ಸಾಮರ್ಥ್ಯವನ್ನು ಅನೇಕ ದೊರೆಗಳು ಕೇಳಿ ಆಶ್ಚರ್ಯಪಟ್ಟರು. ರಾಘವನು ಆಪಟ್ಟಣದಲ್ಲಿ ಲಕ್ಷ್ಮಣನೊಡನೆ ಕೆಲವುದಿವಸ ಇದ್ದನಂತರ ಮುಂದಕ್ಕೆಹೊರಡಲು ಯೋಚಿಸಿ ವಾಲಿಖಿಲ್ಯನ ಸಮ್ಮತಿಪಡೆದು ಜಾನಕಿಯೊಡನೆ ಹೊರಟನು. ಇವರುಗಳು ವನಮಧ್ಯದಲ್ಲಿ ಸಂಚರಿಸುತ್ತಾ ಕರಿ, ಶರಭ, ಬೇರುಂಡ, ವ್ಯಾಘ್ರ ಕೇಸರಿ, ಚಮೂರ, ಕರಡಿ, ಖಡ್ಗ ಮೊದಲಾದ ಭೀಕರವಾದ ಮೃಗಗಳಿಂದ ಕೂಡಿದ ವನವನ್ನು ದಾಟಿ, ವಿಂಧ್ಯಪರ್ವತಕ್ಕೆ ಬಂದು ಅಲ್ಲಿಂದಿಳಿದು ಬೆಟ್ಟದ ತಪ್ಪಲಲ್ಲಿರುವ ಶಾಖೋಪಶಾಖೆಗಳಿಂದ ಸ್ವರ್ಗವನ್ನು ಮುಟ್ಟುತ್ತಿದೆಯೋ ಎಂಬುವ ಹಾಗೆ ಬಹಳಉದ್ದವಾಗಿರುವ ಸಾಲವೃಕ್ಷದ ನೆರಳಿನಲ್ಲಿ ವಿಶ್ರಾಂತಿಗಾಗಿ ಕೂತುಕೊಂಡರು. ಆಮರದ ಮೇಲಿದ್ದ ಚಂದ್ರನೆಂಬ ವ್ಯಂತರದೇವನು ಈ ಮೂವರನ್ನು ನೋಡಿ ಇವರು ಯಕ್ಷದೇವತೆಗಳೆಂದು ಬಹಳ ಭಯಪಟ್ಟು ತನಗೆ ಅಧಿಪತಿಯಾದ ಕ್ರೀಡಾಘಾತನೆಂಬ ದೊಡ್ಡವ್ಯಂತರದೇವನನ್ನು ಕಂಡು ಆತನಿಗೆ ಈ ವಿಷಯವನ್ನು ತಿಳಿಸಲಾಗ ಆ ವ್ಯಂತರನು ಇಂಥಾ ಅಗಮ್ಯವಾದ ವನಕ್ಕೆ ಈಗ ಬಂದಿರುವರು ಬಲಕೇಶವರಾಗಿರಬೇಕೆಂದು ನಿಶ್ಚಯಿಸಿ ವಿಂಧ್ಯಾಟವಿಯಲ್ಲಿ ಒಂದು ದೊಡ್ಡ ವೃಕ್ಷದ ಮೇಲೆ ಒಂದು ಪಟ್ಟಣವನ್ನು ಕಟ್ಟಲು ಎತ್ನಿಸಿದನು. ಇತ್ತ ರಾಘವನು ಪ್ರಿಯಪತ್ನಿ ಮತ್ತು ಅನುಜರೊಡನೆ ಬರುತ್ತಿರುವಾಗ ಒಂದು ಅಗ್ರಹಾರವು ಕಣ್ಣಿಗೆ ಬಿತ್ತು.

ಇವರು ಅಲ್ಲಿಗೆ ಹೋಗಿ ಒಂದು ಮರದ ನೆರಳಿನಲ್ಲಿ ಕೂತು ವಿಶ್ರಮಿಸಿಕೊಳ್ಳುತ್ತಿದ್ದರು. ಅಲ್ಲಿದ್ದ ಒಬ್ಬ ಬ್ರಾಹ್ಮಣತಿಯು ಜಾನಕಿಯನ್ನು ನೋಡಿ ಮರುಗಿ ಮನೆಗೆಕರತಂದು, ಈ ಮೂವರಿಗೂ ಶೈತ್ಯೋಪಚಾರವನ್ನು ಮಾಡುತ್ತಲಿದ್ದಾಗ ಆಕೆಯ ಗಂಡನಾದ ಕಪಿಲನೆಂಬುವನು ಹೆಂಡತಿಯ ಮೇಲೆ ಕೋಪದಿಂದ ಅವರನ್ನು ಮನೆಗೆ ಕರತರುವಷ್ಟು ಸ್ವತಂತ್ರವೇನೆಂಬುದಾಗಿ ಧಿಕ್ಕರಿಸುತ್ತಿದ್ದುದನ್ನು ಲಕ್ಷ್ಮಣನು ನೋಡಿ, ಆ ಕಪಿಲನ ಮೇಲೆ ಆಗ್ರಹಮಾಡಲು ಹೊರಟನು. ಆಗ ರಾಮನು "ಇಂಥಾ ಜನರು ಈ ಲೋಕದಲ್ಲಿ ಬಹಳವಾಗಿ

ದಾರೆ. ನೀನು ಸುಮ್ಮನಿರು" ಎಂದು ಸಮಾಧಾನಪಡಿಸಿದನು. ಅಲ್ಲಿಂದ ಇವರು ಬರುತ್ತಿದ್ದಾಗ ಕ್ರೀಡಾಘಾತನೆಂಬ ವ್ಯಂತರನು ಇವರನ್ನು ಕಂಡು ನಮಸ್ಕರಿಸಿ "ಈಗ ಮಳೆಗಾಲವಾಗಿದೆ. ತಾವು ಈ ಅರಣ್ಯದಲ್ಲಿ ಸಂಚರಿಸುವುದು ಬಹಳ ಕಷ್ಟ. ಇಲ್ಲೊಂದುಪಟ್ಟಣವಿಧೆ. ಅಲ್ಲಿ ತಾವು ಮಳೆಗಾಲತೀರುವವರಿಗೂಇದ್ದು ಅನಂತರ ಮನಬಂದಂತೆ ಹೋಗಬಹುದು" ಎಂದು ಬೇಡಿಕೊಳ್ಳಲು ರಾಮನು ಸೀತಾಲಕ್ಷ್ಮಣರೊಡನೆ ಆಪಟ್ಟಣಕ್ಕೆ ಬಂದು ಅರಮನೆಯಲ್ಲಿ ವಾಸಮಾಡಿದನು ಕ್ರೀಡಾಘಾತನು ಇವರ ಊಟ ಉಪಚಾರಗಳಿಗೆ ಸ್ವಲ್ಪವೂ ಕೊರತೆಇಲ್ಲದಂತೆ ನಡೆಸುತ್ತ ಕೇವಲ ವಿಧೇಯನಾಗಿ ರಾಘವನ ಹೆಸರಿನ ಮೇಲೆ ಬಂದ ಯಾಚಕರುಗಳಿಗೆ ಅನೇಕ ದ್ರವ್ಯಗಳನ್ನು ಕೊಟ್ಟು ಕಳುಹಿಸುತ್ತಲಿದ್ದನು. ಈ ವರ್ತಮಾನವು ಸುತ್ತಮುತ್ತಲಿರುವ ಪಟ್ಟಣಗಳಿಗೆಲ್ಲಾ ತಿಳಿದು ಯಾಚಕರ ಗುಂಪು ಗಣಿಸಲಾರದಷ್ಟು ಬರುತ್ತಲಿದ್ದವು- ಆಗ ಹಿಂದೆ ಹೇಳಿದ ಕಪಿಲನು ಈಸಮಾಚಾರವನ್ನು ಕೇಳಿ ಆ ಪಟ್ಟಣಕ್ಕೆ ಬಂದು "ಅತ್ಯಾಶ್ಚರ್ಯಕರವಾದ ಈ ಪಟ್ಟಣವನ್ನು ಯಾರು ಕಟ್ಟಿದರು? ಇದರ ಹೆಸರೇನು? ಇಲ್ಲಿ ಯಾರಿವರು? " ಎಂದು ಮುನಿರೂಪದಿಂದ ಬಂದ ಒಬ್ಬ ವ್ಯಂತರನನ್ನು ಕೇಳಿದನು. ಅದಕ್ಕಾತನು "ಇದರ ಹೆಸರು ರಾಮಪುರ. ಇದರ ದೊರೆ ರಾಘವನು" ಎಂದು ಹೇಳಿದನು. ಕಪಿಲನು ತನಗೆ ದೊರೆಯ ಬೇಟಿಮಾಡಿಸಿಕೊಡಬೇಕೆಂದು ಕೇಳಲು ಆಮುನಿಯು ಈಪಟ್ಟಣದ ಈಶಾನ್ಯಭಾಗದಲ್ಲಿ ಸಹಸ್ರಕೂಟ ಚೈತ್ಯಾಲಯವಿರುವುದು ಅಲ್ಲಿ ಮುನೀಶ್ವರರಿದ್ದಾರೆ. ಅಲ್ಲಿಗೆ ಹೋಗಿ ನೀನು ಯತೀಶ್ವರರಿಂದ ಧರ್ಮೋಪದೇಶವನ್ನು ಪಡೆದುಬಂದರೆ ನಿನಗೆ ಅನೇಕ ದ್ರವ್ಯಗಳನ್ನು ಕೊಡುವೆನೆಂದನು. ಅದಕ್ಕೆ ಕಪಿಲನು ಒಪ್ಪಿ ಆ ಚೈತಾಲಯಕ್ಕೆ ಹೋಗಿ ಮುನೀಶ್ವರರಿಗೆ ವಂದಿಸಿ, ಧರ್ಮಶ್ರವಣವನ್ನು ಕೇಳಿ ಲಘು ಕರ್ಮೋಪಶಮವು ಉಂಟಾದ್ದರಿಂದ ಮಹಾಮುನೀಶ್ವರರಿಂದ ಪಂಚಾಣುವ್ರತಗಳನ್ನು ತೆಗೆದುಕೊಂಡನಂತರ ದೊರೆಯನ್ನು ಕಂಡು ಅನೇಕದ್ರವ್ಯಗಳನ್ನು ಹೊಂದಿದನು. ಶ್ರೀರಾಘವನು ವರ್ಷಾಕಾಲವನ್ನು ವ್ಯಂತರ ಕೃತಕ ಪಟ್ಟಣದಲ್ಲಿ ಕಳೆದು, ಮುಂದಕ್ಕೆ ಹೊರಡಲುದ್ಯುಕ್ತನಾಗಿ ಶರದೃತುವಿನ ಆಗಮನವನ್ನು ನೋಡುತ್ತಿದ್ದನು. ಶರತ್ಕಾಲವು ಬಂದೊಡನೆಯೇ ಕ್ರೀಡಾಘಾತನನ್ನು ಸಮಾಧಾನಪಡಿಸಿ ಅಲ್ಲಿಂದ ಮುಂದಕ್ಕೆ ಹೊರಡುವವನಾಗಿ ಅಷ್ಟಾದಶದೋಷ ನಿರ್ಮುಕ್ತರಾದ ಅರ್ಹತ್ಪರಮೇಶ್ವರರನ್ನು ಮನಸ್ಸಿನಲ್ಲಿ ಸ್ಮರಿಸುತ್ತಲಿದ್ದನು.

೨೫. ವನಮಾಲೆ ಮನೋಹರ.

ಎಲೈ ರಾಜಚೂಡಾಮಣಿಯಾದ ಶ್ರೇಣಿಕನೇ! ಲಕ್ಷ್ಮೀಧರನು ವನಮಾಲೆಯನ್ನು ವರಿಸಿದ ವಿಷಯವನ್ನು ಕೇಳುವವನಾಗು. ಶ್ರೀರಾಘವನು ಪ್ರಿಯೆಯಾದ ಜಾನಕಿ ಮತ್ತು ತಮ್ಮನಾದ ಲಕ್ಷ್ಮಣನೊಡನೆ ಅರಣ್ಯಮಾರ್ಗದಲ್ಲಿ ಬರುತ್ತಾ, ಸೀತಾದೇವಿಯು ಬಿಸಲಿನ ತಾಪವನ್ನು ಸಹಿಸಲಾರದೆ ಅನುತಪ್ತಳಾಗಿರುವುದನ್ನು ರಾಘವನು ನೋಡಿ ರಾಜಪುತ್ರಿಯಾದ ಇವಳಿಗೆ ತನ್ನ ದೆಶೆಯಿಂದ ಈ ವಿಧವಾದ ವನವಾಸವನ್ನು ಮಾಡಿ ವನದಲ್ಲಿ ಮುಳ್ಳು ಕಲ್ಲುಗಳ ಮೇಲೆ ನಡೆದು ಕಂಗೆಡುವ ಸಂಭವವು ತನ್ನಿಂದ ಉಂಟಾಯಿತಲ್ಲಾ ಎಂದು ಮರುಗುತ್ತಾ, ಜಾನಕಿಯ ಹಸ್ತವನ್ನು ತನ್ನ ಕೈಗಳಿಂದ ಹಿಡಿದುಕೊಂಡುಮೆಲ್ಲ ಮೆಲ್ಲಗೆ ನಡೆಸುತ್ತಾಬಂದು ಸೊಂಪಾದ ವೃಕ್ಷದಕೆಳಗೆ ಕುಳ್ಳಿರಿಸಿ ಚೂತಪಲ್ಲವಗಳಿಂದ ಜಾನಕಿಯ ಬೆವರನ್ನು ಆರಿಸುತ್ತಿದ್ದನು. ಇತ್ತ ಅದಕ್ಕೆ ಸಮೀಪದಲ್ಲಿ ವಿಜಯಪುರವೆಂಬ ಪಟ್ಟಣವು ತೃಣಜಲಕಾಷ್ಟ ಸಮೃದ್ಧಿಯಿಂದ ಜನರಿಗೆ ಸುಖವಾಗಿತ್ತು. ಆ ಪುರಕ್ಕೆ ಪೃಥ್ವೀಧರನೆಂಬ ರಾಜನಿದ್ದನು. ಆತನಿಗೆ ಇಂದ್ರಾಣಿಯು ಪಟ್ಟಸ್ತ್ರೀಯಾದಳು. ಅವರಿಗೆ ವನಮಾಲೆಎಂಬ ಒಬ್ಬ ಮಗಳಿದ್ದಳು. ಅವಳು ಬಾಲ್ಯಕಾಲವನ್ನು ವ್ಯರ್ಥಮಾಡದೇ ವಿದ್ಯಾಭ್ಯಾಸ ಮಾಡಿ ಸರಸ್ವತಿಯಂತೆ ಪ್ರಜ್ಞಾವಂತಳಾದಳು. ಅವಳ ರೂಪುಲಾವಣ್ಯಗಳು ಸುರಲೋಕದಲ್ಲಿರುವ ಇಂದ್ರಾಣಿಗಿಂತಲೂ ಹೆಚ್ಚಾಗಿತ್ತು. ಅವಳು ಒಂದಾನೊಂದುದಿನ ಸಖಿಯರಮಧ್ಯೆ ಕೂತುಮಾತನಾಡುತ್ತಿರುವಾಗ್ಯೆ ದಶರಥಮಹಾರಾಜನ ಪುತ್ರನಾದ ಲಕ್ಷ್ಮಣನ ರೂಪು, ಲಾವಣ್ಯ, ಐಶ್ವರ್ಯ, ಶೌರ್ಯ, ಕ್ಷಮಾ ಗುಣಗಳನ್ನು ಕೇಳಿ ಸಖಿಯರ ಮಧ್ಯದಲ್ಲಿ ನಿಂತು ತಾನು ಆ ಲಕ್ಷ್ಮಣನನ್ನೇ ವರಿಸುತ್ತೇನೆಂದೂ, ಬಾಕಿ ಪುರುಷರೆಲ್ಲಾ ತನ್ನ ಸಹೋದರಸಮಾನರೆಂತಲೂ ನಿಶ್ಚೈಸಿರುವುದಾಗಿ ಶಪಥಮಾಡಿದಳು. ಆ ಸಖಿಯರಲ್ಲೊಬ್ಬಳು "ನೀನು ಲಕ್ಷ್ಮಣನನ್ನು ನೋಡಿರುವೆಯಾ ? " ಎಂದು ಕೇಳಲಾಗಿ ನೋಡಿಲ್ಲವೆಂದಳು. ಇನ್ನೊಬ್ಬಳು "ದಶರಥನು ಭರತನಿಗೆ ರಾಜ್ಯಕೊಟ್ಟು ರಾಮನನ್ನು ವನವಾಸಕ್ಕೆ ಕಳುಹಿಸಿದನು. ರಾಮನನ್ನು ಬಿಟ್ಟಿರಲಾರದೆ ಲಕ್ಷ್ಮಣನು ಸಹ ಅವನ ಜೊತೆಯಲ್ಲೇಹೋದನು ಸೀತೆಯು ಗಂಡನಾದ ರಾಮನು ವನವಾಸದಲ್ಲಿರುವಾಗ ತಾನು ಪಟ್ಟಣದಲ್ಲಿರುವದು ಸರಿಯಲ್ಲವೆಂದೂ ಮತ್ತು ಕಾಂತನನ್ನು ಬಿಟ್ಟಿರಲಾರದೆ ಅವನನ್ನೇ ಅನುಸರಿಸಿದಳು. ಶ್ರೀರಾಮನು ಯತ್ನವಿಲ್ಲದೆ ಸೀತೆಯನ್ನೂ ಲಕ್ಷ್ಮಣನನ್ನೂ

ಕರೆದುಕೊಂಡು ವನವಾಸಕ್ಕೆ ಹೊರಟುಹೋದನು" ಎಂದು ಹೇಳಲಾಗಿ ವನಮಾಲೆಯು ಬಹಳಅನುತಾಪಗೊಂಡು "ಹಾಗೂ ನನಗೆ ಲಕ್ಷ್ಮಣನು ಪತಿಯೇ ಹೊರತು ಬಾಕಿಯವರು ಯಾರೂ ಅಲ್ಲವೆಂದೂ, ತಾನು ಇನ್ನ್ಯಾರನ್ನೂವಿವಾಹ ಮಾಡಿಕೊಳ್ಳುವುದಿಲ್ಲವೆಂದೂ" ಶಪಥಮಾಡಿದಳು. ಸಖಿಯರು ಇವಳಿಗೆ ಬುದ್ಧಿ ಸಾಲದೆಂದೂ ತಮತಮಗೆ ತೋರಿದಂತೆ ಮಾತನಾಡಿ ತಮ್ಮತಮ್ಮಸ್ಥಳಗಳಿಗೆ ಹೊರಟುಹೋದರು. ಪೃಥ್ವೀಧರರಾಜನು ದಶರಥನ ಸಮಾಚಾರವನ್ನು ಕೇಳಿ ವನಮಾಲೆಯನ್ನು ಕರೆಸಿ, "ಎಲೈ ಪುತ್ರಿಯೇ! ನೀನು ವರನಾಗಿ ಆರಿಸಿದ್ದ ಲಕ್ಷ್ಮಣನು ಅಣ್ಣನೊಡನೆ ಕಾಡಿಗೆ ಹೊರಟು ಹೋದನಂತೆ. ಅವರೀರ್ವರು ತಿರುಗಿ ಪಟ್ಟಣಕ್ಕೆ ಬರುವುದು ಯಾವಾಗಲೋ ಗೊತ್ತಾಗಲಿಲ್ಲ. ಮತ್ತು ಅವರು ಕಾಡಿನಲ್ಲಿ ಇದ್ದು ಬದುಕಿ ಬರುವುದು ಬಹಳ ಕಷ್ಟವಾಗಿದೆ. ಆದುದರಿಂದ ನಾನು ಇಂದ್ರಪುರದ ಹಂಸಧ್ವಜನ ಮಗನಾದ ಸೌಂಧರನಿಗೆ ನಿನ್ನನ್ನುಕೊಟ್ಟು ವಿವಾಹಮಾಡಬೇಕೆಂದು ಪ್ರಯತ್ನಿಸಿದ್ದೇನೆ. ಶುಭಲಗ್ನವು ಮೂರುದಿನದಲ್ಲಿದೆ" ಎಂದು ಹೇಳಲಾಗಿ, ವನಮಾಲೆಯು ಪ್ರತ್ಯುತ್ತರವನ್ನು ಹೇಳದೆ ತನ್ನವಾಸದ ಮನೆಗೆ ಬಂದು ಹಂಸತೂಲಿಕಾತಲ್ಪದಲ್ಲಿ ಮನಬಂದಂತೆ ವದ್ದಾಡಿ ಬಹಳ ಹೊತ್ತು ಅತ್ತು ಹಾಗೆಯೇ ಧೈರ್ಯ ತಾಳಿ ಎದ್ದು ಕೂತುಕೊಂಡು ತಾನುಒಬ್ಬ ಪುರುಷನನ್ನು ವರಿಸುತ್ತೇನೆಂದು ಶಪಥಮಾಡಿ, ಆತನಲ್ಲಿ ಮನ ಪ್ರೀತಿಯನ್ನು ಮಾಡಿ ಈಗ ಇನ್ನೊಬ್ಬನನ್ನು ವರಿಸುವುದು ಪತಿವ್ರತಾಧರ್ಮಕ್ಕೆ ಕುಂದಕವಾಗಿದೆ- ಈಗಲೂ ನನಗೆ ಲಕ್ಷ್ಮಣನು ಪತಿಯಾದರೆ ಆಗಲಿ, ಇಲ್ಲದಿದ್ದರೆ ಈ ದೇಹವನ್ನು ಬಿಡತಕ್ಕದ್ದೇ ಸರಿಯೆಂದು ನಿಶ್ಚಯಿಸಿ ತನ್ನ ದುಃಖವನ್ನು ತಾನೇ ಸಂತೈಸಿಕೊಂಡಳು. ಮುಂದಿನದಿನ ಚತುರ್ದಶಿಯಾದ್ದರಿಂದ ಎಲ್ಲರಂತೆ ತಾನೂ ಸಖಿಯರನ್ನು ಜೊತೆಮಾಡಿಕೊಂಡು ದೇವಸ್ಥಾನಕ್ಕೆ ಹೋಗಿ ಜಿನೇಶ್ವರರಿಗೆ ಅಷ್ಟವಿಧಾರ್ಚನೆಯನ್ನು ಮಾಡಿ ಮುನಿಗಳಲ್ಲಿ ಧರ್ಮಶ್ರವಣಗಳನ್ನು ಕೇಳಿ ರಾತ್ರಿ ಜಾಗರಣೆಮಾಡುತ್ತೇನೆಂದು ಸಖಿಯರಮಧ್ಯದಲ್ಲಿ ನಿದ್ರೆಯಿಲ್ಲದೆ ಜಿನೇಶ್ವರನ ಗುಣವರ್ಣನೆಯ ಹಾಡನ್ನು ಹೇಳುತ್ತಾ ಇರುವಾಗ ರಾತ್ರಿ ಅರ್ಧಭಾಗ ಕಳೆಯಲು ಸಖಿಯರೆಲ್ಲಾ ತೂಕಡಿಸಿ ನಿದ್ರಾಪರವಶರಾಗಿರುವುದನ್ನು ನೋಡಿ ಜಿನೇಶ್ವರನಿಗೆ ನಮಸ್ಕರಿಸಿ ದೇವಸ್ಥಾನದಿಂದ ಹೊರಟು ಅರಣ್ಯದೊಳಗೆ ಪ್ರವೇಶಿಸಿ ಗೊತ್ತುಕಾಣದ ದಾರಿಯಲ್ಲಿ ಗೊತ್ತಿಲ್ಲದೆ ಸಂಚರಿಸಿ ನಕ್ಷತ್ರದ ಬೆಳಕಿನಿಂದ ದೊಡ್ಡದಾದ ಒಂದು ವೃಕ್ಷದ ಬುಡದಲ್ಲಿ ಕುಳಿತುಕೊಂಡಳು-

ತಾನು ಅರಮನೆಯಲ್ಲಿ ಇದ್ದದ್ದೇ ಆದರೆ ತಂದೆಯು ಸೌಂಧರನಿಗೆ ವಿವಾಹ ಮಾಡೇಮಾಡುತ್ತಾನೆ. ಅಲ್ಲಿ ಹೋಗಿ ಲಕ್ಷ್ಮಣನನ್ನು ನೆನೆಯುತ್ತಾ ಜೀವಿಸುವದಕ್ಕೂ ಅನುಕೂಲವಿಲ್ಲ. ಒಬ್ಬಳೇ ಎಲ್ಲಿಗೆತಾನೇ ಹೋದರೆ ಸೌಖ್ಯವಾಗಿ ಇರುತ್ತೇ. ಆದ್ದರಿಂದ ಈ ಮರದ ಬುಡದಲ್ಲಿ ಚೀನಾಂಬರದಿಂದ ಮರದ ಕೊಂಬೆಗೆ ನೇತುಹಾಕಿಕೊಂಡು ಪ್ರಾಣಬಿಡುವುದೇ ಲೇಸು- ಅನಂತಾನಂತವಾದ ಈ ಪ್ರಾಣಿಲೋಕದಲ್ಲಿ ನಾನೊಬ್ಬಳೇ ಕಳೆದುಹೋಗುವದರಿಂದ ಏನು ಕೊರತೆಯಾಗುತ್ತೆ? ಎಂದು ಯೋಚಿಸಿ ಬಹಳ ವ್ಯಸನದಿಂದ ಗಟ್ಟಿಯಾಗಿ ರೋಧನಮಾಡುತ್ತಿದ್ದಳು. ಆ ಸಮೀಪದಲ್ಲೇ ಇದ್ದ ರಾಮ ಲಕ್ಷ್ಮಣ ಸೀತಾದೇವಿಯರು ನಿದ್ರೆಯಲ್ಲಿದ್ದಾಗ ಜಾನಕಿಗೆ ಈ ರೋಧನ ಧ್ವನಿಯು ಕೇಳಿಎದ್ದು ರಾಮನಿಗೆ "ಈ ಅರಣ್ಯಮಧ್ಯದಲ್ಲಿ ಸ್ತ್ರೀರೋಧನವಾಗುತ್ತೆ. ಏನುಕಷ್ಟಆಕೆಗೆ ಒದಗಿರುತ್ತೋ? ವಿಚಾರಮಾಡೋಣ" ವೆಂದು ಹೊರಟಳು. ಆಕೆಯ ಹಿಂದೆ ರಾಘವನೂ ಹೊರಟನು. ಆತನ ಹಿಂದೆ ಲಕ್ಷ್ಮಣನೂ ಹೊರಟನು.

ಸೀತಾದೇವಿಯು ಧ್ವನಿಬಂದ ದಿಕ್ಕನ್ನು ಅನುಸರಿಸುತ್ತಾ ಕತ್ತಲೆಯಲ್ಲಿ ತಡವರಿಸುತ್ತಾ ವನಮಾಲೆಯು ಕುಳಿತಿದ್ದ ಮರದ ಬುಡವನ್ನು ಸೇರಿದಳು. ವನಮಾಲೆಯನ್ನು ನೋಡಿ ಕತ್ತಲೆಯಲ್ಲಿ ಚನ್ನಾಗಿ ವ್ಯಕ್ತವಾಗದಿದ್ದರೂ ರಾಜಪುತ್ರಿಯಂತಲೂ ಚಿಕ್ಕವಯಸ್ಸಿನವಳೆಂತಲೂ ನಿಶ್ಚಯಿಸಿ, "ಎಲೈಮಗಳೇ! ಏಕೆ ಅಳುತ್ತಿಯೇ?" ಎಂದು ಕೇಳಲಾಗ, ವನಮಾಲೆಯು ಈ ಕಾಡಿನಲ್ಲಿ ಇಷ್ಟು ಹೊತ್ತಿನಲ್ಲಿ ಇವರ್‍ಯಾರೋ ಮಾರ್ಗತಪ್ಪಿ ಬಂದಿರಬಹುದು, ಇವರಿಂದ ನನ್ನ ಕಾರ್ಯಕ್ಕೆ ತಡೆಯಾಗುತ್ತೆಂದು ನೆನೆಸಿ, "ಯಾರಾದರೇನು? ನಿನ್ನ ದಾರಿಯನ್ನು ಹಿಡಿದುಹೋಗು" ಎಂದಳು. ಅದಕ್ಕೆ ಜಾನಕಿಯು ವನಮಾಲೆಯ ಕೈ ಹಿಡಿದು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ತಲೆಯನ್ನು ಸವರುತ್ತಾ "ಎಲೈ ತಂಗಿ! ಏಕೆ ಇಷ್ಟು ವ್ಯಸನವುಳ್ಳವಳಾಗಿದ್ದೀಯೇ? ಅಕ್ಕನಾದ ನನ್ನ ಕೂಡ ಹೇಳು. ನಿನಗೆ ಯಾವ ಕಷ್ಟವು ಬಂದೊದಗಿದ್ದರೂ ನಾನು ಆ ಕಷ್ಟವನ್ನು ತಪ್ಪಿಸಿ ಕೊಡುತ್ತೇನೆ" ಎಂದು ಮುದ್ದಿಸಿ ಕೇಳಿದಳು. ಅದಕ್ಕೆ ವನಮಾಲೆಯು "ಆಕಷ್ಟ ನಿನ್ನಿಂದ ಪರಿಹರಿಸಲಾಗುವುದಿಲ್ಲ. ನನ್ನ ಕರ್ತವ್ಯವನ್ನು ಕೇಳಿದರೆ ನಿನಗೂ ಸ್ವಲ್ಪಮಟ್ಟಿಗಾದರೂ ವ್ಯಸನವುಂಟಾಗುವುದು" ಎಂದು ಹೇಳಲಾಗ ಕರುಣಾಳುವಾದ ವೈದೇಹಿಯು ಅವಳಮೈಯನ್ನು ಸವರುತ್ತಾ, "ತಂಗಿಯೇ! ನನ್ನಿಂದ ಆಗದೇ ಇರತಕ್ಕ ಕೆಲಸವೇ ಇಲ್ಲ- ನೀನು ಏನು ಹೇಳಿದರೂ ಅದನ್ನು ಮಾಡಿ

ಕೊಡುವೆನು" ಎಂದು ಹೇಳಲಾಗ—ಕತ್ತಲೆಯಲ್ಲಿ ರಾಮಲಕ್ಷ್ಮಣರು ವನಮಾಲೆಯ ದೃಷ್ಟಿಗೆ ಬೀಳಲಿಲ್ಲ. ಜಾನಕಿಯೊಬ್ಬಳೇ ಈ ಕತ್ತಲಲ್ಲಿ ಸ್ತ್ರೀಮಾತ್ರದವಳು ಬರಲಾರಳು. ಇವಳು ಯಕ್ಷಿದೇವತೆಯಾಗಿರ ಬಹುದೆಂದು ಮನದಲ್ಲಿ ಯೋಚಿಸುತ್ತಾ, ಎದ್ದು ಜಾನಕಿಯ ಕಾಲಿಗೆ ಬಿದ್ದು ಕೈಮುಗಿದು "ಎಲೈದೇವತೆಯೇ! ನಾನು ಲಕ್ಷ್ಮಣನನ್ನು ವರಿಸಬೇಕೆಂದು ಪ್ರತಿಜ್ಞೆ ಮಾಡಿಕೊಂಡಿದ್ದೆ. ದಶರಥನು ಹಿರಿಯ ಮಗನಾದ ರಾಮನಿಗೆ ಪಟ್ಟಕಟ್ಟದೆ ಕಿರಿಯ ಹೆಂಡತಿಯ ಮಾತಿನಂತೆ ಅವಳಮಗನಾದಭರತನಿಗೆ ರಾಜ್ಯವನ್ನು ಕೊಟ್ಟನಂತೆ. ಅಷ್ಟಕ್ಕೂ ಸುಮ್ಮನಿರದೆ ಶ್ರೀರಾಮನನ್ನು ಹೆಂಡತಿಯ ಮಾತಿನಂತೆ ವನವಾಸಕ್ಕೆ ಕಳುಹಿಸಿದನಂತೆ. ನನ್ನ ಪತಿಯಾದ ಲಕ್ಷ್ಮಣನೂ ಅಣ್ಣನನ್ನು ಬಿಟ್ಟಿರಲಾರದೆ ಅಣ್ಣ ಮತ್ತು ಅತ್ತಿಗೆಯೊಡನೆ ವನವಾಸಕ್ಕೆ ಹೋದನಂತೆ. ಈ ವಿಷಯವನ್ನು ನಮ್ಮ ತಂದೆಯು ತಿಳಿದು, ಇಂದ್ರಪುರದ ಹಂಸಧ್ವಜನ ಮಗನಾದ ಸೌಂಧರನಿಗೆ ನನ್ನನ್ನು ಕೊಡಲು ನಿಶ್ಚಯಿಸಿದ್ದಾನೆ. ನಾನು ಈ ವನಕ್ಕೆ ಸಮೀಪದಲ್ಲಿರುವ ವಿಜಯಪುರದ ದೊರೆಯಾದ ಪೃಥ್ವೀಧರರಾಜನಿಗೂ ಆತನ ರಾಣಿಯಾದ ಇಂದ್ರಾಣಿಗೂ ವನಮಾಲೆ ಎಂಬ ಮಗಳಾಗಿದ್ದೇನೆ"ಎಂದುಹೇಳಲಾಗಿ ಜಾನಕಿಯು "ಓಹೋ! ನಿನ್ನ ಕಷ್ಟವು ಇಷ್ಟೇನೇ? ಈಗಲೇ ನಾನು ಪರಿಹಾರ ಮಾಡುತ್ತೇನೆ" ಎಂದು ಹೇಳಿ, ಮೈದುನನಾದ ಲಕ್ಷ್ಮಣನನ್ನು ಬರಮಾಡಬೇಕೆಂತ ರಾಮನಿಗೆ ಹೇಳಲಾಗಿ–ರಾಮನ ಅಪ್ಪಣೆ ಪ್ರಕಾರ ಲಕ್ಷ್ಮಣನು ವನಮಾಲೆಯ ಮುಂದೆನಿಂತುಕೊಂಡನು. ಆಗತಾನೇ ಬೆಳಕರಿಯುತ್ತಿದ್ದ ಬೆಳಕಿನಲ್ಲಿ ಅವನ ರೂಪನ್ನು ನೋಡಿ ಸ್ವಪ್ನವೇನೋ ಎಂದು ಕಣ್ಣುಗಳನ್ನು ಮುಚ್ಚಿಬೆಚ್ಚಿ ಮೂರ್ಛಿತಳಾದಳು. ಅತ್ತ ವನಮಾಲೆಯ ಸಖಿಯರು ಅವಳನ್ನು ಕಾಣದೇ ಅತ್ತಿತ್ತ ಹುಡುಕುತ್ತ ಈ ಮರದ ಹತ್ತಿರ ಮಾತನಾಡುವ ಶಬ್ದವನ್ನು ಕೇಳಿ ಅನುಸರಿಸಿ ಬಂದರು. ಇಲ್ಲಿ ಇವರನ್ನೆಲ್ಲಾ ನೋಡಿ ಆಶ್ಚರ್ಯಭರಿತರಾಗಿ ಈ ವಿಷಯವನ್ನು ರಾಜರಾಣಿಯರಿಗೆ ಓಡಿಹೋಗಿ ತಿಳಿಸಿದರು. ಪೃಥ್ವೀಧರರಾಜನು ಈ ಆಶ್ಚರ್ಯ ಸಂಗತಿಯನ್ನು ಕೇಳಿ, ರಾಣಿಯೊಡನೆ ಆ ವನದಲ್ಲಿರುವ ವೃಕ್ಷದ ಸಮೀಪಕ್ಕೆ ಬಂದು ಇವರನ್ನೆಲ್ಲಾ ನೋಡಿ ಆಶ್ಚರ್ಯಭರಿತನಾದನು. ಅನಂತರ ಶ್ರೀರಾಮನಿಗೆ ನಮಸ್ಕರಿಸಿ ತಾವುಗಳು ನಮ್ಮ ಮನೆಗೆ ಬಂದು ಅರ್ಘ್ಯಾದಿಗಳನ್ನು ತೆಗೆದುಕೊಂಡು ತನ್ನನ್ನು ಪೂನೀತನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳಲಾಗ ಶ್ರೀರಾಮನು ಜಾನಕಿ ಲಕ್ಷ್ಮಣರೊಡನೆ ಪೃಥ್ವೀ

ಧರನ ಅರಮನೆಯನ್ನು ಸೇರಿ ಸ್ನಾನಭೋಜನಾದಿಗಳನ್ನು ಮಾಡಿದನು. ಪೃಥ್ವೀಧರನು ಪಟ್ಟಣವನ್ನು ಶೃಂಗರಿಸಿ ವಿವಾಹವೇದಿಕೆಯನ್ನು ನಿರ್ಮಿಸಿ ಬಂಧುಬಳಗಗಳನ್ನು ಬರಮಾಡಿಕೊಂಡು ಶುಭ ದಿನ, ಶುಭ ಲಗ್ನ, ಶುಭವೇಳೆಯಲ್ಲಿ ಲಕ್ಷ್ಮಣನಿಗೆ ಧಾರಾಪೂರ್ವಕವಾಗಿ ವನಮಾಲೆಯನ್ನು ಕೊಟ್ಟು ಪಾಣಿಗ್ರಹಣ ಮಹೋತ್ಸವವನ್ನು ನೆರವೇರಿಸಿದನು. ಶ್ರೀರಾಮನು ಜಾನಕಿ ಮತ್ತು ಲಕ್ಷ್ಮಣರೊಡನೆ ಆ ಪಟ್ಟಣದಲ್ಲಿ ನಿಂತು ಅರ್ಹತ್ಪರಮೇಶ್ವರರ ಪಾದವನ್ನು ಭಜಿಸುತ್ತಲಿದ್ದನು.

೨೬. ಹಂಸಧ್ವಜನ ಜಗಳ.

ಭೂತಳಾಧಿಪತಿಯಾದ ಶ್ರೇಣಿಕನೇ ! ಕೇಳುವನಾಗು. ಲಕ್ಷ್ಮೀಧರನು ವನಮಾಲೆಯಲ್ಲೂ, ರಘುನಾಥನು ಧರಣೀಜಾತೆಯಲ್ಲೂ ಮನಸ್ಸನ್ನಿಟ್ಟು ಸುಖವಾಗಿರುತ್ತಿರಲಾಗಿ ವಿಜಯಪುರದ ಅಧಿಪತಿಗೆ ನಂದ್ಯಾವರ್ತ ಪಟ್ಟಣದ ಹಂಸಧ್ವಜನು ಭರತನ ಮೇಲೆ ಯುದ್ಧಕ್ಕೆ ಹೋಗುವುದಕ್ಕಾಗಿ ಸಹಾಯಮಾಡಬೇಕೆಂದು ಹೇಳಿ ಕಳುಹಿಸಿದನು. ಆಗ ವಿಜಯಪುರದ ಅಧಿಪತಿಯು ಯುದ್ಧಕ್ಕೆ ಕಾರಣವೇನೆಂದು ಕೇಳಲಾಗ ಅವನು "ನಂದ್ಯಾವರ್ತಪಟ್ಟಣದ ಹಂಸಧ್ವಜನು ತನ್ನ ಮಂತ್ರಿಗಳ ಸಭೆಯಲ್ಲಿ ಹೇಳಿದ್ದೇನೆಂದರೆ— ದಶರಥರಾಜನು ತಪಸ್ಸಿಗೆ ಹೊರಟುಹೋದನು. ಬಲಿಷ್ಠರಾದ ರಾಮಲಕ್ಷ್ಮಣರು ವನವಾಸಕ್ಕೆ ಹೊರಟುಹೋದರು. ಈಗ ಅಯೋಧ್ಯಾಧಿಪತಿಯಾದ ಭರತನಿಗೆ ನಾವು ಕಾಣಿಕೆಕೊಡಲು ಕಾರಣವಿಲ್ಲ. ಅವನಿಂದಲೇ ನಾವು ಕಾಣಿಕೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದನು. ಅದಕ್ಕೆ ಮಂತ್ರಿಗಳು ಭರತ, ಶತ್ರುಘ್ನರು ಬಲಿಷ್ಠರು. ಅವರ ಮೇಲೆ ವಿರೋಧಮಾಡತಕ್ಕದ್ದು ಸರಿಯಲ್ಲವೆಂದು ಎಷ್ಟು ಹೇಳಿದರೂ ಕೇಳದೆ ಭರತನಿಗೆ ನಮಗೇ ಕಾಣಿಕೆಕೊಡಬೇಕೆಂದೂ, ದೂತನ ಮುಖಾಂತರ ಹೇಳಿ ಕಳುಹಿಸಿದನು. ದೂತನು ಅಯೋಧ್ಯಾಪುರದ ರಾಜಾಸ್ಥಾನಕ್ಕೆ ಹೋಗಿ ಹೇಳಲಾಗ ಶತ್ರುಘ್ನನು ಕೋಪಾವಿಷ್ಟನಾಗಿ ಹಂಸಧ್ವಜನನ್ನು ಧಿಕ್ಕರಿಸಿ ನಮಗೆ ಪೂರ್ವದಂತೆ ಕಪ್ಪಕಾಣಿಕೆಗಳನ್ನು ಕಳುಹಿಸಬೇಕು; ಇಲ್ಲದಿದ್ದರೆ ಯುದ್ಧಕ್ಕೆ ಬರುವೆವು." ಎಂದು ಹೇಳಿ ಕಳುಹಿಸಿದನು. ಅದಲ್ಲದೆ ಮಿಥಿಳಾಪುರದ ಭರತನ ಮಾವನಾದ ಕನಕನಿಗೆ ಸಹಾಯಾರ್ಥವಾಗಿ ಬರುವಂತೆ ಹೇಳಿಕಳುಹಿಸಲು ಕನಕನು ಸೇನೆಯನ್ನು ಕೂಡಿಕೊಂಡು ಹೊರಟನು. ಅಯೋ

ಧ್ಯಾಧಿಪತಿಯಾದ ಭರತನ ತಮ್ಮ ಶತೃಘ್ನನು ಕನಕನಸೇನೆಯೊಡನೆ ತಮ್ಮ ಅನೇಕ ಸೇನೆಗಳನ್ನು ಸೇರಿಸಿಕೊಂಡು ನಂದ್ಯಾವರ್ತಪಟ್ಟಣದ ಮುತ್ತಿಗೆಗೆ ಪ್ರಾರಂಭಮಾಡಿಧಾರೆ" ಎಂದು ಹೇಳುವುದು ಲಕ್ಷ್ಮಣನ ಕಿವಿಯವರಿಗೆ ಮುಟ್ಟಿತು. ಆಗ ಲಕ್ಷ್ಮಣನು ರಾಘವನನ್ನು ಕಂಡು ಈ ವಿದ್ಯಮಾನವನ್ನು ತಿಳಿಸಿ ಶತ್ರುಘ್ನನು ಒಂದು ವೇಳೆ ಸೋತುಹೋದರೆ ನಮ್ಮ ವಂಶಕ್ಕೆ ಅಪ ಕೀರ್ತಿಬರುತ್ತೆ. ಆದ್ದರಿಂದ ಸಹಾಯಾರ್ಥವಾಗಿ ಹೋಗಬೇಕೆಂದು ಹೇಳ ಳಾಗ ರಾಘವನು ಆಗಬಹುದೆಂದು ಜಾನಕಿಯೊಡನೆ ಲಕ್ಷ್ಮಣನನ್ನು ಕೂಡಿ ಕೊಂಡು ನಂದ್ಯಾವರ್ತಪಟ್ಟಣದ ಸಮಿಾಪದಲ್ಲಿರುವ ವನಕ್ಕೆ ಹೋಗಿ ನಿಂತರು.

ಇತ್ತಲು ಹಂಸಧ್ವಜನ ಸೇನೆಗೂ ಅಯೋಧ್ಯಾರಾಜರಸೇನೆಗೂ ದೊಡ್ಡಕದನವಾಯಿತು. ಆಗ ಅಯೋಧ್ಯಾಪಟ್ಟಣದ ಸೇನೆಯು ಸ್ವಲ್ಪ ಕುಂದುತ್ತಿರಲು ಶತ್ರುಘ್ನನೂ ಕನಕನೂ ಸಹ ಯುದ್ಧಕ್ಕೆ ಮುಂದಾಗಿ ನಿಂತರು. ಈ ವಿಷಯವನ್ನು ರಾಮನು ತಿಳಿದು ಲಕ್ಷ್ಮಣನಿಗೆ "ನೀನು ನಿನ್ನ ಗುರ್ತನ್ನು ಜನ ಗಳಿಗೆ ತಿಳಿಯಪಡಿಸದೆ ಶತ್ರುಘ್ನನಿಗೆ ಸಹಾಯಮಾಡು" ಎಂದು ಹೇಳಲಾಗ ಲಕ್ಷ್ಮಣನು ವೈಕುರ್ವಣ ವಿದ್ಯಾಬಲದಿಂದ ದೊಡ್ಡ ರಾಕ್ಷಸರೂಪನ್ನು ತಾಳಿ ಹಂಸಧ್ವಜನನ್ನು ಬಡಿದು ಓಡಿಸಿದಾಗ ಹಂಸಧ್ವಜನಮಗನಾದ ವಿಜಯೇಂ ದ್ರನೆಂಬುವನು ಹೀಗೆ ರಾಕ್ಷಸನಿಗೆ ಹೆದರಿ ಸೇನೆ ಓಡಿ ಬರುತ್ತಿರುವುದನ್ನು ತಿಳಿಸಲಾಗ ಹಂಸಧ್ವಜನು ಆಶ್ಚರ್ಯಪಟ್ಟು ಅವನ್ಯಾವ ರಾಕ್ಷಸನೆಂದು ಕೊಂಡು ಅಪಹಾಸ್ಯ ಮಾಡುತ್ತಾ ಯುದ್ಧಾಭಿಮುಖನಾದನು. ಆಗ ರಾಕ್ಷ ಸನು ಸಾಧಾರಣವಾದ ರೂಪನ್ನು ತಾಳಿಕೊಂಡು ನಿಂತಿದ್ದನು. ಈತನನ್ನು ಹಂಸಧ್ವಜನು ನೋಡಿ "ನೀನು ಯಾರು?" ಎಂಧು ಕೇಳಲಾಗ, ಆತನು "ನಾನು ಅಯೋಧ್ಯಾ ರಾಜಸಂತಿಯ ಕುಲದೇವತೆ" ಎಂದುಹೇಳಲಾಗ ಹಂಸ ಧ್ವಜನು ನಕ್ಕು—"ನೀನು ಕುಲದೇವತೆಯಾಗಿ ಆ ರಾಜಸಂತತಿಯ ಬಾಳೇ ನಾಗಿದೆ. ಅಲ್ಲಿಗೆರಾಜರು ಪಾದುಕಮುದ್ರೆಗಳಾಗಿ ಸಿಂಹಾಸನದ ಮೇಲೆ ಕೂತು ರಾಜನಾಗಿವೆ. ನಿನ್ನ ಬಲವನ್ನು ನೋಡೋಣ" ಎಂದು ಹೇಳಲಾಗ ಆರಾಕ್ಷಸ ರೂಪನಾಗಿದ್ದವನು ಸಿಂಹಾಕಾರವಾಗಿ ಹಂಸಧ್ವಜನನ್ನು ಕಚ್ಚಿಕೊಳ್ಳುವದಕ್ಕೆ ಓಡಿಬಂತು. ಆಗ ಎಷ್ಟು ಸೇನೆಗಳು ಬಂದರೂ ಸಿಂಹವು ಗರ್ಜಿಸಿ ಓಡಿಸಿ ಬಿಡುತ್ತಿತ್ತು. ಆಗ ಹಂಸಧ್ವಜನ ಮಗನಾದ ವಿಜಯೇಂದ್ರನು ಶತ್ರುಘ್ನನ ಸಮಿಾಪಕ್ಕೆ ಬಂದು ನಮ್ಮ ತಂದೆಯು ನಿಮ್ಮ ಮೇಲೆ ಹಗೆ ಮಾಡಿದ್ದು ತಪ್ಪಾ

ಯಿತೆಂದು ಹೇಳಿ ನಮಸ್ಕರಿಸಿ, ಕಾಪಾಡಬೇಕೆಂದು ಉಪಾಯನದ್ರವ್ಯಗಳನ್ನು ತಂದು ಒಪ್ಪಿಸಲಾಗ– ಅನೇಕ ರಾಜರು ಶತ್ರುಘ್ನನು ಮಹಾಸಮರ್ಥನೆಂದು ಹೊಗಳಿ ಕೀರ್ತಿಯನ್ನು ದೇಶದೇಶಗಳಿಗೆ ಹಂಚಿದರು.

ಸಿಂಹವು ಮನುಷ್ಯಾಕಾರವಾಗಿ ಹಂಸಧ್ವಜನನ್ನು ಕೈ ಕಾಲು ಕಟ್ಟಿ, ಶ್ರೀರಾಮನ ಪಾದದ ಬಳಿ ಇಟ್ಟಿತು. ಆಗ ಶ್ರೀರಾಮನು ಕೈಕಾಲನ್ನು ಬಿಚ್ಚಿ ಹಂಸಧ್ವಜನನ್ನು ಸನ್ಮಾನಿಸಿದನು. ವಿಜಯೇಂದ್ರನು ಬಂದು ಶ್ರೀರಾಮನನ್ನು ನಂದ್ಯಾವರ್ತಪಟ್ಟಣದ ತಮ್ಮ ಅರಮನೆಗೆ ದಯಮಾಡಿಸಬೇಕೆಂದು ಬೇಡಿ ಕೊಂಡನು. ರಾಮನು ಜಾನಕಿ ಲಕ್ಷ್ಮಣರೊಡನೆ ಹಂಸಧ್ವಜನನ್ನು ಕರೆದು ಕೊಂಡು ಅರಮನೆಗೆ ಚಿತ್ತೈಸಿದನು. ಆಗ ರಾಜೋಪಚಾರಮಾಡಿ ಎಲ್ಲರನ್ನು ಭದ್ರಾಸನದಲ್ಲಿಕುಳ್ಳಿರಿಸಿದರು. ಆಗ ಹಂಸಧ್ವಜನ ಮಗಳಾದ ರತಿಮಾಲೆಯು ಪೀಠದಲ್ಲಿ ಕುಳಿತಿದ್ದ ಲಕ್ಷ್ಮಣನನ್ನು ನೋಡಿ ವ್ಯಾಮೋಹಿತಳಾಗಿ ಮೂರ್ಛಿತಳಾದಳು. ಅನಂತರ ಹಂಸಧ್ವಜನು ಶುಭಲಗ್ನದಲ್ಲಿ ಲಕ್ಷ್ಮಣನಿಗೆ ತನ್ನ ಪುತ್ರಿಯಾದ ರತಿಮಾಲೆಯನ್ನು ಕೊಟ್ಟು ವಿವಾಹವನ್ನು ನೆರವೇರಿಸಿ, ತನ್ನ ಮಗನಾದ ವಿಜಯೇಂದ್ರನಿಗೆ ರಾಜ್ಯವನ್ನು ಕೊಟ್ಟು ತಾನು ತಪಸ್ಸಿಗೆಹೊರಟು ಹೋದನು. ಇತ್ತ ಶ್ರೀರಾಮನು ಜಾನಕಿ ಲಕ್ಷ್ಮಣರೊಡನೆ ಆ ಪಟ್ಟಣದಲ್ಲಿ ಇದ್ದು ಅರ್ಹತ್ಪರಮೇಶ್ವರರ ಚರಣ ಕಮಲಗಳನ್ನು ನೆನೆಯುತ್ತಲಿದ್ದನು.

೨೭. ಶಕ್ತಿ ಸಾಧನ

ಎಲೈ ಮಗಧೇಶ್ವರನಾದ ಶ್ರೇಣಿಕಮಹಾರಾಜನೇ ಕೇಳುವನಾಗೈ— ಹಂಸಧ್ವಜನು ರತಿಮಾಲೆಯನ್ನು ಲಕ್ಷ್ಮಣನಿಗಿತ್ತು ಮಗನಾದ ವಿಜಯೇಂದ್ರ (ವಿಜಯರಥ)ನಿಗೆ ಭೂಭಾರವನ್ನು ವಹಿಸಿ ರಾಘವನ ಅಪ್ಪಣೆಯನ್ನು ಹೊಂದಿ ತಪೋವನಕ್ಕೆ ಹೋಗಿ, ತ್ರಿಭುಕ್ತಿ ಭಟ್ಟಾರಕರಲ್ಲಿ ದೀಕ್ಷೆಯನ್ನು ಕೈಕೊಂಡು ಪಕ್ಷೋಪವಾಸ ಮಾಸೋಪವಾಸಮಾಡಿ ಮುಕ್ತಿಗೆ ಅನುವಾದನು. ಇತ್ತಲು ಸೀತಾನಾಯಕಿಯನ್ನು ಕೂಡಿ ರಾಘವನೂ, ರತಿಮಾಲೆಯನ್ನು ಕೂಡಿ ಲಕ್ಷ್ಮಣನೂ ಶೃಂಗಾರಕೇಳಿಯಲ್ಲಿದ್ದು ನಿರ್ವಂಚನೆಯಿಂದ ವಿಜಯರಥನ ಉಪಚಾರವನ್ನು ಅನುಗ್ರಹಮಾಡಿ ಕೆಲವು ಹಗಲು ಆ ನಂದ್ಯಾವರ್ತಪುರದೊಳಗಿದ್ದರು. ರಾಘವನು ಅಲ್ಲಿಂದಹೊರಡಲು ಯತ್ನಮಾಡಿ ಪಯಣಕ್ಕೆ ಮುಂದಡಿಯಿಟ್ಟನು. ಜಾನಕೀರಮಣಿಯು ಆತನ ಹಿಂದೆ ಹೊರಟಳು. ಜಾನಕಿಯ ಹಿಂದೆ ಲಕ್ಷ್ಮ

ಣನೂ ಹೊರಟನು. ಹೀಗೆ ಬರುತ್ತಾ ರತ್ನಸಂಚಯಪುರದ ಬಹಿರುದ್ಯಾನವನ ದಲ್ಲಿರುವ ಪುಷ್ಕರಣಿಯಲ್ಲಿ ಕರಚರಣಗಳನ್ನು ತೊಳೆದುಕೊಂಡು ಮಾಮರದ ನೆರಳಿನಲ್ಲಿ ಕೂತು· ವಿಶ್ರಮಿಸಿಕೊಳ್ಳುತ್ತಿರುವಾಗ ಲಕ್ಷ್ಮಣನು ಅಣ್ಣನಿಗೂ ಮತ್ತು ಅತ್ತಿಗೆಗೂ ಸಹ ಆ ವನದಲ್ಲಿರತಕ್ಕ ನಾನಾ ಫಲಗಳನ್ನು ತಂದುಕೊ ಟ್ಟನು. ಅವರೀರ್ವರೂ ಫಲಗಳನ್ನು ಭಕ್ಷಿಸಿ ಗಾಳಿಯನ್ನು ತಾವರೆ ಎಲೆ ಗಳಿಂದ ಬೀಸಿಕೊಳ್ಳುತ್ತಿರುವಾಗ ಓರ್ವ ಬ್ರಾಹ್ಮಣನು ಅತ್ತ ಬಂದನು. ಆ ಬ್ರಾಹ್ಮಣನನ್ನು ವಿಶ್ರಮಿಸಿಕ್ಕೊಳ್ಳುವಂತೆ ಹೇಳಿ ಶ್ರೀರಾಮನು ಅವನಿಗೆ ಕೆಲವು ಫಲಗಳನ್ನು ಕೊಟ್ಟನು. ಆತನು ಅ ಹಣ್ಣುಗಳನ್ನು ತಿಂದು ತೃಪ್ತನಾಗಿ ಕುಳಿತಿರುವಾಗ—"ಅಯ್ಯಾ ಬ್ರಾಹ್ಮಣನೇ! ನೀನು ಯಾರು? ಎಲ್ಲಿಂದ ಬಂದಿ ದ್ದೀಯೆ? ಎಲ್ಲಿಗೆ ಹೋಗುತ್ತೀಯೆ? ವಿಶೇಷ ಸಮಾಚಾರವೇನು?" ಎಂದು ಕೇಳಲಾಗ ಜಾನಕಿಯು ರಾಮನ ಮಾತನ್ನು ಕೇಳಿ ಮುಂದಸ್ಮಿತವದನಳಾಗಿ ರಾಮನನ್ನು ನೋಡುತ್ತಿದ್ದಳು. ಬ್ರಾಹ್ಮಣನು "ನನ್ನ ಹೆಸರು ಭೀಮ. ನಾನು ದಕ್ಷಿಣಾರ್ಥವಾಗಿ ಅಲ್ಲಲ್ಲಿ ಸಂಚರಿಸುತ್ತಲಿದ್ದೇನೆ. ಇಲ್ಲಿ ಕಾಣುವುದು ರತ್ನ ಸಂಚಯಪುರ. ಅದರದೊರೆ ಸೂರ್ಯಹಾಸನೆಂಬವನು. ಆತನಹೆಂಡತಿ ಸೂರ್ಯಾಭೆ ಯೆನ್ನಿಸುವಳು. ಇವರಿಗೆ ಜಿತಪದ್ಮೆಯೆಂಬ ಒಬ್ಬ ಮಗಳು ಹುಟ್ಟಿದಳು. ಆಕೆ ಹುಟ್ಟಿದ ಕಾಲದಲ್ಲಿ ಆಯುಧಾಲಯದಲ್ಲಿ ಒಂದು ಶಕ್ತ್ಯಾಯುಧವುಹುಟ್ಟಿತು. ಆಗ ದೇವದುಂದುಭಿಯಾಯಿತು· ಅದಕ್ಕೆ ಸಾವಿರದೇವತೆಗಳು ಅಧಿಪತಿಗಳಂತೆ ರಾಜನು ಈಶಕ್ತ್ಯಾಯುಧವನ್ನು ಯಾವನು ಎತ್ತಿ ಉಪಯೋಗಿಸುತ್ತಾನೋ ಆತನಿಗೆ ತನ್ನ ಪುತ್ರಿಯಾದ ಜಿತಪದ್ಮೆಯನ್ನು ವಿವಾಹಮಾಡಿಕೊಡುವುದಾಗಿ ಗೊತ್ತುಮಾಡಿ, ಆಗಾಗ್ಗೆ ಸ್ವಯಂವರ ಮಂಟಪವನ್ನು ರಚಿಸಿ, ಕ್ಷತ್ರಿಯರು ಗಳನ್ನು ಆಸಭೆಗೆ ಬರಮಾಡಿಕೊಂಡು ಅವರ ಮುಂದೆ ಈಶಕ್ತ್ಯಾಯುಧವನ್ನು ತೋರಿಸುತ್ತಲಿಧಾನೆ. ಇನ್ನು ಯಾರು ಜಯಪ್ರದರಾಗಲಿಲ್ಲ." ಎಂದುಹೇಳಲು ಶ್ರೀರಾಮನುಕೇಳಿ ಲಕ್ಷ್ಮೀಧರನ ಮುಖವನ್ನು ನೋಡಿದನು. ಆಗಾಗ್ಗೆ ಮಾಸ ಗಟ್ಲೆ ನಡೆಯುವ ಸ್ವಯಂವರ ಮಂಟಪಕ್ಕೆ ಲಕ್ಷ್ಮಣನು ಹೋಗುವುದಕ್ಕೆ ಪ್ರಯತ್ನಪಟ್ಟನು. ಸ್ವಯಂವರ ಕಾಲವು ಒದಗಿತು.

ಆಗ ಜಿತಪದ್ಮೆಯು ಅಲಂಕಾರಭೂಷಿತಳಾಗಿ ಸ್ವಯಂವರ ಮಂಟಪಕ್ಕೆ ಆಗಮಿಸಿದಳು. ಸಖಿಯರು ಅವಳನ್ನೊಡಗೊಂಡು ಸಂತೋಷದಿಂದ ಬರುತ್ತ ಜಿತಪದ್ಮೆಯ ಮುಖವನ್ನು ನೋಡಿ, ಈ ದಿವಸ ನೀನು ವರನನ್ನು ಆರಿಸಲೇ

ಬೇಕು. ಇಲ್ಲದಿದ್ದರೆ ನಾವು ದೇವರಿಗೆ ವಂದಿಸುವುದನ್ನು ವೆಚ್ಚ ಮಾಡಬೇಕಾಗುತ್ತೆಂದು ಹೇಳುತ್ತಿದ್ದರು. ಆಗ ಲಕ್ಷ್ಮಣನು ಸಾಧಾರಣವಾಗಿ ಬ್ರಾಹ್ಮಣ ವೇಷದಿಂದ ಸಭಾಮಂಟಪದಲ್ಲಿ ಅವರು ಕೂಡುವಸ್ಥಳದಲ್ಲಿ ಕೂತುಕೊಂಡನು ರಾಮನು ಆತನ ಪಕ್ಕದಲ್ಲೇ ಕೂತುಕೊಂಡಿದ್ದನು. ಮದನಮೋಹನಪುತ್ಥಳಿಯಂತೆ ಶ್ವೇತಚ್ಛತ್ರಿಯ ನೆರಳಿನಲ್ಲಿ ಚಾಮರಗಳಿಂದ ಎರಡುಕಡೆಗಳಲ್ಲೂ ಸಖಿಯರು ಉಪಚರಿಸುತ್ತಲಿರುವಾಗ ಕಂಚುಕಿಯು ಅಲ್ಲಿ ನೆರದಿದ್ದ ಕ್ಷತ್ರಿಯ ಕುಮಾರರ ಪರಿಚರ್ಯವನ್ನು ಹೇಳುತ್ತಲಿದ್ದಳು. ಕ್ಷತ್ರಿಯಕುಮಾರರಲ್ಲಿ ಅಗ್ರಗಣ್ಯನಾದ ಮತ್ತು ಮನೋಹರ ರೂಪುಳ್ಳ ಗಾಂಧಾರದೇಶದ ರಾಜಕುಮಾರನು ಎದ್ದು ಶಕ್ತ್ಯಾಯುಧದ ಕಡೆಗೆ ಬಂದು ಕೈನೀಡಿ ಎತ್ತುವುದಕ್ಕೆ ಹೋಗಲು, ಎಲ್ಲಾ ಜನಗಳು ಈತನು ಜಯಶೀಲನಾಗಬಹುದೆಂದು ಹೇಳುತ್ತಿರುವಾಗ ಶಕ್ತ್ಯಾಯುಧದಕೆಳಗೆ ಹಸ್ತವನ್ನು ಸಿಕ್ಕಿಸಿಬಿಟ್ಟು ಅದನ್ನು ಎಳೆದುಕೊಳ್ಳುವುದಕ್ಕೂ ಶಕ್ತಿಯಿಲ್ಲದೆನಿಂತು ಶ್ರಮಪಡುತ್ತಲಿರುವರಾಜಪುತ್ರನನ್ನು ನೋಡಿಎಲ್ಲರು ನಕ್ಕರು. ಆಗ ಶ್ರೀರಾಮನು ಲಕ್ಷ್ಮಣನ ಮುಖವನ್ನು ನೋಡಲು ಲಕ್ಷ್ಮಣನು ಅದನ್ನು ಎತ್ತುವುದಕ್ಕೆಹೋಗುತ್ತಿರಲು ಆಗ ಅಲ್ಲಿನೆರದಿದ್ದ ಬ್ರಾಹ್ಮಣರೆಲ್ಲರೂ ಲಕ್ಷ್ಮಣನನ್ನು ಪ್ರೋತ್ಸಾಹಪಡಿಸಿ ರಾಜಪುತ್ರಿಯನ್ನು ಪಡೆಯಬೇಕೆಂದು ಚಪ್ಪಾಳೆಹೊಡೆದರು. ಆಗ ಲಕ್ಷ್ಮಣನು ಶಕ್ತ್ಯಾಯುಧದ ಹತ್ತಿರ ಹೋಗಿ ಅಷ್ಟವಿಧಾರ್ಚನ ದ್ರವ್ಯಗಳಿಂದ ಪೂಜಿಸಿ ಮೂರಾವರ್ತಿ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಶಕ್ತ್ಯಾಯುಧವನ್ನು ಎತ್ತಲು ಪ್ರಯತ್ನಪಟ್ಟಾಗ ಕ್ಷತ್ರಿಯ ಕುಮಾರರು ಇದನ್ನು ನೋಡಿ ಕ್ಷತ್ರಿಯರು ಎತ್ತತಕ್ಕ ಆಯುಧಕ್ಕೆ ಬ್ರಾಹ್ಮಣರು ಅದರ ಗೊಡವೆಗೆಹೋಗುವುದು ಸರಿಯಲ್ಲವೆಂದು ಆರ್ಭಟಿಸಿದರು. ಆಗ ರಾಜನಾದ ಸೂರ್ಯಹಾಸನು "ಬ್ರಾಹ್ಮಣರು ಸ್ವಯಂವರ ಮಂಟಪದಲ್ಲಿ ರಾಜಕನ್ಯೆಗೆ ಅನೇಕಾವರ್ತಿವರಿಸುವದಕ್ಕೆ ಪ್ರಯತ್ನಪಟ್ಟಿದ್ದಾರೆ ಈಗ ಕ್ಷತ್ರಿಯರಲ್ಲಿ ಶಕ್ತ್ಯಾಯುಧವನ್ನೆತ್ತುವ ಸಾಮರ್ಥ್ಯವುಬರಲಿಲ್ಲ. ಬ್ರಾಹ್ಮಣರು ಶಕ್ತ್ಯಾಯುಧವನ್ನು ಎತ್ತುವವಿಷಯದಲ್ಲಿ ಪ್ರಯತ್ನಪಡಬಹುದು" ಎನಲುಬ್ರಾಹ್ಮಣಸಭೆಯಲ್ಲಿ ಕಲಕಲಧ್ವನಿಹೊರಡಲು ಲಕ್ಷ್ಮಣನುಶಕ್ತ್ಯಾಯುಧವನ್ನುಮೇಲಕ್ಕೆತ್ತಿಹಿಡಿದನು ಉಜ್ವಲವಾದ ಶಕ್ತ್ಯಾಯುಧವು ಶಾಂತರೂಪದಿಂದ ಕಾಣುತ್ತಿತ್ತು. ಜಿತಪದ್ಮೆಯು ಲಕ್ಷ್ಮಣನ ಸಮೀಪಕ್ಕೆ ಬಂದು ಪುಷ್ಪಮಾಲಿಕೆಯನ್ನು ಹಾಕಿದಳು. ಲಕ್ಷ್ಮಣನು ಶ್ರೀರಾಮನೊಡನೆ ಸಭೆಯಲ್ಲಿ ನಿಂತು ಪರಮ ಜಿನೇಶ್ವರನಪಾದ ಕಮಲವನ್ನು ಸ್ಮರಿಸುತ್ತಲಿದ್ದನು.

೨೮. ಮುನಿಯುಪಸರ್ಗ ನಿವಾರಣ.

ಎಲೈ ಧರಣೀಪತಿಯಾದ ಶ್ರೇಣಿಕ ಮಹಾರಾಜನೇ! ಮುಂದಿನ ಕಥೆಯನ್ನು ಕೇಳುವನಾಗು. ಆಗ ಬ್ರಾಹ್ಮಣರುಗಳೆಲ್ಲಾ ಎದ್ದು ನಿಂತು "ಎಲೈ ಕ್ಷತ್ರಿಯ ಕುಮಾರರೇ ನೋಡಿ! ನಮ್ಮ ತಪಶ್ಶಕ್ತಿಯಿಂದ ಅಂದರೆ ಷಟ್ಕರ್ಮ ವಿಧಿಯಿಂದಲೂ, ಮತ್ತು ಔಪಾಸಕ ಬಲದಿಂದಲೂ ಉಂಟಾದ ಮಂತ್ರ ಸಹಾಯದಿಂದ ಅಶಕ್ಯವಾದ ಶಕ್ತ್ಯಾಯುಧವು ನಮ್ಮ ಕುಮಾರನಿಂದ ಎತ್ತಲ್ಪಟ್ಟಿತು" ಎಂದು ಅಟ್ಟಹಾಸಮಾಡಿ ಕುಣಿದಾಡುತ್ತಿರುವಾಗ ದೇವದುಂದುಭಿಯಾಗಿ "ಲಕ್ಷ್ಮಣ ಜಯತು" ಎಂದು ಆಕಾಶದಲ್ಲಿ ದೇವತೆಗಳು ಹೊಗಳುತ್ತಿರಲು ಕ್ಷತ್ರಿಯರು ನೋಡಿ "ಆಹಾ! ಇವರು ರಾಮಲಕ್ಷ್ಮಣರು. ಇವಳು ಜಾನಕಿಯು. ಇವರು ದ್ವಿಜವೇಷದಿಂದ ಬಂದಿರುವರು" ಎಂದು ರಾಮಲಕ್ಷ್ಮಣರಿಗೆ ಸನ್ಮಾನಮಾಡಿ ಅಂಜಲೀಬದ್ಧರಾಗಿ ನಿಂತುಕೊಂಡರು. ಆ ಸಮಯದಲ್ಲಿ ಜಿತಪದ್ಮೆಯು ಲಕ್ಷ್ಮಣನನ್ನು ನೋಡಿ ಲಜ್ಜಿತಳಾಗಿ ಮನದಲ್ಲಿ ಸಂತೋಷಿಸಿ ಲಕ್ಷ್ಮಣನಮೇಲೆ ಪುಷ್ಪಗಳನ್ನೆರಚಿದಳು. ಸೂರ್ಯಹಾಸನು ಇವರು ರಾಮಲಕ್ಷ್ಮಣರೆಂದು ತಿಳಿದು ಸಂತೋಷಪಟ್ಟು, ಇಂಥಾವರನ್ನು ಜಿತಪದ್ಮೆಯು ಆರಿಸಿದ್ದು ಪುಣ್ಯಕರವಾದದ್ದೆಂದು ನೆನೆಸಿ, ರಾಘವನ ಸಮೀಪಕ್ಕೆ ಬಂದು ನಮಸ್ಕರಿಸಿ, ರಾಮನನ್ನೂ ಲಕ್ಷ್ಮಣನನ್ನೂ ನಾರೀಮಣಿಯಾದ ಜಾನಕಿಯನ್ನೂ ಸಹ ಅರಮನೆಗೆ ಕರೆದುಕೊಂಡು ಹೋಗಿ, ಅತ್ಯಾದರದಿಂದ ಸನ್ಮಾನಿಸಿದನು. ಅನಂತರ ಶುಭಲಗ್ನದಲ್ಲಿ ಅಗ್ನಿಸಾಕ್ಷಿಕವಾಗಿ ತನ್ನ ಪುತ್ರಿಯಾದ ಜಿತಪದ್ಮೆಯನ್ನು ಲಕ್ಷ್ಮಣನಿಗೆ ಕೊಟ್ಟು, ಪಾಣಿಗ್ರಹಣ ಮಹೋತ್ಸವವನ್ನು ಅತಿವಿಜೃಂಭಣೆಯಿಂದ ನಡೆಸಿದನು. ಶ್ರೀರಾಮನು ಜಾನಕಿಯ ಮುಖಾವಲೋಕನದಿಂದಲೂ ಲಕ್ಷ್ಮಣನು ಜಿತಪದ್ಮೆಯ ಮುಖಾವಲೋಕನದಿಂದಲೂ ಹಗಲಿರಳುಸಂತೋಷದಿಂದ ಸ್ವಲ್ಪಕಾಲ ಅಲ್ಲೇ ಇದ್ದು ಸೂರ್ಯಹಾಸನ ಉಪಚಾರಸತ್ಕಾರಗಳನ್ನು ಹೊಂದಿ ಅನಂತರ ರಾಘವನು ಮುಂದೆ ಹೊರಡಬೇಕೆಂಬ ನಿಯಮವನ್ನು ರಾಜನಾದ ಸೂರ್ಯಹಾಸನಿಗೆ ತಿಳಿಸಿ ಹೊರಡಲುದ್ಯುಕ್ತನಾದನು.

ಮುಂದೆ ಶ್ರೀರಾಮನು ಹಿಂದುಗಡೆ ಜಾನಕಿಯು ಅವಳ ಹಿಂದುಗಡೆ ಲಕ್ಷ್ಮಣನುಸಹ ನಡೆದುಬರುತ್ತಿರುವಾಗ, ಸೀತಾದೇವಿಯು ನಡೆದು ಬಳಲಿಕೆಯನ್ನು ಹೊಂದಿರುವದನ್ನು ಶ್ರೀರಾಮನು ನೋಡಿ, ಒಂದು ಊರಿನ ಸಮೀಪದಲ್ಲಿರತಕ್ಕ ಒಂದು ವಟವೃಕ್ಷದ ನೆರಳಿನಲ್ಲಿ ವಿಶ್ರಮಿಸಲು ಕುಳಿತುಕೊಳ್ಳಲು,

ಆಗ ಆ ಊರಿನಲ್ಲಿರತಕ್ಕ ಜನಗಳು ಒಬ್ಬರ ಹಿಂದೆ ಒಬ್ಬರಾಗಿ ಮಕ್ಕಳುಮರಿಗಳನ್ನೂ, ಪಾತ್ರೆಪದಾರ್ಥಗಳನ್ನೂ, ಬಟ್ಟೆಬರೆಗಳನ್ನೂ ತೆಗೆದುಕೊಂಡು ತಾನು ಮುಂದೆ ನಾನು ಮುಂದೆ ಎಂಬುದಾಗಿ ಓಡುತ್ತಿರುವುದನ್ನು ಶ್ರೀರಾಮನು ನೋಡಿ, ಲಕ್ಷ್ಮಣನನ್ನುಕುರಿತು "ಈರೀತಿ ಜನರೆಲ್ಲರೂ ಓಡುವುದಕ್ಕೆ ಕಾರಣ ವೇನು? ಇದನ್ನು ವಿಚಾರಿಸು" ಎನಲಾಗಿ, ಲಕ್ಷ್ಮಣನು ಆಪ್ರಯಾಣೀಕರನ್ನು "ಏಕೆ ಹೀಗೆ ಓಡುತ್ತೀರಿ?" ಎಂದು ಕೇಳಲಾಗ ಇವನ ಮಾತಿಗೆ ಉತ್ತರವನ್ನು ಹೇಳದೆ ಎಷ್ಟೋ ಜನರು ಓಡಿಹೋಗುತ್ತಿದ್ದರು. ಹಾಗೂ ಆತನು ಕೇಳುತ್ತಲೇ ಇರುವುದನ್ನು ಹೋಗುತ್ತಲಿದ್ದ ಒಬ್ಬ ಮುದುಕನು ನೋಡಿ ನಿಂತುಕೊಂಡು "ಎಲೈ ಸ್ವಾಮಿಯೇ! ನಮ್ಮ ಊರಿನ ಹತ್ತಿರವಿರುವ ಬೆಟ್ಟದಮೇಲೆ ಏನೋ ಭಯಂಕರವಾದ ಶಬ್ದಗಳಾಗುತ್ತಲೆ ಇದನ್ನು ನೋಡಬೇಕೆಂತ ಹೋಗಿದ್ದವರುಭಯಪಟ್ಟು ಹಿಂದಕ್ಕೆ ಓಡಿಬಂದು, ಎಲ್ಲರನ್ನೂ ಕೂಗಿ ಊರಲ್ಲಿದ್ದರೆ ನಾವು ಉಳಿಯುವಹಾಗಿಲ್ಲ. ಆದ್ದರಿಂದ ಸಕಲರೂ ಊರನ್ನು ಬಿಟ್ಟು ಜಾಗ್ರತೆಯಾಗಿ ಹೊರಡಬೇಕೆಂತ ಹೊರಡಿಸುತ್ತಲಿದಾರೆ. ಆದ್ದರಿಂದ ಜನರುಭೀತರಾಗಿ ಓಡುತ್ತಲಿದ್ದಾರೆ. ನಿಮಗೆ ಉತ್ತರ ಹೇಳಲು ನಿಂತುಕೊಂಡರೆ, ಏನು ಆಪತ್ತು ಸಂಭವಿಸೀತೋ ಎಂಬ ಭಯದಿಂದ ಓಡುತ್ತಲಿಧ್ಧಾರೆ" ಎಂದು ಹೇಳಿದನು.

ಶ್ರೀರಾಮನು ಆ ಬೆಟ್ಟಕ್ಕೆ ಹೋಗಿ ನೋಡೋಣವೆಂದು ಜಾನಕಿಸಹಿತ ಲಕ್ಷ್ಮಣನನ್ನು ಕೂಡಿಕೊಂಡು ಬೆಟ್ಟವನ್ನು ಹತ್ತುತ್ತಿರಲು ಬರಬರುತ್ತಾ ಆಗುತ್ತಲಿದ್ದ ದೊಡ್ಡ ಶಬ್ದಗಳು, ಇವರು ಬೆಟ್ಟವನ್ನು ಏರುತ್ತಾ ಹೋದ ಹಾಗೆಲ್ಲ ಕಮ್ಮಿಯಾಗುತ್ತ ಬಂದಿತು. ಮುಂದೆ ಹತ್ತುತ್ತಹೋಗಲು ಗಾಳಿ ಮಳೆಮಿಂಚು ಗುಡುಗುಸಿಡಿಲುಗಳು ಆಗುತ್ತಿರುವುದನ್ನು ಶ್ರೀರಾಮನುನೋಡಿ ಸ್ವಲ್ಪಪ್ರದೇಶದಲ್ಲಿ ಇದಾಗುವುದಕ್ಕೆ ಕಾರಣವೇನೆಂದು ಫರ್ವತದಮೇಲ್ಭಾಗಕ್ಕೆ ಬರುತ್ತಿರಲು ಸ್ವಲ್ಪಸ್ವಲ್ಪವಾಗಿ ಮಳೆಗಾಳಿಗಳು ಕಮ್ಮಿಯಾಗುವುದಕ್ಕೆ ಆರಂಭವಾಯಿತು. ಕೆಲವುದೇವತೆಗಳು ಮಳೆಗಾಳಿರೂಪವಾಗಿ ಆರ್ಭಟಿಸುತ್ತಲಿದ್ದು ರಾಮಲಕ್ಷ್ಮಣ ಸೀತೆಯರನ್ನು ನೋಡಿ ಹೆದರಿ ತಮ್ಮಅಧಿದೇವತೆಯ ಹತ್ತಿರಹೋಗಿ "ಇಬ್ಬರು ಯಕ್ಷದೇವತೆಗಳು ಒಂದು ಯಕ್ಷಿದೇವತೆಯೂ ಸಹ ಬೆಟ್ಟದ ಮೇಲಕ್ಕೆ ಹತ್ತಿ ಬರುತ್ತಲಿದ್ದಾರೆ. ಆದ್ದರಿಂದ ವ್ಯಂತರರಾದ ನಾವು ಓಡಿಬಂದಿದ್ದೇವೆ" ಎಂದು ಹೇಳುತ್ತಲಿದ್ದರು. ಇತ್ತ ರಾಮಲಕ್ಷ್ಮಣರು ಬೆಟ್ಟದ ಮೇಲೆ ಬಂದುನೋಡಲಾಗಿ, ಕೆಂಡಗಳು ಉದರಿ ಕಲ್ಲುಗಳೆಲ್ಲಾ ಕಾದು ಸಮಾಪವರ್ತಿಯಾಗುತ್ತಾ

ಉರಿಶಕೆ ಹೆಚ್ಚಾಗಿ ನಿಲ್ಲಲೂಕೂಡ ಆಸ್ಪದವಿಲ್ಲದೆ ಇದ್ದಿತು. ಆಭಯೋತ್ಪಾತ ಸ್ಥಳದಲ್ಲಿ ಮಹಾಮುನೀಶ್ವರರೊಬ್ಬರು ಶಾಂತರಾಗಿ ತಪೋಭಾವನೆಯಲ್ಲಿದ್ದರು. ಅವರಹೆಸರು ದೇಶಭೂಷಣರೆಂದು ತಿಳಿಯಬಂತು. ಅವರು ಈ ಉಪಸರ್ಗಕ್ಕೆ ಅಂಜದೆ ಧ್ಯಾನಕ್ಕೆ ಹಿಂಜರಿಯದೆ ಶುಕ್ಲಧ್ಯಾನಾರೂಢರಾಗಿರಲು ಕೈವಲ್ಯೋತ್ಪತ್ತಿಯಾಯಿತು. ಕೇವಲಜ್ಞಾನಪೂಜೆಗೋಸ್ಕರ ಇಂದ್ರನುತನ್ನಪರಿವಾರದೊಡನೆ ಬರಲಾಗ, ಗುರುಗಳಿಗೆ ಘೋರೋಪಸರ್ಗ ಮಾಡುತ್ತಿದ್ದ ಕ್ಷುಲ್ಲಕದೇವತೆಗಳು ಹೆದರಿ ಓಡಿಹೋದರು. ಕೇವಲಜ್ಞಾನಪೂಜೆಯು ಮಾಡಲ್ಪಟ್ಟಿತು. ಇಂದ್ರನ ಅಪ್ಪಣೆಪ್ರಕಾರ ಕುಬೇರನಿಂದ ಗಂಧಕುಟಿಯು ಮಾಡಿಸಲ್ಪಟ್ಟಿತು. ಗಂಧಕುಟಿ ಮಧ್ಯದಲ್ಲಿ ಈ ಮಹಾಮುನಿಗಳು ಧ್ಯಾನಾರೂಢರಾಗಿರಲು ಶ್ರೀರಾಮನು ಜಾನಕಿ ಮತ್ತು ಲಕ್ಷ್ಮಣನೊಡನೆ ಮಹಾಮುನಿಗಳನ್ನು ಮೂರಾವರ್ತಿ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಧರ್ಮಶ್ರವಣವನ್ನು ಕೇಳಿ ಪುನಃ ನಮಸ್ಕರಿಸಿ ರಾಘವನು "ಸ್ವಾಮಿ ! ತಮಗೆ ಇಷ್ಟೊಂದು ಉಪಸರ್ಗವನ್ನು ಈ ದುಷ್ಟ ದೇವತೆಗಳು ಮಾಡಲು ಕಾರಣವೇನು ?" ಎಂದು ಬೆಸಗೊಳ್ಳಲು ಅವರು ಹೇಳಲು ಪ್ರಾರಂಭಿಸಿದರು:— " ಈ ಭರತಕ್ಷೇತ್ರದಲ್ಲೇ ಪದ್ಮಪುರವೆಂಬ ಪಟ್ಟಣವಿಧೆ. ಅದಕ್ಕೆ ವಿಜಯ ಅರಸನೆಂಬ ದೊರೆಯಿದ್ದನು. ಆತನಿಗೆ ಅನುಚರನಾದ ಅಮೃತಸ್ವರನೆಂಬುವನಿಗೆ ಉಪಯೋಗೆ ಎಂಬ ಕಾಂತೆಯಾದಳು. ಅವರಿಬ್ಬರಿಗೆ ಉದಿತ, ದೈತ, ಎಂಬ ಇಬ್ಬರು ಮಕ್ಕಳಾದರು. ಅದೇ ಪಟ್ಟಣದಲ್ಲಿ ವಸುಭೂತಿ ಎಂಬೊಬ್ಬ ಭೂಸುರನಿದ್ದನು. ಆತನಲ್ಲಿ ಉಪಯೋಗೆಯು ಪ್ರೀತಿ ಇಟ್ಟು ಆತನೊಡಗೊಂಡಳು- ತಾವಿಬ್ಬರೂ ಸ್ವೇಚ್ಛೆಯಾಗಿರಲು ಗಂಡನಿಂದ ಅಡ್ಡಿಬರುತ್ತೆಂದು ತಿಳಿದು ಆತನನ್ನು ಮೋಸದಿಂದ ಕೊಂದುಬಿಟ್ಟಳು. ಅನಂತರ ಮಕ್ಕಳುಗಳು ವಿರೋಧಿಸುತ್ತಾರೆಂದು ಅವರನ್ನು ತೀರಿಸಲು ಯೋಚಿಸುತ್ತಿರುವುದನ್ನು ಈಕೆಯ ಸೊಸೆಯಾದ ಉದಿತನ ಪತ್ನಿಯಾದ ಗಂಧಿಲೆಎಂಬುವಳು ತನ್ನ ಗಂಡನಿಗೆ ಇವಳ ಸಂಚನ್ನು ತಿಳಿಸಿದಳು. ಆಗ ಅಣ್ಣತಮ್ಮಂದರಿಬ್ಬರೂ ಸಹ ಈ ವಿಷಯವನ್ನು ತಿಳಿದು ತಾಯಿಯ ನಡತೆಯಲ್ಲಿ ಅಸಹ್ಯ ಹುಟ್ಟಿ ವಸುಭೂತಿಯನ್ನು ಕೊಲೆ ಮಾಡಿದರು. ಅನಂತರ ಉದಿತ, ದೈತ, ಇಬ್ಬರೂ ಸಂಸಾರದಲ್ಲಿ ವಿರಕ್ತಿಯನ್ನು ಹೊಂದಿದರು. ಆ ಪಟ್ಟಣದ ಉಪವನಕ್ಕೆ ಮುನಿಸೂವ್ರತರೆಂಬ ಮಹಾಮುನಿಗಳು ಶಿಷ್ಯಕೋಟಿಯೊಡನೆ ದಯ ಮಾಡಿಸಿದರು. ಈ ವರ್ತಮಾನವನ್ನು ಆ ಪಟ್ಟಣದ ದೊರೆಯಾದ ವಿಜಯ

ರಥನು ವನಪಾಲಕರಿಂದ ತಿಳಿದು ಆನಂದಭೇರಿಯನ್ನು ಹೊಡಿಸಿ ಪರಿಜನಪುರ ಜನ ಅಂತಃಪುರದ ಜನರೊಡನೆ ಕೂಡಿಕೊಂಡು ಮಹಾಮುನೀಶ್ವರರ ಸನ್ನಿಧಿಗೆ ಬಂದು ಮೂರಾವರ್ತಿ ಬಲಗೊಂಡು ಗಂಧ ಪುಷ್ಪಾದಿಗಳಿಂದ ಅರ್ಚಿಸಿ ನಿರ್ಮಲ ಚಿತ್ತದಿಂದ ಧರ್ಮಶ್ರವಣವನ್ನು ಕೇಳಿದನು. ಅನಂತರ ಈ ಉದಿತ ದೈತರೆಂಬ ಸಹೋದರರು ನಮಸ್ಕರಿಸಿ ಧರ್ಮವನ್ನು ಕೇಳಿ ವೈರಾಗ್ಯವನ್ನು ಹೊಂದಿ ಆ ಮಹಾ ಮುನಿಗಳಲ್ಲೇ ದೀಕ್ಷೆ ತೆಗೆದುಕ್ಕೊಂಡು ಉಗ್ರೋಗ್ರವಾಗಿ ತಪಸ್ಸನ್ನು ಮಾಡುತ್ತಾ, ತೀರ್ಥವಂದನಾರ್ಥವಾಗಿ ಸಮ್ಮೇಧಶೈಲಕ್ಕೆ ಹೋಗುತ್ತಿರುವ ಸಮಯದಲ್ಲಿ ವಸುಭೂತಿಯಾಗಿದ್ದವನು ಜಂಗಾಲನೆಂಬ ಒಬ್ಬ ಬೇಡನಾಗಿ ಆ ಕಾಡಿನಲ್ಲಿ ವಾಸಿಸುತ್ತಿದ್ದನು. ಮುನಿಗಳು ಆಕಾಡುಮಾರ್ಗವಾಗಿ ಬರುವಾಗ ಜಂಗಾಲನು ನೋಡಿ ಇವರನ್ನು ಕೊಲ್ಲುವುದಕ್ಕೆ ಪ್ರಯತ್ನಪಟ್ಟನು. ಉಪ ಸರ್ಗ ಪರಿಹಾರವಾಗುವವರೆಗೆ ಆಹಾರಾದಿಗಳನ್ನು ನಿವೃತ್ತಿಮಾಡಿ ಈ ಮುನಿಗಳಿರುತ್ತಿರಲು ಆ ಕಿರಾತನ ದೊರೆಯು ಆ ದುರಾತ್ಮನನ್ನು ಧಿಕ್ಕರಿಸಿದನು" ಎಂದು ಹೇಳುತ್ತಿರುವುದನ್ನು ಕೇಳಿ ರಾಘವನು ಆ ಕಿರಾತನಾಯಕನು ಅವನನ್ನು ಧಿಕ್ಕರಿಸಲು ಕಾರಣವೇನೆಂದು ಆ ದಿವ್ಯಯೋಗಿಗಳನ್ನು ಕೇಳಲಾಗ ಅವರು ಹೇಳಿದ್ದೇನೆಂದರೆ—"ಯಕ್ಷನೆಂಬ ಗ್ರಾಮದಲ್ಲಿ ವಾಸಿಸುತ್ತಿದ್ದ ಸುರೂಪ, ಕರುಷ ಎಂಬ ಅಣ್ಣತಮ್ಮಂದರಿಬ್ಬರು ಇದ್ದರು. ಅವರಲ್ಲೊಬ್ಬನು ಬೇಡನೊಂದು ಹಕ್ಕಿಯನ್ನು ಹಿಡಿದು ತಂದದ್ದನ್ನು ನೋಡಿ ಕಾರುಣ್ಯದಿಂದ ಅದಕ್ಕೆಬೆಲೆಯನ್ನು ಕೊಟ್ಟು ಆ ಹಕ್ಕಿಯನ್ನು ಬಿಡಿಸಿಬಿಟ್ಟನು. ಆಗ ಆ ಪಕ್ಷಿಯು ಕರ್ಮೋಪಶಮನಕ್ಕೆ ಬಂದುದರಿಂದ ಅದು ಈಗ ಬೇಡರಿಗೆ ದೊರೆಯಾಗಿ ಹುಟ್ಟಿತು. ಈ ಸುರೂಪ, ಕರುಷರೆಂಬುವರೇ ಕಾಲಾಂತರದಲ್ಲಿ ಈ ಉದಿತ ದೈತರೆಂಬುವರಾಗಿ ಹುಟ್ಟಿದರು- ಆ ಬೇಡನಿಗೆ ಭವಾಂತರದ ಉಪಕಾರದ ಪ್ರೀತಿಹುಟ್ಟಿ ಮುನಿಗಳನ್ನು ಕೊಲ್ಲದಂತೆ ಹೇಳಿದನು. ಇತ್ತ ಒಳ್ಳೆ ಚಾರಿತ್ರದಿಂದ ಕೂಡಿದ ಉದಿತನೂ ಮತ್ತು ದೈತನೂ ಸಹ ದೇವಗತಿಯನ್ನು ಪಡೆದರು. ಆ ಬೇಡನಾಗಿದ್ದವನು ದುರ್ಗತಿಯಲ್ಲಿ ತೊಳಲುತ್ತಾ, ಕೊನೆಗೆ ಮನುಷ್ಯಗತಿಗೆ ಬಂದು ತಾಪಸನಾಗಿ ಜ್ಯೋತಿಷ್ಕ ಲೋಕದಲ್ಲಿ ಅಗ್ನಿಕೇತು ಎಂಬ ದೇವನಾದನು.

ಆಉದಿತಅನುದಯಿತರಾದ ತಪಸ್ವಿಗಳು ಪರಿಶುದ್ಧವಾದ ಆಚಾರದಿಂದ ಕೂಡಿ ಶುಭಧ್ಯಾನದಿಂದ ಶರೀರಭಾರವನ್ನು ಬಿಟ್ಟು ಸ್ವರ್ಗಗಾಮಿಗಳಾದರು. ಭೂಲೋಕದಲ್ಲಿ ಶ್ರೇಷ್ಠವಾದ ಭರತಕ್ಷೇತ್ರದಾರ್ಯಾಖಂಡದ ಅರಿಷ್ಟನಾಮ

ನಗರಿಯಲ್ಲಿ ಪ್ರಿಯದತ್ತನೆಂಬ ರಾಜನಿದ್ದನು. ಆತನಿಗೆ ಪದ್ಮಾಕ್ಷಿ ಮತ್ತು ಕನಕಾಭೆ ಎಂಬ ಇಬ್ಬರು ಸತಿಯರಾದರು. ಮೊದಲನೆ ಪದ್ಮಾಕ್ಷಿಗೆ ಆ ಇಬ್ಬರು ಸ್ವರ್ಗವಾಸಿಗಳು ರತ್ನರಥ ಮತ್ತು ಚಿತ್ರರಥರೆಂಬರಿಬ್ಬರು ಮಕ್ಕಳಾದರು. ಎರಡನೆ ಕನಕಾಭೆಗೆ ಬೇಡನಾಗಿದ್ದು ಜ್ಯೋತಿಷ್ಕೇತುವಾಗಿದ್ದವನು ಅರುಂದನೆಂಬ ಮಗನಾಗಿ ಹುಟ್ಟಿದನು- ಇವರುಗಳ ತಂದೆಯಾದ ಪ್ರಿಯದತ್ತರಾಜನು ವೈರಾಗ್ಯಹೊಂದಿ ತನ್ನ ಮೂರು ಮಂದಿ ಮಕ್ಕಳಿಗೂ ರಾಜ್ಯವನ್ನು ಹಂಚಿಕೊಟ್ಟು ತಪಸ್ಸಿಗೆ ಹೊರಟುಹೋದನು. ಶ್ರೀಪುರದರಾಜನು ತನ್ನ ಮಗಳಾದ ಶ್ರೀಪ್ರಭೆಯೆಂಬವಳನ್ನು ಈ ರಾಜಪುತ್ರನಾದ ರತ್ನರಥನಿಗೆ ಕೊಡಬೇಕೆಂದು ಯೋಚಿಸುತ್ತಿರುವಾಗ ಈ ಬಲತಾಯಿ ಮಗನಾದ ಅರುಂದನು ತನಗೆ ಆ ಸ್ತ್ರೀಯನ್ನು ಕೊಡಬೇಕೆಂದು ಶ್ರೀಪುರದರಾಜನಿಗೆ ಹೇಳಿ ಕಳುಹಿಸಲಾಗ ಆತನು ಮಗಳನ್ನು ಕೊಡಲಾಗುವುದಿಲ್ಲವೆಂದು ತಿರಸ್ಕರಿಸಿ ಹೇಳಿಕಳುಹಿಸಲಾಗ ಅರುಂದನು ಆ ದೊರೆಯ ಮೇಲೆ ಯುದ್ಧಕ್ಕೆ ಹೋಗಿ ಸೋತು ಹಿಂತಿರುಗಿ ವೈರಾಗ್ಯದಿಂದ ಮಿಥ್ಯಾ ತಪಸ್ವಿಯಾದನು. ರತ್ನರಥ ಮತ್ತು ಚಿತ್ರರಥರು ರಾಜ್ಯಭಾರಮಾಡಿ ವೃದ್ಧಾಪ್ಯದಲ್ಲಿ ದೀಕ್ಷೆಯನ್ನು ಹೊಂದಿ ಶುಭಧ್ಯಾನದಿಂದ ಮುಡಪಿ ಸ್ವರ್ಗಕ್ಕೆ ಹೋಗಿ ಬಹಳಕಾಲ ಸುಖವಾಗಿದ್ದು ಅಲ್ಲಿಂದ ಜಾರಿ ಸಿದ್ಧಾರ್ಥನಗರದ ಕ್ಷೇಮಂಕರ ರಾಜನಿಗೆ ಪಟ್ಟಸ್ತ್ರೀಯಾದ ವಿಮಲಾದೇವಿ ಜಠರದಲ್ಲಿ ದೇಶಭೂಷಣ, ಕುಲಭೂಷಣರೆಂಬ ಮಕ್ಕಳಾದರು. ಅರುಂದನು ಅಲ್ಲಲ್ಲಿ ಅಲೆಯುತ್ತಾ ಕೌಮುದಿಪುರಕ್ಕೆಬಂದು ರಾಜನಿಂದ ಪೂಜಿತನಾಗಿ ರಾಣಿವಾಸದವರಿಂದ ಸನ್ಮಾನಹೊಂದಬೇಕೆಂದು ಪ್ರಯತ್ನ ಮಾಡುತ್ತಿರಲಾಗ ರಾಜನು ಹೆಂಡತಿಯನ್ನುಕರೆದು, ಆಮಿಥ್ಯಾತಪಸ್ವಿಗೆ ನಮಸ್ಕಾರ ಮಾಡೆಂದು ಹೇಳಲಾಗ ರಾಣಿಯು ತಾನೇಅವನಿಂದ ನಮಸ್ಕರಿಸಿಕ್ಕೊಳ್ಳುವುದಾಗಿ ಹೇಳಿ, ತನ್ನ ಪುತ್ರಿಗೆ ಕೆಲವು ಹೇಳ್ವಿಕೆಯನ್ನು ಹೇಳಲು ಅವಳು ಅರುಂದನಿರುವ ಸ್ಥಳಕ್ಕೆ ಹೋಗಿ ಸುಳಿದಾಡುತ್ತಿರಲು ಅರುಂದನು ಈಕೆಯನ್ನು ನೋಡಿ ವ್ಯಾಮೋಹಿತನಾಗಿ ಆರಾಜಪುತ್ರಿಯನ್ನು ಬೇಡಿಕ್ಕೊಳ್ಳಲಾಗ, ರಾಜಪುತ್ರಿಯು ನಮ್ಮ ತಂದೆತಾಯಿಗಳ ಹತ್ತಿರ ಹೋಗಿ ಬೇಡಿಕೋಯೆಂದು ಹೇಳಲಾಗಿ ಅರುಂದನು ಅರಮನೆಗೆ ಬಂದು ರಾಜದಂಪತಿಗಳಿಗೆ ನಮಸ್ಕರಿಸಿ ಕನ್ಯಾಮಣಿಯನ್ನು ಬೇಡಿಕೊಳ್ಳಲಾಗ ರಾಜನು ಅಲ್ಲಿಂದ ಹೊರಡಿಸಿ ಬಿಟ್ಟನು. ಅರುಂದನು ಹಾಗೇನೆ ಅಲೆದು ಜೀವಿತಾಂತ್ಯದಲ್ಲಿ ಜೋತಿಷ್ಕ ಲೋಕದಲ್ಲಿ ಅಗ್ನಿಕೇತು ನಾಮಕನಾದ ದೇವನಾಗಿ

ಹುಟ್ಟಿದನು. ಈ ಮೂರು ಜನರ ತಂದೆಯಾದ ಕ್ಷೇಮಂಕರನು ಜೀವಿತಾಂತ್ಯ ದಲ್ಲಿ ಗರುಡದೇವತೆಯಾಗಿ ಹುಟ್ಟಿದನು. ಅನಂತೇಶ್ವರ ಕೇವಲಿಗಳ ಪೂಜೆ ಗಾಗಿ ದೇವೇಂದ್ರನು ಚತುರ್ನಿಕಾಯಾಮರರೊಡನೆ ಕೂಡಿ ಬಂದು ಕೇವಲ ಜ್ಞಾನಪೂಜೆಯಾದನಂತರ ಮಹಾಮುನಿಗೆ ಇಂದ್ರನು ನಮಸ್ಕರಿಸಿ ಮುನಿಸೂ ವ್ರತಾಂತ್ಯದಲ್ಲಿ ಯಾರಿಗೆ ಮುಕ್ತಿಯಾಗುತ್ತೆಂತ ಕೇಳಲು ಮುನೀಶ್ವರರು ದೇಶ ಭೂಷಣ ಕುಲಭೂಷಣರಿಗೆ ಮುಕ್ತಿಯಾಗುತ್ತೆಂತ ಹೇಳಿದ್ದನ್ನು ಅಗ್ನಿಕೇತುವು ಗರುಡದೇವತೆಯುಸಹ ಕೇಳಿದರು. ಅಗ್ನಿಕೇತುವಿಗೆ ಈ ಹೆಸರುಗಳನ್ನು ಕೇಳು ತ್ತಲೇ ತನ್ನ ದೇಹಕ್ಕೆ ಶಲಾಕೆಯಿಂದ ಚುಚ್ಚಿದಂತೆ ಬಹಳ ರೇಗಿಕೊಂಡನು. ಅಲ್ಲಿಂದ ದೇಶಭೂಷಣ ಕುಲಭೂಷಣರು ಎಲ್ಲಿದ್ದಾರೆಂದು ಹುಡುಕಿಕೊಂಡು ಬರುವಾಗ–ಈಮಹಾಮುನಿಗಳಿದ್ದ ಪರ್ವತದ ಹತ್ತಿರ ವಿಮಾನವು ಚಲಿಸದೇ ನಿಂತಿತು. ಅಗ್ನಿಕೇತುವಿಗೆ ಮತ್ತೂ ಕೋಪವುಹೆಚ್ಚಾಯಿತು. ಪರ್ವತದಮೇಲೆ ತಪಸ್ಸಿನಲ್ಲಿನಿಂತುಕೊಂಡಿದ್ದ ದೇಶಭೂಷಣ ಕುಲಭೂಷಣರನ್ನು ನೋಡಿ ಅತ್ಯು ತ್ಕಟವಾದ ಕೋಪದಿಂದ ತನ್ನ ಶರೀರವನ್ನು ತಾನೇ ಮರೆತನು. ಅನಂತರ ಈ ಅಗ್ನಿಕೇತುವು ತನ್ನ ಪರಿವಾರದವರನ್ನು ಕರೆದು "ಯತಿಗಳನ್ನು ನಾನಾ ಹಿಂಸೆ ಮಾಡಿ ತೀರಿಸಬಿಡಬೇಕು. ಆದುದರಿಂದ ನಿಮ್ಮಗಳಲ್ಲಿ ಕೆಲವರು ಚೇಳಿನರೂಪಿ ನಿಂದಲೂ, ಹಾವಿನರೂಪಿನಿಂದಲೂ, ಕಡಜದ ರೂಪಿನಿಂದಲೂ, ಜೇನಿನರೂಪಿ ನಿಂದಲೂ ಕೂಡಿಕೊಂಡು ಇವರಿಗೆಹಿಂಸೆಮಾಡಬೇಕು- ಮತ್ತೆ ಕೆಲವರು ಸಿಂಹ ವ್ಯಾಘ್ರ ಕರಡಿ ಮೊದಲಾದ ರೂಪಗಳಿಂದ ಕೂಡಿ ಭಯೋತ್ಪಾತದಿಂದ ಹೆದ ರಿಸಿ ಹಿಂಸಿಸಬೇಕು. ಮತ್ತೆ ಕೆಲವರು ಗುಂಡು ಕಲ್ಲು ಮುಳ್ಳುಗಳನ್ನು ತಂದು ಅವರ ಮೇಲೆ ಎಸೆದು ಹಿಂಸಿಸಬೇಕು. ಕೆಲವರು ಮೇಘ ರೂಪಾಗಿ ದೊಡ್ಡ ಧಾರೆಗಳ ಪೂರ್ವಕ ವರ್ಷಿಸುತ್ತ ಮಿಂಚು ಗುಡುಗು ಸಿಡಲು ರೂಪಿನಿಂದ ಈ ಇಬ್ಬರನ್ನೂ ಕೊಂದುಬಿಡಬೇಕು" ಎಂದು ಹೇಳಲಾಗಿ ಈ ಭಯಂಕರವಾದ ಆಕಾರದಿಂದ ಹಿಂಸೆಗಳನ್ನು ಯತಿಗಳಮೇಲೆ ಮಾಡಲುಪಕ್ರಮಿಸಿದವು- ಮಹಾ ಮುನೀಶ್ವರರಾದ ದೇಶಭೂಷಣಕುಲಭೂಷಣರು ದೇಹದಲ್ಲಿ ನಿರ್ಮಮತ್ವವನ್ನು ಮಾಡಿ ಜ್ಞಾನಾರೂಢರಾದರು. ಅವರು ಪಾಲಿಸುವ ಅಹಿಂಸಾಧರ್ಮದ ಮಹಾ ತ್ಮೆಯಿಂದ ಯತಿಗಳ ಶರೀರಕ್ಕೆ ಹತ್ತಿರವಾಗಿ ಹೋದಾಗ ಹಿಂಸೆಮಾಡುವುದಕ್ಕೆ ಬಂದಿದ್ದ ಪ್ರಾಣಿಗಳಿಗೆ ಕ್ರೋಧಭಾವವು ತೊಲಗಿ ಶಾಂತಭಾವವು ಉಂಟಾಗು ಗುತ್ತಿತ್ತು. ಮತ್ತು ಅವರ ತಪಃಪ್ರಭಾವದಿಂದ ಅವರ ಮೇಲೆ ಎಸೆದ ವಸ್ತು

ಗಳೆಲ್ಲವು ಅವರ ಶರೀರವನ್ನು ಬಿಟ್ಟು ಪಾರಾಗುತ್ತಿದ್ದವು- ನೋಡಿದವರಿಗೆಮಹಾ ಘೋರೋಪಸರ್ಗವೆಂದು ಕಂಡು ತಿಳಿದು ಬಂದಾಗ್ಯೂ ಯತಿಗಳಿಗೆ ಈ ಬಾಧೆಯು ದೇಹಕ್ಕೆ ತಟ್ಟಿ ತಪಸ್ಸಿಗೆ ನಿಲುಗಡೆ ಮಾಡಲು ಸಮರ್ಥವಾಗಲಿಲ್ಲ. ಯತಿಗಳು ತಪೋನಿಷ್ಠರಾಗಿ ಶುಕ್ಲಧ್ಯಾನವನ್ನು ಹೊಂದಲು ಕೈವಲ್ಯೋತ್ಪತ್ತಿಯುಂಟಾಯಿತು. ನಮ್ಮ ತಪೋವಿಘ್ನಕ್ಕೆ ಈ ಜನ್ಮಾಂತರವೈರವೇ ಕಾರಣವಾಯಿತು. ಎಂದುಹೇಳಲು ರಾಘವನು ಕೇಳಿ ಮಹಾಮುನೀಶ್ವರರಿಗೆ ನಮಿಸಿದನು. ಗರುಡ ವೈಮಾನಿಕನುಈಲಕ್ಷ್ಮಣನಿಗೆ ಗಗನಗಾಮಿನಿಮೊದಲಾದ ವಿದ್ಯಗಳನ್ನು ಕೊಟ್ಟನು ಅಗ್ನಿಕೇತುವು ಸ್ವಾಮಿಗಳ ಮೇಲೆ ತನಗುಂಟಾಗಿರತಕ್ಕ ವಿರೋಧವನ್ನು ಬಿಟ್ಟು ರಾಮಾದಿಗಳನ್ನು ನಮಸ್ಕರಿಸಿ ತನ್ನ ಲೋಕಕ್ಕೆ ಹೋದನು. ರಾಘವನು ಶ್ರೀ ಜಿನೇಶ್ವರರ ಸ್ಮರಣೆಯನ್ನು ತ್ರಿಕರಣಶುದ್ಧಿಯಿಂದ ಮಾಡುತಲಿದ್ದನು.

೨೯. ದಂಡಕಾರಣ್ಯ ಪ್ರವೇಶ

ಎಲೈಶ್ರೇಣಿಕಮಹಾರಾಜನೇ! ಕೇಳುವನಾಗು—ಮುನಿಗಳಉಪಸರ್ಗವು ಶ್ರೀರಾಮನಿಂದ ತಪ್ಪಿತು. ಅಗ್ನಿಕೇತುವಿಗೆ ಭವ ಸಂಬಂಧವಾದ ವಿರೋಧವು ಹೋಗಿ ವಿನಯಗುಣವುಂಟಾಯಿತು. ಗರುಡದೇವನಿಗೆ ಭವಾಂತರದಮಕ್ಕಳಾದ ದೇಶಭೂಷಣ ಕುಲಭೂಷಣರ ದರ್ಶನವಾಯಿತು. ಗರುಡದೇವನು ರಾಮ ಲಕ್ಷ್ಮಣ ಸೀತೆಯರಿಗೆ ಅನೇಕ ರತ್ನಾಭರಣಗಳನ್ನು ಕೊಟ್ಟು ನಮಸ್ಕರಿಸಿದನು. ಈ ವಂಶಸ್ಥಪುರಿಯರಾಜನಾದ ಚಂದ್ರಹಾಸನೆಂಬುವನು ಈನಡೆದ ವಿದ್ಯಮಾನಗಳನ್ನೆಲ್ಲಾ ತಿಳಿದು, ರಾಮಲಕ್ಷ್ಮಣಸೀತೆಯರಿಗೆ ವಂದಿಸಿ ಈ ಕಾರಣಪುರುಷರಾದವರನ್ನು ತನ್ನ ಪಟ್ಟಣಕ್ಕೆ ಕರೆದುಕ್ಕೊಂಡುಹೋಗಿ ವಂಶಪುರದ ಅರಮನೆಯೊಳಕ್ಕೆ ಪೊಗಿಸಿ ಸಿಂಹಾಸನದಮೇಲೆ ರಾಮಸೀತೆಯರನ್ನು ಕುಳ್ಳಿರಿಸಿ ಚಂದ್ರಹಾಸನು ಬಹಳ ಸಂತೋಷಗೊಂಡನು. ಈ ವಂಶಸ್ಥಳದ ಮಹಾರಾಜನು ಮಹಾಮುನಿಗಳು ನೆಲಸಿದ್ದ ವಂಶಸ್ಥಳವೆಂಬ ಗಿರಿಗೆ ರಾಮಗಿರಿಯೆಂತಲೂ, ಆ ವಂಶಸ್ಥಳಪಟ್ಟಣಕ್ಕೆರಾಮಪುರಿಯೆಂತಲೂ, ಹೆಸರನ್ನಿಟ್ಟನು. ಸೀತಾಪತಿಯಾದ ರಾಮನು ತನ್ನ ಸತಿಯೊಡನೆ ತಮ್ಮನಾದ ಲಕ್ಷ್ಮಣನನ್ನು ಕೂಡಿಕೊಂಡು ಆ ಪಟ್ಟಣದಲ್ಲಿ ಸ್ವಲ್ಪದಿವಸಗಳಿದ್ದು ಚಂದ್ರಹಾಸನ ಉಪಚಾರ ಕೈಂಕರ್ಯಗಳನ್ನು ಅಂಗೀಕರಿಸಿ ಆ ಪಟ್ಟಣವನ್ನು ಬಿಟ್ಟು ಮುಂದೆ ಪ್ರಯಾಣಕ್ಕೆ ಅನುವಾದನು.

ರಾಮನು ಸತಿ ಅನುಜರೊಡನೆ ಕೂಡಿ ದಕ್ಷಿಣದಿಕ್ಕಿಗೆ ಪ್ರತಿದಿನವೂ ಪ್ರಯಾಣಮಾಡುತ್ತಾ, ಕರ್ಣ್ನರವ ಎಂಬಹೆಸರಿನಿಂದ ಪ್ರಸಿದ್ಧಿಹೊಂದಿದಒಂದು ತೊರೆಯ ತಡಿಯಲ್ಲಿರತಕ್ಕ ಒಂದು ದೊಡ್ಡ ವೃಕ್ಷದ ನೆಳಲಿನಲ್ಲಿ ಜಾನಕಿಗೆ ವಿಶ್ರಮಾರ್ಥವಾಗಿ ನಿಂತನು. ಆ ವನದ ಸುತ್ತಲೂ ಹಲಸು, ನೇರಳೆ, ದ್ರಾಕ್ಷಿ ದಾಡಿಮಾ, ಚೂತ, ಕಿತ್ತಳೆ, ಅಂಜೂರ ಮೊದಲಾದ ಫಲವೃಕ್ಷಗಳು ಬಂದಅತಿಥಿಗಳಿಗೆ ಸತ್ಕಾರ ಮಾಡುವಂತೆ ಇದ್ದವು. ಆ ಮಹಾವನಕ್ಕೆ ಚಾರಣಮಹರ್ಷಿಗಳು ಪಕ್ಷೋಪವಾಸ ಮಾಡಿ, ಚರ್ಯಾನಿಮಿತ್ತಾರ್ಥವಾಗಿ ಆಕಾಶ ಮಾರ್ಗದಿಂದ ಭೂಮಿಗೆ ಅವತರಿಸುವುದನ್ನು ಶ್ರೀರಾಮ ಲಕ್ಷ್ಮಣ ಜಾನಕಿಗಳು ನೋಡಿದರು. ಶ್ರೀರಾಮನು ಜಾನಕಿ ಅನುಜರೊಡನೆ ಕೂಡಿ ಮಹಾಮುನಿಗಳನ್ನು ವಂದಿಸಿ, ಅವರ ಪಾದಗಳನ್ನು ತೊಳೆದು ಅಲ್ಲಿ ಲಭ್ಯವಾದ ಒಂದು ಪೀಠದಲ್ಲಿ ಅವರನ್ನು ಕುಳ್ಳಿರಿಸಿ ತತ್ಕಾಲದಲ್ಲಿ ವದಗಿದ್ದ ಆಹಾರವನ್ನು ಮಹಾಮುನೀಶ್ವರರಿಗೆ ಕೊಡಲು ಅವರು ಅಂಗೀಕರಿಸಿ ಚರ್ಯೋಶುದ್ಧಿಯನ್ನು ಪೂರ್ತಿಗೊಳಿಸಲು ಆಕಾಶದಿಂದ ಪುಷ್ಪವೃಷ್ಟಿಯೂ, ಸುಗಂಧಸೇಚನೆಯೂ, ಪರಿಮಳಪೂರಿತವಾದದೇವದುಂದುಭಿಯೂ ಮತ್ತು ಜಯಜಯ ಎಂಬಶಬ್ದವು ಸಹ ಆಯಿತು. ರಾಮನೂ ಜಾನಕಿಯೂ ಸಹ ನಿರ್ಮಲಚಿತ್ತದಿಂದ ಕೂತಿರಲು ಅಂತರೀಕ್ಷದಲ್ಲಿ ಹಾರಾಡುತ್ತಿದ್ದ ಒಂದು ಗರುಡಪಕ್ಷಿಯು ಬಂದು ಚಾರಣರ ಪಾದದಲ್ಲಿ ಬಿದ್ದು ಹೊರಳಾಡುತ್ತಿರಲು ರಾಘವನು ಮಹಾಮುನೀಶ್ವರರಿಗೆ ವಂದಿಸಿ ಈ ಪಕ್ಷಿಯು ತಮ್ಮ ಪಾದದಲ್ಲಿ ಹೀಗೆ ಬಿದ್ದು ಹೊರಳಲು ಕಾರಣವೇನೆಂದು ಕೇಳಿಕೊಳ್ಳಲು ಮಹಾಮುನಿಗಳು ಹೇಳತೊಡಗಿದರು— "ಈ ಭರತಕ್ಷೇತ್ರದ ಆರ್ಯಾಖಂಡದಲ್ಲಿರುವ ಕುಂಡಲನಗರವು ದಂಡಕನೆಂಬ ರಾಜನಿಂದ ಪರಿಪಾಲಿಸಲ್ಪಡುತ್ತಿತ್ತು. ಆತನ ಪಟ್ಟಸ್ತ್ರೀಯು ದುರ್ಮನಸೆಯೆಂಬ ಹೆಸರುಳ್ಳವಳಾಗಿ ದೇವಗುರುಗಳಲ್ಲಿ ಭಕ್ತಿಯಿಲ್ಲದೆ ನಾಸ್ತಿಕ ಮತವನ್ನು ಅಂಗೀಕರಿಸಿದ್ದಳು. ಆ ನೃಪತಿಯು ಒಂದಾನೊಂದು ದಿವಸ ಬೇಟೆ ಮಾಡುವುದಕ್ಕಾಗಿ ಅರಣ್ಯಕ್ಕೆ ಹೋಗುತ್ತಿರುವಾಗ ಮಾರ್ಗದಲ್ಲಿ ಒಬ್ಬ ಮುನೀಶ್ವರರನ್ನು ಕಂಡನು. ಆದಿನ ಆತನಿಗೆ ಯಾವ ಮೃಗವು ಸಿಕ್ಕಲಿಲ್ಲ. ಬರುವಾಗ ಮುನಿಗಳನ್ನು ನೋಡಿದ ಕೂಡಲೆ ಈತನಿಗೆ ಕೋಪವು ಉದ್ರೇಕವಾಗಲು ಅಲ್ಲೊಂದು ಹೋಗುತ್ತಿದ್ದ ಹಾವನ್ನು ಕಂಡು ಅದನ್ನು ಬಡಿದು ಆ ಮುನೀಶ್ವರರ ಕತ್ತಿಗೆ ಮಾಲಿಕೆಯಂತೆ ಹಾಕಿ ಪಟ್ಟಣಕ್ಕೆ ಹೊರಟು ಹೋದನು. ಆ ರಾಜನು ಮುಂದಲ ದಿವಸ ಆ ಮಾರ್ಗವಾಗಿ ಬರುತ್ತಾ ಇರು

ವಾಗ ಆ ಮುನಿಗಳ ಕಂಠದೊಳಗಿದ್ದ ಹಾವನ್ನು ನೋಡಿ ಯಾವ ದುರಾತ್ಮನು ಈ ಕೆಲಸ ಮಾಡಿದನೊ ಎಂದು ಮನಸ್ಸಿನಲ್ಲಿ ಮರುಗಿ ಆ ದುರಾತ್ಮನು ನರಕಕ್ಕೆ ಇಳಿಯುವನೆಂದು ಹೇಳುತ್ತಿರುವಾಗ ಈ ದಂಡಕರಾಜನು ಕೇಳಿದನು. ಈ ಮಾತನ್ನು ಕೇಳಿದ ಕೂಡಲೆ ರಾಜನು ಮುನಿಯ ಪಾದಕ್ಕೆ ಬಿದ್ದು ಏಳಲು ಅವರು ಮಾಡುವ ಆಶೀರ್ವಾದವನ್ನು ಕೇಳಿ ಅವರಿಗಿರುವ ಕ್ಷಮಾಗುಣಕ್ಕೆ ಸಂತೋಷ ಪಟ್ಟು "ಸ್ವಾಮಿ! ನಾನು ನೆನ್ನೆ ತಮಗೆ ಮಾಡಿದ ಉಪಸರ್ಗವು ಬಹಳ ಕೆಟ್ಟದ್ದು; ನಾನು ಈಕೆಟ್ಟ ಕೆಲಸದಿಂದ ಹೊಂದಬೇಕಾಗಿರುವ ದುರ್ಗತಿಯನ್ನು ತಪ್ಪಿಸಬೇಕು" ಎಂದು ಬೇಡಿಕೊಳ್ಳಲಾಗ ಯತಿಗಳು "ಅಹಿಂಸಾಧರ್ಮವನ್ನು ಅನುಸರಿಸಿ ನಡೆ; ನಿನಗೆ ಈ ಪಾಪವು ಬಿಡುಗಡೆಯಾಗುವುದು" ಎಂದು ಹೇಳಲಾಗ ದೊರೆಯು ಅಹಿಂಸಾವ್ರತವನ್ನು ಕೈಕೊಂಡು ಯತಿಗಳಿಗೆ ನಮಸ್ಕರಿಸಿ ಪಟ್ಟಣಕ್ಕೆ ಹೊರಟುಹೋದನು. ಮಿಥ್ಯಾದೃಷ್ಟಿಯಾದ ಆತನ ಹೆಂಡತಿಯು ಮಂತ್ರಿಯ ಕೂಡ ಅಂಗಚೇಷ್ಟೆಯನ್ನು ಮಾಡಿ ಶೋಕದಿಂದ ಬಿದ್ದು ಹೊರಳುತ್ತಾ, ದೊರೆಯ ಹತ್ತಿರ ಹೋಗಿ ತನಗೆ ಬಹಳ ಅಪಕೀರ್ತಿ ಬಂದಿತೆಂದು ಅಂಗಲಾಚಿ ಹೇಳಿಕೊಂಡಳು. ಆಗ ರಾಜನು ಏಕೆನಲು ಆ ಮಾಯಾವಿಯು "ನಿಮ್ಮ ಗುರುವು ನೀನಿಲ್ಲದ ವೇಳೆಯಲ್ಲಿ ಬಂದು ನನ್ನನ್ನು ಮೋಹಿಸಿ ಈ ರೀತಿಮಾಡಿದನು" ಎಂದು ಹೊರಳುತ್ತಾ, ಲೋಕಾಪವಾದವನ್ನು ಹೊಂದಿರುವುದಕ್ಕಿಂತಲೂ ತಾನು ಸಾಯುವುದೇ ಮೇಲೆಂದು ಹೇಳಲಾಗ— ಆ ದಂಡಕನು ಬಹಳ ಕೋಪವುಳ್ಳವನಾಗಿ ಆ ಯತಿವರರನ್ನು ತನ್ನ ಪಟ್ಟಣದಿಂದ ನೂಕಿಸಿ, ಯಾವ ಯತಿಗಳನ್ನು ಕಂಡರೂ ಕೊಂದುಬಿಡಬೇಕೆಂದು ಡಂಗೂರ ಹೊಡಿಸಿದನು. ಆದಲ್ಲದೆ ಅಕಸ್ಮಾತ್ ಕಂಡ ಯತಿಗಳನ್ನೆಲ್ಲಾ ಕೊಲ್ಲಿಸುತ್ತಿದ್ದನು. ಆಗ ಸಪ್ತರ್ಧಿಯನ್ನು ಹೊಂದಿದ ಋಷಿಗಳೊಬ್ಬರು ಚರ್ಯಾನಿಮಿತ್ತವಾಗಿ ಬರುತ್ತಿರಲು ಅಲ್ಲೊಬ್ಬ ಮಾರ್ಗಿಕನು ಇವರನ್ನು ನೋಡಿ "ಈ ಪಟ್ಟಣಕ್ಕೆ ತಾವು ಹೋಗಬೇಡಿ; ಇಲ್ಲಿಯ ರಾಜನು ಬಂದ ಮುನಿಗಳನ್ನು ಕೊಲ್ಲಿಸುತ್ತಿದ್ದಾನೆ" ಎಂದು ಹೇಳಲು ಆ ಋಷೀಶ್ವರರು ಕೋಪಾವಿಷ್ಟರಾಗಿ ತಪೋಬಲದಿಂದ ಆ ಪಟ್ಟಣವನ್ನು ದಹಿಸುವಂತೆ ಮಾಡಿದರು. ಆಗ ಅಲ್ಲಿದ್ದ ಆ ಪಟ್ಟಣದೊಡನೆ ದೊರೆಯಾದ ದಂಡಕನೂ, ಆತನ ಹೆಂಡತಿಯಾದ ದುರ್ಮನೆಸೆಯೂ ಮತ್ತು ಅಮಾತ್ಯನೂ ಸಹ ದಹಿಸಿ ನರಕಕ್ಕೆ ಇಳಿದರು. ಈ ಮುನೀಶ್ವರರೂ ಸಹ ನರಕವನ್ನೇ ಹೊಂದಿದರು. ಆಗ ರಾಘವನು

"ಎಲೈ ಮುನೀಶ್ವರರೇ ! ಸ್ವಾಮಿ ಜ್ಞಾನಿಗಳಾದ ಮುನಿಗಳಿಗೆ ಯಾತಕ್ಕೆ ಆಷ್ಟೊಂದು ಕೋಪವುಂಟಾಯಿತು ? ಈ ದಂಡಕನಿಗೆ ಮುನಿಗಳನ್ನು ಕೊಲ್ಲ ಬೇಕೆಂಬ ಅಪೇಕ್ಷೆಯು ಏತಕ್ಕಾಯ್ತು?" ಎಂದು ಕೇಳಲಾಗಿ ಮಹಾಮುನೀಶ್ವರರು "ಅವರಿಗೆ ಪಾಪೋದಯವೆಂಬ ಸರ್ಪವು ಕಚ್ಚಿದ್ದರಿಂದ ಅವರಿಗೆ ಆ ಫಲಪ್ರಾಪ್ತಿಯಾಯಿತು. ಹೀಗೆ ನರಕಾದಿ ದುರ್ಗತಿಯಲ್ಲಿ ಬಿದ್ದು ಆ ದಂಡಕನಾಗಿದ್ದವನು ಈ ಗರುಡನಾದನು. ಈ ಗರುಡನಿಗೆ ಕರ್ಮೋಪಶಮವಾದುದರಿಂದ ನಮ್ಮ ಮೇಲೆ ಜಾತಿಸ್ಮರಣೆಯು ಇದಕ್ಕಾಯಿತು. ಅದರಿಂದ ನಮ್ಮ ಪಾದದಮೇಲೆ ಬಿದ್ದುಹೊರಳಿತು" ಎಂದರು. ಅನಂತರ ಶ್ರೀರಾಮನು "ಸ್ವಾಮಿ ಆ ಮಾಯಾವಿಯಾದ ದುರ್ಮನಸೆಯು ಏನಾದಳು?" ಎಂದು ಕೇಳಲು ಆ ಮುನಿಗಳು "ಅವಳು ಸತ್ತು ಹೆಬ್ಬುಲಿಯಾಗಿ ಅಲ್ಲಲ್ಲಿ ಈಕಾಡಿನಲ್ಲಿ ಸಂಚರಿಸುತ್ತಲಿದೆ" ಎಂದು ಹೇಳಿ ಯತಿಗಳು ಆಕಾಶದಲ್ಲಿ ನಡೆದು ಹೊರಟು ಹೋದರು. ಇತ್ತ ಜಾನಕಿಯು ಗುರುಗಳ ಮುಂದೆ ಗೃದ್ಧವನ್ನು ನೋಡಿ ಅನುಕರಣಪಟ್ಟಳು. ಆನಂತರ ಅದನ್ನು ತನ್ನ ಹತ್ತಿರವಿಟ್ಟುಕೊಂಡು ಆ ಗರುಡನಿಗೆ ಜಟಾಯುವೆಂದು ಹೆಸರನ್ನಿಟ್ಟು ರಕ್ಷಿಸುತ್ತಿದ್ದಳು.

ಅನಂತರ ಅವರು ಮರುದಿನ ಬೆಳಿಗ್ಗೆ ಅಲ್ಲಿಂದ ಹೊರಟು ಕಾಂಚನನದಿಯನ್ನೆ ದಾಟಿ, ತರುಗಿಡ ಮೊದಲಾದವುಗಳನ್ನು ನೋಡುತ್ತಾ, ಒಂದುವನಕ್ಕೆ ಬಂದರು. ಆ ವನದಲ್ಲಿ ಮೊಲ್ಲೆ, ಚಂಪಕ, ವಕುಳ, ಪಾದರಿ, ಶಿರಸಿ, ದಾಳಿಮ ಹಲಸು, ಅಂಜೂರ, ಜಾಜಿ, ಮಲ್ಲಿಗೆ, ಕೇತಕಿ, ಸುರಗಿ, ಸುರಹೊನ್ನೆ ಮೊದಲಾದ ಅನೇಕ ಫಲವೃಕ್ಷಗಳನ್ನೂ, ಪುಷ್ಪಗುಲ್ಮಗಳನ್ನೂ ನೋಡಿ ಸಂತೋಷದಿಂದ ಆವನದಲ್ಲಿ ಇದ್ದುಕೊಂಡು ಸಿಂಹಶಾರ್ದೂಲ ಗಜಾದಿಗಳನ್ನು ಜಾನಕಿಗೆ ತೋರಿಸುತ್ತಿದ್ದನು. ಈನದಿಯಸಮೀಪದಲ್ಲೇ ಸರ್ವರತ್ನಗರ್ಭವೆಂಬ ದಂಡಕಗಿಡವಿತ್ತು. ಆ ಗುಹೆಗಳಲ್ಲಿ ಒಂದು ಒಂದು ಯೋಜನದ ಎಂಟನೇ ಭಾಗ ಆಳವಾದ ಸ್ಥಳದಲ್ಲಿ ಒಂದು ಪಟ್ಟಣವನ್ನು ಕಟ್ಟಿದ್ದರು. ಅದನ್ನು ಪಾತಾಳ ಲಂಕೆ ಎನ್ನುತ್ತಿದ್ದರು. ಆ ಪಟ್ಟಣವನ್ನು ಖರನೆಂಬ ರಾಜನು ಆಳುತ್ತಿದ್ದನು. ಆತನಿಗೆ ರಾವಣನ ತಂಗಿಯಾದ ಚಂದ್ರನಖಿ ಎಂಬುವಳು ಮನಪ್ರಿಯಳಾಗಿದ್ದಳು. ಅವರಿಬ್ಬರಿಗೆ ಶಂಭುಕ ಮತ್ತು ಸುಂದರ ಎಂಬ ಇಬ್ಬರು ಪುತ್ರರಿದ್ದರು ಅವರಲ್ಲಿ ಹಿರಿಯವನಾದ ಶಂಭುಕನು ಹನ್ನೆರಡು ವರ್ಷ ಮೊದಲುಗೊಂಡು ಸೂರ್ಯಹಾಸ ಎಂಬ ಕತ್ತಿಯನ್ನು ಪಡೆಯುವುದಕ್ಕೋಸ್ಕರ ತಪಸ್ಸನ್ನು ಮಾಡು

ತ್ತಿದ್ದನು- ಆ ಕತ್ತಿಯು ಸಹಸ್ರಯಕ್ಷದೇವತೆಗಳಿಂದ ಕಾಯಲ್ಪಡುತ್ತಿತ್ತು. ಈ ತಪಸ್ಸು ಆ ಯಕ್ಷದೇವತೆಗಳನ್ನು ಪ್ರಸನ್ನೀಕರಿಸುವುದಕ್ಕಾಗಿತ್ತು. ಶ್ರೀರಾಮನು ಜಾನಕಿಗೆ ಅನೇಕ ಮೃಗಗಳು ಗುಂಪು ಕೂಡಿಕೊಂಡು ಬೇಡರಬಾಣದ ಏಟಗೆ ಹೆದರಿ ಓಡಿ ಬರುತ್ತಿದ್ದದ್ದನ್ನು ತೋರಿಸುತ್ತಿದ್ದನು. ಆಗಒಬ್ಬಶಬರನು ಸಿಂಹದ ಹಣೆಗೆ ಗುರಿ ಕಟ್ಟಿ ಬಾಣವನ್ನು ಬಿಡಲು ಆ ಸರಳು ಮುಖದಿಂದ ಉದರಕ್ಕೆ ಇಳಿದು ಅಲ್ಲಿಂದ ಆಸನದ್ವಾರದಿಂದ ಹೊರಪಟ್ಟಿತು. ಆಗಅಂಬಿನ ಜೊತೆಯಲ್ಲಿ ಮೂವರು ಗತಪ್ರಾಣರಾಗಿ ಉರಳಿದ್ದರು. ಇದನ್ನು ಸೀತೆಯು ನೋಡಿ ರಾಮಲಕ್ಷ್ಮಣರಿಗೆ ತೋರಿಸಿದಳು. ಇನ್ನೊಂದು ಕಡೆ ಒಬ್ಬ ಬೇಟೆಗಾರನು ಬಾಣಪ್ರಯೋಗಮಾಡಲು ಅದು ಅಂಗಾಲನ್ನು ಒತ್ತಿ ನೇತ್ರ ಪ್ರದೇಶದಲ್ಲಿ ಹೊಕ್ಕು ಬಲಗಣ್ಣಿನಿಂದ ಹೊರಗೆ ಬಂದು, ಆ ಬೇಟೆಗಾರನ ಶರೀರಕ್ಕೆ ಬಂದು ತಗಲಿಕೊಂಡಿತು. ಇದನ್ನು ಲಕ್ಷ್ಮಣನು ನೋಡಿ ರಾಘವನಿಗೆ ನೋಡೆಂದು ಹೇಳಿದನು. ಅಷ್ಟರಲ್ಲಿ ಒಂದು ಕಾಡೆಮ್ಮೆಯು ಒಂದು ಗುತ್ತಿಯಿಂದ ಹೊರಟು, ಮಿಂಚಿನಂತೆ ಶೀಘ್ರವಾಗಿ ಬಂದು ವನಚರರ ಮೇಲೆ ಬೀಳುತ್ತಿರಲು ಅವರು ಅಸ್ತ್ರಗಳನ್ನು ನಾನಾವಿಧವಾಗಿ ಬಿಡುತ್ತಿರಲು ಅದು ಎಷ್ಟು ಗಾಯವಾದರೂ ಬಾಣ ಬಂದ ಕಡೆಗೇ ನುಗ್ಗಿ ಬರುತ್ತಿದ್ದುದನ್ನು ನೋಡಿ, ಅತ್ತ ಮಿಂಚಿನಂತೆ ಹೊಳೆಯುತ್ತಲಿರುವ ಕೋರೆದವಡೆಯುಳ್ಳ ಹಂದಿಯು ಆ ಕಾಡೆಮ್ಮೆಯ ಕಾಲುಗಳ ಮಧ್ಯೆ ನುಗ್ಗಿ ತೊಡೆಯನ್ನು ಸೀಳಲುಪಕ್ರಮಿಸಿತು. ಆಗ ಶಬರನು ಹಂದಿಯನ್ನು ನೋಡಿ “ ನಿನ್ನನ್ನು ಸಂಹರಿಸದೇ ಬಿಡುವನಲ್ಲ ” ಎಂದು ಅಂಬುಗಳನ್ನು ಬಿಡಲು ಅದು ಅನೇಕ ಹಂದಿಗಳ ತಲೆಗೆ ಸೇರಿತು. ಈ ವ್ಯಕ್ತಿ ವಿಶೇಷಗಳನ್ನು ಸೀತೆಗೆ ತೋರಿಸುತ್ತಲಿದ್ದನು. ಆ ಕಾಂಚನ ನದಿಯ ದಡದಲ್ಲಿರುವ ವೃಕ್ಷದ ಕೆಳಗೆ ಶ್ರೀರಾಮನು ಜಾನಕಿಯೊಡನೆ ಸಲ್ಲಾಪ ಮಾಡುತ್ತಾ, ಲಕ್ಷ್ಮಣನನ್ನು ನೋಡುತ್ತಾ, ಪರಮಜಿನೇಶ್ವರನ ಚರಣ ಕಮಲವನ್ನು ಧ್ಯಾನಮಾಡುತ್ತಲಿದ್ದನು.

೩೦. ಶಂಭುಕುಮಾರನ ಸಂಹಾರ.

ಧರಣೀಪತಿಯಾದ ಶ್ರೇಣಿಕನೇ! ಸ್ವರ್ಣ ಪರ್ಣಾಲಯದಲ್ಲಿ ರಾಮನು ಜಾನಕಿಯೊಡನೆ ಕೂಡಿ ಲಕ್ಷ್ಮಣನೊಂದಿಗೆ ಸ್ವಲ್ಪಕಾಲ ವಾಸಿಸುತ್ತಿದ್ದನು.

ಪೂರ್ವದಲ್ಲಿ ಪಾತಾಳಲಂಕೆಯೆಂದು ಹೇಳಲ್ಪಟ್ಟಿತ್ತಷ್ಟೇ ಆ ಪಟ್ಟಣಕ್ಕೆ ಹನ್ನೆರಡು ಕ್ಷುಲ್ಲಕ ದಾರಿಗಳಿದ್ದವು. ಆ ಪಟ್ಟಣದ ಮಧ್ಯದಲ್ಲಿ ಜಿನಚೈತ್ಯಾಲಯವು ಕಣ್ಗೊಳಿಸುತ್ತಿತ್ತು. ಮತ್ತು ಅರಮನೆ ಗಜಶಾಲೆ ಮೊದಲಾದ ಆಯುಧಶಾಲೆ ವಾಣಿಜ್ಯಶಾಲೆ ಇವುಗಳಿಂದ ಕೂಡಿತ್ತು. ಈ ಪಟ್ಟಣವು ಭೂಮಿಯಲ್ಲಿ ಬಹಳ ತಗ್ಗಾದ ಪ್ರದೇಶದಲ್ಲಿದ್ದದ್ದರಿಂದ ಪಾತಾಳಲಂಕೆ ಎಂದು ಹೆಸರಾಯಿತು ಮತ್ತು ನೋಡುವರ ಕಣ್ಣಿಗೆ ಸ್ವರ್ಗದಂತೆ ಕಾಣಿಸುತಲಿತ್ತು. ಇಂಥಹ ಸುಂದರವಾದ ಅರಮನೆಯಲ್ಲಿ ಖಚರರಲ್ಲಿ ಬಲಿಷ್ಟನಾದ ಖರನೆಂಬರಾಜನು ವಾಸವಾಗಿದ್ದನು. ಈತನಿಗೆ ಧೂಷಣನೆಂಬ ತಮ್ಮನಿದ್ದನು. ಇವರಿಗೆ ದಶಕಂಠನ ತಂಗಿಯಾದ ಸೂರ್ಪನಖಿಯು ಖರನಿಗೆ ಸತಿಯಾಗಿಯೂ, ಇನ್ನೊಬ್ಬ ಚಿಕ್ಕಪ್ಪನಪುತ್ರಿಯಾದ ಚಿತ್ರಾಂಗಿನಿಯು ಧೂಷಣನಿಗೆ ಸತಿಯಾಗಿಯೂ ಇದ್ದರು. ಈಇಬ್ಬರುಗಳ ಗರ್ಭದಲ್ಲಿ ಶಂಭುಕನೆಂಬುವನು ಸೌಂಧರನೆಂಬುವನು ಸಹ ಶೂರರಾದ ಪುತ್ರರಾದರು. ರಾಕ್ಷಸಾನ್ವಯದೊಳಗೆ ಅಧ್ಯಕ್ಷನಾದ ರಾವಣನ ಅಟ್ಟಹಾಸವನ್ನು ತಿಳಿದು, ಅವನಲ್ಲಿ ತಾನೊಬ್ಬ ಶೂರನಾದ ಸಾಮಂತಕನಾಗಿರಬೇಕೆಂದು ಶಂಭುಕನು ನೆನೆಯುತ್ತಿರುವಾಗ, ಅವನ ಮಧ್ಯದ ವಂಶದೊಳಗೆ ಜೋಲಾಡುತ್ತಿದ್ದ ಸಹಸ್ರ ದೇವತೆಗಳು ಕಾವಲಿರುವ ಖಡ್ಗವನ್ನು ತಾನು ಸಂಪಾದಿಸಬೇಕೆಂದು ಯೋಚಿಸುತ್ತಿರುವಾಗ, ಅಲ್ಲಿ ಹರಿಯುವ ನದಿಯ ಪಕ್ಕದಲ್ಲಿ ಕೂತು ಹನ್ನೆರಡುಕೋಟಿ ಜಪವನ್ನು ಮಾಡಿ ಪೂರೈಸಿದವನಿಗೆ ಈ ಖಡ್ಗವು ವಶವಾಗುವದೆಂಬ ಜನವಾಡಿಕೆಯನ್ನು ಕೇಳಿ, ಶಂಭುಕನು ಸಂಧ್ಯಾಕಾಲದಲ್ಲಿ ಪೂಜೆಯನ್ನು ಮಾಡಿ ಬಿದುರುಮೆಳೆಯ ಮಧ್ಯದಲ್ಲಿ ಏಕಾಗ್ರಚಿತ್ತದಿಂದ ಆಹಾರವನ್ನು ತೆಗೆದುಕೊಳ್ಳದೇ ಪರಿಗ್ರಹವನ್ನು ದೂರೀಕರಿಸಿ ಬ್ರಹ್ಮಚರ್ಯವ್ರತದಿಂದ ಕೂಡಿ ಹಗಲಿರುಳೆನ್ನದೇ ಜಪವನ್ನು ಜಪಿಸುತ್ತಾ, ಆಗಾಗ್ಗೆ ಸಾವಿರ ಸಾವಿರ ಜಪಗಳನ್ನು ಪೂರೈಸಿ ಸುಗಂಧಧೂಪಗಳನ್ನು ಹಾಕುತ್ತಿದ್ದನು. ಈರೀತಿಯಾಗಿ ಶಂಭುಕುಮಾರನು ಅತ್ಯಂತ ತಪೋನಿಷ್ಟನಾಗಿರಲಾಗಿ ಇವನು ಹಾಕಿದ ಧೂಪದ ಪರಿಮಳವು ವನ ಮಧ್ಯದಲ್ಲಿದ್ದ ರಾಘವನ ಮೂಗಿಗೆ ಸುವಾಸನೆ ಕೊಟ್ಟಿತು. ರಾಘವನು ಈ ಸುವಾಸನೆಯನ್ನು ಆಘ್ರಾಣಿಸಿ, ಲಕ್ಷ್ಮಣನನ್ನು ನೋಡಿ"ಎಲೈ ಅನುಜನೇ! ಈ ವನಮಧ್ಯದಲ್ಲಿ ಇಂಥಾ ಸುವಾಸನಾ ವಾಯುವು ಎಲ್ಲಿಂದ ಬರುತ್ತೆ? " ಎಂದು ಕೇಳಲಾಗ–ಲಕ್ಷ್ಮಣನು ನೋಡಿ ಬರುವೆನೆಂದು ಹೇಳಿ ಅಲ್ಲಲ್ಲಿ ಸುತ್ತುತ್ತಾ ಅಂಧಕಾರದಿಂದಕೂಡಿದ ಒಂದು ಬಿದುರುಗುಂಪಿನೊಳಕ್ಕೆ

ಹೋದನು. ಆಸ್ಥಳವು ಪ್ರಕಾಶವಾದ ಬೆಳಕಿನಿಂದ ಕೂಡಿರಲು, ಬಾಲಕೇಶವನು ದೀಪ್ತಿಯನ್ನು ನೋಡುತ್ತಿರಲಾಗ ಚಂದ್ರಹಾಸವು ಕಣ್ಗೊಳಿಸುತ್ತಿತ್ತು. ಅದನ್ನು ತೆಗೆದುಕೊಳ್ಳಲು ಕೇಶವನು ಕೈನೀಡಲು ಆ ಖಡ್ಗವು ಕೈಗೆ ಬಂದಿತು. ಅದನ್ನು ತೆಗೆದುಕೊಂಡಕೂಡಲೆ ಅದರ ಪ್ರಭೆಯು ಮೊದಲಿನಂತೆ ಶಂಭುಕನು ಇರುವ ಸ್ಥಳಕ್ಕೆ ಬೀಳದೇ ಇದ್ದದನ್ನು ನೋಡಿ, ವಿದ್ಯೆಯನ್ನು ಕರೆದು "ಈಗ ಚಂದ್ರಹಾಸದ ಪ್ರಭೆಯು ನಾನಿರುವ ಸ್ಥಳಕ್ಕೆ ಬೀಳದೇ ಇರುವುದಕ್ಕೆ ಕಾರಣವೇನು?" ಎಂದು ಕೇಳಲು, ವಿದ್ಯೆಯು "ನೆನೆದ ವಸ್ತುಗಳೆಲ್ಲಾ ಅದೃಷ್ಟವಂತನಿಗೆ" ಎಂಬ ಲೋಕನೀತಿಗನುಸಾರವಾಗಿ ಚಂದ್ರಹಾಸವು ಲಕ್ಷ್ಮಣನ ಕೈಗೆ ಹೋಗಿ ಸೇರಿದ್ದರಿಂದ ಪ್ರಭೆಯು ಅತ್ತಹೋಯಿತೆಂದು ಹೇಳಿತು. ಆಗ ಶಂಭುಕನು ಪ್ರಜ್ಞಪ್ತಿ ವಿದ್ಯೆಯನ್ನು ಕರೆದು "ಲಕ್ಷ್ಮಣನ್ಯಾರು? ಆತನಿಲ್ಲಿಗೆ ಬರಲು ಕಾರಣವೇನು?" ಎಂದು ಕೇಳಲಾಗಿ ಆ ಪ್ರಜ್ಞಪ್ತಿಯು "ಲಕ್ಷ್ಮಣನು ಸೀತಾ ನಾಯಕಿಯಾದ ರಾಘವನ ತಮ್ಮನು. ಈ ಅಣ್ಣ ತಮ್ಮಂದರು ತಂದೆಯ ಅಪ್ಪಣೆ ಪ್ರಕಾರ ಈ ದಂಡಕ ವನವಾಸಕ್ಕೆ ಬಂದಿರುತ್ತಾರೆ. ಲಕ್ಷ್ಮಣನು ಸುಗಂಧದವಾಸನೆಯನ್ನು ನೋಡಿ, ಬಿದುರು ಗುಂಪಿಗೆ ಪ್ರವೇಶಿಸಿ ಚಂದ್ರಹಾಸವೆಂಬ ಈ ಖಡ್ಗವನ್ನು ನೋಡಿ ಕೈನೀಡಲಾಗಿ ಆ ಖಡ್ಗವು ಆತನನ್ನು ಸೇರಿತು. ನೀನು ವೃಥಾ ಆ ಚಂದ್ರಹಾಸವನ್ನು ಪಡೆಯುವುದಕ್ಕಾಗಿ ಶ್ರಮಪಡುವುದು ಪ್ರಯೋಜನವಿಲ್ಲ. ನಿಮ್ಮ ಸ್ಥಳಕ್ಕೆ ನೀನು ಹೋಗುವುದು" ಎಂದು ಹೇಳಲಾಗಿ ಶಂಭುಕನು ಸ್ವಲ್ಪ ಹೊತ್ತು ಸುಮ್ಮನಿದ್ದು ಮಾರ್ಗವನ್ನು ಅನುಸರಿಸುತ್ತಿರಲಾಗ ಲಕ್ಷ್ಮಣನ ಎದುರಿಗೆ ಶಂಭುಕನು ಬಂದನು. ಶಂಭುಕನು ಲಕ್ಷ್ಮಣನಿಗೆ "ನಾನು ಈ ಚಂದ್ರಹಾಸವನ್ನು ಪಡೆಯಲು ಹನ್ನೆರಡು ವರ್ಷದಿಂದ ಎಂಟುಕೋಟಿ ಜಪಗಳನ್ನು ಈ ನದಿಯ ತೀರದಲ್ಲಿ ಪರಿಗ್ರಹಗಳನ್ನು ತೊರೆದು ಬ್ರಹ್ಮಚರ್ಯದೊಡನೆ ಸಹಸ್ರಾದಿ ಹೋಮಗಳನ್ನು ಮಾಡಿರುತ್ತೇನೆ. ನೀನು ಅತ್ತಿತ್ತ ಬಂದು ಈ ಮಹಾ ಚಂದ್ರಹಾಸವನ್ನು ತೆಗೆದುಕೊಂಡು ಹೋಗುತ್ತಿದ್ದೀಯೆ. ನೀನು ಚಂದ್ರಹಾಸವನ್ನು ಕೊಟ್ಟು ಹೋಗು; ಇಲ್ಲದಿದ್ದರೆ ಪ್ರಾಣವನ್ನು ಕಳೆದುಕೊಳ್ಳುತ್ತೀಯೇ" ಎಂದು ಹೇಳಿದನು. ಆಗ ಲಕ್ಷ್ಮಣನು "ಎಲೈ ದೈತ್ಯನೇ! ಪುಣ್ಯವಂತರ ಕೈಗೆ ಪುಣ್ಯವಸ್ತುಗಳು ಬರುವುವು. ನೀನು ವೃಥಾಆಶೆ ಏಕೆಇಡುತ್ತೀಯೆ?" ಎಂದು ಹೇಳಿದನು. ಆಗ ರಾಕ್ಷಸನು ತನ್ನ ಬಲವನ್ನೂ ಲಕ್ಷ್ಮಣನ ಬಲವನ್ನೂ ತಿಳಿಯದೆ ಆತನ ಮೇಲೆ ಯುದ್ಧಕ್ಕೆ ಬಂದುದಲ್ಲದೆ, ಗಧಾ ಮೊದಲಾದ ಆಯುಧ

ಗಳನ್ನೆತ್ತಿ ಲಕ್ಷ್ಮಣನ ಮೇಲೆ ಬಿಟ್ಟನು. ಲಕ್ಷ್ಮಣನು ಸ್ವಲ್ಪ ವಿಸ್ಮೃತಿಯನ್ನು ಹೊಂದಿ ದೇವರನ್ನು ನೆನೆಯುತ್ತಾ, ಶಂಭುಕುಮಾರನನ್ನು ಚಂದ್ರಹಾಸದಿಂದ ಹೊಡೆಯಲು ಶಂಭುಕುಮಾರನು ವೈಕುರ್ವಣ ವಿದ್ಯದಿಂದ ತಾನು ಮಾಡಿಕೊಂಡಿದ್ದ ಶರೀರಾಕೃತಿಯನ್ನು ಬಿಟ್ಟು ನೈಜರೂಪನ್ನು ಹೊಂದಿ ದೀರ್ಘ ನಿದ್ರೆಯನ್ನು ಮಾಡಿದನು. ಲಕ್ಷ್ಮಣನು ಚಂದ್ರಹಾಸವನ್ನು ಕೈಲಿತೆಗೆದುಕೊಂಡು ರಾಘವನ ಪಾದಮೂಲಕ್ಕೆ ಬಂದು ಜಾನಕಿ ಸಹಿತನಾದ ರಾಘವನಿಗೆ ನಮಸ್ಕರಿಸಿ ಚಂದ್ರಹಾಸವನ್ನು ತೋರಿಸಿ ನಡೆದ ವಿದ್ಯಮಾನಗಳನ್ನೆಲ್ಲಾ ತಿಳಿಸಲು, ಆಗ ರಾಘವನು ತಮ್ಮನ ಮಾತುಗಳನ್ನು ಕೇಳಿ ಶ್ರೀಜಿನೇಂದ್ರನ ಚರಣ ಕಮಲಗಳ ಧ್ಯಾನದಿಂದ ಮಗ್ನನಾಗಿದ್ದನು.

೩೧. ಸೂರ್ಪನಖಿ ನಾಶಿಕ ಛೇದನ.

ಮಗಧದೇಶಾಧಿಪತಿಯಾದ ಶ್ರೇಣಿಕನೇ ಕೇಳುವನಾಗು! ರಾಘವನು ಜಾನಕಿ ಸಹಿತ ಕೂತುಕೊಂಡಿರಲಾಗಿ, ಲಕ್ಷ್ಮಣನು ಚಂದ್ರಹಾಸವನ್ನು ತೆಗೆದುಮುಂದಿಟ್ಟನು. ಆ ಚಂದ್ರಹಾಸವು ಸೂರ್ಯೋದಯದಂತೆ ಪ್ರಕಾಶಮಾನವಾಗಿರುವುದನ್ನು ನೋಡಿ ಆಶ್ಚರ್ಯಪಟ್ಟರು. ಒಬ್ಬರು ಆಶೆಮಾಡಿ ಅದನ್ನು ಹೊಂದುವದಕ್ಕೆ ಹಗಲಿರಳು ಕಷ್ಟಪಡುವರೊಬ್ಬರು, ಅನಾಯಾಸವಾಗಿ ಆ ವಸ್ತುವನ್ನು ತೆಗೆದುಕೊಳ್ಳುವರು ಮತ್ತೊಬ್ಬರು, ಇವೆಲ್ಲವೂ ಪೂರ್ವಜನ್ಮದಲ್ಲಿ ಉಂಟಾಗಿರುವ ಸುಕೃತ ದುಷ್ಕೃತ ಫಲವೆಂದು ರಾಘವನು ನುಡಿದನು. ಆಗ ಸೂರ್ಯನು ರಾಮ ಲಕ್ಷ್ಮಣರ ಮಾತನ್ನು ಕೇಳಬೇಕೆಂತಲೇ ಎನ್ನುವ ಹಾಗೆ ಸ್ವಲ್ಪ ಇಣಕಿದನು. ಬಿದುರುಮೆಳೆಯಲ್ಲಿ ಬಿದ್ದು ಮೂರ್ಛೆಹೊಂದಿರುವ ಶಂಭುಕನನ್ನು ನೋಡಲು ಅವನ ತಾಯಿಯಾದ ಸೂರ್ಪನಖಿಯು ಬಂದು ಆತನಿರುವಿಕೆಯನ್ನು ನೋಡಿ ಬಹಳವಾಗಿ ಉಪಚರಿಸಿದಳು. ಇವಳು ಎಷ್ಟು ಉಪಚರಿಸಿದರೂ ಶಂಭುಕನು ಪ್ರಜ್ಞೆಯಿಂದ ಕೂಡಿದವನಾಗಲಿಲ್ಲ. ಆಗ ಸೂರ್ಪನಖಿಯು ಬಹಳವಾಗಿ ವ್ಯಸನಪಟ್ಟು ಕಾಲಭೈರವಿಯಂತೆ ಆಕಾಶಕ್ಕೆಹಾರಿ "ನಾನು ದಶಕಂಠನ ಒಡಹುಟ್ಟಿದವಳಲ್ಲವೇ? ಅಸಹಾಯಶೂರನಾದ ಖರನ ಪ್ರಿಯಪತ್ನಿಯಲ್ಲವೇ? ಹೀಗಿದ್ದರೂ ಸುಪ್ರಸಿದ್ಧನಾದ ವೈರಿಭಯಂಕರನಾದ ಮಗನು ನನ್ನೆದುರಿಗೇನೆ ಕಣ್ಣು ಮುಚ್ಚಿ ಬಿಟ್ಟನೇ ? ಇಂಥಹ ಮಹಾಶೂರ ಪುತ್ರನನ್ನು ಕಳೆದುಕೊಂಡ ನನ್ನ ಜನ್ಮವು ಯಾತಕ್ಕೆ? ನಾನು ಯಾರನ್ನು ಮಗನೆಂತ

ನೆನೆಸಲಿ ” ಎಂದು ಸೂರ್ಪನಖಿಯು ಹೊರಳಿ ಬಹಳವಾಗಿ ಗೋಳಾಡಿದಳು. ಅನಂತರ ಲಕ್ಷ್ಮಣನು ಈತನನ್ನು ಹೊಡೆದನೆಂಬ ವಿಷಯವನ್ನು ತಿಳಿದು ಕೊಂಡು ಬಹಳ ಕೋಪಾವಿಷ್ಟಳಾಗಿ ಲಕ್ಷ್ಮಣನನ್ನು ಈಗಲೇ ಶೀಳಿ ಅಷ್ಟ ದಿಕ್ಪಾಲಕರಿಗೆ ಬಲಿಹಾಕುತ್ತೇನೆಂದು ಘರ್ಜನೆ ಮಾಡಿ ಲಕ್ಷ್ಮಣನು ಎಲ್ಲಿರು ತ್ತಾನೋ ಎಂಬುದಾಗಿ ಅಲ್ಲಲ್ಲಿ ಹುಡುಕುತ್ತಿದ್ದಳು. ಆಗ ಒಂದುವಟವೃಕ್ಷದ ಕೆಳಗೆ ಜಾನಕಿಯು ರಾಮನು ಕೂತಿರುವುದನ್ನೂ ಅವರ ಮುಂದೆ ಲಕ್ಷ್ಮಣನು ಕೂತಿರುವುದನ್ನೂ ಸಹ ನೋಡಿ, ಆರ್ಭಟಿಸುತ್ತಾ, ಹತ್ತಿರ ಹತ್ತಿರ ಬರುತ್ತಾ ಲಕ್ಷ್ಮಣನರೂಪು ಈಕೆಯ ಕಣ್ಣಿಗೆ ಬೀಳುತ್ತಲೇ ಈತನನ್ನು ನೋಡಬೇಕೆಂಬ ಆಶೆ ಹುಟ್ಟಿ ಕೋಪವು ಇಳಿಮುಖವಾಯಿತು. ವೈಕುರ್ವಣ ವಿದ್ಯೆಯಿಂದ ರೂ ಪಾಂತರದಿಂದ ಒಬ್ಬ ಹದಿನಾರು ವರ್ಷದ ಸುಂದರ ಬಾಲಕಿಯ ರೂಪನ್ನು ಧರಿಸಿಕೊಂಡು ಲಕ್ಷ್ಮಣನ ಮುಂದೆ ಬಂದು ನಿಂತು “ ಎಲೈ ರಾಜಪುತ್ರನೇ! ಯಾತಕ್ಕಾಗಿ ನೀನು ಮರದ ಬಳಿ ಕೂತಿದ್ದೀಯೆ! ನಿನಗೆ ಪೌರುಷವಿಲ್ಲವೇ. ಎಲ್ಲಾದರೂ ಒಂದು ಸ್ಥಳವನ್ನು ನೋಡಿ ಕೊಂಡು ನಿಂತು ಅನುರೂಪಳಾದ ಕನ್ಯಾಮಣಿಯೊಂದಿಗೆ ಸುಖಪಡದೆ ಏಕೆ ಸುಮ್ಮನಿರುತ್ತೀಯೇ! ” ಎಂದು ಹೇಳಿ ಆತನ ಮನಸ್ಸೋಲುವಂತೆ ವಿಲಾಸಲಾವಣ್ಯದಿಂದ ಬಿನ್ನಾಣವನ್ನು ತೋರಿಸಿ ದಳು. ಲಕ್ಷ್ಮಣನು ಇವಳನ್ನು ನೋಡಿ “ ನೀನು ಮೊದಲು ನಮ್ಮ ಅಣ್ಣ ರಾಘವನನ್ನು ಕಂಡು ಮಾತನಾಡುವುದು ಒಳ್ಳೆಯದು ” ಎಂದು ಹೇಳಿದನು. ಇವಳು ಆಮರದ ಕೆಳಗೆಹೋಗಿ ನೋಡಲು, ಜಾನಕಿಯೊಬ್ಬಳೇ ಪಾಕಕ್ರಿಯೆ ಯನ್ನು ಮಾಡುತ್ತಿದ್ದಳು. ಇವಳು ಜಾನಕಿಯನ್ನು ನೋಡಿ “ ಮಹಾತಾಯಿ ! ನೀನು ಏನು ಪುಣ್ಯಮಾಡಿ ಈರಾಮದೇವರನ್ನು ಹೊಂದಿದೆಯೋ? ನಾನುಕಾಣೆ ನನ್ನನ್ನು ನೀನು ಕಾಪಾಡಬೇಕು.” ಎಂದು ಅಳುತ್ತಾ, ಸೀತಾದೇವಿಯಪಾದದ ಮೇಲೆ ಬಿದ್ದಳು. ಅಷ್ಟರಲ್ಲಿ ರಾಮನು ಬಂದು ಇವಳು ಅಳುತ್ತಿದ್ದದ್ದನ್ನು ನೋಡಿ ಕರುಣವುಳ್ಳವನಾಗಿ ಅಳಬೇಡವೆಂದು ಹೇಳಿ ಸಂತೈಸಿದನು. ಅನಂ ತರ ಈ ಸೂರ್ಪನಖಿಯು ರಾಮನಿಗೆ ನಮಸ್ಕರಿಸಿ ಕೈಮುಗಿದುಕೊಂಡು, “ಸ್ವಾಮಿ! ನನ್ನ ಮಾತಾಪಿತೃಗಳು ನನ್ನನ್ನು ಅನುರೂಪನಾದ ವರನಲ್ಲದವನಿಗೆ ಗೊತ್ತುಮಾಡಿದ್ದರಿಂದ ನಾನು ಅದಕ್ಕೆ ಒಪ್ಪದೇ ಹೊದ್ದರಿಂದ ನನ್ನ ಮೇಲೆ ಕೋಪಿಸಿ ತಳ್ಳಿಬಿಟ್ಟರು. ನನಗೆ ಯಾರೂ ದಿಕ್ಕಿಲ್ಲ. ನೀವು ಅಣ್ಣತಮ್ಮಂದರಿಬ್ಬ ರಲ್ಲಿ ಯಾರಾದರೊಬ್ಬರು ಗಂಧರ್ವವಿವಾಹ ಮಾಡಿಕೊಳ್ಳಬೇಕು. ಇಲ್ಲದಿದ್ದರೆ

ಕೆರೆ ಭಾವಿಗೆ ಬಿದ್ದು ಸಾಯುತ್ತೇನೆ. ನೀವು ನನ್ನ ಪುಣ್ಯೋದಯದಿಂದ ಈದಿನ ದರ್ಶನವನ್ನು ಕೊಟ್ಟಿದ್ದೀರಿ" ಎಂದುಹೇಳಲಾಗ ಜಾನಕಿಯು ಹುಸುನಗೆ ನಗುತ್ತ ರಾಮನ ಮುಖವನ್ನು ನೋಡಿದಳು. ರಾಮಲಕ್ಷ್ಮಣರು ಇಂಥಾ ಅರಣ್ಯದಲ್ಲಿ ಇಂಥಾ ಮನೋಹರವಾದ ರೂಪುಳ್ಳ ಸ್ತ್ರೀಯು ಇರುವುದು ಸುಳ್ಳು. ಯಾರೋ ಮಾಯೆಯಿಂದ ಈ ರೀತಿ ಬಂದಿರಬಹುದೆಂದು ನೆನೆಸಿ, ಲಕ್ಷ್ಮಣನು ತನ್ನಲ್ಲಿದ್ದ ಪ್ರಜ್ಞಪ್ತಿ ವಿದ್ಯೆಯನ್ನು ಕೇಳಲಾಗಿ—ವಿದ್ಯೆಯು "ಶಂಭುಕನ ತಾಯಿಯಾದ ಸೂರ್ಪನಖಿಯಿವಳು. ಮಗನನ್ನು ನೋಡುವುದಕ್ಕಾಗಿ ಬಂದು ಮಗನನ್ನು ನೋಡಿ ವ್ಯಸನಪಟ್ಟು, ನಿನ್ನಿಂದ ಹತನಾದನೆಂದು ತಿಳಿದು ನಿನ್ನನ್ನು ಕೊಲ್ಲಬೇಕೆಂದು ಬರುತ್ತಾ ನಿನ್ನ ರೂಪನ್ನು ನೋಡಿ ವ್ಯಾಮೋಹಿತಳಾಗಿ ಮಗನು ಸತ್ತ ದುಃಖವನ್ನು ಮರೆತು, ಈ ರೀತಿ ರೂಪುಪರಾವರ್ತನದಿಂದ ಬಂದಿರುವಳು. ಇವಳು ದಶಕಂಠನ ತಂಗಿ. ಇವಳು ಖರನ ಹೆಂಡತಿಯಾಗಿದ್ದಾಳೆ" ಎಂದು ಹೇಳಲಾಗ ಲಕ್ಷ್ಮಣನು ರಾಮನ ಮುಖವನ್ನು ನೋಡಲು, ಹೊರಗೆ ಕಳುಹಿಸಬೇಕೆಂಬ ಮುಖ ಮುದ್ರೆಯನ್ನು ತೋರಿಸಲು ಇವಳಿಗೆ ತಕ್ಕ ಶಿಕ್ಷೆಯನ್ನು ಮಾಡಬೇಕೆಂದು ನೆನೆಸಿ, ನಾಶಿಕಾಚ್ಛೇದನ ಮಾಡಿದನು. ಸೂರ್ಪನಖಿಯು ಅಲ್ಲಿಂದತಪ್ಪಿಸಿಕೊಂಡು ಓಡಿಹೋಗಿ ತನ್ನ ಅರಮನೆಯನ್ನು ಹೊಕ್ಕು ಮಗನು ಸತ್ತದುಃಖಕ್ಕಾಗಿ ಬಹಳವಾಗಿ ಶೋಕಿಸುತ್ತಿದ್ದಳು. ಇತ್ತ ರಾಘವನು ಸೀತೆಯೊಡನೆ ವಟವೃಕ್ಷದಕೆಳಗೆ ಅರ್ಹತ್ಪರಮೇಶ್ವರರನ್ನು ಧ್ಯಾನಿಸುತ್ತಿದ್ದನು.

೩೨. ಖರನ ಸಂಹಾರ.

ಧರಣೀಪತಿಯೇ! ಅವಧರಿಸುವನಾಗು—ಅಪಮಾನವನ್ನು ಹೊಂದಿದ ಸೂರ್ಪನಖಿಯು ಪ್ರಿಯನಾದ ಖರನೊಂದಿಗೆ, "ಲಕ್ಷ್ಮಣನು ನನ್ನ ಮೇಲೆ ವ್ಯಾಮೋಹದಿಂದ ನನ್ನಸಮೀಪವರ್ತಿಯಾಗುತ್ತಾ ಬರಲು, ನಾನು ಆತನನ್ನು ಧಿಕ್ಕರಿಸಿ ಅತ್ತತ್ತ ದೂರ ಸೇರುತ್ತಿದ್ದರೂ ಥಟ್ಟನೆ ಬಂದು ನನ್ನನ್ನು ಕುರೂಪಿಯಾಗಿ ಮಾಡುತ್ತೇನೆಂದು ಹೇಳಿ ನಾಶಿಕಾಚ್ಛೇದನವನ್ನು ಮಾಡಿದನು. ಇವರು ಅಸಹಾಯರಾಗಿ ವನದಲ್ಲಿದ್ದುಕೊಂಡಿದ್ದರೂ, ಇವರುಗಳು ದುರ್ನಡತೆಯನ್ನು ಬಿಡಲಾರರು. ರಾಮನಿಗೆ ಜಾನಕಿಯು ಪ್ರೀತಿಪಾತ್ರಳಾಗಿರುವದರಿಂದ ಅವನ ಹಗರಣವೇನೂ ಕಾಣುವುದಿಲ್ಲ. ಲಕ್ಷ್ಮಣನು ಏಕಾಂಗಿಯಾಗಿ ಅಣ್ಣನ ಪಾದ ಸೇವೆಗೆ ನಿಂತು, ಈವನದಲ್ಲಿ ಚಲಿಸುವ ನಾರೀಮಣಿಗಳಿಗೆ ವಿಷಾದವನ್ನುಂಟು

ಮಾಡುತ್ತಿರುವನು. ನನ್ನ ಮಗನನ್ನು ನಿರ್ದಯವಾಗಿ ಕೊಂದುದಲ್ಲದೆ ನನ್ನನ್ನು ಸಹ ಹೀನಾಯಮಾಡಿ ಕುರೂಪಿಯಾಗಿ ಮಾಡಿದನು. ಮತ್ತೆ ಇನ್ನೇನು ತಂದೊಡ್ಡುವನೋ ಗೊತ್ತಾಗುವುದಿಲ್ಲ" ಎಂದು ಹೇಳಿದಳು. ಈ ಮಾತುಗಳನ್ನು ಕೇಳಿ ಖರನು ಮೈಮೇಲೆ ಸ್ಮೃತಿಯಿಲ್ಲದಷ್ಟು ಕೋಪಾವಿಷ್ಟನಾದನು. ಆಗ ಅಲ್ಲಿದ್ದು ಈ ಮಾತುಗಳನ್ನು ಕೇಳುತ್ತಿದ್ದ ಧೂಷಣನ ಮಗನಾದ ಸೌಂಧರನು ರೇಗಿ "ಈ ಕ್ಷಣದಲ್ಲಿ ಅವನನ್ನು ಕೊಲ್ಲುವದಲ್ಲದೆ, ರಾಮಸೀತೆಯರನ್ನೂ ಸಹ ನಾನು ಶಿಕ್ಷಿಸದೇ ಬಿಡುವನಲ್ಲ" ಎಂದು ಬಹಳವಾಗಿ ಕುಣಿಯುತ್ತಾ ಯುದ್ಧಕ್ಕೆ ಹೊರಟನು. ಆಗ ಮಂತ್ರಿಗಳು ಖರ ಸೌಂಧರರಿಗೆ "ರಾಮಲಕ್ಷ್ಮಣರುಬಹಳ ಬಲಿಷ್ಟರು. ಅವರನ್ನು ಸಾಮಾನ್ಯ ಮನುಷ್ಯರೆಂತಲೂ, ನೀವು ಸುಲಭವಾಗಿ ಜಯಿಸಬಹುದೆಂತಲೂ ತಿಳಿಯಕೂಡದು. ನಿಮ್ಮ ಸಹಾಯಕ್ಕೆ ಲಂಕಾಪತಿಯಾದ ರಾವಣನನ್ನು ಕರೆದುಕೊಳ್ಳಬೇಕು. ಆದ್ದರಿಂದ ಇಲ್ಲಿನ ವಿದ್ಯಮಾನಗಳನ್ನೆಲ್ಲಾ ಕಾಗದದಲ್ಲಿ ಬರೆದು, ದೂತರ ಮೂಲಕ ಶೂರನಾದ ದಶಕಂಠನಿಗೆ ಕಳುಹಿಸಬೇಕು" ಎಂದು ಹೇಳಲಾಗಿ ರಾಜನಾದ ಖರನೇ ಮೊದಲಾದವರು ಒಪ್ಪಿ ಲಂಕಾಧಿಪತಿಯ ಬಳಿಗೆ ದೂತರನ್ನು ಕಳುಹಿಸಿಕೊಟ್ಟರು. ಸೌಂಧರನು ದಂಡುಗಳನ್ನು ತೆಗೆದುಕೊಂಡು ಆಕಾಶ ಮಾರ್ಗದಲ್ಲೂ, ಭೂಮಾರ್ಗದಲ್ಲೂ, ಎಲ್ಲಾ ದಿಕ್ಕುಗಳಿಂದಲೂ, ಯುದ್ಧಕ್ಕೆ ಕಾಣಿಸಿಕೊಂಡು ಘರ್ಜಿಸಿದನು. ಈ ಭಯಂಕರ ಧ್ವನಿಗಳನ್ನು ಕೇಳಿ ಸೀತೆಯು ಏನಿಷ್ಟು ಅದ್ಭುತವೆಂದು ಕೇಳಲಾಗ ಶ್ರೀರಾಮನು "ಲಕ್ಷ್ಮಣನು ಶಂಭುಕನನ್ನು ಕೊಂದದ್ದರಿಂದ ಅವನಆಪ್ತಮಿತ್ರರು ನಮ್ಮ ಮೇಲೆ ಹಗೆ ತೀರಿಸಿಕೊಳ್ಳುವುದಕ್ಕೋಸ್ಕರ ಯುದ್ಧಕ್ಕೆ ಬಂದಿದ್ದಾರೆ. ಭಯಪಡಬೇಕಾದ ಅವಶ್ಯಕವಿಲ್ಲ." ಎಂದು ಸೀತೆಗೆ ಸಮಾಧಾನದ ಮಾತುಗಳನ್ನು ಹೇಳಿದನು. ಲಕ್ಷ್ಮಣನು ಹೆದರಬೇಕಾದ್ದೇನೂ ಇಲ್ಲ. ಈಗ ಮುತ್ತಿರುವ ರಾಕ್ಷಸರನ್ನೆಲ್ಲಾ ಕಾಗೆಬಡಿದಂತೆ ದಿಕ್ಕಾಪಾಲಾಗಿ ಓಡಿಸಿಬಿಡುತ್ತೇನೆಂದು ಅಟ್ಟಹಾಸಮಾಡಿ ಯುದ್ಧಕ್ಕೆ ಹೊರಟನು. ಸೌಂಧರನು ಲಕ್ಷ್ಮಣನನ್ನು ಕಂಡು, "ಎಲೈ ಮದಾಂಧನೇ! ಹುಡುಗರ ಮೇಲೂ, ಹೆಂಗಸರ ಮೇಲೂ, ಪೌರುಷ ಮಾಡಿ ಗೆದ್ದು ಕೊಂಡನೆಂದು ತಿಳಿದುಕೊಂಡಿದ್ದೀಯೊ. ಈಗನನ್ನೊಡನೆಯುದ್ಧಕ್ಕೆಬಂದು ಗಂಡುತನವನ್ನು ತೋರಿಸು" ಎಂದು ಹೇಳಲಾಗಿ ಲಕ್ಷ್ಮಣನು ಒಂದು ಬಾಣವನ್ನು ಆತನ ಮೇಲೆ ಬಿಡಲಾಗಿ ಅದನ್ನು ಸಹಿಸ ಕೊಳ್ಳಲಾರದೆ ಸೌಂಧರನು ಹಿಂದಕ್ಕೆ ಬರುತ್ತಿದ್ದನು. ಆಗ ಖರನು ಬಂದು ಲಕ್ಷ್ಮಣನೊಡನೆ

ಯುದ್ಧಕ್ಕೆ ಅನುವಾದನು. ಮಹಾಶೂರನಾದ ಲಕ್ಷ್ಮಣನು ಈ ಖರನನ್ನು ನೋಡಿ ಬಾಣಗಳನ್ನು ಬಿಡಲುದ್ಯುಕ್ತನಾಗಲು ಖರನು "ನಿನ್ನ ಬಾಣವು ನನ್ನನ್ನು ಏನೂ ಮಾಡಲಾರದು. ಈ ಗಧೆಯ ಏಟನ್ನು ನೀನು ತಪ್ಪಿಸಿಕೋ" ಯೆಂದು ಗಧೆಯನ್ನೆತ್ತಿ ಲಕ್ಷ್ಮಣನನ್ನು ಪ್ರಹರಿಸಿದನು. ಆಗ ಲಕ್ಷ್ಮಣನು ಸ್ವಲ್ಪ ಹಿಂದಕ್ಕೆ ಸರಿದು ವಿಸ್ಮೃತಿಯನ್ನು ಹೊಂದಿ, ಪುನಃ ಯುದ್ಧಕ್ಕೆ ಸಿದ್ಧವಾಗಿ ನಿಂತು, "ಎಲೈ ಖರಧನುಜನೇ! ನೀನೆಷ್ಟು ಯುದ್ಧಮಾಡಿದರೂ ನೀನೆಷ್ಟು ಕಾಲ ಬದುಕಿಕೊಳ್ಳಬಹುದೆಂದು ಎಣಿಸುತ್ತೀಯೆ" ಎಂದು ಮಹಾಬಾಣವನ್ನು ಬಿಡಲು ಖರನು ಭೂಗತನಾದನು. ಆತನ ಸೇನೆಯೆಲ್ಲವು ಹಿಂತಿರುಗಿ ಪಲಾಯನವಾಯಿತು. ಅನಂತರ ಶ್ರೀರಾಮನ ಸಮೀಪಕ್ಕೆ ಲಕ್ಷ್ಮಣನು ಬಂದು ನಡೆದ ವೃತ್ತಾಂತವನ್ನು ತಿಳಿಸಿ, ತನ್ನ ಜಯಶೀಲತ್ವವನ್ನು ತೋರ್ಪಡಿಸಿದನು. ರಾಮನು ಜಾನಕಿಯೊಡನೆ ಈ ಸಮಾಚಾರಗಳನ್ನೆಲ್ಲಾ ಕೇಳುತ್ತಾ, ಪರಮಾತ್ಮರಾದ ಜಿನಚಂದ್ರರನ್ನು ತ್ರಿಕರಣದಿಂದಲೂ ನಮಿಸಿ ಧ್ಯಾನಿಸುತ್ತಿದ್ದನು.

೩೩. ಧೂಷಣನ ಸಂಹಾರ.

ಪರಮ ಶಾಂತ ಸ್ವರೂಪರಾದ ಗೌತಮಗಣಧರರು ಶ್ರೋತೃ ಮುಖ್ಯನಾದ ಶ್ರೇಣಿಕನಿಗೆ ಮುಂದಲ ಧೂಷಣನ ವಿಷಯವನ್ನು ಹೇಳಲನುವಾದರು. ಈ ದಂಡಕಾರಣ್ಯ ಮಧ್ಯದಲ್ಲಿ ಶ್ರೀರಾಮನು ಸೀತೆಯೊಡನೆ ಲಕ್ಷ್ಮಣನನ್ನು ಕೂಡಿಕೊಂಡು ವಾಸಮಾಡುತ್ತಿರುವಾಗ ಅನೇಕ ತೊಂದರೆಗಳು ಬರಲಾರಂಭವಾದವು. ಪರಮ ಶಾಂತನಾದ ರಾಮನು ಯಾವ ತೊಂದರೆಗಳು ಬಂದಾಗ್ಯೂ ಮನಸ್ಸಿಗೆ ಹತ್ತಿಸಿಕೊಳ್ಳುತ್ತಿರಲಿಲ್ಲ. ಜಾನಕಿಯು ಕೇವಲ ಮೃದು ಸ್ವಭಾವದವಳಾದ್ದರಿಂದ ಅವಳಿಗೆ ಈ ದಂಡಕಾರಣ್ಯ ವಾಸವು ಬೇಸರಿಕೆಯಾಗುತ್ತಿತ್ತು. ಹಾಗಿದ್ದರೂ ಪತಿ ಸೇವೆಯೇ ಮುಖ್ಯವೆಂದು ತಿಳುದುಕೊಂಡಿದ್ದ ಸೀತಾದೇವಿಗೆ ಮನೋದುಃಖವು ಏನೂ ಉಂಟಾಗಿರಲಿಲ್ಲ. ಆದಾಗ್ಯೂ ಸೀತಾದೇವಿಗೆ ತಾನು ರಾಮನನ್ನು ಅಗಲಿ ಎಲ್ಲೋ ಗೊತ್ತಿಲ್ಲದ ಸ್ಥಳದಲ್ಲಿ ಆತನನ್ನು ನೆನೆದು ದುಃಖಪಡುತ್ತೇನೆಂಬ ಸ್ವಪ್ನಗಳು ಬೀಳುತ್ತಿದ್ದವು. ಎಚ್ಚತ್ತ ಕೂಡಲೇ ರಾಮನು ದೃಷ್ಟಿಗೆ ಬೀಳುತ್ತಿದ್ದುದರಿಂದ ಸೀತೆಯು ಸಮಾಧಾನವುಳ್ಳ ಚಿತ್ತದಿಂದಿರುತ್ತಿದ್ದಳು. ಇತ್ತ ಧನುಜ ವಿದ್ಯೆಯುಳ್ಳ ವಿರಾಧಿತನೆಂಬ ಖೇಚರನು ಲಕ್ಷ್ಮಣನ ಸಮೀಪವರ್ತಿಯಾಗಿ, " ಈ ಖರಧೂಷಣರು ನಮ್ಮ ಪಿತ್ರಾರ್ಜಿತ

ವಾದ ಪಾತಾಳಲಂಕೆಯನ್ನು ಸೂರೆಗೊಂಡರು. ನನಗೆ ಆ ಪಟ್ಟಣವು ದೊರೆ ಯುವಂತೆ ತಾವು ಸಹಾಯ ಮಾಡಬೇಕು " ಎಂಬುದಾಗಿ ಬೇಡಿಕೊಂಡನು. ಲಕ್ಷ್ಮಣನು ರಾಮನಸಮೀಪಕ್ಕೆ ವಿರಾಧಿತನನ್ನು ಕರೆದುಕೊಂಡುಹೋಗಿ ಈತನ ವಿಷಯವನ್ನು ಶೃತಪಡಿಸಲಾಗ ರಾಮನು ಯಾವ ಮಾತನ್ನೂ ಆಡದಿದ್ದರೂ ಅನುಮತಿಕೊಟ್ಟಂತೆ ತೋರಲ್ಪಟ್ಟನು. ಅತ್ತ ಖರನು ಮಡಿದ ವರ್ತಮಾನ ವನ್ನು ಆತನ ತಮ್ಮನಾದ ಧೂಷಣನು ಕೇಳಿ, ಬಹಳವಾಗಿ ಅನುತಾಪವನ್ನು ಹೊಂದಿದನು. ಮತ್ತು ತನ್ನ ಅಣ್ಣನು ಹೋದನಂತರ ತಾನು ಯುದ್ಧಕ್ಕೆಹೋಗಿ ಜೀವಿತಾಂತ್ಯದವರಿಗೂ ಕಾಯುವುದೇಲೇಸೆಂದು ಯೋಚಿಸಿ, ಯುದ್ಧಕ್ಕೆ ಹೊ ರಟನು, ಅಷ್ಟರಲ್ಲಿ ಸೌಂಧರನು ಲಕ್ಷ್ಮಣನ ಕೂಡ ಯುದ್ಧಕ್ಕೆ ತೊಡಗಿದ್ದನು. ಆಗ ಧೂಷಣನು ತಾನು ಹಿಂದಿರಲಾರದೆ ಯುದ್ಧಕ್ಕೆ ಮುಂದಾಗಿ ಲಕ್ಷ್ಮಣನೆದು ರಿಗೆ ಬಂದು ನಿಂತನು. ಆಗ ಲಕ್ಷ್ಮಣನು "ಇದೇನು? ಧೂಷಣನೇ! ಹಿಂದೆ ಈ ವಿರಾಧಿತನ ತಂದೆಯಾದ ಚಂದ್ರೋದರನನ್ನು ಸಂಹರಿಸಿ ಈ ಪಾತಾಳಲಂಕೆ ಯನ್ನು ಆಕ್ರಮಿಸಿಕೊಂಡಿರುವಿರಿ. ಈ ಪಟ್ಟಣವನ್ನು ವಿರಾಧಿತನಿಗೆ ನೀನು ಒಪ್ಪಿಸಿಬಿಡಬೇಕು. ಈ ಪಟ್ಟಣವನ್ನು ಇವನಿಗೆ ಕೊಡಿಸುವುದಕ್ಕಾಗಿ ನಿಮ್ಮ ಅಣ್ಣನನ್ನು ಇಹಲೋಕದಿಂದ ನಾನು ಹೊರಡಿಸಿರುವೆನು. ನೀನಾದರೂ ಒಳ್ಳೆ ಮಾತಿನಿಂದ ಆಪಟ್ಟಣವನ್ನು ಇವನಿಗೆ ವಹಿಸುತ್ತೀಯಾ" ಎನಲು ಧೂಷಣನು ಚಂದ್ರೋಧರನಿಗೆ ಈ ವೀರಾಧಿತನು ಹೇಗೆ ಮಗನಾದಾನೆಂದು ಕೇಳಲಾಗ ಲಕ್ಷ್ಮಣನು "ಚಂದ್ರೋಧರನು ಸಾಯುವಾಗ್ಯೆ ಆತನ ಹೆಂಡತಿ ಗರ್ಭಿಣಿಯಾಗಿ ದ್ದಳು. ಅವನ ಮರಣಾನಂತರ ಈತನನ್ನು ಹಡೆದಳು. ಈಚೆಗೆ ಇವನು ಅ ಜ್ಞಾತವಾಸದಿಂದಬೆಳೆದು ಈಗ ಸಮರ್ಥನಾಗಿ ತಮ್ಮ ವಂಶಜರ ಪಟ್ಟಣವಾದ ಪಾತಾಳಲಂಕೆಯನ್ನು ಕೇಳಲು ಸಮರ್ಥನಾಗಿಧಾನೆ" ಎಂದು ಹೇಳಿದ ಮಾತು ಗಳನ್ನು ಧೂಷಣನು ಕೇಳಿ, ಲಕ್ಷ್ಮಣನ ಮೇಲೆ ಮೊದಲಿದ್ದ ಕೋಪಕ್ಕೆ ಮಿಗಿ ಲಾಗಿ ಸಹಸ್ರಪಾಲು ಹಗೆಯುಳ್ಳವನಾದನು. ಅನಂತರ ಧೂಷಣನು " ನೀನು ವನಚರನಾಗಿ ಒಬ್ಬರ ಪಟ್ಟಣವನ್ನು ಒಬ್ಬರಿಂದ ಕಿತ್ತು ಇನ್ನೊಬ್ಬರಿಗೆಕೊಡಲು ಇದೇನು ಒಂದು ಗೀಜಗದ ಗೂಡಿನಂತೆ ಪಾತಾಳಲಂಕೆಯಿರುವುದೆಂದು ತಿಳಿದಿ ರುವೆಯಾ ? ಸುಮ್ಮನೆ ಉಪಯೋಗವಿಲ್ಲದ ಮಾತಿನಿಂದ ಹೊತ್ತನ್ನು ಏತಕ್ಕೆ ಕಳೆಯುತ್ತೀಯೆ? ಯುದ್ಧಕ್ಕೆ ಬಾ " ಎಂದು ಕರೆದನು. ಅನಂತರ ಇಬ್ಬರಿಗೂ ಪರಸ್ಪರವಾಗಿ ಘೋರತರವಾದ ಯುದ್ಧವು ಪ್ರಾರಂಭಿಸಿತು. ಧೂಷಣನು

ಅನೇಕ ದಂಡುಗಳಿಂದ ಲಕ್ಷ್ಮಣನ ಮೇಲೆ ಬಿದ್ದು ಹಿಂಸೆ ಮಾಡತೊಡಗಿದನು. ಲಕ್ಷ್ಮಣನ ಒಂದೊಂದುಬಾಣದಿಂದಲೇ ಒಂದೊಂದು ದಿಕ್ಕಿನ ಸೈನ್ಯಗಳು ಭೂಶಯನವಾಗುತ್ತಿದ್ದವು. ಕೊನೆಗೆ ಲಕ್ಷ್ಮಣನು ತನ್ನ ಅದ್ವಿತೀಯವಾದ ಅಸ್ತ್ರವನ್ನು ಧೂಷಣನ ಮೇಲೆ ಪ್ರಯೋಗಿಸಲು ಅವನು ಆ ಏಟಿನಿಂದ ಹಿಮ್ಮೆಟ್ಟುತ್ತಿದ್ದನು. ಹಾಗಾದರೂ ಚೇತರಿಸಿಕೊಂಡು ಬರುವಷ್ಟರಲ್ಲಿ ಸೌಂಧರನು ಲಕ್ಷ್ಮಣನ ಮುಂದೆ ಯುದ್ಧಕ್ಕೆ ಸಿದ್ಧನಾಗಿ ಅನೇಕ ದಿವ್ಯಾಸ್ತ್ರಗಳನ್ನು ಆತನ ಮೇಲೆ ಬಿಟ್ಟನು. ಲಕ್ಷ್ಮಣನು ಅವುಗಳನ್ನು ಲೀಲಾಮಾತ್ರದಿಂದ ಅವನ ಬಾಣಗಳನ್ನೆಲ್ಲ ಮುರಿದು ಒಂದು ಬಾಣವನ್ನು ಬಿಡಲಾಗಿ ಸೌಂಧರನನ್ನು ಆ ಬಾಣವು ನಾಟಿ ದೀರ್ಘನಿದ್ರೆಯನ್ನುಂಟುಮಾಡಿತು. ಅಷ್ಟರಲ್ಲೇ ಧೂಷಣನು ಯುದ್ಧಕ್ಕೆ ಬಂದು ಲಕ್ಷ್ಮಣನ ಮೇಲೆ ಬಾಣಗಳ ಮಳೆಯನ್ನು ಕರೆದನು. ಆತನು ಅವುಗಳನ್ನು ಲೆಕ್ಕಿಸದೆ ಒಂದು ಅಸ್ತ್ರವನ್ನು ಉಪಯೋಗಿಸಲು ಆ ಬಾಣವು ಹೃದಯವನ್ನು ಭೇದಿಸಿ ಧೂಷಣನ ಪ್ರಾಣವನ್ನು ತೆಗೆದುಕೊಂಡು ಹೊರಬಿತ್ತು. ಆಗ ಲಕ್ಷ್ಮಣನು ಯುದ್ಧ ಕಾರ್ಯವನ್ನು ಅಷ್ಟಕ್ಕೆ ನಿಲ್ಲಿಸಿ ಶ್ರೀರಾಮನ ಸನ್ನಿಧಿಗೆ ಬಂದು ಯುದ್ಧದ ವರ್ತಮಾನಗಳನ್ನೆಲ್ಲಾ ಹೇಳಲಾಗಿ ಜಾನಕೀ ಸಹಿತನಾದ ಶ್ರೀರಾಮನು ಅಷ್ಟಾದಶ ದೋಷರಹಿತರಾದ ಜಿನೇಶ್ವರರ ಪಾದಕಮಲಗಳನ್ನು ಮನಸ್ಸಿನಲ್ಲಿ ನೆನೆಯುತ್ತಿದ್ದನು.

೩೪. ಸೀತಾಪಹರಣ.

ಎಲೈ ಶ್ರೇಣಿಕ ಮಹಾರಾಜನೇ! ಮುಂದಣ ಕಥಾಂತರವನ್ನು ಕೇಳು– ಹಿಂದೆ ಖರಧೂಷಣಾದಿಗಳ ಮೇಲೆ ಲಕ್ಷ್ಮಣನು ಯುದ್ಧಕ್ಕೆ ಹೊರಟಾಗ ಜಾನಕಿಯು ರಾಘವನನ್ನುನೋಡಿ "ಇಂಥಾ ಮಹಾಯುದ್ಧಕ್ಕೆ ಬಾಲಕನಾದ ಲಕ್ಷ್ಮಣನೊಬ್ಬನನ್ನೇ ಕಳುಹಿಸುವುದು ಹೇಗೆ? ಒಂದು ವೇಳೇ ಅವನು ಯುದ್ಧದ ಬಾಧೆಗೆ ಹಿಮ್ಮೆಟ್ಟಿದರೆ ಅವನ ಸಹಾಯಕ್ಕೆ ತಾವು ತಿಳಿದು ಹೋಗುವ ರೀತಿ ಹೇಗೆ" ಎಂದು ಕೇಳಲಾಗ–ಶ್ರೀರಾಮನು "ನಾನು ಈತನ ಕೂಡಲೇ ಹೋಗಬಹುದು; ನೀನು ಜಟಾಯುವಿನೊಂದಿಗೆ ಬೇಸರಿಕೆಯಿಲ್ಲದೆ ಕಾಲವನ್ನು ಕಳೆಯಬಹುದು" ಎಂದು ಹೇಳಲಾಗಿ ಲಕ್ಷ್ಮಣನು "ಅಂಥಹ ಬಾಧೆಗಳು ನನಗೆ ಒದಗುವುದೇ ಇಲ್ಲ. ನನಗೆ ಒಂದು ವೇಳೆ ಯುದ್ಧದಲ್ಲಿ ಅಶಕ್ತತೆಯುಂಟಾದದ್ದೇ ಆದರೆ ಸಿಂಹನಾದವನ್ನು ಮಾಡುತ್ತೇನೆ. ಆಗ್ಯೆ ತಾವು ಸಹಾಯಕ್ಕೆ ಬರ

ಬಹುದು" ಎಂದು ಹೇಳಿದ್ದನು. ಅದರಂತೆ ರಾಮನು ಒಪ್ಪಿ ಲಕ್ಷ್ಮಣನನ್ನು ಕಳುಹಿಸಿಕೊಟ್ಟಿದ್ದನು. ಈ ಯುದ್ಧದಲ್ಲಿ ಅನೇಕಸಿಂಹನಾದಗಳು ಧೂಷಣನಿಂದ ಮಾಡಲ್ಪಡುತ್ತಿದ್ದವು. ಅದರಲ್ಲೊಂದು ಕಾಲದಲ್ಲಿ ಧೂಷಣನು ಯುದ್ಧದಲ್ಲಿ ತನಗೆ ಸೋಲಾಗುತ್ತಿದ್ದದ್ದನ್ನು ತಿಳಿದುಕೊಂಡು ಮಹಾಕೋಪಿಷ್ಟನಾಗಿ ಮಹಾ ಯುದ್ಧಕ್ಕೆ ಆರಂಭಿಸಿ ಯುದ್ಧಪ್ರಾರಂಭವಲ್ಲಿ ತನ್ನ ಸರ್ವಶಕ್ತಿಯಿಂದೊಡಗೂಡಿ ಸಿಂಹನಾದವನ್ನು ಮಾಡಿದ್ದನು.

ಇತ್ತ ಖರಧೂಷಣಾದಿಗಳು ಮೃತಿಹೊಂದಲು ಸೂರ್ಪನಖಿ ಮತ್ತು ತಾಟಕಿಯರು ಬಹಳವ್ಯಸನವನ್ನು ಹೊಂದಿ, ಲಂಕೇಶ್ವರನಿಗೆ ಈ ವಿಷಯವನ್ನು ತಿಳಿಸಬೇಕೆಂದು ವಿದ್ಯಾಸಾಮರ್ಥ್ಯದಿಂದ ವಾಯುವೇಗದಲ್ಲಿ ಹೊರಟು ಲಂಕಾ ಮಧ್ಯಸ್ಥಿತ ಅರಮನೆಯ ಅಂತಃಪುರಕ್ಕೆ ಹೋದರು. ಅಲ್ಲಿ ಆರಾವಣನು ಸ್ತ್ರೀ ಯರೊಡನೆ ವಿನೋದವಾಗಿ ಕಾಲಕಳೆಯುತ್ತಲಿದ್ದನು. ಸೂರ್ಪನಖಿ ಮತ್ತು ತಾಟಕಿಯರು ರಾವಣನ ಮುಂದೆ ಬಿದ್ದುಕೊಂಡು ಹೊರಳಿ ಗೋಳಾಡಿದರು. ರಾವಣನು ಯಾತಕ್ಕೆಂದು ಕೇಳಲು, ಹಿಂದೆ ನಡೆದ ವಿದ್ಯಮಾನವನ್ನು ಹೇಳ ಲಾಗ ಪ್ರಚಂಡದೊರೆಯಾದ ರಾವಣನು ಕೇಳಿ ಕ್ಷಣಕಾಲವೂ ನಿಲ್ಲಲಾರದೆ, ಸೇನಾಪತಿಯಾದ ಮಾರೀಚನೊಡನೆ ರಾಮಲಕ್ಷ್ಮಣರನ್ನು ತೋರಿಸುವದಕ್ಕಾಗಿ ಸಹೋದರಿಯರನ್ನೂ ಸಹ ವಿಮಾನದ ಮೇಲೆ ಕುಳ್ಳಿರಿಸಿಕೊಂಡು ದಂಡಕ ವನಕ್ಕೆ ಬಂದನು. ಅಷ್ಟರಲ್ಲಿ ಸಿಂಹನಾದವು ಕೇಳಲ್ಪಟ್ಟಿತು. ಸೀತೆಯು ರಾಘ ವನನ್ನು ಕುರಿತು "ಸ್ವಾಮಿಯೇ! ಬಾಲಕನ ಸಿಂಹನಾದವಾಗುತ್ತಿದೆ. ಕಿವಿಕೊಟ್ಟು ಕೇಳಬೇಕು" ಎಂದು ಪ್ರಾರ್ಥಿಸಲಾಗ, ರಾಘವನು "ನಾನು ಕೇಳಿದೆ. ಅದು ಲಕ್ಷ್ಮಣನು ಮಾಡಿದ್ದಲ್ಲ. ಯಾವನೋ ರಾಕ್ಷಸನು ಯುದ್ಧಕಾಲದ ಪೆಟ್ಟನ್ನು ತಡೆಯಲಾರದೆ ಅರಿಚಿದ್ದಾನೆ" ಎಂದನು. ಜಾನಕಿಯು "ಏನು? ಸ್ವಾಮಿಯೇ! ಸಿಂಹನಾದವನ್ನು ಕೇಳಿದಕೂಡಲೇ ಬರಬೇಕೆಂದು ಲಕ್ಷ್ಮಣನು ತಮ್ಮಲ್ಲಿ ಬೇಡಿ ಕೊಂಡನು. ಅದಕ್ಕೆ ಕರುಣಾಳುಗಳಾದ ತಾವು ಒಪ್ಪಿಕೊಂಡಿರಿ! ಈಗ ಬಾಲಕನ ವಿಷಯದಲ್ಲಿ ಉದಾಸೀನರಾಗಿರುವಂತೆ ನಾನು ತಿಳಿಯುತ್ತೇನೆ. ಸುಮಿತ್ರಾದೇವಿ ಯವರು ತಮ್ಮ ಪುತ್ರನಾದ ಲಕ್ಷ್ಮಣನಿಗೆ ನಿಮ್ಮ ಅಣ್ಣ ಮತ್ತು ಅತ್ತಿಗೆಯರಿಗೆ ವಿಧೇಯನಾಗಿರು; ಅವರ ಮಾತಿಗೆ ಪ್ರತಿಹೇಳಬೇಡವೆಂದು ಹೇಳಿರಲಿಲ್ಲವೇ? ದೇವಿಯವರು ನಮ್ಮನ್ನೇ ನೆಚ್ಚಿ ಲಕ್ಷ್ಮಣನನ್ನು ಸಹ ಕಳುಹಿಸಿಕೊಟ್ಟರು. ತಾವು ದಯಾವಂತರಾಗಿದ್ದು ಈಗ ನನ್ನ ಮೇಲೆ ಪ್ರೀತಿಯಿಂದ ಹೊರಡದೆ ಅನುಜನ

ಮೇಲೆ ಅವಿಶ್ವಾಸವನ್ನು ಬೀರುವುದು ಸಹಜವೇ? " ಎಂದು ಕೇಳಲಾಗ ರಾಘವನು "ಲಕ್ಷ್ಮಣನಿಗೆ ಅಪಾಯವೆಂದರೇನು? ಅವನು ತನ್ನ ಸಹಾಯಕ್ಕೆ ಇತರರನ್ನು ಕೋರುವುದೆಂದರೇನು? ಇವೆಲ್ಲಾ ವಿಚಾರವಿಲ್ಲದ ಮಾತು. ನೀನು ಧೈರ್ಯವಾಗಿರು. ಸ್ವಲ್ಪಹೊತ್ತಿನಲ್ಲೇ ಲಕ್ಷ್ಮಣನು ಬರುತ್ತಾನೆ" ಎಂದು ಎಷ್ಟು ಹೇಳಿದರೂ ಕೇಳದೆ ರಾಮನನ್ನು ಹೋಗಿ ನೋಡಲೇ ಬೇಕೆಂದು ಬಲಾತ್ಕರಿಸಿದಳು. ಅದರ ಮೇಲೆ ರಾಮನು ಸೀತೆಯನ್ನು ಬಿಟ್ಟುಹೋಗಲು ಕಳವಳಗೊಂಡು ಪ್ರಿಯಕಾಂತೆಯ ಮಾತನ್ನು ನಡೆಸಬೇಕೆಂದು ಯೋಚಿಸುತ್ತಿರುವಲ್ಲಿ ಒಂದು ಸುವರ್ಣಮಯವಾದ ಹುಲ್ಲೆಯುಮರಿಯು ನದಿಯ ದಡದಿಂದ ಇವರಿಗೆದುರಾಗಿ ಬರುತ್ತಿತ್ತು. ಸೀತೆಯು ಆ ಹುಲ್ಲೆಯನ್ನು ನೋಡಿ "ಈ ತರಹದ ಹುಲ್ಲೆಯೂ ಇರುತ್ತದೆಯೇ? ಅದನ್ನು ನನಗೆ ಅವಶ್ಯಕವಾಗಿ ತಂದುಕೊಡಬೇಕು" ಎಂದು ಬೇಡಿಕೊಂಡಳು. ಆಗ ಜಟಾಯುವನ್ನು ಸೀತೆಯ ಸನ್ನಿಧಿಯಲ್ಲಿರುವಂತೆ ಹೇಳಿ ಸೀತೆಗೆ ಮೃಗದ ಬಾಧೆಗೆ ಸಿಕ್ಕದೆ ಕುಟೀರದೊಳಗಿರಬೇಕೆಂದು ಅಪ್ಪಣೆ ಕೊಡಿಸಿದನು. ತಾನು ಧನುರ್ಬಾಣಧಾರಿಯಾಗಿ ಲಕ್ಷ್ಮಣನನ್ನೂ ಈ ಮೃಗವನ್ನೂ ಸಹ ಹುಡುಕಿಕೊಂಡು ಹೊರಟನು.

ಇತ್ತ ಬಂದ ರಾವಣನು ಸೀತೆಯನ್ನು ಕದ್ದುಕೊಂಡು ಹೋಗುವುದಕ್ಕೆ ಹಿಂದೆ ಹೇಳಿದಂತೆ ಮಾರೀಚನು ವೈಕುರ್ವಣ ವಿದ್ಯೆಯಿಂದ ಹುಲ್ಲೆಯ ರೂಪಿನಿಂದ ಹೋದನಂತರ, ತಾನು ಸೀತಾದೇವಿಯ ಕುಟೀರದ ಹತ್ತಿರಕ್ಕೆ ಬಂದು ಆ ರೂಪನ್ನು ಅದೃಶ್ಯರೂಪದಲ್ಲಿ ನಿಂತು ಅವಳನ್ನು ನೋಡಿ ಕಾಮದಿಂದ ಅತ್ಯಂತ ಪೀಡಿತನಾಗಿ ಸೀತೆಯನ್ನು ಪರಿಪರಿರೂಪಿನಿಂದ ವರ್ಣಿಸಿ, ಅವಳನ್ನು ತೆಗೆದುಕೊಂಡು ಹೋಗುವುದಕ್ಕೆ ಒಂದು ವಿದ್ಯೆಯನ್ನು ಕರೆದು ಸಹಾಯಾರ್ಥವಾಗಿ ಕೆಲವು ಕೆಲಸಗಳನ್ನು ಮಾಡುವಂತೆ ಹೇಳಿಕಳುಹಿಸಿದನು. ಆ ವಿದ್ಯೆಯು ಬಡತಪಸ್ವಿಯಂತೆರೂಪನ್ನು ಮಾಡಿಕೊಂಡು ಕುಟೀರದ ಹತ್ತಿರ ನಿಂತುಕೊಂಡು ರಾಮನ ಗುಣಗಳನ್ನು ಕುರಿತು ಬಹಳವಾಗಿ ಹೊಗಳಿದನು. ಆಗ ಸೀತೆಯು ಅದನ್ನು ಕೇಳಿ ಕುಟೀರದಿಂದ ಹೊರಗೆ ಬಂದು ನೀನು ಯಾರೆಂದು ಬೆಸಗೊಳ್ಳಲಾಗ ಆ ಕೃತಕ ತಪಸ್ವಿಯು "ನಾನು ಚರ್ಯಾ ನಿಮಿತ್ತವಾಗಿ ಕಾಂತಾರದಲ್ಲಿ ಬಾವಲಿಯಿಟ್ಟು ಸಂಚಾರ ಮಾಡುವೆನು" ಎಂಬುದಾಗಿ ಹೇಳಲು ಸೀತಾದೇವಿಯು ಯತಿಗಳಿಗೆ ಕುಳಿತುಕೊಳ್ಳಲು ಪೀಠವನ್ನು ಒದಗಿಸ ಬೇಕೆಂದು ಅತ್ತಿತ್ತ ನೋಡುತ್ತಿರಲು, ಅಲ್ಲೊಂದು ಮಣೆಯು ಕಣ್ಗೊಳಿಸಿತು. ಅದು ಸೀತಾದೇವಿ

ಯ ಕೈಸ್ಪರ್ಶವಾದ ಕೂಡಲೇ ಅವಳ ಪಾದದ ಕೆಳಗೆ ಬಂದಿತು. ಅಷ್ಟರಲ್ಲೇ ಅದೊಂದು ವಿಮಾನದಂತೆ ಕಾಣಿಸಿತು. ಆ ವಿಮಾನವು ಆಕಾಶದಲ್ಲಿ ಹಾರು ತ್ತದೆಂಬ ಚಿಹ್ನೆಯೂ ಗೊತ್ತಾಯಿತು. ಆಗ ಜಟಾಯುವು ಇದನ್ನು ನೋಡಿ ಹಾರುವಿಕೆಯನ್ನು ತಡೆಯಲು ರೆಕ್ಕೆಗಳನ್ನು ಬಡಿಯುತ್ತಾ ಹೋಗಲು ರಾವಣನು ರೆಕ್ಕೆಗಳನ್ನು ಕತ್ತರಿಸಿ ಕೆಳಕ್ಕೆ ಕೆಡವಿದನು. ಅಷ್ಟರಲ್ಲೇ ರಾವಣ ಸಹಿತವಾದ ವಿಮಾನವು ವಾಯುಃ ಮಾರ್ಗದಲ್ಲಿ ಎಲ್ಲೋ ಹಾರಿಹೋಯಿತು. ಇತ್ತರಾಮನು ಆ ಚಿನ್ನದ ವರ್ಣದ ಮೃಗಕ್ಕಾಗಿ ಶ್ರಮಪಟ್ಟು ಅದು ದೊರೆಯದೇ ಅಲೆಯು ತ್ತಿರುವಾಗ ಲಕ್ಷ್ಮಣನು ಎದುರಾಗಿ ಬಂದು "ಅಗ್ರಜನೇ! ಭೂಸುತೆಯಲ್ಲಿ? ಅವಳನ್ನು ಬಿಟ್ಟು ನೀನು ಒಬ್ಬನೇ ಬರಲು ಕಾರಣವೇನು? ಈ ಕಾಡು ಮೃಗ ಗಳಿಂದ ಅವಳಿಗೇನಾದರೂ ಬಾಧೆಬಂದರೆ ಹೇಗೆ?" ಎಂದು ಕೇಳಲಾಗಿ ಸಿಂಹ ನಾದವನ್ನು ಕೇಳಿ ಜಾನಕಿಯು ನಿನ್ನ ರಕ್ಷಣಾರ್ಥವಾಗಿ ನನ್ನನ್ನು ಹೋಗಿಯೇ ತೀರಬೇಕೆಂದು ಬಲಾತ್ಕಾರ ಮಾಡಿದ್ದರಿಂದ ನಾನು ಬಂದೆನೆಂದು ಹೇಳಲಾಗ ಲಕ್ಷ್ಮಣನು ಬಹಳ ಕಂಗೆಟ್ಟು ರಾಮನೊಡನೆ ಅತಿ ಶೀಘ್ರವಾಗಿ ಕುಟೀರದ ಹತ್ತಿರಬಂದು ಹುಡುಕುತ್ತಿರುವಾಗ ಶ್ರೀರಾಮನು ಅರ್ಹತ್ಪರಮೇಶ್ವರನ ಪಾದಗಳನ್ನು ಧ್ಯಾನ ಮಾಡುತ್ತಲಿದ್ದನು.

೩೫. ಸೀತಾದೇವಿಯ ಪ್ರಲಾಪ

ವಿಶ್ವಂಭರರಾಜನಾದ ಶ್ರೇಣಿಕನೇ ಕೇಳು! ಶ್ರೀರಾಮನು ಕುಟೀರದಲ್ಲಿ ಸೀತೆಯನ್ನು ಕಾಣದೇ, ಸೀತೆಯು ತಾನು ಬರುವುದಕ್ಕೆ ತಡವಾದ್ದರಿಂದ ತನ್ನ ಮೇಲಿನ ಕೋಪದಿಂದ ಮರೆಯಾಗಿ ಅವಿತುಕೊಂಡಿರಬಹುದೆಂದು ಯೋಚಿಸಿ, ಅಲ್ಲಿರತಕ್ಕ ಸಮೀಪದ ಗುಲ್ಮಗಳಲ್ಲಿ ಹುಡುಕಿದನು. ಅಲ್ಲಿ ಸೀತೆಯನ್ನು ಕಾಣದೆ ಸೀತೆಯು ಎಲ್ಲಿ ಹೋದಳೋ? ಅವಳಿಗೆ ಅರಣ್ಯದಲ್ಲಿ ಮಾರ್ಗವೇನು ಗೊತ್ತು. ಒಂದು ವೇಳೆ ಗೊತ್ತು ಮಾಡಿಕೊಂಡಿದ್ದರೂ ಅವಳ ವಿಶ್ರಾಂತಿಗೆ ತಕ್ಕ ಜಾಗ ವೆಲ್ಲಿದೆ? ವಿಶ್ರಾಂತಿಗೆ ಜಾಗವಿದ್ದರೂ ನನ್ನನ್ನು ಅಗಲಿ ಇಷ್ಟು ದೀರ್ಘಕಾಲ ಎಲ್ಲಿಗೆ ಹೋದಾಳೆಂಬ ಯೋಚನೆಗಳು ತರಂಗತರಂಗವಾಗಿ ಬರುತ್ತಲಿದ್ದವು. ಅಲ್ಲದೆ ಅವಳು ಕಾಡುಮೃಗದಿಂದ ಕೆಳೆದುಕೊಂಡು ಹೋದಳೋ? ಇಲ್ಲವೇ ಅವಳು ಜೀವದಿಂದಿರುವಳೋ? ಅಲ್ಲದೆ ತಾನುಮುಂದೆಲ್ಲಿ ತಾನೇ ನೋಡವುದು ಎಂಬ ಮನೋಭಾವವು ಕುಟ್ಟುತ್ತಲೇ ನಿಂತುಕೊಂಡಿದ್ದವನು, ಚೈತನ್ಯವಿಲ್ಲ

ದವನಾಗಿ ಕೂತುಕೊಂಡನು. ಆಗ ಕೂತುಕೊಳ್ಳಲು ಚೈತನ್ಯವಿಲ್ಲದೆ ಮಲಗಿಕೊಂಡನು. ಮಲಗಿಕೊಳ್ಳುತ್ತಲೆ ತರಂಗ ತರಂಗವಾಗಿ ಬರುವ ಮನೋಭಾವಗಳನ್ನು ತಡೆಯಲಾರದೇ ಹುಚ್ಚನಂತೆ ಯಾವ ಕೆಲಸ ಮಾಡುವುದಕ್ಕೂ ಸರಿಯಾದ ಸ್ಥಿತಿಯನ್ನು ಹೊಂದದೆ, ಪ್ರತಿಯೊಂದು ಕೆಲಸವಲ್ಲೂ ಮಾಡಬೇಕೆಂಬ ಕುತೂಹಲವುಳ್ಳವನಾಗಿ ಪ್ರಯತ್ನ ಮಾಡುವನಾಗಿಯೂ ಆಗಿ ಹಾಗೇನೆ ಸ್ವಲ್ಪ ಹೊತ್ತು ಇಂದ್ರಿಯವ್ಯಾಪಾರಕ್ಕೆ ಜ್ಞಾನವು ತಡೆದು ಯೋಗನಿಷ್ಟನಂತೆ ಸಮಾಧಿಗತನಾಗಿ ಹಾಗೆ ನಿಶ್ಚೇಷ್ಟಿತನಾದನು. ಆಗ ಸ್ವಲ್ಪ ಜ್ಞಾನವು ಬರಲು ಸೀತಾದೇವಿಯನ್ನು ತಾನು ಪ್ರಥಮತಃ ರಾಜಭವನದಲ್ಲಿ ಸ್ವಲ್ಪಕಾಲನೋಡಿದ್ದು ಜ್ಞಾಪಕ ಬಂದಕೂಡಲೇ ಅವನೆದುರಿಗೆ ಸೀತೆಯ ಬಾಲ್ಯರೂಪು ಪ್ರತ್ಯಕ್ಷವಾಗಿ ಕಣ್ಣಿಗೆಕಂಡಂತಾಯಿತು. ಹಾಗೆಯೇ ಅದೃಶ್ಯವಾದಂತೆ ತೋರಲು ಸೀತೆಯು ತನ್ನನ್ನು ಕಂಡು ನಾಚಿಕೆಪಟ್ಟುಕೊಂಡು ಓಡಿ ಹೋದಳೆಂಬ ಭಾವನೆಯುಂಟಾಯಿತು. ಅಲ್ಲಿಂದ ಹೊರಟು ಬರಲು ಚೂತ ವೃಕ್ಷದ ಮೇಲಿದ್ದ ಕೋಗಿಲೆಯು ಪಂಚಮಸ್ವರದಿಂದ ಕೂಗುತ್ತಿರಲು ಸೀತಾಧ್ವನಿಯೂ ಸಹ ಅವೇ ವಿಧವಾಗಿದ್ದದ್ದರಿಂದ ಸೀತೆಯು ಮರದ ಮೇಲೆ ಹತ್ತಿರಬಹುದೆಂದು ಮರದ ಮೇಲಕ್ಕೆ ತಲೆಯೆತ್ತಿನೋಡಿದನು. ಅಲ್ಲಿ ಮಾಕಂದದ ತಳಿರನ್ನು ಸ್ವೀಕರಿಸುತ್ತಿದ್ದ ಕೋಗಿಲೆಯನ್ನು ನೋಡಿ "ಎಲೈ ಕೋಗಿಲೆಯೇ! ನನ್ನ ಪ್ರಿಯಪತ್ನಿಯಾದ ಜಾನಕಿಯೆಲ್ಲಿರುವಳು?" ಎಂದು ಕೇಳಲು ಅದು ಈತನ ಧ್ವನಿಯನ್ನು ಕೇಳಿ ತಾನು ಕೂತಿದ್ದ ಸ್ಥಳವನ್ನು ಬಿಟ್ಟು ಹಾರಿಹೋಯಿತು. ಅಲ್ಲಿಂದ ಸ್ವಲ್ಪ ದೂರ ಬರಲು ನದಿದಡದಿಂದ ಒಂದು ಹಂಸವು ರಾಮನಕಡೆಗೆ ಬರುತ್ತಿತ್ತು. ಅದನ್ನು ರಾಮನು ನೋಡಿ, ನನ್ನ ವೈದೇಹಿಯು ಹಂಸಗಮನೆಯು, ಆದುದರಿಂದ "ಎಲೈಹಂಸವೆ! ವೈದೇಹಿಯು ನಿನ್ನ ಕೂಡ ಎಲ್ಲಿ ಹೋದಳು?" ಎಂದು ಕೇಳಿದನು. ಈತನ ಧ್ವನಿಯನ್ನು ಕೇಳಿ ಹಂಸವು ತ್ವರೆಯಿಂದ ಮುಂದಕ್ಕೆ ಸಾಗಿತು. ಅಲ್ಲಿರತಕ್ಕ ಒಂದು ತಾಳೀ ಮರದ ಬುಡದಲ್ಲಿ ಒಂದು ಕಾಳಿಂಗ ಸರ್ಪವು ಹೋಗುತ್ತಿತ್ತು ಅದನ್ನು ಶ್ರೀರಾಮನು ನೋಡಿ ನನ್ನ ಪ್ರಿಯಳಾದ ಭೂದೇವಿಯ ಜಡೆಯು ಈ ಸರ್ಪಾಕಾರವಾಗಿತ್ತು. "ಎಲೈ ಸರ್ಪವೇ! ನನ್ನ ಪ್ರಿಯಳನ್ನು ಕಂಡೆಯಾ?" ಎಂದು ಹೇಳುವುದರಲ್ಲೇ ಸರ್ಪವು ಮಾಯವಾಗಿ ಹೋಯಿತು. ಇನ್ನು ಸ್ವಲ್ಪ ದೂರಹೋಗಲು ಒಂದುಕಮಲವನ್ನು ಕಂಡನು. ನನ್ನ ಪ್ರಿಯಳಾದ ಸೀತೆಯ ಮುಖತಃ ಈ ಕಮಲದಂತೆ ನೋಡುವುದಕ್ಕೆ ಮನೋಹರವಾಗಿತ್ತು. ಎಲೈ

ಕಮಲವೇ! ಸೀತೆಯ ಮುಖವು ನಿನ್ನಂತಿದ್ದಿತಲ್ಲಾ ಎಂದು ಪ್ರಲಾಪಿಸಿದನು. ಮುಂದೆ ಸ್ವಲ್ಪ ದೂರ ಹೋಗಲು ಒಂದು ಚಂಪಕವೃಕ್ಷವಿತ್ತು. ನನ್ನಮನೋಹರಳ ನಾಸಿಕವು ಈ ಸಂಪಿಗೆಹೂವಿನಂತೆ ದೀರ್ಘವಾಗಿ ಸುವಾಸನೆಯಾಗಿತ್ತು "ಎಲೈ ಚಂಪಕನೆ! ನನ್ನ ಪುಷ್ಪಗಂಧಿಯನ್ನು ನೀನು ಕಂಡೆಯಾ? ಎಂದು ಹೇಳುತ್ತಾ ಸ್ವಲ್ಪ ದೂರ ಹೋಗಲು ಅಲ್ಲೊಂದು ರಂಭಾ ಗಿಡವು ಕಣ್ಗೊಳಿಸಿತು- ಅದನ್ನು ನೋಡಿ ಶ್ರೀರಾಮನು ಬಾಳೆಕಂಬದಂತೆ ನನ್ನ ಸುಂದರಿಯ ತೊಡೆಯಿತ್ತು. "ಎಲೈ ರಂಭಾವೃಕ್ಷವೆ! ನನ್ನ ಪ್ರೇಯಸಿಯು ಎಲ್ಲಿರುವಳು?" ಎಂದು ಸೀತಾದೇವಿಯ ಅಂಗಕ್ಕೆ ಸದೃಶಮಾಡಿ ಹೊಗಳಬಹುದಾದ ವಸ್ತುಗಳನ್ನು ನೋಡಿ ಸೀತೆಯನ್ನು ಹಂಬಲಿಸುತ್ತಿದ್ದನು- ಹೀಗೇನೆ ಬಂದು ಕುಟೀರವನ್ನು ತಲಪಿದನು. ಹಾಗೆ ದರ್ಭಶಯನಗತನಾದನು. ಸೀತೆಯನ್ನು ಸ್ಮರಿಸಿ ಕೊಂಡನು. ಇವನ ಪ್ರಯತ್ನವಿಲ್ಲದೆ ಎರಡು ನೇತ್ರಗಳಲ್ಲೂ ಧಾರಾಪೂರ್ವಕವಾಗಿ ಅಶ್ರುಪ್ರವಾಹವು ಹೊರಡುತ್ತಿರಲು ಜ್ಞಾನಿಯಾದ ಶ್ರೀರಾಮನು ಅಶ್ರುಜಲವನ್ನು ಹೊರಬೀಳಿಸಬಾರದೆಂಬ ಶಾಸ್ತ್ರವನ್ನು ತಿಳಿದಿದ್ದರಿಂದ ಕಣ್ಣಿನಲ್ಲೇ ತಡೆದುಕೊಂಡನು- ಕಣ್ಣಿನಲ್ಲಿ ನೀರು ತುಂಬಿದ್ದರಿಂದ ಕಣ್ಣಿನ ದೃಷ್ಟಿಯು ತನ್ನ ಕೆಲಸವನ್ನು ಮಾಡಲಾರದದಾಗಿತ್ತು. ಆಗ ಲಕ್ಷ್ಮಣನು "ಗೃದ್ಧನೂ ತಾಯಿಯಾದ ವೈದೇಹಿಯೂ ಎಲ್ಲಿ?" ಎಂದು ಅಣ್ಣನನ್ನು ಎಷ್ಟಾವರ್ತಿ ಕೇಳಿದಾಗ್ಯೂ ಅವನಿಗೆ ಲಕ್ಷ್ಮಣನ ಸ್ಫೂರ್ತಿಯು ಮತ್ತು ವಾಕ್ಯವೂ ಇವನ ಮನಸ್ಸಿಗೇ ಬರಲಿಲ್ಲ. ರಾಮನ ಮೌನವನ್ನು ನೋಡಿ, ಲಕ್ಷ್ಮಣನು"ಕರುಣಾಳುವಾದಅಣ್ಣನೇ! ನನ್ನ ಮೇಲೆ ಅಷ್ಟೊಂದು ಬೇಸರಿಕೆ ಯಾಕೆ? ನಾನು ಧನುಜರ ಯುದ್ಧ ಕಾಲದಲ್ಲಿ ಸನ್ನಿಧಾನಕ್ಕೆ ಬರಲು ಯತ್ನವಿಲ್ಲದ್ದರಿಂದ ತಡವಾಗಿ ಬಂದೆನು- ಈತಪ್ಪನ್ನ ತಾವು ಕ್ಷಮಿಸದೆ ಇನ್ಯಾರು ಕ್ಷಮಿಸಾರು? ನಮ್ಮ ತಾಯಿಯಾದ ಸೌಮಿತ್ರೆಯು ನನ್ನನ್ನು ತಮ್ಮ ಮನಸ್ಸಿಗೆ ಬೇಸರಿಕೆಯಾಗದಂತೆ ನಡೆದು ಕೊಳ್ಳಬೇಕೆಂದು ಆಜ್ಞಾಪಿಸಿದ್ದಳು. ನನಗೆಈವಿಷಮಕಾಲವುಪ್ರಾಪ್ತವಾದ್ದರಿಂದ ಜಾಗ್ರತೆಬರಲು ಆಗಲಿಲ್ಲ. ಮಾತೆಯ ಸ್ವರೂಪಳಾದ ಜನಕಾತ್ಮಜೆಯೂ ಗೃದ್ಧನೂ ಎಲ್ಲಿ?" ಎಂದು ತತ್ತರಿಸಿಕೊಂಡು ಬಹಳವಾಗಿ ಬೇಡುವುದನ್ನು ಶ್ರೀರಾಮನು ಕೇಳಿ ಸ್ವಪ್ನದಲ್ಲಿದ್ದವನು ಎಚ್ಚೆತ್ತಿದಂತೆದ್ದು ಲಕ್ಷ್ಮಣನನ್ನು ಕೈಹಿಡಿದು ಹತ್ತಿರಕುಳ್ಳಿರಿಸಿಕೊಂಡು ಯಾವ ಮಾತನ್ನೂ ಕೇಳದೆ, "ನನ್ನ ಸೀತೆ ಎಲ್ಲಿ? ಕಂಡೆಯಾ?" ಎಂದು ಕೇಳಿದನು. ಲಕ್ಷ್ಮಣನು ರಾಮನಅವಸ್ಥೆಯನ್ನೂ ಮಾತನ್ನೂ ಆಗಿನ

ಕಾಲವೈಶಿಷ್ಟವನ್ನೂ ಕುಟೀರದ ಇರುವಿಕೆಯನ್ನೂ ನೋಡಿ ಸ್ವಲ್ಪ ಹೊತ್ತು ವಿಸ್ಮೃತಿಯನ್ನು ಹೊಂದಿದವನಂತೆ ಕೂತುಕೊಂಡು ಪುನಹ ಜಾನಕಿಯು ಎಲ್ಲಿರುವಳೆಂದು ಕೇಳಿದನು. ರಾಮನು ಸ್ವಲ್ಪಧೈರ್ಯತೆಗೆದುಕೊಂಡು ಹಿಂದೆ ನಡೆದ ವಿದ್ಯಮಾನಗಳನ್ನೆಲ್ಲಾ ಹೇಳಿದನು. ಲಕ್ಷ್ಮಣನು ಕೇಳಿ ಬೆಂಡಾಗಿಹೋದನು. ಅನಂತರ "ಸೀತಾದೇವಿಯನ್ನು ಎಲ್ಲಾದರೂ ಹುಡುಕಿದಯಾ" ಎಂದು ಅಣ್ಣನನ್ನು ಕೇಳಲಾಗ ಆತನು "ಕೋಗಿಲೆಯನ್ನೂ, ಪದ್ಮವನ್ನೂ, ಸರ್ಪವನ್ನೂ ಚಂಪಕಪುಷ್ಪವನ್ನೂ ಬಾಳೇಗಿಡವನ್ನೂ, ಜಾನಕಿಯೆಲ್ಲೆಂದು ಕೇಳಿದೆ"ಎಂದನು ಲಕ್ಷ್ಮಣನು ಕುಶಾಗ್ರಬುದ್ಧಿಯುಳ್ಳ ಪಂಡಿತನಾಗಿ ವಿವೇಕವುಳ್ಳ ಅಣ್ಣನಾದ ರಾಘವನ ಮಾತನ್ನು ಕೇಳಿ ಬಹಳ ವ್ಯಸನಪಟ್ಟನು. ರಾಘವನನ್ನು ಕುರಿತು "ಜಾನಕಿಯನ್ನು ಬಿಟ್ಟು ನೀನು ಎಲ್ಲಾದರೂ ಹೋಗಬೇಕಾದ್ದಿತ್ತೆ? ಈ ಅರಣ್ಯ ಮಧ್ಯದಲ್ಲಿ ಒಬ್ಬ ಮಹಿಳೆಯನ್ನುಬಿಟ್ಟು ಸ್ವೇಚ್ಛೆಯಾಗಿ ನೀನು ಹೊರಟುಹೋದ ಕೂಡಲೆ ಕಾಡುಮೃಗಗಳಬಾಧೆ ಜಾನಕಿಗೆ ಬರಬಹುದೆಂಬ ಊಹೆಯನ್ನೂ ಸಹ ಮಾಡಲಿಲ್ಲವೇ? ವೈದೇಹಿಯು ನೀನು ಹೊರಟುಹೋಗುತ್ತಿದ್ದಾಗ ತಡೆಯಲಿಲ್ಲವೇ? " ಎಂಬ ಅನೇಕ ಪ್ರಶ್ನೆಗಳನ್ನು ಅಣ್ಣನನ್ನು ಕೇಳಿದಾಗ್ಯೂ ಯಾವುದಕ್ಕೂ ಉತ್ತರವನ್ನೇ ಕೊಡಲಿಲ್ಲ.

ಆಗ ತನ್ನಕೂಡ ಬಂದಿದ್ದ ವಿರಾಧಿತನಿಗೆ ಕಣ್ಣುಸನ್ನೆಮಾಡಲು ಅವನು ರಾಮನ ಕಾಲಿನ ಮೇಲೆ ಬಿದ್ದು ನನ್ನನ್ನು ರಕ್ಷಿಸಬೇಕೆಂದು ಬೇಡಿಕೊಂಡನು. ಆಗ ರಾಮನು ಕರುಣಾಳುವಾದ ಹೃದಯನಾದ್ದರಿಂದ ಇವನ ಬೇಡಿಕೆಯು ಹೃದಯವನ್ನು ಚನ್ನಾಗಿ ಆವರಿಸಿತು. ಆಗ ರಾಮನು, "ಹೆದರಬೇಡ! ನಿನ್ನ ಕೋರಿಕೆಯೇನು?" ಎಂದು ಕೇಳಲಾಗಿ—ವಿರಾಧಿತನು "ನನ್ನ ವಂಶಜರಿಗೆಬಂದ ಪಾತಾಳಲಂಕೆಯನ್ನು ಧನುಜರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡುಬಿಟ್ಟರು ಅವರಿಂದ ಪಟ್ಟಣವನ್ನು ತೆಗೆದು ನನ್ನ ಸ್ವಾಧೀನಕ್ಕೆ ಕೊಟ್ಟು ನನ್ನನ್ನು ರಕ್ಷಿಸಬೇಕೆಂದು" ಬೇಡಿಕೊಂಡನು. ರಾಮನು ಲಕ್ಷ್ಮಣನಿಗೆ ಈತನ ವಿಷಯದಲ್ಲಿ ಪ್ರಯತ್ನಮಾಡಬೇಕೆಂದು ಹೇಳಿದನು. ಲಕ್ಷ್ಮಣನು ಅಣ್ಣನನ್ನು ಕರೆದು "ನಾವು ಸೀತಾದೇವಿಯನ್ನು ಹುಡುಕೋಣ ಬಾ! " ಎಂದು ಕರೆದನು. ಇವರಿಬ್ಬರೂ ರಾತ್ರಿಕಾಲದ ಚಂದ್ರೋದಯಡಲ್ಲಿ ಹುಡುಕಲುದ್ಯುಕ್ತರಾದರು. ಶ್ರೀರಾಮನು ಸ್ವಲ್ಪ ದೂರ ಹೋಗಿ ಅನುಜನನ್ನು "ಸ್ವಲ್ಪ ವಿಶ್ರಮಿಸಿಕೊಳ್ಳೋಣ; ಬಹಳ ತಾಪ! ಬಹಳ ಬಿಸಲು! " ಎಂದನು. ಅದಕ್ಕೆ ಲಕ್ಷ್ಮಣನು "ಎಲೈಅಗ್ರಜನೇ!

ಇದು ರಾತ್ರಿಯಕಾಲ. ಈಗ ಬಿಸಲೆಲ್ಲಿ ಬಂತು? ಸೂರ್ಯನೆಲ್ಲಿಧಾನೆ?" ಎಂದು ಕೇಳಲಾಗಿ, ರಾಮನು "ಎಲೈ ಅನುಜನೇ! ನಾನು ನಿನಗೆ ಅಣ್ಣನಾಗಿದ್ದೇನೆ! ನೀನುಬಾಲಕ. ನನಗೆ ತಿಳಿದಿರುವಷ್ಟು ವಿಷಯಗಳು ನಿನಗೇನು ಗೊತ್ತು? ಇದು ಸೂರ್ಯನ ಬಿಸಲಲ್ಲವೆಂದು ಹೇಗೆ ಹೇಳುತ್ತೀಯೇ? ಅನುಜನೇ! ಹಿರಿಯರಮಾತಿಗೆ ಅಡ್ಡಬರಬಾರದು" ಎಂದು ಬುದ್ಧಿವಾದವನ್ನು ಹೇಳುತ್ತಿರಲಾಗ ಲಕ್ಷ್ಮಣನು "ಎಲೈಪೂಜ್ಯನೇ! ಇದು ರಾತ್ರಿಯಕಾಲ ಸೂರ್ಯನು ಈಗ ಎಲ್ಲಿ? ಇದು ಚಂದ್ರನ ಬೆಳಕು" ಎಂದುಹೇಳಿದನು. ಅದಕ್ಕೆ ರಾಘವನು "ಎಲೈ ತಮ್ಮನೇ! ನೀನು ಈಗ ಕಾಣಿಸುತ್ತಿರುವದನ್ನು ಸೂರ್ಯಬಿಂಬವಲ್ಲವೆಂದು ಹ್ಯಾಗೆ ಹೇಳುತ್ತೀಯೇ?" ಎಂದು ಲಕ್ಷ್ಮಣನನ್ನು ಕೇಳಲು, ಲಕ್ಷ್ಮಣನು "ಅಣ್ಣನೇ! ಈಗ ಅಂತರೀಕ್ಷದಲ್ಲಿ ಕಾಣುತ್ತಿರುವುದು ಚಂದ್ರಮಂಡಲ! ಇದು ಕುರಂಗತ ಚಿಹ್ನೆ" ಎಂದು ಚಂದ್ರಮಂಡಲವನ್ನು ತೋರಿಸಲಾಗ ರಾಘವನು ಎಲೈಕುರಂಗ ನಯನೆ! ನೀನೆಲ್ಲಿದ್ದೀಯೆ? ಎಂದು ವಿಸ್ಮೃತಿಯನ್ನು ಪಡೆದನು. ಅನಂತರ ಲಕ್ಷ್ಮಣನು ರಾಮನನ್ನು ಸಮಾಧಾನಪಡಿಸಿ ವಿರಾಧಿತನೊಡನೆ ಹೊರಡಲಾಗ ಶ್ರೀರಾಮನು ರಾಗದ್ವೇಷ ನಿರ್ಮುಕ್ತನಾದ ಶಾಂತಸ್ವರೂಪನಾದ ಜಿನೇಶ್ವರನನ್ನು ಮನದಲ್ಲಿ ನೆನೆಯುತ್ತಿದ್ದನು.

೩೬. ಪಾತಾಳಲಂಕೆ ಪ್ರವೇಶ

ಮಹರ್ಷಿಗಳಾದ ಗೌತಮ ಗಣಧರರು ಮುಂದಣ ಕಥೆಯನ್ನು ಹೇಳಲುದ್ಯುಕ್ತರಾಗಿ ಎಲೈ ಶ್ರೇಣಿಕನೇ! ಕೇಳುವಂಥಾವನಾಗು—ಶ್ರೀರಾಘವನು ಲಕ್ಷ್ಮಣನೊಡನೆ ಕೂಡಿಕೊಂಡು ವಿರಾಧಿತನೊಡನೆ ಪಾತಾಳಲಂಕೆಯ ಮಾರ್ಗವನ್ನು ಅನುಸರಿಸಿ ನಡೆಯುತ್ತಿರಲು ಸೌಂಧರನು ಈ ವರ್ತಮಾನವನ್ನು ಕೇಳಿ ಚತುರಂಗಬಲಸಮೇತನಾಗಿ ರಾಮಲಕ್ಷ್ಮಣರನ್ನು ಕಾಣಿಸಿಕೊಂಡು ಯುದ್ಧಕ್ಕೆ ತೊಡಗಿದನು. ಲಕ್ಷ್ಮಣನು ಸೌಂಧರನನ್ನು ಕುರಿತು "ನೀನು ನನ್ನೊಡನೆ ಯುದ್ಧಕ್ಕೆ ಪ್ರಯತ್ನಮಾಡಿ ಪ್ರಾಣವನ್ನು ಕಳೆದುಕೊಳ್ಳಬೇಡ. ಶೂರರಾದ ಖರದೂಷಣರು ದುರುಳುತನದಿಂದ ಯುದ್ಧಮಾಡಿ ಮಡಿದುಹೋದರು. ಹುಡುಗನಾದ ನೀನು ನನ್ನೊಡನೆ ಯುದ್ಧಮಾಡುವುದಕ್ಕೆ ಸಮರ್ಥನಲ್ಲ. ಈ ವಿರಾಧಿತನಿಗೆ ಆತನ ತಂದೆ ಚಂದ್ರೋದರನ ಪಟ್ಟಣವಾದ ಪಾತಾಳಲಂಕೆಯನ್ನು ನೀನು ಒಪ್ಪಿಸಿ ಬಾಳುವುದು ಒಳ್ಳೆಯದು" ಎಂದು ಹೇಳಿದನು. ಆ ಮಾತನ್ನು

ಸೌಂಧರನುಕೇಳಿ "ನೀನು ಮೋಸದಿಂದ ಖರದೂಷಣರನ್ನು ಕೊಂದುಬಿಟ್ಟೆನೆಂಬ ಬಲದ ಮೇಲೆ ನೀನು ನನ್ನೊಡನೆ ಯುದ್ಧಮಾಡಿ ಗೆದ್ದು ಪಾತಾಳಲಂಕೆಯನ್ನು ವಿರಾಧಿತನಿಗೆಕೊಡು. ನಿನ್ನ ಉಪಯೋಗವಿಲ್ಲದಹರಟೆಗೆ ನಾನುಹೆದರಲಾರೆನು" ಎಂದು ಹೇಳಿದನು. ಅನಂತರ ವಿರಾಧಿತನು ಸೌಂಧರನ ಮೇಲೆ ಯುದ್ಧಕ್ಕೆ ನಿಂತನು. ಆತನು ಬಹಳ ಶೌರ್ಯದಿಂದ ಸೌಂಧರನ ಬಲವನ್ನು ಸೋಲಿಸಿದನು. ಹಾಗಾದರೂ ಸೌಂಧರನು ಯುದ್ಧೋನ್ಮತ್ತನಾಗಿ ವಿರಾಧಿತನ ಮೇಲೆ ಬಹಳ ಘೋರವಾಗಿ ಯುದ್ಧವನ್ನು ನಡೆಸಲಾಗ ಲಕ್ಷ್ಮಣನು ಒಂದು ಬಾಣವನ್ನು ಬಿಡಲು ಸೌಂಧರನು ಆ ಏಟನ್ನು ತಡೆಯಲಾರದೆ ಬೆದರಿ, ಲಂಕೇಶ್ವರನನ್ನು ಕರತಂದು ಇವರನ್ನೆಲ್ಲಾ ಸುಟ್ಟು ಭಸ್ಮಮಾಡಿಸುತ್ತೇನೆಂದು ಲಂಕಾಪಟ್ಟಣಕ್ಕೆ ಆಕಾಶಮಾರ್ಗವಾಗಿ ಓಡಿಹೋದನು. ಅನಂತರ ಲಕ್ಷ್ಮಣನು ಜಯಶೀಲನಾಗಿ ಶ್ರೀರಾಮನಿಗೆ ಯುದ್ಧದ ವಿಷಯವನ್ನು ಹೇಳಲಾಗ ಶ್ರೀರಾಮನು ಲಕ್ಷ್ಮಣ ನೊಡನೆ ವಿರಾಧಿತನನ್ನು ಕರೆದುಕೊಂಡು ಅಮರಾವತಿಪಟ್ಟಣಕ್ಕೆ ಸಮಾನವಾದ ಪಾತಾಳ ಲಂಕಾಪಟ್ಟಣಕ್ಕೆ ವಿಜಯಂಗೈದು ಆ ಪಟ್ಟಣಕ್ಕೆ ವಿರಾಧಿತನನ್ನು ಅಧೀಶ್ವರನನ್ನಾಗಿ ಮಾಡಿದನು. ರಾಮಲಕ್ಷ್ಮಣರ ಅಪ್ಪಣೆಯ ಮೇರೆ ವಿರಾಧಿತನು ಖಗರನ್ನು ಸೀತಾನ್ವೇಷಣಕ್ಕಾಗಿ ದಿಕ್ಕುದಿಕ್ಕುಗಳಿಗೆ ಪ್ರತ್ಯೇಕವಾಗಿ ಚಟುವಟಿಕೆಯುಳ್ಳ ದೂತರನ್ನು ಕಳುಹಿಸಿಕೊಟ್ಟನು. ಇತ್ತ ರಾಮನು ಲಕ್ಷ್ಮಣ ವಿರಾಧಿತರೊಡನೆ ಕೂಡಿ ಹಲವು ಭಾರಿ ತನ್ನ ಪ್ರಿಯಳಾದ ಜಾನಕಿಯ ಅಗಲುವಿಕೆಯಿಂದ ಅವಳು ಯಾವ ರೀತಿಯಾಗಿರುವಳೋ ಎಂಬುದನ್ನು ಕುರಿತು ಆಗಾಗ್ಗೆ ಹೇಳುತ್ತಾ ಶ್ರೀಜಿನೇಶ್ವರರ ಪಾದಕಮಲಗಳನ್ನು ಅನುದಿನವೂ ತ್ರಿಕಾಲದಲ್ಲೂ ಸ್ಮರಿಸುತ್ತಲಿದ್ದನು.

೩೭. ಸೀತಾ ಬಂಧನ

ಕೇಳೈ ಶರಣಾಗತ ವತ್ಸಲನಾದ ಶ್ರೇಣಿಕಮಹಾರಾಜನೇ! ಸೌಂಧರನು ಯುದ್ಧಮಾಡಲು ಶಕ್ತನಾಗದೆ ಪ್ರಾಣಭಯದಿಂದ ಮಂತ್ರಿ ಪ್ರಧಾನ ದಳಪತಿಗಳಿಗೆ ಯಾವುದನ್ನೂ ಹೇಳದೆ ಲಂಕಾಪಟ್ಟಣಕ್ಕೆ ದಶಕಂಠನ ಮರೆಹೊಗಲು ಹೊರಟುಹೋದನಂತರ ರಾಘವನು ಅನುಜನೊಡನೆ ಪಾತಾಳಲಂಕೆಯ ಅರಮನೆಗೆ ಹೋಗಿ, ಅಲ್ಲಿ ಸಿಂಹಾಸನಾರೂಢನಾಗಿ ಪಟ್ಟಣದ ಜನರನ್ನು ಕರೆಸಿ, ಅಭಯವನ್ನಿತ್ತು ಚಂದ್ರೋಧರಾತ್ಮಜನಾದ ವಿರಾಧಿತನು ತನ್ನ ಪಟ್ಟಣವನ್ನು

ತೆಗೆದುಕೊಂಡನೆಂದು ಹೇಳಿದನು. ಆಗ ಪುರಜನರೆಲ್ಲರೂ ರಾಮಲಕ್ಷ್ಮಣರಿಗೆ ಬಂದಿಸಿ ತಮ್ಮ ಪೂರ್ವದ ದೊರೆಯಾದ ಚಂದ್ರೋದರನ ಪುತ್ರನಾದ ವಿರಾಧಿತನ ಆಡಳಿತಕ್ಕೆ ಆ ಪಟ್ಟಣವು ಸೇರಿತೆಂದು ಎಲ್ಲರೂ ಅನುಮತಿಪಟ್ಟು ಸಂತೋಷವನ್ನು ಹೊಂದಿದರು.

ಇತ್ತ ಲಂಕೇಶನು ವೈದೇಹಿಯನ್ನು ವಿಮಾನದ ಮೇಲೆ ತೆಗೆದುಕೊಂಡು ಹೋಗುತ್ತಿರಲು ಜಾನಕಿಯು ಬೆದರಿ ಸ್ಮೃತಿಯಿಲ್ಲದೆ ಸ್ವಲ್ಪಕಾಲವಿದ್ದು, ತನ್ನ ಆಭರಣಾದಿಗಳನ್ನು ತಾನು ಉಟ್ಟ ವಸ್ತ್ರದಲ್ಲಿ ಸ್ವಲ್ಪಭಾಗ ಹರಿದು ಅದರಲ್ಲಿ ಕಟ್ಟಿ ರಾಘವನಿಗೆ ಸಿಕ್ಕಿದರೆ ಗುರುತಾಗಲೆಂದು ಭೂಮಿಗೆ ಹಾಕಿಬಿಟ್ಟಳು. ಅನಂತರ ತನ್ನ ಜನಕನಾದ ಜನಕಮಹಾರಾಜನ ಅರಮನೆಯಲ್ಲಿದ್ದದ್ದುಮೊದಲು ನೆನೆದುನೆನೆದು ಈ ಭಯಂಕರವಾದ ರಾಕ್ಷಸನ ಅಧೀನಕ್ಕೆ ಒಳಗಾದದ್ದನ್ನು ತಿಳಿದು ಯೋಚಿಸಿದ ಕೂಡಲೇ ಪ್ರಜ್ಞೆಯು ತಪ್ಪಿ ವಿಸ್ಮೃತಿಯನ್ನು ಹೊಂದಿದಳು. ಲಂಕಾಧಿಪತಿಯು ಸಮುದ್ರವನ್ನು ದಾಟಿ, ತನ್ನ ಕೋಟೆಯನ್ನು ಲಂಘಿಸಿ ನಂದನವನಕ್ಕೆ ಸಮಾನವಾದ ಅಶೋಕವನಕ್ಕೆ ಸೀತಾದೇವಿಯನ್ನು ಕರೆದುಕೊಂಡು ಹೋಗಿ ಸಹಸ್ರಾರು ಸ್ತ್ರೀ ಅಸುರೆಯರಿಂದ ಕೂಡಿಕೊಂಡ ಒಂದಾನೊಂದು ಗುಪ್ತವಾದ ಮಂಟಪದಲ್ಲಿಳಿಸಿದನು. ಸೀತಾದೇವಿಗೆ ಇನ್ನೂ ದೇಹದಲ್ಲಿ ಸರಿಯಾದ ಸ್ಮೃತಿಯೇ ಇರಲಿಲ್ಲ. ಆ ಲತಾವೃಕ್ಷದಿಂದ ಕೂಡಿದ ಮಂಟಪದ ಪಕ್ಕಗಳಲ್ಲಿರುವ ಪುಷ್ಪಗಳ ಮೇಲೆ ಬಿದ್ದು ಹೊರಳಿ ಹೊಮ್ಮಿದ ಪ್ರಭಾತಕಾಲದ ಗಾಳಿಯು ಸೀತಾದೇವಿಯ ದೇಹವನ್ನು ಸ್ಪರ್ಶಮಾಡಿದನಂತರ ಸೀತಾದೇವಿಯು ಅನ್ಯಸ್ಪರ್ಶನವನ್ನು ಸಹಿಸಲಾರದೆ ಎಚ್ಚೆತ್ತಳೋ ಎಂಬಂತೆ ಎದ್ದು ಕೂತುಕೊಂಡು ಪರಮ ಜಿನೇಶ್ವರರನ್ನು ಮನಸ್ಸಿನಲ್ಲಿ ಭಜಿಸುತ್ತಿದ್ದಳು.

ಇತ್ತ ದಶಾನನ ಪಟ್ಟಣದಲ್ಲಿರುವ ಸಾಮಂತರೂ, ಸಾಧುಗಳೂ ಮತ್ತು ಸತ್ಪುರುಷರೂ ದಶಾನನನು ಸೀತೆಯನ್ನು ಕದ್ದು ತಂದನೆಂಬ ವಿಷಯವನ್ನು ತಿಳಿದು ಬಹಳವಾಗಿ ಪರಿತಾಪಪಟ್ಟರು. ಸೀತಾದೇವಿಯನ್ನು ನೋಡುವುದಕ್ಕಾಗಿ ಗುಂಪು ಗುಂಪಾಗಿ ಎಷ್ಟೋ ಸ್ತ್ರೀಯರು ಬಂದರು. ಸೀತಾದೇವಿಯ ದೇಹಸ್ಥಿತಿಯನ್ನೂ ಅವಳ ಮುಖವನ್ನೂ ನೋಡಿ ಅನುತಾಪವನ್ನು ಪ್ರತಿಯೊಬ್ಬರೂಹೊಂದುತ್ತಲಿದ್ದರು. ಕೆಲವರು ಸೀತಾದೇವಿಯಬಳಿಗೆ ಬಂದು ರೋಧನ ಮಾಡಿ "ಮಹಾತಾಯಿ! ಸತ್ಯಶೀಲೆಯಾದನಿನಗೆ ಈ ಕಷ್ಟದೆಶೆಯು ಬಂದಿತಲ್ಲ"

ಎಂದು ಮರುಗಿದರು. ಇನ್ನುಕೆಲವರು "ಯಾತಕ್ಕೆ ವ್ಯಸನಪಡಬೇಕು? ರಾಮ ಲಕ್ಷ್ಮಣರು ಈ ಪಟ್ಟಣಕ್ಕೆ ಬರುವುದೆಂದರೇನು? ಅವರು ನಿನ್ನನ್ನು ಕರೆದು ಕೊಂಡುಹೋಗುವುದೆಂದರೇನು? ಇದೆಲ್ಲ ನಡೆಯದಮಾತಾಗಿದೆ. ನೀನು ಆಹಾ ರಾದಿಗಳನ್ನು ತೆಗೆದುಕೊಂಡು ಸಂತೈಸಿಕೊಂಡು ಕೊರಗದೆ ಇರುವುದು ಒಳ್ಳೆ ಯದು" ಎಂದು ಹೇಳಿದರು. ಅಷ್ಟರಲ್ಲಿ ಲಂಕೇಶ್ವರನು ಬಂದು ಸೀತಾದೇವಿ ಯನ್ನು ನೋಡಲು, ಅವಳು ಸ್ಮೃತಿತಪ್ಪಿ ಅರ್ಧಮೂರ್ಛಿತಳಾದ ದೇಹವನ್ನು ನೋಡಿ ಕನಿಕರಪಟ್ಟು "ಎಲೈ ಸುಂದರಿಯೇ! ನೀನು ಯಾತಕ್ಕೆ ಈ ರೀತಿ ಧೈರ್ಯಗುಂದಿ ಚಿಕ್ಕವಯಸ್ಸಿನಲ್ಲಿಯೇ ಅನುಭವಿಸಬಹುದಾದ ಸುಖಸಂಪತ್ತು ಗಳನ್ನು ಹೊಂದದೇ ಪ್ರಾಣವನ್ನು ನೀಗಿ ಕೊಳ್ಳುತ್ತೀಯೆ? ಸುಖವಾಗಿರು! ರಾಮನು ನಿನ್ನನ್ನು ರಕ್ಷಿಸುವದಕ್ಕಿಂತಲೂ ನಾನು ಹೆಚ್ಚು ಪರಾಂಬರಿಕೆಯಿಂದ ರಕ್ಷಿಸುವೆನು. ರಾಮನಿಗಿಂತಲೂ ನಾನು ಚಕ್ರವರ್ತಿಯಾಗಿ ಹದಿನಾರು ಸಹಸ್ರ ಸ್ತ್ರೀಯರೊಡನೆ ಕೂಡಿ ಅಸಂಖ್ಯವಾದ ಚತುರಂಗ ಬಲದಿಂದ ಕೂಡಿ ನವನಿಧಿ ನಾಯಕನಾಗಿದ್ದೇನೆ. ರಾಮನವಂಶದವರು ಇಂಥಾ ಚಕ್ರವರ್ತಿತ್ವವನ್ನು ಯಾರೂ ಮಾಡಿಲ್ಲ. ಆದ್ದರಿಂದ ನೀನು ಸುಖವಾಗಿ ಬಾಳಬಹುದು. ರಾಮ ಲಕ್ಷ್ಮಣರೆಂ ದಿಗೂ ಇಲ್ಲಿಗೆಬರಲಾರರು. ಅವರನ್ನು ಕಾಣುವಕಾಲವು ನಿನಗೆ ಬರಲಾರದು" ಹೀಗೆಂದು ದಶಕಂಠನು ಸಾವೋಕ್ತಿಗಳನ್ನು ಎಷ್ಟು ಹೇಳಿದಾಗ್ಯೂ ಅವನು ಹೇಳಿದ ಪ್ರತಿಯೊಂದುಮಾತಿನಲ್ಲಿ ಯಾವಅಂಶವೂ ವಿರಕ್ತಳಾಗಿದ್ದ ಜಾನಕಿಯ ಕಿವಿಯ ಕರ್ಣಕುಹರವನ್ನು ಮುಟ್ಟಲಿಲ್ಲ. ಇವನು ಹೇಳಿದ ಮಾತೆಲ್ಲ ಶಿಲಾ ರೂಪವಾದ ಸೀತಾದೇವಿಯ ಬಿಂಬದೊಡನೆ ಹೇಳಿದಂತೆ ಆಯಿತೇ ಹೊರತು ಯಾವ ಪ್ರಯೋಜನಕ್ಕೂ ಬರಲಿಲ್ಲ. ರಾಣಿವಾಸದ ಅನೇಕ ಸ್ತ್ರೀಯರುಬಂದು ಸೀತಾದೇವಿಯ ಅಂಗಸ್ಪರ್ಶನವನ್ನು ಮಾಡಿ ಸೀತೆಯು ಜೀವ ಸಹಿತಳಾಗಿರುವ ಳೆಂದು ತಿಳಿದುಕೊಂಡು ಶೈತ್ಯೋಪಚಾರಗಳನ್ನು ಮಾಡಲುಪಕ್ರಮಿಸಿ ತಂಪಾ ದಗಾಳಿಯನ್ನು ಉಶೀರದಿಂದ ಮಾಡಲ್ಪಟ್ಟ ಬೀಸಣಿಗೆಯಿಂದ ಗಾಳಿಯನ್ನುಂ ಟುಮಾಡಿದರು. ಮತ್ತು ಅನರ್ಘ್ಯವಾದ ಫಲಗಳನ್ನು ತಂದು ಸೀತಾದೇವಿಯ ನ್ನು ಈ ಫಲಗಳನ್ನು ತೆಗೆದುಕೊಳ್ಳಬೇಕೆಂದು ಬೇಡುತ್ತಿರುವಾಗ ರಾವಣನು ತೇಜಿನೇಶ್ವರರನ್ನು ಧ್ಯಾನಿಸುತ್ತಲಿದ್ದನು.

೩೮. ಸೀತಾ ನಿಗ್ರಹ.

ಮಹಾರಾಜನೇ! ಕೇಳುವನಾಗು. ಸೀತಾನಾಯಕಿಯನ್ನು ಶರೆಯಲ್ಲಿಟ್ಟು ಧನುಜೇಂದ್ರನಾದ ದಶಕಂಧರನು ಅರಮನೆಗೆ ಹೋಗಲು ರಾಣಿವಾಸದ ಸ್ತ್ರೀಯರು ರಾವಣನಿಗೆ ಮಂಗಳಾರತಿ, ವಜ್ರದಾರತಿ, ಮುತ್ತಿನಾರತಿಗಳನ್ನು ಮಾಡಿ, ಹಸ್ತಲಾಘವವನ್ನಿಟ್ಟು ಅಂತಃಪುರಕ್ಕೆ ಕರೆದುಕ್ಕೊಂಡು ಹೋಗಿ ಭದ್ರಾಸನದ ಮೇಲೆ ಕುಳ್ಳಿರಿಸಿದರು. ಎಲ್ಲಾ ಕಾಂತೆಯರೂ ಬಂದು ಸತ್ಕಾರಮಾಡಿ ಅಪ್ಪಣೆ ಪಡೆದು ಹೊರಟುಹೋದರು. ಮಂಡೋಧರಿಯು ಪ್ರಿಯನ ಸಮೀಪಕ್ಕೆ ಬಂದು ಆತನ ಅರ್ಧಾಸನದಲ್ಲಿ ಕೂತುಕ್ಕೊಂಡು "ಪ್ರಿಯನೇ! ತಾವು ದಯಮಾಡಿಸಿ ಜಯಶೀಲರಾಗಿ ಆಗಮಿಸಿದರಿ. ಲೋಕದಲ್ಲಿ ವಸ್ತು ಮತ್ತು ಪ್ರಾಣಿಗಳ ಸ್ಥಿತಿಯು ಏಕರೀತಿಯಾಗಿ ರೂಪು ಸಾಮರ್ಥ್ಯಗಳಿಂದ ಕೂಡಿರುವುದಿಲ್ಲ. ಖರಧೂಷಣರೆಂದರೆ ಮಹಾಪರಾಕ್ರಮಿಗಳು. ಅವರನ್ನು ಇತರರಿಂದ ಯಾವ ಸಹಾಯವನ್ನೂ ಹೊಂದದೇ ಏಕಮಾತ್ರನಾದ ಒಬ್ಬ ಮನುಷ್ಯನು ಅವರನ್ನು ಜಯಿಸಿದನೆಂಬುವುದು ಲೋಕಸ್ಥಿತಿಯ ಮಾರ್ಪಾಟವನ್ನು ಹೇಳುವುದು. ಈ ಪ್ರಪಂಚದಲ್ಲಿ ಒಂದು ಕಾಲದಲ್ಲಿ ರೂಪು ಶೌರ್‍ಯೌದಾರ್ಯ ಐಶ್ವರ್ಯಗಳಿಂದ ಒಬ್ಬನು ಕೂಡಿರುತ್ತಾನೆ; ಆತನೇ ಇನ್ನೊಂದು ಕಾಲದಲ್ಲಿ ಕುರೂಪು, ನಿರ್ಬಲ, ದರಿದ್ರದಿಂದ ಸೇವಾವೃತ್ತಿಯನ್ನು ಪಡೆದು ಜೀವಿಸುತ್ತಾನೆ. ಇದರಿಂದುಂಟಾದ ಫಲಾಫಲವನ್ನು ಕುರಿತು ನಾವು ವ್ಯಸನಪಡುವುದು ಪ್ರಯೋಜನವಿಲ್ಲ. ನಿಮ್ಮ ಮುಖವನ್ನು ನೋಡಿದರೆ ಒಂದು ಕ್ಷಣದಲ್ಲಿ ಸಂತೋಷಚಿಹ್ನೆಯೂ ಮತ್ತೊಂದು ಕ್ಷಣದಲ್ಲಿ ಆಲೋಚನಾಗ್ರಸ್ತಚಿಹ್ನೆಯೂ ಗೊತ್ತಾಗುತ್ತದೆ. ಇದರಿಂದ ನಿಮಗೆ ಮನೋದ್ವೇಗವುಂಟಾಗುವುದನ್ನು ಬಿಟ್ಟು ಇರಬೇಕೆಂಬುದನ್ನು ಹೇಳುತ್ತಿರುವಾಗ ರಾವಣನು ಹೊರಗೆ ಬಂದು ಮಾರೀಚನನ್ನು ಕರೆದು "ನೀನು ಸೀತೆಯನ್ನು ಸರ್ವ ಪ್ರಯತ್ನದಿಂದಲೂ ನನಗೆ ದೊರೆಕಿಸಿಕೊಟ್ಟೆ. ಈಗ ಆಕೆಗೆ ಇದು ಸ್ಥಳಾಂತರವಾದ್ದರಿಂದ ಈ ಭೂಪ್ರದೇಶವು ಹೊಸದಾಗಿ ವಿಜಾತೀಯವಾಗಿರುವದರಿಂದ ಅವಳು ಬೆದರಿ ಅಸ್ವಸ್ಥಳಾಗಿದ್ದಾಳೆ. ನೀನು ಅವಳ ಸಮೀಪಕ್ಕೆ ಹೋಗಿ ನನ್ನಲ್ಲಿ ಅವಳಿಗೆ ಅನುರಾಗವುಂಟಾಗುವ ಹಾಗೆ ಮಾಡುವ ಕೆಲಸವು ನಿನ್ನನ್ನೇ ಸೇರಿಥೆ" ಎಂದು ಹೇಳಲಾಗಿ ಮಾರೀಚನು ಅಶೋಕವನಕ್ಕೆ ಹೋಗಿ ಚೂತವೃಕ್ಷದ ಕೆಳಗೆ ಭೂಗತಳಾಗಿಳುವ ಜಾನಕಿಯನ್ನೂ ಅವಳಸುತ್ತಮುತ್ತಲೂ ಕಾವಲಾಗಿನಿಂತಿರುವ ಅಸುರ

ಸ್ತ್ರೀಯರನ್ನೂ ಸಹ ನೋಡಿ ಯಾವುದನ್ನು ಮಾಡುವುದಕ್ಕೂ ತೋಚದೆಹೋ ದಾಗ್ಯೂ ಸೀತಾದೇವಿಯ ಸಮೀಪಕ್ಕೆ ಬಂದು "ಎಲೈತಾಯಿಯೇ! ಏತಕ್ಕಾಗಿ ವ್ಯಸನಪಡುತ್ತೀಯೇ? ಈ ಅಶೋಕವನವು ನೀನು ವಾಸಮಾಡುತ್ತಿದ್ದ ದಂಡ ಕಾರಣ್ಯಕ್ಕಿಂತ ಅಸಂಖ್ಯಾತಪಾಲು ರಮ್ಯವಾಗಿದೆ. ನೀನು ವರಿಸಿದ್ದ ರಾಮನು ಅಂಥಹಾ ಒಳ್ಳೆಯ ಗುಣವುಳ್ಳವನಲ್ಲ. ನಿನ್ನನ್ನು ವರಿಸಿ ಕಾಡಿಗೆಕರೆದುಕೊಂಡು ಬಂದು ರಾಜಪುತ್ರಿಯಾದ ನಿನಗೆ ಪಡಬಾರದ ಕಷ್ಟಗಳನ್ನೆಲ್ಲ ಉಂಟುಮಾಡಿ ದನು. ಆದ್ದರಿಂದ ಈ ಲಂಕಾಪತಿಯಾದ ರಾವಣನು ಅಷ್ಟೈಶ್ವರ್ಯ ಸಂಪನ್ನನು. ಶೃಂಗಾರಾಲೋಕನು. ತನ್ನ ಪ್ರಾಣಕ್ಕಿಂತಲೂ ನಿನ್ನ ಪ್ರಾಣವನ್ನು ಹೆಚ್ಚೆಂದು ತಿಳಿದಿದ್ದಾನೆ. ನಿನ್ನ ಮೇಲಿನ ಕನಿಕರದಿಂದಲೇ ನಿನ್ನನ್ನು ಇಲ್ಲಿಗೆ ತಂದನು. ನೀನು ಯೋಚನೆಗಳನ್ನು ಮಾಡದೇ ನಿನಗೆ ಶರಣಾಗತನಾಗಿರುವ ಈ ಅಸುರ ಸ್ತ್ರೀಯರೊಡನೆ ಸ್ನೇಹವಾಗಿ ಸಂತೋಷದಿಂದಿದ್ದುಕ್ಕೊಂಡು ಲಂಕಾಧಿಪತಿಗೆ ಮನಸ್ಸಂತೋಷಪಡಿಸು" ಎಂಬುವುದೇ ಮೊದಲಾದ ಮಾತುಗಳನ್ನಾಡಲು, ಸೀತಾದೇವಿಯು ಇವನ ವಚನಗಳನ್ನು ಕಿವಿಯ ಮೇಲೆ ಹಾಕಿಕೊಳ್ಳದೇ ತನಗೆ ಬಂದ ಕಷ್ಟದ ಪರಿಹಾರಕ್ಕಾಗಿ ಪಂಚಪರಮೇಷ್ಠಿಗಳನ್ನು ಸ್ಮರಿಸುತ್ತಾ ಸ್ವಲ್ಪ ವಾದರೂ ಇವನ ಮಾತಿಗಾಗಲೀ, ಇವನ ಕಡೆಗಾಗಲೀ ಗಮನ ಕೊಡಲಿಲ್ಲ, ಪುನಃ ಪುನಃ ಮಾರೀಚನು ಎಷ್ಟು ಹೇಳಿದರೂ ಯಾವ ಮಾತನ್ನೂ ಆಡಲಿಲ್ಲ- ಅನಂತರ ಮಾರೀಚನು ತನ್ನ ಮಾತಿಗೆ ಸ್ವಲ್ಪವೂ ಪುರಸ್ಕಾರ ಸಿಕ್ಕದೇಹೋದ ದ್ದರಿಂದ ನಾಚಿಕೊಂಡು ಪೊರಟನು. ಸೀತಾದೇವಿಯು ಅರ್ಹತ್ಪರಮೇಶ್ವರನ ಪಾದಕಮಲಗಳನ್ನು ನೆನೆಯುತ್ತಿದ್ದಳು. ಮಾರೀಚನು ಸೀತಾದೇವಿಯು ಮಾತ ನಾಡದೇಹೋದ್ದರಿಂದ ರೇಗಿ "ಎಲೇ ಹುಚ್ಚಿ! ನಿನ್ನನ್ನು ಮಾತನಾಡುವಂತೆ ಮಾಡಿಸುತ್ತೇನೆ" ಎಂದು ಹೇಳಿ ಖಚರ ಸೇವಕರನ್ನು ಕರೆದು ವಿರೂಪಮಾಡಿ ಕೊಂಡು ಸೀತೆಯನ್ನು ಹೆದರಿಸುವಂತೆ ಹೇಳಲು ಆ ದುಷ್ಟರು ವಿರೂಪಮಾಡಿ ಕೊಂಡು ಸೀತೆಯ ಸುತ್ತಲೂ ಕುಣಿದು ಆರ್ಭಟಿಸಿದರು. ದೇವಿಯು ಮೌನ ವ್ರತದಿಂದ ಕೂತಿರಲು ಹಾವು ಚೇಳು ರೂಪಿನಿಂದ ಹೆದರಿಸಿದರೂ ಸ್ವಲ್ಪವೂ ಕದಲದೆ ಕೂತಿರಲು ಸೇವಕಾಳಿಗಳು ತಾವು ಈ ವನದಲ್ಲಿರುವದಿಲ್ಲ; ಇಲ್ಲಿ ಭೂತಪ್ರೇತಗಳು ಸೇರಿಕ್ಕೊಂಡಿವೆಯೆಂದು ಹೇಳಿ ಅದೃಶ್ಯರಾದರು. ಸೀತಾ ದೇವಿಯು ಈ ಮಹೋಪಸರ್ಗಗಳನ್ನು ಸಹಿಸಿಕೊಂಡು ಅರ್ಹತ್ಪರಮೇಶ್ವರ ನನ್ನು ಅನುಕಾಲವೂ ನೆನೆಯುತ್ತಿದ್ದಳು.

೩೯. ಮಂಡೋದರಿಯ ನೀತಿ.

ಶ್ರೇಣಿಕ ಮಹಾರಾಜನೇ! ಕೇಳುವನಾಗ್ಯೆ—ಮಾರೀಚನು ನಾನಾವಿಧವಾಗಿ ದೇವಿಯನ್ನು ಹೆದರಿಸಿ ಬಹಳತೊಂದರೆ ಕೊಟ್ಟರೂ ಮೌನವಾಗಿ ಬಂದ ಉಪಸರ್ಗಗಳನ್ನು ಸಹಿಸಿಕೊಂಡು ದೇವರಲ್ಲಿ ಮನಸ್ಸಿಟ್ಟಿದ್ದರೂ ಮನಶ್ಚಾಂಚಲ್ಯವು ಬರುತ್ತಲೇ ಇದ್ದರೂ ಸ್ಥಿರಚಿತ್ತಳಾಗಿರಲಾಗ ದೇವಸ್ಥಾನದಲ್ಲಿ ಘಂಟಾನಾದವು ಕೇಳಿಬಂತು. ಆಗ ಸೀತೆಯು ನಾದವನ್ನೇ ಕೇಳುತ್ತಾ ತನ್ನ ಬಾಲ್ಯದಲ್ಲಿ ದೇವಸ್ಥಾನಕ್ಕೆ ಸಖಿಯರಕೂಡ ತಾನು ದೇವಸ್ಥಾನವನ್ನು ಪ್ರವೇಶಿಸಿ ದೇವರ ಮುಂದೆ ಪ್ರಾರ್ಥನೆಮಾಡುವ ವಿಷಯವನ್ನು ಯೋಚಿಸುವದರಲ್ಲಿ ಸಹಸ್ರಕೂಟ ಚೈತ್ಯಾಲಯವು ಕಣ್ಣಿಗೆ ಕಾಣಿಸಿದಂತಾಯಿತು. ಅಷ್ಟರಲ್ಲಿ ಶ್ರೀರಾಮನ ಕೂಡಾ ತಾನು ವೈವಾಹಾಂತ್ಯದಲ್ಲಿ ಪ್ರವೇಶಮಾಡಿದ್ದೂ ಆಗ್ಗೆ ತಾನು ಮಾಡಿಕೊಂಡಿದ್ದ ಅಲಂಕಾರವೂ ನಾಯಕನನ್ನು ತಾನು ನಾಚಿಕೆಯಿಂದ ನಮ್ರೀಭೂತಳಾಗಿದ್ದಾಗ ಶ್ರೀರಾಮನು ತನ್ನ ಮುಖವನ್ನು ನಿರೀಕ್ಷಿಸಿದ್ದೂ ಮೊದಲಾಗಿ ರಾಮನ ರೂಪು ಪ್ರತ್ಯಕ್ಷವಾಗಿ ಕಂಡಂತೆ ಕಾಣಿಸಿತು. ಆ ರೂಪನ್ನು ಧ್ಯಾನಮಾಡುತ್ತಲಿದ್ದಾಗ ಎಲ್ಲೋಸ್ವಪ್ನಾವಸ್ಥೆಯಾದಂತಾಯಿತು. ಆದರಲ್ಲಿ ನಾಯಕನು ಸಮಕ್ಷಮ ಸರಸ ಸಲ್ಲಾಪಗಳನ್ನು ಮಾಡುವುದನ್ನು ಕಾಣುತ್ತಿದ್ದಳು. ಇತ್ತಲು ಮಾರೀಚನು ಅರಮನೆಗೆಬಂದು ರಾವಣನನ್ನು ನೋಡಿ ಸೀತಾದೇವಿಗೆ ಎಷ್ಟು ಬಾಧೆ ಪಡಿಸಿದರೂ ಚಲಿಸುವುದಿಲ್ಲ. ಹೆಂಗಸರಿಗೆ ಹೆಂಗಸರೇ ಪ್ರೇರೇಪಣೆಮಾಡಿದರೆ ಅದು ಸಫಲವಾಗಬಹುದೆಂದು ಹೇಳಿದನು. ದಶಾನನನು ತನ್ನ ಆವಾಸಕ್ಕೆ ಮಂಡೋದರಿಯನ್ನು ಕರೆಸಲು, ಆಕೆಯು ಅಲಂಕಾರಭೂಷಿತಳಾಗಿ ಬರುವುದನ್ನು ಕಂಡು, ಅವಳ ಸೌಂದರ್ಯವನ್ನು ನೋಡಿ ಮುಗ್ಧನಾಗಿ ಪೀಠದಿಂದೆದ್ದು ತಕ್ಕೈಸಿ ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡು "ಎಲೈ ಪ್ರಾಣಕಾಂತೆ! ನಿನ್ನನ್ನು ನೋಡಿದ ನೇತ್ರಗಳು ನಿನ್ನನ್ನೇ ನಿರಂತರವೂ ನೋಡಬೇಕೆಂತ ಕೋರುತ್ತಲಿವೆ. ನಿನ್ನ ಮೃದುಮಧುರ ಗಂಭೀರವಾದ ವಾಕ್ಕು ನನ್ನಕಿವಿಗೆ ಇಂಪಾಗಿರುವಷ್ಟು ಮತ್ತೊಂದಿರುವುದಿಲ್ಲ. ನಿನ್ನ ಕೋಮಲವಾದ ಶರೀರವನ್ನು ತಕ್ಕೈಸಿದ ನನ್ನ ಹೃದಯವು ಮತ್ತೊಂದನ್ನು ಸ್ಪರ್ಶಿಸಬೇಕೆಂಬಗೊಡೆವೆಗೆ ಹೋಗುವುದಿಲ್ಲ." ಎಂಬುವುದೇ ಮೊದಲಾದ ಮನಸ್ಸನ್ನು ಮೋಹಗೊಳಿಸುವ ಮಾತನ್ನು ಹೇಳುತಲಿದ್ದು ಹಾಗೆ " ಜಾನಕಿಯು ನಿನ್ನ ಸಾರೂಪ್ಯಳಾಗಿರುವದರಿಂದ ನನ್ನ ಮನಸ್ಸು ಅವಳಲ್ಲಿ ಸಿಕ್ಕಿಹೋಗಿದೆ. ಎಷ್ಟು ಪ್ರಯತ್ನಪಟ್ಟರೂ ಅದು

ಹಿಂತಿರುಗುವುದಿಲ್ಲ" ಎಂದು ಹೇಳಿದಾಗ ಪತಿವ್ರತಾ ಶಿರೋಮಣಿಯಾದ ಮಂಡೋದರಿಯು ಹೇಳಲುದ್ಯುಕ್ತಳಾದಳು— "ಎಲೈ ರಾಜಾಧಿರಾಜನೇ! ಲಾಲಿಸು ನನ್ನ ಮಾತಿನಿಂದ ನಿನಗೆ ತಿಳವಳಿಕೆಯಾಗಬೇಕಾದ್ದೇನೂ ಇಲ್ಲ. ಹಾಗಾದರೂ ನನ್ನ ಕುತೂಹಲದಿಂದ ಹೇಳುವೆನು. ರಾಜನು ಪ್ರಜೆಗಳನ್ನು ನ್ಯಾಯಮಾರ್ಗದಲ್ಲಿ ಸಂತೋಷಪಡಿಸುತ್ತಾನೆಂಬುದು ರಾಜಶಬ್ದಕ್ಕೆ ಅನ್ವರ್ಥವಾಗಿರುತ್ತೆ. ಹೀಗಿರುವಲ್ಲಿ ಪ್ರಜೆಗಳ ನೀತಿಗೂ ಮತ್ತು ಜುಗುಪ್ಸೆಗೂ ಕಾರಣವಾದ ಪರಸ್ತ್ರೀಯರನ್ನು ಅಪೇಕ್ಷಿಸುವುದು ಬಹಳ ನ್ಯಾಯವಿರುದ್ಧವಾಗಿರುತ್ತೆ. ಮತ್ತು ಪ್ರಜೆಗಳಲ್ಲಿ ನಂಬಿಕೆಗೂ ಅನರ್ಹವಾಗಿರುತ್ತೆ. ಕಾಮವ್ಯಾಪಾರವು ಪ್ರಾಣಿಗಳ ಸಮುದಾಯದಲ್ಲಿ ಸಾಮಾನ್ಯವಾಗಿದ್ದರೂ ಸಭ್ಯಮನುಷ್ಯರು ಇದನ್ನು ವಾಚಾ ಹೇಳುವುದಕ್ಕೂ ಹಿಂಜರಿಯುವರು. ಯಾತಕ್ಕೆಂದರೆ ಗೊತ್ತುಮಾಡದ ಈ ನಡತೆಯಿಂದ ವಿದ್ಯಾ ಬುದ್ಧಿ ವಿವೇಕಗಳು ಶೂನ್ಯವಾಗುವುವು. ಅನಂತರ ಪಶುಸಮಾನನಾಗುವನು. ನೀವು ಚಕ್ರವರ್ತಿಯೆನಿಸಿಕೊಂಡು ಪರಸ್ತ್ರೀಲಂಪಟರಿಗೆ ತಕ್ಕ ಶಿಕ್ಷೆಕೊಡತಕ್ಕವರಾದ ನೀವೇ ಈ ಅನ್ಯಾಯವಾದ ನಡತೆಗೆ ಬಿದ್ದರೆ, ಯಾರಿಂದ ತಿದ್ದುವುದಕ್ಕೆ ಆದೀತು? ಕಾಮಾತುರರಿಗೆ ವಿದ್ಯಾ ವಿವೇಕ, ಗುಣ ಸನ್ಮಾರ್ಗ, ಗೌರವ ಕಾರುಣ್ಯಗಳು, ಯಾವುದೂ ಇರುವುದಿಲ್ಲದೆ ಮನುಷ್ಯತ್ವವೇ ಇರುವುದಿಲ್ಲ. ಪ್ರಭುಗಳಾದ ಮಹರ್ಷಿಗಳ ಸನ್ನಿಧಿಯಲ್ಲಿ ಪರಸ್ತ್ರೀಯನ್ನು ಕಾಯವಾಙ್ಮನಸ್ಸಿನಿಂದಲೂ ಬಿಟ್ಟಿದ್ದೇನೆಂತ ವ್ರತವನ್ನು ತೆಗೆದುಕೊಂಡಿದ್ದೀರಿ. ಈಗ ಅದು ಭಂಗವಾಗುವುದಿಲ್ಲವೇ?" ಎಂಬುವದೇವೊದಲಾದ ನೀತಿಧರ್ಮವಾಕ್ಯಗಳನ್ನು ಮಂಡೋದರಿಯು ಎಷ್ಟು ಹೇಳಿದರೂ ಕಗ್ಗಲ್ಲಿನ ಮೇಲೆ ನೀರು ಹಾಕಿದರೆ ಹ್ಯಾಗೆ ಕಾಠಿಣ್ಯ ತಪ್ಪುವುದಿಲ್ಲವೋ ಹಾಗೆ ರಾವಣನ ಪರಸ್ತ್ರೀವ್ಯಸನವು ತಪ್ಪಲಿಲ್ಲ. ಪತಿಭಕ್ತಿಪರಾಯಣಳಾದ ಮಂಡೋದರಿಯು ಅರ್ಹತ್ಪರಮೇಶ್ವರನ ಪಾದಗಳನ್ನು ಸ್ಮರಿಸುತ್ತಲಿದ್ದಳು.

೪೦. ಕಪಿ ಧ್ವಜಾಗಮ

ಮಹರ್ಷಿಗಳಾದ ಗೌತಮರು ಮುಂದಲ ಕಥೆಯನ್ನು ಹೇಳಲು ಪ್ರಾರಂಭಿಸಿದರು—ಎಲೈ ರಾಜನೇ ಕೇಳುವನಾಗು! ದಶಕಂದರನು ಪೀಠದಿಂದೆದ್ದು ಮಂಡೋದರಿಯು ಹೊರಡಲನುವಾದಾಗ, ದಶಕಂಠನು ಮಂಡೋದರಿಯ ಮಾತನ್ನು ಕೇಳಿ ನಕ್ಕು "ನೀನು ಜಾನಕಿಯು ಅನ್ನೋದಕ ತೆಗೆದುಕೊಳ್ಳುವ

ದಕ್ಕೆ ಕರುಣಿಸಿ ಸಹಾಯಮಾಡಬೇಕು" ಎಂದು ಹೇಳಲಾಗ ಸೀತೆಯು ಇರತಕ್ಕ ಅಶೋಕವನಕ್ಕೆ ಹೊರಟಾಗ, ರಾಜಪರಿವಾರವು ಅವಳ ಸುತ್ತಾ ನಾನಾವಿಧವಾದ ಉಪಚಾರಗಳನ್ನು ಮಾಡಲು ಮಂಡೋದರಿಯು ಅಶೋಕವನಕ್ಕೆ ಹೋಗಿ ಸೀತೆಯನ್ನು ನೋಡಲಾಗ— ಹತ್ತಾರು ವ್ಯಾಘ್ರಗಳ ಕೈಗೆ ಸಿಕ್ಕಿದ ಚಿಗುರಿಯಂತೆ ಜಾನಕಿಯು ಆ ಬಿಚ್ಚ ಕತ್ತಿಯಿಟ್ಟು ಕಾಯುತ್ತಿರುವ ಅಸುರರ ಮಧ್ಯದಲ್ಲಿ ಭಯೋತ್ಪಾತದಿಂದಿರುವ ಜಾನಕಿಯ ಸ್ಥಿತಿಯು ಸದೃಶವಾಗಿತ್ತು. ಮಂಡೋದರಿಯು ಹಿಂದುಗಡೆಯಿದ್ದ ಮಾರೀಚನನ್ನು ಕರೆದು, "ಜಾನಕಿಗೆ ಇಷ್ಟೊಂದುಪಹರೆಯನ್ನಿಟ್ಟು ಹಗಲಿರುಳು ಕಾಯಿಸುತ್ತೀರಲ್ಲಾ ? ಏನು ಕಾರಣ? ಜಾನಕಿಯು ಓಡಿಹೋಗುತ್ತಾಳೆಂಬ ಭಯವೇ? ಅಥವಾ ರಾಮ ಲಕ್ಷ್ಮಣರು ಬಂದು ಸೀತೆಯನ್ನು ಎತ್ತುಕೊಂಡು ಹೋಗುತ್ತಾರೆಂಬ ಭಯವೇ? " ಎಂದು ಕೇಳಲಾಗ ಮಾರೀಚನು "ರಾಜನ ಅಪ್ಪಣೆ ಪ್ರಕಾರ ಈ ರೀತಿ ಇಡಲ್ಪಟ್ಟಿದೆ" ಎಂದು ಹೇಳಲಾಗ ಮಂಡೋದರಿಯು "ಈ ಕಾವಲುಗಾರರನ್ನೆಲ್ಲ ದೂರವಾಗಿ ನಿಲ್ಲಿಸಿ ಜಾನಕಿಯ ಕಣ್ಣಿಗೆಬೀಳದಂತೆ ಕಾಯುವಂತೆ ಮಾಡುವುದೆ ಒಳ್ಳೆಯದು" ಎಂದು ಹೇಳಿ ಜಾನಕಿಯ ಹತ್ತಿರ ಹೋಗಲು ಎಲ್ಲಾ ಕಾವಲುಗಾರರೂ, ಎಲ್ಲ ಸೇವಕಾಳಿಗಳೂ ಬಹುದೂರ ಮರೆಯಾಗಿ ನಿಂತುಕೊಂಡರು. ಹತ್ತಿರ ಹೋಗಿ ಜಾನಕಿಯನ್ನು ನೋಡಲಾಗಿ ಅವಳು ಪದ್ಮಾಸನದಲ್ಲಿ ಕೂತು ಮರವನ್ನೊರಗಿ ಕೊಂಡು ಕಣ್ಣುಮುಚ್ಚಿಕೊಂಡು ದೀರ್ಘವಾಗಿ ಶ್ವಾಸಬಿಡುತ್ತಾ, ಕುಂದಿದ ಮುಖಚ್ಛಾಯವುಳ್ಳವಳಾಗಿರುವುದನ್ನು ನೋಡಿ ಈ ಸಣ್ಣ ಬಾಲಕಿಯು ಗಂಡ ನನ್ನು ಬಿಟ್ಟರೆ ಸುಖವಿಲ್ಲವೆಂಬ ಭಾವನೆಯಿಂದ "ಪತಿಯಾದ ರಾಮನ ಕೂಡ ಕಾಲ್ನಡಗೆಯಲ್ಲಿ ಬಿಸಲುಬಿಂಕಿಗೆ ಸಿಕ್ಕಿ ಅನ್ನಾಹಾರಗಳನ್ನು ಬಿಟ್ಟು ಕಂದ ಮೂಲಫಲಗಳನ್ನು ತಿಂದು ಚಳಿಮಳೆಬಿಸಲಿನಲ್ಲಿ ವ್ಯಥೆಪಟ್ಟುಕೊಂಡಿದ್ದಾಗ್ಯೂ, ಇವಳು ಎಲ್ಲಾ ಬಂಧು ವರ್ಗವು ಗಂಡನೇ ಎಂದು ತಿಳಿದುಕೊಂಡಿದ್ದರೂ, ಜನ್ಮಾಂತರದ ದುಷ್ಕೃತದಿಂದ ಈ ರೀತಿ ಪತಿವಿಯೋಗವೂ, ಅಗಮ್ಯವಾದ ಈ ದುರ್ಗಮಪ್ರವೇಶವೂ ಹೇಗಾಯಿತೋ ಗೊತ್ತಿಲ್ಲ. ಇಂಥಾ ಕಾಲದಲ್ಲಿ ಪತಿಯನ್ನು ಬಿಟ್ಟು ಇವಳು ಹೇಗೆ ಜೀವಿಸ್ಯಾಳು! " ಎಂತ ಹೇಳಲಾಗ ಜಾನಕಿಯ ಕಿವಿಗೆ ಮೃದುವಾದ ಈ ವಾಕ್ಯವು ಈ ಲಂಕೆಗೆ ಬಂದ ಮೇಲೆ ಮೊದಲನೇ ಆವರ್ತಿ ಕಿವಿಗೆ ಬಿದ್ದಂತಾಯಿತು. ಯಾವ ಮಾತನ್ನೂ ಕಿವಿಗೆ ಹಾಕಿ ಕೊಳ್ಳದ ಜಾನಕಿಯು ಈ ಮಾತನ್ನು ಕೇಳಿದಳು. ಮಂಡೋದರಿಯು ಮತ್ತೂ

ಹತ್ತಿರಬಂದು ಜಾನಕಿಯ ತಲೆಯನ್ನು ಸವರಿ "ಇಂಥಾ ಕಷ್ಟವು ನಿನಗೆ ಬರಬಹುದೇ?" ಎಂಬುದಾಗಿ ದುಃಖಪಡುವ ಕಾಲದಲ್ಲಿ ಮಂಡೋದರಿಯ ಅಶ್ರುಬಿಂದುಗಳು ಜಾನಕಿಯ ಹಸ್ತದ ಮೇಲೆ ಧಾರಾಪೂರ್ವಕವಾಗಿ ಹರಿದವು. ಜಾನಕಿಗೆ ಮಂಡೋದರಿಯ ಸ್ಪರ್ಶವಾಗುತ್ತಲೇ, ತಾಯಿಯು ಮಕ್ಕಳನ್ನು ಮುಟ್ಟಿದರೆ ಹ್ಯಾಗೆ ಆನಂದವಾಗುತ್ತೋ, ಹಾಗೆ ಸೀತಾದೇವಿಗೆ ಆಯಿತು. ಅಶೋಕವನಕ್ಕೆ ಬಂದಲಾಗಾಯಿತು ಸ್ವಲ್ಪವೂ ಕಣ್ಣುತೆರೆಯದಿದ್ದ ಸೀತೆಯು ಮಂಡೋದರಿಯ ರೂಪನ್ನು ಸ್ವಲ್ಪ ತೆರೆದ ಕಣ್ಣಿನಿಂದ ನೋಡಿದಳು. ಆಗ ಮಂಡೋದರಿಯು ಜಾನಕಿಯನ್ನು ಬಾಚಿತಬ್ಬಿಕೊಂಡು ತನ್ನತೊಡೆಯಮೇಲೆ ಕುಳ್ಳಿರಿಸಿಕೊಂಡು ಬಹಳವಾಗಿ ಅತ್ತಳು. ಸೀತಾದೇವಿಗೆ ಮಂಡೋದರಿಯಲ್ಲಿ ಮಾತೃ ವಾತ್ಸಲ್ಯವು ಸ್ವಲ್ಪವುಂಟಾಯಿತು. ಕೂಡಲೆ ಆಪತ್ಕಾಲದಲ್ಲಿ ಆಪ್ತಬಂಧುಗಳನ್ನು ಕಂಡರೆ ಹೇಗೆ ದುಃಖಹೊರಬೀಳುತ್ತೊ, ಹಾಗೆ ಸೀತಾದೇವಿಗೆ ಮಂಡೋದರಿಯ ಅಂಕಪ್ರವೇಶವಾದ ಕೂಡಲೇ ಬಹಳ ದುಃಖದಿಂದ ಅಶ್ರುಪಾತಮಾಡಿದಳು. ಮಂಡೋದರಿಯು ತನ್ನ ಸೆರಗಿನಿಂದ ಸೀತಾದೇವಿಯ ಕಣ್ಣುಗಳ ನೀರನ್ನು ವರಿಸಿ ಸಂತೈಸಿದಳು. "ಎಲೈ ಜಾನಕಿಯೇ! ನೀನುವ್ಯಸನಪಟ್ಟರೆ ನನ್ನ ದುಃಖವು ಇಮ್ಮಡಿಯಾಗುತ್ತೆ. ಸಂತೈಸು. ನಿನಗೆ ರಾಘವನ ಮೇಲೆ ಪ್ರೀತಿಯಿದೆಯೇ? ಲಕ್ಷ್ಮಣನನ್ನು ನೋಡಬೇಕೆಂದು ಕೋರುತ್ತಿಯಾ?" ಎಂದು ಕೇಳಿದಳು. ಅದಕ್ಕೆ ಸೀತಾದೇವಿಯು ಮಾತನಾಡದಿದ್ದರೂ ಉಂಟೆಂಬ ಅಭಿಪ್ರಾಯವನ್ನು ಮನೋಭಾವದಿಂದ ತೋರ್ಪಡಿಸಿದಳು. ಅದಕ್ಕೆ ಮಂಡೋದರಿಯು ಜಾನಕಿಯನ್ನು ಕುರಿತು "ನಿನ್ನಂತೆ ಸುಗುಣಳಾದ ಹೆಂಡತಿಯನ್ನು ಬಿಟ್ಟು ರಾಮನಿಗೆ ಹಿಡಿಯಲಾರದಷ್ಟು ದುಃಖಗಳು ಬಂದರೂ, ನಿನ್ನನ್ನು ಮುಂದೆಯಾದರೂ ಹೊಂದುವನೆಂಬ ಬಯಕೆಯಿಂದ, ದುಃಖವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಹೀಗಿರುವಲ್ಲಿ ನೀನು ಆಹಾರವನ್ನು ಸ್ವಲ್ಪವೂ ತೆಗೆದುಕೊಳ್ಳದಿದ್ದರೆ, ಈಗಲೇ ನಿನಗೆ ಮಾತನಾಡುವುದಕ್ಕೆ ನೆಟ್ಟಗೆ ಆಗುವುದಿಲ್ಲ. ಹೀಗೇನೆ ಇನ್ನು ಎರಡು ದಿವಸಗಳಿದ್ದರೆ ನೀನು ಈ ಭೂಮಿಯಲ್ಲಿ ಉಳಿಯುವ ಹಾಗೆ ಕಾಣಬರುವುದಿಲ್ಲ. ಲಕ್ಷ್ಮಣನು ಅತ್ತಿಗೆಯಾದ ನಿನ್ನನ್ನು ತನ್ನ ತಾಯಿಯಂತೆ ಭಾವಿಸಿರುವಾಗ, ನಿನಗೆ ಲಕ್ಷ್ಮಣನನ್ನು ನೋಡಬೇಕೆಂಬ ಅಪೇಕ್ಷೆಯಿಲ್ಲವೇ? ನೀನು ಇಲ್ಲಿರುವುದನ್ನು ಹ್ಯಾಗೂ ರಾಮನು ತಿಳಿದು, ಇಲ್ಲಿಗೆ ಬಂದು, ನಿನ್ನನ್ನು ಜಾಗ್ರತೆಯಾಗಿ ಕರೆದುಕೊಂಡು ಹೋದಾನು. ಅವನು ಇಲ್ಲಿಗೆ ಬರುವವರಿಗೆ

ನೀನು ಪ್ರಾಣವನ್ನು ಕಾಪಾಡಿಕೊಂಡಿದ್ದರೆ, ಅವರ ದುಃಖಗಳು ಶಮನವಾಗುತ್ತ- ಶಾಸ್ತ್ರಜ್ಞಳಾದ ನಿನಗೆ, ಈ ರೀತಿ ಆಹಾರವನ್ನು ಸ್ವಲ್ಪವೂ ಸೇವನೆ ಮಾಡದೇ ಈ ಲೋಕವನ್ನು ಬಿಟ್ಟರೆ, ಸದ್ಗತಿಯಾದೀತೇ? ಈವಿಷಯವನ್ನೆಲ್ಲ ಯೋಚಿಸಿ ಎಷ್ಟುಮಾತ್ರವಾದರೂ ಆಹಾರವನ್ನು ಸ್ವೀಕರಿಸುವಳಾಗು" ಎಂದು ಹೇಳಿ ಎಷ್ಟು ಪ್ರಯತ್ನಪಟ್ಟರೂ ಆಹಾರ ಸ್ವೀಕಾರದ ವಿಷಯದಲ್ಲಿ ಸೀತೆಯು ಯಾವುದನ್ನೂ ಮಾಡದೇ ಇರುವ ಸಂಗತಿಯನ್ನು ನಾಯಕನಿಗೆ ಹೇಳುವುದಕ್ಕಾಗಿ ಅರಮನೆಗೆ ತೆರಳಿದಳು.

ಇತ್ತಲು ಸುಗ್ರೀವನ ಚರರು ಸುಗ್ರೀವನನ್ನು ಕಂಡು, ಪಾತಾಳಲಂಕೆಯನ್ನು ಖರಧೂಷಣರಿಂದ ಬಿಡಿಸಲ್ಪಟ್ಟು ವಿರಾಧಿತನಿಗೆ ಕೊಡಲ್ಪಟ್ಟತೆಂದು ಹೇಳಲು, ಸುಗ್ರಿವನು "ಅಂಥಾ ಕಾರಣ ಪುರುಷರು ಯಾರು? ಖರ ಧೂಷಣರನ್ನು ಸಂಹರಿಸಿ, ವಿರಾಧಿತನಿಗೆ ಪಾತಾಳಲಂಕೆಯು ಪಟ್ಟಣವು ಬರುವುದಕ್ಕೆ ಕಾರಣವೇನು?" ಎಂದು ಕೇಳಲಾಗ, "ವಿರಾಧಿತನು ರಾಮಲಕ್ಷ್ಮಣರ ಪಾದ ಸೇವೆ ಮಾಡಿ, ತನ್ನ ವಂಶೀಕರ ಸ್ಥಾನವನ್ನು ಪಡೆದನು" ಎಂದು ಹೇಳಲಾಗ ಸುಗ್ರೀವನು "ರಾಮಲಕ್ಷ್ಮಣರು ಯಾರು?" ಎಂದು ಕೇಳಲಾಗ ಚರನು ಹೇಳಿದನೇನೆಂದರೆ-"ಅಯೋಧ್ಯಾ ಪಟ್ಟಣದ ದಶರಥನ ಮಕ್ಕಳಾದ ರಾಮಲಕ್ಷ್ಮಣರು ಬಹಳ ಸಮರ್ಥರು. ಶ್ರೀರಾಮನು ಮಿಥಿಲಾ ಪಟ್ಟಣದಲ್ಲಿ ಅಸದೃಶವಾದ ಧನುಸ್ಸನ್ನೆತ್ತಿ ವೈದೇಹಿಯನ್ನು ವಿವಾಹವಾದನು. ದಶರಥನು ರಾಮನಿಗೆ ರಾಜ್ಯಭಾರವನ್ನು ವಹಿಸಬೇಕೆಂದಿರುವಾಗ ಅಸೂಯಾಪರಳಾದ ಒಬ್ಬ ದಾದಿಯ ಮಾತಿಗೆ ಒಳಗಾಗಿ ಕೈಕಿಲೆಯು, ತನ್ನ ಮಗನಿಗೆ ಪಟ್ಟಕಟ್ಟ ಬೇಕೆಂತಲೂ,ರಾಮನನ್ನು ವನವಾಸಕ್ಕೆ ಕಳುಹಿಸಬೇಕೆಂತಲೂ ಎಂಬ ಎರಡುಮಾತುಗಳನ್ನು ಎರಡು ವರಕ್ಕಾಗಿ ದಶರಥನನ್ನು ಬೇಡಿಕೊಂಡಾಗ ದಶರಥನು ಏನು ಮಾಡಲೂ ಸಮರ್ಥನಾಗದೇ ಇರುವಾಗ—ಶ್ರೀರಾಮನು ಕೈಕಿಲೆಯಮಗನಾದ ಭರತನಿಗೆ ರಾಜ್ಯಬರುವಂತೆಮಾಡಲು, ತಾನು ವನವಾಸಕ್ಕೆ ಹೊರಟನು. ಆತನನ್ನು ಅಗಲದೆ ಪತ್ನಿಯಾದ ಜಾನಕಿಯು ಮುಷ್ಕರಹಿಡಿದದ್ದರಿಂದ ಅವಳನ್ನೂ ಅನುಜನಾದ ಲಕ್ಷ್ಮಣನನ್ನೂ ಸಹ ಕೂಡಿಕೊಂಡು ವನವಾಸಕ್ಕಾಗಿ ಕಾಡಿನಲ್ಲಿ ನಿಂತು ನಿಂತು, ಈಗ ದಂಡಕಾರಣ್ಯಕ್ಕೆ ಬಂದಿರುವನು. ಈತನು ಮಹಾಶೂರನಾದ ಲಕ್ಷ್ಮಣನೊಡನೆ ಕೂಡಿ ಅಸಾಧ್ಯಕೆಲಸಗಳನ್ನು ಸಾಧಿಸುತ್ತಲಿರುವನು" ಎಂದು ಚರನು ಸುಗ್ರೀವನಿಗೆ ಹೇಳಿದನು ಸುಗ್ರೀವನು ಅವರ ಸಾಮರ್ಥ್ಯಕ್ಕೆ

ಬೆರಗಾಗಿ ರಾಮಲಕ್ಷ್ಮಣರ ಶರಣುಹೊಕ್ಕು ತನ್ನ ಕಾರ್ಯವನ್ನು ಸಾಧಿಸಬೇಕೆಂದು ಯೋಚಿಸಿ, ತನ್ನ ಮಿತ್ರನಾದ ಜಾಂಬವನನ್ನು ಕೂಡಿಕೊಂಡು ಅಂತರೀಕ್ಷಮಾರ್ಗವಾಗಿಬಂದು ವಿರಾಧಿತನಿಗೆ ಹೇಳಿಕಳುಹಿಸಿ ಕರೆಸಿಕೊಂಡು ತಾವು ಶ್ರೀರಾಮನ ಮರೆಹೋಗಬೇಕೆಂಬ ವಿಷಯವನ್ನು ತಿಳಿಸಿ ವಿರಾಧಿತನ ಮೂಲಕ ಶ್ರೀರಾಮಲಕ್ಷ್ಮಣರನ್ನು ಕಂಡು ಅವರಿಂದ ಸತ್ಕಾರವನ್ನುಹೊಂದಿ ಕೂತುಕೊಂಡರು. ಅನಂತರ ಜಾಂಬವನು ಸುಗ್ರೀವನ ಕಥೆಯನ್ನುಹೇಳಿದನು. ವಾನರದ್ವೀಪಕ್ಕೆ ಸೂರ್ಯಹಾಸನೆಂಬ ರಾಜನಿಗೆ ವಾಲಿ, ಸುಗ್ರೀವರೆಂಬ ಎರಡು ಗಂಡು ಮಕ್ಕಳೂ, ಶ್ರೀಮಾಲೆಯೆಂಬ ಹೆಣ್ಣು ಮಗಳೂ ಇದ್ದರು- ಅವನು ವಾಲಿಗೆ ಅಧಿರಾಜತ್ವವನ್ನೂ ಸುಗ್ರೀವನಿಗೆ ಯುವರಾಜತ್ವವನ್ನೂ ಕೊಟ್ಟು ತಪಸ್ಸಿಗೆ ಹೋದನು. ವಾಲಿಯು ತಮ್ಮನನ್ನೂ ತಮ್ಮನಸ್ತ್ರೀಯರನ್ನೂ ಬಂಧನದಲ್ಲಿಟ್ಟನು. ಶ್ರೀಮಾಲೆಯನ್ನು ಲಂಕಾಧೀಶನಿಗೆ ಕೊಟ್ಟು ಪ್ರೀತಿಪಾತ್ರನಾದನು- ಯಾರೂ ಸುಗ್ರೀವನಿಗೆ ಸಹಾಯಕರಾಗಲಿಲ್ಲ. ನಿಮ್ಮ ಪಾದವನ್ನು ನಂಬಿಧಾನೆ. ಆತನನ್ನು ಕಾಪಾಡಬೇಕೆಂದು ಹೇಳಿದನು. ಆಗ ಶ್ರೀರಾಮನು ಶ್ರೀಜಿನೇಶ್ವರರಚರಣಕಮಲಗಳನ್ನು ಭಜಿಸುತ್ತಲಿದ್ದನು.

೪೧. ಬಲಿ ಪ್ರಹರಣ.

ಗೌತಮ ಗಣಧರರು ಮುಂದಿನ ಕಥೆಯನ್ನು ಕೇಳುವನಾಗೆಂದು ಹೇಳಿದರು. ಸುಗ್ರೀವನ ವಿಷಯವನ್ನು ಜಾಂಬವನು ಶ್ರೀರಾಮನಿಗೆ ಹೇಳಲಾಗಿ, ಶ್ರೀರಾಮನು ನೇತ್ರ ಸಂಜ್ಞೆಯನ್ನು ಲಕ್ಷ್ಮಣನಿಗೆ ಮಾಡಲಾಗ, ಲಕ್ಷ್ಮಣನು ಜಾಂಬವಾದಿಗಳಿಗೆ "ಭಯಪಡಬೇಡಿರಿ" ಎಂದು ಹೇಳಿದನು. ಅನಂತರ ಜಾಂಬವಾದಿಗಳು ರಾಮ ಲಕ್ಷ್ಮಣರನ್ನು ಕರೆದುಕೊಂಡು ಹೊರಟು, ಕಿಷ್ಕಿಂಧ ಪಟ್ಟಣಕ್ಕೆ ಸಮೀಪವಾಗಿ ನಿಂತು ಆ ಪಟ್ಟಣದ ವರ್ಣನೆಯನ್ನು ಜಾಂಬವನು ರಾಮನಿಗೆ ಹೇಳಿದನು. ಅನಂತರ ಅವರೆಲ್ಲರೂ ಒಟ್ಟುಗೂಡಿ ಆಲೋಚಿಸಿ ವಾಲಿಗೆ ಒಂದು ಕಾಗದವನ್ನು ಬರೆದು ಕಳುಹಿಸಿದರು. ಆ ಕಾಗದವನ್ನು ಚರನು ವಾಲಿಯ ಆಸ್ಥಾನಕ್ಕೆ ತೆಗೆದುಕೊಂಡು ಹೋಗಿ ಕೊಟ್ಟನು. ಆ ಕಾಗದದಲ್ಲಿ ನೀನು ಸುಗ್ರೀವನಿಗೆ ಯಾವ ಬಾದೆಯನ್ನೂ ಮಾಡದ ಅವನಿಗೆ ಸಲ್ಲತಕ್ಕ ರಾಜ್ಯವನ್ನು ಅವನಿಗೆ ಕೊಟ್ಟು ಸ್ನೇಹವಾಗಿ ನೀನು ಬಾಳುವುದು ಒಳ್ಳೆಯದೆಂದೂ, ಶ್ರೀರಾಮನು ಬರೆಸಿದ್ದೆಂದೂ ಗೊತ್ತಾಯಿತು. ಆಗ ವಾಲಿಯ ಮಗ

ನಾದ ಅಂಗದನು ಈವಿಷಯವನ್ನು ತಿಳಿದು ಬಹಳ ಆಕ್ರೋಶಮಾಡಿ ಕಾಗದದಂತೆ ನಡೆಯಲು ಆಗುವುದಿಲ್ಲವೆಂಬುದೇ ಮೊದಲಾದ ಮಾತುಗಳನ್ನಾಡಿದನು. ವಾಲಿಯು ಇದನ್ನು ಕೇಳಿ ಸುಗ್ರೀವ ರಾಮ ಲಕ್ಷ್ಮಣರನ್ನು ಜರಿದು ತಿರಸ್ಕರಿಸಿ "ಶಕ್ತಿಯಿದ್ದರೆ ಯುದ್ಧಕ್ಕೆ ಬರಬಹುದು" ಎಂಬುದಾಗಿಹೇಳಿದನು. ಈವಿಷಯಗಳನ್ನೆಲ್ಲ ತಿಳಿದು ರಾಮಲಕ್ಷ್ಮಣರು ಯುದ್ಧಕ್ಕೆ ಸನ್ನದ್ಧರಾದರು. ಅಂಗದನು ಚತುರಂಗ ಬಲಸಮೇತನಾಗಿ ಪ್ರಧಾನನಾದ ಬಲಿಯನ್ನು ಕೂಡಿಕೊಂಡು ಯುದ್ಧಕ್ಕೆ ಬಂದು ನಿಂತನು. ಲಕ್ಷ್ಮಣನು ರಾಮನ ಅಪ್ಪಣೆಯನ್ನು ಪಡೆದು ಜಾಂಬವ ಸುಗ್ರೀವ ವಿರಾಧಿತರೊಡನೆ ಪಾತಾಳಲಂಕೆಯ ಚತುರ್ಬಲವನ್ನು ಕೂಡಿ ಯುದ್ಧಕ್ಕೆ ಮುಂದಾಗಿ ಹೋಗಿ ನಿಂತನು. ಉಭಯ ದಳಕ್ಕೂ ಕೆಲವು ಕಾಲ ಯುದ್ಧನಡೆದನಂತರ ಅಂಗದನು ಮುಂದೆ ಬಂದು ಲಕ್ಷ್ಮಣನ ಕೂಡ ನಿಂತು—ತಾನು ಮಹಾಶೂರನೆಂತಲೂ, ತನ್ನೊಂದಿಗೆ ಯುದ್ಧ ಮಾಡಿದವರಲ್ಲಿ ಯಾರೂ ಹಿಂತಿರುಗಲಲ್ಲವೆಂತಲೂ ಆದ್ದರಿಂದ ಲಕ್ಷ್ಮಣನನ್ನು ಹೊರಟು ಹೋಗೆಂದು ಬೆದರಿಸಿದನು. ಈ ಪೊಳ್ಳುಮಾತಿಗೆ ವಾಸುದೇವನಾದ ಲಕ್ಷ್ಮಣನು ಹೆದರುವನೇ? ತನ್ನ ಬಾಣಗಳಿಂದ ಅಂಗದನನ್ನು ಹಿಂದಕ್ಕೆ ಓಡಿಸಿದನು. ಆಗ ಬಲಿಯು ಮುಂದೆ ಬಂದು ಪ್ರತಾಪವನ್ನು ಕೊಚ್ಚಿಕೊಳ್ಳುತ್ತಾ ಲಕ್ಷ್ಮಣನ ಮೇಲೆ ಬಾಣಗಳಮಳೆಯನ್ನು ಕರೆದನು. ಲಕ್ಷ್ಮಣನು ಬಾಣಪ್ರಯೋಗಮಾಡಿ ಬಲಿಯತಲೆಯನ್ನು ನೆಲಕ್ಕೆಡಹಿದನು. ವಾಲಿಯ ದಂಡುಗಳೆಲ್ಲ ಹೆದರಿ ವಾಲಿಗೆ ತಿಳಿಸುವದಕ್ಕಾಗಿ ಓಡಿಹೋದವು. ಲಕ್ಷ್ಮಣನು ಅಣ್ಣನಬಳಿಗೆ ಬಂದು ನಡೆದ ಯುದ್ಧದ ವಿಷಯಗಳನ್ನು ತಿಳಿಸಲಾಗ ಶ್ರೀರಾಮನು ಅರ್ಹತ್ಪರಮೇಶ್ವರರನ್ನು ನೆನೆಯುತ್ತಾ ಕುಳಿತಿದ್ದನು.

೪೨. ವಾಲಿ ನಿಗ್ರಹ.

ಎಲೈ ಶ್ರೇಣಿಕ ಮಹಾರಾಜನೇ! ಕೇಳುವನಾಗು-ಅಂಗದನು ಮೂರ್ಛೆ ಹೊಂದಿದವಿಷಯವನ್ನು ದಂಡಿನವರು ವಾಲಿಗೆ ಅರಿಕೆಮಾಡಲಾಗಿ ವಾಲಿಯು "ಯಾರು? ಮನುಷ್ಯರಲ್ಲಿ ಸಾಧಾರಣವಾಗಿರುವ ಮನುಷ್ಯನು ಇಷ್ಟೊಂದುಜನರ ಮೇಲೆ ಯುದ್ಧಮಾಡಿ ಗೆಲ್ಲುವದೆಂದರೇನು? ಇವನು ಎಷ್ಟೋ ಮೋಸ ವಿದ್ಯೆಗಳನ್ನು ಕಲಿತುಕೊಂಡು ಜಯಶೀಲನಾಗುತ್ತಿದ್ದಾನೆ! ಇಂಥಾ ಮೋಸವಿದ್ಯೆಗಳ ಕೆಲಸಗಳು ನಮ್ಮಲ್ಲಿ ನಡೆದೀತೆ? ಬಲಿಯು ಬಹಳ ಸಮರ್ಥನು. ಲಕ್ಷ್ಮಣನ

ಏಟಿಗೆ ಅವನು ಸಿಕ್ಕಿಬಿದ್ದದ್ದು ಬಹಳ ಆಶ್ಚರ್ಯ!" ಎಂದು ಹೇಳುತ್ತಿರುವಲ್ಲಿ ಮಂತ್ರಿಗಳು ವಾಲಿಯಸಮೀಪಕ್ಕೆ ಬಂದು "ರಾಮಲಕ್ಷ್ಮಣರುಸಾಮಾನ್ಯರಲ್ಲ ಖರಧೂಷಣರನ್ನನಿಗ್ರಹಿಸಿ ಪಾತಾಳಲಂಕೆಯನ್ನು ವಿರಾಧಿತನಿಗೆಕೊಡಿಸಿದರು. ಈಗ ವಾನರದ್ವೀಪದ ಜಾಂಬವನೂ, ವಿರಾಧಿತನೂ ಬಲಸಹಿತರಾಗಿ ಬಂದು ಯುದ್ಧಮಾಡುತ್ತಿದ್ದಾರೆ. ಸುಗ್ರೀವನು ನಿನ್ನ ತಮ್ಮ. ನ್ಯಾಯವಾಗಿ ಆತನಿಗೆ ಈ ರಾಜ್ಯದಲ್ಲಿ ಅರ್ಧಹಕ್ಕಿದೆ. ರಾಮಲಕ್ಷ್ಮಣರ ಹೇಳಿಕೆಯಂತೆ ಸುಗ್ರೀವ ನಿಗೆ ಅರ್ಧರಾಜ್ಯವನ್ನು ಭ್ರಾತೃ ಪ್ರೀತಿಯಿಂದ ಕೊಟ್ಟು ಸುಖವಾಗಿರುವುದು ಒಳ್ಳೆಯದು" ಎಂದು ಹೇಳಿದರು. ಇದನ್ನು ಕೇಳಿದ ವಾಲಿಯು "ಸುಗ್ರೀವನಿಗೆ ರಾಜ್ಯವನ್ನು ಕೊಡಿಸಲು ರಾಮಲಕ್ಷ್ಮಣರು ಸಮರ್ಥರೇ? ದುಷ್ಟನಾದ ಸುಗ್ರೀ ವನಿಗೆ ರಾಜ್ಯವನ್ನು ಕೊಡುವುದಕ್ಕೆ ಕಾರಣವೇನು? ಈ ಮಾತುಗಳನ್ನು ಇತಃ ಪರ ನನ್ನ ಮುಂದೆ ಹೇಳಕೂಡದು" ಎಂದು ಮಂತ್ರಿಗಳ ಮೇಲೆ ಘರ್ಜಿಸಿದನು. ಅನಂತರ ಅನೇಕ ದಂಡುಗಳೊಡನೆ ಯುದ್ಧಕ್ಕೆ ಹೋಗಿ ಲಕ್ಷ್ಮಣನ ಮುಂದೆ ಬಂದು ನಿಂತು "ದೇಶಾಂತರಗತಿಯಾಗಿ ಅಲೆಯುತ್ತಿರುವ ನಿಮಗೆ ಈ ಸುಗ್ರೀ ವನ ಯೋಚನೆ ಯಾಕೆ? ಅಣ್ಣನಾದ ನಾನೇ ರಾಜ್ಯವನ್ನು ಕೊಡಕೂಡದೆಂದು ಗೊತ್ತುಮಾಡಿರುವಾಗ ನೀವೇನು ಮಾಡುವುದು! ಈ ಮೋಸದ ಮಾತು ಕಥೆ ಗಳು ನನ್ನ ಕಿವಿಗೆ ಬೀಳಕೂಡದು. ಈಗ ಅರ್ಧ ಕ್ಷಣದಲ್ಲಿ ನಿನ್ನನ್ನು ಯಮನ ಪಟ್ಟಣವನ್ನು ನೋಡುವುದಕ್ಕೆ ಕಳುಹಿಸುತ್ತೇನೆ" ಎಂದು ವಾಲಿಯು ಲಕ್ಷ್ಮ ಣನ ಮೇಲೆ ಬಾಣಪ್ರಯೋಗಮಾಡಿದನು. ಲಕ್ಷ್ಮಣನು "ಎಲಾ ದುರುಳಾ! ತಮ್ಮನಿಗೆ ಆಸ್ತಿಯನ್ನು ಕೊಡದೆ ಅವನನ್ನೂ, ಅವನ ಸ್ತ್ರೀಯರನ್ನೂ ಸಹ ಸೆರೆ ಯಲ್ಲಿಟ್ಟು, ನೀನು ಸುಖವಾಗಿರಬೇಕೆಂಬುದು ಇನ್ನುಮುಂದೆ ನಡೆಯಲಾರದು ಸುಗ್ರೀವನು ರಾಜ್ಯಭಾರಮಾಡುವುದನ್ನು ಪಾಪಿಯಾದ ನೀನು ನೋಡಬಾರ ದೆಂಬ ಬಯಕೆಯಿಂದ ನಿನ್ನನ್ನು ಕಾಲಾಂತರಕ್ಕೆ ಕಳುಹಿಸುವೆನು" ಎಂದು ಮಹತ್ತಾದ ಬಾಣದಿಂದ ಆತನತಲೆಯನ್ನು ಮುಂಡದಿಂದ ಬೇರೆಮಾಡಿದನು. ಅಂಗದನು ಯುದ್ಧಕ್ಕೆಬರಲು ನಾಗಪಾಶದಿಂದಕಟ್ಟಲ್ಪಟ್ಟಿದ್ದನು. ಕಿಷ್ಕಿಂಧಾಪಟ್ಟ ಣದ ಸೇನಾದಳವೆಲ್ಲವೂ ರಾಜನಾದ ವಾಲಿಯು ಸತ್ತುಬೀಳಲು, ಭಯದಿಂದ ತಮ್ಮ ಸ್ಥಾನಗಳಿಗೆ ಹೋಗಿ ಸೇರಿಕೊಂಡರು. ಕರುಣಾಳುವಾದ ರಾಮನು ಶ್ರೀಜಿನೇಶ್ವರರ ಪಾದಕಮಲವನ್ನು ಸ್ಮರಿಸುತ್ತಿದ್ದನು.

೪೩. ಸೀತಾ ಸ್ಥಿತಿ.

ಗೌತಮರು ಮಗಧೇಶ್ವರನಾದ ಶ್ರೇಣಿಕನೇ! ಕೇಳುವಂಥಾವನಾಗ್ಯೆ- ಈವಿದ್ಯಮಾನವು ವಾಲಿಯ ಪತ್ನಿಯಾದ ತಾರಾದೇವಿಯ ಕಿವಿಗೆ ಬಿದ್ದಕೂಡಲೆ ತಾರೆಯು ಯುದ್ಧ ರಂಗಕ್ಕೆ ಬಂದು, ಬಿದ್ದಿರುವ ತನ್ನ ಗಂಡನ ತಲೆಯನ್ನಿಟ್ಟು ಕೊಂಡು ಬಹಳವಾಗಿ ರೋಧನ ಮಾಡಿದಳು. ಅತ್ತ ನೋಡಲು ಅಂಗದನು ನಾಗಪಾಶದಿಂದ ಬಿಗಿಯಲ್ಪಟ್ಟು ಬಿದ್ದಿದ್ದನು. ತಾರೆಯು ಗಂಡ ಮತ್ತು ಮಗನ ಸ್ಥಿತಿಯನ್ನುನೋಡಿ ಮೂರ್ಛೆಯನ್ನು ಹೊಂದಿದಳು. ಸ್ವಲ್ಪ ಚೇತರಿಸಿಕೊಂಡು ಪ್ರಲಾಪಮಾಡುತ್ತಿದ್ದಾಗ ಮಂತ್ರಿಗಳು ಬಂದು ತಾರಾದೇವಿಗೆ "ರಾಮಲಕ್ಷ್ಮ ಣರೊಂದಿಗೆ ವಿರೋಧ ಬೆಳಿಸಿದರೆ ನೀವು ಬದುಕಲಾರಿರಿ. ವಾಲಿಯು ನಮ್ಮ ಮಾತಿಗೆ ಆದರಣೆಕೊಡಲಿಲ್ಲ. ದೇವಿಯಾದ ನೀನು ನಮ್ಮಮಾತಿನಲ್ಲಿ ವಿಶ್ವಾಸ ವಿಟ್ಟು ರಾಮಲಕ್ಷ್ಮಣರ ಶರಣುಹೋಗುವುದು ಒಳ್ಳೆಯದು" ಎಂದು ಹೇಳ ಲಾಗ, ಆಕಾಶದಲ್ಲಿ "ರಾಮನನ್ನು ಸೇವಿಸಿ ಬದುಕಿ" ಎಂಬ ದಿವ್ಯ ವಾಣಿಯಾ ಯಿತು. ಇದನ್ನು ಕೇಳಿದ ತಾರೆಯು ರಾಮ ಲಕ್ಷ್ಮಣರಿಗೆ ವಿಧೇಯತೆಯನ್ನು ತೋರಿಸಲಾಗ ನಾಗಪಾಶವು ಅಂಗದನನ್ನು ಬಿಟ್ಟು ಹೋಯಿತು. ಆಗ ಅಂಗ ದನು ಅವನ ತಾಯಿಯ ಕೂಡ ರಾಮಲಕ್ಷ್ಮಣರನ್ನು ತಮ್ಮ ಪಟ್ಟಣಕ್ಕೆಬಂದು ಅರಮನೆಯನ್ನು ಹೊಕ್ಕು ಪವಿತ್ರವನ್ನಾಗಿ ಮಾಡಬೇಕೆಂತ ಬೇಡಿ ಕೊಂಡರು.

ಅಂಗದ ಜಾಂಬವ ಸುಗ್ರೀವರೇ ಮೊದಲಾದವರು ರಾಮಲಕ್ಷ್ಮಣರನ್ನು ಕಿಷ್ಕಿಂಧಾಪಟ್ಟಣಕ್ಕೆ ಕರೆದುಕೊಂಡು ಬಂದು ಸನ್ಮಾನಿಸಿ ಉಪಚರಿಸಿದರು. ಅನಂತರ ಸುಗ್ರೀವನಿಗೆ ಕಿಷ್ಕಿಂಧಾ ಪಟ್ಟಣದ ರಾಜಪಟ್ಟವನ್ನು ಕಟ್ಟಿದರು. ವಾಲಿಯಪತ್ನಿಯಾದ ತಾರೆಯೂ ಮತ್ತು ಸುಗ್ರೀವನ ಪತ್ನಿಯಾದ ಪದ್ಮೆಯೂ ಸಹ "ತಮ್ಮ ಹೆಣ್ಣು ಮಕ್ಕಳು ರಾಮನ ಹೊರ್ತು ಯಾರನ್ನೂ ವರಿಸುವುದಿಲ್ಲ ವೆಂದು ಹೇಳುತ್ತಾರೆ- ವಿವಾಹಕೆಲಸವನ್ನು ನಡೆಸಬೇಕು" ಎಂದು ಜಾಂಬವಾದಿ ಗಳನ್ನು ಬೇಡಿಕ್ಕೊಳ್ಳಲು ಸುಗ್ರೀವನು "ಶ್ರೀರಾಮನಿಗೆ ತನ್ನ. ಪ್ರಿಯ ಸತಿ ಜಾನಕಿಯ ಅಗಲಿದ ದುಃಖವು ಬಹಳವಾಗಿರುವದ್ದರಿಂದ ಈಗ ಸಮಯವಲ್ಲ" ಎಂದು ಹೇಳಿ, ಶ್ರೀರಾಮನಸನ್ನಿಧಿಗೆ ಹೋಗಿ "ಜಾನಕಿಯ ಹುಡುಕುವಿಕೆಗಾಗಿ ಯೋಚಿಸಬೇಡಿ. ಈಲಾಗಾಯಿತು ಮೂರು ದಿವಸಗಳಲ್ಲಿ ಜಾನಕಿಯು ಇರತಕ್ಕ ಸ್ಥಳವನ್ನುಹುಡಿಕಿ ತಿಳಿಸುತ್ತೇನೆ" ಎಂದನು. ಅಂಗದನು "ಮಾತುಶ್ರೀವೈದೇಹಿ ಯುವರನ್ನು ಕರದುತರುವುದಕ್ಕೆ ಯಾರು ಅಡ್ಡಿಬಂದರೂ, ಅವರನ್ನು ನಿಗ್ರಹಿಸಿ

ಕರೆದುಕೊಂಡು ಬಂದು ಒಪ್ಪಿಸುವೆನು" ಎಂದನು. ಶ್ರೀರಾಮನು ಅಂಗದನ ಕೋಪಶಾಪವನ್ನು ಪರಿಹರಿಸಿ ಸಂತೈಸಿದನು.

ಅಷ್ಟರಲ್ಲಿ ವನಪಾಲಕನು ಬಂದು, ನಮ್ಮ ಉಪವನಕ್ಕೆ ಚಾರಣಮಹರ್ಷಿಗಳು ಬಿಜಯಂಗೈದಿದರೆಂದು, ಅಕಾಲಫಲಪುಷ್ಪಗಳನ್ನು ತಂದು ರಾಮನಿಗೆ ಸುಗ್ರೀವನ ಮುಖಾಂತರ ಒಪ್ಪಿಸಲಾಗ, ಈ ಶುಭ ಸಮಾಚಾರವನ್ನು ತಂದ ವನಪಾಲಕನಿಗೆ ಉಡಿಗೆರೆ ಕೊಟ್ಟು, ಶ್ರೀರಾಮನು ಲಕ್ಷ್ಮಣನ ಸಹಿತವಾಗಿ ಸುಗ್ರೀವಾದಿಗಳನ್ನು ಕೂಡಿಕೊಂಡು ವನಕ್ಕೆ ಹೋಗಿ, ಮಹರ್ಷಿಗಳಿಗೆ ಒಂದಿಸಿ, ಅವರಿಂದ ಧರ್ಮಶ್ರವಣವನ್ನು ಕೇಳಿದನಂತರ ಶ್ರೀರಾಮನು ಸೀತಾವಿಷಯವನ್ನು ಅಪ್ಪಣೆಕೊಡಿಸಬೇಕೆಂದು ಬೇಡಿಕೊಳ್ಳಲಾಗ ಮಹಾಮುನಿಗಳು ಅವಧಿಜ್ಞಾನದಿಂದ ತಿಳಿದು "ಎಲೈ ರಾಮನೇ! ಲಂಕಾಧಿಪನಾದ ರಾವಣನು ಸೀತೆಯ ರೂಪಿಗೆ ಮನಸೋತು, ಚಿನ್ನದ ಹುಲ್ಲೆಯಾಗುವಂತೆ ಮಾರೀಚನಿಗೆ ಹೇಳಿ, ಮಾಯಾಮೃಗವೆಂದು ತಿಳಿಯದೆ ನೀನು ಅದನ್ನು ತರುವುದಕ್ಕೆ ಹೋಗಲು, ರಾವಣನು ವಂಚನೆಯಿಂದ ವಿಮಾನದಲ್ಲಿ ಕೂಡಿಸಿ ಲಂಕಾದ್ವೀಪಕ್ಕೆ ಕರೆದುಕೊಂಡುಹೋಗಿ ಅಶೋಕವನದಲ್ಲಿಟ್ಟು, ಅವಳಸುತ್ತಾ ಸಹಸ್ರಭುಜರ ಅಸುರರ ಕಾವಲಿಟ್ಟಿರುತ್ತಾನೆ. ಆಕೆಯು ನಿನ್ನ ಕ್ಷೇಮ ಸಮಾಚಾರವು ತಿಳಿದ ಹೊರತು ಸ್ವಲ್ಪಮಾತ್ರವಾದರೂ ಆಹಾರವನ್ನು ಸೇವಿಸುವುದಿಲ್ಲವೆಂದು ಪ್ರತಿಜ್ಞೆಮಾಡಿ ಬಹಳ ವ್ಯಸನದಿಂದ ಬಳಲಿ ಜಿನೇಶ್ವರನ ಪಾದಕಮಲವನ್ನು ಸ್ಮರಣೆಮಾಡುತ್ತಿರುತ್ತಾಳೆ" ಎಂದು ಹೇಳಿದರು. ರಾಘವನು ಸೀತಾ ವಿಷಯವನ್ನು ಕೇಳಿ, ಸ್ವಲ್ಪ ಹರ್ಷಿತನಾಗಿ ಗುರುಗಳಿಗೆ ಒಂದಿಸಿ, ಪಟ್ಟಣಕ್ಕೆ ಸಕಲರೊಡನೆ ಬಂದು, ಲಕ್ಷ್ಮಣನ ಕೂಡ ಸೀತಾ ಸಮಾಚಾರವನ್ನು ಮಾತನಾಡುತ್ತಿದ್ದನು. ಆಗ ವಿರಾಧಿತನ ಮಾತಿನಪ್ರಕಾರ ಸೀತಾನ್ವೇಷಣಕ್ಕೆ ಹೋಗಿದ್ದ ಚರನುಬಂದು ಶ್ರೀರಾಮನಿಗೆ ನಮಸ್ಕರಿಸಿ "ಸ್ವಾಮಿ! ನಾನು ದಕ್ಷಿಣ ಪರ್ವತ ಪ್ರಾಂತ್ಯಗಳಲ್ಲಿ ದೇವಿಯವರನ್ನು ಹುಡುಕುತ್ತಿರುವಾಗ, ರತ್ನಜಟಿಯು ತಾನು ಆವಿಷಯವನ್ನು ತಿಳಿದಿರುವಂತೆಯೂ ಅದನ್ನು ಸ್ವತಃ ಪ್ರಭುಗಳಿಗೆ ಅರಿಕೆ ಮಾಡುವುದಾಗಿಯೂ ಹೇಳಿದ್ದರಿಂದ ಆತನನ್ನು ಕರತಂದಿರುವನು" ಎಂದು ಹೇಳಿ ರತ್ನಜಟಿಯನ್ನು ತೋರಿಸಿದನು. ರತ್ನಜಟಿಯು ಶ್ರೀರಾಮನಿಗೆ ನಮಸ್ಕರಿಸಿ "ಪ್ರಭುವೇ! ನಾನು ಸಂಚರಿಸುತ್ತಿರುವಾಗ ಆಕಾಶಮಾರ್ಗದಲ್ಲಿ ಯಾರೋ ರೋಧನಮಾಡುತ್ತಾ-"ನಾನು ರಾಘವನ ಅರಸಿಯಾದ ಜಾನಕಿಯು. ನನ್ನನ್ನು ಈಖೂಳನು ಕದ್ದು

ತೆಗೆದುಕೊಂಡು ಹೋಗುತ್ತಲಿರುವನು. ಯಾರಾದರೂ ಧರ್ಮಾತ್ಮರು ಬಿಡಿಸಿ-ಎಂಬ ಧ್ವನಿಯು ಕೇಳಿ ಬಂತು. ಆಗ ನಾನು ಆ ವಿಮಾನದೆದುರಿಗೆ ಹೋಗಲು ರಾವಣನು ವಿದ್ಯಾಚ್ಛೇಧನ ಮಾಡಲು ನಾನು ಹಿಂದೆ ಬಿದ್ದೆ. ಅವನು ಲಂಕೆಗೆ ಕರೆದುಕೊಂಡುಹೋದನು" ಎಂದು ಹೇಳಲಾಗಿ ರಾಘವನು ಇಂದಿರಾಕ್ಷಿಯ ನೆಲೆಯನ್ನ ತಿಳಿದು ಜಿನೇಶ್ವರರ ಪಾದಪದ್ಮವನ್ನು ಸ್ಮರಿಸುತ್ತಿದ್ದನು.

೪೪. ನಾರದರು ಬಂದದ್ದು.

ಶ್ರೇಣಿಕ ಮಹಾರಾಜನೇ! ಕೇಳುವನಾಗೈ. ರತ್ನಝುಟಿಯು ಸೀತಾಪಹಾರದ ವಿಷಯವನ್ನು ಹೇಳಲು, ಆ ಸಭೆಯಲ್ಲಿದ್ದವರೆಲ್ಲರೂ ಕೇಳಿ ಸೀತಾದೇವಿಯವರು ಇಂತಹಾ ಕಡೆ ಇರುವರೆಂಬ ವಿಷಯವು ಗೊತ್ತಾಯಿತೆಂದು ಬಹಳ ಆನಂದಿತರಾದರು. ಜಾಂಬವಾದಿಗಳು ಸೀತಾ ಅಮ್ಮನವರನ್ನು ಕರೆದುತರುವ ವಿಷಯದಲ್ಲಿ ತಾನು ಮುಂದು ನಾನು ಮುಂದು ಎಂದು ಗಲಬಿಲಿ ಮಾಡುತ್ತಿರಲು ಲಕ್ಷ್ಮಣದೇವರು "ನಾವು ರಾವಣನ ಶಿರವನ್ನು ಭೂಗತ ಮಾಡಿದ ಮೇಲೆ ಅಮ್ಮನವರನ್ನು ಕರೆತರಬೇಕೇ ಹೊರ್ತು ರಾವಣನು ಕಳ್ಳತನಮಾಡಿ ಕರೆದುಕೊಂಡುಹೋದಂತೆ ನಾವು ಹೋಗಬಾರಧು" ಎಂದುಹೇಳಲಾಗ ಸಕಲರೂ ಆತನ ಮಾತಿಗೇನೆ ಉತ್ತೇಜನ ಕೊಟ್ಟರು.

ಇತ್ತ ನಾರದರು ಅಭ್ರಮಾರ್ಗದಲ್ಲಿ ಬರುತ್ತಾ ದಂಡಕಾರಣ್ಯವನ್ನು ಹೊಕ್ಕು, ಅಲ್ಲಿ ಖರಧೂಷಣರ ಸಂಹಾರವನ್ನೂ, ರಾವಣನು ಸೀತಾಪಹಾರ ಮಾಡಿದ ವಿಷಯವನ್ನೂ ತಿಳಿದು, ನೆಟ್ಟಗೆ ಲಂಕೆಗೆ ಬಂದು ಸಭಾಮಧ್ಯಸೀನನಾದ ರಾವಣನೆದುರಿಗೆ ಬರಲು, ಆತನೆದ್ದು ನಾರದರಿಗೆ ಪುರಸ್ಕಾರಮಾಡಿ ಕುಳ್ಳಿರಿಸಲಾಗ-ನಾರದರು ರಾವಣನನ್ನು ಬಹಳವಾಗಿ ಹೊಗಳಿ, ಸೀತಾಪಹಾರ ಮಾಡಿದ ವಿಷಯದಲ್ಲಿ ಬಹಳಸಂತೋಷವನ್ನು ತೋರ್ಪಡಿಸಿದರು. ರಾವಣನು ನಾರದರ ಮಾತಿಗೆ ಆನಂದಿತನಾಗಿ, ಸೀತೆಯು ಆಹಾರ ತೆಗೆದುಕೊಳ್ಳದೆ ಹಟಮಾರಿಯಾಗಿರುವಳೆಂದು ಹೇಳಲಾಗ, ತಾವು ಸೀತಾದೇವಿಯನ್ನು ಕಂಡು ಮಾತನಾಡುವುದಾಗಿ ಹೇಳಿದರು. ಅಲ್ಲಿಂದ ಸೇವಕಾಳಿಯನ್ನು ಕರೆದುಕೊಂಡು ಅಶೋಕವನಕ್ಕೆ ಹೋಗಿ ಸೀತೆಯನ್ನು ನೋಡಲಾಗ, ಕಾಗೆಯ ಕೊತ್ತಳೆಯಲ್ಲಿ ಸಿಕ್ಕಿದ ಕೋಕಿಲೆಯ ಮರಿಯಂತೆ ವ್ಯಸ್ತಳಾಗಿರುವದನ್ನು ಕಂಡು ಬಹಳವಾಗಿ ಮನಸ್ಸಿನಲ್ಲಿ ನೊಂದು, ಸೀತೆಗೆ ನೀತಿವಚನವನ್ನು ಹೇಳಿದರು- ಅವಳುಯಾವ

ಮಾತನ್ನಾಡದೆ ಸುಮ್ಮನಿರಲು ನಾರದರು ಕೋಪಗೊಂಡು "ಎಲೈಮೂರ್ಖಿಯೆ! ದೊಡ್ಡವರ ಮಾತನ್ನು ಲಾಲಿಸುವುದಿಲ್ಲವೇ? ಪೂರ್ವದಲ್ಲಿ ನಿನ್ನನ್ನು ನೋಡಬೇಕೆಂದು ಬಂದಾಗ್ಯೆ ಸೇವಕಾಳಿಯಿಂದ ಅವಮಾನಪಡಿಸಿದೆ. ಅದಕ್ಕೆ ಆದ ಫಲ ಸಾಕಲ್ಲವೇ? ಇಷ್ಟರಲ್ಲಿ ಇನ್ನೇನು ಹೊಂದುವಿಯೋ ನೋಡು!" ಎಂದುಹೇಳಿ ಸೀತಾವೃತ್ತಾಂತವನ್ನು ತಿಳಿದು, ರಾವಣನನ್ನುಕಂಡು "ಸೀತೆಗೆ ಈಗಾಗಿರತಕ್ಕ ಶಿಕ್ಷೆ ಸಾಕು! ಅವಳನ್ನು ರಾಘವನ ಬಳಿಗೆ ಕಳುಹಿಸು" ಎನಲಾಗ ರಾವಣನು ಅತ್ಯಂತಆಗ್ರಹದಿಂದ "ರಾಮಲಕ್ಷ್ಮಣರನ್ನು ಶಿಕ್ಷಿಸಿ ಬುದ್ಧಿಕಲಿಸುವನೇಹೊರ್‍ತು ಸೀತೆಯನ್ನು ಕಳುಹಿಸುವುದಿಲ್ಲ" ಎಂದನು. ಅಲ್ಲಿಂದ ನಾರದರು ಹೊರಟು ಶ್ರೀರಾಮನ ಹತ್ತಿರ ಬರಲು ರಾಮನು ಸನ್ಮಾನಿಸಿ ಪೀಠಾಗ್ರದಲ್ಲಿ ಕುಳ್ಳಿರಿಸಿ, ಕುಶಲಪ್ರಶ್ನೆಮಾಡಿದನು. ರಾಮನಿಗೆ ನಾರದರು ಸೀತಾ ವಿಷಯವನ್ನು ತಿಳಿಸಿ, ರಾವಣನ ದುಷ್ಟತನವನ್ನು ಹೇಳಿ, "ಜಾನಕಿಯು ನಿರಾಹಾರಿಯಾಗಿ ನಿಶ್ಚೈತನ್ಯಳಾಗಿಧ್ದಾಳೆ. ಜಾಗ್ರತೆಯಾಗಿ ನೀವು ಲಂಕೆಗೆ ಹೋಗಿ ರಾವಣನನ್ನು ಗೆದ್ದು ಜಾನಕಿಯನ್ನು ಕರೆತರಬೇಕು" ಎಂದು ಹೇಳಿ ನಾರದರು ಅರುಹನನ್ನು ಸ್ಮರಿಸುತ್ತಾ ಗಗನಮಾರ್ಗದಲ್ಲಿ ತೆರಳಿದರು. ಜಾಂಬವನು ರಾಮಲಕ್ಷ್ಮಣರಿಗೆ ಎರಗಿ ನಮ್ಮ ಸಹಾಯಕ್ಕೆ ಕರ್ಣಕುಂಡಲಾಚಲದ ನೃಪರಾದ ನಳ, ನೀಲರನ್ನು ಕರೆಸುತ್ತೇನೆಂದು ಹೇಳಿ ಆ ಇಬ್ಬರನ್ನೂ ಕರೆಸಿದನು- ಅವರು ಬಂದು ರಾಮನಿಗೆ ನಮಸ್ಕರಿಸಿ ವಿಧೇಯರಾಗಿದ್ದರು. ಅನಂತರ ಜಾಂಬವನು ವಾನರದ್ವೀಪದಧಿಪತಿ ಮಾರುತಿಯನ್ನು ಕರೆಸಬೇಕೆಂದು ಹೇಳಲಾಗ ಮಾರುತಿ ಎಂಬ ಹೆಸರನ್ನು ಕೇಳಿ ರಾಘವನು ಆನಂದಪುಳಿಕಿತವಪುವಾಗಿ ಜಿನೇಶ್ವರನನ್ನು ನೆನೆಯುತ್ತಲಿದ್ದನು.

೪೫. ಮಾರುತಿ ಪ್ರಸಂಗ.

ರಾಜೇಂದ್ರನಾದ ಶ್ರೇಣಿಕನೇ ! ಕೇಳುವನಾಗ್ಯೆ. ಜಾಂಬವನು ಮಾರುತಿಯ ವಿಷಯವನ್ನೆತ್ತಿದ ಕೂಡಲೆ ರಾಮನು ಯಾವನೋ ಒಬ್ಬ ಪರಮ ಮಿತ್ರನ ನೆನಪು ಆದಂತೆ ಸಂತೋಷವುಳ್ಳವನಾಗಿ–"ಆತನು ಯಾವ ಸ್ಥಳದವನು? ಎಲ್ಲಿಧಾನೆ? ಯಾವ ಶೌರ್ಯವನ್ನು ತೋರಿಸಿದ್ದಾನೆಂಬುವುದೇ ಮೊದಲಾದದ್ದನ್ನು ವಿವರಿಸು." ಎಂದುಹೇಳಲಾಗಿ ಜಾಂಬವನು ಸಂತೋಷದಿಂದ ಶ್ರೀರಾಮನಿಗೆ ಅರಿಕೆ ಮಾಡಿದನೇನೆಂದರೆ:—"ಧವಳಕೀರ್ತಿಯು ಲಂಕೆ

ಯನ್ನಾಳುವಾಗ ಶ್ರೀಕಂಠನೆಂಬ ಖಚರನು ಪದ್ಮೋತ್ತರೆಯನ್ನು ಕೂಡಿಕೊಂಡು ಲಂಕೆಗೆ ಬರಲು ಧವಳಕೀರ್ತಿಯು ಅವರಿಬ್ಬರನ್ನೂ ತನ್ನ ಪಟ್ಟಣದಲ್ಲಿ ಸ್ವಲ್ಪ ದಿವಸವಿಟ್ಟುಕೊಂಡಿದ್ದನು. ವಿಜಯಾರ್ಧಪರ್ವತದ ದಕ್ಷಿಣೋತ್ತರ ಶ್ರೇಣಿಗಳಲ್ಲಿರುವವರು ಶ್ರೀಕಂಠನಿಗೆ ಅಹಿತರಾಗಿ ಬಹಳವಾಗಿ ಹೆಚ್ಚಿದ್ದರು. ದಕ್ಷಿಣಕ್ಕೆ ಬಹಳ ದ್ವೀಪಮಧ್ಯದಲ್ಲಿ ವಾನರಾಚಲವೆಂಬ ದ್ವೀಪಗಳಿದ್ದವು. ಅಲ್ಲಿ ಕಿಷ್ಕಿಂಧಾಚಲದಮೇಲೆ ಕಿಷ್ಕಿಂಧಪಟ್ಟಣವನ್ನು ನಿರ್ಮಿಸಿ ಅಲ್ಲಿಗೆ ಶ್ರೀಕಂಠನನ್ನು ರಾಜನನ್ನಾಗಿ ಮಾಡಿ ಅಲ್ಲಿವಾಸಿಸುವಂತೆ ಮಾಡಿದನು. ಆ ಶ್ರೀಕಂಠನ ಕೂರನಾಗಿದ್ದ ಸಹೋದರನಾದವಜ್ರಕಂಠನು ಆವತ್ತಿನ ಬೆಟ್ಟದ ಮೇಲೆ ಕರ್ಣಕುಂಡಲವೆಂಬ ಪಟ್ಟಣವನ್ನು ನಿರ್ಮಿಸಿ ಅಲ್ಲೇ ವಾಸವಾಗಿದ್ದನು. ಆ ಅನ್ವಯದಲ್ಲೇ ಆ ಪಟ್ಟಣಕ್ಕೆ ಪ್ರಹಲ್ಲಾದನೆಂಬವನು ರಾಜನಾದನು. ಆತನಿಗೆ ಪ್ರಭಂಜನನೆಂಬ ಮಗನಾದನು. ಅವನಿಗೆ ಅಂಜನಾದೇವಿಯು ಪ್ರಾಣವಲ್ಲಭೆಯಾಗಿ ತರಲ್ಪಟ್ಟಳು. ಆದರೆ ಯಾವ ಕಾರಣದಿಂದಲೊ ಅಂಜನಾದೇವಿಯನ್ನು ಶರೆಯುಲ್ಲಿಟ್ಟನು. ಪ್ರಭಂಜನನ್ನು ಲಂಕಾಧಿಪತಿಯು ಆಹ್ವಾನ ಮಾಡಿದನು. ಅಲ್ಲಿಗೆ ದಳಸಹಿತ ಪ್ರಭಂಜನನು ಹೊರಹೊರಟು ಆ ಪಟ್ಟಣದ ಹೊರಗಿನ ಉಪವನದಲ್ಲಿ ಬೀಡು ಬಿಟ್ಟುಗೊಂಡು, ರಾತ್ರಿ ಒಂದು ಚಂಪಕ ವೃಕ್ಷದ ಕೆಳಗೆ ಕೂತು ಪ್ರಕೃತಿರಂಜನೆಯನ್ನು ನೋಡುತ್ತಿದ್ದನು. ಆ ವೃಕ್ಷದ ಮೇಲಿದ್ದ ಪಾರಾವತ ಪಕ್ಷಿಗಳ ರತಿಕ್ರೀಡೆಯನ್ನು ನೋಡಿ ಅಂಜನಾದೇವಿಯ ಸ್ಮರಣೆಯಾಯಿತು. ತಾನು ಅಂಜನೆಯನ್ನು ದೀರ್ಘಕಾಲ ಶರೆಯಲ್ಲಿಟ್ಟು ಅವಳಗೃಹಕ್ಕೆ ಹೋಗದೆ ಇದ್ದದ್ದರಿಂದ ಎಷ್ಟು ವ್ಯಥೆಪಡುವಳೋ ಎಂಬುದಾಗಿ ಯೋಚಿಸುತ್ತಿರುವಾಗ ವೃಕ್ಷದ ಮೇಲಿದ್ದ ಎರಡು ಗಿಳಿಗಳು ಮನುಷ್ಯರಂತೆ ಸಲ್ಲಾಪ ಮಾಡುವದನ್ನು ಕೇಳಲಾಗಿ ಮತ್ತೂವಿರಹವೇದನೆಯು ಪ್ರಭಂಜನನಿಗುಂಟಾಗಲು ಸೇನೆಗೆ ಎಚ್ಚರಿಕೆಯಾಗಿರಬೇಕೆಂದು ಹೇಳಿ– ಪಟ್ಟಣಕ್ಕೆ ಹೊರಟು ಅಂಜನಾವಾಸಗೃಹದ ಬಾಗಿಲನ್ನು ತಟ್ಟಲು ಅವಳು ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಸುಮ್ಮನಿದ್ದಳು. ಆಗ ದಾದಿಯರು ರಾಜಕುಮಾರನು ಬಂದಿರುವನೆಂದು ಹೇಳಲಾಗ ಅಂಜನೆಯು ಬಾಗಿಲನ್ನು ತೆರೆಯಲು ರಾಜನು ಅವಳನ್ನು ಮೋಹಿಸಿದನು. ರಾಣಿಯು "ಈ ರೀತಿ ಅವೇಳೆಯಲ್ಲಿ ಬಂದು ಕಳ್ಳರಂತೆ ಓಡಿಹೋಗುವುದು ಸರಿಯಲ್ಲ. ಈ ರಾತ್ರಿ ಇದ್ದು ಬೆಳಗಾದ ಮೇಲೆ ನಿತ್ಯಕ್ರಿಯೆ ತೀರಿಸಿಕೊಂಡು ಹೋಗಬಹುದು" ಎಂದು ಎಷ್ಟು ಹೇಳಿದರೂ ಕೇಳದೆ ಅಭಿಜ್ಞಾನಕ್ಕೆ ತನ್ನ

ಮುದ್ರಿಕೆಯನ್ನು ಕೊಟ್ಟು ಹೊರಟುಹೋದನು. ಆ ದಿವಸ ಋತುಸ್ನಾನದ ದಿವಸವಾದ್ದರಿಂದ ಗರ್ಭವತಿಯಾದಳು. ಇದನ್ನು ತಿಳಿದ ಅವರತ್ತೆಮಾವಿಂದರು ಇವಳ ನಡತೆ ಚನ್ನಾಗಿಲ್ಲವೆಂದುಹೇಸಿ, ಸೇವಕಾಳಿಗಳು ಮತ್ತು ಮುದ್ರಿಕೆಯು ಕೂಡ ಅವಳ ಸೌಶಿಲ್ಯವನ್ನು ಸ್ಥಿರಪಡಿಸಿದರೂ, ನಂಬದೆ ಅವಳ ತಂದೆಮನೆಗೆ ಅಂಜನೆಯನ್ನು ಕಳುಹಿಸಿಕೊಟ್ಟರು. ಅವರೂ ಕೂಡ ಇವಳ ನಡತೆ ನೆಟ್ಟಗಿಲ್ಲ ವೆಂದು ಆವಾಸಕ್ಕೆ ಸೇರಿಸಲಿಲ್ಲ. ಅಂಜನೆಯು ಬಹಳವಾಗಿ ಗೋಳಾಡಿ ವನ ದಲ್ಲಿದ್ದು ಒಂದು ಬೆಟ್ಟದ ಗುಹೆಯನ್ನು ಕಂಡು, ಅಲ್ಲಿ ವ್ಯಾಘ್ರವಿರುತ್ತೆ ಅಲ್ಲಿಗೆ ಹೋದರೆ ಈ ಜನ್ಮ ತುಂಬಿ ಹೋಗುತ್ತದೆಯೆಂದು ನೆನೆಸಿ ಗುಹೆಗೆ ಹೋದಳು. ಅಲ್ಲೊಬ್ಬ ಋಷಿಗಳಿದ್ದರು. ಅವರು ಇವಳನ್ನು ಕಂಡು ಆ ದೇವಿಯ ವಿಷಯ ವನ್ನು ತಿಳಿದು, ವ್ಯಂತರದೇವತೆಗಳ ಸಹಾಯದಿಂದ ಅವಳನ್ನು ಆ ಸಮೀಪ ದಲ್ಲಿದ್ದ ಒಂದು ಆವಾಸಸ್ಥಾನದಲ್ಲಿರಿಸಿ ಉಪಚರಿಸುತ್ತಿರಲು ಅಂಜನೆಯು ಅತ್ಯಂತಮನೋಹರವಾದ ಒಂದು ಗಂಡುಮೊಗುವನ್ನು ಪ್ರಸವಿಸಿ ಸುಖವಾಗಿ ದ್ದಳು. ಇತ್ತ ಪ್ರಭಂಜನು ಪಟ್ಟಣಕ್ಕೆ ಬಂದು ಹೆಂಡತಿಯ ವಿಷಯವನ್ನು ತಿಳಿದು ವ್ಯಥೆಪಟ್ಟು ಅವಳಿರುವ ಸ್ಥಳಕ್ಕೆ ಬಂದು ಮಹಾಮುನೀಶ್ವರರಿಗೆ ವಂದಿಸಿ ಅವರ ಅಪ್ಪಣೆಪಡೆದು ಸತಿಯಾದ ಅಂಜನೆಯನ್ನು ಮತ್ತು ಮಗುವನ್ನೂ ಸಹ ಕರೆದುಕೊಂಡು ತನ್ನ ಪಟ್ಟಣಕ್ಕೆ ಹೋಗಿ, ಸುಖವಾಗಿರುತ್ತಾ ಅರ್ಹಂತನನ್ನು ಸ್ಮರಿಸುತ್ತಿದ್ದನು.

೪೬. ಮಾರುತಿ ದರ್ಶನ.

ಗೌತಮ ಮಹರ್ಷಿಗಳು ಶ್ರೇಣಿಕನೆ! ಮುಂದಣ ಕಥಾನಕವನ್ನು ಕೇಳು ವನಾಗೈಯೆಂದು ಹೇಳಲುಪಕ್ರಮಿಸಿದರು—ಪ್ರಭಂಜನನ ತಂದೆಯಾದ ಪ್ರಹ ಲ್ಲಾದನು ಮೊಮ್ಮಗನಾದ ಆಂಜನೇಯನನ್ನು ಮುದ್ದಾಡಿ ಸುಖವಾಗಿ ಕಾಲ ಕಳೆಯುತ್ತಿರಲೊಂದುದಿನ ನಕ್ಷತ್ರಪಾತವನ್ನು ಕಂಡು ವೈರಾಗ್ಯವನ್ನು ಹೊಂದಿ ರಲಾಗ ಮಹಾಮುನಿಗಳ ದರ್ಶನಮಾಡಿ ಅಂಜನಾಪುತ್ರನು ರಾಮನ ಸೇವಕ ನಾಗುವನೆಂದು ಕೇಳಿ ಮತ್ತೂ ವಿರಾಗಿಯಾಗಿ ಪ್ರಭಂಜನನಿಗೆ ರಾಜಪಟ್ಟವನ್ನು ಕಟ್ಟಿ ದೀಕ್ಷೆಗೆ ಅನುವಾದನು. ಆಂಜನೇಯನು ಸಕಲ ಶಸ್ತ್ರ ಶಾಸ್ತ್ರ ಸಂಪನ್ನ ನಾಗಿ ಸಕಲಖೇಚರರಿಗೂ ಅಧಿಕಬಲಯುತನೆಂದು ಕೇಳಿ ರಾವಣನು ಅನಂಗ ಮಾಲೆಯನ್ನು ವಿವಾಹಮಾಡಿಸಿದನು. ಹೀಗೆ ಸುಖವಾಗಿರುತ್ತಿರುವಾಗ ಮಾರು

ತಿಯು ಒಂದಾನೊಂದು ದಿವಸ ಸಭೆಯಲ್ಲಿರುವಾಗ ವಾಲಿಯು ರಾಮಲಕ್ಷ್ಮಣರಿಂದ ಹತನಾದನೆಂತಲೂ, ವಾಲಿಯ ಮಗನು ರಾಮನಿಗೆ ಸೇವಕನಂತೆ ಇರುವುದಾಗಿಯೂ ಕೇಳಿ, ರಾಮನನ್ನು ನೋಡಬೇಕೆಂದು ನೆನೆಸಿ, ಕಿಷ್ಕಿಂಧ ಪಟ್ಟಣಕ್ಕೆ ಆಗಮಿಸಿ ಮಾಯಾ ರಾಕ್ಷಸರ ದಂಡನ್ನು ಮಾಡಿ ಆ ಪಟ್ಟಣಕ್ಕೆ ಮುತ್ತಿಗೆ ಹಾಕಲು, ಎಲ್ಲರೂ ದಶಕಂಠನು ರಾಮನ ಮೇಲೆ ಯುದ್ಧಕ್ಕೆ ಬಂದಿರುವುದಾಗಿ ತಿಳಿದುಕೊಂಡರು. ಅಂಗದನು ಈ ಯುದ್ಧಕ್ಕೆ ಬಂದು ಸ್ವಲ್ಪ ಹಿಂದಾಗಲು ಮಾಯಾ ದಶಕಂದರನು "ತಂದೆಯನ್ನು ಕೊಂದಿರುವವನಿಗೆ ಸಹಾಯಕನಾದೆ" ಎಂದು ಹಿಯ್ಯಾಳಿಸಿದ್ದಕ್ಕೆ ಅಂಗದನು "ಪರನಾರಿಕಳ್ಳನೇ! ನೀನು ಸೀತಾ ಅಮ್ಮನವರನ್ನು ಒಪ್ಪಿಸದಿದ್ದರೆ ನಿನ್ನ ತಲೆ ಲಕ್ಷ್ಮಣನಿಂದ ಕಡಿಯಲ್ಪಡುತ್ತೆ" ಎಂದು ಹೇಳುತ್ತಿರುವಾಗ, ರಾಮನು ಬಾಣಪ್ರಯೋಗ ಮಾಡಿ ಮಾಯಾ ಬಲವನ್ನು ಓಡಿಸಲು ಆಂಜನೇಯನು ಶ್ರೀರಾಮನ ಕಾಲಿಗೆ ಬಿದ್ದು ಶರಣಾಗತನಾದನು. ರಾಘವನು ಆಂಜನೇಯನನ್ನು ತಕ್ಕೈಸಿ ಸನ್ಮಾನ ಮಾಡಿ ಕುಳ್ಳಿರಿಸಿಕೊಂಡು ಕುಶಲಪ್ರಶ್ನೆಯನ್ನು ಮಾಡಿದ ಮೇಲೆ ಮಾರುತಿಯು ತಮ್ಮ ದರ್ಶನಕ್ಕೆ ಈರೀತಿ ಮಾಡಿದೆನೆಂದು ಬೇಡಿಕೊಳ್ಳಲು ರಾಘವನು ನಿನ್ನ ಸಾಮರ್ಥ್ಯವನ್ನು ತಿಳಿಯಲು ಸಾಧ್ಯವಾಯಿತೆಂದು ಮನ್ನಿಸಿ ಜಿನೇಶ್ವರನ ಪಾದಕಮಲವನ್ನು ನೆನೆಯುತ್ತಿದ್ದನು.

೪೭. ಲಕ್ಷ್ಮಣನು ಸಿದ್ಧಶೈಲ ಎತ್ತಿದ್ದು.

ಭೂಭುಜನಾದ ಶ್ರೇಣಿಕನೇ! ಕೇಳುವನಾಗ್ಯೆ—ಸುಗ್ರೀವಾದಿಗಳು ಶ್ರೀರಾಮನ ಚರಣ ಕಮಲದ ಸೇವೆಯನ್ನು ಮಾಡುತ್ತಿರಲು, ಎಲ್ಲಾ ಖೇಚರರು ಈ ವಿದ್ಯಮಾನವನ್ನು ತಿಳಿದು ರಾಘವನನ್ನು ನೋಡಲಿಚ್ಛೈಸಿ ಕಿಷ್ಕಿಂಧಪುರಕ್ಕೆ ವಿಮಾನಗಳ ಮೇಲೆ ಬರುತ್ತಿರಲು, ಪ್ರಕಾಶಮಾನವಾದ ಆ ವಿಮಾನಗಳು ಅನೇಕ ಸೂರ್ಯರ ಬರುವಿಕೆಯಂತೆ ಕಾಣುತಲಿದ್ದವು. ಅನೇಕ ಕ್ಷತ್ರಿಯೋತ್ತಮ ಖಚರರ ಮಧ್ಯದಲ್ಲಿ ಶ್ರೀರಾಮನು ಲಕ್ಷ್ಮಣನೊಡನೆ ಮೂರ್ತಿ ಮತ್ತಾಗಿರಲು ನಾರದ ಋಷಿಯು ವ್ಯೋಮಮಾರ್ಗವಾಗಿ ಆ ಕಿಷ್ಕಿಂಧಕ್ಕೆ ಬರುತ್ತಿರುವುದನ್ನು ನೋಡಿ, ರಾಮನು ಎದ್ದುನಿಂತು ನಾರದರನ್ನು ಬರಮಾಡಿಕೊಂಡು ಉಚಿತಾಸನದಲ್ಲಿ ಕುಳ್ಳಿರಿಸಿ ಧರ್ಮವಾಚಕ ನಡೆದನಂತರ "ಯಾತಕ್ಕೆ ಬರೋಣವಾಯಿತು?" ಎಂದು ದಾಶರಥಿಯು ಕೇಳಿದನು. ಆಗ ನಾರದರು ಮಾರುತಿ

ಯು ಇಲ್ಲಿಗೆ ಬಂದಿದ್ದಾನೆಂಬ ಸಂಗತಿಯನ್ನು ತಿಳಿದು, ಆತನ ಶೌರ್ಯಾದಿಗಳನ್ನು ಕೇಳಿ ನೋಡಿಕೊಂಡು ಹೋಗಲು ಬಂದೆನೆನಲು, ಎಲ್ಲರು ಜಯಘೋಷ ಮಾಡಿದರು. ಆಗ ನಾರದರು "ಸಿದ್ಧಶೈಲವನ್ನು ಯಾವ ಪುರುಷನು ಎತ್ತುತ್ತಾನೋ ಆತನೇ ರಾವಣನನ್ನು ಜಯಿಸುವನೆಂಬ ಪುರಾಣವಾಕ್ಯವಿದೆ" ಎಂದು ಹೇಳಲು ಅಲ್ಲಿದ್ದ ಖಚರರೆಲ್ಲರೂ ಶ್ರೀರಾಮಲಕ್ಷ್ಮಣರನ್ನು ಪರ್ವತವನ್ನೆತ್ತುವದಕ್ಕೆ ಪ್ರೋತ್ಸಾಹಿಸಲು, ರಾಮ ಲಕ್ಷ್ಮಣರು ಅವರೊಡಗೂಡಿ ಸಿದ್ಧಶೈಲದ ಹತ್ತಿರ ಹೋಗಿ ಸಿದ್ಧಾರ್ಚನೆಯನ್ನು ಮಾಡಿ, ಸಿದ್ಧಶೈಲವನ್ನು ಲಕ್ಷ್ಮಣನು ಜಿನೇಶ್ವರನನ್ನು ನೆನೆಯುತ್ತೆತ್ತಲು ದೇವತೆಗಳು ಪುಷ್ಪವನ್ನು ಸುರಿಸಿದರು. ದೇವದುಂದುಭಿಯು ಮೊಳಗಿತು. ಜಯಜಯಶಬ್ದವು ದಿಕ್ಕುಗಳ ಕೊನೆಯನ್ನು ಮುಟ್ಟಿದವು. ಖಚರರೆಲ್ಲಾ ಆಶ್ಚರ್ಯಭರಿತರಾದರು. ಜಾಂಬುವನೇ ಮೊದಲಾದವರು ಆಶ್ಚರ್ಯವನ್ನು ಹೊಂದಿ, ರಾವಣನು ಈ ಮಹಾನುಭಾವನಿಗೆ ಸೋತುಹೋಗುತ್ತಾನೆಂಬುವುದು ನಿಶ್ಚಯವೇ ಸರಿಯೆಂದು ದೃಢೀಕರಿಸಿದರು. ಹನುಮನು ರಾಮನಿಗೆ ನಮಸ್ಕರಿಸಿ, "ನಮ್ಮ ಸೇವಕತ್ವವು ನಾವು ಬದುಕುವುದಕ್ಕಾಗಿದೆ. ಅಸಹಾಯಶೂರರಾದ ನಿಮಗೆ ನಾವು ಏನು ಸಹಾಯಮಾಡಬಲ್ಲೆವು?" ಎಂದುಭಕ್ತಿಯನ್ನು ತೋರಿಸಿದನು. ಮಾಧವನು "ಎಲೈಹನುಮಾ! ನೀನು ಶ್ರೀರಾಮನಿಗೆ ಬಲಭುಜವಾಗಿದ್ದೀಯೆ" ಎಂದು ಉಪಚರಿಸಿದನು. ಈ ಪ್ರಸಂಗದಲ್ಲಿ ಶ್ರೀರಾಮನು ಈ ವಿಷಯಗಳನ್ನು ತಿಳಿಯುತ್ತಾ ಜಿನೇಶ್ವರರ ಪಾದಾರವಿಂದವನ್ನು ನೆನೆಯುತ್ತಿದ್ದನು.

೪೮. ಮುದ್ರಿಕೆ.

ಕೇಳೈ ರಾಜಶ್ರೇಷ್ಠನೇ! ಸಿದ್ಧಶೈಲವನ್ನು ಎತ್ತಿದನಂತರ ರಾಮಲಕ್ಷ್ಮಣರು, ಅಂಗದ ಜಾಂಬವ ಸುಗ್ರೀವ ವಿರಾಧಿತ ಹನುಮಾ ಮೊದಲಾದವರನ್ನು ಕೂಡಿಕೊಂಡು ಕಿಷ್ಕಿಂಧಪುರಪ್ರವೇಶಮಾಡುವಾಗ ಆ ಪುರದ ಪದ್ಮಾಕ್ಷಿಯರೇ ಮೊದಲಾದ ಕನ್ನಿಕೆಯರು ಸಿದ್ಧಶೈಲವನ್ನೆತ್ತಿದ ರಾಮಲಕ್ಷ್ಮಣರನ್ನು ನೋಡುವುದಕ್ಕಾಗಿ ಸೌಧಗಳಲ್ಲಿ ನಿಂತು, ನೋಡಿ ಮಂದಾರಪುಷ್ಪದ ಮಳೆಯನ್ನು ಕರೆದರು. ಸುಗ್ರೀವಾದಿಗಳು ರಾಮಲಕ್ಷ್ಮಣರಿಗೆ ಹಸ್ತಲಾಘವ ಕೊಟ್ಟು ಸಿಂಹಾಸನದ ಮೇಲೆ ಕುಳ್ಳಿರಿಸಿ, ರತ್ನಾಭಿಷೇಕಮಾಡಿದರು. ಅನಂತರ ರಾಮನು ಆಂಜನೇಯನನ್ನು ಲಂಕೆಗೆ ಹೋಗಿ ಜಾನಕಿಯನ್ನು ಕಂಡು ಬರಬೇಕೆಂದು

ಹೇಳಿ, ಅವಳ ರೂಪು ಆಕಾರ ಚಿಹ್ನೆಗಳನ್ನು ಗುರ್ತಿಸುವದಕ್ಕಾಗಿ ಹೇಳಿ, ನಂಬಿಕೆಗಾಗಿ ತನ್ನ ಮುದ್ರಿಕೆಯನ್ನು ಸಹ ಕೊಟ್ಟು ಸಂದೇಶವನ್ನು ಹೇಳಿ ಆಂಜನೇಯನನ್ನು ಕಳುಹಿಸಲು ಬಗೆಯುತ್ತಿದ್ದನು. ಅತ್ತ ಮಾರೀಚನು ರಾವಣನನ್ನು ಕಂಡು ಕಿಷ್ಕಿಂಧಕ್ಕೆ ಹನುಮಂತನು ಬಂದದ್ದನ್ನೂ, ಎಲ್ಲ ಖೇಚರರೂ ಒಟ್ಟುಗೂಡಿ ರಾಮಲಕ್ಷ್ಮಣರನ್ನು ಸಿದ್ಧಶೈಲಕ್ಕೆ ಕರತಂದು ಸಿದ್ಧಶೈಲವನ್ನು ಲಕ್ಷ್ಮಣನೆತ್ತಿದ್ದನ್ನೂ, ಜಾಂಬವನಳನೀಲ ಸುಗ್ರೀವ ಹನುಮಂತ ವಿರಾಧಿತರೆಲ್ಲ ತಮ್ಮತಮ್ಮ ದಂಡು ಸಹಿತ ರಾಮನ ಸೇವಕರಾಗಿ ಲಂಕೆಯನ್ನು ಮುತ್ತಲು ಸನ್ನದ್ಧತೆಮಾಡುತ್ತಿರುವದನ್ನೂ ಹೇಳಿದನು. ರಾವಣನು ಕೇಳಿ ತಮ್ಮ ಪಟ್ಟಣದ ಸುತ್ತಲೂ ತಕ್ಕ ಬಂದೋಬಸ್ತು ಮಾಡುವುದೆಂತ ಹೇಳಿ ಯೋಚಿಸುತ್ತಿದ್ದನು. ಇತ್ತ ಹನುಮಂತನು ಪ್ರಯಾಣ ಸನ್ನದ್ಧನಾಗುತ್ತಿರಲು ನಾರದರ ಬರುವಿಕೆಯನ್ನು ಕಂಡು ರಾಮಾದಿಗಳು ಪ್ರತ್ಯುತ್ಥಾನಮಾಡಿ ಕುಳ್ಳಿರಿಸಿದರು. ಅನಂತರ ನಾರದರು ಲಂಕಾಪಟ್ಟಣಕ್ಕೆ ಹೋಗಿಬರೋಣವೆಂತ ಅಲ್ಲಿಗೆ ಹೋಗುತ್ತಿರಲಾಗಿ ಲಂಕಾಪಟ್ಟಣದ ಸುತ್ತಲೂ ದುರ್ಭೇದವಾದ ತಡೆಯನ್ನು ಮಾಡಿದ್ದದ್ದರಿಂದ ಹೋಗಲಾಗದೆ ಹಿಂದಕ್ಕೆ ಬಂದೆವೆಂದುಹೇಳಿ, ಇನ್ನು ರಾಮನು ಯಾರನ್ನು ಕಳುಹಿಸುವುದಕ್ಕೂ ತೊಂದರೆಯಾಯಿತೆಂದು ಯೋಚಿಸುತ್ತಿರಲು, ಮಾರುತಿಯು ಬಂದು "ನಾನು ಎಷ್ಟು ತೊಂದರೆಯಾಗಿದ್ದರೂ ಅಮ್ಮನವರನ್ನು ಕಂಡು ಬರುವೆನು" ಎಂದು ಹೇಳಲು, ಶ್ರೀರಾಮನು ಸಂತೋಷವನ್ನುಹೊಂದಿ ಜಾನಕಿಯ ಕುರುಹನ್ನೂ ತನ್ನ ಮುದ್ರಿಕೆಯನ್ನೂ ಸಹ ಕೊಟ್ಟುಕಳುಹಿಸಿದನು. ಹನುಮಂತನು ಆಕಾಶದಲ್ಲಿ ಹೊರಟು, ಲಂಕಾಪಟ್ಟಣದ ಕೋಟೆಯ ಮೇಲೆ ಸಲಾಕಿಗಳನ್ನು ಹಾಕಿ ಅದರೊಳಗಿನ ಪ್ರವೇಶಕ್ಕೆ ಆಸ್ಪದವಿಲ್ಲದಂತಿರುವದನ್ನು ಕಂಡು, ದುಂಬಿಯ ಆಕಾರದಿಂದ ಅವುಗಳನ್ನು ಭೇದಿಸಿಕೊಂಡು, ರಾವಣನ ಅರಮನೆಗೆ ನುಗ್ಗಿ ಸೀತಾದೇವಿಯನ್ನು ರಾಮನು ಹೇಳಿದ ಕುರುಹಿನಂತೆ ಹುಡುಕಲು ದೊರೆಯಲಿಲ್ಲ. ಆದ್ದರಿಂದ ಬೀದಿಬೀದಿ ಕೇರಿಕೇರಿಗಳಲ್ಲಿರತಕ್ಕ ಸ್ತ್ರೀಯರನ್ನೆಲ್ಲ ಅವಲೋಕಿಸಿದರೂ ಸೀತೆಯು ಕಾಣಬರಲಿಲ್ಲವಾದ್ದರಿಂದ ಚಿಂತಿಸಿ ಪಟ್ಟಣದ ಹೊರಗಿನ ಅಮರನಾಥ ಅಥವಾ ಅಶೋಕವನವನ್ನು ಹೊಕ್ಕು ಅಲ್ಲಿ ಹುಡುಕಲಾಗಿ, ಚೂತವೃಕ್ಷದ ಕೆಳಗೆ ಪಲ್ಯಂಕಾಸನದಲ್ಲಿ ಕುಳಿತು ಕಣ್ಮುಚ್ಚಿರುವಳನ್ನು ನೋಡಿ, ಸೀತೆಯು ಇವಳೇ ಎಂದು ನಿಶ್ಚಯಿಸುತ್ತಾ ಕಾಯುತ್ತಿರುವ ಭಟನಿಯರೊಡನೆ ಮಾತಾಡಲು ಅವಕಾಶವಿಲ್ಲದೆ ಸಮಯವನ್ನು ಕಾದು, ಶ್ರೀ

ರಾಮರಸಂದೇಶವನ್ನು ಜಾನಕಿಗೆ ಹೇಳಲು, ಅವಳು ರಾಕ್ಷಸರು ಮೋಸಮಾಡುತ್ತಾರೆಂದು ಮಾತಾಡದೇ ಇದ್ದಳು. ಆಂಜನೇಯನು ಮರದ ಮೇಲಿಂದ ಮುದ್ರಿಕೆಗೆ ಧಾರವನ್ನು ಕಟ್ಟಿ ಸೀತೆಯು ಕೂತಿರುವನೇರಕ್ಕೆ ಬಿಡಲು ಅದು ಸೀತಾದೇವಿಗೆ ತಗಲಲು ಸೀತಾಮ್ಮನವರು ಕಣ್ಣು ಬಿಟ್ಟು ಮುದ್ರಿಕೆಯನ್ನು ತೆಗೆದುಕೊಂಡು ಪ್ರಿಯನ . ಆ ಮುದ್ರಿಕೆಯನ್ನು ಕಣ್ಣಿಗೆ ಒತ್ತಿಕ್ಕೊಂಡು, ಹನುಮಂತನನ್ನು ನೋಡಲು, ಆಂಜನೇಯನು ಜಾನಕಮ್ಮನವರಿಗೆ ಕಪಿರೂಪಿನಲ್ಲೆ ಬಗ್ಗಿ ನಮಸ್ಕರಿಸಿ ಶ್ರೀರಾಮದೇವರ ಯೋಗಕ್ಷೇಮವನ್ನು ತಿಳಿಸಿ, ಆಹಾರಾದಿಗಳನ್ನು ತೆಗೆದುಕ್ಕೊಳ್ಳುವಂತೆಯೂ ಮತ್ತು ಎಂಟು ದಿವಸಗಳಲ್ಲಿ ಬರುತ್ತಾರೆಂಬುವದನ್ನೂ ತಿಳಿಸಿದನು. ಜಾನಕಮ್ಮನವರು ರಾಮದೇವರ ದಯವದಗಿತೆ? ಅವರ ಮುದ್ರಿಕೆಯನ್ನು ನೋಡಿದನೆ?" ಎಂದು ಆನಂದಪಟ್ಟರು.

ಆಂಜನೇಯನು ಆ ವನದಲ್ಲಿ ಮರಗಳನ್ನೂ, ಗಿಡಗಳನ್ನೂ ಕೀಳುತ್ತಾ ವೈದೇಹಿಯು ಕೂತಿರತಕ್ಕ ಮರವನ್ನು ಮಾತ್ರ ಮುರಿಯದೆ, ಮರಮರಕ್ಕೆ ಹಾರುತ್ತಲಿದ್ದಾಗ ವೈದೇಹಿಯು ಜಿನೇಶ್ವರನ ಪಾದವನ್ನು ನೆನೆಯುತ್ತಿದ್ದಳು.

೪೯. ಲಂಕಾದಹನ.

ಮನುಜೇಂದ್ರನೇ ಕೇಳೈ! ಆಕಪಿಯು ಮರಗಳನ್ನೂ, ಹೂಗಿಡಗಳನ್ನೂ, ಲತಾಗೃಹಗಳನ್ನೂ ಕಿತ್ತು ಪೊಗೆಯುತ್ತಿರಲಾಗ ಆ ದೈತ್ಯಾಳಿಗಳು ಕಪಿಯನ್ನು ಬಹಳ ಕಷ್ಟಪಟ್ಟು ಹಿಡಿದುಹಾಕಿ ಮೇಲಕ್ಕೆ ಎತ್ತಲು ಆಗದೆ ಒಬ್ಬರೊಬ್ಬರ ಮುಖವನ್ನು ನೋಡುತ್ತಾ, ಬಂಡಿಯ ಮೇಲಿಟ್ಟುಕ್ಕೊಂಡು ರಾಜನ ಸಮ್ಮುಖಕ್ಕೆ ಹೋಗಬೇಕೆಂದು ನೆನೆಸಿ, ಬಹಳ ಶ್ರಮಪಟ್ಟು ಈ ಕಪಿಯನ್ನು ಗಾಡಿಯ ಮೇಲೆಹಾಕಿ ಆಸ್ಥಾನಕ್ಕೆ ತೆಗೆದುಕ್ಕೊಂಡು ಹೋಗುತ್ತಿರಲಾಗ, ಅದರ ಉದ್ದವಾದ ಬಾಲದಲ್ಲಿರುವ ಗೊಂಚಲುಗಳನ್ನೂ, ಅದರ ಗಡ್ಡವನ್ನೂ ನೋಡಿ ಅಸುರರು ನಗುತ್ತಿರಲು ಕಪಿಯು ಅಣಕಿಸಿ ಹಲ್ಲುಕಿರಿದು ಮೈಕೆರೆದು ಕೆರೆದು ಕೊಳ್ಳುತ್ತಲಿದ್ದು ಆಸ್ಥಾನವನ್ನು ಮುಟ್ಟಿತು. ದಶಕಂಠನು ರಾಣಿವಾಸದಲ್ಲಿರುತ್ತಿರಲು ಅಲ್ಲಿಗೇನೆ ಕಪಿಯನ್ನೆತ್ತಿಕ್ಕೊಂಡು ಹೋಗಿ ರಾಜನ ಮುಂದೆ ಚರಳು ಇಟ್ಟು ದೇವ. "ದೇವರಥಮಣ ವನವೆಲ್ಲಾ ಹಾಳಾಯಿತು. ಈ ಕಪಿಯು ಎಲ್ಲಾ ಗಿಡಮರಲತೆಗಳನ್ನು ಕಿತ್ತು ಮುರಿದು ಎರಚಿ ಹಾಹಾಕಾರ ಮಾಡಿತು. ಆ ವನದಲ್ಲಿ ಜಾನಕಿ ಕೂತಿರುವ ನೆರಳಿನ ಮರವಮಾತ್ರ ನಿಂತಿದೆ. ಇದಕ್ಕೆ

ಏನು ಶಿಕ್ಷೆ ಕೊಟ್ಟರೂ ಸಾಲದು" ಎಂದು ಹೇಳಲು ಚರರ ಮಾತನ್ನು ಕೇಳಿ ರಾವಣನು ರೇಗಿ, "ಕಪಿಯ ಕಟ್ಟನ್ನು ಬಿಚ್ಚಿ" ಎಂದು ಹೇಳಲಾಗಿ, ಅವರು ಬಿಚ್ಚಲು ಕಪಿಯು ರಾವಣನನ್ನು ನೋಡಿ ಭಯಪಟ್ಟಂತೆ ಕೂತುಕೊಂಡಿತು. ಆಗ ರಾವಣನು ಕಪಿಯನ್ನು ಚನ್ನಾಗಿ ನೋಡಿ "ಗಡ್ಡವು ವಿಪರೀತವಾಗಿ ಬೆಳೆದಿದೆ. ಪುಚ್ಛದಲ್ಲಿ ರೋಮಗುಚ್ಛಗಳು ತುಂಬಿವೆ" ಎಂದು ನಗುತ್ತಾ "ಈ ಕಪಿಯ ಗಡ್ಡವನ್ನು ಸೀಯಿರೋ" ಎಂದು ಹೆಳಲಾಗ, ಚರರು ಕಪಿಯ ಗಡ್ಡಕ್ಕೆ ಬೆಂಕಿ ಹಚ್ಚಲು, ಅದು ಬೆದರಿ ಗುಂಪಾಗಿ ತಮಾಷೆ ನೋಡುತ್ತಾ ನಿಂತಿದ್ದ ಅಂತಃಪುರದ ಸ್ತ್ರೀಯರುಗಳ ಗುಂಪಿಗೆ ಓಡಲು, ಈ ಗಡ್ಡದ ಉರಿಯು ಅವರು ಉಟ್ಟಿದ್ದ ಸೀರೆಗಳಿಗೆ ತಗಲಲು, ಅವರು ಬಟ್ಟೆಗಳನ್ನು ಕಳಚಿ ದಿಕ್ಕಾಪಾಲಾಗಿ ಓಡುತ್ತಿರುವುದನ್ನು ರಾವಣನು ನೋಡಿ ನಗುತ್ತಲಿದ್ದನು. ಆಳುಗಳು ಈ ಕಪಿಯನ್ನು ಓಡಿಸಲು, ಕಪಿಯು ಅರಮನೆಯ ಮೇಲಿನ ಧ್ವಜಕ್ಕೆ ಉರಿಯನ್ನು ತಗಲಿಸಿ, ಕೇರಿಕೇರಿಯ ಮನೆಮನೆಗಳಿಗೆಲ್ಲಾ ನುಗ್ಗಿನುಗ್ಗಿ ಲಂಕಾಪಟ್ಟಣಕ್ಕೆ ಬೆಂಕಿಯನ್ನು ಹಚ್ಚಿತು. ಹೀಗೆ ಊರೆಲ್ಲಾ ಬಹುಭಾಗ ಸುಟ್ಟುಹೋಯಿತು. ಅನಂತರ ಇಂದ್ರಜಿತು, ಕುಂಭಕರ್ಣ, ಪ್ರಹಸ್ತಾದಿಗಳಿಗೂ ಅಗ್ನಿಬಾಧೆಮಾಡಿ ವಿಭೀಷಣನ ಮನೆ ಮುಂದುಗಡೆ ಹೋಗಲಾಗ ಜನರ ಗಲಬಿಲಿಯಿಂದ ವಿಭೀಷಣನು ಹೊರಗೆ ಬಂದುನೋಡಿ "ಏನು ಅಪಶಕುನ?" ಎನ್ನುತ್ತಿರಲು ಅಂಜನೇಯನು ಅಲ್ಲಿಂದ ಓಡಿ ಅದೃಶ್ಯನಾಗಿ ಜಿನೇಶ್ವರರ ಪಾದಕಮಲಗಳನ್ನು ಮನದಲ್ಲಿ ನೆನೆಯುತ್ತಿದ್ದನು.

೩೦. ವಿಭೀಷಣನ ನೀತಿ.

ರಾಜಾಧಿರಾಜನಾದ ಶ್ರೇಣಿಕನೇ ಕೇಳು! ದಶಕಂಠನು ಸಭಾಮಧ್ಯದಲ್ಲಿ ಕುಳಿತು ಆನಂದವಾಗಿರುವಾಗ, ವಿಭೀಷಣನು ಮಂತ್ರಿಯಾದ ಮಾರೀಚನನ್ನು ನೋಡಿ "ನೆನ್ನೆ ಕಪಿಮಾಡಿದ ಅವಹೇಳನವು ಪ್ರಭುವಾದ ರಾಜನಾದ ಅಣ್ಣನವರಿಗೆತಿಳಿದಿದೆಯೆ?" ಎಂಬುದಾಗಿಕೇಳಲು, ಮಾರೀಚನುರಾಜಾಧಿರಾಜರ ಮನವರಿಕೆಗೆ ಬಂದಿದೆಯೆಂಬುದಾಗಿ ಹೇಳಲು, ದಶಕಂಠನನ್ನು ನೋಡಿ "ಈ ಹೇಷ್ಯಗಳು ಯಾತಕ್ಕೆ ಆಗುತ್ತೆಂಬುವುದು ನಿಮಗೆ ಗೊತ್ತೆ? ಸಾಮಾನ್ಯಕಪಿಯ ಆಕಾರದಲ್ಲಿ ಆ ಕಪಿ ಇತ್ತೇ? ಒಂದು ಕಪಿಯು ಈ ಮಹಾ ದುರ್ಗಮವಾದ ಲಂಕೆಯನ್ನು ಪ್ರವೇಶ ಮಾಡುವುದೆಂದರೇನು? ಒಂದು ವೇಳೆ ಪ್ರವೇಶ ಮಾಡಿ

ದರೂ ಈ ರಾಕ್ಷಸಾಕಾರದ ದೊಡ್ಡದೊಡ್ಡ ಮರಗಳನ್ನು ಮುರಿದು ಹಾವಳಿ ಮಾಡುವುದೆಂದರೇನು ? ಒಂದುವೇಳೆ ಚೇಷ್ಟೆಮಾಡಿದರೂ ಅಂತಃಪುರದ ಸ್ತ್ರೀಯರ ಗುಂಪಿಗೆ ಹೋಗಿ ಈ ಅವಮಾನಕರವಾದ ಅವರ ವಸ್ತ್ರಗಳಿಗೆಲ್ಲಾ ಬೆಂಕಿ ಹಚ್ಚುವುದೆಂದರೇನು ? ಕೊನೆಗೆ ಇದು ಯಾರಿಗೂ ಕಾಣದಂತೆ ಅದೃಶ್ಯವಾಯಿತೆಂದರೇನು ? ಇದೆಲ್ಲಾ ಪರಪಕ್ಷದವರು ರೂಪಾಂತರದಿಂದ ಪುರಪ್ರವೇಶಮಾಡಿ ನಮಗೆ ಅವಮಾನಪಡಿಸಿ ಹೋಗಿರುವುದಾಗಿ ನಾನು ಯೋಚಿಸುತ್ತೇನೆ. ಎಲೈ ಅಣ್ಣನೇ ! ಇದೆಲ್ಲಾ ನೀನು ಸೀತೆಯನ್ನು ತಂದ ಫಲವಾಗಿರುತ್ತೆ. ಕಾರಣಾಂತರದಿಂದ ಸೀತೆಯನ್ನೇನೋ ತಂದೆ- ಈಗ ಆಕೆಯನ್ನು ಶ್ರೀರಾಮನ ಸಮೀಪಕ್ಕೆ ಕಳುಹಿಸಿ ಬಿಡು" ಎಂದು ವಿಭೀಷಣನು ಹೇಳುವಲ್ಲಿ ದಶಕಂಠನು ಕುಪಿತನಾಗಿ "ಎಲೋ ಹುಡುಗನೇ! ಸುಮ್ಮನಿರು. ರಾಜಧರ್ಮದವಿಷಯವನ್ನು ತಿಳಿಯುವನಾಗು. ರಾಜಶ್ರೇಷ್ಠನಲ್ಲಿ ಸಮೀಚೀನವಸ್ತುಗಳಿರತಕ್ಕದ್ದು ಯೋಗ್ಯವಾದುದು. ಈ ವನಚರನಾದ ರಾಮನ ಹತ್ತಿರ ಈಸ್ತ್ರೀರತ್ನವು ಕುಟೀರದಲ್ಲಿರುವುದು ಎಷ್ಟು ಹೀನವಾದದ್ದು ? ಚೂಡಾರತ್ನವು ಕಾಲಕಸದಲ್ಲಿ ಬಿದ್ದಿದ್ದರೆ ಯಾರು ತಾನೇ ಸುಮ್ಮನಿದ್ದಾರು ? ನಾನು ಸೀತೆಯನ್ನು ತಂದದ್ದು ಶ್ಲಾಘ್ಯವಾದದ್ದು" ಎನಲು ವಿಭೀಷಣನು "ಅಣ್ಣನೇ ! ಕೇಳು. ಶ್ರೀರಾಮನು ಸಾಮಾನ್ಯ ಮನುಷ್ಯನಲ್ಲ. ಜಾನಕಿ ಸ್ವಯಂವರದಲ್ಲಿ ನಿಮ್ಮಗಳು ಯಾರಿಂದಲೂ ಸಾಧ್ಯವಾಗದ ಮಹಾಧನುಸ್ಸನ್ನು ಎತ್ತಿ ಗೃಧ್ರ ಯಂತ್ರವನ್ನು ಮುರಿಯಲಿಲ್ಲವೇ! ಶಂಭುಕನು ಹನ್ನೆರಡು ವರ್ಷ ತಪಸ್ಸನ್ನು ಮಾಡಿದರೂ ಕೈಸೇರದ ಚಂದ್ರಹಾಸವು, ಲಕ್ಷ್ಮಣನು ಕೈನೀಡಿದ ಕೂಡಲೇ ಕೈಗೆಬರಲಿಲ್ಲವೇ? ರಾಘವರು ಮಹಾತ್ಮರು. ಜಾನಕಿಯು ಲೋಕಜನನಿಯಾದ್ದರಿಂದ ರಾಘವನ ಕೂಡ ಇರುವದು ಶ್ಲಾಘ್ಯವೇ ಸರಿ" ಎನಲು ರಾವಣನು ಮತ್ತೂ ಕುಪಿತನಾಗಿ " ಎಲೋ ಸೋಮಾರಿ! ನೀನು ಹೊಗಳುತ್ತಿರುವ ಶೂರರ ಹೆಂಡತಿಯನ್ನೇ ತರುವಾಗ ನಾನು ಮಹಾಶೂರನಲ್ಲವೇ? ತನ್ನ ಹೆಂಡತಿಯನ್ನು ಸಾಧಕವಾಗಿ ಕಾಪಾಡದ ಹೇಡಿಯ ಮಾತನ್ನೇನಾಡುತ್ತಿ- ಬಾಯಿ ಮುಚ್ಚು! ಹೆಂಡತಿಯನ್ನು ತಾನು ಆಳುವುದಕ್ಕೆ ಶಕ್ತಿಯಿಲ್ಲದೆ ಬಿಟ್ಟುಬಿಟ್ಟು, ಈಗ ಈ ಕಪಿಯನ್ನು ಕಳುಹಿಸಿದ ಮಾತ್ರಕ್ಕೆ ಅದರಹಾವಳಿಯಿಂದ ಲಂಕಾಧಿಪತಿಯಾದ ನಾನು ಹೆದರಿ ಸೀತೆಯನ್ನು ಕಳುಹಿಸುವನೇ? ವಿಚಾರಶೂನ್ಯನಾದ ನಿನ್ನ ಗೊಡ್ಡು ಹರಟೆಗೆ ದಶಕಂಠನು ಕಿವಿಗೊಡುವನೋ? ತಿಳಿಯದಹುಡುಗನೇ! ಸುಮ್ಮನಿರು" ಎನಲು

ವಿಭೀಷಣನು ರಾವಣನನ್ನು ಕುರಿತು "ಅಣ್ಣಾಜಿಯವರೇ! ಲಾಲಿಸಿ! ನೀವು ಶಾಸ್ತ್ರಜ್ಞರೂ, ರಾಜನೀತಿಜ್ಞರೂ, ಕರುಣಾಪರರೂ, ಆದುದರಿಂದಲೇ ನಾನು ಹೇಳುವುದು- ಪರಸ್ತ್ರೀಯರನ್ನು ಅಪೇಕ್ಷಿಸುವುದು ಘೋರವಾದಪಾಪವಲ್ಲವೆ? ಇನ್ನೊಬ್ಬನ ಹೆಂಡತಿಯನ್ನು ಹೊತ್ತುಕೊಂಡುಹೋದರೆ ದೊರೆಯು ಶಿಕ್ಷಿಸುವುದಿಲ್ಲವೇ! ಗಂಡನನ್ನು ಕುರಿತು ಶೋಕಿಸುತ್ತಾ, ಅನ್ನ ನೀರನ್ನು ಬಿಟ್ಟು ನರಳುತಲಿರುವ ಬಾಲೆಯನ್ನು ಕಂಡರೆ ಮನಸ್ಸು ಕರಗುವುದಿಲ್ಲವೆ? ನೀನು ಬಹಳ ಗಂಭೀರಸ್ಥನಲ್ಲವೇ? ನೀನು, ಈ ಜಾನಕಿಗಿಂತಲೂ ರೂಪಾವತಿಯಾಗಿರ್ಪುವ ನಿನ್ನ ಅಂತಃಪುರದಲ್ಲಿರುವವರನ್ನು ನೋಡಿಲ್ಲವೇ ? ಆ ಸ್ತ್ರೀಯರಅಂಗಸಂಗದಿಂದ ಹೊಂದುವ ಸುಖಕ್ಕಿಂತಲೂ ಹೆಚ್ಚಾಗಿ ಯಾವ ಸುಖವನ್ನು ಹೊಂದುವೀ? ನೀನು ಮಹಾತ್ಮನು! ಈಗ ಜಾನಕಿಯನ್ನು ಕಳುಹಿಸು ಬಿಡು. ನಿನಗೆ ಯಾವ ಅಶ್ರೇಯಸ್ಸು ಉಂಟಾಗುವುದಿಲ್ಲ" ಎಂದು ಅನೇಕ ನೀತಿವಾಕ್ಯಗಳನ್ನು ರಾವಣನಿಗೆ ವಿಭೀಷಣನು ಹೇಳಿದರೂ ರಾವಣನು ಕೇಳದೆ ತಾನು ಜಾನಕಿಯನ್ನು ಎಂದಿಗೂ ಕಳುಹಿಸುವುದಿಲ್ಲ. ನೀನು ಬೇಕಾದರೆ ರಾಮನನ್ನು ಸೇರಿಕೋಯೆಂದು ಹೇಳಿದನು. ಕುಂಭಕರ್ಣ, ಇಂದ್ರಜಿತು ಮೊದಲಾದವರು ರಾವಣನಿಗೆ ಸಹಾಯವಾಗಿ ಮಾತನಾಡುತ್ತಿರಲು, ವಿಭೀಷಣನು ಈ ಅಧರ್ಮಕ್ಕೆ ನೀವೂ ರಾಜನಿಗೆ ಪ್ರೋತ್ಸಾಹಿಸುವುದು ಸರಿಯಲ್ಲವೆಂದು ಹೇಳಿ ಜಾನಕಿಯನ್ನು ಪತಿಯ ಸಮೀಪಕ್ಕೆ ಕಳುಹಿಸಬೇಕೆಂದು ಹೇಳಿ ಅಣ್ಣನವರ ದುರ್ಬುದ್ಧಿಗೆ ಹೇಸಿ ಅರ್ಹತ್ಪರಮೇಶ್ವರರ ಚರಣಕಮಲಗಳನ್ನು ಅಂತರಂಗದಲ್ಲಿ ಸ್ಮರಿಸುತ್ತಾ, ವಾಚಃ ಪಂಚಪರಮೇಷ್ಠಿನಮಸ್ಕಾರವನ್ನು ಪಠಿಸುತ್ತಿದ್ದನು.

೫೧. ಸಮರ ಸನ್ನಾಹ.

ಎಲೈ ಶ್ರೇಣಿಕನೇ! ಕೇಳುವನಾಗು—ಸಭೆಯಲ್ಲಿ ದಂಶಕಂಠನಿಗೆ ಎಷ್ಟು ಹೇಳಿದರೂ ಕೇಳದೆ ಹಟಮಾರಿಯಾಗಿ, ಎಷ್ಟು ಮಾತ್ರಕ್ಕೂ ಸೀತೆಯನ್ನು ಕಳುಹಿಸಲಾಗವುದಿಲ್ಲವೆಂಬ ಮಾತನ್ನು ರಾವಣನು ಆಡಲು, ವಿಭೀಷಣನು ದುಗುಡದಿಂದ ತನ್ನ ಅರಮನೆಗೆ ಹೊರಟನು. ಇತ್ತ ಆಂಜನೇಯನು ಲಂಕಾಪಟ್ಟಣವನ್ನು ಬಿಟ್ಟು, ಕಿಷ್ಕಿಂಧಕ್ಕೆಬಂದು ಜಾಂಬವಾದಿಗಳನ್ನು ಕೂಡಿಕೊಂಡು ಶ್ರೀರಾಮನ ದರ್ಶನಕ್ಕೆ ಹೋಗಲು-ಜಾನಕಿಯ ವಿಷಯವನ್ನು ತಿಳಿಯಲು ಕುತೂಹಲಪಿಷ್ಟನಾಗಿ ಆಂಜನೇಯನ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದ ಶ್ರೀ

ರಾಮನಿಗೆ ಆಂಜನೇಯನು "ಕ್ಷೇಮ ಜಾನಕಿ" ಎಂದು ಮೊದಲು ಹೇಳಿ ಅನಂತರ ತಾನು ಹೋಗಿ ಅಲ್ಲಿ ಹುಡುಕಿ, ಜಾನಕಿಯನ್ನು ಕಂಡ ವಿಷಯಗಳನ್ನೂ ತಾನು ಆ ಪಟ್ಟಣದಲ್ಲಿ ಮಾಡಿದ ದಾಂಧಲೆಗಳನ್ನೂ ವಿವರಿಸಿ, ತಾನು ಬಂದ ಮಾರ್ಗವನ್ನು ತಿಳಿಸಿ, ಜಾನಕಿಯು ರಾಮಮುದ್ರಿಕೆಯನ್ನು ನೋಡಿ ಆನಂದ ಪಟ್ಟು ರಾಮನನ್ನು ನೋಡುವವರಿಗೆ ಫಲಮೂಲಗಳನ್ನು ತಿಂದು ಬದುಕುವಳೆಂದೂ ಮತ್ತು ಜಾಗ್ರತೆ ತನ್ನನ್ನು ಕರೆದುಕೊಂಡುಹೋಗಬೇಕೆಂದೂ ಹೇಳಿದ ವಿಷಯವನ್ನು ವಿಸ್ತಾರವಾಗಿ ವಿವರಿಸಿದನು. ಲಕ್ಷ್ಮಣನು ಕೇಳಿ ಈಗಲೇ ಲಂಕೆಗೆ ಹೊರಡುತ್ತೇನೆಂದು ಹೇಳಲು, ಶ್ರೀರಾಮನು ಆತನನ್ನು ಸಮಾಧಾನ ಪಡಿಸಿ, ಸುಗ್ರೀವಾದಿಗಳನ್ನು ಕುರಿತು, ಮುಂದಿನ ಕಾರ್ಯ ಭಾಗವನ್ನು ವಿಚಾರಿಸಲು ಅನುವಾದನು. ಸುಗ್ರೀವನು ಹನುಮಂತನಿಂದ ಲಂಕಾಪಟ್ಟಣದ ಪರಿಸ್ಥಿತಿಯನ್ನು ತಿಳಿದು, ವಿರಾಧಿತನೇ ಮೊದಲಾದ ಸಕಲರಿಗೂ ಪ್ರತ್ಯೇಕವಾಗಿ ಜಾನಕಿದೇವಿಯರಿಗಾಗಿರುವ ಹಿಂಸೆ ಮತ್ತು ಕಳವಳವನ್ನೂ, ಅವರು ಮುದ್ರಿಕೆಯನ್ನು ಕಾಣುವವರಿಗೆ ಇದ್ದ ನಿರಾಹಾರವ್ರತವನ್ನೂ ಮತ್ತು ರಾಮದರ್ಶನದವರಿವಿಗೆ ಫಲವನ್ನು ಮಾತ್ರ ಸ್ವೀಕರಿಸುತ್ತಿರುವುದನ್ನೂ ವಿಶದಪಡಿಸಲಾಗ ಕಪಿನಾಯಕರೆಲ್ಲ ಬಹಳವಾಗಿ ಅನುತಾಪವನ್ನು ಹೊಂದಿದರು. ಶ್ರೀರಾಮನ ಮುಂದೆ ನಡೆಸಬೇಕಾದ ಸಮರಕ್ಕೆ ಒದಗಿಸಿಕೊಟ್ಟು ಬೇಕಾದ ಸಹಾಯಸಂಪತ್ತನ್ನು ವಿವರಿಸಿ ಯುದ್ಧಯಾತ್ರಗೆಪ್ರೇರೇಪಿಸಲು ಲಕ್ಷ್ಮಣನು ತ್ವರ್ಯದಿಂದ ವಿರಾಧಿತ ಸುಗ್ರೀವ ಜಾಂಬವ ನಳ ನೀಲ ಹನುಮರನ್ನೆಲ್ಲಾ ಕರೆದು ನಿಮ್ಮ ನಿಮ್ಮ ದಳ ಸಮೇತರಾಗಿ ಜೈತ್ರಯಾತ್ರೆಗೆ ಸನ್ನದ್ಧರಾಗಬೇಕೆಂದು ಆಜ್ಞಾಪಿಸಲು ಸುಗ್ರೀವಾದಿಗಳು ತಾನು ಮುಂದು ನಾನು ಮುಂದೆಂದು ಅವರವರ ಸೇನೆಗಳನ್ನು ಯುದ್ಧಕ್ಕೆ ಸಿದ್ಧಪಡಿಸುತ್ತಿರಲು ಶ್ರೀರಾಮನು ಜಿನೇಶ್ವರನ ಪಾದ ಕಮಲವನ್ನು ತ್ರಿಕರಣ ಶುದ್ಧಿಯಿಂದ ತ್ರಿಕಾಲದಲ್ಲೂ ಧ್ಯಾನಿಸುತ್ತಿದ್ದನು.

೫೨. ವಿಜಯ ಪ್ರಯಾಣ.

ಎಲೈ ಶ್ರೇಣಿಕ ಮಹಾರಾಜನೇ! ಮುಂದಿನ ಕಥಾನುಸರಣೆಯನ್ನು ಕೇಳುವನಾಗು—ಶ್ರೀರಾಮನು ನಿತ್ಯಾನುಷ್ಠಾನಗಳನ್ನು ತೀರಿಸಿಕೊಂಡು ಆಸ್ಥಾನಕ್ಕೆ ಬಂದವಡನೆ ಜಾಂಬವಾದಿಗಳೆದ್ದು ನಮಸ್ಕರಿಸಿದ ನಂತರ "ಪ್ರಭುವೇ! ನಾಲ್ಕುವರೆಕೋಟಿ ತುರಗಗಳೂ, ಇಪ್ಪತ್ತೊಂದು ಲಕ್ಷ ಆನೆಗಳು, ಇಪ್ಪತ್ತೊಂ

ದುಲಕ್ಷ ರಥಗಳು, ಆರುಕೋಟಿ ಪದಾತಿಗಳು. ನಮ್ಮ ದಂಡನ್ನೆಲ್ಲಾ ಸೇರಿಸಿದರೆ ಎರಡು ಗಾವುದದ ವಿಸ್ತೀರ್ಣದಲ್ಲಿ ನಿಲ್ಲುವಷ್ಟು ಇವೆ. ಹದಿನೆಂಟುಸಾಸಿರ ಮಕುಟ ಬದ್ಧರು ಅಸಂಖ್ಯಾತ ಆಯುಧಗಳೂ ಪಟಹ ಭೇರಿಗಳೂ ಇವೆ. ಹೊರಡಲು ಅಪ್ಪಣೆಯೇ?" ಎಂದು ಕೇಳಲಾಗಿ ರಾಘವನು ಜಿನೇಶ್ವರರ ಚೈತ್ಯಾಲಯಗಳಲ್ಲಿ ಅನೇಕ ವಿಧವಾದ ಅಭಿಷೇಕ ಆರಾಧನೆಗಳು ನಡೆಯುವಂತೆ ಮಾಡಿಸಿ ಪುರೋಹಿತರು ಶೋಧಿಸಿಟ್ಟ ಲಗ್ನದಲ್ಲಿ ಜೈತ್ರಯಾತ್ರೆಗೆ ಅಪ್ಪಣೆ ಮಾಡಲು ಪ್ರಯಾಣಭೇರಿಯನ್ನು ಹೊಡೆಸಿದರು. ಆಭೇರಿಯ ಧ್ವನಿಯು ದಿಗಂತವನ್ನು ಮುಟ್ಟಿತು. ರಾಜಪುತ್ರಿಯರು ಮುತ್ತಿನಕ್ಷತೆಗಳನ್ನು ರಾಮಲಕ್ಷ್ಮಣರ ಲಲಾಟಕ್ಕೆ ಇಟ್ಟು ವಜ್ರದಾರತಿಯನ್ನೆತ್ತಿ ಗುಣಗಾನಮಾಡಿದರು. ಪಂಚ ಮಹಾವಾದ್ಯಗಳು ಧ್ವನಿಮಾಡಿದವು. ಲಕ್ಷ್ಮಣನು ನಳ ನೀಲ ಸುಷೇಣ ಪ್ರಸನ್ನಕೀರ್ತಿ ಮೊದಲಾದವರಿಗೆ ಸೇನಾನಾಯಕತ್ವವನ್ನು ಕೊಟ್ಟು ಅವರವರಿಗೆ ತಕ್ಕ ತಕ್ಕಷ್ಟು ಸೇನೆಗಳನ್ನು ವಿಂಗಡಿಸಿ ಕೊಟ್ಟನು. ಶ್ರೀರಾಮನ ಎಡಭಾಗದಲ್ಲಿ ಜಾಂಬವ, ಸುಗ್ರೀವ, ಅಂಗದ, ಸುರಹರಿ, ಸಿಂಹಕೇತು, ಮೊದಲಾದವರನ್ನಿಟ್ಟು ವಿರಾಧಿತನೇ ಮೊದಲಾದವರನ್ನು ಬಲಭಾಗದಲ್ಲಿಟ್ಟು ತಾನು ಸುತ್ತಲೂ ಸಂಚರಿಸುತ್ತಾ ದಂಡುಗಳು ನಡೆಯುವುದಕ್ಕೆ ಪ್ರಾರಂಭಿಸಿ ಪಟಹಭೇರಿ ಶಂಖ ಕಹಳೆ ಮೊದಲಾದವು ಭೋರ್ಗರೆದವು. ಅಷ್ಟರಲ್ಲಿ ನಾರದಋಷಿಯು ಬರಲು ಶ್ರೀರಾಮನು ಪ್ರತ್ಯುತ್ಥಾನಮಾಡಿ ತಮ್ಮ ಆಗಮನಕ್ಕೆ ಕಾರಣವೇನೆಂದುಕೇಳಲಾಗಿ, ನಾರದರು ತಾವು ವಿದೇಹಕ್ಕೆ ಅಲ್ಲಿನ ಸಮವಶರಣಕ್ಕೆಹೋಗಿ ದೇವರನ್ನು ವಂದಿಸಿ ನಿಮ್ಮ ವಿಷಯವನ್ನು ವಿಚಾರಿಸಲಾಗಿ ಜಿನೇಶ್ವರರು ಶ್ರೀರಾಮಲಕ್ಷ್ಮಣರು ಬಲಕೇಶವರೆಂದೂ ಹೇಳಿದರೆಂದು ಲಕ್ಷ್ಮಣನು ಅರ್ಧಚಕ್ರವರ್ತಿಯಾದ ರಾವಣನನ್ನು ಸಂಹರಿಸಿ ಚಕ್ರರತ್ನವನ್ನು ಪಡೆಯುತ್ತಾನೆಂದು ಹೇಳಿದರೆಂದೂ ಹೇಳಲಾಗಿ ಶ್ರೀರಾಮನು ಕೇಳಿ ಶ್ರೀಜಿನೇಶ್ವರರನ್ನು ಮನದಲ್ಲಿ ಧ್ಯಾನಿಸುತ್ತಿದ್ದನು.

೫೩. ಸಮುದ್ರ ರಾಜನನ್ನು ಜಯಿಸಿದ್ದು.

ಕೇಳೈ ಶ್ರೇಣಿಕನೇ! ಶ್ರೀರಾಮನು ಚತುರಂಗಬಲಯುತನಾಗಿ ಹೊಂಟು ದಕ್ಷಿಣಸಮುದ್ರದ ತೀರಕ್ಕೆ ಬಂದು, ನಿರ್ಮಲವಾದ ಒಂದು ವನ ಮಧ್ಯದಲ್ಲಿ ಬಿಡಾರವನ್ನು ಬಿಟ್ಟನು. ಜಾಂಬವಾದಿಗಳು ನೂತನ ಗೃಹವನ್ನು ನಾರುವಿನಿಂ

ದಲೂ ಲೋಹದಿಂದಲೂ ನಿರ್ಮಿಸಿ, ಆ ಗೃಹ ಮಧ್ಯದಲ್ಲಿ ಸಿಂಹಾಸನವನ್ನು ನಿರ್ಮಿಸಿ ಅಲ್ಲಿಗೆ ಲಕ್ಷ್ಮಣಸಹಿತನಾದ ರಾಮನನ್ನು ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕುಳ್ಳಿರಿಸಿ ರಾಜಮರ್ಯಾದೆಗಳನ್ನು ಮಾಡಿದರು. ಸುಗ್ರೀವನೇ ಮೊದಲಾದವರು ಸಿಂಹೋದರ, ಹಂಸಧ್ವಜ, ಮೊದಲಾದವರಿಗೆ ರಾಮಲಕ್ಷ್ಮಣರು ಬಂದಿದ್ದಾರೆ. ಅವರ ದರ್ಶನಾರ್ಥವಾಗಿ ಬರಬೇಕೆಂದೂ ಕಾಣಿಕೆ ಸಹ ತಂದು ರಾಘವನಿಗೆ ಒಪ್ಪಿಸಬೇಕೆಂದೂ ವಾಲೆಗಳನ್ನು ಬರೆದು ಕಳುಹಿಸಿದರು. ಸಮುದ್ರರಾಜನಿಗೆ ಬರಬೇಕೆಂತ ದೂತರನ್ನು ಕಳುಹಿಸಿದರು. ದೂತರು ಸಮುದ್ರರಾಜನನ್ನು ಕಂಡು “ಶ್ರೀರಾಮ ಲಕ್ಷ್ಮಣಸ್ವಾಮಿಗಳು ಲಂಕಾಧಿರಾಜನ ಮೇಲೆ ಯುದ್ಧಕ್ಕಾಗಿ ಬಂದು ಈ ಸಮುದ್ರತೀರದಲ್ಲಿ ಬಂದು ನೆಲಸಿಧಾರೆ. ನೀನು ದರ್ಶನಾರ್ಥವಾಗಿ ಬರಬೇಕು” ಎಂದು ಬಿನ್ನವಿಸಲು ಸಮುದ್ರರಾಜನು ಇವರ ಬರುವಿಕೆಗೆ ಅಸಮಾಧಾನನಾಗಿದ್ದನು. ಮತ್ತು ಹೇಳಿ ಕಳುಹಿಸಿದರೆಂಬ ವಾರ್ತೆಯನ್ನು ಕೇಳಿದಕೂಡಲೇ, ಕಂಣುಗಳು ಕೆಂಪಡರಿ ಮೀಸೆಗಳು ಅದರುತ್ತಿರಲು ಆತನ ದಳಪತಿಯಾದ ವಿದ್ಯುನ್ಮಾಲಿಯು ಚರನನ್ನು ಅವಮಾನಪಡಿಸಿ ನೂಕಿಸಿ, “ರಾಘವರು ಯುದ್ಧಕ್ಕೆ ಬರಲಿ!” ಎಂತ ಹೇಳಿಕಳುಹಿಸಿದನು. ಚರನು ರಾಘವನಿಗೆ ಈ ವಿಷಯವನ್ನು ತಿಳಿಸಿದಕೂಡಲೇ, ನಳನೀಲರು ಆಕಾಶಮಾರ್ಗದಲ್ಲಿ ಬಲಗಳನ್ನು ತೆಗೆದುಕೊಂಡು ಹೋಗಿ ಸಮುದ್ರರಾಜನ ಪಟ್ಟಣವನ್ನು ಮುತ್ತಿದರು. ಆಗ ಸಮುದ್ರಾಧಿಪತಿಯು ರೇಗಿ ಬಲಸಹಿತವಾಗಿ ದಳಪತಿಯಾದ ವಿದ್ಯುನ್ಮಾಲಿಯನ್ನು ಶತೃಪಕ್ಷದ ದಂಡನ್ನೆದರಿಸಲು ಕಳುಹಿಸಿಕೊಟ್ಟನು. ವಿದ್ಯುನ್ಮಾಲಿಯು ಶತೃಪಕ್ಷದಮುಂದೆ ನಿಲ್ಲಲು ಸೈನ್ಯಾಧಿಕಾರಿಯಾದ ನಳನು ಮುಂದೆ ಬರಲಾಗಿ ವಿದ್ಯುನ್ಮಾಲಿಯು ನಳನನ್ನು ಕುರಿತು “ನೀನು ಯಾಕೆ ಬಂದೆ ? ಬಾಲನೇ! ರಾಘವನನ್ನು ಕಳುಹಿಸು ಹೋಗು” ಎಂದಾಗ ನಲನು “ ಎಲವೋ! ನಿನ್ನನ್ನು ಜಯಿಸುವದಕ್ಕೆ ರಾಘವನು ಬರಬೇಕೇ? ನಾನೇ ಸಾಕು! ನಿನ್ನನ್ನು ಜಯಿಸುತ್ತೇನೆ” ಎಂದು ಒಂದು ಬಾಣಬಿಡಲು ಅದು ವಿದ್ಯುನ್ಮಾಲಿಯ ಭುಜಕ್ಕೆ ತಗಲಿ ನೋವನ್ನು ಕೊಟ್ಟಿತು. ಆಗ ವಿದ್ಯುನ್ಮಾಲಿಯು “ಎಲೋ ಹುಡುಗನೇ ! ಈಏಟು ನೋಡು” ಎಂದು ಹೇಳಿ ಬಾಣವನ್ನು ಹೊಡೆಯಲು, ನೀಲನು ಅದನ್ನು ಕತ್ತರಿಸಿ ಮತ್ತೊಂದು ಬಾಣವನ್ನು ಹೊಡೆದು ಅವನ ಸಾರಥಿಯನ್ನು ಕೆಡವಿದಕೂಡಲೆ ವಿದ್ಯುನ್ಮಾಲಿಯ ದಳವು ನಳನಮೇಲೆ ಬಂದು ಮುಟ್ಟಿಕೊಂಡಿತು. ಇದನ್ನು ನೋಡಿ ವಾನರಧ್ವಜದಳವು ಸಮುದ್ರ

ರಾಜನ ದಳವನ್ನು ಸುತ್ತಿಕೊಂಡು ಬಹಳವಾಗಿ ನೋಯಿಸಿದರು. ವಿದ್ಯುನ್ಮಾಲಿಯು ನಳನನ್ನು ನೋಡಿ "ನೀನು ಪ್ರಾಣವುಳಿಸಿಕೊಂಡು ಹೋಗು. ಇಲ್ಲದಿದ್ದರೆ ಈ ಬಾಣಕ್ಕೆ ಬಲಿಯಾಗುವೀ" ಎಂತಹೇಳಿ, ಅನೇಕ ಆಯುಧಗಳನ್ನು ನಳನ ಮೇಲೆ ಬಿಡಲು ನಳನು ಅವನ ಆಯುಧ ಬಾಧೆಗೆ ಸಿಕ್ಕದೆ ಅನಿಲಾಸ್ತ್ರವನ್ನು ಪ್ರಯೋಗಿಸಿ ಅವನನ್ನು ಬಿಗಿದು ತನ್ನ ವಿಮಾನಕ್ಕೆ ಹಾಕಿದನು. ಇದನ್ನು ಈತನ ಮಗನು ತಂದೆಯ ವಿಷಯವನ್ನು ತಿಳಿದು ಯುದ್ಧಕ್ಕೆ ಬರಲು ಅವನನ್ನೂ ಅಸ್ತ್ರದಿಂದ ಬಿಗಿದು ಹಾಕಿದನು. ಇದನ್ನು ತಿಳಿದು ಈತನ ಮಾತೆಯಾದ ಸೌಮಿತ್ರಾಬ್ಧಿಯು ಬಂದು ನಳನ ಪಾದಕ್ಕೆ ಬಿದ್ದು ಇವರನ್ನು ರಕ್ಷಿಸಬೇಕೆಂದು ಬೇಡಿಕೊಂಡಳು. ಅನಂತರ ಸಮುದ್ರರಾಜನ ಮಂತ್ರಿಗಳು ದೊರೆಗೆ "ಯುದ್ಧ ಸರಿಯಾದದ್ದಲ್ಲ- ರಾಜಯೋಗಿ ಶ್ರೀರಾಮನ ದರ್ಶನಕ್ಕೆ ಹೋಗುವುದು ಉಚಿತವೆಂದು ಹೇಳಲು ಅದಕ್ಕೆ ರಾಜನು ವೊಪ್ಪಿ ಮಂತ್ರಿಗಳನ್ನು ನಳನ ಸಮೀಪಕ್ಕೆ ಕ್ಷಮಾಪಣೆಗೆ ಕಳುಹಿಸಲು ನಳನು ವಿದ್ಯುನ್ಮಾಲಿ, ಆತನ ಹೆಂಡತಿ, ಆತನ ಮಗ, ಇವರುಗಳನ್ನು ಶರೆಯಿಂದ ತಪ್ಪಿಸಿ ಮನ್ನಿಸಿ ಕಳುಹಿಸಿ ಅರ್ಹತ್ಪರಮೇಶ್ವರರನ್ನು ನೆನೆಯುತ್ತಿದ್ದನು.

೫೮. ಮರಾಳಧ್ವಜನ ಪೌರುಷ

ಎಲೈ ಶ್ರೇಣಿಕಮಹಾರಾಜನೇ! ಕೇಳುವನಾಗು–ನಳನ ಪರಾಕ್ರಮಕ್ಕೂ ಅವನ ಉದಾರತ್ವಕ್ಕೂ ಸಮುದ್ರರಾಜನು ಆಶ್ಚರ್ಯವನ್ನು ಹೊಂದಿ ರಾಮನ ಕಡೆಯವರೇ ಇಷ್ಟುಬಲದಿಂದ ಕೂಡಿರುವಾಗ್ಗೆ ಎಂಥಾಬಲಿಷ್ಟರಾಗಿರುವರೋ ಎಂದು ಯೋಚಿಸಿ, ನಳನಕೂಡ ಸಮುದ್ರರಾಜನು ಬಹಳ ಅನರ್ಘ್ಯವಾದ ರತ್ನವನ್ನು ತೆಗೆದುಕೊಂಡು ಬರುತ್ತಿರುವಾಗ ಶ್ರೀರಾಮ ಲಕ್ಷ್ಮಣರು ಬೀಡು ಬಿಟ್ಟಿರುವುದನ್ನು ನೋಡಿ, "ಆದಾರು ಗೃಹಗಳ ಸೊಗಸನ್ನೂ ಅದರ ಮೇಲೆ ಹಾಕಿರುವ ಶಿಖರಗಳಕಾಂತಿವಿಶಿಷ್ಟವಾದ ಧ್ವಜಗಳ ಸುತ್ತಲಿರುವ ಆನೆ ಕುದುರೆ ಪದಾತಿ, ಆಯುಧ, ಭೇರಿ ವೊದಲಾದ ಸೊಬಗನ್ನೂ ನೋಡಿ ಆಶ್ಚರ್ಯಪಡುತ್ತ ಆ ಆಸ್ಥಾನದಲ್ಲಿ ರತ್ನಸಿಂಹಾಸನದಲ್ಲಿ ಕೂತಿರುವ ರಾಮಲಕ್ಷ್ಮಣರನ್ನು ನೋಡಿ ನಮ್ರೀಭೂತನಾಗಿ ನಮಸ್ಕರಿಸಿ ಕ್ಷಮಾಪಣೆಯನ್ನು ಕೇಳಲು, ರಾಘವನು ಸಮುದ್ರಾಧಿಪತಿಯನ್ನು ಸನ್ಮಾನಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ ಕುಶಲಪ್ರಶ್ನೆಗಳನ್ನು ಕೇಳಿದನಂತರ ಸಮುದ್ರಾಧಿಪತಿಯು ತನ್ನ ಮಕ್ಕಳಾದ ಶ್ರೀಮಾಲೆ,

ಪದ್ಮಾಕ್ಷಿ, ಗುಣವತಿ, ರತ್ನಮಾಲೆಯರನ್ನು ಲಕ್ಷ್ಮಣನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಆಶೆಯುಳ್ಳವನಾಗಿಧೇನೆ. ಭೃತ್ಯನ ಮೇಲೆ ದಯವಿಟ್ಟು ತನ್ನ ಅರಮನೆಗೆ ಚಿತ್ತೈಸಬೇಕೆಂದು ಬೇಡಿಕ್ಕೊಳ್ಳಲಾಗ ರಾಮದೇವರು ಲಕ್ಷ್ಮಣ ಸ್ವಾಮಿಯೊಡನೆ ಸುಗ್ರೀವಾದಿಗಳನ್ನು ಕೂಡಿಕೊಂಡು ಆತನ ಗೃಹಕ್ಕೆ ಹೋಗಿ ಆತನಿಂದ ಸನ್ಮಾನಹೊಂದಿ, ಲಕ್ಷ್ಮಣಪ್ರಭುವಿಗೆ ಮಹಾವಿಭವದಿಂದ ವಿವಾಹ ವನ್ನು ಮಾಡಿಸಿದನು. ಅನಂತರ ಆ ದಿವಸ ಸಕಲರು ಅಲ್ಲಿದ್ದು, ಮುಂದಿನದಿನ ಹಂಸದ್ವೀಪಕ್ಕೆ ಬಂದು ವೇಳಾನದಿಯ ತಡಿಯಲ್ಲಿದ್ದ ಮನೋಹರವಾದೊಂದು ವನತೀರದಲ್ಲಿ ದಂಡನ್ನಿಳಿಸಿದರು. ಎಂದಿನಂತೆ ಅವರವರಿಗೆ ತಕ್ಕ ದಾರು ಗೃಹ ಗಳೂ ಮಂಟಪಗಳೂ ರಚನೆಯಾದವು. ಬಲದೇವ ವಾಸುದೇವರಿಗೆ ರತ್ನ ಮಂಟಪಗಳು ರಚನೆಯಾದವು. ಎಂದಿನಂತೆ ಸಭಾಮಂಟಪದಲ್ಲಿ ಸುಗ್ರೀವಾದಿ ಗಳು ಸೇರಿದರು. ಲಕ್ಷ್ಮಣನೊಡನೆ ರಾಮನು ರತ್ನಸಿಂಹಾಸನವನ್ನೇರಿದನು.

ಜಾಂಬವನು ದೊರೆಯಾದ ಇಭಕೇತುವನ್ನು ಬರಮಾಡುವುದಕ್ಕಾಗಿ ಚರನನ್ನು ಕಳುಹಿಸಲು, ಆತನು ಆಸ್ಥಾನದಲ್ಲಿರುವ ಇಭಕೇತುವಿಗೆ ರಾಮ ದರ್ಶನಕ್ಕೆ ಬರಬೇಕೆಂದು ಹೇಳಲಾಗಿ, ಆತನು ಮಂತ್ರಿಯರಲ್ಲಿ ವಿಷಯವನ್ನು ವಿಚಾರಮಾಡುತ್ತಿರಲು, ಅವನ ಮಗನಾದ ಮರಾಳನು ತಂದೆಗೆ ನಮಸ್ಕರಿಸಿ, "ನಾವು ರೈತರಂತೆ ಇನ್ನೊಬ್ಬ ದೊರೆಗೆ ಕಂದಾಯ ಕಪ್ಪವನ್ನು ಕೊಡತಕ್ಕದಲ್ಲ. ರಾಮನಸೇನಾನಾಯಕರಲ್ಲಿ ಒಬ್ಬನಾದ ನಳನನ್ನು ಕಾಣನೇ? ಜಾಂಬವ ನೀಲ ಮಾರುತಿ ಸುಗ್ರೀವ ವಿರಾಧಿತ ಇವರನ್ನೆಲ್ಲ ಓಡಿಸಿ, ರಾಮಲಕ್ಷ್ಮಣರ ಕಿರೀಟ ಗಳನ್ನು ನಿಮ್ಮ ಪಾದಕ್ಕೆ ಒಪ್ಪಿಸಿಬಿಡುತ್ತೇನೆ. ಒಂದು ಸಮಯ ಬಿದ್ದರೆ ಚಕ್ರಿ ಯಾದ ದಶಾನನನ್ನು ಕಟ್ಟಿ ಕೆಡವ ಬಲ್ಲೆ" ಎಂದು ಹೇಳುತ್ತಾ ಹುಸಿನಗೆಯಿಂದ ರಾಣಿವಾಸದವರ ಮೇಲೆ ದೃಷ್ಟಿ ಬೀರಿ, ಯುದ್ಧಕ್ಕೆ ಅಪ್ಪಣೆ ಕೊಡಬೇಕೆಂದು ನಿಂತಿರುವ ರಾಜಪುತ್ರನಾದ ಮರಾಳಧ್ವಜನನ್ನು ಮಂತ್ರಿಗಳು ನೋಡಿ "ನೀನು ಹುಡುಗ! ರಾಮಲಕ್ಷ್ಮಣರು ಸಾಮಾನ್ಯರೇ? ಸಮರ್ಥರಾದ ಖರಧೂಷಣರನ್ನು ಕೊಂದು ವಿರಾಧಿತನಿಗೆ ಪಾತಾಳಲಂಕೆಯನ್ನು ಕೊಡಿಸಿದರು. ಮಹಾಶೂರನಾದ ವಾಲಿಯನ್ನು ವಧಿಸಿ ಸುಗ್ರೀವನಿಗೆ ಪಟ್ಟಕಟ್ಟಿದರು. ಈಗ ಲಂಕೆಗೆ ಹೋಗಿ ದಶಕಂಠನನ್ನು ಜಯಿಸಿ ಸೀತಾದೇವಿಯನ್ನು ಕರೆದುತರುವುದಕ್ಕಾಗಿ ಈಮಾರ್ಗ ದಲ್ಲಿ ಬಂದಿಧಾರೆ. ಸಮುದ್ರರಾಜನು ಹೆಣಗಾಡಿ ತನ್ನ ಹೆಣ್ಣು ಮಕ್ಕಳನ್ನು ಲಕ್ಷ್ಮಣನಿಗೆ ಅರ್ಪಿಸಿದನು. ನಾವು ಶ್ರೀರಾಮನ ಸೇವಕಾಳಿಗಳಾಗಿರಬೇಕು"

ಎಂದು ಶ್ರೀಧರಮಂತ್ರಿಯು ಹೇಳಲಾಗಿ ಮರಾಳಧ್ವಜನು ಹಾಸ್ಯಮಾಡಿ ನಕ್ಕು "ನಮ್ಮ ಹೆಣ್ಣು ಮಕ್ಕಳನ್ನು ಕೊಟ್ಟು ರಾಜ್ಯವಾಳುವುದಕ್ಕೆ ನಾವೇನು ಅಸಮರ್ಥರಲ್ಲ? ನಮ್ಮ ವಂಶವೂ ಅಂಥಾದ್ದಲ್ಲ. ನಾನೊಬ್ಬನೇ ಸಾಕು! ದೊಣ್ಣೆತೆಗೆದುಕೊಂಡು ಮಡಕೆಗಳನ್ನು ಒಡೆಯುವ ಹಾಗೆ ಆ ದಂಡಿಗೆ ನುಗ್ಗಿ ನಾಯಿಕುರಿಗಳನ್ನು ದಿಕ್ಕಾಪಾಲಾಗಿ ಓಡಿಸುವ ಹಾಗೆ, ಓಡಿಸಿ ವೃಷಭರಾಜನಂತೆ ತಲೆ ತೂಗುವ ಸ್ವಭಾವ ನನ್ನದು. ನನ್ನ ಯೋಗ್ಯತೆ ನಿನಗೆ ಗೊತ್ತಿಲ್ಲ. ಈಗ ನೀನು ಏಳು. ನನ್ನನ್ನು ದಂಡಿನಲ್ಲಿ ನುಗ್ಗಿ ಹೇಗೆ ಬರುತ್ತಾನೆಂಬುದನ್ನು ನೋಡುವಿ" ಎಂದು ಹೇಳಿ, ತಾನು ಹೊರಡಲು ಆರತಿ ಮಾಡಬೇಕೆಂತ ಘರ್ಜಿಸಲು ವೇಶ್ಯಾಸ್ತ್ರೀಯರು ಬಂದು ಇವನ ಶೌರ್ಯಗಾನಮಾಡುತ್ತ ಆರತಿಮಾಡಲು ಮರಾಳಧ್ವಜನು ಶ್ರೀಧರನನ್ನು ಕುರಿತು, "ಈ ಮಂಗಳವಾಚಕಗಳನ್ನು ಕೇಳು" ಎನ್ನುತ್ತಾ ಆತನ ಕೈಹಿಡಿದೆಳೆದು "ದಂಡುನಿಂತಿರುವ ಸ್ಥಳವನ್ನು ತೋರಿಸು" ಎನಲು ಮಂತ್ರಿಯಾದ ಶ್ರೀಧರನು ಬಿಡಾರವನ್ನು ತೋರಿಸುತ್ತಾ ಮುಂದೆ ನಡೆಯಲು, ಮರಾಳನು "ಅದೇನು? ಎತ್ತರವಾಗಿ ಹೊಳೆಯುವುದು" ಎಂದು ಕೇಳಲಾಗ ಶ್ರೀಧರನು "ಇದು ಶ್ರೀರಾಮನು ಕೂತಿರುವ ಮುಂದುಗಡೆ ವಿನೋದಕ್ಕಾಗಿ ಸೇನೆಯವರು ಕತ್ತಿಗಳನ್ನು ಗೋಪುರಾಕಾರವಾಗಿ ನಿಲ್ಲಿಸಿದ್ದಾರೆ. ಯುದ್ಧಕ್ಕೆ ಹೊರಟಾಗ ಪದಾತಿಗಳು ತಮ್ಮ ತಮ್ಮ ಕತ್ತಿಗಳನ್ನು ಅವರವರು ತೆಗೆದುಕೊಳ್ಳುತ್ತಾರೆ" ಎಂದು ಹೇಳಲು, ಮರಾಳನು "ಇಷ್ಟು ಕತ್ತಿಗಳನ್ನೆತ್ತಿತೆಗೆದುಕೊಂಡು ಪದಾತಿಗಳು ಎಲ್ಲಿಗೆ ಹೋಗುತ್ತಾರೆ?" ಎಂದು ಕೇಳಲು, ಮಂತ್ರಿಯು ನಮ್ಮ ಪಟ್ಟಣಕ್ಕೆ ನುಗ್ಗುತ್ತಾರೆನಲು ಮರಾಳನು ಹಿಂತಿರುಗಿಹೊರಟನು. ಮಂತ್ರಿಯು ಯಾಕೆಂದು ಕೇಳಲು, ನೀವೆಲ್ಲಾ ಬುದ್ಧಿಹೀನರು. ನಾನು ತಂದೆ ಹತ್ತಿರ ಹೋಗಿ ಹೇಳುತ್ತೇನೆಂದನು. ಅದಕ್ಕೆ ಮಂತ್ರಿಯು "ಏನು ಹೇಳುತ್ತೀ" ಎನಲು "ರಾಮನು ಬಲಿಷ್ಠ. ಅವನಕೂಡ ಯುದ್ಧಮಾಡತಕ್ಕದ್ದಲ್ಲ" ಎಂದನು. ಮಂತ್ರಿಯು ಆಗಬಹುದೆಂದು ಹಿಂದಿರುಗಿದನು. ರಾಜನು ಮಗನ ಮಾತಿಗೆ ನಕ್ಕು ಆಗಬಹುದೆಂದನು. ಆಗ ರಾಜನಾದ ಇಭಕೇತುವು ಶ್ರೀರಾಮನ ಸನ್ನಿಧಿಗೆ ತಕ್ಕ ಸಾಮುಗ್ರಿಗಳೊಡನೆ ಬಂದು ನಮಸ್ಕರಿಸಲು ಉದಾರ ಚರಿತನಾದ ರಾಮನು ಇಭಕೇತುವನ್ನು ಮನ್ನಿಸಿ ಅರ್ಹತ್ಪರಮೇಶ್ವರನನ್ನು ಅನುಕಾಲವೂ ಭಜಿಸುತ್ತಿದ್ದನು.

೫೫. ಲಂಕೆಗೆ ದಂಡು ನಡೆದದ್ದು

ಎಲೈ ಅಜಾತಶತೃವಾದ ಶ್ರೇಣಿಕನೇ! ಕೇಳುವನಾಗು—ಶ್ರೀರಾಮನು ಲಕ್ಷ್ಮಣ ಸುಗ್ರೀವ ಹನುಮಾದಿಗಳ ಕೂಡ ಮುಂದಕ್ಕೆ ಸಮುದ್ರದ ಪಕ್ಕದಲ್ಲಿ ಬೀಡುಬಿಟ್ಟು, ಸಮುದ್ರವನ್ನು ದಾಟುವುದಕ್ಕೇನು ಪ್ರಯತ್ನ ಮಾಡಬೇಕೆಂದು ಜಾಂಬವಾದಿಗಳನ್ನು ಕೇಳಲು, ಖಚರಸೇನೆಯು ಅಂತರೀಕ್ಷ ಮಾರ್ಗದಲ್ಲಿ ಹೋಗಬಹುದು, ಭೂಚರಸೇನೆಗೆ ಸೇತುವೆ ಮಾಡಬೇಕೆಂದು ಅರಿಕೆಮಾಡಲು ರಾಮನು ಇದಕ್ಕೆ ಅನುಮತಿಕೊಡಲು, ಖೇಚರ ಭೂಚರರೆಲ್ಲ ಕರಿಕಲ್ಲು ಮತ್ತು ವೃಕ್ಷಗಳನ್ನು ಹೊತ್ತುತಂದು ಸಮುದ್ರ ಮಧ್ಯದಲ್ಲಿ ಹಾಕುತ್ತಾ ಲಂಕಾದ್ವೀಪ ದವರಿಗೆ ಉದ್ದಕ್ಕೂ ಭೂಮಿಯಂತೆ ನಡೆದು ಹೋಗಲು ಸೇನೆಗೆ ಅನುಕೂಲ ವಾಗುವಂತೆ ಸೇತುವೆ ಆಕಾರದಲ್ಲಿ ಭೂಪ್ರದೇಶವನ್ನು ಮಾಡಿದ ನಂತರ ಶ್ರಮ ವಿಲ್ಲದೆ ಸೇನೆಗಳೆಲ್ಲ ಲಂಕಾದ್ವೀಪದ ಮುಖಪ್ರವೇಶ ಮಾಡಿದವು. ಖಚರ ಸೇನೆ ಯು ಆಕಾಶಮಾರ್ಗದಲ್ಲಿ ಹಾರುತ್ತಾ ಲಂಕಾದ್ವೀಪದ ಗಡಿಪ್ರದೇಶ ಮುಟ್ಟಿದ ನಂತರ ಸುಗ್ರೀವಾದಿಗಳು ಸೇನೆಯ ನಿಲ್ಲುವಿಕೆಗೆ ಉಚಿತಾ ವಾಸಸ್ಥಳಗಳನ್ನು ಮಾಡಿ ರಾಘವರಿಗೆ ದಾರುವಿನಿಂದ ವಿಚಿತ್ರವಾದ ಅರಮನೆಯನ್ನು ಮಾಡಿ ಶ್ರೀರಾಮಲಕ್ಷ್ಮಣರನ್ನು ಅಲ್ಲಿರುವಂತೆ ಮಾಡಿದರು. ಅಷ್ಟರಲ್ಲಿ ಲಂಕಾ ಗಡಿ ಪ್ರದೇಶದಲ್ಲಿದ್ದ ಖಚರಾಸುರರು ರಾಮಸೇನೆಯ ಮೇಲೆ ಯುದ್ಧಕ್ಕೆ ನಿಂತು ಬಹ ಳವಾಗಿ ತೊಂದರೆ ಕೊಟ್ಟರೂ ಆಗ ನಳ ನೀಲಾದಿಗಳು ಅವರನ್ನು ಹೊಡೆದು ಓಡಿಸಲು ಗಡಿಪ್ರದೇಶದವರ ರಾಜನಾದ ಸೂರ್ಯಹಾಸನು ಉಪಾಯನ ದ್ರವ್ಯಗಳನ್ನು ತಂದು ಶ್ರೀರಾಮನ ಪಾದಕ್ಕೆ ನಮಸ್ಕರಿಸಿ ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ಶ್ರೀರಾಮನು ಆತನಿಗೆ ತಕ್ಕ ಸನ್ಮಾನವನ್ನು ಮಾಡಿ ಸಂತೈಸಿದನು. ಅನಂತರ ಶ್ರೀರಾಮನು ಜಿನೇಶ್ವರರ ಪಾದ ಪದ್ಮವನ್ನು ತ್ರಿಕಾಲದಲ್ಲೂ ತ್ರಿಕರಣಶುದ್ಧಿಯಿಂದ ಲಕ್ಷ್ಮಣನೊಡನೆ ಭಜಿಸುತ್ತಿದ್ದನು.

೫೬. ಪ್ರಾಕಾರೋದ್ಘಾಟನ.

ಗೌತಮ ಸ್ವಾಮಿಗಳು ಶ್ರೇಣಿಕನಿಗೆ ಮುಂದಲ ಕಥಾನುಸರಣೆಯನ್ನು ಹೇಳಲುಪಕ್ರಮಿಸಲಾಗ ಶ್ರೇಣಿಕನು ಭಕ್ತಿಭರದಿಂದ ಕೇಳಲು ಸಿದ್ಧನಾದನು. ಆ ಬಿಡಾರದಲ್ಲಿ ರತ್ನಖಚಿತವಾದ ಸಿಂಹಾಸನದಮೇಲೆ ರಾಮದೇವರು ಕೂತು ಕೊಂಡು ಲಕ್ಷ್ಮಣನೊಂದಿಗೆ ಮುಂದಿನಮಾತುಗಳನ್ನಾಡುತ್ತಿರಲು ಸುಗ್ರೀವಾದಿ

ಗಳು ಕುತೂಹಲದಿಂದ ಕೇಳುತ್ತಿರಲಾಗ ಅಭ್ರಮಾರ್ಗದಿಂದ ವಿದ್ಯಾಧರರ ಬಲವು ಇಳಿಯುತ್ತಿರಲು ರಾಮನು ಇವರ್ಯ್ಯಾರೆಂದು ಸುಗ್ರೀವನನ್ನು ಕೇಳಲು ಆವನು ಅಂತರೀಕ್ಷದಿಂದಿಳಿದ ವಿದ್ಯಾದೇವಿಯರ್ಯ್ಯಾರೆಂದು ಕೇಳಲು ಅವರಲ್ಲಿ ಒಬ್ಬಳು ಹೇಳಲು ಅನುವಾದಳು. ಏನೆಂದರೆ ದಧಿಮುಖಕ್ಕೆ ಗಂಧರ್ವನೆಂಬ ರಾಜನು ಖಚರಾಧಿಪತಿಯಾಗಿಧಾನೆ- ಆತನಿಗೆ ಸರಸತಿ ಎಂಬುವಳು ಕಾಂತೆ ಯಾದಳು. ಆ ಈರ್ವರಿಗೆ ಚಿತ್ರಲೇಖೆ, ವಿದ್ಯುತ್ಪ್ರಭೆ, ಅನಂಗಮಾಲೆ ಎಂಬ ಮೂರು ಹೆಣ್ಣು ಮಕ್ಕಳು ಆದರು- ಅವರಲ್ಲಿ ಚಿತ್ರಲೇಖೆ ಎಂಬವಳೇನಾನು. ನಾವು ವಿದ್ಯಾಸಾಧನಪರರಾಗಿ ತುಂಗಪರ್ವತದಲ್ಲಿದ್ದಾಗ ಮಹರ್ಷಿಗಳೊಬ್ಬರು ಅಲ್ಲಿಗೆ ಬಿಜಯಂಗೈದರು. ನಾನು ಅವರನ್ನು ಕುರಿತು ನಮಗೆ ಯಾರು ಪತಿ ಯಾಗುತ್ತಾರೆಂದು ಕೇಳಲು ಅವರು ವಾಲಿಯನ್ನು ಸಂಹರಿಸಿದವನು ಪತಿ ಯಾಗುತ್ತಾನೆಂದು ಹೇಳಿದ್ದರಿಂದ ನಾವು ಆತನನ್ನು ಪತಿಯಾಗಿ ವರಿಸಿ ಯುದ್ಧ ಸಹಾಯಾರ್ಥವಾಗಿ ಬಂದಿರುವುದಾಗಿ ಹೇಳಿದರು. ಆಗ ರಾಮನು ಅವರನ್ನು ಬರಮಾಡಿಕ್ಕೊಂಡು ಉಚಿತಾಸನ ಸನ್ಮಾನಗಳಿಂದ ಸ್ವಾಗತಿಸಿದನು. ಸಕಲ ಸೇನಾದವರೂ ಆ ವಜ್ರವೇದಿಕೆಯನ್ನು ಒಡೆದು ಹೇಗೆ ಪುರಪ್ರವೇಶ ಮಾಡಬೇಕೆಂತ ನಿರೀಕ್ಷಿಸುತ್ತಿರುವಾಗ ಮಾರುತಿಯು ವಜ್ರದಂಡದಿಂದ ಕೆಡು ಹಲು ಪ್ರಾರಂಭಿಸುತ್ತಲೇ ಧನುಜ ಸೇವಕರು ಮಾರುತಿಯ ಮೇಲೆ ಆಯುಧ ಗಳನ್ನು ಎಸೆದು ಜಗಳಕ್ಕೆ ಬರಲು ಇವನು ಅವರನ್ನು ಹೊಡೆದು, ನೂಕಿ ಹಿಂದಕ್ಕೆ ಅಟ್ಟಲು ಅವರು ಭೀತರಾಗಿ ಹಿಂದೆ ಸಾರುತ್ತಿರಲು ರಾಮಸೇನೆಯು ವೇದಿಯನ್ನು ದಾಟ ಮುಂದೆ ಮುಂದೆ ನಡೆಯುತ್ತಲಿದ್ದಿತು. ಇತ್ತಲು ಲಂಕಾ ಪುರಿಯಲ್ಲಿ ಮಧ್ಯಾಹ್ನ ಕಾಲದಲ್ಲಿ ಹೊಗೆಯಂತೆ ಕವಿದು ಸೂರ್ಯ ಕಿರಣದ ಪ್ರಭೆಯು ಮಂದಮಂದವಾದಂತೆ ಕಾಣುತ್ತಿತ್ತು. ಆಗಾಗ್ಯೆ ಭೂಮಿಯು ಕಂಪಿ ಸುತ್ತಿತ್ತು. ಹಗಲಿನಲ್ಲೇ ರಾಜ ಭಂಡಾರದಲ್ಲಿಯೂ, ಸೇನಾಸ್ಥಳದಲ್ಲಿಯೂ, ಅರಮನೆಯಲ್ಲಿಯೂ ಸ್ತ್ರೀಯರ ರೋಧನಗಳು ಕೇಳಲ್ಪಡುತ್ತಿತ್ತು. ಅರಮನೆ ಯಲ್ಲಿಟ್ಟಿರುವ ಕುಲದೇವರ ಮುಂದೆ ಉರಿಯುತ್ತಲಿದ್ದ ರತ್ನದೀಪಗಳು ಆರಿ ಆರಿ ಹತ್ತಿ ಉರಿಯುತ್ತಲಿದ್ದವು. ಈ ಉತ್ಪಾತಗಳನ್ನು ಪ್ರಜೆಗಳು ನೋಡಿ ಕಳವಳ ಪಡುತ್ತಿದ್ದರು. ಇದನ್ನೆಲ್ಲಾ ರಾವಣನು ತಿಳಿದರೂ ಆಡಂಬರವಾಗಿಯೇ ಇದ್ದನು. ವಿಭೀಷಣನು ನೋಡಿ ಅಣ್ಣನು ಮಾಡಿದ ದುಷ್ಕರ್ಮಕ್ಕೆ ಈ ದುಶ್ಶಕುನಗಳಾಗುತ್ತಿವೆಯೆಂದು ತಿಳಿದುಕೊಂಡನು. ಕುಂಭಕರ್ಣ, ಇಂದ್ರಜಿತು

ಮೊದಲಾದವರು ವಿಚಾರಮಾಡತೊಡಗಿದರು- ಗಡಿಯಲ್ಲಿದ್ದ ರಾಕ್ಷಸ ಖಚರರು ರಾಮಸೇನಾಪ್ರವೇಶವನ್ನು ರಾವಣನಿಗೆ ತಿಳಿಸಿದ್ದರೂ ತಾವೇ ಈ ಪರಬಲವನ್ನು ಓಡಿಸಬೇಕೆಂದು ನಾನಾವಿಧವಾಗಿ ಯುದ್ಧಮಾಡುತ್ತಲಿದ್ದರು. ಮಾರುತಿಯು ಸೇವಕಾಳಿಗಳ ತಲೆಯನ್ನು ಕತ್ತರಿಸಿ, ಲಂಕಾಪಟ್ಟಣದ ರಾಜನಾದ ರಾವಣನ ಮುಂದೆ ಹಾರಿ ಬೀಳುವಂತೆ ಬಿಲ್ಲಿನಿಂದ ಎಸೆಯುತ್ತಿದ್ದನು- ಖಚರಾಳಿಗಳು ಮಾರುತಿಗೆ ನೀವು ಬಂದಿರುವ ಸಮಾಚಾರವನ್ನು ರಾಕ್ಷಸರಾಜನಿಗೆ ತಿಳಿಸೆನ್ನಲಾಗ ನೀವೇ ಓಡಿಹೋಗಿ ತಿಳಿಸುವ ಹಾಗೆ ಮಾಡುತ್ತೇನೆಂದು ಹೇಳುತ್ತ ಮುಂದೆ ಬರುತ್ತಲಿರುವ ರಾಕ್ಷಸರನ್ನು ಹೊಡೆದಟ್ಟಿ ಕಳುಹಿಸುತ್ತಿದ್ದನು. ಹಾಗಾದರೂ ರಾಕ್ಷಸರು ತಾನು ಮುಂದು ನಾನು ಮುಂದು ಎಂಬುದಾಗಿ ಮಾರುತಿಯ ಮತ್ತು ಮುಂದಿರುವ ಸೇನೆಯಮೇಲೆ ಬೀಳುತ್ತಲಿದ್ದರು. ಮಾರುತಿಯು ಅವರನ್ನು ಲೀಲಾಜಾಲವಾಗಿ ಓಡಿಸುತ್ತಾ ಜಿನೇಶ್ವರರ ಚರಣ ಕಮಲಗಳನ್ನು ಮನದಲ್ಲಿ ಸ್ಮರಿಸುತ್ತಲಿದ್ದನು.

೫೭. ಮಾರುತಿ ನೀತಿ.

ರಾಜನಾದ ಮಗಧೇಶ್ವರನೇ! ಕೇಳುವನಾಗು—ಶ್ರೀರಾಮನು ವಾಸುದೇವನೊಡನೆ ಆಸ್ಥಾನದಲ್ಲಿ ಕೂತುಕೊಂಡಿರಲು, ವಿದ್ಯಾಂಗನೆಯರು ರಾಮಲಕ್ಷ್ಮಣರ ಕೀರ್ತಿಯನ್ನು ಹಾಡುತ್ತಲಿರುವಾಗ ಸುಗ್ರೀವಾದಿಗಳು ರಾಮನ ಎಡಬಲದಲ್ಲಿದ್ದು "ನಾವು ರಾವಣನಿಗೆ ಸೀತಾದೇವಿಯನ್ನು ಕಳುಹಿಸು ಕೊಡು; ಇಲ್ಲದಿದ್ದರೆ ಯುದ್ಧಕ್ಕೆ ಸನ್ನದ್ಧನಾಗು ಎಂಬುದನ್ನು ಹೇಳಿಕಳುಹಿಸುವುದು ರಾಜನೀತಿಯಲ್ಲವೇ?" ಎಂದು ರಾಮನಿಗೆ ಅರಿಕೆಮಾಡಲು, ಶ್ರೀರಾಮನು ಲಕ್ಷ್ಮಣನೇ ಮೊದಲಾದವರ ಕೂಡ ಯೋಚಿಸಿ, ಸಂದೇಶವನ್ನು ಕಳುಹಿಸಬಹುದೆಂದು ನಿಶ್ಚಯಿಸಿದರು. ಲಂಕಾಪಟ್ಟಣಕ್ಕೆ ಅಂಗದನನ್ನು ನೀಲನನ್ನು ಕಳುಹಿಸಬೇಕೆಂದು ಸಭೆಯವರು ಯೋಚಿಸುತ್ತಿರುವಲ್ಲಿ ವಿಚಾರಪರನಾದ ರಾಮನು ದಶಕಂಠನಿಗೆ ಹೇಳ್ವಿಕೆಯನ್ನು ಮಾರುತಿಯ ಮೂಲಕ ತಿಳಿಸುವುದು ಒಳ್ಳೆಯದೆಂದು ಸೂಚಿಸಲಾಗಿ ಸಕಲರೂ ಏಕ ಕಂಠತೆಯಿಂದ ಒಪ್ಪಲಾಗ ಮಾರುತಿಯನ್ನು ದಶಾನನ ಸಮೀಪಕ್ಕೆ ಸೀತಾದೇವಿಯ ಬಿಡುವಿಕೆಗಾಗಿ ಕಳುಹಿಸಿದರು.

ಮಾರುತಿಯು ರತ್ನಸಿಂಹಾಸನಾಧೀಶ್ವರನಾದ ದಶಾನನನು ಕುಂಭಕರ್ಣ ಇಂದ್ರಜಿತು, ವಿಭೀಷಣ, ಮಾರೀಚ, ಹಸ್ತ, ಪ್ರಹಸ್ತರೇ ಮೊದಲಾದವರ

ಮಧ್ಯದಲ್ಲಿ ಕೂತು ಸಂತೋಷವಾಗಿ ಗಾನವನ್ನು ಕೇಳುತ್ತಿರುವಾಗ ಮಾರುತಿಯು ಈ ಸಭಾಪ್ರವೇಶಮಾಡಲಾಗ ಮಾರೀಚನು ಮಾರುತಿಯನ್ನು ಸ್ವಾಗತಿಸಿ ರಾಜಾಧಿರಾಜನಾದ ರಾವಣನು ಕೂತಿರುವ ಸಿಂಹಾಸನದ ಎದುರಿಗೆ ಭದ್ರಾಸನದಲ್ಲಿ ಕುಳ್ಳಿರಿಸಿದನು. ಆಂಜನೇಯನು ಮಾರೀಚಾದಿಗಳಿಗೆ ಹೇಳಲುದ್ಯುಕ್ತನಾದನು. ಏನೆಂದರೆ– "ನಮ್ಮ ಮಾವನವರಾದ ಲಂಕಾದೀಶ್ವರರು ರಾಮದೇವರ ಸತಿ ಸೀತಾ ಅಮ್ಮನವರನ್ನು ಶ್ರೀರಾಮನಿಗೆ ವಂಚಿಸಿ ಲಂಕೆಗೆ ತೆಗೆದುಕೊಂಡು ಬಂದರೆಂತ ಕೇಳಿದೆನು. ಇದು ನಿಶ್ಚಯವೇ ?" ಎಂದು ಕೇಳಲಾಗ ದಶಾನನನು ಹೌದೆಂದನು. ಆಗ ಆಂಜನೇಯನು ನ್ಯಾಯವನ್ನು ಪಾಲಿಸುವ ಪ್ರಭುಗಳು ಈ ಅನ್ಯಾಯ ಕೆಲಸಗಳನ್ನು ಮಾಡಬಾರದು. ಇದರಿಂದ ಇಹಪರಕ್ಕೆ ಕೇಡುಂಟಾಗುವುದೆಂದು ಹೇಳಲಾಗ ಮಾರೀಚನೆದ್ದು "ಚಕ್ರವರ್ತಿಗೆ ಶ್ರೇಷ್ಟವಾಗಿರತಕ್ಕ ಎಲ್ಲಾ ವಸ್ತುಗಳೂ ಸೇರತಕ್ಕವಾಗಿವೆ. ಸೀತಾದೇವಿಯು ರೂಪವತಿಯಾದ್ದರಿಂದ ಲಂಕಾಧೀಶರಿಗೆ ಅವಳು ಸೇರತಕ್ಕದ್ದು ನ್ಯಾಯವಾಗಿದೆ. ರಾಜರು ತಮಗೆ ಇಷ್ಟವಾದ ವಸ್ತುಗಳನ್ನು ಯಾವ ರೀತಿಯಿಂದಲಾದರೂ ಹೊಂದಬಹುದು" ಎಂದುಹೇಳಲಾಗ, ಹನುಮಂತನು ಮಾರೀಚನನ್ನು ಧಿಕ್ಕರಿಸಿ "ದಶಾನನನಿಗೆ ಆಗಿರುವ ವಾಲಿಯ ತಂಗಿಯಾದ ಶ್ರೀಮಾಲೆಯು ಜಾನಕಿಗಿಂತ ರೂಪುವಂತಳಾಗಿಲ್ಲವೇ? ಲಂಕಾಧಿಪತಿಯಾದ ದಶಾನನನ ಅಂತಃಪುರದಲ್ಲಿ ಸಾವಿರಗಟ್ಲೆ ಸುಂದರ ಸ್ತ್ರೀಯರಿಲ್ಲವೇ? ಹೀಗಿರುವಲ್ಲಿ ರಾಮದೇವರ ಸತಿಯಾದ ಜಾನಕಿಯವರನ್ನು ಮೋಹಿಸಿದ್ದು ಬಹಳ ತಪ್ಪಾಗಿದೆ! ಈಗಲಾದರೂ ರಾಮದೇವರಿಗೆ ಸೀತಾಮ್ಮನವರನ್ನು ಒಪ್ಪಿಸಿ ಶರಣಾಗತನಾಗುವುದು ಲಂಕಾರಾಜ್ಯಕ್ಕೆ ಭೂಷಣವಾದದ್ದು" ಎಂದು ಹೇಳಲಾಗ ದಶಾನನ ಕಣ್ಣುಗಳು ಕೆಂಪುವರ್ಣವಾದವು. ತುಟಿಗಳು ಅದರಿದವು. ಆಗ ದಶಾನನನು "ಎಲಾ ಹನುಮಾ! ನೀನು ಹೇಳುವ ರೀತಿಯು ರಾಜಧರ್ಮಕ್ಕೆ ವಿರುದ್ಧವಾದುದು- ಚಕ್ರವರ್ತಿಗಳು ಇತರರಲ್ಲಿರತಕ್ಕ ಶ್ರೇಷ್ಟವಸ್ತುಗಳನ್ನು ತೆಗೆದುಕೊಂಡು ಬರುವುದೇ ನ್ಯಾಯ! ರಾಮನು ತನ್ನ ಹೆಂಡತಿಯನ್ನು ಕಾದುಕೊಂಡು ಇರಬಹುದಾಗಿತ್ತು. ತನ್ನ ಹೆಂಡತಿಯ ಮೇಲೆ ಸ್ಮರಣೆಯಿಲ್ಲದ ರಾಮನ ಕಥೆಯನ್ನು ಏನು ಹೇಳುತ್ತೀಯೇ? ಜಾನಕಿಯನ್ನು ನಾನು ಎಷ್ಟು ಮಾತ್ರವೂ ಕಳುಹಿಸತಕ್ಕವನಲ್ಲ! ಅವನು ಯುದ್ಧಕ್ಕೆ ಬಂದು ಪ್ರಾಣವನ್ನು ಒಪ್ಪಿಸಿ ಹೋಗಲೀ" ಎಂದು ಹೇಳುತ್ತಿರುವಾಗ ಇಂದ್ರಜಿತುವು ಎದ್ದು "ಎಲೋ ಬಂಧುದ್ರೋಹಿ!

ನಿನಗೆ ರಾಮನು ಪ್ರಭು; ಅವನಿಗೆ ನೀನು ಸೇವಕನು. ಒಡಯನನ್ನು ಹೊಗಳ ತಕ್ಕದ್ದು ಸ್ವಭಾವ. ನೀನು ಎದ್ದು ಆಸ್ಥಾನದಿಂದ ಹೊರಡುವನಾಗು. ದ್ರೋಹಿ ಯಾದ ನಿನ್ನ ಮುಖವನ್ನು ನೋಡಬಾರದು" ಎಂದನು. ಆಗ ಹನುಮನು ಕುಂಭಕರ್ಣನಿಗೆ ಈ ವಿಷಯವನ್ನು ತಿಳಿಸಲು, ಕುಂಭಕರ್ಣನು "ಅಣ್ಣನಿಗೆ ವಿರೋಧಿಸುವಂಥಾ ತಮ್ಮನು ನಾನಾಗಿಲ್ಲ. ಆತನು ಮಾಡಿದ್ದೇ ಸರಿಯಾದದ್ದು" ಎಂದು ಹೇಳಲಾಗ ವಿಭೀಷಣನನ್ನು ಕಂಡು ಮಾರುತಿಯು ಜಾನಕಿಯನ್ನು ಕಳುಹಿಸಬೇಕೆಂತ ಕೇಳಿದನು. ಆಗ ವಿಭೀಷಣನು "ನೀನು ಹೇಳತಕ್ಕ ಮಾತು ಹಿತಕರವಾದದ್ದು. ಸತ್ಯವಾದದ್ದು. ಸಂಸ್ಥಾನಪತಿಯಾದ ಹಿರಿಯಣ್ಣನು ಜಾನ ಕಿಯನ್ನು ಅಗತ್ಯವಾಗಿ ಕಳುಹಿಸಬೇಕು. ಇಲ್ಲದಿದ್ದರೆ ನಮ್ಮ ವಂಶವೇ ಹಾ ಳಾಗಿಹೋದೀತು" ಎಂತಹೇಳಲಾಗ ಇಂದ್ರಜಿತುವು "ರಾಮನು ಎಷ್ಟುಮಾತ್ರ ದವನು. ಲಕ್ಷ್ಮಣನು ಬುದ್ಧಿಯಿದ್ದರೂ ಅಣ್ಣಹೇಳಿದಂತೆ ನಡೆಯುತ್ತಲಿದ್ದಾನೆ ನೀನು ಶಾಸ್ತ್ರಜ್ಞನಾಗಿ ಯೋಗ್ಯನಾದ ತಮ್ಮನಾಗಿದ್ದುಕೊಂಡು ನಮ್ಮ ತಂದೆ ಯಾದ ರಾವಣನನ್ನು ದೂಷಿಸುವುದು ಸರಿಯಲ್ಲ" ಎಂದು ಹೇಳಲಾಗ ವಿಭೀ ಷಣನು ನಕ್ಕು ಅರ್ಹತ್ಪರಮೇಷ್ಠಿಗಳನ್ನು ಚಿತ್ತದಲ್ಲಿಟ್ಟು ಶಾಂತಭಾವದಿಂದ ಪಂಚಪರಮೇಷ್ಠಿಗಳಿಗೆ ನಮಸ್ಕರಿಸುತ್ತಲಿದ್ದನು.

೫೮. ವಿಭೀಷಣನು ಬಂದದ್ದು

ಕೇಳೈ ಶ್ರೇಣಿಕ ಮಹಾರಾಜನೇ! ಮಾರುತಿಯು ನಾನಾಪ್ರಕಾರವಾಗಿ ನ್ಯಾಯನೀತಿಗಳನ್ನು ವಿಭೀಷಣನಿಗೆ ಹೇಳಲಾಗಿ, ವಿಭೀಷಣನು ಅಣ್ಣನಿಗೆ ವಿಧೇ ಯನಾಗಿ ಹೇಳಿ ಸರಿಪಡಿಸುವುದಾಗಿ ಹೇಳಲು, ಮಾರುತಿಯು ಅಲ್ಲಿಂದ ಹೊರಟು ಸೇನಾಶಿಬಿರವನ್ನು ತಲಪಿ, ಶ್ರೀರಾಮನನ್ನೂ ಲಕ್ಷ್ಮಣನನ್ನೂ ಸಹ ಕಂಡು ನಮಸ್ಕರಿಸಿ, ದಶಮುಖನು ಸೀತಾಮ್ಮನವರನ್ನು ಕಳುಹಿಸಲು ಒಪ್ಪು ವುದಿಲ್ಲ- ಯುದ್ಧವನ್ನೇ ಕೋರುತ್ತಾನೆಂದು ಅರಿಕೆ ಮಾಡಲಾಗಿ ಲಕ್ಷ್ಮಣನು ನೀತಿಬಾಹಿರನಾದ ರಾವಣನಮಾತನ್ನು ಕೇಳಿ ಆಗ್ರಹಾವಿಷ್ಟನಾಗಿ, ನಳನೀಲಾ ದಿಗಳಿಗೆ ಯುದ್ಧಪ್ರಾರಂಭ ಪ್ರಯತ್ನವನ್ನು ಮಾಡಬೇಕೆಂದು ಆಜ್ಞಾಪಿಸುತ್ತಿ ದ್ದನು. ಇತ್ತ ವಿಭೀಷಣನು ಅಣ್ಣನ ನಡತೆಗೆ ಬಹಳವಾಗಿ ಅನುತಾಪವನ್ನು ಹೊಂದಿ, ಮರು ದಿವಸ ಸಭೆಗೆ ಹೋಗಿ ರಾವಣನ ಕಾಲು ಮೇಲೆ ಬಿದ್ದು "ಅಣ್ಣನೇ! ನೀನು ಪ್ರಜ್ಞಾಶಾಲಿ. ಪರನಾರೀ ಸಹೋದರನೆಂಬ ಬಿರುದನ್ನು

ಹೊಂದಿರುತ್ತೀ. ನಿನಗೆ ಬೇಕಾದ ಸೌಂದರ್ಯವತಿ ಸ್ತ್ರೀಯರಿಧಾರೆ. ಆ ಸೀತಾ ದೇವಿಯನ್ನು ರಾಮನಸಮೀಪಕ್ಕೆ ಕಳುಹಿಸಿ ಕ್ಷಮೆಯನ್ನು ಕೇಳಿಕೋ" ಎಂದು ವಿನಯಾದಿ ಭಕ್ತಿ ಭರನಾಗಿ ಹೇಳುತ್ತಿರುವದನ್ನು ರಾವಣನು ಕೇಳಿ "ಎಲೈ ತಮ್ಮನೇ! ನಾನು ನಿನ್ನ ಅಣ್ಣನಾಗಿಧೇನೆ. ನೀನು ಪಿತೃ ಗೌರವದಿಂದ ನಾನು ಮಾಡಿದ್ದನ್ನೆಲ್ಲ ನೀನು ಸಮ್ಮತಿಹೊಂದಿ, ಸಹಾಯಮಾಡು. ಅದಕ್ಕೆಬದಲಾಗಿ ನೀನೇ ಶತೃಪಕ್ಷದ ಕೂಡ ಸೇರಿ ನನ್ನನಡತೆಯನ್ನು ಹೀಯಾಳಿಸುತ್ತೀ. ಕುಂಭ ಕರ್ಣನನ್ನು ನೋಡು. ಯಾವ ರೀತಿ ನನ್ನ ವಿಷಯದಲ್ಲಿರುತ್ತಾನೆಂಬುದನ್ನು ನೀನು ತಿಳಿದಿಕೋ. ನಾನು ಸೀತೆಯನ್ನು ಕಳುಹಿಸುವುದಿಲ್ಲ. ನನಗೆ ಯಾರು ಸೀತೆಯನ್ನು ಕಳುಹಿಸುವಂತೆ ಹೇಳುತ್ತಾರೋ ಅವರೇ ನನಗೆ ಪರಮ ಶತೃ ಗಳು. ನಾನು ನನ್ನ ಮನಃಕೋರಿಕೆಯಾದದ್ದನ್ನು ಅನುಭವಿಸದೆ ಬಿಡುವದಕ್ಕೆ ನಾನುದರಿದ್ರನಲ್ಲ. ಚಕ್ರವರ್ತಿಯಾಗಿಧೇನೆ. ನೀನು ಹುಡುಗ, ರಾಜನೀತಿಜ್ಞ ನಲ್ಲ. ನಾನು ಒಂದುವೇಳೆ ವಿಸ್ಮೃತಿಯಿಲ್ಲದೆ ಒಂದು ಕೆಲಸವನ್ನು ಮಾಡಿದರೂ ಅದು ಸ್ಥಿರವಾದದ್ದೇ ಸರಿ. ನನಗೆ ಹದಿನಾರು ಸಹಸ್ರ ಸ್ತ್ರೀಯರು ಪತ್ನಿಯಾ ಗಿಧಾರೆ. ಸೀತೆಗಿಂತಲೂ ಅಧಿಕವಾದ ಸೌಂಧರ್ಯವುಳ್ಳವರಿಧಾರೆ. ಆದರೆ ನಾನು ಆಕೆಯ ರೂಪಿಗೆ ಮನಸೋತೆನಾದ್ದರಿಂದ ರಾಜನಾದವನು ಯಾವ ರೀತಿ ಯಿಂದಲಾದರೂ ತನಗೆ ಬೇಕಾದ ವಸ್ತುವನ್ನುಪಡೆದುಕೊಳ್ಳಬಹುದು. ಶೌರ್ಯ ಇದ್ದರೆ ಯಾವ ಮಾರ್ಗದಿಂದಲಾದರೂ ತರಬಹುದು. ಅರಣ್ಯದಲ್ಲಿ ಸಿಂಹ ವನ್ನು ನೋಡು! ಅದು ಯಾವ ರೀತಿಯಿಂದಲಾದರೂ ಮೃಗಗಳನ್ನು ಹಿಡಿ ದುತರುತ್ತೆ. ಯಾವ ಮೃಗತಾನೇ ಸಿಂಹದ ಬಳಿಗೆ ಬಂದು ಅದರ ನಡತೆಯನ್ನು ಹೀಯ್ಯಾಳಿಸುವುದು. ಸಿಂಹದ ನಡತೆ ಹ್ಯಾಗಿದ್ದರೂ ಶೌರ್ಯ ಪ್ರದಾನದಿಂದ ನ್ಯಾಯವಾಗಿರುತ್ತೆ. ನೀನುರಸಜ್ಞನಲ್ಲ. ಯಾವ ಮನುಷ್ಯನಿಗೆ ಯಾವ ಪದಾ ರ್ಥವಿಷ್ಟವೋ ಅದನ್ನೇ ಸಾಧನೆ ಮಾಡುತ್ತಾನೆ. ನಿನ್ನಿಂದ ನಾನು ನೀತಿಯನ್ನು ತಿಳಿದುಕೊಳ್ಳಬೇಕಾದ್ದಿಲ್ಲ. ನ್ಯಾಯವೆಂಬುದು ಆಶ್ರಿತರಿಗೇ ಹೊರತು ಶ್ರೀಯು ತರಿಗಲ್ಲ. ನೀನು ರಾಮನನ್ನು ಬಹಳ ಸಮರ್ಥನೆಂದು ತಿಳಿದುಕ್ಕೊಂಡಿದ್ದೀಯೆ? ಅವನ್ಯಾವ ತರದವನು? ಮನುಷ್ಯಮಾತ್ರದವನು! ಸ್ತ್ರೀಯರಿಂದ ಹೇಳಿದ ಯಾವ ಮಾತನ್ನು ಅನುಸರಿಸತಕ್ಕದ್ದೋ ಅದೇ ಆತನಿಗೆ ತಿಳಿಯದು. ಕೈಕಿಲೆ ಯಮಾತಿಗೆ ಮರುಳಾಗಿ ವನದಲ್ಲಿ, ಬೇಡನಂತೆಯಿದ್ದರೂ, ಬೇಡನು ಕೂಡ ತನ್ನ ಹೆಂಡತಿಯನ್ನು ತನ್ನ ಜೊತೆಯಲ್ಲೇ ಇಟ್ಟು ಕೊಂಡಿರುತ್ತಾನೆ. ಈತನು

ಹೆಂಡತಿಯನ್ನು ಬಿಟ್ಟವನು. ಆತನಶೌರ್ಯವನ್ನು ಏನು ದೊಡ್ಡದೆಂದುತಿಳಿದು ಭಯಪಡುತ್ತೀಯೋ? ನನಗೆ ತಿಳಿಯದು!" ಎಂದು ಹೇಳಿದನು. ವಿಭೀಷಣನು ಅಣ್ಣನೇ! ನಾನು ಹೇಳುವ ಮಾತು ನಿನ್ನ ಮನಸ್ಸಿಗೆ ಹತ್ತಲೇ ಇಲ್ಲ. ನಾಳೆ ರಾಘವರು ಈ ಪಟ್ಟಣವನ್ನು ಹಾಳುಮಾಡಿ, ಜಯಿಸಿ, ಸೀತಾದೇವಿಯನ್ನು ಕರೆದುಕೊಂಡು ಹೋಗುತ್ತಾರೆ. ಧನುಜವಂಶವು ನಿರ್ಮೂಲವಾಗುತ್ತೆ. ಮೂರ್ಖಬುದ್ಧಿಯನ್ನು ಬಿಡು." ಎಂತ ಪುನಃ ಅಣ್ಣನ ಪಾದತಳದಲ್ಲಿ ಶಿರವನ್ನಿಡಲು ರಾವಣನು ಸ್ಮೃತಿಯಿಲ್ಲದಷ್ಟು ಕೋಪಿಸಿಕ್ಕೊಂಡು ವಿಭೀಷಣನನ್ನು ಒದ್ದು "ನೀಚನೇ! ತೊಲಗು. ನೀನು ಲಂಕಾಪಟ್ಟಣದಲ್ಲಿರಕೂಡದು. ರಾಮನ ಆಳಾಗಿರು" ಎಂದು ಆಸ್ಥಾನದಿಂದ ಹೊರಡಿಸಿ ಬಿಡಲು ವಿಭೀಷಣನು ತಾಯಿಯಾದ ಕೈಕಸಿ ಗೃಹಕ್ಕೆ ಹೋಗಿ ನಮಸ್ಕಾರಮಾಡಿ, ಅಣ್ಣನು ಹೇಳಿದ ವಿಷಯವನ್ನು ಅರಿಕೆ ಮಾಡಲು ತಾಯಿಯು ಮರುಗಿ ಎಲ್ಲಾದರೂ ಆಯುಷ್ಯವುಳ್ಳವನಾಗಿರೆಂದು ದುಃಖದಿಂದ ಹೊರಡಲು ಅಪ್ಪಣೆಕೊಟ್ಟಳು. ಈತನು ತನ್ನ ಪರಿವಾರದೊಡನೆಅಭ್ರಮಾರ್ಗದಿಂದ ರಾಮನಶಿಬಿರಕ್ಕೆ ಬರುತ್ತಿರಲು, ಆಂಜನೇಯನು ಕಂಡು ಎದುರಾಗಿ ಹೋಗಿ ಆತನಿಗೆ ನಮಸ್ಕರಿಸಿ ಶ್ರೀರಾಮದೇವರ ದರ್ಶನವನ್ನು ಮಾಡಿಸಲು, ವಿಭೀಷಣನು ರಾಮಲಕ್ಷ್ಮಣರಿಗೆ ನಮಸ್ಕರಿಸಲು ರಾಘವನು ವಿಭೀಷಣನಿಗೆ ಉಚಿತವಾದ ಪೀಠವನ್ನು ಕೊಡಿಸಿ ತಕ್ಕ ಸನ್ಮಾನಮಾಡಿ ಶ್ರೀಜಿನೇಶ್ವರರ ಪಾದಕಮಲಗಳನ್ನು ಧ್ಯಾನಮಾಡುತ್ತಿದ್ದನು.

೫೯. ಪೌಜನೊಡ್ಡಿದ್ದು

ಎಲೈ ಶ್ರೇಣಿಕ ಮಹಾರಾಜನೇ ಕೇಳುವನಾಗೈ! ದಶಕಂಠನು ತನ್ನ ತಮ್ಮನಾದ ವಿಭೀಷಣನು ಶ್ರೀರಾಮನ ಸೇವೆಗೆ ಸೇರಿಕ್ಕೊಂಡನೆಂದು ತಿಳಿದು "ಕಷ್ಟಕಾಲ ಬಂದೊದಗಿದರೆ ಸೋದರನು ಕೂಡ ಬಿಟ್ಟುಹೋಗುತ್ತಾನೆ" ಎಂಬ ಲೋಕೋಕ್ತಿಯು ನಿದರ್ಶನಕ್ಕೆ ಬಂದಿತೆಂದು ಯೋಚನಾಪರನಾಗಿದ್ದು ಉತ್ತರಕ್ಷಣದಲ್ಲಿಯೇ ಬಂದೊದಗಿರುವ ಯುದ್ಧಕ್ಕೆ ಗಮನವಿಟ್ಟು ಅಂತರದ್ವೀಪದ ಆಶ್ರಿತ ರಾಜರೆಲ್ಲರಿಗೂ ಬರುವಂತೆ ಹೇಳಿ ಕಳುಹಿಸಲಾಗ, ಮೇಘವಾಹನನೇ ಮೊದಲಾದ ರಾಜರು ದಳಸಮೇತರಾಗಿ ದಶಾನನನ ಪಟ್ಟಣಕ್ಕೆ ಬಂದು ಸೇರಿದರು. ರಾಕ್ಷಸರಾಜನ ಸೇನಾಬಲವು ಯುದ್ಧಕ್ಕೆ ಹೊರಡಲನುವಾಯಿತು. ಉಭಯಸೇನೆಗಳ ರಣಭೇರಿಯ ಧ್ವನಿಯು ದಿಗಂತವನ್ನು ಮು

ಟ್ಟುತ್ತಿರಲು ದಶಾನನನು ಶತೃಪಕ್ಷದವರೇನಾದರು ಸೀತಾದೇವಿಯನ್ನು ಕರೆದುಕೊಂಡು ಹೋದಾರೆಂಬಶಂಕೆಯನ್ನು ಹೊಂದಿ, ಸೀತಾಆವಾಸವಾದ ಉಪವನದಲ್ಲಿ ಶಕ್ತಿಧರಸೇನಾಶಿಬರವನ್ನು ತಂದು ಒಡ್ಡಿಸಿದನು. ಸೀತಾದೇವಿಯ ಮೇಲೆ ತುಂಬಾ ಉಸ್ತುವಾರಿಯನ್ನು ಮಾಡಿಸುವಂತೆ ಮಾರೀಚನಿಗೆ ಕಟ್ಟಪ್ಪಣೆಯನ್ನು ಕೊಟ್ಟನು. ಸಾಮಂತರಾಜರಾದ ಕನಕಕೇಶ, ಅಭ್ರಪುರೀಶ, ವ್ಯೋಮಸಿಂಧುಪುರೀಶ, ಹರಿಪುರೇಶ, ಶ್ರೀಶೈಲಚಕ್ರೇಶ; ಇಂದಿರಾಪುರೇಶ, ಗಂಧರ್ವೇಶರೇ ಮೊದಲಾದ ಅನೇಕ ರಾಜರು ತಮ್ಮಗಳ ದಳಸಮೇತ ರಾವಣನ ಪರವಾಗಿ ಕಾದಾಡುವದಕ್ಕೆನಿಂತರು. ಅನೇಕ ಆನೆ ಕುದುರೆ ರಥ ಪದಾತಿಗಳು ಎಣಿಸುವುದಕ್ಕೆ ಆಗದಷ್ಟು ಸಂಖ್ಯೆಯಲ್ಲಿ ಬಂದೊದಗಿದವು. ಪ್ರತಿಯೊಬ್ಬಯೋಧನೂ ಕೂಡ ರಾವಣನಂತೆ ರಾಮನ ದಳವನ್ನು ನಿರ್ಮೂಲವಮಾಡಿಬಿಡುವುದಾಗಿ ಆಡಂಬರದ ಮಾತಿನಿಂದ ಕೂಡಿದ್ದನು. ಇಂದ್ರಜಿತು ಕುಂಭಕರ್ಣ, ಹಸ್ತ ಪ್ರಹಸ್ತಾದಿಗಳು ತಮ್ಮ ಆಯುಧಗಳನ್ನು ತೆಗೆದುಕೊಂಡು ವಾಹನಾರೂಢರಾಗಿ ಯುದ್ಧಕ್ಕೆ ಹೊರಟರು. ಇತ್ತ ರಾಮಪಕ್ಷದವರಲ್ಲಿ ಅನೇಕರಾಜರುಗಳು ಯುದ್ಧಮಾಡುವುದಕ್ಕಾಗಿ ಸೇನಾಸಮೇತರಾಗಿ ಬಂದು ಕೂಡಿದರು. ಸುಗ್ರೀವನು ಸಾಮಂತರಾಜರಿಗೆಲ್ಲ ರಾವಣನ ದುಷ್ಟವರ್ತನೆಯನ್ನು ತಿಳಿಸಿ, ಆತನ ಪಕ್ಷವಾಗಿ ಬಂದಿರುವವರಿಗೆಲ್ಲಾ ನ್ಯಾಯನಿಷ್ಠತೆಯನ್ನು ತಿಳಿಸುತ್ತಾ ಪರಸ್ತ್ರೀಆಸಕ್ತನ ಪರವಾಗಿ ಯುದ್ಧ ಮಾಡುವದು ಅವಹೇಳನಕರವಾದುದೆಂದು ಒತ್ತಿಹೇಳುತ್ತಿರಲು—ರಾವಣನ ಮಂತ್ರಿಯಾದ ಮಾರೀಚನು ರಾವಣನಪಕ್ಷ ಸೇರಬೇಕೆಂದು ಹೇಳುತ್ತಿದ್ದನು. ಈ ಉಭಯ ಸೇನೆಗಳನ್ನು ನೋಡುವರ ಕಣ್ಣಿಗೆ ಎಷ್ಟು ದೂರ ನೋಡಿದರೂ ಶಿಬಿರದ ಕೊನೆಯು ಸಮುದ್ರದ ಕೊನೆಯಂತೆ ಕಾಣುತ್ತಿತ್ತು. ಮಾರುತಿಯು ರಾಕ್ಷಸರಸೈನ್ಯವನ್ನು ನೋಡಿ "ಯಾಕೆ? ಸಾಯುವುದಕ್ಕೆ ಬಂದಿರಾ?" ಎಂದು ಅಲ್ಲಗಳೆದನು. ಶ್ರೀರಾಮನು ಸೀತಾದೇವಿಯ ಆಗಮನಕ್ಕಾಗಿ ಇಷ್ಟು ಪ್ರಾಣಿಗಳು ನಾಶಹೊಂದುತ್ತೆಂದು ಬಹಳವಾಗಿ ಮುಖವಕುಂಚಿಸಿಕೊಂಡು ಶ್ರೀಜಿನೇಶ್ವರನನ್ನು ಸ್ಮರಿಸುತ್ತಿದ್ದನು.

೬೦. ಹಸ್ತನ ಜಗಳ.

ಗೌತಮ ಗಣಧರರು ಶ್ರೇಣಿಕನಿಗೆ ಮುಂದಣ ಕಥಾನಕವನ್ನು ಹೇಳುತ್ತಲೈ ಶ್ರೇಣಿಕನೇ! ಕೇಳುವನಾಗು--ಸೂರ್ಯನು ಈ ರಾಮ ರಾವಣರ ಯುದ್ಧ

ವನ್ನು ಕುತೂಹಲದಿಂದನೋಡಲು ಬರುತ್ತಾನೋ ಎಂದು ಸಾರುವದಕ್ಕಾಗಿ ಬಂದಂತೆ ಅರುಣನು ಉದಯಿಸುತ್ತಾ ಬಂದನಂತರ ಸೂರ್ಯನು ಉದಯ ಪರ್ವತದ ಮೇಲೆ ಹತ್ತಿ ಇಣಿಕಿ ನೋಡಲು ಪ್ರಯತ್ನ ಪಡುತ್ತಿರುವಾಗ ಶ್ರೀ ರಾಮನು ಲಕ್ಷ್ಮಣನೊಡನೆ ತ್ರಿಜಗತ್ಪತಿಯ ಆರಾಧನೆಯನ್ನು ಮರೆಯದೆ ಮಾಡಿ ಆಸ್ಥಾನ ಮಂಟಪಕ್ಕೆ ಬಂದು ರತ್ನಸಿಂಹಾಂಕಿತ ಪೀಠದಲ್ಲಿ ಕುಳಿತು ಸುಗ್ರೀವಾದಿಗಳನ್ನು ನೋಡುತ್ತಾ ಮುಂದಲ ಯುದ್ಧಮುಖದಲ್ಲಿ ಭಾಗಿಯಾಗಲು ಲಕ್ಷ್ಮಣನನ್ನು ನೋಡಲು, ಆತನು ಅಣ್ಣನ ಇಂಗಿತವನ್ನು ತಿಳಿದು ಆದಿವಸದ ಯುದ್ಧದಲ್ಲಿ ಯಾರು ಮುಂದೊರಿದು ನಿಲ್ಲತಕ್ಕದ್ದೆಂಬ ವಿಚಕ್ಷಣೆಯನ್ನು ಅಪ್ಪಣೆಕೊಡಿಸುತ್ತಿರುವಾಗ ಎದುರಾಳಿಯಾದ ರಾವಣನ ಪಕ್ಷದ ರಣಭೇರಿಯು ಧ್ವನಿಯಿಂದ ಕಿವಿಯನ್ನು ಬಧಿರಮಾಡಲು ದಶಕಂಠನ ಆಜ್ಞಾಸೂತ್ರವನ್ನು ಹಿಡಿದ ಹಸ್ತನು ಮುಂದಾಗಿ ಬಂದು ರಥದ ಮೇಲೆ ಧನುರ್ಬಾಣದಿಂದ ಭೂಷಿತನಾಗಿ ನಿಂತು ಸಿಂಹದಂತೆ ಘರ್ಜಿಸಿದನು. ಆತನ ಹಿಂದೆ ಪ್ರಹಸ್ತ, ಇಂದ್ರಜಿತು, ಮದಹಸ್ತ, ಘಟಕರ್ಣ, ಮಾರೀಚಾದಿ ಅತಿಬಲರೇ ಮೊದಲಾದವರು ವ್ಯೂಹವನ್ನು ರಚಿಸಿಕ್ಕೊಂಡು ನಿಂತರು. ಅತ್ತ ಎದುರಾಳಿ ಬಲದ ಮುಂಪಾರ್ಶ್ವದಲ್ಲಿ ಹಸ್ತನಿಗೆ ಎದುರಾಗಿ ನಳನು ರಥಾರೂಢನಾಗಿ ಕಪಿಧ್ವಜವೇಷ್ಟಿತನಾಗಿ ಆಯುಧಹಸ್ತನಾಗಿ ನಿಂತನು. ಆತನ ಹಿಂದೆ ನೀಲ, ಜಾಂಬವ, ಹನುಮ, ಸುಗ್ರೀವಾದಿಗಳು ವ್ಯೂಹವನ್ನು ರಚಿಸಿಕೊಂಡು ನಿಂತರು. ವಾನರಧ್ವಜಕ್ಕೂ ರಾಕ್ಷಸವಿದ್ಯೆಯರಿಗೂ ಕೈಕೈಗೂಡಿದವು. ಒಬ್ಬರೂಬ್ಬರು ತಮ್ಮ ತಮ್ಮ ಪ್ರಭಾವಗಳನ್ನು ಕೊಚ್ಚಿಕೊಳ್ಳುತ್ತಿದ್ದರು. ನಳನು ಹಸ್ತನ ಬಾಣಗಳಿಗೆ ಬಹಳವಾಗಿ ನೊಂದು ಈ ರಾಕ್ಷಸಸೇನೆಯ ನಾಯಕರಲ್ಲಿ ಈ ಒಬ್ಬನೇ ಇಷ್ಟು ಬಲವಂತನಾಗಿರುವಾಗ ಉಳಿದ ಸೇನಾಧಿಪರು ಎಷ್ಟು ಬಲಾಢ್ಯರೋ ತಿಳಿಯಬೇಕೆಂಬುದಾಗಿ ಸ್ವಲ್ಪಯೋಚಿಸುತ್ತಿರುವಾಗ ಹಸ್ತನು ಈ ವಾನರನಾಯಕನು ತನ್ನನ್ನು ನೋಡಿ ಹೆದರಿದನೆಂದು ಉತ್ಸಾಹಭರಿತನಾಗಿ ಸಿಂಹಧ್ವನಿಮಾಡುತ್ತಾ ಬಾಣದಮಳೆಯನ್ನು ನಳನ ಮೇಲೆ ಕರೆದನು. ನಳನು ಇದನ್ನು ನೋಡಿ "ಎಲೋ ಹಸ್ತ! ನಿನಗೆ ಕಾಲ ಸಮಿಾಪಿಸುತ್ತಲಿಧೆ. ಸ್ವರ್ಗಲೋಕದಸುಖವನ್ನು ನೆನೆಯುತ್ತಾ ಹರ್ಷನಾಗುತ್ತಲಿದ್ದೀಯಾ?" ಎಂದು ಎದುರುಬಾಣದಮಳೆಯನ್ನು ಹಸ್ತನ ಸರ್ವಾಂಗದ ಮೇಲೆಯೂ ಕರೆಯಲು ಹಸ್ತನು ವಸ್ತ್ರಾಭರಣದಿಂದ ವಿಮುಕ್ತನಾಗಿ ಬಾಣದ ಮೊನೆಯ ಚುಚ್ಚುವಿಕೆ

ಯಿಂದ ಸರ್ವಾಂಗದಲ್ಲೂ ವ್ರಣವುಂಟಾಗಿ ಬೆಂಡಾದನು. ಹಾಗಾದಾಗ್ಯೂ ಹಸ್ತನು ಬಹಳವಾದ ಕೋಪದಿಂದ ಈ ಬಾಣದಿಂದ ನಿನ್ನ ತಲೆಯನ್ನು ಹಾರಿ ಸುತ್ತೇನೆಂದು ಹೇಳುತ್ತಾ ನಳನ ಮೇಲೆ ದಾರುಣವಾದ ಬಾಣವನ್ನು ಬಿಟ್ಟನು ಅದು ನಳನನ್ನು ಮುಟ್ಟುವುದಕ್ಕಿಂತ ಮುಂಚೆಯೇ ನಳನ ಬಾಣವು ಆ ಬಾಣ ವನ್ನು ಖಂಡಿಸಿ ಹಸ್ತನ ತಲೆಯನ್ನು ತುಂಡು ಮಾಡಿ ಭೂಮಿಗೆ ತಳ್ಳಿತು. ಆಗ ರಾವಣನ ಸೇನೆಯಲ್ಲಿ ಚೀತ್ಕಾರವೂ, ರಾಮನ ಸೇನಾದಳದಲ್ಲಿ ಝೇಂ ಕಾರಧ್ವನಿಯೂ ಕೇಳಿಬಂದಿತು. ಅಷ್ಟರಲ್ಲಿ ಸೂರ್ಯನು ಈ ಯುದ್ಧವನ್ನು ನೋಡಿ ಸಾಕಾಗಿ ಪಶ್ಚಿಮ ಸಮುದ್ರಕ್ಕೆಬಿದ್ದನು. ನಳನು ಅರ್ಹತ್ಪರಮೇಶ್ವರರ ಪಾದಸ್ಮರಣೆಯನ್ನು ಮಾಡುತ್ತಾ ಸ್ತೋತ್ರಮಾಡುತ್ತಲಿದ್ದನು.

೬೧. ಪ್ರಹಸ್ತನ ಜಗಳ.

ಗೌತಮಗಣಧರಸ್ವಾಮಿಗಳು ಶ್ರೋತೃಮುಖ್ಯನಾದ ಮಗಧೇಶ್ವರನಾದ ಶ್ರೇಣಿಕ ಮಹಾರಾಜನಿಗೆ ಹೇಳಲುದ್ಯೋಗಿಸಿದರು. ಎಲೈ ಧರ್ಮಾತ್ಮನಾದ ಶ್ರೇಣಿಕ ಮಹಾರಾಜನೇ ಕೇಳುವನಾಗೈ— ದಶಕಂಠನ ಸೇನೆಯಲ್ಲಿ ಹಸ್ತನು ಅಳಿದನೆಂದು ಆತನ ಅಣ್ಣನಾದ ಪ್ರಹಸ್ತನು ಕೇಳಿದಕೂಡಲೇ ಇಹಲೋಕ ದಲ್ಲಿ ಕ್ಷಣಕಾಲವಿರಲೂ ಬೇಸರನಾಗಿ ಧನುಜ ಸೇನೆಯನ್ನು ಹುರಿದುಂಬಿಸಿ ಈ ದಿವಸ ನಳನನ್ನು ಸಂಹರಿಸದೇನೇ ಬಿಡುವನಲ್ಲ. ಈ ದಿವಸ ಪದ್ಮೇಶನು ಪಶ್ಚಿಮಸಮುದ್ರಕ್ಕೆ ಬೀಳುವುದಕ್ಕೆ ಮುಂಚೇನೆ ರಾಮಸೇನೆಯನ್ನು ಓಡಿಸಿದೆ ಬದುಕಲಾರೆನೆಂದು ಸರ್ವಾಯುಧಸನ್ನದ್ಧನಾಗಿ ವಾನರಧ್ವಜಸೈನ್ಯದ ಮುಂದೆ ಸಿಂಹನಾದ ಮಾಡಿದನು. ಇತ್ತಲು ರಾಮ ಲಕ್ಷ್ಮಣರು ಆ ದಿನದ ಅನುಷ್ಠಾನ ವನ್ನು ತೀರಿಸಿ ಆಸ್ಥಾನ ಮಂಟಪಕ್ಕೆ ಬಂದು ಭದ್ರಾಸನವೇಷ್ಟಿತರಾಗಿ ನೆನ್ನೆ ನಳನು ಜಯಶೀಲನಾಗಿ ಬಂದನು. ಈ ದಿವಸ ಪ್ರಹಸ್ತನು ಯುದ್ಧಕ್ಕೆ ಬರ ಬಹುದಾದ್ದರಿಂದ ನೀಲನನ್ನು ಯುದ್ಧಕ್ಕೆ ಅಗ್ರನಾಯಕನನ್ನಾಗಿ ಗೊತ್ತುಮಾಡಿ ಹನುಮಾದಿಗಳನ್ನು ಸಹಾಯಾರ್ಥವಾಗಿ ನಿಯಮಿಸಿ ಯುದ್ಧ ಪ್ರಾರಂಭಕ್ಕೆ ಅಪ್ಪಣೆಕೊಟ್ಟರು- ಅತ್ತಲೂ ದಶಮುಖನು ಓಲಗದಲ್ಲಿ ಕುಳುತಿರಲು ಆತನ ಸೇನಾನಾಯಕರೆಲ್ಲ ನಮಸ್ಕರಿಸಿ ಭಯಭಕ್ತಿಯುತರಾಗಿ ನಿಂತಿರಲು, ಮುಖ್ಯ ಸೇನಾನಾಯಕನು ದಶಕಂಠನಿಗೆ ಶಿರಸಾಷ್ಟಾಂಗವಾಗಿ ನಮಸ್ಕರಿಸಿ ನೆನ್ನೆ ನಡೆದ ಯುದ್ಧದಲ್ಲಿ ಸೇನಾನಾಯಕನಾದ ಹಸ್ತನು ನಳನಿಂದ ನಿರ್ಯಾಣ ಹೊಂದಿದನು.

ಮತ್ತು ಧನುಜಬಲವು ಬಹಳವಾಗಿ ನಾಶವಾಯಿತೆಂದು ಅರಿಕೆಮಾಡಲು ದಶಕಂಠನು ಈ ಮಾತನ್ನು ಕೇಳಿ ಯೋಚನಾಪರನಾಗಲಾಗ ಇಂದ್ರಜಿತು ಮತ್ತು ಕುಂಭಕರ್ಣರು ಇದನ್ನು ಕೇಳಿದೊಡನೆ ರೌದ್ರಾವತಾರವನ್ನು ತಾಳಿ ಘರ್ಜಿಸಲು ಸಭೆಯಲ್ಲಿದ್ದ ಸಾಮಾನಿಕರೇ ಮೊದಲಾದವರೆಲ್ಲಾ ಕಂಪಾಯಮಾನರಾಗಿ "ಹಸ್ತನೆಂದರೆ ಸಾಮಾನ್ಯನೇ? ಮಹಾಸಮರ್ಥನು! ಅಂಥಾವನು ಈ ಕ್ಷುಲ್ಲಕನಾದ ನಳನ ಯುದ್ಧಕ್ಕೆ ಸಿಕ್ಕಿ ಸ್ವರ್ಗಸ್ಥನಾದದು ಬಹಳ ಆಶ್ಚರ್ಯ" ವೆಂದು ಮಾತನಾಡುತ್ತಿರುವಾಗ, ದಶಕಂಠನು ಪ್ರಹಸ್ತನನ್ನು ನೋಡಲು ಆತನು ಸೈನ್ಯಾಭಿಮುಖನಾಗಿಧಾನೆಂದು ಮಂತ್ರಿಯು ಹೇಳಲು ಆತನಿಗೆ ಈ ದಿವಸದ ಪದಾತಿಪಟ್ಟವನ್ನು ಕೊಟ್ಟಿರುವದಾಗಿ ಅರುಹಿ ಚಿಂತಾವೇಷ್ಠಿತನಾಗಿ ಅಂತಃಪುರವನ್ನುಪ್ರವೇಶಿಸಿದನು- ಇತ್ತ ಪ್ರಹಸ್ತನು ವಾನರಧ್ವಜಸೇನೆಗಳನ್ನು ಕಡಿದು ಬಡಿದು ಓಡಿಸುತ್ತಿರಲು ನೀಲನು ತನ್ನ ಸೇನಾಬಲಕ್ಕೆ ಧೈರ್ಯಕೊಡುತ್ತ ಮುಂದೆ ಬಂದುನಿಂತು "ಎಲೈ ಪ್ರಹಸ್ತನೇ! ಯಾತಕ್ಕೆ ಪ್ರಾಣವನ್ನು ಬಿಡುತ್ತೀಯೇ? ಧರ್ಮಪರವಾದ ಚಿಂತೆಯನ್ನು ಮಾಡಿ ಪ್ರಾಣವನ್ನು ಬಿಡು. ಪರಲೋಕಕ್ಕಾದರೂ ಸಲ್ಲುವನಾಗು ಈ ರೀತಿ ಉಭಯ ಭ್ರಷ್ಟನಾಗಬೇಡ"ವೆಂತ ಸಾಂತ್ವವಚನವನ್ನು ಹೇಳಲು ಪ್ರಹಸ್ತನು ಅತ್ಯಂತಕೋಪಾವಿಷ್ಟನಾಗಿ "ಎಲೆ ಕಾಡುಕಪಿಯೇ! ನೆನ್ನೆ ನನ್ನತಮ್ಮನನ್ನು ಕೊಂದದ್ದಕ್ಕೆ ನಿನ್ನನ್ನೂ ರಾಮನನ್ನೂ ಈ ಲೋಕದಿಂದ ಹೊರಡಿಸಿ ಅನಂತರ ನಾನು ಇಹಲೋಕವನ್ನು ಬಿಡುವೆನು" ಎಂದು ಹೇಳುತ್ತಾ ಬಾಣಗಳಿಂದ ನೀಲನನ್ನು ಬಹಳವಾಗಿ ನೋಯಿಸಿದನು. ಈ ನೀಲನು ಇವನ ಸೊಕ್ಕಿನ ಮಾತಿನಿಂದಲೂ ಮತ್ತು ಹೊಡೆತಗಳಿಂದಲೂ ಕುಪಿತನಾಗಿ ಅಮೋಘವಾದ ಬಾಣವನ್ನು ಬಿಟ್ಟು ಪ್ರಹಸ್ತನ ತಲೆಯನ್ನು ಭೂಮಿಯ ಮೇಲೆ ಕೆಡಹಲು ರಾಕ್ಷಸಸೇನೆಯೆಲ್ಲ ಪಲಾಯನರಾಗುತ್ತಲಿರುವದನ್ನು ಸೂರ್ಯನು ನೋಡುತ್ತಾ ಅಸ್ತಾಚಲದ ಮೇಲೆ ಇಳಿಯುತ್ತಿರಲು ನೃಪಾಲಕರು ಅರುಹನನ್ನು ಸ್ಮರಿಸುತ್ತಿದ್ದರು.

೬೨. ಮಹಾದಳನಾಥರ ಜಗಳ.

ಎಲೈ ಶ್ರೇಣಿಕಮಹಾರಾಜನೇ! ಕೇಳುವನಾಗೈ—ಶ್ರೀರಾಮನು ನಿತ್ಯಾನುಷ್ಠಾನ ತತ್ಪರನಾಗಿ ಅರ್ಹತ್ಪೂಜೆಯನ್ನು ಮಾಡಿ, ದ್ವಾದಶ ಭಾವನೆಗಳನ್ನು ಭಾವಿಸಿ ಸಭಾಮಂದಿರಕ್ಕೆ ತೆರಳಿ, ಲಕ್ಷ್ಮಣನೊಡನೆ ಸಿಂಹಾಸನಾರೋಹಣನಾಗಿ

ಮೊನ್ನೆ ನೆನ್ನೆ ಆದ ಕದನದ ವಾರ್ತೆಯನ್ನು ಆಡುತ್ತಾ, ನಳನೀಲರಿಂದ ಹಸ್ತ ಪ್ರಹಸ್ತರು ಅಸ್ತಮಿಸಿದ ಸುದ್ಧಿಯನ್ನು ಹೇಳುತ್ತಾ, ಆದಿನದ ಯುದ್ಧವು ದುಸ್ತರವಾದ್ದಾಗಿರುವದರಿಂದ ಸುಗ್ರೀವಾದಿಗಳೊಡನೆ ಸೂಕ್ತವನ್ನು ಹೇಳುತ್ತಾ, ಗೆದ್ದ ಯೋಧರಿಗೆ ವಸ್ತ್ರಾಭರಣ ವಾಹನ ಆಯುಧಗಳನ್ನು ದಯಪಾಲಿಸಿದನು.

ಇತ್ತಲು ದಶಕಂಠನು ಮಂತ್ರಿ ಪ್ರಧಾನ ಬಂಧು ಮಿತ್ರ ಸಾಮಂತರೊಡನೆ ಸಭೆಯಲ್ಲಿ ಕೂತಿರುವಾಗ್ಯೆ ಇಂದ್ರಜಿತುವು ಯುದ್ಧದ ಮಾತನ್ನೆತ್ತಿ "ಹಸ್ತ ಪ್ರಹಸ್ತರು ಕಪಿಧ್ವಜರಿಂದ ಅಳಿದು ಹೋದದ್ದು ಗುಬ್ಬಚ್ಚಿಯಿಂದ ಗೃಧ್ರನು ಹೊಡಿಸಿಕ್ಕೊಂಡು ಹೋದಂತೆ ಆಗಿಧೆ. ಮಶಕಗಳಿಗೆ ಹೆದರಿ ಮಂತಂಗಾರಿಯು ಫಲಾಯನವಾದಂತೆ ಆಗಿಧೆ. ಧನುಜಸೇನೆಯು ಹೀಗೆ ಸೋಮಾರಿಗಳಾಗಿ ಯುದ್ಧದಲ್ಲಿ ಪ್ರವರ್ತಿಸುವುದು ಕೇವಲ ಅಸಹನೀಯವಾಗಿಧೆ" ಎಂದು ಘರ್ಜಿಸಿ ಹೇಳುತ್ತಿರಲು ಕುಂಭಕರ್ಣನು ಕಣ್ಣುಗಳನ್ನು ಕೆಂಪಗೆಮಾಡಿಕೊಂಡು ಸೇನಾನಾಯಕರನ್ನು ನೋಡಿ ಕಿಡಿಕಿಡಿಯಾಗಿ ಗೂರ್ಣಿಸುತ್ತಿರಲು ಕಾಲ, ಭೈರವ, ಭೀಮ, ವಜ್ರ, ಕೃಪಾಲರೆಂಬ ಐವರು ಧನುಜವ್ಯಾಘ್ರಗಳು ತಮ್ಮ ಸ್ಥಾನದಿಂದೆದ್ದು ಭೂಮಿಗೆ ಕಾಲನ್ನು ಬಡಿದು ಈಕಪಿಸೈನ್ಯಗಳನ್ನು ನಾವು ಈ ದಿವಸ ದಂಡಕಾರಣ್ಯಕ್ಕೆ ಅಟ್ಟದಿದ್ದರೆ ಈಹಾವಳಿಯನ್ನು ಯಾರು ಸೈರಿಸ್ಯಾರು? ಎಂದು ಒಂದೊಂದುದಂಡವನ್ನು ಹೆಗಲಮೇಲಿಟ್ಟುಕೊಂಡು ಈ ದೊಣ್ಣೆಗಳೇ ಸಾಕೆಂದು ರಣರಂಗಕ್ಕೆ ದಶಕಂಠನಿಂದ ಮನ್ನಣೆಯನ್ನು ಹೊಂದಿ ಹೊರಟರು. ಇವರ ಸಹಾಯಕ್ಕೆ ಮಹಾದಳಪತಿಗಳಾದ ದಧಿ, ಮಹೋದಧಿ, ಹಂಸ, ಪ್ರಹಲ್ಲಾದ ಮೊದಲಾದ ಪ್ರಮುಖರೂ ಹೊರಟರು. ಇತ್ತ ಶ್ರೀರಾಮಬಲದಲ್ಲಿಯು ಸುಗ್ರೀವ, ಅಂಗದ, ಜಾಂಬವ ಮೊದಲಾದವರು ರಾಮನಅಪ್ಪಣೆ ಪ್ರಕಾರ ಮುಂಗಾಲಿಟ್ಟರು. ಇವರುಗಳ ಸಹಾಯಕ್ಕೆ ಮೂರು ಅಕ್ಷೋಹಿಣಿ ಬಲಯುತರಾಗಿ ಶೂರಚಂದ್ರ, ವೀರಚಂದ್ರ, ವಾರಿಚಂದ್ರರೇ ಮೊದಲಾದ ಹಲವು ಸೇನಾನಾಯಕರು ಹಿಂಬಾಲಿಸಿದರು. ಉಭಯ ಬಲಕ್ಕೂ ಅತ್ಯಂತ ದೊಡ್ಡದಾದ ಯುದ್ಧವು ನಡೆದು, ಯಮನು ವಂಚನೆಮಾಡದೆ ಉಭಯುಸೇನೆಯಲ್ಲೂ ಪ್ರವೇಶಿಸಿ ತನ್ನ ಹೊಟ್ಟೆಯನ್ನು ತುಂಬಿಸುತ್ತಿದ್ದನು. ಅಂಗದನು ಬಲಹತಿಯನ್ನು ನೋಡಿ ಸಹಿಸಲಾರದೆ ರಣರಂಗಕ್ಕೆ ಮುಂದರಿದು ಧನುಜರನ್ನು ಹೊಡೆದು ಅಟ್ಟುತ್ತಿರಲು, ಇಂದ್ರಜಿತುವು ಅಂಗದನನ್ನು ನೋಡಿ ಉರಿದುಬೀಳುತ್ತಾ ಎದುರಾಗಿ ನಿಂತು ಅಂಗದನಮೇಲೆ ಬಾಣವನ್ನುಬಿಟ್ಟು ಆಗ್ರಹದಿಂದ

ಕೂಡಿರುತ್ತಲು ಸೂರ್ಯದೇವನು ಈ ಯುದ್ಧವನ್ನು ನೋಡಲಾರದೆ ಪಶ್ಚಿಮ ಸಮುದ್ರಕ್ಕೆ ಬಿದ್ದುಹೋದನು. ಉಭಯಸೇನೆಗಳೂ ಸಂಧ್ಯಾಕಾಲ ಸೂಚಕ ವಾದ ಭೇರಿಯನ್ನು ಮೊಳಗಿಸುತ್ತಾ ಆದಿವಸ ಅಷ್ಟಕ್ಕೇನೇ ಯುದ್ಧವನ್ನು ನಿಲ್ಲಿಸಿ ವಿಶ್ರಾಂತಿಗಾಗಿ ಆಯಾಯ ಆವಾಸಸ್ಥಾನಕ್ಕೆ ಅವರವರು ಹೋಗುತ್ತ ತ್ರಿಲೋಕಸ್ವಾಮಿಯಾದ ಜಿನೇಶ್ವರರನ್ನು ಸ್ಮರಿಸುತ್ತಿದ್ದರು.

೬೩. ಇಂದ್ರಜಿತುವಿನ ಜಗಳ.

ಮಹಾರಾಜಾಧಿರಾಜನಾದಶ್ರೇಣಿಕನೇ! ಕೇಳುವನಾಗೈ—ಶ್ರೀರಾಮನು ನಿತ್ಯಾನುಷ್ಠಾನಾನಂತರ ಆಸ್ಥಾನಕ್ಕೆ ಲಕ್ಷ್ಮಣಸಹಿತನಾಗಿ ಬಂದು ಭದ್ರಾಸನಾ ವೇಷ್ಟಿತನಾಗಿ ಆ ದಿನದ ಯುದ್ಧ ಕಾರ್ಯಕ್ಕೆ ಸೂಕ್ತವಾದ ಕೆಲಸಗಳನ್ನು ಯೋಚಿಸುತ್ತಾ ಅಂಗದನನ್ನು ಯುದ್ಧಾಭಿನೇತೃವನ್ನಾಗಿಮಾಡಿಸಲು ಆಜ್ಞೆಯಿ ತ್ತನು. ಅಸಹಾಯಶೂರನಾದ ಅಂಗದನು ಐದಕ್ಷೋಹಿಣಿ ಸೇನಾಯುತನಾಗಿ ರಣರಂಗಕ್ಕೆ ತೆರಳಿದನು. ಲಕ್ಷ್ಮಣನು ಆ ಅಂಗದನಿಗೆ ಬೆಂಗಾವಲಿಗಾಗಿ ಬಹು ಖೇಚರಶೂರರನ್ನು ಕಳುಹಿಸಿಕೊಟ್ಟು ತಾನು ಸಮರಸ್ಥಳದಲ್ಲಿ ಯುದ್ಧಾಪೇಕ್ಷಿ ತನಾಗಿದ್ದನು. ದಶಕಂಠನು ಸಭಾಮಂಟಪಕ್ಕೆ ಬಂದು ಹಿಂದಿನ ದಿನ ನಡೆದ ಯುದ್ಧದಲ್ಲಿ ಬಹುಸೇನೆ ಲಯವಾಯಿತು. ಈ ದಿವಸ ಜಾಗರೂಕರಾಗಿರಬೇ ಕೆಂದು ಹೇಳುತ್ತಿರಲು. ಇಂದ್ರಜಿತುವು ಆಯುಧ ಸಮೇತನಾಗಿ ಸಭೆಗೆಬಂದು ತಂದೆಗೆ ನಮಸ್ಕರಿಸಿ ಯುದ್ಧಕ್ಕೆ ಹೊರಡಲು ಅಪ್ಪಣೆಯನ್ನು ಬೇಡಲಾಗ ದಶ ಕಂಠನು ಮಗನಿಗೆ ಆಶೀರ್ವಾದಾಜ್ಞೆಯನ್ನು ಕೊಡಲಾಗಿ ಇಂದ್ರಜಿತುವು ರಣರಂಗಕ್ಕೆ ತೆರಳಿದನು. ಅತಿರಥ ಮಹಾರಥರಾದ ಧನುಜಶ್ರೇಷ್ಠರೂ ಎಂಟ ಕ್ಷೋಹಿಣಿ ಬಲಸಹಿತ ಹಿಂಬಾಲಿಸಿದರು. ಕುಂಭಕರ್ಣನು ರಥಾನ್ವಿತನಾಗಿ ಭೂಷಾ ಆಯುಧ ಸಹಿತನಾಗಿ ರಣರಂಗಕ್ಕೆ ಹೊರಟನು. ಅಂಗದನು ದಶ ಕಂಠನ ಸೇನಾಶಿಬಿರಕ್ಕೆ ನುಗ್ಗಿ ದಂಡನ್ನು ನುಚ್ಚು ನುರಿಯಾಗುವಂತೆ ಹೊಡೆ ಯುತ್ತಿರಲು ಇಂದ್ರಜಿತುವು ಅಂಗದನ ಮುಂದೆ ಬಂದು "ಎಲೋಕಪಿ! ನಿಲ್ಲು ನೀನು ಯಾಕೆ ರಾಮನಿಗೆ ಸಹಾಯಕನಾಗಿ ನಿಂತು ಪ್ರಾಣವನ್ನಳಿದುಕೊಳ್ಳು ತ್ತೀಯಾ? ರಣರಂಗವನ್ನು ಬಿಟ್ಟೋಡು" ಎನಲು-ಅಂಗದನು "ಎಲಾಅಸುರ! ನಿನ್ನ ಬುದ್ಧಿಗೆ ಅದೇ ತೋರುತ್ತಿದ್ದರೇ ಓಡು. ಕ್ಷತ್ರಿಯ ಕುಮಾರಕನು ಅಮ ರಣಾಂತರ ಯುದ್ಧಮಾಡಬಲ್ಲನೇ ಹೊರ್ತು ಹೇಡಿಯಹಾಗೆ ಓಡುವನೇ? "

ಎಂದು ಇಂದ್ರಜಿತುವನ್ನು ಒಂದುಬಾಣದಿಂದ ಹೊಡೆದು ರಥದಿಂದ ತಳ್ಳಿದನು. ಇಂದ್ರಜಿತುವು ಕ್ರೋಧಾವಿಷ್ಟಿತನಾಗಿ ಅಂಗದನನ್ನು ಬಾಣಗಳಿಂದ ಹೊಡೆದು ಘಾಸಿಯನ್ನಾಗಿ ಮಾಡಿದನು. ರಾಕ್ಷಸ ಬಲವೆಲ್ಲಾ ಒಟ್ಟಾಗಿ ಕೂಡಿ ಅಂಗದನ ಮೇಲೆ ಬೀಳಲು ಅಂಗದನು ಅವರ ಬಾಣದ ಏಟಗೆ ಸಿಕ್ಕದೆ ರಾಕ್ಷಸರನ್ನು ಬಡಿಯುತ್ತಿರಲು, ಕುಂಭಕರ್ಣನು ಮದೋನ್ಮತ್ತನಾಗಿ ಇಂದ್ರಜಿತುವಿನ ಮೇಲೆ ಯುದ್ಧ ಮಾಡುತ್ತಿದ್ದ ಅಂಗದನ ಮೇಲೆ ಬಿದ್ದು ಗಧಾಪ್ರಹಾರ ಮಾಡಲು ಅಂಗದನು ಮೂರ್ಛಿತನಾಗಿ ಭೂಮಿಗೆ ಬೀಳಲು ರಾವಣನ ಸೇನಾಶಿಬರದಲ್ಲಿ ಜಯಘೋಷಣೆಮಾಡುತ್ತಿರಲು ಸೂರ್ಯನು ರಾಕ್ಷಸರಹಾವಳಿಯನ್ನು ನೋಡಲಾರದೆ ಅಸ್ತಾಚಲಕ್ಕೆ ಓಡಿದನು. ಕಪಿಧ್ವಜರು ಮೂರ್ಛಿತನಾದ ಅಂಗದನನ್ನು ಪಾಲಕಿಯಲ್ಲಿ ಮಲಗಿಸಿಕ್ಕೊಂಡು ತಮ್ಮ ಶಿಬಿರಕ್ಕೆ ತೆಗೆದುಕೊಂಡುಹೋಗಲು ರಾಮನು ನೋಡಿ ಬಹಳವಾಗಿ ವ್ಯಥೆಯನ್ನು ಹೊಂದಿ ಅಂಗದನ ಸಾಹಸಾದಿಗಳನ್ನು ನೆನೆಯುತ್ತಾ ಈ ಬಾಲನನ್ನು ಮುಂದೆಬಿಟ್ಟು ಸಕಾಲದಲ್ಲಿ ಒದಗದ ಸೇನಾನಾಯಕರ ವಿಷಯದಲ್ಲಿ ಅಸಮಾಧಾನವನ್ನು ಹೊಂದಿ, ಲಕ್ಷ್ಮಣನನ್ನು ನೋಡಲು "ತಾನು ಅಂಗದನನ್ನು ಹಿಂಬಾಲಿಸಿರಲಿಲ್ಲ ಮತ್ತು ಅಸ್ತಮಾನವಾದ್ದರಿಂದ ಆ ರಾಕ್ಷಸರಿಗೆ ಈ ದಿವಸ ಪಾರಾಯಿತು. ಆದರೂ ಆಸೇನೆಯಲ್ಲಿ ಬಹಳಮಟ್ಟಿಗೆ ಕೇಡಾಗಿಧೆ. ಅದನ್ನು ಯೋಚಿಸದೆ ಅಂಗದನು ಮೂರ್ಛಿತನಾದದ್ದೇ ತಮಗೆ ಜಯವಾಯಿತೆಂದು ತಿಳಿದಿಧಾರೆ" ಎಂದು ಹೇಳಲು ಶ್ರೀರಾಮನು ಪರಮಪದ ಪ್ರಾಪ್ತನಾದ ಜಿನೇಶ್ವರನನ್ನು ನೆನೆಯುತ್ತಿದ್ದನು.

೬೪. ತಾಟಕಿ ಜಗಳ.

ಗೌತಮರು ಶ್ರೇಣಿಕನಿಗೆ ಮುಂದಣ ಕಥಾನಕವನ್ನು ಹೇಳಲುದ್ಯುಗಿಸಿ ಎಲೈ ಚೇಳಿಸೀ ನಾಯಕನೇ! ಕೇಳುವನಾಗು—ರಾಮಲಕ್ಷ್ಮಣರು ಸೇನಾಶಿಬಿರಕ್ಕೆ ಬಂದು ಮೂರ್ಛಿತನಾದ ಅಂಗದನನ್ನು ನೋಡಿ ಶ್ರೀರಾಮನು ಅಂಗದನಮ್ಯೆಸವುರುತ್ತಾ "ಎಲೈ ಬಾಲನೇ! ನಿನ್ನ ಕೋಮಲವಾದ ಶರೀರದಲ್ಲಿ ಬಾಣಾವಿಷ್ಟಿತವಾದ ವ್ರಣವನ್ನು ನಾನು ನನ್ನ ಕಣ್ಣುಗಳಿಂದ ನೋಡುವ ವಿಧಿಯು ಒದಗಿದ್ದಕ್ಕೋಸ್ಕರ ಬಹಳಅನುತಾಪಪಡುತ್ತೇನೆ. ನನಗೋಸ್ಕರ ನೀನು ಈ ರೀತಿ ಕಷ್ಟಕ್ಕೆ ಸಿಕ್ಕಿ ಮೂರ್ಛಿತನಾಗಿದ್ದಕ್ಕೋಸ್ಕರ ನಾನುಏನುಮಾಡಬೇಕು?" ಎಂದು ಚಿಂತಿಸುತ್ತಿರುವಾಗ, ಶ್ರೀರಾಮಹಸ್ತವು ಅಂಗದನ ಮೈಮೇಲೆ ಸ್ಪರ್ಶ

ವಾಗುತ್ತಲೇ ತಾಯಿಯ ಹಸ್ತಸ್ಪರ್ಶದಿಂದ ಬಾಲನು ಎಚ್ಚಿದಂತೆ ಅಂಗದನು ಮೂರ್ಛೆಯಿಂದೆಚ್ಚೆತ್ತು ಕಂದಿರುವ ಶ್ರೀರಾಮನ ಮುಖವನ್ನು ನೋಡಿದನು. ಅಂಗದನು "ಸ್ವಾಮಿ! ನಾನು ಕುಂಭಕರ್ಣನ ಮೋಸದ ಏಟಿಗೆ ಸಿಕ್ಕಿ ಹೀಗೆ ಆದೆನು" ಎಂದು ಹೇಳಿ ಎದ್ದು ರಾಮನಪಾದಕ್ಕೆ ಬೀಳಲು ರಾಮನು ಅತ್ಯಂತ ಆದರದಿಂದ ಅಂಗದನಿಗೆ ಆಶೀರ್ವಾದಮಾಡಿ ಸಭಾಮಂಟಪಕ್ಕೆ ತೆರಳಿದನು. ಇತ್ತಲು ಶೂರ್ಪನಖಿ ಮತ್ತು ಆಕೆಯ ತಂಗಿಯಾದ ತಾಟಕಿಯೂ ಕೂಡ ಅಂಗದನು ಮೂರ್ಛೆಯಿಂದ ಭೂಗತನಾದನೆಂಬ ಸಮಾಚಾರವನ್ನು ಕೇಳಿ ತಕ್ಷಣ ದಶಕಂಠನ ಬಳಿಗೆ ಹೋಗಿ, ರಣರಂಗಕ್ಕೆ ಹೋಗಿ ರಾಮಬಲವನ್ನು ಸಂಹರಿಸಲು ಅಪ್ಪಣೆ ಕೊಡಬೇಕೆಂದು ಕೇಳಲು, ದಶಾನನನು ತಂಗಿಯರಿಗೆ "ಇಂದ್ರಜಿತುಕುಂಭಕರ್ಣರಿಗೆ ಅಸಾಧ್ಯವಾದ ಈ ಯುದ್ಧಕಾರ್ಯದಲ್ಲಿ ನೀವು ಹೆಂಗಸರು ಕಾದಾಡುವುದೆಂದರೆ ಬಹಳ ಅಪಮಾನಕರವಾದ ಸಂಗತಿ. ಅವರಿಂದ ಅವಮಾನ ಹೊಂದಿ ನೀವು ಬರಬೇಕಾಗುತ್ತೆ" ಎಂಬುದಾಗಿ ಬಹಳವಿಧವಾಗಿ ಹೇಳಿದರೂ ಕೇಳದೆ ಅಣ್ಣನ ಅಪ್ಪಣೆಪಡೆದು ರಣರಂಗಕ್ಕೆ ಆ ರಾತ್ರಿ ಬಂದು ಅತ್ಯಂತ ಘೋರ ವಿಕಾರರೂಪನ್ನು ಮಾಡಿಕ್ಕೊಂಡು ರಾಮನ ವಾಸಸ್ಥಳಕ್ಕೆ ಬಂದು ಬಹಳವಾಗಿ ದಳಕ್ಕೆ ಹಿಂಸೆ ಕೊಡುತ್ತಿರಲು ಸುಗ್ರೀವ ಜಾಂಬವಾದಿಗಳು ಬಂದು ಸೇನೆಗೆ ಧೈರ್ಯ ಹೇಳಿ ಈ ರಾಕ್ಷಸ ಮಾರಿಗಳಿಗೆ ಎದುರಾಗಿ ಬರಲು, ತಾಟಕಿಯು "ರಾಮಲಕ್ಷ್ಮಣರೆಲ್ಲಿ? ತೋರಿಸರಿ. ಕಪಿಗಳೇ! ಕಾಡು ಕೋಡಗಗಳ ತಂಟೆ ನಮಗೆ ಬೇಡ" ಎನ್ನುತ್ತಿರಲು ಅಂಗದನು ಮುಂದಾಗಿ ಬಂದು "ಎಲೇ ಚಿಕ್ಕಮಾರಿ! ರಾಮಲಕ್ಷ್ಮಣರ ಮಾತೇಕೆ? ನಿನ್ನ ಅಕ್ಕನಮೂಗನ್ನು ಕೊಯಿದಿದ್ದು ಗೊತ್ತಿಲ್ಲವೇ? ನೀವು ಮುಂದಕ್ಕೆ ಬಂದು ಹೆಜ್ಜೆಯನ್ನು ಇಡಬೇಡಿರಿ ಮಾರಿಗಳೇ!" ಎಂದು ಹೇಳಿ, ನಾಗಬಾಣವನ್ನು ಹೊಡೆದು ಅವರನ್ನು ನಾಗಪಾಶದಿಂದ ಬಂಧಿಸಿ ವಿರಾಧಿತನ ವಶಕ್ಕೆ ಕೊಟ್ಟು ಮುಂದೆಬರುವ ದೊರಳಗಾಗಿ, ತಾಟಕಿಯ ಮಗನಾದ ಸೌಂಧರನು ತನ್ನ ತಾಯಿಗೂ ಮತ್ತು ಅವಳ ಅಕ್ಕನಿಗೂ ಆದ ವಿಷಯವನ್ನು ತಿಳಿದು ಯುದ್ಧಕ್ಕೆ ಬಂದು ಬೀಳಲು, ಅಂಗದನು ಮುಂಜಾಗ್ರತೆಯನ್ನು ಹೊಂದಿ, ಆ ಖೂಳಧನುಜನ ಬಾಣಗಳನ್ನು ಮುರಿದು ಸಿಂಹನಾದ ಮಾಡಿ ಬಾಣದ ಮಳೆಯನ್ನು ಸೌಂಧರನ ಮೇಲೆ ಕರೆಯಲು ಸೌಂಧರನು ಬಾಣದ ಏಟನಿಂದ ಬಾಧಿತನಾಗಿ ಭೂಗತನಾದನು. ಇತರ ರಾಕ್ಷಸರು ಹೆದರಿ ತಲೆತಪ್ಪಿಸಿಕ್ಕೊಂಡು ಹೊರಟುಹೋದರು. ಜಾಂಬ

ವಾದಿಗಳು ಅಲ್ಲಲ್ಲಿ ಮರೆಮಾಚಿ ತೊಂದರೆ ಕೊಡುತ್ತಿದ್ದ ರಾಕ್ಷಸಿಯರನ್ನು ಹೊಡೆದು ಓಡಿಸಿದರು. ಸೈನಿಕರು ಯಾವ ಭೀತಿಯೂ ಇಲ್ಲದೆ ನಿದ್ರಾಂಗನೆಯರನ್ನು ಹೊಂದಿ ವಿಶ್ರಾಂತಿ ಸುಖ ಸಮುದ್ರದಲ್ಲಿ ಸುಸ್ವಪ್ನವನ್ನು ಕಾಣುತ್ತಿದ್ದರು. ಅಂಗದನೇ ಮೊದಲಾದವರು ಪರಮ ಭಕ್ತ್ಯಾದರತೆಯಿಂದ ಶ್ರೀ ಜಿನೇಶ್ವರನ ಪಾದಕಮಲವನ್ನು ಭಜಿಸುತ್ತಿದ್ದರು.

೬೫. ಮಾರೀಚನ ಜಗಳ.

ಶ್ರೇಣಿಕ ಮಹಾರಾಜನೇ ! ಕೇಳುವವನಾಗ್ಯೆ. ಸೂರ್ಯನ ಉದಯಕ್ಕೆ ಸರಿಯಾಗಿ ಕರ್ಮನಿಷ್ಠನಾದಂಥಾ ಶ್ರೀರಾಮನು ಲಕ್ಷ್ಮಣನೊಡನೆ ನಿತ್ಯಕರ್ಮಗಳನ್ನು ಮಾಡಿ ಸಭಾ ಮಂಟಪಕ್ಕೆ ಬಂದು ಭದ್ರಾಸನದಲ್ಲಿ ಕುಳಿತುಕ್ಕೊಂಡು ಆ ದಿವಸದ ಯುದ್ಧ ಕಾರ್ಯದಲ್ಲಿ ಗಮನವಿಡುತ್ತಲಿರುವಾಗ ಅತ್ತಲು ದಶಕಂಠನು ಆಸ್ಥಾನ ಮಂಟಪದಲ್ಲಿ ಕುಳಿತು ಅನುಜೆಯರು ಬಂಧಿತರಾಗಿರುವುದನ್ನು ಮತ್ತು ತಾಟಕಿ ಪುತ್ರನಾದ ಸೌಂಧರನು ಸಂಹಾರವಾದದ್ದನ್ನು ಕೇಳಿ ಕೋಪಾವಿಷ್ಟಿತನಾಗಿ ಸಭೆಯಲ್ಲಿ ಆರ್ಭಟಿಸುತ್ತಿರಲು ಮಾರೀಚನು ರಾವಣನಿಗೆ ಅಭಿಮುಖವಾಗಿ ತಾನು ಈ ದಿವಸದ ಯುದ್ಧದಲ್ಲಿ ಶೂರ್ಪನಖಿ, ತಾಟಕಿಯರನ್ನು ಶರೆಹಿಡಿದು ಸೌಂಧರನನ್ನು ಹತಿಸಿದ ದುಷ್ಟರನ್ನು ಕೊಂದು ನಿನಗೆ ಅವರ ತಲೆಗಳನ್ನು ತಂದು ಒಪ್ಪಿಸುತ್ತೇನೆಂದು ಶಪಥ ಮಾಡಲು ರಾವಣನು ಯುದ್ಧದ ಯುಕ್ತಿಯನ್ನು ಹೇಳಿ ಮಾರೀಚನಿಗೆ ತಾಂಬೂಲವನ್ನು ಕೊಟ್ಟು ಕಳುಹಿಸಿದನು. ಮಾರೀಚನು ಬಲಸಹಿತನಾಗಿ ರಣರಂಗಕ್ಕೆ ಹೊರಟನು. ಶ್ರೀರಾಮದಳದಲ್ಲಿ ರಾಮಲಕ್ಷ್ಮಣರ ಆಜ್ಞಾನುಸಾರವಾಗಿ ಆಂಜನೇಯನು ಅಂಗದಾದಿ ಶೂರರೊಡಗೂಡಿ ರಣರಂಗಕ್ಕೆ ಬಂದನು. ಮಾರೀಚನು ಆರ್ಭಟದಿಂದ ಕಪಿಧ್ವಜದ ಮೇಲೆ ಬಿದ್ದು ಅವರ ತಲೆಗಳನ್ನು ಕೆಡಹುತ್ತಾ ರಕ್ತವಾಹನಿಯನ್ನುಂಟುಮಾಡುತ್ತಿರಲು ಕಪಿಧ್ವಜರು ದೇಹದ ಮೇಲೆ ಅಭಿಮಾನವನ್ನು ಬಿಟ್ಟು ಯುದ್ಧದಲ್ಲಿ ಹಿಂಜರಿಯದೆ ಇರಲಾಗ ಮಾರೀಚನೆದುರಿಗೆ ಮಾರುತಿಯು ಬಂದು ಅವನ ಮುಖಕ್ಕೆ ಅಪ್ಪಳಿಸಿದನು. ಆಗ ಮಾರೀಚನು “ಎಲೆ ಕಪಿಯೇ! ನೀನು ಜಾಗ್ರತೆಯಾಗಿ ತೊಲಗು! ಇಲ್ಲದಿದ್ದರೆ ನಿನ್ನನ್ನು ಸಿಗದು ರಣರಂಗಕ್ಕೆ ತೋರಣ ಮಾಡುವೆನು.” ಎಂದು ಹೇಳುತ್ತಿರುವಾಗ ಮಾರುತಿಯು ‘‘ಎಲಾ ಖೂಳವಂಚಕ! ನಿನ್ನನ್ನು ಈ ದಿವಸ ನಿರಯಪು

ರಕ್ಕೆ ಕಳುಹಿಸದೆ ಬಿಡೆನು" ಎಂದು ಬಾಣಗಳಿಂದ ಎಡಬಿಡದೆ ಹೊಡೆಯುತ್ತಿರಲು ಮಾರೀಚನು ಹೃದಯಕ್ಕೆ ತಗಲಿದ ಏಟಿನಿಂದ ವಿಸ್ಮೃತಿ ಹೊಂದಿ ಭೂಶಯ್ಯೆಯಲ್ಲಿ ಒರಗಲಾಗ ಇಂದ್ರಾರಿಯು ಮಾರುತಿಯ ಎದುರಿಗೆ ಬಂದು ಯುದ್ಧಕ್ಕೆ ನಿಂತನು. ಮಾರುತಿಯು ಇಂದ್ರಾರಿಯ ಮೇಲೆ ನಾನಾ ವಿಧವಾದ ಬಾಣಪ್ರಯೋಗ ಮಾಡಿ ಘಾಸಿ ಮಾಡುತ್ತಿರುವಾಗ ಮಾರೀಚನು ಮೂರ್ಛೆಯಿಂದೆದ್ದು ಪುನಹ ಯುದ್ಧಕ್ಕೆ ನಿಂತು, ಮಾರುತಿಯ ಮೇಲೆ ಗಧಾಪ್ರಯೋಗ ಮಾಡಿ ಇಂದ್ರಾರಿಯನ್ನು ಹಿಂದಕ್ಕೆ ನೂಕಿ ಮಾರುತಿಯ ಮುಂದೆ ಯಮನ ಮುಂದೆ ನಿಂತಂತೆ ನಿಂತನು. ಮಾರುತಿಯು ಮಾರೀಚನನ್ನು ನೋಡಿ, ಎಲೈ ನೀಚನೇ! ಇನ್ನೂ ನರಕಪುರಿಗೆ ಹೋಗಲಿಲ್ಲವೇ? ಈಗಲಾದರೂ ಹೋಗು!" ಎಂದು ಬಾಣಗಳಿಂದ ಮಾರೀಚನ ಮೈಯನ್ನು ಸಹಸ್ರತೂತುಗಳನ್ನಾಗಿ ಮಾಡಿದನು. ಹಾಗೂ ಮಾರೀಚನು ಮಾರುತಿಯ ಮೇಲೆ ಬೀಳುತ್ತಿರಲು ಮಾರುತಿಯು ಒಂದು ಪ್ರಹಾರಮಾಡಲು ದೀರ್ಘ ನಿದ್ರೆಮಾಡುವುದಕ್ಕಾಗಿ ಭೂಶಯ್ಯೆಯಲ್ಲಿ ಪವಡಿಸಿದನು.- ಕಪಿಧ್ವಜರು ಜಯಘೋಷ ಮಾಡಿದರು. ರಾವಣನ ಸೈನ್ಯದ ಹಾಹಾಕಾರ ಧ್ವನಿಯು ದಶದಿಕ್ಕುಗಳನ್ನು ಮುಟ್ಟುತ್ತಿರಲು ಮಾರುತಿಯು ಅರುಹಧ್ಯಾನವನ್ನು ಮಾಡುತ್ತಿರಲು ಸೂರ್ಯನು ಬೇಸತ್ತು ಅಸ್ತಾಚಲವನ್ನು ಸೇರಿ ಅಸ್ತಂಗತನಾದನು.

೬೬. ಅಂಗದನ ಸಂಧಾನ.

ಶ್ರೇಣಿಕ ಮಹಾರಾಜನೇ ಕೇಳುವನಾಗೈ—ದಶಾನನು ನಿತ್ಯಾನುಷ್ಠಾನವನ್ನು ಮಾಡಿ ಸಭಾ ಪ್ರವೇಶವನ್ನು ಮಾಡುತ್ತಲೇ ಅಲ್ಲಿ ನೆರದಿದ್ದ ಧನುಜಶ್ರೇಷ್ಠರು ಕುಂದಿದ ಮುಖದಿಂದ ನಮ್ರೀಭೂತರಾಗಿರುವದನ್ನು ನೋಡುತ್ತಾ ಭದ್ರಾಸನಾವೇಷ್ಟಿತನಾಗಿ ಯುದ್ಧವಾರ್ತೆಯನ್ನು ಲಾಲಿಸುತ್ತಾ ಮಾರೀಚನ ಮರಣಕ್ಕಾಗಿ ತುಂಬಾಅನುತಾಪಗೊಂಡನು. ಮಂಡೋದರಿಯು ಮಾರೀಚನ ಅಂತ್ಯವನ್ನು ಕೇಳಿ ಹಂಬಲಿಸಿ ದುಃಖಾವೇಶದಿಂದ ವಿಸ್ಮೃತಿಗೊಂಡಳು. ಧನುಜರೆಲ್ಲಾ ಮಾರೀಚನ ಧೀರತ್ವವನ್ನು ಕುರಿತು ಪ್ರತ್ಯೇಕಪ್ರತ್ಯೇಕವಾಗಿ ಹೇಳುತ್ತಲಿದ್ದರು. ಇಂದ್ರಜಿತು ಕುಂಭಕರ್ಣರು ಬಹಳವಾಗಿ ವಿಷಾದಿಸುತ್ತಿದ್ದರು. ಇತ್ತಲು ರಾಮಲಕ್ಷ್ಮಣರು ನಿತ್ಯಕರ್ಮಗಳನ್ನು ಸಾಂಗಗೊಳಿಸಿ ಸಭಾ ಮಧ್ಯ ಪ್ರವೇಶಮಾಡಿ ಸಿಂಹಾಸನಾಸೀನರಾಗಿ ಆ ದಿನದ ಯುದ್ಧಕಾರ್ಯವನ್ನು ಆಲೋ

ಚಿಸುತ್ತಿರಲಾಗಿ ವಿಭೀಷಣನು ರಾಮನಿಗೆ ನಮಸ್ಕರಿಸಿ ರಾವಣನ ಸಹೋದರ ಪ್ರೀತಿಯಿಂದೊಡಗೂಡಿ ಅರಿಕೆಮಾಡಿದನು. "ಸ್ವಾಮಿಾ! ದಶಾನನನಿಗೆ ಒಂದು ಸುವಾರ್ತೆಯನ್ನು ಕಳುಹಿಸಿ ಅದರ ಫಲವನ್ನು ನೋಡಬೇಕೆಂತ ಇಧೇನೆ. ತಮ್ಮ ದಿವ್ಯ ಚಿತ್ತಕ್ಕೆ ತೋರಿದಂತೆ ನಡೆಸಬಹುದೆಂದು ಅಂಗಲಾಚಿ ಬೇಡಿಕೊ ಳ್ಳಲು ಕರುಣಾಶಾಲಿಯಾದರಘುವು ಆದಿನದ ಯುದ್ಧವನ್ನು ನಿಲ್ಲಿಸಿ ಓಂಕಾರವ ನ್ನುಮಾಡಲು ಮಾರುತಿ ಜಾಂಬವ ಸುಗ್ರೀವಾದಿಗಳು ರಾಜಿಗಾಗಿ ದಶಾನನನ ಬಳಿಗೆ ಅಂಗದನನ್ನು ಮಾತ್ರ ಕಳುಹಿಸಲು ಹಿಂತೆಗೆಯಲು ವಿಭೀಷಣಾದಿಗಳು ಯಾವ ಆಪತ್ತೂ ಅಂಗದನಿಗೆ ಒದಗುವುದಿಲ್ಲವೆಂದು ಹೇಳಲು ಅಂಗದನು ಸರ್ವರ ಸಮ್ಮತಿಯನ್ನು ಪಡೆದು ದಶಾನನನ ದರ್ಶನಾರ್ಥವಾಗಿ ಪುಷ್ಪಕವನ್ನು ಹತ್ತಿ ತೆರಳಿದನು.

ಅತ್ತ ದಶಾನನ ಸಭಿಕರು ಅಂಗದನ ಬರುವಿಕೆಯನ್ನು ನೋಡಿ ಪ್ರಭು ವಾದ ರಾವಣನಿಗೆ ವಿಜ್ಞಾಪಿಸಲು, ದಶಕಂಠನು ಕ್ರೋಧಾಂಧನಯನನಾಗಿ "ಅಂಗದನಿಗೆ ಇಲ್ಲಿ ಏನು ಕೆಲಸವಿಧೆ? ರಣರಂಗ ಸಿದ್ಧವಾಗಿಧೆ!" ಎಂದು ಪಿಟಿ ಪಿಟಿಸಿದನು. ಅಷ್ಟರಲ್ಲೇ ಅಂಗದನು ಪುಷ್ಪಕದಿಂದ ಇಳಿದು ದಶಾನನನ ಸಭಾ ಪ್ರವೇಶಮಾಡಿ ದಶಾನನನಿಗೆ ನಮಸ್ಕರಿಸಿ ಉಚಿತಸ್ಥಾನದಲ್ಲಿ ಕುಳಿತು ಮಾರೀ ಚನ ಗುಣಗಾನ ಮಾಡಿ ಜಾನಕಿಯನ್ನು ರಾಮಸನ್ನಿಧಿಗೆ ಒಪ್ಪಿಸಿ ಬಿಡುವದು ಶ್ರೇಯಸ್ಕರವೆಂದು ಹೇಳಲು ದಶಾನನನು ಬಹಳವಾಗಿ ಕೋಪಿಸಿ, ಇಂದ್ರಜಿತ್ತು ಕುಂಭಕರ್ಣರು ಯುದ್ಧದಲ್ಲಿ ಸೇರಿ ರಾಮನ ಬಲವನ್ನು ನಿರ್ಬಲರನ್ನಾಗಿ ಮಾಡಿ ರಾಮನಿಗೆ ನಿಲ್ಲುವುದಕ್ಕೆ ಎಡೆಯಿಲ್ಲದಂತೆ ಆಗುತ್ತೆಂತ ಹೇಳಿ ಜಾನಕಿಯನ್ನು ಕಳುಹಿಸುವ ಸುದ್ದಿಯನ್ನೇ ಎತ್ತಕೂಡದೆಂದು ಕಟ್ಟಪ್ಪಣೆ ಮಾಡುತ್ತಲಿರಲು ಅಂಗದನು "ರಾಮಲಕ್ಷ್ಮಣರನ್ನು ಗೆಲ್ಲುವಮಾತೇ ಆಡಬಾರದು? ಅವರಿಂದ ಹತಿಯಾಗುವುದನ್ನೇ ನೀನು ಯೋಚಿಸು! ಹಸ್ತ ಪ್ರಹಸ್ತರೇನು ಸಾಮಾನ್ಯರೆ? ಅಂಥಾವರ ಗತಿಯೇನಾಯಿತು? ಮಾರೀಚನ ಶಕ್ತಿ ಹೇಗೆ ಉಡಗಿತ್ತು! ಹಾಗೇ ಇಂದ್ರಜಿತು ಕುಂಭಕರ್ಣರ ಪರಿಣಾಮವೂ ಅವರಂತೆಯೇ ಆಗಿ, ನಿನ್ನ ಗತಿಯು ಕೆಡುವುದು" ಎಂದು ಎಷ್ಟೋ ವಿಧವಾಗಿ ಹೇಳಿದರೂ ದಶಾನನನು ಯುಕ್ತವಾದ ಮಾರ್ಗಕ್ಕೆ ಪ್ರವೇಶ ಮಾಡದಿರಲು ಅಂಗದನು ದಶಾನನನಿಗೆ ಪುನಹ ಎಚ್ಚ ರಿಸಿ ಪುಷ್ಪಕವನ್ನೇರಿ ತನ್ನ ವಾಸಸ್ಥಳಕ್ಕೆ ಹೋಗುತ್ತಾ ಪರಮ ಜಿನಚಂದ್ರ ರನ್ನು ನೆನೆಯುತ್ತಿದ್ದನು.

೬೭. ಇಂದ್ರಜಿತು ಬಂಧನ.

ಗೌತಮಗಣಧರರು ಮುಂದೆ ಹೇಳಲುಪಕ್ರಮಿಸಿ, ಎಲೈ ಮಗಧಾಧೀಶ್ವರನೇ! ಮುಂದಿನ ಕಥಾನಕವನ್ನು ಕೇಳುವನಾಗೈ—ಶ್ರೀರಾಮನನ್ನು ಬೆಳಗಿನ ಝಾವದಲ್ಲಿ ಎಚ್ಚೆತ್ತುವುದಕ್ಕಾಗಿ ಮಂಗಳಪಾಠಕರು ಮಂಗಳಸ್ತೋತ್ರವನ್ನು ಹಾಡಲಾಗ, ಕರುಣಾದ್ರ್ರಹೃದಯನಾದ ರಾಮನು ಶಯನದಿಂದೆದ್ದು ನಿತ್ಯ ಕರ್ಮಗಳನ್ನು ಮಾಡಿ ಲಕ್ಷ್ಮಣನ ಸಹಿತ ಸಭಾಸ್ಥಾನವನ್ನು ಹೊಂದಿ ಭದ್ರಾಸನಾವೇಷ್ಟಿತನಾಗಿರಲು ಅಂಗದನು ರಾಮ ದರ್ಶನವನ್ನು ಮಾಡಿ, ತಾನು ಲಂಕೆಗೆ ಹೋಗಿ ಸಮಾಧಾನದ ವಿಷಯವಾಗಿ ದಶಾನನನೊಡನೆ ಸಂಧಾನ ನಡೆಸಿದ್ದು ವಿಫಲವಾಯಿತೆಂದು ಅರಿಕೆಮಾಡಲು ರಾಮನು ಕರುಣ ಹೃದಯಾಳುವಾದ್ದರಿಂದ ರಾವಣನ ನಾಶಕ್ಕೆ ಎಡೆಯು ತಪ್ಪಲಿಲ್ಲವೆಂದು ವಿಷಾದವನ್ನು ಹೊಂದಿ ಮುಂದಿನ ಯುದ್ಧಕಾರ್ಯದಲ್ಲಿ ಪ್ರವರ್ತಕನಾದನು. ಮಾರುತಿಯು ಯುದ್ಧಾಭಿಮುಖನಾಗಲು ಆತನ ಸಹಾಯಕ್ಕೆ ಅನೇಕದಂಡುಗಳೂ ಶೂರರೂ ಹಿಂಬಾಲಿಸಿನಿಂತರು- ಇಂದ್ರಾರಿಯು ರಾಕ್ಷಸಸೇನೆಯಿಂದೊಡಗೂಡಿ ಮಾರುತಿಗೆ ಅಭಿಮುಖನಾಗಿನಿಂತು, ತನ್ನ ಪ್ರತಾಪವನ್ನು ಕೊಚ್ಚಿಕೊಂಡು, "ಕಪಿಯೇ ನಿಜವಾಗಿ ನಿನ್ನನ್ನು ಶರೆಹಾಕಿ ಹಿಡಿಯದೆ ಬಿಡೆನು. ಇದುವರಿಗೂ ಅನುಜೆಯ ಪ್ರಿಯನೆಂದು ತಡದಿದ್ದೇ" ಎಂದು ಬಾಣಗಳಿಂದ ಮಾರುತಿಯನ್ನು ಹೊಡೆಯಲು ಪ್ರಯತ್ನ ಮಾಡಿದನು. ಇತ್ತಲು ನಾರದರು ಲಂಕಾದ್ವೀಪಕ್ಕೆ ಬಂದು ದಶಾನನನ ಅರಮನೆಗೆ ಪ್ರವೇಶಮಾಡಲು, ಮಂಡೋದರಿಯು ಕಂಡು ಗುರುವರ್ಯರಿಗೆ ನಮಸ್ಕರಿಸಿ ತಮಗೆ ಒದಗಿರುವ ವಿಪತ್ಪರಂಪರೆಯನ್ನು ಹೇಳಿ ತನ್ನ ಪತಿಯಾದ ದಶಾನನನಿಗೆ ವಿವೇಕಹೇಳಿ, ಸೀತಾದೇವಿಯನ್ನು ಅವಳ ಪತಿಯಾದ ರಾಮನ ಸನ್ನಿಧಿಗೆ ಕಳುಹಿಸುವಂತೆ ಮಾಡಿಸಬೇಕೆಂದು ಬೇಡಿಕೊಳ್ಳಲು ನಾರದರು ಮೊದಲೇ ಸೀತೆಯನ್ನು ರಾಮನ ಸಮೀಪಕ್ಕೆ ಕಳುಹಿಸಬೇಕೆಂದು ಹೇಳಿದೆ- ಆತನು ಕೇಳಲಿಲ್ಲ. ನೀನೇ ನಿನ್ನ ಗಂಡನಾದ ದಶಾನನನಿಗೆ ವತ್ತಿಹೇಳುವದು ಅನುಕೂಲವೆಂದು ಹೇಳಲು ಮಂಡೋದರಿಯು ಪರಾಕ್ರಮಿಗಳಾದ ಇಂದ್ರಜಿತು, ಕುಂಭಕರ್ಣರು ಹೋಗಿರುತ್ತಾರೆಂದುಹೇಳಲು, ನಾರದರು ಹಾಗಾದರೆ ನೋಡೋಣ! ನಾಳೇ ಸೀತಾ ಕಳುಹಿಸುವ ವಿಷಯದಲ್ಲಿ ಹೇಳೋಣವೆಂದುನಿಲ್ಲಿಸಿದರು. ಅತ್ತಲು ಇಂದ್ರಜಿತುವು ಬಹಳವಾಗಿ ಮಾರುತಿಯನ್ನು ಬಾಣದಿಂದ ಹೊಡೆಯುತ್ತಿರಲು ಮಾರುತಿಯು ಹಿಂತೆಗೆಯದೆ ಯುದ್ಧಮಾಡು

ತ್ತಿದ್ದನು. ಆಗ ಲಕ್ಷ್ಮಣನು ಇಂದ್ರಜಿತುವಿಗೆ ಎದುರಾಗಿ ಬಂದು ಬಾಣವನ್ನು ಹೊಡೆಯಲು ಇಂದ್ರಾರಿಯು ಮತ್ತೂ ಕೊಬ್ಬಿ ನಿನ್ನನ್ನು ಈ ಬಾಣದಿಂದಹೊಡೆದು ಕೆಡಹುವೆನೆಂದು ನಾಗಪಾಶಾಸ್ತ್ರವನ್ನು ಬಿಟ್ಟನು. ಲಕ್ಷ್ಮಣನು ಲೀಲಾಮಾತ್ರನಾಗಿ ಗರುಡಾಸ್ತ್ರವನ್ನು ಬಿಡಲು, ಆಬಾಣವು ಇಂದ್ರಜಿತುವಿನ ಅಸ್ತ್ರವನ್ನು ತುಂಡುಮಾಡಿ ಇಂದ್ರಜಿತುವಿನ ಮಸ್ತಕಾಗ್ರವನ್ನು ಬಹಳವಾಗಿ ಘಾಯ ಮಾಡಲು ಇಂದ್ರಜಿತುವು ಆ ಗರುಡಾಸ್ತ್ರದ ನೋವನ್ನು ತಡೆಯಲಾರದೆ ಮೂರ್ಛಿತನಾಗಿ ಬಿದ್ದಕೂಡಲೇ ವಾನರಸೇನೆಯು ಜಯಕಾರಗಳನ್ನು ಉಚ್ಚ ಧ್ವನಿಯಿಂದ ಕೂಗಿತು. ರಾಕ್ಷಸ ಬಲದಲ್ಲಿ ಹಾಹಾಕಾರವಾಗಲು ಲಕ್ಷ್ಮಣನು ಇಂದ್ರಜಿತುವನ್ನು ಪಾಶದಿಂದ ಬಿಗಿದು ವಿರಾಧಿತನವಶಕ್ಕೆ ಕಾಯುವುದಕ್ಕಾಗಿ ಕೊಟ್ಟನು. ಕುಂಭಕರ್ಣನು ಇದನ್ನು ತಿಳಿದು ಮಾರುತಿಯ ಮುಂದೆ ಬಂದು ಯುದ್ಧಕ್ಕೆ ಪ್ರಾರಂಭಿಸಿದನು. ಆಗ ಸೂರ್ಯದೇವನು ಈ ಯುದ್ಧಗಳನ್ನು ನೋಡಿ ಸಾಕಾಗಿ ಪಶ್ಚಿಮಾಬ್ಧಿಯ ನೀರಿನಲ್ಲಿ ಮುಳುಗುತ್ತಿರಲು ಉಭಯ ದಳದಲ್ಲೂ ಯುದ್ಧಕ್ಕೆ ಕಾಲಗತಿಸಿತೆಂಬ ಧರ್ಮ ಕಹಳೆಯನ್ನು ಧ್ವನಿ ಮಾಡಲು ಆ ದಿವಸ ಯುದ್ಧವನ್ನು ನಿಲ್ಲಿಸಿ ಉಭಯರೂ ಅರ್ಹತ್ಪರಮೇಶ್ವರರ ಸ್ಮರಣೆಯನ್ನು ಮಾಡುತ್ತಿದ್ದರು.

೬೮. ಕುಂಭಕರ್ಣನ ಸಮರ.

ಕರುಣಾಶಾಲಿಗಳಾದ ಗೌತಮಗಣಧರರು ಶ್ರೇಣಿಕನಿಗೆ ಮುಂದಿನ ಕಥಾ ಸಂದರ್ಭವನ್ನು ಹೇಳಲುದ್ಯೋಗಿಸಿದರು. ಎಲೈ ಶ್ರೋತೃಮುಖ್ಯನಾದ ರಾಜಶ್ರೇಷ್ಠಿಯೆ! ಕೇಳುವನಾಗೈ— ಬಳಿಕ ರಾಘವನು ಮಂಗಳಾನಕ ಸ್ವರದಿಂದ ಪ್ರಭಾತ ಕಾಲವನ್ನು ತಿಳಿದೆದ್ದು ಅರ್ಹದ್ದೇವನ ಚರಣಾರ್ಚನೆ ಸಹಿತವಾದ ನಿತ್ಯವಿಧಿಯನ್ನು ಮಾಡಿ ಲಕ್ಷ್ಮಣನೊಡನೆ ಸಭಾಸ್ಥಾನಕ್ಕೆ ತೆರಳಿ ಭದ್ರಾಸನಾಸೀನನಾಗಿರಲಾಗ, ಇಂದ್ರಜಿತುವನ್ನು ಕಟ್ಟಿ ಶ್ರೀರಾಮನ ಪಾದಮೂಲದಲ್ಲಿಡಲು ರಾಘವನು ಕಟ್ಟನ್ನು ಬಿಚ್ಚಿಸಿ ಕೈಯಿಂದ ಇಂದ್ರಜಿತುವಿನ ಮೈಯನ್ನು ಸವರಿ, “ಕಂದನೇ! ಏಳು. ವಿಶ್ರಾಂತಿ ತೆಗೆದುಕೋ” ಎಂದು ಹೇಳಿ ಉಚಿತಾಸನದಲ್ಲಿ ಕುಳ್ಳಿರಿಸಿ ಪ್ರಿಯವಾದ ಮಾತುಗಳನ್ನಾಡಲು, ಸಭಾಜನರೆಲ್ಲ ಆಶ್ಚರ್ಯಭರಿತರಾಗಿ, “ಕೈಗೆ ಸಿಕ್ಕಿದ ಶತ್ರುವಿಗೆ ಈ ರೀತಿ ಉಪಚಾರ ಮಾಡುವುದನ್ನು ಎಲ್ಲೂ ಕಂಡು ಕೇಳಿಯೂ ಇಲ್ಲ. ಈಮಹಾಪುರುಷನು ದೇವರಿಗೆ ಸಮಾನನು”

ಎಂದು ಹೇಳುತ್ತಿದ್ದರು. ಇತ್ತಲು ನಾರದರು ಮಂಡೋದರಿಯನ್ನು ಕುರಿತು ಇಂದ್ರಜಿತುವು ಬಂಧನವಾದುದನ್ನು ಹೇಳಲು ಕೇಳಿ ಸ್ಮೃತಿಯಿಲ್ಲದೆ ಭೂಶಯ್ಯಾಗತಳಾದಳು. ಶ್ರೀಮಾಲೆಯೇ ಮೊದಲಾದವರ ಉಪಚಾರದಿಂದೆಚ್ಚೆತ್ತಿಕೊಂಡು ನಾರದರಿಗೆ ನಮಸ್ಕರಿಸಿ ಗಂಡನಾದ ದಶಾನನನಿಗೆ ಬುದ್ಧಿವಾದವನ್ನು ಹೇಳಿ ಜಾನಕಿಯನ್ನು ರಾಮನ ಸಮೀಪಕ್ಕೆ ಕಳುಹಿಸಿ ರಾಜೀ ಮಾಡಿಕೊಳ್ಳಬೇಕೆಂತ ಹೇಳಬೇಕೆಂದು ಪ್ರಾರ್ಥಿಸಿದಳು. ನಾರದ ಯತಿಗಳು ರಾವಣನ ಸಮೀಪಕ್ಕೆ ಹೋಗಲು ರಾವಣನು ಎದ್ದು ಪ್ರತ್ಯುತ್ಥಾನವನ್ನು ಮಾಡಿ ಪೀಠದಲ್ಲಿ ಕುಳ್ಳಿರಿಸಿದನು. ನಾರದರು ಜಾನಕಿಯ ವಿಷಯವನ್ನೆತ್ತಿ ಮಾತನಾಡುತ್ತಾ ಯುದ್ಧದದೆಸೆಯಿಂದ ಹಸ್ತಪ್ರಹಸ್ತಾದಿ ಸೇನಾನಾಯಕರ ಸಾವನ್ನು ಜ್ಞಾಪಕಕ್ಕೆ ತರುತ್ತಾ, ಪ್ರಿಯಪುತ್ರನಿಗಾದ ಬಂಧನವನ್ನು ಜ್ಞಾಪಕಕ್ಕೆ ತರುತ್ತಾ, ಮುಂದಾಗುವ ನಷ್ಟವನ್ನು ವಿವರಿಸುತ್ತಾ ಜಾನಕಿಯನ್ನು ರಾಮನಿಗೆ ಒಪ್ಪಿಸಿ ಬಾಳುವುದು ಶ್ರೇಯಸ್ಕರವೆಂದು ಹಿತಚಿಂತನೆಯನ್ನು ಹೇಳಲು ದಶಕಂಠನು ಮದ್ದನ್ನು ಕುಡಿದ ಕಪಿಯಂತೆ ಬಹಳವಾಗಿ ಕುಣಿದು ರೇಗಿ ಸರ್ವಥಾ ಜಾನಕಿಯನ್ನು ಬಿಡುವದಿಲ್ಲವೆಂದು ಹಠ ವರ್ತನೆಯನ್ನು ಮಾಡುತ್ತಿರಲು ಮಂಡೋದರಿಯು ಬಂದು ಗಂಡನಾದ ದಶಾನನನ ಪಾದದ ಮೇಲೆ ಬಿದ್ದು ಹೊರಳಿ ಯುದ್ಧವನ್ನು ನಿಲ್ಲಿಸಿ ರಾಮನ ಕೂಡ ರಾಜಿ ಮಾಡಿಕೊಳ್ಳಬೇಕೆಂತ ಪ್ರಾರ್ಥಿಸುತ್ತಿರಲಾಗ, ಕುಂಭಕರ್ಣನು ಬಂದು ಶೌರ್ಯದ ಮಾತನಾಡುತ್ತಾ "ನರರನ್ನು ಗೆಲ್ಲುವುದು ಖೇಚರರಿಗೆ ದೊಡ್ಡದೇ? ಕಪಿಗಳು ಸೇರಿ ಹಾವಳಿಮಾಡುತ್ತಿದ್ದರೆ ಅವಕ್ಕೆ ಚನ್ನಾಗಿಪ್ರಹರಿಸಿದರೆ ಓಡಿಹೋಗುತ್ತವೆ. ರಾಮಲಕ್ಷ್ಮಣರನ್ನು ಬಂಧಿಸಿ ನಿನ್ನ ಪಾದದಡಿಯಲ್ಲಿಡುತ್ತೇನೆ" ಎಂದು ತನ್ನ ಪರಾಕ್ರಮಗಳ ಭವಿಷ್ಯತ್ತನ್ನು ಕೊಚ್ಚಿ ಕೊಳ್ಳಲು, ರಾವಣನು ತಮ್ಮನ ಮಾತಿಗೆ ಕಿವಿಕೊಟ್ಟು ಕೇಳಿ ಸಂತೋಷವನ್ನು ಹೊಂದಿ ಮಂಡೋದರಿಗೆ ತತ್ಕಾಲಸಾಂತ್ವವಚನವನ್ನು ಹೇಳಿಕಳುಹಿಸಿದನು. ಇತ್ತ ಕುಂಭಕರ್ಣನು ಹತ್ತಕ್ಷೋಹಿಣಿ ದಂಡನ್ನು ತೆಗೆದುಕೊಂಡು ಯುದ್ಧಕ್ಕೆ ಹೊರಟನು. ಅತ್ತ ರಾಘವನ ಸೈನಿಕರು ಆಯುಧಸಮೇತರಾಗಿ ಯುದ್ಧಕ್ಕೆ ಅನುವಾದರು. ಕುಂಭಕರ್ಣನು ಕಪಿಧ್ವಜಸೈನ್ಯದೊಳಕ್ಕೆ ನುಗ್ಗಿ ಅಸಂಖ್ಯಾತ ಸೈನಿಕರನ್ನು ಬಡಿದು ಓಡಿಸುತ್ತಿರಲು ಮಾರುತಿಯು ಎದುರಾಗಿ ಬಂದು ಕುಂಭಕರ್ಣನನ್ನು ಎದುರಿಸಿದನು. ಹಿಂದಿನಿಂದ ಲಕ್ಷ್ಮಣನು ಯುದ್ಧಕ್ಕೆ ನಿಂತು ಕುಂಭಕರ್ಣನನ್ನು ಶರದಿಂದ ಬಡಿಯಲು

ಆತನು ಎದುರು ಬಾಣಗಳನ್ನು ಹೊಡೆದು ಧಾಂಧಳೆ ನಡೆಸುತ್ತಿರಲು ಲಕ್ಷ್ಮಣನು ಹೊಡೆದು ಕುಂಭಕರ್ಣನನ್ನು ಮೂರ್ಛೆಗೊಳಿಸಿದನು. ಸೂರ್ಯನು ಕಾಲವರಿತು ಅಸ್ತಾಚಲಕ್ಕೋಡಿದನು. ಧರ್ಮಕಹಳೆಗಳು ಯುದ್ಧವನ್ನು ನಿಲ್ಲಿಸುವುದಕ್ಕಾಗಿ ಉಭಯ ದಳಗಳಲ್ಲೂ ಭೋರ್ಗರೆಯಲು ಸಕಲರು ಯುದ್ಧಗಳನ್ನು ನಿಲ್ಲಿಸಿ, ಶ್ರೀಜಿನೇಶ್ವರರ ಪಾದಕಮಲಗಳನ್ನು ಸಂಧ್ಯಾಕಾಲದಲ್ಲಿ ಭಜಿಸುವರಾದರು.

೬೯. ಕುಂಭಕರ್ಣನ ಬಂಧನ.

ಶ್ರೇಣಿಕ ಮಹಾರಾಜನೇ! ಕೇಳುವನಾಗ್ಯೆ—ಈ ಉಭಯ ಬಲದಲ್ಲಿ ನಷ್ಟವಾದರೂ ಕಪಿಧ್ವಜರು ನಾಲ್ಕು ಸಾವಿರ ಧನುಜ ಶೂರರನ್ನು ಕೈಶೆರೆ ಹಿಡಿದುದಲ್ಲದೆ ಕುಂಭಕರ್ಣನನ್ನು ಮೂರ್ಛೆಗೊಳಿಸಿದ್ದೂ ಜನಜನಿತವಾಗಿರುವದನ್ನು ಲಘುಪರ್ಣಿಯು ಅಶೋಕವನದಲ್ಲಿದ್ದ ಸೀತಾದೇವಿಗೆ ಅರಿಕೆ ಮಾಡಲು, ಸೀತೆಯು ಹಸನ್ಮುಖಳಾಗಿ ಮೂರು ದಿನದೊಳಗೆ ರಾಮದರ್ಶನವಾಗಬಹುದೆಂದು ಮನದಲ್ಲಿ ಉಂಟಾಗುತ್ತಲೇ ತಲೆಯ ಮೇಲಿದ್ದ ಆಚ್ಛಾದನವು ಕಳಚಿಹೋಯಿತು. ಇತ್ತಲು ಕುಂಭಕರ್ಣನಿಗೆ ಶೈತ್ಯೋಪಚಾರವನ್ನು ಮಾಡಿಸುತ್ತಾ ದಶಾನನನು ಕೂತಿರಲು ಕುಂಭಕರ್ಣನು ಮೆಲ್ಲಗೆ ಕಣ್ಣು ತೆರೆದು ನಿದ್ರೆಯಿಂದೆಚ್ಚೆತ್ತಿದವನಂತೆ ಎದ್ದು ಕೂತುಕೊಂಡನು. ಆಗ ದಶಕಂಠನು ತುಂಬಾಸಂತೋಷಪಟ್ಟು ಹಿಗ್ಗಿ ತಮ್ಮನ ವಿಶ್ರಾಂತಿಯನ್ನು ಕೇಳಲಾಗ, ಮಂಡೋದರಿಯ ಬರುವಿಕೆಯನ್ನು ಕಂಡು, ರಾವಣನು ಎದ್ದು ಅವಳನ್ನು ಸನ್ಮಾನಿಸಲು, ನೆನ್ನೆ ಸುದ್ಧಿಯನ್ನು ಕೇಳಲು, ರಾವಣನು ತತ್ಕಾಲೋಚಿತವಾದ ಮಾತನಾಡಿದರೂ ಯುದ್ಧದ ವಾರ್ತೆಯನ್ನು ಕೇಳಿ ಮಂಡೋದರಿಯು ಬಹಳ ಅನುತಾಪವನ್ನು ಹೊಂದಿ ರಾಜೀ ಪ್ರಸ್ತಾಪನ್ನೆತ್ತಲು ರಾವಣನು ಕೇತುಗ್ರಸ್ತನಾದ ಸೂರ್ಯನಂತೆ ಮುಖವನ್ನು ಮಾಡಿಕೊಂಡನು. ಕುಂಭಕರ್ಣನು ಈ ದಿವಸದ ಯುದ್ಧದಲ್ಲಿ ರಾಮನು ಹತನಾಗಿ ಕಪಿಸೇನೆಗಳು ಫಲಾಯನರಾಗುವದಾಗಿ ಹೇಳಲು, ದಶಾನನನು ತಮ್ಮನನ್ನು ತಕ್ಕೈಸಿ ಆಶೀರ್ವಾದ ಮಾಡಿ ಯುದ್ಧಕ್ಕೆ ಕಳುಹಿಸಿಕೊಟ್ಟನು. ಆ ದಿವಸ ಸೂರ್ಯನು ಬಹಳ ಮುಂದಾಗಿಯೇ ಯುದ್ಧವನ್ನು ನೋಡುವದಕ್ಕಾಗಿ ಉದಯಾಚಲದಲ್ಲಿ ಪ್ರಕಾಶಿಸಿದನು. ಶ್ರೀರಾಮನು ನಿತ್ಯಾನುಷ್ಠಾನಗಳನ್ನು ಮಾಡಿ ಲಕ್ಷ್ಮಣನೊಡನೆ ಸಭೆಗೆ ಬಂದು ಭದ್ರಾಸನದಲ್ಲಿ

ಕುಳಿತು ಯುದ್ಧ ಸನ್ನದ್ಧತೆಗೆ ಅಪ್ಪಣೆಕೊಟ್ಟು ಮಾರುತಿ ಮೊದಲಾದವರನ್ನು ಕಳುಹಿಸಿಕೊಟ್ಟನು. ಯುದ್ಧರಂಗದಲ್ಲಿ ಉಭಯ ಸೇನೆಗಳು ಬಂದು ಸೇರಿ ಯುದ್ಧಕ್ಕೆ ಪ್ರಾರಂಭ ಮಾಡಿದರು. ಮಾರುತಿಯ ಮುಂದೆ ಕುಂಭಕರ್ಣನು ನಿಂತು ಯುದ್ಧ ಮಾಡುತ್ತಿರಲು ಲಕ್ಷ್ಮಣನು ಮುಂದಾಗಿಬಂದು ಕುಂಭಕರ್ಣನ ಮೇಲೆ ಬಾಣಗಳನ್ನು ಕರೆದನು. ಕುಂಭಕರ್ಣನು ಬಹಳವಾಗಿ ಬಾಣ ಯುದ್ಧ ಮಾಡಿ ಸಾಕಾಗಿ ಗದೆಯನ್ನು ಹಿಡಿದೆತ್ತಿ ಲಕ್ಷ್ಮಣನ ತೋಳಿಗೆ ಹೊಡೆಯಲು ಲಕ್ಷ್ಮಣನು ಅದಕ್ಕೆ ಸಿಕ್ಕದೆ ಗಧಾಪ್ರಹಾರವನ್ನು ಕುಂಭಕರ್ಣನಿಗೆ ಕೊಡಲು ಅದನ್ನು ತಡೆಯಲಾರದೆ ದೊಡ್ಡ ಧ್ವನಿಯಿಂದ ಘೋರ್ಗರೆಯಲು ರಾವಣನು ಕೇಳಿ ಓಡಿ ಬಂದು ನಿಲ್ಲಲು ರಾಘವನು ಆತನಿಗೆ ಕಾಣಿಸಿಕೊಂಡು ಯುದ್ಧಕ್ಕೆ ಅನುವಾದನು. ಉಭಯರಿಗೂ ಯುದ್ಧನಡೆಯುತ್ತಿರಲು ಸೂರ್ಯನು ಬೇಸತ್ತು ಪಶ್ಚಿಮಾಬ್ಧಿಗೆ ಬೀಳಲು ಓಡಲಾಗ ಯುದ್ಧನಿಲಗಡೆ ಸೂಚಕವಾದ ಧರ್ಮ ಕಹಳೆಗಳು ಘೋರ್ಗರೆದವು. ಯುದ್ಧವು ನಿಲ್ಲಿಸಲ್ಪಟ್ಟಿತು. ಉಭಯ ಬಲವು ಅರ್ಹಂತರ ಸ್ತುತಿಗಳನ್ನು ಹಾಡಿದರು.

೭೦. ದಶಾನನನ ಸಮರ.

ಅವನೀನಾಥನೇ! ಮುಂದಣ ಕಥಾನಕವನ್ನು ಕೇಳು—ರಾಘವ ಸೇನಾ ದಳದಲ್ಲಿ ಅಂಗದನೇ ಮೊದಲಾದವರು ಯುದ್ಧದ ಪ್ರಸಕ್ತಿಯನ್ನಾಡುತ್ತಾ ಕುಳಿತಿರಲು, ದೈತ್ಯೇಶ್ವರನು ಕುಂಭಕರ್ಣನನ್ನು ರಥದ ಮೇಲೆ ಮಲಗಿಸಿ ಸರ್ವಾಂಗಕ್ಕೂ ಪನ್ನೀರು ಹಾಕಿ ಲಾಮಂಚದ ಬೀಸಣಿಗೆಯಿಂದ ಬೀಸಲು, ಕುಂಭಕರ್ಣನು ಎಚ್ಚೆತ್ತು ಓಡುತ್ತಿರಲು, ದಶಕಂಠನು ಎಲ್ಲಿಗೆ ಹೋಗುತ್ತೀಯೆ? ಎನಲು ರಾಘವಸೈನ್ಯವನ್ನು ಹೊಡೆದೋಡಿಸುವುದಕ್ಕೆಂತ ಹೇಳಿದನು. ಮತ್ತು ಸೈನ್ಯದೊಳಕ್ಕೆ ನುಗ್ಗಿ ನಾನಾವಿಧವಾಗಿ ದಳವನ್ನು ಚದುರಿಸುತ್ತಿರಲು ದಂಡಿನ ವರ ಹಾಹಾಕಾರವನ್ನು ಲಕ್ಷ್ಮಣನು ಕೇಳಿ ಕುಂಭಕರ್ಣನ ಮುಂದೆ ಬಂದು, "ಎಲೈ ಖೂಳನೇ! ಎರಡಾವರ್ತಿ ಮೂರ್ಛೆಯಾಗಿ ಬಿದ್ದಿದ್ದೇ! ಪುನಹ ಈಗ ಬಂದಿದ್ದೀಯಾ?" ಎನಲು, ಆತನು ಯಾವ ಮಾತನ್ನೂ ಆಡದೇ ಲಕ್ಷ್ಮಣನ ಮೇಲೆ ಗಧಾಪ್ರಹಾರ ಮಾಡಿದನು. ಲಕ್ಷ್ಮಣಸ್ವಾಮಿಯು ಆ ಏಟಿಗೆ ಬೇಸತ್ತು ಕೈಯಿಂದ ಕುಂಭಕರ್ಣನ ಬೆನ್ನಿನಮೇಲೆ ಅಪ್ಪಳಿಸಲು ಅದನ್ನು ತಡೆಯಲಾರದೆ ಭೂಮಿಗೆ ಬೀಳಲು, ಆತನನ್ನು ನಾಗಪಾಶದಿಂದ ಬಿಗಿದು ಕಪಿಧ್ವಜರಿಂದ

ಹೊರಿಸಿಕೊಂಡುಹೋಗಿ ಶ್ರೀರಾಮನ ಪಾದಮೂಲದಲ್ಲಿಡಿಸಲಾಗ ಕರುಣಾಕರನಾದ ರಾಘವನು ಸೇವಕರಿಂದ ಕಟ್ಟನ್ನುಬಿಚ್ಚಿಸಿ ಮೈಸವರಿ ಕುಂಭಕರ್ಣನನ್ನು ವಿಭೀಷಣ ಇಂದ್ರಜಿತುವಿರುವಸ್ಥಳಕ್ಕೆ ಕಳುಹಿಸಿಕೊಟ್ಟನು. ಆಗ ವಿಭೀಷಣನು ಸಹೋದರನ ಸ್ಥಿತಿಯನ್ನು ನೋಡಿ ವ್ಯಸನವನ್ನು ಹೊಂದಿ ಬುದ್ಧಿವಾದವನ್ನು ಹೇಳಿದನು. ಇತ್ತಕುಂಭಕರ್ಣನು ಸೆರೆಯಲ್ಲಿ ಸಿಕ್ಕಿದ್ದನ್ನು ತಿಳಿದು ದಶಾನನನು ಅನೇಕ ರಾಕ್ಷಸರೊಡನೆ ಬರುತ್ತಿರುವಲ್ಲಿ ರಾಮಸೈನ್ಯಸ್ಥಳದ ಗರುಡಧ್ವಜಗಳು ಬೇಡವೆಂದು ಹೇಳುವೋಪಾದಿಯಲ್ಲಿ ಅಳ್ಳಾಡುತ್ತಿದ್ದವು. ರಾವಣನು ಶತ್ರುಸೈನ್ಯದೊಳಕ್ಕೆ ನುಗ್ಗಿ ಸೇನೆಗಳನ್ನು ಚದುರಿಸುತ್ತಿರಲು ಆಂಜನೇಯನು ರಾವಣನ ಮುಂದೆ ಬಂದು ಯುದ್ಧಕ್ಕೆನಿಂತು "ಎಲೋ ರಾವಣನೇ! ಈಗಲಾದರೂ ರಾಮರ ಪಾದಮೂಲಕ್ಕೆ ಸೀತಾಮಾತೆಯನ್ನು ಒಪ್ಪಿಸಿ ಬದುಕು" ಎನಲಾಗಿ ರಾವಣನು "ಕದನಕ್ಕೆ ಕೈಸಾಗದೆ ಈನೀತಿಯ ಮಾತುಗಳನ್ನಾಡುತ್ತೀಯಾ? ಈ ಬಾಣದ ಆರ್ಭಟವನ್ನು ತಡೆದಿಕೋ" ಎಂದು ಬಾಣವನ್ನು ಬಿಡಲು ಲಕ್ಷ್ಮಣನು ಆ ರಾವಣನ ಬಾಣವನ್ನು ಕತ್ತರಿಸಿದನು. ಹೀಗೆ ಯುದ್ಧವು ನಡೆಯುತ್ತಿರಲು ರವಿಯು ಅಸ್ತಂಗತನಾಗಲು ಉಭಯ ಸೇನೆಯಲ್ಲೂ ರಾತ್ರಿ ಸಮಿಾಪಿಸುತ್ತೆ. ಯುದ್ಧ ನಿಲ್ಲಿಸಬೇಕೆಂಬುದನ್ನು ಸೂಚಿಸುವ ಭೇರಿಕಹಳೆಗಳು ಧ್ವನಿಯಾಗಲು ಎರಡು ಕಡೆಯ ಸೇನೆಯವರು ಸಂಗ್ರಾಮವನ್ನು ನಿಲ್ಲಿಸಿ ಅರ್ಹತ್ಪರಮೇಶ್ವರನನ್ನು ಮನಸ್ಸಿನಲ್ಲಿ ನೆನೆಯುತ್ತಿದ್ದರು.

೭೧. ಲಕ್ಷ್ಮಣನಿಗೆ ಚಕ್ರಸಾಧ್ಯವಾದದ್ದು.

ಶ್ರೇಣಿಕಮಹಾರಾಜನೇ! ಮುಂದಣ ಕಥಾವಿವರವನ್ನು ಕೇಳುವನಾಗೈ ಎಂದು ಗೌತಮಸ್ವಾಮಿಗಳು ಮುಂದೆ ಹೇಳಲುಪಕ್ರಮಿಸಿದರು— ಮುಂದಿನ ಬೆಳಿಗ್ಗೆ ಮಂಡೋದರಿಯು ದೇವರನ್ನು ಭಜಿಸಿ ಗಂಡನಾದ ದಶಾನನನು ಹಿಂದಿನ ರಾತ್ರಿ ಏತಕ್ಕೆ ಪುರದಅರಮನೆಗೆ ಬರಲಿಲ್ಲವೆಂತ ಕೇಳಲು, ಯಾರೂ ಏನನ್ನೂ ಹೇಳದೇ ಹೋದದ್ದರಿಂದ ತಾನೇ ಸೇವಕಿಯರೊಡಗೂಡಿ ಶಿಬಿರಕ್ಕೆ ಹೊರಟಳು. ದಶಾನನನು ಮಂಡೋದರಿಯ ಬರುವಿಕೆಯನ್ನು ನೋಡಿ ಹಸನ್ಮುಖನಾಗಿ ಮಂಡೋದರಿಯನ್ನು ಸ್ವಾಗತಿಸಿ ತಕ್ಕೈಸಿ ಉಚಿತಾಸನದಲ್ಲಿ ಕುಳ್ಳಿರಿಸಲಾಗ ಮಂಡೋದರಿಯು ಸಮರದ ಸಮಾಚಾರವನ್ನು ಕೇಳಲು ಎಲ್ಲಾ ಅನುಕೂಲವಾಗಿದೆ. ಶರೆಯಾಗಿರುವ ಇಂದ್ರಜಿತು ಮತ್ತು ಘಟಕರ್ಣರನ್ನು

ಬಿಡಿಸಿ ರಾಮಲಕ್ಷ್ಮಣರ ತಲೆಗಳನ್ನು ತರಬೇಕೆಂದು ಹೇಳಲಾಗಿ, ಮಂಡೋದರಿಯು ನಾಥನ ಪಾದದಮೇಲೆ ಬಿದ್ದು ಹೊರಳಿ "ಸ್ವಾಮಿಯೇ! ಜಾನಕಿಯನ್ನು ಅವಳ ಗಂಡನ ಸಮೀಪಕ್ಕೆ ಕಳುಹಿಸಿಕೊಡು. ಅವಳು ನಿನ್ನ ಪುತ್ರಿ: ನಾವು ಮಂದಾಸನದಲ್ಲಿ ಕಳುಹಿಸಿದ ಮಗುವಲ್ಲವೇ? ನನ್ನ ರೂಪನ್ನು ಸೀತೆಯಲ್ಲಿ ಹೋಲಿಕೆಯಾಗುವುದನ್ನು ನೋಡಲಿಲ್ಲವೇ?" ಎಂದು ಬಹಳವಾಗಿ ಹೇಳಿದರೂ ರಾವಣನು ಮಂಡೋದರಿಗೆ ತತ್ಕಾಲಪ್ರಿಯವಾದ ಮಾತನ್ನು ಆಡಿ ಅರಮನೆಗೆ ಕಳುಹಿಸಿದನು. ರಾಣಿಯಾದ ಮಂಡೋದರಿಯು ಅರಮನೆಯನ್ನು ಸೇರಲು ಕುಮಾರಿಯರು ಮತ್ತು ಇತರ ಸಮಾನ ಸ್ತ್ರೀಯರು ಮಂಡೋದರಿಯ ಸುತ್ತಲೂ ನಿಂತು ಯುದ್ಧದ ಸಮಾಚಾರವನ್ನು ಕೇಳಲಾಗ, ಮಂಡೋದರಿಯು ವಿಷಣ್ಣವದನಳಾಗಿ ಶೋಕದಿಂದ ಕೂಡಿ ಸಮಾಚಾರವನ್ನು ಹೇಳುತ್ತಿರಲು, ಎಲ್ಲರೂ ವ್ಯಸನದಿಂದ ಕೂಡಿ ಭಗ್ನಮನೋರಥರಾಗಿ ಕೇಳುತ್ತಿದ್ದರು. ಇತ್ತ ಲಘುಪರ್ಣಿಯು ವಾಡಿಕೆ ಪ್ರಕಾರ ಸೀತಾಮ್ಮನವರ ಸಮೀಪಕ್ಕೆ ಬಂದು ಧನುಜರ ಸೋಲನ್ನೂ ಘಟಕರ್ಣಾದಿಗಳ ಶರೆಯನ್ನೂ, ರಾವಣನ ಅವತಾರವು ಈ ದಿವಸ ಪೂರ್ತಿಯಾಗುವದೆಂದೂ ಹೇಳಲು, ಜಾನಕಿಯು ಸಂತೋಷದಿಂದ ಒಡಗೂಡಿ ಪಂಚನಮಸ್ಕಾರವನ್ನು ಜಪಿಸುತ್ತಿದ್ದಳು. ಅತ್ತ ರಣರಂಗದಲ್ಲಿ ಸೂರ್ಯನು ಹೇಗೆ ಗಗನಕ್ಕೆ ಏರಿ ತಾಪಗೊಳಿಸುವನೋ ಹಾಗೆ ಉಭಯಸೇನೆಯಲ್ಲೂ ಸಂತಾಪವು ಬಹಳಹೆಚ್ಚುತ್ತಿದ್ದಿತು. ರಾವಣನು ಕ್ರಮವಾಗಿ ಮಹಾನಾಯಕರಾದ ಆಂಜನೇಯ ಸುಗ್ರೀವಾದಿಗಳ ಮೇಲೆ ಬಿದ್ದು ಘಾಸಿ ಮಾಡುತ್ತಿರಲು ಲಕ್ಷ್ಮಣಮಹಾವೀರನು ರಾವಣನ ಮುಂದೆ ಬಂದು ನಿಲ್ಲಲು ರಾವಣನು ಲಕ್ಷ್ಮಣಸ್ವಾಮಿಯನ್ನು ಕಂಡು "ನಿನ್ನನ್ನು ಚಕ್ರದಿಂದ ಧ್ವಂಸ ಮಾಡುತ್ತೇನೆ" ಎಂದು ಚಕ್ರವನ್ನು ತೆಗೆದು ಲಕ್ಷ್ಮಣದೇವರ ಮೇಲೆ ಬಿಟ್ಟನು. ಚಕ್ರವು ಸಹಸ್ರಾರು ಶಿಡಲುಗಳು ಏಕಕಾಲದಲ್ಲಿ ಶಬ್ದಮಾಡಿದಂತೆ ಅತ್ಯಂತವಾಗಿ ಆರ್ಭಟಿಸುತ್ತಾ ಹೊರಡಲು ರಾಕ್ಷಸ ಸೈನಿಕರುಗಳ ಜಯಕಾರಶಬ್ದವು ದಿಗಂತವನ್ನು ಮುಟ್ಟಿದವು. ರಾಮಸೈನಿಕರಲ್ಲಿ ಎದೆ ನಿರ್ಭೇದವಾಯಿತು. ಆಂಜನೇಯ ಸುಗ್ರೀವ ಅಂಗದ ಜಾಂಬವ ಮತ್ತು ವಿಭೀಷಣಾದಿಗಳ ಎದೆಯು ಸಹ ತಲ್ಲಣಿಸುತ್ತಿರಲು ಆ ಚಕ್ರವು ಲಕ್ಷ್ಮಣಸ್ವಾಮಿಯನ್ನು ಮೂರಾವರ್ತಿ ಪ್ರದಕ್ಷಿಣೀಕರಿಸಿ ಬಲಭಾಗದಲ್ಲಿ ನಿಂತುಕೊಂಡಿತು. ಆಗ ಲಕ್ಷ್ಮಣಸ್ವಾಮಿಯು "ಎಲೋ ರಾವಣ! ಈಗಲಾದರೂ ಮಹಾಮಾತೆಯನ್ನು ರಾಮದೇವರಿಗೆ

ಒಪ್ಪಿಸಿ ಬದುಕು" ಎಂದು ವಿಶಾಲ ಹೃದಯದಿಂದ ಹೇಳಿದಾಗ್ಯೂ ರಾವಣನು ಕೇಳದೆ "ಅದು ನನ್ನ ಆಯುಧಾಗಾರದಲ್ಲಿ ಹುಟ್ಟಿ ನನ್ನನ್ನೇ ಧ್ವಂಸಮಾಡುತ್ತೊ? ಅದು ಹೋದರೇನು? ನನ್ನ ಭುಜದಲ್ಲಿ ಶಕ್ತಿಯಿರುವಾಗ್ಯೆ ನನ್ನ ಶಕ್ತಿ ನೋಡು!" ಎಂತ ಗದಾಪ್ರಹಾರಮಾಡಿದನು. ಆಗ ಲಕ್ಷ್ಮಣನು ಚಕ್ರವನ್ನು ತೆಗೆದು ರಾವಣನಮೇಲೆ ಎಸೆಯಲು ಚಕ್ರವು ಆರ್ಭಟಿಸುತ್ತಾ ಹೋಗಿ ರಾವಣನ ಶಿರಸ್ಸನ್ನು ಕತ್ತರಿಸಿ ಭೂಪತನಮಾಡಿತು- ಆ ಕ್ಷಣ ಕಪಿಧ್ವಜರು ಗರುಡಧ್ವಜರು ಖಗಪತಿ ನರಪತಿಗಳು ಜಯಕಾರಗಳನ್ನು ಮಾಡುತ್ತಿರಲು ವ್ಯಂತರಾಮರರು ಪುಷ್ಪಗಳನ್ನು ಲಕ್ಷ್ಮಣಸ್ವಾಮಿಯಮೇಲೆ ಸುರಿದರು. ರಾಕ್ಷಸದಳವು ಸೂರ್ಯ ರಶ್ಮಿಯನ್ನು ಕಂಡ ತಿಮಿರದಂತೆ ಪಲಾಯನಸೂತ್ರವನ್ನೈದಿತು. ಅಷ್ಟರಲ್ಲಿ ಭಾಸ್ಕರದೇವನು ಅಸ್ತಾಚಲವನ್ನೇರಿದನು. ಶ್ರೀರಾಮನು ಲಕ್ಷ್ಮಣನೊಡನೆ ಜಿನೇಶ್ವರನ ಪಾದ ಕಮಲವನ್ನು ಭಜಿಸುತ್ತಿದ್ದನು.

೭೨. ಲಕ್ಷ್ಮಣನ ಪಟ್ಟಾಭಿಷೇಕ.

ಅಖಿಲ ರಾಜಾಧಿರಾಜ ರಾಜಚೂಡಾಮಣಿಯಾದ ಶ್ರೇಣಿಕ ಮಹಾರಾಜನೇ ಲಾಲಿಸೈ! ರಾವಣನು ದೀರ್ಘನಿದ್ರೆಗಾಗಿ ಭೂಗತನಾದ ವರ್ತಮಾನವು ಎಷ್ಟು ಶೀಘ್ರವಾಗಿ ಲಂಕಾಪಟ್ಟಣವನ್ನು ಮುಟ್ಟಿತೋ ಅದಕ್ಕಿಂತಲೂ ಶೀಘ್ರವಾಗಿ ರಾವಣನ ರಾಣಿವಾಸದಸ್ತ್ರೀಜನರು ದುಃಖಸಮುದ್ರದಲ್ಲಿ ಮುಳಗಿದರು. ಮಂಡೋದರಿಯು ನಿಶ್ಚೈತನ್ಯದಿಂದ ಬಿದ್ದಿದ್ದು, ರಾವಣನ ಮೃತ ದೇಹವನ್ನು ನೋಡಬೇಕೆಂಬ ಬಯಕೆಯುಂಟಾಗುತ್ತಲೇ ಹೊಸಚೈತನ್ಯವು ಕೂಡಲು ರಣರಂಗಕ್ಕೆ ವಾಹನಾದಿಗಳನ್ನು ಅಪೇಕ್ಷಿಸದೆ ಕಾಲುನಡೆಯಲ್ಲೇ ಹೊರಟಳು. ಅವಳ ಹಿಂದೆ ಪ್ರತಿಚಕ್ರಿಯ ಷೋಡಶ ಸಹಸ್ರ ಕಾಂತಾಮಣಿಗಳೂ, ಅವರ ದಾದಿಯರೂ ನಂಟರೂ ಕಾಲುನಡೆಯಲ್ಲೇ ಹೊರಟರು. ಶ್ರೀರಾಮನು ಶೋಕಾವಿಷ್ಟರಾಗಿ ಬರುತ್ತಿರುವ ಈ ರಾಣಿವಾಸದವರನ್ನು ನೋಡಿ ಬಹಳವಾಗಿ ಅನುತಾಪಪಟ್ಟನು. ಒಬ್ಬ ಸ್ತ್ರೀಯಾದ ಜಾನಕಿಗೋಸ್ಕರ ಇಷ್ಟೊಂದು ರಾಜಾಧಿರಾಜರನ್ನೂ, ಮಹಾಶೂರರನ್ನೂ, ಮೂಕಪ್ರಾಣಿಗಳಾದ ಅಸಂಖ್ಯಾತ ತಿರ್ಯಂಚಪ್ರಾಣಿಗಳನ್ನೂ ಹತಪಡಿಸಿದ್ದಕ್ಕೋಸ್ಕರ ತನ್ನ ಜನ್ಮವನ್ನು ಉತ್ಕೃಷ್ಟವಾದದ್ದನ್ನಾಗಿ ಯೋಚಿಸಲಿಲ್ಲ. ಈ ಪಾಪ ಸಮೂಹವನ್ನು ಯಾವಾಗ ಯಾವ ರೀತಿಯಿಂದ ಕಳೆದುಕೊಳ್ಳಬೇಕೆಂಬ ಚಿಂತೆಯಿಂದ ಒಡಗೂಡಿ

ಬೆಂಡಾದನು. ಮಂಡೋದರಿಯು ರಣರಂಗ ಪ್ರವೇಶಮಾಡಿದಕೂಡಲೆ ಅವಳ ದಾದಿಯರು ದೀಪದಿಂದೊಡಗೂಡಿ ರಾವಣನು ಮಡಿದು ಭೂಶಾಯಿಯಾದ ಸ್ಥಳಕ್ಕೆ ಕರೆದುಕೊಂಡು ಬರುವದೊರಳಗೆ ವಿಭೀಷಣಾದಿಗಳು ನಿರ್ಜೀವಿಯಾದ ರಾವಣನ ಸುತ್ತ ಸುತ್ತುಗೊಂಡಿದ್ದರು. ಮಂಡೋದರಿಯು ರಾವಣನ ಮೃತ ದೇಹವನ್ನುನೋಡಿ ವಿಸ್ಮೃತಿಹೊಂದಿ ಹಾಗೆಎಚ್ಚತ್ತುಕ್ಕೊಂಡು "ಕಾಂತನೇ! ನನ್ನಕೂಡ ಒಂದೆರಡುಮಾತನಾಡದೆ ಏಕೆ ಮಲಗಿದ್ದೀಯೆ? ಧನುಜೇಂದ್ರನೇ! ನಿನ್ನ ಸುಂದರ ಕಾಯವು ಈ ಕಲ್ಲು ಗೂಡಿದ ಭೂಮಿಯಲ್ಲಿ ಹೇಗೆ ಶಯನ ಮಾಡಿತು? ಅಯ್ಯೋ ವಿಧಿಯೇ! ಇಂಥಾ ದುರವಸ್ಥೆಯಲ್ಲಿ ಬಿದ್ದಿರುವದನ್ನು ನೋಡಿದ ನನ್ನ ಕಣ್ಣುಗಳು ಈಕ್ಷಣ ಮುಚ್ಚಿಹೋಗಬಾರದೇ?" ಎಂದು ನಾನಾ ವಿಧವಾಗಿ ಹಂಬಲಿಸಿ ಪ್ರಲಾಪಿಸುತ್ತಿರುವುದನ್ನು ಇತರ ಸ್ತ್ರೀಯರು ಕೇಳಿ ರಾವಣನನ್ನು ಹಂಬಲಿಸಿ ಗೋಳಾಡುತ್ತಿರಲು ರಣಸ್ಥಳವು ಶೋಕವೆಂಬ ಸಮುದ್ರದಂತೆ ಕಾಣುತ್ತಿತ್ತು. ರಣರಂಗದಲ್ಲಿರುವ ಉಭಯಸೇನೆಯೂ, ಪ್ರತಿಯೊಬ್ಬಜೀವಿಯು ಆ ಸ್ತ್ರೀಯರ ರೋಧನವನ್ನು ಕೇಳಿ ಕಣ್ಣುಗಳಿಂದ ನೀರನ್ನು ಸುರಿಸಿದವು. ಆಗ ವಿಭೀಷಣನು ಅಣ್ಣನನ್ನು ತಬ್ಬಿಕೊಂಡು ಸೋದರ ಸ್ನೇಹದಿಂದ ಬಹಳವಾಗಿ ಹಂಬಲಿಸಿ ದುಃಖಪಟ್ಟನು. ಆಗ ಶ್ರೀರಾಮ ಲಕ್ಷ್ಮಣರು ಬಂದು ಬಹಳವಾಗಿ ಅವರನ್ನು ಸಮಾಧಾನಪಡಿಸಿ ರಾವಣನಿಗೆ ಮುಂದೆನಡೆಯ ಬೇಕಾದ ಕ್ರಿಯೆಗಳನ್ನು ಗೌರವದಿಂದ ಮಾಡುವುದಕ್ಕೆ ತಕ್ಕ ಸಹಾಯವನ್ನು ಕಲ್ಪಿಸಿ ಆವಾಸಸ್ಥಳಕ್ಕೆ ದಯಮಾಡಿಸಿದರು. ರಾವಣನಿಗೆ ಕ್ರಮಪ್ರಕಾರವಾಗಿ ಔರ್ಧದೇಹಿಕಕ್ರಿಯೆಗಳು ಸಾಂಗವಾಗಿ ನೆರವೇರಿದವು. ರಣಸ್ಥಳವು ಕ್ರಮವಾಗಿ ಶೋಧಿಸಲ್ಪಟ್ಟಿತು. ಉಭಯ ಸೈನಿಕರು ಸ್ನೇಹಭಾವದಿಂದ ವರ್ತಿಸಿದರು. ವಿಭೀಷಣನು ಲಂಕಾಪುರವನ್ನು ಅಲಂಕರಿಸಿ ಸುಗ್ರಿವಾದಿಗಳೊಡನೆ ರಾಮಲಕ್ಷ್ಮಣರನ್ನು ಕರೆದುಕೊಂಡುಹೋಗಿ ರಾಮಲಕ್ಷ್ಮಣರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ನರಪತಿಖಗಪತಿ ನೃಂತರಾಮರರೇ ಮೊದಲ್ಗೊಂಡು ಸಕಲರೂ ಚಕ್ರವರ್ತಿಯಾದ ಲಕ್ಷ್ಮಣದೇವರಿಗೆ ಅಭ್ಯುತ್ಥಾನ ಮೊದಲಾದ ರಾಜೋಪಚಾರಗಳನ್ನು ಮಾಡುತ್ತಿರಲಾಗ, ದಶಾನನನ ರಾಣಿವಾಸದವರು ಸೀತಾದೇವಿಯನ್ನು ಅರಮನೆಗೆ ಕರತಂದು ಅಭ್ಯಂಗನ ಕ್ರಿಯಾದಿಗಳನ್ನು ಮಾಡಿ ಅನರ್ಘ್ಯವಾದ ರತ್ನಾಭರಣಗಳಿಂದ ಅಲಂಕರಿಸಿ ನವೀನವಾದ ಬಹಳ ಬೆಲೆಯುಳ್ಳ ದುಕೂಲಗಳನ್ನು ಉಡಿಸಿ ಸುಗಂಧಗಳಿಂದ ಕೂಡಿದ ಪುಷ್ಪಗಳಿಂದ

ಅಲಂಕಾರಗಳನ್ನು ಮಾಡಿ ಸುಮಂಗಳಗಳನ್ನು ಹಾಡುತ್ತಾ ಸೀತಾದೇವಿಯನ್ನು ಕರೆದುಕೊಂಡು ಬಂದು ಶ್ರೀರಾಮನು ಕೂತಿದ್ದ ಭದ್ರಾಸನದಲ್ಲಿ ಕುಳ್ಳಿರಿಸಿ ಮುತ್ತಿನಕ್ಷತೆಗಳನ್ನಿಡಲು ಮಂಗಳವಾದ್ಯಗಳು ಘೋರ್ಗರೆದವು. ಸೀತಾದೇವಿಯು ಇಷ್ಟು ವೈಭವದಿಂದ ಕೂಡಿದ್ದರೂ ಶ್ರೀರಾಮನ ಮುಖ ದರ್ಶನವಾಗುತ್ತಲೇ ಬಹಳವಾಗಿ ತಾನು ಅನುಭವಿಸಿದ ದುಃಖವನ್ನು ನೆನೆದುಕೊಂಡು ಬಾಷ್ಪಪೂರಿತ ನೇತ್ರಳಾದಳು. ಅನಂತರ ಸೀತಾದೇವಿಯು ತನಗೋಸ್ಕರ ಉಂಟಾದ ಮಹಾಕದನವನ್ನು ಕುರಿತು ಮಾತನಾಡಿವ್ಯಥೆಪಟ್ಟಳು. ಶ್ರೀರಾಮನು ಸೀತಾದೇವಿಯನ್ನು ನೋಡಿ ಅವಳಿರುವ ಕೃಶಾವಸ್ಥೆಯನ್ನು ನೋಡಿ ಅನುತಾಪ ಪಟ್ಟನು. ರಾಘವನು ಭರತ ಶತ್ರುಘ್ನರಿಗೆ ಹೇಳಿ ಕಳುಹಿಸಿ ಬರಮಾಡಿಸಿದನು. ಆಪ್ತಬಂಧುಮಿತ್ರರೊಡನೆ ಶ್ರೀರಾಮನು ಸೌಖ್ಯದಿಂದೊಡಗೂಡಿ ಅರ್ಹತ್ಪರಮೇಶ್ವರರನ್ನು ಪೂಜಿಸುತ್ತಿದ್ದನು.

೭೩. ಅಯೋಧ್ಯಾ ಪ್ರವೇಶ.

ಎಲೈ ಶ್ರೇಣಿಕ ಮಹಾರಾಜನೇ ! ಕೇಳುವನಾಗೈ. ಶ್ರೀರಾಮನು ನಿತ್ಯಕರ್ಮಾನುಷ್ಠಾನಪೂರಿತನಾಗಿ ಸಭಾಪ್ರವೇಶಮಾಡಿ ಸಕಲರಿಂದಲೂ ಬೀಳ್ಕೊಂಡು ಭದ್ರಾಸನಾವೇಷ್ಟಿತನಾಗಿ ಅನುಜನಾದ ಭರತನನ್ನು ಕರೆದುಕುಳ್ಳಿರಿಸಿಕೊಂಡು ಅಯೋಧ್ಯಾಪಟ್ಟಣದ ಸ್ಥಿತಿಗತಿಗಳನ್ನು ಕುರಿತು ವಿಚಾರಮಾಡುತ್ತಾ, ತಾಯಿಂದರ ವಿಷಯವನ್ನು ಕೇಳಲಾಗಿ ಭರತನು ಮುಖವನ್ನು ತಗ್ಗಿಸಿ "ಕೌಸಲ್ಯಾ ಮಾತೆಯರು ಆಗಾಗ್ಯೆ ನಿಮ್ಮಗಳನ್ನು ನೆನೆದು ವಿಸ್ಮೃತಿಯನ್ನು ಹೊಂದುತ್ತಲಿಧಾರೆ. ನನ್ನ ಜನನಿಯಾದ ಕೈಕಿಲೆಯೂ ಕೂಡ ನಿಮ್ಮ ವನವಾಸವನ್ನು ಕುರಿತು ಬಹಳ ಸಂಕಟಗೊಳುತ್ತಾಳೆ. ಸುಮಿತ್ರಾ ದೇವಿಯರು ಯಾವಾಗಲೂ ಲಕ್ಷ್ಮಣಸ್ವಾಮಿಯನ್ನು ನೆನೆದು ಸಂತಪ್ತರಾಗಿ ಆಗಾಗ್ಯೆ ಆಹಾರಾದಿಗಳನ್ನು ಬಿಡುತ್ತಾ ಕೃಶರಾಗುತ್ತಿಧಾರೆ. ನಾನು ತಮ್ಮ ಪಾದುಕೆಯನ್ನಿಟ್ಟು ರಾಜ್ಯಭಾರಮಾಡುತ್ತಲಿರುವಾಗ ಹನ್ನೆರಡು ವರ್ಷಗಳು ಅತಿಕ್ರಮಿಸಿರುವುದು; ಆ ಭಾರ ನನಗೆ ಬಿಡಗಡೆಯಾಗಬೇಕು" ಎಂದು ಹೇಳಿದನು. ಶತ್ರುಘ್ನನುಬಂದು ರಾಮನಿಗೆ ನಮಸ್ಕರಿಸಿ, ಮಾತೆಯರದರ್ಶನಕ್ಕೆ ಅಗತ್ಯವಾಗಿಬರಬೇಕೆಂದುಬೇಡಿಕೊಳ್ಳುತ್ತಿರುವಾಗ ಶ್ರೀರಾಮದೇವರು ಬೃಹಸ್ಪತಿಗೆ ಸಮನಾದ ಪುರೋಹಿತ ಜೀವರತ್ನವನ್ನುಕರೆದು, ಅಯೋಧ್ಯಾಪ್ರಯಾಣಕ್ಕೆ ಸುದಿನ ಸುಲಗ್ನವನ್ನು ಹೇಳ

ಬೇಕೆಂದು ಕೇಳಲಾಗಿ, ಆ ಪುರೋಹಿತನು ಶ್ರೇಷ್ಠವಾದ ದಿವಸ ಮತ್ತು ಲಗ್ನ ವನ್ನು ಹೇಳಲಾಗ ಶ್ರೀರಾಮನು ಲಕ್ಷ್ಮಣವಾಸುದೇವನೊಡನೆ ಭೂಚರಖಚರ ಸೇನೆಗಳೊಡನೆ ಮತ್ತು ಅಂತಃಪುರದ ಸ್ತ್ರೀಯರೊಡನೆ ಹೊರಟು ಅಲಂಕಾರ ವಾದ ಅಯೋಧ್ಯಾಪಟ್ಟಣವನ್ನು ಪ್ರವೇಶಮಾಡಿ ಆದಿಜಿನರ ಚೈತ್ಯಾಲಯ ವನ್ನು ಹೊಕ್ಕು ದೇವರನ್ನು ಒಂದಿಸಿ ಅರಮನೆಗೆ ಬಂದು ಕೌಸಲ್ಯಾದೇವಿಗೆ ನಮಸ್ಕರಿಸಿ ಅನಂತರ ಸುಮಿತ್ರಾ ಕೈಕಿಲೆ ಮೊದಲಾದವರಿಗೆ ಒಂದಿಸಿದನು. ಸೌಂಧರಿಯೇ ಮೊದಲಾದ ಹದಿನಾರು ಸಾವಿರ ವಾಸುದೇವನ ಪತ್ನಿಯರೂ ಸೀತಾದೇವಿಯೇ ಮೊದಲಾದ ಎಂಟು ಸಾವಿರ ಬಲದೇವನ ಸ್ತ್ರೀಯರೂ ಅತ್ತೆಯರಾದ ಕೌಸಲ್ಯೆ ಮೊದಲಾದವರಿಗೆ ನಮಸ್ಕರಿಸಿ ಆಶೀರ್ವಾದವನ್ನು ಹೊಂದಿ ಸುಖದಿಂದಿರುತ್ತಿದ್ದರು. ಕೌಸಲ್ಯೆಮೊದಲಾದ ಮಾತೆಯರು ಮಕ್ಕಳ ಅಸದೃಶವಾದ ಐಶ್ವರ್ಯವನ್ನು ನೋಡಿ ಹಿಗ್ಗಿ ಸಂತೋಷಪಡುತ್ತಿದ್ದರು. ರಾವಣನ ತಮ್ಮನಾದ ಕುಂಭಕರ್ಣ ಮತ್ತು ಮಗನಾದ ಇಂದ್ರಜಿತು ಮೊದ ಲಾದ ಅನೇಕ ಧನುಜರು ದಶಕಂಠನ ಅಳಿವನ್ನು ಕಂಡು ವೈರಾಗ್ಯಶಾಲಿಗಳಾಗಿ ತಪೋನಿಷ್ಠರಾಗಿ ಸದ್ಗತಿಯನ್ನುಹೊಂದಿದರು. ರಾವಣನ ಸ್ತ್ರೀಯರೂ ಮತ್ತು ಆತನ ಸೊಸೆಯರೂ, ಕುಂಭಕರ್ಣನ ಪತ್ನಿಯರೂ ಮತ್ತು ಅವರಲ್ಲಿ ಆಸಕ್ತ ರಾದವರೂ ಕೂಡ ಯತಿಗಳಲ್ಲಿ ಧರ್ಮಶ್ರವಣಗಳನ್ನು ಕೇಳಿ ವೈರಾಗ್ಯ ಸಂಪನ್ನ ರಾಗಿ ಶ್ರೀಮತಿಯರೆಂಬ ಗಂತಿಯರಲ್ಲಿ ದೀಕ್ಷೆಯನ್ನು ಸ್ವೀಕರಿಸಿ ತಪವನ್ನಾಚರಿಸಿ ಸದ್ಗತಿಯನ್ನು ಹೊಂದಿದರು. ಇತ್ತಲು ಬಲವಾಸುದೇವರಾದ ರಾಮ ಲಕ್ಷ್ಮ ಣರು ಸೌಖ್ಯದಿಂದ ತ್ರಿಖಂಡಾಧಿಪತ್ಯವನ್ನು ಮಾಡುತ್ತಾ ಜಿನೇಶ್ವರನನ್ನು ಭಜಿಸುತ್ತಿದ್ದರು.

೭೪. ರಾಮಕೇಶವರ ಆಸ್ಥಾನ.

ಎಲೈ ಶ್ರೇಣಿಕಮಹಾರಾಜನೇ ! ಕೇಳುವನಾಗೈ—ಶ್ರೀರಾಮಲಕ್ಷ್ಮಣರು ಎಂಟನೆಯ ಬಲಕೇಶವರಾದ್ದರಿಂದ ಸಂಚಿತ ಪುಣ್ಯವುಳ್ಳವರಾಗಿ ಅಯೋಧ್ಯಾ ಪಟ್ಟಣದಲ್ಲಿ ಸಿದ್ಧಸಿಂಹಾಸನಾಧೀಶ್ವರರಾಗಿ ಮೆರೆಯುತ್ತಿರಲು ಭರತಕ್ಷೇತ್ರದ ತ್ರಿಖಂಡಗಳಲ್ಲಿರತಕ್ಕ ರಾಜರುಗಳು ತಮ್ಮತಮ್ಮಲ್ಲಿರತಕ್ಕ ಅನರ್ಘ್ಯವಾದ ರತ್ನ ವಸ್ತು ವಾಹನಗಳನ್ನು ಒಪ್ಪಿಸಿ ಶರಣಾಗತರಾದರು. ವಿಜಯಾರ್ಧಪರ್ವತದ ಮೇಲಿರತಕ್ಕ ಖೇಚರಾಧಿಪತಿಗಳು ಬಂದು ತಮ್ಮಲ್ಲಿರತಕ್ಕ ಅನರ್ಘ್ಯ ವಸ್ತು

ಗಳನ್ನು ಒಪ್ಪಿಸಿ ಶರಣಾಗತರಾದರು. ವ್ಯಂತರಾಮರರೂ ಕೂಡ ಚಕ್ರಿಯ ಆಜ್ಞಾಧಾರಕರಾಗಿಯಾದರು. ಈಬಲಕೇಶವರು ಅತ್ಯಂತ ಧರ್ಮನಿಷ್ಠರಾಗಿ ರಾಜರು ಮತ್ತು ಪ್ರಜೆಗಳ ಕಷ್ಟಸುಖಮಾರ್ಗಗಳನ್ನು ಚನ್ನಾಗಿ ತಿಳಿದುಕೊಂಡು ಅವರವರಿಗೆ ಯಾವ ಯಾವ ಕಾಲದಲ್ಲಿ ಯಾವ ರೀತಿ ಸಹಾಯವನ್ನು ಮಾಡ ಬೇಕೆಂಬುದನ್ನು ತಿಳಿದು ಕಾಲವರಿತು ಅವರಿಗೆ ಸಹಾಯಮಾಡುತ್ತಾ, ಕಪ್ಪ ಕಾಣಿಕೆಗಳನ್ನು ಅವರಿಂದ ಪಡೆಯುತ್ತಾ ಸುಖವಾಗಿರುತ್ತಿದ್ದರು. ಅವರುಗಳು ಯಾವಾಗಲೂ ದೀನಾನಾಥರನ್ನು ಕಾಪಾಡುತ್ತಾ, ಸತ್ಪುರುಷರನ್ನು ಪೋಷಿಸುತ್ತಾ, ಗುರುಜನರಿಗೆ ಭಕ್ತಿಯಿಂದ ನಮಸ್ಕರಿಸುತ್ತಾ, ಅನೇಕ ಚೈತ್ಯಚೈತ್ಯಾಲಯಗಳನ್ನು ನೂತನವಾಗಿ ರಚಿಸುತ್ತಲಿದ್ದರು. ಪ್ರಜೆಗಳು ಸ್ವಚ್ಛಂದರಾಗಿ ನಡೆಯದೇ ಧರ್ಮಮಾರ್ಗವನ್ನೂ, ಪಂಚಾಣುವ್ರತಗಳನ್ನೂ ಪಾರಿಪಾಲಿಸುತ್ತಾ ದೇವಗುರುಗಳಲ್ಲಿ ಭಕ್ತರಾಗಿದ್ದರು. ಈ ಮಹಾಪುರುಷರು ಪರಿಪಾಲಿಸುತ್ತಿದ್ದ ಪ್ರತಿಯೊಂದು ಪ್ರದೇಶದಲ್ಲೂ ಕಾಲಕ್ಕೆ ಸರಿಯಾಗಿ ಮಳೆಬಿದ್ದು ತೃಣಧಾನ್ಯ ಸಮೃದ್ಧಿಯಾಗಿತ್ತು. ದೇಶವೆಲ್ಲಾ ನದೀ ಮಾತೃಕವಾಗಿ ತರುಗುಲ್ಮಲತಾವೇಷ್ಟಿತವಾಗಿ ಜನರ ತನುಮನಗಳನ್ನು ಶಳೆಯುತ್ತಿದ್ದವು. ಈರೀತಿ ಧರ್ಮರಾಜ್ಯಪರಿಯುತರಾಗಿ ಬಲಕೇಶವರಾದ ರಾಮಲಕ್ಷ್ಮಣರು ಸೌಖ್ಯದಿಂದಕೂಡಿ ಜಿನೇಶ್ವರನ ಪಾದಪೂಜೆಯನ್ನು ನಡೆಸುತ್ತಾ, ಜಿನನನ್ನು ಧ್ಯಾನಿಸುತ್ತಿದ್ದರು.

೭೫. ಭರತನ ವೈರಾಗ್ಯ.

ಗೌತಮ ಗಣಧರರು ಶ್ರೇಣಿಕಮಹಾರಾಜನಿಗೆ ಮುಂದಣ ಕಥಾನಕವನ್ನು ಪೇಳಲುದ್ಯೋಗಿಸಿದರು. ಎಲೈ ಶ್ರೋತೃಮುಖ್ಯನಾದ ಶ್ರೇಣಿಕನೇ! ಕೇಳುವನಾಗೈ. ಶ್ರೀರಾಮನು ವಾಸುದೇವನನ್ನು ಕರೆದು "ನಾವು ಈ ಅಯೋಧ್ಯಾಪಟ್ಟಣದ ಅಧಿರಾಜಪಟ್ಟವನ್ನು ಭರತನಿಗೂ, ಯುವರಾಜ ಪಟ್ಟವನ್ನು ಶತೃಘ್ನನಿಗೂ ಕೊಡೋಣ" ಎಂದು ಹೇಳಲಾಗಿ ಲಕ್ಷ್ಮಣಸ್ವಾಮಿಯು ಒಪ್ಪಿಕೊಂಡನು. ಭರತ ಮಹಾರಾಜನ ಪಟ್ಟದ ಆನೆಯು ಆಲಾನವನ್ನು ಕಿತ್ತು ಸ್ವೇಚ್ಛೆಯಾಗಿ ತಿರುಗುತ್ತಾ, ಯಾರಿಗೂ ಯಾವುದೊಂದು ಬಾಧೆಯನ್ನೂ ಮಾಡದೇ ಯಾವ ಆಹಾರವನ್ನೂ ತಿನ್ನದೆ ಇರುತ್ತಿರಲು ಶ್ರೀರಾಮನು ಆನೆಯನ್ನು ನೋಡಿ ಇದಕ್ಕೆ ಭವಸ್ಮರಣೆಯಾಗಿರಬಹುದೆಂದು ಯೋಚಿಸಿ, ಗುರುಗಳಲ್ಲಿ ಈ ವಿಷಯವನ್ನು ಅರಿಕೆಮಾಡಲು ಅದರ ಭವಾವಳಿಯನ್ನು ವಿವರಿಸಿ

"ಅದಕ್ಕೆ ಕಾಲಲಬ್ಧಿಯು ಕೂಡಿ ವೈರಾಗ್ಯವನ್ನು ಹೊಂದಿರುತ್ತೆ. ಇದಕ್ಕೆ ಶುದ್ಧಾಹಾರವನ್ನು ಕೊಟ್ಟರೆ ತೆಗೆದುಕೊಳ್ಳುತ್ತೆ." ಎಂದು ಹೇಳಲಾಗಿ ಅದೇ ರೀತಿಯಾಗಿ ಆಹಾರವನ್ನು ಕೊಡುತ್ತಿದ್ದು ಪೂಜಿಸುತ್ತಿದ್ದರು. ಇದೇ ರೀತಿ ಶ್ರೀ ರಾಮನೂ ಸಹ ಮಾಡುತ್ತಿದ್ದುದರಿಂದ ಜನರೆಲ್ಲಾ ಆನೆಯನ್ನೂ ಕೂಡ ದೇವಾಂಶೆಯೆಂದು ತಿಳಿದುಕ್ಕೊಂಡರು. ಭರತನು ವೈರಾಗ್ಯಸಂಪನ್ನನಾಗಲು ಶ್ರೀರಾಮನು ನಾನಾವಿಧವಾಗಿ ಹೇಳಲು ಭರತನು ತಮ್ಮ ಅಪ್ಪಣೆಯಾದಂತೆ ನಡೆದುಕೊಳ್ಳುತ್ತೇನೆನಲು ಪೌದನಪುರಿಯನ್ನು ಆತನಿಗೆ ಕೊಟ್ಟನು. ಶತ್ರುಘ್ನ ನನ್ನು ಕುರಿತು "ನಿನಗೆ ಬೇಕಾದ ಪಟ್ಟಣವನ್ನು ಕೇಳು" ಎನಲು ಮಧುರಾ ಪಟ್ಟಣವನ್ನು ಅಪೇಕ್ಷಿಸಿದನು. ಶ್ರೀರಾಮನು ಆತನಿಗೆ ಆ ಪಟ್ಟಣವನ್ನು ಗೆದ್ದು ಕೊಡಬೇಕೆಂದು ಹೇಳಲು ಲಕ್ಷ್ಮಣನು ಅಭೇದ್ಯವಾದ ಶಾರ್ಙ್ಗಯನ್ನು ಶತ್ರುಘ್ನನಿಗೆ ಕೊಟ್ಟು ಯುದ್ಧಕ್ಕೆ ಹೋಗಲು ಸಿದ್ಧಪಡಿಸಿದನು. ಭರತ ಶತ್ರುಘ್ನರು ಅಗ್ನಿಶರಸಹಿತರಾಗಿ ಬಲದಿಂದ ಹೊರಟು ಆ ಪಟ್ಟಣವನ್ನು ಗೆದ್ದುಕೊಂಡರು. ಮಧುರಾ ಪಟ್ಟಣದಲ್ಲಿ ಶತ್ರುಘ್ನನು ರಾಜ್ಯಭಾರಮಾಡುತ್ತಿರುವುದನ್ನು ಕೇಳಿ ಒಬ್ಬ ಖಗಪತಿಯು ಇಂದುಮುಖಿ ಎಂಬ ಸ್ತ್ರೀಯನ್ನು ಕರೆತಂದು ವಿವಾಹಮಾಡಿದನು. ಮಹಾಪರಾಕ್ರಮಿಯಾದ ರಾಘವನು ಈ ವೃತ್ತಾಂತವನ್ನು ಕೇಳಿ ಸಂತೋಷಗೊಂಡು ಜನಕಸುತೆಯೊಡನೆ ಸುಖವಾಗಿ ಕಾಲ ಕಳೆಯುತ್ತಿರಲಾಗ ಲಕ್ಷ್ಮಣನ ಮನೋವಲ್ಲಭೆಯರಾದ ವಿಶಲ್ಯಾಸುಂದರಿಗೆ ಶ್ರೀವರನೆಂಬುವನೂ, ರೂಪುವತಿಗೆ ಪೃಥ್ವೀತಿಲಕನೆಂಬುವನೂ, ವನಮಾಲೆಗೆ ಅರ್ಜುನನೂ, ಕಲ್ಯಾಣಮಾಲೆಗೆ ಮಂಗಳನೂ, ರತ್ನಮಾಲೆಗೆ ಶ್ರೀಕೇಳಿಯೂ, ಜಿತಪದ್ಮೆಗೆ ವಿಮಲಪ್ರಭನೂ, ಅಭಯಮತಿಗೆ ಸತ್ಯಕೀರ್ತಿಯೂ, ಮನೋರಮೆಗೆ ಸುಪಾರ್ಶ್ವನೂ ಎಂಬ ಮಕ್ಕಳಾಗಿ ಪ್ರವರ್ಧಮಾನರಾಗಿ ಬೆಳೆಯುತ್ತಾ ಅರ್ಹತ್ಪರಮೇಶ್ವರರ ಸ್ಮರಣೆಯನ್ನು ಮಾಡುತ್ತಲಿದ್ದರು.

೭೬. ಕುಶಲವರ ಜನನ.

ಮಗಧಾಧೀಶನೇ ! ಕೇಳುವನಾಗೈ.

ಜನಕ ಸುತೆಯು ಚತುರ್ಥ ಸ್ನಾನವಾದ ರಾತ್ರಿ ಪತಿಶಯನಗತಳಾಗಿ ಬೆಳಗಿನ ಝಾವದಲ್ಲಿ ಎರಡು ಶರಭಗಳು ತನ್ನ ಬಾಯಿಯೊಳಗೆ ಪ್ರವೇಶ ಮಾಡಿದಂತೆಯೂ, ಪುಷ್ಪಕ ವಿಮಾನದಿಂದ ತಾನು ಬೀಳುತ್ತಿರುವಂತೆಯೂ

ಸಹ ಸ್ವಪ್ನದಲ್ಲಿ ಕಂಡು ಮಂಗಳಧ್ವನಿಗಳಿಂದ ಎಚ್ಚೆತ್ತು ಪ್ರಭಾತ ನಿತ್ಯಾನು ಷ್ಠಾನವನ್ನು ಮಾಡಿ ಪತಿಯ ಸವಿಾಪಕ್ಕೆ ಹೋಗಿ ಸ್ವಪ್ನಫಲವನ್ನು ಆತ ನಿಂದ ತಿಳಿದು ಹರ್ಷವಿಷಾದಗೊಂಡು ಸುಖವಾಗಿರುತ್ತಿರಲು ಗರ್ಭಚಿಹ್ನೆ ಗಳು ವ್ಯಕ್ತವಾಗುತ್ತಾ ಬಂದಹಾಗೆಲ್ಲಾ ಆ ಮಹಾನುಭಾವೆಯಾದ ಸೀತಾ ದೇವಿಗೆ ಜಿನೇಶ್ವರರ ಪೂಜೋತ್ಸವಗಳನ್ನು ಮಾಡಬೇಕೆಂಬ ಬಯಕೆಗಳು ಹೆಚ್ಚುತ್ತಿರಲಾಗ ಉದ್ಯಾನವನದಲ್ಲಿರತಕ್ಕ ಜಿನಾಲಯಗಳಲ್ಲೆಲ್ಲಾ ಪ್ರತಿದಿನ ವೂ ಪೂಜೋತ್ಸವಗಳನ್ನು ನಡೆಸುತ್ತಿರಲೊಂದು ದಿವಸ ಸೀತಾದೇವಿಗೆ ಕಣ್ಣಿನ ರಪ್ಪೆಗಳು ಬಹಳವಾಗಿ ಅದಿರುತ್ತಿರಲು ಸೀತೆಯು ಉಗ್ರಾಣದ ಯಜಮಾನನನ್ನು ಕರೆಸಿ ಜನರಿಗೆ ದಾನಧರ್ಮಗಳನ್ನು ಮಾಡುವಂತೆ ಆಜ್ಞಾ ಪಿಸಿ ದಾನಧರ್ಮಗಳನ್ನು ಮಾಡಿಸುತ್ತಾ ಜಿನಪುರಾಣಶ್ರವಣದಲ್ಲಿ ನಿರತಳಾಗಿ ದ್ದಳು. ಇತ್ತಲು ಶ್ರೀರಾಮನು ಒಂದಾನೊಂದು ದಿವಸ ಸಭಾಮಂಟಪದಲ್ಲಿ ಮೂರ್ತಿಮತ್ತಾಗಿರುವ ವೇಳೆಯಲ್ಲಿ ಪುರದ ಕೆಲವು ದುಷ್ಟ ಜನರು ಪುರೋ ಹಿತನನ್ನು ಮುಂದಿಟ್ಟುಕೊಂಡು ಬಂದು ನೀವು ಬಿಟ್ಟ ಸ್ತ್ರೀಯನ್ನು ಕರೆದು ಕೊಂಡು ಬಂದಿರುವುದು ಒಳ್ಳೆಯದಲ್ಲವೆಂದು ಹೇಳಲಾಗಿ ಶ್ರೀರಾಮನು ತತ್ಕಾಲೋಚಿತವಾದ ವಾಕ್ಯವನ್ನು ಆಡಿ ಅವರನ್ನೆಲ್ಲಾ ಕಳುಹಿಸಿ ಲಕ್ಷ್ಮಣನ ಕೂಡ ಸೀತಾದೇವಿಯ ತ್ಯಜನವನ್ನು ಹೇಳಲು, ಆತನು ಎಷ್ಟು ಮಾತ್ರವೂ ಒಪ್ಪದಿದ್ದರೂ ರಾಮನು ಸೀತೆಯತ್ಯಾಜ್ಯವನ್ನು ನಿಶ್ಚೈಸಿ ತೀರ್ಥಕ್ಷೇತ್ರದ ಜಿನೇ ಶ್ವರ ಪುಣ್ಯಭೂಮಿಯ ದರ್ಶನಮಾಡಬೇಕೆಂದು ಸೀತೆಗೆ ವ್ಯಾಜ ಹೇಳಿ ಕೃತ ವಕ್ತ್ರನೊಡನೆ ಸೀತೆಯನ್ನು ಕಳುಹಿಸಿ ವನಕ್ಕೆ ಬಿಡಬೇಕೆಂಬ ಆಜ್ಞೆಯನ್ನು ಮಾಡಿದನು. ಕೃತವಕ್ತ್ರನು ಸೀತಾದೇವಿಯನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ದೊಡ್ಡ ಕಾಡಿನ ಮಧ್ಯ ಗಿರಿತಲದಿಂದ ಸೋರುತ್ತಿರುವ ಜಲವುಳ್ಳ ಪ್ರದೇಶದಲ್ಲಿ ವಿಮಾನದಿಂದಿಳಿಸಿ, ಅತ್ಯಂತವಾಗಿ ರೋಧನ ಮಾಡುತ್ತಿರುವ ಕೃತವಕ್ತ್ರನನ್ನು ಸೀತೆಯು ನೋಡಿ "ಯಾಕೆ ಹೀಗೆ ರೋಧನಮಾಡುತ್ತಿ?" ಎಂದು ಕೇಳಿದ್ದಕ್ಕೆ ಕೃತವಕ್ತ್ರನು ನಿಮ್ಮ ಮೇಲೆ ಲೋಕಾಪವಾದ ಬಂದದ್ದರಿಂದ ನಿಮ್ಮನ್ನು ಇಲ್ಲಿ ಬಿಟ್ಟು ಬರಬೇಕೆಂತ ಶ್ರೀರಾಮನ ಅಪ್ಪಣೆಯಾಗಿಥೆ. ಆದ್ದರಿಂದ ಶೋಕ ಪಡುತ್ತೇನೆಂದು ಹೇಳುತ್ತಿರುವದನ್ನು ಕೇಳುತ್ತಿದ್ದ ಸೀತಾದೇವಿಯು ನಿಂತಂತೆ ಭೂಗತಶಾಯಿಯಾಗಿ ಮೂರ್ಛೆಹೊಂದಿದಳು. ಆಗ ಕೃತವಕ್ತ್ರನು ಗಿರಿಯಿಂದ ಸೋರುತ್ತಿರುವ ತಣ್ಣಗಿರುವ ನೀರನ್ನು ಮುಖದಮೇಲೆ ಪ್ರೋಕ್ಷಿಸಿ ಎಲೆಗಳಿಂದ

ಸ್ವಲ್ಪ ಹೊತ್ತು ಬೀಸಲು ಸ್ವಲ್ಪ ಪ್ರಜ್ಞೆಯಾಯಿತು. ಆಗ ಕೃತವಕ್ತ್ರನು ಒದಗಿದ ಮಹಾವಿಪತ್ತನ್ನು ಕುರಿತು ಶೋಕಮಾಡಿದನು. ಗರ್ಭಿಣಿಯಾದ ಅಬಲೆಯನ್ನು ಈಗೊಂಡಾರಣ್ಯದಲ್ಲಿ ಬಿಟ್ಟು ನನ್ನನ್ನಲ್ಲದ ಯಾವಕುತ್ಸಿತಪುರುಷತಾನೆ ಮಾಡ್ಯಾನೆಂದು ಶೋಕದಿಂದ ಕೃತವಕ್ತ್ರನು ಸೀತಾಮ್ಮನವರಿಗೆ ನಮಸ್ಕರಿಸಿ ಹೊರಟುಹೋದನು. ಆಗ ಸೀತಾದೇವಿಯು ಎಲ್ಲಾದಿಕ್ಕುಗಳನ್ನು ನೋಡಲು ಯಾರೂ ಕಂಡು ಬರಲಿಲ್ಲ. ಆಗಸೀತಾದೇವಿಯು ತಾನು ಜನಕಮಹಾರಾಜನ ಅರಮನೆಯಲ್ಲಿದ್ದದ್ದನ್ನೂ, ಸ್ವಯಂವರದ ವಿಷಯವನ್ನೂ, ವನವಾಸದಲ್ಲಿ ಪತಿಯುಕೂಡ ಹೋದದ್ದನ್ನೂ, ರಾವಣನಿಂದ ಬಂಧಿತವಾದದ್ದನ್ನೂ ಪುನಹ ಅಯೋಧ್ಯಾಪಟ್ಟಣಕ್ಕೆ ಪತಿಯೊಡನೆ ಪ್ರಯಾಣಮಾಡಿದ್ದನ್ನೂ ತೀರ್ಥದೇವರ ದರ್ಶನಕ್ಕೆಹೋಗಲು ರಾಮನುಕಳುಹಿಸಿದ್ದನ್ನೂ ಯೋಚಿಸುತ್ತಾ ಯೋಚಿಸುತ್ತಾ ಚಿಂತಾಸಮುದ್ರದಲ್ಲಿ ಮುಳುಗಿ ಹೋದಳು. ತಾನು ಹುಟ್ಟಿ ಬೆಳೆದದ್ದು ದುಃಖ ಪ್ರಾಪ್ತಿಗೆಂದು ಹಂಬಲಿಸಿದಳು. ಮತ್ತು ಶ್ರೀರಾಮನ ಗುಣಪ್ರಶಂಸೆ ಮಾಡುತ್ತಾ, ಪತಿಗೆ ಎಂಟುಸಾವಿರ ಸ್ತ್ರೀಯರಿರುವರೆಂದು ಆಲೋಚಿಸುತ್ತಾ, ಹಾಗೇ ಜಿನಮುನಿಗಳನ್ನು ನೆನೆದು, ದ್ವಾದಶ ಭಾವನೆಗಳನ್ನು ಜ್ಞಾಪಿಸಿಕ್ಕೊಂಡು ಈ ಭಾವನೆಗಳಿಂದಲೇ ನಾನು ಜೀವಿತಾಂತ್ಯವನ್ನು ಕಳೆಯಬೇಕೆಂತ ನಿಶ್ಚೈಸಿದಳು. ಹಾಗೂ ಈಕೆಯನ್ನು ವ್ಯಸನ ಸಮುದ್ರವು ಮುಳುಗಿಸುತ್ತಿತ್ತು. ಈಕೆಯ ಸುತ್ತಲೂ ಮೃಗಪಕ್ಷಿಗಳ ಗುಂಪು ಕೂಡಿಕೊಂಡಿರುತ್ತಿರಲು ಅತ್ತಲು ಕೃತವಕ್ತ್ರನು ರಾಘವನ ಸನ್ನಿಧಿಗೆ ಹೋಗಿ ಜಾನಕಿಯನ್ನು ಅರಣ್ಯದಲ್ಲಿ ಬಿಟ್ಟುಬಂದ ಸಂಗತಿಯನ್ನರುಹಲು ಶ್ರೀರಾಮನು ಅನುತಾಪದಿಂದ ವಿಸ್ಮೃತಿಯನ್ನು ಹೊಂದಿದನು. ಕೌಸಲ್ಯಾ ಮಹಾದೇವಿಯರು ಕೇಳಿ ಮಹಾಶೋಕಾಕುಲರಾದರು. ಪುರಜನ ಪರಿಜನಗಳೆಲ್ಲಾ ಬಹಳ ವ್ಯಸನಪಟ್ಟರು. ಇತ್ತಲು ಪುಂಡರೀಕಿಣಿ ಪಟ್ಟಣದ ರಾಜನಾದ ವಜ್ರಜಂಘನಿಗೂ ಆತನ ರಾಣಿಯಾದ ಲಕ್ಷ್ಮೀಮತಿಗೂ ಉದಿಸಿದ ವಜ್ರಜಂಘನು ಮೃಗಯಾ ವಿನೋದಕ್ಕಾಗಿ ಆ ಮಹಾರಣ್ಯಕ್ಕೆ ಪ್ರವೇಶಮಾಡಲು ಅಲ್ಲಿ ಮೃಗಗಳ ಸುಳವೇ ಇಲ್ಲದ್ದನ್ನು ನೋಡಿ ಅಲ್ಲಲ್ಲಿ ಹುಡುಕುತ್ತಾ ಸೀತಾಮ್ಮನವರು ಇದ್ದ ಸ್ಥಳಕ್ಕೆ ಬಂದು ಮೃಗಮಧ್ಯದಲ್ಲಿ ಕುಳಿತಿರುವ ಸೀತಾದೇವಿಯನ್ನು ಕಂಡು ಆಶ್ಚರ್ಯಪಟ್ಟು ಸೀತಾದೇವಿಯಿಂದ ಸಕಲವನ್ನೂ ತಿಳಿದನಂತರ ಸೀತಾದೇವಿಯರನ್ನು ತಾಯಿಯರಂತೆ ಕಂಡು ಗೌರವಿಸಿ, ಅವರನ್ನು ಬಹಳ

ವಿಧವಾಗಿ ಹೇಳಿ ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋಗಿ ಅರಮನೆಯಲ್ಲಿ ಬಿಟ್ಟನು ಅಲ್ಲಿ ವಾಸವನ್ನು ಮಾಡುತ್ತಿರಲು ಸೀತಾದೇವಿಯರು ಎರಡು ಅವುಳಿ ಮಕ್ಕಳನ್ನು ಹಡೆದರು. ಮೊದಲು ಜನನವಾದದ್ದಕ್ಕೆ ಕುಶನೆಂತಲೂ ಮತ್ತೊಂದು ಶಿಶುವಿಗೆ ಲವನೆಂತಲೂ ನಾಮಕರಣಗಳನ್ನು ಮಾಡಿದರು. ವಜ್ರಜಂಘನು ಕಾಲಕ್ಕೆ ಸರಿಯಾಗಿ ವಿದ್ಯಾಭ್ಯಾಸಮಾಡಿಸಿ, ಅಸ್ತ್ರ ಶಸ್ತ್ರವಿದ್ಯೆಗಳಲ್ಲೂ ಪಾರಂಗತರನ್ನಾಗಿಮಾಡಿದನು. ಬಾಲ್ಯವನ್ನು ಕಳಿದು ಯೌವ್ವನವನ್ನು ಹೊಂದುತ್ತಿರಲಾಗ. ಕುಶನಿಗೆ ತನ್ನಮಕ್ಕಳಾದ ಶಶಿಚೂಳೆಯೇ ಮೊದಲಾದ ಮೂವತ್ತೆರಡು ಮಕ್ಕಳನ್ನು ಕೊಟ್ಟು ವಿವಾಹಮಾಡಿದನು. ಅನಂತರ ಲವನಿಗಾಗಿ ಪೃಥುನಗರದ ಪೃಥುರಾಜನ ಅಂಗನೆ ಪೃಥ್ವೀದೇವಿಗೆ ಮಗಳಾದ ಕನಕಪ್ರಭೆಯನ್ನು ಕೇಳಲಾಗ ಆ ರಾಜನು ಇವರನ್ನು ಹೀಯಾಳಿಸಿ ಕನ್ನಿಕೆಯನ್ನು ಕೊಡುವುದಿಲ್ಲವೆಂದು ಧಿಕ್ಕಾರಮಾಡಲು ಕುಶನು ಬಲಸನ್ನದ್ಧನಾಗಿ ಪೃಥುನಗರಕ್ಕೆ ಹೋಗಿ ಮುತ್ತಿಗೆ ಹಾಕಿ ಆ ಧೊರೆಯನ್ನು ಸೋಲಿಸಿ ಆ ಕನ್ಯೆಯನ್ನು ತಂದು ತಮ್ಮನಾದ ಲವನಿಗೆ ವಿವಾಹಮಾಡಿದನು. ಸೀತಾದೇವಿಯರು ಮಕ್ಕಳ ಶೌರ್ಯ ಪರಾಕ್ರಮಗಳನ್ನು ನೋಡಿ ಸಂತೋಷದಿಂದ ಅರ್ಹತ್ಪರಮೇಶ್ವರರನ್ನು ಅನುದಿನವೂ ಭಜಿಸುತ್ತಿದ್ದರು.

೭೭. ಲವನು ಕಪ್ಪವನ್ನು ತಡೆದದ್ದು.

ಮಗಧೇಶ್ವರನೇ ! ಮುಂದಿನ ಕಥಾಸಂದರ್ಭವನ್ನು ಕೇಳುವನಾಗ್ಯೆ. ಕುಶಲವರು ಅತ್ಯಂತ ಶೌರ್ಯದಿಂದ ಕೂಡಿ ವಜ್ರಜಂಘನ ಮನಸ್ಸನ್ನು ಅತ್ಯಂತ ಸಂತೋಷಪಡಿಸುತ್ತಿದ್ದರು. ಹೀಗಿರಲು ಒಂದಾನೊಂದು ದಿವಸ ಲವನು ಸ್ನೇಹಿತರೊಡನೆ ಪಟ್ಟಣದ ಹೊರಗಡೆ ಕುದುರೆಗಳನ್ನು ತೆಗೆದುಕೊಂಡು ಹೋಗಿಸ್ವೇಚ್ಛೆಯಾಗಿ ಓಡಾಡಿಸುತ್ತಿದ್ದನು. ಆಗಗಜಾದಿಗಳಮೇಲೆ ಚಕ್ರವರ್ತಿಗೆ ಸಲ್ಲತಕ್ಕ ಕಪ್ಪಕಾಣಿಕೆಯನ್ನು ಸ್ವಲ್ಪ ಸೇನೆಯವರು ಕಾಪಿಟ್ಟು ತೆಗೆದುಕೊಂಡುಹೋಗುತ್ತಿರಲು ಲವನು "ನೀವುಯಾರು? ಎಲ್ಲಿಗೆಹೋಗುತ್ತೀರಿ?" ಎಂದು ಕೇಳಲಾಗಿ, ಅವರು ಚಕ್ರವರ್ತಿಯ ಕಡೆಯುವರಾದ್ದರಿಂದ ಉದಾಶೀನದಿಂದ ಇವನಿಗೆ ಸರಿಯಾಗಿ ಉತ್ತರವನ್ನು ಹೇಳಲಿಲ್ಲ. ಆಗ ಲವನು ಅವರನ್ನು ತಡೆದು ನಿಲ್ಲಿಸಿದನು. ಆಗ ಅವರು "ನಾವು ಚಕ್ರವರ್ತಿಗೆ ಸಾಮಂತರಾಜರಿಂದ ಕಪ್ಪಕಾಣಿಕೆಯನ್ನು ವಸೂಲುಮಾಡಿ ತೆಗೆದುಕೊಂಡು ಹೋಗುತ್ತೇವೆ. ನೀವು

ಯಾರು" ಎಂದು ಲವನನ್ನು ಕೇಳಲು, "ನಾವು ಪುಂಡರೀಕಿಣಿಪಟ್ಟಣದ ರಾಜ ಪುತ್ರರು" ಎಂದು ಹೇಳಲು ಅವರು "ನಮಗೆ ಪುಂಡರೀಕಿಣಿ ಪಟ್ಟಣದ ರಾಜನು ಕಪ್ಪವನ್ನು ಒಪ್ಪಿಸಬೇಕು" ಎಂದು ಅಲ್ಲೇ ನಿಂತರು. ಇದನ್ನು ಲವನು ಕೇಳಿ "ನಾವು ಯಾವ ಚಕ್ರವರ್ತಿಗೂ ಕಪ್ಪವನ್ನು ಕೊಡುವುದಿಲ್ಲ! ಈಗನೀವು ತಂದಿರುವ ಕಪ್ಪಕಾಣಿಕೆಗಳು ನಮಗೆ ಸೇರತಕ್ಕದ್ದಾಗಿವೆ" ಎಂದು ಆ ಸಣ್ಣ ದಂಡನ್ನು ಹೊಡೆದು ಓಡಿಸಿ, ಆನೆ ಮತ್ತು ದ್ರವ್ಯಗಳನ್ನು ಮುಂದಕ್ಕೆ ಬಿಡಲಿಲ್ಲ. ಆದರಿಂದ ಆ ಸೇವಕಾಳಿಗಳು ಭಯವನ್ನು ಹೊಂದಿ ರಾಘವನ ಬಳಿಗೆ ಓಡಿ ಹೋಗಿ ತಿಳಿಸಲಾಗ ಲಕ್ಷ್ಮಣಸ್ವಾಮಿಯು ಕೋಪಗೊಂಡು ಶತ್ರುಘ್ನನನ್ನು ಬಲಸಹಿತವಾಗಿ ಆದ್ರವ್ಯಗಳನ್ನು ಮತ್ತು ತಡೆದವರನ್ನು ಸಹ ಹಿಡಿದುತರುವಂತೆ ಕಳುಹಿಸಿಕೊಟ್ಟನು. ಶತೃಘ್ನನು ಬಲಸಹಿತವಾಗಿ ಪುಂಡರೀಕಿಣಿ ಪಟ್ಟಣದ ಸಮಿಪದಲ್ಲಿ ಕಪ್ಪವನ್ನು ತಡೆದಿರತಕ್ಕ ಸ್ಥಳಕ್ಕೆ ಬಂದು ಲವನನ್ನು ನೋಡಿ, ಇದೇನು? ಇವನ ಆಕೃತಿಯೆಲ್ಲವೂ ಶ್ರೀರಾಮನ ಹೋಲಿಕೆಯನ್ನೇ ಹೊಂದಿ ರುತ್ತೆಂಬ ಪ್ರೀತಿಯಿಂದ ಲವನನ್ನು ಕರೆದು "ಬಾಲಕನೇ! ಯಾಕೆ ನಮ್ಮ ಕಪ್ಪವನ್ನು ತಡೆದೆ ? ಬಿಟ್ಟುಬಿಡು. ಹಸುಳೆ ! ನಿನ್ನನ್ನು ಬೇಕಾದರೆ ನಮ್ಮ ರಾಘವನ ದರ್ಶನಕ್ಕೆ ಕರೆದುಕೊಂಡು ಹೋಗಿ ನಿನಗೆ ಶ್ರೇಷ್ಠ ವಸ್ತುಗಳನ್ನು ಕೊಡಿಸುವೆನು. ನಾನು ನಿನ್ನನ್ನು ಏನೂ ಮಾಡುವುದಿಲ್ಲ. ಭಯವಿಲ್ಲದವನಾಗಿರು! " ಎಂದು ಹೇಳುವದನ್ನು ಕೇಳಿ ಲವನು ನಗುತ್ತಾ "ನಿಮ್ಮ ಕಪ್ಪವು ಯಾವುದು? ಅದು ನಮ್ಮದು! ನಾನು ಬಿಡುವುದಿಲ್ಲ. ನಿನಗೆ ಶಕ್ತಿಯಿದ್ದರೆ ತೆಗೆದುಕೊಂಡು ಹೋಗು" ಎಂದು ಉತ್ತರ ಕೊಡಲು ಶತೃಘ್ನನಿಗೆ ಕೋಪ ಬಂದಿತು. ಆಗ ಒಬ್ಬ ರಾವುತನನ್ನು ಕರೆದು ಈ ಹುಡುಗನ ಕೈಕಾಲನ್ನು ಕಟ್ಟುಯೆಂತ ಹೇಳುತ್ತಿರಲು ಲವನು "ಎಲೋ ಪರದೇಶಿ! ನಿನ್ನ ಕೈಕಾಲುಗಳನ್ನು ಕಟ್ಟುವ ಶಕ್ತಿ ನನಗಿದೆ. ನನ್ನನ್ನು ನೀನು ಶರೆ ಹಿಡಿಯುವುದು ಹೇಗೆ?" ಎಂದು ಶತೃಘ್ನನ ದಳದ ಮೇಲೆ ಬಿದ್ದು ಚೆಲ್ಲಾಪಿಲ್ಲಿಮಾಡಿದನು. ಆಗ ಶತೃಘ್ನನು ಮನಸ್ಸಿಲ್ಲದೆ ಲವನ ಮೇಲೆ ಯುದ್ಧಕ್ಕೆ ಬಂದನು. ಉಭಯರಿಗೂ ಜಗಳ ನಡೆಯುತ್ತಿರುವುದನ್ನು ಇವನ ಸಹಪಾಠಿಗಳು ಓಡಿಹೋಗಿ ವಜ್ರಜಂಘರಾಜನಿಗೆ ತಿಳಿಸಲು, ಅಲ್ಲಿದ್ದ ಮಂತ್ರಿಗಳೆಲ್ಲಾ "ಲವನಕೃತ್ಯದಿಂದ ನಮಗೆ ಆಪತ್ತು ಬಂದೀತು. ಆದ್ದರಿಂದ ಚಕ್ರವರ್ತಿಗೆ ಸಲ್ಲತಕ್ಕ ಕಪ್ಪವನ್ನು ಬಿಟ್ಟು ನಾವು ಸಹ ಕಪ್ಪವನ್ನು ಕೊಟ್ಟು ವಿಧೇಯತೆಯನ್ನು ತೋರಿಸಬೇಕು" ಎಂದು ದೊರೆಗೆ ವತ್ತಾಯ

ಮಾಡುತ್ತಿರುವವನ್ನು ಕುಶನು ನೋಡಿ "ನೀವು ಹೆದರಬೇಡಿ. ನಾನುಹೋಗಿನೋಡಿಕೊಳ್ಳುತ್ತೇನೆ" ಎಂದುಹೇಳಿ ಆಸ್ಥಳಕ್ಕೆಬರಲು ಲವನು ಅಣ್ಣನಿಗೆ ನಮಸ್ಕರಿಸಿ ನಡೆದ ಸಂಗತಿಯನ್ನೆಲ್ಲಾ ಹೇಳಲು, ಕುಶನು ಕೇಳಿ ತಮ್ಮನ ಸಾಮರ್ಥ್ಯಕ್ಕೆ ಮೆಚ್ಚಿ ಶತೃಘ್ನನ ಮೇಲೆ ಬಾಣ ಪ್ರಯೋಗ ಮಾಡಿ ಆತನಿಗೆ ಬಹಳವಾಗಿ ಘಾಯಪಡಿಸಿದನು. ಅಷ್ಟರಲ್ಲಿ ಸಾಯಂಕಾಲವಾದ್ದರಿಂದ ಕದನಗಳು ನಿಲ್ಲಿಸಿ ಅರುಹನ ಸ್ಮರಣೆಯನ್ನು ಮಾಡುತ್ತಿದ್ದರು.

೭೮. ಭರತನ ಜಗಳ.

ಅಖಂಡ ಮಂಡಲಾಧಿಪತಿಯಾದ ಶ್ರೇಣಿಕನೇ! ಕೇಳುವವನಾಗು.

ಶತೃಘ್ನನು ತನ್ನ ಪರಾಜಯವನ್ನು ರಾಮ ಲಕ್ಷ್ಮಣರಿಗೆ ದೂತರ ಮುಖಾಂತರ ಹೇಳಿಕಳುಹಿಸಲಾಗಿ, ಲಕ್ಷ್ಮಣನು ಬಹಳವಾಗಿ ಕೋಪಗೊಂಡು ಭರತನನ್ನು ಅಧಿಕಸೇನಾಸಹಿತ ಯುದ್ಧಕ್ಕೆ ಕಳುಹಿಸಿದನು. ಅವರು ಶತೃಘ್ನನ ಶಿಬಿರಕ್ಕೆ ಬಂದು ಬೀಡನ್ನು ಬಿಟ್ಟನಂತರ ಭರತನು ಆ ಬಾಲಕರ ಆಕೃತಿಯನ್ನೂ, ಶೌರ್ಯವನ್ನೂ ತಮ್ಮನಿಂದ ತಿಳಿದು ಆ ಬಾಲಕರನ್ನು ಕರೆದು "ಎಲಾ ಹುಡುಗರಿರಾ! ನಿಮ್ಮನ್ನು ನೋಡಿದರೆ ನಮ್ಮ ಅಗ್ರಜನಾದ ರಾಮದೇವರ ರೂಪು ನೋಡಿದಂತೆ ಆಗಿ ಪ್ರೀತಿಯುಂಟಾಗುತ್ತೆ. ನೀವು ಹೀಗೆ ಕಪ್ಪಕಾಣಿಕೆಗಳನ್ನು ಪಡೆಯುವುದಕ್ಕಾಗಿ ದುಂಡಾವರ್ತಿಯಿಂದ ಬರುವುದು ಸರಿಯಾದದ್ದಲ್ಲ. ಬಲದೇವ ವಾಸುದೇವರ ಪರಾಕ್ರಮಗಳು ನಿಮಗೆ ತಿಳಿದಿಲ್ಲ. ಸುಮ್ಮನೆ ತುಂಟಾಟಗಳನ್ನು ಆಡದೇ ಇರಿ. ನಿಮ್ಮ ತಂದೆ ತಾಯಿಗಳು ಯಾರು?" ಎಂದು ಕೇಳಲಾಗಿ— ಕುಶನು "ಎಲೈ ರಾವುತನೇ! ನಿಮ್ಮ ಧೊರೆಯನ್ನು ಹೊಗಳುವುದು ನಿಮಗೆ ಸರಿಯಾದದ್ದು. ನಾವು ಯಾರಾದರೇನು? ನಿಮಗೆ ಶಕ್ತಿ ಇದ್ದರೆ ಈ ಕಪ್ಪದ್ರವ್ಯವನ್ನು ತೆಗೆದುಕ್ಕೊಂಡು ಹೋಗಿ- ಇಲ್ಲದಿದ್ದರೆ ನಿಮ್ಮ ಪ್ರಾಣವನ್ನು ಈ ರಣರಂಗದಲ್ಲಿ ಬಿಟ್ಟು ಯಮಲೋಕಕ್ಕೆ ತೆರಳಿರಿ." ಎಂತ ಕ್ರೋಧವಾದ ಮಾತನ್ನಾಡಲು ಭರತನು ಕೇಳಿ ಸಹಿಸಲಾರದೇ ಯುದ್ಧಮಾಡುವಂತೆ ಬಲಕ್ಕೆ ಅಪ್ಪಣೆಮಾಡಿದನು. ಶತೃಘ್ನನು ಮುಂದೆ ಬರುತ್ತಲೇ ಲವನು ಎದುರಾಗಿ ಹೋಗಿ ಯುದ್ಧಮಾಡುತ್ತಿರಲು, ಕುಶನು ಮುಂದೆ ಹೋಗಿ ಅನೇಕ ಬಾಣಗಳಿಂದ ಹೊಡೆದು ಶತೃಘ್ನನನ್ನು ಮೂರ್ಛೆಯಾಗುವಂತೆ ಹೊಡೆಯಲು ಆತನು ಮೂರ್ಛಿತನಾಗಿ ಬಿದ್ದನು-

ಇದನ್ನು ಭರತನು ನೋಡಿ ಆವೇಶಪೂರ್ವಕವಾಗಿ ಬಂದು ಕುಶನ ಮೇಲೆ ಅಸ್ತ್ರಗಳನ್ನು ಪ್ರಯೋಗಿಸಲಾಗ ಕುಶನು ಭರತನನ್ನು ಕುರಿತು "ಎಲೈ ವಂಚಕನೇ ! ಈ ಮಾಯಾ ಬಾಣವನ್ನು ಹೊಡೆದು ಗೆಲ್ಲಬೇಕೆಂದಿದ್ದೀಯಾ ?" ಎಂದು ಮೂದಲಿಸಿ ಅನೇಕ ಬಾಣಗಳಿಂದ ಹೊಡೆದು ಭರತನನ್ನು ಮೂರ್ಛೆ ಬರುವಂತೆ ಹೊಡೆದು ಭೂಮಿಗೆ ಬೀಳಿಸಿದನು. ಆ ದಿವಸ ಸೂರ್ಯನು ಪಶ್ಚಿಮಾಂಬುಧಿಗೆ ಬೀಳಲು ಯುದ್ಧವು ನಿಲ್ಲಿಸಲ್ಪಟ್ಟಿತು. ಈ ಸೋಲು ತ್ವರ್ಯದಲ್ಲಿ ರಾಮಲಕ್ಷ್ಮಣರಿಗೆ ತಿಳಿಯಬಂದು ಅರ್ಹತ್ಪರಮೇಶ್ವರರನ್ನು ನೆನೆಯುತ್ತಲಿದ್ದರು.

೭೯. ಕುಶಲವರ ಮೇಲೆ ರಾಮಲಕ್ಷ್ಮಣರ ಜಗಳ.

ರಾಮ ಲಕ್ಷ್ಮಣರು ಹನುಮಾದಿ ಸಕಲ ಸಾಮಂತ ರಾಜರನ್ನು ಕೂಡಿಕೊಂಡು ಈ ಅನಿರೀಕ್ಷ್ಯವಾದ ಯುದ್ಧವು ಒದಗಿ ಇಂಥಾ ಸೋಲಾದ್ದಕ್ಕೆ ಯೋಚಿಸುತ್ತಿರಲು, ಸಭೆಯಲ್ಲಿ ಕೆಲವರು ಸೀತಾದೇವಿಯನ್ನು ವನವಾಸಕ್ಕೆ ಕಳುಹಿಸಿದ ಪಾಪವೇ ಈ ರೀತಿ ಮೂರ್ತಿಮತ್ತಾಗಿ ಅವಹೇಳನ ಮಾಡಿರುತ್ತೆಯೆಂದೂ, ಮತ್ತೆ ಕೆಲವರು ಪುಣ್ಯವು ಕಡಿಮೆಯಾಯಿತಾದ್ದರಿಂದ ಈ ರೀತಿ ಒದಗಿದೆಯೆಂದೂ ತಮತಮಗೆ ತೋಚಿದಂತೆ ಹೇಳಿಕೊಳ್ಳುತ್ತಿದ್ದರು. ರಾಘವನು ಆಂಜನೇಯನಾದಿ ಸಕಲರನ್ನು ಕೂಡಿಕೊಂಡು ಪುಂಡರೀಕಿಣಿಪಟ್ಟಣಕ್ಕೆ ಕುಶಲವರ ಮೇಲೆ ಯುದ್ಧಕ್ಕಾಗಿ ಹೊರಟು ಯುದ್ಧರಂಗವನ್ನು ತಲಪಿದನು. ಅಲ್ಲಿ ಭರತ ಶತ್ರುಘ್ನರು ಮೂರ್ಛೆಯಿಂದೆಚ್ಚೆತ್ತುಕೊಂಡು ತಮಗುಂಟಾದ ಅವಹೇಳನವನ್ನೂ, ಬಾಲಕರ ರೂಪು ಶೌರ್ಯ ಬಲಗಳನ್ನೂ ಯೋಚಿಸುತ್ತಿದ್ದರು. ಭರತಾದಿಗಳು ಬಲವಾಸುದೇವರಿಗೆ ಸನ್ಮಾನಮಾಡಿ ಬಾಕಿ ಹನುಮಾದಿಗಳಿಗೆ ಉಚಿತವಾದ ಮರ್ಯಾದೆಮಾಡಿ ಉಪಚಾರಗಳನ್ನು ನಡೆಸಿದರು. ಅನಂತರ ಶ್ರೀರಾಮನು ತಮ್ಮಂದರಾದ ಭರತಶತ್ರುಘ್ನರ ಮೈದಡವಿ ವ್ರಣಗಳನ್ನು ಕಂಡು ಬಹಳ ಅನುತಾಪಪಟ್ಟನಂತರ ಭರತನು ಬಾಲಕರ ರೂಪುಶೌರ್ಯ ಪರಾಕ್ರಮಗಳನ್ನು ವರ್ಣಿಸಿ ತಮಗೆ ಆ ಬಾಲಕರ ಮೇಲೆ ಅನಿರ್ವಚನೀಯವಾದ ವ್ಯಾಮೋಹವುಂಟಾಗುತ್ತಿದೆಯೆಂದೂ ಹೇಳಲಾಗಿ—ರಾಮಲಕ್ಷ್ಮಣರು ಈ ವಿಚಿತ್ರಕಾಲಗತಿಯನ್ನು ನೋಡಿ ಕೇಳಿ ಆಶ್ಚರ್ಯಭರಿತರಾದರು. ಪ್ರಭಾತಾನಂತರದಲ್ಲಿ ಬಾಲಕರು ಅಂಬುಬಾಣಗಳನ್ನು ಹಿಡಿದು ಯುದ್ಧಕ್ಕೆ ನಿಂತರು.

ಆಗ ರಾಮಲಕ್ಷ್ಮಣರಿಗೆ ಅವರನ್ನು ನೋಡಿದ ಕೂಡಲೆ ಯಾವುದೋ ಒಂದು ಸಂತೋಷವಾಯಿತು. ಅದಕ್ಕೆ ಕಾರಣವೇ ಗೊತ್ತಾಗಲಿಲ್ಲ. ಆಗ ಲಕ್ಷ್ಮಣನು ಬಾಲಕರ ಮುಂದೆ ನಿಂತು "ನೀವು ಯಾರ ಮಕ್ಕಳು?" ಎಂದು ಕೇಳಲಾಗಿ ಕುಶನು "ಎಲೈ ಯೋಧನೇ! ಇದು ಕ್ಷೇಮ ಸಮಾಚಾರವನ್ನು ವಿಚಾರಿಸತಕ್ಕ ಸಮಯವಲ್ಲ." ಎಂದು ಹೇಳಲಾಗಿ ಲಕ್ಷ್ಮಣನು ನಗುತ್ತಾ "ಎಲೈಬಾಲನೇ! ನಿಮ್ಮ ಮೇಲೆ ನನ್ನ ಅಮೋಘವಾದ ಬಾಣಗಳನ್ನು ಹೇಗೆ ಬಿಡಲಿ?" ಎನಲು ಕುಶನು "ನಿನ್ನ ಕೈಲಿ ಬಾಣಗಳನ್ನು ಬಿಡಲು ಶಕ್ತಿಸಾಲದಿದ್ದರೆ ಈ ರಣರಂಗದಿಂದ ತೊಲಗು" ಎಂತ ಹೇಳಿದ ಮಾತನ್ನು ಲಕ್ಷ್ಮಣನು ಕೇಳಿ ಬಹಳ ಕೋಪಾವಿಷ್ಟನಾಗಿ ಒಂದು ಬಾಣವನ್ನು ಬಿಡಲು, ಆ ಬಾಣವನ್ನು ಕುಶನು ಕತ್ತರಿಸಿ ಮತ್ತೊಂದು ಬಾಣದಿಂದ ಲಕ್ಷ್ಮಣನನ್ನು ನೋಯಿಸಿದನು. ಆಗ ಲಕ್ಷ್ಮಣನು ಬಾಣದ ಮಳೆಯನ್ನು ಸುರಿಸುತ್ತಿರಲಾಗಿ, ಆಂಜನೇಯನು ಕುಶನ ಮೇಲೆ ಬೀಳಲು ಕುಶನುಅವನನ್ನು ಚನ್ನಾಗಿ ನೋಯಿಸಿದನು. ಹೀಗೆ ಸುಗ್ರೀವಾದಿ ವೀರರೆಲ್ಲಾ ಕುಶನ ಮುಂದೆ ಬಂದು ಏಟು ತಿಂದು ಹಿಂದೆ ನಿಂತಿರುವುದನ್ನು ನೋಡಿ ಶ್ರೀರಾಮನು ಕುಶನ ಮುಂದೆ ಬಂದು ನಿಂತು ಬಾಣಪ್ರಯೋಗ ಮಾಡಲು ಕೈಗಳು ಚಲಿಸದೆ ಹೋಗಲು, ಶ್ರೀರಾಮನು ತನ್ನ ಸಾಮರ್ಥ್ಯಕ್ಕೆ ಕುಂದಕ ಬಂದದ್ದನ್ನು ನೋಡಿ ನಾಚಿಕೆಯುಳ್ಳವನಾಗಲು ಲಕ್ಷ್ಮಣನು ಲವಕುಶರಿಬ್ಬರ ಮೇಲೆ ಬಾಣಗಳನ್ನು ಕಾರುತ್ತಿದ್ದನು. ಇತ್ತಲು ನಾರದ ಮುನಿಯು ವಜ್ರಜಂಘನ ಸಭೆಗೆಬಂದು ಉಚಿತಾಸನವನ್ನು ಹೊಂದಿ "ರಾಮಲಕ್ಷ್ಮಣರ ಕೂಡ ಮಕ್ಕಳಾದ ಲವಕುಶರನ್ನು ಯುದ್ಧಕ್ಕೆ ಬಿಟ್ಟು ಸುಮ್ಮನಿರುವುದು ಉಚಿತವಲ್ಲ. ನೀನು ಹೋಗಿ ಸಮಾಧಾನಮಾಡಬೇಕು" ಎಂದುಹೇಳಿ ಜಾನಕಿಗೆ ದರ್ಶನವಿತ್ತು "ನಿನ್ನ ಮಕ್ಕಳು ತಂದೆ ಚಿಕ್ಕಪ್ಪಂದಿರ ಮೇಲೆ ಹಾವಳಿ ಮಾಡುತ್ತಿಧಾರೆ. ನಿನ್ನನ್ನು ವನವಾಸಕ್ಕಟ್ಟಿದ್ದಕ್ಕೆ ತಕ್ಕ ಫಲವು ಅವರಿಗೆ ಆದಂತೆ ಆಯಿತು. ನೀನು ಹೋಗಿ ರಾಮ ಲಕ್ಷ್ಮಣರನ್ನು ಕಂಡು ಸಂತೈಸು" ಎಂದು ಹೇಳಿ ಯುದ್ಧರಂಗಕ್ಕೆ ಹೋಗುವಲ್ಲಿ—ಲಕ್ಷ್ಮಣನು ಕುಶನಿಗೆ ಎದುರಾಗಿ ಯುದ್ಧಮಾಡಿ ಸಾಕಾಗಿ ಚಕ್ರವನ್ನು ತೆಗೆದು ಕುಶನ ಮೇಲೆ ಬಿಟ್ಟನು. ಅದು ಸಹ ಸ್ಫುರುಶಿಡಿಲುಧ್ವನಿಮಾಡುತ್ತಾ ಹೋಗುತ್ತಿರಲು ಉಭಯದಳವೂ ನಡುಗಿತು. ಚಕ್ರವು ಹಾಗೆ ಹೊರಟು ಕುಶನಸುತ್ತಲೂಬಂದು ಆತನ ಬಲಭಾಗದಲ್ಲಿ ನಿಂತುಕೊಂಡಿತು. ಆಗ ಕುಶನು ನಕ್ಕು ಲಕ್ಷ್ಮಣನನ್ನು ಕುರಿತು "ನಿನ್ನ ಆಯುಧ

ಗಳು ಇನ್ನೂ ಏನಾದರೂ ಇದೆಯೇ?" ಎಂದು ಕೇಳಲು, ಲಕ್ಷ್ಮಣನು ನಾಚಿ ರೌದ್ರಾವತಾರದಿಂದ ಗದೆಯನ್ನು ಎತ್ತಿಕೊಂಡು ಹೋಗುತ್ತಿರಲು ನಾರದರು ಬಂದು "ಚಕ್ರವರ್ತಿಯೇ! ಈತನು ನಿನ್ನ ಅಣ್ಣನ ಪುತ್ರನು. ನಿನ್ನ ಪುತ್ರನಲ್ಲವೆ? ನಿಲ್ಲು!" ಎಂತ ಹೇಳುತ್ತಾ, ಶ್ರೀರಾಮನಿಗೆ "ಈ ಬಾಲಕರು ನಿನ್ನ ಪುತ್ರರು. ಜಾನಕಿಯು ಗರ್ಭಸಂಭೂತರು" ಎಂದುಹೇಳುತ್ತಿರಲಾಗ ವಜ್ರಜಂಘನುಬಂದು ರಾಮಲಕ್ಷ್ಮಣರಿಗೆ ನಮಸ್ಕರಿಸಿ ಜಾನಕಿ ಸಂಬಂಧವಾದ ಹಿಂದಿನ ಕಥೆಯನ್ನು ತಿಳಿಸಿ "ಈ ಬಾಲಕರು ನಿಮ್ಮ ಪುತ್ರರು" ಎಂದು ಹೇಳಿದನು. ರಾಮಲಕ್ಷ್ಮಣರುಗಳು ಕೇಳಿ ಅತ್ಯಾನಂದದಿಂದ ಅರ್ಹತ್ಪರಮೇಶ್ವರರನ್ನು ಸ್ಮರಿಸುತ್ತಿದ್ದರು.

೮೦. ಸೀತಾ ಅಗ್ನಿ ಪ್ರವೇಶ.

ಎಲೈ ಮಗಧಾಧಿಪತಿಯೇ! ಕೇಳುವನಾಗೈ—ಶ್ರೀರಾಮನು ನಾರದರ ವಚನವನ್ನು ಕೇಳುತ್ತಿರಲು, ನಾರದರು ರಾಮಲಕ್ಷ್ಮಣರನ್ನು ಕುರಿತು "ಈ ಬಾಲಕರು ನಿಮಗೆ ಪುತ್ರರಾದ್ದರಿಂದ ಇವರ ಮೇಲೆ ವಿರೋಧವನ್ನು ಮಾಡಬೇಡಿ. ಸೀತಾದೇವಿಯು ಇಷ್ಟರಲ್ಲಿಯೇ ಬರುವಳು" ಎಂದು ಹೇಳಲಾಗಿ ಶ್ರೀರಾಮನು ಸೀತಾದೇವಿಯು ಎಲ್ಲಿರುವಳೆನ್ನುವಷ್ಟರಲ್ಲಿ ರಥಾರೂಢಳಾಗಿ ಬರುತ್ತಿರುವ ಸೀತಾದೇವಿಯನ್ನು ಕಂಡನು. ವೈದೇಹಿಯು ರಥದಿಂದ ಇಳಿಯುತ್ತಿರಲು ಲಕ್ಷ್ಮಣನು ಬಂದು ಸೀತಾದೇವಿಗೆ ನಮಸ್ಕರಿಸಿದನು. ಕುಶಲವರು ಶ್ರೀರಾಮಲಕ್ಷ್ಮಣರಿಗೆ ನಮಸ್ಕರಿಸಿ ತಮ್ಮ ಅಪರಾಧಗಳನ್ನು ಮನ್ನಿಸಬೇಕೆಂದು ಬೇಡಿಕೊಳ್ಳಲು ರಾಮಲಕ್ಷ್ಮಣರೂ, ಭರತಶತೃಘ್ನರೂ, ಆಂಜನೇಯಾದಿ ಸಕಲರೂ ಸಂತೋಷವನ್ನು ಹೊಂದಿದರು. ನಾರದರ ಸಲಹೆಯಂತೆಶ್ರೀರಾಮನು ಸೀತಾದೇವಿಯೇಮೊದಲಾದ ಸಕಲರೊಡನೆ ಅಯೋಧ್ಯೆಗೆ ಬಂದು ಸಹಸ್ರಮುಖಮಂಟಪದಲ್ಲಿ ಬಂದು ನಿಂತನು. ಸೀತಾದೇವಿಯ ಅಪ್ಪಣೆ ಪ್ರಕಾರ ದೊಡ್ಡದಾದ ಅಗ್ನಿಕುಂಡವು ಜಾಜ್ವಲ್ಯಮಾನವಾದ ಉರಿಯಿಂದ ಕೂಡಿದ್ದಾಗಿ ಮಾಡಲ್ಪಟ್ಟಿತು. ಆ ಪುರದ ಸಮಸ್ತ ಜನಗಳ ಮುಂದೆ ತನ್ನ ಪತಿವ್ರತಾ ಧರ್ಮವನ್ನು ಹೇಳಿ, ತಪ್ಪಿದ್ದರೆ ಈ ಅಗ್ನಿಯು ದಹಿಸಿ ಬಿಡಲಿ ಎಂದು ಅಗ್ನಿಕುಂಡಕ್ಕೆ ಅಲಂಕಾರಭೂಷಿತಳಾಗಿ ಪ್ರವೇಶಮಾಡಲು, ಅಗ್ನಿಯು ಎಷ್ಟುಮಾತ್ರವಾದರೂ ಜಾನಕಿಯ ದೇಹಕ್ಕಾಗಲೀ, ವಸ್ತ್ರಾಭರಣಕ್ಕಾಗಲೀ ಹಾನಿ

ಮಾಡದೇ ಇರುವದನ್ನುನೋಡಿ ಆಶ್ಚರ್ಯಪಡುತ್ತಿದ್ದರು. ಇತ್ತ ಮತ್ತೊಂದು ಕಥಾ ಸಂದರ್ಭವೇನೆಂದರೆ:—

ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯಲ್ಲಿರುವ ಗುಂಜಾಪುರದಅರಸನಾದ ಹರಿವಿಕ್ರಮನಿಗೂ ಪತ್ನಿಯಾದ ಶ್ರೀದೇವಿಗೂ ರತ್ನಭೂಷಣನೆಂಬ ಮಗನಾದನು. ಆತನಿಗೆ ಕಿರಣಮಂಡಲೆಯೇ ಮೊದಲಾದ ಎಂಟುಸಾವಿರಸ್ತ್ರೀಯರು ಪತ್ನಿಯರಾಗಿದ್ದರು. ಅಲರಶರನಿಧಿಯ ಮಾತುಳನನುಜನಾತ್ಮಜ ಹೇಮಮುಖನೆಂಬುವನು ಅಗ್ರಜನ ಆಲಯಕ್ಕೆ ಬಂದು ಇದ್ದಾಗ್ಯೆ, ಆತನ ಚಿತ್ರವನ್ನು ಬರೆಯಬೇಕೆಂತ ಚಿತ್ರಬರೆಯುವುದರಲ್ಲಿ ಪ್ರಸಿದ್ಧಳಾಗಿದ್ದ ಇಂದುಮುಖಿಯನ್ನು ಕೆಲವರು ಪ್ರೇರೇಪಿಸಲಾಗ, ಆಕೆಯು ತನ್ನ ಕಾಂತನ ಮನಸ್ಸಿಗೆ ಬೇಸರಬಂದೀತೆಂದು ಎಷ್ಟುಹೇಳಿದರೂಕೇಳದೆ ಕೆಲವರು ಹಟಮಾಡಿಉತ್ತೇಜನಕೊಟ್ಟು ಬರೆಸುತ್ತಿರುವಾಗ ಅವಳಗಂಡನುಬಂದು ತನ್ನಸತಿಯು ಬರೆಯುತ್ತಿರುವ ಚಿತ್ರವನ್ನು ನೋಡಿಕೋಪಗೊಳ್ಳಲು ಎಲ್ಲರೂಸಾಂತ್ವವಚನಗಳನ್ನುಹೇಳಿ ಸಮಾಧಾನಪಡಿಸಿದರು. ಒಂದುರಾತ್ರಿ ಕನವರಿಕೆಯಲ್ಲಿ ಆಕೆಯು "ಹೇಮಮುಖನುರೂಪವಂತನು" ಎಂದುಹೇಳಿದ್ದನ್ನು ಕುಲಭೂಷಣನುಕೇಳಿ ಸ್ತ್ರೀಯರಲ್ಲಿಅಸಹ್ಯಪಟ್ಟು ವೈರಾಗ್ಯಶೀಲನಾಗಿ ತಪೋಭರನಾಗಲು ಈ ಕಿರಣಮುಖಿಯು ಗಂಡನು ತನಗೆ ಅವಮಾನಪಡಿಸಿದನೆಂದು ತಾನೂ ದೀಕ್ಷೆಹೊಂದಿ ರೌದ್ರಧ್ಯಾನದಲ್ಲಿಸತ್ತು ಶ್ರೀದೇವಿಯೆಂಬ ವ್ಯಂತರದೇವತೆಯಾಗಿ ಹುಟ್ಟಿ ಜನ್ಮಾಂತರವನ್ನು ನೆನೆದು ತನ್ನ ಸೇವಕಾಳಿಗಳಿಂದ ಕುಲಭೂಷಣಯತಿಗಳಿಗೆ ವಿಚಿತ್ರವಾದ ಹಿಂಸೆಗಳನ್ನು ಮಾಡಿಸಲಾಗ ಆ ಯತಿಗಳು ಧ್ಯಾನಮಗ್ನರಾಗಿ ಕೈವಲ್ಯಜ್ಞಾನವನ್ನು ಹೊಂದಲು, ಆ ಪೂಜೆಗಾಗಿ ಇಂದ್ರನು ಬರುತ್ತಾ—ಸೀತಾದೇವಿಯು ನೀರಿನಲ್ಲಿ ಹೋಗುವಂತೆ ಅಗ್ನಿಕುಂಡದಲ್ಲಿ ಹೋಗುವುದನ್ನು ಕಂಡು ಸೇವಕಾಳಿ ದೇವತೆಗಳಿಗೆ ಸೀತಾದೇವಿಗೆ ಪೂಜೋಪಚಾರವನ್ನು ಮಾಡುವಂತೆ ಗೊತ್ತು ಮಾಡಲು ದೇವತೆಗಳು ಅಗ್ನಿಕುಂಡದ ಮಧ್ಯದಲ್ಲಿ ಸಿಂಹಾಸನದ ಮೇಲೆ ಸೀತಾದೇವಿಯನ್ನು ಕುಳ್ಳಿರಿಸಿ ಪುಷ್ಪವೃಷ್ಟಿಯನ್ನು ಮಾಡಿ ದೇವದುಂದುಭಿಯನ್ನು ಹೊಡೆಯಲು ಸಕಲರೂ ಈ ಸೀತೆಯ ಪಾತಿವ್ರತ್ಯ ಮಹಿಮೆಯನ್ನು ಕೊಂಡಾಡಿ ಅರುಹನನ್ನು ಭಜಿಸುತ್ತಿದ್ದರು.

೮೧. ಧರ್ಮೋಪದೇಶ.

ಶ್ರೀರಾಮನು ಸೀತಾದೇವಿಯ ಬಳಿಗೆ ಬಂದು, ತಾನು ವನವಾಸಕ್ಕೆ ಕಳುಹಿಸಿದ್ದು ತಪ್ಪಾಯಿತೆಂತಲೂ, ಮೊದಲಿನಂತೆಯೇ ತನ್ನ ಅರಮನೆಗೆ ಬಂದುಸುಖವಾಗಿರಬೇಕೆಂದೂ ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ಸೀತಾದೇವಿಯು ಒಪ್ಪದೆ ವೈರಾಗ್ಯಪರಾಯಣಳಾದಳು. ಲಕ್ಷ್ಮಣಚಕ್ರವರ್ತಿಯೂ, ಆತನ ಸ್ತ್ರೀಯರೂ ಸಹ ಬಂದು ಸೀತಾದೇವಿಯನ್ನು ನಮಸ್ಕರಿಸಿ ಅರಮನೆಯಲ್ಲಿ ವಾಸಮಾಡಲು ಬರಬೇಕೆಂದು ಬಹಳವಾಗಿ ಬೇಡಿಕೊಂಡರು. ಹನುಮಾದಿಗಳು ಬಂದು ಶ್ರೀರಾಮನ ಮನಸ್ಸಂತೋಷ ಪಡಿಸಬೇಕೆಂದು ಪ್ರಾರ್ಥಿಸಿದರು. ಹಾಗೂ ಸೀತಾದೇವಿಯು ಸಂಸಾರದಲ್ಲಿರುವುದಕ್ಕೆ ಒಪ್ಪದೆ "ಶ್ರೀರಾಮದೇವರಿಗೆ ಎಂಟು ಸಾವಿರ ಸ್ತ್ರೀಯರಿದ್ದಾರೆ. ಆತನಿಗೇನು ಕೊರತೆ? ಆಗ ನಾನು ಗರ್ಭವತಿಯಾದ್ದರಿಂದ ದೀಕ್ಷಾಗ್ರಹಣಕ್ಕೆ ಮಾರ್ಗವಿಲ್ಲದೆ ನಿಂತೆನು. ಸ್ತ್ರೀಜನ್ಮದಲ್ಲಿ ಯಾವ ಯಾವದನ್ನು ಹೊಂದಬೇಕಾದದ್ದೋ ಅವನ್ನೆಲ್ಲ ಪಡಥೇಇಥೇನೆ ಇನ್ನೇನೂ ಅನುಭವಿಸಬೇಕಾದದ್ದಿಲ್ಲ" ಎಂದು ಹೇಳಲು, ರಾಮಲಕ್ಷ್ಮಣ ಹನುಮಾದಿಗಳು ಅರಮನೆಗೆ ಬರಬೇಕೆಂದು ಬಾಧಿಸಿದರೂ ಸಂಸಾರದ ಸ್ಥಿತಿಯನ್ನು ಹೇಳಿಒಪ್ಪಲಿಲ್ಲ. ಕೊನೆಗೆ ಶ್ರೀರಾಮನು ಸೀತಾದೇವಿಯ ವೈರಾಗ್ಯವನ್ನು ಕಂಡು ಆಶ್ಚರ್ಯಭರಿತನಾದನು. ಸಕಲರೂ ಜಾನಕಿಯ ವೈರಾಗ್ಯಕ್ಕೆ ತಲೆ ತೂಗುತ್ತಿರಲು ಶ್ರೀರಾಮನು ಅತ್ಯಂತ ಖೇದದಿಂದ ಸೀತಾದೇವಿಯ ಹಿಂದೆ ಹೊರಟು ಸಕಲಭೂಷಣರ ಗಂಧಕುಟಿಗೆ ಹೋಗಿ ಯತಿವರರಿಗೆ ವಂದಿಸಿ, ಸೀತಾಸಹಿತವಾಗಿರಾಘವನೂ, ಲಕ್ಷ್ಮಣ, ಆಂಜನೆಯ, ಸುಗ್ರೀವಾದಿಗಳೂಸಹ ಮನುಷ್ಯಕೋಷ್ಠದಲ್ಲಿ ಕುಳಿತು ದಿವ್ಯಧ್ವನಿಯಿಂದ ಧರ್ಮಶ್ರವಣವನ್ನು ಕೇಳುತ್ತಿದ್ದರು-

ಏನೆಂದರೆ—ಧರ್ಮದಲ್ಲಿ ಮನೆಯಲ್ಲಿದ್ದು ವ್ರತನಡೆಸುವುದು ಸಾಗಾರಧರ್ಮವೆಂತಲೂ, ಮನೆಯನ್ನು ಬಿಟ್ಟು ವ್ರತನಡೆಸುವುದು ಅನಗಾರ ಧರ್ಮವೆಂತಲೂ ಎರಡುವಿಧವಾಗಿದೆ. ಸಾಗಾರ ಧರ್ಮದಲ್ಲೇ ಶ್ರಾವಕರು ನಡೆಯತಕ್ಕದ್ದು- ಇದು ಹನ್ನೊಂದು ವಿಧವಾಗಿ ಒಂದಕ್ಕೊಂದು ಉತ್ಕೃಷ್ಟವಾಗಿಥೆ. ಅಹಿಂಸೆ, ಸತ್ಯ, ಅಸ್ತೆಯ, ಪರದಾರ, ಅಪರಿಗ್ರಹಗಳೆಂಬ ಐದು ಅಣುವ್ರತಗಳನ್ನೂ, ದಿಗ್ವ್ರತ, ದೇಶವ್ರತ, ಅನರ್ಥದಂಡವ್ರತಗಳೆಂಬ ಮೂರು ಗುಣವ್ರತಗಳನ್ನೂ; ದೇಶಾವಕಾಶಿಕ, ಸಾಮಾಯಿಕ, ಪ್ರೋಷದೋಪವಾಸ, ವೈಯ್ಯಾಪೃತ್ಯಗಳೆಂಬ ನಾಲ್ಕು ಶಿಕ್ಷಾವ್ರತಗಳನ್ನೂ ಸೇರಿಸಿದರೆ ಹನ್ನೆರಡು

ಚಾರಿತ್ರಗಳಾಗುತ್ತವೆ. ಇವು ಮನೆಯಲ್ಲಿದ್ದು ವ್ರತ ಮಾಡುವರಿಗೆ ಬಹಳ ಮು ಖ್ಯವಾದವು. ಇವರಲ್ಲಿ ದರ್ಶನೀಕ, ವ್ರತೀಕ, ಸಾಮಾಯಿಕ, ಪ್ರೋಷದೋಪ ವಾಸಿ, ಸಚಿತ್ತವಿರತ, ರಾತ್ರಿಭುಕ್ತವಿರತ, ಬ್ರಹ್ಮಚಾರಿ, ಆರಂಭವಿರತ, ಪರಿ ಗ್ರಹವಿರತ, ಅನುಮತವಿರತ, ಉದ್ದಿಷ್ಟವಿರತ, ಈ ಪ್ರಕಾರ ವಿಭಾಗವಾಗಿರು ತ್ತವೆ. ಪೂರ್ವ ಪೂರ್ವಕ್ಕಿಂತ ಉತ್ತರೋತ್ತರದವು ಹೆಚ್ಚಿನವುಗಳಾಗಿವೆ. ಲೋಕಮೂಢ, ದೇವಮೂಢ, ಪಾಷಂಡಿಮೂಢಗಳೆಂಬ ಮೂರುವಿಧ ಮೂಢ ಗಳನ್ನೂ; ಶಂಕೆ, ಆಕಾಂಕ್ಷೆ ವಿಚಿಕಿತ್ಸೆ, ಅನ್ಯದೃಷ್ಟಿ ಪ್ರಶಂಸಸಂಸ್ತವ, ಆಗೂ ಹನ, ಅಸ್ಥಿತೀಕರಣ, ಅವಾತ್ಸಲ್ಯ, ಅಧರ್ಮಚಾರಿಣಿಎಂಬ ೮ ಮಲಗಳನ್ನೂ; ಜ್ಞಾನ, ಪೂಜಾ, ಕುಲ, ಜಾತಿ, ಬಲ, ವೃದ್ಧಿ, ತಪಸ್ಸು, ಶರೀರಗಳೆಂಬ ಎಂಟು ಮದಗಳನ್ನೂ ಬಿಡಬೇಕು. ಎಂಬುವದೇ ಮೊದಲಾದ ಧರ್ಮಗಳನ್ನು ಕೇಳಿ ಸೀತಾದೇವಿಯು ಪರಮ ವೈರಾಗ್ಯಭರಿತಳಾಗಿ ನಮಃಸಿದ್ಧೇಭ್ಯಃ ಎಂದು ಹೇಳಿ ತಲೆಕೂದಲುಗಳನ್ನು ಕಿತ್ತು ಬೀಸಾಡುತ್ತಾ, ತನ್ನ ಆಭರಣಗಳನ್ನೆಲ್ಲಾ ಬೀಸಾಡಿ ತಪಸ್ವಿಯಾದಳು. ರಾಘವಾದಿಗಳು ಧರ್ಮಶ್ರವಣವನ್ನು ಮಾಡಿ ಅರುಹನನ್ನು ಭಜಿಸುತ್ತಿದ್ದರು.

೮೨. ಭವಾವಳಿ.

ಶ್ರೇಣಿಕನೇ! ಕೇಳುವನಾಗೈ—ಶ್ರೀರಾಮನು "ಭರತನಿಗೆ ಏತಕ್ಕಾಗಿ ತ್ರಿಜಗದ್ಭೂಷಣವೆಂಬ ಆನೆಯಲ್ಲಿ ಪ್ರೀತಿ ಹುಟ್ಟಲು ಕಾರಣವೇನು?" ಎಂದು ಮುನೀಶ್ವರರನ್ನು ಬೇಡಿಕೊಳ್ಳಲು, ಅವರು ಅಪ್ಪಣೆ ಕೊಡಿಸಿದರೇನೆಂದರೆ—ವಿನೀತಾನಗರದಲ್ಲಿ ಸುಪ್ರಭನೆಂಬ ವೈಶ್ಯನಿಗೂ ಆತನ ಹೆಂಡತಿ ಪ್ರಹಲ್ಲಾದೆ ಎಂಬುವಳಿಗೂ ಸೂರ್ಯೋದಯ ಚಂದ್ರೋದಯರೆಂಬಿಬ್ಬರು ಮಕ್ಕಳಾದರು. ಅವರು ವೃಷಭಸ್ವಾಮಿಯೊಡನೆ ತಪಸ್ಸಿಗೆ ಹೋಗಿ ಪರೀಷಹಾದಿಗಳಿಂದ ಪೀಡಿ ಸಲ್ಪಟ್ಟವರಾಗಿ ಮರೀಚಿಯೊಡನೆ ಕೂಡಿ ಕುಧರ್ಮಪರರಾಗಿ ಅನೇಕಭವ ಗಳಲ್ಲಿ ತೊಳಲಿ, ಗಜಪುರದರಸನಾದ ಹರಿಪತಿಗೂ ಆತನ ಪತ್ನಿ ಚಂದ್ರೋದ ಯೆಗೂ, ಪೂರ್ವದಲ್ಲಿ ಹೇಳಿದ್ದ ಚಂದ್ರೋದಯನು ಕುಲಂಕರನೆಂಬ ಪುತ್ರ ನಾಗಿ ಹುಟ್ಟಿದನು. ಇನ್ನೊಬ್ಬ ಸೂರ್ಯೋದಯನು ಅದೇ ಪಟ್ಟಣದಲ್ಲಿ ಆ ರಾಜಪುತ್ರನ ಪುರೋಹಿತನಾದ ವಿಶ್ವಾವಸುವಿಗೆ ಮೂಢಶೃತಿಯೆಂಬ ಮಗ ನಾದನು. ಈ ಇಬ್ಬರೂ ದುರಾಚಾರಪರರಾಗಿದ್ದರು. ಕುಲಂಕರನ ಪತ್ನಿಯು

ಮನಸ್ವೀ ನಡೆದು ವ್ಯಭಿಚಾರಿಣಿಯಾಗಿ ತನ್ನ ಗಂಡನಿಗೂ ಪುರೋಹಿತನಿಗೂ ವಿಷಹಾಕಿದಳು. ಈ ಕುಲಂಕರನೂ ಮೂಢಶ್ರುತಿಯೂ ಸಹ ಸತ್ತು ಮೊಲ ಮತ್ತು ಮುಂಗಸಿಯಾಗಿದ್ದು ಸತ್ತ ಬಳಿಕ ಅವರು ಬಹಳ ಭವಗಳಲ್ಲಿ ಹುಟ್ಟಿ ಸತ್ತು ಕುಲಂಕರನು ಅಭಿರಾಮನಾಗಿ ಹುಟ್ಟಿ ಅಲ್ಲಿಂದ ದಶರಥನಿಗೂ ಕೈಕಿಲೆಗೂ ಭರತನಾಗಿ ಹುಟ್ಟಿದನು. ಮೂಢಶ್ರುತಿಯು ಬಂದು ತ್ರಿಜಗದ್ಭೂಷಣವೆಂಬ ಆನೆಯಾದನು. ತ್ರಿಜಗದ್ಭೂಷಣಕ್ಕೆ ಈ ಸ್ನೇಹಭಾವದಿಂದ ಭರತನಲ್ಲಿ ವಿಶ್ವಾಸಹುಟ್ಟಿತು. ಆದರಲ್ಲಿ ಸ್ನೇಹ ಭಾವದಿಂದಲೇ ಭರತನಿಗೆ ಆನೆಯಲ್ಲಿ ಪ್ರೀತಿಹುಟ್ಟಿತೆಂದು ಯತಿವರರು ಹೇಳಲಾಗ ಭರತನು ಪರಮ ವೈರಾಗ್ಯಸಂಪನ್ನನಾಗಿ ಮೂರು ಸಾವಿರ ರಾಜಪುತ್ರರೊಡಗೂಡಿ ಆ ಯತಿವರರ ಪಕ್ಕದಲ್ಲಿ ದೀಕ್ಷಾಗೃಹೀತನಾಗಿ ಜಾತರೂಪಧರನಾದನು. ಕೈಕಿಲೆಯು ಮಗನು ತಪಸ್ವಿಯಾದದ್ದನ್ನು ನೋಡಿ ತಾನೂ ದೀಕ್ಷೆಯನ್ನು ತೆಗೆದುಕೊಂಡಳು.

ಅನಂತರ ರಾಘವನು ತನ್ನ ಭವಾವಳಿಯನ್ನು ಹೇಳಬೇಕೆಂದು ಯತಿವರ್ಯರನ್ನು ಪ್ರಾರ್ಥಿಸಲಾಗಿ ಅವರು ಹೇಳಿದ್ದೇನೆಂದರೆ— ಭರತಕ್ಷೇತ್ರದ ಯಕ್ಷಪುರದ ನಯದತ್ತನೆಂಬ ವೈಶ್ಯನಿಗೂ ಆತನ ಪತ್ನಿ ಸುನಂದೆಗೂ ಮೊದಲನೇಜನ್ಮದಲ್ಲಿ ಧನದತ್ತನೆಂಬ ಮಗನಾಗಿ ಜಿನಧರ್ಮದಲ್ಲಿ ನಡೆದು ಜೀವಿತಾಂತ್ಯದಲ್ಲಿ ಸೌಧರ್ಮಕಲ್ಪದಲ್ಲಿ ಜನಿಸಿ, ಅಲ್ಲಿಂದ ಜಾರಿ-ಶ್ರೇಷ್ಠಿಪುರದ ವೈಶ್ಯನಾದ ಸಮ್ಯಗ್ದೃಷ್ಟಿಮೇರುವೆಂಬಾತನಿಗೂ ಮತ್ತು ಆತನ ಪತ್ನಿ ಧಾರುಣಿ ಎಂಬುವಳಿಗೂ ಪದ್ಮರುಚಿಯೆಂಬ ಮಗನಾಗಿ ಜಿನಧರ್ಮದಲ್ಲಿ ನಡೆದು ಆಯುಷ್ಯಾವಸಾನದಲ್ಲಿ ಈಶಾನ್ಯ ಕಲ್ಪದಲ್ಲಿ ಹುಟ್ಟಿ ನಾಲ್ಕು ಸಾಗರೋಪಮಕಾಲ ಜೀವಿಸಿ, ಕೊನೆಗೆ ಅಪರವಿದೇಹದ ವಿಜಯಾರ್ಧ ಪರ್ವತದ ನಂದ್ಯಾವರ್ತಪುರಾಧಿಪ ನಂದೀಶ್ವರನಿಗೂ ಆತನ ಅರಸಿ ಕನಕಾಭೆಗೂ ನಯನಾನಂದನನೆಂಬ ಮಗನಾಗಿ ಹುಟ್ಟಿ ರಾಜ್ಯಸುಖವನ್ನನುಭವಿಸಿ ತಪಸ್ಸುಮಾಡಿ ಸಮಾಧಿವಿಧಿಯಿಂದ ದೇಹವನ್ನು ಬಿಟ್ಟು ಮಾಹೇಂದ್ರಕಲ್ಪದಲ್ಲಿ ಜನಿಸಿ ಅಲ್ಲಿಂದಬಂದು ಪೂರ್ವವಿದೇಹದ ಕ್ಷೇಮಪುರಾಧಿಪತಿಯಾದ ವಿಮಲವಾಹನನಿಗೂ ಆತನರಸಿ ಪದ್ಮಾವತಿಗೂ ಶ್ರೀಚಂದ್ರಕುಮಾರನಾಗಿ ಹುಟ್ಟಿ ರಾಜ್ಯವನ್ನಾಳಿ ಸಮಾಧಿಗುಪ್ತರಲ್ಲಿ ದೀಕ್ಷೆಯನ್ನು ಹೊಂದಿ ತಪಸ್ಸನ್ನಾಚರಿಸಿ ಬ್ರಹ್ಮಕಲ್ಪಕ್ಕೆ ಹೋಗಿ ಅಲ್ಲಿಂದ ಬಂದು ದಶರಥರಾಜನಿಗೆ ರಾಮನೆಂಬ ಮಗನಾಗಿ ಹುಟ್ಟಿದ್ದೀಯೆ ಎಂದು ಮುನೀಶ್ವರರು ಹೇಳಲು—ಶ್ರೀರಾಮನು ಗುರುಗಳಿಗೆ ನಮಸ್ಕರಿಸಿ ಲಕ್ಷ್ಮ

ಣನ ಭವಾವಳಿಯನ್ನು ಹೇಳಬೇಕೆಂದು ಕೇಳಿಕೊಳ್ಳಲು ಗುರುಗಳಿಂತೆಂದರು— ಪೂರ್ವದಲ್ಲಿ ಹೇಳಿದ ಯಕ್ಷಪುರದ ನಯದತ್ತನೆಂಬ ಪರದನಿಗೂ ಆತನರಸಿ ಸುನಂದೆಗೂ ವಸುದತ್ತನೆಂಬಮಗನಾಗಿ ಹುಟ್ಟಿ ಕಾಲವನ್ನು ಕಳೆದು ಮೃಣಾಳಕುಂಡಲಪುರವನ್ನಾಳುವ ವಿಜಯಸೇನ ಮಹೀನಾಥನ ಮಗ ಶಂಭುವಿಗೆ ಶ್ರೀ ಭೂತಿಯೆಂಬ ಪುರೋಹಿತನಾಗಿ, ಸನ್ಮಾರ್ಗದಲ್ಲಿ ನಡೆದು ತನ್ನ ದೊರೆಯಾದ ಶಂಭುವಿನ ಕೈಯಿಂದಲೇ ಕನ್ಯಾನಿಮಿತ್ತವಾಗಿ ಸತ್ತು ದೇವಗತಿಯನ್ನು ಪಡೆದು ಅಲ್ಲಿಂದ ಜಾರಿ ಪ್ರತಿಷ್ಠಾಪುರದಲ್ಲಿ ಪುನರ್ವಸುವೆಂಬ ವಿದ್ಯಾಧರನಾಗಿ ತಪಸ್ಸನ್ನು ಮಾಡಿ ಅಲ್ಲಿಂದ ಬಂದು ಲಕ್ಷ್ಮಣನಾಗಿ ಹುಟ್ಟಿರುವನೆನಲು ರಾಮನು ರಾವಣನ ಭವಾವಳಿಯನ್ನು ಹೇಳಬೇಕೆಂತ ಕೇಳಲಾಗ ಯತಿಗಳು ಹೇಳಲುದ್ಯುಕ್ತರಾದರು—ಹಿಂದೆ ಹೇಳಿದ ಮೃಣಾಳಕುಂಡಲ ಪುರವನ್ನಾಳುವ ವಿಜಯಸೇನನಿಗೂ ರತ್ನಮಾಲೆಗೂ ಹುಟ್ಟಿದ ಶಂಭುಕನು ಮದ್ಯಮಾಂಸ ಮಧುಸೇವನೆ ಮಾಡಿ ಸತ್ತು ಬಹಳಕಾಲ ನರಕದಲ್ಲಿ ತಿರುಗಿ ಪಾಪೋಪಶಮದಿಂದ ಕುಶಧ್ವಜನೆಂಬ ಪಾರ್ವನಿಗೂ ಆತನ ಪ್ರಿಯೆ ಪಾರ್ವತಿಗೂ ಭಾಸಕುಂಡಲನೆಂಬ ಮಗನಾಗಿ ಹುಟ್ಟಿ ಚಿತ್ರಸೇನಮುನಿಗಳಲ್ಲಿ ತಪಸ್ಸನ್ನು ತೆಗೆದುಕೊಂಡು ಜಾತರೂಪನಾಗಿ ನಿಷ್ಠೆಯಿಂದ ಸಮ್ಮೇಧಗಿರಿಗೆ ದರ್ಶನಾರ್ಥವಾಗಿ ಹೋಗುತ್ತಾ ಕನಕನೆಂಬ ವಿದ್ಯಾಧರನ ವಿಭೂತಿಯ ಕಂಡು ವಿಸ್ಮಿತನಾಗಿ ನಿದಾನಶಲ್ಯವನ್ನು ಮಾಡಿ ಸನತ್ಕುಮಾರಕಲ್ಪಕ್ಕೆ ಹೋಗಿದ್ದು ಅಲ್ಲಿಂದ ಬಂದು ತ್ರಿಖಂಡಾಧಿಪತಿಯಾದ ರಾವಣನಾದನೆಂದು ಹೇಳಲಾಗಿ ಶ್ರೀರಾಮನು ಸೀತಾದೇವಿಭವವನ್ನು ಹೇಳಬೇಕೆಂದು ಕೇಳಲಾಗ ಅವರು ಹೇಳಿದ್ದೇನೆಂದರೆ—

ಈ ಭರತಕ್ಷೇತ್ರದ ಯಕ್ಷಪುರದ ಸಾಗರದತ್ತನೆಂಬ ಪರದನಿಗೂ ಆತನ ಹೆಂಡತಿ ರತ್ನಪ್ರಭೆಗೂ ಗುಣವತಿಯೆಂಬ ಮಗಳಾಗಿ ಮಿಥ್ಯಾ ಭಾವನೆಯಿಂದ ಕಾಲವನ್ನು ಕಳೆದು, ಬಹಳ ಕಾಲ ತಿರ್ಯಂಚಗತಿಯಲ್ಲಿ ತಿರುಗಿ ಬಂದು ಕಡೆಯಲ್ಲಿ ಒಂದು ಹೆಣ್ಣಾನೆಯಾಗಿ ಹುಟ್ಟಿ ಕೆಸರಿನಲ್ಲಿ ಬಿದ್ದು ಏಳಲಾರದೆ ಹೊರಳುತ್ತಿರುವಾಗ ಅಂತರೀಕ್ಷ ಮಾರ್ಗದಲ್ಲಿ ಹೋಗುತ್ತಲಿದ್ದ ತರಂಗತಮನೆಂಬ ವಿದ್ಯಾಧರನು ಇದನ್ನು ಕಂಡು ಆನೆಯ ಸಮೀಪಕ್ಕೆ ಬಂದು ಪಂಚನಮಸ್ಕಾರವನ್ನು ಹೇಳಲಾಗಿ ಆ ಹೆಣ್ಣಾನೆಯು ಉಪಶಮ ಚಿತ್ತದಿಂದ ಸತ್ತು ಶಂಭುವಿನ ಪುರೋಹಿತ ಶ್ರೀಭೂತಿಗೂ ಆತನ ಭಾರ್ಯೆ ಸರಸ್ವತಿಗೂ ವೇದವತಿಯೆಂಬ ಮಗಳಾಗಿ, ಚರ್ಯಾಮಾರ್ಗವಾಗಿ ಬರುತ್ತಲಿದ್ದ ಯತಿಗಳನ್ನು ದೂಷಿಸಲಾಗ

ಆಕೆಯ ತಂದೆಯು ಆಕೆಯನ್ನು ಶಿಕ್ಷಿಸಿ, ಜಿನಧರ್ಮಸ್ವರೂಪವನ್ನು ತಿಳಿಸಲಾಗ ವೇದವತಿಯು ಜೈನಮಾರ್ಗದಲ್ಲಿ ನಡೆಯುತ್ತಿದ್ದಳು. ಮುಂದೆ ಆಕೆಯ ಮೂರನೇ ಭವದಲ್ಲಿ ರಾವಣನಾಗಿ ಹುಟ್ಟುವ ಶಂಭುವು ಈಕೆಯನ್ನು ಕಂಡು ಮೋಹಿಸಿ ತನಗೆ ಆಕೆಯನ್ನು ಲಗ್ನಮಾಡಿ ಕೊಡಬೇಕೆಂದು ಆಕೆಯ ತಂದೆಯಾದ ಶ್ರೀಭೂತಿಗೆ ತಿಳಿಸಲಾಗ, ಆತನು ಈ ಶಂಭುವು ಮಿಥ್ಯಾದೃಷ್ಟಿಯಾದ್ದರಿಂದ ಮಗಳನ್ನು ಕೊಡಲಾಗುವುದಿಲ್ಲವೆಂದು ತಿರಸ್ಕರಿಸಿದನು. ಆಗ ಶಂಭುವು ಶ್ರೀಭೂತಿಯನ್ನು ಕೊಂದು ವೇದವತಿಯನ್ನು ತನ್ನನ್ನು ವರಿಸುವಂತೆ ಬೇಡಲು ಅವಳು ತಂದೆಯು ಸತ್ತ ದುಃಖದಿಂದ ಅವನನ್ನು ತಿರಸ್ಕರಿಸಿ "ನಿನ್ನ ಹೊಟ್ಟೆಯಲ್ಲೇ ಹುಟ್ಟಿ ನಿನ್ನನ್ನು ಸಂಹಾರಮಾಡಿಸುವೆನು" ಎಂದು ನಿದಾನಶಲ್ಯಮಾಡಿ ಕಠಿನವಾದ ತಪಸ್ಸನ್ನು ಮಾಡಿ ಬ್ರಹ್ಮಕಲ್ಪದಲ್ಲಿ ಚಿತ್ರೋತ್ಸವೆಯಾಗಿ ಹುಟ್ಟಿ ಅಲ್ಲಿಂದ ಇಳಿದು ಈಗ ಸೀತೆಯಾಗಿ ಹುಟ್ಟಿದಳೆಂದು ಹೇಳಿದರು. ವಸುದತ್ತನಾಗಿದ್ದ ಭವದಲ್ಲಿ ಸ್ನೇಹಿತನಾಗಿದ್ದ ಯಜ್ಞವಲ್ಕಿಯು ಈಗ ವಿಭೀಷಣನಾಗಿ ಹುಟ್ಟಿ ಸ್ನೇಹಿತನಾಗಿದ್ದದ್ದರಿಂದ ಈಗ ಲಕ್ಷ್ಮಣನಲ್ಲಿ ಬಂದು ಸೇರಿದನು. ಹಿಂದೆ ಹೇಳಿದ ಪದ್ಮರುಚಿಯ ಕೈಯಲ್ಲಿ ಪಂಚನಮಸ್ಕಾರದಿಂದ ಮಂತ್ರೋದಕವನ್ನು ಹೊಂದಿದ ವೃಷಭವು ರಾಜಪುತ್ರನಾಗಿ ಹುಟ್ಟಿ ತಪಸ್ಸನ್ನು ಮಾಡಿ ಸ್ವರ್ಗಕ್ಕೆ ಹೋಗಿದ್ದು ಈಗ ಮುನ್ನಿನ ಉಪಕಾರ ಕಾರಣದಿಂದ ಸುಗ್ರೀವನಾಗಿ ನಿಮ್ಮ ಸೇವೆಯನ್ನು ಮಾಡುತ್ತಿರುವನು. ಶ್ರೀಭೂತಿ ಎಂಬ ಪುರೋಹಿತನಾಗಿದ್ದ ಕಾಲದಲ್ಲಿ ಈಗ ರಾವಣನಾಗಿದ್ದವನು ಹಿಂದೆ ಶಂಭುವಾಗಿದ್ದ ಕಾಲದಲ್ಲಿ ಈತನ ಕೈಯಿಂದ ಶ್ರೀಭೂತಿಯು ಸತ್ತದ್ದರಿಂದ ಆಕೋಪ ಕಾರಣವಾಗಿ ಈಭವದಲ್ಲಿ ಶ್ರೀಭೂತಿಚರನಾದ ಲಕ್ಷ್ಮಣನು ರಾವಣನನ್ನು ಕೊಂದನು. ಸೀತೆಯು ವೇದವತಿಯಾಗಿದ್ದ ಭವದಲ್ಲಿ ನಾನಾವಿಧವಾಗಿ ಸುದರ್ಶನೆಯರೆಂಬ ಕಂತಿಯರನ್ನು ನಾನಾವಿಧವಾಗಿ ದೂಷಿಸಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡದ್ದರಿಂದ ಸೀತೆಗೆ ಅಪವಾದ ಬಂದು, ಆ ಅಪವಾದವು ಈಗ ಕಳೆಯಿತೆಂದು ಹೇಳಿದರು. ಕೃತವಕ್ತ್ರನು ಈ ಜನ್ಮಾಂತರ ವಿಚಿತ್ರವನ್ನು ಕೇಳಿ ದೀಕ್ಷಾಬದ್ಧನಾದನು. ರಾಮಸ್ವಾಮಿಯು ಇನ್ನೂ ಕೆಲವು ದಿವಸಗಳಿದ್ದು ದೀಕ್ಷೆಯನ್ನು ತೆಗೆದುಕೊಳ್ಳಬೇಕೆಂದು ಮನದಲ್ಲಿ ನಿಶ್ಚೈಸಿ ಭಟ್ಟಾರಕರಿಗೆ ನಮಸ್ಕರಿಸಿ, ಸೀತಾರ್ಯೆಯರನ್ನು ಹೊಗಳಿ ಲಕ್ಷ್ಮಣಾದಿಗಳನ್ನು ಕೂಡಿ ಮುನಿಗೆ ವಂದಿಸಿ ಅಯೋಧ್ಯಾಪಟ್ಟಣಕ್ಕೆ ಹೊರಟು ಪಟ್ಟಣವನ್ನು ಪ್ರವೇಶ ಮಾಡಿ ಸುಖದಿಂದ

ಕೆಲವುಕಾಲ ಇರುತ್ತಿರಲು, ಸೀತಾರ್ಯಕಿಯರು ಅನೇಕವರ್ಷಗಳು ತಪಸ್ಸನ್ನು ಮಾಡಿ ಮೂವತ್ತಾರು ದಿವಸ ನಿರಶನರಾಗಿ ಸಮಾಧಿವಿಧಿಯಿಂದ ಮುಡುಪಿ ಅಚ್ಯುತಕಲ್ಪದಲ್ಲಿ ಸ್ವಯಂಪ್ರಭನೆಂಬ ಪ್ರತೀಂದ್ರನಾಗಿ ಹುಟ್ಟಿ ದಿವ್ಯ ಸುಖಕ್ಕೆ ಭಾಜನರಾದರು. ಇತ್ತಲು ಕಾಂಚನಪುರದಅರಸನಾದ ಕಾಂಚನರಥನಿಗೂ ಆತನರಸಿ ವಿದ್ಯುನ್ಮಾಲೆಗೂ ಹುಟ್ಟಿದ ಮಂದಾಕಿನಿ ಮತ್ತು ಚಂದ್ರಾಸ್ಯೆಯರೆಂಬಿಬ್ಬರಿಗೂ ಸ್ವಯಂವರವಾಯಿತು. ಅದಕ್ಕೆ ಲಕ್ಷ್ಮಣಚಕ್ರಿಯ ಎಂಟುಮಕ್ಕಳೂ ರಾಮನ ಪುತ್ರರಾದ ಕುಶಲವರೂ ಸಹ ಹೋಗಿದ್ದರು. ಆಗ್ಯೆ ಆ ರಾಜಪುತ್ರಿಯರು ಲಕ್ಷ್ಮಣಚಕ್ರಿಯ ಮಕ್ಕಳಿಗೆ ಮಾಲೆಹಾಕದೆ ಕುಶನಿಗೆ ಮಂದಾಕಿನಿಯೂ, ಲವನಿಗೆ ಚಂದ್ರಾಸ್ಯೆಯೂ ಮಾಲೆ ಹಾಕಿದ್ದಕ್ಕೋಸ್ಕರ ಲಕ್ಷ್ಮಣನ ಎಂಟು ಮಕ್ಕಳೂ ಸಹ ನಾಚಿಕೆಯನ್ನು ಹೊಂದಿ ದೀಕ್ಷಾಬದ್ಧರಾದರು. ಕುಶಲವರು ತಮ್ಮ ನೂತನ ಕಾಂತೆಯರೊಡನೆ ಸುಖದಿಂದ ಇರುತ್ತಾ ಜಿನೇಶ್ವರನನ್ನು ಭಜಿಸುತ್ತಿದ್ದರು.

೮೩. ಜಲಕ್ರೀಡೆ.

ಗೌತಮ ಸ್ವಾಮಿಗಳು ಮುಂದಲ ಕಥಾನಕವನ್ನು ಹೇಳಲು ಪ್ರಾರಂಭಿಸಿದರು. ಎಲೈ ಶ್ರೇಣಿಕನೇ! ಕೇಳುವನಾಗ್ಯೆ- ಶ್ರೀರಾಮಲಕ್ಷ್ಮಣರು ನಿತ್ಯಕರ್ಮಾನುಷ್ಠಾನರಾಗಿ ಸಭಾಪ್ರವೇಶಮಾಡಿ ರತ್ನಸಿಂಹಾಸನಾಧೀಶ್ವರರಾಗಿರಲಾಗ ವಂದಿಗಳು ಶೌರ್ಯೋದಾರ್ಯಗಳನ್ನು ಹೊಗಳುತ್ತಿರಲು ವನಪಾಲಕನು ಬಂದು ಫಲಪುಷ್ಪಗಳನ್ನು ಒಪ್ಪಿಸಿ ಚೈತ್ರ ಮಾಸದ ಉದ್ಯಾನವನದ ಸೊಬಗನ್ನು ಹೇಳಿ ವಾಪೀಕೂಪ ತಟಾಕನದನದಿಗಳ ಜಲಗಳು ನಿರ್ಮಲವಾಗಿ ಮಹಾರಾಜರ ಆಗಮನವನ್ನು ಕೋರುತ್ತಲಿವೆಯೆಂಬುದಾಗಿ ಪ್ರಾರ್ಥಿಸಿಕೊಳ್ಳುತ್ತಿರಲಾಗ ಸಭಾಸದರರು ವಸಂತ ಋತುವರ್ಣನೆಯನ್ನು ಮಾಡಿ ಮಹಾರಾಜರ ಮನಸ್ಸಿಗೆ ಉತ್ತೇಜನವನ್ನು ಕೊಡಲು, ಲಕ್ಷ್ಮಣ ಚಕ್ರವರ್ತಿಯು ವನಪಾಲಕನಿಗೆ ಉಚಿತ ವಸ್ತುಗಳನ್ನು ಕೊಟ್ಟು ಕಳುಹಿಸಿ ಜಲಕ್ರೀಡಾವಿಹಾರಾರ್ಥವಾಗಿ ಸಕಲರೂ ಬರಬೇಕೆಂದು ಪಟ್ಟಣದಲ್ಲೆಲ್ಲಾ ಡಂಗೂರ ಹೊಡಿಸಿ, ರಾಮಲಕ್ಷ್ಮಣರಾದ ಬಲದೇವ ವಾಸುದೇವರು ಪರಿಜನ ಪುರಜನ ಅಂತಃಪುರಜನರೊಡನೆ ಉಪವನಕ್ಕೆಬಿಜಯಂಗೈದರು. ಆಗಂತುಕರು ಮನೋಹರವಾದ ಮಾಕಂದವ ಚೂತ ಪುಷ್ಪ ಫಲಗಳನ್ನೂ, ನಾಳಿಕೇರ ಕಂಗು ಕದಳಿ

ಗಳನ್ನು ನೋಡುತ್ತಾ, ಕುಂದ ಜಾಜಿ ಮಲ್ಲಿಕಾ ಕೇತಕಿ ಕುರವಕ ಚಂಪಕ ಸುರಗಿ ಸುರಹೊನ್ನೆ ವಕುಳ ಅಶೋಕ ಪುಷ್ಪಗಂಧವನ್ನು ಆಘ್ರಾಣಿಸುತ್ತಾ, ಕೇಸರಿ ಪಚ್ಚ ಕರ್ಪೂರಗಳಿಂದ ಸುವಾಸಿತ ಕೃತಕ ಸರೋವರದಲ್ಲಿ ತಮ್ಮ ತಮ್ಮ ಇಷ್ಟಾಂಗನೆಯರೊಡನೆ ಜಲದಲ್ಲಿ ಕ್ರೀಡಿಸುತ್ತಾ, ಬಳಲಿ ಚ್ಛಾಯಾ ವೃಕ್ಷ ಲತಾಗೃಹಗಳಲ್ಲಿ ಕೂತು ಸ್ವಾದುಕರವಾದ ಫಲಗಳನ್ನು ಭಕ್ಷಿಸುತ್ತಾ, ಅಮೃತವಾದ ಸನ್ನಾಳಿಕೇರ ಜಲವನ್ನು ಪಾನಮಾಡುತ್ತಾ, ವಿಶ್ರಮಿಸಿಕೊಳ್ಳುತ್ತಾ ಅರ್ಹತ್ಪರಮೇಶ್ವರರನ್ನು ನೆನೆಯುತ್ತಲಿದ್ದರು.

೮೪. ಚಂದ್ರಿಕಾ ವಿಹಾರ.

ಎಲೈ ಶ್ರೇಣಿಕನೇ ! ಕೇಳುವವನಾಗು. ವಿಶ್ರಮಿಸಿಕೊಂಡನಂತರ ಬಲದೇವವಾಸುದೇವರು ಸೂರ್ಯನು ಶಾಂತನಾಗಿ ಕಿರಣವನ್ನು ಪ್ರಸರಿಸುತ್ತಿರಲು ಪರಿಜನ ಪುರಜನ ಅಂತಃಪುರಜನರೊಡನೆ ಬರುತ್ತಾ ಪಟ್ಟಣ ಪ್ರವೇಶಮಾಡಿ ಸುವಾಸಿನಿಯರೊಡನೆ ಮಂಗಳಾರತಿಗಳನ್ನು ಸ್ವೀಕರಿಸುತ್ತಾ ಅರಮನೆಗೆ ತೆರಳಿದರು. ಸೂರ್ಯನು ಪಶ್ಚಿಮಾಬ್ಧಿಯನ್ನು ಸೇರುತ್ತಲೇ ನಕ್ಷತ್ರಗಳೆಲ್ಲಾ ತಮ್ಮ ತಮ್ಮ ಕಾಂತಿಗಳನ್ನು ಬೀರುತ್ತಿರಲು ಶಾರ್ವರೀನಾಯಕನಾದ ಶಶಾಂಕನು ಉದಯಾಚಲವನ್ನು ಹತ್ತಿದ್ದನು. ಆಗ ಆ ಪಟ್ಟಣದ ಸ್ತ್ರೀಪುರುಷರಿಗೆ ಪರಸ್ಪರ ಮೈತ್ರೀಭಾವವು ಹೆಚ್ಚಿ ಪರಸ್ಪರ ಅಗಲಿರಲು ಮನಬಾರದೆ ಒಬ್ಬರನ್ನೊಬ್ಬರು ಅತಿತೀವ್ರದಿಂದ ಕೂಡಲು ಅಲೆದಾಡುತ್ತಿದ್ದಾಗ ಮಂದಮಾರುತ ಕಿಶೋರನು ಪುಷ್ಪವಾಟಿ ಎಂಬ ಆಂಧೋಳದಲ್ಲಿ ಮಲಗಿ ಚಂಚರೀಕರ ಗಲಬಿಲಿಯಿಂದ ಮಲಗಲೊಲ್ಲದೆ ಪಟ್ಟಣದ ಬೀದಿಬೀದಿ ಸಂದುಸಂದುಗಳಲ್ಲಿ ಅಲೆದಾಡುತ್ತಿರುವ ಸ್ತ್ರೀಪುರುಷರನ್ನು ಅವರವರ ಶಯನೋತ್ಸವಕ್ಕೆ ಹೊಡೆದಟ್ಟುತ್ತಿತ್ತು. ಶಯನೋತ್ಸವದಲ್ಲಿ ಓಡಾಡಿದ ಸ್ತ್ರೀಪುರುಷರು ವಿಶ್ರಾಂತಿಗೊಳ್ಳುತ್ತಾ, ಜಿನೇಶ್ವರರನ್ನು ಅನೇಕ ವಿಧವಾಗಿ ಭಜಿಸುತ್ತಿದ್ದರು.

೮೫. ನಿರ್ವಾಣ ಕಲ್ಯಾಣ.

ಗೌತಮ ಸ್ವಾಮಿಗಳು ಕಥಾಂತ್ಯವನ್ನು ಹೇಳಲನುವಾದರು. ಎಲೈ ಮಗಧಾಧಿಪನೇ ! ಕೇಳುವನಾಗೈ.

ಬಲದೇವವಾಸುದೇವರುಗಳು ಅತ್ಯಂತ ಆನಂದದಿಂದ ಕಾಲವನ್ನು ಕಳೆಯುತ್ತಿರಲು ಒಂದಾನೊಂದು ಕಾಲದಲ್ಲಿ ಸೌಧರ್ಮೇಂದ್ರನು ಸುಧರ್ಮ ಸಭೆಯಲ್ಲಿ ಕೂತುಕೊಂಡು ಅತ್ಯಂತ ಸ್ನೇಹವುಳ್ಳವರ್ಯಾರೆಂದರೆ ಅಯೋಧ್ಯಾ

ಪಟ್ಟಣದಲ್ಲಿರುವ ಎಂಟನೇ ಬಲಕೇಶವರೆಂದು ಹೊಗಳುತ್ತಿರಲಾಗಿ ಈ ಬಲಕೇಶವರ ಪ್ರೇಮವನ್ನು ಪರೀಕ್ಷಿಸಬೇಕೆಂದು ದೇವತೆಗಳಾದ ರತ್ನಚೂಳ, ಅಮೃತಚೂಳರೆಂಬಿಬ್ಬರು ಅಯೋಧ್ಯೆಗೆ ಬಂದು ವೈಕುರ್ವಣ ವಿದ್ಯೆಯಿಂದ ಶ್ರೀರಾಮನು ಮೃತನಾದಂತೆಮಾಡಿದರು. ಇದನ್ನು ಲಕ್ಷ್ಮಣನುನೋಡಿಅತ್ಯಂತ ದುಃಖವನ್ನು ಹೊಂದಿ ಶೋಕವನ್ನು ತಡೆಯಲಾರದೆ ದೀರ್ಘನಿದ್ರೆಯನ್ನು ಹೊಂದಿದನು. ಆತನ ಸ್ತ್ರೀಯರು ಪ್ರಲಾಪಮಾಡುತ್ತಿರಲು ರಾಮನು ಕೇಳಿ ಗತ ಪ್ರಾಣನಾದ ಚಕ್ರಿಯ ಬಳಿಗೆ ಬಂದು ನೋಡಿ ಮೂರ್ಛೆಹೊಂದಿ ಹಾಗೆ ಎಚ್ಚೆತ್ತುಕೊಂಡು ಶೋಕಪಡುತ್ತಿರಲು, ವಿಭೀಷಣನು ಬಂದು ರಾಮನಿಗೆ ಸಂಸಾರ ಸ್ಥಿತಿಯನ್ನುವಿವರಿಸಿ ಸಮಧಾನಪಡಿಸಿದರೂ ರಾಮನು ಕೇಳದಿರಲು ಸುಗ್ರೀವಾದಿಗಳು ಬಂದು ಲಕ್ಷ್ಮಣನ ಶಬವನ್ನು ದಹಿಸುವೆವೆಂದು ಹೇಳಲು ರಾಮನು ದುಃಖಾತಿಮೋಹದಿಂದ ಲಕ್ಷ್ಮಣನ ಶಬವನ್ನೆತ್ತಿಕ್ಕೊಂಡು ರಾಜಭವನವನ್ನು ಬಿಟ್ಟು ಹೊರಗೆಬಂದು ಬಿಡಲು, ದೇವಗತಿಯನ್ನು ಹೊಂದಿದ ಜಟಾಯುಚರನೂ, ಸ್ವರ್ಗವನ್ನು ಹೊಂದಿದ ಕೃತಾಂತಚರನೂ ಸಹ ಬಂದು ನಾನಾವಿಧವಾದ ಉಪಾಯಗಳಿಂದ ರಾಮನಿಗೆ ಮೋಹಾತಿರೇಕವನ್ನು ತಪ್ಪಿಸಲು ರಾಮನು ವಿವೇಕವನ್ನು ತಂದುಕೊಂಡು ವಿಭೀಷಣ ಸುಗ್ರೀವಾದಿಗಳನ್ನಿಟ್ಟುಕೊಂಡು ಸರಯೂನದಿತಡಿಯಲ್ಲಿ ಲಕ್ಷ್ಮಣನಿಗೆ ದಹನಕ್ರಿಯೆಗಳನ್ನು ಮಾಡಿ ಕುಶಲವರನ್ನು ರಾಜ್ಯಭಾರಮಾಡುವಂತೆ ಹೇಳಲು ಅವರು ಒಪ್ಪದೆ ವೈರಾಗ್ಯಪರಾಯಣರಾಗಲು, ಕುಶನ ಹಿರಿಯ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿ ಶತೃಘ್ನಾದಿಗಳೊಡನೆ ಸುವ್ರತಚಾರಣರ ಪಕ್ಕದಲ್ಲಿ ದೀಕ್ಷೆಯನ್ನು ತೆಗೆದುಕೊಂಡು ತಪೋಭರನಾದನು. ಕುಶಲವರೂ ಸಹ ದೀಕ್ಷೆಯನ್ನು ಪಡೆದವರಾದರು. ಅಂತಃಪುರದ ಕಾಂತೆಯರು ಶ್ರೀಮತ್ಯಾರ್ಯಿಕೆಯರಲ್ಲಿ ದೀಕ್ಷಾಬದ್ಧರಾದರು. ರಾಮನು ಮೂಲಗುಣೋತ್ತರಗುಣಗಳಿಂದ ಶೀಲವನ್ನು ಹೊಂದಿ ಸಮಿತಿಗುಪ್ತಿಗಳನ್ನು ಚನ್ನಾಗಿ ನಡೆಸಿ ಪಂಚಮಹಾವ್ರತಗಳನ್ನು ಪ್ರಮಾದವಿಲ್ಲದೆ ಇರುವನಾಗಿ ದಶಧರ್ಮಗಳಿಂದ ಕೂಡಿ ಪರೀಷಹಗಳನ್ನು ಜಯಿಸಿ ಉಗ್ರೋಗ್ರ ತಪಶ್ಚರಣನಿರತನಾಗಿ ದ್ವಾದಶ ದಿನದವರಿಗೆ ಆಹಾರ ಶರೀರ ಪರಿತ್ಯಾಗ ಪ್ರತ್ಯಾಖ್ಯಾನವನ್ನು ಮಾಡಿ ಮರುದಿನ ಪಾರಣೆಗಾಗಿ ವಂಶಸ್ಥಳವೆಂಬ ಪಟ್ಟಣಕ್ಕೆ ಬರಲು ಆ ಪಟ್ಟಣದ ರಾಜನು "ತನ್ನ ಮನೆಗೆ ಮಾರ್ಗತೋರಿಸಿರಿ" ಎಂದುಪ್ರಜೆಗಳಿಗೆ ಹೇಳಲು ಅದು ಚರ್ಯಾವಿಘ್ನವಾದ್ದರಿಂದ ಅವರು ಹಿಂತಿರುಗಿ ಆಹಾರತೆಗೆದುಕ್ಕೊಂಡಂತೆ ಸಮಾಧಾನ ಚಿತ್ತದಿಂದಪೊರಮಡಲು ಹೀಗೇನೆ ಹನ್ನೆರಡುದಿವಸಗಳಾಗಲು ಅವರು ಕಾಂತಾ

ರಚರ್ಯೆಮಾಡಲು ಆಗ ಪ್ರಭಾವತಿಯು ಇಪ್ಪತ್ನಾಲ್ಕನೇ ದಿವಸದ ಪಾರಣೆಗೆ ಆಹಾರವನ್ನು ಕೊಡಲು ಪಂಚಾಶ್ಚರ್ಯವಾಯಿತು. ಹೀಗೆ ರಾಮಭಟ್ಟಾರಕರು ತಪೋಭರರಾಗಿ ಲಕ್ಷ್ಮಣನೆತ್ತಿದ್ದ ಸಿದ್ಧಶೈಲವನ್ನೇರಿ ಪ್ರತಿಮಾಯೋಗದಲ್ಲಿ ನಿಂತರು. ಸೀತೇಂದ್ರನು ಅಚ್ಯುತಕಲ್ಪದಿಂದ ಬಂದು ರಾಮಮುನಿಗಳಿದ್ದ ಸಿದ್ಧ ಗಿರಿಗೆ ಬಂದು ಪೂರ್ವದಲ್ಲಿದ್ದ ಸೀತಾರೂಪಳಾಗಿ ವಿದ್ಯಾಧರ ಸುಂದರಿಯರ ಒಡಗೊಂಡು ಯತಿಗಳ ಸಮೀಪಕ್ಕೆ ಹೋಗಿ "ಮುನಿವರ್ಯರೇ! ನಿಮಗಿನ್ನೂ ಯೌವ್ವನವಿದೆ. ಸುಂದರರಾಗಿದ್ದೀರಿ- ನಮ್ಮನ್ನು ಸ್ವೀಕರಿಸಿ. ನಾವು ಉಭಯರೂ ಸ್ವಲ್ಪಕಾಲ ಕಾಮಸುಖವನ್ನು ಅನುಭವಿಸೋಣ? ಅನಂತರ ನೀವು ಪುನಃ ದೀಕ್ಷಾಬದ್ಧರಾಗಬಹುದು" ಎಂದು ಅನೇಕ ವಿಧವಾಗಿ ತಪೋ ವಿಘ್ನಗಳಾದ ಮಾತುಕಥೆನಡತೆಗಳಿಂದ ಅವರ ಧ್ಯಾನಕ್ಕೆ ಕುಂದಕಬರುವಂತೆ ಆಚರಿಸುತ್ತಿರಲಾಗ ರಾಮಮುನೀಶ್ವರರು ಸ್ವಲ್ಪವಾದರೂ ಕಾಯ ಮನವಚನ ಗುಪ್ತಿಗಳನ್ನು ಬಿಡದೆ ಪರಮಾತ್ಮ ಧ್ಯಾನದಲ್ಲಿ ಲೀನರಾಗಿ ಮಾಘಮಾಸದ ಶುಕ್ಲಪಕ್ಷದ್ವಾದಶಿ ದಿವಸ ಅರುಣೋದಯದಲ್ಲಿ ಕೇವಲ ಬೋಧೋದಯವನ್ನು ಸಮಾಧಿ ವಿಧಿಯಿಂದ ಪಡೆಯಲು ಚತುರ್ನಿಕಾಯಾಮರರೊಡನೆ ಸೀತೇಂದ್ರನು ರಾಮಸ್ವಾಮಿಗೆ ಕೇವಲಜ್ಞಾನ ಕಲ್ಯಾಣದ ಪೂಜೆಯನ್ನು ಮಾಡಿ ಅನಂತರ ಲಕ್ಷ್ಮಣನಿಗೆ ಧರ್ಮವನ್ನು ಬೋಧಿಸಲು ಶರ್ಕರಾಪ್ರಭೆಯೆಂಬ ನರಕಕ್ಕೆಹೋಗಿ ನೋಡಲು ಅಲ್ಲಿ ಒಬ್ಬರಿಗೊಬ್ಬರು ಅನೇಕ ವಿಧದಿಂದ ಹಿಂಸಿಸುತ್ತಾ ನರಕದಲ್ಲಿ ಕಠಿಣವಾದ ಕಷ್ಟದಿಂದ ನರಳುತ್ತಿದ್ದ ರಾವಣ ಲಕ್ಷ್ಮಣಚರರನ್ನೂ, ಅವರಿಬ್ಬರನ್ನೂ ಕಾಡುತ್ತಿದ್ದ ಶಂಭುಕನನ್ನೂಕಂಡು ದಯೆಯಿಂದ ಅವರಿಗೆ ಧರ್ಮಶ್ರವಣವನ್ನು ಮಾಡಿಉಪಶಮಿಸಿ ಸಮ್ಯಕ್ತ್ವವನ್ನು ಮರೆಯದಿರಿ ಎಂದು ಹೇಳಿದನು. ಅವರ ದುಃಖಕ್ಕೆ ಅತ್ಯಂತವಾಗಿ ವೈರಾಗ್ಯವನ್ನು ಹೊಂದಿ ಅಲ್ಲಿಂದ ರಾಮಕೇವಲಿಗಳಲ್ಲಿ ಬಂದು ನಮಸ್ಕರಿಸಿ ದಶರಥ ಜನಕಾದಿಗಳು ಪಡೆದ ಗತಿಗಳನ್ನು ಕೇಳಲು, "ದಶರಥನಿಗೆ ಸ್ವರ್ಗಾವಾಸವನ್ನೂ, ಅಪರಾಜಿತೆಗೂ ಕೈಕಿಲೆಗೂ ಸುಮಿತ್ರೆಗೂ ಸುಪ್ರಭೆಗೂ ಜನಕನಿಗೂ ಸ್ವರ್ಗಾವಾಸವನ್ನೂ ಹೇಳಿ, ಕುಶಲವರಿಗೆ ಈ ಭವದಲ್ಲೇಮುಕ್ತಿಯಾಗುವುದೆಂದು ಹೇಳಲು, ಸೀತೇಂದ್ರನು ಕೇಳಿ ಅಚ್ಯುತಕಲ್ಪಕ್ಕೆ ತೆರಳಿದನು. ರಾಮಮುನೀಶ್ವರರು ಎಂಟುದಿನ ಆಯುಷ್ಯಾವಸಾನವೆಂದುತಿಳಿದು ಅತ್ಯಂತ ಮನೋಹರವಾದ ಕನಕಾಂಭೋಜ ಷಂಡಗಳಂತೆ ಹೊಳೆಯುತ್ತಿರುವ ಕಮಲಸಂಗತವಾದ ತಟಾಕಮಧ್ಯದಲ್ಲಿ ಶುದ್ಧಸ್ಫಟಿಕಮಣಿಶಿಲಾಪಟ್ಟದ ತುದಿಯಲ್ಲಿ ರಾಮಚಂದ್ರಮುನಿಗಳು ಪ್ರತಿಮಾಯೋಗ ಪ್ರಯೋಗಾರೂಢರಾಗಿ

ಗುಣಭವನ ಮಣಿಸ್ತಂಭದಂತೆ ಪ್ರಕಾಶಿಸುತ್ತಾ ಇದ್ದುಕ್ಕೊಂಡು ಸೂಕ್ಷ್ಮ
ಶರೀರಯೋಗದಿಂದ ಸೂಕ್ಷ್ಮಕ್ರಿಯಾಪ್ರತಿಪಾತಿ ಎಂಬ ಪರಮ ಶುಕ್ಲಧ್ಯಾನ
ದಲ್ಲಿ ನಿಂತು ಲಘುಕರ್ಮ ಪರಿಪಾತನ ಶಕ್ತಿಪ್ರಾಪ್ತಿ ಕಾರಣಾರ್ಥವಾಗಿ ದಂಡ
ಕವಾಟ ಲೋಕಪೂರಣ ಪ್ರತರಕ್ರಿಯೆಗಳನ್ನು ಪ್ರತಿಸಮಯದಲ್ಲಿ ಪ್ರಯೋಗಿಸಿ
ನಾಲ್ಕು ಅಘಾತಿಕರ್ಮಸ್ಥಿತಿಯ ಕಾಲವನ್ನು ಅಸದೃಶವನ್ನಾಗಿ ಮಾಡಿ ಮೂಲ
ಶರೀರ ಪ್ರಮಾಣದಲ್ಲಿ ನಿಂತು ಕಾಯವಾಙ್ಮನ ಯೋಗವನ್ನು ಕಳೆದು
ಸಕಲಬಂಧಾಶ್ರವನಿರೋಧದಿಂದ ಅಯೋಗಿಕೇವಲಿಗುಣಸ್ಥಾನವನ್ನು ಹೊಂದಿ
ಸಮುಚ್ಛಿನ್ನ ಪ್ರಾಣಾಪಾನ ಪ್ರಚಾರನ ಸಮುಚ್ಛಿನ್ನ ಕ್ರಿಯಾ ನಿವೃತ್ತಿಧ್ಯಾನ
ಪ್ರವರ್ತ್ತಕರಾಗಿ ಅದರಂತ್ಯದಲ್ಲಿ ಅನ್ಯತರ ವೇದನೀಯ ದೇವಗತಿ ತತ್ಪ್ರಾಯೋ
ಗ್ಯಾನುಪೂರ್ವ್ಯೌದಾರಿಕ ಶರೀರ ತದ್ಬಂಧನ ಸಂಘಾತ ಸಂಸ್ಥಾನಾಂಗೋಪಾಂಗ
ಸಂಹನನ ವರ್ಣಗಂಧ ರಸಸ್ಪರ್ಶ ಪ್ರಶಸ್ತಾಪ್ರಶಸ್ತವಿಹಾಯೋಗತಿ ಗುರುಲಘು
ಶರೀರ ಸ್ಥಿರಾಸ್ಥಿರ ಸುಭಗ ದುರ್ಭಗ ಸುಸ್ವರ ದುಸ್ವರಾದೇಯ ಯಶಸ್ಕೀರ್ತಿ
ನಿರ್ವಾಣ ನೀಚೈರ್ಗೋತ್ರಗಳೆಂಬ ಎಪ್ಪತ್ತೆರಡು ಪ್ರಕೃತಿಗಳಂ ದೂರೀ
ಕೃತಮಾಡಿ ಅನಂತರ ಕೊನೆಯಲ್ಲಿ ಪರಿಶಿಷ್ಟಾನ್ಯತರ ವೇದನೀಯಮನುಷ್ಯಾ
ಯುರ್ಮನುಷ್ಯಗತಿ ಪಂಚೇಂದ್ರಿಯ ಜಾತ್ಯಾನುಪೂರ್ವತ್ರಸನಾಮಬಾದರ
ಪರ್ಯಾಪ್ತಕ ಸುಭಗಾಧೇಯ ಯಶಸ್ಕೀರ್ತಿ ತೀರ್ಥಕರ ನಾಮೋಚ್ಚೈ
ರ್ಗೋತ್ರಗಳೆಂಬ ಹದಿಮೂರು ಪ್ರಕೃತಿಗಳನ್ನು ಒಂದೇ ವೇಳೆಯಲ್ಲೇ ನಿರ್ಮೂಲ
ಮಾಡಲು ಸಕಲಸಂಸಾರಭಾರ ದುಃಖಭಾರ ಭಂಜನರಾಗಿ ರಾಮಮುನಿಗಳು
ನಿರಂಜನರಾದಾಗ ಅಷ್ಟಗುಣಗಳಿಂದಕೂಡಿ ದೀಪಾರ್ಚಿಗಳಂತೆ ಅತ್ಯೂರ್ಧ್ವ
ಗತಿಯಾದ ಮೂರುಲೋಕದ ಮೇಲೆ ಶ್ವೇತಚ್ಛತ್ರಿಯಂತೆ ಪ್ರಕಾಶಮಾನವಾಗಿ
ರುವ ಸಿದ್ಧಕ್ಷೇತ್ರಕ್ಕೆ ಹೋಗಿ ಆನಂದದಿಂದ ರಾಮಭಟ್ಟಾರಕರು ಪ್ರಕಾಶಿಸುತ್ತಿ
ರುತ್ತಾರೆಂದು ಗೌತಮ ಸ್ವಾಮಿಗಳು ಮಗಧೇಶ್ವರನಿಗೆ ಅಪ್ಪಣೆ ಕೊಡಿಸಲು
ಗುಣಾನುರಾಗನಾದ ಶ್ರೇಣಿಕನು ಕೇಳಿ ನಮಸ್ಕರಿಸಿ ಸ್ತೋತ್ರಿಸಿದನು.

ರಾಮಂ ಲೋಕಾಭಿರಾಮಂ ಗುಣಗಣನಿಳಯಂ ಭ್ರಾತೃ ನಿತ್ಯಾಭಿಮಾನಂ ।
ರಾಮಂ ಸೀತಾಭಿರಮ್ಯಂ ಪರಮಶಮಯುತಂ ಕೌಸಲಾದೇವಿ ಪುತ್ರಂ ।
ರಾಮಂ ಸಾಕೇತರಾಜಂ ರಘುಕುಲತಿಲಕಂ ಲಕ್ಷ್ಮಣಾನಂದ ಪಾತ್ರಂ ।
ರಾಮಂ ವಂದೇಪ್ರಶಾಂತಂ ಜಿನಪತಿ ಸದೃಶಂ ಮೋಕ್ಷಲಕ್ಷ್ಮೀ ನಿವಾಸಂ ॥*॥

ಶ್ರೀರಾಮಾಯಣಂ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.

ಶ್ರೀಚಂದ್ರಸಾಗರವರ್ಣಿ ವಿರಚಿತ

ಶ್ರೀ ರಾಮಾಯಣ.

ವಿಷಯ ಸೂಚಿಕೆ.



ಸ್ವಸ್ತಿ ಶ್ರೀ ೧೦೮ ದೇಶಭೂಷಣ ಮಹಾಮುನಿಗಳವರು

—॥ ಓಂ ನಮ ಸ್ಸಿದ್ಧೇಭ್ಯಃ ॥—

॥ ಮುನಿಸುವ್ರತ ತೀರ್ಥಂಕರ ಪರಮದೇವೇಭ್ಯೋ ನಮೋನಮಃ ॥



ಶ್ರೀ ಚಂದ್ರಸಾಗರವರ್ಣಿ ವಿರಚಿತ

ಶ್ರೀ ರಾಮಾಯಣ.

ಶ್ರೀದಿವಿಜನರನಾಗಪತಿನುತ । ಪಾದಸರಸಿಜ ಸೌರುಭಾಶ್ರಿತ । ವಾದನಯನಾ
ನಂದಚಿನ್ಮಯ ತ್ರಿಜಗಜನಮೋದ ॥ ಬೋಧೆಗೊಳಿಸಮೃತಾಂಗಲಕ್ಷ್ಮಿಯ । ಸಾ
ಧನಾಗಮವರಿಪ ಮುಕ್ತಿವಿ । ನೋದನಾಗಿಹ ಚಂದ್ರನಾಥನೆ ರಕ್ಷಿಸನವರತಾ ॥೧॥

ದುರಿತತತಿ ತಪೋರಿ ಸ್ಮರ ಮದ । ಹರನೆ ಚಿದ್ಗುಣ ವಿಶ್ವತೋ ಮುಖ । ಪರಮ ಕೇವಲಿ ಪುಣ್ಯ ತೀರ್ಥನೆ ಪುರು ಪರಮ್ಯತಿಯೇ ॥ ಸರಸಿಜಾಸನ ನಾಮ ಸಾಸಿರ । ಧರನೆ ಶ್ರೀಕಲ್ಯಾಣಪಂಚಕ । ಪರಮ ಪುರುಷನೆ ಚಂದ್ರ ನಾಥನೆ ವಲಿದು ರಕ್ಷಿಪುದೂ ॥ ೨ ॥ ಭವ ಭವಾಂಬುಧಿಯೊಳಗೆ ಬಹುಕ । ಷ್ಟವನು ಬಡುತಿಹ ಜೀವನಕೆ ಸದ್ಯ । ವವತೋರಿಪ ಜ್ಞಾನಮಯ ಸರ್ವಜ್ಞ ಸಾರ್ವದೊಳೂ ॥ ನವಗೆ ಆಲಂಬನದಿ ನಿರುಪಮ । ಶಿವಮಯಪಾವನಯಿತ್ತು ನಿತ್ತ್ಯೋ । ತ್ಸವವಪಾಲಿಸು ಚಂದ್ರನಾಥನೆ ಜೀಡುಪನವರತಾ ॥ ೩ ॥ ಆದಿ ಯಲಿನಿಮ್ಮಂಘ್ರಿಯನುಬಹ । ವಾದಜನವಾಲಂಬಿಸಮಲಸು । ಬೋಧೆಯನು ಪಡೆದಿರ್ದರಾನಂತಾದಿಯರ ತಿಳಿದೂ ॥ ಸಾದಿಸದೆಸುಜ್ಞಾನಮಯದ ವಿ । ನೋ ದಬಹದೆಲ್ಲಿಯದು ನಿರ್ಮಲ । ಪಾದ ಮನದಿಂ ಭಜಿಸುವೆನು ಭವಹರನೆ ಸಲ ಹೆನ್ನಾ ॥ ೪ ॥ ತ್ರಿಜಗದಧಿಪತಿಯೆನಿಸಿ ನೀ ಭವ । ತೆಜಿಸಿ ಶಾಶ್ವತ ಲೋಕ ಲಕ್ಷ್ಮಿಯ । ವಿಜಯನಾಗಾನಾದಿಕಾಲಾನಂತ ಸಿದ್ಧಿಯೊಳೂ ॥ ನಿಜನಿಜಾತ್ಮಕ ನಾಗಿ ಲೋಕಕೆ । ಸುಜನ ಸುಜನಾಶ್ರಯದಿ ಸುಖಮಯ । ಕುಜುಗ ವಿತ್ತಾನಂತ ಬೋಧನೆ ರಕ್ಷಿಸನವರತಾ ॥ ೫ ॥ ಶುದ್ಧಶುಚಿ ಶೂರತ್ವದೊಳಗೆ ಪ್ರ । ಸಿದ್ಧ ನಾಗದೆ ತ್ರೈವಿಧದಿ ಅನು । ಬದ್ಧರಾಗಿಹರಾಶ್ರಯಿಸಿದರೆ ಶುದ್ಧತನ ಬಹುದೇ ॥ ಸಿದ್ಧರಾಗಿಹಲೋಕಪಾವನ । ಹೊದ್ದಿಸುವರವಲಂಬಿಸಲು ಭವ । ಬದ್ಧಹರವಾ ಸಿದ್ಧಪದವಿಯನೀವುದೆನಗೊಲಿದೂ ॥ ೬ ॥ ಭವಚತುರ್ಥದ ವಾರ್ಧಿಯನು ತ್ರಾ । ತವಿಸಲನುಪಮ ಚಾರುಚರಿತದ । ನಿವಹವನುಭವದಿಂದ ಸದ್ಭಕ್ತರಿಗೆ ಬೋಧಿಸುವಾ ॥ ನವನೆ ಆಚಾರಿಯನು ಆ ಅನು । ಭವಿಯೊಳುಪದೇಶಿತನೆ ನಿ ರ್ಮಲ । ಭುವನಸುಖವೇನರಿದೆ ಸಮಿಹಿತ್ತವಾಗಿ ರಕ್ಷಿಪುದೂ ॥ ೭ ॥ ಹಲವ್ರತಂ ತ್ರವನೋಡಿಯದರೊಳು । ಲಲಿತವಾಗಕ್ಷಯದ ಲಕ್ಷ್ಮಿಯ । ನೆಲೆಯತೋರುವ ಶಾಸ್ತ್ರವಾದುದ ತಿಳಿದು ಭವ್ಯರಿಗೇ ॥ ವುಲಿವನೇ ಶಾಸ್ತ್ರಜ್ಞನಾತಗೆ । ಸಲುವುದು ಪಮುಧ್ಯಾಯಶಬ್ದದ । ನೆಲೆಯತಿಳಿದನಿಗರಿದೆ ಶಿವಸುಖವೀವುದಾಪಾರ್ಗ ॥೮॥ ಆದಿಯಲಿ ಸಾಧುತ್ವವನು ತಾ । ಸಾಧಿಸಿದನಲ್ಲದಲೆ ಜನಕನು । ಬೋಧಿಸುವ ಸುಜ್ಞಾನವಿರದಂತಾಗಿ ಸಾಧುತ್ವಾ ॥ ನಾದನಾಶ್ರೈಸಿದರೆ ತನಗಾ । ಹಾದಿಮೊ ರೆಯುವದಿಲ್ಲದಲೆಪರ । ನಾದನೆಂಬುದ ತಿಳಿದುನೀ ಸಾಧುತ್ವಪಡೆಯಾತ್ಮಾ ॥೯॥ ಲೋಕಪಾವನ ಪಂಚಗುರುಗಳ । ನೇಕತೆರದೊಳು ಭಜಿಸಿ ಶಾಸ್ತ್ರವಿ । ಲೋಕ ನಾಯಕಿಯಾದ ಶಾರದೆ ಸರಸಿಜಾಂಘ್ರಿಗಳಾ ॥ ವ್ಯಾಕರಣಗೊಳಿಸೆರಗಿ ತಿಳಿ

ದಂ । ತಾಕುಶಲ ವಿರಚಿಸುವೆ ಮಂಜರಿ । ಪಾ ಕನಿತ್ತಾರೈಪ್ರದಾಡಿಯೊಳೀಗವೆಸೆ ಗೊಲಿಮೂ ॥ ೧೦ ॥ ಭಾರತಿಯೆ ಸರಸ್ವತಿಯೆ ಶಾರದೆ । ವಾರಿಜಾಸನೆ ಹಂಸಗಾಮಿನಿ । ಗೌರಿ ಬ್ರಾಹ್ಮಿಣಿ ವಿಧುಷ ವಾಗೀಶ್ವರಿಯೆ ವಾಗ್ವಾಣೀ ॥ ಸಾರವ ಚಿಸುಕುಮಾರಿ ಶಾಸ್ತ್ರಾ । ಸಾರೆ ವರದೆಯೆ ಬ್ರಹ್ಮಚಾರಿಣೆ । ನಾರೀಮಣಿ ಯೆನಗೊಲಿದು ರಕ್ಷಿಸುರಕ್ಷಿಸೀಕಥೆಯಾ ॥ ೧೧ ॥ ಬಾಲಕಾಲಾದ್ಯನಗೆಪರಪತಿ । ಪಾಳನಾಶಕ್ತಿಯುಲಿಬಹುಕಾ । ವ್ಯಾಲಯದೊಳತಿಅಂಜನೆರಿಯ ಗೈಸೆಲ್ಲದನುವೋದಾ ॥ ಪಾಲಿತವಿತ್ತಂತೆಯಿದಕನು । ಕೂಲದಿಂದೆಂನಾಸ್ಯದೊಳು ಬಹು । ಲಾಳಿತದಿ ನಿಂತುದ್ಧರಿಪುದೀದಾದಿ ಮಧ್ಯಾಂತಾ ॥ ೧೨ ॥ ನಂಬಿ ನಿಮ್ಮಂಘ್ರಿಗಳರಚಿಸುವೆ । ನೆಂಬ ಧೈರ್ಯವತಾಳಿ ತೊಡಗಿದ । ನೆಂಬುದನು ನಿಶ್ಚೈಸಿ ನಾನಾತಂತ್ರರಚನೆಗಳಾ ॥ ನಿಂಬುಗೊಳಿಸಿದರಲ್ಲಿಚಲುವಾ । ಯ್ತೆಂಬ ಮಾನಕರ್ಣಗಳ ಶೋಭೆಯ । ತುಂಬುಗೊಳಿಸಾ ಲೋಕಮಾತೆಯೆ ಪಲಿದು ಲಾಲಿತದೀ ॥ ೧೩ ॥ ಬಲ್ಲನಿತು ಶಾರದೆಯ ಸ್ತುತಿಯಡೆ । ಯಲ್ಲಿ ಗಣಧರ ವೃಷಭಸೇನಾ । ದ್ಯಲ್ಲಗಣ ಮುಖ ಮುನಿ ಮಹಾತ್ಮರ ಸರಸಿಜಾಂಘ್ರಿಗಳಾ ॥ ಸಲ್ಲಲಿತಗೊಳಿಲಿಸಗಿ ಪೊಂದೋಂ । ದುಲ್ಲಸೋಕ್ತವ ನೀವುದೆಂಬನು । ವಲ್ಲಿಬೇಡುವೆ ನಿತ್ತು ರಕ್ಷಿಸು ದೇವ ಮುನಿವರಗೆ ॥ ೧೪ ॥ ನಿಮ್ಮ ನುಡಿ ಸೌರುಭದ ಸುಧೆಜನ । ಕಂ ಮನೋಹರವಾಗುತಿರುವ । ಳ್ನಿಮ್ಮರಚನೆಯ ಕಾವ್ಯಸಾರದ ರುಚಿಯ ವರ್ಣಿಸಲೂ ॥ ಯುಮ್ಮಳದಿ ತೊಡಗಿದೆನು ನೀವಿದ । ಕಂಮಿಗಿಲು ವಚನಾಶ್ರ ಗೈವುದು ದೇವಯೋಗಿಗಳೇ ॥ ೧೫ ॥ ಅರುಹ ಶಾರದೆ ಮುನಿ ಮಹಾತ್ಮರ । ಚರಣ ಸರಸಿಜಕಾನು ಷಟ್ಪದ । ದಿ ರವಿನೊಳಗಾನನ್ರು ವಂದನೆಗೈದು ಯಕ್ಷರನು ॥ ಸ್ಮರಿಸಿ ನಿರುತೀ ಕೃತಿಯರಕ್ಷಣೆಗರೆವುದೆನುತಾ ಬೇಡುವೆನುನು । ತ್ಕರದೊಳಾರೈಸ ವಾಕ್ಯವ ನೀವುದನವರತಾ ॥ ೧೬ ॥ ಯಕ್ಷರೆನೆ ಜಿನ ಶಾಸ್ತ್ರ ಮುನಿ ಸಂ । ರಕ್ಷರನುಪಮ ಧರ್ಮಗತರವಿ । ಚಕ್ಷಣೆಯಲಾರೈಪದವರಧಿಕಾರ ವೀಕ್ಷೃತಿಗೆ ॥ ಸಕ್ಷಗೂಡನುಪಮ ದವಾಕ್ಯವ । ಲಕ್ಷಗೊಳಿಸಂತ್ಯಾದಿಮಧ್ಯನ । ಪಕ್ಷರಾಶ್ರೈಸದೊಲು ರಕ್ಷಿಸಲೆನ್ನ ಮೈತ್ರದಲೀ ॥ ೧೭ ॥ ಸರ್ವಜಗದಾಧಾರ ವೆನಿಸೀ । ಪೂರ್ವರೆಂಬರ ನಸೆಜ್ಞೆಗತಿಗಳ । ನಿರ್ವಹಿಪ ಸಾಮರ್ಥ್ಯವುಳ್ಳವು ದೇವಗುರುಶಾಸ್ತ್ರಾ ॥ ಪರ್ವಪಿರದಿಂ ನಿಲ್ಲನೀವೇ । ಸರ್ವರಕ್ಷಣೆ ಗರೆವುದೆನ್ನ ನಿ । ಗರ್ವನೆನಿಸೀ ಕೃತಿಯ ರಕ್ಷಿಸಿ ಬೇಡಿಕೊಳ್ಳುವೆನೂ ॥ ೧೮ ॥ ಶಕ್ತಿಯಿಲ್ಲದ ಸಾರಭರಿತವ । ಸುಕ್ತಿಪಭಿಲಾಷೆಯಲಿ ಘನಕೃತಿ । ಯುಕ್ತನಾದೆನು ನಂಬಿ ಧರ್ಮವನೆಣಿಸಿನದಸಗುಣವಾ ॥

ಮುಕ್ತಪರಿಯುತವನ್ನುತಮುಂಯ ಸ । ರ್ವುಕ್ತಿಯಲಿ ಕರ್ಣಾಟ ಕಾವ್ಯ । ದ್ವ್ಯಕ್ತ ವೆನಿಸಾತ್ರಯಿತರಿಗೆ ಸದ್ಧರ್ಮ ತೀರ್ಥಕರೇ ॥ ೧೯ ॥ ಜಿನಸಮುಂಯ ವಾರ್ಧಿ ವರ್ಧನ । ಘನಪರಾಕ್ರಮ ರಾಮಲಕ್ಷ್ಮಣ । ದನುನಭಿಸವರ್ಣಿಸುವೆ ರಾಮಾ ಯಣವುಯೆಂದೆಂಬಾ ॥ ವಿನಯವಚನದಿ ಸಮವಸರಣದಿ । ಮುನಿ ಕುಲೇಶನು ಮಗಧನಾಯಕ । ಗನುಕರಿಸಿ ಶ್ರೀಚಂದ್ರಸಾಗರವರ್ಣಿ ವಿರಚಿಸಿದ ॥ ೨೦ ॥ ಸೇನಗಣದನ್ವಯದ ಲಕ್ಷ್ಮೀ । ಸೇನಭಟ್ಟಾರಕರ ಕ್ರಮಗಳಿ । ಗಾನತದಿ ಗುರು ಪಂಡಿತಾರ್ಯರ ಅನುವಿನಾದರದೀ ॥ ಮಾನಿತ ಶ್ರೀಚಂದ್ರಸಾಗರ । ರೀ ನವೀನ ಕೃತಿಯರಂಜನೆ । ಗಾನುಬೇಡಲು ಭವ್ಯರೀಗಂ ಜಾಮವಾಸದಲೀ ॥ ೨೧ ॥ ಕಂನಡದ ಕವಿತೆಯನು ಮನವಚ । ಕಂನುಮಂಜುಳವೀವತೆರಪ್ರಾ । ಕಂನುರಚ ನೆಗಳುಂಟು ರಾಮಾಯಣದ ವಿರಚನೆಗೆ ॥ ಸಂನುತಂ ಬಡಲೆಂದು ಪಲತೆರ । ದಿಂನುಗಂಜಾಪೂತ್ರಭವ್ಯರು। ಯೆನ್ನಬೇಡಲುಮಾಳ್ಪೆ ಬಲ್ಲಿನಿತೆನುತ ರಚಿಸಿದೆನೂ ॥ ೨೨ ॥ ಒಂದುದಿನ ಶ್ರೀವರ್ಧಮಾನ ಜಿ । ನೇಂದು ಸಮವಸ್ರುತಿಯಸಂಚರ। ದಿಂದ ರಾಜಗ್ರುಹದ ಬಹಿರಿಹ ವಿಪುಲಗಿರಿವರಕೇ ॥ ಬಂದುನಿಲಲಾವೃತವನಾಂ ತ್ರದೊ । ಳಂದು ಫಲಮಿಡಿಗಾಯಿ ಪಣ್ಣಿಗು । ರಿಂದ ಪೂಮ್ಮಂಜೀರಮಾದುದು ಶುಷ್ಕಕೊಳಭರಿತಾ ॥ ೨೩ ॥ ದಿವ್ಯತೋಯದಿ ಹರಿಯುಕರಿಮೃಗ । ಸೇವ್ಯ ಸ್ಪೃಷಯುತಿ ಚಿತ್ರಕಾವ್ಯಗ । ಳವ್ಯಯೋಚನೆಗಳೆದು ಫಣಿಮಯ್ಯೂರ ನಾದಿಯ ಲೀ ॥ ನವ್ಯಮೃದುವಿಂದ್ಯೋರಭಾವಪ । ಸವ್ಯದಲಿ ತದ್ದರುಶನಾಮೃತ । ಸೇವ್ಯ ವಾಗಿರಲರಿದ ವನಪಾಲಕನು ಸಂಕೀರ್ಣಾ ॥ ೨೪ ॥ ಕಂಡು ತತ್ಕೋಮಲಿತ ವ ಸ್ತುವ । ಕೊಂಡು ಸಂತೋಷದಲಿರಾಜೆಡೆ । ಗೊಂಡು ನಡೆದೊಂದಿಸುತ ಮುಂ ದಿಟ್ಟಲರಪಟ್ಟಣವಾ ॥ ನಂದಲೆವನೊಸಲಂಜಲಿಯ ಚರ । ಗಂಡು ಚೇಳಿನಿ ಸಹಿತಲಾಸನ । ದಿಂಡನೊರಗಿಪ ಶ್ರೇಣಿಕಾತನ ನೋಡಿ ಬೆಸಗೊಂಡಾ ॥ ೨೫ ॥ ಬಂದನೋ ಜಿನದೇವ ಮುನಿಸನು । ಬಂದನೋ ಮಾಧವನು ವನಕೆ । ತಂದ ನೋಪೇಳೆನಲು ಸಮವಸ್ರುತಿಯು ಸಂಚರದೀ ॥ ಬಂದು ವಿಪುಳಾಚಲದಿ ಪರಿ ವೃಡ । ವೃಂದದಿಂನಿಲೆ ವೀರಜಿನಪನ । ಸುಂದರಕೆ ಬೆರಗಾದ ಖಗಮೃಗವನವು ಶೋಭಿಸಿತೂ ॥ ೨೬ ॥ ಯಲ್ಲ ವೈರವಬಿಟ್ಟು ಖಗಮೃಗ । ವೆಲ್ಲ ಪೂತಳಿರಿಂ ದತರುಗಳ । ದೆಲ್ಲಿ ಕೆರೆ ಸರಸಿಗಳು ಸ್ವಾದೋದಕದಿ ಭರತದಲೀ ॥ ಸಲ್ಲಿಲಿತ ವಾಗಿಹವು ಪುಣ್ಯದೊ । ಳಿಲ್ಲ ನಿನಗಿಂದನ್ಯರ ರಸೆಂ । ದೆಲ್ಲವಾಧರಿಸಿಳಿದು ಪೀಠ ವ ನಡೆದು ಪೇಳಠಿಯಾ ॥ ೨೭ ॥ ದಿಕ್ಕಿಗಾನನ್ರುದಲಿ ಭೇರಿಯ । ನೊಕ್ಕಿ

ಸಂಗನೆಸಹಿತ ಗಜವ । ಗ್ಗ್ರಕೆ ಕುಳಿತಿಹರಲಾಗ ಪುರ ಪರಿವಾರ ಜನರೆಲ್ಲ ॥
ಅಕ್ಕರಿಂಪೈ ತರಲು ಕರಿ ಯಿಡಿ । ಯಿಕ್ಕಲಾ ನಂದದಲಿ ವನದೆಡೆ । ಗಕ್ಕನಿಳಿ
ದುಳಿದಮುಲತರಪಾರ್ಥಿವರಚಿಹ್ನೆಗಳಾ ॥ ೨೮ ॥ ಚೇಳಿನಿಯಹಸ್ತಲಾಘವವನು।
ತಾಳಿಪೊಕ್ಕೊನದಲ್ಲಿಖಗಮೃಗ। ಮ್ಯಾಳಕಾನಂದಿಸುತಮಾನಸ್ತಂಭದ್ಯೋಭವಕೆ॥
ತಾಳಿ ಸಂತಸ ಸಮುವಸರಣದ । ಕೀಳ ಸೋಪಾನೆಡೆಯ ಸರಣಿಯ । ತಾಳಿಸಿ
ದ್ಧೇಭ್ಯನುತ ಲಡರಿಪರಗ್ರಭಾಗವನೂ ॥ ೨೯ ॥ ಅಡಿಯ ಸೋಪಾನದಲಿ
ಪಾದವ । ನಿಡಲು ಪುಟ ನೆಗದಂತೆ ಕಡೆಗಿಂ । ನಡರಿಸುವ ಪೈಕುರ್ವಣಾಶ್ರಿತ
ಸಮುವ ಸ್ರುತಿಯನೂ ॥ ಮಡದಿ ಪುರುಪರಿವಾರರೊಡನೊಡ । ನಡರಿದ್ದರುಶ್ಶ
ಶುದ್ಧಿಯಲಿ ಬಲ । ಗೊಡುತಲಾ ನಮ್ರಿಸುತ ನಿಂದನು ನ್ರುಪತಿ ಕೈ ಮುಗಿದು ॥
ಜ್ಞಾನಮಯ ದರುಶನದಿ ಕಾಂತಿಯ । ಲೀನದಲಿ ವೀರ್ಯದಲಿ ನೀನು ಮ।
ಹಾನುಭಾವನು ನರಕ ತಿರ್ಯಜ್ಮಾನುಷ ದೇವತ್ವ ॥ ನೂನಗೊಳಿಸೀ ಲೋಕ
ಮೂರಕೆ । ನೀನೇ ಕರ್ತಾಗಿನ್ನು ಸದ್ಗತಿ । ಗೇನುಕೊರತೆನಗಾಯ್ತು ದರುಶನ
ಶುದ್ಧಿಯನೆ ನೃಪತೀ ॥ ೩೦ ॥ ಸಾಕು ನಿಮ್ಮಯ ದರುಶನಕೆ ಭವ । ಭೀಕ
ರ್ಕ್ನೀ ಜೀವನಗ್ರಕೆ । ನೂಕುತಿಹುದಿನ್ಯಾಕೆ ವ್ಯಾಕುಲ ಯನಗೆ ಯಿಾ ಭಾರಾ ॥
ಕ್ಯಾಕೆ ನೀಕರ್ತಾವ ಬಳಿಕೀ । ಲೋಕದಾಟ ವಿವೇಕವಾಯ್ತು ಹೊ । ನಾಕನ
ರಪುಂಗೇಂದ್ರ ವಂದ್ಯನೆ ರಕ್ಷಿಸೆನೆ ನೃಪತೀ ॥ ೩೧ ॥ ಭಜಿಸಿ ನಾನಾ ತೆರದಿ
ದೇವನ । ಸುಜನಹಿತ ಗೌತಮುಚರಣವ । ಭಜಿಸಿ ಯದುರೊಳು ಕುಳಿತ ಮೋ
ಹನೆ ಸಹಿತ ಶ್ರೇಣಿಕನೂ ॥ ವೃಜನಹರಕೇಳೆಂಟನೆಯ ಬಲ । ವಿಜಯ ಕೇಶವ
ರಾಮುಲಕ್ಷ್ಮಣ । ಸುಜನಜನರಂಜನೆಯ ಚರಿತೆಯ ಪೇಳ್ವುದೆನಗೆಂದಾ ॥ ೩೨ ॥
ಪೇಳ್ವರದ್ಭುತವಾದ ಚರ್ಯದಿ । ಬಾಳ್ವುತಿಹರೆಂದಾವಕಾಲದಿ ॥ ಯಾಳ್ವರೀ
ರಾಜ್ಯವನು ತಚ್ಚಾರಿತ್ರ ಕಥೆಯನ್ನೂ ॥ ಪೇಳ್ವುದತಿ ವಿಸ್ತರದೊಳದನಾ ।
ಕೇಳ್ವಭೀಪ್ಸುಂಟೆನಲು ಮುನಿಪತಿ । ಪೇಳ್ವುದುಜ್ಜುಗಿಸಿದನು ಶ್ರೀ ಜಿನರಡಿಯ
ಸ್ಮರಿಸುತಲೀ ॥ ೩೪ ॥ ಕಲಿಲಹರ ಮುನಿಸುವ್ರತಾಂತ್ಯದಿ । ಚಲಿತಕಥೆ ಶ್ರೀ
ರಾಮುಲಕ್ಷ್ಮಣ । ರೊಲವಿನೀ ಕರ್ಣಾಟಕಾವ್ಯಕೆ ಶ್ರೇಷ್ಟವೆನಿಸಿರುವಾ ॥ ಲಲಿ
ತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆಗೈದರಿದು(*) ಶಶಿ । ಜಲಜಸಖ
ರಿರುವನಿಗೆ ಮೆರೆಯಲಿ ಲೋಕಲೋಕದಲಿ ॥ ೩೫ ॥

ಪ್ರಥಮಾಶ್ವಾಸಕ್ಕೆ ಪದನು ೩೫ ಕ್ಕಂ ಮಂಗಳಮಹಾ ಶ್ರೀ. ಶ್ರೀ. ಶ್ರೀ.

(*) ಮನ । ಮೊಲಿದು ಲಾಲಿಸಿ ಮುಕ್ತಿಯರಸರ ಕಥೆಯ ಸದ್ಬುಧರೂ ॥

ಎರಡನೆಯ ಸಂಧಿ.

ದೇಶ ವರ್ಣನೆ.

ಲೋಕವರ್ಣನೆ ಸಹಿತ ಕೌಸಲ । ದಾಕಲಿತ ಶೃಂಗರವ ಕುಶಲದಿ । ವ್ಯಾಕರಣಗೊಳಿಸುವೆನು ವಿಸ್ತರವಂಶ ಸಹವಾಗಿ ॥ ಪಲ್ಲವಿ ॥

ಲಾಲಿಸೈ ಶ್ರೇಣಿಕನೆಯೇಕೋ । ಲೀಲೆಯೊಳು ತ್ರೈಜಗವ ಬಿಗಿಹಿಡಿ । ದಾಲಯಂಗೊಳಿಸಿರುವ ವಾಯುಗಳಾದ ತ್ರಿತಯದೊಳು ॥ ಕೀಲಿಸಿಹುದೆ ಲ್ಲೋಸ್ತುಯಲ್ಲಿಂ । ಮೇಲಣಿಹುದೆಯ ಲೋಕಜೀವನ । ಜಾಲವಲ್ಲಿಲ್ಲಾಗಿ ಕಥನದೊಳಿಲ್ಲವೆನೆ ಮುನಿಪಾ ॥ ೧ ॥ ತದುವೆಕಾರಣ ಲೋಕವೆನಿಸಿಹು । ದಿದರೊಳಿಹವಡಿಯೇಳು ನರಕದ । ತುದಿಯೆ ಭವನಾವನಿಯು ದಶವಿಧ ನಾಗಕುಲದವರೂ ॥ ಅದರ ಅಂತರ ವಜ್ರವೇದಿಕೆ । ಗೊದಗಿ ಜಂಬೂದ್ವೀಪವೆನಿಸಿಹು । ದಿದನೆ ವೃತ್ತಾಕಾರವೆಂಬರು ಲಕ್ಷಯೋಜನವೂ ॥ ೨ ॥ ಮಧ್ಯವಿಹಮೇರುವೆ ಸುದರ್ಶನ । ಹೋದ್ಯನಾಮದೊಳದರ ನಾಲ್ದಿಶೆ । ಹೋದ್ಯಸೌಮನ ಪಾಂಡು ನಂದನಭದ್ರಸಾಲಗಳೂ ॥ ತುದ್ಯನಾಮದೊಳಿಹವು ನಾಲ್ಕನ । ವದ್ಯ ಚೈತ್ಯಾಲಯಗಳೊಂದೊಂ । ದೊದ್ಯವನದೊಳು ರಾಯಚಿತ್ತೈಸಕ್ಕೃತಂಗಳೆಲ್ಲಾ ॥ ೩ ॥ ಸ್ವರ್ಣ ನವರತ್ನಾದಿಯೊಳು ಸಂ । ಕೀರ್ಣವಾಗಿಹಗೇಹ ರತ್ನ ವಿ । ಕರ್ಣ ಚೈತ್ಯವು ಮೇರುವುತ್ಸೇಧ್ಲಕ್ಷಯೋಜನವೂ ॥ ಸ್ವರ್ಣಮಯವದರರ್ಧ ಭಾಗದಿ । ನಿರ್ಣಯದಿ ಗ್ರಹತಾರಿಗಳು ಮೇ । ಲುರ್ಣಿಸುವ ಸ್ವರ್ಗಗಳ ತುದಿಯೊಳಗಿಹುದೆ ಶಿವಲೋಕ ॥ ೪ ॥ ಆಗಿರಿಯನಾವೃತಿಸಿ ಕುಲಗಿರಿ । ಸಾಗಿನೊಳು ಸರಸಿಗಳುಯಿಹವ । ಲ್ಲಾಗಿವೆಂತ್ರಾವಾಸವಿರುತಿಹ ಚೈತ್ಯವೃಕ್ಷಗಳೂ ॥ ರಾಗಿಸುವಗಿರಿನಾಲ್ಕು ಭಾಗ ವಿ । ದಾಗಿ ತೋರುವ ಭೂಮಿ ಪೂರ್ವಪ । ರಾಗಿ ಭರತೈರಾವತಾಖ್ಯದಿ ನಾಲ್ಕು ಭಾಗಗಳೂ ॥ ೫ ॥ ಆದಿಯಪರದಭೂಮಿಲಯು ವಿ । ಲ್ಲಾದಕಾರಣ ಭೋಗಭೂಮಿಯ । ಸಾದನಾಗಿಹ ಕರ್ಮಧರೆ ಮಳೆಯೊಂದು ದಶದಿನಕೆ ॥ ಆದಕಾರಣ ನರ್ಘಅರ್ಘಗ । ಳೋದಿಸದಲಲ್ಸಮವಸರಣಗ । ಳಾದಿಯಿಂದಿಹವಲ್ಲಿ ಯಿಲ್ದೇವಾಲಯನ್ಯಗಳೂ ॥ ೬ ॥ ಅಲ್ಲಿ ರೂಪ್ಯಾಚಲವು ವಿಜಯಾ । ರ್ಧಲ್ಲಿ ನದನದಿಬಹಳ ಚಕ್ರಿಗ । ಳಲ್ಲಿ ಷೋಡಶರಾಗಿ ವರ್ತಿಪರು ತ್ಯಸತ್ಯದಲ್ಲೀ ॥ ಸಲ್ಲಲಿತಗೊಳಿಸಿಹರು ಜನ । ಕೆಲ್ಲುಲ್ಲಸದಿ ವಿಜಯಾರ್ಧ ಹಿಮ

ಗಿರಿ। ಯಲ್ಲಿ ಗೊಂಡೊಂದತ್ತ ನೈರಾವತಕೆ ವೊಂದೊಂದು ॥ ೭ ॥ ಮತ್ತೆ ಭರತೈರಾವತ ಸ್ತಿರ। ವೆತ್ತದುತ್ಸರ್ಪಿಣಿಯ ಮೇಲಿಂ। ನೊತ್ತಿದವಸರ್ಪಿಣಿಯ ಕಾಲಗಳೆಂಬ ಯೆರಡರಲೀ ॥ ಮತ್ತೆ ಷಟ್ಕಾಲ ಸುಷಸುಷ ಸುಷ। ಮೊತ್ತಿ ಸುಷದುಷ ದುಷಮೆಸುಷುಮೆ ಗ। ಳತ್ತ ದುಷಮತಿದುಷುಮೆಯಂಬವರಲ್ಲಿ ವರ್ತನೆಯು ॥ ೮ ॥ ಆದಿ ಭೋಗಾವನಿಯ ತೆರವಿಂ। ನಾದ ದಶವಿಧ ಕಲ್ಪವೃಕ್ಷದ। ಸಾದಕದಿ ಮನುಕಾಲ ವೆನಿಸಿಹುದಾಗ ಲುದಿಸಿದರೂ॥ ಆದಿ ಪ್ರತಿಶೃತಿ ಸನ್ಮತಿಯ ಪಿಂದಾದ ಕ್ಷೇಮಂಕರನ ಬೆನ್ನಿಂ। ದಾದ ಕ್ಷೇಮಂಧರನು ಸೀಮಂಕರನು ಸೀಮಂದಾ ॥ ೯ ॥ ರನು ವಿಮಲವಾಹನನು ಚಕ್ಷು। ಷ್ಮನು ಯಶಸ್ವಿಯು ಚಂದ್ರ ಚಂದ್ರಾ। ಭನುವ ಮರುದ್ದೇವ ಪ್ರಸನ್ನನು ನಾಭಿನೃಪನೆಂಬ ॥ ಮನುಚತುರ್ದ್ದಶರಾದರಂತ್ಯದ। ಮನುಕುಲೇಶನೆ ನಾಭಿರಾಜನ। ವನಿತೆ ಮರುದೇವಮ್ಮನೆನಿಸಿಹಳಹನಿನಾಯಕನೇ ॥ ೧೦ ॥ ಆ ದಿನದ ಪರಿಯಂತ ಸುರಕುಜ। ದಾದರದೊಳಿರೆ ಕರ್ಮ ಭೂಮಿಯ। ಸಾಧನಾಕ್ರಮುವೆರಸಿ ಬರಲೊಂದೊಂದು ವೃಕ್ಷಗಳೂ ॥ ಹೋದವಭ್ರಕೆ ದೇಹಪೋಷಣೆ। ಗಾದ ವೃಕ್ಷೊಂದಿರಲು ಮಹ। ದೇವಾದಿ ಪರಮೇಶುದಯ ಕಾಲವ ತಿಳಿದನಮರೇಂದ್ರ ॥೧೧॥ ಮೊದಲು ಮನುಗಳಿಗೆಲ್ಲ ರತ್ನದ। ಸದನಗಳೆ ಸುರಕುಜದ ನಿರ್ಮ್ಮಿತ। ವದರ ಕಾರಣ ಪುರ ಗೃಹಾದಿಯ ಕಲ್ಪಣೆರದಿರಲೂ ॥ ಉದಯವನು ತಿಳಿದಾದಿ ಪುರುಷನ। ಸದಯದೊಳು ಕೌಶಲ್ಯದೇಶದೊ। ಳೊದವಿ ಮಾಡಿದಯೋಧ್ಯೆಯೆನೆ ಸಾಕೇತವೆನುತಿಹರೂ ॥ ೧೨ ॥ ಹೇಮಮಯ ನವರತ್ನ ಖಚಿತದೋ। ಳಾ ಮಹಾಪುರ ಪರಿಧಿಡೆಂಕಣಿ। ರಾಮಣೀಯಕ ತೆನೆಯು ಮುಗಿಲಟ್ಟಣೆಯು ಜಲಖಾತೀ ॥ ಆ ಮಹಾಭೋಗಾವನಿಯ ಪರಿ। ಕಾಮಿತದ ಶೃಂಗರದಿ ತದ್ಧಭಿ। ರಾಮದರಮನೆ ಸೌಧಪುರದೊಳಗೆಲ್ಲ ಗ್ರುಹವೆಲ್ಲಾ ॥ ೧೩ ॥ ಇರಲಿ ಪುರ ಶೃಂಗರವು ಕೌಶಲ। ಧರೆಯಲೆ ಸತ್ಕಲೆ ದೇಶಗಳಿಗತಿ। ಸಿರಿಯ ಸಾಶ್ರಮುಗೈದು ವನಗಿರಿಸಸ್ಯ ಮೊದಲಾಗೀ ॥ ಭರಿತವಾಗಿಹ ನಾಡಿನೊಳು ರತಿ। ಸ್ಮರನ ಜರಿವಂತಿರುವ ಸತಿಪತಿ। ಯರ ಮನೋಹರ/ಸರಸ ಲಾವಣ್ಯವನಿನಾಯಕನೇ ॥ ೧೪ ॥ ಅರಳಿದಂಬುಜ ದಳಾಯತಾಕ್ಷಗ। ಳುರುಪಯೋಧರ ಜಘನಮುಡಿಗಳು। ತರುಣ ಪಲ್ಲವದದರ ಬೆರಳಿನ ಚಂದ್ರವದನಗಳಾ ॥ ಕರಿಯ ಕರತೋಳುಗಳು ರಂಭಾ। ತರುವಿನಾಕರವೊರು ಅನಿಮಿಷ। ದಿರವಜಂಘದ ಕಮಟವಜೆಯು ನಾರೀರಲ್ಲೆಲ್ಲಾ ॥ ೧೫ ॥

ಮುದ್ದು ಮುಖ ನಯನಗಳು ನಾಸಿಕ । ಮುದ್ದು ನೊಸಲೆಳೆ ವಾಳೆ ತೊಡೆ ಕವ । ಮುದ್ದು ಪದಗಳ ಹಸ್ತ ಬೆರಳಿನ ರದನ ಚಲ್ವುಗಳಾ ॥ ಮುದ್ದು ಪಚ ಕರ್ಣ್ಣಗಳ ನಖವತಿ । ಮುದ್ದಿನೊಳಗಾ ನಾಡಪುರುಷರು । ಮುದ್ದು ಮುದ್ದಾಂಗನೆಯ್ರು ರಿಂವಲಿ ಸೊಗಸುತಿಹರೆಲ್ಲಾ ॥ ೧೬ ॥ ವಿಲಸವಾಗಿಹ ದೇಶ ಮಧ್ಯದಿ । ನೆಲಸಿಯಿಹ ಕೌಶಲ್ಯದಾ ವ್ರತ । ಚಲುವ ನಂದನದೊಳಗೆ ಚಂಪಕ ಸಿರಸ ನಾರಂಗಾ ॥ ಲಲಿತ ಪನ ಸಂಜೂರಲ ಕಿತ್ತಳೀ । ನೆಲೆಯನಾರ್ಕ್ಕಳ ಬತುಳ ಜಂಬೂ । ಕುಲದಿ ದಾಡಿಮ ಸಾರ ಲತೆ ಸಹಿತೊಪ್ಪಲಾರಾಮಾ ॥ ೧೭ ॥ ಆ ಪುರಾಂತರದಲಿ ಜನರತಿ । ಚಾಪಲತ್ವದಿ ಸೊಗಸುತಿರಲಾ । ಭೂಪನಾಲಂಕೃತವ ಲಾಲಿಸು ಪದ್ಮ ಪದ್ಮದಳಾ ॥ ಚಾಪ ಕರಿ ಶಕ್ತಿ ಕದಳಿ ಝುಷತಳಿ । ರಾಪವಳಿ ಗಿಳಿಯೊಳಗೆ ಶಣಸುವ । ರೂಪಿನಿಂದೆಸೆದಿರ್ದ ನವನೀಸಾಥ ಚಿತ್ರೈಸೂ ॥ ೧೮ ॥ ಅತಿ ಕಲಾ ಲಾವಣ್ಯದೊಳು ಸತಿ । ಪತಿಗಳೆಸದಿರ ಲವರ ಗರ್ಭ್ಭದಿ । ಸುತನು ಶ್ರೀ ಕಲ್ಯಾಣ ಮತಿಶೃತಿ ಯವಧಿಯೊಳಗುದಿಸಿ ॥ ವಿತತ ವಿದ್ಯಾಕಲೆಯ ಪ್ರಾಯವ । ಜತಿಸಲಮರಾಧೀಶನ ದೃಶ । ಸತಿಯಶಸ್ವತಿಯಾ ಸುನಂದೆಯ ರೆಸಗಲುದ್ವಹವಾ ॥ ೧೯ ॥ ಭರತ ಭುಜವಲಿಯೆಂಬ ಅಣುಗರ । ತರುಣಿಯರು ಪಡೆದಿರಲು ಭೋಜನ । ಸುರ ಕುಜದ್ರುಶ ಗೋಳಲು ರಾಜ್ಯದ ಲೋಕವೆಲ್ಲೈದಿ ॥ ಯರಗಿ ಯಮುಗಾಹಾರಕೆ ಕ್ರುತ । ವರ ಇರೆನಲಾಧೀಶ ನಿರ್ಣ್ಣಯ । ಗರೆದನೆ ಲ್ಲೋತ್ರ್ತನೆಯ ನವಧರಿಸವನಿನಾಯಕನೇ ॥ ೨೦ ॥ ಆದಿಯಲಿ ಇಕ್ಷ್ವಾಕು ಕುರು ಹರಿ । ಯಾದನಾಥಾನ್ವಯದಿ ವುಗ್ರ್ಗವ । ದಾದಿವಂಶವ ಗಳೈದನಲ್ಲಿಂ ಬ್ರಹ್ಮ ಕ್ಷತ್ರಿಯರು । ಆವಮೋಶ್ಯರು ಶೂದ್ರರೆಂಬಾ ಖ್ಯಾದರಿಗೆ ತದ್ಗೋತ್ರ ಸೂತ್ರಗ । ಳಾದಿ ಜೀವನೋಪಾಯ ತೋರಿವನಾ ಮಹದೇವಾ ॥ ೨೧ ॥ ನಗರ ದುರ್ಗ್ಗನ ತೋಪು ಕೆರೆ ಕೂ । ಪಗಳು ಅರಸರಮಾತ್ಯ ದಳಧರ । ಬಗೆದ ಕರಿ ಹಯ ರಥ ಪದಾತಿಯ ಛತ್ರ ಚಾಮರದಾ ॥ ಸೊಗಸು ಪಾಲಕಿ ಧ್ವಜ ಪತಾಕೆಯ । ವಿಗಿಲ ತೂರ್ಯ್ಯ ದ್ಲಾಸ್ಯವಾದ್ನು ರ್ಪ । ರುಗಳಿಗಪಚಯ ದಾನ ಪಾತ್ರರ ಗೈದ ಭೂಸುರರಾ ॥ ೨೨ ॥ ಮುತ್ತು ರತ್ನಾಸನಾದಿ ಪಶುಗಳಿ । ಗೆತ್ತ ಕ್ರಯ ವಿಕ್ರಯವ ವಾಣಿಜಪ । ವಿತ್ತನಾ ವೈಶ್ಯರಿಗೆ ಶೂದ್ರರಿಗ ವರನುಗ್ನೆಯಲೀ ॥ ಬಿತ್ತಿ ಬೆಳೆದೊತ್ತೂ ಪುವವಸಿಯ । ಕೃತ್ಯ ತ್ರೈಲೋ ಘ್ರುತ ಪಾಲು ವನಾ । ದೊತ್ತಿನೊಳು ತೋರಿದನು ಕಲ್ಪಗಳೈದನಾಧೀಶ ॥ ೨೩ ॥ ಇನ್ನು ಮೇಲಾಗಿರುವ ತಂತ್ರ ಗ । ಳನ್ನು

ನಿರಜನೆ ಗೈದು ಯುಲ್ಲರ। ನನ್ನ ನಿಲಿಸೊಂದೊಂದು ಕೃತ್ಯದಿ ಸಿದ್ಧರಾಲ
ಯುವ ॥ ನನ್ನ ನಿರ್ಮಿಸಿ ಜನರ ಪುಡುಮೆಯೊ। ಳನ್ನ ದಶಮದೊಳೇಕ
ಭಾಗವ । ನನ್ನ ಅಪಚಯಕೀಯ್ಯ ಲಾಯುವಗೈದು ವ್ರತಗೈದಾ ॥ ೨೪ ॥
ಆದಿ ಮುನ್ನಾದಿಗಳ ಮೊದಲ್ಲಿಂ । ಸಾದ ವ್ರತಗಳ ನಿರ್ಣಯಿಸಿ ಗೋ। ತ್ರಾ
ದಿಸೂತ್ರಗಳಿಗ್ನಸೂತ್ರವಗೈದು ತ್ರೈವರ್ಣಾ ॥ ಹಾದಿ ದಪ್ಪಿದರಾಜ್ಞೆಗೈಸುವ।
ದೋದಿ ಕ್ಷತ್ರಿಯರಿಂಗೆ ಭರತನಿ । ಗಾದಿನೃಪ ಪಟ್ಟವನು ಕಟ್ಟಿತಿಳಿಯ ಕ್ಷಾ
ತ್ರರಿಗೆ ॥ ೨೫ ॥ ತೋರಿ ಭೂನಿರ್ಣಯವ ಸೂತ್ರಾ । ಧಾರನಾಗಾ ಭರ
ತರಾಜಗೆ। ತೋರಿ ಧರ್ಮ್ಮಾರ್ಥಮ್ಮ ಕೃತ್ಯವಯೋಗ ಜಪಗಳನೂ ॥ ಚಾರು
ಶಾಸ್ತ್ರದ ಜಾತಿ ಧರ್ಮದ । ಮೇರೆಯುಲ್ಲವತೋರಿ ಮುಕ್ತಿಯ । ಸಾರಿ
ದನು ಪರಮೇಶ ಚಿತ್ತೈಸಪನಿನಾಯಕನೇ ॥ ೨೬ ॥ ಸಿದ್ಧರಪಚಯಕೆಂದು
ಜನಕೊಡು । ತಿದ್ದ ಆಯುಗಳೆಲ್ಲ ಕೊಡಿರಾ । ನುದ್ಧರಿಪೆ ಸದ್ಧರ್ಮ್ಮವೆನುತ
ಲಿತೆಗೆದು ಹಣಗಳನೂ ॥ ಹೊದ್ದಿಸಿದ ಸಿದ್ಧಾಯ ಪೆಸರಿಂ । ಗಿದ್ದಕ್ಷತ್ರಿಯರ
ಲ್ಲಿ ಕಾಣ್ಕೆಯ। ತಿದ್ದಿ ಕಪ್ಪವನೆಂದು ಹಣಗಳ ತೆಗದ ರಾಜೇಂದ್ರಾ ॥ ೨೭ ॥
ದಂಡದಂಡಣೆಯಾದಿ ಆಜ್ಞೋ। ದ್ದಂಡದೊಳಗಿಟ್ಟೆಲ್ಲರನು ವು । ದ್ದಂಡನಾ
ಗಿಹ ಭರತರಾಜನು ಪ್ರಥಮ ಚಕ್ರೇಶ ॥ ನಂದಲೆದು ಬಹರಕ್ಕರ್ಶಂಕೆಯ।
ಗೊಂಡ ಚಕ್ರಿಗಳಾಹರಾ ಪೆಸ । ಗ್ಗೊಂಡು ಭರತ ಕ್ಷೇತ್ರವೆನಿಸಿತು ರಾಯ
ಚಿತ್ತೈಸೊ ॥ ೨೮ ॥ ಆದಿ ತೀರ್ಥಕರಾದಿ ಚವ್ವೀ । ಸಾದ ರವರೊಳು
ವಿಂಶತೀರ್ತ್ಥಕ। ರಾದ ಮುನಿಸೂವ್ರತರು ಆ ಯಿಕ್ಷ್ವಾಕು ವಂಶದಲೀ ॥
ಮೇಧಿನಿಗೆ ಮಹದೇವನಾಗಿರ। ಲಾದರಾ ವಂಶದಲಿ ಬಹು ಜನ। ರಾದರಭಿ
ವರ್ಣ್ಣಿಸುವೆನಾ ಸಾಕೇತನಗರದಲೀ ॥ ೨೯ ॥ ಕೆಲರ ಅಂತ್ಯದಿ ವಿಜಯರಥ
ನೆಂ। ಬಲಘುವಿಕ್ರಮಿ ಹೇಮಮಾಲಿನಿ। ಲಲನೆವೆರಸಾ ಯೋಧ್ಯೆಯೊಳಾಳುತ
ಬಹುನೃಪಾಲಕರ॥ ಅಲಘನೊಳು ನಿಲಿಸೆಮಲಕೀರ್ತ್ತಿಯ। ನೆಲೆಯುಗೈದವನಿ
ಯಲಿ ದಿಕ್ತಟ। ಗಳಿತದೊಳಗ ಮರೇಂದ್ರನಂತೆಸ ದಿರ್ದನವನೀಶಾ ॥ ೩೦ ॥
ಆತ ಪಡೆದ ಸುರೇಂದ್ರ ಮನ್ಯುವ। ಜಾತಕರ್ಮವ ಗೈಸಿ ತ್ರಿತಯ । ಬ್ದಾತ
ನಿಗೆ ರಾಜ್ಯಾಭಿಷೇಕವ ಗೈದು ಆಶ್ರಮವಾ ॥ ನಾತು ಮಹತಪದಿಂದ ಮುಕ್ತಿ।
ಖ್ಯಾತ ಪಡೆದನು ಇತ್ತಲೀನೃಪ । ನಾತ ಕೀರ್ತ್ತಿ ಶ್ರೀಯ ಪರಿಣಯ ನೆರೆದ
ಜನ್ಮನದೀ ॥ ೩೧ ॥ ಶೂರನೈ ಸಿರಿಭೋಗದೊಳು ಸಮ। ರಾರು ಇರದಂತ
ವನಿಯಲಿ ವಿ। ಸ್ತಾರಲಾಸ್ಯವ ಗೈಸಿದನುತಸ್ಕೀರ್ತ್ತಿ ಲಕ್ಷ್ಮಿಯನೂ ॥ ನಾರಿ

ಕೀರ್ತಿಸ್ತ್ರೀಗೆ ಗರ್ಭವು । ತೋರಿ ಪುಟ್ಟಿದ ವಜ್ರಬಾಹು ಕು । ಮಾರ ನತಿಬಲ
ರೂಪುಕೀರ್ತಿಯೊಳೆಲ್ಲ ಕಾಧಾರಾ ॥ ೩೨ ॥ ನಾಗಿ ತೋರುವ ಸುತಗೆ ಯುರ
ಡ । ಬ್ಬಾಗಲವನಿಗೆ ರಾಜ್ಯಭಾರವ । ನೀಗಲಿತ್ತವನೀಶ ದೀಕ್ಷೆಯ ಪಡೆವನುತ್ಸ
ಹದೀ ॥ ಆಗಲಾ ಸುತನೀಗಪ್ರಾಯನು । ರಾಗಿಸಲು ಸುಲಸೆಯನು ಉದ್ವಹ ।
ನಾಗಿ ಪುರಂಧರ ಸುತನ ಪಡೆದನು ಅಪ್ರತಾಪನನೂ ॥ ೩೩ ॥ ಆತನತಿ
ಶಯವರಿದು ಯೋಕ । ಬ್ಭಾತಗೆ ಪಟ್ಟವಕಟ್ಟಿ ಆಶ್ರಮ । ಕತನು ನಡೆಯಲು
ಬೆಳೆದು ಪುರಂಧರ ಕಮಲ ಮಾಲಿನಿಯ ॥ ಸತಿಯುಗೈದರು ಕೀರ್ತಿಗಾಶ್ರಿತ ।
ಗತನು ಮಾಗಿರಿ ಕೀರ್ತಿಧರನೆನಿ । ಪತುಳಸುತ ಸಂಜನಿಸಿ ಅಸದಳನಾಗಿ ತೋ
ರುತಿರೇ ॥ ೩೪ ॥ ಮಾಸವಾರರ ಕಂದನಿಗೆ ಧರ । ಣೀ ಸತಿಯ ವುದ್ವಹಿಸಿ
ಯೋಗ ನಿ । ವಾಸನಾಗಲು ತಳಿತ ವಯದಲಿ ಕೀರ್ತಿಧರ ನೃಪತಿ ॥ ಗಾ
ಸತಿಯು ಸಹದೇವಿಯಾಗತಿ । ಲಾಸಿಕೆಯೊಳೆಲ್ಲಿಳೆಯ ಛತ್ರನಿ । ವಾಸಗೈದಿರ
ಲುದಿಸೆ ಕೌಶಲನೆಂಬ ಸುಕುಮಾರಾ ॥ ೩೫ ॥ ಮೂರು ತಿಂಗಳ ಕಂದನಿಗೆ
ನೃಪ । ಧಾರುಣಿಯ ನಿತ್ತಮಲ ದೀಕ್ಷೆಯ । ಸಾರಲಾ ಕೌಶಲನಿಗನುಸವಾದ
ಯವ್ವನದೀ ॥ ನೀರಜೇಕ್ಷಣೆ ಚಿತ್ರಮಾಲಿನಿ । ನಾರಿಯಾಗಿರೆ ಕೀರ್ತಿ ಮುನಿ
ಯಾ । ಹಾರಕೈದಲು ತಿಳಿದ ಸಹದೇವಾದಿ ನಿರ್ಣಯವಾ ॥ ೩೬ ॥ ಯೋಗಿ
ದರುಶನಕಾತ್ಮಜನು ವೈ । ರಾಗಿಯಾಗುವನೆಂಬ ದಂತರ । ರಾಗಿಸಿದ ಸಹದೇವಿ
ಪಾತಕವೆಣಿಸದಾತ್ಮಜನಾ ॥ ಮೇಗಣನುರಾಗದಲಿ ಮುನಿಗಳ । ನೂಗಿಸಲು
ಪುರಬಹಿರಿಗದಸರಿ । ದಾಗ ಪೇಳೆ ವಸಂತಲತೆ ಯಂಬಾಳಿ ಕೌಶಲಗೆ ॥ ೩೭ ॥
ಪಕ್ಷ ಅನಶನಗೈದು ಪಿತಯತಿ । ಭಿಕ್ಷಕೈದುಪಸರಿದು ನೂಕಿಸ । ಲಕ್ಷವುಂಟೆ
ಪಾಪ ಕಾಹಾಯೆಂದು ನೃಪ ಮರುಗೀ ॥ ಈಕ್ಷಗೊಳದೀ ಸಾಂಪರಾಯ ।
ದ್ಯಕ್ಷ ವಿಂತೆನದಕಟ ಮಾತೆ ಮು । ಮುಕ್ಷು ಪರಿಭಾವಿಸಿ ವಳೆನುತ್ಯೋ ರಾಸ್ಯ
ಯುತನಾಗಿ ॥ ೩೮ ॥ ಆ ಮುನಿಗಳಾ ಲೋಕ ಪರಿಯಂ । ತೀ ಮನೋ
ಹರ ವಸ್ತು ಅನಶನ । ನೇಮವಿಟ್ಟಾ ನೃಪತಿ ಕೌಶಲಹೊರಟು ನಂದನಕೇ ॥
ತಾಮಸಂ ಗೊಳದೈದಿ ಯಿಾ ಕಥ । ನಾ ಮುಮುಕ್ಷುವಿಗರುಹಿ ಯೋಗ ಸು ।
ನಾಮ ನಾಗಿರಲರಿದ ಪುರಪರಿವಾರರೈತಂದೂ ॥ ೩೯ ॥ ದರ್ವರಿಲ್ಲದೆ ಯ
ವನಿಭಾರಕೆ । ಸಾರ್ವರೇ ತಪಸಂನು ಕರ್ತರ । ತೋರ್ವ ದೆಮಗಾವರಿಗೆ
ಬಿಡೆವೆನೆ ಚಿತ್ರಮಾಲಿನಿಗೆ ॥ ಗೂರ್ವಿಸಿಹ ಗರ್ಭಜನೆ ಮುಂದೀ । ಪೂರ್ವ
ರೆಗೆ ಆರಸಾಹನೆನೆ ಪೆ । ಶ್ಲೋರ್ವದೊ ಸುಕುಮಾರ ಸಾಹನೊ ಯನಲು

ಸರ್ವ್ವಜನಾ ॥ ೪೦ ॥ ಆಹನ್ನೆ ಸುಕುಮಾರ ಸಂಶಯ । ನೂಹೆ ಗೊಳದ್ಯೆಧೆ ಲ್ಲರೆನಲು ಏ । ಸಾಹಸವನು ಕರ ಮನದೊಳ್ಳೈಧಿದರೆಲ್ಲ ಕೌಶಲಕೆ ॥ ಸಾಹಧೇ ವೀ ವರ್ತ್ರಸೆಲ್ಲವ । ಗ್ರಾಹ ಗೊಂಡಾರ್ತ್ಥದಲಿ ಮೃತವಡೆ । ಧಾಹುಳಿಘು ರೂಪಾಗಿ ಕೌಶಲಮುನಿಯ ದರುಶನದೀ ॥ ೪೧ ॥ ಜಾತಿ ಸ್ಮರಣೆಯು ಲಠಿಘು ವೈರವ । ಘಾತ ವುಪಸರ್ಗ್ಗಿಸಲು ವುಪಶಮೆ । ಯಾತ ಕಾರಣ ನಷ್ಟಘಾತಿಯು ಘಾತ ಕರ್ಮಳಿದೂ ॥ ವೀತರಾಗಾಗಿರಲೂಚಿತ್ರ । ವತಿ ತನುಜನಂ ಬಡೆಯ ಲವನಿಗೆ । ಜಾತ ನಾಮ ಹಿರಣ್ಯಗರ್ಭ ಯೆಂಬಘನಾಗಿರಲೂ ॥ ೪೨ ॥ ಸರ ಸಿಜೋಧರ ನೆಂಬ ನಾತನ । ತರಳ ನಾತಗೆ ನಹುಷ ಸುತ ಸೌಂ । ಧರನು ಸಿಂಹವರೂಥ ನಾತ್ಮಜ ಬ್ರಹ್ಮರಥನಾತ್ಮ ॥ ತರಳ ಶಿಳಿಮುಖ ನಣುಗ ಚತು ರ್ಮುಖ । ತರಣಿ ರಥಮಾಧಾಂತ ಶತಪ । ತ್ರಿರೆಯನಾತ್ಮಜೊಸಂಶ ತಿಲಕ ಕುಬೇರದತ್ತಾಖ್ಯ ॥ ೪೩ ॥ ನಾತನಣುಗ ಹಿರಂಣ್ಯಕಸ್ಯಪು । ವಾತನಾತ್ಮ ಜ ನರ್ಕ್ಕರಥ ನಿಂ । ನಾತನಿಗೆ ರಘುವೀರ ನಾತ್ಮಜರಣ್ಯ ನೆಂಬವಗೇ ॥ ಸಾತಿಶಯಪತಿ ರೂಪುವತಿ ಯಂ । ಬಾತಳಂತ್ಯ ಕಳಾವತೀ ರೂ । ಪಾತ ಪೃ ಥ್ವೀದೇವಿ ಯಂಬರು ತ್ರಿತಿಯ ಭಾರ್ಯೆಯರೂ ॥ ೪೪ ॥ ಚಂನೆಯುರ ಮನೋಹರ ವರಣ್ಯ । ಕ ನೆಂನುವ ವನಿನಾಥ ನಾಳುತ । ಲಿಂನುವಿನುತಾ ಪುರದೊಳಿರಲಾ ರೂಪವತಿಯಾದಾ ॥ ಳಿಂನು ಪಡೆದಳನಂತರಥನೊಡ । ನಿಂ ನು ದಶರಥನೆನುವ ಸುತರ । ತ್ಯಂನತೋಜ್ವಲ ಕೀರ್ತ್ತಿ ಸುತ ರವನೀಶ ಚಿತ್ತೈ ಸೂ ॥ ೪೫ ॥ ಈ ಮಹೀವರನಾದಿ ಯನ್ವಯ । ಭೂಮಿಪರು ಸತಿಗಾದ ಗರ್ಭ್ಭಭಿ । ರಾಮುವರಿದಾ ಶ್ರಮುವ ಗೊಳುವಸಾಗಿ ನೊಳಗಿರುತ್ತಾ ॥ ಕಾಮಿ ಸಿದ ಮನೊರತಿಯ ವಿದ್ಯೆಯ । ಪ್ರೇಮದಾಶ್ರಯದಿಂದ ರಥಗಳ । ನೇಮಿಸುವ ರಾನಂತದಶಕಗಳಲಾದುದಾ ನಾಮ ॥ ೪೬ ॥ ಹೆಂಮ್ಮೆ ಐನೂರ್ನೂರ ಸಾ ಸಿರ । ಕಿಂಮಿಗಿಲ ರಥಗಳನು ರತ್ನಗ । ಳಿಂ ಮನೋಹರವಾಗಿ ರಚನೆಯ ಗೈವ ಕಾರಣದಿ ॥ ಹೊಮ್ಮಿತವರಿ ಗನಂತ ದಶರಥ । ನೆಮ್ಮಿ ನಾಮಗಳಿಂದ ಪಟು ಬಟ । ದಿಂ ಮಹೀವರ ಕಧಿಕರಾಗಿಹ ರರಸ ಚಿತ್ತೈಸೂ ॥ ೪೭ ॥ ಈ ನರೇಂದ್ರರ ವಂಶದೊಳು ರಘು । ಮಾನವೇಂದ್ರತಿ ಶೂರತನದಿಂ । ಭೂ ನೂತ ಶ್ರೀಪತ್ಯ ನಾಗಿರಲದರ ಕಾರಣದಿ ॥ ಈ ನರಾಧಿಪರಿಂಗೆ ರಘುಜ । ಧ್ಯಾನಬರಲು ಅರಣ್ಯನಂಗನೆ । ಮಾನುನೀಮಣಿಯಾಕಳಾವತಿ ಗರ್ಭದೊಳ ಗೋರ್ವ್ವಾ ॥ ೪೮ ॥ ಭೂಸುತದ ರೂಪಾತಿಶಯ ಪಡು । ನೂನ ಪೆಂಸ್ನೊ

ದೇವಿಯಂಬಳ । ಸಾನುರಾಗದಿ ಪಡೆದು ವುಪಚರ ಗೈವುತಿರುವಲ್ಲೀ ॥ ಆ ನರೇಣ್ಯನ ಮಿತ್ರನಾಗಿಹ । ಮಾನವೇಶ ಸಹಸ್ರ ಕಿರಣ ವಿ । ಗಾನುಜನು ಶತ ಕಿರಣನೆಂಬವನ ಸಮಸಾಹಸರೂ ॥ ೪೯ ॥ ಆತ್ತಲಿಹ ಹರಿಪುರದ ಪಾಲನ । ವೆತ್ತು ಇರೆ ದಶಶಿರನ ಕದನದಿ । ಚಿತ್ತ ವಿಮುಖದಿ ಬಂದು ಸಾಸಿರ ಕಿರಣ ನಿಜಪುರಿಗೆ ॥ ವತ್ತಿ ಬಹ ಲಜ್ಜೆಯಲಿ ಅನುಜನಿ । ಗಿತ್ತು ಧರೆಯೋಗೀಂದ್ರ ನಾಗಿಹ । ದತ್ತಲರಿದ ನರೇಣ್ಯ ನೃಪಸ್ಯೋ ರಾಗ್ಯ ಯುತನಾಗೀ ॥ ೫೦ ॥ ಪಿರಿಯ ಕಂದನನಂತರಥನಿಗೆ । ಧರೆಯ ಸಿರಿ ಗ್ರಹಿಸೆಸಲು ನಿಮನ । ಕೆರ ಕವಿಶದೆ ನಗಹುದೆ ಹಿತ ಕರಹೇಯ ವಲ್ಲದಲೇ ॥ ಧರಿಸುವಾ ಶ್ರಮವೆನಲು ತಿಂಗಳ । ತರುಣ ದಶರಥಗಿತ್ತು ರಾಜ್ಯವ । ತೆರಳಿ ತಪದಿಂ ಮುಕ್ತಿ ವಡೆದರು ರಾಯ ಚಿತ್ತೈಸೂ ॥ ೫೧ ॥ ಅನುಭವಾಂತ್ಯದ ರಣ್ಯ ನೀಸುಖ । ನೆನೆ ಯದಿರಲ ಕ್ಕಾತ್ಮಜಗೆ ಹೇ । ಯನು ಕರಿತ ವೈಚಿತ್ರವೆನೆ ಮಗದೇಶನೀಧರೆಗೆ ॥ ಜನಪರೆ ನಿತಂಗೆ ನಿತುಯಾತ್ಮಗೆ । ಮನವ ಕೊಡುವನೆ ಯಳೆಯನಲ್ಲದ । ಲೆನುತ ಮುನಿಮುಕ್ತೀಶ ನಡಿಗಳ ಧ್ಯಾನದಿಂದೆಸದಾ ॥ ೫೨ ॥ ಕಲಿಲಹರ ಮುನಿ ಸುವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ಶೊಲವಿನಿಂ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀ ಚಂದ್ರಸಾಗರ । ರೊಲಿಮ ವಿರಚನೆ ಗೈದರಿದ ಮನ । ಮೊಳಿದುಲಾಲಿಸಿ ಮುಕ್ತಿ ಯರಸನ ಕಥೆಯ ಸದ್ಬುಧರೂ ॥ ೫೩ ॥

ಉಭಯ ಸ್ಥಾಸಕ್ಕಂ ಪದನು ೮೮ ಕ್ಕಂ ಮಂಗಳ ಮಹಾ ಶ್ರೀ.

ಮೂರನೆಯ ಸಂಧಿ.

ವೀಣಾಸ್ವಯಂವರ.

ಸುಡಿಸಿ ವಿಣೆಯ ಸ್ವರದಿ ಸಭಸಿಗೆ । ಬೆಡಗ ತೋರಿದ ದಶರಥನು ಕಡು । ಚೆಡಗೆ ಕೈಕೆಯ ನೊಲಿಸಿದನು ಮರುಳ್ಗೈದು ಚಿತ್ತವನೂ ॥ ಪಲ್ಲವಿ ॥

ಕೇಳಿವೈ ರಾಜೇಂದ್ರರಣ್ಯ ನೃ । ಪಾಳ ನೆಳೆಯಗೆ ರಾಜ್ಯ ಸಂಪದ । ಮೇಳವಿಸಿಸಲಿ ಸುಖ ಚತುಷ್ಟಯದಮಲ ಮುಕ್ತಿಯನೂ ॥ ಆಳುತಿರಲಿತ್ತಿ ಳೆಯುಸನು ಪ್ರತಿ । ಪಾಳೆ ರೂಪಾವತಿ ಕಳಾವತಿ । ಕೇಳಿ ಪೃಥ್ವೀದೇವಿ ಸಾಕೇತದಲಿ ಸುಖದಿರಲೂ ॥ ೧ ॥ ನಂದನನ ನಾರೈವುತಲಿ ಸಖಿ । ವೃಂದ ರನ್ನದ ತೊಟ್ಟಲೊಳು ಬಾ । ಲ್ಯೇಂದು ವಿಟ್ಟೂಗಿದರು ದುರುದುಂಬಂಬುಜ ದೊಳಾಡೂ ॥ ವಂದದೊಳು ತುಂಬ್ಗರೆದು ನಯನಾ । ನಂದ ವಿತ್ತೆಳೆನೇ ಸರ್ರೈ ತರು । ವಂಪ ದರ್ಭಕ ಬೆಳೆದ ಬಾಲ್ಯಾನಂದ ತೊಡಿಗೆಯಲೀ ॥ ೨ ॥ ತನ್ನ ವಂಶಾವಳಿಯ ನೃಪರಳ । ವನ್ನು ಯಶಮುಕ್ತಾವಳಿಯ ಸರ । ವನ್ನು ಬೆಳಗವನಿಯಲಿ ಯರಗಿಸಿವೆಲ್ಲರೆಳೆಯವಲೀ ॥ ಮುನ್ನ ಕಳಿಕಾದಂಬುಜವ ಸುಳಿ । ದಿನ್ನು ದಶರಥನಾಸ್ಯ ಸರಸಿಜ । ಕನ್ನು ವಾಗ್ವಧು ನೆಲಸಿದಳೊ ಯೆ ನಲಿಸಿದ ಸುಕುಮಾರಾ ॥ ೩ ॥ ಜಡತನಾಶ್ರಯದಿಂದ ಕೀರ್ತೋಡ । ಗುಡದೆ ನವರತ್ನಗಳು ಬಾಲನ । ತೊಡಿಗೆ ಗಾಶ್ರಿತವಾದ ವೆಂಬಲಂಕಾರದಿಂ ವಿದ್ಯಾ ॥ ತೊಡಗಿದರುವತ್ನಾಲ್ಕು ಸಾಧಕ । ದೊಡನೆ ಬತ್ತೀಶಾಸ್ತ್ರ ವಿದ್ಯದ । ಯಡೆ ಯನಾಶ್ರಿತ ಧರ್ಮ್ಮಶಾಸ್ತ್ರಗಳೆಲ್ಲವಾ ಸುತನಾ ॥ ೪ ॥ ಕಲಿತ ನುಡಿಯ ಲ್ಲದೆಲಿ ಪ್ರತಿಮಾ । ತುಲಿಯುಬಾರದ ಕೀರನಂತ । ಲ್ನಿಲಸಿ ಧರ್ಮ್ಮಗಳೆಲ್ಲ ರೆಲ್ಲ ಧರ್ಮ್ಮಸರನೆಂದೂ ॥ ವುಲಿವುತಿರೆ ತನುವಿನೊಳು ಮನುಮತ । ನಿಲಲು ವಾಗ್ವಧು ಜಿಹ್ವೆಯೊಳು ಜಯ । ಲಲನೆ ಬಲಗೈ ಸಾರಲವನಿಗೆ ಶೂರನಾ ಗಿರಲೂ ॥ ೫ ॥ ಸರಸ ಕೌತುಕವೆರಸಿ ಕೌಶಲ । ಧರೆಯೊಳಗೆ ಕೌಶಂ ಭಿನಗರಿರ । ಲರಸ ನುಗ್ರಧ್ವಜಗೆ ಭದ್ರಾವತಿಯು ಸತಿಗೊಗೆದಾ ॥ ತರಳೆಯರು ಕೌಶಲ್ಯೆ ಸೌಮಿತ್ರ । ರುರು ವಿಲಾಸದ್ವಯವ ನೆರದೆಳೆ । ಸರ ಸಿರತಿಯರ ಗೆಲವ ಸುತೆಯರನರಿದ ನಿಜಜನಕಾ ॥ ೬ ॥ ನೆರೆದು ಯೌವನ ಲಕ್ಷ್ಮಿಯಾಲಿಂ । ಗರೆದ ದಶರಥ ಗೀರ್ವರುದ್ವಹ । ಗರೆದನುಗ್ರ ಧ್ವಜನ್ಸು ಶುಭ ದಿನ ಸ್ವಚ್ಛ ತಾರೆಯಲಿ ॥ ಸ್ಮರನ ತಾಪವ ಹರಿಪ ಛತ್ರಾ । ಕರದ ಕೌಶಲ್ಯ ಸಮುಶರ ಸುರು । ತರವ ರತಿ ಸುಖ ಸುಧೆಯೊಳಾರಿಪ ಕಿರಿಯ ಸೌ ಮಿತ್ರೇ ॥ ೭ ॥ ಮದನ ಮದ ದುದ್ರೇಕ ವಡಗಿಪ । ಚದುರ ಕಳಿಕೆಯದೊಳಗೆ ರತಿಬಂ । ದದಲಿ ಚುಂಬನೆ ಲಲ್ಲೆ ಬಿಗುಹಿನ ಕಲಹ ರಸಹಾಸ್ಯಾ ॥ ದೊದವಿನ ಲಿ ಪ್ರತ್ತಳಿಗೆ ಜೀವನ । ದುದಯದೊಳ್ತ ಳೆದಿರ್ದ ಬೆಡಗಿನ । ಮದನ ದಶ ರಥ ನೆಸೆದ ಚೆಲುವಿನ ಶೂರ ಭಾರಿಯಲೀ ॥ ೮ ॥ ನೀರೊಳುದಿಸುದಕವನು

ಪೊರ್ದ್ದದ । ನೀರಜದ ಮೇರೆಯಲಿ ಬಲುತಲೆ । ಗುರನಾಗಿರ ಲಂತರಂಗದಿ ಇಂದ್ರಿನಿಗ್ರಹವಾ ॥ ಸಾರಿ ಕಾಶಲ್ಯೆಯು ಸುಮಿತ್ರೆ ಸು । ಧಾರ ಸಾಕೇಂಪೂ ರ್ಣ್ಣಶಶಿಮುಖ । ನೀರೆಯರ ಕೇಳಿಯೊಳು ಮನಬ್ಯಾರಿಹುದು ದಶರಥಗೆ ॥೯॥ ಸುರಗಿರಿಯನ್ನಾಶ್ರಿತ ಮಣಿನಿಭ । ತೆರದಿ ದಿಕ್ಕುಂಭಿಗಳ ಕುಂಭದೊ । ಳಿರುವ ಸಿಂಧೂರಮರ ನದಿಯೊಳಗಿರುವ ಕನಕಾಬ್ಜಾ ॥ ಶರಧಿಯೊಳಗಿಹ ವಿಧ್ರು ಮಾಲತೆ । ಯಿರವಿನೊಳು ಪಸರಿಸಿತು ದ । ಶರಥ ನುರುವಿತಾನದ ತೇಜ ದಿಕ್ಕುಗಳೆಂಟನಾಶ್ರೈಸೀ ॥ ೧೦ ॥ ಖಡಿದು ರಿಪು ವಂಶವನು ಶಾಖೆಗ । ಳಡಿಕಿ ಕಂಠಕ ನಿಜಕೃಪಾಣದಿ । ಕೆಡಹುತಖಿಳೂರ್ವ್ವಿಯೊಳು ಛತ್ರ ಸೂರ್ಯ್ಯ ತೇಜವನೂ ॥ ನಡಿಸಿ ಜನಕವೃತಕರರಾ ತಪ । ಕೊಡೆಯ ಛಾಯವ ಗೈದುಕೀರ್ತಿಯ । ನಡರಿಸಿದನದ ಮಧ್ಯಮೇಲಣ ನೆಲೆಯದಶರಥನೂ ॥ ೧೧ ॥ ಸುರರು ದಶರಥನಂಕಮಾಲೆಯ । ಬಿರಿದ ಹೊಗಳುವ ರಷ್ಟ ದಿಗ್ವರ । ರುರು ವಣೆಗೆ ಬೆರಗಾಗೆ ಕಿಂನರ ಗರುಡ ಗಾಂಧರ್ವಾ ॥ ರೆರಗೆ ನರ್ತ್ತನ ಗೀತ ವೀಣೆಯ । ಮುರಜ ವಾದ್ಯೋಛವದಿ ಸಂಪ । ತ್ಕರಸನಲ್ಲದಲಿಲ್ಲಲಿಳೊ ಯೊಳಗೆನು ವೊಲೊಪ್ಪಿದನೂ ॥ ೧೨ ॥ ಇರುತಲೀ ತೆರವತ್ತ ಮಿಥುಲಾ । ಪುರಿಯ ಜನಕನ ಅನುಜ ಕನಕನು । ವೆರಸು ಇರಲಾ ಜನಕಗೀ ವೈದೇಹಿ ಯನುಜೆಯನೂ ॥ ಸರಸದಲಿ ಪರಿಣಇಸಿ ನಾನಾ । ತೆರದ ಕಲೆನೆಲೆಗಾದಿ ತಾನೆನು ತುರು ಪತಾಕಿನಿ ಯೆತ್ತಿಸಿದ ದಶರಥನು ರಾಜೇಂದ್ರಾ ॥ ೧೩ ॥ ನಿರುತ ಸುಖ ಮಿರಲತ್ತ ಭರತ ದೊ । ಳಿರುವ ಮಂಗಳ ವಿಷಯದೊಳು ಶೃಂ । ಗರದಿ ಮಂಗಳನಗರ ಮೆಸದಿಹು ದಮರಪುರವೆನಿಸೀ ॥ ಪರಿಧಿಸ್ವರ್ನಭ್ರ ದೊಳು ಇನ [illegible]ನು । ಕರನ ಪಥಕಡ್ಡೈಸುತಿಹ ತೆನೆ । ಗರೆದ ಮುಗಿಲಟ್ಟಣೆ ಯು ಡೆಂಕಣಿಯಿಂದ ರಾಜಿಪುದೂ ॥ ೧೪ ॥ ಸುತ್ತಿದಗಳುರುಗಾವನಿಗೆ ಜಲ । ಬಿತ್ತಿಯಂತಿಹುದೂರ ಸಿರಿಗನು । ವೆತ್ತ ಕಾಂಚಿಯ ಧಾಮ ವೆನಲಾರಾಮ ದೊಳಗೆಲ್ಲಾ ॥ ಕಿತ್ತಳಂಜೂ ರ್ಪನಸು ದಾಡಿಮ । ದೊತ್ತ ಪೂ ಗೆಲೆವಳ್ಳಿ ಜಂಬೀ । ರೊತ್ತಿನಲಿ ನಾಕ್ಕೆರ್ೀಳಿ ಚಂಪಕ ಸಾರ ಕದಳಿಗಳೂ ॥ ೧೫ ॥ ಸಿರಸ ಪುನ್ನಾಗ್ಬಕುಳ ಪಾದರಿ । ಕರವಿಕುರವಕ ಪಾರಿಜಾತವು । ಸುರಗಿ ಮಲ್ಲಿಗೆ ಮೊಲ್ಲೆ ಕೇತಕಿ ಜಾಜಿ ಲತೆಗಳಲೀ ॥ ಪರಿಪರಿಯ ಘುಮುಘುಮಿಸುತಿ ಹ ವನ । ಮರಕತ ದವಲಯದೊಲು ಕೊಳ ಪು । ಷ್ಕರಣೆಯಲಿ ಕೌತುಕ ವನೀವಂತೀಕ್ಷರಂಬರಕಕೆ ॥ ೧೬ ॥ ಯೆಲ್ಲಿ ನೋಡಲು ಕುಸುರಿ ತಳಿರುಗ ।

ಕೆಲ್ಲಿ ನೋಡೆಲೆ ಗಾಯಿ ಪಂಚು ಗ । ಳೆಲ್ಲಿ ಅಳಿಗಿಳಿ ಪಿಕದ ಸುಸ್ವರ ಹಂಸೆ
ನರ್ತನವೂ ॥ ಯೆಲ್ಲಿ ವಿಕಚಿತ ಕುಸುಮ ಕುಟ್ಮಳ । ವೆಲ್ಲಿ ನೋಡಲು
ಷಟ್ಪದಸ್ವರ । ದಲ್ಲಿ ಮನ್ಮಥ ನೋಲಗಾಲಯದಂತೆ ಶೋಭಿಸಿತೂ ॥ ೧೭ ॥
ಪೊಕ್ಕು ಕೊಳ ಸರಸಿಜದಯಸಳಲು । ಗಿಕ್ಕಿ ಸೌರುಭಶಳೆದು ಲತೆಗಳ । ಕೊ
ಕ್ಕಿಶಳೆ ದಲರುಗಳ ಪರಿಮಳವಾಯ್ದು ಕಿಸಲಯದಾ ॥ ಚೊಕ್ಕ ಕೆಂಡದಿ
ವನವ ಕಂಪನ । ವಿಕ್ಕಿ ಶೆಳೆಗೊನೆಚಾಟಿಯಲಿ ಹೊಡೆ । ದುಕ್ಕಿ ಕೋಕಿಲ
ರವದಿ ಮೆರೆದನು ವಾಯುವನದಲ್ಲೀ ॥ ೧೮ ॥ ಸುತ್ತಿದೀ ವನಲತೆಯ ನ
ಡುಚೆಲು । ವೆತ್ತ ಸುರಕುಜದಂತೆ ಪುರಸಿರಿ । ಚಿತ್ತಹರಕೆಯು ಸಂದಕಾ
ರಣದುಟ್ಟಿಪಸುರುಡಿಯಾ ॥ ಬಿತ್ತರವನಿಳೆಗೈವ ಪುರಕನು । ವೆತ್ತ ಶೃಂಗರ
ದುಭಯವೀಥಿಯ । ಇತ್ತರದಮಣಿಮಾಡ ಹರ್ಮ್ಯಗಳೊಂದು ಸೊಗಸು
ಶಿರೇ ॥ ೧೯ ॥ ನಗುತಲಿವೆ ಸುರರಂಗ ಭವಿಗಳ । ನಗುತಲಿವೆ ರೋಹ
ಣದ ಗಿರಿಭವಿ । ನಗುತಲಿವೆ ಹಿಮಚಂಡ ಕಿರಣರಕಾಲಕಿಯ ರುಚಿಯಾ ॥
ನಗೆಮೊಗದ ಸೌಧಗಳೊಳಾಡುವ । ಚಿಗುರಿಗಣ್ಣೆಳೆಮಿಾನಚಪಳವ । ನಗು
ವ ಅಲರೆಳೆದುಂಬಿ ಹಂಸೆಯ ಚಲುವ ನಾರಿಯರೂ ॥ ೨೦ ॥ ಅಂಚೆನುದ
ಗಜ ಸರಳು ಕನುಟೆಳೆ । ಮಿಂಚುಗುರು ಝಳವಾಳೆ ಖಡ್ಗುರು । ಸಂಚೆಕು
ಟ್ಮಳ ಕಂಬುಶುಂಡಿಲ ಶೇಷವಾದರ್ಶಾ ॥ ಮುಂಚೆ ಶ್ರೀಕರಕುಲಿಶ ವಟಫಲ ।
ದಿಂ ಚಂಪಕದಲಿ ಲರುಧನುವೆರೆ । ಚಂಚಲಳಿ ಫಣಿಗಳನು ಗೆಲುತಿಹರೆಲ್ಲ ನಾರಿ
ಯರೂ ॥ ೨೧ ॥ ಹರದವಾಟಿಗಳಿಂದ ನಾನಾ । ತೆರದಜನ ಗಣಿಕೆಯರು
ವಾಲಗಃ । ಗರೆವ ಸಾಲರಮನೆಯು ತ್ರಿಭುವನ ದೇವನಾಲಯವೂ ॥ ತುರು
ಗಗಜರಥ ಆಳುಧ್ವಜ ಛ । ತ್ರತುಪತಾಕೆಗಳಿಂದ ಲತಿಶ್ರಂ । ಗರವಿರಾಜಿತ
ನಗರಮಂಗಳೆ ಪುರದ ವೆಸರಿನಲೀ ॥ ೨೨ ॥ ಜರೆದು ರತಿಯನು ಸಿರಿಯ
ವಿಸ್ಮಯ । ಗರಸಿ ಸರಸಿಯ ನಿರಿಸಿ ಲಪನದೊ । ಳು ರವಿಲಾಸದೊಳಂದ
ಚಂದದಗಾಡಿ ತರುಣಿಯರೂ ॥ ಸ್ಮರನವಿರಹದ ಪುರುಷರಾಗನು । ಧರರು
ಧರ್ಮ್ಮಗಳೆಲ್ಲ ಸಂಪ । ತ್ಕರಿತರಾಗಿಹ ಸರಸಜನರಾ ಪುರದೊಳಿಹರೆಲ್ಲಾ ॥ ೨೩ ॥
ಈತೆರ ಸುಮಂಗಲದ ಪುರವಿ । ಖ್ಯಾತ ಹೇಮಪ್ರಭನು ಸ್ವರ್ಣದಿ । ನೂತ
ನವಗೈದಮಲ ಪುತ್ಥಳಿಯಂತೆ ಧರಣಿಪನೂ ॥ ಮಾತಿನೊಳು ಮೃದುವಾಣಿ
ಹಸ್ತ । ಜ್ಯಾತೆ ವಿಜಯಾಂಗನೆಯು ಸಿರಿವಧು । ವಾತನನುಸರಿಸಿಹಳು
ನಿರುತವನೀಶ ಚಿತ್ತೈಸೂ ॥ ೨೪ ॥ ಕನ್ನೆ ಕುಲಮಣಿರನ್ನೆ ಸುಗುಣೋ

ತ್ಪನ್ನೆ ಶುಭಮತಿಯೆಂಬಳಾನ್ರುಪ । ನನ್ನೆಸುತ ಕಾಮಾರ್ತ್ಥದಲಿ ಫಲದಿವಸ
ವ್ರತಗೈದೂ ॥ ಚನ್ನೆ ಮೇನಕಿ ರಂಭೆಯರರೂ । ಹನ್ನು ಲಕ್ಷಣಕಿರಿಸಿ ಅಲ್ಲ ।
ಲ್ಲಿನ್ನು ಪಡಪಳೊ ಯೆಂಬ ತೆರದೊಳು ಗುದಿಸೆ ಸುಕುಮಾರೀ ॥ ೨೫ ॥
ಮಲ್ಲಿಗಬ್ಜವ ಶೋಕೆ ಕೇತಕಿ । ಯಲ್ಲಿ ನೈದಿಲೆಯೆಂಬ ಸುಮನ ಗ । ಳೆಲ್ಲವ
ಲಂಕ್ರುತ ಗೈದ ಕಾರಣ ಶಸ್ತ್ರ ಭೀತಿಯಲೀ ॥ ಪುಲ್ಲಶರನಿಲೆ ಸತಿಯಕಡೆಗಂ ।
ಇಲ್ಲಿ ಪೊಳಗುವ ಥಾಳಶರವೆಂ । ಬುಲ್ಲ ಸಾಖ್ಯವ ಪಡೆದ ರಂಗನರಂದಿನಿಂದಿ
ತ್ತಾ ॥ ೨೬ ॥ ಪರುಷಕಣಿ ಪೆಂಣ್ಮಣಿಯ ರೂಹನು । ಸರಿಸಿ ತೋರು
ವೊಲಿರಲುಸಾಮವ । ಗರೆದ ಕೈಕಿಲೆಯೆಂದು ನಿಜಪಿತನೆಳೆಯ ಶಶಿಯಂತೇ ॥
ತರುಣಿ ಪಲ್ಲವಿಸಿದಳು ಪಂಕಜ । ಶರಕೆ ಜೀವನ ಬಂದ ತೆರದೊಳ । ಗರಸಿ
ಯೊ ನೋಡಾಕೆ ಸರಸಿಯೋ ಸುರಲತಾಂಗಿನಿಯೋ ॥ ೨೭ ॥ ಹಾವ ಭಾವ
ವಿಲಾಸ ವಿಭ್ರಮ । ಭಾವೆಯೊಳಗುದಿಸದವು ಮುಖಮನ । ತೀವಿ ಕಂಣಿಡು
ಹೂರ್ಬಿನೊಳಗೀ ಲಕ್ಷಣೆಸೆದಿರಲೂ ॥ ದಾವ ಅಳಿಗಿಳಿ ಪಿಕವು ಹರಿಗಜ । ಭಾ
ವೆಕುಂತಳನುಡಿನಡುವು ನಡೆ । ಗಾವಸ್ವರದೊಳಗಿರಿಸಿ ಸೊಗಸಿದಳಾಗಕೈಕಿಲೆಯು
॥ ೨೮ ॥ ಅಂತೆಸವ ಕಾಮಿನಿಗೆ ಯೌವನ । ವಾಂತು ಬರೆ ಸುರಕುಜಕೆ
ಫಲಫಲಿ । ಪಂತೆ ಕೌತುಕದಿಂದ ವಿದ್ಯಗಳೆಲ್ಲ ಸಾಧಿಸಿದಾ ॥ ಕಾಂತೆಗು
ದ್ವಹವರಕೆ ಯೋಚನೆ । ಯಾಂತು ನೃಪನಾಲೋಚನೆಗೆ ಸರಿ । ಯಾಂತ
ಸುಮತಿಯು ನೋಡಲುತ್ತರ ವಿತ್ತನಿಂತೆಂದೂ ॥ ೨೯ ॥ ಬಹರೆ ಸರಿ ಸ್ವಂತ
ರರು ದಿಕ್ಪಾ । ಲ ಹರ ಮೆಚ್ಚಳು ನಿರ್ಜ್ಜರರು ಈ । ಮಹಿಯ ಸೊಂಕುವ
ರಲ್ಲ ವವರೊಪ್ಪುವಳೊ ಹ್ಯಾಗೆಂಬಾ ॥ ದಹವಿಲೋಕನ ವಾಗದೀನೃಪ ।
ರಹರನಾಪೇಕ್ಷಿಪಳೆ ಸ್ವಯಂವರ । ಗೃಹಣದೊಳಗೇ ನಾಗಲುತ್ತಮ ವೆಂದ
ನಾಮಂತ್ರಿ ॥ ೩೦ ॥ ಸಕಲವಿದ್ಯ ರಹಸ್ಯದೊಳಗತಿ । ಪ್ರಕಟಗೈದಿಹಳೀ
ನುಕಾರಣ । ಮಕವೊ ಮುಕುಳಿತೆ ಯಂಬದನು ಗೈಬೇಕುಯೆನೆ ಸಚಿವಾ ॥
ಯುಕುತಿ ಸರಿಯಂದಾ ಸುತೆಯ ಸಂ । ನಿಕಟ ಕೈದಿಸೆ ಮತ್ತ ಗಜ ನಡಿ ।
ಯಿಕುವ ತೆರದೊಳುಬರಲು ಹಾಡಿದವಾಗ ಲಳಿಯಾಳೀ ॥ ೩೧ ॥ ವ್ಯಗವೊ
ನ್ಯಗಮದ ಕರುವೊ ಸುರಕುಜ । ಸೊಗಸನಳಂಕರಿಸಿತೊ ಮೇಣೇ । ಜಗಕೆ
ಮೋಹನಮಾಲೆ ಸರಸಿಜ ಗರ್ಬ್ಭ ನಿರ್ಮ್ಮಿಸಿದಾ ॥ ಬಗೆಯೊಳೈತಹ ಸಂಪ
ನೆಯ ಸೇ । ತ್ರಗಲದ ವನಿಪ ನೋಡುತಿರೆ ಮೈ । ದೆಗೆದಳಾ ಸಮ್ರುದಲಿ
ಪಿತನಡಿಪಳಕೆ ಕೈಕಿಲೆಯೂ ॥ ೩೨ ॥ ಮುದ್ದಿಸಣುಗೆಯ ನೆತ್ತಿಯಪೆಯನು।

ಹೊದ್ದಿ ಕುಳ್ಳಿರಿಸೆ ನೃತಿಜ್ಞೆಂಪು । ಹೊದ್ದಿದಳೊ ಸಯಂವರಕೆಯನೆ ಪಿತಗೆದ್ದು
ಕೈಮುಗಿದು ॥ ಶಿದ್ದಗೈದಿಹೆ ಸಕಲವಿದ್ಯ ಪ್ರ । ಸಿದ್ಧದೊಳು ವೀಣೆಯ
ನು ಭಾಜಿಸಿ । ಮುದ್ದುಗೊಳಿಸಿದಗೊಲಿವ ಶಪಥುಂಟಿನಲು ಸುಕುಮಾರೀ
॥ ೩೩ ॥ ನೋಡು ನೃಪ ನಿನ್ನನ್ನಯತ್ನವ । ನೋಡದಿಂ ನೊಯಗಾಡಿ ಮೋ
ಡಿಯ । ಕೂಡಿಫಲವೇನಾವನಾಗಲಿ ವೀಣೆಯ ಭಾಜಕಗೆ ॥ ಸೂಡು
ವಳು ಪ್ರಜಸಾಲೆಯನು ಅನು । ಮಾಡಿಸವನಿಪ ನಂದನರ ಬರ । ಮಾಡಿ
ಸೆನೆ ಸುಮತೀಶ ನದಕೆತ್ನಿಸಲು ಭೂಭುಜನೂ ॥ ೩೪ ॥ ಕಳುಹಿ ಅಣುಗೆ
ಯನಾಲಯಕೆ ವನ । ದೊಳಗೆ ಸಂಯಂವರ ಸಾಲ್ಗೆತ್ನವ ॥ ಗೊಳಿಸಿದವ
ನಿಪ ಕೈಕೆರೂಪವಲೋಕ ನವನಿಪರೂ ॥ ಬಳಲು ತಿಹರೆಂಬಕ್ಕರದಿ ಬಿಸಿ ।
ಲೊಳಗೆ ಮಾಡಿಸಲಿಲ್ಲ ಮಣಿಮಯ । ದೊಳಗೆ ಯಳೆವಿಸಿಲಂತೆ ಸಯಂವ
ರಸಾಲೆ ಸೊಗಸುತಿರೆ ॥ ೩೫ ॥ ತೆರಳಿ ಬಹವೋಲವನಿಪರು ಅನು । ಚರ
ರ ನೈದಿಸಲಂಗನೃಪ ಬ । ರ್ಬರನು ಮಗದ ಕಳಿಂಗ ಕಾಶ್ಮೀರ್ಕೇರಳಮ್ಹಾ
ರಾ ॥ ದರಸುಗಳುಂ ಮೊದಲಾದ ದೇಶಾ । ಧರರು ಸುರಪನಬಲರು
ಧನಪನ । ಸಿರಿಯ ಸ್ಮರನಿಭರೈಪೆ ಮಂಗಳಪುರಿಗೆ ಶೀಘ್ರದಲಿ ॥ ೩೬ ॥
ತಿಲಕಬೇಳುಪೆ ವಶ್ಯಯಂತ್ರಗ । ಳುಲಿವ ಮಂತ್ರರಜನದಿ ರಥಗಜ । ಚಲ
ನವಾಲಸವೆಂದು ಹಯಗಳನೇರಿ ಚತುರಿನಲೀ ॥ ಜಲಧಿ ಗಾಮಿನಿಯಂತೆ
ಖುರುಪುಟ । ನೆಲನ ಸೋಂಕದ ರೀತಿಯಲಿ ಬಹ । ಜಲದಿ ನಲಿ ನಡೆ
ತಂದು ಪೊಕ್ಕರು ನೃಪರು ನಂದನವಾ ॥ ೩೭ ॥ ಸಾಲಿಗೆದುರುಭಯಾಂ
ಗದೊಳು ತರು । ಜಾಲದಡಿ ಚೌಫಳಿಯೊಳವನಿಪ । ಚಾಲ ಕುಳಿತರು
ಸದಸಿ ಜನವಲ್ಲಲ್ಲಿ ವಪ್ಪಿರಲೂ ॥ ಬಾಲ ರವಿಯಾಕಾರ ದಶರಥ । ಮೇ
ಲುಭೂಷಣ ದಳೆದು ಕೌತುಕ । ಲೀಲೆಯೊಳಗೈತಂದು ಕುಳಿತೊಂದೆಡೆ
ವಿಲಾಸದಲೀ ॥ ೩೮ ॥ ಯೆಲ್ಲಕುನ್ನತನಾಗಿ ಬಹುದಳ । ದಲ್ಲಿ ತಾರಾಧಿ
ಪನ ತೆರದಿಂ । ದಲ್ಲಿಕುಳಿತಿರೆ ದಶರಥಾಧಿಪನಾಗ ಮಂಗಳನೂ ॥ ನಲ್ಲೆ
ಯರ ನೋಡುಲಿದ ನಣುಗೆಯು । ನೆಲ್ಲಲಂಕರಗೈದು ಕರತಹು । ದಿಲ್ಲಿ
ಗೆನಲಾಪಾದ ಮಸ್ತಕ ಭೂಷಣವ ಗೈದೂ ॥ ೩೯ ॥ ವುಡಿಸಿ ದಿವ್ಯಾಂಬರ
ಸುಕಂಚುಕಿ । ತೊಡಿಸಿ ಮೃಗ ಮದ ತಿಲಕ ವಂಜನ । ತೊಡೆದು ಮಣಿ
ಮಯ ರಥವನೇರಿಸಿ ಛತ್ರ ಚಾಮರವಾ ॥ ಪಿಡಿದು ಕರ್ಪುರ ವೀಳ್ಯವನು
ಮಡಿ । ದಿಡುತ ಯೆಲವರಾಳತೂರ್ಯ್ಯ । ಪ ಡೆಸೆಯಲಿ ನಡಸಿಪರು ಐನೂ

ಠಾಳಿರೋಹಿಲಡದಲಿ ॥ ೪೦ ॥ ಮೆರೆವ ವಿಗ್ರಹದಂತೆ ಸೊಗಸುವ । ತರುಣಿ
ರಥವನಕೈದಿಸಲು ಯಿ । ತ್ತರದ ರಾಜರ ನೇತ್ರ ಗುಣಗಣ ಕೈಕೆ ಲತೆಯ
ಗ್ರಾ ॥ ವರಳಿದಬುಜಕೆಯರಗಿ ಸೊಗಇಪ । ಪರಿಮಳವ ಸೇವಿಸುತ ಮೈ
ಮರೆ । ದೊರಗಿದರು ನಿಡು ಸರಳ ಘಾಯದಿ ಯುವತಿಕಡೆಗಂಣಾ ॥ ೪೧ ॥
ಮೋದ ಮೂರ್ಛೆಯು ತೊಲಗೆ ಲಾವ । ಣ್ಯಾದರಿಸಿ ಕೆಲಕೆಲರು ವರ್ಣಿಸ ।
ಳಾದರಭಿಮುಖನೇರ್ಪಿ ಸಂಗವ ಮನವ ಬಿಗಿಹಿಡಿದೂ ॥ ಪಾದ ಸರಸಿಜ
ಬೆರಳು ಶರ ಮ್ಮಿಾ । ನಾದ ಜಂಘೆಳೆ ವಾಳೆ ತೊಡೆ ತೆಳು । ವಾದ ವುದರಸಿ
ಮಧ್ಯೆ ಕೈ ಬಗುರಾದ ವಕ್ಷರುಹಾ ॥ ೪೨ ॥ ಕರಿಯ ಕರಕರ ಹಸ್ತ ಫಣ
ಿ । ಳ್ಪಿರುವ ಬೆರಳಿಂ ಕಂಬು ಕಂದರ । ಮಿರುಗು ವದರ ದ್ವಿಜ ಸುದಾಡಿವು
ಬಿತ್ತು ಮಣಿ ಮುಕುರಾ ॥ ವರಿಸಿದೆಳೆಕದ ವುಗಳು ಧನು ಸಂ । ವರಿಸಿ
ಶ್ರೋತ್ರಗಳ ಲರ್ದತಿಲ ಕುಸು । ಮಿರಲು ನಾಸಲರ್ಗಂಣು ಶರ್ಕರೆ ವಿಲ್ಲನಿಡು
ಪೂರ್ಬೂ ॥ ೪೩ ॥ ಯಳ ಕಳೆಯ ಪೆರೆ ನೊಸಲ ನಿಡು ಕುಂ । ತಳದ
ಬಲ್ಮುಡಿ ಜಘನ ಪೌರ್ಣ್ಣಿಮ । ಕಳೆಯವಕ್ತ್ರವ ತುಡುಕುತಿಹ ತಮವೇಣು
ಲಾವಂಣ್ಯಾ ॥ ತಿಳಿಗೊಳದೊಳ ನಿತನಿತು ವರ್ಣ್ಣನೆ । ಗೊಳಿಸಿವರು ಅಸಿ
ಮಸಿಯು ಮೃಗ ಪಿಕ । ಗಿಳಿ ನವಿಲು ಕಳಹಂಸೆ ಯಂತೆಸದಿರಲು ಕೈಕಿಲೆ
ಯೂ ॥ ೪೪ ॥ ಚೇತರಿಸಲಸದಳದಿ ಮೆಲನೊಲೆ । ದೋತು ನೋಡುವ
ನೃಪರ ಶೃಂಗರ । ಜಾತಗಳ ನಭಿವರ್ಣಿಸಲು ಕೈಕಿಲೆಗೆ ಕಂಚುಕಿಯೂ ॥
ಆತನೋಡಂಗೇಶ ಲಲಿತ ವಿ । ನೂತಕಾ ಸ್ಮೀರೀತ ಕಾಳಿಂ । ಗಾತ ಮಗದ
ವನೀಶ ನೋರ್ವರಿಗೋರ್ವ್ವ ಚಂನಿಗರೂ ॥ ೪೫ ॥ ನೋಡು ಕೌಶಲದರಸ
ನೆಳೆವಯ । ಗಾಡಿ ಮೋಡಿಯ ಬಿಂಕ ಪಂಕದಿ । ರೂಡಿಗತಿ ಚಂನಿಗನು
ಐವತ್ತಾರು ದೇಶಗಳಾ ॥ ನಾಡರೇಕೋ ಛತ್ರಛಾಯೊಡ । ಗೂಡಿಸಿಹನಿ
ಕ್ಷ್ವಾಕು ವಂಶಾರೂಢ ದಶರಥನೆಂಬ ಕೈಕಿಲೆಯನಲು ಕಂಚುಕಿಯೂ ॥ ೪೬ ॥
ಸತ್ವರೂಪೆಳೆ ಗಾಡಿ ಚತುರವ । ಯತ್ವ ದೇಶಗಳಾದಿ ನೃಪರಮು । ಮತ
ತ್ವಗಳ ಕಲೆದೋರಿ ವಚನದಿ ಸಾಲೆ ಸಂನಿಧಿಗೆ ॥ ಗತ್ವ ಗೊಳಿಸಿಳಿಸಲ್ಲಿ ರಥ
ವಳ । ಗುತ್ವ ಮಣಿಮಯ ಪೀಠದೋಳು ಸುಲ । ಭತ್ವ ಕೈಕೆಯ ನಿರಿಸಲ
ಸಮನೆ ಮಂತ್ರದೇವಿಯೊಲೂ ॥ ೪೭ ॥ ತಿರುಗುತೆಲ್ಲರ ನಯನ ಕೋರಕ ।
ತರುಣಿ ಶಶಿ ವಕ್ತ್ರಾಂಶು ಸುಧೆಗನು । ಸರಸಿದಂತಿರಲ ವನಿಪಾಲಕನೊಂದು
ವೀಣೆಯನೂ ॥ ಇರಿಸಿ ಮುಂಗಡೆಯಲ್ಲಿ ಆರೀ । ಸ್ವರದಿ ಮೆಚ್ಚಿಸಿದಾತನಿಗೆ

ಅಲಂ । ಕರಿಸು ಷ್ಠಾಲಿಯನೆಂದು ಸುತೆಗಿತ್ತುಕಳಿತನೊಂದೆಡೆಯಾ . ॥ ೪೮ ॥
ಇಷ್ಟು ನುಡಿ ಯಾವಾಗಲಾಡುವ । ನಷ್ಟೆ ಸಾಕೆಂದಾಸ್ಯ ವಾಲೋ । ಕಿಷ್ಟು
ಪರಿಯುಂತಿರ್ದೆ ಭೂಭುಜನೆನುತ ಲಂಗೇಶಾ ॥ ಅಷ್ಟರೊಳಗೈದಾಕೆಲಪ್ಸನವ ।
ದೃಷ್ಟಿಸೆಡೆ ವರಿಯದಲೆ ವೀಣೆಯ । ನಿಷ್ಟದೊಳು ಬಹದರಿದ ಸಖಿಯರು
ಬಂದು ಮುಂಗಡೆಗೆ ॥ ೪೯ ॥ ನಿಲ್ಲು ನೃಪ ನಿಲ್ಲೇನುಕಾರ್ಯವ । ದೆಲ್ಲಿ
ಗೈದು ವದೆನಲು ವೀಣೆಯ । ಸೊಲ್ಲಿಸುವದೆ ನಲೆಲ್ಲಿ ವಿಪ್ಪಂಚೆಲ್ಲಿ ನೀನೆಲ್ಲಿ ॥
ಯುಲ್ಲೆ ಮರುಳಾಟೆನಲು ಭಾಜಿಸಿ । ನಲ್ಲೆ ವಲಿಸುವನೊಳಗೆ ಹಾಸ್ಯ ವಿ । ದೆಲ್ಲಿ
ಬಿಡಿರೆನಲಂಗ ಮಂಗಹುದೆನಲು ನಾರಿಯರೂ ॥ ೫೦ ॥ ಯಾತಕೆನೆ ವೀಣೆ
ಯನುಕಾಣ । ದಲೀತಳಕೆ ಬರಲಂಧಕನೊ ಮೇ । ಣ್ಯಾತರವನೆನೆಲ ಕಾಷ್ಟ
ವಿಧೀಗವಿಪ್ಪಂಚೀ ॥ ಯಾತಕೆಳ್ಮರುಳೈ ವಿರೆನೆಕಂ । ಸೊತು ನೋಡೆನಲರಿದು
ವಿಸ್ಮಯ । ವಾತುದೀಕೆಯೆ ವೀಣೆಯೆನುತ್ತೈ ತಂದೆನಾಥರಿಸೀ ॥ ೫೧ ॥ ಬಿರುಡೆ
ಶಿರ ಕುಚ ಬುರ್ರೆ ಶರಗಿನ । ನೆರಿಯೆ ತಂತಿಗಳೆನುತ ವೀಣೆಯ । ತೆರನಗೊಂಡ್ರೈ
ತಂದೆ ಸರಿವರಿ ರಾಜರರಿದರಿದಾ ॥ ಗರೆವ ರತಿ ಹಾಸ್ಯವನು ಮೇಲನಿಂ ।
ತರಿಸಿ ಕೂಗದಲೆಲ್ಲಿ ವೀಣೆ । ತ್ತಿರುವ ದಾಳಿಯರೆಂದು ಬೇಡುತ ದೈನ್ಯ ದಂಗೇ
ಶಾ ॥ ೫೨ ॥ ತೊಲಗು ತೊಲಗೆಲೊ ಮಂಗ ಸಖಿಯರಿ । ಗುಲಿವುದೇನಪ
ಹಾಸ್ಯ ವೀಣೆಯ । ಕುಲವನೆಂದಾ ನರಿದು ದುಂಟೆಲವಾವುಗಾಯುವನಾ ॥
ಕೆಲನೊ ನೋಡಿಲ್ವೀಣೆಯನು ಕೈ । ದೊಲಿದು ಪಿಡೆದೆತ್ಬರ್ಭರನು ಆ ।
ಲಲನೆಯಾ ಲೋಕದಲಿ ಮೈಮರೆದಿಟ್ಟು ಪೇಗಲೊಳಗೆ ॥ ೫೩ ॥ ತತ್ತ್ರಧಿಮಿ
ಧಿಮಿಧಿಮಿಕು ಧಿಮಿಕೆನು । ತೊತ್ತಿ ಪಾದಗಳೊಲ ವಿಲಾಸ್ಯವ । ನೆತ್ತಿ
ನೋಡೆಲೆಕೈಕೆ ಮನಕೊಲವಾದುದಿಂ ನಿಲವೋ ॥ ಇತ್ತಲೈದಾಲಸ್ಯ ವ್ಯಾಕೆನ ।
ಗೆತ್ತಿ ಮಾಲೆಯ ಸೂಡಲೆನುತುಲಿ । ಯುತ್ತ ಕುಣಿದನು ಮದನ ಮರುಳಂ
ತಾಗ ಬರ್ಭರನೂ ॥ ೫೪ ॥ ಭಾಜಿಸದೆ ವೀಣೆಯನು ಲಾಸ್ಯ ವಿ । ರಾಜಿ
ಸಲು ವೇಶ್ಯಾಂಗನೆಯರೆಡೆ । ಭಾಜಕನೊ ಬರ್ಭರನೊ ಬಹುಚನ್ನೆಂದು
ಕಾಶ್ಮೀರಾ ॥ ನಾ ಜಯಸುವಂಗನೆಯ ನೋಡೆಂ । ಬಾಜಯದೊಳ್ಳೈದಾ
ತಪೊತ್ತದ । ತಾಜರೆದ ತೆಗದಾಕೆ ವಕ್ತ್ರವ ನೋಡಿ ಚಂಚಲದೀ ॥ ೫೫ ॥
ಸ್ವರಗೊಳಿಸ ಲಜ್ಜಾನದಲಿ ನೈ । ಮರೆದು ತಿರುಹಿದ ಕತ್ತಿಯೊಲು ದು ।
ರ್ಧರದಸಾಮನುಸರಿಸಿ ಮೆಚ್ಚಿಸರೆಂದು ಪೈಶಾಚಾ ॥ ರಿರವ ತೋರುವಸಂಗ
ಚೇಷ್ಟೆಗೆ । ತರುಣಿಯರು ಬೇಗೈಧಿ ವೀಣೆಯ । ಮುರಿವನೆಂದ್ಕಸುಕೊಂ

ಪು ತಗುಳಿದರಿಪ್ಪ ಚೌಪಳಿಗೇ ॥ ೫೬ ॥ ಭಗ್ನ ಗೊಳಿಸಿದ ಮುನ್ನವೀಣೆಯು ।
ವಜ್ಞೆಯಿಂ ಕೊಂಡಾಳಿಯುರು ಕೈ । ಜಗ್ನದಿಂ ನಸುನಗಲು ನೋಡಿದ ಭೂ
ಭುಜಾತ್ಮಜರೂ ॥ ವಿಜ್ಞವರಿಯದೆ ಪ್ರಥಮ ದೊಳನು । ವಜ್ಞೆಗೈವ
ಪಹಾಸ್ಯವನು ತರ । ಲಗ್ನಿಸಿದರೆಲ್ಲರಿಗೆಯನೆ ಹ್ರೀಕಾರಯುತರಾಗಿ ॥ ೫೭ ॥
ಯೆತ್ತವಲಿ ಸಿರಗಳನುಸಾವದ । ರತ್ತಲಡಿಯಿಡಲಾ ವಿಧಿಯೆನಮ । ಗೊ
ತ್ತದಿರದಾಪೇಕ್ಷೆ ತೋರದಿಹು ದೀಗಲಡೆನಾನ ॥ ಕುತ್ತಮೆಸುತಾ ರೇಳದಲೆಯು ।
ತ್ತಿತ್ತ ತೊಲಗದರದು ನ್ರುಪಸರ । ಪತ್ತ ನೋಡತ್ತಿತ್ತ ಮೋರೆಯು ತಿರು
ಹಲವನಿಪರೂ ॥ ೫೮ ॥ ಇನಿತು ವ್ಯಾಮೋಹಿಗರು ಕಾರ್ಯ್ಯ ! ವನೆನೆ
ವರಲ್ಲೆಂದವನಿಪತಿ ಸಿರ । ವನೆದು ಕೇಳಿದಭೂಮಿ ಸುರರೊಳಗಾರು ವೀಣೆ
ಯಲೀ ॥ ಸನುತರಾಗಿಹ ರುಂಟಿಯನೆಯಂ । ಮನು ವನರಿದುಲಿಪರೆ
ಭೋಜನ । ವಿನೆಯರ ಲದಾವಾರು ವೀಣೆನ್ಯಾರು ಆಕ್ಯಾರೂ ॥ ೫೯ ॥
ಮಾಡಿಸನುಪಮ ಭಕ್ಷತುಯ್ಯಲ । ನೋಡು ಕೈಚಳಕೆಮಗೆ ಬಡಿಸಿ । ನ್ಮಾಡಿ
ನೆಟ್ಟನೆ ಸಿಖಿಯ ಕಟಸೂತ್ರಗಳು ಹರಿವನಕಾ ॥ ಪೂಡಿ ಘೃತಸಿಕ್ಕೀರ
ಮೇಣ್ಪುರು । ದಾಡಿ ಕೊಳದಿರಲೋರ್ವ ನಶನವ । ಹೆಡರೆಂದಬ್ಬಡಿಸು
ನೃಪನೆ ನಲ್ಲಲ್ಲಿ ಕೆಲಕೆಲರೂ ॥ ೬೦ ॥ ಪೊಡವಿ ಪಾತ್ಮಜರೆತ್ತ ಭೂಸುರ ।
ನಡವಳಿ ಗಳಿನ್ನೆತ್ತ ವೀಣೆಯ । ನುಡಿಸಿದರು ಮೇಸೊಲಿಯ ಳರಸಿಯು
ನೀರ ಹಾರುವರಿಗೆ ॥ ನಡೆವುದೆ ತ್ತೂರೆತ್ತ ಲಕ್ಷ್ಮಿಯು । ಕುಡಿಯು ಯ
ತ್ರೆತ್ತಂತೆ ನೀಪ್ನಡಿ । ಇಡುವುದವನೀನಾಥ ನೆಂದರು ಹೊಡೆದು ಕೈ ನಗುತಾ
॥ ೬೧ ॥ ತಿಳಿದು ತಿಳದರಿಯದೊಲು ಯೀಗ್ನಿಂ । ಮೊಳಗೆ ಉಸುರಿದ
ಮಾತ ನಮ್ಮೊಳು । ಬಳಿಸದಿರಿರಾ ನರಿಯದಾಡಿದೆನೆಂದು ನೃಪನಕ್ಕಾ ॥
ಹೊಳೆದು ನೋಡೆಲ್ಲರು ಸಯುಂವರ । ವುಳಿವ ಸಮಯುವ ನರಿದು ದಶ
ರಥ । ನುಳಿದು ಆರಿಲ್ಲೆನಲು ನೃಪಸುತರೆಲ್ಲ ರವನೀಶಾ ॥ ೬೨ ॥ ಆರಿ
ಸುತಲಾ ನುಡಿಯುನಾರೀ । ಬಾಳೆಯೊಲಿಸುವ ದೀಕ್ಷಿಸಲು ಮನ । ಲೀಲೆ
ಯೊಳಗೈದಿರ್ದ್ದನಾರಿಂ ನಾಕೆಯೊಲಿಸದಿರೇ ॥ ಮೇಲೆನೀಕ್ಷಿಸೆನೀಗ ಲವರಸು ।
ಕೂಲಗೊಳಿರನೆ ಪ್ರಥಮ ಚುಂಬನ । ಕಾಲದೊಳು ಪಲ್ಮುರಿದ ತೆರನಾಯ್ತೆ
ನಲು ದಶರಥಗೇ ॥ ೬೩ ॥ ಆದಿಯೊಳಗೈದಲ್ಲಿ ಫಲವಿದ । ಾದರಿವಪ
ಹಾಸ್ಯಕೊಳಬಡ । ಲಾದರೈದಲಿ ಸಾಕುನಮಗೀಕ್ಷಿತವೆ ವಿಪ್ಪಂಚೀ । ನಾದಕಾ
ಥಕವಿಲ್ಲ ನಿನಧಿ । ಕಾದನುಕೂಲಾಗೆ ಪ್ರತಿಕೂ । ಲಾದ ರೋಕಿತೆಂಡಾಸ್ಯ

ಗೊಳುವೆಗೆ ನೃಪರು ದಶರಥಗೇ ॥ ೬೪ ॥ ಹಿರಿಯ ರಿಂಖಣಗೊ
ಳಲು ಹಾಸ್ಯವ । ಗರೆಯದಲೆ ಕೈಕೊಡುವರೆಮ ಸಮ । ಧರಣಿಪರು
ಯೆಂದಾನು ಸ್ವಲ್ಪವ ತಡರಿಸುವಡೆಲ್ಲ ॥ ಹೊರಳಿ ನಗುತಿಹರೆನಲು ಯಳಿ
ನಗೆ । ಮಿರುಗಿ ದಶರಥ ನೈದಲೀಳ್ಪದ । ನರಿದ ಕೈಕೆಯ ನಯನ ವೆರಗಿ
ಪಪಲಪ ನೀಕ್ಷಿಸಲೂ ॥ ೬೫ ॥ ಚಲ್ವ ಪದ ಕಣಕಾಲು ತೊಡೆಯತಿ ।
ಚಲ್ವಕಿರಿಯ ಥರಗಲ ಭುಜತೋ । ಳ್ಚೆಲ್ವ ಗಳಕದ ಪಕ್ಷಿ ಭ್ರೂಯುಗ ಕರ್ಣ
ಪೆರೆ ನೊಸಲೂ ॥ ಚಲ್ವ ನಾಸಿಕ ಪಟ ಫಲಾಧರ । ಚಲ್ವ ಕೇಶದ ಮೇಲೆ
ಸುಬಾ । ಗ್ಚೆಲ್ವ ನವಮಣಿ ಮಗುಟ ಕುಂಡಲ ವೆಸೆಯೆ ದಶರಥಗೇ ॥ ೬೬ ॥
ನಡೆಯ ಬಿಂಕದನುಡಿಯಚತುರತೆ । ಯಿಡುವ ಹುಸಿನಗೆಯುನಗೆಮುಖದಕಡು ।
ಬಿಡಗ ಚಂದ್ರನ ಚಂದ್ರಿಕೆಯ ಚಲ್ಲಾಡುತ್ತೈ ತರುವಾ ॥ ನೊಡನೆ ಶಣಸುವ
ನಯನಗಳು ಅಳ । ಪಡಿತ ಕೈತರದಿರವ ಕೈಕೆಯ । ಯಡೆಯ ಕಂಚುಕಿ
ಯುಚ್ಚರಿಸಿ ತೆಗಸಿದಳು ನೇತ್ರಗಳಾ ॥ ೬೭ ॥ ನೋಡುತಿರಲೀ ತೆರದಿ ಮೆ
ಲನೊಡ । ಗೂಡಿ ಯುಪಚಯ ಗೈದು ಹಸ್ತವ । ನೀಡಿ ಪಿಡಿದೆದೆಗೆತ್ತಿ
ವೀಣೆಯ ತಂತಿ ಶೃತಿ ಗೊಳಿಸಿ ॥ ಮಾಡಿದ ಮೃದು ಸ್ವರವ ತುಂಬರ ।
ರೊಡಲಭ್ರಕೆ ಸಭೆ ಸರಸಿ ಚರ । ಗೂಡಿಸುತ ಕೈಕಿಲೆಯ ಮನವನು ಸೂರೆ
ಗೊಳಿಸಿತ್ತೂ ॥ ೬೮ ॥ ನೋಡನೇಕೆಂನಾಸ್ಯ ವೀಣೆಯ । ನೋಡಲಿಚ್ಛೆ
ಲ್ಲೆಂದುಚಿಂತೊಡ । ಗೂಡಿದಳಕೈಗಿತ್ತು ಪ್ರಜ ಕಂಚುಕಿಯ ಮದಮತಿಯ ॥
ನೀಡಿ ನಿರಿ ನೀವಳಿಸಿ ಹಸ್ತೊಡ । ಗೂಡಿ ನಡಸಲು ಪಿತಗೆ ಸಂತಸ । ಗೂಡಿ
ಸೀಕ್ಷಿಸುತಿರಲು ಮದಗಜದಂತೆ ಸಾಗಿದಳೂ ॥ ೬೯ ॥ ಮೊದಲು ಬೆಂಡಾ
ಗಿರ್ದ ನೃಪರಾ । ಸುದತಿ ನಡೆತರ ಲಕ್ಷ್ಮಿ ಬಿಗುಹಿಡಿ । ದೊದರಿ ಮೈ
ಪುಳುಕಿತದಿ ಬೆಬ್ಬಚ್ಚುವರ ನೀಕ್ಷಿಸುವಾ ॥ ಚದುರ ನಯನಗಳಿಂದ ದಶರಥ ।
ನೆದುರು ಬರಲಾಸ್ಯೆಂದು ಕೋರಕ । ದೊದ ವಿನಕ್ಷಿಗಳಿಂದ ನೋಡಿದನವನಿ
ನಾಯಕನೇ ॥ ೭೦ ॥ ಅನಿತರೊಳ ಗೈತಂದು ಪ್ರಜಗೊಳ । ಕನು ಕರಿತಸಮ
ಯದಲಿ ಹಸ್ತೊಂ ॥ ದಿನಿಸು ತನು ಸೊಂಕಿತದಿ ಹೃದಿ ಜುಮ್ಮೆಂದು ರೋ
ಮಾಂಚಾ ॥ ಕೊನೆಯುತಿರಲೊಧುವರರ ನೀಕ್ಷ್ಯಂ । ದನವ ನಡಸಲು
ರಾಜಕೈದ । ಲ್ಜನಪನಡಿ ಶರಣೆಂದು ನಡೆದರು ರಾಜಸಭೆ ಸಹಿತಾ ॥ ೭೧ ॥
ಕಲಿಲಹರ ಮುನಿಸೂಪ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ ।
ರೊಲವನೀ ಕರ್ಣಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರ

ಸ್ಸಾಗರ । ರೊಲಿಪು ವಿರಚನೆಗೈದರಿದ ಮನ । ಮೊಲಿಪು ಲಾಲಿಸಿ ಮುಕ್ತಿ ಯುರಸನ ಕಥೆಯ ಸದ್ಬುಧರೂ ॥ ೭೨ ॥

ಅಂತು ಆಸ್ವಾಸ ೩ ಕ್ಕಂ ಪದನು ೧೬೦ ಕ್ಕಂ ಮಂಗಳಮಹಾ. ಶ್ರೀ.

ನಾಲ್ಕನೆಯ ಸಂಧಿ.

ರಾಮಸ್ವಾಮಿ ಜನನಾ.

ಕೀರ್ತಿಲಕ್ಷ್ಮಿಯ ಕಾಂತಿಗನುಸರ । ಮೂರ್ತಿ ರಾಮಾಭ್ಯುದಯ ವ ವ್ಯಾ । ವರ್ತಿಸುವೆ ವಿಸ್ತಾರದಿಂದತಿ ಲೀಲಲಾಲಿತದೀ ॥ ಪಲ್ಲವಿ ॥

ಭುವನಪತಿ ಯವಧರಿಸು ಸ್ವಯಂವರ । ಯುವತಿಗೆಲಿ ದಶರಥನು ಬಂದಿ । ರ್ದವರು ತೆರಳಿದರಿತ್ತ ಗೃಹಕ್ಕೈತರುತ ರಥದೊಳಗೆ ॥ ಯುವ ತಿಸಹ ಕುಳಿತಿರುವ ಭೂಭುಜ । ನವಯುವದಾ ಲಾವಣ್ಯವನು ಪು । ರಯು ವತಿಯವರರಿದಾ ಶ್ಚರಿಸುತಿರ ಲೈದೆ ವೀಥಿಯಲಿ ॥ ೧ ॥ ಕಾಮ ಸನ್ನಿಭ ನಡೆ ಯ ರತಿ ಸುಮ । ನಾಮನೋಹರಿ ಕೂಡಲವರತಿ । ಪ್ರೇಮಕೆಡೆ ತಡೆ ಗಾಣದೆನು ವರನಯನ ಸೂನುಗಳಾ ॥ ಲಾ ಮನೋಜಾಂಗನೆಯ ರರ್ಚಭಿ । ರಾಮದಿಂ ನಡೆದಿಳಿದು ರಥಗೃಹ । ಕಾ ಮನೋಹರ ರತ್ನದಾರತಿ ಬೆಳಗ ಲೈದಿದರೂ ॥ ೨ ॥ ರತ್ನಖಚಿತದ ಮಂಟಪವು ಅತಿ । ನೂತ್ನವಾಗಿರೆ ಲದರೊಳುದ್ವಹ । ದೆತ್ನದಿಂ ಕೈಧಾರೆಯರೆಯುತ ಹೋಮಬಲಗೊಳಿಸೀ ॥ ರತ್ನ ಹಸೆಯೊಳಗಿರಿಸಿ ಲಾಸ್ಯಾ । ಧೃತ್ನಮಂಗಲದಿಂದ ನಾಲ್ದಿನ । ನೂತ್ನ ಗೈದಂತೆಸೆಗೆ ನಾಗ್ಬಲಿ ಶಾಂತಿಕರ್ಮಗಳಾ ॥ ೩ ॥ ವಿತಚಿಸಲು ಹರಿ ಸರಸಿಜೆ

ಯು ಹಿಮು । ತರಳೆಗೊರವೆಮರೀಂದ್ರ ಶಿಚಿ ಸುಖ । ವೆರೆ ದರತಿ ಪ್ರದ್ಯುಮ್ನ
ರಂದದಿ ಚಕ್ರವಾಕಗಳಾ ॥ ಯರಕದೊಳು ಕೈಕಿಲೆಯ ರತಿಸುಖ । ವೆರಸಿ
ದಶರಥನಾದಿ ಸತಿಯರ । ಮರೆದ ನಿಜಪುರಸಹಿತ ಲವನೀನಾಥ ಚಿತ್ತೈ
ಸೂ ॥ ೪ ॥ ಇರಲಿ ಹೀಗತ್ತಿಲ್ಲ ವಿಷಯದ । ಹರಿ ಪುರದ ಮಯ್ಯೂರ
ಕೇಶನ । ನರಸಿ ಲಕ್ಷ್ಮೀಮತಿಗೆ ಪುಟ್ಟದ ಸುತೆ ವಿಲಾಸಾಸ್ತ್ರ ॥ ನರ
ಸಿಯನು ಲಜ್ಜಿಸುತ ಲಪ್ಸರೆ । ಯರುಗಳಂಗ ಛವಿಯತನು ಮಿಂ । ಚರ
ಿಸೊಗಸುವ ತೆರದಿ ಲಕ್ಷ್ಮಣೆಯಂಬಳೆಸದಿರಲೂ ॥ ೫ ॥ ಕೂಡಿ ಬರಲೆ
ಳೆವಯದ ಸುತೆ ನಡೆ । ನೋಡಿಶೆಕುನಿಗನೀಕ್ಷಿಸಲು ಶ್ರುತಿ । ಮಾಡಿದನು
ಕೈಕಿಲೆಯ ನೊಲಿಸಿಪ ನೀಕೆಗೊರನೆಂದೂ ॥ ಆಡಿದಂತಾ ಸಮಯದನುಸರ ।
ಗೂಡಿ ಹಂಸಧ್ವಜನು ಸುತೆಯೊಡ । ಗೂಡಿ ಬಂದರಿಸೆಲ್ಲ ಉದ್ವಹ ಗೈದ
ದಶರಥಗೆ ॥ ೬ ॥ ಮಂಗಳವನಿಪ ನಾತ್ಮಜೆಯರೂ । ಹಿಂಗೊಳಿಪ ಲಕ್ಷ್ಮ
ಣೆಯ ರತಿಸುಖ । ಸಂಗ ಸುಧೆ ಕೇಳಿಯೊಳು ಕ್ರೀಡಿಸುತಿರ್ದ ದಶರಥನೂ ॥
ಸಂಗಡಿಗರು ಲುಹಿಂದ ನಿಜಬೀ । ಡಿಂಗೆ ಗಮಿಪುದ್ಯುಕ್ತ ವರಿದವ । ರಿಂಗೆ
ಬಳುವಲಿ ಸಖಿಯರಿತ್ತರನೇಕ ನಿಜಪಿತರೂ ॥ ೭ ॥ ತೇರನೇರಿಸಿ ರಾಜ
ಹಂಸನ । ಸಾರಿ ಕೆಡಬಲಕೈಕೆ ಲಕ್ಷ್ಮಣೆ । ನೀರೆಯರ ಕುಳ್ಳಿರಿಸಿ ಯೆತ್ತಿದ
ಛತ್ರ ಚಾಮರವೇ ॥ ಕ್ಷೀರನಿಧಿ ಸುಕುಮಾರ ತೆರೆಯಾ । ಕಾರವಾಗಿರೆ ಕಡ
ಲವೊರವೆನೆ । ತೂರಿಯ ತ್ರಯದಿಂಪಿನೊಳು ಪ್ರಸ್ಥಾನಗೈಸಿದರೂ ॥ ೮ ॥
ಸುತ್ತಿದವನಿಪ ಭಗಣ ಗಣ ಮ । ಧ್ಯತ್ತ ಹಿಮಕರನಂತೆ ಬಹು ಕಳೆ ।
ವೆತ್ತ ದಶರಥನುಭಯ ಭಾಗದಿ ತಾರೆ ರೋಹಿಣಿಯಾ ॥ ರುತ್ತಮದ ತಿಳು
ವೆಳಗೆಯರ ಪಿತ । ರೊತ್ತಿನಲಿ ಕೆಲದೂರ ಕಳುಹುತ । ಪತ್ತನಕೆ ತಿರು
ಗಿದರು ಹಂಸಧ್ವಜನು ಮಂಗಳನೂ ॥ ೯ ॥ ಮಾರ್ಗದವನಿಪರ ಸಮ ದಶ
ರಥ । ಗೆರ್ಗಿ ಕಾಣ್ಕೆಯನಿಟ್ಟು ಸ್ವಬಲದಿ । ನಿರ್ಗಮಿಸುತಲ್ಲಲ್ಲಿ ಗುಡಿತೋ
ರಣಗಳರವಟಿಯಾ ॥ ವರ್ಗದೊಳು ವಿಶ್ರಮಿಸುತೈತಹ । ನರ್ಗಳವನರಿ
ಪೈದಯೋಧ್ಯೆ ಜ । ನೆರ್ಗಿದರ ಮನ್ನಿಸುತ ನಡೆದನು ಕವಿಕದಂಬಕನೂ
॥ ೧೦ ॥ ಈಕ್ಷಿತರ ನಯನಾಮೃತವನ । ದ್ಯಕ್ಷದೊಳಗಿತ್ತುಭಯ ಭಾಗ
ಸು । ಲಕ್ಷಣೆಯ ರಾರತಿಯ ಪಿಡಿದರನುಚಿತ ಮನ್ನಣೆಯಾ ॥ ಲಕ್ಷದೊ
ಳಗೈದುಭಯ ವೀಥಿಪ್ರ । ದಕ್ಷಣವ ಗೈದರಮನೆಯ ನಿಕ । ಟೀಕ್ಷಿಸಿ
ಳಿದ ನರಣ್ಯ ಸುಕುಮಾರಕನು ಸತಿಯರೊಳೂ ॥ ೧೧ ॥ ಅರಸು ಬಂದವನು

ರಘುಜನನ್ನಯು । ಪುರುಷ ಬಂದನು ಪುಷ್ಪ ಶರಸನು । ಸರಸ ಬಂದನು
ಯಿಂಪ್ರಬಲಯುತ ನಳಕೆ ನೈಸಿರಿಯಾ ॥ ಧರನು ಬಂದನು ಮಲತ ನೃಪ
ಸಂ। ಹರನು ಬಂದನು ಶರಣು ಜನ ಪಂ। ಜರನು ಬಂದನಯೋಧ್ಯಯ
ರಮನೆ ಗತಿ ವಿಲಾಸದಲೀ ॥ ೧೨ ॥ ಬಂದ ನೃಪ ನಡಿದಳಕೆ ಕೌಶಲೆ ।
ಹಿಂದೆ ಸೌಮಿತ್ರೆಯರು ವಂದಿಸಿ । ನಿಂದರಗ್ರಜರೆಂಬ ದಾಳಿಯರುಲುಹಿ
ನಿಂದರಿದೂ ॥ ವಂದಿಸುವ ಕೈಕಿಲೆಯು ಲಕ್ಷ್ಮಣೆ । ಯಂದ ನೇತ್ರಧರದಿ
ಬಿಗಿಯು । ಪ್ರೆಂದು ಹರುಷವ ಗೈದರಕ್ಕಗಳಕ್ಕ ರೊಗುಮಿಗಿಲೂ ॥ ೧೩ ॥
ಮೊದಲು ಕೌಶಲ್ಯೆಯು ಸುಮಿತ್ರೆಯು । ತುದಿಯು ಕೈಕಿಲೆಯಂತೆ ಲಕ್ಷ್ಮಣೆ ।
ಚದುರರೋರ್ವರಿ ಗೆಂದಲೋರ್ವರು ಮಿಗಿಲ ಚನ್ನೆಯರೂ ॥ ಸದಮಲೂರ್ವ
ಸಿರಂಭೆ ಮೇನಕಿ । ಗಧಿಕವಾದ ತಿಲೋತ್ತಮೆಯ ಚಂ । ದದಲಿ ರಾಜಿಪ
ಚಂದ್ರವದನೆಯ ರೆಸೆದರವನೀಶಾ ॥ ೧೪ ॥ ಕಾಮ ಶಾಸ್ತ್ರೋದ್ಧಾರೆ ಕೌಶ
ಲೆ । ನೇಮದಿಂ ಲೇಖಿಸುವ ಸೌಮಿ । ತ್ರೂ ಮಿಸಲು ವ್ಯಾಖ್ಯಾನ ಕೈಕಿಲೆವಾ
ಚೆಲಕ್ಷ್ಮಣೆಯು ॥ ಪ್ರೇಮದಿಂ ರತಿಬಂಧದೊಳು ಸಮ । ನಾ ಮನೋ
ಹರದಿಂದ ಕಲೆಯಭಿ । ರಾಮದಿಂ ದಶ ಚುಂಬನಷ್ಟಾದಶ ಸುಬಂಧಗಳಾ
॥ ೧೫ ॥ ಕಲೆಯನರಿದೊಡಗೂಡಿ ನಿಜಪ್ರಿಯ । ನೊಲುಮೆಯನು ಸಮಕೇಳಿ
ವಯ ರೂ । ಪ್ಲಲಿತ ದೊಳಗಿಟ್ಟಿಹರು ಸರಿನೆರದಿರಲು ನಾಲ್ವರೊಳೂ ॥ ಕಲ
ಹ ನಗೆ ಮುನಿಸೊಲಹು ಚುಂಬ । ನ ಲಲಿತ ರತಿಯು ಪರತಿಯೊಳಗಿನಿ ।
ಸೊಲಿಯುಪಲಿ ಬಳಲಪಲಿ ಕೈಕಿಲೆ ಕೂಡಲೊಂದಿಪಸಾ ॥ ೧೬ ॥ ನಿಂದು
ದ್ವಾಕೆಯೊಳರ್ದ ಪ್ರಿಯ ಮ । ತ್ತೊಂದಿಗರೊಳಿಂ ನರ್ವವಂದಿನ । ಸಂದು
ಗೊಡವಾ ನೋವ ಪೆರಸಿವ ಲಲ್ಲೆಗತಿ ಮೆಚ್ಚೀ ॥ ಮಂದಗಮನೆಯೆ ಜೋಡು
ಮೆಚ್ಚೀ । ನೆಂದ ಪ್ರಿಯನಾಸಕ್ತ ವರಿದಿಂ । ತೆಂದ ಛಿಟ್ಟರಿ ಕೋಶದೊಳು
ಜೀಕಾಹತನಕೆನ ಲೂ ॥ ೧೭ ॥ ಮೆಚ್ಚಿ ಮೆಚ್ಚು ಮುದದಿಂದ ಮುದ್ದಿಸಿ । ಕಚ್ಚಿ
ಕವಪೇಕಾಗ್ರ ಸುಖ ಮನ । ಮೆಚ್ಚಿ ನಾಲ್ವರೊಳ ಸಮಕೇಳಿ ಸುದಾಬ್ಧಿ
ಯೊಳು ನಲಿಪೂ ॥ ಇಚ್ಚೆ ಯಿದ್ಧಂತಿರುತ ಪರಸುಖ । ದೆಚ್ಚರವ
ಮರೆಯುದಲೆಧರಗತಿ । ಪುಚ್ಚನಾ ಗೆರಗಿಸುವ ನೆಲ್ಲರ ರಾಯದಶರಥನೂ ॥೧೮॥
ಸೋಡಲಿಂನಾನಾಗ ಲೈತಹ । ನಾಡ ನಾಯಕರೆಲ್ಲ ಕಪ್ಪವ । ನೀಡುವರೆ
ಸಾಷ್ಟಾಂಗವಲಿ ವೈಸೀಡಿ ಕೈಮುಗಿದೂ ॥ ಮಾಡೆ ಹಯ ಗಜ ಖಡ್ಗ ಕಾಣ್ಕೆ
ಯು । ನೀಡಿ ಯುತ್ತಮ ರತ್ನ ಭೂಷಣ । ಮಾಡಿ ಯುಪಚರ ಗೈವ

ದಶರಥನಾದ ಭೂಭುಜರಾ ॥ ೧೯ ॥ ಶೂರರೊಳಗತಿ ಶೂರ ಶಾಸ್ತ್ರ ವಿ। ಚಾರ ಧರ್ಮೋದ್ಧಾರ ಗುರುಪದ । ವಾರಿ ಜಳಿ ಪರನಾರಿಸೋದರ ಸತ್ಯ ಪಾಚಕನೂ ॥ ಮೀರಷಟ್ಕರ್ಮಗಳ ಹಿರಿಯರು । ದಾರಿಯರನನುಸರಿಸಿ ಕೀರ್ತಿಯು । ಧಾರ ದಿಕ್ಕುಂಭಿಗಳ ಕುಂಭಸ್ಥಳದಿ ಮೆರಸಿದನೂ ॥ ೨೦ ॥ ಎಲ್ಲಿ ರಘುದ್ವಹನಂಕಮಾಲೆ ಗ । ಳೆಲ್ಲಿ ಕೌಶಲ್ಯೇಶನುರುತರ। ವೆಲ್ಲಿ ಸೌಮಿತ್ರಂಗರಕ್ಷಕ ನಮಲ ತೇಜಗಳೇ ॥ ಯೆಲ್ಲಿ ಕೈಕಿಲೆಯರಸ ನಾಡಳಿ । ತೆಲ್ಲಿ ಲಕ್ಷ್ಮಣೆ ಪ್ರಿಯನ ಘೋಷಣ । ವೆಲ್ಲಿ ರಾಜ್ಯದ್ರಾಜ ಜನಜನಿತೆಲ್ಲ ಕಡೆಯಲ್ಲೀ ॥ ೨೧ ॥ ಇನಿತು ಭೋಗನು ರಾಗದಿರುತೊಂ । ದಿನದಿ ಕೌಶಲ್ಯಾಂಗನೆಯ ಕೇ । ತನಕೆ ನಡೆತಂದಂಗ ನೋಲಗಸಾಲೆಯೊಳು ಕುಳಿತೂ ॥ ವನಿತೆ ಬರವರಿಯಪಲಿ ಸಂಶಯು । ವನು ಕರಿಸಿ ಕಂಚುಕಿಯ ಮುಖದ । ಕ್ಕೊನೆಯ ಕುಡಿಯಾಡಿಸಲು ನೇತ್ರದ ಸಂಜ್ಞೆಯನು ತಿಳಿದೂ ॥ ೨೨ ॥ ಯರಗಿ ದಶರಥ ನಡಿಗೆ ಖತಿ ಗೊಂ । ಡಿರುವಳೆನೆ ಕೌಶಲ್ಯೆ ತತ್ಕಥ । ದಿರವ ಬೆಸಸೆನಲು ದಯದೊಳು ಜಿನ ಚೈತ್ಯ ದರುಶನಕೇ ॥ ತೆರಳಿಪುಗಲಾದೇಗುಲದ ಮುಂ । ದಿರುವ ಕೈಸಾಲೆಯಲಿ ಶ್ರೀಧರ । ಗುರುಗಳೋದಿಸುತಿರಲು ಸುಕುಮಾರಕರ ನೀಕ್ಷಿಸುತಾ ॥ ೨೩ ॥ ನಿಂತಳಲ್ಲೋರ್ವನಿಗೆ ಕಾವ್ಯದ । ಚಿಂತನೆಯು ತರ್ಕಿಗರು ನಾಟಕ । ವಂತ ಸೂತ್ರಾಲೋಚನಾದಿಯ ಶಾಸ್ತ್ರಸಾರಗಳಾ ॥ ಚಿಂತಿಸುವರೋ ರೋರ್ವ ರೊಪ್ಪಿಸು । ವಂತ ಗ್ರಂಥಗಳ ಪರದಲಿ ಕೇ । ಳ್ವಂತ ಸುಕುಮಾರಕರ ಲೀಲೆಯ ನೋಡಿ ಕೌಶಲ್ಯೇ ॥ ೨೪ ॥ ಮುದವ ಮುಣ್ಮಿಸುತಿರಲು ನಡೆತಂ । ದ್ವಿದತಿಯೋರ್ವಳು ಕಂದ ಹಸಿದನು । ವೊದಗಿ ಮೆಲುಗೊಟ್ಟಳುಹಿ ಕೊಡುವೆನು ದೇವ ಕಳುಹೆನಲೂ ॥ ಸದಯದೊಳು ಬೀಳ್ಕೊಡಲು ನಿಜಗುರು । ಪದಕೆಯರಗೈ ತರುವ ಕಂದನ । ಯದುರಿಗೈ ದಪ್ಪಪ್ಪಿ ಮುದ್ದಿಸುತೆತ್ತಿ ಕೊಂಡೈದೇ ॥ ೨೫ ॥ ಮಡಿಲೊಳಗೆ ಚಣಿ ಮಿಂಡಿ ಬಟ್ಟಲೊ । ಳಡಸಿ ಚಲಿಪಾಳ್ಗಿಂಡಿ ನೀರನು । ಪಿಡಿದು ಬಂದಿಂನೋರ್ವ ಸತಿ ಸುತನ ಸ್ತ್ರಸೈಗ್ನೆಯಲಿ॥ ಯಡೆಗೆ ಕರೆದಿಬ್ಬಾಯ್ಗೆ ಕದಪನು । ಪಿಡಿದು ಚುಂಬಿಪ ಲೀಲೆ ಗಾತಿಯ । ರಡವ ನಾಲೋಕಿಸುತ ಪ್ರೇಮರದಿರಲು ಕೌಶಲ್ಯೇ ॥ ೨೬ ॥ ಹೀಗೆ ಹೀಗಾತ್ಮಜರ ಬೊಬಳಿ । ಗಾಗಿ ಬಹ ಸುದತಿಯರ ಸುಕುಮಾ । ರಾಗಮಗಳರಿದಾಸ್ಯ ಪುಳುಕಿತಳಾಗಿ ದೇವರನೂ ॥ ರಾಗದಿಂ ಬೀಳ್ಕೊಂಡು ದುಗು

ಡಮ । ನಾಗಿ ಪಾಲಕಿಯೇರಿ ಗೃಹಮುಖ । ಳಾಗಿ ಬಹ ಸಮಯದಲಿ ಗರುಡಿಯ ಸಾಲೆ ಯಡೆಯಲ್ಲೀ ॥ ೨೭ ॥ ಪಿಡಿದ ಸಾಣಾ ಕತ್ತಿ ಚಕ್ರಗ । ಳಿಡೆಯ ಧನು ಶೃಂಖಲೆಯು ಪರಶುಗ । ಳಿಡೆಯ ಸಾಗಿಟ್ಟೊಂತ ಮುದ್ಗರ ವಾದಿ ಯಸ್ತ್ರಗಳಾ ॥ ಪಿಡಿದು ಸಾಧಸೆಗೊಡುತ ಕೊಡತಿಯ । ಪಿಡಿದು ತಿರುಹುವ ರಡೆಯ ಕಂಭವ । ತೊಡಗಿ ಯಾಡುವ ಸುತರ ಕಂಡಳು ಕಾಮಿನೀಮಣಿಯೂ ॥ ೨೮ ॥ ನಿಂತಳಲ್ಲಾಶ್ಚಗಳು ಕಾಲುವೆ । ಯಂತೆ ದಾರಿ ಡಲೆನಗೆ ಯಾತ್ಮಜ । ಚಿಂತೆಯಿಲ್ಲೆಂದ್ಗದ್ಗಗಳದಲಿ ಮೇಲುದನುಯಳೆದೂ॥ ಭ್ರಾಂತಗೊಂಡಳು ಮುನ್ನ ವ್ರತ ಗುಣ । ವಂತೆಯಾಗದ ಲೀಗ ವಂಬಲಿ । ಪಂತ ಪುಣ್ಯವನೋಂತ ಫಲವೆಂದೈದಿ ಯಾಲಯಕೇ ॥ ೨೯ ॥ ಆರ ಸುತ ರಾನಂದಕನು ಬಡ । ಲಾರದೆ ಸ್ನೈಹಿಸಿದ ಫಲ ಫಲ । ದೋರಿತೋ ಗರ್ಭಗದಂದದಿ ವಕ್ರಮುದ್ದಿಟ್ಟೊ ॥ ಕಾರಣವೊ ಕೈಯ್ಯಾರೆ ಸುತರಪ । ಹಾರಿಸಿದ ಫಲಫಲಿತ ವೆನಗೆ ಕು । ಮಾರ ರಾನಂದಿಲ್ಲ ವೆನುತಲುಬಿದಳು ಮರುಮರುಗೀ ॥ ೩೦ ॥ ಕರವೆನಾರನು ಕಂಡ ಬಾರೆಂ । ದ್ಕರವೆ ಸಾರಾತ್ಮಜನೆ ಬಹುಹೊ । ತ್ತೆರಳಿ ತೋದುತ ಬಳಲಿದ್ದೈ ಬಾಯಂದು ಮುದ್ದಾಡೀ॥ ವರಸಿ ಲಪನವ ತಡಹಿ ವ್ಯೆಯ್ಯನು । ತರಗು ಚಕ್ಕುಲಿ ಕರ್ಜಿ ಕಾಯ್ಗ್ಗಳ । ಕರಕೆ ಬಾಯ್ಗನುವರಿಸಿ ಕೊಡಲಾಗ್ಗೆಂದು ಮರುಗಿದಳೂ ॥ ೩೧ ॥ ಯತ್ತ ಪೋಧಾತ್ಮಜನು ಪಾಲ್ಪನಿ । ಯೆತ್ತಿ ಮಲೆ ಬಿಗು ಪೇರಿದವು ಬೇ । ಗಿತ್ತ ಕರತಹು ದೆನುತ ಕರದಿಂನಾರ ಮಲಗಿಸುವೇ ॥ ನೊತ್ತಿನಲಿ ಯೆತ್ತೆತ್ತಿ ಮುದ್ದಿ । ಟ್ಟತ್ತು ಕೆನೆ ನವನೀತವನು ಕದ । ಪೊತ್ತಿ ಮುದ್ದಿಸ ಪಡೆಯಲಿ ಲ್ಲೆಂದಲುಬಿದಳು ಕೌಶಲ್ಯೇ ॥ ೩೨ ॥ ಅಂಗಭವರ ಗಲಾಲಯರು ಪ್ರಿಯ । ರಿಂಗೆ ಸಂಗಟವ ಹಿತಜನ ನೃಪ । ರಿಂಗೆ ಸಂಭ್ರಮ ವನಿತೆ ಯರಗೀಗ ಸದ ಳದೊಳಾಳಾಪಾ ॥ ಸಂಗಡಿಪುದಿದಕಿಂದ ತರು ಗು । ಲ್ಮಂಗಳುತ್ತಮವೆಂದು ಹಳವಳಿ । ಪಂಗನಾಮಣಿ ನೋಡಲಾರವನೀಶ ದುಗುಡವಲಿ ॥ ೩೩ ॥ ಮೂಪಿಸುವುದಾ ನನವು ನಿಲಲೆಡೆ । ಯಾ ಪದತಿ ಭೀತದಲಿ ಹೊರಹೊರ ॥ ಗೀಪರಿಯ ಸಂಚಾರಗೊಳುತಿಹೆ ವಂತರಾಲಯದೀ ॥ ಪೋಪಳೇ ಪರ್ಯಂಕದೊಳಗೆ ಕ । ಲಾಪ ಗೊಳುತಿಹಳೆಂದು ಕಂಚುಕಿ । ವ್ಯಾಪಿತೋಕ್ತ್ತವ ಕೇಳಿ ಕಡು ಮರುಕದಲಿ ದಶರಥನೂ ॥ ೩೪ ॥ ಪುತ್ರರಿಲ್ಲದ ಜನ್ಮವದು ವೆಸ್ವ । ಪಾತ್ರಕಲ್ಲವ ಯೋಗ್ಯ ಲೀಲೆಸ । ಳತ್ರ ಮರೆವುದೆ ರಾಜ್ಯಭಾರ ಕು

ಭಾಗ್ಯದನುಭವಕೂ ॥ ಮಿತ್ರರಾರ್ನದಿದರಿಯ ತನು ಸಮ । ಗಾತ್ರವೆಂದಾ ಳಾಪವನು ಮನ । ಗೊತ್ರಿಸಿದ ದಶರಥನು ಸುತ ಮೋಹಾನು ತಾಪದಲೀ ॥ ೩೫ ॥ ಮಕ್ಕಳಿರದಾಲಯವು ಪರಭೃತ । ವಕ್ಕಿಕೀರಿರದೊನವುದೇವರ। ಸಿಕ್ಕದಿಹ ವಸದಿಗಳು ಸನ್ಯುಕ್ತಿಸ್ವರದ ವಿಗ್ರಹವು ॥ ತಕ್ಕವಲ್ಲಾದಿಯಲಿ ವಿ ಗಿಲರ । ಳಿಕ್ಕದಾತ್ಮಜ ರಾಶೆ ಬಕ್ಕಟ । ವಕ್ಕುದೆಂಬಳವಳಿಗೆ ಗೊಳಲಾಗ ವಸಿನಾಯಕನೂ ॥ ೩೬ ॥ ಛಲಪ ವಿಲ್ಲಾತ್ಮಜರ ಪಡೆಯದ । ಲಲನೆ ಪುರುಷರಿಗಾರರಾಜ್ಯಕೆ । ನಿಲಿಸುವೆಲೆಕಂಚುಕಿಯೆ ಯಂಮನ್ವಯದರಾಜರಿಗೇ ॥ ಕುಲಜರಿರದಿಲ್ಲಂಗನೆಗೆ ಫಲ । ಫಲಿಸದಾ ಶ್ರಮಕಾಲಯದ ಮನವ । ನಿಲಿ ಸುವರು ಯೇಂಪೇಳ್ವೆ ಸಖಿ ಚಿತ್ತೊದಗಿತೆನಗೀಗಾ ॥ ೩೭ ॥ ಹ್ಯಾಗೆ ಗೈಲೆನ ಗಿನಿತು ವಾಕುಲ । ವಾಗಿ ತೋರುವುದಕಟ ಸತಿಯರ । ರಾಗವಿಮ್ಮ ಡಿಯೈಸೆ ಸುತಮೋಹಾನು ಬಂಧದಲೀ ॥ ಬಾಗಿಹಳೊ ಬಳಲಿಹಳೊ ಕಳವಳ । ವಾಗಿಹಳೊ ಸುಕುಮಾರನಾಸೆಗೆ । ನಾಗುವಳೊ ಪ್ರಿಯಳೆಂದು ಅಂತಃಪುರಕೆ ನಡೆತಂದು ॥ ೩೮ ॥ ಕುಳಿತು ಮಂಚದಿ ಯೆತ್ತಿ ಸಖಿತೊ ಡೆ। ಯೊಳಗೆ ಕುಳ್ಳಿರಿಸೊತ್ತಿಕದಪನು । ಸುಳಿಗುರುಳನೇ ವರಿಸಿ ನೋಡಿದ ನಾಸ್ಯ ಶತಪತ್ರಾ ॥ ಬೆಳಗ ನುಳಿದಂತಿರುಳ ನಗಲಿದ । ಕಳೆಯ ಕುಮು ದಿನಿಯಂತೆ ಶೋಭೆಯ । ಗೊಳಿಸಿ ಹಿಮ ಪಿಕದಂತೆ ಯಸದಿರಲಾಗ ಕೌಶ ಲ್ಯೆೀ ॥ ೩೯ ॥ ಮುದ್ದಿಸಲು ಮುಖ ವರಳದಲೆಯನು । ಬದ್ಧದ ದರಗಳರಿಡು ದುಗುಡಮಿ। ದೆದ್ದ ಕಾರಣವೇನು ಪ್ರಿಯೆ ಯನಲುಲಿಯುದಳ ಸಖಿಯು ॥ ರಿದ್ಧಕಡೆಗೀಕ್ಷಿಸಲು ಭಯಕನು । ಬದ್ಧರಾಗಿಹೆ ವರಿಸಲದನೆನ ! ಲಿದ್ದವ ದರುವಭಯ ನಲು ಸುತದೋಹಳವನಾಕ್ರಮಿಸಿ ॥ ೪೦ ॥ ತಾಪ ಬಡುತಿಹ ಳರಸಿಯನಲು ಕ । ಲಾಪಮುಪಹರಿಪೆನ್ನವನು ಆ । ಪ್ತೋಪನುಲಿ ದಾದಿ ಯಲಿ ಜಿನಮುನಿ ಶಾಸ್ತ್ರ ವರ್ಚಿಸದೇ ॥ ಈಪರಿಯ ಸಂಪದ ಗಳೆಮಗಿಂ । ನಾಪವೇಯಂಮನ್ವಯಾಗನು । ಕಾಪದಿಲ್ಲಿಗ್ನ್ಯ ಸಮುಸವ್ಯಗ್ಪ್ರಗ್ಪಿಲಾಸರಿಗೇ ॥ ೪೧ ॥ ಕುಂದದನ್ವಯ ಮಧ್ಯದೊಳಗೆಂ। ದೆಂದಿಗೋರ್ವನು ಕುನಯ ಮಾರ್ಗನು । ಬಂದರಾದರ ನೋಕ್ತಮೊಳು ಕೇಳಿಲ್ಲ ಸದ್ಧರ್ಮಾ ॥ ಸಿಂಧುಗಳು ನೀನಬ್ಧಿ ಚಾರೆ । ತ್ರೀಂದುಮುಖಿ ನಿನಗಾತ್ಮ ಭವರಹ। ದೊಂ ದು ಆಶ್ಚರಿಯಲ್ಲ ಸುಮನೋಲ್ಲಾಸೆಯನೆ ಪ್ರಿಯನೂ ॥ ೪೨ ॥ ಆದುದೇ ಕಾಲೆಳೆವಯದಿ ಬಂಯ। ಕಾದರೇ ನೊಂದೆರಡು ವರುಷದೊ । ಳಾದನಾ

ತ್ರಜನಷ್ಟರೊಳೂ ಸಂತಾಪ ಬಡಲಪರಾ ॥ ವಾದ ವಯದಾಲೋಚನೆಯ
ನೀ। ನಾದಿಯಲಿ ಬಳಸುವರೆ ಯನೆಹೊರ। ತಾದಪರೆ ಸುಕುಮಾರ ರೆನ
ಲವನೀಶ ನಸುನಗುತಾ ॥ ೪೩ ॥ ಚಿಂತೆ ಸುಖಕೊಳ ಗಾದರೀರ್ವರ।
ದಂತಿಳಿದು ಘನದುಂಮುಳವನೆನ। ಗಂತರಿಸಲಾ ನಾಪ್ತನಲ್ಲವೆ ಯುಕ್ತಿ ಮು
ದ್ದಿಸುವಾ ॥ ಭ್ರಾಂತೆ ನೀನಾತ್ಮಜರ ಕೀರ್ತಿಯ। ನಾಂತರೆಲ್ಲಾ ವೈಸೆ ನಿನ
ಗುಭ। ಯಾಂತ ಸುತ ಸೋಹುಂಟು ಕುಂಜರ ಗಮನೆಯನುತರಸೂ ॥ ೪೪ ॥
ಬಿಡು ಬಿಡೆಲ್ಲಾದಿಯಲಿ ಕಂಚುಕಿ। ನುಡಿದ ಮಾತಿನಲಂತರಂಗದ। ನಡೆ
ಯತಿಳಿದಿಹೆ ನಂಗನಾಮಣಿಯೆಂದು ಮುದ್ದಿಸುತಾ ॥ ಪಿಡಿದು ಗಲ್ಲವ ನಲು
ಗುತವರಸ। ನಿಡವಿಗಿಡಲೇ ಸಾನು ಜನ್ಮವ। ತೊಡಗಿ ಫಲವೇನೆಂದು ಮು
ರುಗುತ ನಗಲು ಕೌಶಲ್ಯೆ ॥ ೪೫ ॥ ಮಿನುಗಿಸೆಳೆ ನಗೆಯನ್ನು ಲಲಿತದಿ।
ವನಿತೆ ಮನ ಸಂತೈಸಿಯಾ ಮರು। ದಿನದೊಳಾಸ್ಥಾನದಲಿ ವಿನಿಯೋಗದಲಿ
ವಾಲಗವಾ ॥ ನನುಗೊಳಿಪ ಸಮಯದಲಿ ವರ। ಕ್ಷನುನು ಸುವಿನೊ
ಳಗೈತಂದು ಆಶ್ಚರಿ। ದಿನಸಮುಂದಿಟ್ಟೆರಗಿ ಪೇಳಿದನಿಂತು ದಶರಥಗೇ ॥ ೪೬ ॥
ವೇದ ಚಾತುರ್ಥಗಳು ಮಿಳಿತವ। ದಾದ ತೆರದಧ್ಯಾತ್ಮ ಮೂರ್ತ್ಯನು।
ವಾಧ ಯಮಧರರೆಂಬ ರವಧಿಜ್ಞಾನ ಸಂಯುತರೂ ॥ ಪಾದವಿಡಲೈನೂರು
ಯತಿ ವೃಂ। ದಾದರ ದೊಳೊನತಳಿತು ಕೋಮಲಿ। ತಾದುದಾಗಳೆ ದಿ
ವ್ಯತೋಯದಿ ಸರಿಸಿ ಪೂರಿಸಲೂ ॥ ೪೭ ॥ ಕುಸುಮ ತಳಿರೆಳೆಗಾಯಿ ಪಣ್ಣ
ಳು। ಕುಸುರಿ ವಿಕಸಿತ ಪದ್ಮಗಳ ಕಂ। ಪೆಸೆಯ ಲಳಿ ಝೇಂಕರಿಸಿ ಗಾನ
ದಿ ಪಾಡೆ ಶುಕಪಿಕವೂ ॥ ಹಸಿತ ನರ್ಥನಗೊಳಲು ಹಂಸೆಗ। ಳು ಸುರಲಸ
ದಳವಾದ ಕೌತುಕ। ವೆಸೆವುದಾರಾಮ ವನಿನಾಯಕನೆನಲು ವನಪಾಲಾ ॥ ೪೮ ॥
ಕೇಳಿ ತದ್ವಚ ಕಾಸನವ ನಿಳಿ। ದೇಳು ಪದವೈ ದೆರಗಿ ತತ್ಕಥ। ನಾಳಿಗಿತ್ತ
ಮಲಾಂಗ ಭೂಷಣ ವಾಗಲಾನಂದಾ ॥ ಮೇಳ ಗೈಸಾ ಸ್ಥಾನ ಪುರ ಜನ।
ಕೇಳಿ ನಡೆತರಲಂಗನರು ನಲ। ವಾಳಿ ಬಂದರು ಪ್ರಿಯನ ಸಂನಿಧಿ ಗವನಿನಾ
ಯಕನೆ ॥ ೪೯ ॥ ಸಿಂಧುರದ ಮಸ್ತಕದಿ ನಾಲ್ವರ। ವಿಂದುಮುಖಿಯರು
ಸಹಿತ ಹಿಮಕರ। ನಂದ ದಶರಥ ಚತುರ ರೋಹಿಣಿ ಸತಿಯರೊಡನೇರಿ॥
ಬಂದುತೂರ್ಯ ತ್ರಯದಿ ಪರಿವೃಡ। ನಂದ ದೊಳಗಿಳಿದಾನೆಯನು ನಡೆ।
ತಂದುಸತಿಯರ ಬಳಸಿನೊಳಗಾರಾಮ ವೀಕ್ಷಿಸುತಾ ॥ ೫೦ ॥ ಮುನಿಗಳ
ಶಿಖಯುಶಾಸ್ತ್ರ ತಳಿ ಪೂರ್ಣ। ಗೊನೆಗಳೆಂಬಿನ ಶೃಂಗರಕೆ ತೂ। ರ್ಯನಿಸುತಿಹ

ಅಳಿಗಿಳಿಯು ನರ್ತನ ಗೈವ ಹಂಸಾಳೀ ॥ ಯಸುಗಳಂಗನೆಯರಿಗೆ ತೋ
ರಿಪ । ವಿನಯದೊಳಗೈತಂದು ಮುನಿಪತಿ । ಗನುವಿಲಾ ನಮ್ರಿಸಿದ ದಶ
ರಥ ಕುಳಿತನೆದುರಾಗೀ ॥ ೫೧ ॥ ಕುಳಿತರಿತ್ತೆರದಲ್ಲಿ ಸತಿಯರು । ಕುಳಿ
ತರಲ್ಲಲ್ಲ ನೃಪರು ಜನಸಂ । ಮಿಳಿತ ಗೊಂಡಿರಲಾಗ ಧರ್ಮ ಶ್ರವಣ ಭವ್ಯ
ರಿಗೇ ॥ ತಿಳುಹಿತಿರೆ ಮುನಿದಂತಗಳರುಚಿ । ಬೆಳಗಲಾಸ್ಯದ್ಯಿಂದು ಕಾಂತದಿ ।
ತಳಿತ ಪುಳುಕಗಳಿಂದ ನಲಿದರು ನೃಪರು ಶ್ರಾವಕರು ॥ ೫೨ ॥ ಶ್ರೇಷ್ಠವಾ
ವುದು ಧರ್ಮದೊಳಗು । ತ್ಕೃಷ್ಟಫಲವೇನೆಂದ ದಶರಥ । ನಿಷ್ಟಗೊಳು
ಆಹಾರ ಅಭಯವು ವೈದ್ಯಶಾಸ್ತ್ರಗಳೂ ॥ ಶ್ರೇಷ್ಠ ಚಾತುರ್ದಾನ ಆಹಾ ।
ರಿಷ್ಟದಿಂ ಭೋಗಾವನಭಯದ । ದುಷ್ಟದಿಂ ಚಕ್ರೇಶವೈದ್ಯದಿ ರೋಗಹರ
ನಹನೂ ॥ ೫೩ ॥ ಇನ್ನು ಶಾಸ್ತ್ರದಾನಫಲದಿ ಪ್ರ । ಸನ್ನ ಕೇವಲಿಯಕ್ಕು
ದಶವಿಧ । ವೆನ್ನುವರು ಪರಿಗ್ರಹವ ಹೆಚ್ಚಿಪವೆಲ್ಲ ವಿವನುಳಿದು ॥ ಸನ್ನುತ
ಧರ್ಮಗಳು ಉತ್ಕೃ । ಷ್ಟೆನ್ನು ಇವನೆಂದ್ವಿವರ ವಾಗಿಯು । ಮನ್ನಣೆಯ
ಗೊಳಿಸಿದರು ದಶರಥನಾದಿ ಸರ್ವರಿಗೇ ॥ ೫೪ ॥ ತಿಳಿದುತದ್ಧರ್ಮಾನು
ಸಾರದ । ವಳವರಾಗಿಸುತಿರಲು ಜನರವ । ರೊಳಗೆ ತಾಳ್ದಂಜಲಿಯ ಜೀ
ಯ್ಯಹಸಾದ ಜಿನ್ನಹವಾ ॥ ತಿಳಿವುದಿಲ್ಲಂತಾನಕನು ಕೂ । ಲೊಳ ವೊ
ಯ್ಲೆನುತಾಸ್ಯ ಕಿರಿದನು । ಗೊಳಿಸಿ ಕೇಳಿದ ಪಟ್ಟ ಮಹಿಷಿಗೆ ಪೇಳ್ದರೆ
ತಿವರರೂ ॥ ೫೫ ॥ ನೂತವಾಗಿಹ ಧರ್ಮ ಸಂತಾ । ನಾತರನ್ವಯರೆಲ್ಲ
ರೀಗವಿ । ಘಾತ ವಿಶ್ರ್ಯೈಖಾಂಡ ಚಕ್ರಿಗಳೊಳಗೆ ಪಯೋಗಗಳೂ ॥
ಖ್ಯಾತಗೊಂಡಿಹ ಮುಂಟುನಿ ವೊಳ । ಜ್ಞಾತಕಿಯಹು ಮಾನವೆನಲಹು ।
ದ್ಯಾತರಂತರವೆನಲು ಕೌಶಲ್ಯಾ ಮುಮುಕ್ಷುಗಳಾ ॥ ೫೬ ॥ ಹಿಂದೆ ಸುತ
ಕಾಮ್ಯಾರ್ಥದಲಿ ಬಹು । ಮಂದಿ ನೂತರನಂತ ವ್ರತವನು । ಬಂದ ನಿಮ್ಮ
ನ್ವಯರು ನೀವಾ ವ್ರತವನಾಚರಿಸೀ ॥ ಕಂದರಾಗುವರೆನಲು ಅವಧಿ ।
ಯಿಂದ ಕೈಕೊಂಡ್ನಾಲ್ವರ್ಗೊ ಹ್ಯಾ । ಗೆಂದ ಕೌಶಲೆ ಕೇಳುತನುಜರು ನಾ
ಲ್ವರಿಂಗಹರೂ ॥ ೫೭ ॥ ಬೇಡ ಸಂದೆಹವೆನಲು ಸಂತಸ । ಗೂಡಿ
ದಂಗನೆಯೊಡನೆ ವಂದನೆ । ಮಾಡಿ ದಶರಥನಾ ಮುನೀಶ್ವರರಿಂದ ಬೀ
ಳ್ಕೊಂಡು । ರೂಢ ಮುದಗಜದಿಂದ ಸಭ್ಯರ । ಕೂಡಿ ವೈಭವದಿಂದ ಪುರ
ಗೃಹ । ಕೂಡಿ ಸುಖ ಸತ್ಕಲೆಯೊಳೊಪ್ಪಿರ ಲರಸ ಚಿತ್ತೈಸೂ ॥ ೫೮ ॥
ಒಹಳ ವ್ರತ್ರಾಸಕ್ತದಲಿ ಸತಿ । ಯ ಹರು ವ್ರತಗಳ ನೆಸಗುತಿರೆ ಪ । ಟ್ಟ

ಹಿಷಿಕುಸುಮಿತೆಯಾಗಿ ಕುಚ ಬಿಗುಪೇರಿ ಮುಖವರಳೀ ॥ ವಿಹಿತದೊಳಗಿ ರ್ನಾಲ್ದಿನ ಸ್ನಾ । ನಹವ ವಿರಚಿಸಿ ಬಿಳಿದೊಡವನು । ಟ್ಟಹಳು ಗಂಧೋ ದಕವ ತಳಿದಲಂಕರವ ನೆಸಗಿದಳೂ ॥ ೫೯ ॥ ಮಲಯಜದನುಂಙ್ಬಟ್ಟು ಮ ಲ್ಲಿಗೆ । ಯಲರ ಸೋರ್ಮುಡಿಗಿಟ್ಟು ಮೌಕ್ತಿಕ । ಲಲಿತ ತೊಡವುಗಳಿಟ್ಟು ದಂತ ಮರೀಚಿ ಹೊಳವಿನಲೀ ॥ ಚಲುವ ಪಳುಕಿನ ಬೊಂಬೆಯಂದದ । ಲಲನೆ ಪುಷ್ಪಾಸ್ತ್ರನನು ಆಜ್ಞೆಗೆ । ನಿಲಿಸುವಂತೊ ಸಮಸೆಯ ಕಣೆಯನಲಿಸಿ ಯೆ ಕೌಶಲ್ಯೇ ॥ ೬೦ ॥ ಕಡೆಯಗಂಣ ಸಮಾಸ್ತ್ರ ಶರಪೆಂ । ಪೊಡಿಯೆ ಮುಡಿ ಭೃಂಗಾಳಿಗಳ ಕೃ । ದ್ಭಡಿಸೆ ಸೌಂಧರ ರಸಪ್ರವಾಹವ ಭರಮುತುಂ ಗಕುಚಾ ॥ ಅಡಿಯು ಕೇಶರ ಪಾಂಶು ಕೆದರಲು । ಭಡಿಸೆ ತೋಳ್ಕಿರಸವಲಿ ಕಿಂಕಿಣಿ । ಗಡಣರವಕರ್ಣಾಮೃುತೀವುತ ಲೈದೆ ಕೌಶಲ್ಯೆ ॥ ೬೧ ॥ ಬಂ ದು ಹಿಮಕರಲೇಖೆ ಘನ ಕೂ । ಟೊಂದು ವಂದವಿ ಚಂದ್ರವದನೆಯು । ಇಂದು ಕ್ರಾಂತಾಕಾಂತ ಶಯ್ಯಾಗೃಹವ ನೊಳಪೊಕ್ಕೂ ॥ ಅಂದ ಪ ಳುಕಿನ ಪಾಸಿಗೆಯನಗು । ವಂದಮೊಳಗಿಹ ಹಂಸಕಲ್ಪಿತ । ದಿಂದರಂ ಜಿಪ ರತ್ನಶಳೆ ಮಂಚದೊಳು ಕುಳ್ಳಿರಲೂ ॥ ೬೨ ॥ ತೋರುತಿಹ ಗೃಹದೇವ ತೆಯ ಮನೊ । ಹಾರ ಮಂಜಲ ಜಲಿಪ ರತ್ನ ವಿ । ಕಾರಸೊಡಗ್ಗಳೊಳೆ ಸೆವ ದೇವಿಗೆ ಕರ್ದ್ದಮಿಂಪ್ತುಗಳ ॥ ಸಾರಿ ಕಾಮಾಗಮದ ವಸ್ತುವ । ನೀ ರೆಯುರು ತಂದಿಳುಹಿ ಸೌರುಭ । ಬೀರುತಿಹ ಧೂಪಾರತಿಯ ತಂದಿಡಲ್ಲು ಅಲ್ಲಲ್ಲೀ ॥ ೬೩ ॥ ಸಾರಿಕೆಯ ಯಡೆಯೊಳಗೆ ಹಂಸೆಯು । ಸೇರುವಂದ ದೊಳೈದಿ ಮಂಚವ । ನೇರಿ ದಶರಥ ಸವಿದು ಚಿಲಿ ಪಾಲ್ವೀಳ್ಯವನುಗೈಮೂ ॥ ಮಾರನಟ್ಟಳಿ ಗೆಳಸುವದ ಕೆಲ । ಸೀರೆಯುರು ಕಂಡ್ಸೊರೆಗೊಳೆ ವಿ । ಸ್ತಾರ ರತಿ ಕೇಳಿಯನು ವಿರಚಿಸಿ ಸುಪ್ತಿಯೊಳಗಿರಲೂ ॥ ೬೪ ॥ ಅಚ್ಯುತೇಂದ್ರಗೆ ಸ್ವರ್ಗ ಸುಖ ಕಡೆ । ಯುಚ್ಚಿ ಬರಲರಿದರುಹ ನಡಿಗಳ । ಮೆಚ್ಚಿನಿಂಪೈತಂದು ಕೌಶಲ್ಯದರಕವತರಿಸೇ ॥ ನಿಚ್ಚಳದ ಸ್ವಪ್ನಾವಳಿಗಳ । ತ್ಯುಚ್ಚತರವಹವೀ ಗಲಾ ಸತಿ । ಗೆಚ್ಚರಿಸಲವನಾ ಧರಿಸು ನೃಪನೆನಲು ಗೌತಮರೂ ॥ ೬೫ ॥ ಕಡೆಯ ಯಾಮದೊಳಾ ನಗರ ಮುಂ । ಗಡೆಯು ಆರಾಮದೊಳು ಪುಯ್ಯಲು । ತೊಡಗಿಯಾಡುವ ಸಮಯದೊಳು ರವಿ ಚಂದ್ರ ಹರಿ ಗಜ ವಾ ॥ ನೊಡನೆ ಸ್ವಪ್ನವ ಕಂಡು ಯಚರ । ಗೊಡುವ ಸಮಯದಿ ರಾಜಗೃಹಕೊಳ । ದೊಡೆ ದಸರಸಿಜರಜವು ನೆಳದನು ಸುಪ್ರಭಂಜನನೂ ॥ ೬೬ ॥ ಪಗಲ ಲಕ್ಷ್ಮಿಯೆ

ಮುಖನಸನಗಲಿಳೆ । ನಗೆಯ ಸಂಧ್ಯಾರಾಗ ದೇವತೆ । ಸೊಗಸನೂಪುರನಾದ
ವೆನೆ ಚಂಚರೀಕಮಿಂ ಚರವು ॥ ನಗವನೇರುವ ರವಿಯ ರಥ ಚ । ಕ್ರಗಳ
ಚೀತ್ಕಾರ್ಚರ್ಗಂಜಲದಿ ಚ । ಲ್ಲೊಗುವರವದ ರಥಾಂಗಗಳು ರವಿಯುದಯ ಸ
ಮಯದಲೀ ॥ ೬೭ ॥ ಕೊರಗುತಿಹ ಕುಮುದಾಳಿ ನಗೆ ಮುಖ । ವೆರಸು
ತಿಹ ಕಮಲಾಳಿ ಶೋಕವ । ಗರವ ಕೊರಕ ಝೇಂಕರಿಸುತಿಹವಳಿ ತಿರಳೆ
ಸಿಸಿಲಕ್ಷ್ಮೀ ॥ ಬರಲು ದಿನಸಿರಿ ನತ್ರಿಸುತ ಮುಂ । ದೊರೆವ ಪಾಠಕ
ಮಂಗಲ ಧ್ವನಿ । ಗರೆವ ಗಾಯಕರಿಂದ ಲುಪ್ಪವಡಿಸಲು ಸತಿಪತಿಯೂ ॥೬೮॥
ಯಸಗಿ ನಿತ್ಯಾಚಾರಗಳ ಮನ । ವೊಸೆದು ಜಿನ ಮುನಿಗೆರಗಿ ನವರ । ತ್ನೊಸೆದ
ಚಿತ್ರದ ಸಾಲೆಗೈತಂದದರ ಮಧ್ಯದಲೀ ॥ ಯಸೆವ ಚಂಬೊನ್ನಪಟ್ಟವಣೆಮೇ ।
ಲ್ದೆಸೆಯ ಕೌಶಲೆ ಸಹಿತ ದಶರಥ । ನೊಸೆದು ಕುಳಿತನು ರೋಹಣಾಚ
ಲವಗ್ರ ಕಲಶದೊಳೂ ॥ ೬೯ ॥ ಕುಳಿತ ರಘುದ್ವಹನೆಲಲಂಕರ । ಗೊಳಿಸ
ಲಾ ಕೌಶಲ್ಯೆ ವಕ್ರದೊ । ಳೆಳೆದ ಳೋರ್ವಂಗನೆಯು ಮೃಗಮದ ತಿಲಕವಂ
ಜನವಾ ॥ ಗೊಳಿಸಲೋರ್ವಳು ಹಾರನೂಪುರ । ಗಳನು ಮುದ್ರಿಕೆ ಚಳಿ
ಕೆ ಕೃತಿಗಳನು । ಗೊಳಿಸಿ ಜಡೆನೊಸಲಿಟ್ಟು ಭೂಷಣ ಗೈದರಾಳಿಯರೂ
॥ ೭೦ ॥ ಅರಳಿವಂಬುಜ ಕೆರಗಿ ಕುಳಿತೆಳೆ । ಮರಿಯ ತುಂಬೆಯ ಫಣಿ
ಪತಳ್ಪದೊ । ಳಿರುವ ಕೃಷ್ಣದ ರೇಖೆಯೊ ತಿಳಿಗೊಳದ ನೈದಿಲೆಯೊ ॥
ನೆರೆದ ಯೌವನ ಶಶಿಕಳಂಕಿನ । ಪರಿಯೊ ಕೌಶಲ್ಯಾಸ್ಯದೊಳಗಿ । ಟ್ಟಿರುವ
ಕಸ್ತುರಿ ಬೊಟ್ಟೊನೋಡವನೀಶ ತಿಳಿಯದೆನೇ ॥ ೭೧ ॥ ಅಪರ ದಿಗ್ಭಾಗಂ
ತರೀಕ್ಷದ । ವಿಪುಲದಂಜನ ತಾರಕಾಕೃತಿ । ಚಪಲ ನೇತ್ರದೊಳಗಡಗಿ
ರಲು ಸರಸೊಪುಲತಾಂತ್ರದೊಳು ॥ ಸಫಲಕಾಶ್ರಿತ ಮಕರಗಳೊ ಕುಚ ।
ಕುಪಮಿಸಿಹ ಪತ್ರಗಳೊ ಕೌಶಲೆ । ವಪುವೊ ನೋಡವನೀಶ ಸುಮನಸೆ
ಚಲುವನೆನೆ ಮುನಿಪಾ ॥ ೭೨ ॥ ಮಿರುಪವಿದ್ರುಮ ಕಮಟ ಝುಷ ಕ ।
ರ್ಪುರವ ದವಾಳೆಯುವಾಳೆ ಸುಳಿಸುಳಿ । ಪೊರೆದ ಪುಳಿ ನಹಿವಕ್ರರತ್ನದ ಮಿಂಟೆ
ರತ್ನಗಳೂ ॥ ಕರಿಮಕರ ಜಂಬಾಲ ಸಹವನು । ಸರಿಸಿ ಕನಕಾಬ್ಜೊಗೆ
ದು ಕೌಶಲೆ । ಶರಧಿಯಂತೆಸದಿರ್ದ ಳವಧರಿ ಸವನಿನಾಯಕನೇ ॥ ೭೩ ॥
ಇಂತೆಸೆವ ಕಾಮಿನಿಗೆ ಚಾಮರ । ವಾಂತು ವೀಳ್ಯಕರಂಜ ಗಿಂಡಿಯ ।
ನಾಂತಪರಿಚರಕಾಂತೆ ರಾಂತರ ನಿಲವುಗನ್ನಡಿಯಾ ॥ ಚಿಂತಿತಾರ್ಥದ ಲಕ್ಷ್ಮಿ
ಯನೆ ನಿಧಿ । ಕಾಂತೆ ಪುಣ್ಯಾಂಗನೆಯೊಲೆಸದಿರು । ವಂತ ಪ್ರತಿಬಿಂಬ

ವನಲೋಕಿಸಿ ನಲಿದ ದಶರಥನೂ ॥ ೭೪ ॥ ಅಸಿತ ರೋಳಗಾದಿಪಳ ಸಪ್ನ
ವ । ಸಿನೆಯ ಗುಸುರಲು ತಿಳಿದು ತತ್ಫಲ । ವನಿತೆ ಗುಸುರಿದ ನಳಕನೇ
ವರಿಸುತಲಿ ಜೆರಳಿನಲೀ ॥ ದಿನಪ ಸಿಂದತಿ ಕೀರ್ತಿ ಶಶಿಯಿಂ । ಜನ ಸುರ
ಕ್ಷಕ ದಾಸಿಗಜದಿಂ । ಜನಪರಧಿಪತಿಯಾಹ ಹರಿಯಿಂದಂಬುಜಾಂಬಕಿಯೇ
॥ ೭೫ ॥ ಜಗತಿಗಸಪಳ ನಾಹ ಸುತನಿನ । ಗೊಗೆವನತಿ ರೂಪಿನಲಿಯುಸೆ
ಮನ । ಸೊಗಲು ಸಂತಸದಿಂದ ಸುಖಮಿರಲುಂಗಿಸುತಗಭರ್ಾ ॥ ಮಿಗಿ
ಲು ಗೋಳಲ್ಪಿದಾರು ತಿಂಗಳೊ । ಳೊಗೆದ ಬಯಕೆಯು ತೀರಿಸುತಲಿರ ।
ಲೊಗೆದು ದತ್ಯರ್ಬುದನ ಕಾಸರ ವಾಸ ಪ್ರಸ್ಥಾನಾ ॥ ೭೬ ॥ ಅಂತದೊ
ಳಗಾಕಾಶಮಾರ್ಗ । ದೊಳಾಂತ ಸಮುರವ ನೋಳ್ಪ ಬಯಕೆಯು । ಕಾಂ
ತಗುಸುರಲು ವಿಸ್ಮಯದೊಳೀ ಚಿತ್ರವೇನೆಂದೂ ॥ ಅಂತ ವಿಸ್ಮಯದಿಂದ
ದೋಹಳ । ಭ್ರಾಂತ ತೀರಿಸಲೆಂದು ಪುಷ್ಪಕ । ವಾಂತು ಸತಿಸಹ ತೆರಗಿ
ಕಾಸರ ವಿಂತು ವರ್ಣಿಸಿದಾ ॥ ೭೭ ॥ ಬನ್ನಿತಪಸಿಯೆಹಾ ದರಕೆ ಯಿಲ ।
ಚಿನ್ನಸಾಸಿಕೆ ನಗರೆ ಬಂದರೆ । ಕಂನೆ ಕುಮಾರಿಯೆ ಬಾಗಿಸಿ ರಸವ ಚಂದ
ನವ ಬಂದೂ ॥ ರೆಂನು ವಚಕರವಿರಲಿ ಸುಮನಸ । ವಂನು ಕೂಡಿದ
ತರುಗಳನು ಪ್ರತಿ । ಸಂನೆಯೊಳಗೊರ್ನಿಸಿದ ದಶರಥ ಮುದದಿ ಕೌಶಲೆಗೇ
॥ ೭೮ ॥ ನೋಡು ಮುದಗಜಲಂಚೆ ಗುಲ್ಮೊಡ । ಗೂಡಿ ಶುಕಪಿಕವಂಜಿ
ಯಳಿ ನರಿ । ನೂಡಿ ಹರಿಕಡಜಂಜಿ ಗೂಡೊಗಲಬ್ಜ ನೈದಿಲೆಯೂ ॥
ಮೂಡಲುಮುಕದಿ ನೀಲಪಳಿ ಕ । ಲ್ಗೂಡಿ ದಾರೊಡನುರುಗನೆಳೆ ಫಣಿ ।
ಯೋಡಿ ಪಾಗೆ ಪುತ್ತವನು ಕೌಶಲೆಗಾಡಿಗಳ್ಕುತಲಿ ॥ ೭೯ ॥ ಪೊಕ್ಕ ಶಶಿ
ಯಂಬರವ ವಿಸ್ಮಯ । ವಿಕ್ಕಿದನು ಪಂಚಾಸ್ತ್ರಕೊಳ ಮುಸು । ಕಿಕ್ಕಿತ
ಜ್ಜಿಲಿಗಳನು ಕೌಶಲೆಗಾಡಿ ನಡೆನೋಡೀ ॥ ದಿಕ್ಕರಿಸಲೊನ ದೇವಿಗಪ್ರತಿ ।
ವಿಕ್ಕುವೆಳೆ ಲಕ್ಷ್ಮಿಯೊಲು ಸಂಚರ । ವಿಕ್ಕಿ ದೋಹಳ ತೀರಿಸಿದಳಾರಣ್ಯ
ಸಂಚರದಾ ॥ ೮೦ ॥ ಸಂದುದೀ ಬಯಕೆಂತರದ ರಣ । ದಂದವನು ತೋ
ರಿನಲು ಪುಷ್ಪಕ । ಬಂದುದಭ್ರಕೆ ನೆನೆದ ಬಹುರೂಪಿಣಿಯ ಚತುರಂಗಾ ॥
ನಿಂದು ಕಾಳಗಗೈಪುದನು ತೋ । ರೆಂದ ದಶರಥನಾಜ್ಞೆಯೊಳು । ಕವಿತಂದು
ಮಾಯಾಜಾಲ ಕಡಿದಾಡಿದವು ಚಿತ್ರದಲೀ ॥ ೮೧ ॥ ಕರ ಚರಣ ಶಿರಮುಂ
ಡಗಳು ಬೀ । ರ್ಗರೆದು ಅರುಣೋದಕದ ಮಳೆ ಭೋ । ರ್ಗರೆದು ಸುರಿ
ದಸ್ಸುತನ ಸಮರವ ನೃಪಮದೀಕ್ಷಿಸುತಾ ॥ ಹರುಷ ಗೊಳೆ ಕೌಶಲ್ಯೆಯದ

ಪರಿ || ಹರಿಸಿ ವೈಮಾನದೊಳು ನಗರಿಗೆ । ತೆರಳಿದರು ಸುರರಾಜ ಇಂದ್ರಾಣಿ ಯರ ಮಾಳ್ಕೆಯೊಳೂ ॥ ೬೨ ॥ ಇಲ್ಲದಾಯಸಗಳು ಪಥಶ್ರಮ । ವಿಲ್ಲದ ಲೆ ನವಮಾಸ ತೀವಿ । ರ್ದಲ್ಲಿ ಕೂಡಿದ ಚೈತ್ರಮಾಸದ ಶುದ್ಧ ನವಮಿಯಲೀ ॥ ಬಲ್ಲಿವಹ ಲಗ್ನದಲಿ ಪುದಯಿಸ । ಲಲ್ಲಿ ಶಂಖ ಚ್ಛವಿಯ ಶಿಶು ಮೊದ । ಲಲ್ಲಿ ಯಾಲೋಕಿಸಿದ ದಶರಥ ಗಾತ್ರ ಪುಳುಕಿನಲೀ ॥ ೬೩ ॥ ನೀಲವರ್ಣ ದ ಪುತ್ಥಳಿಯ ಸಮ । ಲೀಲೆಯೊಳು ರಂಜಿಸುವ ಸುತನ ಸು । ಲಾಲಿತ ವನಾರೈಸು ಸುಖಮಿರೆ ನೃಪತಿ ಸೂತಿಕದಾ ॥ ಆಲಯಾಚಾರಾಂತ್ಯ ದಶದಿನ । ಕಾಲ ವಿರಚಿಸಿ ನಾಮಕರ್ಮದ । ಮೇಲೆ ಕರೆದನು ರಾಮಚಂದ್ರಾಭಿಧಾನ ನವನೀಶ ॥ ೬೪ ॥ ಕನಸಿನೊಳಗಾ ರಾಮವನು ಕಂ । ಡನು ವಿಗನುಸರಿ ಯಾಗಿ ರಾಮನು । ಯೆನುತ ನಾಮವನಿಟ್ಟು ಸುಖಮಿರ ಲಿಳೆಯನಾರೈವಾ ॥ ವಿನಯದೊಳು ಕೌಶಲ್ಯೆ ದಶರಥ । ನೆನೆದು ಮುಕ್ತೀ ರಮಣ ನಡಿಗಳ । ನನುಕರಿಸಿದಾ ಮೋದದಿಂದೆಸೆದಿರ್ದ ರವನೀಶಾ ॥ ೬೫ ॥ ಕಲಿಲಹರಮುನಿ ಸೂಪ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೬೬ ॥

ಅಂತು ಸ್ವಾಸ ೪ ಕ್ಕಂ ಪದನು ೨೪೬ ಕ್ಕಂ ಮಂಗಳಮಹಾ. ಶ್ರೀ.

ಐದನೆಯ ಸಂಧಿ.

ಲಕ್ಷ್ಮಣ ಭರತ ಶತೃಘ್ನರ ಜನನಾ.

ಶಕ್ರ ಸಮ ಬಲ ನಸದಳದಿ ಜಗ । ಚ್ಚಕ್ರ ವೇಕಾಗ್ರದಲಿ ಯಾಳ್ದಪ । ರಾಕ್ರಮಿಯು ಲಕ್ಷ್ಮಣಸೂ ಭರತನು ಜನಿಸೆ ಶತೃಘ್ನಾ ॥ ಪಲ್ಲವಿ ॥

ಲಾಲಿಸೈ ರಾಜೇಂದ್ರ ಪುತ್ರನ । ಲೀಲೆಗಾಶ್ರಿತ ನಾಮವನು ನೃಪ । ಜಾಲ ದೊಳಗಿಟ್ಟ ವನಿಪತಿ ಕೌಶಲ್ಯೆ ಸಂತಸದೀ ॥ ಲಾಲಿತ ಗೊಳುತಿರಲು ಸಖಿಯರು । ಬಾಲನಿಗೆ ಪೊಸ ರನ್ನ ತೊಟ್ಟಿಲ । ಕೀಲಣೆಯಗೈಸಿಹ ದನಾ ಶುಭ ದಶಮ ದಿನವಲ್ಲೀ ॥ ೧ ॥ ಇಟ್ಟು ಪ್ರಥಮಾದೀಶ ವಂಶಳ । ನಟ್ಟು ಬಹಇಕ್ಷ್ವಾಕು ಕುಲದೊಳು । ಪುಟ್ಟದೆಳೆ ಶ್ರೀರಾಮಚಂದ್ರನ ಮ ಲಗಿ ಸೊಹಿಲದಲಿ ॥ ನೆಟ್ಟ ಮಿಸುನಿಯ ಸರಘಣೆಯ ಪಿಡಿ । ಪಟ್ಟ ದಾದಿ ಯರೊಳಗೆ ಗೊತ್ತಳ । ನಟ್ಟು ಶ್ರೀಮತಿಯೆಂಬ ದಾದಿಯು ಪಾಡಿ ತೂಗಿ ದಳು ॥ ೨ ॥ ಲಾಲಿ ಗುಣ ಸಂಭೂತ ರಾಘವ । ಲಾಲಿ ಪುಣ್ಯ ನಿಕಾಯ ಪರಹಿತ । ಲಾಲಿ ಯಾಲೋಕಾಕ್ಷಿ ಹಿತಕರ ಕೋಮಲಾಂಗಜನೇ ॥ ನೀಲ ವರ್ಣನೆ ಲಾಲಿ ಬಹು ಧರೆ । ಪಾಲ ಜನ ಲಾಲಿತನೆ ಲಾಲಿ ವಿ । ಶಾಲ ಸಂಪದ ಸರಸಿಜಾಕ್ಷನೆ ಲಾಲಿ ಲಾಲಿತನೇ ॥ ೩ ॥ ಸಂಣ ಜೋ ಜೋ ದಶರಥಾತ್ಮಜ । ಚಂಣ ಜೋ ಜೋ ಕೌಶಲಾಂಗಜ । ಬಂಣ ಬಾ ಯ್ದರೆ ಸುತಕುಮಾರನೆ ಜೋ ಜೋ ಸುರಕುಜನೆ ॥ ತಂಣ ವೆಳದಿಂಗಳ ವಿರಾಜಿತ । ಹುಂಣುಮೆಯ ಕಲೆ ಪೂರ್ಣಚಂದ್ರನೆ । ಅಣ್ಣ ಜೋ ಸಂ ಪತ್ಸಮಾಜನೆ ಜೋ ಜೋ ನಳಿನಾಸ್ಯ ॥ ೪ ॥ ನೆಂದು ಫಲವಂದದಲಿ ಪಾಡುವ । ದೊಂದು ಸಂಭ್ರಮ ತೂರ್ಯರವ ದಿ । ಗ್ಬಂಧದಿಂ ಪೂ ಜಾತಿಶಯ ದೊಳಗ್ಯಾಚ ಭಟನಿಕರಾ ॥ ಮಂದಿರದಿ ಕಲ್ಪಾವನಿಜಗಳ । ತಂದು ನಿಲಿಸಿದ ಸುತನ ಅತಿಶಯ । ದಿಂದ ದಶರಥ ರಾಜರಾಜಾಧಿಪರ ಮಧ್ಯದಲಿ ॥ ೫ ॥ ಮಡೆಹೊರಳಿಯುರು ಳಂಜೆಗಾಲನು । ಇಡುವ ಸಮ

ಯುಧಿ ಚರಣ ಸರಪಾ । ಗುಡವು ಕಿಂಖಿಣಿ ಸಾಕಸನ ಕಿರಿಘಂಟೆ ಕರವ
ಟಾ ॥ ಪಡೆಯು ಸರಘಣಿ ಬೆರಳ ಮುದ್ರಿಕೆ । ತೊಡಗಿ ತೋಳ್ಬ
ಳು ಭುಜಕೀ । ತೆಡೆಯು ಕಂಠೀಕಾ ವಳಿಯು ಸರಪಚ್ಚೆ ಪದಕಗಳೂ ॥
ಅರಳೆಲೆಯು ಮರಕತದ ಕುಂಡಲ । ಧರಿಸಿ ಕುಂಚಿಕೆ ಮಲಗುಲಾ
ಸರಸಿ ಕಂಚುಕಿ ಯಿಟ್ಟು ಪಟಕದ ಕುಟ್ಟಿಮಾಂಗಣದೀ ॥ ತರ
ಮುಂಚೆಯನು ಹರಿಬಿ । ಟ್ಟರೆದು ಪಾಲೆರದಿತ್ತು ವಕ್ಷಜ । ಕರಕೆ
ಯಿತ್ತು ನವನೀತವನು ಮೇಲುಗೊಟ್ಟು ॥ ೭ ॥ ಬಿಡಲು ತುಂಬೆಯ
ಮುದಾದಿಯ । ರೆಡೆಗೆ ಪರಿದೀಕ್ಷಿಸುತ ಕೈಗಳ । ಪಿಡಿಯ ಲೋ
ಲಕೆ ಪಿಮ್ಮೆಟ್ಟಗುತ ಕಿಲಕಿಲನೇ ॥ ಯಡೆಗೆ ಮತ್ತೈದೋರ್ವರನು
ಗೊಡದೆ ದಡಿಸುತ ಲೆಳೆಯ ಕೇಳಿಯ । ಗಡಲೊಳೋಲಾಡಿಸಿದ
ಳ್ಸರ ಜನನಿ ಜನಕರನೂ ॥ ೮ ॥ ಪಗಲಿರುಳು ಸುತ ಮೋಹನಾಸ್ತ್ರದ
ಮಿಗಿಲ ಪಂಜರದೊಳಗೆ ಕಾಲವ । ದೆಗೆವುತಿರೆ ದಿನ ನಿಮಿಷ ಸಮವಾಗ
ಳಿಯರು ಸಹಿತಾ ॥ ಲೊಗುವ ಸಂತಸದಿಂದ ಪಿತಕಾ । ನೆ ಗಳಿಸುವ
ಕಂಚುಕಿಗೆ ದಿವ ರಾ । ತ್ರಿಗಳು ಆವಾಗೈದಿ ಪೋಗುವವರಿಯ ದವನೀತ
॥ ೯ ॥ ರಾಗ ಮೋಹದ ಭೋಗದೊಳಗನು । ರಾಗರಿಗೆ
ತೊದಲ್ನುಡಿ । ರಾಗಿಸುತಿರೆ ಚೌಲಕರ್ಮಗಳನ್ನ ಪ್ರಾಸಕದ ॥
ಸೊಳು ನಡೆನುಡಿಯ ಕಲಿಯುವ । ನಾಗೆ ಶಾಸ್ತ್ರಾರಂಭದೋ
ದ । ಲಾಗಿ ಸುರಗುರು ಪೂಜೆಗರೆದ ಕ್ಷ್ಮರವನು ಕಲಿಸೀ ॥ ೧೦ ॥ ಅಷ್ಟ
ವರುಷದಿ ಮೌಂಜಿಬಂಧನ । ಸೃಷ್ಟಿಗೊಳಿಸೋದಿಸುವ ಗುರುವಂ । ದಿಷ್ಟ
ಶಾಸ್ತ್ರ ಚಾರದೊಳ ಗನುಗ್ರಾಹ ಗೊಳ್ಳುತಲಿ ॥ ಅಷ್ಟು ಇಷ್ಟೆನದೆಲ್ಲ ಶಾ
ಸ್ತ್ರಾ । ದೃಷ್ಟ ಕಾವ್ಯಾಕರಣ ನಾಟಕ । ಶ್ರೇಷ್ಠವಾದಲಂಕಾರ ವಾದಿಯ
ಶಾಸ್ತ್ರ ರೂಢಿಸುತ ॥ ೧೧ ॥ ಕಲಿತನಾಗಮಶಾಸ್ತ್ರ ಗರುಡಿಯ । ನೆಲೆಯ
ನಾದರ ಭಿತ್ತೀಸಾಸ್ತ್ರದ । ವಲವಿನೊಳು ಚವುಷಷ್ಠಿ ವಿದ್ಯಾಸಾಧನೆಯ ಕಲಿ
ತೂ ॥ ನೆಲೆಯರಿಂ ನಿಲ್ಲೆನಿಸಿದನು ಕರ । ಬಲಯುತಾ ದಾತ್ಮಜಗೆ ವಿದ್ಯ
ದ್ವಲವ ಮಂತ್ರಾಸ್ತ್ರಗಳ ತೋರಿದನಾಗ ದಶರಥನೂ ॥ ೧೨ ॥ ವಾಯು
ವೇಗಗಳಾದಿ ವಿದ್ಯ ಸ । ಹಾಯದಕ್ಷಯ ಶಬ್ದವೇದಿಗ । ಳಾಯುಧ
ತೋರಿಸಲು ಬಿಲುಬಾಣದಲಿ ಸರಿಯಾದಾ ॥ ರಾಯುಗ ದೊಳಿರದಿನಲು
ನೀತ ಸ । ಹಾಯ ರಾಘವ ರಾಮಚಂದ್ರ ಕ । ಳಾಯನಿವ ಕೋದಂಡ

ರಾಮನು ಯೆಂಬ ಪೆಸರಾಯ್ತು ॥ ೧೩ ॥ ಇಳೆಯನಂತರ ಕಂತರೀಕ್ಷನು । ನಿಳೆಗೆ ತಹಪೋಲಸದಳದ ಬಲ । ಕುಳಿತನಾಗಿರಲಾತ್ಮಜಾ ಮೋದವಲಿ ಸುಧೆಗಡಲಾ ॥ ಕೆಳೆಯ ಗೊಳುತಿರೆ ಜನನಿಜನಕರು । ತಿಳಿದುಯಾಲಯ ರೆಲ್ಲ ಸಂತಸ । ಗೊಳುತ ಸುಖಮಿರಲೊಂದು ದಿನ ರುತುವಾಗಿ ಸೌಮಿತ್ರೀ ॥ ೧೪ ॥ ಮಿಂದು ಸಾಲ್ನೀರಂಧಿನಿರುಳ್ಕೆ । ತಂದು ನಿಜಪತಿಸೂಳ್ಗೆ ರತಿ ಸೊಗ । ಸಿಂದ ಶ್ರಮವಿಶ್ರಮಿಸುತಿರೆ ಸುಪ್ತಿಯಲಿ ಕೇಸರಿಯಾ ॥ ಇಂದಿ ರೆಯು ಅಭಿಷವಣವಸು ಗೈ । ವಂದ ರತ್ನಾಕರವು ಸುತ್ತಿ ದೊ । ಸುಂಧ ರಸುವರ್ಣನವನ್ನರಿದು ಕನವರ ಪೊಳಾಗಾ ॥ ೧೫ ॥ ಪುತ್ತೆ ಪೊಂಬೆಟ್ಟವ ನು ಯೇರಿಹು । ಪತ್ತ ರೂಪ್ಯಾಚಲದ ಪರಿಸನು । ವೆತ್ತ ಭರತಕ್ಷೇತ್ರ ದಾಲೋಕನವ ಸರಿದೆದ್ದೂ ॥ ಚಿತ್ತಪ್ರಿಯ ಗುಸುರಿದಳು ಸಿರಿಹರಿ । ಗೆತ್ತ ಧಾರೆಯು ಲಕ್ಷ್ಮೀಧರನೆಂ । ಬುತ್ತ ಪೂರ್ವರೆಯಿಂದ ಲರಸಹನಬ್ಧಿ ಪರಿಯಂತಾ ॥ ೧೬ ॥ ಅರಿದ ಚಕ್ರದಿ ಚಕ್ರಿಯ ಹಸುರ । ಗಿರಿಯನೇರಿ ದರಿಂದ ದ್ವೀಪಾಂ । ತರವ ಸಾಧಿಪ ರೂಪ್ಯಗಿರಿ ಯಡೆಗರಿದ್ದ ಕ್ಷೇತ್ರದಲಿ ॥ ಬರೆವ ತನ ಬಿರಿದಂಕಮಾಲೆಯ । ಸುರುಪರಾಕ್ರಮಿಯಾಹ ಸುತ ನಿನ । ತರ ಳನಾಗುವನೆನಲು ಪ್ರಿಯನಲಿದಾಡೆ ಸೌಮಿತ್ರಿ ॥ ೧೭ ॥ ಮುಂದಣಾಗ ಸಪ್ನ ಫಳದನು । ಬಂದಗಳನರಿದಧಿಕಲೀಲೆಯ । ತಂದ ಮನಮುದ ವಾಳುತಿರಲು ಧ್ಭವಿಸಿ ಬರೆಗರ್ಭಾ ॥ ಇಂದು ನಿಭ ಗೊಡಲೊಕ್ತ್ರ ನಿಸ್ಸತು । ವಿಂದ ಕೆಲಕೆಲ ರೋಮಸಾಶನ । ದಿಂಧ ಕುಚ ಕುಟ್ಮಳಗಳತಿ ಬಿಗುವೇರಲಗ್ರದಲೀ ॥ ೧೮ ॥ ತುಂಬೆಗಳ ಪುರಿಯಂತೆ ಚೂಚಕ । ವೆಂಬರಾ ಕೃತಿಗೊಳಲು ವೈರಿಕ । ದಂಬ ಮಿಳ್ತುವಿನಂತೆ ಪೊಣ್ಮಿತು ಗರ್ಭ ವರ್ಭಕನೂ ॥ ಇಂಬುಗೊಳಲೀ ಲೋಕ ಸಹಿತಿಂ । ಸಂಭುಧಿಯೊಳಿಹ ದ್ವೀಪ ವೀಕ್ಷಿಸ । ಲೆಂಬ ಬಯಕುದಿಸಿರಲು ತನು ಕೃಶೆಗೊಳಲು ಪ್ರಿಯನರಿದೂ ॥ ೧೯ ॥ ವುದ್ದಿಸಂಕಮೊಳಿರಿಸಿ ಕುರು ಳನು । ಶಿಥ್ಥಿ ವಿಗ್ರಹ ಕೃಶೆಯು ಮುಖ ಬಳ । ಲಿದ್ದ ಕಾರಣವೇನು ಮೋ ಹನೆಯನಲು ದಶರಥನು ॥ ಸುದ್ದಿ ಯೇನದ ಸುಳಿದು ಪುತ್ತುಳಿ । ದಿದ್ದ ನುಡಿಯಾಡಲು ಕಳವಳ । ವೆದ್ದು ಕೇಳಿದನಾಪ್ತ ನಲದಿರಲುಸುರ ಬ್ಯಾಡೆಂದು ॥ ೨೦ ॥ ಯಲಘ ಕೋಮಳೆ ಯೇನು ತನು ಕೃಶ । ಪೊಳವ ನುಲಿಯನಲೆ ರವಿಸೋಕ್ತ್ರವ । ಸುಳಿವರೇ ನಳಿನಾಂಬಕಿಯೆ ಯೆನು ತೊಲೆದು ಮರುಗುವನಾ ॥ ವಳ್ಳನ ಸೋಢ ಸದಳವ ಬಹುಕೆಂ । ದುಳಿಯು ಧಂತರ ಗೈದೆ ಭೂ ಸಹ ।

ಜಲಧಿಯೊಳಗಿಹ ದ್ವೀಪ ವಾಲೋಕಿಸುವ ಬಯಕೆನಲೂ ॥ ೨೧ ॥ ಆಗ
ಹೆಂಮಿಂ ಪೆಂಬುದನು ಮನ । ತಾಗಿ ಸಂತರ ಗೈದೆನೆಂಬನು । ವಾಗಿ
ಪೇಳ್ವರೆ ಕೋಮಲಾಂಗಿನಿ ಗಗನ ಗಾಮಿನಿಯಾ ॥ ನೀಗ ಸಾಧ್ಯವ ಗೈದಿ
ಹೆನು ನೋ। ಡೀಗಲೆಂದೊಯ್ಮಾನ ವಿರಚಿಸಿ । ದಾಗ ರತ್ನಾಹ್ವಯದಿ
ಘಂಟೆಯ ಧ್ವನಿಯೊಳ್ಬೆತರಲೂ ॥ ೨೨ ॥ ಬಂದು ನಿಲಲೆದುರೊಳಗೆ ರಥ
ಕನು । ಬಂದಿಸಿಹ ಗಂಧರ್ವ ಹೂಂಕರ । ದಿಂದ ನರ್ತಿಸುತಿರಲು
ಸೌಮಿತ್ರೆಯನು ಕುಳ್ಳಿರಿಸೀ ॥ ಹೊಂದಿ ದಶರಥ ಕುಳಿತು ತ್ರೈಖಾಂ । ಡೊಂ
ದು ನಿಮಿಷದಿ ಚರಿಸಲೆ ನಲವ । ರಂದಕನು ಸರಿಯಾಗಿ ಚರಿಸಿತು ದೇವ
ವೈಮಾನಾ ॥ ೨೩ ॥ ಅಲ್ಲಿ ವೃಷಭಾಚಲ ಸುರೂಪ್ಯಗಿ । ರಲ್ಲಿ ವಿಜಯಾ
ರ್ಧಲ್ಲಿ ನದಿ ಮ । ತ್ತೆಲ್ಲಿ ಪುಷ್ಕರಣೆಗಳು ದೇವಾರಣ್ಯವೆಡೆ ಯಿತರಾ ॥
ದಲ್ಲಿ ಯೊಂದೊಂದ್ಮೆ್ಲೇಚ್ಛ ಖಾಂಡಗ । ಳಲ್ಲಿ ಭೂತಾರಣ್ಯ ಜಿನಗೇ ।
ಹಲ್ಲಿ ಯೆಲ್ಲೆಲ್ಲಿರುವ ಚಿತ್ರಗಳೆಲ್ಲ ತೋರಿಸುತಾ ॥ ೨೪ ॥ ಮತ್ತೆ ತ್ರಿಭುವ
ನತಿಲಕ ದ್ವೀಪ । ದುತ್ತರ ನುರುಹದೀವಿ ವಾನರ । ಪತ್ತನವು ಪಾಲಾಶ
ಲಂಕೆಗಳೆಂಬ ದ್ವೀಪಾದಿ ॥ ಬೆತ್ತವಬ್ಧಿಯೊಳ ಹಲವು ದ್ವೀಪದ । ಬಿತ್ತ
ರವ ಗಳಾದ್ಗಡಲ ಸೌಂಧರ । ಚಿತ್ತದೊಲ್ಲಭೆ ಗೊಲಿದು ತೋರಿದನಾಗ ದಶ
ರಥನೂ ॥ ೨೫ ॥ ಅಲ್ಲಿ ಖೇಚರ ರಾಕ್ಷಸರ ಗೃಹ । ವೆಲ್ಲ ನವರತ್ನಗಳ
ಕೀಲಿತ । ದಲ್ಲಿ ರೂಪ್ಯ ಸ್ವರ್ಣಮಯದಿಂ ದೇವ ಭವನಗಳೂ ॥ ಸಲ್ಲ
ಲಿತ ನವರತ್ನ ಬಿಂಬಗ । ಳೆಲ್ಲ ಮಿಸುಸುಪ ಕರಣ ವೆಂತ್ರಾ । ದ್ಯಲ್ಲರಪ
ಚಯುಗ್ಯೆವ ಮಹಿಮೆಯನೆಲ್ಲ ತೋರಿದನೂ ॥ ೨೬ ॥ ನೋಡು ನಿನ್ನಡಿಯ
ದರದಂದದಿ । ನೋಡು ಜಾನುಗಳಕ್ಷಿಯಂಪದಿ । ನೋಡು ನಳಿತೋ
ಳ್ನಾಭಿಯಂದದಿ ಸುರುಳಿಗುರುಳುಗಳಾ ॥ ನೋಡು ಪೊರವಾ ದ್ವೀಪಶಿಖ
ರವ । ಕೂಡಿ ದೋೀಕ್ಷಜದಿಂದ ಶೃಂಗರ । ಗೂಡಿ ನಿನ್ನಂತಬ್ಧಿ ಸೊಗಸಿದು
ದಂಬುಜಾಂಬಕಿಯೇ ॥ ೨೭ ॥ ಸುಯ್ಯುತಿಹುದಾಗಾಗ ನಿಂನಂ । ತೊಯ್ಯ
ನೊಯ್ಯನೆ ಲಾಲಸದಿ ಬಳ । ಲೈಯ್ಯುತಿಹುದಾಲೋಕಿ ಸಂಬುಧಿಯಂದು
ತೋರಿಸುತಾ ॥ ಪ್ರೀಯ್ಯ ದೊಳಗೇ ನೇನು ಕೌತುಕ । ಸೈಯ್ಯಗ್ಗೊಳಿಸ್ಸುತ
ಲಭ್ರದಿಂದಿಳಿ । ದಯೋದಾ ನಗರಿಯನು ಸತಿ ಸಹ ಪೊಕ್ಕ ದಶರಥನೂ
॥ ೨೮ ॥ ಪೊಕ್ಕು ಗೃಹ ವೈಮಾನ ಸಂಚರ । ವಿಕ್ಕಿ ದಾಯುಸಪನ್ನು ಪರಿ
ಹರ । ವಿಕ್ಕುತರುಸಾರಾಧ ನಾಗನು ತೋರಿ ಕೇಳಿ ಸುತಾ ॥ ಘುಕ್ಕಬ್ಬುಯ

ಕೆಯ ಮಾಸ ಮಾಸಗ । ಳಕ್ಕೆರವ ತೀರಿಸುತ ನವ ಮಾ । ಸೊಕ್ಕ ಬಳಿ ಭಾದ್ರಪದ ಶುದ್ಧಷ್ಟಮಿಯ ದಿನವಲ್ಲೀ ॥ ೨೯ ॥ ಬಂದ ರೋಹಿಣಿ ತಾರೆಯೊಳು ಪೂ । ರ್ಣೇಂದು ಗಡಲೊಳ ಗುದಿಸಿ ದಂದದೊ । ಳಿಂದುಮುಖಿ ಸೌಮಿತ್ರೆ ಯುದರಾಬ್ಧಿಯೊಳು ಸಿಸುವಗೆಯೇ ॥ ಕಂದನಾಲೋಕಾರ್ಥ ದಶರಥ । ಬಂದು ಸೌಮಿತ್ರೆಯನು ನೋಡಾ । ನಂದ ಗೊಂಡನು ಸೀಲಮುಣಿ ಪುತ್ಥಳಿಯ ಕಂಡಂತೇ ॥ ೩೦ ॥ ಇರಲು ಹೀಗನು ಕ್ರಮದಿ ಕೈಕೆಗೆ । ದೊರೆದ ಶುಭ ಸ್ವಪ್ನಾಂತ್ಯ ಗರ್ಭವ । ತರಿಸಿ ಭರತಕ್ಷೇತ್ರ ವೀಕ್ಷಿಸದೋಹಳವು ಪುಟ್ಟೇ ॥ ತರಳ ಸುದಿಸಿದ ನಂತ್ಯ ಲಕ್ಷ್ಮಣೆ । ತರುಣಿ ಶುಭ ಸಪ್ನಾಂತ್ಯ ಅಘಹರ । ದರುಶನದಿ ಗರ್ಭದಿಸಿ ಪಡೆದಳು ಕೋಮಲಾಂಗನನೂ ॥ ೩೧ ॥ ಸುತ ಮುಖಾಲೋಕನದಿ ದಶ ದಿವ । ಸತಿಶಯದ ಸಮಯದಲಿ ನಾಮವ । ಜತಿಸಿ ಲಕ್ಷ್ಮಿಯ ಕಂಡ ಕಾರಣ ಲಕ್ಷ್ಮಣಸುಯೆಂದೂ ॥ ಕ್ಷಿತಿ ಭರತ ದೋಹಳದಿ ಕೈಕೆಯ । ಸುತಗೆ ಭರತಾಖ್ಯವನು ಲಕ್ಷ್ಮಣೆ । ಸುತಗೆ ಅಘಹರವರುಶನದಿ ಶತ್ರುಘ್ನನೆಂಬುದನೂ ॥ ೩೨ ॥ ಕ್ಷಿತಿಪ ದಶರಥನಿಟ್ಟು ಸುತರನು । ಮತಿಯೊಳಾರೈವುತಲಿ ಬಾಲ್ಯವು । ಗತಿಸಿ ಮಡಹೊರಳಂಬೆಗಾಲಿಡುವಾಗ ಚರಣಸರಾ ॥ ಜತೆಯೆ ಕಿಂಕಿಣಿ ವಲಯ ಚಲುಮರ । ಕತದ ಕುಂಡಲ ಕಡಗಸಾರಸ । ನತಿವಿಚಿತ್ರವ ಹಾರ ಸರಫಣಿ ರತ್ನಪದಕಗಳೂ ॥ ೩೩ ॥ ತೋಳ ಭಾಪುರಿ ತಾತಿ ಅರಳೆಲೆ । ತಾಲಿಕುಂಚಿಕೆ ಮಲಗುಲಾಯನು । ಮೇಳಿಸಿಟ್ಟೊ ಸಲೊಳಗೆ ಮೃಗಮದ ತಿಲಕವಂಜನವಾ ॥ ನೇಳಿಸೆತ್ತಾಡಿ ಸುತ ನವಮಣಿ । ಗೀಳಿಸಿದ ಪೊಂದೊಟ್ಟಿಲೊಳಗಿ । ಟ್ಟಾಳಿ ಸರಫಣಿ ಪಾಡಿ ತೂಗುವರಾಳಿ ಕನ್ನೆಯರು ॥ ೩೪ ॥ ಅಂಬುರುಹದಳ ನಯನ ಲಕ್ಷ್ಮಣ । ತುಂಬೆಗಲೆಯುತ ಲೊಮ್ಮೆಯಂಗಣ । ದಂಬುಜದಿ ದುರುದುಂಬೆಯಂದದಿ ಪರಿದು ನಟಿಸುತಲೀ ॥ ನಿಂಬು ಗೊಂಡಾಡುತಲಿ ಪಿತಜನ । ನಂಬಕಾನಂದವನು ಶ್ರುತಿಗಳ । ಚುಂಬಿದನು ಧ್ವನಿಯಿಂದ ಲಾಲಿತ ರೂಪಿನೇಳ್ಗೆಯಲಿ ॥ ೩೫ ॥ ಪೊನ್ನಪೊಸ ಪುತ್ಥಳಗಳತಿ ಚಲು । ವನ್ನು ಬಿಂಬಿಸ ಭರತ ಶತ್ರು । ಘ್ನನು ಬಾಲ್ಯಾಲಾಪಗೊಳಿಸುತ ಲೀಲೆ ಈಕ್ಷಿಸುತಾ ॥ ಅನ್ನಪ್ರಾಸುಕ ವಾದಿ ಕರ್ಮಗ । ಳನ್ನು ಕಾಲಕ್ರಮದಿ ಯಸಗುತ । ಲಿನ್ನು ತೊಡಗಿದರಕ್ಷರ ಭ್ಯಾಸಾದಿ ಶಾಸ್ತ್ರಗಳಾ ॥ ೩೬ ॥ ತೋರಿ ಗಂಗಾನ್ವೃತ ಪ್ರಾಯದ ಸ । ರಾಸಮೊ

ಳೊಂದೊರಿದು ಶಸ್ತ್ರಗ । ಳಾಗ್ರ ತ್ರೈಮೂರ್ತಿಗಳು ಕಲಿಯುತ ಸೂತ್ರ ಮೊದಲಾದಾ ॥ ಸಾರಸಂಗ್ರಹ ಆಗಮಗಳ ವಿ । ಚಾರ ಕರತಳ ಮಳ ಕವನು ವಿ। ಸ್ತಾರ ಗೈದರು ಖ್ಯಾತಿಯಿಂದವನೀಶ ಚಿತ್ತೈಸು ॥ ೩೭ ॥ ಶುದ್ಧ ಶಸ್ತ್ರಾಭ್ಯಾಸವನು ಅನು। ಬದ್ಧದಿಂ ಚೌಷಷ್ಠಿ ವಿದ್ಯ ಪ್ರ। ಸಿದ್ಧ ದಿಂದಗ್ರಜನ ಸಮಕಲಿ ನೆಲೆಯ ತೋರಿಸುವಾ ॥ ಶ್ರೀದ್ವರಾಜನುಜರಿಗೆ ಮಂ ತ್ರಾ। ಪ್ರವೃದ್ಧತವನಭ್ಯಾಸಿಸುತ ಸುಮ। ನೋದ್ಧತ ದೊಳನುರಾಗ ಪ್ಪೈತ್ರ ದೊಳೆಸೆದ ರವನೀಶಾ ॥ ೩೮ ॥ ತ್ರುಣವೆನಾಜ್ಞೆಯ ಮೀರದಲರ । ಕ್ಷಣ ವು ಅಗ್ರಜನಗಲದಲೆ ಅತಿ । ಮಿಣಿತಗೊಂಡಿರೆ ರಾಮಲಕ್ಷ್ಮಣ ನವಳಿ ಸುತ ರೆಂದೂ ॥ ಯೆಣಿಸುತಿಹರೀಕ್ಷಿತರು ಕಿರಿಕಿರಿ । ದಣುಗರತಿ ಮೋಹದಲಿ ಪೋರೋ। ರ್ಗಣೆಯ ಗೊಂಡಿರಲವರ ನವಳಿಗಳೆಂಬರರಿ ದವರೂ ॥ ೩೯ ॥ ಅಂತರಾಳೋಚನೆ ಯೊಳೀರ್ವರೇ । ಕಾಂತರಾಗಿನ್ನೆರಡು ಪಕ್ಷಗ। ಳಂತಿ ಳಿಯ ದತಿಮಿತ್ರ ಚಾತುರ್ದಂತಿ ಚತುರಾಸ್ಯಾ ॥ ನಂತೆ ದಿಕ್ಕುಂಭಿಗಳಕ್ಕುಂ ಭದಿ । ನಿಂತು ನರ್ತಿಪ ಕೀರ್ತಿಸತಿಗನು । ವಾಂತ ಬಲಯುತ ರಾಮ ಲಕ್ಷ್ಮಣ ಭರತ ಶತ್ರುಘ್ನಾ ॥ ೪೦ ॥ ಕೂಡಿ ಚಾತುರ್ಪದ್ಮರಾಗದ । ಜೋ ಡುಜೋಡುಗಳಂತೆ ನಾಲ್ವರು । ಕೂಡಿ ಪ್ರಬಲತ್ವವನು ತೋರಿಪ ಕೆಂದ ರಾನಂದ ॥ ಗೂಡಿ ಸುಧೆಗಡಲೊಳಗೆ ಕೇಳಿಯ। ನಾಡುತಿಹ ಕೌಶಲ್ಯೆಗ ನುಸರ। ಗೂಡಿ ಬಹ ಸೌಮಿತ್ರೆ ಕೈಕಿಲೆ ಸಹಯ ಲಕ್ಷ್ಮಣೆಯೂ ॥ ೪೧ ॥ ಸುತರ ಸಂಯುತವಂತೆ ತಾಯ್ಗಳ । ಹಿತಗಳೀಲೀರ್ವರಿಗೆ ಜನಸಂ। ಮ ತಕೆ ನಾಲ್ವರು ಯೇಕರಾಸಿಯೆ ಚಾತುರಾಬ್ಧಿಯಲೀ ॥ ಪ್ರತಿಗತಿಯ ಕೇಳಿ ಯೊಳಗಿಹರನು । ಮತದ ಸುಖವೇಕಾಗ್ರದಲಿ ದಶ। ರಥನು ಸುತಸಲ್ಲಾಪ ಕ್ರೀಡೆಯಗೈವ ನನವರತಾ ॥ ೪೨ ॥ ಆರು ಮುಲತಿಹನಾರು ಸೆಣಸುವ। ರಾರು ಯುದುರೇರುವರು ಅಣೆ । ಮಣಿಯಾರು ತೋರುವರವರ ನಾಕ್ರಮ ಗೈವ ಜೆಸದಿಂದಾ ॥ ಕೋರದಲೆ ಚತುರಂಗರೂಳಿಗ । ಕೋರುವರ ನಾರ್ವೈ ಸವಲೆ ಬಲು। ವಿಾರಿಪೋಪರು ರಾಮಲಕ್ಷ್ಮಣರೀರ್ವ ರಧಿಕದಲೀ ॥ ೪೩ ॥ ಕೋಟಿ ದಶಕೋಟಿರ್ಭುದವು ದಳ। ಕೂಟವೇಷ್ಟಕ್ಷೋಹಿಣಿಯ ಕೈಯ್ಯಾಟ। ನಡೆಯುದು ಕೌಶಲೆಯ ಸೌಮಿತ್ರಿ ಯಗ್ರದಲಿ ॥ ಕೋಟಲೆಯ ಬಿಡುತಿಹರು ನೃಪ ಕರಿ। ಕೂಟ ಕೋಳಾಹಳದಿ ಸಿಂಹಗ। ಳಾಟದಿಂ ಬಿಂದಿಸುವ ಸ ತ್ವದಿ ಸಮರ್ಥ ರಾಗಿಹರೂ ॥ ೪೪ ॥ ಇಷ್ಟು ಪ್ರಶ್ನಾತ್ರಿತಕೆ ಫಲವೆ ।

ದೃಷ್ಟ ವೆನಲಚ್ಚುತನ ಬಿಟ್ಟೆ । ಸೃಷ್ಟಿ ಗೈದಿದ ಕಾರಣದಿ ಕಮನೀಯ ತನು ಶೌರ್ಯಾ ॥ ಅಷ್ಟ ಮಹದೈಶ್ವರ್ಯ ನೃಪ ರತಿ । ಶ್ರೇಷ್ಟ ಬಲನಾರಾಯಣತ್ವ । ಕ್ಕಿಷ್ಟರಾಗಿಹರು ರಾಮ ಲಕ್ಷ್ಮಣ ಭರತ ಶತೃಘ್ನಾ ॥ ೪೫ ॥ ಗಾಡಿಯಲಿ ಮೋಡಿಯಲಿ ವಯ ಕಲೆ । ಗೂಡಿ ತನು ಪಿಂಡಾಯತದಿ ಕಲೆ । ಗೂಡಿ ಹಲಕುಲಿ ಸಂಬುಜಾಸನ ಮತ್ತಿ ಕಾರೆಳ್ಳೂ ॥ ಮೂಡಿ ಶುಭ ಲಕ್ಷಣದಿ ಕೌಸ್ತುಂಭ । ಗೂಡಿ ಲಕ್ಷ್ಮಣ ಸಹಿತ ನಾಲ್ವರು । ನೋಡಿ ದಶರಥ ಮುಕ್ತಿಯರಸನ ಸೌಖ್ಯದಿಂದೆಸೆದಾ ॥ ೪೬ ॥ ಕಲಿಲಹರ ಮುನಿ ಸೂನ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ಲೊಲವನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ಲೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೪೭ ॥

ಅಂತು ಸ್ವಾಸ ೫ ಕ್ಕಂ ಪದನು ೨೬೩ ಕ್ಕಂ ಮಂಗಳಮಹಾ. ಶ್ರೀ.

ಆರನೆಯ ಸಂಧಿ.

ಲಂಕಾ ವರ್ಣನೆ.

ಹಲವು ದ್ವೀಪಗಳೊಳಗೆ ಶೋಭಾ । ಲಲಿತವಾಗಿಹ ರಕ್ಷದೀವಿಯ । ಚಲುವ ನಭಿವರ್ಣ್ಣಿಸುವೆ ಲಂಕಾನಗರ ಸಹವಾಗೀ ॥ ಪಲ್ಲವಿ ॥

ಯಲೆ ನೃಪಾಲನೆ ರಾಮಲಕ್ಷ್ಮಣ । ಲೊಲವನಾ ಲೊಡನೆಗೆ ನಿಲಿಸವ । ರಲಘುಸಾಹಸರೆಲ್ಲ ವಿದ್ಯ ಪ್ರಬಲದೊಳುಸಂದೂ ॥ ಬಲನು ಹಲಧರನೆನಲು ರಾಮಗೆ । ಸಲುವ ನಾಮ ದಿಶಾಗ್ನಿಯೊಳು ಸಮ । ನಿಲುವರಿಲ್ಲ ದಲಾಮ

ದಾತನ ಬಾಣ ರಾಂಬಾಣಾ ॥ ೧ ॥ ಖಾಂಡದೊಳು ಸೌಮಿತ್ರಿಯದುರು । ಷಂಡರಿಲ್ಲದೆ ಯೊಳಗೆ ಬಹುಸಾ । ಮುಂಡ ಕಾರಣವಾದುದು ಗದಾಯುದೆಂ ಬಾಖ್ಯಾ ॥ ಕಂಡು ಬರೆ ಬಲವಾಸುದೇವಾ । ಖ್ಯಂಡಲೆದು ಪಿಂಡೀತೆರದ ಹೆಸ । ಗೊಂಡರಂತಾ ವೈಭವಾಂತರಿಗೆಲ್ಲವೀ ನಾಮಾ ॥ ೨ ॥ ಸಂದು ಧರೆಗ ಪ್ರತಿಮು ರೆನಿಸಿಹ । ರೊಂದಿ ಕೈಕೆಯ ಕಂದ ಲಕ್ಷ್ಮಣೆ । ನಂದನನು ಸಹೆ ಪೂರ್ವಪರವಿಂ ದಕ್ಷಿಣೊತ್ತರಕೇ ॥ ಸಿಂದಸಿಂಧೂರಗಳ ಪೇರ್ಬಲ । ದಿಂಪಲಿರೆ ಕೌಶಲ್ಯದೊಳಗ । ತ್ತೊಂದು ಕಥನಾ ಧರಿಸು ಶ್ರೇಣಿಕನೆಸಲು ಗೌತಮರು ॥ ೩ ॥ ಇಲ್ಲಿ ಯಿಹ ಲವಣಾಬ್ಧಿಯುಗಲಿಂ । ನಲ್ಲಿ ಇಪ್ಪತ್ತೈದು ಸಾಸಿರ । ದಲ್ಲಿ ಯೋಜನವೆರಡು ಕೊನೆಗಳಯೋಧ್ಯ ಸಮನಾಗೀ ॥ ನಿಲ್ಲೆ ಪೂರ್ವಾಪರ ದೊಳದರಿಂ । ಕ್ಷುಲ್ಲಕಾಬ್ದೆಂದೆಳೆವರೆಯ ತೆರ । ದಲ್ಲಿ ದಕ್ಷಿಣ ವಿಹುದು ಬಹು ದ್ವೀಪುಂಟು ಅದರಲ್ಲಿ ॥ ೪ ॥ ಎಲ್ಲಿ ಪ್ರಸ್ತಾವಗಳೊ ಆಯಡೆ । ಯೆಲ್ಲಿ ಪೇಳುವ ದ್ವೀಪ ವಿರಲವ । ರಲ್ಲಿ ವುತ್ಕೃಷ್ಟಾದುದೊಂದೆ ದ್ವೀಪಭಗಣಗಣಾ ॥ ವಲ್ಲಿ ತಾರಾಧಿಪನ ತೆರದೊಳ । ಗುಲ್ಲಸವ ಕಣ್ಮನಕೆ ಶ್ರವಗಳಿ । ಗೆಲ್ಲ ಪೀಯೂಷಾ ವತಂಸನ ಕೊಡುವ ತೆರನಿಹುದೂ ॥ ೫ ॥ ತಣಿಯ ತೊಡಗೈನೂರ ಯೋಜನ । ದೆಡೆಯ ನಡುಗಡಲೊಳಗೆ ವೃತ್ತವ । ತೊಡಗಿ ದೇಳ್ನೂರ್ಯೋಜನಗಲ ದೊಳೊಂದು ಸದ್ವೀಪಾ ॥ ಕಡಲ ಮೇ ಲ್ಪದಿನಾಲ್ಕು ಯೋಜನ । ತೊಡಗಿದುತ್ಸೇದದಲಿ ಕಡು ಸೋಂ । ಪೊಡೆದ ರಾಕ್ಷಸ ದೀವಿಯೆಂಬುದು ಇರುವುದವನೀಶಾ ॥ ೬ ॥ ಹಲವು ತೆರ ವೃಕ್ಷ ಗಳು ನಾನಾ । ಫಲವು ಬೆಳೆ ಕೊಳ ಸರಸಿ ಕೆರೆ ತೊರೆ । ಕುಲಿಶ ಮರ ಕತ ಸೀಲಗೈರಿಕ ಧಾತು ನೆಲಗಟ್ಟೂ ॥ ಶಿಲೆಗಳೆಲ್ಲವು ಪದ್ಮರಾಗೋ । ಜ್ವಲವಿ ರಾಜಿಪ ದ್ವೀಪವದರೊಳು । ನೆಲಸಿ ತ್ರಿಕೂಟಾಚಲವು ಸೊಗಸಿಂ ದಲೆಸದಿಹುದು ॥ ೭ ॥ ಪೂರ್ವಪರ ತೊಂಬತ್ತು ಯೋಜನ । ಪರ್ವದ ಗಲೈವತ್ತು ಯೋಜನ । ತೋರ್ವನಗ ತ್ರೈಕೂಟ ವೆಸರೊಳಗೇಕ ಶಿಲೆ ಯಾದಾ ॥ ಪರ್ವತಾಗ್ರ ದೊಳಸಿತು ಸಮತಳ । ದೂರ್ವಿರಜತಾ ಚಲಕೆ ಸಮವ ವಿಘೂರ್ವಣೆಯೊಳೊಪ್ಪಿಹುದು ದ್ವಾದಶಯೋಜನುದ್ದದಲಿ ॥ ೮ ॥ ಮೆರೆವನಗ ಮಧ್ಯದಲಿ ಲಂಕಾ । ಪುರಿಯು ತ್ರಿಂಶದ್ಯೋಜನಗಲನು । ಸರಿಸಿ ವೃತ್ತಾಕಾರದಿಂದಸವೆತ್ತು ರಂಜಿಸುವಾ ॥ ಪರಿಧಿ ಜಲಖಾತಿಗಳು ಯೇಳೇ । ಳೊರಿಸಿ ನಾನಾಚಿತ್ರವಾಗಿಹ । ತೆರನನಪ ಸುತ್ತೇಳುವನಗಳ

ರಚನೆ ವಿರಚಿಸುವೇ ॥ ೯ ॥ ಕಡೆಯ ಸುತ್ತಿನ ವನದೊಳಗೆ ದಿವ । ಪ್ರೌಢವಿ ಜನಗಳಾ ರಿಚೆಗನುಸರ । ವಡೆದ ವಸ್ತುಗಳಿತ್ತು ಮನಸಂಮೋದ ಗೊಳಿಸುತಿಹಾ ॥ ದಡಸಿ ಶೃಂಗರದಿಂದ ಲಸತ್ಕಲೆ । ಗುಡುವ ಖಾಂಢಾವನದ ಪೆಸರಳ । ವಡಿಸಿದಾರಾಮವನಿ ನಾಯಕನೆಂಡನಾ ಮುನಿಪಾ ॥ ೧೦ ॥ ಆರನೆಯ ಸುತ್ತಿನೊಳಗಮೋಘ । ಸಾರಚೂತಾವನಿಜ ಬಹುತೆರ । ದೋರಿ ಜಂಬೂದ್ವೀಪದೊಳ ಗಿರದುತ್ತಮೊಸ್ತುಗಳೂ ॥ ಸಾರಿ ಯನುಗಾಲದಲಿ ಸತ್ಫಲ । ದ್ಯೋರಿ ಮಕರಂದವನು ಘ್ರಾಣಕೆ । ಬೀರಿ ಸೊಗಸುವ ಚೂತರಮಣದ ವೆಸರ ನಂದನವು ॥ ೧೧ ॥ ಇನ್ನು ಐದನೆ ಸುತ್ತಿನಲಿ ಘನ । ಸನ್ನು ಬಿತ್ತಿಹರುಕ್ಷ ಫಲತೆರ । ವಿಂನುಪಸುರ್ಗಂ ಪಡಸಿದಮ್ರುತಾ ಸಾರವಾದಿಯಲೀ ॥ ಸನ್ನುತ ದೊಳಾವಾಗ ಫಲ । ವಿಲ್ಲೆಂನಿಸದ ಆೀಕಾಗ್ರ ಸಿಂಗರ । ವಸ್ನು ತಾಳಿಹರಮ್ಯಕಾಖ್ಯ ದೊಳವನಿ ನಾಯಕನೇ ॥ ೧೨ ॥ ಲೇಸರೂಪಸುಕ್ರಮ ವಿದಗ್ಧಿಯ । ಭಾಸದಂತದ ಪಂಕ್ತಿಗಳ ಚಲು । ವಾಸಿಸುವ ದಾಡಿಮದ ಬಿತ್ತುಗಳಪ್ಪಿ ಫಲಸಸಿಯಾ ॥ ಬೀಸರಗಳಿಂ ಪದ್ಮರಾಗವಿ । ಲಾಸ ವೆಸರಾರಾಮವತಿ ಸಂ । ಕಾಸವೀವುದು ನಾಲ್ಕು ಸುತ್ತಿನೆಲವನಿನಾಯಕನೇ ॥ ೧೩ ॥ ನಾರಿಕೇಳಂಜೂರ ಕಿತ್ತಳಿ । ನೇರಿಳೆಯು ಜಂಬೀರ ಪೂಗೆಲೆ । ಸಾರಪಂ ನೇರಿಳೆಯು ಮೊದಲಾದೆಲ್ಲ ಸಂಕೀರ್ಣಾ ॥ ಧಾರುಣಿ ಜಗಳ ಸಾರಿ ಶೃಂಗರ । ದೋರಿ ಸಂಕೀರ್ಣಾಖ್ಯವನ ವಿಸ್ತಾರಗೈದಾರಾಮ ಸೊಗಸಿತು ಮೂರು ಸುತ್ತಿನಲೀ ॥ ೧೪ ॥ ಸುರಗಿ ಚಂಪಕ ಜಾಜಿ ಮಲ್ಲಿಗೆ । ಸಿರಸ ಶಾವಂತ್ಮೊಲ್ಲೆ ಸುರಹೊ । ನ್ನರಕತದ ಮುಡಿವಾಳು ಸೀರಗಳೆಡೆ ಕಚೋರಗಳೂ ॥ ಚಿರಕೆಗೊಂಡಿಹ ಪಾರಿಜಾತದ । ತರುಗಳಿಂ ಲತೆಯಿಂದ ಸೌರಭ । ಗರೆವ ನಂದಕದಂಬ ವೆಸರೊಳಗೆರಡನೆಯ ವನವು ॥ ೧೫ ॥ ನೀರ ಕದಳೆಳೆಲೆ ಸುವಾಳೆಯು । ತೋರಬೇಲ್ಯಾಲಕ್ಕಿ ಕರ್ಪುರ । ಸಾರ ರಂಭಾರಸ ಸುಮೋಚಗಳಾದಿ ವೃಕ್ಷಗಳಾ ॥ ಸಾರಿ ಕುಸುರಿಯು ಮೊಗ್ಗೆಘುಂ ಫಲ । ದೋರಿಸಲಹಿದ ಧಾರುಣೀಸತಿ । ಗಾರತಿಯ ತಾಳ್ದಂದೆ ರಂಭಾವೆಸರ ವನವಾದೀ ॥ ೧೬ ॥ ಆದಿಯಲಿ ರಂಭಾಕದಂಬ ವಿ । ದಾದ ಸಂಕೀರ್ಣೋನದ ಮೇಲಿಂ । ನಾಡುದಂಗೆ ಪದ್ಮಾಭನಂದನ ಚೂತ ರಮಣಾಖ್ಯಾ ॥ ವೇದಿಖಾಂಡಾ ವನವು ಸಹಪೇಳಾದ ವಾರಾಮತಿ ಮನ್ನೋಹರ । ವಾದ ವನಗಳ ಸೊಂಪಿನಿಂ ವರ್ಣಿ

ಸುಪವನಪಥರಿಸೂ ॥ ೧೭ ॥ ಲಕ್ಷ್ಮಿಯೋಲ್ಮೇಣ್ಮೇಕ್ಷ ಸಾಧಿತ । ಭಿಕ್ಷು
ವ್ರೋ ಲಕ್ಷಯುವ ಪಾತ್ರೈ । ದೃಕ್ಷ ಡೊಲ್ಮೇಣಿಮೃತ ಮಯುದರತುಭಯ
ಪಕ್ಷವಿದಾ ॥ ಸೀಕ್ಷಮೊಲವೈದರ ಮನೋಹರ । ವೀಕ್ಷ ಡೊಳಾಸರಿದ
ಕರ ಶರ । ವೀಕ್ಷುಚಾಪ ನೊಲೆಸೆದು ದಾರಾಮವನಿ ನಾಯಕನೇ ॥ ೧೮ ॥
ಶರಹರಿಗೆ ಖಡ್ಗ ಗ್ರನಾಯುಧ । ಸರಸಿಜಾಕ್ಷನ ಪೊಪವು ಬ್ರಹ್ಮಸೆ । ಕರದ
ಚಲುವನು ಪೊರ್ದಿ ಭಾಸ್ಕರನಂತೆ ಶಶಿಯಂತೆ ॥ ತರುಣಿಯನೆ ಹಸುರಂತೆ
ಮಸಿಯನೆ । ಹರಿತದೋಲತಿ ಬಿಳ್ಪು ಕೆಂಪಿನ । ಇದವಿನೊಳಗಾರಾಮ
ಮೆರೆದಿಹುದವನಿ ನಾಯಕನೇ ॥ ೧೯ ॥ ಪಚ್ಚೆ ಪರಿಧಿ ಕದಂಬ ಕುಸುಮಗ ।
ಳೊಚ್ಚಿ ಪರಿಧಿನ್ನಾನ ರತ್ನವ । ಕೆಚ್ಚಿ ಕೋಂಟೆಯು ಪದ್ಮರಾಗದ ಮುದ್ದು ಪ್ರಾ
ಕಾರಾ ॥ ಸಿಚ್ಚಳದ ವೈಢೂರ್ಯ ಸುತ್ತಿಂ । ನಚ್ಚ ಹಳದಿಯ ಕೋಂಟೆ
ನಾ । ನಾ ಬಚ್ಚರಣೆ ಕಡೆಯೇಳು ಸುತ್ತಿನ ಕೋಂಟೆಯಂತಿಹವೂ ॥ ೨೦ ॥
ರಾಜಿಸುವ ನಂದನಗಳೊಳಗೆ ಸ । ರೋಜವಿಲ್ಲದ ಸರಸಿ ಹಂಸೆ ವಿ । ರಾ
ಜವಿಲ್ಲದ ಷಂಡಷಂಡದಿ ನರ್ತಿಸುವ ಹಂಸೇ ॥ ರಾಜಿರಾಜಿತ ಅಳಿಯ
ಗ್ಗಾನ ವಿ । ಸೂಜಿ ಗೀಜುಗಳಿರದ ಖಗಸಂ । ಕೂಜ ಕಸ್ತುರಿ ಪುಣುಗಮೃ
ಗವಿರದಿಲ್ಲ ವನವೆಲ್ಲಾ ॥ ೨೧ ॥ ಇಂತು ರಾಜಿಪ ವನಗಳೇಳತ । ಅಂತ
ಸಂಕೀರ್ಣೋನದೊಳಗೆ ಜಗ । ತ್ಕಾಂತನಾಲಯ ಸತ್ರಿಯೋಜನನೀಳ ಪೂರ್ವ
ಪರಾ ॥ ನಿಂತ ದೈವತ್ಯೋಜನಗಲ ದಿ । ಗಂತಮುತ್ಪತ್ತೀಸ ಯೋಜನ ।
ಶಾಂತಿ ತೀರ್ಥಾಲಯವು ಮಿಸುನಿಯ ರೂಪ್ಯಮಯದಿಂದಾ ॥ ೨೨ ॥ ರತ್ನ
ಕೆತ್ತಿದ ಸೌಧಸಿಖರತಿ । ನೂತ್ನದಿಂದಿಹ ವೇಳು ಯೇಳೆ । ಳ್ನೂತ್ನ ಕಳಸ
ಗಳಡ್ಡಿಸುವ ವಿನಶಶಿಯ ಮಾರ್ಗಗಳಾ ॥ ಸುತ್ನವೀನದ ಪರಿಧಿ ಮೂರಿಂ ।
ನೆತ್ನತೆನೆ ತ್ರೈಕೂಟದಿಂದ ವಿ । ನೂತ್ನಧ್ವಜ ಕೇತನ ವನೇಕವು ಬಸದಿ
ಯಾ ವೃತ್ತದಿ ॥ ೨೩ ॥ ಯಲ್ಲ ವನದೊಳು ಕುಲ್ಯ ಪುಷ್ಕರ । ಇಲ್ಲಿ ಜೈ
ತ್ಯಾಲಯದ ಸುತ್ತಿನೊ । ಳಲ್ಲಿಗಲ್ಲಿಗೆ ಕೊಳ ಸರೋವರ ರತ್ನ ಹಲಗೆಗಳಾ ॥
ನಲ್ಲಿ ಪಾವಟಿಗೈದು ಬಿಗಿಗ । ಚ್ಚಲ್ಲಿ ಕುಂದಣದಿಂದ ಗೈದಿಹ । ವೆಲ್ಲಯೊಳು
ಜಲಕೇಳಿಗೈವರು ನಿರುತ ನಿರ್ಜರರೂ ॥ ೨೪ ॥ ನೋಡಿ ಯಕ್ರುತವು ಏದ್ದ
ಕೂಟ । ನೋಡಿ ಇಲ್ಲೆಂ ದ್ವಿಂತರರು ಕೊಂ । ಡಾಡಿ ನರ್ತಿಪರಮ ರರಪ
ಚಯುಗೈವರಸ ಪರತಾ ॥ ಆಡುತಿಹರಾರಾಮ ಜಲ ಕ್ರೀ । ಡಾಡುತಿಹ
ರಾ ಚಲುವನೊರ್ಣನೆ । ಸಾಡಲಸದಳ ಸೂರಿಗಳಿಗವನೀಶಚಿತ್ತೈಸೂ ॥ ೨೫ ॥

ಇರಲಿ ಇತ್ತೊಳಗೇಳು ಕೋಟೆಯ । ತೆರನು ಮರಕತ ಸುತ್ತು ಮೇಲುರು । ತರಪ ಕೆಂಪಿನ ಸುತ್ತ ತೆನೆಗಳು ಡೆಂಕಣಟ್ಟಣೆಯಾ ॥ ವೆರಸಿ ಯೋಜನ ಮನ್ನತದಿ ಬಿಗಿ । ಗರೆದ ಮಿಸುನಿಯ ಸಲಿಗೆಯಲಿ ಮನೋ । ಹರವ ನೀವುದು ಮೊದಲ ಪರಿದವನೀಶ ಚಿತ್ತೈಸೂ ॥ ೨೬ ॥ ಇನ್ನು ಯರಡನೆ ಪರಿಧಿ ಕುಲಿಶದ । ರಂನವಲಗೆಲಿ ರಚಿತ ತೆನೆ ಸಾ । ಲಂನು ಪಚ್ಚೆಯೊಳೆತ್ತಿ ಕನಕಪ ಸೂತ್ರ ಬಿಗಿಯಿಂದಾ ॥ ಚನ್ನ ವಡೆದಾಲೋಕ ರಂಬಕ । ವನ್ನು ತರೆವಿಡಿವಂತೆ ಡೆಂಕಣಿ । ಯಿನ್ನು ಮುಗಿಲಟ್ಟಣೆಗಳೆಸೆದವು ರಾಯ ಚಿತ್ತೈಸೂ ॥ ೨೭ ॥ ಪದ್ಮರಾಗದ ಶಿಲೆಗಳನು ಸರಿ । ಹೊದ್ಮೆ ಗೈದಲ್ಲಲ್ಲಿ ಮರಕತ । ಮೊದ್ಮ ಬಿಗಿಯಟ್ಟಣೆ ಗಳಿಂದಲಿ ರೂಪ್ಯ ಗಚ್ಚಿನಲೀ ॥ ಮುದ್ಮ ಮನೋಹರ ವೀಕ್ಷಿತಾಕ್ಷಿಗ । ಳೊದ್ಮೆಯಲಿ ರಾಜಿಸುವ ಮೂರನೆ । ಯದ್ಮ ನೋಜನ ಪರಿಧಿಯಂತ ವನೀಶ ಚಿತ್ತೈಸೂ ॥ ೨೮ ॥ ಆಣೆ ಮುತ್ತುಗಳಾಘ್ದು ಸರಗಳ । ಪೋಣಿಸಿದ ತೆರನಾಗಿ ಸರಿಸಕೆ । ಕೇಣಗೊಳಿಸಲ್ಲಲ್ಲಿ ಮರಕತ ರತ್ನ ಬಿಗಿಗೊಟ್ಟೊ ॥ ಬೀಣಿಸಿದ ರಸಮಿಸುನಿ ಗಚ್ಚಿನ । ತ್ರಾಣ ಗೈದೆತ್ಪದ್ಮರಾಗದ । ಮಾಣಿಕದ ತೆನೆಯಿಂದ ಲೊಪ್ಪಿತು ಪರಿಧಿ ನಾಲ್ಕನೆಯಾ ॥ ೨೯ ॥ ಕೆತ್ತಿ ಹಲಗೆಯ ಗೈದು ಸಾಲಾ । ಗೆತ್ತಿ ವಿಧ್ರುಮ ಶಿಲೆಗಳಿಗೆ ನಡು । ವತ್ತು ನೀಲಗಳಿತ್ತು ಸ್ವರ್ಣದ ನೀರ ನುಂಗಿಸುತ ॥ ಮುತ್ತಿನಟ್ಟಣೆ ತೆನೆಯ ತರತರ । ಕೆತ್ತಿ ಸಾಲಿನ ಮೇಲೆ ಡಿಂಕಣೆ । ಯೊತ್ತಿ ಶೋಭಿಪ ಕೋಟೆಯೈದನೆ ದರಸ ಚಿತ್ತೈಸೂ ॥ ೩೦ ॥ ಆರು ಸುತ್ತಿಗೆ ಹಲಪು ರತ್ನವ । ಸೇರಿಸುತ ಸುರುಚಿರದ ಮಿಸುನಿಯ । ನೀರಮಯದಿಂದತಿ ವಿಚಿತ್ರದಿ ಮೆರೆವಪದರಗಾ್ರ ॥ ತೋರಪಚ್ಚೆಯ ನೀಲರತ್ನ ವಿ । ಕಾರ ತೆನೆ ಸಾಲಿಂದ ಡಿಂಕಣೆ । ತೋರಿಸುವ ದಾನಂದ ವಕ್ಷಿಗೆ ನಿರುತ ನೋಳ್ಪರಿಗೆ ॥ ೩೧ ॥ ನಿಚ್ಚ ಮಿಸುಗುವ ತಪ್ತ ಕಾಂಚನ । ದಚ್ಚ ಪರಿಧಿಯ ಹಲಗೆಗಳು ವಿ । ಕೊಚ್ಚ ರಾಗಿಹ ವರಿಯ ಬಾರದ ತೆರದಿ ಸಂದುಗಳಾ ॥ ಕೆಚ್ಚಿದಂತಿಹುವಗ್ರ ಮಾಣಿಕ । ಪಚ್ಚೆ ತೆನೆಗಳು ಸಾಲು ಡಿಂಕಿಣೆ । ಸಚ್ಚರಿತ್ರವ ಶೋಭರ್ಪದೇಳನೆ ಕೋಂಟೆಯನವರತಾ ॥ ೩೨ ॥ ಆ ಪುರಾಂಗನೆಗಳಿಕೆ ಶೃಂಗರ । ದಾಪಯಿತ ಚಿಂತಾಕು ಪದಕ ವಿ । ಲೇಪವಾಗಿಹ ಹತ್ತೆಗಟ್ಟಿಂನ್ಮಿಗಿಲ ಭೂಷಣದಾ ॥ ವ್ಯಾಪಕವೊ ಯೆನಲೇಳು ಸುತ್ತಿನ । ನೂಪುರವೊ ಪುರಪರಿಧಿಯುಪರು । ತ್ತಾಪರತ್ನಗಳೆಲ್ಲ ಬೆಳೆದಿಂತಾದ ವೆನಲಿಹುದೂ ॥ ೩೩ ॥

ಕನಕ ನಾನಾರತ್ನ ವಿದ್ರುಮ । ವನುಪ ಮುತ್ತಿನ ಪದ್ಮರಾಗ । ಜ್ಜನಿತ ವಜ್ರದ ಪಙ್ಕ್ತಿ ಪರಿಧಿಗಳೇಳು ಯೋಜನದಾ ॥ ಸನುತ ವುತ್ಸೇದವಕೆ ಗೋಪುರ । ಜನಿಸಿಹವು ಬತ್ತೀಶ ಮೊಂದೊಂ । ದೆನುವ ಕೋಟಿಗೆ ಕೋಶದುನ್ನತ ವಗಲ ದದರರ್ಧಾ ॥ ೩೪ ॥ ಯಲ್ಲದ್ವಾರ್ಸವ ರತ್ನ ಕಿಲಣೆ । ಯಲ್ಲಿ ಸತ್ಕಲೆಯಿಂದಲಿಹ ವನ । ಕೆಲ್ಲ ಕಳಸ್ಯೆದ್ಯೆದು ಕ್ಷುಲ್ಲಕದ್ವಾರ ಬತ್ತೀಸ ॥ ಸಲ್ಲಲಿತವಾಗಿಹವು ಮಣಿಗಣ । ದಲ್ಲಿ ಕಂದಕವೇಳು ವುದ್ದಿಂ । ನಲ್ಲಿ ಕೋಶವರರ್ಧಯಾಮುಗಳಲ್ಲಿ ಸೊಗಸಿಹವೂ ॥ ೩೫ ॥ ನೀರ ಕರಿ ಹಯ ಆಳು ಮರ್ಕಟ । ತೇರುವರ್ದ್ದುರ ಮೊಸಳೆ ಕರ್ಕಟ । ವೋರಿ ಸಿಹ ಮಕರಗಳ ಘಾವದ ಖಾತಿ ಜಲವಲ್ಲೀ ॥ ತೋರುವಾರಣ್ಯದಲಿ ಸಿಂಹ ಚ । ಮೂರ ಮದ ಗಜ ಕರಡಿ ಸೂಕರ । ಸಾರಸಾರಂಗಗಳು ಶರಭ ಲುಲಾಯಿ ಭೇರುಂಡಾ ॥ ೩೬ ॥ ಭೀರ ತರ ಮೃಗ ವಿಹವು ವನದೊಳು । ಕೀರ ಪಿಕ ಮಯ್ಯೂರ ಹಂಸೆಯು । ಪಾರಿವತ ಗರುಡುರುಗ ಕುಕ್ಕುಟಸರ್ಪ ಕರಿಕಂಠಾ ॥ ಸಾರಿ ನಾನಾ ಜಾತಿ ಕಲಕಲ । ದೋರುತಿರೆ ತುಂಬೆಗಳ ಗಾನದಿ । ಮಾರನರಮನೆ ಯಂತೆ ಸೊಗಸಿದು ದಟವಿ ವನವೆಲ್ಲಾ ॥ ೩೭ ॥ ಯಲ್ಲಿ ನೋಡಲು ಹಳದಿ ಬಿಳಿದಿಂ । ನೆಲ್ಲಿ ನೋಡಲು ಹಸರು ಕೆಂಪಿಂ । ನೆಲ್ಲಿ ನೋಡಲು ನೀಲ ಗೈರಿಕ ವಲ್ಲದಿಳೆಯಿಲ್ಲಾ ॥ ಯಲ್ಲ ರಕ್ಷ ದ್ವೀಪ ಶೋಭೆಯ । ಫಲ್ಲಿಸುವದಿಂ ನ್ನುರದ ಶೃಂಗರ । ವೆಲ್ಲ ವಿರಚನ ಗೈವೆ ನವಧರಿಸವನಿ ನಾಯಕನೇ ॥ ೩೮ ॥ ಪರದ ವಾಟಿಗಳಲ್ಲಿ ವಿದ್ರುಮ । ಮರಕತವು ಪವಿಪದ್ಮರಾಗದ । ಹರಿಯ ನೀಲ್ವೈಢೂರ್ಯ ಮೌಕ್ತಿಕ ಪುಷ್ಯರಾಗಗಳೂ ॥ ಮಿರುಪ ಗೋಮೇಧಿಕವ ರಾಶಿಯ । ಹೆರೆಯೊಳ ಗೆಲುಳಿಬೆಳೆ ಪವಿತ್ರದ । ಬೆರಳ ಮುದ್ರಿಕೆ ಚರಣ ಮೇಖಲೆ ವಲಯ ಕಿಂಕಿಣಿಯಾ ॥ ೩೯ ॥ ಕರದ ಕಂಕಣ ಚಳಿಕೆ ಹಿಂಬಳೆ । ಕೊರಳ ಸರ ಗೋ ಸ್ತನ ಶತೇಷ್ಟಿಯ । ಸರಸುತಾ ರಾಮಾಲೆ ಕೇಯ್ಯೂರ್ವಜ್ಞೆ ಪದಕಗಳು ॥ ಮಿರುಪ ಕರ್ಣಾಭರಣ ನೊಸಲನು । ಕರಿತ ಮುತ್ತಿನ ಬಟ್ಟು ಶಶಿ ರವಿ । ಕುರುಳ ರ್‍ಯಾಗಟೆ ಕೇದಗೆಯ ಶಾವ್ತಂತಿಪೂವ್ವಾದಿ ॥೪೦॥ ಸ್ತ್ರೀಪುರುಷರಿಡು ವಂಗ ಭೂಷಣ । ದಾಪ ಯಿತ ಹಣ ಹೊನ್ನ ರಾಸಿಯ । ರೀಪರಿಯ ಚಿನವರದ ರೆಡೆವಳ ಗಂಬರಾಲಯರೂ ॥ ನೇಪಿಸಿದ ಪತ್ತಿಯೊಳ ಸುಪಮ । ರೂಪ ಚೀನಾಂಬರಗಳನು ಸ । ದ್ವ್ಯಾಪಿಸಿಹ ರಂಗಡಿಯೊಳೆಲ್ಲೆ ಲ್ಯಾಲು ಸಾಲುಗಳಾ ॥ ೪೧ ॥ ಅಲ್ಲಿ ನಾನಾ ದಿನಸು ಫಲ ಸರು । ಕೆಲ್ಲ

ತಂಡುಲ ಚಣಕ ಗುಡ ಘೃತ । ವಲ್ಲೆ ತೈಲೆಡೆ ಛತ್ರ ಚಾಮರ ಖಡ್ಗಗಳ
ಪಸರಾ ॥ ಅಲ್ಲೆ ಪುಷ್ಪಾಡಿಗರು ಸೌರುಭ । ರಲ್ಲೆ ತೋರುವ ಘಟ್ಟಿವಾಳರ
ದಲ್ಲೆ ಯಲೆ ಕ್ರಮು ಕೇಲಜಾಫಲ ಕರ್ಪುರ ರಾಜಿಗಳು ॥ ೪೨ ॥ ಮತ್ತೆ
ಹಯಗಜ ಪಶುಗಳನು ಕ್ರಯ । ಕಿತ್ತು ಯೆತ್ತುವರಾದಿ ಹರದಿಕೆ । ಯೊತ್ತಿ
ಲಸಮನ ನಾಟ್ಯಕೇರಿಯು ರಂಗುಯಿಂಗಿತದೀ ॥ ಚಿತ್ತಜನ ರತಿಮಂತ್ರ ಸತಿ
ಚಲು । ವೆತ್ತ ವೇಸಿಯ ರಂಗಣವ ಮುಂ । ನಿತ್ತರತಿ ಸೊಗಸಂಗ ಚಾ
ಷ್ಟೆಯ ತೋರಿ ವಿಟ ಜನಕೇ ॥ ೪೩ ॥ ಕರದಿ ಪಿಡಿದೆಲೆ ಗಳಿಗೆ ಕಟಿಯೊ
ಳ । ಗಿರಿಸಿ ದೆಡಕರ ದಕ್ಷಿಕ್ಷಹಸ್ತದ । ಬೆರಳೊಳಳಿ ಕುಂತಳವನೀವುತ ಸ್ವ
ಸ್ತಿಕದಿ ನಿಂತು ॥ ಶರಗ ಸಡಲಿಸಿ ಕಂಚುಕರೆ ಕುಚ । ಕಿರಿಸಿ ಚಪಲಾ
ಕ್ಷಿಗಳಿ ಚಂಚಲ । ಗರಸಿ ವಿಟರನು ಸಂನೆಗೊಳಿಸುವ ಗಣಿಕೆರಲ್ಲಲ್ಲೀ ॥ ೪೪ ॥
ಬರುವನಲ್ಲರ ಸಿರನೊಳಗೆ ಕರ । ವಿರಿಸಿ ಲಲ್ಲೆಯುಗರೆದು ಮ್ರುದು ನುಡಿ ।
ವೆರಸಿ ಏಕಾಂತಾಲಯಕೆ ಕರದೈದಿ ಮಂಚದೊಳೂ ॥ ಸ್ಮರ ವಿಕಾರದ
ಚಾಷ್ಟೆಯೊಳು ಮನ । ವರಿಸಿ ಸುಲಿಗೆಯ ಕೋಳ್ವ ವೇಶಿಯ । ರಿರುವ
ವೀಥಿಯೊಳಂದ ಪೂಣ್ಕೆಲ್ಲಾಡು ತಿಹುದೆಲ್ಲಿ ॥ ೪೫ ॥ ಮಘಮುಖಪ ಸೂಳೆ
ಯರ ಕೇರಿಯು । ಸೊಗಸಿನಿಂ ದತ್ತತ್ತ ನಾನಾ । ಬಗೆಯ ಕೈವಾಡ್ಯಿಲ್ಪಿ
ಗರು ರಂಗಾರಿ ಚಿತ್ರಗರೂ ॥ ಮಿಗಿಲ ಕೌಶಲ ಗರುಡಿ ನಾಟಕ । ನಗಿವ
ಕೃಷ್ಯಾರಂಭಗಳ ಸಂ । ಜನಿಸಿ ವಿಹಜನವೆಲ್ಲಿ ನೋಡಿದಡೆಲ್ಲ ಕಡೆಯಲ್ಲೀ
॥ ೪೬ ॥ ಮೇಲೆ ಭೂಸುರ ವಿಬುಧ ಜನನಿ । ತ್ಯಾಲು ಶಾಸ್ತ್ರಾಲೋಕ
ನಾಗಮು । ಲೀಲೆಯೊಳು ವ್ಯಾಕರಣ ನಾಟಕ ತರ್ಕ ಸೂತ್ರಗಳಾ ॥
ಮೇಲು ಕವಿತಾ ಕಾವ್ಯ ಲಂಕಾ । ರಾಲಸರ ದನವರತ ವೋದುವ ।
ಜಾಲ ಘೋಷಣೆ ನೋಡಲೆಲ್ಲಾ ವೀಥಿ ವೀಥಿಯಲೀ ॥ ೪೭ ॥ ಕವಿಗಮಕಿ
ವಾದಿ ವರವಾಗ್ಮಿ ಗ । ಳವರ ಚಾತುರ್ಯ್ಯಗಳು ವಿದ್ವ । ದ್ವಿವರಗಳ
ನೆರೆ ಕಲಿಪರಾವಳ ವ್ರತಿಗಳೆಂಬಾರ್ಯ್ಯಾ ॥ ರವರೆ ಯಿನ್ನಾ ರಾಜಧಾನಿಯ ।
ಭುವನಪತಿ ಮೊದಲಾದರಿಗೆ ಗುರು । ವವರ ಶಿಷ್ಯರನೇಕ ಮಿಗಿಲಹ ದೇವ
ಗೃಹಗಳಲೀ ॥ ೪೮ ॥ ಮತ್ತೆ ಸಮ್ಯಗ್ದೃಷ್ಟಿ ಧನಿಗೃಹ । ದೊತ್ತಿನೊನ
ದೊಳಗೇಕನೇಕ ತಿ । ಬಿತ್ತರದ ಜಿನವಾಸವಲ್ಲ ಲ್ಲೋರ್ವ ಋಷಿವರ್ಗ್ಗ ॥
ರೊತ್ತಿ ವೋದುವ ತತ್ವಮೂಲನು । ವೆತ್ತ ಪೂಜಾಧೂಪಧೂಮಡ । ರುತ್ತ
ಲಿಹುದೀ ಭವ್ಯರೋರ್ತನ ವುಲಿಯೆ ದಿವಿಜರಿಗೇ ॥ ೪೯ ॥ ಭೂಮಿಸುರ

ಸೂರಿಗಳು ವೈಶ್ಯರು । ಕಾಮಿತಾಲಯಗಳಲಿ ಧರ್ಮ್ಮಿಸು । ನಾಮಘೋಷಣೆ ನಿತ್ಯ ಚಾತುರ್ದಾನ ವುಪವಾಸಾ ॥ ನೇಮಪಪ ಜಯದಾನ ನಿತ್ಯಭಿ । ರಾಮರಾಗಿಪರೆಲ್ಲ ಸತಿಪತಿ । ಕಾಮ ರತಿಸಂಕಾಶ ರಷ್ಟೈಶ್ವರ್ಯ ಯುತರಾಗೀ ॥ ೫೦ ॥ ಅದರ ಮುಂಗಡೆ ಮತ್ತ ಗಜಗಳು । ಕುದುರೆ ಸಾಲುಗಳನಿ ತಿನಿತು ಯಂ । ಬುದಕ ಗೋಚರ ರಥಗಳೋಲೈಸಿಹವು ಕಾಲಾಳು । ವಿದವು ಮಾರಿಯ ಘೋರ ಮುಖಫಲ । ವಿವದ ರಾಕ್ಷಸ ರಂತರಂತರ । ಚಮರ ವೈಮಾನಗಳು ಪುಷ್ಪಕ ದ್ವೀಪದಗಲದಲೀ ॥ ೫೧ ॥ ಸುತ್ತ ಚಪ್ಪೀಥಿಗಳ ನಡು ಮ । ಧ್ಯತ್ರಿ ದಶಮನೆಯುಭಯ ವೀಥಿಯೊ । ಳತ್ತಿ ಸಾಮಾಸೀಕ ರಾಲಯ ದಳಪ ಸಚಿವರರಾ ॥ ಬಿತ್ತರಾಲಯ ಸಾಲುಹರ್ಮ್ಯಾಳಿ ಮೊತ್ತಗಳು ವೈಚಿತ್ರ ಸದಸಿಯ । ಬಿತ್ತರಿಸಲಳ ವಿದದ ಕೌಶಲ ಕಾಣ್ಬ ದಂಬಕಕೇ ॥ ೫೨ ॥ ನೀಲಬಿತ್ತಿಯ ಮೇಲಿ ವಜ್ರದ । ಸಾಲುಗಂ ಭಿ ಧ್ರುಮದ ಬೋದಿಗೆ । ಮೇಲಿ ಮರಕತ ತೊಲಿಗಳ್ವೊಯ್ದೂರ್ಯಗಳ ಮುಚ್ಚಳವು ॥ ಸಾಲು ಮುತ್ತಿನ ಝುಲ್ಲಿ ಪಟ್ಟಿಯ । ಮೇಲು ಕಟ್ಟಕಸ್ತೂರಿ ಸಾರಣೆ । ಕೀಲಣೆಯ ನವರತ್ನದಾಸನ ನೆಲೆಯು ಬತ್ತೀಶಾ ॥ ೫೩ ॥ ಯೋಜನಗಲು ತ್ರೀದಕೋಶ ವಿ । ರಾಜನೀಳಿಂ ನೊಂದೆಯೋಜನ । ರಾಜನಾಸ್ಥಾನಾಲಯಗ್ರದಿ ಕೋಟಿ ಕಳಸಗಳೂ ॥ ರಾಜಿಸುವವಿಂ ನರಮನೆಯುಯಿದ । ರೋಜೆಗಿಂ ಮಡಿ ಮೂರು ಅಂತರ । ಜಾಜಿನಿಂ ಪದಿನಾರು ಸಾಸಿರ ಸೌಧದುಪ್ಪರಿಗೇ ॥ ೫೪ ॥ ಸೌಧಮುಪ್ಪರಿಗೇಕಕೇ ಕೈ । ದೈಮ ಕಳಸಗಳ ರಮನೆಯೆ ಶಶಿ । ಗೈದ ಪರಿವಾರದೊಲು ರತ್ನದಕಲಶ ರವಿಶಶಿಯಾ ॥ ಸೌಧಗಳೋ ವರ್ಣ್ನನೆಗೆ ಬಾರದೆ । ಗೈದುದಿಲ್ಲಲ್ಲಿರುವ ನಾರಿಯ । ರೈದಿದರೊ ತ್ರಿದಶವನು ಬಿಟ್ಟಂತೆಲ್ಲ ಖಚರಿಯರು ॥ ೫೫ ॥ ಅರಮನೆಯ ಹೊರ ಗೋಪುರವು ಕೋ । ಶುರು ತರಗಲರ್ದ್ಧದರ ವುಪ್ಪರಿ । ಗೆರಗುತಿಹ ವಮರಾವತಿಯ ಚುಂಬಿಸುವ ಕಲಶಗಳೂ ॥ ವರೆಯುಲ ಸದಳವಾದ ಶೋಭಾ । ಕರ ವಿರಾಜಿವು ದಧಿಕ ವರ್ಣ್ನನೆ । ಗೆರೆಯುಲಾಕರವಿರದೆ ಬಿಡಲಾಪ್ಪುವನಿ ನಾಯಕನೆ ॥ ೫೬ ॥ ಕಾರಣೇನೆನಲೆಲ್ಲ ಪುರದಾ । ಗಾರ ನವರತ್ನಗಳು ಕೆಚ್ಚಿದ । ನೀರತರ ಸ್ವರ್ಣ್ನಗಳ ಮಾಟದ ಕೂಟದ ತಿಶಯವೇ ॥ ಜ್ಯಾರೆ ಜ್ಯಾರಿರ ಲೊರ್ನನೆಗೆ ಬಹು । ದಾರಿಸರಿ ಸರ್ವತ್ರ ಯೋಕೋ । ಕಾರ ಪರಿಧಿಯು ಪುರದ ಗೇಹಗಳೆಲ್ಲ ಪದರಿಂದಾ ॥ ೫೭ ॥ ಬಿಡಿಯವೇನ

ಮರಾವತಿಗೆ ಸರಿ। ಗೊಡುವ ಪುರವಿಂನ್ಲೆಂಕೆಯುಂಬುದು । ನಡೆವನಾಮವ
ತೊಡಗಿ ಮೆರವುದು ಮಧ್ಯದರಮನೆಯೂ ॥ ಪಡೆದು ತ್ರಿಭುವನ ಚೂಡ
ಮಣಿವೆಸ । ರಡಸಿ ರಂಜಿಪುದೆಲ್ಲ ಖಗವರ । ಪೊಡವಿ ಗೀವುತ್ತ್ರತಿ ಕುತೂ
ಹಲ ರಾಕ್ಷಸದ್ವೀಪಾ ॥೫೮॥ ಇಂತು ರಾಜಿಪ ಲೆಂಕೆಪಾಲನೆ। ವಂತ ಬಲಯುತ
ಪಾಲನೇತ್ರನು । ವಾಂತು ರವಿ ಸೆಶಿ ಯಗ್ನಿ ಧನಪತಿ ಯಿಂದ್ರ ಸಹವಾಗೀ ॥
ಯಂತು ಪಂಚ ಮ್ಗಣವು ದೇಹವ । ನಾಂತ ಪ್ರಬಲತ್ಸಪಲಿ ಘನಜಾ ।
ಖ್ಯಾಂತು ಪಶ ಕಂಧರನು ಯಂಬನು ರಾಜಮಾರ್ತ್ತಂಡಾ ॥ ೫೯ ॥ ರಾವಣ
ನು ಯಂಬನ್ವಯಾಖ್ಯವ । ಗಾವರಿಸಿತವ ನರ್ದ್ಧಚಕ್ರ । ತ್ತಾವಲಂಬನನಾಗಿ
ವರ್ತ್ತಿಸ ಸಕಲ ವೈಭವದೀ ॥ ಆವರನುಜರ ರಿಂನ್ಕುಂಭಕ । ರ್ನಾ ವಿಭೀಷಣ
ರೆಂಬ ರಕ್ಷ। ದ್ದೇವರತಿ ಬಲರಷ್ಟ ದಿಗ್ವರರಧಿರು ಗೊಳಿಸುವರೂ ॥ ೬೦ ॥
ಮೂರು ಮಂದಿಗಳೊಡನೆ ಪುಟ್ಟದ । ನಾರಿಯೋರ್ವಳು ಸೂರ್ಪನಖಿ ಯೆಂ।
ಬಾ ರಮಣಿ ಕಡು ನೀರೆ ರಾಕ್ಷಸ ವಿದ್ಯ ಸುಪ್ರಹುಡೆ ॥ ತೋರ ಸಂಣವತಾರ
ವಾದ ವಿ। ಕಾರವೇನೇ ನಾಹರೂಪನು । ಸಾರಿ ತೋರುವ ಸಾಹಸದ ಸಂ
ದರ್ಭ ವೆರಸಿಹಳೂ ॥ ೬೧ ॥ ಪಿರಿಯ ದಶಕಂದರನೆ ದೈತ್ಯ । ಸ್ಮರನು
ಮಂಡೋದರಿಯ ನಾಮದ । ತರುಣಿ ಸತಿ ಕುಲ ತಾರೆಯನಿಸಿಹ ಳಗ್ರಪದವಿ
ಯಲೀ ॥ ಕಿರಿಯನಾಗಿಹ ಕುಂಭಕರ್ಣ್ನನ ! ಅರಸಿ ವಿದ್ಯುದ್ವೇಗೆಯಾತನ।
ಕಿರಿಯನಿಗೆ ರಾಜೀವ ಸರಸೆ ವಿಭೀಷಣಾಂಗನೆಯೂ ॥ ೬೨ ॥ ಇರಲಿಯ
ತ್ತಾಳ ಲೆಂಕೆಗೆ । ಖರನು ದೂಷಣರೆಂಬರಾ ಸಹೋ । ದರರು ದಶಕಂಧರನ
ಸೋದರಪತ್ತೆ ಯಾತ್ಮಜರೂ ॥ ಸರಸ ಭಾವ್ಮೈದ ರೊಳಗಗ್ರಜ । ಖರಗೆ
ವುದ್ವಹ ಸೂರ್ಪನಖಿಯನು । ಗರೆದು ಕಿರಿ ದೂಷಣಗೆ ಕೊಟ್ಟನು ತಾಟಕೀ
ಸತಿಯಾ ॥ ೬೩ ॥ ರಾವಣನ ಚಿಕ್ಕೈಯ್ಯ ನಂಗೋ । ದ್ಭಾವೆ ತಾಟಕಿ
ಯೆಂಬಳಿಂ ನದಿ । ದೇವನಿಗೆ ಮಾರೀಚನೆಂಬವ ಸೇನ ನಾಯಕನೂ ॥ ಭಾವೆ
ಚಿತ್ರಾಂಗಿನ್ನು ಮಂತ್ರಧಿ । ದೇವ ಹಸ್ತ ಪ್ರಹಸ್ತ ರೆಂಬರ । ಭಾವೆಯರು
ರತ್ನಾಜಿ ರತ್ನಿಯರೆಂಬ ನಾರಿಯರೂ ॥ ೬೪ ॥ ಹಸ್ತನೆಯ ಗ್ರಜನು ಕಿರಿ
ಯ ಪ್ರ। ಹಸ್ತ ಸಹಷೋಡಶರು ಮಂತ್ರಂ । ನ್ಯಸ್ತರೊಳಗತಿ ಶ್ರೇಷ್ಟರೀ
ರ್ವರೆ ಬಲದ ನಾಯಕರೂ ॥ ವಿಸ್ತರಾಗಿಹರವ ರೊಳಗೆ ಶ್ರೇ। ಷ್ಟಸ್ತನಾ
ಮಾರೀಚನೆಂಬತಿ । ವಿಸ್ತರುಂಟೆಂನ್ಮುಂಪೆ ಪೇಳ್ವುದು ರಾಜನವಧರಿಸೂ ॥೬೫॥
ಬಹಳ ರಥ ಹಯ ಕರಿ ಪದಾತಿಯು । ಬಹಳ ವೈಭವ ನಾರಿಯರು

ಬಹು । ಬಹಳ ಸುತ ಮಿತ್ರಾದಿ ವಾದ್ಯವು ಬಂದುಗಳು ಬಹಳಾ ॥ ಬಹಳ ವಿದ್ಯೋ ಪೇತ ಬಹು ನೃಪ । ಬಹಳ ಮಹಿ ಭುಜನಾಗಿ ಮನಸಂ । ದಿಹನೂ ಮುಕ್ತಿರಮಣ ನಡಿಗಳ ಸ್ಮರಿಸಿ ರಾವಣನು ॥ ೬೬ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ದೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಟರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ಡೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೬೭ ॥

ಅಂತು ಸಂಧಿ ೬ ಕ್ಕಂ ಪದ ೩೬೦ ಕ್ಕಂ ಮಂಗಳ ಮಹಾ ಶ್ರೀ. ಶ್ರೀ.

ಏಳನೆಯ ಸಂಧಿ

ತೋಯಜನನ್ವಯದ ಸಂಧಿ.

ರಾಕ್ಷಸಾನ್ವಯ ಲೆಂಕೆ ಪದಕ । ದ್ಯಕ್ಷ ವಂಶಾವಳಿಯ ವರ್ಣಿ ವಿ । ಚಕ್ಷಣೆ ಯೊಳೊರ್ಳಿಸುವೆ ತೋಯದ ವಾಹನಾದಿಯಲೀ ॥ ಪದನು ॥

ಚಿತ್ತವಿಸು ನೃಪ ತಿಲಕ ಲೆಂಕೆಯ । ಬಿತ್ತರವು ಸಹವಾಗಿ ನೃಪತಿಯ । ಗೊತ್ತನಾ ಲೋಚನೆಯೊಳನು ಗೊಳಿಸಿಂನು ಮುಂದನುವಾ ॥ ನೆತ್ತಿ ಪೇಳು ವೆನೆನಲು ದಶಮುಖ । ವೆತ್ತಿದಾಷ್ಯೇನೆಂದ ನೃಪನೇ । ಕೋತ್ತರಾಲಿಸು ಸಾಂಪರಾಯವನೆಂದ ಗಣನಾಥಾ ॥ ೧ ॥ ಈ ದಶಾನನನನ್ವಯಾ ಗತ । ವಾದಿ ಯಿಂದುಸುರುವೆನು ಪ್ರಥಮದೊ । ಳಾದಿನಾಥನು ಸಕಲ ನಿರ್ಣಯ ದೋರಿ ಜನಕೆಲ್ಲಾ ॥ ಮೇಧಿನಿಗೆ ನವ ಸೂತ್ರಧಾರಕ । ನಾದ ನಾಕಾ ಲಂತರಾಳವು । ಪೋಮ ದಿನ್ನಹುಕಾಲದಂತ್ಯಾವಂಶ ದೊಳಗಿನ್ನೂ ॥ ೨ ॥

ಭಾಸುರೋಜ್ವಲ ಮಗುಟದಂತೆ ವಿ । ಲಾಸದೋರ್ಬಲ ಮಂಡಲಾಧಿಪ । ನಾ ಸುವೀರ ಪ್ರಹುಡ ಜಯ ವಧು ರಮಣ ತ್ರಿದಶೇಂದ್ರ ॥ ನಾಸು ನಾಮಾನ್ವಿತನಯೋಧ್ಯ ನಿ । ವಾಸನಾಗಿರ ಲಾತನಿಗೆ ಸತಿ । ಯಾಸುಮಂ ಗಳೆ ಚಂದ್ರಲೇಖೆಯ ಪೆಸರ ಪಡದಿಹಳೂ ॥ ೩ ॥ ಪಟ್ಟ ವರ್ದ್ಧನೆಯಾಕೆ ಗನುಸರ । ಪಟ್ಟ ರುಂಟ್ಬಹು ಸ್ತ್ರಿಯರಾಕೆಗೆ । ಪುಟ್ಟದರು ಜಿತಶತ್ರು ಸಾ ಗರರೆಂಬ ನಂದನರೂ ॥ ಪುಟ್ಟ ಚಂದ್ರಾದಿತ್ಯರಂದದಿ । ಬಟ್ಟ ಜವ್ವನೆ ವೆರದ ಕಂದರ । ನಿಟ್ಟಸಿದ ಪಿತ ತ್ರಿದಶ ರಾಜುದ್ವಹಕೆ ಯತ್ನಿಸಿದ ॥ ४ ॥ ಅತ್ತ ಪೌಧನಪುರದ ನೃಪ ನಸ । ವೆತ್ತ ಭುಜ ಸಖ ನಂಗನೆಯು ಚಲು । ವೆತ್ತ ಮಹಿಷಂಭೋಜ ಮಾಲೆಯು ಜಯ ಸುಮಂಗಲೆಯೂ ॥ ಪೆತ್ತ ಳಣುಗೆಯ ರೀರ್ವ ರೆವ್ವನ । ವೆತ್ತರನು ಜಿತಶತ್ರು ಸಾಗರ । ಗೆತ್ತಿದನು ಹಾದ್ವಾಹ ತ್ರಿದಸೇಂದ್ರ ವನಿನಾಯಕನೆ ॥ ೫ ॥ ಸುತರಿಗುದ್ವಹ ಗೈದು ಕೆಲ ಕಾ । ಲತನು ಕ್ಷಿತಿತಳವಳಿ ವೈರಾ । ಗ್ಯತ ಪರಾಯಣನಾಗಿ ಕೊ ಟ್ಟನು ರಾಜ್ಯಭಾರವನೂ ॥ ಸುತನು ಜಿತಶತ್ರುವಿಗೆ ಯುವರಾ । ಜತನ ಕಿರಿ ಸಾಗರನ ಗೈದೆತಿ । ಸತಿಯ ರೂಪಲಂಕರಿಸಿದನು ತ್ರಿದಶ ರಾಜೇಂದ್ರಾ ॥ ೬ ॥ ಜೀವ ಕತ್ನಾಶ್ರಿತನ ವಿಲ ಸ । ದ್ಭಾವ ದಿಂದುಗ್ರೋಗ್ರ ತಪದ ಪ್ರ । ಭಾವದಿಂದ ಕುಭೇರ ನಗರದಿ ದಹಿಸಿ ಕರ್ಮ್ಮಗಳಾ ॥ ಶ್ರೀವಧು ವಿನಾಲಂಕೃತಕೆ ರಸ । ವೀವನಾಗಿರ ಲಿತ್ತ ವಿಸ್ತರ । ಭೂ ವಧೂ ಭುಜ ಬಲದಿ ಯಾಳುತಲಿರಲು ಜಿತಶತ್ರೂ ॥ ೭ ॥ ಭರತ ಖಂಡವ ನೇಕಛತ್ರದ ನೆರಳ ನಾಶ್ರಯ ಗೊಳಿಸಿದುದರಿಂ । ಧರೆಗೆ ಜಿತಶತ್ರನ್ವಯಾದುದು ಯಾಚ ಕಾವಳಿಯಾ ॥ ಸ್ವರವ ನಡಗಿಸಿ ಕಾಮಧೇನವ । ತರವಿದೆ ನಿಸಿರಲಾತ ನಂಗನೆ । ಧರೆಯು ಸುರಗಿರಿ ಪೂರ್ವನಘ ತರಣಿಯನು ಪಡದಂತೇ ॥ ೮ ॥ ಭಾವೆ ಪಡೆದಳು ಅಜಿತ ತೀರ್ಥಕ । ದೇವರನು ಆ ವಿಜಯಸಾಗರ । ನಾ ವಧೂಟಿಯು ಸಗರ ಚಕ್ರಿಯ ಪಡೆಯೆ ಮಂಗಳೆಯೂ ॥ ದೇವನೋರ್ವ ಳು ವೋರ್ವ ಸತಿ ಜನ । ದೇವನಂ ಪಡೆದವರಿಗನುಸರ । ಭಾವೆಯರೆ ಯಿಂನುಳಿದ ಪ್ರಮುದೆಯರೆರ್ತ ಜೀವಿತರೂ ॥ ೯ ॥ ಇರಲಿ ಯಿತ್ತತ್ತಬ್ಧಿ ಮೇಖಲೆ । ಗರೆದ ಭೂ ವಧು ಧರಿಸಿ ಭುಜದೊಳು । ಪರಮ ಬಲ ಜಿತ ಶತ್ರು ಅನುಜನು ವಿಜಯಸಾಗರನೂ ॥ ಹರುಷದೊಳಗಿರೆ ಅಜಿತ ತೀರ್ಥವ । ತರದಿ ಪುಣ್ಯದ ದಶಾವತಾರವು । ನೆರೆದ ವಿರಲಾಕಾಲ ದೊಳಗವನೀಶ

ಚಿತ್ರೈಸೂ ॥ ೧೦ ॥ ಅತ್ತ ವಿಜಯಾರ್ಧಾಚಲದಿ ಚಲು । ವೆತ್ತ ನೂಪುರ ಚಕ್ರವಾಳದ । ಪತ್ತನದ ಖಗ ಪೂರ್ಣ್ಣ ಘನ ಪೂರ್ಣೇಂದು ಯಂಬಳಿಗೆ॥ ಪುತ್ತು ಪತಿಸಿದ ತೋಯಜೋಹ್ವನ । ಚಿತ್ತಜನ ಸಮ ರೂಪ ಕಳೆ ವಂಯ। ನೆತ್ತ ಸುಕುಮಾರನಿಗೆ ಕಂನ್ಯಾರ್ಥವನು ಪಿತ ನೆನದೂ ॥ ೧೧ ॥ ಪುತ್ತ ರಂಬರ ತಿಲಕ ಪುರಕಸ । ವೆತ್ತ ನೃಪತಿ ಸುಲೋಚನೆಗೆ ಸತಿ । ಚಿತ್ತ ಪ್ರಿಯೆ ಸಾಹಸ್ರಲೋಚನ ನೆಂಬ ತನುಜನನು ॥ ಪೆತ್ತಳಲ್ಲಿಂ ಮೇಲೆ ಸುತೆ ಯು । ತ್ಪತ್ತಿ ಸುತ್ಪಲ ಮಾಲೆವಯ ವೆರ । ಸಿತ್ತಳೀಕ್ಷಿತ ತಕ್ಷಿಯಾನಂದವನಿ ನಾಯಕನೇ ॥ ೧೨ ॥ ಆ ಕುಮಾರಿಯ ಪೂರ್ಣ ಘನತಂ।ನೀ ಕುಮಾರಗೆ ಬೇಡಿಸಲು ಮ । ತ್ತಾಕೆ ಚಕ್ರಿಯ ಪಟ್ಟ ಮಹಿಷಹ ಳೆಂಬ ನೈಮಿತ್ತಾ ॥ ನೋಕ ನರಿದೀಯ್ಯದಿರೆ ಕೋಪೋ । ದ್ರೇಕದಿಂ ಬರೆ ಪೂರ್ಣ ಘನಕ ಮ । ತ್ತಾ ಕಲಸ ದಳವಾಗಿ ಯೋಚನೆ ಗೈದ ನೃಪನೊಂದಾ ॥ ೧೩ ॥ ನಂದನೆ ನೆಯ ಸಾಹಸ್ರ ಲೋಚನ । ಕಂದರನ ವಿದ್ಯದಲಿ ಪಕ್ಷಿಗ । ಳಂದ ವಿ ರಚನೆ ಗೈದು ಕಳುಹಿದನಂತರದ ಪುರಕೇ ॥ ಬಂದು ಮುತ್ತಿದ ಬಲದೊ ಳಸದಳ । ದಿಂದ ಲಾಜೆಯ ಗೈದು ಯಮುನೆಡೆ । ಗಂದು ಭಾಜನ ಸು ಲೋಚನನಾದ ನವನೀಶಾ ॥ ೧೪ ॥ ಮುರಿದು ಬಲವರಿದೂರ ಪೊಕ್ಕ । ಲ್ಲರಸಿ ಯಿರದಿರೆ ಕಂನೆ ವಿಮುಖದಿ । ತಿರುಗಿ ಬಂದನು ಪೂರ್ಣ್ಣ ಘನ ನಿಜ ಚಕ್ರ ವಾಳ್ಪುರಿಗೇ ॥ ತೆರಳಿದತ್ತ ಸಹಸ್ರ ಲೋಚನ । ವರಜೆ ಸಹ ಶರಭಾಟವಿಗೆ ಪ। ಕ್ಷಿರವ ತೊರೆದಲ್ಲಿರಲು ವೇತ್ರಾವತಿಯ ತೀರದಲೀ ॥ ೧೫ ॥ ಇತ್ತ ಸಗರನ ಬಾಣಸಿಗನನು । ವೆತ್ತ ರಸಗಳನಾ ರಸಾಯ ನ । ದುತ್ತಮದ ಪಾಕವನು ಬಹು ರುಚಿಕರವ ಗೈದಿರಲೂ ॥ ಇತ್ತ ಬೊಂ ಬಲಸೆಂದು ಕೋಪದಿ । ಕುತ್ತಿಸಲು ಸತ್ತೈಪ್ಪಂತ್ರ ನಾ ಗ್ವೊಯಿ । ರೆತ್ತಿ ಬಂದನು ದಿವ್ಯ ಹಯ ರೂಪಾಗಿ ನೃಪನೆದುರೂ ॥ ೧೬ ॥ ಗಗನಗಾಮಿನಿ ಯಂತೆ ಚತುರ್ಗತಿ । ಯಗಳ ತೋರಿಸುತಿರಲು ಯಲ್ಲಿ ತು । ರುಗವಿದೆಂ ನುತ ಭೇದ ತಿಳಿಯದೆ ಸಾಮಸಾಹಸದೀ ॥ ನೆಗೆದು ಯೇರಿದನಾತ ನಿಜ್ಞ ಗೆ । ಸೊಗಸು ತೋರುವ ತೆರದೊಳಲ್ಪ । ಲ್ನೆಗೆದು ಪಾರೆ ಶರಭಾಟವಿ ಯೊಳೊಗ ದದೃಶಂ ಗೊಳಲೂ ॥ ೧೭ ॥ ಬುದ್ಧಿ ಕರ್ಮಾನ್ಸಾರ ವೆಂಬ ಪ್ರ । ಸಿದ್ಧ ವೆನಗಾಯ್ತೆಂದು ಚರಿಸ । ಲ್ಲಿದ್ದ ವೇತ್ರಾವತಿಯ ತೀರದೊ ಳೊನದಯಕ್ಷಿಯೊಲೂ ॥ ಇದ್ದಳೋರ್ವಳರಣ್ಯ ಯಕ್ಷನೊ । ಲಿದ್ದನೋ

ಅಂತರಾಂಗಣಕೇ ॥ ೬೭ ॥ ನೆಗೆವುದಂತರಕೆಂದು ಕಾಸಿಯ । ಬಿಗಿದುಗಧೆಯನು
ತಿರುಹಿಸೀಗ್ರೆದು । ರೊಗೆವೆಯೋ ಸಿರಸಾಸಿರೊಳಾಹಂತೇ ಯಿದರಲ್ಲೀ ॥
ವೊಗೆಯಲೋ ಯಲೆ ಹುಡುಗ ನೆನಲಟ । ವಿಗಳ ಯಕ್ಷೇಶ್ವರರೆ ರಕ್ಷಿಪು ।
ಢೀಗಲಿನ ವಿದ್ಯಾಂಗನೆ ಯರೆನಲಸುರಸಂಹಾರೀ ॥ ೬೮ ॥ ಮುಂದೆ ಚಕ್ರಹ
ಸ್ತಾಗ ಚೆಸಗ್ಯೆ । ವಿಂದೆ ಚೆಸಗ್ಯೆಲಾಗವೇ ಯನು । ತಂದು ವಜ್ರದ ಪಥವ
ನಿರ್ಮ್ಮಿಸುತಾಗ ಲಕ್ಷ್ಮಣನಾ ॥ ತಂದು ನಿಲಿಸಲು ರಾಕ್ಷಗೆದುರಿಂ । ತೆಂದ
ನಲೆ ಧನುಜೊಲೆದು ಬಾರಿ । ತ್ತೆಂದು ತಿರುಹಿದ ಗಧೆಯು ಪುಣ್ಯಕೆ ವಲಿಯುದಿ
ಥರುಂಟೇ ॥ ೬೯ ॥ ಗಗನಚಾರಿಣಿ ವಿದ್ಯವಿಲ್ಲೆಂ । ದ್ಬಗೆಯ ಲೆಂದಿರ್ದನು ಜನ
ಷದಿ । ನೆನಳಿದಾ ಪುಣ್ಯೋವಗಿತೆಂಬತಿ ಹರುಷಗೊಳೆ ರಾಮಾ ॥ ಮಿಗಿಲ
ಜನ ಬಲಜನಕ ಸಹ ಪರು । ಸೊಗತಲಿರೆ ಲಕ್ಷ್ಮಣನು ಕಾರ್ಮ್ಮುಖ । ತೆಗೆ

ಕೇಳಿದೈ ಶ್ರೇಣಿಕನೆ ರಾಕ್ಷಸ । ಬೀಳಲೊಗೆದೊಡ ನಿಳಿದು ಪ್ರಾಣವ । ತಾಳಿದಿಲ್ಲೆಂದಸುರ ನಾರಿಸಿ ಶೈತ್ಯವನುಗೊಳಿಸೀ ॥ ಏಳಿಸೆಲೊ ದಾನವನೆ ಕೆದಸವ । ತಾಳುವೆಯೊ ಶ್ರೀರಾಮನಡಿಯೊಳು । ಕೇಳುವೆಯೊ ನಿರ್ಭಯಪ ಮನದೊಲವೆಂತು ಪೇಳೆಂದಾ ॥ ೧ ॥ ಶ್ರೀ ಹರಿಯು ಪದಕೆರಗಿ ನಿನಗೆದು । ರಾಹ ದಾನವ ಮಾನವಮರರೊ । ಛೋಹರಿಲ್ಲಗ್ರಜನ ಚರಣವ ಕಾಣಿಸೆನೆ ದನುಜಾ ॥ ನೇಹದೊಳ ಗೊಡಗೊಂಡು ಬರಲಡಿ । ಗಾಹುದಪರಾದೆನುತ ಯುರಗಿದ । ಗಾಹರಿಯು ಪಿರಿಯಣ್ಣ ನಭಯವ ನಿತ್ತನೇಳೆಂದೂ ॥ ೨ ॥ ಶೂರ ನೀಪರಿವೃಢ ನಸಮರಣ । ಧೀರ ತ್ರೈಜಗದೊಳಗೆ ನಿನಗೆದು । ರಾರು ಯಿಲ್ಲಾದಡೆಯು ಲಕ್ಷ್ಮಣನೆಂಬ ನೀಧರೆಗೇ ॥ ಕಾರಣಾತ್ಮಕನವನ ಜಯಸು ವು । ದಾರ ರರಿದೀ ಕಾಲದೊಳು ಸುಕು । ಮಾರತನ ದುರುಳೋಸರಿಸು ದನುಜೇಶನನೆ ರಾಮಾ ॥ ೩ ॥ ಸ್ವಾಮಿ ನಿಮ್ಮನುಜಾತ ಮನು ಕುಲ । ಭೀಮ ರಾತ್ರಿಂಚರರ ಕುಲನಿ । ರ್ನಾಮ ಕಡುನಿಸ್ಸೀಮ ಶ್ರೀಮಂದರಸು ಧೈರ್ಯದಲಿ ॥ ರಾಮಣೀಯಕ ರೂಪನೆಳೆಯದೊ । ಳೀಮಹತ್ತಿನೊಳೊ ಯ ವೆರೆಯನಿ । ಲ್ಲಾ ಮಹತ್ತರಧಾರು ಹರಿಗೆದುರೆಂದ ದನುಜೇಂದ್ರಾ ॥ ೪ ॥ ತನಗೆ ಪೂರ್ವದೊಳೊಲಿದ ಸೂರ್ಯ್ಯಾಸಿ । ಯನುವುದನು ಯಿಷ್ಟಾರ್ಥ ಭರ ಣಿಯು । ದನುಜವಿದ್ಯಗಳಾದಿ ಘನತರ ವಸ್ತುಗಳಕೊಟ್ಟೂ ॥ ನೆನೆದ ಸಮಯ ಕೆ ಬಹೆನುಯನಲಿವು । ನಿನ ಬಳಿಯೊ ಳಿರಲಾವುಸ್ಮರಿಸಿದ । ರಿನಿತು ಸಹಿತೈ ದೆಂದು ಕಳುಹಿದ ರಾಮ ರಾಕ್ಷಸನಾ ॥ ೫ ॥ ಅಂತರದಿ ಸಂಚರಿಪ ರಾಕ್ಷಕು । ಲಾಂತಕನ ಭಯಬ್ಯಾಡಿ ರಭಯವ । ನಾಂತೆ ನೈತಹುದೆನುತ ಕಳೆದುಳಿದಿರ್ದ ಚತುರಂಗಾ ॥ ಅಂತರಾಂತರದಿಂದ ಲಿಳಿತಹ । ಸಂತತಿಯ ನೊಡಗೊಂಡು ರಾಕ್ಷನಿ । ರಂತರಾಗಿ ತರಂಗತಮ ನಡೆದತ್ತ ನಿಜಪುರಕೇ ॥ ೬ ॥ ಪಾತು ಪಂಥವ ನಾಡದಲೆ ಕೈ । ಮಾಡಿ ದನುಜರನಟ್ಟಿ ಮೂರ್ಛೆಯ । ನೂಡಿ ರಾಕ್ಷೇಶ್ವರನ ಯರಗಿಸಿ ಸಕಲ ವಸ್ತುವನೂ ॥ ಬೇಡದಲೆ ವೊಲಿಸಿದರ ಬಲವು । ಣ್ಯಾಡ ಲೇನೆಂದೆರಗಿ ಕೈಗಳ । ಜೋಡಿಸೆದುರಿಹ ಜನಕ ಕನಕನ ನೋಡಿ ಶ್ರೀರಾಮಾ ॥ ೭ ॥ ಯಾತಕೆಮಗಪಹಾಸ್ಯ ಬಹುತೆರ । ಮಾತುಳೆ ಸಗುವರೆನಲು ಈಕ್ಷಿತಿ । ನೀತಿ ಗುರುದೊರೆ ಶಾಸ್ತ್ರ ಪಂಡಿತ ರೆಳೆಯರಾಗಿರ ಲೂ ॥ ಆತರೇ ಜಗಕಧಿಕ ನೀ ಪಿರಿ । ಯಾತ ಸಿಂಹಾಸನಕೆ ಯಧಿಪತಿ । ಗ್ಯಾತಕನು ಮಾನೆರೆಗಲಾ ವೀಲೋಕ ವೆರಗುವುದೂ ॥ ೮ ॥ ಅಲ್ಲದೀ ಕಾಲ

ದೊಳು ಕಾರಣ । ದಲ್ಲಿ ಬಲಕೇಶವರು ನೀವಂ । ದೆಲ್ಲರಾಡುವ ರಾರ್ಯ್ಯರಿ ಪುಗಹು ದಳಿವುದನುಮಾನಾ ॥ ಇಲ್ಲಿಯಸುರನ ಕಳುಹಿ ನಾವಿರ । ಲಲ್ಲಿ ಪ್ರಸ್ತುತಪುರಕೆ ದಯವಿಡು । ವಲ್ಲಿ ಗಪ್ಪಣೆ ಪಾಲಿಸುವುದೆಸೆ ಜನಕ ರಾಘವಗೇ ॥ ೯ ॥ ನಿಂತ ಬಲಕಿತ್ತುಡುತೊಡವ ನಿ । ಶ್ಚಿಂತದೊಯ್ಯುವದೊಳಗೆ ದಿಗ್ಗಿಡಿ । ಪಂತ ತೂರ್ಯತ್ರಯದಿ ಬಲಸಹ ಮಿಥುಳೆಗೈತಂದೂ ॥ ಕಂತು ಸಮ ಶ್ರೀರಾಮಲಕ್ಷ್ಮಣ । ರಾಂತ ಬಲಕೂರಾಂಗನೆಯರ । ಗ್ಯಾಂತು ಬಂದರ ನೋಡಿ ಮನ್ನಣೆಗೈದ ಶ್ರೀರಾಮಾ ॥ ೧೦ ॥ ಪಿಡಿವ ಅರ್ಘ್ಯಸ್ತ್ರದಲಿ ಕೆಣ್ಣಳ । ಕುಡಿಯ ದೀಪಾಂಗಾಂಗದೊಳು ಚಡ । ಚಡಿಸುತಿರಲಾ ಕಾಂತಿಯೊಳಗಾಲಯದ ಬಳಿಗೈದೀ ॥ ಬೆಡಗಿನಿಂ ರಥವಿಳಿದ ರನುಮಣಿ । ತೊಡರಿ ಡಾಸನದೊಳಗೆ ಕುಳ್ಳಿರಿ । ಸೆಡೆಯೊಳೊಪ್ಪಿದ ಜನಕ ಕನಕನು ತರಿಸಿ ನವರತ್ನಾ ॥ ೧೧ ॥ ಯತ್ತಿ ಧಾರೆಯ ರಾಮಚಂದ್ರನ । ವುತ್ತಮಾಂಗದಿ ಸುರಿದು ನಾನಾ । ಬಿತ್ತರದಿ ಕೊಂಡಾಡಿ ನಿತ್ಯಾನಂದ ದೊಳಗವರಾ ॥ ವತ್ತಿನಲಿ ಸಾನಾದಿ ಭೋಜನ । ದುತ್ತಮದ ಭೋಗದಲಿ ನಾಲ್ದಿನ । ಚಿತ್ತ ಹರುಷವಗೈದು ಪಯಣವ ನೆತ್ತಿಸಿದ ಜನಕಾ ॥ ೧೨ ॥ ಶುಲಭ ರತ್ನಾಭರಣ ಭೂಷಣ । ದಲಿ ವಿನೋದವಗೈದು ಪೊಂದೇ । ರಲಿ ವಿರಾಜಿತ ದಳಿಯ ರೊಡೆನೊಂದೆರಡು ಕೋಶಗಳಾ ॥ ಚಲಿಸುತಪ್ಪಣೆಗೊಂಡು ಮಾತುಳ । ರೊಲವಿನೊಳಗೈದಿದರು ಯಿಂಪ್ರರ । ಗೆಲುವಿ ನೊಳಗೈದಿದರು ಬಲಕೇಶವರು ನಿಜಪುರಕೇ ॥ ೧೩ ॥ ದನುಜರೇಳಿಗೆ ಮುರಿದು ಬಹನಿಜ । ತನಯರಾಗಮಕೆ ದುರು ಬಹನಿಜ । ಜನಕನಡಿ ಪಂಕಜಕೆ ಷಟ್ಪದದಂತೆ ಯರಗಿದರಾ ॥ ವಿನಯದೊಳು ಬಿಗಿಯಪ್ಪಿ ಗಜದ । ಗ್ರನುವಿನೊಳು ಕುಳ್ಳಿರಿಸಿ ವಾದ್ಯ । ಧ್ವನತೆಯೊಳು ಮೆರವಣೆಯಗೈಸಿದ ದಶರಥಾತ್ಮಜರಾ ॥ ೧೪ ॥ ಮೆರೆವ ಮೂರ್ತಿಗಳಂತೆ ಪಂಕಜ । ಶರರತೆರ ಸಿಂಧೂರದಗ್ರ ದೊ । ಳಿರುವ ಮನು ಸುರಧೇನುಗಳ ಕರುಮಾಡಗಳನೇರೀ ॥ ಪುರದ ನಾರಿಯರೀಕ್ಷಿಸುತ ಮನ । ವರಿಸಿದಂಬಕಗಳಲಿ ತತ್ಸುತ । ರಿರಲು ಬಹುಜನ ರಾಮಲಕ್ಷ್ಮಣ ರಾದರವನೀಶಾ ॥ ೧೫ ॥ ಅಲ್ಲದಿನಿತಂಗನರ ಕದಪಿಂ । ಬುಲ್ಲಸಿತ ದರ್ಪಣಗಳೊಳು ಪ್ರತಿ । ಪಲ್ಲವಿತ ರೂಪುಗಳ ನೋಡೆ ಯಿರುವರೆಲ್ಲವರೇ ॥ ಇಲ್ಲಿ ನೋಡೊತ್ತೈರದಿ ರಾಮಿತ । ರಲ್ಲಿ ಲಕ್ಷ್ಮಣರಿರುವರೆಂದತಿ । ಲಲ್ಲೆಗರೆದರು ಯಾಕ್ಷಿತೆಜಗನ ರವನಿನಾಯಕನೇ ॥ ೧೬ ॥ ನೋಡುವರ ನಯನಾರ್ಥಿಗಳನುಸರ ।

ಗೂಡಿ ಬಹುಸುತರಾನೆ ಮುಂಗಡೆ । ಗೂಡಿ ದಶರಥ ಸೋಳಿತಾಳದಿ ಬಿರಿಸು
ಬಾಣಗಳಾ ॥ ರೂಢಿಯೊಳಗೆತ್ತಿಸಿದ ಮಹತಾ । ಪ್ರೋಢಿಸುತ ನಿಸಿ ರಾತ್ರಿ
ಯನು ಬೆಳು । ಗೂಡಿಸುತ ಕರತಂದ ನೃಪನಾತ್ಮಜರ ಮಂದಿರಕೇ ॥ ೧೭ ॥
ಮಾತೆ ಕೌಶಲೆಯೊಡ ಸುಮಿತ್ರನು । ಜಾತೆ ಸೌಧವನೇರಿ ಮನ ಸು । ಪ್ರೀತಿ
ಯಲಿ ಸುಕುಮಾರರೀಕ್ಷಿಸು ತಾಗಲಾನಂದಾ ॥ ಪೂತು ಪುದರದಿ ಪ್ರೋಕ್ಮ
ನಯುನದಿ । ವೀತಗೊಳಿವಕ್ಷಜದಿ ಸಹಿತಲು । ನೂತನ ದೊಳಿಸದಿರ್ದ ರಂಗ
ಪ್ರಜ್ಞೆಯನು ಮರೆದೂ ॥ ೧೮ ॥ ಇರಲು ದಾದಿಯರೆಚ್ಚರಿಸಲಿಳಿ । ತರುಪ
ಸಮಯಕೆ ಮದಕರಿಗಳಿಳಿ । ತರುಪ ಸುಕುಮಾರಕ ರಿಗಾರತಿ ಯಸಗಿ ಸಾ
ಳಿಯರಾ ॥ ನೆರವಿಯೊಳ ಗೈದಿಸಲು ಗೃಹದಂ । ತರಕೆ ರಾಜರುಸಹಿತ ವಿ
ನಿಯೋ । ಗೆರಗಿ ಬೀಳ್ಕೊಳಲಿತ್ತ ಬಲಕೇಶವರ ಮಾತೆಯರೂ ॥ ೧೯ ॥
ಇರಿಸಿ ಹಸೆಯೊಳು ಮುತ್ತಿನಕ್ಷತೆ । ಗರೆದು ಶಾಸೆಯನಿಟ್ಟು ಮಂಗಲ । ಗರೆ
ದು ನಿತ್ಯೋತ್ಸವ ದೊಳಿರ ಲೊಂದಾನು ದಿನದಲ್ಲೀ ॥ ಅರಮನೆಯ ಹೊರೆಯೊ
ಳು ಹಜಾರದಿ । ಸರಿಯ ಸುಕುಮಾರರೊಳು ವಾಲಗ । ವೆರಸಿ ಬಲಕೇಶವ
ರು ಕುಳ್ಳಿರಲಿತ್ತ ಲವನೀಶಾ ॥ ೨೦ ॥ ರಾಕ್ಷಸರನು ಸಂಹರಿಸಿ ಬಲದ ।
ದ್ಯಕ್ಷಕನುಪಮ ರೂಪು ಚತುರವಿ । ಚಕ್ಷಣೆಗೆ ಮನಮೆಚ್ಚಿ ಜನಕ ಕುಮಾರಿ
ಜಾನಕಿಯಾ ॥ ಲಕ್ಷ್ಮಣನು ಶ್ರೀರಾಮನಿಗೆ ಕೊಡ । ಲಾಕ್ಷೆ ಪಿಡಲಾಲ
ಯದಿ ಸರ್ವಸು । ಲಕ್ಷಣೆಯು ವೈದೇಹಿ ಕೇಳದನಲಿಯೆ ಮನವಲ್ಲೀ ॥ ೨೧ ॥
ಆಧರಿಸುತಾ ನುಡಿಗೆ ಕಂಚುಕಿ । ಯಾದ ಸ್ಮರಮೋಹಿನಿಯೂ ಯಿಂತೆನ ।
ಲಾದರೊಳ್ಳಿತು ಕೊಡಲು ಶ್ರೀರಾಮನಿಗೆ ಜಾನಕಿಯಾ ॥ ಆದಿಯಲೆ ತಿಳಿ
ದಿರ್ದ್ದರವನ ರೂ । ಪಾಧರಿಪೆ ಸುಕುಮಾರಿ ಗೊರನಹು । ದಾದನಲ್ಲೆಂಬು
ದನು ಬಂದಿದ್ದಾಗ ಲಿಲ್ಲಿಗವಾ ॥ ೨೨ ॥ ಯೆಸುತ ವೈದೇಹಿಯೊಳು ಸು
ದ್ದೂ । ಪೆನುವ ದರಿದಲ್ಲದಲೆ ವಡಬಡೆ । ನೆನುತ ತೆರಳಿದಳೀಕ್ಷಿ ಸೈತಹೆನೆನು
ತಲಾ ದಾದೀ ॥ ಕನಕದಂಡಿಗೆ ಯೇರಿ ಸಖಿಯರ । ವಿನಯದಲಿ ಬಿಟ್ಟಿಘು
ಳಿಯನು ಸ । ನ್ಮನದಿ ಬಂದಳಯೋಧ್ಯೆ ಗವನೀನಾಥ ಚಿತ್ರೈಸೂ ॥ ೨೩ ॥
ಬಂದು ದಶರಥನಡಿ ಗಳೆನಿಪರ । ವಿಂದಕಾ ನಮ್ರದಲಿ ತಮನಿಜ । ಬಂಧು
ಗಳ ಸುಕ್ಷೇಮ ವಾರ್ತೆ ನಿವೇದವನುಗೊಳಿಸೀ ॥ ಇಂದು ನಾನಿಲ್ಲಿಹರ ನೋ
ಡುವೆ । ನೆಂದು ಬಹದಾಯ್ತೆಂದು ನೃಪ । ನಿಂದ ಮನ್ನಣೆವಡೆದು ಕೌಶಲ
ದೇವಿಯರ ಕಂಡೂ ॥ ೨೪ ॥ ಪುಳಿಪುತೆಲ್ಲರ ಪರಿಣಯನ ನಿಮ । ಲಲಿತ

ವರಿಯಲು ಬಂದೆನೆಂದವ । ರೊಲವಿನಿಂ ಶ್ರೀರಾಮನೈದಿರ್ದಾಗ ಲಾನವನಾ ॥ ಲಲಿತ ವೀಕ್ಷಿಸಲಿಲ್ಲವೇನೋ । ಚಲುವೆನೆಂಬರ ಪ್ರೋಕ್ತ ನಿಲುಕಡೆ । ಗಲಿತ ವೆಂಬುದ ತಿಳಿಯಲೈದಿದೆ ದೇವಿಯನೆ ದಾದೀ ॥ ೨೫ ॥ ಕರೆಸುವೆನು ರಘು ವರನ ಚಲುವಾ । ಧರಣೆಗೊಳುವಿರು ನಿಮ್ಮ ನೃಪಸುತೆ । ಯಿರವದೆಂತಿ ಹುದೊರೆವುದೆನಲಾ ದೇವಿ ಕೌಶಲೆಗೇ ॥ ತರಳೆ ಯಿರವಾಕಾಕೆಯಪ್ಸರ । ತರುಣಿಯರ ಲಜ್ಜಿಸುವ ಸೌಂಧರ । ವರಿವರಾರಾ ನೊರೆಯ ಬಲ್ಲೆನೆ ಯನಲು ಕಂಚುಕಿಯೂ ॥ ೨೬ ॥ ಆದರೊಳ್ಳಿತು ರಾಮನೀಕ್ಷಿಸು । ಪಾದಸೇವೆಗೆ ಯೋಗ್ಯಳಹಳೆಂ । ಬಾದರಂತ ದೊಳುಲಿವೆ ನೀನಿಹುದೆಂದು ರಘುವರನಾ ॥ ದಾದಿಯರ ಮೂಲದೊಳು ಬರಿಸಲು । ಆದಿ ದೇವಕುಮಾರ ನಪ್ಪರೊ । ಳಾದಸವ ಶೃಂಗಾರಶೇಖರ ನೋಳ್ಪರಂಬಕಕೇ ॥ ೨೭ ॥ ನೋಡುವರಿಗಾನಂ ಪವನು ವಡ । ಗೂಡಿಸುವ ಲಾವಣ್ಯರಸ ವಡ । ಗೂಡಿ ನೀಲದ ಪುತ್ಥಳಿಯ ತೆರನಾದ ನನುಜಾತಾ ॥ ಗೂಡಿಯೈದಮ್ಮಾಜಿ ಗೊಂದನೆ । ಮಾಡಿ ಯ ಲ್ಲೊಂದ್ಮುತ್ತಿನಾಸನ । ಗೂಡಿ ಕುಳಿತನು ಸಕಲಕಲೆ ರೂಪಾದುದೆನೆ ರಾಮಾ ॥ ೨೮ ॥ ರಾಮುರಾಮರ ಗುಣಕಲೆಗಳಭಿ । ರಾಮ ರಣ ಸಿಸ್ಸೀಮ ಸತ್ಯ ಸು । ನಾಮ ರಾಜಸುತೇಜ ತಾರಾಧೀಶ ಕಲೆ ನೆಲೆಯಾ ॥ ಸ್ವಾಮಿ ಬಂದನು ನೋ ಳ್ಪರಂಬಕ । ಕಾಮ ಬಂದನು ಯಂದು ಅರಗಿಣೆ । ರಾಮ ನುಡಿದನು ದಾದೆ ಮುಂಗೈಯೊಳಗೆ ಕುಳಿತಿರ್ದ್ದೂ ॥ ೨೯ ॥ ಲೋಕಚಕ್ಷುವೆನಿಪ್ಪ ಯಿನನೀ । ಲೋಕನಾಯಕನಾದ ರಾಮನ । ನೇಕ ದಿನಮಣಿ ತೇಜದಲಿ ಸುರಕುಜವೆ ನೈತಂದೂ ॥ ಈ ಕುಶಲರೂಪಾದುದೆನೆ ಬಂ । ದಾ ಕುಶಲ ಸಿಂಹಾಸನದಿ ಕುಳಿ । ತಾಕುಮಾರನ ಕಂಡು ಕಂಚುಕಿ ನಲಿದ ಳರ್ತಿಯಲೀ ॥ ೩೦ ॥ ನಲಿವ ಳವಲೋಕಿಸುತ ಕೌಶಲೆ । ನಿಲುಕಿ ನೋಡ್ಯಾಕುಸ್ಥನತಿ ರೂ । ಪಿಲಿ ವಿಲಾಸದ ಬೆಲ್ಲ ಬಿಲ್ಲನ ಲಲ್ಲೆಯೊಳು ಝುಗಿಪಾ ॥ ಸುಲಲಿತಾಂಗದ ಲಕ್ಷಣವ ಮನ । ಮೊಲಿದು ನೀಶುಚಿಯಿಂದ ನಿನ್ಸುತೆ । ಯೊಲವ ನುಲಿಯಂತಿಹಳು ತಿಳಿವಂತೆ ಲಘೆ ಕಂಚುಕಿಯೇ ॥ ೩೧ ॥ ನೋಡಿದೆನು ನಿಜಮಾತೆ ತವಸುತ । ಗಾಡಿಯನು ನೀವಾಗಿ ಬಹುಕೊಂ । ಡಾಡುವದೆ ಸರಿಯಮ್ಮ ಪುತ್ರಿಯ ನಿಮ್ಮ ನಂದನನಾ ॥ ನೋಡಿಗೌರಿಯುಮೇಶ ನಂತಹು । ದಾಡಿದರೆ ನೀವೀ ಗ ಕೋಪವ । ಮಾಡುವಿರಿ ಯನುತೊಳಗೆ ಹಿಗ್ಗಲು ದಾದೆ ಚಲುವರಿದೂ ॥ ೩೨ ॥ ಈತನೇ ರಘುರಾಮ ಬಹುಚಲು । ವಾತ ನೆಂಬವ ರೀತನೇ ರಣ ।

ಕಾತನೆಂಬವರೀತನೇ ತಮತಮ್ಮ ನಂದನರಾ ॥ ಖ್ಯಾತಿಗೈಯ್ಯದರಾರು ಲೋ ಕಷ | ಮಾತೆ ಯೆನಿತಿಹುದೆಂಮ ಸುತೆ ಕಡು | ನೂತನವನಾ ಧರಿಸು ವುಲಿ ದಪೆ ತಿಳಿದ ಮಾತ್ರವನೂ ॥ ೩೩ ॥ ಸೃಷ್ಟಿಸಿದ ಬ್ರಹ್ಮಾಂಡನಿಗೆ ರೂ | ಹಿಷ್ಟೆ ಸರಿಯಿಲ್ಲೆಂಬದರುಹಿ | ಲ್ಲಷ್ಟು ಶೃಂಗರವಾತ ಚಿಂತಾಮಣಿಯೊ ಪೆಣ್ಮ ಣಿಯೋ ॥ ದೃಷ್ಟ ವಿವರಸಲಗಡ ನಾನಿಂ | ನೆಷ್ಟರವಳಬ್ಧಿಯೊಳು ನೀರ್ತ್ರಂ| ದಷ್ಟ ಪೇಳುವೆನೆಂಬ ದಾದಿಯ ಪುಷ್ಟಿಯನುಕೇಳೀ ॥ ೩೪ ॥ ಮೆಚ್ಚಿ ಜಾ ಣ್ಮೆಯ ನುಡಿಗೆ ಮುಂಗೈ | ಪಚ್ಚೆ ಕಡಗುಡು ಮಾಲಿಯನು ತೆಗೆ | ದೊಚ್ಚಿ ಯಾ ಕುಶಲೋಕ್ತ ವಿರದಲೆ ನಿನಗೆ ಕಂಚುಕಿಯಾ ॥ ಉಚ್ಚ ನಾಮವ ನೀವರೇ ನೃಪ | ರಿಚ್ಚೆ ಬಂದಂತುಲಿ ವುದಲ್ಲಿರ | ದಚ್ಚರಿಯ ನೆಲೊದಾದಿಯನೆ ನಸು ನಗುತ ರಘುರಾಮಾ ॥ ೩೫ ॥ ಆಕೆಯೊಲಪಿನ ನುಡಿಗೆ ಸಂತಸ | ವ್ಯಾಕ ಲಿಸ್ಲಿ ಕೌಶಲ್ಯೆ ಸೌಮಿ| ತ್ರಾಕುಮಾರನ ಅನುಜ ಲಕ್ಷ್ಮಣನಗುತ ಲತಿರೂಪು॥ ಆಕೆಯೊಳ ಗಿರದಿರಲಿ ನೀ ಪೇ | ಳ್ವಾಕೆ ಸಾಕಿನ್ನುಲಿವುದೆನ ಲವ | ಲೋ ಕಿಸುತ ನಸುನಗುತ ವುಲಿದಳು ದೇವಿ ಕೇಳೆನುತಾ ॥ ೩೬ ॥ ಕಾಕಿಣಿಯ ರತ್ನದೊಳು ಕಾಂತಿಂ| ನೇಕವಲ್ಲದೆ ಫಲತೆರದ ನುಡಿ | ಯಾಕೆ ಯಾವೋ ಪಾದಿಯಲಿ ಯಾಪಾದ ಮಸ್ತಕಕೇ ॥ ಏಕ ಚಲುವಿಕೆಯಾದ ಸೀತ ಕ | ಲಾಕಲೆಯೊಳಡಿಯಿಂದ ವರ್ಣಿಸು | ವಾಕೆಯಾಸ್ಯವ ನೋಡುತೆಸೆದರು ರಾ ಮ ಕೌಶಲ್ಯೇ ॥ ೩೭ ॥ ಅರುಣವೋ ಅಲತಿಗೆಯ ರತ್ನದ | ಮೆರುಗೊ ಕುಂಕುಮರಸವೊ ರಕ್ತವೆ | ಪೊರಗಣಿಸಿ ತೋರುವುದೊ ಸಂದ್ಯಾರಾಗ ರಸ ಕಲಿತಾ ॥ ಅರುಳಿ ಮಾಮರ ಚಿಗುರೊ ಸೀತೆಯ | ಚರಣದಡಿಗಳೊ ಅರಿ ಯೆ ಜಾಣ್ಮೆಯ | ಬೆರೆದರಾದರೆ ತಿಳಿವುದೆಂದಳು ದಾದೆ ಕೌಶಲೆಗೇ ॥ ೩೮ ॥ ಕಮಟವಜ್ಜೆಯೊ ಕಾಮಲತೆಯಹ | ರಮಣಿ ಪಾದುಕ ಮೆಟ್ಟಹಳೊ ತ | ತ್ಕ್ರಮಗಳೇಯಾಚಲುವೊ ಚಂಚಲ ಶರನ ಅಬ್ಜಾಸ್ತ್ರಾ ॥ ರಮಿತವೋ ಶ್ರೀರಮಣಿ ಸೀತೆಯ | ಕ್ರಮಗಳೋ ನಾನರಿಯೆ ಬರಿಭ್ರಮೆ | ನಿಮಗೆ ಪೇಳುವೆ ತಿಳಿವುದೆಂದಳು ಯಿಂದುನಿಭ ವದನೇ ॥ ೩೯ ॥ ಕಾಮನೇ ನೋ ಡಂಗುಲಗಳಭಿ | ರಾಮ ಚೆಲುವನು ಮೆಚ್ಚಿ ಪಂಚಾ | ಸ್ತ್ರಾ ಮನೋಹರ ಬೆರಳಿಗೊರೆದನೊ ತತ್ಸ್ವಭಾವಗಳೇ ॥ ಭಾಮೆಗಿರುವವೊ ಯನ್ನ ಜಾಣ್ಮೆಗೆ | ನಾಮಗೊಡಲಿಲ್ಲಂಗುಲದ ಚಲು | ವಾಮನೋಹರದಿಂದ ಲಾಲಿವುದೆಂದ ಳಿಂದುಮುಖೀ ॥ ೪೦ ॥ ಅಣಿಮುತ್ತಿನ ಪೋಣಿಕೆಯೊ ಕುಲಿ | ಶೋಣಿಸಿ

ಡ ಬಿಲ್ಲೆಗಳೊ ಕೊರೆಕೊರೆ । ದಾಣಿ ಗೈದಿಹ ಚಂದ್ರಕಾಂತದ ಶಿಲೆಯ ಬಟುವ್ರುಗಳೋ ॥ ಕಾಣಿಸವು ಸುರಕಾಮಲತೆ ಕಡೆ । ಯಾಣಿ ಪೆಣ್ಮಣಿ ಬೆರಳನಖಗಳೊ । ಜಾಣುವೆಯ ತೋರೆಲ್ಲಿ ತಿಳಿರಿಪನೆಂದ ಳಿಂದುಮುಖೀ ॥ ೪೧ ॥ ಗುಲ್ಪವೆನಲಿಂತಿಹವೊ ಅವಕಾ । ಣ್ಬಲ್ಪ ನಾವನುದಾಮ ಶರಗಳ । ತಲ್ಪವೆನುವಂತಿಹವೊ ಕುಸುಮಾಸ್ತ್ರನ ಪತಾಕಿನಿಯಾ ॥ ವಲ್ಪವೋ ಆಸುಮನಸೆಯ ಚಲು । ನಲ್ಪಕೊಡವೆರದಂತೆ ಜಂಘೆಸು । ಕಲ್ಪನೆಗಳಿಂದೆ ಸೆದಪಾಸರಿಯಂದಳಿಂದುಮುಖೀ ॥ ೪೨ ॥ ಮಿಸುನಿಕಂಭಗಳ ಗಡಮೇಣ್ಮಣಿ । ರಸಿಕ ಕಂಭಗಳ ಸಮನುಯ್ಯಲೆ । ಗೆಸೆದ ಕಂಭಗಳಹುದೊ ಕನಕದ ಕದಳಿ ತರುವುಗಳೋ ॥ ಬಿಸಜ ವದನೆಯ ನುಣ್ದೊಡೆಗಳೆಂ । ದು ಸುರಲಾಪೆನೆ ಆಪತೆರನೆಂ । ಬೆಸಕ ವರಿಯೆ ವಿಲಾಸೆ ಕೌಶಲೆಯಂದ ಳಿಂದುಮುಖೀ ॥ ೪೩ ॥ ಮನುಮಥನ ಕೈಚಕ್ರಗಳೊ ಗಡ । ನನೆಗಣೆಯ ನಂಗೈಯ್ಯಖೇಟಗ । ಳನುವೊ ಗಿರಿ ಶೃಂಗಗಳೊ ಪುಳಿನೊಟ್ಟುಗಳ ತೆರನಲ್ತೋ । ಮನಸಿಜನ ಮದ್ದಾನೆ ಕುಂಭ । ಸ್ತನಗಳೊಲವಲ್ಲಾ ಕುಮಾರಿಯ । ಘನನಿತಂಬವೊ ತಿಳಿಯವೌ ತಿಳಿಯಂದಳಿಂದುಮುಖೀ ॥ ೪೪ ॥ ಶರನಡುಂಗುರ ನಡುವೊ ಅಸಿಕೇ । ಸರಿಯ ಕಡಜನ ಪಿಡಿನಡುವೊ ವುಂ । ಟಿರದನಡುವು ಪುಸವಾಸಿ ಬಳ್ಕುವ ನಡುವೊ ಬಡ ನಡುವೋ ॥ ತರಳನಡು ಸಣ್ಣಡುವೊ ರೂಹಿನ । ಸರಸಿಯೆನಿಪ ವಿದೇಹಿ ಮಧ್ಯದ । ತೆರನನಾವುದೊ ದೇವಿ ಚಿತ್ರೈಸೆಂದಳಿಂದುಮುಖೀ ॥ ೪೫ ॥ ಮದನಗುಣಿತಾ ಕಾರಕನು ಸರ । ಹುದುಗಿದೆಳೆ ಸೊಂನೆಸಮನಾಡುವ । ಚದುರಗುಣಿಯೊಲ್ಸೀತೆ ರೂಹಿನ ಮಧ್ಯವಿಹ ಕೊಳವೋ ॥ ವುದಧಿಯೊಳ ಗುದ್ಭವಿತ ಸುಳಿಚ । ಲ್ವಿದವೊ ಕುಸುಮಶರಾಂಗನೆಯ ಮ । ಧ್ಯದವಿಲಾಸದಸುಳಿಯೊ ನಾಭಿಯೊ ನೋಡುಕೌಶಲ್ಯೇ ॥೪೬॥ ತೋಳಪ ನಾಭಿಯ ಪುತ್ತಿನಿಂದೆ । ಳ್ವಿಳೆಯನಾಗನೊ ಕಾಳಫಣಿಯ ನಿ । ಹಿಳುಕನೆಜ್ಜಾದ ಧೂಮರೇಖೆಯೊ ರೋಮರಾಜಿಗಳೋ ॥ ತಿಳಿವರಾರವನಿಜೆಯ ಚಲ್ವಿನ । ಕೊಳದ ಕಾಲುವೆಯ ನಲುಕುಚ ದೆಡೆ । ಗಳನು ಸೇರುವದಂಮ ನಸುಪಾಗೆಂದಳಿಂದುಮುಖೀ ॥ ೪೭ ॥ ವಕ್ಷರುಹಗಳೊ ಚಕ್ರವಾಕದ । ಪಕ್ಷಿಗಳೊ ಪೊಸಪೊನ್ನ ಕಲಶಗ । ಳಿಕ್ಷುಚಾಪನ ಕರದ ಚಂಡುಗಳೆ ಸಮನಾಡುತಿಹಾ ॥ ದಕ್ಷ ಬಗುರಿಗಳಂದವೋ ಮಾ । ಲಕ್ಷಣೆಯ ಲತಿಕಾಂಗ ಫಲಲೋ । ಕೆಕ್ಷನಂಗನೆ ಕುಟ್ಮಳಗಳರಿಯಂದ ಳಿಂದುಮುಖೀ ॥ ೪೮ ॥ ಸಿರಸಮಾಲೆಯೊ

ಕಾಮರಾಜನ। ಸರಸವಾಳೆಗಳಸಮ ನಾನೆಯ। ಕರಗಳೋ ಸ್ಮರನಾಗಪಾಶವೊ ಮಿಸುನಿ ಬಳ್ಳಿಗಳೋ॥ ಸರಸರೂ ವಾಲ್ಮೀಕಕುಹರದಿ। ಹೊರಡುತಿಹ ಸರ್ಪಗಳ ಚಲುವಾ। ತರುಣಿ ತನು ಶಾಖೆಗಳೊ ತಿಳಿಯುವನೆಂದಳಿಂದುಮುಖೀ॥ ೪೯॥ ತಳಿರ ಗೈತಾವರೆಯ ಕೇದಗೆ। ದಳದ ಕೈತೆಂಗಾಳಿ ತೆಳುಗೈ। ಕುಳಿರು ನುಣ್ಗೈ ಯಲರಗೈಗಳೊ ಪಂಚಫಣಗೈಯ್ಯೋ॥ ವೆಳೆಯ ವೆಣ್ಗೆಸದಿರ್ದ ಕೆಂಗೈ। ಗಳ ವಿಲಾಸವೊ ನೀಕ್ಷಕನುಗೊಡ। ದೊಳವನೀತಿಳಿ ದೇವಿಯನ ಅರವಿಂದಲೋಚನೆಯೂ॥ ೫೦॥ ಸಣ್ಣಗಳ ನುಣ್ಗೊರಳು ಸವಿಗಳ। ಬಣ್ಣಗಳವೋ ಕಂಬುಕಂಠವೊ। ಬೆಣ್ಣೆಗಳವೋ ಬೆಚ್ಚುಗೊರಳಿನ ಚಲುವೊ ಸವಿಗಳವೋ॥ ಬಣ್ಣಗೋಲನ ತೋಳಸಾಮಿನ। ನುಂಣಗಂಭವೊ ಗಾನಕಾಯತ। ಸಣ್ಣ ಕೋಮಲ ಸೀತೆ ಗಳವಹುದೆಂದ ಳಿಂದುಮುಖೀ॥ ೫೧॥ ನಳಿನಶರನಂ ಗೈಯ್ಯ ದರ್ಪ್ಪಣ। ಗಳ ವಿಲಾಸವೊ ರತ್ನ ಮುಕರಗ। ಳೆಳೆಯ ಕದಪುಗಳಲ್ಲ ನುಣ್ಗದ ಪಹವೊ ಚಲುಕದಪೋ॥ ಹೊಳೆವ ಕೆಂನೆಯೊ ಲಲಿತವಾಗಿಹ। ಗಳವ ಪಕ್ಷಗಳಹುದೊ ಸೀತೆಯ। ತೆಳುಗದಪಿ ನಿಂಪುಗಳೊ ನೀ ತಿಳಿಯಂದ ಳಿಂದುಮುಖೀ॥ ೫೨॥ ಆದಿಯಲಿ ಶ್ರೀರಾಮ ಶಾಸ್ತ್ರವ। ನೋದ ಲೋಸುಗ ಆರ್ಯರಕ್ಷರ। ಕಾದಿ ಯೆನಿಸಿದ ಸಕಲ ಸಂಪತ್ಕಾರ ಶ್ರೀಕಾರಾ॥ ವೋದದಿಂ ಕೈ ವಿಡಿದು ತಿದ್ದಿಸ। ಲಾದ ಶ್ರೀಕಾರಾಕರಗಳ ವಿ। ನೋದ ಶೃತಿಗಳೊ ಶಾಸ್ತ್ರಸಾಲೆಗಳೆಂದ ಳಿಂದುಮುಖೀ॥ ೫೩॥ ನೀರೆಯುದರವೊ ತಳಿರೊ ವಟಫಲ। ನೇರಿಲೆಯ ಅರಿವಣ್ಣೊಬಿಂಬಾ। ಕಾರ ತುಟಿಗಳೊ ಅರುಣಕಾಂತಿಯೊ ಕುಂಕುಮಾಕೃತಿಯೋ॥ ಸೇರಿದವೋ ವಿದ್ರುಮದರಂಗನು। ಮಿಾರಿ ರತ್ನಕೆ ಸಾಲಕೆನೆಯನು। ವೋರಿಸಿದ ಚಂದುಟಿಯೊ ಅದನ ರಿಯಂದ ಳಿಂದುಮುಖೀ॥ ೫೪॥ ಕುಂದಗಳೊ ಕೋಮಲೆ ಯರದನದ। ಚಂದಗಳೊ ದಾಡಿಮದ ಬೀಜದ। ಅಂದಗಳೊ ಕುಲಿಶಗಳ ಮೊಗೆಗಳೊ ರಾಗಬಿತ್ತಿಗಳೋ॥ ಇಂದುಮುಖಿ ಬತ್ತೀಶದಂತದ। ಸುಂಧರವೊ ಸೊಗಸಿನಲಿ ರಾಜಿಪ। ನಂದನೆಗೆ ಷಡ್ರುಚಿಯಾತೋರಿಪವೆಂದಳಿಂದುಮುಖೀ॥ ೫೫॥ ಅರಗಿಳಿಯನುಡಿ ವೀಣೆನುಡಿ ಮು। ಸ್ವರವ ಸುಡಿ ಕಿರು ನುಡಿಯೊ ಚಲು ಕಿಂ। ನರಿಯ ಸ್ವರವೆನಲಹುದೊ ಕೋಕಿಲೆ ಗೈವ ಆಳಾಪ॥ ಸುರನುಡಿಯೊ ಸವಿನುಡಿಯೊ ನುಣ್ನುಡಿ। ಯಿರವೊ ಕೋಮಳೆ ಕಂದರದ ಸು। ಸ್ವರವೊ ಮೋಹನ ರಸದ ರಾಗವೊ ಯೆಂದ

ಳಿಂದುಮುಖೀ ॥ ೫೬ ॥ ಫಲ ತೆರವ ಸೌರುಭಗಳಾಶ್ರಿತ । ನೆಲೆಯೊ ಚಂಪಕ ಪುಷ್ಪದಳದ ಸು । ಚಲವೊ ಅರಗಿಳಿ ಪಲ್ಲೊ ಕಡು ನಿಡಿದಾದ ಮುಖ ಚಲ್ವೋ ॥ ತಿಲ ಕುಸುಮದಾ ಕೃತಿಯೊ ಜಾನಕಿ । ಲಲಿತ ನಾಸವೊ ನೋಡುವರ ಕ । ಣ್ಫಲವೊ ಮುಖ ಶಶಿಕಲೆಯೊ ಕಾಮಿನಿ ಯೆಂದಳಿಂದು ಮುಖೀ ॥ ೫೭ ॥ ನಗೆಯ ಗಣ್ಗಳೊ ನನೆ ಗಣೆಯ ನೇ । ತ್ರಗಳೊ ನೈದಿಲೆ ಗಂಣೊ ಶತಪ । ತ್ರಗಳ ದಳಗಂಣುಗಳೊ ಬಿಡುಗಣ್ಚಂಚಲಾಕ್ಷಿಗಳೋ ॥ ಮಿಗದಗಣ್ಗಳೊ ಮತ್ಸಲೋಚನ । ಬಗಸೆಗಣ್ಗಳೊ ದೀರ್ಘಗಣ್ಗಳೊ । ಸೊಗಸುತಿಹ ಕೋಮಲೆಯ ಮಿಂಚ್ಗಂಣೆಂದ ಳಿಂದುಮುಖೀ ॥ ೫೮ ॥ ಕೊಲ್ಲಿ ನೋಟದ ಕೊಂಕು ನೋಟದ । ಹುಲ್ಲೆ ನೋಟದ ಮೋಹ ರಸವನು । ಚಲ್ಲುತಿಹ ಚಲುವುಳ್ಳ ನೋಟದ ಚಪಲ ನೋಟಗಳೋ ॥ ಲಲ್ಲೆನೋಟವೊ ಲಲಿತ ನೋಟವೊ । ಪುಲ್ಲಶರ ಸದ್ಧಾಂಗಿ ನೋಟದ । ಪುಲ್ಲ ಶರಗಳೋ ನಯನ ಡಾಳಗಳೆಂದ ಳಿಂದುಮುಖೀ ॥ ೫೯ ॥ ಗಾಡಿಯೊಳಗೆಸದಿರ್ಪ ನಿನಶಿಂ । ಗಾಡಿಯೋ ಮನ್ಮಥನ ಸಿಹಿ ಬಿ । ಲ್ಗೋಡಿಯೋ ನಿಡಿದಾದ ಭ್ರೂಗಳೊ ನಿಂಬ ಪತ್ರಗಳೋ ॥ ಕೂಡು ಕುಡು ಪುರ್ಬುಗಳೊ ಮುಖ ಶಶಿ । ಗೂಡಿದೆರಳೆಯ ಕೊಂಬುಗಳೊ ಯ್ಯೇ । ನಾಡಲರಸಿಯೆ ತಿಳಿಯ ಪೇಳಿದನೆಂದ ಳಿಂದುಮುಖೀ ॥ ೬೦ ॥ ಮುಂಗುರುಳ ಹಯದಾಟ ಕುಣಿತದ । ರಂಗ ವೀಧಿಯೊ ನೃಗ ಮದಕೆ ನೆಲೆ । ಯಂಗಣವೊ ಯಳೆವೆರೆಯೊ ಬಾಳಾನದಿಯೊ ಮನಸಿಜನಾ ॥ ತುಂಗ ಶರದಾಸನವೊ ಪಾಲದ । ಸಿಂಗರವೊ ಶ್ರೀದೇವಿ ಗೆಸೆದ ಬೆ । ಡಗಂನೇ ವರ್ಣಿಸುವೆ ಕೇಳಿದ ನೆಂದ ಳಿಂದುಮುಖೀ ॥ ೬೧ ॥ ಸುರುಳಿ ಗುರುಳ್ಗಳೊ ಸುಕ್ಕುರುಳಳಿ । ಗುರುಳೊ ಮೇಘಾಕೃತಿಯೊ ನೀಲದ । ಮೆರುಗೊ ತತ್ತಿರುಳಿನಲು ಮುಖ ಶಶಿ ಗೊಡ್ಡಿದಂಬರವೋ ॥ ಸಿರಿಗುರುಳೊ ನಿಡುಸೋಗೆ ಗುರುಳುಂ । ಗುರದ ಕಚಭಾವಗಳೊ ಅಸಿತನು । ಕರಿತ ಲತಿಕೆಗಳಾಕೆ ಕುರುಳಹುದೆಂದ ಳಿಂದುಮುಖೀ ॥ ೬೨ ॥ ಕರಿಯ ಕೇದಗೆ ಗರಿಯೊ ಮನಸಿಜ । ಸುರಗಿಯೊ ಕುಸುಮಾಸ್ತ್ರನಾಡಿಪ । ಕರಿಯ ಪುರುಗನೊ ಅಸಮ ಹಿಡಿದ ಕಠಾರಿ ಯೆನಿಸಿಪ್ಪಾ ॥ ಶಿರನೊ ಮುಖ ಚಂದ್ರಮನಿಗ ಡ್ಡ್ಯ । ಕರು ವಿಡುಂತುದನಂತೆ ಜಡೆ । ಬಂಧುರದೊಳಿಹುದಾ ಕೋಮಲಾಂಗಿನಿಗೆಂದ ಳಿಂದುಮುಖೀ ॥ ೬೩ ॥ ಕಕ್ಷವೆರಡರ ಮಧ್ಯದೊಳು ಸ । ಲ್ಲಕ್ಷಣವ ತೋರಿಸುವ ತಿಳಿಯ । ವೃಕ್ಷ

ವೋ ಶತಸತ್ರ ದಾಕೃತಿಯಂಬ ಭೇದವನೂ ॥ ಲಕ್ಷಿಸದೆ ಕಡೆಗಾಕೆ ಮುಖ ವಹು । ದಿಕ್ಷು ಚಾಪನ ಯಂತ್ರ ವೆಂಬೋ । ಲಾಕ್ಷೆಗೊಳಲಾ ಲೋಕ ಕರಿ ಯದ ನೆಂದ ಳಿಂದುಮುಖೀ ॥ ೬೪ ॥ ಕನಕ ಲತಿಕೆಯೊ ಕಾಮುವಲ್ಲಿಯೊ। ಮನಸಿಜನ ಕಿತ್ತಲಘೊ ಸುರಲತೆ । ಯನುವ ಕೋಮಲ ಸತಿ ಲತಾಂಗದ ಶಾಖ ತಳಿರುಗಳೂ ॥ ಸನುತ ಸತ್ಫಲದಿಂದ ಸುಮನ ಸ । ದನವು ಕುಂದ ಗಳಿಂದ ಫಲ ತೆರ । ವೆನಿಪ ಲತೆಯನ ಲೆಸೆವಳಂಗನೆ ಯಂದ ಳಿಂದುಮುಖೀ ॥ ೬೫ ॥ ಅಚ್ಚರಿಯು ನಡೆಯಂಚೆ ನಡೆ ಮನ । ಮೆಚ್ಚಿಸುವ ನಡೆಯಳಿ ನಡೆಕಿರು । ನೊಚ್ಚ ನಡೆ ಮೃದು ಗತಿಯು ನಡೆಯಂದೆಳೆಯ ನಡೆಯಂದೂ ॥ ಅಚ್ಚ ಮದ ಗಜಯಾನೆ ಮೋಹನ । ಗಚ್ಚಳೆಂಬೀ ಬಿಂಕನಡೆ ಗೊರೆ । ಯೆ ಚ್ಚಿದ ಬುಜದಳಾಯತಾಕ್ಷಹು ದೆಂದ ಳಿಂದುಮುಖೀ ॥ ೬೬ ॥ ಕಡು ಬೆಡಗ ವಡೆದಂಗದೊಳು ವನ । ವಡಗಿಸಲು ನಡೆ ನುಡಿಯೊಳಗೆ ಮೃಗ । ವಡಗಿಸಲು ಖಗ ಸಹಿತ ಲಾಕೆಯ ಭಾವಕತಿನಾಂಚೀ ॥ ಅಡವಿಯನು ಸೇ ರಿಪವು ವೃಕ್ಷದ । ಗಿಡ ಲತೆಗಳಸು ಪಕ್ಷಿ ಮೃಗಗಳ । ಬೆಡಗೊ ನವ ರತ್ನ ಗಳೊ ಸ್ವರ್ನದೊ ಲೆಸೆದಳಾ ಸೀತೇ ॥ ೬೭ ॥ ಶರಧಿಯಂತಾಕಾಶವೆನೆ ವಿ। ಸ್ತರದ ಖಾಂಡಾವನವೊ ಅಪ್ಸರ । ರರಮನೆಯೊ ನರಪತಿಯ ಕೋಶವೊ ಕುರುಧರೆಯೋ ॥ ಧರಣಿಯೋ ಶಶಿರವಿಯೊ ತಾರಕ । ಧರೆಯೊ ಸುರ ತರು ಶಾರ್ವರಿಯೆ ಮೋ।ಹ ರಣ ಮೋಹನ ಸೀತೆ ಯತಿಶಯ ವೆಂದ ಳಿಂದು ಮುಖೀ ॥ ೬೮ ॥ ಆ ಕುಮಾರಿಯ ಲಲಿತ ರಸ ಹೊಳೆ । ನೂಕಿನೊಳ ಗೆನೆ ಕೈಗೆ ದೊರತ ವಿ । ವೇಕವರಿಸಿದೆನಾ ವಿಶಾಲದ ರೂಪ ವಿವರಿಸಲೂ ॥ ನಾಕಪತಿಗಳವಲ್ಲ ನಾನುಲಿ । ವಾಕೆ ಬಹು ರೂಪುಂಟು ನೀವಿಂ । ನೀ ಕುಶಲ ತಿಳಿರರಸಿ ಯನಲಾ ಮದನಮೋಹಿನಿಯೂ ॥ ೬೯ ॥ ಕಂಚುಕಿಯ ವಿ ಜ್ಞಾಣ ಮಾತಿನ । ಗೊಂಚಲಹ ಮಂಜರಿಯ ಸುಮನಸ । ದಂಚಸರಗಳ ಮನಕೆ ಮುಡಿದಾ ಕರ್ಣ್ಣಕವತಂಸಾ ॥ ಸಂಚಿಸಿದ ಪೀಯೂಷ ಸರ್ವ್ವರ । ಚಂಚಲವ ನೊಳಗೊಳಸಿ ಸೀತೆ ಪ್ರ । ಪಂಚ ವಾಲಿಸಲಾಗಿ ಗಾಗಲೆ ರಾಮ ಕೌಶಲ್ಯೇ ॥ ೭೦ ॥ ಮೆಚ್ಚಿ ಕಂಚುಕಿ ನುಡಿಗೆ ಕೊಟ್ಟ್ಯಾ। ಲ್ಯುಚ್ಚ ರತ್ನಾವಳಿ ಯ ಭೂಷಣ । ಹೆಚ್ಚಿ ವಾತ್ಮತ್ತಾಕೆ ಲಾವಣ್ಯವನೆ ಮನಮೊಲಿದು ॥ ಬಿಚ್ಚಿ ಬಿಚ್ಚೆಲ್ಲನನು ಕೇಳ್ವತಿ । ಯಿಚ್ಚೆಯಿಂ ಶ್ರೀರಾಮಚಂದ್ರಗೆ । ನಿಚ್ಚಳೆಗೆ ಸರಿತ ಪ್ಪಲು ಬೇಕೆನಲಾಗ ಕೌಶಲ್ಯೇ ॥ ೭೧ ॥ ತರಲು ನೀವೀಗಾವು ಕೊಡುವದೆ

ಸರಿಯ ಕಾಣೆಸ ದೊರ್ಣ್ಣ ಕೊಟದಿ । ಸರಿಗಿರಿಯ ಕನಕಾದ್ರಿ ಯಂಬಂತ ಲದೆ ಗಾಂಡೀವಾ ॥ ಪುರುಗ ಬಿರ್ದ್ದಂತಿಹುದು ಆಕಿವ । ಗೊರಿಸುವಳೊ ವಲದಿಹಳೊ ಮನವೆಂ । ತಿರುವದೆನೆ ಪುಸಿ ನೋಟ ನಗೆಯಂದಾದೆ ಕೌಶಲೆಗೇ ॥ ೭೨ ॥ ವಪ್ಪುವಳೆ ನೀನ್ನಣುಗೆ ಅತಿಶಯ । ವಪ್ಪ ನೀಲದ ಪುತ್ಥಳಿಗೆ ಜೀ । ವಪ್ಪ ತೆರದೊಳು ಹೊಳೆವ ರಾಮನ ಚರಣಗಳ ಸೇವೇ ॥ ಯಪ್ಪು ದೇ ಲೋಕರಿಗೆ ಬಹು ಪು । ಣ್ಯಪ್ಪಳಾದಡೆ ದೊರೆವು ದೊಲಿಯದ । ಲಿಪ್ಪು ದೇ ಗಾಂಡೀವ ಸಖ ಕೇಳೆನಲು ಕೌಶಲ್ಯೇ ॥ ೭೩ ॥ ಪರ್ವತವ ಕಿತ್ತೆಸದು ಸ್ವರ್ಗ್ಗವ । ನೂರ್ವ್ವಿ ಗೆರಗಿಪ ಸಾಹಸಿಗೆ ನೀ । ತೋರ್ವ ಬಿಲ್ಲೊಂದುಲು ಸಮಾನವದಲ್ತೆ ಆಶ್ಚರಿಯಾ ॥ ತೋರ್ವೆಲೆ ಕಂಚುಕಿ ಸ್ವಯಂವರ । ಪೂ ರ್ವ್ವ ವಿರಚಿಸಲ ರಸನಿಗೆ ನೀ । ತೋರ್ವುದೀ ನುಡಿ ಯಂದನ ಸದಳನಾದ ಲಕ್ಷ್ಮಣನು ॥ ೭೪ ॥ ಸೋದರತ್ತೆಯ ಮಗಳು ಸಲಿಗೆ ವಿ । ನೋದ ದಿಂದೆಳತರೆ ಸತಂತ್ರವ । ದಾದರಿಗೆ ವರನಾಗದೆಂದರೆ ಬಿಡುವರೇ ಧನುವಾ॥ ಸಾಧಿಸುವ ಶಕ್ತ್ಯುಂಟು ಮೇಣ್ಬಲ । ವಾದರೆನಲಾ ದಾದೆ ನಿನಘನ । ವಾದ ನುಡಿ ಬಿಡಲುಂಟೆ ಸರಿವಾಂಛೆನಲು ಕೌಶಲ್ಯೇ ॥ ೭೫ ॥ ಪೊಡವಿಗತಿಶಯ ವಾದ ಮಕ್ಕಳ । ಪಡೆದಲೇ ನೇನಾಡಿದರು ಸರಿ । ಪಡುವುದೆಷ್ಟತಿಶಯ ದೊಳಿರಲಾ ಹೆಂಣು ಜನ್ಮದೊಳೂ ॥ ವಡೆದತಿಶಯವಾಕೆ ಪುಂಸವ । ಪಡೆ ದುದಾಗಿರೆ ನಿಮ್ಮ ಸುತರವ । ರಡಿಯ ಕಾಯ್ವರದೀಗ ಬಿಡದರಸೆಂದ ಳಿಂದು ಮುಖೀ ॥ ೭೬ ॥ ಪೇಳಲಿಂನೆನಿತೆ ದುರಿಗರಿದರು । ಬೀಳ ನುಡಿವದ ಬಿಡದ ಪಕ್ಷವ ತಾಳಿ । ದಳು ಯೇನಾದಡುಳಿವೆಯ ನಿಂಮ ನೃಪಸುತೆಗೇ ॥ ಬಾಳ ಲಾವಣ್ಯಹುದು ನಿಮ ಸರಿ । ಯಾಳು ಯಾರಿಲ್ಲೆಂದು ಕೌಶಲೆ । ಬೀಳು ಕೊಟ್ಟಳು ನಗುತ ದಾದೆಯನರುಹ ಸ್ಮರಣೆಯಲೀ ॥ ೭೭ ॥ ಕಲಿಲಹರ ಮುನಿ ಸೂವ್ರತಾಂತ್ಯದಿ ! ಚಲಿತರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನ್ನಾ ಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೭೮ ॥

ಅಂತು ಸಂಧಿ ೧೭ ಕ್ಕಂ ಪದನು ೧೧೦೪ ಕ್ಕಂ ಮಂಗಳ ಮಹಾ ಶ್ರೀ

ಹದಿನೆಂಟನೆಯ ಸಂಧಿ.

ಸೀತಾ ಸ್ವಯಂವರದ ಸಂಧಿ.

ಭಂಗಿಸವನಿಪರೆಲ್ಲ ಗಾಡಿಯ । ಭಂಗಿಗಾಶ್ರಿತಗೈದ ಸೀತೆಯು । ನಂಗನರಗಿಣಿಯಂತ್ಸ್ವಯಂವರ ಸಾಲೆ ಗೈದಿರಲು ॥ ಪದನೂ ॥

ಧರಣಿಪತಿಯುವಧರಿಸು ಕೌಶಲಿ । ತೆರಳಬೆನೆ ನಸುನಗುತ ದಾದಿಯು । ಪರಿದಳಿದ್ದರ್ಥವನು ಪೇಳಿದರಾರು ಸೈರಣೆಯಾ ॥ ಗರೆವರಿಲ್ಲಂಪಾಜಿ ನಿಮ್ಮ ಸುತ । ಸರಿಯುರಿಲ್ಲೆಲ್ಲರಲಿ ನೀವೇ ಪಿರಿದು । ಧರೆಯೊಳಗಿದನು ಪಪ್ಪೆಂದುಲಿದು ತೆರಳಿದಳೂ ॥ ೧ ॥ ಪೋಗುವ ವಸರದೊಳಗೆ ಮುತ್ತಿನ । ಪೋಷಪಾಲಕಿ ವುಡುತೊಡವು ಸಹಾ ವಾಗಿ ಕೊಡಲಾನಂದದಿಂದಡಿಗೆರಗಿ ಕೌಶಲೆಗೇ ॥ ಶ್ರೀಗಣೇಶಹ ರಾಮನನು ಶರ । ಣಾಗಿ ಹೊರಟಳು ಮದನ ಮೋಹಿಸಿ । ಆಗ ಬಿಟ್ಟಳಯೋಧ್ಯೆ ನಗರಿಯ ನರಸ ಚಿತ್ತೈಸೂ ॥ ೨ ॥ ಬಂದು ಅಭ್ಯಗ್ರದಲಿ ಮಿಥುಳೆಯ । ನಂದು ಪೊಗುತ ವಿದೇಹಿ ಪದ ಯುಗ । ಕಂದು ವಂದನೆ ಗೈದು ಕುಳಿತಳಯೋಧ್ಯೆಯೊಳಗಿರುವಾ ॥ ಬಂದುಗಳ ಸುಕ್ಷೇಮವನು ಬೆಸ । ಸೆಂದೆಳೆಲೊ ದೇವಾಲು ಪೋಗಿ । ದ್ವಂದವರಿನಾನರಿವ ತೆರನಿಂತೆಂದ ಳಿಂದುಮುಖೀ ॥ ೩ ॥ ದೇವದೇವೀಶ ನೊಲಸೆಸಿದಿನ । ದೇವಸಹಿ ಜನೊಪದಕ್ಷ ಶರನಸು । ಭಾವಸೋ ಕಸ್ತುರಿಯು ಮಿಳಿತದ ಕನಕ ವಸ್ತ್ರಾಳಿಯೋ ॥ ದೇವನೀಲಧಿ ಕಡೆದಬೊಂಬೆಯ । ದಾವಚಲುವೆಂವರಿಯೆ ಮೋಹನ । ಕಾವಲಿಯರಸ ಬಲಿದ ರೂಪಹುದೆಂದ ಳಿಂದುಮುಖೀ ॥ ೪ ॥ ಇಲ್ಲಿ ಗೈದಿದಾರ್ಗಗ ಲತಿಶಯ । ವೆಲ್ಲನೀವರಿಯುದೆ ಸುಮಾರರಿ । ದಲ್ಲಿಯೇ ತಿಳಿದ ವುದು ಕುಳಿತು ಸಮಕ್ಷಮದೊಳವನಾ ॥ ಸಲ್ಲಲಿತ ರೂಪರಿದೆ ಪ್ರತಿಕರ । ರಿಲ್ಲ ತ್ರೈಜಗದಲ್ಲಿ ನಿನಗಿ । ನ್ನೆಲ್ಲಿ ವರ್ಣನೆ ಬಹುದು ವೈದೇಹಿಯುಂದಳಿಂದುಮುಖೀ ॥ ೫ ॥ ಆರ ನಿಡಲಾರಾತ ನೊಲವು ಕು । ಮಾರ ವಯ ಗುಣ ಶೌರ್ಯ ಬಹವವು । ಧಾರಿಯನು ಯಂತಪಗೆ ಸರಿಯಿಡಲೆಮ್ಮ ನಂದನೆಯೇ ॥ ತೋರುತಿಹಳಲ್ಲದಲೆ ಪೂರ್ವದ । ಕಾರಣಹುದಾಗಿಹುದು ಸಮ್ಮಂದಾ ರಘು ಜ ಜಾನಕಿಗೆ ಸರಿಯಹುದೆಂದ ಳಿಂದುಮುಖೀ ॥ ೬ ॥ ಅತ್ತ ನುಡಿದಿಲ್ಲೀಕೆ

ಗಹವರ । ಸೀತೆಯುಳಿದಿ ನ್ನಾತನಿಗೆ ಸರಿ । ಭೂತಳದೊಳಿವ ರೀರ್ವರಿಗೆ ಸಮ ವಾತು ತೋರುವದೇ ॥ ಯಾತಕಿನ್ನೆಡೆವಾತು ಕಾರ್ಮುಖ । ವಾತಗೆದುರಿ ಲ್ಲಾ ಸ್ವಯಂವರ । ಕಾತ ಬಹೆನೆಂದರಸಿ ನೀ ತಿಳಿಯಂದಳಿಂದುಮುಖೀ ॥ ೭ ॥ ಕಂಚುಕಿಯ ನುಡಿಗೊಲಿದು ಬಹು ರ । ತ್ನಾಂಚಿತಾಭರಣವನು ಕೊಟ್ಟವ । ಳಿಂಚರಕೆ ಮನಸೋತು ಸೀತಾರನ್ನೆ ನಸುಮೂರ್ಛೆ ॥ ಸಂಚಿಸಿ ದಳಿಗೆ ಶೈತ್ಯದುಪಚರ । ದಿಂಚರಿಸಿ ಭವಬದ್ಧವೆಂದು ಮ । ನಂ ಚಕಿತಗೊಳೆ ವಿದೇಹಿ ಯವನೀನಾಥ ಚಿತ್ತೈಸು ॥ ೮ ॥ ಹೀಗೆ ವೋರೋರ್ವರಿಗೆ ಸಂ ತಸ । ವಾಗಿ ರಾಮಧ್ಯಾನ ಕನುಸರವಾಗಿರ । ರಾಗಿ ಯಿರಲವನೀಶ ನರಿದಾ ಧಿಯಲೆ ನಿರ್ಣಯವಾ ॥ ಸಾಗಿಸಿಹೆ ನಾತನಿಗೆ ಧನುಯದು । ರಾಗಲರಿದಾತ ಲ್ಲದಂನಿಗ । ರಾಗರೀ ರಮಣೀಮನೋಹರ ದೆಂದನಾಜನಕಾ ॥ ೯ ॥ ಗೃಹಿ ಣಿ ಸಖಿಜನರಾದಿ ಪ್ರಮುಖಜನ । ರಹರದೊಂದೇ ವೋಕ್ತ್ರದಲಿ ಸಂ । ದಿಹ ರದಿತ್ತಲಯೋಧ್ಯೆ ಗೈದಿದನಾರದೊಂದುದಿನಾ ॥ ಮಹಿಪ ನೆದ್ದೊಂದಿಸುತ ಪೀಠದಿ । ವಿಹರಿಸೆಂದಾವೆಡೆಯಲಿಂ ಬಂ । ದಿಹಿರಿ ಯನ್ನಿಂದಾಹದೇ ನೆಂದು ಲಿದು ಕೇಳಿದನೂ ॥ ೧೦ ॥ ಲೆಂಕೆಗೈದುವ ಸಮಯದೊಳು ನಡ । ಶಂಕಿ ಸಲು ವೈಮಾನವರಿದಡಿ । ಭೋಂಕನೀಕ್ಷಿಸಲೊಂದು ಗಜಮೊರೆಯಿಡುವು ದನು ಕೇಳೀ ॥ ನಾಂ ಕರುಣದಿಂ ಬರಲು ರಾಕ್ಷಸ । ನೌಂಕುತಿರಲದ ಪರಿ ಹರಿಸುದೆನೆ । ಕೊಂಕಿಯನ್ನಡಿದಳಕೆ ಬಿಟ್ಟನು ರಾಯ ಚಿತ್ತೈಸೂ ॥ ೧೧ ॥ ಬಹಳ ದಿನದಿಂದೀ ಮದೋದ್ಧತ । ನಹ ಮೃಗೇಂದ್ರಾರಿಯನು ಪಿಡಿಯಲು । ಸಹಸಕೊಳ ಗೊಡದಿರ್ದುದೀಗೆನ್ನಲೆಗೆ ಸಿಕ್ಕಲಿದಾ ॥ ಗ್ರಹಿಸಿ ರಾಮಸ್ವಾಮಿ ಗೀಯ್ಯುವ । ನೇಹದೊಳಿರಲು ನಿಮ್ಮ ಪದ ಕರು । ಣಹದಿ ಬದಲಾಡದಲೆ ಬಿಡಲಾಯ್ತೆಂದನಾ ರಕ್ಕ್ಷಾ ॥ ೧೨ ॥ ಕಾರಣೇನಾ ದಶರಥಾಗಿದ । ಸೇರಿಸು ವಡನ್ಯೋನ್ಯ ವೈದಿದ । ದಾರಿಯೇನೆನಲಾತ ದಾಳಿಯಗೈದು ದಾದಿಯಲೀ ॥ ತೋರಿಸೆಲ್ಲವ ನುಡಿದನದಕೆ ಕು । ಮಾರ ರೀಕ್ಷಿಸಬಂದೆನವರೆ । ಲ್ಲೋರಿಸೆನ ಲೈದಿಸಲು ವಂದಿಸಿ ಕುಳಿತರೆದುರಾಗೀ ॥ ೧೩ ॥ ನೋಡಿ ಸುಕುಮಾರಕರ ಗಾಡಿಯ । ಮೋಡಿ ವಯಲಾವಣ್ಯ ವಿತರಣ । ರೂಢಿಯೊಳಗತಿ ಕೌತುಕದ ಶಿಷುತನದ ಕಾಲದಲೀ ॥ ಮಾಡಿ ದನುಜರೊಳಾಹವದಿಸೈ । ಗೂಡಿದರಿಗಿ ನ್ನೆದುರೆ ತ್ರಿಭುವನ ! ಗೂಡಿದ ರೊಳೆಂದೊಲೆದು ನೋಡಿದ ಸುತರ ನಾರದ ನೂ ॥ ೧೪ ॥ ಬಡುತ ಸಂತಹ ವಿನಹ ಕಾಲನ । ನೋಡಿದ ರಾಘವ ಗೆಲ್ಲಿ

ವದು ವಿಹ। ಯಡೆಯ ನೋಡಿರುವೆಂದ ನಾರದಗೆಂದ ಮಿಥುಳೆಯಲಿ ॥ ಮಡ ದಿಪುಣಿ ಜನಕಾತ್ಮಜೆಯು ಚ। ಲ್ವಿಡೆದಳೆಂಬರ ದಾಕೆಯನು ತರು। ವಡೆಯು ದೆತ್ನವ ಮಾಡಿಕೊಂಡಿಹೆನೆಂದ ದಶರಥನೂ ॥ ೧೫ ॥ ಇನಿತು ಚಲುವಡಸಿ ದಕುಮಾರಗೆ। ಸನುತವಹ ಳಲವೆಂಬ ದೀಕ್ಷಿಪೆ। ವೆನುತ ಬೀಳ್ಕೊಂಡ್ಯೆದೆ ಮಿಥುಳೆಗೆ ಜನಕನೋಲಗಕೇ ॥ ಮುನಿಪ ಬರಲೊಂದಿಸುತ ದಯವಿ। ಟ್ಟನು ವದೇನೆನಲಾತ್ಮಜೆಯ ರೂ। ಪಿನ ವಿಲಾಸವ ನೋಡಲ್ಯೆದಿದೆನೆಂದ ನಾರದನೂ ॥ ೧೬ ॥ ಸುತೆಯ ನೋಡುವಡರ ಮನೆಗೆ ಮುನಿ। ಪತಿಯು ಕಳುಹಲು ಜಡೆ ಕಮಂಡಲ। ಜತಿಯ ಕಾವಿಯ ವಸ್ತ್ರ ಕಡುಶುಬ್ರೊಡೆದ ದಂತಸಹಾ ॥ ಆ ತನ ರೂಹೀಕ್ಷಿಸುತಭಯ ದು। ದ್ಧತದಿ ತಗುಲೆನ ಲಾಳಿಯರು ನೂ। ಕುತಲಿ ಹೊರಗಣಿಸಿದರು ಸೀತೆಯ ಬೆಸದಿ ನಾರದನಾ ॥ ೧೭ ॥ ಮಾನ ಭಂಗಕೆ ಮುನಿದು ಈಕೆಯ। ದಾನವನ ಪಾಲ್ಗೈವೆ ರಾಮನ। ನೂನಿಸುವೆ ನೆಂದ್ಯೆದೆ ಲೆಂಕೆಗೆ ಕಂಡು ರಾವಣನೂ ॥ ಏನು ದಯವಿಟ್ಟಾರ್ಯ್ಯ ವೆನಲಿಂ। ನೇನು ನಿನಗೈಶ್ವರ್ಯ್ಯ ಕರೆಯಿಂ। ನೇನು ಯಲ್ಲಾ ನೋಡಲ್ಯೆದಿದೆ ನಿನ್ನ ಸಂಪದವಾ ॥ ೧೮ ॥ ಬರುವ ಸಮಯದೊಳೊಂದು ಚೋದ್ಯವ। ನರಿದೆ ನಿನಗಲ್ಲದಲೆ ಮಿಗಿಲರಿ। ಗೊರನ ಸಮ್ಮಂದಲ್ಲ ನೀದಾನವನು ನಿನಗವರೂ ॥ ಯರಕ ಬಡುವಂತಿಲ್ಲವಾದರು। ಅರಿವುದತ್ಮಿಥುಳೆಯಲಿ ಜನಕನ। ತರುಣಿ ವೈದೇಹಿಯಾತ್ಮಜೆಯು ಕಡು ಚಲವೆ ರೂಹಿನಲಿ ॥ ೧೯ ॥ ಸೀತೆಯೆಂಬ ಕುಮಾರಿ ಜಗ ವಿ। ಖ್ಯಾತೆ ಅಪ್ಸರರಾದಿ ಪೆತರ। ಜಾತಿಯೊಳಗರಿದಿಲ್ಲ ದಾನವ ಮಾನವವನಿಯಲಿ ॥ ಆತಳೆ ನಿನಗೊರನು ಬದಲಿಂ। ನಾತ ರಿಲ್ಲೆನಲ ದಕೆ ಕಳವಳ। ವಾತು ದಶಸಿರ ಪ್ರೀತಿಗೊಂಡದನರಿದು ನಾರದನೂ ॥ ೨೦ ॥ ಕೊಡರು ನಿನಗವರಾದರೂ ನೀ। ಬಿಡುವನಲ್ಛಲ ದಾಂಕಸಾಧಿಸಿ। ಪಿಡಿವನೇ ಸರಿಯಂದು ಸಮಯದೊಳ್ಯೆದೆ ನಾರದನೂ ॥ ಹಿಡಿದ ಕನ್ಯಾಲೋಭದಲಿ ಶ್ರಮು। ಬಡುವ ರಾವಣಗಾ ಮರೀಚನು। ನುಡಿದ ನಾನನುಬಡಿಸಿ ತರುವೆನು ಕಡುಗದಿರುಯಂದೂ ॥ ೨೧ ॥ ಮಾತಿನೊಳು ತಹುದುಚಿತ ಕದನವ। ಸಾತರೊಲಿವಳೊ ವಲಿಯದಿರೆ ಕಾ। ರ್ಯಾತು ವೆರ್ತಹುದಂಗನಾಮಣಿಯರಲಿ ಸನ್ಮಚಿಯಾ ॥ ಮಾತೆ ಯಿರಬೇಕೆಂದು ಬೇಕೆಂ। ಬಾತರೊಡನೈತಂದು ಮಿಥುಳೆಯ। ನಾತ ನೆಡೆಗೈದೊಂದನಾ ಪ್ರತಿನಂದಿಸುತ ಕುಳಿತಾ ॥ ೨೨ ॥ ರಾವಣನ ಐಶ್ವರ್ಯ ಕೆಣೆಯಹ। ದೇವಮಾನವರಿಲ್ಲ ಚಕ್ರವ।

ನಾವಲಂಬಿತ ದೈತ್ಯಕಾಮನು ಯಂಬದೆಲ್ಲವನೂ ॥ ನೀವು ಕಂಡಿಹಿರಾನು ಸೇ
ನಾ । ದೇವಸಾ ಮಾರೀಚ ನಿಮ್ಮೆಡೆ । ಗಾವಕಾರ್ಯ್ಯ ವಿದ್ದೆದಿ ದಾತ್ಮಜೆ
ಯಾಯ್ಯಬೇಕೆಂದಾ ॥ ೨೩ ॥ ಬಹಳ ರೂಪಿನ ಜಾನಕಿಯ ಚಲು । ಗ್ರಹಿ
ಸಿ ನಿಮ್ಮೆಡೆಗಟ್ಟಿದನು ಪಾ । ಲ್ಸಿಹಿಯು ಬೆರದಂತಹುದು ಪೆರತಾಲೋಕಿಸಿದ
ಲೀವಾ ॥ ಗ್ರಹಿತ ಗೊಳಿನಲಾದಿಯಲಿ ರಘು । ದ್ವಹಗೆ ಕೊಡಲಾಡಿಹೆನು
ಗಾಂಡೀ । ವಿಹುದು ಯಾವುದ ಕಡ್ಡಿ ದಾನವನೆಂದನಾ ಜನಕಾ ॥ ೨೪ ॥
ಮೇಲೆ ದೈತ್ಯರು ನೀವು ನಿಮಗೆಮ । ಬಾಲೆಯನು ಕೊಡಲಾರೆ ಸ್ವಯಂವರ ।
ಕಾಲ ದೊಳಗಾರೆತ್ತಿ ವಜ್ರಾವರ್ತವನು ಗೆಲ್ವಾ ॥ ಗಾಲಲನೆ ಸರಿಯಂದು
ಬಿಳ್ಕೊ । ಟ್ಟಾ ಲಲನೆ ಪತಿಗೆಂದನಿನ್ನೃತಿ । ಪಾಲ ಪೌಲಸ್ತ್ಯ ಮುನಿದರೆ ಯಂದ
ಮಾರೀಚಾ ॥ ೨೫ ॥ ಮುನಿಯಲ್ಯಾಕೆ ಮ್ಮೊಳಗೆ ಧನುವೆ । ತ್ತನಗೆ ವಲಿ
ಸಲಿ ಬಿಡಲಿ ಕಾರ್ಮುಕ । ವೆನದುತನ ದಲ್ಲೈಸೆ ಆದಿಯಲ್ಯಾಕೆ ವೈಸವ್ಯಾ ॥
ಕೊನೆಗೆ ತಿಳಿವುದು ಯಾರು ಗೆಲಿದರೆ । ತನಗೆ ಕೊಡುವೆಂದಾಡಿ ನೃಪಸ ।
ನ್ಮನದಿ ಕಳುಹಿದನಿತ್ತು ಮಾರೀಚನಿಗೆ ಉಡುಗರೆಯಾ ॥ ೨೬ ॥ ಕೇಳಿ
ತದ್ವಾರ್ತೆಯನು ಜಗದೊಳ । ಗಾಳನಿವ ನೆನಿಸಿದ್ದು ಕಾಮ್ಮುಕ ।
ವೇಳಿಸದ ಲಪಕೀರ್ತ್ತಿ ಯಾರಿಂಗೊಶವೊ ಗಾಂಡೀವಾ ॥ ಸೇಳಿಸಿದ ರಾರಾರ
ಪುಣ್ಯದ । ಬಾಳನ್ನರಿದಿಹರಾರು ಧನುವಶ । ದಾಳದಂತ್ಯಕೆ ಸಿದ್ಧ ವಶವೆಂದಿ
ರ್ದ್ದ ದಶಕಂಠಾ ॥ ೨೭ ॥ ಆದಿನ ದೊಳಾರಿಂಗೆ ವಶವಿ । ಲ್ಲಾಧರಿಸು ಮಾ
ರೀಚನೆಂಬಂ । ತೋದಿ ಯಿರಲಿತ್ತನಕ ರಾಜ ವಿದೇಹಿಯೊಳಗಿಂತೂ ॥ ವೇಧಿ
ಸಿದ ಪೌಲಸ್ತ್ಯ ಸುತೆಗಾ । ಪೋದವಿಟ್ಟು ದನದಕೆ ವಿಸ್ಮಯ । ವಾದಿ ಮೂ
ರ್ಚ್ಛೆಗೆ ಸಂದಳವನೀನಾಥ ಚಿತ್ತೈಸೂ ॥ ೨೮ ॥ ತಿಳುಪೆ ಶೈತ್ಯದಿ ಮೂರ್ಚ್ಛೆ
ಸೋದರ । ದಳಿಯ ರಾಘವಗೀವ ಸಂತಸ । ಗೊಳುತಲಿರ್ದ್ದ ದೈತ್ಯನೊಶ
ವಹ ಪ್ರಾಪ್ತಿಯಾಚರಿಸೀ ॥ ಗಳಿಸಿದಳೆ ಸುಕುಮಾರಿ ಅಕಟೆಂ । ದಳುವ
ಸತಿ ಕೇಳ್ರಾಮನೇ ಬಿ । ಲ್ಲಳವಡಿಪ ನೀರೋಧೆಯಹದೆಂದ್ಜನಕ ಸಂತೈಸೇ
॥ ೨೯ ॥ ಇಲ್ಲರುಣ ವಿನ್ನೋರ್ವರಿಗೆ ಬಹು । ಬಲ್ಲಿದನು ಜಾಮಾತ್ರುವಿಗೆ
ಯಹ । ಳಿಲ್ಲಿಗೈತಹ ನಲ್ಲ ದಶಸಿರನೆಲ್ಲ ಸಂಶಯವಾ ॥ ನೆಲ್ಲ ಪರಿಹರಿಸೆನುತ
ಸತಿಗಂ । ತೆಲ್ಲ ಸೊಲ್ಲಿಸಿ ಆಪ್ತ ಗೃಹಪತಿ । ಗೆಲ್ಲ ತಿಳಿಸೆಸಗೆಂದ ಸ್ವಯಂ
ವರದೆತ್ನವವನೀಪ ॥ ೩೦ ॥ ಆತಪದೊಳವನಿಜೆಯ ರೂಹಿನ । ಖ್ಯಾತಿಯಾ
ತಪವೆರೆದು ಬಹುಬಳ । ಲಾತರವನಿಪರಾಡ ಕರಣದಿ ವನದಿ ಮಂಟಪವಾ ॥

ಜಾತಗೈಸೆನೆ ಚದುರ ಚಾವಡಿ । ನೂತನವ ಗೈಸೊತ್ತಿನಲಿ ಪದು । ಳಾ ತಪಸೆ ಜಗಲಿಯನು ಗೈಸಿದ ನರಸ ಚಿತ್ರೈಸೂ ॥ ೩೧ ॥ ನೀಲದೊಳು ವಿರಚಿಸಿದ ನೆಲಗ । ಟ್ಮೇಲೆ ವಜ್ರದ ಕಂಭ ಪವಳದ । ಸಾಲು ಬೋಧಿಗೆ ಪಚ್ಚೆ ತೊಲೆ ಮಾಣಿಕದ ಮುಚ್ಚಳದೀ ॥ ಸಾಲು ನವರತ್ನಗಳ ದೋರಣ । ಮೇಲು ಕಟ್ಕಸ್ತುರಿಯ ಸಾರಣೆ । ಲೀಲೆಯಿಂದತಿ ಶೋಭೆಯಾಯ್ತಂಬರದ ಮಂಟಪವೂ ॥ ೩೨ ॥ ತಣ್ಗಧಿರಶಿಲೆ ಪರಿಧಿಯೊಳು ಚ । ಲ್ವಂಗಳಿದಿರೊಳು ಬರೆದ ಚಿತ್ರದ । ಪೆಣ್ಗಳಲ್ಲಲ್ಪುರುಷ ನಾನಾತರು ಲತಾದಿಗಳಾ ॥ ಸಣ್ಗಿಡ ಗಳೆಡೆ ಪಕ್ಷಿಮೃಗ ಬಳ । ಗಣ್ಗಳನು ವಿರಚಿಸಲು ನೋಳ್ಪರ । ಕಣ್ಗಳನು ಶರಗೈವ ತೆರನಾಯ್ತಂಬ ರಾಲಯವೂ ॥ ೩೩ ॥ ಬಗೆಯೊಳಂಗಜ ಶಿಲ್ಪಿ ಜಾಣ್ಮೆಗೆ । ನೆಗಳಿದಾದುದರಿಂದ ನೋಟಕೆ । ಸೊಗಸಿತಲದೆ ಸ್ವಯಂ ವರಾಲಯ ಚೆಂದ ಬಿಜ್ಜಗನಾ ॥ ವಿಗಡನಾಗಿರ್ದಬ್ಜ ನಿಂದೀ । ಬಗೆಗೆ ಬಾರ ದು ಯಂದು ಮಂಟಪ । ಕೊಗೆದ ಚಲ್ವಾಲೋಕಿಸಿದರಾಲೋಕ ರವನೀಶಾ ॥ ೩೪ ॥ ಇತ್ತ ಲವನಿಪರೈತರಲು ಚರ । ರುತ್ತರವ ಕೊಂಡೈದಿ ಪೇಳ್ನಲ । ವೆತ್ತು ಧಾತ್ರೀಶ್ವರರು ಮಾಳವ ಗೌಳ ಕಾಶ್ಮೀರಾ ॥ ನತ್ತ ಬರ್ಭರರಾಗ ತೆಲು ಗಸ । ವೆತ್ತ ಕುರು ಕಾಂಭೋಜ ಗುರ್ಜ್ಜರ । ರತ್ತ ತೌಳ ವರಾಳ ಕರ್ಣ್ನಾ ಟೇಶರಾದೆಲ್ಲಾ ॥ ೩೫ ॥ ಭೂತಳೇಶರು ವೈರಿ ಮದಗಜ । ಭೀತಪಂಚಾ ನನರು ಮನ್ಮಥ । ಸಾತಿಶಯ ರತ್ಯಧಿಕ ವೈಭವದಿಂದ ಮಂಗಲದಾ ॥ ನೂ ತನದಿ ತತ್ಕಾಲ ಲಕ್ಷ್ಮಿಯು । ಸೀತೆಯಾಪೇಕ್ಷೆಯಲಿ ತನಗವ । ಗಾಹು ಮುಂದೈದಿರು ಮಿಥುಳಾನಗರಿಗವನೀಶಾ ॥ ೩೬ ॥ ಬಂದರೊಳು ಗಜದಂತ ಪರ್ವತ । ದಂದದಿಂ ಸಿಂಧೂರದಂತಗ । ಳಂದದಿಂ ದಿನತು ಹಿನಕರರಂತಮರ ಕುಂಜರವೇ ॥ ಬಂದುರವ ಗೈದುಭಯ ರೂಪನು । ಬಂದ ಚಿಂತಾಮಣಿಯ ರತ್ನಗ । ಳಂದವೆನೆ ಶ್ರೀರಾಮಲಕ್ಷ್ಮಣ ರೈದಲಾ ಯಡೆಗೆ ॥ ೩೭ ॥ ಇವರೆ ಗಡ ಕೌಶಲ್ಯನೃಪ ಸಂ । ಭವರು ಗಡದೈತ್ಯರನು ವಿಹರಿಸಿದ । ವರು ಗಡ ಬಹುಚಲುವರಾಗಿಹ ರಿವರೇ ಕೋಮಲದಾ ॥ ನವ ತನೂಲತ ರಿವರೆಗಡ ಯಳೆ । ಯುವದಲೀ ಬಲ ಕೌತುಕರು ಧನು । ವಿವರಿಗೆದುರಿಲ್ಲೆಂದು ನೋಡಿದರೆಲ್ಲ ಭೂಭುಜರೂ ॥ ೩೮ ॥ ಚಲು ಬಲದಿ ವಯರೂಪು ಚತುರತೆ । ಕಲೆಯ ಕೌಶಲೆ ಜಾಣ್ಮೆ ನುಡಿನಡೆ । ಗೆಲವು ಮೋಹನ ರಸದ ಕಾಂತಿಯ ಕಲಿಕೆಯೊಳಾಗೆಲ್ಲ ॥ ನೆಲೆಯುರಾಗಿಹರಿರಲು ನಮಗಾ । ಲಲನೆಯರವೆಂಬೆಲ್ಲ-

ಯೋಚನೆ । ಗಲಸುತಿರಲ್ಕೈತಂದ ರೊಂದೆಡೆ ಕುಳಿತ ರಾಸನದೀ ॥ ೩೯ ॥
ಮುತ್ತಿನಾಸನದೊಳಗೆ ಯಗ್ರಜ । ನೊತ್ತಿನೊಳಗಿರೆ ಲಕ್ಷ್ಮಣನುಜೇ । ವೆತ್ತ
ಪುತ್ಥಳಿ ಲಾಲಿತದಿ ಕೆಲರಾಜರಾತ್ಮಜರೂ ॥ ಬಿತ್ತರಾಂಬುಧಿ ರತ್ನಗಳೊ ಯಿಳೆ।
ಬೆತ್ತರೋಹಣ ಗಿರಿಗಳೆನೆ ಚಲು । ವೆತ್ತ ಸರಸಿಯ ಅಂಚೆಗಳೊ ಯನಲಾ
ಸ್ವಯಂವರದೀ ॥ ೪೦ ॥ ಆಗಲತ್ತ ವಿದೇಹಿ ಮಲಯಜ । ರಾಗ ಮಿಶ್ರಿತ
ತೀರ್ಥ ಕನಕಸ । ರಾಗ ಕಲಶದೊಳೆತ್ತಿ ಸರಸಿಜ ಲೋಚನೆಯ ರೊಸೆಗೇ ॥
ರಾಗರಸದಲಿ ಸುತೆಗೆ ಮಂಗಲ । ಕಾಗಿ ಮಜ್ಜನಗೊಳಿಸಿದರು ಚ । ನ್ನಾಗಿ
ತಿಗುರೆಣ್ಣರಿಸಿನವ ನಂಗಾಂಗಕಾಳಿಯರೂ ॥ ೪೧ ॥ ಸುರರು ಮಥಿಸಬ್ಧಿಯೊ
ಳು ವೊಗೆದಿಂ ! ದಿರೆಯ ತೆರಹೊಯ್ಲಿಂದ ನೆನೆದೊ ! ಲ್ಬರುತ ಲಿಹಳೆನೆ ಜಾ
ನಕಾತ್ಮಜೆ ಮಿಂದು ಭೂಷಣವಾ ॥ ಧರಿಸಲ್ಕೈ ತರು ತೆಡದ ಕೈ ನೆಡು । ಗುರು
ಳನಾಂತ್ಬಲಗೈಲಿ ನಾಂತಿರಿ । ವರಿಸಿ ಬಂದಳು ಮಿಡಿವ ಕುಚ ಮೇಲುದಕ
ಬೆಡಗಿನಲೀ ॥ ೪೨ ॥ ಬೆಳಗುತಿಹ ನವರತ್ನದಾರತಿ । ಗಳ ಸುಳುಹಿನಲಿ
ಮುತ್ತಿನಕ್ಷತೆ । ತಳಿವಶಾಶೆಯೊಳ್ಬೆದಿ ಶೃಂಗಾರಾಂಗಣದಿ ಮಧ್ಯಾ ॥ ತೊಳ
ಗುತಿಹ ನುಣ್ಪಳುಕ ವೇಧಿಕೆಯೊಳಗೆ ನಿಂದಳು ಕಾಮಲತೆಸರ । ವಿಳಿವು ತೆಸೆ
ದೋಲಾ ಕುಮಾರಿಯ ಚಲ್ವ ಪೊಳವೆಳಗೇ ॥ ೪೩ ॥ ಮುಡಿ ಮುಗಿಲಮಳೆ
ಮುಖ ಶಶಿಯ ಜೋಂ । ನುಡಿಯ ವೆಟ್ಟದೊಳಿಳಿವವನಲುಂ । ಮಿಡಿವ ಕುಚ
ಗಳನೂತ್ನ ಸೋನೆಯೊಲಂಬು ತೊಟ್ಟಡುತಾ ॥ ಬೆಡಗ ಸಾಯಕನಸಿಯ ಧೇ
ನುಗೆ । ಕುಡಿಸಿ ನೀರನು ಮಸೆದು ಬಾಸಣೆ । ಗಡೆದು ಹೊರೆಗಿಟ್ಬಂತೆ ವುಡಿ
ಸಿದ ರಥಿಕ ವಸ್ತ್ರವನೂ ॥ ೪೪ ॥ ಕೆಂಬೊಂನಮುಗ ಸಾಲೆಯೊಳು ಮಿಸು ।
ಪಂಬುಜುದ ಕರ್ಣಿಕೆಯೊ ತಾನಹು । ದೆಂಬ ಕೆಂಬಲಪ್ಪಟ್ಟ ವಣೆಯೊಳು ಸಿರಿ
ಗೆ ಸಮನಾದಾ ॥ ಅಂಬುಜಾನನೆ ಸೀತೆ ಕುಳಿತಳ । ದಂಬುಜಾಂಘ್ರಿಗೆ ಮು
ಸುಕಿದೆಳೆ ವಿಸಿ । ಲೆಂಬ ತರ ದಲತಿಗೆಯ ಸೂಡಿದಳೋರ್ವ ಳಬುಜಾಕ್ಷೀ
॥ ೪೫ ॥ ಮುಖದೊಳೋರಗೆ ವಡಿಯದಲೆ ಪದ । ನಖಗಳಾತ್ರೈತಿಂದು ಸಂ
ತತಿ । ಸಖತೆಯಿಂ ತಾರೆಗಳು ಬಳಸಿದವೆಂಬ ಮಾಳ್ಕೆಯೊಳೂ ॥ ಅಖಿಳ
ಮುತ್ತಿನ ಕಡಗವನು ಯಿ । ಟ್ಸಖಿಯಡಲಂಕರ ಗೈದಳೆನೆ ಸ । ತ್ಸಖತೆ ಬೆರ
ಳಾಭರಣ ವಿಟ್ಟಳು ಮಂಟಿಕಾದಿಯಲೀ ॥ ೪೬ ॥ ಅಂಗಜನ ಮದದಾನೆ
ಕುಂಭದಿ । ಪೊಂಗೆಲ ಸಮೊಗ ವಡವ ತೊಡಿಸಿದ । ಸಿಂಗರವ ಭಂ ಸುವ
ಸೀತೆಯ ಕಟಿಯೊಳಗೆ ನೂಲಾ ॥ ತೊಂಗಲಿಕ್ಕುತ ವುಳಿನ ತಳಕಪ । ಸಂಗ

ಕೆಂದಾವರೆಯಲತಿ ಕೆನ । ಲಂಗನೆಯ ಜಘನದೊಳು ನೇವಳ ವಿಕ್ಕಲೋರ್ವ ಸಖೀ ॥ ೪೭ ॥ ಮದನಮದ ಕರಿಗುಡಿಸಿ ಮೊಳೆಗೊಡ । ತುದಿಯು ರನ್ನದ ಕೀರ್ತಿಮುಖವನು । ಸದರವೆನಿಸಿದ ಮೊಗ್ಗೆ ಮೊಲೆಯುವಳಾಗ ಮೃಗ ಮದದೀ ॥ ಚದುರ ಪತ್ರದ ರೇಖೆದೋರಿಸಿ । ಮದನರಸ ಗರೆವಕ್ಷ ರುಹದೆಡೆ । ಗುದಿಗಿಸಲು ನವ ಪಂಚಸರಗಳ ನೋರ್ವ ಸುಮನಸೆಯೂ ॥ ೪೮ ॥ ಕೊರಳ ಮಲಯಜ ದುರುಗ ವೆಣೆಯಾ । ತ್ರಿರದೆ ಬಾಯ್ಗೊಡ್ಡೇಲು ವಂದದಿ । ತರುಣಿಯೋರ್ವಳು ರನ್ನಪದಕದ ಪೊನ್ನ ಸರಫಣಿಯಾ ॥ ಹೊರೆಯೊಳಗೆ ಮೌಕ್ತಿಕದ ಹಾರವ । ನಿರಿಸಿದಳು ಮುಖವೆರೆಯ ಜೋನ್ನದ । ಪರಿಯೊಳೊಪ್ಪಿತು ಜನಕನಾತ್ಮಜೆ ಕೊರಳಭಾವದೊಳೂ ॥ ೪೯ ॥ ತರುಣಿಮಣಿ ನುಣ್ಗೊರಳೊಳಗಣಿಂ । ಚರದ ಕಸವರ ಕೆಳಸಿಬಳಸಿದ । ಸ್ಮರನಫಣಿಯನೆ ಪೊನ್ನ ಬಂದಿಯ ನೋರ್ವ ಸಖಿಯಿಡಲೂ ॥ ಸರಸಿಜಾಸ್ತ್ರನ ಬೀರದೇಳ್ಗೆಯ । ಸರಸ ಕಂಬುವಿಗೆಸೆದ ಪೊಂಗ । ಟ್ಟಿರವ ತೋರುವ ಸಣ್ಣ ಚಿಂತಾಕಿಟ್ಟಳೋರ್ವ ಸಖೀ ॥ ೫೦ ॥ ಮುಡಿಯ ಸ್ವಾತಿಯ ಮುಗಿಲ ಮಿಂಚುಗ । ಳೊಡನೆ ಮಳೆಗರೆದಂತೆ ಯಡೆಗ । ಟ್ಟೊಡೆದ ಮುತ್ತಿನಹ ತ್ತೆಗಟ್ಟನ ದೋರ್ವಳಳವಡಿಸೇ ॥ ಬೆಡಗ ತನುಲತೆ ತೋಳ್ವಿಳಿಲ ಚಿಗು । ರೊಡೆದ ತೆರದೊಳು ಪದ್ಮರಾಗದಿ । ಕಡೆದ ಭುಜಕೀರ್ತಿಯನು ತೊಡಸಿದ ಳೋರ್ವ ಳಂಗನೆಗೇ ॥ ೫೧ ॥ ಭಾವ ಸರಸಿಯ ಕೇಳಿಯಾಡುವ । ಭಾವಜನ ಸಿಂಧೂರ ಸೊಂಡಿಲ । ನಾವರಿತ ಬಿಸವಲ್ಲಿಯನೆ ತೋಳ್ವಳೆಯ ತೊಡಿಸುತಲೀ ॥ ದೇವಮಲಯಜ ಗಂಧಕನುಸರ । ತೀವಿದಳಿವಿಂಡೆನಲು ತೋಳಿಗೆ । ಭಾವೆ ಕಟ್ಟಲುಪಸುರ ಮಿಸುನಿಯ ವರ್ಣ್ಣತಾತಿಗಳಾ ॥ ೫೨ ॥ ಸುರಲತಾಗ್ರದಿ ಕುಳಿತ ಮನ್ಮಥ । ನರಗಿಣಿಯ ತೆರದಂತೆ ಸೀತೆಯ । ಕರಕೆ ಪಚ್ಚೆಯ ಕಡಗವಿಟ್ಟರು ಕರತಲಾರುಣದೀ ॥ ಚರಿತ ಬೆರಳೆಂಬ ಸಮನಾಸ್ತ್ರಕೆ । ಗರಿಯ ಗಟ್ಟುವೊ ಲೋರ್ವ ಸಖಿಯುಂ । ಗುರುಗಳಿಟ್ಟಳು ಜನಕನಾತ್ಮಜೆಗವನಿ ನಾಯಕನೇ ॥ ೫೩ ॥ ಅಲರ ಶರನಂಗನೆಯ ಮೋಹನ । ಲಲಿತ ಮಂತ್ರದ ಲಿಪಿಯ ಪೊಂದಗ । ಡಿಲಿ ವಿರಾಜಿಸುವಂತೆ ಮೃಗಮದ ಚಿತ್ರಪತ್ರವನೂ ॥ ಲಲನೆ ಕದಪಿಲಿ ಬರೆದು ರಾಮನ । ಚಲುವ ಕೇಳಿದ ಕರ್ಣದೊಳು ನುಡಿ । ಕಲಕೆ ಯಿಾ ಮಾರ್ಗೆಂದು ಯಳೆದಳು ಕಣ್ಣೆ ಸೋಗೆಯನೂ ॥ ೫೪ ॥ ಮೊಗವೆರೆ ಯಮೃತಗೊಳ್ವ ಕಣ್ಜೊ । ನ್ನಗಳವಕ್ಕಿಗಳುಣ್ವ ಪೊಂಬಡ । ಲಿಗೆಯ ತೆರದೆಸಳ್ಬುಗುಡಿ ಮುತಿನವಿಟ್ಟು ಸ್ಮರ

ರಾಜ ॥ ಗೊಗೆದ ಮನೋರಥ ಕಳವಡಿತಗಾ । ಲೆಗಳ ತೆರದೊಳಗೊಪ್ಪದೋ
ಲೆಗ । ಳುಗಿಸಿದಳು ಮತ್ತೋರ್ವ ಸಖಿ ವೈದೇಹಿಗವನೀಶಾ ॥ ೫೫ ॥ ಯಲ
ರ ಲೇಪತಮಾಲ ಹೊದರೊಳು । ನಲಿವ ತೆರ ಕೇತಕಿಯು ಯಲರೆನೆ । ಲಲ್ಲನೆ
ನಿಡು ನವಿಗ್ರುಗುರ ನಿಕ್ಕುತ ಮುಡಿಯ ಗಂಟಿಕ್ಕೀ ॥ ನಲವಿನಿಂದುಂಡಬ್ಬುವ
ನಿಗಳ । ತೊಲಗಿಸುವ ನವಿಲಂತೆ ಮಲ್ಲಿಗೆ । ಯಲರ ಮುಡಿಸಿದಳೋರ್ವ
ಸಖಿ ಧಮ್ಮಿಲ್ಲಕವನಿಜೆಯಾ ॥ ೫೬ ॥ ತರುಣಿಮಣಿ ಮುಡಿನೋಳ್ಪವರ ಕ ।
ಣ್ಣೆರಳೆಗಿಕ್ಕಿದ ಬೇಳುವೆಯೊ ಪೇ । ರುರಕೆ ಮುತ್ತಿನ ಬಲೆಯ ತೊಡಿಸುತ ಚಂ
ದ್ರನಂಕದೊಳೂ ॥ ಯಿರುವ ರೋಹಿಣಿಯಂತೆ ಬೆಡಗನು । ಸರಿಸಿ ತೋರುವ
ಚಂದ್ರವದನೆಗೆ । ಮಿರುಪ ಮುತ್ತಿನ ಮೂಗುತಿಯ ನಿಡಲೋರ್ವ ಸುಂದರಿ
ಯೂ ॥ ೫೭ ॥ ನೊಸಲವೆರೆಯೊಳಗಾಲ ವಣ್ಣುಂ । ಬಿಸುವ ಕುರುಳ ರಗಿಳಿ
ಯ ಮೂಡತೆ । ಯಸಕವೆಸೆ ಕುಂಕುಮದ ತಿಲಕವನಿಡುತ ಸೀತೆಯನೂ ॥
ಹಸಿತಗೊಳುತಾಳಿಯರು ನುಣ್ಗೊಳಿ । ಪಿಸುವ ಕಂಚುಕಿ ತೊಡಿಸಿ ಯಳೆವೆಂ ।
ಚೊಸೆದು ನೋಡಿದರೆಸೆವಳೀ ತೆರ ವರಸುಚಿತ್ರೈಸೂ ॥ ೫೮ ॥ ಸ್ಮರನೊ
ಯನೆ ರತಿಯನಲು ಮನ್ಮಥ । ಶರವೊ ಯನೆ ಕರ್ವಿಲ್ಲುಯನೆ ಪಿಕ । ಸ್ವರವೊ
ಯನಲಳಿ ಜಂಕೃತವೊ ಯನಲಂಗನಾಮಣಿಯಾ ॥ ಭರಣದೊಳಗೊರ್ಪಿಸವು
ಯಿವರಂತರದ ಭಾವಗಳೊರ್ಸುವೆ ವಿ । ಸ್ತರದಿ ಕೇಳವನೀಶನೆಂದನು ರಾಜ
ರುಷಿವರನೂ ॥ ೫೯ ॥ ಸ್ಮರನ ಧನುವೆನೆ ಬೊಟ್ಟು ಕಾಂಚಿಯೊ । ಕೊರೆವ
ಪಿಕರುತಿ ನನೆಗಣೆಯು ಮುಡಿ। ಸ್ಮರನೆ ಕೈಂಕಣವು ಜೇಂಕೃತವೆನಲು ಅಂದುಗೆ
ಯೂ ॥ ನೆರೆರತಿಯು ನವಹಾರರತಿ ಕೊರ । ಳೊರಿಸಿ ರತಿಪತಿಕರದಿ ಜಘನ
ದೊ । ಳಿರುವ ಪಿಕರುತಿ ನೆನಗಣೆಯು ನಿಡುಗುರುಳೊ ಳಿಳಿ ಪದಪೀ ॥ ೬೦ ॥
ಸೀತೆ ನೊಸಲೊಳು ಮದನ ಕಾರ್ಮುಕ । ಜಾತಗೊಳೆ ಕಡೆಗಣ್ಣ ಕಾಂತಿ
ವಿ । ನೂತನವಿ ಕಮಲ್ಪರಿಯೆ ನೋಡುತ ರನ್ನಗನ್ನಡಿಯು ॥ ನೂತನಾಸ್ತ್ರನ
ಕೋರೆಗಳ ನುಗು । ರಾತು ತಿದ್ದಲು ಮೂರುಲೋಕಕೆ । ರಿನಾತೆಳಲ್ಲಪಳಿಲ್ಲ
ರತಿಯಂಬಂತೆ ವೊಪ್ಪಿದಳೂ ॥ ೬೧ ॥ ಬಾಲಕಿಯು ಕಟಾಕ್ಷನೋಟವೇ ।
ಸಾಲದೇ ಮೂಲೋಕ ದರಸರ । ಕಾಲಕಿಂಕಿಣಿ ಸರವ ಗೈಯ್ಯುವಪೊದು ಯಿ
ನಿಗೋಲಾ ॥ ಲೀಲೆಯೊಳು ನರ್ತಿಸುತಲಿರೆ ಭೂ । ಪಾಲನಾಜ್ಞೆಯೊಳಾಗ
ಸ್ವಯಂವರ । ಸಾಲೆಗೈದಿಸ ಲೈದಿಸಿದ ಮಣಿರಥವ ನಾಹಸ್ತಾ ॥ ೬೨ ॥
ಸಿರಿಯುಸರಸಿಜ ಪೂರ್ಣ ಶಶಿಯು । ಬರವ ಪೊಳೆನಜ ನೀರಜವಲಿ ಸರ

ಚಿರವಿನೊಳು ರಥವೇರಿ ಜಾನಕಿ ತೆರಳೆ ಸ್ವಯಂವರಕೇ ॥ ಹೊರೆಯೊಳೆಸ
ಗುವ ಚಮರ ಛತ್ರದ । ತರುಣಿಯರು ನವಮುತ್ತಿನಕ್ಷತೆ । ಗರೆವ ಮಂತ್ರಾ
ಕ್ಷರರು ಘಳಯಿಗೆ ಚಲುವಿನೊಳು ಬರಲೂ ॥ ೬೩ ॥ ಕನ್ನಡಿಯ ಕಾಳಂಚಿ
ಕುಂಚದ । ರನ್ನೆ ರಾದ್ಯೆನೂರು ವೂಳಿಗ । ರನ್ನೆಯರ ಮಧ್ಯದಲಿ ಮೋಹದಕ
ರಥಿ ಮೇಲ್ವಾಯ್ದೂ ॥ ಬಿನ್ನಣವೊ ಸ್ಮರಗಜವೊ ಕಾವನ । ಸನ್ನೆಹಯಗ
ಳಿದೇರೊ ಸ್ಮರಪಡೆ । ಯಿನ್ನು ತೆರಳ್ವುದು ಜತನನೃಪರೆದೆ ಗೋಂಟೆ ಯಂ
ಬಂತೆ ॥ ೬೪ ॥ ಮಾರನಾಜ್ಞೆಯೊ ಮದನ ಮಾಯೆ । ಯೊ ನೀರಜಾಸ್ತ್ರನ
ಶಕ್ತಿಯೆ ಯಾ । ಕಾರಧರಿಸ್ಯೆತಹುದೊ ಯಚ್ಚರವೆಂದು ವೇತ್ರಿಯರೂ ॥ ಸಾರು
ತಿರೆ ಕೈಯೆತ್ತಿ ನಿಟ್ಟಿಪ । ಧಾರುಣೀಶರ ನಯನಗಳು ಬೆಂ । ಗಾರ ಗೋಳಿ
ಸುವ ವಸಗೆಯೊಳಗೈತರಲು ವೈದೇಹೀ ॥ ೬೫ ॥ ವುದಯಿಸಲು ಶಶಿ ಪಾಲ್ಗ
ಡಲ ತೆರೆ । ಯದಿರಿತನೆ ಭೂಭುಜರ ಸುತ ರೊಳ । ಗುದಿತ ಮದನ ವಿಕಾ
ರದಿಂದಸವಶವ ಬಡುತಿರಲೂ ॥ ಸುದತಿ ವೊಗೆ ಸಯುವರವ ತಾರೆಗ ।
ಳು ಎತ ದಂಬರವೆಂಬ ವುರಮ । ಧ್ಯದಿವಿರಾಜಿಪ ಹಾರ ತಿದ್ದಿದನೋರ್ವ ಚಲು
ವರಿಸೇ ॥ ೬೬ ॥ ವಿಜಯ ಲಕ್ಷ್ಮಿಯ ಪೀಠದಂತಿಹ । ಭುಜಕೆ ಭುಜಕೀ
ರ್ತಿಗಳ ತಾಸ । ನ್ರುಜುಗೊಳಿಪ ವ್ಯಾಜದಲಿ ತೋರಿದನೋರ್ವ ಸುತಚಲ್ವ ॥
ಸುಜನ ರಂಜನಕಾಗಿ ಕರಪಂ । ಕಜದ ಚಲು ತೋರಿಸಲು ಪೆರಭೂ ।
ಭುಜನು ಯೇಕಾವಳಿಯ ತಿದ್ದಿದ ವಿಸ್ತರುರದೆಡೆಯಾ ॥ ೬೭ ॥ ತಿಲಕ ತಿ
ದ್ದುವ ಹಾರ ಹರಹುವ । ತಲೆಯ ಮೌಲಿಯ ತಕ್ಕುಗೈಯ್ಯುತ । ಲೊಲೆವ
ಭೂಷಣ ರಂಬನನು ಗೊಳಿಪಂತೆ ನೆವದಿಂದಾ ॥ ವಲೆವ ನೃಪರಾ ಪುಷ್ಪಚಾ
ಪನ । ಗೊಲೆಯ ಸೂತ್ರದ ಬೊಂಬೆಗಳೊ ಯನೆ । ಚಲುವ ಶ್ರೀ ಪೂರ್ಣ್ನ
ದೊಳು ಸಿಕ್ಕಿದರಾಗಿ ನವರಸದೀ ॥ ೬೮ ॥ ಘಳಿಲ ನಿಳಿದೈದಂಬರದ ನಡು।
ತೊಳಪ ಪಳುಕಿನ ಚೌಪಳಿಗೆಯೊಳು । ಬೆಳಗುತಿಹ ಮಣಿಗಂಭದೊತ್ತಿನ ಪೊ
ನ್ನಪುತ್ಥಳಿಯಾ ॥ ಮಿಳಿತದೊಳಗಿರೆ ಶಶಿಯ ತಾರಾ । ಬಳಗ ಮುತ್ತಿದ
ತೆರದೊಳೈನೂ । ಕ್ಕರ್ಗಳದಿಯರೊಳೀಕ್ಷಿತರಯದೆ ಸೂರಿಸುತಲ್ವೈದೇಹಿ ॥೬೯॥
ಕಾರಿರುಳ ತಾರೆಗಳು ವೊಳೆವೊ । ಲ್ಕ್ಯಾರವುಗುರ್ಗಳ ಹೊಳವಿನಲಿ ತಂ ।
ನೋರೆ ದುರುಬನು ಗೊಳಿಸುತೀಕ್ಷಿಸಲೋರೆಗಣ್ಣಿಂದಾ ॥ ವೋರುವನು ಪೂ
ಮಾಲೆ ಮುಡಿಗಿಡು । ತಾ ರಮಣಿ ರಮಣೀಯ್ಯಳುಂಬದ । ಸಾರ ಚಲುವನು
ನೋಡುತೆಸೆವನು ವೋರುಮುಗದಿಂದಾ ॥ ೭೦ ॥ ತುಡುಗಿಣಿಯು ತೊಳ್ಕರೆಯ

ಗೊಂಬಂ । ತಡಸಿದಮುಲಕಿರೀಟಶಕೆಗೆಂ । ಬೆಡಗು ಗೈಯ್ಯುತ ಕಂಡನೋ
ರ್ವನು ತೋಳಸಂದಿಯಲೀ ॥ ಕೊಡಗಿ ದನುಪಮ ಕುಂಡಲವನೇ । ವಡಿ
ಪನೆವದೊಳ ಗೋರ್ವ ಸೀತೆಯ । ಬೆಡಗ ನೋಡಿದ ನಿಲುವು ಗನ್ನಡಿಯೊಳಗೆ
ಮನಮೊಲಿದೂ ॥ ೭೧ ॥ ಧರಣಿಜೆಯ ಚಲ್ವೀಕ್ಷಿತಾಕ್ಷಿಯ । ತಿರುಗಿಸದೆ
ಅಪ್ಸರರ ತೆರದಿಂ । ತೆರೆದ ನಯನದೊಳೆಸೆದ ನೋರ್ವನು ಆಕೆಲಾವಣ್ಯಾ॥
ಶರಧಿಯೊಳ್ತಿಂ ಕಾಡುತಿಹ ಝುಷ । ದಿ ರವಿನಕ್ಷಿಗಳಿಂದ ಮೈಮರೆ । ದೊರಗಿ
ದನು ಮತ್ತೊರ್ವ ಮನಸಿಜನಸ್ತ್ರ ದುಪಟಳದೀ ॥ ೭೨ ॥ ಯಳೆ ಕುಳಿ
ಯುಗೊಳುತಾಗ ಮೋಹನ । ತಿಳಕವೆನಿಸುವ ಜಾನಕಿಯ ನೊಸ । ಲೊಳಗೆ
ತಿಲಕವ ಕಂಡುತಳವೆಳಗಾದನಲ್ಲೋರ್ವ್ವ ॥ ನಳಿನಶರನಸಿತಾಹಿಯಂತಿಹ।
ಗಳದ ಪೂದಂಡೆಯನು ವೇಣಿಗ । ಳೊಳವಿ ಗಂಜಿದನೋರ್ವ ಪಂದೆಯ ಪಾ
ವುಪರಿದಂತೇ ॥ ೭೩ ॥ ನಲ್ಲಳೀಕ್ಷಿಸು ತೊಗೆದ ರೋಮಾಂ । ಚಲ್ಲಕಳ
ವಿಪ್ಪಂಚಿ ಸ್ವರದಿಂ । ತೆಲ್ಲ ಪುಳುತಾಯ್ತೆಂದು ವಂಚಿಸುತವನಿನಾಯಕರೂ॥
ಲಲ್ಲೆ ಕೀಳ್ನೋಟ್ಕೊರ ಕಿರಿನೋ । ಟಲ್ಲಿ ಮಿಡಿ ಕುಡಿ ನೋಟ ನಡೆ
ನೋಟೆಲ್ಲ ನೋಟಗಳಿಂದ ನೋಡಿದ ರಂಗನಾಮಣಿಯಾ ॥ ೭೪ ॥
ಇಂದ್ರಿಯ ಗಳೈದೈದು ವಿಷಯಗ । ಳಿಂದ್ರಿಯ ದೊಳಿನ್ನೇಕ ಮುಖ
ನಯ । ನೇಂದ್ರಿಯಕೆ ಸಂತುಷ್ಟ ವಸ್ತುಗಳೊಳಗೆಸ ದ್ರೂಪಾ ॥
ಚಂದ್ರವದನೆಯ ರಲದೆ ಇನ್ನಿಹ । ಸಾಂದ್ರ ವಸ್ತುಹಿತೆಂದು ಸರ್ವಮ । ನೇಂ
ದ್ರಿಯದೊಳಿಂ ಬಿಟ್ಟು ನೋಡಿದರಂಗನಾಮಣಿಯಾ ॥ ೭೫ ॥ ಹಲವು ತೆರ
ದೊಳಗಿಂಕ್ಷಗೊಳುತಿರ । ಲಲರಶರ ನಧಿದೇವತೆಯೆ ಯಿ‌ಾ । ಲಲನೆ ರೂಪಾ
ಕೃತಿಯ ಗೊಂಡಳೊ ಯಂಬ ತೆರದಲ್ಲೀ ॥ ಚಲುವ ಸೀತಾದೇವಿ ಮಣಿ
ಗಣ । ನೆಲೆಯ ಪೀಠದ ಮೇಲೆ ಮುಕ್ತಿಯ । ಗೆಲಿದ ನಡಿದಾವರೆಯ ಧ್ಯಾನ
ದೊಳೆಸೆದಳವನೀಶಾ ॥ ೭೬ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತ
ರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥
ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆಗೈದರಿದ ಮನ। ನೊಲಿದು
ಕಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೭೭ ॥

ಅಂತು ಸಂಧಿ ೧೮ ಕ್ಕಂ ಪದನು ೧೦೮೧ ಕ್ಕಂ ಮಂಗಳಮಹಾ ಶ್ರೀ ಶ್ರೀ.

ಹತ್ತೊಂಭತ್ತನೆಯ ಸಂಧಿ.

ಸೀತಾದೇವಿ ಕಲ್ಯಾಣದ ಸಂಧಿ.

ಎತ್ತಿ ವಜ್ರಾವರ್ತವನು ನಭ । ದತ್ತ ತಿರುಗುವ ಗೃಧ್ರನೆಡಗ । ಕ್ಕೊತ್ತಿಸಿದ ರಘುಸರಳನೆಸಗಿದರಾಗ ಮಂಗಲವಾ ॥ ಪದ ॥

ಕೇಳಿದೈ ಭೂಪಾಲ ಜಾನಕಿ । ತಾಳಿದತಿಶಯವೆಲ್ಲ ನೃಪಸಂ । ಕೂಳ ವೀಕ್ಷಿಸಿ ಹಲವು ತೆರ ಭಂಗವನು ಸಾರಿರಲೂ ॥ ಬಾಳಲೋಚನ ನ್ನೊರಿಸತಿಸಂ । ವ್ಯಾಳ ಲಲನೆಯು ಪತಿಯು ಸಶುಗೆಳ । ನೇಳಿಸಲು ಬಂ ಧಂತೆ ಯೊಪ್ಪಿದಳೆಂದ ಗೌತಮುನೂ ॥ ೧ ॥ ನೆರೆದ ಭೂಸುದತೀಶರನ್ವ ಯು । ಸಿರಿಯು ವಿಕ್ರಮ ವೀರ ಚತುರತೆ । ಸರಸ ಲಾವಣ್ಯಾದಿ ಲಕ್ಷಣವಾ ಗಿನವಸರದೀ ॥ ತರುಣಿಮಣಿ ಜಾನಕಿಗೆ ಸೇತ್ರಿಯ । ರೊರೆಯ ಲಂಬುಜ ವದನ ಲಾವ । ಣ್ಯರಸಿಯೊಳು ಹೊಳೆವೆಳೆಯ ಮೀನೆನಲೀಕ್ಷಿಸಲು ನೃಪರಾ ॥೨॥ ನೆರೆನೆರೆಯ ತನುದೋರ್ಗಂಗಲೆನೆ ನನೆ । ಶರವೊ ದುರುದುಂಬಿಗಳೋ ತಂ ಚೆ । ಲರೆರಗುವಲರೊರುಷದೊಲು ನೃಪ ಸುತರ ಗ್ರಕಾವರಿಸೀ ॥ ತರಳತರ ನಯನಗಳ ಭಾವಕೆ । ಧರಣಿಪತಿ ಕಾಶ್ಮೀರ ಬಹುಸಿರಿ । ಸರಸ ಲಾವಣ್ಯವನಿ ಸುವ ಕುಮಾರೆಂದಳಿಂದುಮುಖೀ ॥ ೩ ॥ ನೋಡು ಮಗದತಿಶೂರ ಬರ್ಬ ರ । ನಾಡನಿವ ಹಂವಿಾರ ಮಾಳವ । ಗಾಡಿ ಮೋಡಿಯ ಗೌಳ ಗುಜ್ಜರ ತುರುಕ ನೇಪಾಳಾ ॥ ರೂಡಿ ವಡೆದ ವಿದರ್ಭ ಸುರ ಮಹ । ನಾಡಪತಿ ಶೌರೇಶ ಕೌಶಲ । ನಾಡಿಗರು ಮೊದಲಾಗಿ ತೋರಿದಳಂದು ಜಾನಕಿಗೇ॥೪॥ ನೋಡಿ ಸಕಲಲಕ ಲಲಿತವನು ಪಿಂ । ಮಾಡಿ ರಾಘವನಂಗದೊಳು ನಲಿ । ದಾಡುವಕ್ಷಿಯ ಭಾವನೆಂತೆನೆ ಪೂತಚಂಪಕವಾ ॥ ನೋಡದಲೆ ಮಂದಾರ ಕೊಲಿದೊಡ । ಗೂಡಿದೆಳೆ ದುಂಬಿಗಳೊ ಯನೆ ಸುಳಿ । ದಾಡಿದವೋ ಸಂ ರ್ವಾಂಗ ಲಕ್ಷಣದೊಳಗೆ ಜಾನಕಿಯಾ ॥೫॥ ಕಂನೆಯುಂಬಕ ಸೋಲ್ತು ದರಿದಾ । ಚಂನೆ ಗಾಯಕಿ ರಾಮ ನೊರ್ತನವನ್ನು । ಕಂನಡ ವಕ್ಕಿಯಿಂ ಚರದಂತೆ ಚನ್ನಾಗಿ ॥ ಕಂನಡಿ ಸಲಿಂನೇಕ ವಾಕ್ಯ ಪ್ರ । ಸಂನತಿಪ್ಪಾಚಾ ರ್ಯ್ಯ ನಿಕ್ಕಾ । ಕುಂನತಾನ್ವಯ ಗಗನ ಭಾಸ್ಕರ ನಂಗನಾಮಣಿಯೇ॥ ೬ ॥ ಲೋಕಲುಂಟಾಕಾರ ವಿಜಯನ । ನೇಕ ವೀರ್ಯ್ಯ ಮರೇಂದ್ರ ಧೈರ್ಯ್ಯನಿ । ರಾಕರರಿ ಕುಲ ವಜ್ರ ಪಂಜರ ಶರಣು ಜನರಕ್ಷಾ ॥ ಲೋಕನಾಯಕ ಚರ

ಮತನು ನಾ । ಶಾಕರೀ ಕರ್ಣ್ನಮಲ ಚಾಮರ । ನೇಕ ಯಶ ಮಂಧಾರ ರಾಘವನೆಂದ ಳಿಂದುಮುಖೀ ॥ ೭ ॥ ನೀಲತನು ಕನಕಾಂಗ ಬಲಹರಿ । ಲಾಲಿತಲಿ ದಿಂನೇಕ ಕರುಸಂ । ಜಾಲ ಪುತ್ಥಳಿಗಳ ವಿಶಾಲರೊಳೀಗ ರಾಘವನೇ ॥ ಬಾಲೆ ನಿಂನೊಲಿಸುವರೆ ತಕ್ಕನು । ಕೂಲ ಸೋದರ ಮಾತುಳನಸುತ। ಲೀಲೆಗಾರನ ನೋಡು ಜಾನಕಿ ಯಂದ ಳಿಂದುಮುಖೀ ॥ ೮ ॥ ಪಡಿಯ ರೀತಿಯ ನುಡಿಯಗೇಳ್ದೊಡ ! ನೊಡನೆ ರಾಮನ ಬೆಡಗನೀಕ್ಷಿಸಿ । ಚಡಿಸೆ ನಯನಗಳೊಗೆಧ ಪುಳುಕಿಂದುಣ್ಮಿ ಬೆವರುಗಳೂ ॥ ತಡೆದಳಲರಂಬಂಗಕನು ಅಳ । ವಡಿಸಿದಂದದೊಳಂತರೀಕ್ಷನ ! ನಡಿಸಿದರು ಮಾರೀಚ ವಿದ್ಯಾಧರರು ನೀಕ್ಷಿಸಲು ॥ ೯ ॥ ಅಸದೊಳೊಜಾವ್ರವರ್ತ್ತ ದೊರ್ತೀ ! ಣ್ದ ಸೆಗೆ ತುಂಬಿರಲೀಕ್ಷಿಸಲು ಕೆಲ । ರೆಸಕವರ್ತ ದೊಳಾಮರೀಚನು ಮೊದಲ ಮಾತಿನಲಿ ॥ ನೆಸಗವಿರಲಾರಂಗನೆಯ ರಾ ! ಕ್ಷಸಗೆ ಅನುಗೈ ಲೈದಿ ನೀಕ್ಷಿಸು । ತೆಸೆದ ರಂತರದೊಳಗೆ ಯಿರಲಿಂ ನತ್ತಲಿಂನಿತ್ತಾ ॥ ೧೦ ॥ ಆಗಲೊಜಾವ್ರವರ್ತವನು ತಂ । ದೀಗ ಸಯುಂವರ ಮಂಟಪದೆದು । ರಾಗಿ ಯಿಟ್ಟುಪಚಾರಗೈದಗ್ರದೊಳು ಸಂಚರಿಪಾ ॥ ದಾಗಿಗ್ರುದ್ಧನು ಶರದೆಸುಗೆ ಸಮ । ನಾಗಿ ತಿರ್ರನೆ ತಿರಿವದೀಕ್ಷಿಸು । ತಾಗ ಪೇಳಿದನದರ ಭಾವವನರಸಚಿತ್ತೈಸೂ ॥ ೧೧ ॥ ದರ್ಪಣದೊಳೀಕ್ಷಿಸಿದರಿಗೆ ಕಂ । ಡಿರ್ಪುದದವರೊಳ್ಗರುಡ ದ್ರುಷ್ಟಿಯು। ನಿಪ್ಪರಲ್ಲದ ರಠಿಯದಂತಾ ಜಂತ್ರಗೃದ್ಧವನೂ ॥ ನೆಪ್ಪಿನಿಂ ಪಿಂ ಮುರಿದು ನೋಡದ । ಕಿಪ್ಪ ನಯನಗಳೊಳಗೆ ಯಡಗ । ಣ್ಗಪ್ಪಿಸಿದಗಹಳೀಗ ಸುಕುಮಾರೆಂಬುದೆಲ್ಲವನೂ ॥ ೧೨ ॥ ಪೇಳಿ ಮಿಥುಳಾಧೀಶ ಸುತೆಯೊಳು । ಪೇಳಿ ಧನುವೆತ್ತಿದಗೆ ಮಾಲೆಯು । ಮೇಳಿ ಸೆಂದೊತ್ತಿರ್ದ ಚಾವಡಿಯೊಳಗೆ ವಿಷ್ಟರದಿ ॥ ನೇಳಿಸುತ ಕುಳಿತಿರಲು ಯಿದ್ದ ನೃ । ಪಾಳರೊಳು ಕಾಂಭೋಜಸಿಂನೊಲ । ದಾಳಿ ಸಾಕಾಯ್ತೆಂದು ಜನಕಗೆ ಬಂದ ಬಿಲ್ಲೆಡೆಗೆ ॥ ೧೩ ॥ ಧಾರುಣಿಯೊಳಿಂನಾರಿಗಿರದ ಕು ! ಮಾರಿಯನು ನೀ ಪಡದೆಯ ಬುಜುಬ । ದೋರದಿರು ಸಾಕ್ಷೇಣು ಭಾಗವನೆತ್ತಿ ಹದ್ದೆಸೆದೂ ॥ ಧಾರುಣಿಗೆ ವುರುಳಿವುದು ನಿನಗೆ ವು । ಧಾರ ತೋರಿತೊ ಅಕಟ ನಕ್ಷ । ತ್ರೋರಿಸುವ ಸಯುಂವರವ ಪೇಳದುಲೆಂದ ಕಾಂಭೋಜ ॥ ೧೪ ॥ ಬಂದು ನೋಡಲು ವಾಸುಗೀಶನ । ಅಂದದಿಂದ ಸಹಸ್ರ ಪೆಡೆಗನು । ಬಂದದಿತ್ಸಾಸಿಠದ ಜಿಂಹೆಯ ಸವರುತತಿಗರಳಾ ॥ ಹೊಂದಿದುರಿಸಹ ನೊರೆವ ತೆರ ಭು । ಸ್ಸೆಂದುದರಿದಂ

ನ್ನೆಸಿ ಕತ್ತಡಿ । ಯಿಂದ ನೆಗೆದುರುಳಿದನು ಕಾಂಭೋಜ ವನಿಪನಾಯಕನೇ ॥೧೫॥ ಇರದೆ ಹೇಳಿಪಜನರು ತಾ ನ್ನೈ । ಮರದು ಯಚ್ಚತ್ತೀಕ್ಷಿಸಲು ವು। ತ್ಮೊರೆಯೆ ಸಾಸಿರ ಪೆಡೆಯ ವಿಕಸಿತ ಗೈದು ನಾಲಗೆಯಾ ॥ ನುರುಮುವದ ನೀಕ್ಷಿಸುತಭಯ ನೈ । ವರಸಿ ಯಿರಲಲ್ಲೊನೆಯೆ ಪಿಂದಕೆ ॥ ಯರಗದಿರದೀ ಪ್ರಳಯ ವಾಸುಗಿ ಯಕಟ ಯಿಂದ್ಮೊರೆದಾ ॥ ೧೬ ॥ ಆರು ಅರಿಯಿರೆ ಗರುಡ ಮಂತ್ರೋ । ಧ್ಧಾರದಿಂದಡಗೊತ್ತಿ ಫಣಿಹೊರ । ಸಾರಿಸೆನ್ನಾರೈವುದ ವನಿಪರೆಂದ ಕಾಂಭೋಜಾ ॥ ನಾರವಾಲಿಸಿ ಕೈಪರೆಯ ಹೊಡೆದೋರಿಗೆಯು ರೊಳೆದಾಡಿ ನಗಲದ । ಕಾ ರಮಣಿ ಜಾನಕಿಯು ಹುಸಿನಗೆ ಯಿಟ್ಟಳೀಕ್ಷಿಸುತಾ ॥ ೧೭ ॥ ಆದಿಯಲಿ ಫುರುಮೆದ್ದು ಸತಿಯು ಪ್ರ । ಮೋದ ಕಾಸೆಯನಿಟ್ಟು ಶಕ್ತಿಹ । ದಾ ಧರಿಸದ್ದೆ ದಾಸ್ಯಕಾಶ್ರಯನಾಗಿ ಯಲ್ಲರಸೂ ॥ ಬಾಧಿಸಿದ ಹ್ರೀಂ ಕಾರದಲಿ ಸತಿ । ಯಾದರಪಹಾಸ್ಯವನು ಗೈವಂ । ತೋದ ಬಹುದೆ ಯೆಂದು ಮುಳುಗಿದ ರವನೀನಾಯಕರೂ ॥೧೮ ॥ ಮರಗುಪವನಿಪ ರರಿದು ಮಗದೇ । ಶೊರೆದನಾ ಚದಿರಾನು ಧನುವೆ । ತ್ತಿರಿಸಿಯೊಲಿ ಪುಳಿಸುವೆನು ಸರ್ವರ ಮಾನ ವೆಂದೆಂಬಾ ॥ ವುರುಮಿನೊಳಗೈತಂದು ಕಾಂಭೋ । ಜರುಗು ಶೇರೆಂದಾನು ಧನುವೆಂ । ಬರವನಾಲಿಸಿದುಂಟೋ ಯಿಲ್ಲವೋ ವೆಂದ್ಯೆದೀಕ್ಷಿಸಿದ ॥ ೧೯ ॥ ಫೊನ್ನ ಸಾಸಿರ ಪೆಡೆಯ ಫಣಿಯಂ । ತೊನ್ನ ಯಮದಂಡದೊಲು ಮೇಣಿಂ । ನೊನ್ನ ಯಿಂದ್ರಾಯುಧ ದೊಲತಿಶಯ ಅಮರಚಾಪದೊಲೂ ॥ ಸುಮ್ಮ ನಕೆ ವೈಚಿತ್ರಕೊಡುತಿಹ । ದಿಂ ಮಹದ್ಭುತ ವದು ಕ್ಷಣದೊಳ । ಗಂ ಮಹ ತ್ತನು ತೋರಲರಿದನು ಮಗಧನಾಯಕನೂ ॥ ೨೦ ॥ ಕ್ಷಣಕೆ ನಾನಾವರ್ಣ್ನ ವನು ತೋ । ರ್ವಣು ಮಹತ್ತೆಂತೆನಲು ದಿವಿಜರ । ಮಣಿಯರೊಂದ್ಸಾಸಿರ ವುರಕ್ಷಿಪ ಚಾಪವಾಗಲಧಾ ॥ ರಣುಮಣಿಯೆ ನೆಲೆಗೊಡದ ಧನುವೀ । ಕ್ಷಣದಿ ಬೆದರುವರೆಲ್ಲ ಪುಂಣ್ಯದ । ಕಣಿಗೆ ವಶವಲದಾರಿಗಾಗದದರಿದ ಮಗಧೇಶಾ ॥೨೧॥ ಏಕ ವಿದ್ಯಾದೇವಿ ಯವನಿಯು । ನಾಕ ವಲುಗುವ ಶಕ್ತಿ ಸಾಸಿರ । ವೇಕಧನುವಾಶ್ರಯಿತ ಸಾಹಸವಂತು ಯೀತೆಂಬಾ ॥ ವಾಕು ಮಾತ್ರವೆ ಆ ದನು ಕಂಣಿಂ । ಧಾಕುಪತಿ ಯಾಕ್ಷಿಸುತ ಪುತ್ಥಳಿ । ಯಾಕರದಿ ನೈ ಮರೆ ದುನಿಂದನು ರಾಯ ಚಿತ್ತೈಸೂ ॥ ೨೨ ॥ ಮರೆದು ವಂದರೆಫಳಿಗೆಯೊಳು ಕ । ಸ್ವೈರೆವನಿತ ಕುರಿ ಯುಗುಳುತಲಿ ಭೋ । ನ್ಮೈರೆಯೆ ಫಣಿಯಾಕಾ ರದಿಂ ಪೆಡೆಯೆತ್ತಿ ಯುರಗುತಿಹಾ ॥ ತೆರನ ಕಾಣುತ ಫಣಿ ಸಮುಂವರು ।

ಕರಸರ್ಸೈತರ ಬೇಡಿ ರಕ್ಷಣೆ । ಗರದೆ ನಿಮುನೆಂನುಳಿಹಿ ನುಂಗುವ ಶೇಷನೆನು
ತುಳಿದಾ ॥ ೨೩ ॥ ಮುಗದನಾಯಕ ನರಿಮ ವಿದ್ಯಾ । ಬಗೆಯ ಧನುಫಲವಿ
ದವ ತೋರ್ವುದು । ಖಗಪತಿಯ ಮಂತ್ರನ್ಯ ವಿದ್ಯಾಹಾರಿ ಯರಿಯದಲೇ ॥
ಬಗುಳುವರೆ ಬಗೆಬಗೆಯ ಮಾರ್ಗವ । ತೆಗೆವರೆಂದವ ನೊತ್ತಿ ಗುರ್ಜರ ।
ನೆಗೆದ ವಜ್ರಾವರ್ತ್ತದೆಡೆಗೈ ತರುವ ಸಮಯದಲೀ ॥ ೨೪ ॥ ಪೆಡೆಗಳೇಳೇ
ಳ್ರೊಳದ ಅಗಲವ । ತೊಡಗಿ ಜಿಂಹೆಗಳುಚ್ಚಿಂದು ಕೇಸುರಿ । ಸುಡುವ ವಿಷ
ತೊಟ್ಟಿಡುತ ಭುಸ್ಸೆನಲೆದ್ದುದೆಂದಾಗಾ ॥ ಗಡಗಡಿಸು ತುರುಗೇಶನೆ ನಲವ ।
ನುಡಿವ ಮುಗಧೆಂ ದೈದಿ ಸಾಕ್ಸಾ । ತ್ಕೆಡುತ ಫಣಿಸರಿ ಕಂಡೆನೆಂದನು ಬೆದರಿ
ಕಾಶ್ಮೀರಾ ॥ ೨೫ ॥ ಪಿಂದೊಲೆಯ ಲುಚ್ಚಳಿಸಿ ಕೊಳ್ವುದಿ । ದೆಂದು ಪಿಂ
ಮುಂದಾಗಿ ಕೆಲದೂ । ಬಂದು ಯಿಂದುಳಿದೆಂದು ವೋಡಿದ ಮುಗದ ಕಾ
ಶ್ಮೀರಾ ॥ ರಂದಗೆಡುಕೆಯ ನೋಡಿ ಯಂತರ । ದಿಂದ ಮಾರೀಚಾರಿಗೊ
ಶಗೊಡ । ದಿಂದುಮುಖಿ ದಶಕಂಠಗಾಗುವಳೆಂದ ನಲವಿಂದಾ ॥೨೬॥ ಅಂತ
ಲಂತಿರಲಿತ್ತ ವಿಪರಿತ । ವೆತ್ತ ನೃಪರುಗಳರಿದ ಮಿಗಿಲಿನ । ರತ್ನಪ್ರೋಗು
ಪದು ಚಿತವಲ್ಲೆಮುಗೆಲ್ಲನಾ ವಿಧಿಯೇ ॥ ಹತ್ತದಿಹದಲ್ಲೆಂದು ಕಾಮ್ಮುಕಖ ।
ದತ್ತ ನೀಕ್ಷಿಸದಲ್ಲಿ ಕೆಲ ಕರ । ವೆತ್ತಿ ನಮಸ್ಕರ ಗೈದು ಕಾಮ್ಮುಕಖದೆಸೆಗೆ
ನಮೋ ಯೆಂದು ॥ ೨೭ ॥ ಸರ್ವ್ವ ಶಸ್ತ್ರದೊಳಮುಲ ತೆರವೆನಿ । ಸೂರ್ವರೆ
ಯೊಳಸನೆತ್ತ ಧನುವೀ । ವೂರ್ವರೇಶರಿಗೆಂದು ಕೆಲಕೆಲರೈದಿ ಪೂಜಿಸುತಾ ॥
ಸರ್ವ್ವರೊಲವಿರ್ದ್ದಂತೆ ಶಾಂತದ । ದರ್ವಿಯಾಗಿಹ ಬಿಲ್ಲ ನೇಳಿಪ । ರೋ
ರ್ವರಿಲ್ಲೀ ರಾಮ ಲಕ್ಷ್ಮಣರಲ್ಲದೆನೆ ಕೆಲರೂ ॥ ೨೮ ॥ ಬಂದು ತತ್ವಚ
ಕರ್ಣ್ಣ ಕುಹರಕೆ । ಸಂದಿ ಸಗ್ನಿಗೆ ವಾಯು ಭರವಶ । ದಿಂದ ತೆರಳಿದ
ತೆರದಿ ಕುಣಿವನ ಕಾಲ್ಗೆ ಕಿಂಕಿಣಿಯಾ ॥ ತಂದು ಕಟ್ಟಿದ ತೆರದಿ ಆವಾ ।
ಗೆಂದು ನೀಕ್ಷಿಪ ರಾಘವನವದ । ನೇಂದು ವಾಲೋಕಿಸಿದ ಲಕ್ಷ್ಮಣ ನರಸ
ಚಿತ್ತೈಸೂ ॥ ೨೯ ॥ ಯೆದ್ದ ಸಿದ್ಧೇಭ್ಯನುತ ನೀಲದ । ಮುದ್ದು ಪುತ್ಥಳಿ
ಯಂತೆ ಪರಿವೃಡ । ನುದ್ಧತೋತ್ಸಹ ಮೇಣು ಕರ್ವಿಲ್ಲಲಘಕಿತ್ತಂತೇ । ಕು
ದ್ದು ರಾಮುಸ್ವಾಮಿ ಬಹದರಿ । ದಿದ್ದ ನೃಪರೆಲ್ಲಾಚಿದರು ಯಡೆ । ಯಿದ್ದ ಸಖಿ
ಯರು ಸಂನೆಗೈದರು ಜಾನಕಿಯ ನೋಡೀ ॥ ೩೦ ॥ ಈತನೇ ರಘುರಾ
ಮ ದಶರಥ । ಗೀತನೇ ಪಿರಿಜಾತ ಕೌಶಲೆ । ಗೀತನೇ ಸುಕುಮಾರ ಲ
ಕ್ಷ್ಮಣಗೀತ ನಗ್ರಜನೂ ॥ ಈತನೇ ರಾಕ್ಷಸರ ಹರಿಸೆಂ । ದಾತನೇ ಮು

ಹವೀರ ಸೋದರ । ಮಾತುಳಾತ್ಮಜ ನಂಗನಾಮಣಿ ಯಂದ ಳಿಂದುಮುಖೀ ॥೩೧॥ ಸ್ವಾಮಿ ಬಂದನು ಕ್ಷತ್ರಿ ಕುಲ ನಿ । ಸ್ಸೀಮ ಬಂದನು ಧನುಜ ಕುಲ ಕಲಿ । ಭೀಮ ಬಂದನು ಭುಜಬಲಾನ್ವಿತ ರೂಪಿನತಿಶಯಡಾ ॥ ಕಾಮ ಬಂದನು ಕಾಮಿನೀ ಜನ । ಪ್ರೇಮ ಬಂದನು ಸುಗುಣ ಗಣದಭಿ । ರಾಮ ಬಂದನು ನೋಡು ಜಾನಕಿ ಯಂದಳಾದಾದೀ ॥ ೩೨ ॥ ನೋಡೀ ಜಾನಕಿ ಮನವನವನೊಶ । ಮಾಡಿ ನೆಟ್ಟಕ್ಷಿಯಲಿ ಹುಸಿನಗೆ । ಗೂಡಿ ಯಿರಲಾಯ್ತು ಮಮ ಜನಕಗೆ ಹಿಡಿಯದಾನಂದಾ ॥ ಗಾಡಿಬೆಡಗನು ಬೀರುತಲಿ ಮುಡಿ । ಮಾಡಿ ಶರಗಂಗಿಯನು ಕಮರ್ಬಂ । ದ್ಗೂಡಿ ಪೂಜೆಯಗೈದ ಷೋಡಶಚಾರು ದುಪಚಾರಾ ॥ ೩೩ ॥ ಮೂರು ಸೂಳ್ಬಲಗೊಂಡು ವಂದನೆ । ಮಾಡಿ ವಜ್ರಾವರ್ತ ಕೆಡೆಗೈ । ದೋರಿದನು ಸತ್ಕಾರದಲಿ ಕೈಗಿತ್ತುದೇವಿಯರೂ ॥ ವಾರೆಯಾಗಲು ವೇಣು ಭಾಗವ । ನೋರಿಸಿದ ತೆರದಿಂದ ಬೊಗ್ಗಿಸಿ । ನಾರಿಯನುಗೊಲೆ ಗಿಟ್ಟನಾಗಲೆ ಸುರಿಯೆ ಪೂಮಳೆಯೂ ॥ ೩೪ ॥ ಅನಿತರೊಳಗದನೀವಿ ಝೀವಿಡೆ । ವನಧಿ ತುಳುಕಿತು ಲೋಕಕಂಪನ । ವನುಕರಿಸಿ ತೆಡೆಯಿದ್ದಹಿಳುಕನು ಹೆದೆಗೆ ಸೇರಿಸುತಾ ॥ ವನೆದು ಪಿಮ್ಮುರಿಯಾಗಿ ದರ್ಪ್ಪಣ । ವನು ವಿಲೋಕಿಸುತೆಸೆದ ತೆರವೆಂ । ತೆನಲು ಸ್ವರ್ಗದ ಕೀಲದಪ್ಪಿ ಪೊಲಿದ್ದರ್ನಾರಾಮಾ ॥ ೩೫ ॥ ಹರುಷಲೋಚನ ನಾದನಿಗೆ ಕಂ । ಣ್ದೆರಪು ಆಗದು ದರ್ಪ್ಪಣವನುಳಿ । ದರಿಗೆ ಸಾಧ್ಯವೆ ಜಂತ್ರಗೃದ್ಧದ ಯಿರವ ದರ್ಪ್ಪಣದೀ ॥ ಅರೆಘಳಿಗೆ ಯೊಳಗರಿದು ತಿರ್ರನೆ । ತಿರುಗುವದ ರೆಡಗಣ್ಣ ತಾರಕಿ । ಗೊರಿಸುವಂದದೊಳೆಚ್ಚ ರಾಘವನೋಘಬಾಣದಲೀ ॥ ೩೬ ॥ ಸೂತ್ರದಪ್ಪಿದ ಯಂತ್ರಗೃದ್ಧೀ । ಧಾತ್ರಿಗುದುಳಲು ದಿವಿಜಲೋಕವೆ । ಪಾತ್ರಗೈದಾವೃಷ್ಟಿ ಗರೆದರ್ಜಯಜಯಾರವದೀ ॥ ಸ್ತೋತ್ರ ಗೈದೈದಿರು ರಾಮಗೆ । ಧಾತ್ರಿಯೊಳಗೆದುರಿಲ್ಲವೆಂಬೊಚ । ಮಾತ್ರದಲಿ ಮಾರೀಚ ತೆರಳ್ದನುಲಿದ ದಶಶಿರಗೇ ॥೩೭॥ ಕೇಳಿದನು ದಶಕಂಠ ರಾಮನ । ಮುರಿದು ಜಾನಕಿ ತರುವೆನೆನೆ ನಿ । ತ್ತರಿಸುತರವಲ್ಲಾತನಿಗೆ ಧನುರಕ್ಷ ದೇವಿಯರೂ ॥ ಕರುಣ ಗೈದಿಹರವರು ನಿಂನೊಶ । ಗರೆಯ ರಾಮಾನುನಿಯ ರಾಘವ । ಗರಿಕೆಯಿಲ್ಲದೆ ತರುವ ಪರಿ ಅರಿಯಂದ ಮಾರೀಚಾ ॥ ೩೮ ॥ ಕಾಲವನು ಅನುಸರಿಸಿ ಕಾರ್ಯ್ಯವ । ಮೇಲುಗೈಯಂದೊಡಂಬಡಿಸಲಿ । ತ್ರಾತ್ರಿಲಘು ಪರಾಕ್ರಮಿಯಾದ ರಾಘವ ಬಿಲ್ಲನೇಳಿಸಿದ ॥ ಶೀಲಸತ್ವಕುಜಂತ್ರಗೃದ್ಧನ । ಕೀಲನುಗುಟಿದವೀರಜಾಹ್ನೆಗೆ।

ಲೀಲೆಗೈದರು ರಾಜ ರವನೀನಾಥ ಚಿತ್ತೈಸೂ ॥ ೩೯ ॥ ಪಿಂಗಿತವನಿಜೆ
ಯಾತ್ಮಜಯಕೆ ಮ । ನಂಗೊಳಲು ಜನಕನಿಗೆ ನೀನೊಲಿ । ದಂಗಜನೆ ನಿನ
ಗಾದನೆಂದಳು ಮದನಮೋಹಿನಿಯೂ ॥ ಸಂಘ ಸಖಿಯರು ನಲಿವುತಿರೆ ಯಿ ।
ರ್ದಂಗಣಕೆ ಧನುವಿಳುಹಿ ರಾಘವ । ಸಂಘಪೀಠದಿ ಕುಳಿತನೈ ತಂದಾಗ ಲೊಹಿ
ಲದಲೀ ॥ ೪೦ ॥ ರಾಮ ನಲದಿಂನೋರ್ವ ನೆತ್ತುವ । ಡಾ ಮಹತ್ತಿಳಿದ
ವುದು ಸರ್ವ । ಸ್ವಾಮಿಗೊಲಿ ವಿದ್ಯಾಂಗನೆ ಯರಿಂನೋರ್ವ ಗೊಶವಾಹಾ ॥
ಭಾಮೆ ಯರೆ ಸಾಕೆ ಮಗು ಸಂಮತ । ವಾ ಮನೋಹರವೆನಲು ಕಂಚುಕಿ ।
ಭೂಮಿಜೆಯ ನಡಸಿದಳು ಮಾಲೆಯ ಸೂಡಃ ನಡೆಯೆಂದೂ ॥ ೪೧ ॥ ಸಿದ್ಧಿ
ಸಿತೆ ನಿನಗೀಗ ಮನೋರಥ । ಸಿದ್ಧ ಪುರುಷಾಕಾರ ನಿಧಿಗಿಂ । ನುದ್ಧತೀ ಮಾ
ಲಹಿಯ ಕಾಪಿಡು ನಡೆವುದೆಂದಾಗಾ ॥ ಹೊದ್ದಿ ಬರಲರಸಂಚೆ ನಡೆಗಲಿ ।
ಸಿದ್ದು ಮೆನಲಾಸತಿ ಲಲಾಮೇಯು । ಬದ್ಧ ದೃಷ್ಟಿಯೊಳೈವಿವಳು ರಾಘವನ
ಸಂನಿಧಿಗೇ ॥ ೪೨ ॥ ಪೀಲಿದಲೆಯನೆ ಮುಡಿದ ಪೂಗಂ । ಹ್ಯಾಲಿಕವಿದಿಪ
ತುಂಬೆಗಳೊ ಕ । ಣ್ಮಾಲೆಯೇ ಭೃಂಗಾಳಿಯುನಪ್ಪೈ ತಂದಳಪನಿಸುತೇ ॥
ಬಾಲಶಿರಸದ ಮಾಲೆಯನೆ ತೋ । ಳ್ಲಾಲಿತದೊಳೆತ್ತಳಕೆ ಮಾಲೆಯು । ಬಾಲೆ
ಶೃಂಗರಿಸಿದಳು ಕಣ್ಣಗಳ ನಜಸುತಾಸ್ಯದೊಳೂ ॥ ೪೩ ॥ ತನುವಸೊಂ
ಕುತ ವೈಗೆ ಪೋಮಾಂ । ಚೊನೆಯೆ ವಕ್ಷ ಜನಾಭಿ ಕಕ್ಷದ । ಸನುತಮೂ
ಲದೊಳಾದುದನು ರಾಗಾಗ ಮುಂಮುಡಿಸೀ ॥ ವನಿತೆಮಾಲೆಯ ಸೂಡಿಯುಡ
ದೊ । ತ್ತಿನಲಿ ನಿಲಲದ್ರಿಜೆಯು ಮೃಡನಂ । ತನುಮಿಷೇಂದ್ರನು ಸೆಚಿಯು
ಶಶಿ ರೋಹಿಣಿಯೊಲೊಪ್ಪಿದಳೂ ॥ ೪೪ ॥ ಯಾಕೆ ಬಲದೇವನಿಗೆ ವಾ
ಹಿನ । ನೇಕ ಬಲಯುತನಾದ ಲಕ್ಷ್ಮಣ । ನಾಕಲಿರೆ ಸಾಕೆಂಬ ತೆರದೊಳ
ಗೈದಿ ರಾಘವನಾ ॥ ನೇಕಲಿಸಿ ಬಲ ಭಾಗದಲಿ ನಿಲ । ಲೀ ಕುಹದ್ವೀಪ
ರೈದಿ ಕಂಡರು । ನಾಕ ವಜ್ರಾವರ್ತ ಬಿಲ್ಲನು ರಾಮ ನಾಜ್ಞೆಯಲೀ ॥೪೫॥
ವಿದ್ಯಗಳ ಮೂಲದಲಿ ದಶರಥ । ನಾದ್ಯರನು ಕರತರಿಸಿ ಸುತರನ । ವದ್ಯ
ಪಾದ್ಯಾಂಜಲಿಯ ಗೈದರನೆತ್ತಿ ಮುದ್ದಿಸುವಾ ॥ ಅದ್ಯ ಸಮಯದಿ ಚಂದ್ರ
ವರ್ದ್ಧನ । ವಿದ್ಯಧರನೈ ತಂದು ದಶರಥ । ಗೊದ್ಯದನುರಾಗದಲಿ ವಂದಿಸಿ
ಪೇಳ್ದನಿಂತೆಂದೂ ॥ ೪೬ ॥ ಇಂದುಮುಖಿ ಮೊದಲಾಗಿ ಯೆಣ್ಬರು । ನಂ
ದನೆಯರೆನ ಗೊಗೆದರೋರ್ವರಿ । ಗಿಂದಲೋರ್ವತಿ ಚಂನೆಯರಿಗೊರ ನಾವ
ನೆಂದ ಶಕುನೀ ॥ ಇಂದುಕೇಳ ಲುಪೇಂದ್ರನಿಗೆ ಯಹ । ರೆಂದನೀ ಸ್ವಯಂ

ವರದಿ ಬೊರೆವ। ನೆಂದು ದಾಲಿಸಿ ಕಾಪನಿಟ್ಟರ್ದಿಗಲ್ಕೆ ತಂದೇ ॥ ೪೭ ॥ ಭರತ ವಿಜಯಾರ್ಧದಲಿ ದಕ್ಷಿಣ । ಧರಣಿ ಶಿವಮಂದಿರ ನಗರದ । ಅರಸ ನರಸಿಯು ಚಂದ್ರವರ್ಧನೆ ಕೇಳು ಸುತೆಯರನೂ ॥ ಕರಸುವೆನಲಂತಾಗ ಲೆನುತವ । ತರಿಸುವೆನುತುಲಿದವರ ಕರಯಿಸಿ। ಪುರಕೆ ಪಯಣವ ಗೈದ ದಶ ರಥ ಸರ್ವರೊಡನಾಗಾ ॥ ೪೮ ॥ ಜನಕ ಪೂಜಿಸಿ ದನುವ ವಿದ್ಯಾ । ವನಿತೆ ಯರು ತೆಗದೈದಲಾಗನು । ವಿನಲಿ ವಾಹನವೇರಿ ನಡೆವರು ಯದ್ದು ಅಲ್ಲಿಂ ದಾ ॥ ವನದಿ ಘೂರ್ಣಿಸಿದಂತೆ ವಾದ್ಯ । ಧ್ವನಿಯೊಳೈತರೆ ಪುರದವೀಥಿಯೊ। ಳೊನಿತೆಯರು ಕರುಮಾಡ ಮದಿಲವನೇರಿ ನೋಡಿದರೂ ॥ ೪೯ ॥ ಅಡರಿ ತಟ್ಟಳೆ ಕೋಟೆ ಗೋಪುರ । ಕಡರೆ ಹರ್ಮ್ಯಕೆ ಭೇರಿ ರವಮುಂ । ನಡೆದು ದಾಗ ನವಷ್ಟ ದಿಕ್ಕಿಗೆ ಶಂಕಗಳ ನಿನದಾ ॥ ಮಡದಿಯರು ಶಡಗರದಿ ನೆಲೆ ನೆಲೆ। ಗಡರಿ ಜನತಾಧೀಶರೈತಹ । ಶಡಗರವ ನೋಡಿಂತು ಮಾತಾಡಿದರು ತಮ್ಮೊಳಗೇ ॥ ೫೦ ॥ ವರಿಸಿತಲೆ ವರಿದಾನೆ ವಿಂಡೈ । ತರುವ ದೋರಾಂಗ ನೆಯ ರಿಡುವಚ । ಮರದ ಮಧ್ಯದಿ ಗಜದ ಮೇಲೈತರುವ ದಶರಥನೂ ॥ ಶರ ಧಿನಾಲಿಗೆಯಂತೆ ಬಿಕ್ಕೆಂ । ಟೊರಿಸಿ ಬಹವಾಜಿಗಳ ಮಧ್ಯ । ತ್ತುರಗ ರೋ ಹಣ ನೋಡು ಗರುಡಧ್ವಜನು ವಾಮದಲೀ ॥ ೫೧ ॥ ಜನಕ ಸಂದನೆಯತ್ತ ನಡೆತಹ । ಜನದ ಜಾಲದೊಳೊಪ್ಪ ನೇತ್ರದ । ಕೊನೆಯ ಬೆಳಗಾಡಿಸುತ ರತ್ನದ ರಥದಿ ಬಹರಾಮಾ ॥ ಇನ ಶಶಿಗಳುದಿಯಾದ್ರಿ ಯೇರಿದ । ರೆನುವ ತೆರದಿ ಗಜೇಂದ್ರ ವೇರೈ । ತರುವರೇ ನೋಡ್ಭರತನಾ ಶತೃಘ್ನರೆಂಬವರೂ ॥ ೫೨ ॥ ಅಳಿಯರೈ ಸಿರಿನಂದನೆಯ ಪು । ಣ್ಯಳವಿಗತಿ ಹರುಷದಲಿ ವಂದಿನ। ಕೆಳೆಯರೊಳು ನುಡಿವಿಡುತ ರಥದೊಳು ಬಹಸೆ ನಮ್ಮರಸೂ ॥ ನಳವನೋಡೆಂ ಧಾರತಿಗಳೆ । ತ್ತಳಿಪ ಮುತ್ತಿನ ಶಾಸೆಗಳ ಕೈ । ಕೊಳುತ ನಡೆದರು ರಾಜ ಮಂದಿರ ಕಿಳಿದು ವಾಹನವಾ ॥ ೫೩ ॥ ನೆರೆದ ಮಂಗಲ ದ್ರವ್ಯಗಳಲಂ । ಕರದಿ ಭೃಂಗಾರ್ಕಲಶ ದರ್ಪಣ। ಬರೆದಚಿತ್ರದಿ ದಿವಿಜ ದಂಪತಿ ಖಚರ ಮಿ ಥುನಗಳಾ ॥ ಉರಗ ವೆಂತರ ಮಿಥುನ ಕಿನ್ನರ । ನರರ ಮಿಥುನಗಳಂತೆ ಅಲ್ಲ। ಲ್ಬರೆದು ವುದ್ವಹಗೇಹಸೊಗಸಿತು ನೋಳ್ಪರಂಬಕಕೇ ॥ ೫೪ ॥ ಪರಮ ಪುರು ಷರು ಚಕ್ರಿಗಳ್ಕುರು । ಹರಿಯುನಾದಿಕ್ಷ್ವಾಕು ವ್ಯಗ್ರಾ । ಖ್ಯರಿತ ವಂಶಜ ರಾದಿ ಚರಿತ ಸುಭಾವ ಚಿತ್ರಗಳಾ ॥ ಬರೆದರಲ್ಲಲ್ಲಾಲು ಮುತ್ತಿನ । ಸರದಿ ಮುಗುಳಮಾಲೆಗೆ । ನೆರೆದಭೃಂಗಗಳಿಂದ ಅಳಿಮಾಲಾದುದಂಬಕಕೇ ॥ ೫೫ ॥

ಅಲ್ಲಿ ಮಣಿ ಘಂಟೆಗಳ ಸಾಲೊ । ತ್ತಲ್ಲಿ ಮೌಕ್ತಿಕ ಲಂಬಣದ ಪೊಳ । ವೆಲ್ಲ ಬಿಡು ಮುಗುಳಂತೆ ತೋರುವ ಕೆರಗೆ ಮರದಂಬೇ ॥ ನಲ್ಲೆ ಗಾಯಕಿ ಸಂಣ ಸರದಿಂ । ದಲ್ಲಿ ಮಂಗಲ ವುಲಿವದನು ಕೊಡ । ದಲ್ಲಿ ಭೃಂಗಾಳಾಪ ಕಿಂಮು ಡಿಯಾಗೆ ಕಿವಿಗಳಿಗೇ ॥ ೫೬ ॥ ಪೊಸ ಮಿಸುನಿ ಕಂಭದೊಳು ಮಾರ್ಪೊಳೆ। ದೆಸೆವ ಸೊಡರುಗಳಿಂದ ನೇತ್ರಕೆ। ಭಸಿತ ಲಸಿತದ ಗಾತ್ರನಾ ಶಂಬುಗ್ರನೇತ್ರ ದೊಲೂ ॥ ಯಸೆದ ಕೆಂಬರಲ್ವೆಳಗು ನೀಲದ । ಸಸಿನ ಕಂಭದಿ ತೊಳಗ ಲೋರ್ವಳು । ಹಸಿತ ರೂಪಾವರಿಸೆ ಸಿರಹರಿಯಪ್ಪಿದಂತಾಯ್ತು ॥ ೫೭ ॥ ಅಂತು ಯಿಂತೆನಲೇಕೆ ಮಂಟಪ । ವಂತವಿಲ್ಲದ ಶೋಭೆಯೊಳು ಚಲು। ಕಂತು ರಾಜನೆ ಸಿಲ್ಪಿಯಾಗದ ಸಮೆದನೆಂಬಂತೇ ॥ ಸಂತವೆತ್ತದರಲ್ಲಿ ಪಚ್ಚನು । ಪಾಂತ ವೇದಿಕೆ ಮುಡಿಯೊಲಿರೆ ನೆಲ । ಕಾಂತೆರಂನೆಗೆ ರಂಗವಲಿ ಮುತ್ತಿನಲಿ ಶೋಭಿಸಿತೂ ॥ ೫೮ ॥ ಮರಕತದ ಜಗಲಿಯೊಳು ಪೊನ್ಮಣೆ । ಯಿರಿಸಲ ದು ಪಸುರೆಲೆಯ ಕವಿಚಿದ । ಸರಸಿಯೊಳ ಗರಳಿರ್ದ ಪೊಂದಾವರೆಯೊಲೊ ಪ್ಪಿದುದೂ ॥ ಇರಿಸೆ ದ್ರಾಕ್ಷಿಯ ಕದಳಿ ಮಾತುಳ । ದರಿಗಿನಲಿ ಯಲೆಅಡಕೆ ನಾರಂ । ಗೊರಿಸಿ ನಾರ್ಕೆಳಾದಿ ಫಲದಿಂದಲ್ಲಿ ಚಲ್ವಾಗೇ ॥ ೫೯ ॥ ಪಳು ಕುವಟ್ಟಲ್ಲದಿ ಪಸುರ್ಪ್ಪಡ । ಲೆಳೆಯ ದೂರ್ವಾಂಕುರವು ಕಸ್ತುರಿ । ಗಳ ಕರಂಡಗೆವೇನು ಗೋರೋಚನದ ಕರಡಿಗೆಯೂ ॥ ತೊಳಪ ಕರ್ಪುರದೋ ಣಿ ಕುಂಕುಮ । ದಳೆದಪಿಂಗಾಣಲ್ಲೆ ಸಿಂಧೂ । ರ್ದಳೆದಬಟ್ಟಲಿನಿಂದ ನಯ್ನನಾ ನಂದವಾಯ್ತಾಗಾ ॥ ೬೦ ॥ ತಾಳಿ ಕಣ್ಬಿಸಿಲೆಸೆವ ಬಾಲಾ । ರ್ಕಾಳಿಯು ದ್ವಹ ನೋಡುವಡೆ ಬಂ । ದ್ಕೆಳಿಗೊಂಡಂ ತ್ಕೋಣ ಕುಂಭಗಳೆಸೆದವಲ್ಲಲ್ಲೀ॥ ವ್ಯಾಳವಿತ ಸಮುಕಟ್ಟು ಮಂಗಲ । ದಾಳಿಯೊಪ್ಪಿರ ಲಂಗಜನ ಕೀ । ರ್ತಾಳಿ ಲತೆ ಬಿತ್ತುಗಳ ತೆರ ಮೌಕ್ತಿಕದ ಮೆಟ್ಟಕ್ಕೀ ॥ ೬೧ ॥ ಇರಲು ಅಂಗಜನಂಗ ವಡೆದೈ । ತರುವ ತೆರದೊಳು ಮೋಹನಾಂಗನು । ತೆಂಳ ನಿಂದನು ರಾಮ ಮಂಗಲ ವೇಧಿಕಾಗ್ರದಲೀ ॥ ಹರಿಭರತ ಶತ್ರುಘ್ನ ಮಂಡಲ । ದರಸ ಮಕು ಟಾಧೀಶರಾದಿಯ । ನೆರವಿಯೊಳ ಗೆಸದಿರ್ದ ದಶರಥ ಬಲದ ಭಾಗದಲೀ ॥ ೬೨ ॥ ಮಂಗಲಾಂಗಿನಿ ಕೈಕೆ ಲಕ್ಷ್ಮಣೆ । ಸಂಗಡಲೆ ಸೌಮಿತ್ರೆ ಸಹರಾ । ಜಾಂಗನೆಯರೊಡನೆಡದ ಭಾಗದಿ ನಿಲಲು ಕೌಶಲ್ಯೇ ॥ ಸಿಂಗರನ ಮಂತ್ರ್ಯಾರಿ ಕ್ಷಿಯು ತೆರ । ದಂಗನೆಯ ರೊಲೆದಾಡ್ವ ನಾಟ್ಯದ । ರಂಗಿಮೊಳಗುದ್ವಹದ ಮಂಟಪ ಕೈದೇ ವೈದೇಹೀ ॥ ೬೩ ॥ ಆಗ ಮಧುಪರ್ಕಾದಿ ಕ್ರಿಯೆ ನ್ಪೊವ ।

ಲಾಗಿ ವುದ್ವಹ ವಿಧಿಗಳನು ಸಮ । ನಾಗಿ ವಿರಚಿಸಿ ರಾಮ ಸೀತಕೆ ನಾಯಕಿ ಯರನ್ನೂ ॥ ಸಾಗಿಸುತ ವೇದಿಕೆಯ ಯುತ್ತರ । ನಾಗಿ ರಂಜಿಪ ಮೌಕ್ತಿಕದ ಅನು । ರಾಗ ಮೆಟ್ಟಕ್ಕಿಯೊಳು ನಿಲಿಸಿದ ರಿಂದ್ರರನುಮತದೀ ॥ ೬೪ ॥ ರನ್ನ ಚಿನ್ನದ ಬಾಯಿನವ ಪರ । ರೆನ್ನ ದೆಲ್ಲರಿಗಿತ್ತು ಸುರಲತೆ । ಯೆನಿಸಿದ ವೈದೇಹಿ ಕಸ್ತುರಿ ತಿಲಕ ಪೂಸರಗಾ ॥ ಳಂನು ಸೂಡುತ ಮುತ್ತಿನಾಕ್ಷತೆ । ಯಂನು ತಳಿದಿತ್ತೊಸ್ತ್ರ ಭೂಷಣ । ದಿಂನು ಮುಂನಿಸೆ ರಾಮನಂಬಿಕೆಯರನ ಮೋಘದಲೀ ॥ ೬೫ ॥ ಅಲ್ಲೆ ಕುಲ ವೃದ್ಧಾದಿ ನೃಪ ನೃಪ । ರೆಲ್ಲ ಸುರುಚಿರ ಲಗ್ನ ವೀಕ್ಷಿಸು । ವಲ್ಲಿ ಮಂಗಲ ಪಾಠಕರು ಶೋಭನದ ಧವಲಗಳಾ ॥ ನಲ್ಲೆಯರ ವುಲುಲಬ್ಧಿ ಘೋಷಣೆ । ಯಲ್ಲಿ ತೂರ್ಯಗಳುಲಿಯೆ ಆಯತ । ದಲ್ಲಿ ನಿಂದರು ಸಕಲ ಸಂನಹದಿಂದ ಜನರೆಲ್ಲಾ ॥ ೬೬ ॥ ಕೆಲಬರೋದುವ ಮಂಗಲಾಷ್ಟಕ । ಕೆಲರು ಕರಲೇಸೆಂಬ ವೋಕ್ತದಿ । ಕೆಲರು ಶ್ರೀಯುತವೆಂಬ ವಿಬುಧರು ಆಯಿತೆಂನುವರು ॥ ಕೆಲರು ಲಗ್ನವು ಮುಟ್ಟಿವಂತೆನು । ತುಲಿಯೆ ಪೌರೋಹಿತರು ಜನಕನ । ವಲವಿನೊಳು ದಶರಥನು ಪಾಣಿಗ್ರಹಣಗೈಸಿದನೂ ॥ ೬೭ ॥ ಮೆರೆಯೆ ಭೇರಿಯ ನಿನದ ಸುಲಲಿತ । ತರದ ರಘುಕುಲ ಹರ್ಮ್ಯಕೇರಿಪ । ವರ ಸುವರ್ಣ್ನದ ಕಲಶವೆನೆ ನೃಪ ಪಿಡಿದ ತೀರ್ಥವನೂ ॥ ಯರೆದ ಸುರ ಕುಜ ಕಡರಿಸಿದ ಲತೆ । ಗೆರೆವ ತೆರದೊಳು ಜನಕ ದಶರಥ । ರೆರೆಯೆ ಶ್ರೀರಾಮನಿಗು ಸೀತೆಗು ಹಸ್ತ ಧಾರೆಯನು ॥ ೬೮ ॥ ನಂದನಾಂಗನೆ ಪೂದಳಿರ್ವೆರ । ಸಂದು ಸೋಂಕುತೊಸಂತ ರಾಜನು । ಬಂಧುರದಿ ರಾಘವನ ತನು ಸೋಂಕುತಲಿ ವೈದೇಹೀ ॥ ಸುಂಧರಿಸೆ ನನೆಗೊನೆಯ ಹಿಂಗದಿ । ರಿಂದಬಲ್ಡಿರೆ ಮುಸಗಿತೆನೆ ಶರ । ದಿಂದಿರೆಯ ಸಂಪರ್ಕ್ಕದಲಿ ವುಳುಕುಣ್ಮೆ ರಾಘವಗೇ ॥ ೬೯ ॥ ಅಂಬುಜಾರಿಯು ರೋಹಿಣಿಯೂಬಲ । ಗೊಂಬ ಪೊಂಬೆಟ್ಟದೊಲು ಹೋಮವ । ನಿಂಬಿನೊಳು ಬಲಗೊಂಡ ವಧುವರರ್ಕೈದಿ ಶಾಲೆಯೊಳೂ ॥ ಕೆಂಬರಲ ಹಸೆಯೊಳು ರತಿಸ್ಮರ । ರೆಂಬ ವೋಲ್ಯಚಿ ಯಿಂದ್ರ ಶಶಿ ತಾ । ರೆಂಬ ತೆರದೊಳು ಕುಳಿತ ರಾಘವ ಸೀತೆ ಸಹವಾಗೀ ॥ ೭೦ ॥ ರಾಜ ಮಿಥುನಗಳೀಕ್ಷಿಸುತ ನೀ । ರೇಜಮುಖಿಯರು ತಳಿದ ಶಾಸೆ ಸ । ರೋಜದಳ ದಾರತಿಯ ಬೆಳಗಿದರಮಲ ರತ್ನಗಳಾ ॥ ರಾಜ ಮೇರುವೆ ತೇರು ಸಸ್ತ್ರಿಕ । ಜಾಜಿ ಮುಖ್ಯಾರತಿಗಳನು ವಿ । ಭ್ರಾಜಿತಾಂಗಯುಲೆಸಗಿ ಸೂಸಲು ಮುತ್ತಿನಕ್ಷತೆಯಾ ॥ ೭೧ ॥ ಪಾಡುತಿಹ ನಾರಿಯ

ದುಲಾಸ್ಯಪ । ಸಾಡುತಿಹ ನಳಿನಾಕ್ಷಿಯರು ಕೊಂ । ಡಾಡುತಿಹ ಭಟ ನಿಕರ ತೂರ್ಯತ್ರಯದ ರವದಿಂದಾ ॥ ನೋಡುತಿಹ ಜನರಿಂದ ಲಲ್ಲೆಡೆ । ಯಾ ಡುತಿಹ ವಿನಿಯೋಗದಲಿ ಕಡು । ಗಾಡಿ ಯಿಂದೊಪ್ಪಿರ್ದ ದಾಗ ವಿವಾಹ ಮಂಟಪವೂ ॥ ೭೨ ॥ ಸುರಭಿ ಪುರುಷಾಕಾರ ಸುರತರು । ಧರಿಸಿತೊ ಕರ ಚರಣ ಕಾಮ್ಯದ । ಪರಲೆ ನೃಪ ರೂಪಾಯ್ತೊ ಯಿಂಬಂತ್ಯಾಚಕಾವಳಿಗೆ ॥ ಹರಿಸಿ ದುರ್ಭಿಕ್ಷಪನು ಕೀರ್ತಿಯ । ನೆರೆದ ಜನಕ ನುಪೇಂದ್ರನಿಗೆ ಖಗ । ವರ ಮಹತ್ತನು ಧಾರೆ ಯೆರದನು ಸುತೆಯರೆಣ್ಬರನೂ ॥೭೩॥ ಗಗನಗಾಮಿನಿ ಯಾದಿ ವಿದ್ಯಗ । ಳ ಗಣಿತೊಯ್ಯುವ ಗೂಡಿ ಕ್ರಿಷ್ಣಗೆ । ಖಗಪ ನೀಯಲು ನೋಡಿ ಈರ್ವರಿಗಾದ ಮಂನಣೆಯಾ ॥ ಬಗೆಯ ನುಳಿದನು ಬಂಣ ಗೆಟ್ಟ ನು ಹಗರಣಾಕರನಾಗಿ ಮುಖವಾ । ರ್ದೆಗೆದ ಭರತನು ಸ್ವೈರಣೆಯ ಗೊಳ ವಂಣರುತ್ಸಹಕೇ ॥ ೭೪ ॥ ಪಿರಿದು ತೋಳ್ವಲ ವಗ್ರಜರೊಳನು । ಕರಿಸಿ ತಾಳ್ವೆಸನೆಂನೊಳಗೆ ಅನು । ಸರಿಸಿ ತಿಂನಿರಬಾರದ ವನಿಯೊಳಾಂತು ದೀಕ್ಷೆ ಯನೂ ॥ ನೆರವೆ ಮುಕ್ತಿಯ ನೆಂಬ ಹೇಯುವ । ತರಿಸಿ ಮುಖ ಕಿರಿದಾಗೆ ಅವನಂ । ತರವನರಿದಳು ಕೈಕೆ ಪೇಳ್ದಳು ಪ್ರಿಯನು ದಶರಥಗೇ ॥ ೭೫ ॥ ಅಗ್ರಜರ ಯಿರವರಿದ ಮನವತಿ । ಕುಗ್ರಹಿಸಿ ವೈರಾಗ್ಯ ಯುತಕವ । ಶೀಗ್ರ ನಾಗಿಹ ಭರತನಿಗೆ ಸ್ತ್ರೀನಿಗಳ ವಿಡುವಂತಾ ॥ ಜಾಗ್ರದೊಳು ಕನಕನಿಗು ಸುಪ್ರಭೆ । ಗಗ್ರಸುತೆ ಕನಕಪ್ರಭೆಯನೀ । ಶೀಗ್ರ ವುದ್ವಹ ಗೈವುದೆಂದಳು ಕೈಕೆ ಮನನೊಂದು ॥ ೭೬ ॥ ಯಂದ ನುಡಿಯಾಲಿಸುತ ಲಾತನ । ನೊಂ ದಿ ಗೈದಿಸಿ ಭರತನಿಗೆ ತವ । ನಂದನೆಯ ನೀಯ್ಯನಲು ವಾದಿಯು ಆತಗೀ ಯ್ಯುವಡೇ ॥ ಸಂಧಿಸಿಹೆ ನೆಂದಿತ್ತ ನುದ್ವಹ । ನಿಂದ ಭರತನು ತೋಳಪಾ ಶನು । ಬಂದ ಕೊಳಗಾದವನಿನಾಯಕ ನೆಂದನಾ ಮುನಿಪಾ ॥ ೭೭ ॥ ಸೀತೆಯೊಳಗಾ ದಾಶರಥಿ ಖಗ । ಜಾತೆಯೆರೊಳನುಕೂಲ ಲಕ್ಷ್ಮಿ । ಸಾಥ ಕನಕಪ್ರಭೆಯೊಳಗೆ ಕೈಕಿಲೆಯ ನಂದನನೂ ॥ ನೂತನ ಸತ್ಕಲೆಯೊಳಗೆಸಂ । ಪ್ರೀತಿಗೊಳುತಿರೆ ದಶರಥನು ಅನು । ವಾತು ಪಯಣ ವಯೋಧ್ಯೆ ಗರುಹ ಧ್ಯಾನ ಲೀನದಲೀ ॥ ೭೮ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತ ರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನ್ನಾಟಕಾವ್ಯಕೆ ಶ್ರೇಷ್ಠ ರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆಗೈದರಿದ ಮನ। ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೭೯ ॥

ಅಂತು ಸಂಧಿ ೧೯ ಕ್ಕಂ ಪದನು ೧೧೭೦ ಕ್ಕಂ ಮಂಗಳಮಹಾ ಶ್ರೀ ಶ್ರೀ.

ಇಪ್ಪತ್ತನೆಯ ಸಂಧಿ.

ದಶರಥನ ವಿರಕ್ತಿ ಸಂಧಿ.

ಸುತ್ತಿ ಬಹ ಭವಮಾಲೆಯನು ಮುನಿ । ಯುತ್ತರದೊಳಾಲಿಸುತ ಹೇಯನ । ದೊತ್ತಿ ವೈರಾಗ್ಯವನು ಚಿತ್ತದೊಳಿಟ್ಟ ದಶರಥನೂ ॥ ಪಲ್ಲವಿ ॥

ಕೇಳಿದೈ ಭೂಪಾಲ ಸೀತೆಯ । ಕೇಳಿಯೊಳು ಖಚರೇಂದ್ರಿಯರ ಸಂ । ಮ್ಯಾಳದೊಳು ಕನಕಾತ್ಮಜೆಯ ರತಿಲೀಲ ಲಾಲಿತದೀ ॥ ಮೇಳಿಸಿದ ರಘು ಗರುಡವಾಹನ । ಧಾಳಿ ಭರತನು ಸಹಿತ ಸುಖಕಲೆ । ಯಾಳುತೇಳುತ ಲೆಸೆದರಾನಂದದಲಿ ಮಿಥುಳೆಯಲೀ ॥ ೧ ॥ ಜನಕ ಕನಕನಿಗುಲಿದು ಪಯಣವ । ನೊನಿತೆಯರು ಸುಕುಮಾರ ರೊಧುಗಳು । ವಿನಯ ಜನಸಹಿತೊರಟ ದಶರಥನಾಗ ಸುತೆಯರಿಗೇ ॥ ಅನಿತಿನಿತು ಯನದಂತೆ ಬಳುವಳಿ । ವನಿತೆಯರ ನೈದ್ಯದು ನೂರ್ವ್ವರ । ಜನಕಭೂಪತಿ ಕೊಟ್ಟು ಕಳುಹಿದ ನರಸಚಿತ್ತೈಸೂ ॥ ೨ ॥ ಕೂಡಿ ಬಹ ಭೂಭುಜರ ತಾರಕ । ನಾಡ ಮುದ್ದ್ಯಡು ಪತಿಯೊ ಯನೆ ಕಡು । ಮೋಡಿಯೊಳು ಹೊಂದೇರಿನೊಳಗಿಹ ರಾಜ ದಶರಥನಾ ॥ ಕೂಡಿ ದಕ್ಷಿಣದೊಳಗೆ ಬಲಹರಿ । ಜೋಡು ಸಿಂಧೂರಾಗ್ರದಲಿ ಗಜ । ಗೂಡಿ ನಡೆದರೂ ವಾಮಭಾಗದಿ ಭರತಶತೃಘ್ನಾ ॥ ೩ ॥ ಹಿಂದೆ ಜಾನಕಿ ರಥದೊಳಗೆ ಬಲ । ದಿಂದ ಕೌಶಲೆಯೊಡನೆ ಸೌಮಿ । ತ್ರೊಂದಿ ಕೈಕಾದೇವಿಲಕ್ಷ್ಮಣೆ ಭರತ ಲಕ್ಷ್ಮಣರಾ ॥ ಸುಂಧರಿಯ ರೋರ್ವ್ವರಿಗೆ ಐನೂ । ಮ್ಮರ್‍ಂದಿ ಪರಿಚಾರಿಯರ ವುಪಚರ । ಧಿಂದಾ ತಾರಾ ದೇವಿಯಂದ ದೊಳ್ಪೆದೆ ಕೌಶಲ್ಯೆ ॥ ೪ ॥ ಯರಡನೆಯ ಪರಿನೃಡನ ತೆರದೊಳ । ಗಿರಲು ದಶರಥನಾದಿಯಲೆ ಬಳ್ಳ । ಕರನು ಮಿಗಿಲರಿಗಾಗ ಕೂಡಿದ ರಾಮಲಕ್ಷ್ಮಣರಾ ॥ ವರಪರಾಕ್ರಮದಿಂದ ಸಾಕ್ಷಾ । ತ್ಪುರುಷ ನೆನಿಸಿದ ದಶರಥನ ಪರಿ । ಚರವ ಗೈತೈದಿವರು ಮಾರ್ಗ್ಗದ ನಾಡನಾಯಕರೂ ॥ ೫ ॥ ಕಟ್ಟೆ ಗುಡಿ ತೋರಣವ ನರವಟ । ಗಿಟ್ಟು ಯಳೆನೀರಿಕ್ಷುಸಾರವ । ಕೊಟ್ಟು ಪನ್ನೀರ್ವ್ವಿಳ್ಯವನು ಮೆಲುಗೊಟ್ಟು ಕರ್ಪುರವನ ॥ ಕೊಟ್ಟು ಜಾಫಲ ಪತ್ರಿಯನು ಕೊಡು । ವಟ್ಟೆಗರ ವುಪಚರನ ಕೈಕೊಳು ।

ವೊಟ್ಟು ಮನ್ನಣೆಗೊಳುತ ಬಂದನಯೋಧ್ಯೆಗವನೀಶಾ ॥೬॥ ಪುರಕೆ ಬಹದರಿ ದಷ್ಟ ಶೋಭೆಯ । ಗರಸಿ ಕೌಶಲ ಲೋಕರನು ಕರ । ತರಿಸಿ ಯದುರ್ಗೈತಂದ ಮಂತ್ರಿಗಳಾದಿ ಜನರೆಲ್ಲಾ ॥ ಯರಗಿ ದಶರಥ ರಾಮ ಕೇಶ । ವರಿರವನಾಲಿಸಿ ಯಿಂದ್ರು ಪೇಂದ್ರಾ । ಧರರಿ ಕಾಲದೊಳೆಂದು ಕೊಂಡಾಡಿದರು ಕೈ ಮುಗಿದೂ ॥೭॥ ಜನರ ಸಂಕಲ್ಪದೊಳು ಬಹು । ಜನ ವಿನಯದೊಳ ಗಟ್ಟಾಸದೊಳು ಪುರ । ವನುವಿನಿಂದೊಳ ಪೊಕ್ಕು ಬರುತಿತ್ತರದ ವೀಥಿಯೊಳೂ ॥ ವನಿತೆಯ ರು ಕೈದಾಳ್ದ ಆರತಿ । ಜನರ ಮನ್ನಣೆ ಗೊಳಿಸುತಲಿ ಸಂ । ನ್ಮನವನಡಸುತ ಬಂದ ದಶರಥ ಸ್ಯಂದನಾಗ್ರದಲಿ ॥ ೮ ॥ ರಾಮ ಲಕ್ಷ್ಮಣರಿಂಗೆ ಪೊಸದಭಿ। ರಾಮ ಕಾಂತೊಡವೆರದು ದಭಿನವ । ರಾಮೆಯರ ವಲವಿಂದ ಲೆನುತಾ ವೂರ ನಾರಿಯರೂ ॥ ಪ್ರೇಮಗೊಳು ವನಿತರಲಿ ಪಿಂಗಡೆ। ಭೂಮಿಜೆಯು ಸತಿವೃಂ ದದೊಳು ಬಹು । ದಾ ಮನೋಹರ ರೀಕ್ಷಿಸಾಶ್ಚರಿ ವಟ್ಟರತಿಶಯಕೆ ॥ ೯ ॥ ದೇವ ಕಿನ್ನರ ಗರುಡ ವೆಂತರ । ಭಾವೆಯರ ತೆರನಲ್ಲ ತ್ರಿಜಗಧಿ। ದೇವಿ ಗಡ ಮೇಣ್ರತಿಯೊ ಸರಸಿಯೊ ಸಕಲ ಲಕ್ಷಣದಾ ॥ ಭಾವಕಿಯೊ ಮೆಣ್ಣನಕಸಂ ಗೊ । ದ್ಭವೆಯೊ ಅಕಟಕಟ ಈ ರೂ । ಪಾವ ಪುಣ್ಯದಿ ನೆಲಸಿತೆಂದರು ನಗ ರನಾರಿಯರೂ ॥ ೧೦ ॥ ನೋಡುವರ ನಯನಾವಳಿಯ ತುಂ । ಬಾಡುತಿರ ಲಂಗ್ವಲ್ಲಿಯ ಗ್ರೂಢ । ಗೂಡಿದ ಬುಜಾಸ್ಯದೊಳು ಜಾನಕಿಯ್ಯೆದಿಯವರೋ ಹಾ ॥ ಮಾಡಿದರ ಪಿಂದಿಳಿದು ಗೃಹದೊಡ । ಗೂಡಿದಳು ರಾಘವನ ಜಯ ಸಿರಿ । ಕೂಡಿದಂದದೊಳೆಲ್ಲ ಪೊಕ್ಕರು ರಾಜ ಮಂದಿರವಾ ॥ ೧೧ ॥ ಆಗಲೇ ಗೃಹವಲ್ಲಿ ಸತಿಯರೊ । ಳಾಗ ಬಲ ಕೇಶವರ ಹಸೆಯ । ಗ್ರಾಗಲಿರಿಸಾರ್ತ್ರ ಕ್ಷತೆಂಪು ಗೈದುತ್ಸಹಾವ ನೆಸಗೀ ॥ ರಾಗವೆರಸ ವರವರ ಸ್ತ್ರೀಯರ । ಭೋಗ ದೊಳಗಿರೆ ದಶರಥನು ಸುಮ । ನಾಗಿ ಸುತರೇಳ್ಗೆ ಯೊಳಗೊಪ್ಪಿದ ನರಸಿಚಿತ್ತ್ರೈ ಸೂ ॥೧೨॥ ಇರಲಿ ಯಿಾ ತೆರದಿಂದ ಕೆಲದಿನ । ವೆರೆದ ಪರಿಣಾಮದಲಯೋ ಧ್ಯೆಯ । ಪೊರಗಲಿಹ ಮಾಹೇಂದ್ರ ವನ ಕೊಂದಾನು ದಿನದಲ್ಲೀ ॥ ನಿರುತ ಭೂತ ಹಿತಾಖ್ಯ ಮುನಿಯವ । ತರಿಸಲ್ಕೈ ಸೂರ್ತ್ರಾಂಡ ಗುರುಗಳ । ನೆರವಿ ಯೊಳು ತ್ರಿಜ್ಞಾನಧರ ರವನೀಶ ಚಿತ್ತ್ರೈಸು ॥ ೧೩ ॥ ಆ ಗುರುಗಳಾ ಕರ್ಷ ದಲಿ ಚಲು । ವಾಗಿ ಫಲತಳಿ ಕುಸುಮ ಮಂಜರಿ । ರಾಗಿಸುವ ದರಿದ್ಯೆದಿ ತಂದವಕೊಟ್ಟ ವೊನಪಾಲಾ ॥ ಗಾಗಲುಚಿತವ ನಿತ್ತು ತತ್ಕ್ರಮ । ವಾಗಿ ನಂದನ ಕೈದಿ ಸ್ತ್ರೀರೊಡ । ನಾಗಿ ಗುರುಭಕ್ತಿಯಲಿ ಯುಪಚಯ ಗೈಮ ವಂದಿ

ಸುತಾ ॥ ೧೪ ॥ ಕುಳಿತು ಆಶೀರ್ವಚನದಲಿ ಯದು । ರೊಳಗೆ ದಶರಥನು ಭಯ ಭಾಗದಿ । ಕುಳಿತು ಕೌಶಲೆಯಾದಿ ಸತಿಯರು ಸುತ್ತ ಪರಿವಾರಾ ॥ ಕುಳಿತರಿಗೆ ಸಾಗಾರ ಧರ್ಮ್ಮದ । ನೆಳಲನಾಶ್ರಯ ಗೈದ ಯತಿ ಪತಿ । ಗಳಿಗೆ ಕೈಮುಗಿದಂತರದಿ ಬೆಸಗೊಂಡ ದಶರಥನೂ ॥ ೧೫ ॥ ದೇವ ಚಿತ್ರ್ಯಸೇನಗೆಈ ಪು । ಣ್ಯಾವಕಾರಣ ನಿರವಿಸುವದು ಸು । ಭಾವ ಬೋದೊಧ್ಯಾಯನೆನೆ ದಶ ರಥಗೆ ಕರುಣದಲೀ ॥ ತೀವಿದರು ಪೂರ್ವಾನುಭವ ದು । ರ್ಭಾವಗಳ ವಿಸ್ತ ರಿಪೆ ಕೇಳ್ನರ । ದೇವ ನೆಂದನು ಯತಿ ಲಲಾಮನು ರಾಯಚಿತ್ರ್ಯಸೂ ॥೧೬॥ ಇಂದೆ ಮೊದಲೆನ ಬೇಡ ಬಹುದಿನ । ದಿಂದ ಚತುರ್ಗತಿ ಸುಳಿಯೊಳಗೆ ಆನು। ಬಂದನೀ ಯಾತ್ಮನಿಗೆ ನೆಲೆಯಿಲ್ಲಮಲ ಮುಕ್ತಿಯನೂ ॥ ಸಂದಿಸದಲೆನುತುಲಿ ಯಲುದ್ಯತ । ವೆಂದನೀ ಭವಕೆಂಟನೆಯ ಭವ । ದಂದು ವನಚರನಾಗಿ ನೀ ಕರುಣೆಂಬ ನಾಮದಲೀ ॥ ೧೭ ॥ ಬಹಳ ಪಾಪಾನಂದದಲಿ ನೆರೆ । ದಹಿತಹಿ ತವರಿಯದಲೆ ಚರಿಗೆಗೆ। ಬಹಮುನೀಶರ ಕಂಡು ತನಗವಶೆಕುನವಾಯ್ತೆಂಬಾ॥ ಅಹಿತದಿಂ ಪರಿಭವಿಸಿ ದುರ್ಭವ । ವಹಿಸಿ ದುಃಕರ್ಮ್ಮಗಳ ಸಂತತಿ । ಗೈಹ ದಿ ಮುಳುಮುಳುಗೇಳು ತಿರ್ದನು ನರಕ ಮೊದಲಾಗೀ ॥ ೧೮ ॥ ತಿರುಗಿ ಬಹು ದಿನ ಕರ್ಮ್ಮ ದುಪಶಮು । ದೊರೆದ ತತ್ಕಾರಣದಿ ಚಂದಿರ । ಪುರಮನಾಳುವ ಚಂದ್ರಸೇನಗೆ ಚಂದ್ರಮತಿ ಯಂಬಾ ॥ ಅರಸಿ ಯುದರದಿ ದಾರುಣಾಖ್ಯದ । ತರಳನಾಗೆ ಸುಧರ್ಮ್ಮಯಂಬಳ । ತರಲು ಅತಿ ಸಂತುಷ್ಟ ಭೋಗದೊಳಿರುತ ಲವನೀಶಾ ॥೧೯॥ ಬಿಡದೆಸನ್ಮಾರ್ಗವನು ಚತುರ್ವಿದ । ಡದವಾ ಸದ್ದಾನ ಗಳಪಾತ್ರಕೆ । ಕೊಡುತ ನಡೆದಂತ್ಯದಿ ಸಮಾಧಿಯ ಮರಣವನು ಪಡೆದೂ ॥ ನಡೆದು ಧಾತಕಿಷಂಡದೊಳು ಪೂ । ರ್ವ್ವಡಿಸಿದ ಮರಾಚಲದ ಸನಿಹಿತ । ವಿ ಡಿದ ಕುರುಧರೆ ಯಾರ್ಯ್ಯನಾದನು ದಾನಫಲದಿಂದಾ ॥ ೨೦ ॥ ಮೂರು ಪ ಲ್ಯಾಯುಷ್ಯ ಸೌಖ್ಯವು । ತೀರಲನುಭವಿಸೈದಿ ಸುಖದಾ । ಗಾರ ಸದ್ಧರ್ಮ ದೊಳು ಜನಿಸಿದ ನೊಡೆದು ದೇವತ್ವಾ ॥ ಸಾರದಿಹ ಸೌರುಭಧಿ ಕುಂದನು । ಸಾರದಿಹ ಪೂಸರದಿ ತವೆಯದೆ । ದೋರುತಿಹ ಮೈಸಿರಿಯು ಮಲಧಾತುಗಳು ರಹಿತದಲೀ ॥ ೨೧ ॥ ಜನಿಸಲೊಡ ನವ ಯವ್ವನವು ಸಂ । ಜನಿಸೆ ಮಾಸದ ವುಡಿಗೆ ತೊಡಿಗೆಯ । ಸನಯದಲಿ ಚಲುವೆತ್ತು ಸುರನಾರಿಯರ ಭೋಗದಲೀ॥ ಸನುತ ನಾಗರೆ ಘಳಿಲೆ ಅಹಿತದ । ಮೊನೆಯ ನರಿಯದ ಸುಖ ಸುಧಾಕರ । ವನಧಿ ಯರಡಾಯುಷ್ಯ ತೀರಿಸಲಿರ್ದ್ದ ಕಡೆಯಲ್ಲೀ ॥ ೨೨ ॥ ಬಂದುಜಂಬೂ

ದ್ವೀಪದೊಳು ಅನು। ಬಂಧವಾಗಿಹ ಪೂರ್ವ್ವದೇಹದಿ । ಹೊಂದಿ ರಾಜಿಪ ಪುಂಡರೀಕಿಣಿಪುರದ ರಾಜೇಂದ್ರಾ ॥ ನಂದಿಘೋಷಣನರಸಿ ವಸುಮತಿ | ಯಿಂದ ಸೋಂಪೆತ್ತಿರಲು ಯಿರ್ವರ ! ಕಂದನಾದನು ನಂದಿವರ್ದ್ದನನೆಂಬ ನಾಮದಲೀ॥ ೨೩ ॥ ನೆರೆದು ಯವನವಿರಲು ವನಕೆಶೋ । ಧರ ಮುನೀಶ್ವರ ಬಂದ ವಾರ್ತೆಯ । ನರಿದು ತೆರಳಿದ ನಂದಿಘೋಷಣ ಕೇಳಿ ಧರ್ಮ್ಮವನೂ॥ ನೆರದ ವೈರಾಗ್ಯದಲಿ ಸರ್ವ್ವವ । ತೊರೆದು ರಾಜ್ಯವ ನಂದಿವರ್ಧನ । ಗೊರಿಸಿ ಯಾ ಮುನಿಯಿಂದ ತಳೆದನುದಾತ್ತ ದೀಕ್ಷೆಯನೂ ॥ ೨೪ ॥ ವುಗ್ರತರ ತಪೊನಿಷ್ಠೆಯೊಳಗೇ। ಕಾಗ್ರದಾ ಚರದಿಂದ ದುಷ್ಕೃತ। ನಿಗ್ರಹಿಸಿ ತನುಭಾರವನು ಪರಿದಿಟ್ಟು ಸ್ವರ್ಗಾಂತ್ಯ॥ ದಗ್ರಗ್ರೈವೇಯಕದ ಮಧ್ಯಸ । ಮಗ್ರ ಸುಖ ಸಂಪ್ರಾಪ್ತಿಯೊಳು ನೆಲ। ಸಿಗ್ರ ಅಹಮಿಂದ್ರತ್ವ ವಡೆದನು ಕೇಳು ದಶರಥನೇ ॥ ೨೫ ॥ ನಂದಿವರ್ದ್ಧನನಿತ್ತ ಮಹ ಸುಖ । ದಿಂದಲಾಯುವು ಪೂರ್ವ್ವಕೋಟಿಯೊ | ಳೊಂದಿ ಸದ್ಧರ್ಮ್ಮದಲಿ ನಡೆದಾಶ್ರಮವನಾಚರಿಸೀ॥ ಸಂದನೈದನೆ ಬ್ರಂಹಕಲ್ಪದಿ । ನಿಂದನೊಯ್ಯಾನೀಕದೇ ವೆಸ | ರಿಂದನಾಮುನಿ ನಂದಿವರ್ದ್ಧನ ನರಸ ಚಿತ್ತ್ರೈಸೂ ॥ ೨೬ ॥ ಪಂಚಮುಜ್ಞಾನಗಳನೀವನು। ಪಂಚ ಕಲ್ಯಾಣೈದನೆಯ ಗತಿ । ಗೊಂಚಿಸುವ ಸದ್ಧರ್ಮ್ಮಕಸದಳವೇನು ಸ್ವರ್ಗಗಳಾ ॥ ಸಂಚಿಸಲು ಬ್ರಂಹೇಂದ್ರ ತ್ರಿದಿವದ | ಸಂಚರಾಚರ ಸುಖವನ ಸುಭವಿ । ಸಿಂಚೆ ಬಂದಾ ಲೋಕವನು ಬಿಟ್ಟವನಿನಾಯಕನೇ ॥೨೭॥ ಹೊಂದಿದಪರ ವಿದೇಹದೊಳಗನು | ವಿಂದಲಿಹ ವಿಜಯಾದ್ಧ್ರಗಿರಿಯೊಳ। ಗೊಂಡು ಶಶಿಪುರವೆಂಬದಾಳುವ ರತ್ನಮಾಲಿನಿಯಾ ॥ ಇಂದುಮುಖಿ ವಿದ್ಯುಲ್ಲತೆಯನಿಜ । ಕಂದ ಸೂರ್ಯ್ಯಂಜಯನ ವೆಸರನು । ಬಂದದಿಂದೆಳೆಜೋರ್ವನೆನಿಸಿದನಾಗೆ ದಶರಥಗೇ ॥ ೨೮ ॥ ಜನಕನಾಗಿಹ ರತ್ನಮಾಲೊಂ । ದಿನದಿ ಚತುರ್ದಳಗೂಡಿ ಸಂಹತಿ । ಗೆನುತ ಮುಳಿದು ಗಜೇಂದ್ರನಗ್ರಕೆ ಪೋಪ ಹರಿಯಂತೇ ॥ ಕನಲಿ ಸಿಂಹಪುರೇಶನಾಗಿಹ। ಘನ ಪರಾಕ್ರಮಿ ವಜ್ರಲೋಚನ। ತನಗೆ ಮಾರ್ಮ್ಮಲ ತೆರಗದಿರೆ ನಡೆವೆಡೆಯೊಳವನಗ್ರಾ ॥ ೨೯ ॥ ಕೋಪವೆನಿಪತಿಶಾರ್ವರಿಗೆ ದಿನ । ದೀಪವೆನೆ ತನು ರುಚಿಯ ಬೀರುತ । ಲಾ ಪದದೊಳೈತಂದ ದಿವದಿಂದ ವಧಿಯಿಂದರಿದೂ ॥ ವ್ಯಾಪಿಸಿದ ವೋಹದಲಿ ಭವಸಂ । ಪ್ರಾಪಿಸಿಂ ಬಹದೇವನತಿಶಯ । ರೂಪಿಗಾಶ್ಚರಿ ವಡುತ ನಿಂದನು ರತ್ನಮಾಲಿನಿಯೂ ॥ ೩೦ ॥ ಅರಸ ಕೇಳಾಗ್ರಹದಿ ಕುನಯುವ । ನೆರೆವ ನಾನಾ ಗತಿಗ

ದೊ ಅಲವೆನಲಾಗಲಾ ಲೋಕಿಸುತಲ ಸುರೇಂದ್ರಾ ॥ ಗ್ರಹಿಸು ನೂತನದೆಲರ
ತಂದನು । ಗ್ರಹಿಸುವರೊ ಪೆರರಿಟ್ಟ ನಿರ್ಮಾ । ಲ್ಯಹಗಳನುಭವಿಸುವರೊ
ಸುಪ್ರಹುಡೆಂದಳಿಂದುಮುಖೀ ॥ ೪೦ ॥ ಬಿಟ್ಟ ಮೈಲಿಗೆ ಹೊದೆವರೋ ತೊ
ಳ । ದಿಟ್ಟ ಪೊದಪಾನುವರೊ ವುಣಾತೆಡೆ । ಬಿಟ್ಟುದಕೆ ಮನವಿಡುವರೋ ನಿ

ರ್ಮಲಿನ ತರದಿಂದಾ ॥ ಲಟ್ಟದನುಭವಿಸುವರೊ ಸರ್ವರಿ । ಗೆಟ್ಟದ ಸಮಸ
ಮರ್ತ್ರ ಸದ್ಗುಣ । ವಿಟ್ಟ ನೀಸುಜ್ಞಾನಿ ತಿಳಿಯಸುರೇಂದ್ರನೆನೆ ಸೀತೇ ॥೪೧॥
ತರುವ ಸಮಯದೊಳಾವ ಕರ್ಮ್ಮ । ವರಿಸಿತೋ ಅಭ್ರಾಗಮದಿಯಂ । ತರಿ
ಸಿತೋ ಸತ್ಕರ್ಮ್ಮವೆನ ಮನವಿದ್ದ ರೀತಿಯೊಳೂ ॥ ಇರುವೆನೆಂದಾಗುಲಿದು
ಯಾಗೀ । ತೆರನನುಲಿವೆಯ ನೀನು ನಿಂನಿಂ । ಬರದು ಮೋಹಿನಿ ಕರ್ಮ್ಮಸಾ
ಮಾರ್ತ್ಥ್ಯಂದಳಿಂದುಮುಖೀ ॥ ೪೨ ॥ ಕರ್ಮವುದಯದೊಳಮಲಜ್ಞಾನಕೆ।
ದುರ್ಮತಿಯ ಪುಟ್ಟುವುದು ಸಹಜವಿ । ದುರ್ಮ್ಮಳದಿ ನಿನಗಿನ್ನು ಬೇರೊಂದಾಗಿ
ಬಂದವುದೇ ॥ ನಿರ್ಮ್ಮಲಿನ ದಿನದೊಳಗೆ ತ್ಯಾಜ್ಯವಿ । ಗುರ್ಮ್ಮಿಸಿದ ತೆರದಂತೆ
ತಿಳಿದೀ । ಶರ್ಮ್ಮವಳಿವನೆ ಪ್ರಾಜ್ಞ ನೀನರಿಯಂದಳಿಂದುಮುಖೀ ॥ ೪೩ ॥
ಕಡಮೆಯೇ ನಿನಗಂಗನೆಯರಿಂ । ಗಡಸದಿಹ ಲಕ್ಷಣಗಳೇನಾ । ಪಡೆದ ಭಾಗ್ಯ
ವದೇನು ಸ್ತ್ರೀ ಜನ್ಮೈಕರಾಸಲದೆ ॥ ಹಿಡಿಯಬೇಡನ್ಯವನು ನೀದೊ । ಡ್ಡೊಡೆ
ಯ ದಿನದಿನಕಿನ್ನು ಸತ್ಕೃತ । ವಡಿಸ ಕೀರ್ತ್ತಿಯೊಳಧಿಕನಾಗಸುರೇಂದ್ರನೆನೆ
ಸೀತೇ ॥೪೪॥ ಕೇಳುತಿನಿತೆಲ್ಲವನು ಸುಗುಣವ । ತಾಳು ವನಿತರಲಾದಿಕರ್ಮ।
ಜ್ಞಾಳಿಸೊಡಮನಕುದಯ ಸಾತಾವೇಧಿನಿಯ ಬಲದಿಂದಾ ॥ ಕೋಳಿನಿಂದಲಿ
ಜ್ಞಾನವರ್ಣಿಯ । ದಾಳಿ ಪೇಳಿದನನ್ಯರಿಗೆ ಯಿದ । ಹೇಳಬಹುದಾ ಕೇಳೆನ
ವನೇಂದ್ರಂದನಸುರೇಂದ್ರಾ ॥ ೪೫ ॥ ಪಾಪ ಪುಣ್ಯದವರ್ಣ್ನದಾವುದೆ । ಲೇಪಿ
ನಿರ್ಲೇಪಾವಸ್ವರ್ಗ ಕ । ಲಾಪವೇನದನರಿದ ನಾರಿಂ ನರಕ ಕೈದಿದಗೇ ॥ ತಾ
ಪವೇ ಸಿನಕಂಡು ಬಂದ ಪ್ರ । ತಾಪನಾವನು ಲೋಕನೀತಿಗ । ಳೀಪರಲ್ಲವೆ
ಸುಗುಣೆ ನೀ ತಿಳಿಯಂದನಸುರೇಂದ್ರಾ ॥ ೪೬ ॥ ಯಾತಕೆಡೆಗೈತಂದಬೋಜ
ನ । ಪೋತು ಕೊಳಬೇಕಲ್ಲದಂಬಲಿ । ಪಾತಕೆನ್ಬಹದ್ಯೆದಿ ಅತಿಸೌಖ್ಯಾನುಭವಿ
ಸದಲೇ ॥ ಘಾತಕೊಳಗಹರಕಟದೆಷ್ಟೋ । ಪ್ರೀತಿಯೊಳಗಾತಂದು ನಾನಾ।
ಮಾತ ಕೇಳುಳಿದಪೆನೆ ಜಾನಕಿಯಂದ ನಸುರೇಂದ್ರಾ ॥ ೪೭ ॥ ಆಗ್ನಿಸುವೆ
ನಾಲಯರ ಮಿಗಿಲಿನ । ರಾಗ್ನಿಸುವೆ ಮರ್ಯಾದೆವಿಾರಿದ । ರಾಗ್ನಿಸುವೆ ನಲ್ಲ
ದಲೆ ನಾನೊಲಿದೊಸ್ತು ಭೋಗಿಸಲೂ ॥ ವಿಘ್ನವೇನುಚ್ಚೊಸ್ತುವೆಲ್ಲನ । ನುಗ್ನೈ
ಯಲ್ಲದೆ ಪಾಪಪುಣ್ಯವಿ । ಲಗ್ನವೆನಗೇನೆಂದು ಗರ್ಜ್ಜಿಸಲಾಗಲಸುರೇಂದ್ರಾ
॥ ೪೮ ॥ ತುರುಗ ಕರಿ ರತ್ನಗಳು ಕನ್ಯಾ । ವರವಿಲಾಸರು ಖಡ್ಗ ರತ್ನಿಂ।
ನಿರುವ ಶ್ರೇಷ್ಠೊಸ್ತ್ರ ಬಳಿಯಿರಲವಕೆ ಮುಡಿಚಟ್ಟೇ ॥ ಧರೆಯೊಳಾವನೊ
ಬಲನ ಕೈವಶ । ವರಿಯರೇ ಜಗರೆಲ್ಲದುರ್ನ್ನೀ । ತೊರೆದರಂಜುವನಹುದೆ ಜಾ

ನಕಿಯುಂದನಸುರೇಂದ್ರಾ ॥ ೪೯ ॥ ಮಿಗಿಲ ಜನಕೀ ಪಾಪಪುಣ್ಯಗ । ಳೊಗವು
ಯನ್ನೊಳಗಾನುಕಣ್ಣೆ । ಟ್ಟಗಲುವನೆ ಬಿಡೆನೊಂದು ದಿನವನುಭವಿಸದಲೆನಿನ್ನಾ॥
ಬೆಗಡುಗೊಳದೊಳಗಾಗು ಆಗವ । ಲಗರಣಿಪೆ ಬೇಡಾನುಸಾರಿದೆ । ಸುಗುಣೆ
ನೀ ತಿಳಿಯುಂದ ದಶಶಿರ ಸೀತೆ ಬೆರಗಾಗೇ ॥ ೫೦ ॥ ಕ್ರೂರನಿವನೆಂದಂಗಭ
ಯಕಾ । ಮೇರೆ ಮಿೀರಲು ಹೀನವಾಶ್ರಾ । ಗಾರರಿಗೆ ಜನರಲ್ಲಿ ನಗೆ ಗೀಡಾಗಿ
ಘೂಯೆನಿಸೀ ॥ ದಾರಿ ತಪ್ಪುವದಂತ್ಯ ಶಾಸ್ತ್ರಪಿ । ಚಾರಸ್ಥಿರನಲಂಗಮರಣವ।
ಸಾರಥಿರವಿಂನೆಷ್ಟು ಬದುಕಿದರೆಂದು ಮನದಲ್ಲೀ ॥ ೫೧ ॥ ಯಷ್ಟು ಬದುಕಿದ
ಡೇನು ಶೀಲ । ಭ್ರಷ್ಟರಾಗಿನ್ನೆಳೆಯದಾಹತ । ಶ್ರೇಷ್ಟಕೀರ್ತ್ತಿಗೆ ಬದುಕಬೇ
ಕೆಂಬಂಗನೆಯರಿಂಗೇ ॥ ಕಷ್ಟ ಸುಖ ವಿಲೋಕರಿಗೆ ಸಮ । ವಷ್ಟೆ ಮಿೀರುವರಿ
ಲ್ಲ ಯನಗೆ ಅ । ರಿಷ್ಟ ತಾಗದಲಿಹುದೆ ಯದಕೇನೆಂದ ಳಿಂದುಮುಖೀ ॥೫೨॥
ಈತನೊಶಧ್ಧಿಂದೆನಗೆಯುನ್ನಿಂ । ದೀತಗೇ ಬಹುದುಂಟೊ ನಿರ್ನ್ನಯ । ಕೀತೆರಾ
ಗಿಹುದಲದೆ ದುರ್ಬುದ್ದೆಸಗವೇಣೆನ್ನಾ ॥ ಮಾತನುಗ್ರಹಿಸುವನು ಕರ್ಮ್ಮವಿ ।
ಪಾತಕೆಸಗುವದೆಂದು ನಿಶ್ಚಲ । ನಾತು ದೇಹವತ್ರುಣ ಕೆಸರಿಗಂಡಾಗಲೊ
ಯ್ಬೇಹೀ ॥ ೫೩ ॥ ಮಾತು ಮಾತಿನಲೊ ಯಿರಹೆಚ್ಚಿ । ನ್ಯಾತಕಿವನೊಳು
ಶಣಸೆ ಪ್ರಾಣಭ । ಯಾತರಷ್ಕೇಹಲವ ಹಂಬಲಿಸುವದು ಅನಶನವಾ ॥ ನಾ
ತೆನಾದಿಯಲಿನ್ನು ದೇಹದ । ಪ್ರೀತಿಯಾ ಕುಪಸರ್ಗ ಪರಿಭವ । ಕಾತಳಂಗ
ತ್ಯಜಿಸಿ ಮೌನ ಸಮೇತಲವನಿಸುತೇ ॥ ೫೪ ॥ ಇಟ್ಟು ಅರುಹ ಸ್ಮರಣೆಯನು
ಮನ । ಕಿಟ್ಟು ರಘು ಲಕ್ಷ್ಮಣ ಧ್ಯಾನಳ । ವಟ್ಟು ತಲೆವಾಗಿದಳ ನೋಡುತ
ಲೆಂದಸನ್ಮನವಾ ॥ ಬಟ್ಟ ತೆರನೋ ಬಾಧೆಗೊಳಲನು । ಬಟ್ಟ ಬಟ್ಟೆಯೊ
ವೇಗದಲಿಬಾ। ಯ್ವಿಟ್ಟು ಪೇಳವಧೂತೆಯುಂದನು ಮುಳಿದುಖಚರೇಂದ್ರಾ॥೫೫॥
ನಾರಿಯುಹುದಾಣ್ಮನಿಗೆ ಸುಜನ ಕು । ಮಾರಿಯುಹುದ ಸಹಿತರಿಗಾಕುರಿ । ಮಾ
ರಿಯುಹುದ ಸುರೇಶ ತಿಳಿಯುಂಬಂತೆ ನಂದನದಾ ॥ ಕೀರ ಕೂಗಿದವಿನಿತುವು
ದ್ದ್ರೇ । ಕಾರಿಸೆಂಬೊಲ್ತುಳಿರು ಕೈಗಳ । ಸಾರಿ ತೋರಿದವನಿಲಭರದಿಂದ ಸು
ರನಾಯಕಗೇ ॥ ೫೬ ॥ ಕೇಳಿದೊಂದೆರಡುತ್ತರಕೆ ಪ್ರತಿ । ಹೇಳದಿರಲಸುರಾ
ಳ್ಗಳನು ಖಡಿ । ಸೀಳಿ ಜಾನಕಿಯುಂಬ ದ್ರೋಹಿಯನೆಂದನಾಜ್ಞೆಯಲಿ ॥ ತಾ
ಳುತುಗ್ರವತಾರಗಳ ತನು । ಕೀಳುತಿಹ ವೇಘ್ರಗಳು ನೆತ್ತಿಯ । ಸೀಳುತಿಹ
ಸಿಂಹಗಳು ವಿಷವನು ಕಕ್ಕಿ ಖಡಿವುತಿಹಾ ॥ ೫೭ ॥ ವ್ಯಾಳಸರ್ಪ್ಪಗಳಂಗಗಳ
ಹೋ । ಳ್ವೀಳುಪಸರ್ಗದಾರ್ಭಟೆ । ಕೋಳಿನೊಳು ಕೋಳಾಹ ಳೆಸಗಲುತಿಹರ್‍ರು

ದನುಜನಾಯಕರೂ ॥ ಬಾಳವುಪಸರ್ಗವನು ಮನಸಿಗೆ । ತಾಳದರುಹಸ್ಮರಣೆ ಯಲಿ ವೈ । ತಾಳಿದಳು ಯೇನಮಮ ಧೈರ್ಯ್ಯವೊ ನೋಡು ಜಾನಕಿಯಾ ॥೫೮॥ ನೋಡಲಸುರ ವಿಘೂರ್ವ್ವಣೆಯ ಪಾ । ಣೋಡುತಿಹವನ್ಯರಿಗೆ ಅನಿ ತಕು । ಹೇಡಿಸದೆ ನಿಶ್ಚಲದಿ ಕುಳಿತಿಹಳಂತರಂಗವನೂ ॥ ನೋಡಿ ವನದೇವಿ ಯರು ಸುತ್ತೊಡ । ಬಾಡುತಿಹರೆಲ್ಲಂಗ ಸ್ಪರ್ಶನ । ಮಾಡದಂತೆಸಗಿದರು ಮಾಯದಿ ಮೆಚ್ಚಿ ಜಾನಕಿಯಾ ॥೫೯॥ ನೋಡಿದರೆ ಸೀತೆಯೆನೆ ಹಿಂಸೆಯ। ಮಾಡುವಂತಿಹುದಯ್ಯೋ ಹೇಗೆಂ । ದಾಡುವಂತಿಹುದಾಕೆ ಸುತ್ತೊಡದಾಡುತ ಲೆಸಿಕಟಾ ॥ ಆಡುತಿಹ ನರ್ತನರು ಪದಗಳ । ಹಾಡುವಂದದೊಳವರವರಶೃತಿ। ಮಾಡುತಿಹುದಾಶ್ಚರಿಸಿ ನೋಡಿದಳಾಗ ವೈದೇಹೀ ॥ ೬೦ ॥ ಹೀಗಲವನೋ ಡುತಲಿ ನಗೆ ಮುಖ । ವಾಗಿಹಳಸುರೇಂದ್ರ ನೀನು ಚಂ । ನಾಗಿ ಘೋರಿಸಿ ರೆಂಬ ಸಮಯವನರಿದ ಮಾರೀಚಾ ॥ ಬೇಗಲೈತಂದಕಟ ಮನವಿ । ನ್ಹಾ್ಯಗೆ ಬಂತಿಂನಿಂದೊನಾಳೆಯೊ । ಆಗತನತಾ ತಿಳಿದು ವಶವಹಸತಿಗೆ ಯುಪಸರ್ಗಾ ॥ ೬೧ ॥ ಆಗದೆಂದ ಸುರೇಂದ್ರನಿಗೆ ತಲೆ । ವಾಗಿ ಬಿಡಿಸಲು ಸೀತೆ ನೀ ಚ । ನ್ನಾಗಿ ತಿಳಿ ಚನಿಖಂಡಗೈಸುವೆ ನೀತ ಬರದಿರಲೂ ॥ ಈಗಿಗಿವನುದರದಲಿ ಪು ಟ್ಟದ। ಳಾಗಿ ಯಿಹುದೆಂದ ಸುರರನು ಬಲ। ವಾಗಿ ಕಾಪಿಟ್ಟರುಹಸ್ಮರಣೆಯೊ ಳೈದೆ ದನುಜೇಂದ್ರ ॥ ೬೨ ॥ ಕಲಿಲಹರ ಮುನಿಸುವ್ರತಾಂತ್ಯದಿ । ಚಲಿತರಾ ದಾರಾಮ ಲಕ್ಷ್ಮಣ । ರೊಲವಿನೀ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆಗೈದರಿದ ಮನ। ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೬೩ ॥

ಅಂತು ಸಂಧಿ ೩೮ ಕ್ಕಂ ಪದನು ೨೨೭೭ ಕ್ಕಂ ಮಂಗಳಮಹಾ ಶ್ರೀ ಶ್ರೀ.

ಮೂವತ್ತೊಂಭತ್ತನೆಯ ಸಂಧಿ.

ಮಂಡೋದರಿಯ ನೀತಿ ಸಂಧಿ.

ಜಾನಕಿಯ ಪ್ರಿಯ ತಂದ ತೆರನನ । ದಾನಿಸುತ ಸದ್ನೀತಿಯನು ಸಂ । ದಾಸಿಸಿದಳೆಡೆ ಕುಳಿತು ಮಂಡೋದರಿಯು ಮಮತೆಯಲೀ ॥ ಪಲ್ಲವಿ ॥

ನೋಡಿದೈ ರಾಜೇಂದ್ರ ನಿಗ್ರಹ । ಮಾಡುವದ ಪರಿಹರಿಸಿ ನೃಪನೊಡ । ಗೂಡಿ ಮಾರೀಚೈದುತಿರಲಿನ್ನಿತ್ತ ದಾನವರೂ ॥ ಮಾಡಿವದ ಸುತ್ತಂತರದಿ ಜತೆ। ಗೂಡಿ ಕತ್ತಿಯ ಕಿತ್ತು ಮಶಕ । ತ್ನೋಡವಂತಾಸುರದಿ ಕಾಯ್ದರು ಕಾಪಜಾನ ಕಿಯಾ ॥ ೧ ॥ ಸತ್ಯವೇ ಸಾಕಾರ ಜನಕಂ । ನೃತ್ಯವೇ ಕಡುಹೊಲ್ಲವದರಿಂ । ಮೃತ್ಯು ಪರಿಹರ ಶಕ್ತಿ ಶೀಲದೊಳುದುಗಿ ಜಾನಕಿಯಾ ॥ ಮೃತ್ಯುವೆತ್ತಾವೃತದಿ ಮಾಡುವ । ನೃತ್ಯವೆತ್ತಾ ಸೊಗಸ ನೋಡುವ । ಪತ್ಯವೆತ್ತಾಶ್ಚರ್ಯ್ಯ ನೋಡವ ನೀಶನೆನೆ ಮುನಿಪಾ ॥ ೨ ॥ ಹೀಗೆ ಯಿಹ ಸಮಯದಲಿ ಜತನವ । ದಾಗಿತಿಳಿ ದಿನ್ನಿಂದುನಾಳನು । ವಾಗದಿರಲಾಗುಂಟು ನಿನ್ನಾಟಲದೆ ಮೇಣಿನ್ನೂ ॥ ಹ್ಯಾಗೆ ರಾಘವನಗಧರನ ಕ । ಟ್ಟೇಗ ತರಿಸುವೆ ನಾಳೆ ನೀ ಚ । ನ್ನಾಗಿ ತಿಳಿದಿಹುದೆಂ ದು ಪೋಗುವ ಸಮಯದಸುರೇಂದ್ರಾ ॥ ೩ ॥ ಅನುಭವಗಳೆನೇನೋತತ್ತ। ತ್ತನುಭವಿಸದಿರಲಾಗದೆನಗಿಂ । ನಿನದೆಸೆಯು ಆಪದಕೆ ಕಾರಣವಿನ್ನು ಮೇಣ್ಯಾ ರಾ ॥ ಸನಯವೋ ನಿನಗೈದ ರಘುವರ । ನನುವದೇ ನೀ ಬಲ್ಲೆ ಸಾಕೆಂ । ದೆನು ತ ಮೌನಿಯು ಮುಗಿದು ಕೈಗಳಲಿಂತು ಧ್ಯಾನಿಸುತಾ ॥ ೪ ॥ ಇಟ್ಟು ನಾಸದ್ರಿ ಷ್ಟಿ ಫಣೆಯಡೆ । ಗಿಟ್ಟು ಅಂಜಲಿಯರುಹಸ್ಮರಣೆಯ । ನಿಟ್ಟು ಮನದೊಳ ಗಿಟ್ಟ ಪದ್ಮಾಸನದಿ ವೈಕಲ್ಯಾ ॥ ಬಿಟ್ಟು ವಿಗ್ರಹದಾಸೆಯನು ಹದ । ಕಿಟ್ಟು ಸ್ವಾಸುಸ್ವಾಸ ಹಸುತ್ರುಷೆ । ಗಿಟ್ಟು ರಾಘವನಂಘ್ರಿ ಸ್ಮರಣಾಮೃತವನಿರೆ ಸೀತೆ ॥೫॥ ರಕ್ಷನುಪದೇಶದಲಿ ಕಾಪಿನ । ಯಕ್ಷರತಿ ವೈಚಿತ್ರ ರೂಪನು । ಪೇಕ್ಷಿಸೈ ದೇನೇನೊ ವಿಪರೀತಾದ ಚಾಷ್ಟೆಗಳಾ ॥ ಲಕ್ಷಿಸುತಲೊಮ್ಮೆಮ್ಮೆ ಕಪಿಯಂ । ಶೀಕ್ಷಿಸುತ ಲತಿಹಾಸ್ಯದಿಂದ ವಿ । ಪಕ್ಷಗೊಳಿಸೆ ವಿದಾಹಗೊಳದಿರೆ ಧೀರೆ ವೈ ದೇಹೀ ॥ ೬ ॥ ಬಟ್ಟು ನಾನಾ ಪಾಟ ಬೇಸರ । ವಟ್ಟರಲ್ಲದೆ ಸೀತೆ ಮನಚ ಪ । ಲುಟ್ಟಸಿದರಿಲ್ಲಾದೆ ವಾರ್ತೆಯ ಕೇಳಿದ ಸುರೇಂದ್ರಾ ॥ ಕಟ್ಟ್ಕೆ ರಘು ಲ ಕ್ಷ್ಮಣರ ಪಿಂಗ । ಟ್ಟಟ್ಟ ಹಗ್ಗವ ಹಿಡಿದು ಆಳ್ಗು । ದ್ದೆಟ್ಟಸುತ ವೈತಂದ ವಿ ದ್ಯೆಯೊಳೆಸಗುತಾ ಯಡೆಗೇ ॥ ೭ ॥ ನಿಂದು ಜಾನಕಿ ನಿಕಟ ನಿನ ಪ್ರಿಯ । ಬಂಧುಗಳ ಪಾಡೇನು ಕಣುತುಂ । ಬಿಂದನೋಡೆಂದ್ಕಶೆಯೊಳೊಗೆಸುತ ಹಾ ಕುಹಾಕೆನುತಾ ॥ ಅಂದಿನುದಯಿಂತೆಸಗೆ ಸೈರಿಸ । ದೆಂದ ರಘುವಿನ ಪ್ರಾಣ ಕೋಸುಗ । ವೆಂದು ಕೂಡಸುರೇಂದ್ರ ನೆನುತಾಳಾಪವನು ಗೈದೂ ॥ ೮ ॥ ಮೆಚ್ಚಿ ತಾನಾಗನ್ಯರೊಡವೆರೆ । ವಿಚ್ಚೆಯನ್ಯಾಯೆಂದು ಕಾರ್ಯಕೆ । ಯಿಚ್ಚೆ ಗೊಳಲಲ್ಲಿಲ್ಲ ಪಾತಕವಲದೆ ಮೇಣಾನೆ ॥ ಗಚ್ಚಿಸೆನಲಲ್ಲೇನು ನಿನ ಶೀ । ಲ್ವಿಚ್ಚಿ

ಸದು ನಮ್ಮ ಳುಹಲಾಗ್ತನು ! ಮೆಚ್ಚಿಸಹೊ ಗುಣರಾಜಿತೆಂದನು ಅಳುತ ರಾಘ
ವನೂ॥೯॥ ಹೊಡೆವ ಕಮ್ಬ್ಚಿಯಲೆತ್ತಿಗಾರದೆ। ಬಿಡುತಬಾಯ್ಬಾಯ್ನಿನ್ನಮನದಿ।
ಚ್ಚಡಸಿದಂತಾ ನಿರ್ದ್ಧ ನೀಗೆನ ಪ್ರಾಣಸಂಗಟವಾ ॥ ತಡೆಯಲಾರದ ಲೊಂದೆ
ಮಾತನು । ನಡಸುದೆನ ಲೊಡಂಬಡದೆ ಮೌನವ। ಹಿಡಿವರೇ ವೈದೇಹಿ ಬೇ
ಡೊಪ್ಪೆಂದ ಲಕ್ಷ್ಮಣನೂ ॥ ೧೦ ॥ ಹೇಳಿ ಗಾಡ್ಕಳುಹಲ್ಲದೀಯಡೆ। ಹೂಳಿ
ಸುವೆನೆಂದವಡಕಚ್ಚ। ಚ್ಕೀಳುತಲಿ ಹೂಂಕರಿಸಿ ಹೊಡಿಹೊಡಿರೆಂಬಪೆಟ್ಟನೊಳೂ॥
ಘೋಳಿಡಿಸಲ್ವೈಯ್ಯೆಯೊ ನಿಗ್ರಹ। ತಾಳಲಾರದೆ ನಿನ್ನ ಚರಣಕೆ। ಬೀಳುವೆವು
ದಂಮ್ಮೈಯ್ಯ ರಕ್ಷಿಸುದೆನಲು ಜಾನಕಿಗೇ ॥ ೧೧ ॥ ಯಂದು ನಾನಾತೆರದಿ ಹಳ
ವಳಿ। ಪಂದವನು ಮನಕಿಡದೆ ರಾಘವ। ರೆಂದರೇನಿದು ನಿಜವೆ ಲೋಕವೆ ಮು
ನಿಯೆ ರಘುವರರಾ ॥ ವಂದು ಬೆಟ್ಟಲುಗುವರೆ ಸಟೆಯಿಾ। ಯಂದ ತೋರೆನ
ಚಲಿಸುವಡೆಗೈ। ದಂದವೆಂದಳು ಮನದಿ ಜಾನಕಿ ದೃಢಕೆ ಸರಿಯುಂಟೇ ॥೧೨॥
ಯಲ್ಲರಂದದಿ ನೋಡಿ ಚಲಿಸುವ। ದಿಲ್ಲಿ ಮಾಯವಗೈದ ಡಂಬಕ। ಳಲ್ಲ ಬೆದ
ಸುವಡರಿಯನೇ ಯಿದನಾಡಲೊಂದೊಂದೂ ॥ ಖುಲ್ಲಪುಟ್ಟುವುದೆನುತ ಮೌ
ನವ। ಫುಲ್ಲಿಸದೆ ನಿಶ್ಚಯದ ಚಿತ್ತದಿ। ಪುಲ್ಲಲೋಚನೆ ಯಿರಲು ಪುತ್ಥಳಿಗೊಂ
ಬೆಯಂದದಲೀ ॥ ೧೩ ॥ ಮಾಡಿ ಯಿನಿತೆಲ್ಲವನು ಯತೆಯನು। ಗೂಡಿತ
ಲ್ಲದೆ ಚಪಲಚಿತ್ತಂ। ಟ್ಮಾಡಲಿಲ್ಲಾ ಜಾನಕಿಗೆ ವೈಕೂರ್ವ್ವಣಗಳಿಂದಾ ॥ ನೋ
ಡಿಯಾಕೆಯ ಧೈರ್ಯ್ಯಕಾಶ್ಚರಿ। ಮಾಡಿ ತದ್ರುಕ್ಷಗ್ರ ಕಟ್ಟಿಸಿ। ನೋಡು ಅ
ರುಗುಲಿ ರಾಮಲಕ್ಷ್ಮಣರೆಂದನಸುರೇಂದ್ರ ॥ ೧೪ ॥ ಕೇಳು ಮೂರ್ಖೆಯೆ
ನಿನ್ನ ನಡೆ ಕಟ್ಟಾಳುಗಳ ನೀತೆರನ ಗೈಸ್ನಿನ। ಸೀಳಿಸುವುದುಚಿತೋಕ್ತ ವಿಡುವೆ
ಯೊ ಕಡೆಗು ವಲೆನೆಂದೂ ॥ ಹೇಳುವೆಯೊ ಕುಲಗೇಡಿ ನಿನ್ನರ। ಬಾಳಿನಂತ್ಕೊ
ನೆಯಲ್ಲಿಕಟ್ಟಿಡ ! ಹೇಳಲೋ ಕಣ್ಕೀಳಲೋ ಖಳೆ ಯಂದನಸುರೇಂದ್ರ ॥೧೫॥
ತೊರೆದಳಿಗೆ ವಿಗ್ರಹವ ಕೈಕಾ। ಲ್ಕೊರೆದರೆ ನಕ್ಷಿಗಳ ಕಿತ್ತು। ತ್ತರಿಜ ಸೀಳಿದ
ರೇನು ಕಾಷ್ಟಕೆಕಡೆಗೆ ಕಂಡಿರುವಾ॥ ಶರಣೆಗೇನಕಟಕಟ ಸ್ವಲ್ಪನು। ಕರಿತಭಯ
ವಿಲ್ಲದಲೆ ಸರ್ವ್ವ। ಜ್ಞರಿಕೆಯೊಳಗಳ್ಳಾಡದಿರುವಳ ನೋಡಿದಸುರೇಂದ್ರ॥೧೬॥
ಕೆಚ್ಚೆದೆಯ ಕಿತ್ತದ್ದು ಕಾಗೆಗೆ। ವಿಚ್ಚಿಸುವೆನರಿ ಬೇಡಬೇಡೆನು। ತುಚ್ಚ ಬುಧಿ
ಯ ಗೈವೆ ಯಾಗರಸಿಕ್ಕಿ ಕೊಲಿರೆಂದೂ ॥ ಯಚ್ಚರಿಸಲಾಳ್ಗಳಿಗೆ ಚಿಟಕೆಯು।
ಬಿಚ್ಚುತ್ತೈತಹರರಿದ ಮಾರೀ। ಚಚ್ಚರಿಸುತಸುರೇಶನಾಳ್ಗಳ ನಿಲಿಸಿ ಬೇಗದೊಳೂ
॥೧೭॥ ತಾಳು ಮತ್ತೊಂದೆರಡು ವೇಳೆಯು। ಕೇಳಿ ವೈನವಬಲ್ಲ ಜನರಿಂ ಹೇಳಿ

ಸಂತ್ಯ । ದೊಳಿಸಿ ಕಿಚ್ಚಿಯಾಗಲುತ್ತ್ತಾಳಾ ॥ ಬೀಳದಿರು ಸತಿಯರಿಗೆ ಸತಿಯುರ । ಹೇಳವಿಕೆ ಮನಮೆಚ್ಚುಗೆಂಬದ । ತಾಳಿ ಮಂಡೋಧರಿಯು ಕಳುಹಿದ ಕೆಂದ ಮಾರೀಚಾ ॥ ೧೮ ॥ ತೋರಿ ರಘು ಲಕ್ಷ್ಮಣರ ಕಡುಭಯ । ದೋರಲಂಜುವಳಲ್ಲದವರೆದು । ರಾರು ಯಂಬದನರಿಯಳೇ ಯಿದ್ದೊರ್ಡನೆ ಶೌರ್ಯವನೂ ॥ ತೋರಿಹರು ತನುವೆಂಬದನು ಕಡೆ । ಸಾರಿಹಳು ಅವಳೊಯ್ನದಲಿಕ್ಕೆ। ಸೇರಿಸದಲನ್ಯತ್ನಕೊಳದೆಂದೂಡಿ ಮಾರೀಚಾ ॥ ೧೯ ॥ ತಂತ್ರ ಗಾಡಿಯರಂಗನೆಯರೊಳ । ಮಂತ್ರಗಳ ತುಂಬಸದಳದಶೀಲೆ । ಝಂತ್ರದಂತಹಳನ್ನು ಮೈಣವಗೈವರದರಿಂದಾ ॥ ವುಂತ್ರ ಬಡದಂಗನೆಯ ಕಳುಹೆಂ । ಬುಂತ್ರದಿಂ ದಶಕಂಠ ಕಟ್ಟಿ । ರ್ದ್ದಂತ್ರರನು ಪರಿಹರಿಸಿ ಪೋದನು ಮಾವನೊಡಗೊಂಡೂ॥೨೦॥ ಮತ್ತು ಅಸದಳ ದನುಜರನು ಕಾ । ಪೆತ್ತಿಸಿದನ ಸುರೇಶನೇನೆ । ತ್ನೆತ್ತಿದರು ತಾನೇಕಮಾರ್ಗದಿ ಮುಗಿದು ಕೈಗಳನೂ ॥ ಯತ್ತದೇಳಧ್ಯಾನವನೆ ಬೆಂ । ಬತ್ತಿದವನಿಜೆಗಾರ ಹೋಲುವೆ । ಯತ್ತಲುಂಟವನೀಶನೆಂದನು ಮುನಿಕುಲೇಶ್ವರನೂ ॥೨೧॥ ಯಷ್ಟು ನಿಗ್ರಹ ಗೈದು ಭಯದು । ತ್ಕೃಷ್ಟವಾಧರಿಸಿದರು ಮನವಂ । ದಿಷ್ಟು ಯಿಟ್ಟಗಲದಲೆ ಹೇಗೀಕೀಟಕದ ದೇಹೀ ॥ ಗೆಷ್ಟು ದೃಡವೆನಲೀಯುಗಕೆಸ । ದ್ನಿಷ್ಟೆ ಮಂಡೋಧರಿಯು ಜಾನಕಿ । ಯಷ್ಟೆಯದರಿಂದಾಗಿ ತಾಳಿದಳರಸನೆನೆ ಮುನಿಪಾ ॥ ೨೨ ॥ ಶರಣು ಅವನಿಜೆಗಿನ್ನು ಮುಂದಹ । ದರಿಸುದೆನಲವನೀಶ ಸೀತಿಂ । ತಿರಲು ಅತ್ತೈತಂದ ದಶಕಂಠಾಲಯವಪೊಕ್ಕು॥ ಹರಿಯ ಪೀಠದಿ ಕುಳಿತು ಮಂಡೋ । ಧರಿಯ ಕರಸಲು ಮೋಹಮಲ್ಲನ । ಕರದ ಅರಗಿಣಿಯಂತೆ ಬಂದಳು ರಾಣಿ ಕಟ್ಟಾಣೀ ॥ ೨೩ ॥ ವುಟ್ಟ ದಿವ್ಯಾಂಬರ ವಿಭೂಷಣ । ತೊಟ್ಟು ಸರ್ವಾಂಗದಲಿ ಮೃಗಮದ । ವಿಟ್ಟು ಫಣೆಯಲಿ ಬಟ್ಟು ಜೌವ್ವನೆ ಶ್ರಿಷ್ಟಿಗತಿಶಯನಾ ॥ ಪಟ್ಟ ಮಹಿಷೆಯೊಲೊಲೆದು ಜಗ್ಗ ।ಗ್ಗಿಟ್ಟು ಬರಲಸುರೇಶ ನೆದೆಬಿರಿ । ವಟ್ಟುದಿನ್ನಿಲ್ಲಂಗನೆಯರೊಳಗೆಂದು ನೋಡಿದನೂ ॥೨೪॥ ಮೂರು ಲೋಕದ ನಾರಿಯರ ಚಲು । ಗೋರಿಡಿಂಬವಗೈದು ತಳಿರನು । ಸೇರಿಸಂಬುಜ ಕುಮುದ ಕೇತಕಿ ಮೊಲ್ಲೆ ಕುಂದಗಳಾ ॥ ವಾರಣರೆ ಸಂಚಕ್ಷ ವಿಾನ್ಮೃಗ । ಕ್ಷೀರ ತಿರುಳ ಬುಜಾರಿ ಸ್ವರ್ಣ್ಣವ । ಸೇರಿಸಿದನಜನಲ್ಲಿಗಲ್ಲಿಗೆಯಂದು ನೋಡಿದನೂ ॥ ೨೫ ॥ ಇನಿತು ಸೌಂಧರಿಯಾದ ಕಾಂತೆಯ। ರನು ವಿಲೋಕಿಸಲಿಲ್ಲ ಯಿವಳಿಂ । ದನುಪಮಾಕರರುಂಟೆ ಸಟೆ ಯಿವಳಿಂಗಿತಾಕರವೇ ॥ ಸನುತಗೊಂಡಿಹುದೊಲಿಯು ದಳಬಂ । ದನವದೇಕೆಂಬನಿತರಲಿಕೆ।

ನ್ಮಾರ್ಗನುಕರಿಸಿತಾಹತಕೆ ಯಿಂನಿಲ್ಲೆಂಬ ತೆರನಾಗಿ ॥ ೨೬ ॥ ಬರುವ ಸತಿಯು
ದ್ಲಂಘಿಸುತ ಮುಂ । ಜರಗ ಹಿಡಿದೆಡೆ ಯಿರಿಸಿ ಆಲಿಂ । ಗರೆದು ಕದಪನು
ಕಚ್ಚುತತಿ ಮುದ್ದಿನಲಿ ವೈದಡಹೀ ॥ ಕುರುಳ ನೇವರಿಸುತಲಿ ನಿನ ಗುಣ । ಕರ
ಸಲಿಲ್ಲಾರೆನ್ನ ವಂಚನೆ । ಯರಿದುಆರೈಯಂದ ಮಂಡೋಧರಿಗೆಅಸುರೇಂದ್ರಾ॥
ಕೇಳುತದ ಜೆಚ್ಚುತಲಿ ಕಿವಿಯೊಳು । ಕೇಳಲಿಲ್ಲೀವರಿಗೆ ಕಪಟೋ । ಕ್ತಾಳಿದೆಂ
ಬದದೇನು ವಿಸ್ಮಯ ತೆರವುಗೈರೆಂದೂ ॥ ಕೇಳಿದಂಗನೆಯೊಳಗೆ ಬಹು ಚ ।
ಲ್ವಾಳುತಿಹ ಮಹಿಳೇಂದ್ರಿಯನು ಕಂ । ಡಾಗಲೈದಿಸಿದಂಗನಾಮಣಿಯಂದ ನ
ಸುರೇಂದ್ರಾ ॥ ೨೮ ॥ ತಂದೆಯಾ ಜಾನಕಿಯು ನೀ ಕರ । ತಂದ ವಿವರೆಂತೆನ
ಲು ಆಹವ । ಕೆಂದು ಪೋದಲ್ಲಿಂದ ಲದುವರಿಗಾದುದೆಲ್ಲವನೂ ॥ ಸಂಧಿಸುತ
ವಿಸ್ತರದಿ ವಡಬಡಿ । ಸೆಂದ ಪ್ರಿಯನೋಕ್ತವನು ಕೇಳರ । ವಿಂದಮುಖೀ ಪಿ
ತ್ರುವ್ಯನಾಸ್ಯವನೊಲಿದು ನೋಡಿದಳೂ ॥ ೨೯ ॥ ಆದಿಯಲಿ ನಾರದನು ಪೇ
ಳಿ । ದ್ವಾರದಿಯಿಂದೇನೇನು ವರ್ತನ । ವಾದುದೆಲ್ಲವ ನರುಹಿ ನಿಗ್ರಹಗೈದರೊ
ಡಬಡದಾ ॥ ಭೇದವನು ತಿಳುಹೀಗಲನ್ನುದ । ಕಾದಿಗಳ ಕೊಳೆನೆಂದು ಕುಳಿ
ತಿಹ । ಮೇಧಿನಿಜೆಯಿರವೆಲ್ಲ ಸುತೆಯೊಳಗುಳಿದ ವಾರೀಚಾ ॥ ೩೦ ॥ ನುಡಿ
ನುಡಿಗೆ ಮುಖಬಾಡಿ ಸಿರ ಬೊ । ಗ್ಗಿಡಿದು ಗದ್ಗದಗಳದಿ ಮೇಲುಸು । ರಿಡುತ
ಲೆಡಗೈ ಯಿಟ್ಟು ಕಂದರಕಾಗೆ ಮೂರ್ಛಿಸಿದಾ ॥ ಮಡದಿಯುಪಚರದಿಂದಲೆಚ್ಚ
ರ । ಬಡಿಸಿಯಾಕಿನಿತೆನಲು ಅಂಜಲಿ । ಹಿಡಿದು ನುಡಿದಳು ಮಡದಿ ಚೂಡಾ
ರಂನೆ ನೀತಿಯನೂ ॥ ೩೧ ॥ ಬಲ್ಲೆ ಸಕಲ ಪ್ರಪಂಚವನು ಯ । ನ್ನಲ್ಲಿ ಕೇ
ಳ್ವರೆ ಪರಸತಿಯ ಹೊಲ । ವಲ್ಲವೆಲ್ಲಂಥವನು ಗೈವುದು ಆರ್ಯರಾದರನೂ ॥
ನಿಲ್ಲಿಪುದೆ ನಿನನದರವಿದನಾ । ಸೊಲ್ಲಿಸುವೆ ತಿದ್ದಷ್ಟನದ ಪ್ರಿಯ । ದಲ್ಲಿಲಾಲಿ
ಪುದಸುರನಾಯಕನೆಂದ ಳಿಂದುಮುಖೀ ॥ ೩೨ ॥ ನಿನ್ನ ವಚಕ ಪ್ರಿಯವು ಪ್ರಿ
ಯಿ ಜೇ । ರೆಂನುವರೆ ವಾಮಾಕ್ಷಿ ಪೇಳದ । ಕನ್ನಬಡಲಿಡೆನೆಂದ ಪ್ರಿಯೆ ಕೇಳೀ
ಕಚಿತ್ತದಲಿ ॥ ಸನ್ನುತಳಕುಚಮಧ್ಯ ಹುಲಿಯುಗು । ರಿಂನು ಶೂರನ ಸ್ಪಷ್ಟ
ಹರಿಸಟ । ವನ್ನು ಮುಟ್ಟದರಾರು ಬದುಕಿಹರೆಂದ ಳಿಂದುಮುಖೀ ॥ ೩೩ ॥
ಕೊಲೆ ಹುಸಿಯು ಕಳವನ್ಯಸತಿಯರ । ವೊಲವು ಅತಿಕಾಂಕ್ಷೆಲ್ಲಿ ಜೂಜಿನ ।
ಕಲೆಯು ಬೇಂಟೆಗಳೆಂಬ ವ್ಯಸನಗಳೇಳಗಾಶ್ರಯುವ॥ ತೊಲಗ ಜೇಕೆಂದಾದಿಪು
ರುಷಿಂ । ತುಲಿದ ನೇಕಿವರಿಂದ ಬಹು ದು । ಷ್ಫಲಗಳಹ ವರಿವಂದಕಾಧರಿ
ಸೆಂವಳಿಂದುಮುಖೀ ॥ ೩೪ ॥ ಕರ ಚರಣ ಶಿರ ನಾಸ ಕಿವಿ ಕ । ತ್ತರಿಸವಿಂಗ

ಟ್ಕೊ‍ೞಲಿನಲಿ ತರಿ । ತರಿವವೆಲ್ಲವು ಕೊಲೆಯ ಸಂಮುಂದಪರಪ್ರಾಚಿನಾ ॥ ವರಿ
ಸಿ ಮುಂದನತರದಿ ತದ್ವಿದ । ಗರೆವವೀಗನುಭವಿಸುವರ ಕಂ । ಡರಿದು ತಿಳಿಯಿ
ರೆ ದನುಜನಾಯಕನೆಂದಳಿಂದುಮುಖೀ ॥ ೩೫ ॥ ನುಡಿದವಚಕೊಂವಿರದಲಂ
ನ್ಯೋ । ಕ್ತಿಡಿವುದದಕೊಡಬಡುವುದದೆಸಹ । ಜಡಸಿ ಬಿಡದಾ ಕಾರ್ಯ್ಯವನೆ
ಕೈನೆಡಸಿ ಪಿಸುನರೊಳೂ ॥ ನಡತೆಯಲ್ಲಂನೃತದ ಸಂಮಂ । ತೊಡಗಲಾಗದು
ದೆಸಗೆಡಿಪದೆಂ । ಬಡವನೀವರಿಯದುದೆ ಖಗಪತಿಯಂದಳಿಂದುಮುಖೀ ॥೩೬॥
ಇದ್ದುದೊಂಚಪುದಡಗಿಪುದು ಯದು । ರಿದ್ದುದನುಕಳಲಾಸೆ ತೂಕಳ । ತಿದ್ದು
ದನು ಕಮ್ಮಿಪುದು ಮೊದಲಾದೆಲ್ಲ ವಂಚನೆಯಾ ॥ ಶುದ್ಧ ಕಳವೆಂದೆಂಬದನ್ಯರ ।
ಹೊದ್ದಗೊಡದವರಿಂದ ಕಳವಿನ । ಸುದ್ದಿಯತ್ತದಲಿಹನೆ ಪ್ರಾಜ್ಞಹುದೆಂದಳಿಂ
ದುಮುಖಿ ॥ ೩೭ ॥ ನುಡಿನಗೆಯ ರಸಹಾಸ್ಯದಲಿ ಭ್ರೂ । ಮಿಡಿದು ನೆವದಿಂ
ಮೈಯ್ಯ ಕೈಗಳ । ತಡಹಿ ಮೋಹಿಪುದಂಗಚಾಷ್ಟೆಯ ಭಾವ ಮೊದಲಾದಾ ॥
ಬೆಡಗನ್ಯಾಧಾರ ಲಸತ್ಕಲೆ । ತೊಡಗೆಲೆಲ್ಲಾ ಕೀರ್ತಿ ಸಂಪ । ತ್ಕೆಡಿಸುವದ
ಕಣ್ಣರಿತು ಕೇಳಿಲವೆಂದಳಿಂದುಮುಖೀ ॥ ೩೮ ॥ ನೆರಹೊರೆಯ ಸಂಪದಕೆ ಅನ್ಯ
ರು । ಗರಿವ ಕ್ರುಷ್ಯದ್ವೃತ್ತಿತನ ಶ । ಕ್ತರಿಯದೆಸಗುವ ಕಾರ್ಯ್ಯ ಮೊದಲಾ
ದೆಲ್ಲವತಿಕಾಂಕ್ಷೇ ॥ ಗರೆದರಿಗೆ ಸತ್ಫಲವು ಹೇಗೈ । ತರದೊ ಬರಿಯ ವಿದಾಹ
ವೆಂಬರ । ನರಿಯಿರೇನೀವರಿ ಯಿರೀತೆರನೆಂದಳಿಂದುಮುಖೀ ॥ ೩೯ ॥ ನಿಲ್ಲು
ಮಾತಿನ ಸೋಲು ಗೆಲುವಿಂ । ನಲ್ಲೆ ಹಣದುಡ್ಯಾಡಿ ಸರಿಬೆಸ । ದಲ್ಲಿ ಚತುರತೆ
ಪಗಡೆ ಚದುರಂಗಾದಿ ಖೇಲಗಳೂ ॥ ಯಲ್ಲ ಜೂಜೆನಿಸುವವನರಿತೆಂ । ತೆಲ್ಲ
ಬಿಡಿ ಹೊಲ್ಲೆಂಬ ನುಡಿಯಾ । ದ್ಯೆಲ್ಲ ನೀವರಿಯದುದೆ ತಿಳಿರಿದನೆಂದಳಿಂದುಮು
ಖೀ ॥ ೪೦ ॥ ಹರಿಯರಳೆ ಮುಲವಾದಿ ಮೃಗಪ । ಕ್ಷುರಗ ಪುಡುಪೋತಶ್ವ
ಪಶು ಜನ । ರುರುತರದಿ ಅಟ್ಟೋಡಿ ಭಯಗೊಳಿಸಾಕ್ರಮಿಸಲೆಲ್ಲಾ ॥ ರರಿಕೆ
ಬೇಂಟೆಗಳೆಂಬರೊಳಗಾ । ಚರಿಸಿ ಮುಂದಿನ್ನಾತೆರದ ಭಯ । ವರಿಸಿ ಚರಿಸು
ವರೀಗಲರಿಯಿರೆಯಂದ ಳಿಂದುಮುಖೀ ॥ ೪೧ ॥ ಕೊಂದನೊಡಸೀ ಕೊಲಿಸು
ತಿಹೆ ಘುಸಿ । ಯಂದನಿಗೆ ದಸಿ ಬೆಟ್ಟಿಸುವೆ ಕಳ । ವಿಂದ ಕೈಕಾಲ್ಕೊಯ್ಯುತಿಹೆ
ವಿಟವಿಟೆಯ ನಾಸಿಕವಾ ॥ ಛಿಂದಿಸುವೆ ಜೂಜರನು ವನವಾ । ಸೊಂದಿಸುವೆ
ಬೇಂಟೆಗರ ಶಿರೆಯನು । ಬಂದಿಸುವೆ ನೀ ಗೈವುದಹುದಲ್ಲೆಂದಳಿಂದುಮುಖೀ
॥ ೪೨ ॥ ದ್ರೋಹಿ ಪಾತಕ ಕಳ್ಳ ತುಂಟತಿ । ಗಾಹಿಲನು ನಿಷ್ಠೂರಿ ನಿಃಕ್ಕರು ।
ಣಾಹರಿ ನಡೆಯೇ । ಳರಿಂವಲಿ ಯಿಹಳಾ ದುರ್ಜನವಾ ॥ ಗ್ರಾಹಗೊಂಡರಿ

ಗಾತ್ಮ ತತ್ವಗ । ೪ೂಹೆ ಯಿಲ್ಲೆನ್ನೆಲ್ಲ ಸತ್ಕೃತ । ಸಾಹಸದುಗುವುಪಂತ್ಯಗತಿ ಗೇಡೆಂದಳಿಂದುಮುಖೀ ॥ ೪೩ ॥ ಇದುವೆಯಲ್ಲದೆ ಖಳನ ಕಂಡ । ಲ್ಸದೆವರ ನೃತಸಾಸ್ಯದೊಳು ಮಂ । ಣುದುಗಿಸೆಂಬರು ಕೊಂದರನು ಛೀಮಾಡಿ ಕೊಲ್ಲು ವವೂ ॥ ಹೃದಯವಿಡಲನ್ಯಾಂಗನೆಗೆ ತಲೆ । ಯುದರಿಸುವನವಳರಸ ನತಿಕಾಂ। ಕ್ಷುದೆಯು ಪುಟ್ಟವುದಲ್ಲದೆರಡಿಂ ಜೂಜು ಬೆಂಟಿಗಳೂ ॥ ೪೪ ॥ ನಂಬಗೊಡ ದನ್ಯರನು ಬಹುಭಯ । ವೆಂಬದಾಕ್ರಮಿಸುವದು ಅದರಿಂ । ದೆಂಬಭೇದಗ ಳೆಲ್ಲಪಾಡವನಾದಿಪರಮೇಶಾ ॥ ನಂಬುಜಾಸ್ಯದೊಳುದಿತ ಗೀರ್ವಾ । ಣೆಂಬ ಳಿಂನಿರ್ಣಯವ ಗೈದಿಹು । ದೆಂಬದರಿಯದರಾರು ನೀನರಿಯಂದ ಳಿಂದುಮು ಖೀ ॥ ೪೫ ॥ ಹಿಂದೆ ಮಾಡಿದ ನಿಷ್ಟೆತಪಸಿನೊ । ಳಿಂದು ಸುಖನಾನಿಷ್ಟೆವೆಂ ದಿ । ಷ್ಟ್ಕಂಡಿದರೆ ಯೀನಾನು ಸಿದ್ಧಿಗಳಾಗವೆಂತೆನಲೂ ॥ ಸಂದಿಸಿಪ ವಿಷವಿ ನ್ನ ಮಂತ್ರದೊ । ಳೊಂದು ಬಿಂದೂನದಲಿ ಪರಿಪಡ ದೆಂದುದರಿತಪ್ರಗಲ್ಪನೀ ನರಿಯುಂದಳಿಂದುಮುಖಿ ॥ ೪೬ ॥ ಇದಕೆ ದೃಷ್ಟಾಂತಗಳು ನೀ ಮಂ । ತ್ರದ ಲಿ ಸಾಧಿತನಾಗಿ ಬಲ್ಲಿಂ । ನದರೊಳೇನಾನೂನದಿಂ ದಿವ್ಯಾಂಗನೆಯರೊಳವೂ। ಸಧಯವೊ ನಿರ್ದಯವೊ ನೃಪಿಚಾ । ರದಲಿ ನೀಚ ಪಿಶಾಚರಿರರಂ । ತದಲಿ ರುವರೇ ಪುಣ್ಯದೇವಿಯರೆಂದ ಳಿಂದುಮುಖೀ ॥ ೪೭ ॥ ಶೂರ ಶುಚಿ ಶುದ್ಧತ್ವ ರಾಗಿಹ । ರಾರು ಮುನಿವರರಲ್ಲಿ ತ್ರೈಗುಣ । ತೋರತಿಹವಿನ್ನಿಲ್ಲವನ್ಯರೊಳಾ ವನೆನೆ ಕೇಳೂ ॥ ವೈರಿಯುಪಟಳ ಕಂಜದಮಪರ । ದಾರ ಕೇಳಸದದನ್ಯದ್ರ ವ್ಯಸಿ । ಪಾರಣೆನ್ನೆಲ್ಲುಂಟು ಶ್ರೀಪತಿಯುಂದ ಳಿಂದುಮುಖೀ ॥ ೪೮ ॥ ವುಂಟು ಯಾಗವನಿಚಿಯೋಳೀಗುಣ । ಜಂಟಿಸಿಹವೆಂತ್ನಿನಗೆ ವಲಿಯುವ । ದುಂಟಿಯು ಮುಕ್ಕುಚಿಗೈದ ನಿಗ್ರಹಕಂಜದುದೇ ಧೀರಾ ॥ ವುಂಟು ದ್ರವ್ಯವ ನೇಕತೆರತನು । ವಂಟದಾತ್ಮದ್ರವ್ಯಕನು ಸರಿ । ಯುಂಟಿಯದವಿಗ್ತ್ಯಜಿಸಿ ಬಿಟ್ಟಳಿಗಾರು ಸರಿ ಹೇಳೂ ॥ ೪೯ ॥ ಸರಿಯು ಮುನಿಗಳಿಗಿನ್ನು ಹೆಚ್ಚನು । ತೊರೆಯುಬಹುದವ ರೆಲ್ಲ ತ್ಯಜಿಸಿದ । ರಿರುವದೆಚ್ಚಲ್ಲೆಲ್ಲ ಸಂಪತ್ತಲುವ ಪ್ರಾಯದಲೀ ॥ ತೊರೆವ ರಾರಂಗವನುಕೂಲವಂ । ತರಿಸಿ ಸುಖ ಬಡಿಸುವದು ಮೋಹಿಸಿ । ದುರಿಯುರೀ ಲೋಕಾಖ್ಯಬಾಳುವರೆಂದಳಿಂದುಮುಖೀ ॥ ೫೦ ॥ ಕುಲಸಿರೋಮಣಿಯಾದ ಜಾನಕಿ । ಲಲನೆಯೊಳು ಛಲ ಬೇಡ ಯಿನ್ನವ । ಕೊಲಿವಳಲ್ಲಾದಿಯಲೆಯೇ ನಾದಿದ್ಧರಾಗಿಹುದೂ ॥ ಲಲನೆಯರು ಛಲವಿಡಿದ ಮೇಲಿಂ । ಕೊಲಗರವನಿಯೆ ನೊಗಳೆಸಂಕೆನೆ । ಯಲುಗುವರೆ ಯಿಂನೇಕೆ ಅವಳಾಸೆಂದಳಿಂದುಮುಖೀ॥೫೧॥

ಸಲ್ಲದೀ ನಡೆಯಿಳೆಯೊಳಾರನು । ಹೊಲ್ಲವೈದಿಸದಿರದು ಯಿಾಜಗ । ದೊಲ್ಲಭನು ನೀನಿಂತು ಗೈದರೆ ಭೂಮಿಯಿರುವರಿಗೇ ॥ ನಿಲ್ಲುವದು ಅಪಕೀರ್ತಿಮೇಣಾ। ಪುಲ್ಲಲೋಚನೆವೊಲಿಸುದಾದರೆ । ಯಲ್ಲ ಮುಸುಳಿಸಲಿಲ್ಲವಾ ಭಾಗ್ಯಂದ ಳಿಂದುಮುಖೀ ॥೫೨॥ ತಾನು ಸುಖಬಡದಿರುವ ಕಾರ್ಯಕೆ । ಮಾನುನಿಗೆಕಷ್ಟ್ಯಕೆ ಹಗೆಯುವಿ । ದಾನವೇಕನ್ಯರಲಿ ಕೆಂಡವ ಕೆದರಿ ಮಂಡೆಯನೂ ॥ ಹಾನಿಸುವದದುಬಲ್ಲವಿಕೆ ತನ । ಗೂನಹೀನಗಳಿರದ ಕ್ರಮಸಂ । ಧಾನಿಸುವನವಪ್ರಹುಡನೀ ತಿಳಿಯಂದಳಿಂದುಮುಖೀ ॥ ೫೩ ॥ ಇನಿತು ಅಲ್ಲದೆ ಬಡವರಂಗನೆ। ಯನು ವಿಬಾಧಿಸೆ ಮರಣವಡೆದರು ।ತನಗೆ ತಾನೆ ಪೋಪುದೀಗೀಗೆ ಮುಂದಣ್ಪೊರವದೂ ॥ ಜನಿಸುದೀಗಪಕೀರ್ತ್ರಿ ಪಾತಕ । ನೆನಿಪುದಿರಲಂತಲ್ಲದಲೆ ಯಿಾ । ಗಿನಲಿ ಮಾನ ಪ್ರಾಣಹಾನಿಗಳೆಂದ ಳಿಂದುಮುಖೀ ॥ ೫೪ ॥ ಧರೆಗೆಬಲಯುತರಾಗಿ ಯಿಾರ್ವರ್ರೆ । ಚರಿಪರಲ್ಲಲ್ಲಂಗನರ ಕೈ । ನೆರೆದರವರಾಲಯದಿ ಬಿಟ್ಟಹರಂಪದಿರದೀಕೇ ॥ ಬರುವಳೇ ಲೋಕಾಂಗನರ ತೆರ । ತರುಣಿಯಲ್ಲಿಂನೆಷ್ಟು ಪತಿವ್ರತೆ । ಧರೆಯೊ ತಿಳಿಯರಸದರಭೇದವನೆಂದ ಳಿಂದುಮುಖೀ ॥ ೫೫ ॥ ಬೆನ್ನೊಡನೆ ಬಲವಿಲ್ಲ ವೈಭವ । ವೆನ್ನವದರಿಚ್ಛೆಲ್ಲದೋರ್ವ್ವಳ । ನನ್ನವಡಗೊಂಡೆಲ್ಲಿ ಗುಡಿ ತರು ಗುಲ್ಮದೊಳು ನಿದ್ರೇ ॥ ಗನ್ನ ಯಿಾರ್ವರನಿರಿಸಿ ತಾಕಾ। ಪನ್ನ ಕಾಯ್ವನ ಮನದ ದೃಡವೆಂ । ತೆನ್ನಬಹುದವನೀಶ ತಿಳಿಹೊಳವೆಂದಳಿಂದುಮುಖೀ ॥ ೫೬ ॥ ವಲ್ಲದೆಲ್ಲರತೆರದಿ ಗೃಹದೊಳು । ನಿಲ್ಲದಲೆಬಂದಿಹಳು ಬೇಡೆನ । ಲಲ್ಲಿ ನಿಲ್ಲದಲಾಕೆ ಬೆಂನಂಟದಲೆ ಅವರಾಗೀ ॥ ನಲ್ಲೇ ಕರತರಲಿಲ್ಲವತಿಪ್ರಿಯ । ದೊಲ್ಲಭಗಲಿಕೆಯಿಂದಲಂನುದ । ಕೆಲ್ಲ ತೊರದಿಹಳೈದಿತೀಪಾಪೆಂದಳಿಂದುಮುಖೀ ॥ ೫೭ ॥ ಬರಲಿ ಪಾತಕ ನೆರೆಯೆರವರವ । ಹರಣವೀಗುಳಿವೆತ್ನವಾದರೆ ! ಸರಿಯು ಸಾಕಿನ್ನಷ್ಟೆ ಆಬಲಯುತರು ಲೆಂಕೆಯನೇ ॥ ತೆರಳಿಸದಲಿರರಷ್ಟರೊಳಗೀ ! ತರುಣಿ ತಪದಾಹಾಗ್ನಿದೀಪವ । ನುರುಹದಿರದ ಸುರೇಶ ನೋಡನುವೆಂದ ಳಿಂದುಮುಖೀ ॥೫೮॥ ಜೆಡೆ ಮುಡಿಯು ಕೊಡೆ ಮೂರು ಅಪವಳ ! ವಡೆವನದರೊಳಗಾನತರಕ್ಕೆ । ವಿಡಿವರರಸರು ಮುನಿಯರೆರೆಗಳಿಗೆಸಗಿದುಪಸರ್ಗಾ ॥ ಕಿಡಿಸುವದು ತನತಾನೆ ಸ್ತ್ರೀಯರು । ಹಿಡಿವ ಛಲಕ್ಕೈಯ್ಯೊಡನೆ ಮುಂಬೆಂ । ಬಿಡದೆ ಕೆಡಿಸುವ ಕೆಡುಕ ಗುಣರರಸೆಂದಳಿಂದುಮುಖೀ ॥ ೫೯ ॥ ನಾರಿಯಹುದೊಲವಿಂದ ಲೊಲಿಯದೆ । ಮಾರಿಯುಂಬಂತ್ಯೆ ಸಿರಿಗೆ ಖಿಡಿ । ದೋರಿದಂತೀಸತಿಯ ದೆಶೆಯಿಂದಾಗದಿರದೆಂದೂ ॥ ದೂರ ದ್ರಿಷ್ಟಿಯು ತಿಳಿದು ತಂ

ದವಿ । ಚಾರವಡಗುವತೆರದಿ ತನುಭವ । ಮೇರೆ ವರಿದಾಲಯಕೆ ಕರಸಿನ್ನೆಂದ
ಳಿಂದುಮುಖೀ ॥ ೬೦ ॥ ಇಟ್ಟು ಮನೆಯೊಳಗಾಳ್ಗಳಿಂ ಕರೆ । ಬಿಟ್ಟು ಅಳಿ
ಯರತೆರದಿ ಸಂತಸ । ಬಟ್ಟು ವಿಮರಸಗೈಯ್ಯಲೀ ಯಪಕೀರ್ತಿ್ತಶಲೆ ಪಾಪಾ॥
ಹುಟ್ಟಿದೊಂಶೋದ್ಧಾರ ಸತ್ಕೀರ್ತ್ತಿಟ್ಟ ಜನ್ಮಾಂತರದ ಹಗೆತನ। ಬಿಟ್ಟು ಹೋ
ಗುವದರಸ ತಿಳಿದೆಸಗೆಂದಳಿಂದು ಮುಖೀ ॥ ೬೧ ॥ ಪುತ್ರಿಭಾವನೆ ಕೇಳ್ದ ಕ್ಷಣ
ನಿ। ನ್ನತ್ರಕೈದನ್ನುದಕವಸ್ತ್ರವಿ । ಚಿತ್ರಭೂಷಣ ವೆರಸಿ ಲೀಲೆಯೊಳಾಗ ಸನ್ಮು
ಖದೀ ॥ ಚಿತ್ರಬಡುವಂತೆಲ್ಲ ರತ್ಥಿಯ । ಸೂತ್ರ ಪುತ್ಥಳಿಯಾಹಳೆಂಬೊಚ।
ಮಾತ್ರದಲಿ ತಿಳಿಯರಸ ಬೇಡುವೆನೆಂದಳಿಂದುಮುಖೀ ॥ ೬೨ ॥ ಕೂಡಿ ಬಹು
ಜನ ಸ್ತ್ರೀಯರನುಭವ । ಮಾಡುತಿಹೆ ಮೇಣಿನ್ನು ಆಸೆಯ । ಮಾಡಿವರೆ ವಿಪಾ
ಸಲೆಯರೇನರೆ ಪುದ್ವಹವ ಗೈಕೋ ॥ ಬೇಡ ನಿರ್ಮಾಲ್ಯಲ್ಪಜನಗಳು । ಮಾ
ಡುವಂತಕಟಕಟ ನೀಖಗ । ನಾಡಿಗತಿಶಯನೆಂದು ಮಂಡೋಧರಿಯು ಮರುಗಿ
ದಳೂ ॥ ೬೩ ॥ ಕೇಳುತೆಲ್ಲಂಗನೆಯ ಜಾಣ್ಮೆಗೆ । ತಾಳಿ ಹರುಷವ ಕುರುಳ
ಬೆರಳಲಿ । ನೀಳಿಸುತ ಕದಪಲುಗಿ ಮುದ್ದಿಸಿ ಮೋಹನಾಂಗಿನಿಯೇ ॥ ಪೇಳುವ
ನಿತಲ್ನಿನ ವಿವೇಕವ । ಕೇಳುದೆನ್ನೊಚ ಪ್ರಿಯದಿ ತಂದಿಂ । ನೇಳುವದೆ ಸುತೆಯ
ನ್ನಲು ನಾಲಗೆಯೆಂದನಸುರೇಂದ್ರಾ ॥ ೬೪ ॥ ಸಿರಿಯೆ ತ್ರೈಲೋಕಾಂಗನೆಯ
ರಿಳೆ । ತರಳೆರಿಹರಲದೆಷ್ಟು ಮಂದಿಯು । ನೆರದರೇನರಘಳಿಗೆ ಸಾಕಾಮೋಹ
ನಾಂಗನಿಯಾ ॥ ಸರಸವೆನ್ನಭಿಲಾಷೆಯನು ಪ್ರಿಯ । ಕರದಿ ತೀರಿಸಿ ಕುರಿತು
ಕರುಣದಿ । ತೆರಳಬೇಕವಳೆಡೆಗೆ ಬೇಗದೊಳೆಂದನಸುರೇಂದ್ರಾ ॥ ೬೫ ॥ ಆವು
ದಾನೊಂದೆತ್ನದಲಿ ವಚ । ವೀವಯತ್ನದಿ ಮೌನವನುತೆ । ಕ್ರಾವಲಂಬನಗೈಸು
ಅನ್ನೋದಕಕೆ ಅಲ್ಲಿಂದಾ ॥ ತಾವಿಗೈತಹಳೆಂಬ ಪ್ರಿಯಗಿಂ । ನೀವ ವುತ್ತರ
ಪತಿವ್ರತಕೆ ಸಂ । ಭಾವವಲ್ಲೆಂದರುಹಸ್ಮರಣೆಯ ಗೈಯ್ಯೆ ಮಯ ತನುಜೇ
॥ ೬೬ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ ।
ರೊಲವಿನೀ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರ
ಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸು ಮುಕ್ತಿ
ಯರಸನ ಕಥೆಯ ಸದ್ಬುಧರೂ ॥ ೬೭ ॥

ಅಂತು ಸಂಧಿ ೩೯ಕ್ಕಂ ಪದನು ೨೩೪೪ ಕ್ಕಂ ಮಂಗಳಮಹಾ ಶ್ರೀ ಶ್ರೀ.

ನಲವತ್ತನೆಯ ಸಂಧಿ.

ಕಪಿ ಧ್ವಜಾಗಮದ ಸಂಧಿ.

ಅರಿದು ಖರಧೂಷಣರ ಸಂಹರ । ತೆರಳಿ ಖಗ ಸುಗ್ರೀವ ರಾಮನ । ಚರಣವನು ಮರೆಹೊಕ್ಕ ತನ್ನಾಗಮವ ನೂರ್ನ್ನಿರ್ಸಿದಾ ॥ ಪಲ್ಲವಿ ॥

ಕೇಳಿದ್ಯೆ ರಾಜೇಂದ್ರ ಆಸತಿ । ಹೇಳಿದುತ್ತರವನು ನೀತಿಯನು ಸಿಲೆ । ಕೇಳಿದರೆ ಕರಗುವುದು ಕಡೆಗಾಲ್ಶೈದುದದರಿಂದಾ ॥ ಕೇಳಲಿಲ್ಲಾ ಗಾಗಿನಿ ಮ್ಮೊ ಖ್ಯಾತ ನೆನಿಸಿದ ಲೋಕದೊಳು ಪ್ರತಿ । ಹೇಳದೆದ್ದಳು ಮರುಗಿ ಮಂಡೋದರಿಯು ಮನನೊಂದೂ ॥ ೧ ॥ ತಿಳಿವದಿನ್ನೊಂದಂತ ದಂತರಿ । ಸುಳಿಯಲ್ಲೋಯೇನದನು ಪೇಳುವ । ಡಳುಕುಬಹುದೆಂದಂಗನಾಮಣಿ ಯನ್ನೊ ಳಾಖ್ಯಿಡಾ॥ ಉಳುಕುವರೆ ಪೇಳೆಂದ ಪ್ರಿಯನವ । ಳೊಳಗೆ ನಾನಿಂತುಲಿಯೆ ನಿನ ನಡ ವಳಿಯು ಹೀಗಿಹುದೆಂದರೇ ಗತಿಯೆಂದ ಳಿಂದುಮುಖೀ ॥ ೨ ॥ ವಕ್ಕ ಸತಿಯುತ್ತರಕೆ ನೀತಿಳಿ । ದಕ್ಕರದಿ ಅನ್ನೋದಕಕೆ ಮನ । ವಿಕ್ಕುವಂತೆಸಗಾಚಿಗಾ ಬಲ್ಲೆಂದು ತಕ್ಕೈರ್ಸಿ ॥ ಸೊಕ್ಕು ಜವ್ವನೆ ಕಳುಹೆ ಚಾಮರ । ವಿಕ್ಕುತೆತ್ತಿದ ಛತ್ರ ಸಹಿತನ್ನಿಕ್ಕ ವೂಳಿಗರಾದಿ ಸಖಿಯರು ನೆರೆದ ರಾಕ್ಷಣದೀ ॥ ೩ ॥ ಬೇಡ ಬಹುಜನರೆಂದುಮಿತಿಯೊಡ । ಗೂಡಿಯ್ಯೆನೂರಾಳಿಯರಲಡಿ । ನೀಡಲಂಚೆಗ ರೆದವು ಮಂಡೋಧರಿಯ ನಡೆಗಂಜೀ ॥ ಕೂಡೆ ಮದ ಮಾತಂಗ ತನುವಲ್ಲೆ । ದಾಡಿ ಶುಂಡಿಲನಿಳೆಯು ಬಿಟ್ಟಡಿ । ನೀಡಿತನಸೀನಾಥನಾ ಸತಿಹೊರಡುವವಸರದೀ ॥ ೪ ॥ ಸುತ್ತ ಬಹ ಸಖಿತಾರೆಯರ ಮ । ದ್ಯತ್ತ ರೋಹಿಣಿಯಂತೆ ನಡೆ ಝ । ಗತ್ತಸತಿ ಗೀರ್ವಾಣ ರಮಣೋದ್ಯಾನಕೈದಿದಳೂ ॥ ಇತ್ತರದ ತರು ಗುಲ್ಮಲತೆ ಸೊಂ । ಪೆತ್ತವಾಲೋಕಿಸುತ ವಜ್ರದ । ಬಿತ್ತಿಯುಗ್ರೈತ್ಯಂದಳಾ ಸೀಮಂತಿನಿಗೆದುರಾಗೀ ॥ ೫ ॥ ಆಣಿ ಚಿನ್ನದ ಗೊಂಬೆಗಲ್ಲ । ಲ್ಯಾಣಿಕದ ಹರಳೊತ್ತಿ ಕಸ್ತುರಿ ಸಾಣೆಯಲಿ ಸೊಂಪಿಳಿಸಿದಜನಿಗೆ ಜನರ ಜಾಣ್ಮೆಯನೂ ॥ ಕಾಣಲಿರಿಸಿದ ತೆರದಿ ಕಡುಸು । ಪ್ಪಾಣಿ ಪದ್ಮಾಸನದಿ ಕುಳಿತಹವೇಣಿ ಕ್ಷೋಣಿಜೆ ಮುಗಿದ ಕೈಗಳಳೆಸೆದ ಳೀಕ್ಷಿಸುತಲ ॥ ೬ ॥ ಮರುಗಿ ಅಕಟಕಟೇಮಹಾಸತಿ ।

ಗರೆದ ಪಾಪೇನಪರದೊಳಗದ । ಕರುಹನಾಗೆಮ ದನುಜನಾಯಕನೇನ ಗೈದಿ
ರ್ದ್ದಾ ॥ ತರುಣಿಗೀ ತೆರಗರೆಯಲಿವಳಿಂ । ದ್ಬರುವ ಮೃತ್ಯುವಿಗಾಲಯದಬು ।
ದ್ಧೊರ ಯಿತಿನಯನಿಗೆಂದು ಮಂಡೋಧರಿಯು ಮನದಲ್ಲೀ ॥ ೭ ॥ ಯಾಗಿನೆ
ತ್ನೆಲ್ಲ ಪರಸಮ್ಮಂ । ದಾಗಿ ತೋರುವದಿದಕೆ ಪರಿಹರ । ವಾಗಲಿಲ್ಲೌಷಧಿಯು
ಅನುಭವತೀರ ಕಡೆಅಂತ್ಯಾ ॥ ಕಾಗಿ ಯಿಾಕೆಯು ತಂದ ಮಾರಿಯು । ಕೂಗಿದಂ
ತಾಯ್ತೆಂದು ಮನಕುಂ । ದಾಗ ಮಂಡೋಧರಿಯು ಬಂದಳು । ಜಾನಕಿರ್ದ್ದೆ
ಡೆಗೇ ॥ ೮ ॥ ನೋಡಿಸರ್ವ್ವಾಂಗವನು ಯವೆಯಲು । ಗಾಡದಲೆ ಕುಳಿತಿರುವ
ಭಾವಕು । ರೂಢಿಗತಿಶಯವಾದ ರೂಪಿಗು ಬಡುತಲಾಶ್ಚರಿಯಾ ॥ ಕೂಡೆ ಕುಳಿ
ತವಳೆಡೆಗೆ ಬಂದಿಂ । ತಾಡಿದರು ದೈತ್ಯೇಶನಾ ಬಿಡ । ಬೇಡಿರೆಂದುಲಿದಿರ್ದ
ನೆನೆ ಕಾಪಿರ್ದ್ದ ರಾಕ್ಷಸರೂ ॥ ೯ ॥ ಆದಡವನಾಗ್ನೆ ಯೊಳಗೈದಿಹ । ಳಾದ
ಳೆಂದಾಳ್ಗಳಿಗೆ ಮಾರೀ । ಚೋದಲಾನತಗೈದು ಮಂಡೋಧರಿಗೆ ಯಿರ್ದ್ದೆಡೆಗೇ॥
ಪೋದರಸುರರ ಮಿಗಿಲಿ ನಾಳ್ಗಳ । ನಾದರಿಸಲೆತ್ತೆತ್ತ ಲಂತರ । ವಾದಿ ತಿಲ
ಬಿಡುಹಿರದೆ ಕತ್ತಿಯು ಕಿತ್ತು ತುಂಬಹರೂ ॥ ೧೦ ॥ ಹೆದರಿಹ ಸುರೇಂದ್ರನಿಗೆ
ಕಳ್ಳಂಕದಲಿ ಜಾನಕಿಯೊಯ್ವರೆಂದದು । ಭುದದ ಕಾವಲಗೈದಿಹರೊ ನೀವಂಜಿ
ರಾಘವಗೇ ॥ ಚದುರೆ ತಂದಂತಲ್ಲದೆದುರೆದು । ರೊದಗಿಮೂದಲೆಯಿಂದಲೆಲ್ಲರ।
ನುದುರಿಸೊಯ್ವರು ಯೆನಲು ಪಿತೃವ್ಯನಿಗೆ ಮಯ ತನೂಜೇ ॥ ೧೧ ॥ ಅಂಜು
ವರೆ ಅರಿ ಅಂತ್ಯ ಕಾಲದಲಿ ಘ । ನಂಜಯರು ಇನ್ನೆರಡು ದಿನವಾ । ಯಂಜ
ಯದಿ ನೀವಿಹಿರಿ ಅಲ್ಲದಿವರಿಗೆ ಬಂದಿಹರೂ ॥ ಕಂಜಲೋಚನೆ ಯ್ಯೆಪಿರಾಯು
ವಿ । ಭಂಜನೆಂದರಿದಿಹುದು ಪಿತನೆಂ । ದಂಜಲಿಯ ಸತಿಯುಲಿಪಿ ಮಂಡೋದ
ರಿಯು ಕೇಳಿದಳೂ ॥ ೧೨ ॥ ವುದಯವಾದೀವರಿಗೆ ಆದಂ । ತದನು ಕೇಳಿದೆ
ಕಷ್ಟದೆಸೆಯಂ । ಬುದನು ಕೇಳಿದೆನೆಮ್ಮ ದೆಸಿಯಿಂದೊದಗಿತೆಂಬುದಕೇ ॥ ಹೆ
ದರಿ ಯನಜನ್ಮದೊಲು ನೀನ ತಿ । ಳಿದೊದಗಿ ಬಂದೆನು ಯಿದನು ಪರಿಹರಿ ।
ಪದಕೆ ಚಕ್ರಿಯ ರಾಣಿ ಮಂಡೋಧರಿಯು ನಾನೆನಲೂ ॥ ೧೩ ॥ ಮನಕೆ
ತರದಿರೆ ಜಾನಕಿಯೆ ಸಖಿ । ಯೆನುತ ತಿಳಿಯರವಲ್ಲ ನುಡಿವಿ । ಟ್ಟೆನವಿಚಾರವ
ದೇನು ಅರುಹಾದಂತ್ಯ ನಿನಮನಕೆ ॥ ಸನುತವೋ ನಹಿಸನುತವೋ ಯಂ । ಬ
ನುವ ಮನಕಿಟ್ಟಿತ್ತು ಮೌನವ । ಸನುಕರಿಪೆ ಮಾತಾಡು ಮಹಿಳೇಂದ್ರೆನಲು ಖ
ಚರೇಂದ್ರೀ ॥ ೧೪ ॥ ಬಂದ ಸತಿಯುರ ನೋಡನವೆ ನುಡಿ । ನಂದ ಕಿವಿಗಿಡ
ದೇಕಚಿತ್ತದೆ । ಸಂದರಾತ್ಮಜೆಗಪುರದೆಸಗಿದ ಬಹಳ ಪುರಸಗರ್ ॥ ದಿಂದ

ದೇಹತ್ಯಕ್ತ ತಾಳಿಹ| ಳೊಂದು ನುಡಿವಿಡಳೆಂಬುದನು ಮನ | ಸಂದು ಮಂಡೋ ಧರಿಯು ಪೇಳಿದಳದಕೆ ಪರಿಹರವಾ ||೧೫|| ಲಾಲಿಸೌ ಘೋರೋಪಸರ್ಗದ | ಕಾಲದೇಹತ್ಯಕ್ತ ಪರಿಹರ | ಕಾಲ ಪರಿಯಂತಲವೆ ಮತೊಂದಲ್ಲದಂತದನೂ || ಪಾಲಿಸಿದೆ ಯಿನ್ಯಾಕೆ ನಿನನುಡಿ | ಯಾಲಿಸೈದಿಪೆ ನಿನ್ನ ನಿಗ್ರಹ | ಕಾಲಮು ಕ್ತುಲಿ ಯನಲು ಮಂಡೋಧರಿಯು ಜಾನಕಿಗೇ || ೧೬ || ಸತ್ಯವತಿ ನಿನಗಿನ್ನ ದೋಷದ | ಗತ್ಯವಿಲ್ಲುಲಿಯಂದು ನಾನಾ | ಸ್ತುತ್ಯದಲಿ ಕದಪಲುಗಿ ಕರುಣಾ ಶೃಗಳನುದುರಿಸುತಾ || ಭೃತ್ಯಳಂದದಿ ಬೇಡುತಿಹ ಸಂ | ಪತ್ಯವತಿ ವಚಕಾ ಲಿಗಳನು ವಿ | ಭಿತ್ಯಗೈದಾಲೋಕಿಸಲು ಖಚರೇಂದ್ರ ಮಹಿಳೇಂದ್ರೀ || ೧೭ || ಬಿಡದೆ ನೋಡರೆಫಳಿಗೆ ಹನಿ ತೊ | ಟ್ಟಿಡಲು ನೇತ್ರದಿ ಕಷ್ಟದೆಸೆ ಪರಿ | ಫಡಿ ಪೆನೌ ಸುಕುಮಾರಿ ಅಳುಬೇಡೆಂಬ ಖೇಚರಿಗೇ || ತೊಡಗೆ ನೀ ಭಯಕಳುಕ ನಿನಕಂ | ಡೊಡನೆ ವೈದೇಹಿಯನು ಕಂಡಂ | ತಡಸಿ ಮನ ಮರುಕದಲಿ ಆಸ್ರ ಟ್ಟೆನಲು ಮಹಿಳೇಂದ್ರೀ ||೧೮|| ಕಂದದಿಹ ಮುಖ ಕುಂದದಿಹ ದನಿ | ಯಂ ದಗೆಡದಂಗಾಗದಿಂ ಕುಳಿ | ತಂದದಂಜಲಿ ಬಿಟ್ಟು ತೊಡೆಯಗ್ಗಿ ರಟ್ಟು ಹಸ್ತ ದಲೀ || ಇಂದಿರಾಂಬಕಿಯಿರುವ ನಿರ್ದ್ದರ | ದೊಂದು ಬಿಗಿಸರ ವಚನಕಾಶ್ಚರಿ| ಯಿಂದ ಮಂಡೋಧರಿಯು ನುಡಿವನಿತರಲಿ ಮಹಿಳೇಂದ್ರೀ || ೧೯ || ಯನ್ನ ಆಯಶವನ್ನು ನೋಡು | ತ್ತನ್ನಕರುಣದಿ ಪುತ್ರಿ ಸಮವಹು | ದೆನ್ನುತಲೆ ನೀ ಬಂದೆ ಬಂಧನವನ್ನು ಪರಿಪಡಿಪಾ || ಮುನ್ನ ಸಂನ್ಯಚಿಯಾದುದಂಬಿಕೆ| ಯನ್ನು ಪೊರ್ದ್ದಿದ ಖಗ ಮ್ರುಗಾವಳಿ | ಗನ್ನು ಕಷ್ಟಿಲ್ಲೆನಗೆ ಚಿಂತೇನಮ್ಮ ಕೇಳೆನಲೂ|| ಮಾತೆ ನನಗೆಲ್ಲಾಯ್ತು ಸೌಜ | ನ್ಯಾತರದು ನೀಕೆಳ್ವದನು ಸಂ | ಪ್ರೀತಿಗೊಳಿ ಸೆನೆ ತಂಗಿ ಕಳುಹುವೆ ನಿನ್ನ ಪ್ರಿಯನೆಡೆಗೇ || ಘಾತಿಸದಲಂಗವನು ಅನ್ನದ | ಕಾತು ಕಲಿಯಾಗಂಗವನ್ನಕೆ | ಜಾತಿಯತ್ತಿದದಹುದು ಮಹಿಳೇಂದ್ರೆನಲು ಖ ಚರೇಂದ್ರೀ || ೨೦ || ಮಕ್ಕಳಗ್ರಕ್ಕರದ ಮಾತೆಯು | ಸಕ್ಕತಂಗಿಯರೆಂಬರಲ ದೆಂ | ತಕ್ಕುಮೆನಲರಗಿನೊಲು ಮಾತೆಯುರುಗಳು ಮರದಂತಾ || ಮಕ್ಕಳೆಂಬ ರು ಯನಗೆ ಯೇನರೆ | ಯಕ್ಕ ಅನ್ನೋದಕಕೆ ನಿನ ಮನ | ದಕ್ಕರವೆ ಸಂ ತೋಷ ಖಚರೇಂದ್ರೆನಲು ಮಹಿಳೇಂದ್ರೀ ||೨೧|| ಮೂರುದಿನವಾಗಿನ್ನು ನೀನಾ| ಹಾರವನು ಕೊಳದಿರಲು ಸಂಗಟ | ದೋರದಿರದಂಬುಜಾಕ್ಷಿ ದೇಹವತ್ತುರಿಯ ದಿರಲಾನು || ಗಾರು ಪಡವದನೋಡಿಕೊಳು ಫಲ | ಹಾರವಾದರು ಬೇಡುವೆ ನು ಯಿದ | ಕೋರೆನೋಡದಿರೆನಲು ಮಹಿಳೇಂದ್ರಿಯೊಳು ಖಚರೇಂದ್ರೀ ||೨೨||

ಹಸುವು ತ್ರುಷೆ ಯರಡಂಗವನು ಪೀ । ಡಿಸಲು ವುಸುರೊರಡುವದೆ ಬಳಲಿಕೆ।
ಹಿಸಿಯದೇ ಕರಚರಣ ಮನಚಂಚಲದೊಳಜ್ಞಾನಾ॥ ಮುಸುಕದೆಯನಗನ್ನೋ
ದವುಕದ। ಹೆಸರ ಜ್ಞಾಪಕಬಾರದೆನ್ನೆ। ಕ್ಕಸದತೆರದುದರಿಪುದು ಖಚರೇಂದ್ರೆ
ನಲು ಮಹಿಳೇಂದ್ರೀ ॥೨೪॥ ನಿಷ್ಟೆಯೇಕಾರಣದಿ ಮನಸಂ। ತುಷ್ಟೆಬಡುವದು
ಆತುರಗಳೆಯ। ನಿಷ್ಟವಹವವರಲ್ಲಿ ದೇಹಸ್ತಿತಿಯ ಕುರಿತೆಲ್ಲಾ॥ ಸ್ರೇಷ್ಟಮುನಿ
ಮಾಸೋಪವಾಸದ। ನಿಷ್ಟೆಯಂತ್ಯದಿ ಪಾರಣೆಯಗೈ। ವಷ್ಟೆ ನೀನೇನರಿಯ ಮ
ಹಿಳೇಂದ್ರೆನಲು ಖಚರೇಂದ್ರೀ॥೨೫॥ ಕೊಳಲುಬೇಕಾಹಾರವನುನೀ। ತಿಳಿದರೀ
ತಿಯೆ ಸಹಜ ನಿಜಶ। ಕ್ತುಳಿದು ಮುನಿಯಹಾರಕೊಳನಷ್ಟಾನುತಡವನಕಾ॥
ಕೊಳೆನು ಆಯಾಸಾದಡಾಗ್ನಿಮ। ಬಳಿಗೆ ಕಳುಹುವೆ ಘಮ್ಮ್ಯದೊಳು ಬಹು।
ಬಳಲುವಿರಿ ಖಚರೇಂದ್ರಿ ದಯಮಾಡೆನಲು ಮಹಿಳೇಂದ್ರೀ॥ ೨೬॥ ಬಂದು
ವಗಲಿದ ಬಳಲುಯೇಕಾಂ। ತೊಂದು ಕ್ಷುದೆ ತೃಷೆ ಕೂಡ್ಚತುರ್ವಿಧ। ದಿಂದ
ಲಾದಾಯಾಸ ನಿನಗಾಕ್ರಮಿಸಿ ಕೊಲ್ಲುವದೂ॥ ಒಂದು ಕ್ಷಣ ಬರಲೆನಗೆ ದ
ಣುವಿ। ಲಿಂದು ನೀನಾಹಾರ ಕೊಳದಿಹು। ದೊಂದೆ ವೆತ್ಥಾರ್ಯಾಸ ಮಹಿ
ಳೇಂದ್ರೆನಲು ಖಚರೇಂದ್ರೀ॥೨೭॥ ಅಗಲಿದಾಪ್ತರ ಕ್ಷುಧೆ ತುಷೆ ಚಿಂ। ತೆ
ಗಳು ನನಗಿಲ್ಲುಗ್ರತರ ಬೇ। ಸಗೆಯೆ ಬರುವೆಡೆಗೀದುದ್ಯೆದುವ ಸಮಯದೊಳಗೆ
ಷ್ಟೊ॥ ಹಗರಣವೊ ನಿಮಗೆಂಬ ಸಂಶಯ। ದೆಗೆದೆನಲದೆನಚಿಂತೆಯನು ಮನ।
ಕೊಗಿಸೆ ತಿಳಿ ಖಚರೇಂದ್ರಿ ಯಿಂನೈದೆನಲು ಮಹಿಳೇಂದ್ರೀ॥ ೨೮॥ ಹೇಗೆನೀ
ಬಹಸಮಯ ಬೇಸಗೆ। ಯಾಗಿ ನೀನಿಂನೈದುವೆಡೆಗೇ। ನಾಗಿ ಕಾಯ್ವುದೊ
ಬಿಸಿಲು ಯಂಬಂತಾಗಿ ಯನಕುರಿತೂ॥ ಈಗಲೀ ಯನ್ನೋಪದೇಶವ। ತಾಗಿ
ಸಿದೆಯನ ಸಿರಿಗೆ ನೀಮ್ಮ। ತ್ಯಾಗಿ ತಪಗೈದಿರುವೆ ಮಹಿಳೇಂದ್ರೆನಲು ಖಚರೇಂ
ದ್ರೀ॥ ೨೯॥ ಈಹೊಳವು ಯನಗಿಲ್ಲ ನಿನಗೆಂ। ದೂಹಿಸದೆ ನನ್ನಾಪದೇಶ।
ಗ್ರಾಹಿನೀ ನರಿವರ್ತ್ಥ ವಿನ್ನೇನಿಂತು ತಿಳಿದಿಲ್ಲೀ॥ ಆಹದೇನಾನಾದಿ ಮೌನ।
ಗ್ರಾಹಗೊಂಬೈದೆನುತಲಾ ವೈ। ದೇಹಿಯೊಪ್ಪಿದಳಿರ್ದ್ದ ರೀತಿಯೊಳರಸ ಚಿತ್ತೈ
ಸೂ॥ ೩೦॥ ನುಡಿದು ಹೀಗಳವಡಿಸಿ ಮೌನದ ಮ। ಡದಿಯಾಸ್ಯವ ನರೆಘಳಿ
ಗೆ ಚಿಂ। ಬಿಡದೆ ನೀಕ್ಷಿಸಿ ಮರುಗಿ ನೀಬಳಲಿನ್ಮ್ರ ಸಂಪದವಾ॥ ಸುಡುವುದೇ
ಕಬುಜಾಕ್ಷಿ ಅನ್ನವ। ಬಿಡುವುದೇಕಾ ನೈದಿಸುವೆನೆಂ। ಬೊಡಂಬಡಿಕೆಗನು
ವಡದೆ ಮಹಿಳೇಂದ್ರೆನಲು ಖಚರೇಂದ್ರೀ॥ ೩೧॥ ನುಡಿವಳಲ್ಲಿಂನೊಡನೆ ಯಿ
ನ್ನಾ। ಪೊಡವಿ ಜಂಬೊಲ್ಪೊತದೆಲೆ ಕೈ। ಕೊಡಹಿದವೂ ಯುಲರಿಂದ ಮಂಡೋ

ಧರಿಯು ವಂಪೆರಡೂ ॥ ನುಡಿ ವಿಡಲು ಮಾತಾಡದಿರೆ ಖತಿ । ಬಡುತ ತೆರಳಿಂ ತೆಲ್ಲವನು ಪ್ರಿಯು । ನೊಡನೆ ಪೇಳಲು ನೋಳ್ಪೆನೆನುತಿರಲತ್ತ ಲಸುರೇಂದ್ರಾ ॥ ೩೨ ॥ ಶ್ರೀವರರು ಪಾತಾಳಲೆಂಕೆಯೊ । ಳಾವ ಸತಿ ವೀರಾಧಿತನ ಪರಿ । ಸೇವನೆಯೊಳಿರಲಂತರಂಗದಿ ಅವನಿಜೆಯನಿಟ್ಟೊ ॥ ಕಾವದಿನವ ನಿರೀಕ್ಷಿಸುತ ರಘು ದೇವ ಕೇಶವರಿರಲು ಅತ್ಸು । ಗ್ರೀವ ವಾನರದೀವಿಯೊಳಗಿಱುತವನೀನಾಯಕನೆ ॥ ೩೩ ॥ ಖರನ ಸಂಹರ ಪರಿಯಲಿರಿಸಿದ । ಚರನು ಪೋಗತ್ಸನ್ನೆಯೊಳು ಖಗ। ವರನ ಕರೆದೇಕಾಂತ ಸಮಯಕೆ ಯೋಗ್ಯನೆಲೆಯಲ್ಲೀ ॥ ಇರಿಸಿ ಕರಗಳ ಮುಗಿದು ಖರನು । ತ್ತರಿಸಿವರು ಧೂಷಣನ ಸಹಿತರ । ಸರಿವುದೆನೆ ಚರಚಪಲಗತಿಯಂಬಾಪ್ತನವನೀಶಾ ॥ ೩೪ ॥ ಕೇಳುತಾ ಹತವೆಂಬಶಬ್ದ ಕೆ । ತಾಳಿವಿಸ್ಮಯವರೆಘಳಿಗೆ ಮೋ । ಲಾಕನೀಕ್ಷಿಸಿ ಹೇಗೆ ಹೇಗಾವಿವರ ವೊದಲಿಂದಾ ॥ ಹೇಳು ನಿಶ್ಚಯವಾದರಮುವೋ । ನಾಳು ಖರಧೂಷಣರ ಹರಿಸಿದ । ರೇಳಿಗೆಯನೇನೆಂಬುದನುಚರನೆಂದ ಸುಗ್ರೀವಾ ॥೩೫॥ ಕಾಣದಾಗಮು ವುಲಿಯನೊಡನೈ । ದಾಣಿಯನು ನೀತಿಳಿರಾಗೆನ । ಪ್ರಾಣಕೆಗತಿ ಕುಲಾಂಬರ ಹಂಸನೆನೇ ಕೇಳೀ ॥ ಕ್ಷೋಣಿಯೊಳಗಾ ಅಸುರರೆದುರಹ । ತ್ರಾಣರಿಲ್ಲೆನಿಸಿರ್ದರನು ಹತ । ಗಾಣಿಸಿದುದಾಶ್ಚರ್ಯ ಚರನೆಂದಾಡಿದೆನೆ ನೃಪತೀ ॥ ೩೬ ॥ ಕೊಟ್ಟು ಭರತಗೆ ರಾಜ್ಯಸಂಪ । ತ್ತಿಟ್ಟು ಜಾನಕಿ ನಿಲದಲಿರೆ ಬೆಂ । ನಿಟ್ಟು ರಘು ಲಕ್ಷ್ಮಣರು ತೆರಳಿದರಾಗ ಪರದೇಶಾ ॥ ಬಟ್ಟೆಯೊಳಗೀ ಮೂವ್ವರಿಗೆ ನೆರ । ಳಿಟ್ಟ ಮೂವ್ವರೆಸಹಯುವಲದಿಂ ನಿಟ್ಟಸುವದಾರಿಲ್ಲ ಖಗಪತಿಯುಂದನಾ ಸುಭಟಾ ॥ ೩೭ ॥ ಧರಣಿಬಿಡಲೆನ ವನಿಜೆಯು ಸ್ವಯಂ । ವರದ ಪ್ರಬಲತ್ವ ಸುರರನು ಕೊಂ । ದಿರವಿಗರುಗುಲಿಯಾಗಿ ಭರತನು ಹೇಯುವನು ತಳೆದಾ ॥ ದವಿದು ಅರಸನಬೇಡೆ ಕೈಕಿಲೆ । ಸಿರವ ದಶರಥ ಬೊಗ್ಗಿ ಸುತಲಾ । ವರಜಗಿತ್ತಾಧರೆಯನೆಂದೈತಂದ ರಾಘವನೂ ॥೩೮॥ ಬರುತ ಸಿಂಹೋಧರಗೆ ಬುದ್ಧಿಯ । ನೊರೆದು ಕನ್ಯಾತರ್ಥಾದಿಗಳ ವಿಸ್ತರಿಸಿ ಯಲ್ಲಿಂ ದಂಡಕಾರಣ್ಯವನು ಸೇರಿರಲೂ ॥ ಖರನ ಸುತ ಯಿಾರಾರು ವರುಷ । ಸ್ಮರಿತ ಮಂತ್ರಕೆ ಚಂದ್ರಹಾಸೈ । ತರುತ ಲಕ್ಷಣ ಗೊಲಿದು ಶಂಭುಕ ಸತ್ತುದನು ಪೇಳೀ ॥ ೩೯ ॥ ಸೂರ್ಪ್ಪನಖಿಯರಿದ್ಯೆದೆ ನಾಸಿಕ । ಬೇಪ್ರ್ಡಿಸಲರಿದಸುರಬಲ ಸಂ । ದರ್ಪ್ಪದೊಳಗೈದಾಹವದಿ ಖರ ಧೂಷಣರು ಸತ್ತಾ ॥ ನೇರ್ಪ್ಪ ವೀರಾಧಿತನು ಮುಗುಟಡಿ । ಗರ್ಪ್ಪಿಸಲು ಪೂರ್ವಾವನಿಯುಕೊಡಿ । ಸಿರ್ಪ್ಪರಾ ಪಾತಾಳಲೆಂಕೆಯೊಳಸುರವಲ್ಲಣರೂ ॥ ೪೦ ॥ ಇನಿತು ಗೈದ

ವನೋರ್ವಲಕ್ಷ್ಮಣ । ಕೊನೆಗು ರಾಘವನೈದಲಿಲ್ಲೆನಿ । ತೆನಲು ಬಹುದಾಮು ಹ ರಸತ್ವವ ಬೇಗದೊಳಗೈದೀ ॥ ವನಚರಾಧಿಪನಾದ ಸುಗ್ರೀವ । ನನೂ ಕರತ ಹುದೆಂದು ಯಿದು ವೊದ । ಲೆನುವದೆಲ್ಲವಪೇಳಿ ವೀರಾಧಿತನು ಕಳುಹಿದನೂ॥ ಯೆಂದುದಾಲಿಸೀ ಮಾರುತಿಯೊಳೆ । ನೊಂದಪೇಳದೆ ಜಂಬೂನಗರಕೆ। ಬಂದು ಜಾಂಭವಗಂತರಂಗದೊಳರುಹಿದೆಲ್ಲವನೂ ॥ ಹೊಂದಿಬಹ ಕೆಲಬಲಸಮೇತದಿ। ಬಂದರಾಕಾಶದಲಿ ರಣದ ವ । ಸುಂಧರಾಗ್ರೈತಂದು ತೋರಿದನಾದಿಚಪಲಗ ತೀ ॥೪೨॥ ನೋಡಿಯಾಹತ ವಾಹಿನಿಯನೊಲಿ । ದಾಡಿಪರ ಸುಗ್ರೀವಜಾಂಭ ವ । ಗಾಡಿದನುಯಿಂತಿಷ್ಟು ಬಲಖರಧೂಷಣರು ಸಹಿತಾ ॥ ಝಾಡಿಸಿದನೋ ರ್ವಂ ದಂಡವನೆ । ನಾಡಶೂರಕಟಕಟ ನುಡಿವಾ । ತಾಡುವನಿತಲ್ಲೆಂಬ ಕೌ ತುಕದಾಳಿ ಖಗವರರೂ ॥ ೪೩ ॥ ಕರೆದು ವೊದಲೀ ವಾರ್ತೆಯರುಹಿದ । ಚ ರನಯೈದಿಹರೆಂದು ನೀ ಪೋ । ಗರುಹು ವೀರಾಧಿತಗೆ ಬರಹೇಳಿದರೆ ಬಹೆನೆಂ ದೂ ॥ ತೆರಳಿಸಲುವೇಗೈದಿ ಅಂತ । ಸ್ತರಲಿ ಪೇಳಿದ ಚರನ ನುಡಿಯನು । ಕರಿಸಿ ವೀರಾಧಿತನು ರಾಘವನೆಡೆಗೆ ಪೋಗೆರಗೀ ॥ ೪೪ ॥ ದೇವ ಕಿಷ್ಕಿಂದಾಧಿ ಪತಿ ಸು । ಗ್ರೀವ ಜಾಂಭವ ಸಹಿತ ತವಪದ । ಸೇವನಭಿಲಾಷೆಯೊಳು ಬಂ ದಿಹರಂತರೀಕ್ಷದಲೀ ॥ ಆವಸತಿಗೊಂಡಿಹರು ಯನೆ ರಘು । ದೇವ ಲಕ್ಷ್ಮಣ ಗರುಹೆಸೈಜ್ಞಾ । ಭಾವವೊಳು ಬರಹೇಳು ಖಗಪತಿಯ ಂದವನಚ್ಚುತನೂ॥೪೫॥ ಕಳುಹಲಾವಾರ್ತೆಯನು ಸೀಗ್ರಿಳೆ । ಗಿಳಿದು ಚಂದ್ರಾದಿತ್ಯರಂದರ । ಬಳಿಗೆನಡೆ ತಂದಿಟ್ಟು ನೀವಾಳಿಯುಲಿ ಸಾಷ್ಟಾಂಗಾ ॥ ಗೊಳಿಸಿ ರೂಪ್ಯ ಸ್ವರ್ನಗಳ ಪೂ । ಮಳೆಯ ಗರೆದಾ ರಕ್ಷಸರಕೊಳು । ಗುಳದಿ ಜಯಿಸಿದರಿಂಗೆ ಯಾರೆದುರೆಂದು ಹೊಗಳುತಲೀ ॥ ೪೬ ॥ ನಿಂದ ಖಗ ಸುಗ್ರೀವ ಜಾಂಬವ । ರೆಂದವೇತ್ರಾರ ವವನಾಲಿಸಿ । ಮುಂದುಜಗಿಸವರ್ಕ್ಕರವ ಹಿಡಿದೆಡೆಯೊಳಗೆ ಕುಳ್ಳಿರಿಸೀ ॥ ಕೊಂ ಡನೋರ್ವನಾಜ್ಞೆಗನುಸರ । ರೆಂದು ಪೇಳುವದೆಲ್ಲ ಲೋಕೋ । ಕ್ತ್ರೊಂದಿದ ಪರದ ಪಾಪಪುಣ್ಯೈನಿತೆನಿಪುದೆನೆ ರಘುಜಾ ॥ ೪೭ ॥ ಮಾಡಿಸಿದದಾರಿಂದಲದಕ ನು । ಗೂಡಿಸುವ ದಾವನನೊ ಆದತಿಳಿ । ದಾಡಲರಿಯದೆ ಅವನು ಯಿವನೆಂ ದೆಂಬ ಲೋಕಾಖ್ಯಾ ॥ ನೋಡಿ ನಿಶ್ಚಯು ಖಗರೆ ನಿಮು ಕ್ಷೇ । ಮಾಡಿರೆನೆ ತವ ಚರಣ ದರುಶನ । ಕೂಡಿತದೆ ಸುಕ್ಷೇಮು ರಾಘವನೆಂದ ಸುಗ್ರೀವಾ ॥ ೪೮ ॥ ಅನುಭವೇನಾ ಪಡೆದ ಪರಿಣಾ । ಮೆನಿತು ಪೇಳಲಿಯುಂದು ಮುಖಕಿರಿ । ದನು ಕರಿತ ಸುಗ್ರೀವ ತಲೆವಾಗಿವಕೆ ಜಾಂಭವನೂ ॥ ಮನುಕುಲಾಂಬರ ಸೂರ್ಯ

ಕೇಳವ । ನನುವ ಯಿನನೆಂಬರಸಗೀರ್ವರು । ತನಯರಾದರು ವಾಲಿ ಸುಗ್ರೀವೆಂಬ ಬಲಯುತರೂ ॥ ೪೯ ॥ ಕೊಟ್ಟು ಪದವಿಯು ವಾಲಿ ಕೈಕೆಳ । ಗಿಟ್ಟು ಯುವರಾಜತ್ವವನು ಕೊ । ಟ್ಟಟ್ಟುಸುಗ್ರೀವನಿಗೆ ತೆರಳಿದ ಸೂರ್ಯಪಿತತಪಕೆ॥ ಅಟ್ಟೆ ಅನುಜನ ಸ್ತ್ರೀಯರನು ಶರೆ । ಯಿಟ್ಟ ವಾಲಿಯು ಬಗ್ಗಿಸುವಡಳ । ವಟ್ಟೆದಲೆ ಮರೆಹೊಕ್ಕನಾರಾರದನು ಬಿಂನವಿಪೆ ॥ ೫೦ ॥ ವೊಬ್ಬಳಿರೆ ಶ್ರೀಮಾಲೆಯಂಬನು । ಜಿಬ್ಬರಿಗೆ ಅಸುರೇಶ ಬೇಡಿಸ । ಲಿಬ್ಬರೊಳಗಿವನೊಪ್ಪುಲಿಲ್ಲಾ ವಾಲಿಯವಗಿತ್ತೂ ॥ ಹಬ್ಬಿಸಿದ ಸಖ ತನವಕ್ರೋದನ । ನುಬ್ಬಿಸಿದ್ಧನವರಿಂದಲಿವನುಲಿ । ದಬ್ಬರವ ಕಿವಿಗಿಡದುದಾಸಿನ್ಗೈದ ದಶಕಂಠಾ ॥ ೫೧ ॥ ನಾಚಿಯುಲ್ಲಿಂದೈದಿ ಮರುತಿಗೆ । ಶೂಚಿಸಲು ನೀವೀರ್ವರೆನಗೆ ಸ । ಮಾಚರಿತರಲ್ಲುಂಟೆ ಪಕ್ಷಾಪಕ್ಷ ನಿಮನಿಮ್ಮಾ ॥ ಯೋಚನೆಗಳೇನೊ ನೀವ್ನೀ । ವಾಚರಿಸಿರೆನ ನಿಮ್ಮ ಬಲಕರ । ರ್‍ಯಾಚಿಸದೆ ಹದ್ದಾದ ಸುಗ್ರೀವಾಗ ರಘುವರನೆ ॥ ೫೨ ॥ ವಾಲಿಯಂದುಲಿದನರಲೋಕದಿ । ನಾಲಿಸಿಲ್ಮಹಸಾಮಿಯಂಬನು । ಕೂಲಗೊಂಡಿಹನಾತ ಬೇಡಿದುದಿಯ್ಯದಿರ್ದ್ದರಿಗೇ ॥ ಕಾಲನವನಾಗಿಹನು ಯಿವನೆತಿ । ಪಾಲರಿಂಬೆಸಗೊಳಲು ಖರಹತ । ನಾಲಯವು ನಿನಗೆನಲು ಕಾಪಿಟ್ಟರ್ದ್ದನೊಂದಾಳಾ ॥೫೩॥ ಗೈದು ರಣ ಪಾತಾಳಲೆಂಕೆಯು । ನೈದಿದೆಲ್ಲೊರ್ತನವನಿಮಭ್ಯ। ತೈದಿಸಲು ತವ ಚರಣ ದರುಶನದಿಂದ ಕೃತಕೃತ್ಯಾ ॥ ವೈದಲೈದಿಹ ಕರುಣದೊಳಗಾ । ರೈದು ರಕ್ಷಿಸಿರೆನುತ ಲಂಜಲಿ । ಗೈದ ಜಾಂಬವನರಸ ರಾಘವ ಗರುಹಸ್ಮರಣೆಯಲಿ ॥ ೫೪ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನೀ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯು ಸದ್ಬುಧರೂ ॥ ೫೫ ॥

ಅಂತು ಸಂಧಿ ೪೦ ಕ್ಕಂ ಪದನು ೨೩೪೯ ಕ್ಕಂ ಮಂಗಳಮಹಾ ಶ್ರೀ ಶ್ರೀ.

ನಲವತ್ತೊಂದನೆಯ ಸಂಧಿ.

ಬಲಿ ಪ್ರಹರಣದ ಸಂಧಿ.

ಪಾಲಿಸಲು ಸುಗ್ರೀವ ನೊಚಕನು । ಕೂಲದಿಂದಂಗದನ ಮೂರ್ಛೆಯು । ಜಾಲದೊಳಗಿಟ್ಕೊಂಡ ಬಲಿಸಚಿವರನ ಲಕ್ಷ್ಮಣನೂ ॥ ಪಲ್ಲವಿ ॥

ಅವನಿಪತಿಯುವಧರಿಸು ಯಿನಿತೆ । ಲ್ಲವನು ಕೇಳಿದ ರಾಘವನು ಜಾಂ । ಭವಗೆ ಅಭಯವನಿತ್ತು ವೀರಾಧಿತನ ನೀಕ್ಷಿಸುತಾ ॥ ಭುವನ ಜಂಭುಕ ಲಕ್ಷ್ಮ್ರಣಗೆ ಕಂ । ಣೆವೆಯ ಸೈಗ್ನಿಸಲಾಗ ಲಕ್ಷ್ಮ್ರೀ । ಧವನುಭಯು ಬೇಡೆಂದ ಸುಗ್ರೀವನಿಗೆ ವಹಿಲದಲೀ ॥ ೧ ॥ ಆನಕಧ್ವನಿ ಬುದ್ಭುದದಿ ಸಂ । ಧಾನ ಖಗ ಚತುರಂಗಬಲದವಿ । ದಾನದಲಿ ಕೈಮುಗಿದ ವೀರಾಧಿತನು ವಿದ್ಯೆಯುರಾ ॥ ಧ್ಯಾನಿಸಲು ಗರುಡಾಂಕಹರಿ ವೈ । ಮಾನ ವೈತರಲಾಗಲರುಹ । ಧ್ಯಾನದಲಿ ರಘು ಲಕ್ಷ್ಮ್ರಣಾರೋಹಿಸಿದ ರವನೀಶಾ ॥ ೨ ॥ ಏರಿದನು ಸುಗ್ರೀವ ಜಾಂಭವ । ನೆರೆವೀರಾಧಿತನು ವೈಮಾ । ನೇರಲಂಬರಪಥಕೆ ರಘುವರ ಲಕ್ಷ್ಮ್ರಣಾದಿಗಳೂ ॥ ಸಾರಿ ದಳವಾಕಾಶ ತೆರಳುವ । ಮೇರೆಯಲಿ ಮೊಳಗೆನಿಸಿ ಯಾನಕ । ದೋರೆ ತಂಬಟ ಸಿಡಿಲ ಸ್ವರಕಡುವಾಗಲೈದುವೆಡೆ ॥ ೩ ॥ ಹೊಳೆವ ಮಿಂಚೇ ಖಡ್ಗಗಳ ಝುಳ । ಝುಳಿತರಥ ಕಿರಿಘಂಟೆ ರವತ । ದ್ಮ್ರಳಿತದಲಿ ಭೋರಿಡುವ ಘನ ದಂತಿನನಿಗಡ್ಡೈಸೀ ॥ ದಳವು ಬರಲಲ್ಲಿಹದೇಶದ । ಕಳೆಯ ನೀಕ್ಷಿಸುತೈದಿ ಕಿಷ್ಕಿಂ । ದ್ಪೊಳಲಕಂಡಾಶ್ಚರಿಸಿ ಕೇಳಿದ ರಾಮ ಜಾಂಬವನ ॥ ೪ ॥ ಮಧ್ಯದೇಶಗಳೊರ್ಣನೆಯು ಮನ । ವೇದ್ಯಗೊಳಿಸಿದೆ ಆವುದೀಪುರ । ಸದ್ಯಪೇಳೆನಲಲ್ಲೆ ನಿಲಿಸೊಯ್ಮ್ರಾನವಂಜಲಿಯಾ ॥ ಹೋಧ್ಯದಿಂದೀನಗರವನೆ ಅನ । ವದ್ಯದಿಂದಾಕ್ರಮಿಸಿ ದೋರ್ಬಲ । ಮಧ್ಯದಿಂದಿಹ ವಾಲಿ ಯಿದೆ ಕಿಷ್ಕಿಂದ ನಗರವನೇ ॥೫॥ ನೋಡಿ ಯಾಪುರ ಯಿರುವಸೌಂಧರ । ನೋಡಿ ಪ್ರಜೆಗಳ ಲಾಲಿತವದಳ । ಗೂಡಿ ಯಿರುವರ ಮನೆಯು ಸೊಗಸಾದೆಲ್ಲವವಲೋಕಾ ॥ ನೋಡಿ ಆಶ್ಚರಿಯೇನು ಪುಣ್ಯೊಡ । ಗೂಡಿತೆಂಬೊಡೆಯನಿಗೆ ಬಿನ್ನಹ । ಮಾಡಿದನು ತತ್ಪುರದ ವರ್ಣನೆ ಕಿರಿದ ಜಾಂಬವನೂ ॥ ೬ ॥ ಮೂರು ಸುತ್ತಿನ ತಾಂಬ್ರಪರಿಧಿಯು । ಸಾರಿ ಡೆಂಕಣಿ ಮುಗಿಲ ಅಟ್ಟಣೆ । ದ್ವಾರರುವತ್ನಾಲ್ಕು ಕ್ಷುಲ್ಲಕದ್ವಾರವಲ್ಲದಲೆ ॥ ಸ್ಯಾರಿದಾರಾಮದಲಿ ಪಸುರುಡಿ । ನಾರಿಯೋ ನವರತ್ನಭೂಷಾ । ಗಾರೆಯೋ ಯಂಬಂತೆ ತೋರುವದರಸ ಚಿತ್ತ್ರೈಸೂ ॥ ೭ ॥ ವಳಗೆನಾನಾಜಾತಿಗಳ ಮನೆ । ಗಳ ವಿಲಾಸವ ನೋಡು ಪರದರ । ನಿಳಯಗಳೊಳಿಹ ರತ್ನರಾಸಿಗಳಲ್ಲೆವೇಸಿಯುರಾ ॥ ಬಳಗವದಿಗೋಸರ್ವರನು ಪಿಡಿ । ಯೊಳಗೆ ಯುಡಗಿಪ ಚಲುವೆಯುರ ಕಂ । ಗೊಳಿಸಿ ನೋಡವನೀಶ ಲಕ್ಷ್ಮ್ರಣನೆಂದ ಜಾಂಬವನೂ ॥ ೮ ॥ ಕಮಲಮುಖ ಕುಮುದಾಕ್ಷಿ ಕುಂಜರ । ಗಮನ ಕಂಬುಗ್ರೀವ ಶಳಿನಡು ! ಭ್ರಮರಕುಂತಳಾ ಪೀನಕುಚ ಬಲ್ಪಾದ ಪೊರವಾರೂ ॥ ಸುಮನ

ಸಾಂಗದವಾಳೆ ತೊಡೆ ಝುಷ । ಸಮದ ಜಂಘದ ಕಮಟಚರಣದ । ರಮಣಿ
ವೇಸಿಯರೀಕ್ಷಿಸೆನೆ ರಾಘವಗೆ ಜಾಂಬವನೂ ॥ ೯ ॥ ಘಟ್ಟವಾಳರವಾಟೆಯಲಿ
ಪೂ । ವಟ್ಟುತಿಹ ನಾರಿಯರ ಕಡುಚಲು । ವಿಟ್ಟಸುತ ಲಂಬರದ ಪತ್ತಿಗೆಯಾ
ಣಿಕಾರರನೂ ॥ ದಟ್ಟಸುತಲಲ್ಬಿನಿಸಿನಂಗಡಿ । ಯಿಟ್ಟರೆಡೆ ಹಯಖಡ್ಗ ವೊದ
ಲಾ । ದೊಟ್ಟರನು ತೋರಿಸಿದ ಜಾಂಬವ ರಾಮಚಂದ್ರನಿಗೇ ॥ ೧೦ ॥ ಊ
ರನಾರಿಯರೆಲ್ಲ ಪೊತ್ತಿಹ । ನೀರಕೊಡಗಳು ಸ್ವರ್ಣರೂಪ್ಯ ಸ । ಕಾರವಲ್ಲದಲಿ
ಲ್ಲ ತಾಂಬ್ರಿತ್ತಾಳೆಯರಪಿದೊಡೇ ॥ ಚಾರುರತ್ನಾಭರಣದಲಿ ಶೃಂ । ಗಾರದಪ್ಸ
ರೆಯರನುಭಂಗಿಪ । ನೀರೆಯರ ನೋಡಸುರಹರನೆಂದಾಗ ಜಾಂಬವನೂ ॥೧೧॥
ಭಾವಭಂಜನನರಮನೆಯು ರ । ತ್ನಾವಲಂಬನ ಸೌದಗಳ ಚ । ಲ್ವೀವವಪ್ಸ
ರರಂಗಭವಿಯನು ನಿತ್ಯ ಮಂಗಲವಾ ॥ ಸೇವನೆಯೊಳೊಪ್ಪಿರುವ ತ್ರೈಜಗ ।
ದೇವ ಮುನಿಸೂಪ್ರತರ ಭಕ್ತಿಭ । ರಾವಲಂಬನ ವಾಲಿ ಚಿತ್ರೈಸವನಿಜೆಯ ರ
ಮಣಾ ॥ ೧೨ ॥ ದೇವನರಮನೆ ಯದುರೊಳಗೆ ಖಗ । ದೇವನರಮನೆ ಭವ
ನವಾಸಿಗ । ರಾವ ಸತಿಯಂತೆಲ್ಲ ರತ್ನವಿರಾಜರಾಜಿಯಲೀ ॥ ಕೇವಲೊಯ್ಬ
ತ್ರವನು ನೋಳ್ಪಜ । ನಾವಲಂಬನ ಗೈವದದರುಭ । ಯಾವಲಂಬನ ಸಚಿವ
ಸೇನಾನಾಯಕರ ನಿಳಯಾ ॥ ೧೩ ॥ ಸುತ್ತ ಭೂಸುರ ವಿಭುಧರಾಲಯ । ಬಿ
ತ್ತರಿಸುತಿಹವರಮನೆಯ ಸಂ । ವತ್ತಿನಲಿ ವೊಡ್ಡೋಲಗಾಲಯವ ಮರನಾಸ್ಥಾ
ನಾ ॥ ವೆತ್ತಿದಂತಿಹುದಿನ್ನು ಹೊರಗಣ । ಸುತ್ತಿನಲಿ ಚತುರಂಗ ಬಲಕನು ।
ವೆತ್ತಸಾಲೆಯ ಚಲ್ವನೋಡಿಳೆಯಾತ್ಮಜೆಯ ಪ್ರಿಯನೇ ॥ ೧೪ ॥ ಆತಗಿಹಬಲ
ದೊಳಗೆ ಪುಷ್ಪಕ । ಜಾತವೇಳಕ್ಷೋಹಿಣಿಯ ಗಜ । ವಾತೆರಕೆ ಚತುರಾಂಶ
ಹೆಚ್ಚಿನಲ್ಲೀ ದಿವ್ಯಾಶ್ವಾ ॥ ಚಾತುರದಬಾಗುಚ್ಚನಾಲ್ಕಿಂ । ಬಾತಪಾಯ್ದಳವಿ
ಷ್ಟುಖಗಸಂ । ವ್ರಾತದಳ ಯಿಳೆಯಾಣ್ಮ ಕೇಳಾ ವಾಲಿ ವೈಭವವಾ ॥ ೧೫ ॥
ಇಲ್ಲದಿಹ ಬಿರಿದಿಲ್ಲ ವಿಧ್ಯವ । ಬಲ್ಲದೋರ್ವಲದೊಳಗೆ ಭೂಮಿಯ । ತಲ್ಲಣಿಪ
ಸಾಹಸಿಯು ಯಾಗಿತರಿಲ್ಲದುದ್ರುತದೀ ॥ ನಿಲ್ಲಗೊಡದಿಂನಿ ವನಸ್ತ್ರೀಯರ । ನೆಲ್ಲ
ಶರೆಗೈದಾಲಿಸೀ ಖಗ । ನಲ್ಲಿ ಕರುಣದಿ ಬಿಡಿಸಿ ಕೊಡು ಧರೆಯುಂಬ ಜಾಂಬವ
ನೂ ॥೧೬॥ ಕೊಟ್ಟು ಅಭಯವ ಚಪಲಗತಿ ಖಗ । ನಟ್ಟದನು ಸುಗ್ರೀವಗ
ರ್ದ್ದಿಳೆ । ಬಿಟ್ಟು ಸುಖಬಾಳೆಂದು ವಾಲಿಗೆ ಪೇಳಿ ಬುದ್ಧಿಯನೂ ॥ ಅಟ್ಟಿತಹು
ದೆಂಬರಸ ರಾಘವ । ಗಿಟ್ಟು ವಂದನೆಯಿಂದ ಕಿಷ್ಕಿಂ । ದ್ಪಟ್ಟಣಕೆ ನಡೆತಂದು
ಪೊಕ್ಕನು ವಾಲಿಯೋಲಗವಾ ॥೧೭॥ ನಿಂತು ನೋಡಿವನಮರಪತಿಗಂ । ತಿಂ

ತುಅಧಿಕೀಲೋಕದಲಿ ಸಮ । ವಾಂತರಿಲ್ಲಕಟಕಟ ಸಕಲೊಯ್ಯುವದ ಘನತೆ
ಯಲೀ ॥ ಯಂತು ನುಡಿವನೊ ರಘುವರರಬಲ । ವಂತವರಿಯದೆ ಕೆಡುವನೋ
ನಾ। ನೆಂತು ಪೇಳುವೇ ನಿವನ ಸಂಪತೆಂದು ಚಪಲಗತೀ ॥ ೧೮ ॥ ರಾಮಲ
ಕ್ಷ್ಮಣರೆಂಬರೇ ನಿ । ಸ್ಸೀಮರೀಲೋಕದಲಿ ಯವರಡಿ । ಗಾಮಿಸಿದ ಸುಗ್ರೀವ
ನದರಿಂದರ್ಧಭಾಗವನೂ ॥ ಭೂಮಿ ಅವನಿಗೆ ಕೊಟ್ಟು ನೀ ಸು । ಪ್ರೇಮಗೈವೆ
ಯೊವಲದೆ ಕೋಪದೊ । ಆ ಮಹರಿಗೆದುರಾಗಿ ನಡವೆಯೊ ವಾಲಿಯನೆ ಚ
ರನೂ ॥೧೯॥ ಚರನ ನುಡಿಗಾ ಸಭೆಯಜನ ಕಡು । ಬೆರಗುಪಡೆ ನೃಪನೆಂದು
ಬದುಕಿದ । ರರಿಯೆ ಯಿವನುಪಟಳವದಲ್ಲದೆ ಬದಲನಾಡಿದರೂ॥ ನರಿಯೆಯಿಾ
ವರಿಗೀಗಚರಗೊ । ತ್ತರಿಸಿತೋ ಪಡೆದಾಯು ಸೂರ್ಯಜ । ಗೆರವೋಸರಿಬೇ
ರಲ್ಲವೀ ದೂತಾಖ್ಯವೆನುತಿರಲೂ ॥೨೦॥ ಕೇಳಿ ಚರನೋಕ್ತವನು ನೃಪನೊ ।
ತ್ತಾಳು ಸಚಿವನ ನೋಡಿ ಚರನೊಳು । ಹೇಳಿದನು ಕೇಳೆಲವೋ ಮಹಸ್ವಾಮಿ
ಯಂಬೋಕ್ತಾ ॥ ಹೇಳಬೇಕೆಂಮರಸನಿಗೆ ಅರಿ । ದಾಳ ನೀನಲ್ಲೆನಲುಅಹಿತಕ
ಕೋಳಿನೊಳಗುಳಿದಾಗ ಲಂತೆಂಬೆಂದ ಚಪಲಗತೀ ॥ ೨೧ ॥ ಬಲಿಯನಾಮೆನ
ಬಲಕೆ ತಾಳ್ದಂ । ತುಲಿವೆ ಯಿಾನುಡಿ ರಾಮ ಲಕ್ಷ್ಮಣ । ರಲಘುತರರೆಂದಾಶ್ರ
ಯಿತ ಸುಗ್ರೀವಗಿಳೆಯಿಾಯ್ಯಾ ॥ ಉಲಿದು ನನಕಳುಹಿದರೆ ರಾಘವ । ನೆಲನ
ಕೊಡಿಸುವಶಕ್ತ ನವನಿಂ । ನಿಲುವ ಸುಗ್ರೀವೆಲ್ಲಿ ತೋರವನೆಂದು ಘರ್ಜಿಸಿದಾ॥
ತಾಳು ಹೋ ಹೋ ಮಂತ್ರಿಗಳಿಗು । ತ್ತಾಳ ಬಹಳವರೊರ್ತನೆಯ ನೀ ।
ಕೇಳಲಿಲ್ಲದರಿಂದ ವೀರಾವೇಷವನು ತೋರ್ಪ್ಪೆ ॥ ಹೇಳಲೇ ಖರಧೂಷಣರ
ಕೊಂ । ದಾಳುತನ ವೀರಾಧಿತಗೆ ಪಾ। ತಾಳಲೆಂಕೆಯ ಕೊಟ್ಟು ಬಂದಿಹರೆಂದ
ಚಪಲಗತೀ॥೨೩॥ಗಗನಗಾಮಿನಿಯಾದಿ ಬಹುವಿ । ದ್ಯಗಳನೊಲಿಸಿಹನಧಿಕಶಕ್ತಿ
ಯ ! ಹೊಗಳಲಾಗದು ಯಿಾರ್ವರೇಬಂದಿಹರು ದಳವಿಲ್ಲಾ॥ ಜಗಳಕೋರ್ವನೆ
ಲಕ್ಷ್ಮಣನುಅವ। ರುಗಳಕೊಂದವನೆಲ್ಲರೈತಂ । ದ್ಗಗನದಲಿನಿಂದಿಹರನೋಡಲ್ಲೆಂ
ದಚಪಲಗತೀ ॥೨೪॥ ಸತ್ತ ಖರಧೂಷಣರ ವಾರ್ತೆಯ । ಬಿತ್ತೆ ಖಗನಾಸ್ಥಾ
ನಭೂಮಿಯೊ । ಳುತ್ತು ಪತಿಸಿದ ಖಚರ ಸಸಿಗಳಲಾದ ಸಿರತೆನೆಯೂ ॥ ಸು
ತ್ತಿದವು ಚರನುಸುರಿನ ನಿಲನ। ವತ್ತರದೊಳದನರಿದ ಖಗಪತಿ। ವತ್ತಿ ಸಿಹ್ಮಧ್ವ
ನಿಯಗೈದನು ಅದುರಲಾಸ್ಥಾನಾ ॥ ೨೫ ॥ ಬಹನೆ ಸುಗ್ರೀವನಗೆ ಬೆಂಬಲ ।
ವಹರೆ ರಘು ಲಕ್ಷ್ಮಣರು ನಿಶ್ರೀ । ಷ್ಠ ಹದನುಡಿವಿಟ್ಟುಳಿದೆನೆಂಬೆಯ ಖಳನನಾ
ಲಿಗೆಯಾ ॥ ದಹಿಸಿ ನೂಕೆಂಬನಿತರಲಿ ರಣ। ಸಹಸಿ ಅಂಗದ ನೆದ್ದು ಚರನೊ

೪। ಗಹಿತ ಬೇಡೆಂದುಲಿದು ನಿಲಸಿದ ಪಿತಗೆ ಕೈಮುಗಿದೂ ॥ ೨೬ ॥ ಆರನೀ ನಡ್ಡೈಸಿ ಯನಗುಪ । ಕಾರಗೈದೆಂನಾಗ್ನಿಸುವನೀ । ಶೂರನೆ ನಿಜಕರ್ತ್ರುರ್ವಾಲಿ ಯೇ ಧರೆಯೊಳೀತನಿಗೇ ॥ ಯಾರು ಸರಿ ಚರನಲ್ಲಿ ಶಕ್ತ್ರಿಟು । ದೋರಿಕೀರ್ತಿ ಯಪಡೆವನತಿಶಯ । ಧೀರನೇ ಸರಿಯಾವರ ರಣಕೆಂದ್ನಕ್ಕ ಚಪಲಗತೀ ॥೨೭॥ ಬಗುಳ ಬೇಡನುಚರನ ಕೊಲಸ । ಲ್ಲಗಿಸಿ ಕಾಯ್ದರೆ ಮತ್ತು ಬಡಿವಾ । ರಗಳ ನುಡಿವೆಯ ಮುಚ್ಚು ಬಾಯನೆ ವಾಲಿಸುಕುಮಾರಾ ॥ ಜಗದೊಳಸದಳ ಅಂಗ ದನು ಯಂ। ಬ ಗಡುವಿಕ್ರಮಿಯೈದಿ ಬಹನೆಂ । ದೊಗಿಸು ನಡೆಚರ ಸತ್ತ್ರುಖರ ನೇಹೋದನೆಂದುಲಿದಾ ॥ ೨೮ ॥ ಕಂದನಾಲಿಸು ಖರನಹತ ಸಹಿ । ತೊಂದು ನುಡಿದಿಟವಲ್ಲ ಅಲ್ಲಿ । ತ್ತೆಂದು ಭೀಕರದೋರಿ ಸಂನ್ರುಚಿಬಡಿಸಿ ಖರನಿಂದಾ ॥ ಲೊಂದು ಬೇಡವ ಕೊಡಿಸಿ ಆಖಗ । ಚಂದಿರೋಧರನಾತ್ಮಜನಯಿ । ಟ್ಬಂದಿ ಹರು ಸುಕುಮಾರನರಿಯನೆ ವಾಲಿ ಘುಡುಘುಡಿಸೀ ॥ ೨೯ ॥ ಹಾಗೆ ಸರಿಯಂ ತಲದೆ ಯಿನ್ನೆಂ । ತಾಗಿ ಬಂದಿರಲೆನಗೆ ಬೆಸನಿ । ತ್ತಾಗ ತಿಳುವಹುದೆಂದುಪಿತ ನಿಂದಾತ ಪಯಣದಲೀ ॥ ಬೇಗ ನಡೆಯನುಜೀವಿಯಂದೊಡ । ನಾಗಸಕೆನಡೆ ವಂಗದನ ಚೆ । ನ್ನಾಗಿ ಬರಲಿಪ್ಪತ್ತುಕ್ಷೋಹಿಣಿಯೂ ಖಚರದಳಾ ॥ ೩೦ ॥ ಮದಮದೋದ್ರೇಕದಲಿ ಮುಂದರಿ । ಯದಲೆ ನಡೆವಾತನಿಗೆ ತಂನೆಡೆ । ಯದ ಯವಹದೆಂಬಾಗಮಕೆ ಸರಿಯಾದ ಜನರೆಷ್ಟು ॥ ವದಗಿದರ ಸರಿ ಪ್ರಥಮ ಮಂಗಲ । ಕೊದಗು ನಡೆ ಪೂರ್ಣಾರ್ಘ್ಯಕೆಂದಿರಿ । ಸಿದಿಯೊ ಅಂಗದಪಿತನ ಬೇಗೈದೆಂದ ಚಪಲಗತೀ ॥ ೩೧ ॥ ಕಾಲಗತಿಯಳೆ ವಾಗಲಾಪ್ತವಿ । ಕಾಲಿ ಸುವನಲ್ಲೆಂಬ ತೆರದನು । ಕೂಲದಲಿ ಬಹನಂಗದನು ನಿಜ ಪಿತನ ಬಿಟ್ಟಲ್ಲೀ ॥ ಮೇಲತಿಳಿಯದಲೆಂದ ನುಡಿ ರಘು । ವಾಲಿಸುತ ಖಗವಾಹಿನಿಯನು ವಿ । ಶಾ ಲಗರುಡಾಕ್ರುತಿಯ ಪರಿಧಿಯ ಗೈಸಿ ಮಧ್ಯದಲೀ ॥ ೩೨ ॥ ಇರಿಸಿ ಸುಗ್ರೀವ ನಿಗೆ ಯಡಬಲ । ಕಿರಿಸಿ ವೀರಾಧಿತನು ಜಾಂಬವ । ರಿರಿಸಿ ಗಳದೊಳು ನಿಂತು ರಾಘವ ವೀರ ಲಕ್ಷ್ಮಣನಾ ॥ ನಿರಿಸಿ ಚುಂಚುವಿನಲ್ಲಿ ಆನಕ । ದುರಬೆಗೈಸುತ ಲಧಿಕ ಸುಭಟರ ! ಧುರಕೆಕಳುಹಿದ ರಾಮಚಂದ್ರನಿಗೆದುರೆಮಿಗಿಲಜನಾ ॥೩೩॥ ಶ್ರೀರಮಣ ರಣರಮಣ ವೈರಿವಿ । ಹಾರ ಶೂರೋದ್ಧಾರ ಗುಣಗಂ । ಭೀರ ಲ ಕ್ಷ್ಮೀರಮಣ ಸುಗ್ರೀವನಿಗೆ ಕಿಷ್ಕಿಂದಾ ॥ ಧಾರುಣೀಧರ ವಿತ್ತುಗೆದುರು ವು । ಧಾರಕೊಳ ದೈನ್ಯರಿಗೆ ಬಂದಡಿ । ಸಾರಿರೊಂದೊಧರಿಸಿದ ಕಹಳೆಯ ರಾಘವಾ ನುಜನೂ ॥ ೩೪ ॥ ಕೇಳಿ ತದ್ರವವಂನು ತ್ರಿಜಗ । ದ್ಭಾಳಲೋಚನ ವಾಲಿ

ಯನು ಗು। ತ್ತಾಳ ರಣಕಲಿ ಹರಿಣ ಶಾರ್ದೂಲಾದನಂಗದನಾ ॥ ಕೋಳನರಿ ಯದೆ ಕೆಡದೆ ಚರಣಕೆ । ಬೀಳಿರೆದುರಿಹರೆಂದು ಕಹಳೆಯ । ಕೇಳಿಸಿದ ಕಲಿ ಖಚರರೈದಿಸಿ ಚೂಣಿರಣಮುಖಕೇ ॥ ೩೫ ॥ ಬರುತಲರಿವಾಹಿನಿಗೆ ನಾರಾ। ಚೊರಿಸಿ ನೆರಿಕೆಯ ಕಟ್ಟಿ ಕೇಕಿ। ಟ್ಟರಗುವರಿಗೆದುರಾದ ಪರಿಧಿಯನುರುಹಿಖಳಿ ಮುಖದಾ॥ ವರುಷವನು ಕರೆದೆರಗು ಲಕ್ಷ್ಮಣ। ನುರುತರರಿಯದೆ ಮಾನಹರ ಣವ। ತೊರೆವಯತ್ನದ ಗೈಯ್ಯಬೇಡೆಂಗದನೆ ಯನೆ ಚರರೂ ॥ ೩೬ ॥ ವಾಲಿ ಯಂಬವರಿಲ್ಲವಾ ಖಗ। ಬಾಲಕನಿಗೆದುರಾಗಿ ಬದುಕಿದ। ರಾಲಿಸಿಲ್ಲರಿಯದಲೆ ಸುಗ್ರೀವನಿಗೆ ಬೆಂಬಲವಾ ॥ ಕಾಲಗತಿಯಳದಂತೆ ಬಂದನು। ಕೂಲ ವಾಹರೆ ಬೇಡ ತತ್ಪದ। ಮೂಲಪೊರ್ದುಳಿ ಲಕ್ಷ್ಮಣನೆ ಕೇಳೆಂದರಾ ಚರರೂ ॥ ೩೭ ॥ ತಿಳಿವುದವನಿವನುರುತರವು ಕೊಳು । ಗುಳದೊಳೆನುತೀರ್ವಲರು ಕೈ ಬಲ। ಗಳಲಿಗಳಬಲ ಶಸ್ತ್ರಬಲಗಳ ಲಧಿಕವಿದ್ಯಬಲಾ ॥ ಗಳಲಿ ಹೊಡೆದುತ್ತರಿಸಿ ಕೈ ಪದ। ಗಳನು ಗಳಗಳ ತುಂಡು ತುಂಡಿ। ಟ್ಟಳಚಿ ಸೋರಿಸಲಭ್ರಕಿಳೆ ಗಿಂನೇ ಕತರವಾಗಿ ॥ ೩೮ ॥ ಬಿಡದೆ ಸೋರುವ ರಕ್ತಸಹಿತೊಲ। ಸಿಡಿದು ದಿಳೆಯ ರಿದಾಗ ಮುರುಳಿಡಿ। ಗಡಿಸೆ ಬಲಬೆಂಗೊಟ್ಟು ಹಯಗಜ ಪುಷ್ಪಕವದೆಲ್ಲೀ ॥ ನಡೆಯಲಂಬರದಗಲದಲಿ ಕಳೆ! ಯಡಗಿದಜ್ಜನಿಪ್ರಿಯನು ಆಹವ। ಕಡಸಿದ ರುಹಣಿ ಪಟ್ಟುನಿಂದರು ಸುಭಟರಿತ್ತೆರದೀ ॥೩೯॥ ವತ್ತಿಹಯ ಹಯ ಗಜವಗ ಜಬೆಂ। ಬತ್ತಿ ರಥರಥಕೇರಿ ಶುಂಡಿಲ। ಸುತ್ತಿ ಖರಪುಟಗರೆದು ಹೇಷಾರವದಿ ಬೃಂಹಿತವಾ ॥ ನೆತ್ತಿ ರಥದಶ್ವಗಳುಶೆಳೆದೆಳೆ। ಯುತ್ತ ಸಾರಥಿಚೋದ ಮಾ ವತ। ರೊತ್ತಿ ರಥರಥಿಕರೊಳು ಕಾದಿದರೇನೊ ಕೌತುಕದೀ ॥ ೪೦ ॥ ಇಟ್ಟಿ ಚಕ್ರಸಿ ಪರಶು ಕೊಂತ ದೊ। ಳಿಟ್ಟು ಸಾಂಗಗಳಾದಿಯಲಿ ಕೈ! ಗೊಟ್ಟುಕಾದಿ ದಬಲದಿ ಕಡಿತಲೆಗಾರರಾ ರಣಕೇ ॥ ಇಟ್ಟರೇಳಕ್ಷೋಹಿಣಿಯ ಬೆಂ। ಗೊಟ್ಟು ವುಳಿದಿರ್ದ ತರವಳಸನು। ವಿಟ್ಟು ಬಹಬಹರಿದು ಲಕ್ಷ್ಮಣನತ್ತಲಂಗದನೂ॥ ಶೂರನೆನು ತೊಗಳಿಸಿದ ಲಕ್ಷ್ಮಣ। ನಾರೊ ಹೆಣ ರಣಕೈದು ಖಚರ ಸು। ಧೀರ ಗೆದುರಾಗೆಂದು ಬಂದನು ಬಲವ ಪಿಂದಿಟ್ಟೂ ॥ ಕ್ರೂರ ಸಿಖಿಯಿಂದಂಗದಹಿತ ವಿ। ಕಾರಶಬದಂಗದನೆ ಕಲಿಧುರ। ಧೀರಗೆದುರಾಗೆಂದು ನಡಸಿದತೇರನಚ್ಚು ತನೂ ॥೪೧॥ ಇತ್ತ ಗರುಡಧ್ವಜನು ಕಪಿಕೇ। ತತ್ತ ಶಸಿಯಾದಿತ್ಯರೆನೆ ಕಲಿ। ವೆತ್ತ ಚಲುವರು ಸರಿವೆರೆಯ ಸಮ ಜೋಡು ಗಾಡಿಯಲೀ ॥ ಮುತ್ತಿನಾಣೆಗ ಳಂತೆ ಕಳೆಬೆಳ। ಗುತ್ತ ಮೌಳಿಯು ಹಾರಕುಂಡಲ। ಬಿತ್ತರವ ಗಾಂಡೀವ ಶಾ

ರ್ಜಿಯ ನೆತ್ತಿ ಯುದುರಾಗೀ ॥ ೪೩ ॥ ನಿಂತು ವೈಮಾನದಲಿ ಪದಗಳ । ನಾಂತು ಪಿಂಮುಂದಾಗಿ ನಿನಗೆನ । ಗಂತು ಕೈಗೂಡಿಹುದು ಕದನದಿ ವುಖವ ನೋಡ್ನೋಡೀ ॥ ಯಂತು ಕೊಲಲಾರಿಂನು ಮೂರ್ಛಿಸು । ವಂತೆಗೈದರೆ ಯುನಗೆ ಬೆಸಗೈ । ವಂತೆಯೋ ಯಿಲವೆಂದನಂಗದ ನೋಡಿ ಲಕ್ಷ್ಮಣನಾ ॥೪೪॥ ನಕ್ಕು ಲಕ್ಷ್ಮಣನದಕೆ ನಿನ ಲಲಿ । ತಕ್ಕೆ ಮನಸೋತಿರ್ದೆ ನಿಂನೋ । ಕ್ರಕ್ಕೆ ಸಂನ್ರು ಚಿಬಟ್ಟೆ ಯಕಟಕಟೇನು ಪುಣ್ಯವನೇ ॥ ಮುಕ್ಕುಡಿಸಿ ವೈಯಾಂತೆ ಸಾಕ್ಷ್ಯಾ । ತ್ಸತ್ಕರೆಯಗೋಲೀದಿನಕೆ ರಣ । ದೆಕ್ಕಟವ ತೋರೆದು ಶಾರ್ಜಿಯನಾರಿಯನು ಪಿಡಿದು ॥೪೫॥ ವುದುರಲುಳ್ಕಾಪಾತ ತ್ರೈಜಗ । ವದುರಿ ನಿರ್ಜರರಾದಿ ಸುರಗಣ । ಬೆದರಿತಂಗದ ನೆಡೆಯು ಬಲ ಕಣ್ಮುಚ್ಚಿ ಪುಷ್ಪಕದಾ ॥ ಕುದುರೆಗಳಕಿವಿ ನಿಮಿರೆ ಖಗಸುತ । ನೆದೆಯು ಬೆಚ್ಚಲು ಲಕ್ಷ್ಮಣನು ಬೀ । ಲ್ದಿದೆಯುಘ್ನೋಗೈದದಕೆ ಮೆಚ್ಚದಕಿಂದ ನಂಗದನೂ ॥ ೪೬ ॥ ತೋರ ಬೇಕದಕಧಿಕ ಶೌರ್ಯ್ಯದು । ಧಾರವಿಲದಿರೆ ಕುಂದು ಕೈಯ್ಯೊಡ । ತೋರುದದಕೇಕೆಂದು ಬಿಲ್ಮಿಡಿಯದಲೆ ನಿನಹಸ್ತಾ ॥ ವೀರಕಾಂ ಮೆಚ್ಚಿದೆನು ನೀಕಡೆ । ಸಾರಿ ಕಳುಹಿರ್ದರನು ಕಡೆಗೆನ । ಶೂರವರಿದೈತರುವೆ ಲಕ್ಷ್ಮಣನೆಂದ ನಂಗದನೂ ॥ ೪೭ ॥ ಸಾಕು ಯಂನಗ್ರದಲಿ ನಿನಕರು । ಣೆಕೆ ಬರಿಮಾತಿನಲಿ ತಿಳಿವ ವಿ । ವೇಕರಾರೀ ಲೋಕದೊಳು ಕೈಗೂಡಿದಂತ್ಯದೊಳೂ ॥ ತಾಕಿ ತಲೆಯೊಲೆದಂತೆ ಶರಮುಂ । ನೂಕಿ ಸೋಡೆನುತಸುರಹರಕೈ। ಲಾಕಿಸಿದಹಿಳು ಕಂದದನಿಗೆದುರಾಗಿ ಮೊರೆದೈದೆ॥೪೮॥ ನೋಡು ನಿಂನುದ್ರುತದ ಶರವೇ । ಹಾಡನೈದುವದೆನುತ ಪ್ರತಿಶರ । ಹೂಡಿ ಬಿಟ್ಟೆಡೆ ಯಲ್ಲೆಂ ಖಂಡಿಸುತಿನ್ನು ದಿವ್ಯಾಸ್ತ್ರಾ ॥ ತೀಡಿದನು ಲಕ್ಷ್ಮಣಗೆಪಂಜರ ಮಾಡಿದಂತಂಗದನ ಚಿತ್ಕೃತಿ । ನೋಡಿ ಲಕ್ಷ್ಮಣ ಮೆಚ್ಚಿ ಮುಚ್ಚಿದ ಸರಳ ಭಂಜಿಸುತಾ ॥೪೯॥ ಮತ್ತುವತ್ತೊತ್ತೆಸೆನ ಕಣೆಗೆದು । ರಿತ್ತ ಶರದಿಂ ಖಡಿದು ಖಡಿದಿಂ । ನೊತ್ತಿದವ ನುತ್ತರಿಸಿ ಮೇರುವೇ ಗೈದುಮಧ್ಯದಲಿ ॥ ಹತ್ತಿಸಗ್ನಿಯ ಮೇಣು ಮೇಣವ । ರೊತ್ತಿ ಬೇಸರವಿರದೆ ಯರೆಗಳಿ । ಗೆತ್ತಿ ಕೈಪುಂಖಾನು ಪುಂಖಕೆ ಗೈದರವನೀಶಾ ॥ ೫೦ ॥ ಹಿಂದು ಮುಂದಾಗದಲೆ ಯುಡೆಗಿಂ । ನೊಂದು ಶರಬರದಂತೆ ಕಾದುವ । ದೊಂದು ಕೌತುಕವಾದುದಿತರದ ಬಲ ಬಲಾಢ್ಯರಿಗೇ ॥ ಸಂದಿಸಿದ ಶರಶರದ ಮೊನೆಮೊನೆ । ಯಿಂದ ಖಿಡಿಯುಚ್ಛಳಿಸಿಕಣಕಣ । ಬಿಂದುಮಿಂಬುಳದಂತೆ ತೋರಿದವವನೀನಾಯಕನೆ ॥ ೫೧ ॥ ತೊಡು ಬಿಡುವ ಕೈಚಳಕ ಶರಬೇ । ರ್ಪಡದೆ ನೆಗಪಿದ ಹಸ್ತಲತಿಕೆಯೊ । ಲಡರಿ ನಾರಾಚಗಳು

ತೋರುವವಲದೆ ಲಿಂಗಡದೀ ॥ ವುಡುಕಲರುಹಿರದಂತೆ ಖಗಸುತ। ನೊಡನೆ ಲಕ್ಷ್ಮಣಕಾದಿ ಮೂದಲೆ। ಗೊಡುತ ರಣ ಕಲಿಭೀಮನಹುದಿಂ ನ್ನಾಕೋ ಬೇಕೆಂದ ॥ ೫೨ ॥ ಸಾಕು ಬೇಕೆನಲೊದನ ದೊಳಗಿರು। ವಾಕುರಣಕೆರವಾಂತ ಕಾರ್ಮುಖ। ತಾಕಿಸುವೆ ನೋಡೆಂದ ಅಂಗದ ಕೇಳು ಪರಿವೃಡಗೂ ॥ ನೂಕದಾ ಸಾಹಸವು ಸರಸದೊ। ಳೀ ಕುಶಲದೋರಿದರೆ ಹಿಗ್ಗುವ। ದೇಕೆತಡೆಯಿಾ ಸರಳ ನೆನುತಿಡಲಸುರಸಂಹಾರೀ ॥ ೫೩ ॥ ಕುಲಿಶ ವೊಳಕೆಯೊ ಭಾಸ್ಕರನ ಕರ। ದಲಘೊ ಸಿಡಿಲಿನ ಸಚಿಯೊ ವೇಣೆಂ। ಬೊಲವಿನಲಿ ಬಹಕಣೆಯ ನೋಡುತ ಮಂತ್ರ ಸಚಿವೆಂದಾ ॥ ನಿಲಿಸಲಿಸೆದಂಗದನ ಶರ ತುಂ। ಡಲುಗ ದೈದಾರ್ಭಣದಲಿ ಕು। ಟ್ನಲಿಸದಿರೆ ಘುಡಿಘುಡಿಸಿ ಕಚ್ಚಿತು ಬಂದು ಪುಷ್ಪಕವಾ ॥ ೫೪ ॥ ತಿರುಹಿತೊಂದರೆಘಳಿಗೆ ಕುಂಬಾ। ರ್ತಿರುಹಿನಂದದೊಳಲದೆ ಕೋಕಾಂತರಕೆ ಕೊಂಡೊಯ್ದಲ್ಲಿ ಬಿಟ್ಟೈತಂದು ಮಾಧವನಾ ॥ ಶರದ ಮೂಡಿಗೆ ಸೇರಿತಾಶರ। ವರಿದ ಖಗನಾಶ್ಚರಿಸಿ ಮುಂದೈ। ತರುವವರಿಗಾ ಮಂತ್ರಿ ಬಲಿಯಂಬವನು ಭರದಿಂದಾ ॥ ಬಂದು ನರಗುರಿಲೋಕಗುಟುಕಿಡು। ವಂದ ಶೂರಂಗದನ ಯದುರಾಗ್ನಿಂದು ಕೋಕಾಂತರಕೆ ವೈಮಾನವನು ಹಿಂಜಗಿಪಾ ॥ ಬಂದು ರತ್ನದ ವಿದ್ಯನೆಂಮುರಿ। ಕಿಂದ ಕಲಿತೆಯೊನೋಡು ಯಾಹಿಳು। ಕಿಂದ ಲುಳಿಯಂದಿಟ್ಟ ಬಲಿಯುದನೋಡಿ ಸೌಮಿತ್ರೀ ॥ ೫೬ ॥ ಆರೆಲವೊ ಖಗಸುತಗೆ ನೀನೇ। ಮೇರೆ ನಡವಳಿಯಂಬನಿಗೆ ಯನು। ಚಾರ ಸಂದಾನಿಗನು ಪೇಳಿದ ಮಂತ್ರಿಬಲಿಯಂಬಾ ॥ ಗೋರಿಸಿದ ಮುದದಿಂದ ಲಕ್ಷಕೆ। ತೋರದು ಲಿದಿಹ ನಿನ್ನ ರಣಸಿರಿ। ಗಾರತಿಯ ಬೆಳಗವನಿ ಸಿರದೀಪದಲಿ ಬೇಗೆಂದಾ ॥ ೫೭ ॥ ಆಗ ಬಂದಿರ್ದವನೆ ನೀನಿಂ। ತೀಗ ಹೇಳುವೆ ಸಾಕು . ಕಂಡ। ತ್ಯೂಗುವದೆ ಚರನಡತೆ ನಡವಳಿ ತಪ್ಪಲಿಲ್ಲೀಗಾ ॥ ಸಾರುನೀನತ್ತತ್ತಲೆನಗೆದು। ರಾಗಿಬದುಕುವನೇನೊ ನೀಚ। ನ್ನಾಗಿನೋಡೆಂದಿಟ್ಟ ಮಂತ್ರಾಸ್ತ್ರದಲಿ ಲಕ್ಷ್ಮಣನಾ॥೫೮॥ ಬಲಿಯೆ ನಿನ ಬಲಿಗೈಯ್ಯದಲೆ ರಣ। ಲಲನೆ ತುಷ್ಟಿಸಳೆಂದು ನಿಡುಸರ। ಛಲಿವಿಹಾರಿಸಿ ಹರಿತ ಶರವದ ಕುಗ್ರತರವಾಗೀ ॥ ಯಲವೋ ಯನ್ನಸ್ತ್ರವನು ತುಂಡಿಸ। ಲಲಘುತರನೆಂದ ಕ್ಷಯಾಸ್ತ್ರವ। ಚಲಿಸೆ ಬಲಿ ಧರೆ ಗಗನದಿಕ್ಕಾವರಿಸೆ ಹರಿನೋಡೀ ॥೫೯॥ ಬಿಡು ತೊಡಿಂನಿರ್ದವನು ವೃತ್ಯುವು। ಹೆಡಕನೇರಿಹುದೆನುತ ದಿಕ್ಕವ। ಗಡಿತ ಶರಗಳ ನಗ್ನಿ ಸರಳಿಲಿಸುಟ್ಟುವೇಣ್ತೊಡುವಾ ॥ ವೆಡೆಯುಲಿಕ್ಕಡಿಸಿಟ್ಟು ಬಿಲ್ಲನು। ಕೆಡಹಿ ಹೆರೆಯಾಸ್ತ್ರದಲಿ ನಿಜಸಿರ। ಖಡಿದ ಲ

ಕ್ಷ್ಮಣಗೆದುರೆ ಯಿಾ ಹುಲುಖಚರರವನೀಶಾ ॥೬೦॥ ಬಿದ್ದ ಬಲಿಯುನು ಕಂಡು ಮೊದಲುದಾ । ಲಿದ್ದ ಚರನಾಸಿರವ ಪಿಡಿದ । ಲ್ಲಿದ್ದ ರಣದೇವತೆಗೆ ಬೆಳಗಿದನಾಗ ಜಯಘೋಷಾ ॥ ಬದ್ಧಿಸಲು ಲಕ್ಷ್ಮಣನ ಯಡೆ ಯದು । ರಿದ್ದರಲಿದು ಘೋಷವೊರೆವೆ । ತ್ರಿರ್ದನಂಗದ ಕೇಳಿ ಖತಿಕೌತುಕದೊಳೆದುರಾಗೀ॥೬೧॥ ಕ್ಷಣಕೆ ವಿಸ್ಮಯನಾದ ನಹೊಬಲಿ । ಹೆಣಕೆ ಯದುರೆಣಕಾಗಿ ಅರಿಲ । ಕ್ಷ್ಮಣನನಿರಿಸುವೆನೆಂದು ಬಿಟ್ಟಸ್ತ್ರಗಳ ಗಧೆಯಾಂತೂ ॥ ರಣಕೆ ಮುಂಕೊಳುವಂಗದನ ಕೈ । ಮಣಿಸಲೊಜ್ರಾಸ್ತ್ರದಲಿ ನೋಡುರ । ಹಣಿಲಿಗೊಗೆದೊರಗಿಸಿದ ಮೂರ್ಛೆಯಲವನ ಪುಷ್ಪಕದೀ ॥ ೬೨ ॥ ಬೆದರೆ ಖಗ ಬಲರಾಪ್ತ ಜನರಸ । ವದಳಿದಂದದೊಳೊಯ್ದು ದಳವು । ಧ್ಯದಲಿ ಮುಂಚಂಗದನ ವಾಲಿಯ ಬಳಿಗೆ ದೂರಿಡಲೂ ॥ ತುದಿ ಮೊದಲು ಕೇಶಾಗ್ನಿ ಕೆಂಡದ । ಹೃದಯದೊಳಗಂಬರಕೆ ನೆಲನೈ। ದಿಡುದೊಯನುವಂತ ರುಹಸ್ಮರಣೆಯೊಳೇರಲತಿಬಲದಿ ॥ ೬೩ ॥ ಕಲಿಲಹರ ಮುನಿಸೂವ್ರತಾಂತ್ಯದಿ । ೞಲಿತರಾದಾ ರಾಮ ಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೬೪ ॥

ಅಂತು ಸಂಧಿ ೪೧ ಕ್ಕಂ ಪದನು ೨೪೬೩ ಕ್ಕಂ ಮಂಗಳಮಹಾ ಶ್ರೀ ಶ್ರೀ.

ನಲವತ್ತೆರಡನೆಯ ಸಂಧಿ.

ವಾಲಿ ನಿಗ್ರಹದ ಸಂಧಿ.

ಧುರದಿಧುರಧೀರಂಗದನು ಮುರೆ । ದೊರಗಿದರಿದತಿಕುಪಿತದಲಿ ಬಂ । ದೊರಗಿದನು ಕಲಿವಾಲಿ ರಾಘವನಸ್ತ್ರವಿಸಿಖದಲೀ ॥ ಪದಾ ॥

ಮಹಿಪಕೇಳಾಹವದ ಕಲಿಬಲಿ । ಯಹತಗಂಡಂಗದನು ಮೂರ್ಛೆಯು। ನೊಹಿಸಲರಿದಿಂಮುಡಿಯ ಬಲಸಹಿತಭ್ರಪಥನಾಗೀ ॥ ಸಹಸಹರಿಭೇರುಂಡಸಹಿತ । ಗ್ರಹಣದಾತುರದಿಂದಲತ್ಯ । ಗ್ರಹದಿ ಬಂದನುಪೇಂದ್ರಗೆದುರಾಗಾಹವಕೆವಾಲೀ ॥೧॥ ಗಗನ ಕೆಗರುವ ಸಮಯ ಧೂಮ್ಕೇ । ತೊಗೆದವೆತ್ತಿಡ ಚಿ

ಳೊಗ್ಗಡೆಯ ಕಳ । ಸೊಗೆಯಲದ್ದೆರಗಿದವು ಮುಗುಟಕೆ ಪುಣ್ಯ ದೇವಿಯರೂ ॥ ಆಗಲೆಕೇತನದೇವಿಯುರುರವ । ದೆಗೆಯೆ ಪುಷ್ಪಕದಶ್ವಗಳಕಂ । ಸೊಗಲುವು ದಬಿಂದಾದಿವುತ್ಪಾತೊಗೆದವಾಕ್ಷಣದೀ ॥ ೨ ॥ ಮುಚ್ಚಿಬಹಕೆಂದೂಳು ಬಿರು ಘೂಳೊಚ್ಚಿ ಬರಲೆಡೆ ತಡೆದು ನಿರ್ಮ್ಮಸು । ತಚ್ಚಗಜ ಸಾರೋಟ ಬತ್ತೀಶಾನೆಗ ಳಕಟ್ಟೆ॥ ದಚ್ಚರಿಯ ರಥವೇರಿ ದಳವು। ದ್ಯುಚ್ಚಪೊಂಬೆಟ್ಟದೊಲುಬಹದೊಂ। ದಚ್ಚರಿಯ ಖಗವರರು ತೋರಿದರಾಗ ಲಕ್ಷ್ಮಣಗೇ ॥೩॥ ನೋಡಿ ಲಕ್ಷ್ಮಣ ಕಪಿಕುಲೇಶನಿ । ಗೀಡನಾರಿಡಲಿಲ್ಲದಿವಸಿಂ । ನೋಡುವನೆ ನಯದಲ್ಲಿ ಪರರನ್ನು ಮೇಣಮಿತ್ರತೆಯಾ ॥ ಮಾಡಿಹನು ದಶಕಂಠಗನುಜೆಯ । ನೋಡಿ ಬಲಕರ ನೆಂದು ಜಾಂಬವ । ನಾಡಿದೊಚಕೀಡೆಂದ ಮನದೊಳು ವಾಲಿಸಂಪದಕೇ ॥೪॥ ಅತ್ತರಾಘವನೆಡೆಗೆ ಜಾಂಬವ । ನೊತ್ತಿಬಂದಾ ವಾಲಿಬಹಸಂ । ಪತ್ತತೋ ರಿದನೋಡು ವಿದ್ಯಾರಥಕೆಬತ್ತೀಶಾ ॥ ಮತ್ತಗಜಗಳಹೂಡಿ ಬಹುಬಲ । ದೊ ತ್ತರದೊಳ್ವೈತರುವನೇ ಕಲಿ । ವೆತ್ತ ಸೂರ್ಯಜಗೆದುರೆ ಮಿಗಿಲಿನರೆಂದಕೈನೀಡೀ ॥೫॥ ಲೆಕ್ಕಿಸಲು ಬರದಶ್ವಗಣಿತಕೆ । ಮಿಕ್ಕ ಗಜಮನವಾರೆಗನುಸರ । ಮಿಕ್ಕದಿ ಹನ್ನೈಮಾನಖಗಬಲವೆತ್ತಲೆತ್ತೆತ್ತಾ ॥ ದಿಕ್ಕ ಮುಚ್ಚಿಹ ವುಡುಗಣದ ನಡು । ಚೊಕ್ಕಹಿಮಕರನಂತೆ ವಾಲಿಯು । ಬಕ್ಕುದವಲೋಕಿಸಿದ ರಾಘವ ಸಿರಿಗೆ ಬೆರ ಗಾದಾ ॥ ೬ ॥ ಬಹಳ ಬಲವಂತನಿಗೆ ಗುಣವುಂ । ಟಹರೆ ಹರಿಗುತ್ತಮಿಕೆ ಬಂ ದಂ । ತಹುದು ಅನುಜನ ಬಾಳ್ವೆಗಸಹಿತಧಿಂದ ಲಘುತರವಾ ॥ ನೊಹಿಸಿದನ ಸಿರಿ ಕತ್ತೆಶ್ರುಂಗರ । ಗ್ರಹಿಸಿದಂತಹುದೆಂಬುದನು ತಿಳಿ । ದಿಹುದು ಜಾಂಬವ ನೆಂದನಾ ಮಹಿಳೇಂದ್ರಿಯುಲ್ಲಾಸಾ ॥ ೭ ॥ ಇಂದ್ರಗಪ್ರತಿಯಾದ ರಕ್ಷಕು । ಲೇಂದ್ರನಿಗೆ ಪ್ರಿಯ ಮೈದ ಕಪಿವ । ರ್ಣೇಂದ್ರನಸದಳಸತ್ವ ಕಲಿ ಕಾಲೋಗ್ರ ಗಜಸಿಂಹಾ ॥ ನಿಂದ್ರನೊಯ್ಯಭುವನಧಿಕತೇಜ ದಿ । ನೇಂದ್ರ ಸುಗುಣೌವ್ರಾತದ ಲಿತುಹಿ । ನೇಂದ್ರ ಬಹನಾಹವಕೆ ಯೆನುತೊದರಿಸಿದ ಕಹಳೆಗಳಾ ॥ ೮ ॥ ಅಸುರನಿಗೆ ಯಮ ಮೈದನಿಗೆ ಯದೆ । ದಸಿಯು ಕಪಿ ಕುಲ ವೇಘ್ರ ರಣದು । ದ್ದೆಸಕ ಹರಿ ಭೇರುಂಡ ದಿನಕರಭಾಸ ಕಹಿಕೇತೂ ॥ ಹಸಿತಗುಣಶಸಿ ಯಂಬ ನುಡಿ ಹುಸಿ । ಯುಸುರದಿರಿ ರಘುವೀರರೆದುರೆಂ । ದು ಸುರಿದವು ಘನ ಕಹಳೆ ನಿನದಗಳೆತ್ತ ಹರಿಯಡೆಯಾ ॥ ೯ ॥ ಯನಗೆ ಯದುರಾಗಿಂತು ಹೊಗಳಿಸು । ವನು ಸಮೇತಲಿಗೋಚಿತಹುದೆಂ । ದೆನಲು ಸೂರ್ಯಜ ಬಲಕೆ ಕೈವೀಸುತಲಿ ಹೂಂಕರಿಸೇ ॥ ದಿನಕರಗೆ ಯಾವರಿತ ಮಂಜಿನ । ಹನಿಯೊಲಲ್ಲದೆನೋಣಿ

ಪಂಜಿಗೆ । ಯನು ಕರಿತಮುಕ್ಕುಕಗಳೆನೆ ಹರಿಗೊಚ್ಚಿ ಮುಚ್ಚಿದರೂ ॥ ೧೦ ॥ ಯತ್ತನೋಡಿದಡಾಳು ಹಯಗಜ । ದೊತ್ತಿಲಿಂನೆತ್ತೆತ್ತ ಪುಷ್ಪಕ । ಮೊತ್ತಮೊತ್ತವೆ ಮುಗಿಲುಮೇಲ್ವರಿದಂತೆ ಯಂಬುಧಿಯೇ ॥ ಸುತ್ತಿದೋಲ್ಸುಮನಸರಮುತ್ತಿಗೆ । ಯತ್ತನಿಂ ಶರದೊರುಷದೊಳು ಮರೆ । ವೆತ್ತಕಲ್ಮಾಲೆಯೊಲುಸುರಿದರು ಕೊಂತಮುದ್ಗರವಾ ॥ ೧೧ ॥ ಆಳುಗಳ ಘರ್ಜನೆಯು ಹಯರವ ! ಕೋಳುಗಜ ಬ್ರುಂಹಿತದಿ ಚಕ್ರದ । ಗೀಳಿತಸ್ತ್ರದನೊರವು ವಾದ್ಯಧ್ವನಿಯುಸಹಿತಬ್ಧೀ॥ ವ್ಯಾಳರವದಂತಾಕರಿತ ಬಲ । ಕೋೕಳ ನೋಡೆದೆಯದುರಿ ಭಯರಸ । ದಾಳಿಬರೆ ಸುಗ್ರೀವ ಜಾಂಬವರಾಗ ರಘುವೆಡೆಗೇ ॥ ೧೨ ॥ ಬಂದ ವೀರಾಧಿತನು ಗತಿಯೇ ।ನೆಂದು ಬಾಯ್ಬಿಡುತಿರಲು ನಮಗೇ । ನೆಂದು ತಚ್ಚತುರಂಗ ತಲ್ಲಣಗೊಳುತಲದಿಗದಿಗೋ ॥ ಬಂದ ನಿಷ್ಟುರ ವಾಲಿ ನಿಮಕ್ಕೆ ! ಯಿಂದಲಾಗದು ತಡೆಯಲಿನು ಕಳು । ಹೆಂದು ಮೊರೆದರು ನಯನ ವಾರಿಗಳಿಂದ ರಾಘವಗೇ ॥ ೧೩ ॥ ಇವರ ತಲ್ಲಣಕಾಗಮುರ ಭರ । ಲಿವರ ನುಡಿಗನುಸರವೆ ಸರಿಯಂ। ದವರಿಗಭಯವನಿತ್ತು ನಾಕಾಗೆಗಳಭಯವುಂಟೇ ॥ ಅವಿಚಳತ್ವದ ಸಾಗುವಗೆಗರು । ಡವನಿಯಲಿ ಯಹಿಕಾಟವೇ ಯುವ । ಭವರವೇ ನಿವಕೆಲ್ಲಭಯ ಬೇಡೆಂದು ರಘುವೀರಾ ॥ ೧೪ ॥ ಅಡಿಯೊಳೆಡಬಲದಗ್ರದೊಳು ಮೂ । ವ್ವಡಿಸಿ ರಥಗಜದಶ್ವದಳ ಮು । ದೃಡಗಿಸಿದ ಸುಗ್ರೀವ ವೀರಾಧಿತನು ಜಾಂಭವನಾ॥ ತೊಡಗಿ ವಜ್ರಾವರ್ತ್ತ ಚಾಪವ । ಪಿಡಿದು ದಿವ್ಯಾಸ್ತ್ರವನು ಲಕ್ಷ್ಮಣ । ನೆಡೆಗೆ ಬಹರಾಘವನ ಪದಕೆರಗೆಂದನನುಜಾತಾ ॥ ೧೫ ॥ ದೇವರ್ರೈ ತರುವದಕೆ ಖಳನಿ । ನಾವ ವೀರನು ಯಿಾ ಬಲದಲ । ಕ್ಕಾವುದೆನಗಲ್ಲಿರುವ ಖಗಸುತ ಜಾಂಬವಾದಿಗಳಾ ॥ ಆವಲಂಬನಕಾರು ಯನಲದ । ನಾವರಿಸಿ ರಾಘವನು ಲಕ್ಷ್ಮಣ । ದೇವ ಸಹಿತಾಹವಕೆ ಮುಖವಾಗೆತ್ತಿ ಚಾಪಗಳಾ ॥ ೧೬ ॥ ತೊಟ್ಟು ದಿವ್ಯಾಸ್ತ್ರಗಳ ಕಿವಿವರೆ । ಮುಟ್ಟಲೆಳೆದೇಗಿಸಿದ ಶರಬೆಂ । ನಟ್ಟಿ ಬಹ ಅಹಿತಾಸ್ತ್ರದೊಟ್ಟುಗಳಾದ ಪೊಟ್ಟುಗಳಾ ॥ ತಟ್ಟಿ ತರತರದಿಂದ ಲಿಕ್ಕಡಿ । ಯಿಟ್ಟು ನಡುಮಧ್ಯದಲಿ ಅಹಿತರ । ನಟ್ಟಿ ಹಿಡಿದವು ಸಿರಚರಣಕರವಾದಿ ವಿಗ್ರಹವಾ ॥೧೭॥ ಚುಚ್ಚಿ ರೋಮಾಂಚದಲಿ ಕೈಕಾ । ಲುಚ್ಚಿ ಶಿರಬೇರ್ಗಳನು ಕೀಲ್ಗಳ । ಬಿಚ್ಚಿಯುದರದಿ ಪೊಕ್ಕು ಕರುಳಿನ ಬಳ್ಳಿಗಳ ಕಚ್ಚೀ ॥ ಗಚ್ಚಿ ಪಸ್ತ್ರಗಳು ದುರ್ವತಲೆಮೇ । ಣಚ್ಚ ನಕ್ಷತ್ರಗಳ ರಣಸಿರಿ । ಗಚ್ಚಿಪಂಮಾಲೆಗಳೊ ಧಾತ್ರೀ ಫಲದ ತೆರನಾಗೇ ॥ ೧೮ ॥ ಸೋರುತಿಹ ಕೈಕಾಲು ರಕ್ತದ । ಧಾರೆ ಕರುಳಿನಮಾಲೆ

ಮಾಂಸದ । ತಾರಗಳ ಕೈಲಾಂತು ಬಿಸಿಬಿಸಿ ರಕ್ತಸೂತಕದಾ ॥ ನಾರಿಯರು ವಿಾಯ್ಸಂತ್ಯಖಂಡನ । ತೋರಿಪತ್ಯಕೆ ಮಕ್ಕಳಿಗೆ ಸ। ತ್ಕಾರಗರೆವರು ಮರು ಳೆನಾರಿಯರವರ ಹೊಗಳುತಲೀ ॥ ೧೯ ॥ ಗಡಣೆಇಲ್ಲದ ಖಚರ ಬಲದೊ । ಟ್ಟಡುವ ಬತ್ತೀಶಾಯುಧಗಳಿ । ಕ್ಕಡಿಸಿ ಕೆಡಹುವನೆಲ್ಲ ಮಿಂಚಿನ ಚಿಂಣೆಯಂ ತಾಗೀ ॥ ಪೊಡವಿಗಾವರಿಸಲ್ಲಿ ಗಜ ಹಯ । ದಿಡಿದಮರಡಿಗಳಂತೆ ಕಣ್ಮನ । ವಡರುವ ಗಲದಿ ಹೆಣದಿ ರಣಮಯವಾಗಲಾ ಯಿಳೆಯೂ ॥ ೨೦ ॥ ಬೀಳು ತಿಹರೆನಿತೆನಿತೊ ಮೇಲ್ಬಲ । ದಾಳಿಯನಿತೆನಿತಾಯುಧದ ಸಂ । ಕೂಳವೆನಿತೆನಿ ತಾಗದರುಹಿಂನಾಲೆಮುನಿಯದಿಹಾ ॥ ಸೂಳೆಯರಿಗೆಂಬಂದದೋಲ್ಸೀ । ಳ್ಸೀಳಿ ಹಳಚುವರೀವರೇ ಬ । ಲ್ಲಾಳುಗಳ ಬಿಲ್ಮಂಡಲಾಕೃತಿಯಾದವಾಗರಸೇ॥೨೧॥ ತುಂಟರೀರ್ವರೆ ಸರ್ವಖಗಬಲ । ರಂಟೆ ಖಡಿವರಿಗೆದುರು ವಿದ್ಯಗ । ಳಂಟೆಸ ಕ್ಷಿಯ ಮುಚ್ಚಿಕೊಚ್ಚಿರೊ ಕೊರಿರೊಕ್ಕೈಕಾಲಾ ॥ ಭಂಟರಾಗೆಂದವರಜನನಿಯ। ರೀಂಟೆಸದರೇ ಸುಧೆಯ ಸಮಕಳ । ಭಂಟರಾಗೆಂದಿತ್ತರೇ ಹೇಳೆಂದು ಸುಭ ಟಾಳೀ ॥೨೨॥ ವತ್ತಿಶಸ್ತ್ರದ ಮುತ್ತಿಗೆಯನಿಸಿ। ಯೆತ್ತಿ ಕುತ್ತುತ್ತರಿಸುಬೆನ್ಕರು। ಳೆತ್ತು ಹುಡುಗರ ಧರೆಯ ಜಡಗರ ತುಂಟ ಭಂಟವಿಕೆ ॥ ಗೆತ್ತಣಿಂ ಕೆಟ್ಟಂದು ಕೂಳೊಂ। ತುತ್ತಿಗೋಸ್ಕರ ಅಹಿತನಾಹನ । ರೊತ್ತಿಬಂದಿಹರೆಂದು ಬೈವುತ ಮುತ್ತೆ ಮತ್ತವರೂ ॥೨೩॥ ಹತರನೋಡಿ ತರಿತರಬೈಬೈ। ವುತಲಿ ಮೇಲ್ಮೇ ಲೈದುವರ ಸಂ । ತತಿಯ ತತಿಶಸ್ತ್ರಗಳ ಖಂಡಿಪುದಲದೆ ತುಟಿಯಲುಗಾ ॥ ಅತುಳ ವೀರರ ನೋಡಿ ಮರಣೆಂ । ತತಿಪುದೆಂಬುಗ್ರದಲಿ ಬಾಯ್ಕು । ಚ್ಚುತಿಪೆ ವೆನುತ್ತೈತಹರ ನಲ್ಲಲ್ಲಾಯ್ದುವತಿಹರರಸೇ ॥ ೨೪ ॥ ಬಿಂದು ನಾಲ್ಕೊಂದೆಂಬ ದಳನ್ವೈ । ತಂದವಕ್ಷೋಹಿಣಿಯ ಲರ್ದೈ । ತಂದು ಮುಚ್ಚಿದ ಚಾತುರಂಗದ ವಿವಿಧ ಶಸ್ತ್ರಗಳಾ ॥ ಲೊಂದ ನೆಡೆಗಡರಿಸದೆ ನಿಡುಶ। ಸ್ತ್ರೊಂದ ನಿರಿಸದೆಲದ ರಸಗದಳ । ಕೊಂದರೇನಸಹಾಯ ಶೂರರೊ ರಾಮಲಕ್ಷ್ಮಣರೂ ॥ ೨೫ ॥ ರಕ್ಷ ಕೋಟಾಕೋಟಿನೇಕರ । ಲಕ್ಷಕಿಡದರಿಗೀ ಖಚರದಳ । ವೀಕ್ಷಣಕೆ ನಿಲ ವುಂಟೆ ನಿಮುಷದೊಳರ್ದ ರಣಸಿರಿಯಾ ॥ ಭಿಕ್ಷಕೆಡೆಬಡಿಸಿದರ ಹಸ್ತ । ದ್ಯಕ್ಷ ಕುಳಿದರಿಸೇನೆ ಜೀವ। ದ್ರಕ್ಷ ಕುರಿತೋಡಿದರು ದಿಕ್ಕಿಲ್ಲೆಂದು ದಿಸೆದೆಸೆಗೇ ॥೨೬॥ ತರಗ ಶುಂಟರೆಯುಳದ ತೆರಚಲ । ಪರಿದ ವೈಮಾನಗಳು ಮೇಘವ । ತೆರಳಿ ಸಿದ ಯಿನ ಶಶಿಗಳಂದದೊಳಿಂದ್ರುಪೇಂದ್ರರೊಲೂ ॥ ಶರವ ತಿರುಹುತ ಬಿಲ್ಲ ನೂರೆಡ । ಕರದಿ ನಿಂದರಿಗಳನು ಬಲಕೆ । ಟ್ಟರಿದು ಪಾರುವರರಿವ ಸೂರ್ಯ

ಜಮುಸೆದು ಪಲ್ಗಳನೂ ॥ ೨೭ ॥ ಬಿಟ್ಟು ಗಜ ಸಾರೋಟು ಹಯುಗಳ । ಕಟ್ಟಿದೊಯ್ಮಾನವನು ಯೇರತಿ । ಸಿಟ್ಟಿನಿಂ ನಡೆತರುವನೆದುರಿಗೆ ಮೂರ್ಚೆ ತಿಳಿದೆದ್ದೂ ॥ ಬಿಟ್ಟಸೂಟಿಯೊಳ್ಳೈದಿ ಯಾನತ । ಏಟ್ಟು ಯಾದಿನವರಿಗೆ ಯುಮುಗೆದು । ರಿಟ್ಟರಿವರೇ ಧೀರರಹುದೆಂದಂಗದನು ಮತ್ತೇ ॥ ೨೮ ॥ ಮೋಸದಲಿ ಮೂರ್ಛಿಸಿದ ಕೈಕೈ । ಬೀಸಿ ತೋರಿದರವನ ಶಲೆಶಲೆ । ಲೇಸನಿರುಗೊಡೆನೀಗ ನೀವ್ಯಾಕಾನೆ ಸಾಲ್ವಿನದಾ ॥ ಕಾಸು ಮೋದಿದರೆನಲು ಬಲಯುತ । ರೋಸರಿಸು ನಾದಿ ಬೆದರಿಸು । ವಾಸುಕಲಿ ರಘುರಾಮು ಕೇಶವರೆಂದನಾವಾಲೀ ॥ ೨೯ ॥ ದಾರಿಕಾರರೊಳೆಮಗೆ ಕಲಹವ । ತೋರಿದನೆ ಸುಗ್ರೀವನನು ಸಂ । ಹಾರಿಸಿದರಿವರೈದಿ ಸ್ವನ್ರುಚಿಯಿಂದ ಪೋಗುವರೂ ॥ ಭಾರಿಸುವೆನವನೆಂದು ಸಿಡಿಲ । ಡ್ಡೀರಿದಂತಂಗದನು ತದ್ಬಲ। ಕೇರಿ ಬಹನರಿದಹಿತವಾಹಿನಿ ತಲ್ಲಣಂಗೊಳಲೂ ॥೩೦॥ ನರಿಯ ಕಂಡ್ತುರು ಸಿಚಯದೊಲ್ವುಕ । ನರಿದ ಮೇಷಗಳಂತೆ ಮಾರಿಯ । ನರಿದ ಮಹಿಷಿಗಳಂತೆ ಗೋಣಿತ್ತೋರಲೆ ದಳವಹಿತಾ ॥ ನರಿದ ಸುಗ್ರೀವಾದಿ ಮೂರ್ಚೆಯ । ಲೊರಗಿದವ ಕಂಡ್ಬಲರು ಮತ್ತ । ಬ್ಬರಿಸೆಲರಿದ್ದೈತಂದ ಲಕ್ಷ್ಮಣನಂಗದ ನಿಗೆದುರೂ ॥ ೩೧ ॥ ಅನ್ಯ ಬಿಂದೋತ್ಪತ್ತಿಯರಿಗೀ । ಜನ್ಯವಲಯ ಸಹಾಯ ಶೂರನ । ಮನ್ಯುನಿನಗೇಕೆನ್ನ ಗೆಲಿದರೆ ಯಿರ್ದಜನರೆಲ್ಲಾ ॥ ಸೂನ್ಯರಾಗುವರಾಗ ನೀ ಬಹು । ಮನ್ಯನಾಗುವೆ ನಿಲ್ಲು ಸದ್ಗುಣ । ಸೂನ್ಯನೆನುತಂ ಬಿಡಲು ಲಕ್ಷ್ಮಣ ನೋಡಿದಂಗದನೂ ॥ ೩೨ ॥ ಮೊದಲೆ ತನ್ನೊಳು ತಿಳಿಯಬೇಕಲಿ । ದೆದುರರುಲಿದರೆ ಮುಟ್ಟಬೇಕ್ಸ । ಹ್ರುದಯ ನೀನೇನರಿಯುನೀತಿಯು ಕಷ್ಟರಾಶ್ರಯಕೇ ॥ ಹುದುಗಬಾರದ ದರಿಯುದವರೊಂ । ದಿದಕೆ ನಿನನಷ್ಟಂದುನಾನಿಂ । ತದನು ಹಂಣಿದೆ ಕೇಳು ಲಕ್ಷ್ಮಣನೆಂದ ನಂಗದನೂ ॥೩೩॥ ತಿರಿಕ ಸುಗ್ರೀವನಿಗೆ ಬೆಂಬಲ । ಗರೆದು ಯೇನ್ಸುಖಬಡುವೆ ಯುಮು ಸಂ । ತೊರಿಸಿ ನೋಡಮುರೇಂದ್ರನಾಗುವೆ ಮಾರ್ಗವನು ಬಿಟ್ಟೂ ॥ ಬರಲುಯಾಕರುಗುಲಿಯ ಮಾತನು । ಸರಿಸಲೇಕೆಮ ನಿಮಗೆವ್ಯಥಸಂ । ಗರವಥೇಕಸುರಾರಿ ತಿಳಿಯಂದಂಗದುಲಿದುಲಿದೂ ॥ ೩೪ ॥ ಕಡುಬಡವರಾರೈದರವನಿಯ । ನಡರುವದು ಸತ್ಕೀರ್ತಿನಿನ್ನಿಂ । ಪಡೆವರಾರೈ ಸಿರಿಯಕೊಡು ತ್ರೈಲೋಕಸಂಪದವಾ ॥ ತೊಡಗಿಹುದು ಬಿಲುಕೊಪ್ಪುಮಾರ್ಗಿಗ । ರಡಿಗೆ ಯುರಗೇ ಬೇಕು ಪಡೆ ವೃಥ । ವಡಸದಾಹವಕಾರನಿರದಂಗದನೆ ಯನೆಕೃಷ್ಣಾ ॥ ೩೫ ॥ ಕೊಟ್ಟು ಅಂಗದಗುತ್ತರವ ಭಯ । ಬಟ್ಟ ಬಲಕಿತ್ತಭಯುವನು ಸರ । ಳಿಟ್ಟು ಕಾರ್ಮುಖವೆತ್ತಿ

ಲಕ್ಷ್ಮಣವೆತ್ತಿ ನಂಗದಿರಲತ್ತಾ ॥ ಬಿಟ್ಟು ವೋಡುವ ದಳಕೆ ಅಭಯುವ । ಕೊಟ್ಟು ಬೆಂಬಲಸಹಿತ ರಾಮನ । ಮುಟ್ಟಿ ಬಂದ ಸಹಾಯ ಸೂರ್ಯಜನನೋಕೋಪದಲೀ ॥ ೩೬ ॥ ಆರು ನೀ ಸುಗ್ರೀವನಿಗೆ ಬೆಂ । ದೋರಲೇನಹೆಯಾತ ಕೇಬರಿ । ಶೂರ ಬೇಡೆಂಬ ಹಿತ ಕೇಳಾನೀಗ ರಾಘವನೂ ॥ ತೋರ ಬಹುದೀ ನುಡಿಯ ಮಲತರ ! ಭಾರಿಸಲು ಮರೆಹೊಕ್ಕರಸ್ತವ । ಸಾರಲೈದಿಹ ರವರಮಿತ್ರರು ಯಾರು ನೀನೆಂದಾ ॥ ೩೭ ॥ ನೀನೆ ರಾಘವ ನಂಗದನಿಗೆದು । ರಾನಲೈದಿದನನುಜ ಲಕ್ಷ್ಮಣ । ರೇನು ಮಿತ್ರನೆ ಆಹಿತ ಸುಗ್ರೀವನನ ಬೆಂಬಲರೇ ॥ ನಾನು ಹಗೆಯೇ ಯನಗೆ ಯದುರು ರ । ಣಾನುವರ್ತಿಯೆ ನೀನು ಯಲ್ಸಂ । ದಾನಿಸಸ್ತ್ರದ ಭರವನೋಡುವೆನೆಂದ ಕಲಿವಾಲೀ ॥ ೩೮ ॥ ಧನುಜ ಖಚರಾಧೀಶ್ವರನು ಹುಲು ! ಜನರ ಕಂಡಂತಿರುವ ನೀನರ । ಮನುಜರೇನೋ ಹಸ್ತಿಮಶಕನ್ಯಾಯದಿಂದವರಾ ॥ ನೆನದನಲ್ಲದಲೇಕೋ ಧೀರರ । ದೆನುತ ನೆನೆಯದೆ ಖರನ ಆಹತ । ಮನಕೆ ತರದೆದುರಾದ ಬಲಿಮುಖಕೇತು ರಾಘವಗೇ ॥೩೯॥ ಕೊಟ್ಟು ದಿವ್ಯಾಸ್ತ್ರಗಳ ಕಳೆದೆದು । ರಿಟ್ಟು ಖಡಿದೆಡೆಯಲ್ಲಿ ಪ್ರತಿಶರ। ದೊಟ್ಟು ಬಿಟ್ಟೆಕ್ಕಡಿಸಿ ಕೈಕಾಲಿಟ್ಟ ಮೌಳಿಗಳಾ ॥ ಕುಟ್ಟಲಡಿಮೇಲೆತ್ತಿಮರೆತೆರೆ। ಗೊಟ್ಟು ಕೈಚಳಕದಲಿ ಯಡೆಗವ । ತಟ್ಟಿಸದಲಿಕ್ಕಡಿಪ ರಣಶಾರದರು ಸಮರದಲೀ ॥ ತಕ್ಕೊ ನೋಡಿ ಸರಳ ಬಿಲ್ಕಡಿ । ದಿಕ್ಕುತಿಹುದೆಂದಂಗಳಕೆಸೇ । ದಿಕ್ಕುತೆಡಗೈ ಬಲದ ಹಸ್ತವ ಕವಚ ಕುಂಡಲವಾ ॥ ಚೊಕ್ಕ ಕೌಸ್ತುಭ ಹಾರಗಳ ಖಡಿ । ದಿಕ್ಕಲಾತುರದಿಂದ ಕೈ ಚಳ । ಕಕ್ಕೆ ಸಂದೀಯ್ಯದಲೆ ಕಾದಲು ಹರಿಯ ಹರಿಕೇತೂ ॥೪೦॥ ತಪ್ಪಿಸಂಬಂಬುಗಳ ವಿಗ್ರಹ । ಕಪ್ಪಳಿಸಲಡಿಮೇಲಿಗನು ಕೈ । ಯಪ್ಪಳಿಸುತೆ ರೇರಿಗಗನಕೆ ಸಾಧಕದಿ ಮೆಲಮೆಲನೆ ॥ ಬಪ್ಪರಿದ್ದೆಡೆಗಿನಿತು ದಶವಾ । ರುಪ್ಪಳಿಸಿ ವೋರೋರ್ವರಿಗೆ ಸಮ । ನಪ್ಪರೀತಿಯ ಚಳಕಗೈದೂ ರಣಬಲಾಹಕರೂ ॥ ೪೨ ॥ ವೊಬ್ಬರೊಬ್ಬರಿಗಣೆಯದಲೇಹಿ । ಕೆಬ್ಬಿಸದಲರುಣಾಸ್ತ್ರವಾದಿಯ । ಸಬ್ಬ ಮಂತ್ರಾಸ್ತ್ರಗಳ ತೊಟ್ಟರು ತರಣಿ ಶಾರ್ವರಿಯಾ ॥ ನಬ್ಬಿಸಂಬುಧ ವಾಯುಗಿರಿ ವ । ಜ್ರುಬ್ಬಿಸುತಲೊಡಬಾಬ್ಧಿ ಹರಿಶರ । ಬೆಬ್ಬಿಸುತಲೆಚ್ಚಾಡಿದರು ಸಮುಸತ್ವದುಲ್ಲಸರೂ ॥ ೪೩ ॥ ನೋಡಿ ನಾನಾಯತಪ್ರಯತ್ನವ । ಮಾಡಿದರು ಯಡೆಗೇಕ ಬಾಣೊಡ । ಗೂಡದಂತಡ್ಡಿಸುವರಲ್ಲದೆ ಪುಷ್ಪಕವ ಸೋಂಕಾ ॥ ಗೂಡಿಸರು ಬಲಕರದಿ ನೀನೆನ । ಜೋಡನಲ್ಲೆನುತಿಹರು ಕಣ್ಬಿಡಿ । ಯಾಡಿಸುತ ಪಲ್ಮಸೆವ ರಾಘವ ವಾಲಿ ಯಿರಲಿತ್ತಾ ॥ ೪೪ ॥

ಯತ್ತಿ ಕಾರ್ಮುಖವಿರ್ದು ನಾರಾ । ಚೊತ್ತಿ ಬಿಟ್ಟದುರಾಶ್ರಯನು ಬಿ । ಟ್ಟು
ತ್ತರಿಸಲಹುದಾಗ ಲಕ್ಷ್ಮಣ ಶೂರ ನೆಂಬೋಕ್ತಾ ॥ ವೆತ್ತ ಬಹುದೆಂದಂಗದನ
ಬಾ । ಣೊತ್ತಿಗೈತರಗೊಡದೆ ನಡು ವು । ದ್ಯುತ್ತರಿಸಿ ವಾರೊತ್ತಿ ಲಕ್ಷ್ಮಣನೆ
ಸೆದನಿಡುಗೋಲಾ ॥ ೪೫ ॥ ಮೆಚ್ಚಿದೆನೊ ಅಹಿತೆನ್ನ ಶರಬಿ । ಬ್ಬಚ್ಚಗೊಳಿಸಿದ
ಕೀಗಲುರುಗಾ । ಸ್ತ್ರೆಚ್ಚಪೆನು ತಡೆಯೆಂದು ಬಿಡಲಂಗದನು ವುಗುಳಿಡುತಾ ॥
ಲಚ್ಚುತನು ಯಿಂತೆಂದನೆಲೆ ಖಗ । ನಚ್ಚವುರುಳೆನಲೀತರಿಂದೆನ । ಗಚ್ಚಿಸುವಗ
ರುಡೆದುರಿಗುರುಗಾಸ್ತ್ರೆಸೆದರಿಂದೆನಲೂ ॥ ೪೬ ॥ ಬಿಡೆನು ಬದಲಾಸ್ತ್ರವನುಯ
ಲ್ಲದ । ನೆಡೆಗೆ ಕಳುಹೆನಲಗ್ರಟಕ್ಕಿಯ । ಕಡುಹನೋಡ ದ್ರುಶ್ಯಗೊಳಲುರುಗಾ
ಸ್ತ್ರಮಧ್ಯದಲೀ ॥ ಸಿಡಕ ನೋಡೊಂವುಟ್ಟಕೋಶಾಂ । ತಡಸಿ ಮೂರ್ಚೆಯು
ನೊಂವೆ ಹತಿಸದೆ ! ತಡೆದರೇನ್ನೈತಂದೆ ಹ್ರೀಬಿಟ್ಟಂಗದೆನೆ ಹರಿಯೂ ॥ ೪೭ ॥
ಕೊಲ್ಲದಿರ ರಾವ್ಮೈಯ್ಯ ನಿಂವ್ಮೈ । ಯಿಲ್ಲ ವಂಶಚ್ಛೇದಿಸದೆ ಬಂ । ದಲ್ಲಿಗೈದಂ
ಗದನೆ ಕೆಡಬೇಡೆಂದ ಲಕ್ಷ್ಮಣಗೆ ॥ ಸೊಲ್ಲ ಮುಚ್ಚಾಮಂಣಗೀವಂ ! ಣೆಲ್ಲೊ
ಪಿತನೆದುರಾಗ ಕೈಚಳ । ಕೆಲ್ಲ ವೋಸಿಗ್ರೋರು ಯನುತಸಿವಿಡದು ಬರೆ ಖಚರಾ
॥೪೮॥ ಆಹುದು ಬಲಕರ ನೀನು ಯನಬಿ । ಟ್ಟುಹರಿಗಲ್ಲದೆ ಕಂಡಕಂಡೈ । ತಹ
ರೆ ಅಂಗದ ನಿನ್ನ ನೀಕ್ಷಿಸಲೆಂವು ಶತ್ರುಜ್ಞಾ ॥ ಗ್ರುಹಕೆ ಬರುವಂತಿರುವೆ ಯದ
ರಿಂ । ದಹಿತಗೊಳೆ ನಿಂಚಾಪ್ಟೆಯನು ಕಂ । ಡ್ಸಹಿಸದೆನವುನ ಕೊಲಲು ಕೈಬ
ರದೆಂದ ಲಕ್ಷ್ಮಣನೂ ॥ ೪೯ ॥ ಇಟ್ಟು ಪಾಶುಪಥಾಸ್ತ್ರದಲಿ ಪೆಡ । ಗಟ್ಟ ತ
ದ್ರುಥವಿದ್ದ ಬಳಿ ನಿಂ । ನಟ್ಟಕೆಡಹಿದ ಧೀರ ಶ್ರೀಕೃಷ್ಣನ ನೋಡಿ ಸುಗ್ರೀವ ॥
ಬಿಟ್ಟು ಮೂರ್ಛೆಯ ಜಾಂಬವನ ಹಿಂ । ದಿಟ್ಟು ವೀರಾಧಿತನು ಸಹ ಮುಗು ।
ಳಿಟ್ಟು ಬಂದಡಿಗೆರಗಿದರ ಕುಸ್ತರಿಸಿ ಪಿಡಿದೆತ್ತೀ ॥ ೫೦ ॥ ಅನಿತರೊಳಗಾಖ
ಚರವಾಹಿನಿ । ವಿನಯದಿಂ ದಾನತಿಸಿ ಅಂಗದ । ನೆನಲು ಬದುಕಿದರಿಲ್ಲ ಖಡಿಯು
ದೆ ಕಂಣಿಲೀಕ್ಷಿಸದೇ ॥ ಅನಿತು ಶೂರನ ನಾಗಪಾಶದಿ । ಬಿನದಗೊಳಿಸಿದೆನಿನಗೆ
ತ್ರೈಜಗ । ವೆನುವದೊಂದೆ ತ್ರುಣವೆಂದು ಹೊಗಳಿದರೆದ್ದು ಕೈಮುಗಿದೂ ॥೫೧॥
ಅಂಗದನ ಕಂಡಾಕ್ಷಣವೆವುಸು । ರಿಂಗುವದಳವಳಗೆ ಕ್ಷಣ ರಣ । ರಂಗಕೈತರ
ದಿರಲು ನೀನೆ ಮನೆಚ್ಚಕೆಲಸಿಲ್ಲಾ ॥ ಸಂಗಡಲೆ ಬಂದ್ಕಾಯ್ದೆ ಜಗಕು । ತ್ತುಂಗ
ನಿರ್ಮ್ಮಲಶೂರ ನಿನಗ । ಭಂಗಜರು ನಾವೆನಲುಜಾಂಬವನಾದಿ ತ್ರೈವರರೂ
॥೫೨॥ ಕಂದರೆನುವರೆ ಮಿತ್ರರೆಮ ಸಮ । ಬಂದು ನೀವಿಲ್ಲಿಹುದು ನಾಪೋ ।
ಪೆಂದು ಲಕ್ಷ್ಮಣ ಬರುವವರೆಗತ್ತಧಿಕ ದಿವ್ಯಾಸ್ತ್ರಾ ॥ ದಿಂದಲೆಚ್ಚಾಡಣೆಯುದ

ಲೆಯಿಂ। ತೆಂದ ರಾಘವನೆಲೆ ಖಗೇಶ್ವರ । ನಿಂದುವರೆಗಾತಡದೆ ಸೈರಿಸೆ ನಿಂನು ಯನೆಕೇಳೀ ॥೫೩॥ ತಡದೆಯೋ ಕೈನಡೆಯುದಲೆ ಬಿ। ಟ್ನುಡಿದೆಯೋ ಅಡಗಿಟ್ಟ ಶೌರ್ಯವ। ನಡಸು ನಾತಿಳಿವಂತೆ ಕರುಣವ ಬಿಟ್ಟು ಯನೆ ವಾಲೀ ॥ ಕೆಡುವನಿಗೆ ಬುದ್ದಿಲ್ಲವೆಂದ್ಜನ। ನುಡಿಗೆ ಸರಿಯುಂದಗ್ನಿಶರವನು। ಪಿಡಿದರಾಘವನೆಳೆಯುಲುರಿಯುಚ್ಚರಿಸಿತಂಬರಕೇ ॥ ೫೪ ॥ ನೋಡುತದಕಾದಿಯಲೆ ಖಗತ। ಜ್ಜೋಡಿಸಿದನೈದಾರು ಬಾಣವ। ತೀಡಲೊಜ್ರಾವರ್ತ ಬಿಲ್ಲಲಿಬಡಿಪು ಕೆಡಹುತಲೀ ॥ ಜೋಡಿಸಗ್ನ್ಯಾಸ್ತ್ರವನು ಕಿವಿವರೆ। ನೀಡಿ ಬಿಡೆಲಯುಗಾಲಸಿಡಿಲು। ಗ್ರಾಡಿ ದಂತಾರ್ಭಡಿಸಿ ಬಹದರಿದಾಗ ಕಲಿವಾಲೀ ॥ ೫೫ ॥ ಬಿಟ್ಟನೊರುಣಾಸ್ತ್ರವನು ಘುಳಿಘುಳಿ। ಪಿಟ್ಟು ಮುಂಕೊಳೆ ದಿವ್ಯಶರಗಳ। ಲಿಟ್ಟವಾಲಕ್ಷಿಸುತಲೈತಂದಗ್ರಕಂದರವಾ ॥ ಮುಟ್ಟಿಕಚ್ಚಂಬರಕೆ ಹಾರಿಸಿ। ಬಿಟ್ಟರಿನಬಿಂಬದೊಲುಹೊಳವೆಳ। ಗಿಟ್ಟು ಬಿರ್ದ್ದುದು ಬಲಿಯ ಪಿರದೆಡೆ ವಾಲಿ ಮಸ್ತಕವೂ ॥೫೬॥ ಬಂದನನಿತರ ಲಗ್ರಜನ ಬಳಿ। ಗಿಂದಿರೇರಮಣದನು ಕಂಡೈ। ತಂದಜಾಂಬವ ದಳಸಮೇತಲಿ ಆನಕಧ್ವನಿಯೂ ॥ ಬಂಧುರಿಸಲೈತಂದು ಕಪಿಕೇ। ತೆಂದ ವೀರಾಧಿತನು ನಿಮಗನು। ಬಂದರಿಲ್ಲಿ ಲೋಕದೊಳಗೆನ ಲರುಹಸ್ಮರಣೆಯಲೀ ॥೫೭॥ ಕಲಿಲಹರ ಮುನಿಸೂವ್ರತಾಂತ್ಯದಿ। ಚಲಿತರಾದಾ ರಾಮ ಲಕ್ಷ್ಮಣ। ರೊಲವಿನೀ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀ ಚಂದ್ರಸಾಗರ। ರೊಲಿದು ವಿರಚನೆ ಗೈದರಿದಮುನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೫೮ ॥

ಅಂತು ಸಂಧಿ ೪೨ ಕ್ಕಂ ಪದನು ೨೫೬೧ ಕ್ಕಂ ಮಂಗಳಮಹಾ ಶ್ರೀ ಶ್ರೀ.

ನಲವತ್ಮೂರನೆಯ ಸಂಧಿ.

ಸೀತಾ ಸ್ಥಿತಿಯ ಸಂಧಿ.

ಕಟ್ಟಿ ಸುಗ್ರೀವನಿಗೆ ಪಟ್ಟವ । ಕೊಟ್ಟು ಅಂಗದಭಯುವನು ಅಳ। ವಟ್ಟು ಕನ್ಯಾತ್ರ್ಥದಲಿ ರಘು ಜಾನಕಿಯ ನೆಲೆ ಯರಿದಾ ॥ ಪದಾ ॥

ಕೇಳಿದೈ ರಾಜೇಂದ್ರ ಲೋಕದೊ । ಳಾಳು ಯಿಲ್ಲೆನಿಸಿರ್ದ ಕಲಿರಣ ।
ತೂಳುವಾಲಿಯ ನೊಂದೆ ರಾಂಬಾಣದಲಿ ರಘುವೀರಾ ॥ ಬೀಳಲೆಚ್ಚಿರ್ದೆಲ್ಲ
ಸರಸವ। ದಾಳಿದಸ್ತ್ರೆಚ್ಚಾಡಿದನು ಯದು। ರಾಳರೇ ರಾಘವಗೆ ಯಿಲ್ಲಿನ್ನೆಲ್ಲಿಯನೆ
ಮುನಿಪಾ ॥ ೧ ॥ ಬಿದ್ದ ವಾಲಿಯುನರಿದು ದುರ್ಘೋ। ಷೆದ್ದ ದಳವಂಗದನ
ಹೆಡಕ । ಟ್ಟೆದ್ದು ದುಗಿಯಲು ಬಾರದಾಂದೋಳದೊಳು ಪೊತ್ತವನಾ ॥ ಯದ್ದ
ವರಾದಿ ಲಕ್ಷ್ಮಣಗೇ ‖ ೪೧ ‖ ಸಾಕು ನಿಮಶಕ್ತಿಯನು ವಿವರಿಸ। ಲೇಕೆಅ ಕಾರ್ಯ್ಯವನು ನಿನಗೆಂ । ಬೋಕ್ತದಯಮಾಡ್ನೋಡಿ ತವ ಭೃತ್ಯಾತ್ಮನೊಳಶ ಕ್ತೀ ‖ ಲೋಕಮಾತ್ರಹುದಲ್ಲವೆಂಬೋ । ಕ್ತಾಕರಿತ ಮಾರುತಿಯ ಕೈಹಿಡಿ । ದೇಕೆ ನೀನಾನೆಂಬ ಭೇದವದೆಂದ ಮಾಧವನೂ ‖ ೪೨ ‖ ರಾಮದೇವರಬಲ ಭುಜನು ನೀ । ನೋಮಭುಜನಂಗದನು ಸೀತಃ। ರಾಮಗಾನನುಚರನು ನಳ ನೀಲಾದಿ ಸುಗ್ರೀವಾ ‖ ಈ ಮಹಾಜಾಂಬವರೆ ಅನುಜರು । ಪ್ರೇಮದರ್ಭಕ ಚಂದ್ರಸುತ ನಿ। ನ್ನೀ ಮಹಾ ಖೇಚರರೇ ಬಾಂಧವರೆಂದ ಸೌಮಿತ್ರೀ ‖೪೩‖ ಇಹುದು ದಳ ಶ್ರುಂಗರಕೆ ಅಹಿತನ। ಸಹಸಕಾನಿಹೆನೆಂದು ಮುನಿಪನ। ವಿಹಿತ ದಿಂ ಬೀಳ್ಕೊಟ್ಟು ಸೌಮಿತ್ರೀರಲೊಯ್ಯಾನಾ ‖ ಸಹಯರೆಲ್ಲಡರಿದರು ಕಿಷ್ಕಿಂ। ದ್ಮಹೀಧರಕೆ ವಿನತೆಯಲೋಕೇ । ಷ್ಟಹನಪದಸ್ಮರಣೆಯಲಿ ಬಂದನು ಅಭ್ರ ಮಾರ್ಗದಲೀ ‖ ೪೪ ‖ ಕಲಿಲಹರ ಮುನಿಸೂಪ್ರತಾಂತ್ಯದಿ। ಚಲಿತರಾಗಿಹ ರಾಮಲಕ್ಷ್ಮಣ । ರೊಲವಿನೊಳಗೀ ಕರ್ನ್ನಾಟಕಾವ್ಯಕೆ ಸ್ರೇಷ್ಟವೆನಿಸಿರುವಾ‖ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನಮುನಿಗ । ಳಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ‖ ೪೫ ‖

ಅಂತು ಸಂಧಿ ೪೭ ಕ್ಕಂ ಪದನೂ ೨೬೯೮ ಕ್ಕಂ ಮಂಗಳ ಮಹಾಶ್ರೀ ಶ್ರೀ.

ನಲವತ್ತೆಂಟನೆಯ ಸಂಧಿ.

ಮುದ್ರಿಕೆಯ ಸಂಧಿ.

ಹೋಗಿ ಲೆಂಕೆಯೊಳರಸಿ ಯಿರದಿರ। ದಾಗ ಕಪಿಯಾಗೊನದಿ ಜಾನಕಿ। ಗಾಗ ಮುದ್ರೆಯನಿತ್ತು ವನವನು ಕಿತ್ತು ಮಾರುತಿಯೂ ‖ ಪದಾ ‖

ಕೇಳಿದೈ ಭೂಪಾಲ ಮುನಿಪನ। ಬೀಳಕೊಟ್ಟಾ ರಘುಜನನು ಜನ। ಯೇಳಿಗೆಗೆ ಮುದ್ದ್ರೋದದಲಿ ಅಣುಮಾನ್ಯನಾದಿಯರಾ‖ ವೇಳದೊಳಗಾಕಾಶದಲಿ ಪವಿ। ಬಾಳನೊಯ್ಬುವದಿಂದ ಲಾನಕ । ತೂಳದಿಂದ್ಯೈತಂದ ಕಿಷ್ಕಿಂದಾದ್ರಿಗೊ ಹಿಲದಲೀ ‖೧‖ ಸಿದ್ದಶೈಲವನೆತ್ತಿ ಬಹರೆಂ। ಬುದ್ಧತವ ಪದ್ಮಾಕ್ಷಿ ತಾರೆಯ ।

ರೊದ್ದಿ ತನುತನು ಪುತ್ರಿಯರು ಸಹವೇರಿ ಸೌಧಗಳಾ ॥ ಹೊದ್ದಿಬಹ ಖಚರೇಕ ತಾರನು । ಬದ್ಧಯಿನ ಶಶಿಯಂತೆ ರಘುಹರಿ । ಮುದ್ದುರೂಪಾಲೋಕಿಸಿದರಾನಂದದಿಂದರಸೇ ॥ ೨ ॥ ನಾರಿಯರ ತನುಹಿಗ್ಗಿ ಮುಗುಳ್ನಗೆ । ಸಾರಿಕಂಚುಕಿ ಬಿರಿದು ಕಳವಳ । ದೋರಿ ಪುಳುಕೋದನುದಿ ಮಿಡಿದೊಕ್ಷಜಗಳೂರುಳುಗಳು॥ ಗಾರಿಸಲು ನಡುನಡುಗಿ ಪ್ರಿಯರಾ । ಕಾರದನ್ಯುತವಕ್ಷಿಗಳಲ್ಲಿ । ಸ್ಪೀರಿದರು ಸನ್ಮೋಹನಾಂಗಿಯರರಸಚಿತ್ತೈಸೂ ॥ ೩ ॥ ಬಯಸೆ ವಕ್ಷಜ ಹಸ್ತಗಳ ತುಟಿ । ಬಯಸೆ ರದನಗಳಂಗತಳ್ಕಿತ । ಬಯಸೆ ಕಿವಿಕಲ ವಚನಗಳ ನೆರೆಬಯುಸಿಬಾಯಾರೀ ॥ ವಯುರುಗೋಣುಗಳೆತ್ತಿ ತನುನಿಜ । ಪ್ರಿಯರ ನೆನೆಯಿಡದಂತೆ ನೋಡುವ । ಸ್ತ್ರೀಯರು ನಿರ್ಜರರಂತೆ ಯಸೆದರು ರಾಯಚಿತ್ತೈಸೂ ॥೪॥ ಅವನು ಯಿವರಿಂಗೇನು ಹೆಚ್ಚಂ । ದೆನೆಯುಲುಗು ಮಿಗಿಲಾದರಲಿ ಸನು । ಯುವತಿಯೇ ಸುಗ್ರೀವ ವಾಲಿಯ ಗರ್ಭಜೆಯರೆಲ್ಲಾ ॥ ತವಕದಿಂ ನೋಡುವರ ನತ್ಬರು । ತವರು ಕಂಡರೆ ನಗರೆ ಭ್ರಮೆಯಂ । ತಿವರಿಗೇನುತೆಚ್ಚರಿಸೆದಾದಿಯರೆಲ್ಲ ನಾಚಿದರು ॥ ೫ ॥ ಹ್ರೀಗೊಳುವ ಸುಕುಮಾರಿಯರ ಬೆಂ । ನ್ನಾಗಿಪದ್ಮೆಸುತಾರೆಯರು ಪ್ರಿಯ । ರಾಗಮಿಸಿದರು ನಿಕಟಕೆನುತಲಿ ಯಿಳಿದುಸೌಧಗಳಾ॥ ಬೇಗಲ್ಗೊಳಪೊಕ್ಕ ವನಿಕೆಗೆ ಸನು । ನಾಗಿ ಜಾಳೇಂದ್ರದಲಿ ನೋಡನು । ರಾಗಿಸುತಲಿರಲಿಳಿವರೊಯ್ಯಾನಗಳ ನೃಪವರರೂ ॥ ೬ ॥ ಸಿದ್ದಶೈಲೋದ್ಧಾರ ಲಕ್ಷ್ಮೀ । ಮುದ್ದು ನಾರಾಯಣನೆ ಹರಿ ಕ್ರಿ । ಷ್ಣುದ್ದಸತ್ವನೆ ನೀಲಮೇಘಶ್ಯಾಮ ಸೌಪುತ್ರೀ ॥ ಪದ್ದುವಾಹನ ರಾಘವಾನುಜ । ಹೊದ್ದಿ ಅಣುಮಾನ್ಯಾದಿ ಖೇಚರ । ಬದ್ಧದೊಳಗೈತಂದ ರಘುಜನ ಬಲದ ಭಾಗದಲೀ ॥ ೭ ॥ ಮರುತಿ ರಾಘವನಸ್ತುಲಾಘವ । ನೆರಕದೊಳಗಂಗದನು ಲಕ್ಷ್ಮೀ । ಧರಗೆ ಕೊಟ್ಟ ಪರಾಳ್ದಮಿತ್ರತೆ ಭೃತ್ಯರಂದದಲೀ ॥ ತೆರಪುದೋರುತನೆರೆದವಿದ್ಯಾಧ । ರರೊಳರಮನೆ ಗೋಹಿಲದಲಿಕರ । ದಿರಿಸಿದರು ನವರತ್ನ ಸಿಂಹಾಸನದೊಳವನೀಶಾ॥ ಪೋದುದೀಗಾರೇಳುದಿನ ವಿ । ನ್ನಾದರಂಬಿಕೆತಹುದೊ ನೆಲೆಯನು । ವಾಧರಿಸಿ ಬಹುದಸುರ ಸಂಹರಗೈವದೀತಯದೀ ॥ ಪಾದಕಿಚ್ಚೇನೆಂದ ಮರುತಿಗೆ । ಆದಿಯಂತ್ಯವನುಳಿದು ಕಾರ್ಯವ । ಸಾಧಿಸೆನುತಾ ರಘುಜ ನೇಮಿಸುತಿದ್ದ ನಿಂನಂತಾ ॥೯॥ ಶೂರವಾಲಿಯ ಕೊಂಮುದೆಂತೊ ವಿ । ಚಾರಿಸೆನೇ ಮಾರೀಚನ ದೃಶ । ದೋರಿ ತಿಳಿದೆಲ್ಲೈದ ಪೇಳಿದನಾಗ ದಶಮುಖಗೇ ॥ ಮಾರುತಿಯು ಬಂದೆಲ್ಲ ವಿದ್ಯಾ । ಧಾರರೈದಿಸಿ ಸಿದ್ಧಶೈಲೋ । ದ್ಧಾರ ವಾಲಿ ವಿಹಾರವೆಲ್ಲವ

ನರುಹಲಾಪ್ತದಲೀ ॥೧೦॥ ಭಾರಿದಳ ಬಲಕರರುಹಗೆ ಕೈ । ಸೇರಿದರು ಸಾ
ಮಾನ್ಯನಲ್ಲವ । ರೋರುವರೆ ಪ್ರತ್ಯೇಕ ಲೋಕಾಕ್ರಮಿತ ಸಾಹಸರೂ ॥ ವೀರ
ರಾಘವ ಕ್ರಿಷ್ಣ ಹವಿಯಾ । ಕಾರ ನೀಲಜನಂಗದರು ಬ । ಲ್ಮಾರುತನತೆರನಾಗಿ
ಸೇರಿದರೆಂದ ಮಾರೀಚಾ ॥ ೧೧ ॥ ಆದಿಯಲಿ ಪಾತಾಳ ಲೆಂಕೆಯು । ಪೋ
ದುದಲ್ಲಿಂದೀಗ ಕಿಷ್ಕಿಂ । ದಾದಿ ವಿಜಯಾರ್ದ್ದಬ್ಧಿ ದ್ವೀಪಗಳೆಲ್ಲ ಸುಗ್ರೀವ ॥
ನಾದಿಯಂಗದ ಮರುತಸುತ ನಿ । ನ್ನಾದರೆಲ್ಲರು ಕೂಡಿ ಬಲಕರ । ರಾದರಹಿತ
ರುಬರದೆ ಮಾಣರು ಯಂದ ಮಾರೀಚಾ ॥ ೧೨ ॥ ಹೊರಟು ಕಾದುವೆನೆಂಬ
ಧೈರ್ಯವ । ಮರೆವುದಂಗನೆ ಬಿಟ್ಟು ಸ್ವಸ್ಥ । ದೊಳಿರುವುದಲದಿರೆ ಶಾಲಿಕೊಂ
ಟೆಯವಿರಚಿಸಾಕಂತ ॥ ಬರದರೀತಿಯ ಗೈವುದನಿಲಜ । ನರಿಯದಿಹ ವಿದ್ಯಿಲ್ಲವ
ದರಿಂ । ದೆರಡೆರೊಳಗೊಂದೆಸಗು ದಶಮುಖನೆಂದ ಮಾರೀಚಾ ॥ ೧೩ ॥ ವಾ
ರುಧಿಯೊಳೊಂದ್ಕಂಜ ನೀರನು । ಬೇರೆ ತೆಗೆದರೆ ಕುಂದೆ ವಿದ್ಯಾ । ಧಾರರೈದಿ
ದರಿಲವೆ ಧಾರುಣಿ ಮೂರುಖಂಡವನೂ ॥ ವಾರಿಸಿತೆ ಬಲವೆನಲು ಶೈಲೋ ।
ದ್ಧಾರ ನಿನ ಹಗೆಯ್ಯೆಸೆಯನೆ ಸು । ಳ್ಳಾರದೆಂದ ಸುರೇಂದ್ರ ಗಂತ್ಯೆಂದುಲಿದ ಮಾ
ರೀಚಾ ॥ ವುಳಿದುವೂರಿಂನಿರ್ದ್ಧ ಧಾರುಣಿ । ಗಳ ವಿಲೋಕವಿಲ್ಲ ನಿನಭುಜ ।
ದಳವದದುಗಿತು ಸಿದ್ದಶೈಲದಿ ಮೇಣು ಗೆಲುಗೊಳ್ವಾ ॥ ಬಳಿಯಲೆಚ್ಚರವಿರಲು
ಸತ್ವಕೆ । ಮಿಳಿತ ಜಾಣ್ಮೆಗಳಂತೆ ಯಂನೊ । ಕ್ತುಳಿಯದೆಸಗಾಕೆಲಸ ದಶಸಿರ
ನೆಂದ ಮಾರೀಚಾ ॥೧೪॥ ಇಹುದು ಚಕ್ರೀ ಲೋಕವಾಕ್ರಮ । ಸಹಸವುಂಟೆಂ
ದ್ರಾರಿಸುತನುಂ । ಟಿಹನು ಅತಿಬಲ ಕುಂಭಕರ್ನ್ನನು ಹಸ್ತ ಪ್ರಾಹಸ್ತಾ ॥
ರಿಹರು ಕೈಲಾಸಾದ್ರಿ ನಿಂನಧಿ । ಕಹುದೆ ಸಿದ್ಧಾದ್ರಬ್ಧಿಯೊಳು ಪುರ । ವಿಹುದು
ಭಯವೇನೆಂದ ದೈತೇಶಾಗ ಮಾತುಳಗೇ ॥ ೧೬ ॥ ಇರಲಿ ಬಲದಳ ಶೂರರಾ
ದರು । ಯಿರಲಿ ಯಚ್ಚರ ಹೊರತು ಮದಮು । ತ್ಕರವು ಸಿರಿಗೆಡರಹುದು ಕೇ
ಳ್ದೆಂನೋಕ್ತಶಾಲಿಯನೂ ॥ ವಿರಚಿಸೆನೆ ನಿನಗೊಪ್ಪಿದರ್ತ್ಥವ । ಗರೆವುದೆನೆ ದೈ
ತ್ಯೇಶ ವಿದ್ಯಾ । ಪರಿಧಿ ಸಹ ನಿರ್ಮ್ಮಿಸಿದ ರವುದ್ರಾಕರವ ಮಾರೀಚಾ॥ ೧೭॥
ಮಾಡಿ ಅಸದಳ ಕೆಲಸ ನಿಶ್ಚಲ । ಗೂಡಿ ಯಿರಲಿತ್ರಘುಜ ಮಾರುತಿ । ನೋಡಿ
ವುಲಿವವಸರದಿ ಬಂದನು ಪುನಹ ನಾರದನೂ ॥ ಮಾಡಿವಂದನೆ ಕ್ಷಣದೊಳಗೆ
ಯ । ಲ್ಲಾಡಿ ಬಂದುದ್ಯುಕ್ತವನು ಶ್ರುತಿ । ನಾಡಿರೆನೆ ರಘುವೀರಕೇಳೆಂದುಲಿದ
ನಾಮುನಿಪಾ ॥ ೧೮ ॥ ಲೆಂಕೆಯನು ಪೊಕ್ಬರುವೆನೆಂಬಾ । ತಂಕದಲಿ ಪೋಗಿ
ದ್ದೆನದ ನಿ । ಶ್ಯಂಕೆಗೈದಿದರೆನಗೆ ಪೋಗಲಸದಳದಿ ಪಿಂತಿರುಗೀ ॥ ಭೋಂಕ

ನೈದಿದೆ ನಿನಗೆ ಪೇಳ್ವೆ ವು । ನಂಕುರದಿ ಯಿನ್ನಿನಗೆ ಸಾದ್ಯಿ । ಲಂಕೆ ರಾಘವ
ನೆಂದ ನಾರದನೋತು ಪೇಳೆಂದಾ ॥ ೧೯ ॥ ಭೂಮಿಗರ್ಭಕೆ ಯೇಕತೆರದಿಂ ।
ನೇಮಿಸೂಜ್ರದ ಪರಿಧಿಯನು ಸಂ । ಜ್ಞೇಮೆತೂರದ ತೆರನಗೈದಿಂನೇಕ ಯೋ
ಜನದೀ ॥ ಯಾಮಹರು ಬರಲಟ್ಟ ನುಂಗುವ । ಭೀಮ ಹರಿ ಪುಲಿಸರ್ಪ್ಪನ
ನಲಭಿ । ರಾಮಗೈದಿಹ ನರಿವುದವನಿಪನೆಂದ ನಾರದನೂ ॥೨೦॥ ಆಡಬಾರದು
ಅಸುರವಿದ್ಯವ । ನೋಡಬಾರದು ಅದನು ಪೊಗುವಡೆ । ಜೋಡರಿಲ್ಲಿಂನೆನೊ
ಸಾಹಸನೆಂದು ಮಾರುತಿಯಾ ॥ ಆಡುವಿರಿ ಯಿವನಿಗಸಾಧ್ಯವ । ಮಾಡಬಿಡಲಿ
ಪನಲ್ಲ ಪುಳಿದರ । ನಾಡದಿರಿ ವಿನತೇಯರೆಂದತ್ರೈದೆ ನಾರದನೂ ॥ ೨೧ ॥
ನಾರದಾಡಿದನುಡಿಗೆ ವಿಸ್ಮಯ । ದೋರಿ ಚಿಂತಾಕ್ರಾಂತಪದ ರಘು । ವೀರಕೇ
ಳದ್ದಲದೆ ಪುರುಗಮರಾವನಿಯೊಳೆಲ್ಲೀ ॥ ಸೇರಿರಲಿ ವೈಕೂರ್ವಣದಿ ವಿ । ಸ್ತಾ
ರವೇಗ್ಯೆದಿರಲಿ ನಿಂಮೊಚ । ಮೇರೆನಾಗೈಯ್ಯದಡೆ ತವ ಪುತ್ರಲ್ಲವೆನೆ ಮರುತೀ
॥೨೨॥ ದೂರಿಸಿರಿ ಚಿಂತೆಯನು ಲಂಕೆಯ । ಸೂರಿಸಲೊ ಮತ್ತೇನುಗೈವದ ।
ತೋರಿ ಮಾರುತಿ ಕಂದ ಬಲಕೇಶವರು ನೀವಾಗೀ ॥ ಸಾರುವರೆ ಚಿಂತೆಯನು
ಪಿಂಡು । ತತ್ಕರಣಕೆ ಸರಿಯಾಗಿ ಸೀತೆಯು । ಸೇರಿಹಳು ಲಂಕೆಯನು ಯಿಲ
ದಿರೆ ರಾಕ್ಷಹತವೆಂತೂ ॥ ೨೩ ॥ ವಡೆಯುಬಲ್ಲೆನು ವಜ್ರಪರಿಧಿಯ । ನಡೆಯ
ಬಲ್ಲೊಯ್ಯೂರ್ವಣದಿ ಕೆಡೆ । ಬಡಿಯ ಬಲ್ಲ ಸುರೇಶನನು ಅಪ್ಪಣೆಯ ದಯ
ಮಾಡೀ ॥ ಕಡೆಗೆನೋಟ್ತ್ರಡವೇಕೆ ಯನೆ ಪಿಡಿ । ದೊಡನೆಮುದ್ದಿಸಿಮುದ್ರೆಯಿ
ತ್ತೆನ । ಮಡದಿಗಿದನಿತ್ತಹುದು ಚೂಡಾಸರವನೆನೆ ರಾಮಾ ॥ ೨೪ ॥ ಸೇಳಿ ಕ
ರುಹುಗಳೆಲ್ಲಪಾಕೆಯು । ಕೂಳನೊಲದಿಹಳಂತೆ ಕೊಂಬೊಲು ! ಹೇಳಿ ದಿ
ವೆಂಟರಲಿ ಬಹೆವೆಂದುಲಿದು ಬಹದಲ್ತೇ ॥ ತಾಳದಿಂ ನೊಂದ್ಕೆಲಸವನು ಪು
ತ್ರಾತ್ಳದಿಂ ಬಹುದೆಂದು ನೇಮಿಸಿ । ಬೀಳುಕೊಡೆ ರಾಘವನು ಮಾರುತಿ ಯ
ನಲ್ಲಿಂದಾ ॥ ೨೫ ॥ ಕರ್ತ್ರುರ್ಗ ಹಿರಿಯರಿಗೆರಗಿ ಕಿರಿಯರ । ನರ್ಥಿಸುತ
ಮಾನದೊಳು ಕುಳಿ । ತರ್ಥಿಯಿಂದ್ಯೆ ತಂದ ನಭದೊಳಗಿರ್ದ್ದ ದಳದೆಡೆಗೇ
ಸ್ವರ್ತವನು ಪ್ರಹಸಿತಗೆ ತಿಳಿವಂ । ತರ್ತಗೊಳಿಸುತ ಲಂಕೆಗನು ಮಾ । ಗೆ
ತ್ರಿಸಿದ ನಸಮಾನ ಮಾರುತಿ ದಕ್ಷಿಣಾಸ್ಯದಲೀ ॥ ೨೬ ॥ ಬರುತಪಲ್ಯಂಗ
ಯ ಅಗ್ರದಿ । ತೆರಳಿವೈಮಾನಾಗ ಜಾತಿ । ಸ್ಮರಣೆಯಿಂ ನಿಜಮಾತೆಪೇಳಿ
ನುಭವೆಲ್ಲವನೂ ॥ ಸ್ಮರಿಸಿ ಮುತ್ತೈಯಗ್ರಕೋಪವ । ಧರಿಸಿ ಮಾಹೇಂ
ದ್ರಿಯನು ಮೂ । ವ್ವರಿಸಿ ಮುತ್ತಲ್ಲೆಗ್ಗ ವಿಡಿದನರಿದ ಮಾಹೇಂದ್ರಾ ॥ ೨

ಆರಪೌಜಂದೇಳುವನ ಸುಕು । ಮಾರನಾದ ಪ್ರಸಂನಕೀರ್ತಿಯು । ಧಾರದಿಂ
ಬೆಸನಾಂತು ನಡೆದನು ಯದುರ ಪೌಜೊತ್ತೀ ॥ ಆರು ಯೆನುವದ ವಿದ್ಯೆಯೊ
ಳಗೆ ವಿ । ಚಾರಿಸುತ ನಿಜಬಲಕೆ ಸನ್ನೆಯ । ದೋರಿಹೂಂಕರಿಸಿದನು ಮಾರುತಿ
ಮುತ್ತಿತೊತ್ತರಿಸೀ ॥ ೨೮ ॥ ಕತ್ತಿ ಕೊಂತ ಸಿಗಳಲಿ ಹೊಡೆಬಡಿ ಯುತ್ತ ಶರ
ದೊಜ್ರೊರುಷವನು ಕರೆ । ಯುತ್ತಲರಿವಾಹಿನಿಯ ಕೈಕಾಲಾಡಗೊಡದಂತೇ ॥
ವತ್ತಿ ಕುತ್ತಿರಿದಿರಿದು ಕರಚರ । ಣುತ್ತರಿಸಿ ಕರುಳೆತ್ತಿ ಸೋರಿಸು । ವತ್ತರಕೆ
ಬಿಬ್ಬಿಹರ ಕಂಡು ಪ್ರಸನ್ನಕೀರ್ತಿಯನೂ ॥ ೨೯ ॥ ಇಟ್ಟು ಪಿಂಗಡೆ ಬಲವ
ಮುಂದಡಿ ಯಿಟ್ಟ ಹರಿವಾಹಿನಿಯ ಶಸ್ತ್ರವ । ತಟ್ಟಿ ತಲೆಬಾಲ್ಗೆಡುವತೆರದೊ
ಳಗಕ್ಷಯಾಸ್ತ್ರವನೂ ॥ ಬಿಟ್ಟು ಸಿರ ಮೊದಲಂಗಶಾಖೆಯ । ನಿಟ್ಟು ಕೊಚ್ಚುತ
ಸಿಂಹನಾದವ । ನಿಟ್ಟು ನರಿದೋಡಿದರು ಗಜಚಯದಂತೆ ಪುಳಿದದಳಾ ॥೩೦॥
ಸತ್ತರಲ್ಲದೆ ಅರಿಭಯದಿ ಬೆಂ । ಬತ್ತಿದರಿಗಣುಮಾನ್ಯನಭಯವ । ನಿತ್ತರೂ
ನಿಲದೋಡುವರ ಬಿಟ್ಟೊತ್ತಿ ಪುಷ್ಪಕವಾ ॥ ಬಿತ್ತರದ ಸತ್ವಹುದು ಕೈಯ್ಯ ।
ಲೈತ್ತು ನೋಡುವೆನೆಂದು ಬಿಲ್ಕರ । ಬತ್ತಳಿಕೆ ಯದೃಶ್ಯಗೈದ ಪ್ರಸನ್ನಕೀರ್ತಿ
ಯನಾ ॥೩೧॥ ಯಲ್ಲಿ ಬಿಲ್ಕೊಲ್ತರಿಸು ಬರದಿರ । ಲಲ್ಲಿ ಪಿಡಿ ಬದಲಾಸ್ತ್ರಶೌ
ರ್ಯ್ಯವ । ದೆಲ್ಲಿ ತೋರೆನಲೆಡೆಯ ಬತ್ತೀಶಾಯುಧಗಳೆಲ್ಲಾ ॥ ಇಲ್ಲದಿರೆಭಯ
ವಡರಿದನ ಕಂ । ಡಲ್ಲಿ ಸಿಡಿಲಾರ್ಭಟೆಯ ಪೂರಿಸ । ಲಲ್ಲೆಕೆಡೆದನು ಮೂರ್ಛೆ
ಯಿಂದಣುಮಾನ್ಯನನಮಾವಾ ॥ ೩೨ ॥ ಚೆದರಿ ದಳನಾಯಕರು ಪೊಗಂ ।
ತದನು ತಿಳಿಸೇ ಮಹೇಂದ್ರಕೀರ್ತಿ। ಕದನವೆತ್ತಣ ದಾವಶೂರನೊ ಯೇನುಕಾ
ರ್ಯವನೂ ॥ ವದಗಿ ಬಂದಿಹನೆಂದು ಬಹುಬಲ । ದೊದವಿನೊಳಗೈತರುತಲಿ
ರಲ । ತ್ತುದಿಸಿದದ್ಭುತರಾಕ್ಷಸರೂಪನು ರಾಘವನಶರಣಾ ॥ ೩೩ ॥ ಅರ್ಭುದವು
ಸಿರಚರಣ ಕರವೆರ । ಡರ್ಭುದರ್ಭುದ ಧರೆಗೆಂ ನಭಕಿಂ । ನೊರ್ಬುಳಿಯಘನ
ಕಾಯ ಬತ್ತೀಶಾಸ್ತ್ರ ಸಂನಹದಾ ॥ ವರ್ಬುಳಿಯೊಳ್ಳೆದೆ ದರಿನೊಳುನಿಂ । ದಾ
ರ್ಭಡಿಸಲಾ ಸೇನೆ ಸಹಭಯ । ದುರ್ಬಿನಲಿ ವ್ಯೆಮರದು ಬಿರ್ದ್ದ ಮಹೇಂದ್ರ
ಮುತ್ತಾತಾ ॥೩೪॥ ಮಾರುತಿಗೆ ಯದುರಾರು ಕೋಪವ । ಸಾರಲವನಿಯ
ನೆತ್ತಿ ಬಿಸುಡುವ । ಶೂರಗಿಹುಲು ವಿದ್ಯಧರರೆಗಹನಾಗ ಲದ್ಭುತದಾ ॥ ಕ್ರೂರ
ವನು ಪರಿಹರಿಸಿಯವಕವಿ । ಕಾರದಲಿ ಕೊಂಡೊಯ್ದು ಅಜ್ಞಾ । ಗಾರದಾಸ್ಥಾ
ನದಲಿ ಕುಳಿತನು ಮದನಮೋಹನ್ನಾ ॥ ೩೫ ॥ ಮೋಹಪಾಶದೊಳಿರ್ವರನು
ಬಿಗಿ । ದಾಹಜಾರದಿ ಕೆಡಹಿ ಅಭಯವ । ನೂಹಿಸಿದ ಜನಕೆಲ್ಲ ಅವನಿಪ ನರಸಿ

ಕೇತುಮತೀ ॥ ಆಹದನ ತಿಳಿದಳುತ ಪ್ರಿಯಸುತ । ಮೋಹದೊಳಗೈದೋಲೆ ಭಾಗ್ಯವ । ದೇಹಿಯನು ತಾಳಾಪಗೊಳೆ ಮುತ್ತಂಮನನು ನೋಡೀ ॥ ೩೬ ॥ ಬಿಟ್ಟು ಮಾತೆಯು ಅಗ್ರಭವಪಿತ । ನಿಟ್ಟು ಸಿಂಹಾಸನದಿ ತದ್ದೆಡೆ । ಇಟ್ಟು ತಾಯಂಬಿಕೆಯು ಸ್ರಾಷ್ಟಾಂಗೆರಗಿ ಕೈಮುಗಿದೂ ॥ ನಿಟ್ಟಿಸಿರಿ ನಾನಾಂಜನೇಯನು। ಹುಟ್ಟಿದಂದಿಂದರಿಯುದಿರಲೆನ । ಧಿಟ್ಟ ತೋರಿಸಗೈದೆ ಪಾಲಿಸಿತಪ್ಪನೆನೆಸ್ಮರನು॥ ಅಪ್ಪಿ ಮಾತುಳ ತಾಯಿ ಪಿತಮಹ । ನಪ್ಪರೋರೋರ್ವರನು ಕೈ ಕಿ । ತ್ತಪ್ಪ ತಾನಂದಾಶ್ರು ಮಜ್ಜನಗೈದು ತಡಿಗಡಿಗೇ ॥ ವಪ್ಪದಲಿ ಮುದ್ದಾಡಿ ಸಂತಸ । ತೆಪ್ಪವಾಡುವರಿಂಗೆ ತಾ ಬಂ । ದಿಪ್ಪುದಾದೆಲ್ಲವನು ಪೇಳಿದ ಮಿಾನಕೇತನನೂ ॥೩೮॥ ಮುಂದೆಕಾರಣವುಂಟು ಆಮಹ। ರಿಂದ ನೀವೈದಲ್ಲಿ ವಾಲಗಿ। ಸೆಂದು ಮಾತುಳರಜ್ಜರೈದಿಸಿ ರಾಘವನಪದಕೇ ॥ ಬಂದು ಬಿನ್ನತ್ತಲೆಯು ಬಹರಿವ। ರೆಂದುಕಳುಹಲ್ಲಿಂದ ಪುಷ್ಪಕ । ದಿಂದ ಪುರ್ವಾಕರದೊಳೈದಿದ ಭೀಮ ನಿಸ್ಸೀಮಾ ॥೩೯॥ ಬಂದನಬ್ಧಿಯಮೇಲೆ ಮಣಿಮಯ । ಮಂದಿರದ ತೆರನಾಗಿ ಚಕ್ರಿಯ । ದಂದುಗದ ತೆರನಾಗಿ ವಾಸುಗಿಯಾಗಿ ವನವಾಗೀ ॥ ಸೌಂಧರಿಯುಗಳಪಾಗಿ ಕಣಕಾ! ಲಂದದಿಂದರದೋಲು ಚಲುವಿಕೆ। ಸಿಂದು ತೋರುವದರುಹೆ ಪ್ರದ್ಯುಮ್ನಾಗ ದಳಪತಿಗೆ ॥ ೪೦ ॥ ಶರಧಿ ವಿರವರ್ಣಿಸುತ ಲಂಕಾ । ಪುರದ ಯಡೆಗೈತರೆ ವಿಘೂರ್ವಣೆ। ಯರಗಲುರಿ ಮೊದಲಾಗಿ ದೂರಾಂತರದಿ ಬಲವಿಳಿಸೀ ॥ ಧರಿಸಿ ತುಂಬೆಯು ತೆರನ ಪ್ರಹಸಿತ। ಗೊರೆದು ಯಚ್ಚರನೆಂದು ವೈಕೂ। ರ್ಣರಗುವಂತೊಜಾೃಹ್ವ ಪರಿಧಿಯು ತೂರಿ ತೊಳ ಪೊಗಲೂ ॥ ೪೧ ॥ ಹೇಗೆಯನಲಾ ಸರ್ಪ ಹರಿವುರಿ। ಹೇಗೆ ಹೊರನೂಂಕುವವೊ ಆತೆರ। ನಾಗಿವೊಳಪೊಕ್ಕೊಜ್ರ ತುಂಬೆಯೊಲಧಿಕ ವಿದ್ಯದಲೀ ॥ ಸಾಗಿದಶಸಿರನರಮನೆಯಪೊ । ಕ್ಕಾಗಲರಸೆರಡಷ್ಟಸಾಸಿರ । ರಾಗವತಿಯರ ನೋಡಿ ರೂಹಿನೊಳಿರದೆ ಲಕ್ಷಣವೂ ॥೪೨॥ ಮತ್ತು ತಾರಾವಾಸಗಳ ನರ। ಸುತ್ತ ಮುಖ್ಯಸ್ಥಳನು ಹುಡು । ಕುತ್ತಲಾವೆಡೆಯುಂಟು ಲಾವಣ್ಯಾಂಗೆರವರಲ್ಲೀ ॥ ಗೊತ್ತನರಿಯದೆ ಪೂರನುಳಿದೊನ। ದತ್ತ ಬರುತಾ ರೂಪನುಳಿದಿಂ। ಬೆತ್ತು ಕಪಿಯಾಕಾರವನು ಹೆಬ್ಬಾಗಲಿಗೆ ಬಂದಾ ॥ ೪೩ ॥ ಏರಿ ಹೊರಪರಿಧಿಯನು ತೆನೆತೆನೆ। ಹಾರಿ ಕೊಂಟೆಯುಸುತ್ತಲೊನದಿ ವಿ! ಚಾರಿಸುತ ಮೆಲಗಿಳಿದು ಪೊಕ್ಕಾರಾಮುಗಳನೆಲ್ಲಾ ॥ ಧಾರುಣೀಶರಸತಿಯರಲ್ ಸಂ। ಚಾರಿಸುವರಲ್ಲಲ್ಲಿ ವಿಶ್ರಮ। ನೀರೆರುಯ್ಯಲನಾಡುವರಸಖಿಯರ ವಿಲೋಕಿಸಿದಾ ॥೪೪॥ ರೂಪಿನಗ್ಗಳರಹುದು ಕುರಿತ ಕ'। ಲಾಪವಿಲ್ಲೆಂ

ದೈದುವೆಡೆ ಬಹು । ಕಾಪಿನನುಚರರಿಂದ ವರ್ಣ್ಣಾರ್ವರ್ಣ್ಣ ಮುಖದಿಂದಾ ॥ ವ್ಯಾಪಿಸಿಹ ವನವರಿದು ಯಿದಕಿ । ನ್ನೀ ಪರ್ಯಾಕೆಂದೈದೆ ನಿಕಟಸು । ಲೇಪವಾಗಿಹ ಶಸ್ತ್ರದಸ್ತ್ರವರಿದು ಪಂಚಾಗ್ರ್ತ ॥೪೫॥ ಕೆದರಿದಾಯುಧದಿಂದ ಹೃದಯವ । ನದುರಿಸುವ ರೂಪಿಂದ ನಾನಾ । ವಿದದ ದನುಜರ ಕಾವಲಿಂದೆಳ್ಳಿಡಲು ಸದುವಿರದೇ ॥ ಪುದುಗಿ ತರುಗಿಡ ಗುಲ್ಮ ಸಂಕೀ । ರ್ಣ್ನದಲಿ ಅದ್ಭುತವಾದ ದನು ಕಂ । ಡಿದರೊಳಿರಬೇಕೆಂದು ಕೊನೆಕೊನೆಗೆಗರುತೊಳಪೊಕ್ಕಾ ॥ ೪೬ ॥ ಪಕ್ಷಿಮ್ರುಗವೇನಾನು ವನವನಿ । ರಿಕ್ಷಿಸದ ತೆರದಿಂದ ಕಾದಿಹ । ರಕ್ಷರಕ್ಷಿಗೆಮರಪಿ ಸಂದ್ಗೊಡದಂತೆ ಯಲೆಮರೆಯಾ ॥ ವೃಕ್ಷವೃಕ್ಷಕೆ ಪಾಯ್ದು ಬರುವೆಡೆ । ಯಕ್ಷಿಣಿಯ ತೆರದಿಂದಲೆತ್ತ ನಿ । ರಿಕ್ಷಿಸದೆ ಕೈಮುಗಿದು ಕುಳಿತಿಹ ಜಾನಕಿಯ ಕಂಡಾ ॥೪೭॥ ಆರೊ ಯಾಮುಹಾದೇವಿ ನಂದನ । ನಾರಿಯಾದರೆ ವೈಭವದಿ ಗುಡಿ । ತೋರಣಿರಬೇಕಲ್ಲವನುಮಿಷೆ ರಕ್ಷವಿದ್ಯಾಂಬೇ ॥ ಮೇರೆತೋರುವದೇ ತರಿಂ ತಪ । ಸಾರಿಹಳೊ ಸರಿಜಾನಕಿಯ ನೀ । ಪಾರಗೈಸಿಹನೊಲಿಯದದರಿಂದೆಂದು ಕುಸುಮಾಸ್ತ್ರಾ ॥ ೪೮ ॥ ಕುರುಹ ನೋಡುವೆನೆಂದು ನಿಕಟಕೆ ! ಬರುತ ಬಲಗಾಲಡಿಯೊಳಗೆ ಯಿಹ । ಗರುಡರೇಖೆಯನರಿದು ಯಿರೂಪುಂಟೆ ಮಾನುಷೆಗೆ ॥ ಇರದೆ ಯಿಬಗೆ ಲಕ್ಷಣವು ಖಗ । ತರುಣಿಯರಿಗೆಂದೇಕೆ ಸಂಶಯ । ಹರಿಸಬೇಕೆಂದರಿದು ವಿಲಸತ್ತ್ರಜ್ಞ ಕೇಳಿದನೂ ॥ ೪೯ ॥ ಈಕೆಯೇಮಹಿಳೇಂದ್ರಿ ನಾನಾ । ವ್ಯಾಕುಲಿಸಲನುಬಡದಲಿರಲಿ ! ತ್ನಾಕಿ ಕಾವಲನಿಟ್ಟು ದಶಮುಖ ದಿನವು ಹನ್ನೊಂದೂ ॥ ನೂಕಿತಿಂದಿಗೆ ಅನ್ನಸಹಿತಿಂ । ನೇಕೆಲಸ ಕೇಳದಲೆ ಅಘಹರ । ನಾಕರಪಿ ಮನದೊಳಗೆ ಕುಳಿತಿಹಳೆನಲು ಪ್ರಗ್ನಪ್ರೀ ॥ ೫೦ ॥ ಅಹುದೆ ಜಾನಕಿ ಸುಮನಸಾಂಗದ । ನೊಹಿಸಿಹಳೆ ಪಂನೊಂದು ದಿನ ತಪ । ವಹಿಸಿಹಳೆ ಅಕಟಕಟ ನಿಶ್ಚಲವೆಂತೊ ದ್ರುಢನೆಂತೋ ॥ ಸಹಸೆಸರಿ ಯಿಯುಗಕೆ ಪತಿವ್ರತೆ । ಯಹುದಿಕೋರ್ವ್ವಳೆ ಮಾತನಾಡುವ । ಪ್ರಹಿತವೆಂತೆಂದುಲಿಸಿದನು ಮೆಲಮೆಲನೆ ಜಾನಕಿಯೂ ॥ ೫೧ ॥ ತಾಯೆ ಕಣ್ಬಿಟ್ಟ್ನಡಿವುವೆನನಿನ । ಪ್ರಿಯ ಕಳುಹಿದನೆನುತ ನಾನಾ ವು । ಪಾಯದೊಳು ಬೋಧಿಸಲು ಕಣ್ಬಿಡದಂಗನೆಯ ನೋಡೀ ॥ ಏಯುತೆಯ ಗೈದಿಹರೊ ರಕ್ಷ ನಿ । ಕಾಯರೆಂನೋಕ್ತ್ರಗಳಿಗಿನಿಸೆಡೆ । ಯಿಾಯ್ಯಳೆಂದೊಂದೆತ್ನಗೈದ ವಿಶಾರದಸಮಾಸ್ತ್ರಾ ॥ ೫೨ ॥ ಕುಳಿತಜಾನಕಿಯುಗ್ರವಿಹಕೊನೆ । ಯೊಳಗೆನೆಲನುಂಗುರುವನಂಜಲಿ । ಯೊಳಗೆಬೀಳ್ವಂತಿಳಿಯುಬಿಟ್ಟನಿದೇನು ಕೈಯೊಳಗೇ ॥ ಝುಳುಪಿತೆಂದೆವೆಯಲುಗಿನೋಡಲು ।

ಕೆಳೆಯನುಂಗುರವರಿದು ಸದ್ಗುರು । ಗಳಿಗೆ ವಂದಿಸಿ ಮುದ್ರೆಯೆತ್ತಿದಳಾಗಲಂ
ಬಕಕೇ ॥ ೫೩ ॥ ಆಯಿತೇ ರಘುಕರುಣ ದರುಶನ । ವಾಯಿತೇ ಹಂನೊಂದು
ದಿನಕರು । ಗಾಯಿತೆ ಮುಚಿರ್ದ್ದ ವೇಕುಲವೆಂದು ಸಿರವಲೆದಾ ॥ ತಾಯಿಗಂಜ
ಲಿತಾಳಿ ರಘುವರ । ನಿಯುಮಿಸಿದನು ಪೇಳಿ ಸ್ಥಳಬಿ । ಟ್ಟಾಯತಾದಿಯು ಪೇಳ
ಪುರನಿರ್ಮಾಣಪರಿಯುಂತಾ ॥ ೫೪ ॥ ಅಲ್ಲಿ ಕ್ರೀಡಾಘಾತನೆಕ್ಷೋಲ । ವಲ್ಲಿಚೂ
ಡಾರತ್ನಸರ ವಿ । ತ್ತಿಲ್ಲ ಕುರುಹರುಗೈದು ಯಿದಕೊಟ್ಟದನು ತರಹೇಳೀ ॥ ಇಲ್ಲಿ
ಗೈದಿಸಿದಿನ್ನು ಅನಶನ । ದಲ್ಲಿಯಿರಸಲ್ಲೆಂಟುದಿನಕಿ । ನ್ನಿಲ್ಲಿ ಗೈತಹೆವೆಂದುಪೇಳಿಂ
ದಮ್ಮ ರಾಘವನೂ ॥೫೫॥ ಹರಣವಿರುವರೆಗೆಲ್ಲ ಕಾರ್ಯವು । ತೊರೆದವೇಲೀ
ನುಂಟು ಪ್ರಿಯನುಂ । ಗುರದ ದರುಶನಸ್ವಶ್ಚತವ ಪ್ರಿಯ ದರುಶನಲ್ಲದಲೀ ॥
ಯುರವಭಾಸ ಸವಿಲ್ಲಭೂತು । ತ್ತರಳ ನಿಮುಗಾನೆನ್ನ ಮಾತನು । ಸರಿಸುದಾಂ
ಬಿಕೆಯುಂದ ಮಾರುತಿ ಭೀಮ ಪ್ರದ್ಯುಮ್ನಾ ॥ ೫೬ ॥ ನಿಮ್ಮನೊಯ್ವುದುರಾಕ್ಷ
ಸೇಶನ । ಹಮ್ಮುಮುರಿವುದುನನಗೆ ಯೇಗಹ । ನಮ್ಮಕೊಡಲಿಲ್ಲಪ್ಪಣೆಯು ಪಿತನ
ದರಕಾರಣದೀ ॥ ತಮ್ಮಿಪುದು ಚಿಂತೆಂಟುದಿನದೊಳ । ಗಂಮನೋರಥ ಸಿದ್ಧಿವಿ
ಗ್ರಹ । ನೆಮ್ಮದಿಯುಗೊಳಿಸೆಂದು ಯರಗಿದಪದಕೆ ಜಾನಕಿಯಾ ॥೫೭॥ ಯೆತ್ತಿ
ಸುಕುಮಾರಕನೆ ಪ್ರಿಯ ಪುರು । ಷೋತ್ತಮರು ಸುಖಬಾಳುವರೆ ಯಿಂ । ನೆತ್ತ
ಲಿಹರೆನೆ ಕೇಳು ಕಿಷ್ಕಿಂದಾಚಲದಿ ನಡೆದಾ ॥ ಬಿತ್ತರವೆಂದುಲಿದು ವಾಲಿಯ।
ಕುತ್ತಿಯನ ಕರಸಿದನುಚಿಕ್ಷಿಂ । ಮತ್ತಲಿಹದಿನ್ನೆಲ್ಲ ಸುಖವಿಹರೆಂದನಾಸ್ಥಳದೀ
॥೫೮॥ ಇನಯನೊರ್ತ್ತನವರಿವತನಕನ । ಶನವು ನನಗೆಂದಿರ್ದ್ದ ಬೇಡೋಂ।
ದನವು ನಿನನುಡಿ ಮಿಾರಲಾರದೆ ಗೈವೆ ಫಲಹಾರಾ ॥ ಯನಲು ನಿಮ ಪ್ರಿಯುವಿ
ದ್ಧತೆರ ಸಮ । ನೆನುತಲತಿ ರಸವಾದಿ ವಸ್ತುಗ । ಳನುವಿನಿ ತರಿಸಿತ್ತನೆ ಯುಳ
ನೀರಾದಿಪಾನನನೂ ॥ ೫೯ ॥ ಕೊಟ್ಟು ಸಂತುಷ್ಟಿಸುತ ಬೆಸನೇ । ನಿಟ್ಟಪಳೊ
ಮಜ್ಜನನಿಯುದಕನು । ಗೊಟ್ಟು ನಿತ್ಯೂಳಿಗದಿ ಹಾಜರು ಯಿಹುದು ಯನುತೆಡೆ
ಯಾ ॥ ಲಿಟ್ಟು ಲಘುಪರ್ಣ್ಣನಿಯು ಪಣ್ಮೆಲು । ಗೊಟ್ಟು ನಾನೊಂದೆರಡು ಪ
ಣ್ಣವಿ । ದಿಟ್ಟವಪ್ಪಣೆಯಾಗಬೇಕೆನೆ ಹನುಮ ಜಾನಕಿಗೇ ॥ ೬೦ ॥ ನೋಡು
ಸುಕುಮಾರಕನೆ ರಕ್ಷರ । ಬೀಡಿನೊಂದ್ಕಪಿಯೊಳಗೆ ಪುಗಗೊಡ । ದೋಡಿಸುದ
ರೈತಂದು ಪೋದರೆ ಸಾಕು ಯನಗಿಷ್ಟೇ ॥ ಬೇಡ ಪಂಣೆನಲೆನುಗಾಬರಿ । ಮಾ
ಡದೈದುವೆನೆಂದನಿಗೆಕೊ । ಟ್ಟೊಡರತ್ನಾವಳಿಯಪೋಗೆನಲಾಗ ವೈದೇಹಿ॥೬೧॥
ನೆಗೆದನಲ್ಲಿಂದೊಂದು ಮರಕೊನೆ । ಸಿಗಿದು ಪಣ್ಗಳನುದುರಿಸುತ ಬೇ । ತ್ತಗೆ

ದು ಕೆಲವೃಕ್ಷಗಳ ಗಜಬಜೆಗೈಯ್ಯೆ ನಂದನವಾ ॥ ಹಗಲಗತ್ತಲೆಯಂತೆಯಿಹ ಕಾ । ಪಿಗರು ಮೇಲಡಿ ಚೀಮೆತೂರದ । ಬಗೆಯ ಮುಚ್ಚಿದ್ದೆಲ್ಲಿ ಬಂತೀಕೋಡಗೆಂದೆಲ್ಲಾ ॥೬೨॥ ಅಟ್ಟೆ ಮುತ್ತಾಯುಧದಿ ಬಡಿವರ । ಪೆಟ್ಟಗಳ್ಳುವತೆರದಿ ಗಿಡುಮರೆ । ಯಿಟ್ಟು ಪಲ್ಲಿರಿದೌಂಕಿ ಕೊನೆಮರ ಮರಗಳುರುಟಿಸುತಾ ॥ ತಟ್ಟೆ ಕೊನೆಕೊನೆಗಳನು ತಪ್ಪಯ । ಲಟ್ಟಸದೆ ಕೈಸಿಕ್ಕಿತೆಂಬಂ । ತಟ್ಟುವರನಿಕಟದಲೆ ಚಲಚಲಿಸೆಲ್ಲವನು ಕಿತ್ತೂ ॥೬೩॥ ಸೀತೆಯಿಃಹ ತರುವಿಂಗೆ ಕೈಗ । ಲ್ಲಾತವನ ಗೀರ್ವಾಣರಮಣಾ । ಖ್ಯಾತದಲಿ ಬಿಟ್ಟಿರ್ದ ವೃಕ್ಷಾಕಿರ್ಣ್ನಗಳನೆಲ್ಲಾ ॥ ಜಾತವಿಲ್ಲೆನಿಸನಿತು ಬಲಸಂ । ಜಾತದೊಳು ಕಪಿಯೊಂದೆ ಸಾಹಸ । ವಾತು ಮೆರೆದುದು ಮುಕ್ತಿರಮಣನ ಚರಣಸ್ಮರಣೆಯಲಿ ॥ ೬೪ ॥ ಕಲಿಲಹರ ಮುನಿಸೂವೃತಾಂತ್ಯದಿ। ಚಲಿತರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನಕಥೆಯ ಸದ್ಬುಧರೂ॥೬೫॥

ಅಂತು ಸಂಧಿ ೪೮ ಕ್ಕಂ ಪದನು ೨೮೬೩ ಕ್ಕಂ ಮಂಗಳಮಹಾ ಶ್ರೀ ಶ್ರೀ

ನಲವತ್ತೊಂಭತ್ತನೆಯ ಸಂಧಿ.

ಲಂಕಾದಹನದ ಸಂಧಿ.

ನಂದನವ ಕಿತ್ತಕಪಿಯರಕ್ಷನ । ಮುಂದಕಿಡಲದರ್ಗಡಕಗ್ನಿಯ । ಲ್ಸಂದಿಸಲುನೆಗೆ ದೂರಸುಟ್ಟದು ಭಯಕೆ ಬೆದರ್ಬಂತೇ ॥ ಪದಾ ॥

ಕೇಳಿದೈ ಮನುಜೇಂದ್ರ ವನಸಂ । ಕೂಳವನು ಕಿತ್ತಿಡುವ ಕಪಿಯ । ಟ್ಟಾಳು ಪಾರಾಡಿಸುವರೊಯ್ಲಿಗೆ ಸಿಕ್ಕಿದಲ್ಲಲ್ಲೀ ॥ ತೂಳುಗೊಂಡಂತೆಲ್ಲಕಿತ್ತೆಳೆ। ವಾಳೆ ಪೊಕ್ಕಾನೆಯೊಲು ವಿದ್ಯಾ । ಬಾಳಲೋಚನನೆಸೆದನಾ ರಕ್ಷಾಳುಗಳಮಧ್ಯಾ ॥೧॥ ಕಿತ್ತು ವನವನು ಫನಸುಮಾವಿನ । ಮೆತ್ತ ಫಲಗಳನೊಂದೆಹಸ್ತದೊ । ಳೆತ್ತಿ ತಿನ್ನುತಾಸುರರನಣಕಿಸುತೆ ಗರಿಶಾಖೆಗಳ ॥ ಹತ್ತಿ ಪಲ್ಗಿರಿವುತಲಿ ಚಾಳಿಸಿ। ಲೊತ್ತಿದರಿಗನುಗೊಡೆದ ಸಾಹಸ । ನತ್ತ ನೋಡಾಶ್ಚರಿಸೆ ಜಾನಕಿ

ಮನದಿ ಮುಳುಗಿಡುತಾ ॥೨॥ ಯಲ್ಲಿ ಸಿಕ್ಕುವನಕಟ ರಾಕ್ಷಸ। ಘುಲ್ಲಣೆಯು
ಪಿರಿದಾಯ್ತು ಯನುತೊಳ । ಗಲ್ಲೆ ತಾಳಿದಳತಿ ಮನೋಹರ ತಕ್ಕತಂತ್ರಿರದೇ॥
ಯಲ್ಲಗೈವನೆ ಯೇನುವಿದ್ಯವ। ಬಲ್ಲನೊಶವಾದ ಪರಮಿತ್ರ್ರತೆ। ಯಲ್ಲದನ್ಯಲ್ಲೆನ
ಲು ಜಾನಕಿ ನೆನೆದು ಮನದಲ್ಲೀ ॥ ೩ ॥ ನೋಡುತಿರೆ ಕೈಮರೆಯ ಕಡೆಗಂ।
ಣಾಡಿಸುತ ತರುಗುಲ್ಮಗಳ ಕಿ । ತ್ತ್ರೋಡುತವನಿಜೆ ಕಣ್ಗೆಮರೆಯಾಹಂತೆ ಸಿಕ್ಕಿ
ದರೇ ॥ ಮಾಡುವಳು ಚಿಂತೆಯನು ಯಂದ। ತ್ತ್ರೋಡುತಾಬಂದೇನು ಕೆಲಸ
ವ। ಮಾಡನೈದುವದುಚಿತವಲ್ಲೆಂದಾಂಜನಾತ್ಮಜನೂ ॥ ೪ ॥ ಸುತ್ತಮುತ್ತಾ
ರ್ಭಡಿಸುತಲಿ ಕೋ। ಲೆತ್ತಿ ಬಡಿವರ ಭೀತಿಗಂಜಿ। ನ್ನತ್ತಲಿತ್ತ್ರೋಡುವಡೆ ಸದು
ಗಾಣ್ದಂತೆ ಕಂಗೆಟ್ಟು ॥ ವತ್ತಿ ಕಣ್ಪೆಳುಕಿಸುತ ಮಲಗೋ । ಳುತ್ತ ಕಳವಳ
ಬಡುವ ಕಪಿಯಡೆ। ಗೊತ್ತಿ ಹಿಡಿದರು ನಾಲ್ಕುಕಾಲ್ಗಳನಾಗ ರಾಕ್ಷಸರೂ ॥೫॥
ಸಿಕ್ಕಿದೆಲೆ ಬಲಿಮುಖನೆ ತರುಕಿ। ತ್ತ್ರಿಕ್ಕಟವ ತೋರಿಗ ವನವನು। ಗ್ಗಿಕ್ಕಿದಂತಂ
ಗಾಂಗಯಲುಗಳ ನುಗ್ಗು ನುಡಿಮಾಡೀ ॥ ಸೊಕ್ಕಮುರಿಸುವೆ ನಿನ್ನ ನೋಡೆಂ।
ದಿಕ್ಕಿನುಲಿ ಬಂದೆತ್ತಲದು ಮೇ। ಲಕ್ಕೆ ಜಡಗೊಡೆ ನಾಲ್ವರಸುರರು ಯೆತ್ತಲೀ
ಳದಿರೇ ॥೬॥ ಪಿಡಿದು ಕೈಕಾಲ್ಸಾಲತಲೆಗಳ। ಹಿಡಿದು ಯತ್ತಲು ಯೇಳದಲೆ
ಜಡ। ಗೊಡುತಲುಚ್ಛೇಧಿಸಿತು ಸರ್ವಾಂಗೇಕಕೋಶವನೂ ॥ ತೊಡಗಿಸಾಸಿರ
ಜನರು ಮಾಯಾ । ಗಡಿತ ರಾಕ್ಷಸವನದ ಕಪಿಯಾ । ಗಡಿಸಿತೀತನುವೆಂದು
ಯೆತ್ತಿದರೆಲ್ಲ ಲವಡ್ಕಚ್ಚಿ ॥೭॥ ಬಹು ವಿಶಾಲದ ಭಂಡಿಯೊಳಗದ। ನಿಹಿಸಿ ಹ
ನ್ನೆರಡಾರಯತ್ತ್ರಸು। ಗ್ರಹಿಸಿ ಬಾರಾ ಸಾಸಿರಾಳ್ಗಳು ಕಿತ್ತ್ರಕತ್ತಿಯಲೀ ॥ ಮು
ಹಿಸಿ ಹಾಹೂಯೆಂದು ಮಾರ್ಗರ। ತಹಿಸುತತ್ತಿತ್ಪುರವ ಪೊಕ್ಬೇ। ದಿಹಲಿಹೇ
ರೈತರುವ ಕಪಿಯನು ಕಂಡರೂರಜನಾ ॥ ೮ ॥ ಹತ್ತಿ ಗೃಹಮದಿಲುಗಳ ಜನ
ಜನ।। ರತ್ತನೋಡೆ ಸುವರ್ಣ್ನ ಕರುವಿಂ । ಗೊತ್ತಿ ನವರತ್ನಗಳ ಲೆಸಗಿರಚಿತ್ರ
ತರರೂಪಾ ॥ ಚೆತ್ತ ಕಪಿಯಾಸ್ಯಾವೃತದಿ ಚಲು। ವೆತ್ತ ಬಹುಗ್ಗ್ರಡ್ಡೇಕಮೊ
ಳವಿಳಿ। ಯುತ್ತ ಬಾಲದಕುಚ್ಚುಗೊಂಡೆಯ ಹುವ್ವಿನಂತೆಸೆಯೇ ॥ ೯ ॥ ನೋ
ಡಿಬಲ್ಲಿರೆ ಯಿಾತೆರದ ಚಲು । ಕೋಡಗವನೆಂದಾನು ನೀವೆ । ಲ್ಲಾಡುವದನೆಂ
ದಸ್ತ್ರಪರೆಗಳ ಗುಟ್ಟಸಖಿ ನಿಕಗಾ ॥ ರಾಡಿಸುತ ತಲೆಹಸ್ತಗಳ ವ್ರೋಲಾಡುತಿರ
ಲಟ್ಟೈದಲರಮನೆ। ಕೂಡಿದಿತ್ತ್ರರ ಮತ್ತಿಮುಖ್ಯಾ ಗೃಹದಜನಕಂಡೂ ॥೧೦॥
ತಂಮ ಕೇತನ ಬಾಗಿಲಗ್ರ್ರದ । ಪ್ರೊಂಮದಿಲನುರೆ ಸಾರಿ ಯಲ್ಲಿ। ಲ್ಲೊಂಮಿಸಿ
ಹ ಕಿಟಕೆಯಲಿ ನೋಡುತ ನೆಟ್ಟದ್ರಿಷ್ಟಿಯಲೀ ॥ ತಮ್ಮಸದಲೀ ಚಿತ್ರಕಾಯ

ದ। ಸುಮ್ಮನದ ಕಪಿ ಯಾವದೇವಿಯೊ । ಳೆಂಮುದಿಸಿತೆಂದೀಕ್ಷಿಸಿದರೇನೊಂ ದೊ ಕೌತುಕದೀ ॥೧೧॥ ಬಂದುದೇ ಕಾರಣದಿ ನಮಪುರ। ಕೆಂದು ಗಜಬಜೆ ಜನಗಳಿಂ ನಡೆ। ತಂದು ಪೌರಾದ್ಯಲ್ಲ ಪರಿಷಹದಿಂದ ಲೊನಗೂಡೀ ॥ ಮಂದಿ ರಾಂಗಣ ದಗ್ರಕರುಮಾ । ಡೊಂದಿ ಯಂತರದಲ್ಲಿ ಪುಷ್ಪಕ । ದಿಂದ ನಿಂತರು ತೀವ್ರಚರ್ಯದ ಕಪಿಯನೀಕ್ಷಿಸುತಾ ॥೧೨॥ ಚಂದನೆರದಿಹ ಕುಂದಣದ ಪ । ನ್ನೊಂದುನೆಲೆ ಸಿಂಹಾಸನದಿ ದೈ। ತ್ಯೆಂದು ಷೋಡಶ ಸಾಸಿಗಾವೃತ ರಾಜಭಗ ಣದಲೀ ॥ ಕುಂದಣದ ಪುತ್ಥಳಿಯೊ ಕೋಮಲ। ಸುಂಧರನು ಬೆಳ್ಳಿಲೆಯ ಚಾ ಮರ। ದಿಂದುಮುಖಿಯರ ಮಧ್ಯೆಲಿಹ ದಶಗ್ರೀವನದ ಕಂಡು ॥೧೩॥ ಭಂಡಿ ಯಲಿ ಕುಳಿತಿರುವ ಕಪಿಯನು। ಗೊಂಡ ರೂಪಿಗು ಬವರಿಗಡ್ಡದ। ಚಂಡಿಕೆ ಗು ವಾಲ್ಕುಚ್ಚಿನಿಂದಲಿ ಬೀಸಿಕೊಳುತಿರಲೂ ॥ ಚಂಡ ಕೌತುಕಗಂಡು ಸಭೆಯು। ತ್ತಂಡಿ ಸಕ್ಷಿಗಳಿಂಡ ವಸ್ತ್ರನು । ಗೊಂಡು ವದನಕೆ ನಕ್ಕ ನಸುರೇಶಾಗಲವನೀ ಶಾ ॥ ೧೪ ॥ ತಿರುಗಲಾಸ್ಥಾಸಿಗರು ಕಣೆವೆ। ತುರುಗದವಲೋಕಿಸುತಲೀ ಚಿ। ತ್ರರಿದುದುಂಟಾರಾದ ರೆನುತಲಿ ಬೆರಗು ಬೆಂಡಾಗೀ ॥ ಇರಲು ಪಿಡಿತಂದಾಳು ಆನತ। ಗರೆದು ಯದ್ದಪರಾಧ ಗಾಯ್ದುಡೆ। ಅರಿಕೆ ಗೈಯ್ಯುವೆವೆನಲು ವುಲಿರೇ ನೆಂದ ದೈತ್ಯೇಶಾ ॥ ೧೫ ॥ ಪೊಗದು ಯನಕಿರಣ ನಿಲತೂರುವ। ಡಗಲವಿ ಲ್ಲವನಿಯುಲಿ ಚೀಮೆಗ। ಳೊಗಲು ತೆರಪಿರದಂತೆ ಕತ್ತಿಯ ಕಿತ್ತು ಬಲವೆಲ್ಲಾ॥ ಹಗಲು ಯಿರುಳಿವೆಯಲುಗದಲೆ ಕ। ಣ್ತೆಗೆದ ರೀತಿಯೊಳಾವು ಕಾದಿ। ದ್ದಿಗ ಲು ಯಿಾ ಕಪಿ ಪೊಕ್ಕುದೇನಾಶ್ಚರ್ಯ ನಂದನವಾ ॥ ೧೬ ॥ ಆವ ದೆಸೆಯಿಂ ಬಂದುದೋ ನಯು। ನಾವಲಂಬನವೀಯ್ಯ ದೋರ್ವರಿ। ಗೀವಿಚಿತ್ರದ ದೀ ರ್ಘಕಾಯದ ಕಪಿ ಕುಲೇಶ್ವರನೂ ॥ ದೇವ ರಮಣಾರಾಮುವನು ಪೊ। ಕ್ಕಾ ವನಿಜಗಳ ಪಾಯ್ದು ಪಣ್ಗಳ! ಸೇವಿಸುತ ಶಾಖೆಗಳ ಮುರಿಯಲು ಕೇಳಿತದ್ಲ ಟುಕಾ ॥೧೭॥ ತಾಳಿಶಬ್ಧೇನೆಂದು ಕೌತುಕ। ವಾಳುವನಿತರಲಿನ್ನು ಕೊನೆಕೊನೆ। ಬೀಳುತಾಳಾಪಿಸಲು ವೃಕ್ಷಗಳನಿಲಹೊಯ್ಲಿಂಗೇ॥ ತಾಳದಂತವಿರಿಡಲು ಅತ್ತಿಂ। ನೇಳಿಸಲು ಶಲೆಯಿಲ್ಲ ಕಿಂಚಿ । ತ್ಫಾಳಿಯದ ರಿಂದೇನೊ ನೋಡುವಡಿಳಿದೆ ವನ ದೊಳಗೇ ॥೧೮॥ ಹಂಣುಗಳನಾಯ್ದಾಯ್ದುತಿನುತಲಿ । ಸಂಣಕೊನೆಗಳಮು ರಿದು ಬಲ್ಗೊನೆ । ಗಂಣದಲಿ ಹಾರವುಕ್ಕುತಿರಲಾವರಿದು ಬೆದರಿಸಲು ॥ ಕಂಣ ಪಿಳುಕುತ ಕೈಗೆಸಿಕ್ಕದೆ । ಸಂಣದೊಡ್ಡಿತ್ತಾದ ತೆರಹಲ । ವಂಣದಲಿ ಕೆಡೆಮೆ ಟ್ಟಿತಾರಾಮುಸುರನಾಯಕನೇ ॥ ೧೯ ॥ ಯಷ್ಟು ಚಮತ್ಕೃತಿಯಿಂಲಿಟ್ಟಡಿ।

ವಷ್ಟರಲಿ ನುಣುನುಣುಚಿ ಮತ್ತುಳಿ। ದಷ್ಟು ವನದೊಳು ತರುಗಿಡಾದಿಗಳೆಲ್ಲಸು ಗ್ಗೊತ್ತೀ ॥ ಭ್ರಷ್ಟಮಾಡಿದುದಿದರಶಕ್ತಿಂ। ನೆಷ್ಟು ಆವದ್ವೀಪದೊಳಗೆ ವಿ। ಸ್ರುಷ್ಟಿಬಲವ ಸುರೇಶನೇನೆಂಲೆಂದರಾ ಸುರರೂ ॥ ೨೦ ॥ ಜಾನಕಿರುವೆಡೆಗಂ ಬಿ ನೆಸುಗೆಯೊ। ಳೇನೊ ಪುಣ್ಯದಿ ಬಿಟ್ಟುಮಿಗಿಲಿಂ । ಬಾನವೀನೊನದುಕ್ಕುರಿ ಲ್ಲೆನಿಸೆಲ್ಲವನು ಕಿತ್ತೂ ॥ ಹಾನಿಗೈದೀಕಪಿಯು ಬಹುಯ । ತ್ನೇನವಿಕ್ರಯು ಗೈದು ಯತ್ತಿದ । ರಾನಗೋದ್ಭರವಾಗಿದಟ್ಟೆತ್ತಾಗಿ ಯಿರಲರಿದೂ ॥ ೨೧ ॥ ವಟ್ಟು ಯಿಪ್ಪತ್ನಾಲ್ಕು ಸಾಸಿರ । ದಿಟ್ಟ ಭಂಟರ ಕಾವಲರೊಳಾ । ದಿಟ್ಟು ವುಳಿವೀರಾರು ಸಾಸಿರರೆತ್ತಿ ಬಲುಹಿಂದಾ ॥ ಘಟ್ಟಭಂಡಿಯೊಳಿರಿಸಿನಿಮಿಪದ । ಮುಟ್ಟಲೈದಿಸಿದೆನುಗೆ ಅಸದಳ । ವಟ್ಟಕಾರ್ಯದು ಕಾಯ್ದು ಬಿಟ್ಟೆಂಮಾಗ್ನೆಗೈಸಿದಕೇ ॥೨೨॥ ನೋಡಲಿದುಕಪಿ ಬಲ್ಮರನ ಬೇ। ಗರ್ಡಿ ಕಿತ್ತಿಹುದೆಷ್ಟು ಸಾಸಿರ। ಕೂಡಿ ಯಲ್ಲಾಡಿಸಲು ಶಕ್ಯಲ್ಲೇನುಕಾರಣವಾ ॥ ನೋಡಿ ಬಂದಿಹುದಿದನು ಅರ್ಪ್ಪಿತ। ಮಾಡಿರೆಂದಿತ್ತೆಲ್ಲಕಾವಲ। ಚಾವಡಿಗೈದಿದಸುರ ನಾಯಕರರಸ ಕೇಳಿತ್ತಾ ॥೨೩॥ ಏನೂ ಯಿದು ವಂತಬ್ದಿಕಪಿಯೇ । ಕಾನನದೊಳು ದಿತಾದ ಬಲಸಂ । ದಾನದಿಂ ತರು ಕಿತ್ತುದಿದರಿಂದಾಹ ಕಾರಣವಾ ॥ ದೇನು ಪೂರಗಿಂದ್ಭರಲು ಶಾಲಿಯು । ಲೀನವುಂಟ್ಟೇ ದ್ವೀಪದೊಳಗೊಂ। ದಾನುನೆಲೆಯೇತಪಸುಗೆಟ್ಟಂತಾದುದೆನೆ ದೈತ್ಯಾ ॥ ೨೪ ॥ ಸ್ವರ್ಗಮೋಕ್ಷನ ಸೂರಿಸುವ ತಪ। ವರ್ಗದೊಳಗತಿ ನಿಷ್ಠೆಗೆಡೆ ಪುನ। ರುರ್ಗಿದೈ ಸ್ವರ್ಯರಸತಿರ್ಯಗ್ಜೀವದೊಳಗುಚಿತಾ ॥ ವರ್ಗ್ಗಣೆಯ ಪೌರುವದು ಶಾಸ್ತ್ರನಿ । ಸರ್ಗವಿದಕಿನ್ನೇನೊ ಬಂದುಪ। ಸ್ವರ್ಗದಲಿ ಯಿಾ ಮೂರ್ತಿಯಾಯ್ತೆಂದ ಸುರನಾಯಕನೂ॥೨೫॥ ಸ್ವಲ್ಪಜೀವನ ನೀನುಗೈದವಿ। ಕಲ್ಪಕೆಸಗುವೆನಧಿಕ-ಶಾಸ್ತ್ರಂ । ಬೊಲ್ಪಗೊಳಲೀಡಲ್ಲ ಮನುಜಾಕಾರ ವಿಲ್ಕಪಿಯು ॥ ಜಲ್ಪವಾಗಿಹೆ ಗಡ್ಡವಿದನೆ। ಲ್ಕಲ್ಪಿಸಿದೆ ಹಿನ್ಜಾತಿಯೇ ನಿಂ। ನೊಲ್ಪ ದಹಿಸುವೆನೆಂದು ಕ್ರುದ್ಧಾವರಿಪ ದಶಕಂಠ ॥೨೬॥ ನಂದನಗಳೊಳಗಧಿಕ ದೇವಾ। ನಂದನವ ನೆರೆಕಿತ್ತು ಮರಗಳ। ತಂದುನಿನದಂದಹ್ಯಗೊಳಿಸಲೋ ಸೀಳಿ ಛಿದ್ರಿಸಲೋ ॥ ಕೊಂದು ಹಿಂಡಲೊ ಮುಚ್ಚು ಮುಚ್ಚಂ। ಗೊಂದು ಘರ್ಜಿಸಿಯು ಪರಸಾಪೋಶ। ದಿಂದಲೀಹಾಡಾವೆ ಹೆಚ್ಚಿಕಠಾರದೊಳಗೆಂದೂ ॥೨೭॥ ನೋಡಿ ಮತ್ರಂಡೆಯದು ಕಣ್ಪೆಣಿ। ಕಾಡುವದನಾ ಗುಡ್ಡನೆಬ್ಬಿ ಬಿ। ಸಾಡಿರೆನೆ ಯಿಾನಾಯಿಗೇತಕೆ ಬವರಿಗಡ್ಡಗಳೂ ॥ ಜೋಡಿಸಿಹುದಲ್ಲದಲೆ ಬಾಲದಿ। ಮೂಡಿದುನ್ನತ ಕುಚ್ಚು ಸಹ ಕಿ। ಚ್ಚೂಡಿಸುಡಿರೆಂದೂ

ಳಿಗರ ದಶಕಂಠ ಕೋಪಿಸಿದಾ ‖ ೨೮ ‖ ಹೆಟ್ಟ ನಿಕೃಷ್ಟ ಕಪೀಯು ದಾಡಿಯ।
ಸುಟ್ಟು ಬಿಡಿರೆನೆ ಮೂರು ಹುಕುಮಿನ । ಕಟ್ಟಕಡೆ ಹುಲ್ಲುರುಹಿ ಗಷ್ಟ ಕುಬಾಲ
ಕತ್ತಿಸಲೂ ‖ ಸುಟ್ಟು ಪುರುಪುರುನಡರಿ ರೋಮ । ಲ್ಸುಟ್ಟು ಬನಲಾರವಳಿಸಂ
ಗಟ । ಬಟ್ಟ ರೀತಿಯೊಳೊದರೆ ಕಟ್ಟುತವೆ ಗರಿತಲ್ಲಿಂದಾ ‖೨೯‖ ಕಿರಿಪಲ್ಗಿರಿಯು
ತಲೀ ಕೈವ್ಯ । ತೂರಿಸುತ ಬೆದರಲ್ಲಿಲ್ಲಾಸ್ಯದ । ನಾರಿಯರಸೀರೆಗಳಿಗಂಟಿಸಲೆ
ಲ್ಲರೆಗರೆಗರೀ ‖ ಗಾರುಗೊಳುತ್ತೈಯ್ಯೈಯ್ಯೋ ಯಿದಕೆ । ವ್ಮಾರಿಬಡಿಯಿತ್ತ ಕಟ
ನೋಡೆಂ । ದ್ವಿರೆಗಳನು ಗುಚುವರ ನೋಡೆಲ್ಲೆಲ್ಲ ನಗುತಿರಲೂ ‖ ೩೦ ‖ ಮ
ದ್ದಲ್ಲುಪ್ಪಂಗಿರದಾಡೆಗೇ । ತಿದ್ದಿ ಜಾಲೆಯ ವಿಗಿಲವಿನಿಯೋ । ಗಿದ್ದ ಬಳಿಗೆಗರೆಗ
ರಿಸೋಕಿಸು ವೇತ್ರಧಾರಿಗಳಾ ‖ ವುದ್ದನಂಗಿಗೆ ಯುಡರಿಸಲು ಕಾ । ಲುದ್ದಕುಪ್ಪ
ಸಸುಡಲು ನಗ್ನದೊ । ಳಿದ್ದುಕುಣಿದಾಡುವರ ನೋಡ್ಯತ್ತೆಲ್ಲನಗುತಿರಲೂ ‖ ೩೧ ‖
ಮತ್ತೆ ರೋಮಂಟುರಿಯುತಿರೆ ಜೆ । ಚ್ಚತ್ತ ಸಾಮಂತಾದಿಗಳ ಬಳಿ । ಗೊತ್ತಿ
ಯುಗ್ರದಿ ಬಿದ್ದು ಹೊರಳಲ್ಲುರಿಯ ನಡರಿಸುತಾ ‖ ಮತ್ತು ಪುರಿಯೊತ್ತರಿಸೆವೇ
ಲಿಗ । ರುತ್ತಲಸುರೇಶ್ವರನ ವಿಾಸೆಗೆ । ಹತ್ತಿಸಲು ಹಾಯಂದು ದಶಕಂಠಗತಿ
ನಿಂದೆದ್ದಾ ‖ ೩೨ ‖ ಬೇಧರಿತಾಸ್ಥಾನೆಲ್ಲ ಕಳವಳ । ದೊದವಿನಲಿ ಪಿರ್ಕಿಂಚು
ಕೊಸಗುವ । ಸುದತಿಯರು ಗಡ್ಡಗಳು ವಿಾಸೆಯುನಾರಿ ಸುವ ಜನರೂ ‖ ತುದಿ
ಮೊದಲು ಸುಟ್ಟಿರಲು ನಾಚಿಕೆ । ಯೊದವಿದೆಲ್ಲರ ವದನಗಳು ಸು । ತ್ತಿದರಿಂತೆ
ಬನಿತರಲಿ ಹೊರಟೆತು ಬಿಟ್ಟು ಚಾವಡಿಯಾ ‖ ೩೩ ‖ ಕಡುಗಿ ಬೀದಿಯೊಳಿ
ರ್ದ್ದ ಜನಜನ । ಕಡರಿಸಂಗೊಪ್ರಗಳಿಗಗ್ನಿಯು । ಸುಡಲು ಬೆದರಲ್ಲಲ್ಲಿ ತತ್ತರಗೊ
ಡುತಪಾರಾಡೀ ‖ ಕೆಡೆದು ಯೇಳುವ ರೋಡುವರ ಬೆಂ । ಬಿಡದೆ ಕಾಡುವ
ಕಪಿಯು ಹಿಡಿತಂ । ದೆಡಕ ಮುರಿರೆನೂಳಿಗರಿಗ ಸುರೇಶ ನುಗ್ರದಲೀ ‖ ೩೪ ‖
ಅಟ್ಟೆ ಬರಲಸುರಾಳುಗಳ ಭಯ । ದಟ್ಟೆ ಮನೆಮನೆಗೆ ಗರಿಮದಿಲವ । ಸುಟ್ಟು
ಪರಿಷಹನಾರಿಪುರುಷರ ನಿಕರವನು ಪೊಕ್ಕೊ ‖ ವುಟ್ಟವಸ್ತ್ರದ ಮರೆಯ ಪೊಗು
ವಂ । ತಿಟ್ಟುವಳಗೆಲ್ಲರಿಗೆ ಜಾಲೆಯು । ನಟ್ಟಸುತಲತಗಡಕಿತೆಲ್ಲರ ನೋಡಬಂದಿ
ಹರಾ ‖ ೩೫ ‖ ಪೋದುದಲ್ಲಲ್ಲಿದಿಗೊಯಿಲ್ಲೂತ್ತಿ । ಪೋದುದಡ್ಡಿಸಿರಡ್ಡಬಸ್ನಿ । ಲ್ಪೋ
ದುದಪುವಿಲ್ಲಿಲ್ಸಿಕ್ಕಿತೆಲ ಹಿಡಿರೆಂದು ಕೈನೀಡೀ ‖ ಸಾಧಿಸುವರೆದೆಗೆರಗುತಗ್ನಿಯು।
ಭೇದಿಸಲು ಮೈತೊಡವುಗಡ್ಡೀ । ಶಾದಿ ವುರಿಯುಲ್ಕಿರಿಚಿ ಮೈಬೆಚ್ಚರಸಿಯುಂದೆ
ಲ್ಲಾ ‖ ೩೬ ‖ ಆರಿಸಸ್ತ್ರಗಳಂಗರಕ್ಷಣೆ । ಗಾರುಗೊಳುತಿಹರಲದೆ ಪಿಡಿವವು ।
ಧಾರರಿಲ್ಲೆಲ್ಲೆಲ್ಲಿ ಜನಗಳ ಗುಂಪುಗುಂಪುಗಳಾ ‖ ತೂರಿದಹಿಸೆಲ್ಲವನು ಲಂತರ ।

ಕೇರಿಪುಷ್ಪಕಗಳಿಗೆ ಜ್ವಾಲೆಯು । ತೋರಲಂಜೋಡಿದರು ಸುಂಟುರೆಯುಳಿದ ತರ
ಗಿನೊಲೂ ॥ ೩೭ ॥ ಅಟ್ಟುತೆಲ್ಲರ ಮನೆಮನೆಗೆ ಯುಗ । ರಿಟ್ಟು ಸೌದುಪ್ಪರಿಗೆ
ಗಳ ನುರು । ಹಿಟ್ಟು ಬಿಡದೊಂದಾಲಯುವನುರೆ ಹಾರಿ ಸಂಚರಿಸೀ ॥ ಬೆಟ್ಟಕಡ
ರಿದ ಬೇಗೆಯ ನೇಕಿ । ಚಿಟ್ಟಪಟ್ಟಣವೆಲ್ಲ ಪಂಜ । ಚ್ಚಿಟ್ಟ ತೆರವೆಳಗಾದುದವ
ನೀನಾಥ ನವಧರಿಸೂ ॥ ೩೮ ॥ ಪುರಿವ ಹೊರೆ ಮಾರಿಯನು ಕರೆದೊ । ತ್ತರಿ
ಸಿದಂತಾಯ್ತೆಲೇ ಕಪಿನೀ। ರೆರಚಿರಿಲ್ಲಲ್ಲಾರಿತಿಲ್ಲುರಿ ಹೊರಟಿತೆನುತೆಲ್ಲಾ ॥ ಮೊ
ರೆವ ಜನರವರವರ ಸಂಗಟ । ಪಿರಿದು ಬಡುತಿರಲಸುರ ನಾಯಕ । ಬೆರಗುಬಟ್ಟಾ
ಧರಿಸಿ ಕಪಿಯೊತ್ತರದ ಚರ್ಯಗಳಾ ॥ ೩೯ ॥ ಯಲ್ಲಿ ಕಪಿಯಿದು ಕಾಲಗತಿ
ಪುರ । ಕೆಲ್ಲ ಸಮನಿಸಿತೆಂದು ಸಭೆವರ । ರೆಲ್ಲ ಚಿಂತಾಕ್ರಾಂತ ಶುಷ್ಕೋಕ್ತ್ರಗಳ
ನನುಗೈದೂ ॥ ಝಲ್ಲಿಸವರುಪಟಳವ ಗೃಹವುರಿ । ವಲ್ಲಿ ಗೈದೈದಾರಿಸುತಲಿಂ।
ತಲ್ಲಣಂಗೊಳಬೇಡಿರೆಂದಸುರೇಶ ನೆಲ್ಲರಿಗೇ ॥ ೪೦ ॥ ವರೆಯು ತಿರಲತ್ಕುಂಭ
ಕರ್ಣ್ನನ । ಪಂಲಮುದಿಲುರಿ ಯೇಳಲಾಯೆಂ । ದೊರಡು ವನಿತರಲಿಂದ್ರಜಿತು
ಮಾರೀಚನರಮನೆಗೇ ॥ ಬೆರಸಲುರಿಯುನು ಹೊರಟು ಯಲ್ಲರು । ಕರೆದು
ವಿದ್ಯಾವರುಷವನು ವ್ಯೈ । ಗರೆಸುತಿರಲಗ್ನಿಯನು ಮತ್ತೆ ವಿಭೀಷಣಾಲಯಕೇ
॥ ೪೧ ॥ ಏನು ಕೌತುಕವೆಂದು ಬಹಿರ್ಗನು । ಮಾನಿಸುತಲೈತರಲು ಪುರಿಸು ।
ತ್ತಾನೆ ತಾನಾಗಡರಿಸುಡುತಿರಲಾಗ ವಿದ್ಯದಲೀ ॥ ಮಾನಿಸುರಿ ಯಾಕ್ಷಿಪಲು ಗಜ
ಬಜೆ । ದಾನವರ ಚಂಚಲದಿ ಆರಿಸು । ನೀನು ತಾನೆಂಬದವಿಲೋಕಿಸಿ ಬಂದ
ನಾಯಡೆಗೇ ॥ ೪೨ ॥ ಅಸುರಪತಿ ಮೊದಲಾದರನು ಕಂಡು । ಸುರಿದೇಕಥ
ನೆಂದು ಕೇಳ್ವನಿ। ಗುಸುರಲಾದೆಲ್ಲವನು ಕಪಿ ಯನಲೇನು ಬಹುಭಾರಾ ॥ ಯುಸ
ಕವೆನಲೇನ್ಬವರಿ ಗಡ್ಡದ । ಪೆಸರದೆಲ್ಲೆಯುದೂರ ದಹಿಸುವ । ವಿಸಿಖ ಸುಳ್ಳದ
ಕೆನೆ ವಿಭೀಷಣ ರಾಕ್ಷಸೇಶ್ವರಗೇ ॥ ೪೩ ॥ ಮುಂದೆ ಬಹಕಾರಣಕೆ ಸರಿ ಕಪಿ।
ಬಂದು ಲೆಂಕಾದಹನ ಗೈತೆಂ । ಬೊಂದು ಶಾಶ್ವತವಾದುದೇನುತ್ಪಾತ ನಗರದ
ಲೀ ॥ ಸಂದಿಸಿಹುದಲ್ಲದಲೆ ಬರದಿಂ । ತೆಂದು ಮಾರೀಚಾದಿಯರ ಬೆಸ । ಸೆಂ
ದು ಕ್ರುದೆಗೊಳುತಿರೆ ವಿಭೀಷಣನರಸ ಚಿತ್ತೈಸೂ ॥ ೪೪ ॥ ಸ್ಮರಿಸಿ ಜ್ವಾಲಾ
ಮುಖಿಯ ವಿದ್ಯದೊ । ಳುರುಹಿ ಲೆಂಕೆಯುಬಿಟ್ಟು ಕಪಿಯಾ । ಕರವನೋಜ್ರದ
ತುಂಬೆಯಾಗ್ಪರಿಧಿಯನು ಕೊರೆದೊರಟ್ಟೊ ॥ ಮರುತಿಯಾಳ್ಪಳ ಕೈದಲತ್ತಶ ।
ಸಿರವಿಭೀಷಣನಾದಿಯರ ಸಂ। ವರಿಸಿ ಬರಲರಮನೆ ಗೆಹರುಹಚ್ಚರಣ ಸ್ಮರಣೆ
ಯಲಿ ॥ ೪೬ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮು

ಲಕ್ಷ್ಮಣ । ರೊಲವಿನೀ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನಕಥೆಯ ಸದ್ಬುಧರೂ ॥ ೪೬ ॥

ಅಂತು ಸಂಧಿ ೪೯ ಕ್ಕಂ ಪದನು ೨೯೦೯ ಕ್ಕಂ ಮಂಗಳಮಹಾ ಶ್ರೀ ಶ್ರೀ

ಐವತ್ತನೆಯ ಸಂಧಿ.

ವಿಭೀಷಣನ ನೀತಿಯ ಸಂಧಿ.

ಕೇಳಿ ಸೀತಾನಾಯಕಿಯ ಬಿಡ । ಹೇಳಲನುಜನ ಬುದ್ಧಿಗನುಸರ । ದಾಳದಿರಲಸಹಿಸಿ ವಿಭೀಷಣ ನಡೆದನಾಲಯಕೇ ॥ ಪಲ್ಲವಿ ॥

ತಿಳಿದೆಯ್ಯೆ ರಾಜೇಂದ್ರ ದಹನವ । ಗೊಳಿಸಿ ಲಂಕೆಯ ಮಾರುತಿಯು ನಿಜ । ದಳಕೆ ತೆರಳಿದನಿತ್ತ ದಶಶಿರನುರಿಯ ನಾರಿಸುತಾ ॥ ಪುರವರರ ಸಂತೈಸಿ ಸಭೆಜನ । ವೆರಸು ವಾಲಗಕೈದಿ ಹರಿವಿ । ಷ್ಟರದಿ ಕುಳಿತನು ಕಳಿತರಾದಸಿಯರು ನಲೆಗಳಲೀ ॥೧॥ ಬಲದಭಾಗದಿ ಕುಂಭಕರ್ನೆಡ । ದಲಿ ವಿಭೀಷಣ ಮಣಿಮ ಯಾಕರ । ಕಲಿತ ಪೀಠದಿ ನಿಕಟದೊಳಗಿಂದ್ರಾರಿಗಳನಿರಿಸೀ ॥ ಸಲಿಗೆಮಾತುಳ ನೆದುರಿನೊಳುತ । ದ್ಫೆಳಿಯೆ ಹಸ್ತ ಪ್ರಹಸ್ತರನು ಯಿರಿ । ಸೊಲೆವ ಚಾಮರಮ ಧ್ಯದೊಳಗೆಸೆದಿರ್ದ ದಶಕಂಠಾ ॥೨॥ ಕಟ್ಟೈತಾಗಲೆನರ್ತನವು ಶೃತಿ । ಗೊಟ್ಟ ರಿಂವ್ಯಾಳಿಗರು ಲಾಸ್ಯವ । ನಿಟ್ಟೆಸುತ ಪದಿನಾರು ಸಾಸಿರಮುಗುಟವರ್ದ್ಧನರಾ॥ ನಟ್ಟನಡುವಣ ದಶಶಿರನೆ ಪ್ರತಿ । ಗೊಟ್ಟ ಪರಿವೃಡಸಲ್ಲದಮರನಿ । ಗೆಟ್ಟದಿ ಪೊಗಟೆಂಬೊಲೆಸೆದನು ಕೇಳೋ ರಾಜೇಂದ್ರಾ ॥ ೩ ॥ ಇಂತುಸಮುಕಟ್ಟನಲಿ ಕುಳಿತಿರು । ವಂತ ಸಮಯ ವಿಭೀಷಣನ. ಪುರ । ಕಿಂತು ವುತ್ಪಾತರುಹನಾರಾ ಧನೆಗೆ ಅಂತರವೋ ॥ ನೀಂ ತಿಳಿದದನುಮಾನಿಸದೆ ವುಲಿ । ವಂತೆ ಮಾಡೆನಲಾ ಮಾರೀಚನು । ವಾಂತು ಆಲೋಕಿಸಿದ ದಶಶಿರನವಕೆ ಸೈಗ್ನೆಯಲೀ ॥ ೪ ॥ ತಿಳುಹದಿಹುದೆನಲೇನು ವುತ್ಪಾ । ತಳವದಿಲ್ಲೆನಲೆಂದಿನಿ ತೆರಪೊಳ । ಲೊಳಾಗಿ ವುಂಟೆ ಶಾಲಿಯುಪರಿಧಿಯನುಗೈದ ॥ ಕಳವಿದೇನೀ ಸಮಯದೊಳಗದ । ತಿಳಿ

ದೆನಲೋ ಮಾತುಳನೆ ನೀ ತಿ । ಳುಗೊಳದ ಕಥೆಯಿಲ್ಲರುಹು ಬೇಗನೆ ಕುಂಭಕ ರ್ಣಲಿದೂ ॥೫॥ ಮೆತ್ತ ನುಲಿಯುನಲಾ ವಿಭೀಷಣ । ಗುತ್ತರೀವೆಯ ನಾನು ಕೇಳ್ವದ । ಕೆತ್ತ ನೋಡುವ ಭಯವಿದಾಯನಿಗಾರರ್ಗಣ ನಿನ್ನೂ ॥ ಯತ್ತಣಿಂ ಬಂದಿಹುದು ಅದಕನು । ವೆತ್ತರಲ್ಲವೆ ನಮಗೆ ಮರವೂ । ಜುತ್ತರೆನೆನೆಕುಂಭ ಕರ್ಣನು ನೋಡಿ ಮಾತುಳನಾ ॥ ೬ ॥ ನೋಡಲಸುರೇಶ್ವರನ ಸೈಗ್ನೆಯು । ಮಾಡಿದನು ತಿಳುಹೆಂದು ತತ್ತೆರ । ನಾಡಿದನು ಮಾರೀಚ ಜಾನಕಿಯೈದಿಸೆಸಗಿಸಿ ದಾ ॥ ತೋಡಿ ಖರಧೂಷಣರು ವಾಲಿಯು । ಝಾಡಿಸೆಲ್ಕಪಿವರರು ಸಹಕೈ । ಗೂಡಿಸಣುವಾನ್ಯೊಲಿದುದೆಲ್ಲಸುಭವವ ಮಾಡಿದನೂ ॥ ೭ ॥ ಮೇಲೆರಾಘವ ರೈದದಿರಲೆಂ । ಶ್ಯಾಲಿ ಪರಿಧಿಯ ಗೈದೆವೆನೆ ಖರ । ವಾಲಿ ಸತ್ತರೆ ಸತ್ತರೇಹಾ ಯುಂದು ಜಾನಕಿಯಾ ॥ ಮೂಲಸರಿಯಗ್ರಜನ ವಲವನು । ಕೂಲವೆನೆ ಚಿ ಕ್ಕಂಣನನ್ಯಾ । ಯಾಲಯಕೆ ಸನ್ಮತವ ಬಡಬೇಡೆನೆ ವಿಭೀಷಣನೂ ॥ ೮ ॥ ಹೊನ್ನು ಹೆಣ್ಮಣ್ಣಳಿಗೆ ಮುಡಿಚ । ಟ್ಟೆನ್ನುವರೆ ಯಲ್ಲಿರಲಿ ಯಾರಿಂ । ದನು ಗ್ರಹಿಸಲಿ ಅವರ ಪ್ರೀತಿಯೊಳಲದೆ ಬಲಕರಗಾ ॥ ಗೆನ್ನುವರಲಾಗ್ರಾಹಿಸುವದಿ ದ । ಕಿನ್ನು ದೋಷಿಲ್ಲೆನುವ ಅಗ್ರಜ । ಗನ್ನುತಲೆವಲೆದಾಡಿ ಪೇಳ್ದ ವಿಭೀಷಣಂ ತೆಂದೂ ॥೯॥ ಹೊನ್ನು ಮಣ್ಪುದ್ಗಲಗಳಾತ್ಮರ । ದಿನ್ನು ನಿರ್ಜೀವಿಗಳು ಅದ ರಿಂ । ದಿನ್ನು ಸರ್ವಾಲಯುಗಳಾಗಲ್ಲಿಲ್ಲ ದೋಷಗಳೂ ॥ ವುನ್ನತೇಕೇಂದ್ರಾದಿ ಜೀವಗ । ಳನ್ನು ಬಾಧಿಸಲಸರಸಂಚಯು । ವೆಂನುವಘವೀಗಳೆ ವದರಿಯದುದೆ ನೆ ವಿಭೀಷಣನೂ ॥೧೦॥ ಕಾಡುವದು ಪ್ರಾರಂಬ್ಧ ಜನರೆಂ । ದಾಡುವದುತಾ ಗೈದದುಶ್ಚರ । ಕಾಡುವದೊ ಯುಲವೆಂಬದಮುಲಜ್ಞಾನರುಪದೇಶಾ॥ ಮಾಡು ವದು ಶಾಸ್ತ್ರೋಕ್ತ ಸಮ್ಮತ । ಗೂಡಿವರೀತಿ ಲವಗ್ರಜನೆ ತಿಳಿ । ದಾಡುವರೆ ಘನಪಾಪದಾಶ್ರವವೆನೆ ವಿಭೀಷಣನೂ ॥೧೧॥ ಸತ್ಯಶೌಚಗಳಾದಿ ದಶವಿಧ । ಗತ್ಯಬ್ರಹ್ಮಚರ್ಯ ಪರಸತಿ । ಸ್ತುತ್ಯವೀಕ್ಷಣ ಭಾವಕವರ್ಗ ಗಳಾಗವೆಂಬವ ನೂ ॥ ನಿತ್ಯಶ್ರವಣಾರಂಭಿಸುತ ಸಿರಿ । ಮೃತ್ಯು ಪರನರಕಾದಿಗಳಿಗನು । ವತ್ಯ ನುಡಿಯಾಡುವರೆ ಅಗ್ರಜನೆನೆ ವಿಭೀಷಣನೂ ॥ ೧೨ ॥ ಧಾರಪೂರ್ವಕರಾವರೊ ಳು ವೈ । ಯ್ಯಾರಿಸುವುದೆಂದಾದಿ ಪುರುಷಿದ । ತೋರಿತಿಲ್ಲವೆ ಜನಜನಾಕರ ಮೂರುಲೋಕದಲೀ ॥ ಮೋರೆಯುಂಬುದದೇನು ಯುವಬಿಟ್ಮೀರ । ಬಾರದುದೇ ನು ಸಕಲವಿ । ಚಾರಗಳ ತಿಳಿದರಿಗೆ ಪೇಳ್ವೇನೆನೆವಿಭೀಷಣನೂ ॥೧೩॥ ಕೊಂ ದರಿಗೆ ಕೊಲೆಯು ನೃಪತಿಯಾ । ನಂದರಿಗೆ ತ್ರೈಜಗದಿ ಹೊಲೆ ಬಹು ।

ದೆಂದ ನಾಣ್ಣುಡಿ ಮೇಣು ಬಲಸರಗಂಡನಾಗಿರಲೂ ॥ ಕೊಂದು ಬಿಸುಡು
ವನಾಗಲೇ ಛೀ । ಯೆಂದು ವುಗುಳುವರೆಲ್ಲ ರದನೊಳಿ ।
ತೆಂದು ಪೇಳ್ವರೆ ದೇವನೆದುರಿಗೆ ಯನೆ ವಿಭೀಷಣನೂ ॥ ೧೪ ॥
ಕೇಳದೊಲವನ್ಯಾಂಗನೆಯು ಮೇ । ಲ್ಬೀಳಲಾಗ ನಪುಂಸಕತ್ವವ । ತಾಳಬೇಕ
ಲ್ಲದಲೆ ತಾಬಲುಹಿಂದ ಪಿಡಿತಂದೂ ॥ ಬಾಳುವದೆ ದೊಡ್ಡಂಣನೆದುರಿದ । ಪೇ
ಳುವರೆ ಚಿಕ್ಕಣ್ಣ ನಿನಗಿದ । ಪೇಳಿಕೊಟ್ಟವನಾರು ಆಹಾಯೆನೆ ವಿಭೀಷಣನೂ
॥ ೧೫ ॥ ಅರಿಯನೇ ಮಾರೀಚ ಮಂತ್ರಿಗ । ಳರಿಯರೇ ಲೋಕಾಖ್ಯ ಜನ
ಜನಿ । ತರಿಯರೇ ಯಿಾ ಲೋಕದೊಳಗನ್ಯಾಯ ವೆನದಿದಕೇ ॥ ಸರಸಬಡರವು
ಚಿತ್ಯಕನುಸರ । ವರೆವರೇ ಚಿಕ್ಕಣ್ಣ ಸಲಪೆಂ । ದೊರೆವುದಗ್ರಜಗೆನೆ ವಿಭೀಷಣ
ಕುಂಭಕರ್ನನಿಗೇ ॥ ೧೬ ॥ ಬಲ್ಲರವುದವನಿಯೊಳುಗಿದ ಜನ । ರೆಲ್ಲ ರನ್ಯಾಂ
ಗನೆಯರೊಲ ಬಹು । ಹೊಲ್ಲ ಸರಿಯಂ ತಿಳಿದೆ ನೀ ನಿನಗೊಂದು ಬುದ್ಧಿಲ್ಲಾ॥
ಸಲ್ಲಗುರುಹಿರಿಯರೊಳು ಪ್ರತಿಯು । ಕ್ತಲ್ಲೆಯನುಕೂಲೆನಿತೊ ತದ್ವಿದ । ದಲ್ಲಿ
ನಡೆವಡೆಮತ ವಿಭೀಷಣನೆಂದ ಚಿಕ್ಕಣ್ಣಾ ॥ ೧೭ ॥ ಹಿರಿಯರಿಚ್ಚೆಗೆ ವಿಘ್ನದಾ
ಚರ । ಬರದೆ ಪಾತಕ ಪರಸತಿಗೆ ಮನ । ದೆರಕ ಪಾತಕವೆಂಬೆಯದು ನಿನ
ಗೇಕೆ ತಿಳುಹಿಲ್ಲಾ ॥ ಹರುಷಬಡು ಪಿರಿಯಣ್ಣನಿಗೆ ಬದ । ಲೊರೆಯದೆನಲಾ
ಕುಂಭಕರ್ನನ । ಯರಕಕನುಬಟ್ಟುಲಿದ ನಸುರೇಶನುಜಕೇಳೆಂದೂ ॥ ೧೮ ॥
ಪಾತಕಿಲ್ಲರಸರಿಗೆ ಯದರೊಳ । ಘಾತ ನನಗಿನ್ನೆಂತ ಪಾಪದ । ಭೀತಿಯನು
ತೆಂದು ನಿಮು ಚಿಕ್ಕಣ್ಣ ನುಡಿದಂತೇ ॥ ಪ್ರೀತಿಬಡು ಬಹುನೂತನದ ರೂ ।
ಪಾತಿಶಯ ಸೀತೆಯನು ಕಡ್ಮನ । ಸೋತು ತಂದೆನು ತಮ್ಮ ಭೋಗಿಸಲೆಂದ
ದಶಕಂಠಾ ॥೧೯॥ ಗುರುಹಿರಿಯರೆಂದುಲಿವರವರೊಳು । ಪಿರಿಯಗುಣವರಿದಲ
ದೆಷ್ಟಚ್ಚಾ । ಕರರಿಗಹುದೆ ಶ್ರೇಷ್ಟ ಶೌಚಾಚಾರಕನುವಾದಾ ॥ ಚರಿತವೋಜನ
ಮುಖ್ಯವದಕಂ । ತರವೊ ಚಿಕ್ಕಂಣೊರೆವದನುಚಿತ । ಸರಸವಲ್ಲನ್ಯಾಂಗನರವ
ಲವೆನೆ ವಿಭೀಷಣನೂ ॥ ೨೦ ॥ ಕಾರಣಹುದಾವಸ್ಯ ಪಿತರಾ । ಚಾರವೆಂಬು
ದು ತೀರ್ಥಕರ ಸಂ । ಚಾರವೋ ತದ್ಮಾತ್ಯರೆ ವಿಾರಿದ ನೃಪರವರ್ತನವೋ ॥
ವಿಾರದಿಹುದಗ್ರಜರ ನಡೆ ಸುವಿ । ಚಾರವೋ ಅವಿಚಾರವೆಂಬುವ । ದಾರುಸೊ
ಲ್ಲಿಸಲೆನೆ ವಿಭೀಷಣ ರಾಕ್ಷಸೇಶ್ವರಗೇ ॥ ೨೧ ॥ ಜನರಸನ್ಮಾರ್ಗಗಳಿಗೈದಿಪ ।
ಮುನಿಜು ಮಾರ್ಗವ ನುಳಿದ ಬಹು ದು । ರ್ಜನರ ದಂಡಿಪನರಸನಲ್ಲದಲಿತರ
ನಡೆಯಿರುವಾ ॥ ಕುನಯ ನೆನಿಸುವರಲ್ಲ ದೊರ್ತನ । ವೆನುವರೊಳಗನುಕೂಲ

ವ್ರೋ ಪರ । ವನಿತೆಗವು ನೆರವೆನೆ ವಿಭೀಷಣ ನಗ್ರಜನ ನೋಡೀ ॥ ೨೨ ॥ ದು
ಶ್ಚರಿತೆಗನುಬಡದಲಿರೆ ಕ । ಮ್ಮುರ್ಚ್ಚದಿಂದ ಪ್ರಮಾದ ದೋಷಾ । ಗಚ್ಚಿಸುಗು
ದುರ್ಬುದ್ಧಿ ಸೀಘ್ರದಿ ತಿಳಿಯ ಬೇಕಲದೆ ॥ ಯಚ್ಚರಿಪರಿಂದರಿಯ ಬೇಕನು ।
ಗಚ್ಚನಡತೆಯೊಳಧಿಕ ಪರಸತಿ । ಗಚ್ಚ ಚಿಕ್ಕಂಣಲಿವ ನಿಮಯಿಚ್ಚೆನೆ ವಿಭೀಷಣ
ನೂ ॥ ೨೩ ॥ ಕಮ್ಮವಶದಿಂ ಮಾರ್ಗ ಪರಿಹಕ। ದುಮ್ಮರ್ನೊಗೆವುದನಿಲಿಸದಲೆ
ಯವ । ರೂಮ್ಮಿರ್ಸುವದೇನುಚಿತ ಚಿಕ್ಕಣ್ಣೋಡಿ ಘ್ರುತ ರುಚಿಗೇ॥ ನಮ್ಮರ್ಗೊ
ಳುವದೆ ಯಂಜಲಿಗೆ ಘನ । ಕಮ್ಮವಲ್ಲದೆಪರವನಿತೆಯುರ । ಶರ್ಮಬೇಡಣ್ಣಾಜಿ
ಪರಿಹರಿಸೆನೆ ವಿಭೀಷಣನೂ ॥೨೪॥ ಪರಸತಿಯ ಹಿತಸಲ್ಲ ಮೇಣ್ಮನ । ವರಿಸಿ
ದರ ನಿಗ್ರಹೆವೆ ಪುಣ್ಯೋ । ತ್ತರಣಕಾಕೆಯು ಶಾಪದಿಂದೀಗಾದಿಯಲಿ ಲೆಂಕೇ॥
ವುರಿದುದೆಮ ಬಾಂಧವರು ಪರವರ । ಗರೆದರಾ ಖರಧೂಷಣೋಲಿಯು । ಹರ
ಣವೆನಲೇನೆದುರೆ ಲೋಕದೊಳೆನೆ ವಿಭೀಷಣನೂ ॥೨೫॥ ಅಂಗದೆನಲೇನಸಮ
ಮಾರುತಿ । ಸಂಗರವೆ ಸತ್ಯದಲಿ ಕಡೆ ಹಾ । ಯ್ವಂಗರರಿದನ್ಯಾಯುರೆಡೆ ಬಿಡದಿಹ
ರೆವಿದ್ಯೆಯರೂ ॥ ಇಂಗಿತಾಗಿಹ ಪಾಲಪಾನಿಸಿ । ದಂಗಜರು ವ್ರುತಗೊಳ್ವರಿಂಗ
ರ । ಳಂಗಳಿಂ ಬಡುಕುವರೆ ಯಗ್ರಜನೆನೆ ವಿಭೀಷಣನೂ ॥೨೬॥ ವ್ರುತವೆವಾ
ಲಿಗೆಮಾನವರ ಕೈ । ಜತಿಯುನಾಳಾಪದಲಿ ಪ್ರಾಣ । ಚ್ಚುತಿಯು ಪಡೆದನ್ಯಾಂಗ
ನೆಯ ಕೃದ್ಯಾಪಸಾಹಸದೀ ॥ ಚ್ಯತಿಸದಿಹದೇ ಸರ್ವಲಕ್ಷಣ । ಯತಿಯರಿಂ
ಪರಸತಿಯ ವಿರತಿಯ । ಜೆತಿಸಿರುವೆ ಯಂಣಾಜಿ ವಜ್ರಕೆಯುಜ್ಜಯನಲನುಜಾ॥
ಬೇಡವಿದರಿಂದೆಲ್ಲ ಹಾನಿಯ । ಮಾಡದಿರದೀಗಾದಿ ಪೂಜೆಯ । ನೋಡಿ ಲೆಂ
ಕಾದಹನವೆಂಬದ ತಿಳಿದು ಬಿಟ್ಟೇನಾ ॥ ಮಾಡು ನಿನಗೆದುರಿಲ್ಲ ಸ್ತ್ರೀಯರು ।
ಷೋಡಸಾಸಿರವಿಹರು ಮೇಣಿ । ನ್ನೂಡುಕನ್ನೆಯರೇನು ಅರೆ ನಿನಗೆನೆ ವಿಭೀಷಣ
ನೂ ॥೨೮॥ ಮಿಸುನಿಕತ್ತಿಯು ಕೊರಳಿನರಿಯದೆ । ಹಸಿತವಜ್ರಂಗವನು ದಹಿ
ಸದೆ । ಕಸವರವ ನಾವಾವ ಬಗೆಯಲಂಕರಿಸ ಬೇಕಂತೆ ॥ ಬಿಸಜವದನೆಯ
ರೊಂದೆ ಆರಾ । ರೆಸಕಗಾಣ್ಬೇಕೀಗ ಜಾನಕಿ । ಬಸುರು ಕೂಸೆನಬೇಕು ಮಹಾ
ರಾಜನೆ ವಿಭೀಷಣನು ॥ ೨೯ ॥ ಬಹದು ಯಿದರಿಂದೆಮ್ಮ ಐ ಸಿರಿ । ಗಹಿತ
ವದ ಕುರಿತೆನ್ನ ಬಿನ್ನಹ । ಸಹಿಸಲೋಸುಗ ತಾಳಿ ನಿಶ್ಚಲವೆನಿತು ಆಪೇಕ್ಷೇ ॥
ಇಹದನುಳಿದೀ ಜಾನಕಿಯುತ । ತ್ರ್ರಹಿತ ನೆಡೆಗಟ್ಟೆನುತ ಪದ ಪ । ದ್ಮಹಕೆ ಶರ
ಣೆಸಿದನುಜ ನೆತ್ತಿಂತೆಂದ ದಶಕಂಠಾ ॥ ೩೦ ॥ ವುಂಟು ಯನಗೆ ವಿಶೇಷ ಸ್ತ್ರೀ
ರಿಂ। ನುಂಟು ಪರನಾರಿಯರು ಕನ್ನೆಯ । ರುಂಟು ಬಹುಜನರಿರಲಿ ಲೋಕದೊ

ಳೀಗ ಜಾನಕಿಯಾ ॥ ಜಂಟರಿಲ್ಲೆನಗೆಲ ಜ್ಞಾಪಕ। ವುಂಟು ವ್ರತ ಶೌಚಾದ
ರೂ ಭ್ರಮೆ। ಯಂಟೆ ನೋಡಿಸದೆನನಾ ಬಿಡಲಾರೆನಾ ಸತಿಯಾ ॥ ೩೧ ॥
ಬಿಡುವರೆ ವ್ರತಸೀಲಗಳ ಸಂ। ಪೊಡೆವುದಘಟಿತ ಪೂರ್ವಪುಣ್ಯದಿ। ಯಡಸಿ
ದೀ ಸಿರಿರೂಪು ಸೌಭಾಗ್ಯಕೆ ಕೆಲಜನಕೇ ॥ ಬಡತನಗಳೇ ನಪರಕೃತಫಲ।
ವಡಸಿತೆಂಬಿ ಲೋಕರೋಕ್ತದ। ನಡೆಯನೋಡ್ಬಿಡು ಚಲುವೆಯಾಗಿರಲೇನು
ಸೀತೆಯನೂ ॥ ೩೨ ॥ ಆದಿಯೊಳಗಾಧರಿತ ಪುಣ್ಯವು। ಪೋದಪುದೇ ಕಪಿ
ಯಿಂದಲಿಗಿಂ। ತಾದರವ ಲಕ್ಷಣವೆ ಖೇಚರರತ್ತ ಸೇರಿದರೇ ॥ ಹೋದುದೇ
ನಂಗದನು ಮಾರುತೇ। ನಾದರೇನಿನ ಸೇನೆ ಭುಜಬಲ। ಹೋದುದೆ ಅನು
ಜಾತ ನಾಬಿಡಲಾರೇ ಜಾನಕಿಯಾ ॥೩೩॥ ಅಪರಪುಣ್ಯವನನುಭವಿಸಿಮುಂ।
ದುಪರಿಗೈದಿದ್ಭವಿಷ ಜಲ್ಮಕೆ। ಸಫಲಗೈಬೇಕೆಂಬ ನೀತಿಗಳುಂಟೊ ಯಿಲವೆಂ
ಬಾ ॥ ದುಪಮಿಸೀವೂರ್ದಹನಗೊಳಿಸಿದ। ಕಪಿಯುದೆಲ್ಸತ್ತಿಹುದು ಆಸತಿ।
ಶಪಥರಹುದಗ್ರಜನೆ ತಿಳಿದಿನ್ಕಳುಹು ಜಾನಕಿಯಾ ॥ ೩೪ ॥ ಬೆಂದು ತನವೆ
ಲ್ಲೆಲ್ಲೊಘಾಳಿಗೆ। ಸಂದುದೊ ಕಪಿ ಯನಗೇ ಪುಣ್ಯಾಸ। ಮುಂದಕೆನಕೇ ಹಿಂದು
ಮುಂದಿಂನಾತ್ಮವಿದುವನಕಾ ॥ ವಂದೆಸಮನಾ ನಾರಿಶಾಪವ। ದೆಂದರೇನೀಮಾ
ತಿಗಳ್ಕು। ವನೆಂದು ತಿಳಿದೇಕುಲಿವೆ ಯನುಜನೆ ಬಿಡೆನು ಜಾನಕಿಯಾ ॥೩೫॥
ಮೋಹಿಮುಂದರಿಯುಂಬದಕೆ ಸರಿ। ಯಾಹಗೊಳ್ವರೆ ಕಾಮುಚೇಷ್ಟಿತ। ಗೂ
ಹೆತಿಳಿಯದು ಸರ್ವಕಲೀಯರಿದಿಹನ ಮರಸುವದೂ ॥ ಮೋಹ ನಾನುಲಿದೋ
ಕ್ತಭಯ ನಿಮ। ಗೂಹಿಪನೆ ಜಾನಕಿಯ ತರುವೆಡೆ। ಸಾಹಸೇನಾಯ್ತಗ್ರಜನೆ
ಬಿಟ್ಕಳುಹು ಜಾನಕಿಯಾ ॥ ೩೬ ॥ ಕೇಳಿಯುದ್ಯಲಿದದಕೆ ಕಪಟವ। ತಾಳಿ
ತಂದೀಗವರು ಬಂದೆಂದು। ರಾಳುವರೆ ಯನಗೇನು ಮೋಹಾಂದಿಲ್ಲ ಪ್ರಜ್ಞೆಯ
ನೂ ॥ ಜಾಳಿಸಲು ತರ ಬಾರದೈದಿಸಿ। ಬಾಳದುಳಿವರೆ ಅಂಗದನು ಮಾ।
ನ್ಯೇಳುವರೆ ಯಂನೆದುರಿಗನುಜನೆ ಬಿಡೆನು ಜಾನಕಿಯಾ ॥ ೩೭ ॥ ಇರಲು ಪೌ
ರುಷವಾಗ ರಘುವರ। ರಿರಿದು ತಂದಿರಲೇನು ಯೇನೆಂ। ತರವಗರದರು ಕೂಡಿ
ಬಹುದವರೀರ್ವರಾಕೆಲಸಾ ॥ ಗರೆದರಣುಮಾನ್ಯಂಗದರ ಪ್ರಿಯ। ಗರದೊಸೀ
ನಿಂನೆಲ್ಲರಂತವ। ರರಿದೊ ಕೂಡಿಹರಲ್ಲಿಯಗ್ರಜ ಬಿಡುವುದವನಿಜೆಯಾ ॥೩೮॥
ನೋಡಿ ಬಂಧುತ್ವವನು ಸಂಸ್ರುಚಿ। ಮಾಡಿದಲ್ಲದಲವರ ಭಯವೊಡ। ಗೂಡಿ
ಮಾಡಿದನಲ್ಲದೆಲ್ಲರಸಮನೆ ಯನಗವರೂ ॥ ಈಡೆ ರಘುವರರೀರ್ವ್ವರೇ ಅದ।
ಮಾಡಿದಲೇ ನಿಂನೆಲ್ಲನಾಡನು। ಕೂಡಲೇನಾಪರಜ ಬಿಡೆನೀ ಭಯಕೆ ಜಾನಕಿ

ಯಾ|| ೩೯ || ಸತ್ವರವರಾಗೇನೊ ಹೇಷ್ಯದೊ | ಕೊತ್ವಿಬಹರವರೆದುರಿಗಿರಿವ ನು | ಸತ್ವ ನೀನಲ್ಲಿರಲು ಜಾನಕಿಯುಳಿದು ರಣಕೈದೂ || ಭಿತ್ವಗೊಂಡಾನತ ದೊಳೆಲ್ಲಮು | ಮತ್ವಗೊಳುವರು ಯನುವದನು ತಿಳು | ಹತ್ವದಿಂದಿಡಸಲ್ಲ ಜಾನಕಿಯನೆ ವಿಭೀಷಣನೂ || ೪೦ || ಅಧಿಕರಾಗಲಿ ಕಾಲಕನುಸರ | ದುದ ಯರಾಗಲಿ ನೋಡುವೆನು ಬಂ | ದೆದುರಿಗೊದಗಲಿ ಯೀಗಲೇಕಾ ಮಾತು ಸೀ ತಿರಲೂ || ಕದನಕಾರೆನೆ ಬಿಟ್ಟರಾಕೆಯ | ನೊದಗುವರೆ ಬಲವೆನಗೆ ಪ್ರತಿಯೊ| ಕ್ತುದಿಪನೇಯನುಜಾತ ಬಿಡೆಹೋಗೆಂದ ಜಾನಕಿಯಾ || ೪೧ || ಹೋಗುವೆ ಡೆ ಸಿರಕಾಲು ಹೊಣೆಯಂ | ಬಾಗಮುಕೆ ಸರಿಯಾಗಿ ತಿಳಿದಿಂ | ತಾಗುವದು ಕಡೆ ಹೇಷ್ಯವಲ್ಲವೆ ಸಿದ್ಧಶೈಲವನೂ || ತೂಗಿದನು ಕೈಯಿಂದ ಹತವೆಂ | ಬಾ ಗುರೋಕ್ತ್ರವ ಕೇಳಿ ಯದ ಕಂ | ಡೀಗ ಲಿಂತಾಡುವರೆ ಅಗ್ರಜ ಕಳುಹು ಜಾನ ಕಿಯಾ || ೪೨ || ತಲೆಯು ಕಾಲೆನಲೇನು ಪೈತ್ಯದೊ | ಉಲಿದ ಯತಿ ನುಡಿ ನಿಶ್ಚಯುವೆ ಮೇ | ಣಲದೆ ಕೈಲಾಸಾದ್ರಿಗಧಿಕವೆ ಸಿದ್ಧಪರ್ವತವೂ || ಚಲಿಸಿ ದವ ಬಲ್ಲಿದನೆ ನಾನನು | ಬಲನೇ ಸಾಕಾ ರಾಮನೆನಹ | ನುಲಿವೆ ಯರವೇಕೆ ನ್ನೊಳಾಬಿಡೆನನುಜ ಜಾನಕಿಯಾ || ೪೩ || ಸತ್ವವೆನಿತಿರೆಪುಣ್ಯವೆ ಪ್ರಬ | ಲ ತ್ವಸತ್ಯಕೆ ದೇವರಾಗಿಮು | ಮತ್ವಗೊಳುವಗ ಸತ್ಯರಿಗೆ ಕಗ್ಗದಲಿ ಜಯದೇವೀ|| ಭಿತ್ವಗೊಳುವಳು ಸಹಜವೆನಲ ಬ | ಲತ್ವವೆನುವಂ ತಿಳಿದು ದಾಸೀ | ನತ್ವಗೈ ಬೇಡಣ್ಣ ಬಿಡು ಜಾನಕಿಯ ತರವಲ್ಲಾ || ೪೪ || ಸೀತೆಯನು ಬಿಟ್ಟೆನ್ನ ಕಾ ರ್ಯ್ಯವ | ದೇತರದು ಯೆನುತಾಗಲೇ ಪೇ | ಳ್ವಾತನಾಲಿಸಿ ಮತ್ತು ಮತ್ತದ ನುಲಿಯುಲೆನಗಾಪ್ತಾ || ವೇತರದು ನಿನಗಜ್ಜನಗ್ರಜ | ತಾತನೋ ಆರಾಮು ಬ ಹುಪ | ಕ್ವಾತು ಮಾತಾಡುವೆ ವಿಭೀಷಣಬಿಡೆನು ಜಾನಕಿಯಾ ||೪೫|| ಸಹಜ ತನಕವ ತಾತಪಿತಮುಹ | ನಹುದು ಸಹಜಾತಹುದು ಮತ್ತೀ | ನಹನುಯನಗ ವನಿನೆ ಅಗ್ರಜನೆಂಬ ಶ್ರೇಯದಲೀ || ಸಹಜವಾನರುಹಿದರೆ ನಿಮು ಮನ | ಕಹಿ ತವಾಯಿತೆ ಯಿಂತನಿಷ್ಟದೊ | ಳಿಹುದು ಹೇಗಗ್ರಜನೆ ಬಿಡು ಜಾನಕಿಯಹಿತ ಬೇಡಾ || ೪೬ || ಲೋಕವಹಿತಾಕ್ರಮಕೆ ಯಿಾ ಕೆಲ | ಸಾಕರವು ಮುಂದಪರ ಗತಿವನ | ಕೀಕುಠಾರವೆ ಸಾಕು ಮೇಣನುಬಂಧಿ ಬರಲೇನೂ || ಕಾಕ ಬಡಬ ಹುದುಭಯ ಭ್ರಷ್ಟ | ತ್ವೇಕೆ ನಿನಯಶಯೋಗ್ಯವಲದಿಂ | ನಾಕೆ ಬಿಡುಅ ಗ್ರಜನೆ ಬೇಡುವೆನೆನೆ ವಿಭೀಷಣನೂ || ೪೭ || ಬೇಡಿದರು ಬಿಡೇ ನಿನಹಿತನೊ ಡ | ಗೂಡಿದರು ಬಿಡೆ ಲೋಕವಹಿತವ | ಮಾಡಲೆನರಗುವನೆ ಅಪರಾದದೊ

ಳಾಹಗತಿಯನ್ನೂ ॥ ನೋಡಿ ಬಂದಿಹನಾರು ಬದಲೋಕ್ತ್ತಾಡದಲೆ ನಡೆಯ
ನುಜನಾಗಿಂ । ತಾಡಿದಕ್ಕಿಸಿದೆಲೊ ವಿಭೀಷಣ ಬಿಡೆನು ಹೋಗೆಂದಾ ॥ ೪೮ ॥
ಸಹಜವೇ ನಿಂನೋಕ್ತ ಯನ್ನಹ । ಸಹಜವೇ ನ್ನೀಕುಂಭಕರ್ಣ ನೊ । ಲಿಹನೊ
ಲಂಕೆಯಬಿಟ್ಟು ನಡೆವನೊ ಯಿಂದ್ರಜಿತು ನೀನೂ ॥ ಸಹಜನೋ ಯನಗೀ
ವಿಭೀಷಣ । ಗೊಹಿಸುವನೊ ಯೇಳೆನಲು ತವಪದ । ವಹಿಸುವನೆ ಸರಿಯಂದ
ಕಂದನಿಗುಲಿದ ದಶಕಂಠಾ ॥ ೪೯ ॥ ಯನಗೆ ಶ್ರೀಯೋಪೇಕ್ಷೆ ನಲದಹಿ ।
ತನಿಗೆಹಿತವಾರೈಪ ಪಿತ್ರುವ್ಯನನು ಕೇಳೇನೆಂಬ ನೇನಲಃಸುತನು ಕಿರಿಯೈಯ್ಯಾ॥
ನಿನಗೆ ಯಾಕೆಲ್ಲರೊಲು ಯಿರದಿಂ । ತೆನುವರೆ ಬೇಡೆಂದು ಗೃಹಕೆದು । ರಿನಲಿ
ಯಿರಸಲ್ಬರಿದೆ ಹರುಕತೆಯಂದ ನಿಂದ್ರಾರೀ ॥೫೦॥ ಹಸುಳೆನೀನೇಬಲ್ಲೆವಂಶ ।
ದ್ಮಸಿಯ ಯಶಗಳ ದೊಡ್ಡವನ ಭಯ । ಕುಸುರಿಯಿಹ ತ್ರಯಪರ ವಿಶೇಷವ
ಕೆಡಿಸುವೆತ್ನವನೂ ॥ ಗಸಣೆಬೇಡಾಯೋಚನೆಯು ನಿಮ । ಬಸುರೊಳಡಗಲಿ
ಯಿಾಗ ಸುತಪಿತ । ರೆಸಕವಲದಪರಕ್ಕೆ ಸಹಯವೆಯನೆ ವಿಭೀಷಣನೂ ॥೫೧॥
ಆರು ನೀನಾ ರಂಗನಗ್ರಜ । ರಾರು ಭವಭವದಲಿ ತತ್ಕೀ । ಡಾರುವರೆಮುಂದಾ
ನು ನೀನಾರೀಗನಾಪ್ತವಿಕೀ॥ ಸೇರಿಯೊಂದೆಡೆ ದೇಹಪುರಸ್ಥಿರ । ಕಾರಣೆಲ್ಲಿವೂ
ರು ಸ್ತಿರವಿ । ನ್ನಾರಗೀ ಘೋರಾತ್ಮ ಭವಬೇಡೆನೆ ವಿಭೀಷಣನೂ ॥ ೫೨ ॥
ಈಯನಿಷ್ಟದಿ ಸಿಕ್ಕಿಕಷ್ಟದಿ । ಸಾಯುವುದಕಿನ್ನಟವಿ ಸುಖನೆಂ । ಬಾಯತುಚಿತ
ಹುದೆಲ್ಲ ಸುಖದಲಿ ನಾನು ಪರದೇಶಾ ॥ ಕಾಯವಿಡುವೆನೆ ನೀನು ಪೋದರು ।
ಸಾಯಲೇನು ಅನಿಷ್ಟಪಿತ್ರು । ವ್ಯಾಯವಳಿದಗ್ರಜಗೆ ಅಹಿತ್ಯಾಕೆಂದನಿಂದ್ರಾರೀ
॥೫೩॥ ಆರಹಿತ ಕಷ್ಟಗಳಲಹಿತುಪ । ಕಾರರಾ ಸುಗ್ರೀವ ವಾಲಿಯು । ವೋರೆ
ಯರಿಯನಗಹಿತಹಿತವಘ ಪುಣ್ಯವಲದನ್ಯಾ ॥ ರಾರು ನೀನವನಲ್ಲವೀಪರ ।
ನಾರಿಶೋಕಹುದಹಿತಹರಿಸದ । ಲೂರುಕೆಡದಿರದೆನೆ ವಿಭೀಷಣನಿಂದ್ರಜಿತು ಸು
ತಗೇ ॥೫೪॥ ಶೌರ್ಯವಡಗುವ ಕಾಲದೊಳುಗೀ । ಚರ್ಯವುಂಟಹವೆಂದು
ಸಾಂಪ್ರತ । ದಾರ್ಯದೊಳಗೇನಾನು ಕೊಂಕೊಸರುಂಟೆ ಯಿಾನರಿಗೂ ॥ ಧೈ
ರ್ಯವಿತ್ತೀತನಿಗು ಯಿಾಗವ । ಚರ್ಯಕೆಳಸಿಹುದಂತ್ಯಹೇಷ್ಯವಿ । ಪರ್ಯವರಿ
ಸುಕುಮಾರ ನಿಶ್ಚಯವೆನೆ ವಿಭೀಷಣನೂ ॥೫೫॥ ಹೀಗೆ ನಾನಾ ಬೋಧನೆಯ
ಕೇ । ಳ್ದಾಗ ನಿಜಪಿತನಾಸ್ಯ ವೀಕ್ಷಿಸ । ಲಾಗ ಯಲೊ ಯಿಂದ್ರಾರಿ ಕೇಳಾಸೀತೆ
ಯೊಡಸ್ರಾಣಾ ॥ ನೀಗುವಲ್ಲದಲೆರಡನೆಯನುಡಿ । ಯಾಗದೆಂಬದ ಕೇಳಿ ನೀ
ನಡೆ । ಯಿಾಗಲೇ ಪಿತ್ರುವ್ಯನೆನಲಿಂದ್ರಾರಿ ದುಗಡದಲೀ ॥ ೫೬ ॥ ನಿಚ್ಚ ಯಿಾ

ವಾಕಾಕೆಯನು ಪ್ರತಿ । ಗಚ್ಚಿಸಲು ನಿನಹತಿಸಬೇಕೆಂ । ಬಿಚ್ಚಿಯೊಳು ಸನ್ನಹಿತ ರಾಗಿಹರಲದೆ ಕೊಂಡೊಯ್ಯಾ ॥ ದಚ್ಚರಲ್ಲಣುವಾನ್ಯನಿಗೆ ಯಾ । ಕಿಚ್ಚನಿಟ ವನವನೆ ಸರಿಯುಂ । ಬೆಚ್ಚಗಾಗಿಹುದೆನೆಗೆ ಯಿಂದ್ರಾರೆನೆವಿಭೀಷಣನೂ ॥೫೭॥ ಬಿಟ್ಟು ವನಗಳನೆಲ್ಲ ಸೀತೆಯ । ನಿಟ್ಟವನವನೆ ಕಿತ್ತು ರಾಕ್ಷಸ । ರಟ್ಟಲವರೊಶ ಗೊಡದೆ ಮೋಣೀತೆರನ ಗೈಯ್ಯುವಡೇ ॥ ಕಟ್ಟು ಬಟ್ಟೆತ್ನವದು ಮಾರುತಿ । ದಿಟ್ಟವಾಗಿಹುದಾಕೆ ಯಿಹತೆರ । ನಿಟ್ಟಸೈದಿದ ಭಾವ ಸರಿಸುತನೆನೆ ವಿಭೀಷಣ ನೂ ॥೫೮॥ ಆದರೀಪರಿಶಾಲಿಯೊಳುಬರ । ಲಾದುದೆಂತೆ ನಲಿದನು ಕೆಡಿಸುವ| ಸಾಧಕಹುದದರಲ್ಲಿ ತೂರುವವಾಯವಿದ್ಯಗಳಾ॥ ವೇದಿಯಹುದೀ ಚರ್ಯವನು ಮನ । ವಾದರಿಸಲಹುದೆಂದು ನಿಶ್ಚಯ । ವಾದುದೆನಗಾಸೀತೆ ಬೀಡುಸಿಂದ್ರಾರಿಯನೆ ಪಿತನೂ ॥ ೫೯ ॥ ಸೀತೆ ಸುದ್ಧಿಯ ನೆತ್ತದಿಹುದೆಂ । ಬಾತಮರೆಮರ ದಾಡುವರೆ ಮರು । ತೀತೆರನಗೈಲಾಂಮೋಣಿಸಗಿರಲಿತಕ್ಕಂತೇ ॥ ಯಾತುನೋ ಡುವೆ ನಿನ್ನು ಬದಲೊಚ । ವೀತಗೊಳಿಸದಲೇಳು ನಿನ್ನಿಂ । ದಾತನಿಂಬಹದರಿ ವಿಭೀಷಣನೆಂದ ದಶಕಂಠಾ ॥ ೬೦ ॥ ಬರದು ನಿನಗೀಬುದ್ಧಿ ಮಾರೀ । ಚರಿ ಸಿಯಾತೆರಗೈದ ನವಗಿ । ನ್ನೊರೆಯ ಜೇಕ್ತ್ರಕ್ಬುದ್ದಿ ನೀನೇ ಗೈವೆ ಯಗ್ರಜನೇ ॥ ತೆರಳಿಸೆಯ ಸೀತೆಯನು ಯನವ್ಞ । ತ್ತ್ರರಳಗೈವೆಯ ನಿನ್ನ ಸಿರಿಗಾ। ತರುಣಿಯೇ ವುರಿಮಾರಿ ತಿಳಿದಿಸುದೆನೆ ವಿಭೀಷಣನು ॥ ೬೧ ॥ ಬಹಳವಚವಿಂವೇನುಪುಣ್ಯ ವಿ । ದಹಿತಕಾಲಕೆ ಆಪ್ತರುಲಿವೋ। ಕ್ತಹಿತವೆಂತೆನೆ ಜ್ವರಿತಗವ್ಮೃತಾಸಹ್ಯವೆಂ ತಂತೆ ॥ ಸಹಯುವೇನನುಭವಿಸು ನಾನಿನ । ಗಹಿತನಿರಪಲ್ಲೆಂದು ಯೆದ್ನಿಜ । ಗೃಹಕೆ ಬರಲು ವಿಭೀಷಣರುಹಚ್ಚರಣಸ್ಮರಣೆಯಲಿ ॥೬೨॥ ಕಲಿಲಹರ ಮುನಿ ಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದ ಮನ । ವೊಲಿದುಲಾಲಿಸಿ ಮುಕ್ತಿಯರಸನಕಥೆಯಸದ್ಬುಧರೂ ॥೬೩॥

ಅಂತು ಸಂಧಿ ೫೦ ಕ್ಕಂ ಪದನು ೨೯೭೨ ಕ್ಕಂ ಮಂಗಳಮಹಾ ಶ್ರೀ ಶ್ರೀ

0

ಐವತ್ತೊಂದನೆಯ ಸಂಧಿ.

ಸಮರ ಸನ್ನಾಹದ ಸಂಧಿ.

ತಂದು ಚೂಡಾರತ್ನ ಸಹಿತರ । ವಿಂದ ಲೋಚನೆ ಯಿರವ ಮಾರುತಿ ।
ಬಂದು ವಿಜ್ಞಾಪಿಸಲು ರಘು ರಣ ಸನ್ನಗೊಳಿಸೆಂದಾ ॥ ಪಲ್ಲವಿ ॥

ಭೂಪನಾಲಿಸು ನೀತಿಯನು ಸುಕ । ಲಾಪಗೊಳಿಸುವ ಮಾತುಮಾತಿಗೆ।
ಕೋಪಗೊಳಲಸುರೇಶ ನಿನ್ನಾರ್ಜಿತದ ಫಲವೇನೋ ॥ ಈಪರಿಯ ಗೈದಪದ
ಪರಿಪಡಿ । ಸಾಪರುಂಟೇ ನೀನೆ ಅನುಭವ । ವ್ಯಾಪಿಯಾಗೆಂದ್ವರೆ ವಿಭೀಷಣ
ದುಗುಡದಾಲಯಕೇ ॥ ೧ ॥ ಇತ್ತ ಮಾರುತಿ ಲೆಂಕೆಯನು ದಹಿ । ಸುತ್ತ
ಕಪಿಯಾಕಾರವನು ಪಿರಿ । ದೆತ್ತಿ ಪೂರ್ವದ ವಜ್ರಷಟ್ಪದದಂತೆ ಪರಿಧಿಯನೂ॥
ವತ್ತಿ ವೈಕೂರ್ವಣದೀ ದಳವಿ । ದತ್ತಲೈದಿದ ನಸಮುಸತ್ಕಲೆ। ವೆತ್ತ ನಾಹವ
ಭೀಮ ಬಂದನು ಮುತ್ತಿನಾಲಯಕೇ ॥ ೨ ॥ ಪ್ರಹಸಿತನು ಪ್ರಥುಮತಿಯು
ಮುಖ್ಯಸು । ವಿಹಿತರಿಂಗಾದೆಲ್ಲವನು ಪ್ರ । ವಿಹಿತಗೊಳಿಸಲ್ಲಿಂದ ಮಾಯಾಪರಿ
ಯ ಪರಿಹರಿಸೀ ॥ ಬಹಳತೂರ್ಯಾಗಮದಿ ಬಲಸಂ । ನಹದಿ ಕಿಷ್ಕಿಂದಾದಿಪ
ಥವಿಡಿ । ತಹನವಾರ್ತೆಯ ಪೋಗಿ ಪೇಳ್ದರು ಮುಂದನೂಳಿಗರೂ ॥೩॥ ಮಾ
ರುತಿಯ ಬರವಾಡುತಿಹ ಸೀ । ತಾರಮಣದಕೇಳಿ ಕುಣಿವನ । ಚಾರು ಚರಣಕೆ
ಬಿಗಿದ ಕಿಂಕಿಣಿಯಂತೆ ವೈಯುಬ್ಬೀ ॥ ಸಾರಿದಂಗಿವಿಧಾರಿಸಲು ಲ । ಕ್ಷ್ಮೀ
ರಮಣಗಾನಂದ ಮುಣ್ಮತ । ಸೋರಲಾನಂದಾಶ್ರು ಪೂರ್ವಸ್ನೇಹ ಕಾರಣದೀ
॥೪॥ ಕುಳಿತು ವೈಮಾನದೊಳು ಖಗವರ । ಬಳಸಿನಿಂ ಸುಗ್ರೀವನಂಗದ । ರೊಳ
ಗೆಬರಲಿದಃರಾಗಿ ರಾಘವನಬ್ಧಿ ತುಳುಕುವೊಲೂ ॥ ಝಳಿಸೆಯಾನಕ ಮಾರುತಿ
ಯದಳ । ದಳಿತದಾಲೋಕಿಸುತ ಲಕ್ಷ್ಮೀ । ಕೆಳೆಯ ಸಹ ಬೆರಗಾದನವನೀನಾ
ಥಚಿತ್ತೈಸೂ ॥೫॥ ಆರುಬಹರೆಂದರಿದು ವಿದ್ಯವಿ । ಚಾರದಿಂ ದುಳಿದೆಲ್ಲದಳನ
ಭ । ದಾರಿಯಿಂತವ ಭೃತ್ಯಗೆದುರ್ಗೈತರುವ ಮರಿಯಾದೇ ॥ ಮೇರೆಯೇ ಮಹಿ
ಳೇಂದ್ರಿಯರಸ । ಶ್ರೀರಮಣರೆನುತೈತರುವ ಕಲಿ । ಮಾರುತಿಯ ಹಿತವರಿದು
ಬೇಗೈದಮರೆ ರಘುವೀರಾ ॥೬॥ ಅಪ್ಪಿ ವಿಹಿತದಿ ಲಕ್ಷ್ಮಣನು ಪಿಡಿ । ದೊಪ್ಪ
ಗೊಳಿಸಲು ಜಾಂಬುನದ ಚಿ। ಕ್ಕಪ್ಪಗೆರಗಂಗದನು ವೀರಾಧಿತನು ಮನ್ನಿಸುತಾ॥
ವೊಪ್ಪಿಸುಂಗುರ ಸೀತೆಯಿಂಬದ । ಲಪ್ಪ ಚೂಡಾಮಣಿಯು ತಂದಿಹೆ । ದೊಪ್ಪಿ

ಸಿದನಾ ಕ್ಷಣದಿ ರಘುಜಂಗಧಿಕ ಭಕ್ತಿಯಲೀ ॥ ೭ ॥ ಕ್ಷೇಮವೆಭೂಮಿಜೆಯೋ
ದನಕೆ । ಸುಪ್ರೇಮವಿಲ್ಫಲಹಾರಕೊಳಲನು । ಗಾಮಿಸಿದಳಾನ್ನೈದುವರೆಗಿರ್ದ್ದವ
ನಿಯನು ಬಿಡದಾ ॥ ನೇಮಮೊದಲಾದೊರ್ತನವ ನಭಿ । ರಾಮಿಸೆಂನಪರಾಧ
ವನು ಪ । ದ್ಯಾಮಗೊಳುತಾರೈವುದೆನ ಲನಿಲಾತ್ಮ ರಾಘವಗೇ ॥೮॥ ಮಾಡುವ
ನೆಯಪರಾಧವದಸ್ಯೆ । ಮಾಡುವನೆ ನಾನೀನು ಬೇರೆಂ । ದಾಡಲುದಯದಸಾತ
ವೇದಿನಿಯನುವ ರಘುಜಂಗೇ ॥ ಬೇಡ ಸಂಗಟಪಾದದ್ಯೈಖ್ಯವ । ಗೂಡಿದನೊ
ಳೆಂದ್ಲೆಂಕೆದಹನವ । ಮಾಡಿದೊನವನು ಕಿತ್ತುದಾದಿಯಪೇಳಿನಗಿಸಿದನೂ ॥೯॥
ಕೇಳಿ ಲಕ್ಷ್ಮಣ ಜಾಂಬವಾದಿಯ । ರೊಳಿಹಸನ್ಮುಖ ಬಹುನಗೆಯುವಲ । ಡಾ
ಳಿಹ್ಯಾಗ್ಯಾಗೊಜ್ರತುಂಬೆಯೊಲ್ಯೈದಿ ಕಪಿಯಾಗೀ ॥ ಕೇಳಿ ಜಾನಕಿ ಬೆಸನಮರ
ಗಳ । ಕೀಳಲಾಳ್ಗಳು ಪಿಡಿಯೆ ಬಹುಬರ । ದಾಳಿ ದನಪಿಡಿದಸುರಗೊಪ್ಪಿಸಲ
ದರದಾಡಿಗಳಾ ॥೧೦॥ ಸುಡಿಸಲಾರದ ತೆರದಿ ಸಭೆಯರಿ । ಗಡರಿಸಸುರೇಶ್ವರ
ನಮಿಾಸೆಯ । ಸುಡುತ ಲೆಂಕಾದಹನ ಗೈದೆಯ ಯನುತ ಚರ್ಯ್ಯಗಳಾ ॥ ನು
ಡಿದುಹಿಂಗ್ಗನು ವೋದದಲಿ ಸಂ । ಪೊಡೆದು ಮಾರುತಿ ಹಸ್ತಲಾಘವ । ಹಿಡಿದು
ಪುರಕೈತಂದು ಕುಳಿತನು ರಘುಜನಾನನದೀ ॥ ೧೧ ॥ ಕುಳಿತು ಚೂಡಾಮಣಿ
ಯಸರಥೆದು । ದರ್ಳೆವ ಆನಂಡಾಶ್ರುಗಳ ಸಂ । ಮಿಳಿತದೊಳಗ ವರವರನೆಲೆ
ಯಾಸನದಿ ಕುಳ್ಳಿರಿಸೀ ॥ ಕಳಭಗಾಮಿನಿ ಸೀತೆಯನೆ ಕಂ । ಡಳವಿನೊಳಗದ
ನಪ್ಪಿಮುದ್ದಿಸಿ । ಗಳಕೆ ಶೃಂಗರಗೊಳಿಸೆ ರಾಘವ ಮೆರೆದ ಪೊಸದೆಶೆಯಾ ॥೧೨॥
ಅಂಗನಾಮಣಿ ಜಾನಕಿಯ ತನು । ಸಂಗದಿಂದೇ ಸುಖವ್ರೋ ಆಗಿನೊ । ಳಿಂ
ಗಿತಾನಂದದಲಿ ನಲಿನಲಿದೀಕ್ಷಿಸಂಗಜನಾ ॥ ಮಂಗಲಾಂಗಿನಿ ವೋದನುದಕ ।
ಸ್ಸಂಗದಿಂದುರೆ ಬಳಲಿ ತನುಮುಖ । ಭಂಗನಡಸಿಹುದಲ್ತೆ ಕೋಮಲವಿಲ್ಲವೆನೆ
ರಾಮಾ ॥೧೩॥ ನಿಂತಕಡೆಯಾಣಿಯನು ಪುನರಿಂ । ನೆಂತುಕಾಸಲುತಟ್ಟೆಬಚ್ಚಿ
ಡ । ಲಂತದೂನಯ ಬಹುದೆ ನಿಶ್ಚಯವಾದ ಶೀಲವನೂ ॥ ನಾಂತಧೈರ್ಯಳಿ
ಗಹುದೆ ವಪುಬಳ । ಲಂತಿಕಿಲ್ಲದೆ ಕುಂದಣದಚಲು । ವಾಂತ ಪುತ್ಥಳಿಯಂತೆ
ಯಿಹಳವನೀಶನೆನೆ ಮರುತೀ ॥ ೧೪ ॥ ಬಳಲದಿಹಳೇ ಅಂನಕುತ್ಸತಿ । ಕಳೆವ
ರೆನುವದ ಕಾಕೆ ಕುಂತೆಡೆ । ಯೊಳಗೆ ಪದ್ಮಾಸನದಿ ಪಂನೊಂದಿನವು ಯಿರ್ದಳಿ
ಗೇ ॥ ಚಳಮಳಿನವೆನಲೇನು ತವಪದ । ಕೆಳೆಯ ಕಲ್ಪಾಹಾರೆ ತನುಪೊಳ ।
ವೆಳಗುತಿಧೆ ಮಹಿಳೇಂದ್ರಿಗೆನೆ ಪಂಚಾಸ್ತ್ರ ರಾಘವಗೇ ॥ ೧೫ ॥ ತವಚರಣಪರಿ
ಣಾಮಕೇಳುವ । ದಿವಸಪರಿಯನ ಅಶನಕೊಂಡಿ । ದರ್ವಳ ಕೈಗುಂಗರವ ಕೊ

ಡಲರವಿಂದವರಳ್ವಂತೆ ‖ ಯವೆಯುನಲುಗಿಸುತ್ತೀಕ್ಷಿಸುತಲೆ। ನ್ನವರು ಕ್ಷೇಮೆಲ್ಲಿ
ಹರು ಯಂಬು। ದ್ಯವದ ಮೇಲುಳಿದರ್ತ ರಾಘವನೆಂದನಸಮಾಸ್ತ್ರ ‖೧೬‖
ಯಷ್ಟು ಬಳಲಿಲರಕಟ ಮೇಣಿಂ। ನೆಷ್ಟು ಛಲನಿಷ್ಟೆಗಳೊತನಗತಿ। ಕಷ್ಟವಾಕ್ರ
ಮಿಸಿದರು ಯಮ ಸುಕ್ಷೇಮವಾರ್ಯೆವಾ ‖ ಶ್ರಿಷ್ಟಿಸುತೆನಿರ್ದ್ದರಕು ಗುಣಕಿಂ। ನಿ
ಷ್ಟರಿಲ್ಲವಾಗ ಕಾಣ್ವೆಂ। ಬಿಷ್ಟಗೊಳೆ ರಾಘವನು ಮರುಗುತ ನೋಡೆ ಮಾ
ಧವನಾ ‖೧೭‖ ನಾರದರ ನುಡಿಯಿಂದ ನಿರ್ದ್ದರ! ತೋರಿತೀಗವನಿಜೆಯನುರೆ
ಕಂ। ಣಾರೆಕಂಡಂತಾದುದಿನ್ಯಾಕಿಲ್ಲಸಂಶಯದಾ ‖ ಮೇರೆ ಕಾಲಕ್ಷೇಪ ಪಯ
ಣದ। ದಾರಿ ತೋರೆಂದಸುರಹರ ನುಡಿ। ದೋರಿದನು ಭ್ರೂಕುಟಿಯ ಗಂಟಿಕ್ಕ
ರಸ ರಾಘವಗೇ ‖೧೮‖ ನೋಡಿದನು ಸುಗ್ರೀವ ಜಾಂಬವ। ರಾಡಿದರು ತದು
ಮುಖ್ಯವೆನುತ। ಲ್ಲಾಡೆ ವೀರಾಧಿತನು ಅಂಗದದೇವ ರೊಲವಿನಲೀ ‖ ಕೂಡಿತು
ತ್ತಮ ಲಗ್ನವೆನೆನು। ತ್ತಾಡಿಸಲೆ ಪ್ರಸ್ಥಾನಭೇರಿಯು। ಗಾಡರವವೆನಲನಿಲ
ಸುತ ಸೌಮಿತ್ರಿ ರಾಘವಗೇ ‖೧೯‖ ಬಹಳದಿನದುರಿಮಾರಿಮೆರೆವಂ। ತಿಹನು
ಪುರವಗ್ನಿಯೊಳು ಮಾರುತಿ। ದಹಿಸಿದಿಂ ನಿಹಸಿರಿ ಪರಾಪರೆಗೆಲ್ಲ ನಿಂಮಿಂದಾ ‖
ಬಹದಕವನಿಜೆ ಕಾರಣದಿ ಪೋಗಿ। ಸಿಹನು ಆಲಸ್ಯಾಕೆ ರಾಘವ। ನಹಿತಜ
ಯಕುದ್ಯುಗಿಸು ಯನಲಿಂನಿರ್ದ್ದ ಖೇಚರರೂ ‖ ೨೦ ‖ ಕೂಡಿ ಬಹಕಾಲದಲಿ
ಯಲ್ಲಿರ। ಲೋಡಿ ಬಹದರಸದಲೆನಷ್ಟ್ಬರ। ಲೋಡುತಿಹುದಂಗೈಯ್ಯೊಳಿರ್ದ್ದ
ರು ಬಲನ ಪದ್ಧತಿಗೇ ‖ ಕೂಡಿತೊಯ್ಯುವ ದಳವು ಸಹಿತನು। ಜೋಡಿಸೆಲ್ಲವು
ಪಯಣವನು ಸಂ। ಜೋಡಿಸೆಂಬನಿತರಲಿ ಅಪರಾಚಲಕೆ ರವಿಯಿಳಿದಾ ‖೨೧‖
ರಾವಣನ ಸಿರಿಯೇರಿ ಬಹಸಂ। ಭಾವದೊಳು ಪೂರ್ವಾದ್ರಿಯೊಳಗು। ದ್ಭಾವ
ದಿನಮಣಿ ಕಂಡು ರಾಘವನಹಿತಕಳ್ಕಳ್ಕೀ ‖ ತೀವಿದನುಪಮುಕಳೆಯೊಳಗೆ ಪರಿ।
ಭಾವಿಸುತ ಕಿಂಚಿಂಚಕಿಂಚಿಂ। ಚಾವರಿಸಿ ಕಳೆಗುಂದಿದ ಸುರೇಶ್ವರನ ಸಿರಿಯಂ
ತೇ ‖೨೨‖ ಬಿಟ್ಟು ಪೂರ್ವಾಂಗನೆಯ ತನಗನು। ಬಟ್ಟುಬಹ ನೆಂದರುಣಜ
ವನಿಕೆ। ನಿಟ್ಟ ತೆರದಂತಡರೆ ಸಂಧ್ಯಾರಾಗ ಸಮಯದಲೀ ‖ ಬೊಟ್ಟೊ ಚಂದ
ನಪದ್ಮರಾಗಳ। ವಟ್ಟ ತಾಳಿಯೊ ವಾರುಣಿಯ ಕೈ। ಬಟ್ಟ ಕಂನಡಿಯಂತೆ
ಯಡೆದನು ರವಿಯು ಪಶ್ಚಿಮದೀ ‖ ೨೩ ‖ ಮುನಿಗೆರಾಗೋದ್ಭವದಿ ಆತಪ।
ವೆನುವಯೋಗಳಿವಂತೆ ವಾರುಣಿ। ವನಿತೆಗಾಪೇಕ್ಷಿಸಿದ ಕಾರಣಲೋಕಬಾಂಧ
ವನಾ ‖ ಸನುತತೇಜಳಿದಿಂನು ವಿಗಿಲಾ। ಗಿ ನರಪಾಡೇನೆಂಬ ತೆರದಿನ। ದಿನ
ಯನೊಪ್ಪಿದ ನಪರಭಾಗದೊಳರುಣ ಸಾಣೆಯೊಲೂ ‖ ೨೪ ‖ ಆ ದಶಾಸ್ಯನ

ಆಯು ಅಸ್ತಮಿ । ತಾದತೆರದಿಂ ತಪನಕಳೆಕುಂ । ದಾದು ದವನಪಕೀರ್ತಿ
ಕತ್ತಲೆಯವನಿಯೊಳಗೆಲ್ಲಾ ॥ ಪಾದವಿಡೆ ಕುಮುದಕ್ಕೆಮುದ ಮು । ಣ್ಮಾದು
ದಬ್ಜವಬಿಟ್ಟುರಮೆಕಡೆ । ಯಾದಲಾಳಾಪಿಸಿದಳಬ್ಜಿನಿ ಮುಗಿದುಕೈಗಳನೂ॥೨೫॥
ಆಸಮಯದೊಳಗಬ್ಜಗಳ ಸು । ವಾಸನೆಗಳಾಘ್ರಾಣ ಷಟ್ಪದ । ವಾಸುಮೋ
ದದೊಳಗಲಿದಾ ತಪನರಿಯದಲೆ ಸಿಕ್ಕೀ ॥ ಮೋಸವಾಗಿರಲಂತೆ ಲಂಕೆನಿ ।
ವಾಸದೊಳಗಸುರೇಶ ಮಹಿಳೇಂ । ದ್ರಾಸೆ ಬಟ್ಟೆರ್ದರಿಯ ದನ್ಯಧ್ಯಾನ ಮರು
ಳಂತೇ ॥ ೨೬ ॥ ಕೋಕ ಮಿಥುನ ವಿಯೋಗ ಶೋಕೋ । ದ್ರೇಕ ದೋಷಾ
ಕರನ ಸಂಗ । ದ್ವ್ಯಾಕುಲಿತೆ ಗೊಳುತಿರಲು ಜಾನಕಿ ರಾಮಚಂದ್ರನಿಗೇ ॥
ವ್ಯಾಕುಲರಿದೇ ತುಂಬೆದಾರುಗ । ಳಾಕರಿಸಲಾಲುತ ಚಕೋರವ । ನೇಕವೆರ
ಗಿದವಾಗ ನಿಶಿ ನರ್ತಕಿಯ ನಾಟ್ಯದಲೀ ॥ ೨೭ ॥ ಸೃಷ್ಟ ಗಗನ ಪುರಾತವಾ
ಗಿ । ನ್ಸಿೃಷ್ಟಿಗುದುರುವದೆಂದು ವಜ್ರ । ದ್ವೈೀಷ್ಟವೊಳೆಗಳೊ ಮೇಣು ಮು
ತ್ತಿನ ಬಲೆಯೊ ಶಾರ್ವರಿಯಾ ॥ ದೃಷ್ಟ ಸೂರ್ಯ್ಯನು ಪೋದನಿಲವೆನು । ತ
ಷ್ಟ ಚಿಲಿಮಿಲಿಗೊಳುತೆ ಸಂದ । ಕ್ಲಿಷ್ಟಗೊಳ ಲಂಬರದಿ ತಾರಕಿ ಯಸ್ತಮಿಸೆ
ದಿನಪಾ ॥ ೨೮ ॥ ಮುಸುಕಲವನಿಯ ಶಾರ್ವರಿಯ ಸತಿ । ಗೊಸೆದು ಆಲಿಂ
ಗಿಸಲು ಪೂರ್ವದಿ । ತೊ ಸುಧರಾಕರಗೊಂಡು ಮೆಲಮೆಲನರುಣ ತೆರೆವಿಡಿಸೀ॥
ಬಿಸಜವೈರಿಯು ಬರುವ ಬರವಿನ । ರಸಿಕಕದೃಶಗೊಳಲು ತನುಸತಿ । ಹಸಿತ
ಗೊಳ್ವರೆ ಜಾರತನಕಾ ಸಾಧ್ವಿ ನಾರಿಯರೂ ॥ ೨೯ ॥ ವುದಿಸಲಾಗ ಚಕೋರ
ಗಳು ಕಳೆ । ಗೊದಗಿ ನಲಿಯಲು ಜಾನಕಿಯ ಮುಖ । ದುದಯವನು ಕಂ
ಡಂತೆ ರಾಘವನಕ್ಷಿ ಕೋರಕವು ॥ ಮುದಗಳುಣ್ಮಿಸೆ ಪೂರ್ಣಶಶಿ ಬಿಂ । ಬುದ
ಯವರಿದ ಸನ್ಮುಖದಿ ನಗೆಹಿ । ಗೊದರಿದರು ನಿಡಿದಾದ ಕೈಗಳ ಕುಮುದ ನಾ
ರಿಯರೂ ॥ ೩೦ ॥ ಅಡಗೆ ಚಂದ್ರಿಕೆಯೊಳಗೆ ಯಮೃತ । ಗಡಲು ರಜತಾ
ದ್ರಿಗಳು ಹಂಸೆಯ। ಪಡೆಯ ಬೇರರಿಯದೊಲು ಅಮೃತಾಕರನ ಚಲ್ವಿಕೆಯಾ॥
ಸಡಗರದಿ ನಿರ್ಗಮನ ಸನ್ನಹ । ತೊಡಗಿರೆನೆ ರಘುವೀರಲಕ್ಷ್ಮಣ । ರಡಿಯ
ಬೆಸನಾರೈಸಿ ನಿಂದರು ಖಚರನಾಯಕರೂ ॥೩೧॥ ಆಡುತಿಹ ಲಾಸ್ಯೆಯರಯಡೆ
ಶೃತಿ । ಮಾಡುತಿಹ ಮುರಜಗರು ಗೀತವ । ಹಾಡುತಿಹ ಹಿಮ್ಮಾಳ ಜನಗಳು
ಸದ್ದ ನಿಲ್ಲಿಸಲೂ ॥ ನೋಡಿ ಸರ್ವರಿಗುಚಿತ ಪ್ರತಿಪ । ತ್ತೂಡಿ ಯುವರವರಾಲ
ಯಕೆ ದಯ । ಮಾಡಿರೆನೆ ಪಂಚಾಸ್ತ್ರನಂಗದನಾದಿ ಜನರೆಲ್ಲಾ ॥ ೩೨ ॥ ಪೋ
ಗಿತಮುತಮುಗೃಹಗೆ ಬೀಡಿನೊ । ಳಾಗಸುಭಟಾವಳಿಗಳಿಗೆ ನಾ । ಳಾಗುವದುಯ

ಮುಗೆಲ್ಲ ಪಯಣೆಂದಿತ್ತುವುಡುಗೆರೆಯಾ ॥ ಮೇಗಣೀಳ್ಯಗಳಾದಿಮನ್ನಣೆ। ಯಾಗಿ ಬೀಳ್ಕೊಟ್ಟೆಲ್ಲ ಸನ್ನಹ। ರಾಗಿರೆನಲಾ ಖಚರನಾಯಕರಧಿಕಜನಗಳಿಗೇ ॥ ನಾಯಕರುತಮುತಮ್ಮ ಚತುರಂ। ಗಾಯರಿಗೆ ಪಯಣಗಳ ಸನ್ನಹ। ದಾಯಗೊಳಿರೆನಲೆಲ್ಲ ಸನ್ನಹಗೊಳುತಲಿರೆ ಸೇನಾ ॥ ನಾಯಕರು ಅತಿ ಯುಚ್ಚರದಿ ಕಡು। ಗಾಯುತಿರ ಲಣುವಮಾನ್ಯನಂಗದ। ರಾಯ ಜಾಂಬವನಸಮ ಸುಗ್ರೀವಾದಿ ಖಗರೆಲ್ಲಾ ॥ ೩೪ ॥ ಪೂರ್ವದೊಳೆ ಸನ್ನಹಿತ ದಳದವಿ। ಗೂರ್ವಿ ಪ್ರಥುಮತಿ ಪ್ರಹಸಿತಾದಿಯ। ಸರ್ವವಾಹಿನಿ ಮುಖ್ಯರಿಗೆ ತದ್ವಾರ್ತೆಯನು ಪೇಳೀ ॥ ಸರ್ವಸನ್ನಹರಾಗಿ ಯಿಹುದೆಂ। ದರ್ವಿ ಗಳಿಗೈದಂಗನೆಯರೆಡೆ। ಸಾರ್ವ ರತಿಕಲಿತದಲಿ ಮಲಗಿದರವನಿನಾಯಕನೇ ॥ ೩೫ ॥ ಆ ಸಮಯದೊಳಗಸುರಹರನುಸು। ವಾಸಿನಿಯ ರೆಡೆಗೈದಿ ರತಿಯುವಿ। ಲಾಸಗೊಳುತಿರಲೆದ್ದು ರಾಘವ ಸಾರಿಕೆಯರೆಡಗೇ ॥ ಲೇಸಿನಿಂಬಹ ಹಂಸೆಯೊಲು ಬರು। ವಾ ಸಮಯಕೆದುರ್ಗೈದಿ ಪ್ರಿಯುದಿಂ। ಭಾವಿಸಿ ಪಿಡಿದ್ಯೆತಂದು ಕುಳಿತರು ತುಪ್ಪಳಾಸನದೀ ॥ ೩೬ ॥ ಅರಿದು ಸಮಯುವನಾಳಿಯರು ರತಿ। ಧುರವ ಸಮುಕಟ್ಟೊಸ್ತುಗಳ ತಂ। ದಿರಿಸಿ ತೆರಳಲು ಠಾಣದೀವಿಗೆ ಮಧುರ ಫಲಹಾರಾ ॥ ಗರೆದು ಕ್ಷೀರಾಜ್ಯದೊಳು ಸಿತವಡ। ವೆರಸಿ ಯಳೆನೀರಾದಿ ಪಾನವ। ಗರೆದು ಚರ್ವಿಸಿ ವೀಳ್ಯಯೇಲವರಾಳಕರ್ಪುರವಾ ॥ ೩೭ ॥ ಮುದ್ದಿಸುತಲಿನ್ನೂರು ನಾರಿಯ। ರೊದ್ದಿ ಸರಸವಗೈದು ರತಿಯನು। ಬದ್ಧರಷ್ಟಾದಶದಿ ದಶವಿಧ ಚುಂಬನಗಳಿಂದಾ ॥ ತಿದ್ದಿ ಸರಸವಗೈದು ಸುಪ್ತಿಯೊ। ಳಿದ್ದ ಸತಿಯರ ತೋಳತಲೆದಿಂ। ಬದ್ದರಿಂದಸುರಾರಿಯಗ್ರಜನರಸ ಚಿತ್ತೈಸೂ ॥ ೩೮ ॥ ಬೇಡ ರಾಘವಬಿಟ್ಟು ಸೀತೆಯ। ಮಾಡಸಲರತಿಲಾಲಿತವನೆಂ। ದಾಡುವೋಲುಲಿದಾಡೆ ಕುಕ್ಕುಟಲೆಂಕೆ ಕಾಣದಿರೇ ॥ ನೋಡುದಾದರ್ಶದೊಳು ಯೆನುತೊಡ। ಗೂಡಿ ಪುರ್ವಾಂಗನೆಯು ತೋರ್ಪೋಲ್ಮೂಡಿದನು ರವಿಯರುಣಜವನಿಕೆ ಹರಿದು ಧರೆಗೆರಕೀ ॥ ೩೯ ॥ ಅಹಿತನಸದಳನಾಗಲಿನ್ನಿಹ। ಮಹಿಪರರು ಶಿರವೆತ್ತದಂತಿ। ರ್ದಹವು ಭಗಣಾಗಣಗಳಾಲಯ ವುಳಿದು ಪರಸದನಾ ॥ ವಿಹಿತಗೊಂಡನ ತೆರದಿ ಶಶಿಯುಸ। ದಿಹನು ಅಪರಾದ್ರಿಯಲಿ ಆನಕ। ನಿಹಿತ ಗೊಳಲರುಹೇಂದ್ರನಾಲಯಗಳಲಿಯಲ್ಲಲ್ಲೀ ॥ ೪೦ ॥ ಕಿರ ಸಾರಿವನಾದಿ ಖಗಧ್ವನಿ। ದೋರಿದವು ರಘುವೀರ ನಿದ್ರಾ। ನಾರಿಯುಡೆಯನುಬಿಟ್ಟು ಬಹುದವನೀಶ ರಾಲಯದಾ ॥ ದ್ವಾರವನು ಕಾಯ್ದಿಹರು ಅಭಿಮತ। ದೊರಲೈತಹುದೆನುತಲ್ವೊತಾ। ಳಾರವಂಗೊಳಲೆತ್ತಿ ಕೈಗಳ

ನುಪ್ಪವಡಿ ಸರಸಾ ‖ ೪೧ ‖ ತುರುಗ ಕರಿರಥ ಪಾಯದಳಸಹಿ । ತರಸರೈತಂ ದೋಲಗಿಸಲೆಂ । ಬೆರಕದೊಳು ನಿಂದಿಹರು ನೀನುಪ್ಪ ವಡಿಸವನೀಶಾ ‖ ವರಿಸಿ ದಾಶ್ರೈತರಿಗೆ ಮನೋಭಿ । ಷ್ಟೆಂಕದೊಳಗೀಯಂದು ಬಿರಿದಾ । ವರಿತಗಳ ಹೊಳಗಿದರು ವೈತಾಳಿಗರು ರಾಘವನಾ ‖ ೪೨ ‖ ಏಳು ಚಿಂತಾಮಣಿಯೆ ಗುಣಮಣಿ। ಯೇಳು ರತ್ನದಕಣಿಯೆ ಪುತ್ಥಳಿ।ಯೇಳು ಶರಣಾಗತರರಕ್ಷಕ ಕರುಣ ಸಾಗರನೇ ‖ ಏಳು ನೀಲಾಂಬರನೆ ನಿಶ್ಚಲ । ನೇಳು ನಗಧರನಗ್ರಭವ ನೀ । ನೇಳು ಸೀತಾರಮಣ ಬೇಗನೊಳೆಂದು ಹೊಗಳಿದರೂ ‖ ೪೩ ‖ ವುಲಿವಪಾಠ ಕರೋಕ್ತ ಕರ್ಣಗ। ಳಲೆಯು ಲೆಲರಂಗಾಂಗದೊಳು ಚಲ । ಚಲಿಸಲಾ ಸೌಂಧರಿಯ ನಳಿತೋಳ್ಲತಿಕೆಯೊಳು ಸಿಕ್ಕೀ ‖ ಮಲಗಿರುವ ಲೆಚ್ಚರದಿ ವೈಮುರಿ । ದಲುಗಿಯರುಹಧ್ಯಾನದಲಿ ಯು । ರ್ಣಲನೆತೋಳನು ಬಿಡಿಸಿ ರಾಘವ ನರಸನವಧರಿಸೂ ‖ ೪೪ ‖ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ‖ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ‖ ೪೫ ‖

ಅಂತು ಸಂಧಿ ೫೧ ಕ್ಕಂ ಪದನು ೩೧೧೭ ಕ್ಕಂ ಮಂಗಳಮಹಾ ಶ್ರೀ ಶ್ರೀ

ಐವತ್ತೆರಡನೆಯ ಸಂಧಿ.

ವಿಜಯ ಪ್ರಯಾಣದ ಸಂಧಿ.

ಗೈದು ಅಪಚಯ ಅರುಹನಿಗೆ ಅನು । ಗೈದಸದ್ವಿಭವದಲಿ ರಾಘವ । ನೈದಿದಾ ಕಿಷ್ಕಿಂಧ ನಗರಿಯ ನುಳಿದು ದಕ್ಷಿಣಕ್ಕೇ ‖ ಪದಾ ‖

ಕೇಳಿದೆಯ್ಯೆಶ್ರೇಣಿಕನೆ ತೋಳ್ಲತೆ । ಗಳ ವಿಸರ್ಜಿಸಿ ಲೋಕ ಗುರುಪದ। ನಳಿನಗಳ ಬಲಗೊಂಡು ವುತ್ತಿಷ್ಠಾದ ರಾಘವನೂ ‖ ನಳಿನಮುಖಿಯುರ ಬಿಟ್ಟು ಕಾಲ್ಮಣೆ । ಯೊಳಗೆ ಕುಳಿತನ ಕರ ಚರಣ ಮುಖ । ದೊಳೆಯಲುದಕವನಿತ್ತ ರಾಳಿಯರೆಸಗಿ ಶೌಚಗಳಾ ‖ ೧ ‖ ನಿತ್ಯ ಕರ್ಮಗಳೆಸಗಿ ಲೋಕ । ಸ್ತುತ್ಯ

ಗಾನತದಿಂದ ಖಗಸಂ । ಪತ್ಯದೊಳಗೈತಂದು ಕುಳಿತನುಸದಸಿಯಾಸನದೀ ॥ ನಿತ್ಯಲೊಡ್ಡೋಲಗದ ತೆರ ಜನ । ವೃತ್ಯದಿಂಲಕ್ಷ್ಮೀಶಸಹಸ । ದ್ವ್ರತ್ಯನಾಗಿರಲಾಗ ಸಂಪದ್ಯುತದಿ ರಾಘವನೂ ॥ ೨ ॥ ಗೀತನೃತ್ಯಾದ್ಯಲ್ಲವಿನಿಯೋ । ಗಾತಜನ ತಮತಮ್ಮ ವೃತ್ತಿಯ । ನಾತು ವಿರಲಾಲಸ್ಯ ವ್ಯಾತಕೆ ಸಕಲಸನ್ನಹದ ॥ ಜಾತದಿಂ ಖಗವರರು ಚತುರಂ । ಗಾತು ಬಂದಿಹರರಸ ಪಯಣದ । ಘಾತ ಭೇರಿಯ ಧ್ವನಿಯಮಾಡಿಸುದೆನಲು ಜಾಂಬವನು ॥ ೩ ॥ ಅನುಡಿಗೆಸುಗ್ರೀವನಂಜನೆ । ಸೂನು ವಂಗದ ರಾಸ್ಯವನು ರಘು । ಸೂನು ವೀಕ್ಷಿಸುತಾಶುಭೋದಯುವೆನಲು ಲಕ್ಷ್ಮೀಶಾ ॥ ಆನನವ ಪೌರೋಹಿತನ ಕಡೆ । ಗಾನಿಸಲು ಕೈಮುಗಿದು ಪ್ರತಿಸಂ । ದಾನಿಸಿದನೀ ದಿನವೆ ಶುಭಸದ್ಯೋಗವಹುದೆಂದಾ ॥೪॥ ಇನ್ನು ಶತ್ರುಂಜಯ ಸುಯೋಗೆಡೆ । ಗನ್ನು ಬಂದಿಹುದೆನೆ ಪ್ರಯಾಣಕೆ । ಸನ್ನಹದ ಭೇರಿಯನು ಹೊಡೆಸಿದ ನಗಧರಾವನಿಯಾ ॥ ಗುನ್ನಿಸುರುಗಾವನಿಯಕಳಘಳಿ । ಪಿನ್ನು ದಿಕ್ಪಾಲಕರು ವ್ಯಂತ । ರರನ್ನು ದಿಗ್ಗಜವದಿರಿಸಿತು ತದ್ರವದಪೂರದಲೀ ॥೫॥ ಸ್ವಾಮಿ ವಿಜಯಪ್ರಯಾಣ ಸಮಯದೊ । ಳಾಮಹಾ ಸರ್ವಜ್ಞಗಪಚಯ । ಕಾಮಿಸುವುದುಚಿತೆನಲು ಲಕ್ಷ್ಮಣನೆದ್ದು ರಾಘವನೂ॥ ನೇಮಧೌತೊಸ್ತ್ರಾದಿಗಳ ಶುಚಿ । ಧಾಮದಾಲಂಕರದಿ ಜನಸು । ಪ್ರೇಮದಿಂದೈತಂದವನು ನಿಸೂವ್ರತರ ಮಂದಿರಕೇ ॥ ೬ ॥ ಗರೆದು ಪುಷ್ಪಾಂಜಲಿಯ ಕಳಸುದ । ಕೆರೆದುಕಾಯ್ತುರಿಕದಳಿಗಳವಿ। ಸ್ತರಿಸಿಪಿತಘೃತದಭಿಷವಣಪಯುದಧಿಗಳಭಿಷೇಕಾ॥ ಗರೆದು ಗಂಧ ಸುಮಾಲ್ಯಗಳಲಂ । ಕರಿಸಿ ಪಂಚದ್ಭಕ್ಷ್ಯ ಚರುಗಳ । ನಿರಿಸಿಅಷ್ಟವಿದಾರ್ಚ್ಚನೆಸಗಿದ ಭಕ್ತಿಯಲಿ ರಾಮಾ ॥ ೭ ॥ ಪಿಡಿದು ರತ್ನಾರ್ಘ್ಯವನುತೆರೆವಾ । ರಿಡಿಸಿ ಮಂಗಲಗೀತಮಾಲೆಯ । ತೊಡಗಿ ಸರ್ವೇಷ್ಟನಿಗೆ ವಂದಿಸಿಸಿದ್ಧಸೇಸೆಯನೂ ॥ ಮುಡಿದು ಸರ್ವರಿಗಿತ್ತು ಅಂಜಲಿ। ತೊಡಗಿಭೂಯಾತ್ಪನಹದರುಶನ । ಗೊಡುವುದೆಂದೈತಂದನು ಮುಖಮುಂಟಪಕೆ ರಘುವೀರಾ ॥೮॥ ಸುರಭಿಲೇಪನ ಕುಸುಮಧಾಮಾ । ವರಿತ ದಿವ್ಯಾಂಬರವು ರತ್ನಾ । ಕರದ ಕೇಯ್ಯೂರಾದಿ ಭೂಷಣ ಭೂಷಿತಾಂಗದಲೀ ॥ ಮೆರುಗೆ ಮೌಲಿಯು ಪಂಚರತ್ನಾ। ದ್ಕಿರಣದಿಗ್ನಭಗಳನು ಪದರುಚಿ । ಧರೆಗೆ ರಾಗವನಿತ್ತು ಮೆರೆದನು ರಘುಜನೊಹಿಲದಲೀ ॥ ೯ ॥ ಮರಕತಾಹ್ವಯ ಕುಂಡಲದರುಚಿ । ಮೆರುಗೆಗಂಡಸ್ಥಳದಿಸೇಪಾಲಿರವ । ತೋರಲು ಫಣಫಣಾಮಣಿ ಯುರಡರಿಂದೆಸೆದಾ ॥ ಧರಣಿರಾಜನೊಲಂಗುರದ ಷಂ । ಗುರವು ಚೂಡಾಮಣಿಯಸರ ಬಂ । ಧುರದೊಳೆಸೆವನು

ದಾಶರಥಿಯವನೀಶ ಚಿತ್ತೈಸೂ ॥ ೧೦ ॥ ಇಂತೆಸೆವ ರಾಘವನು ವಿದ್ಯಾ । ಕಾಂತರೊಡನಲ್ಲಿಂದ ಬರೆ ಖಗ । ಕಾಂತೆಯರು ಧಾಳಿಸುವ ಚಾಮರ ಕ್ಷೀರ ಧಾರೆಯೊಲೂ ॥ ಸಂತಗೊಡೆ ಬೆಳ್ಗೊಡೆಯು ಶಶಿಯಂ । ಬಂತೆಪಸರಿಸಲೋ ಲಗಕೆ ಸೊಬ । ಗಾಂತು ನಡೆತಂದ್ಮಕಳಿತ ಸಿಂಹಾಸನದ ಮಧ್ಯದಲೀ ॥ ೧೧ ॥ ಬೀರೆ ತನುಕಾಂತಮುಲ ರತ್ನಸು । ಧಾರಭೂಷಾವಳಿಯ ಕಾಂತಿಪಿ । ಧಾರಿಸಲು ವಾಲಗದ ಸಾಲೆಯ ಸಭ್ಯಜನಸಹಿತಾ ॥ ಧಾರುಣೀಶನ ಬಲದಭಾಗದಿ । ವಾರಿ ಜಾಕ್ಷನು ರತ್ನಪೀಠವ। ಸಾರಿದನು ಪೊಂಬೆಟ್ಟ ನೀಲಾದ್ರಿಗಳ ಸಮನಾಗೀ ॥೧೨॥ ರಾತ್ರಿಕರನಾವೃತದೊಳಿಹ ನ । ಕ್ಷತ್ರ ಪ್ರಸರಗಳಂತೆ ದಿಗ್ನಭ । ಚಿತ್ರಿಸುವ ನವರತ್ನಭೂಷಣ ಮೌಲಿಕಾಂತಿಗಳಾ ॥ ವತ್ರದಿಂದಸಮಾಸ್ತ್ರ ಜಾಂಬವ। ನತ್ರ ಸುಗ್ರೀವಂಗದನು ಸಹಿ । ತತ್ರಸಮುಚಿತ ಪೀಠದೊಳು ಕುಳ್ಳಿರ್ದರವನೀಶಾ ॥ ೧೩ ॥ ಕುಳಿತ ವೀರಾಧಿತನು ನೀಲನು । ನಳನುಗವಯಾದ್ಯಳಿದ ಖಗವರ। ರೊಳಗೆ ಕುಳಿತ ಪ್ರಸನ್ನಕೀರ್ತಿಯು ರಾಜರಾವೃತದೀ ॥ ತಿಳಿದಾ ಪುರೋಹಿ ತನು ಆಗ್ಸಭೆ । ಗಳಿಗೆ ಬೇಗ್ಬಂದಾಗ ಪೇಳಿ । ದೊಳಿತು ಸಮುಯಾಯ್ತೆಂದ ರಘುಜಗೆ ಮುಗಿದು ಹಸ್ತಗಳಾ ॥ ೧೪ ॥ ತಿಳಿದು ಆಸನ್ನಲಗ್ನವನು ಬೇ । ಗ್ದಳ ಪತಿತ್ವವ ನಳಗೆ ಕೊಟ್ಟಯ । ಣಗಳಲಿ ಗನುಗೈಯ್ಯನಲು ರಾಘವ ನನುಮತಿ ರ್ದಂತೇ ॥ ಜಳಿಸೆ ವಿಜಯ ಪ್ರಯಾಣ ಭೇರಿಯ। ನೊಳಗು ದಶದಿಗ್ತುಂಬಿನೀ ಕೆಡ । ದುಳಿವುದನಿಜೆಯಟ್ಟಿ ದಶಸಿರನೆನುತಲಾರ್ಭಡಿಸೇ ॥ ೧೫ ॥ ಕುಲನಗಂ ಗಳೊಳಿರ್ದ ದೇವಿಯ । ರಲುಗಲಾಶಾ ಗಜದಕಿವಿಗಳು । ಬಲಿದವೆಂತರ್ದಿವಿಜ ದಿಕ್ಪಾಲಾಂಗನೆಯರೆಲ್ಲಾ ॥ ಗಲಿತಕೊಂಡಿನೆಯರನು ಆಲಿಂ । ಗಲಿಸಿದರಿಗಾ ವಿಧಿಯ ವಿಸ್ತರಿ । ಸುಲಿದುಭಯಪರಿಪಡಿಸೆ ಪಯಣದಭೇರಿರವವೆಂದೂ॥೧೬॥ ಭೇರಿರವವಿಂತಾದುದಾಹವ । ಕ್ರೂರವೆನಿತಿಂನೆಷ್ಟ ದಳಸಂ । ಹಾರವೀಗೇನ ಟ್ಟಹಾಸದೊಳೈದುವನೊ ರಘುಜಾ ॥ ನಾರಿಸುವ ಭ್ರಮೆಯಿಂದ ಪುಷ್ಪಕ । ಸಾರಿನಿರ್ಜರರೆಲ್ಲನಭದ । ಲ್ಬಾರಿಗೊಂಡರು ಲೆಂಕೆಕಿಷ್ಕಿಂದಾದ್ರಿಗೇಕದಲಿ॥೧೭॥ ಯಲ್ಲಪ್ರತಿಪಾಲನೆಗೆ ಮಾರುತಿ । ನಿಲ್ಲಿಸಂಗದನೀಲರಿಗೆ ಖಗ । ರೊಲ್ಲಭತ್ವವನಿತ್ತು ಜಾಂಬವ ತಾರೆರಮಣರಿಗೇ ॥ ಅಲ್ಲೆ ಮಂತ್ರಿತ್ವವನು ವಿಗಿಲರಿ । ಗೆಲ್ಲನಂ ದೊಂದೊರ್ತನೆಗಳಿಂ । ನಿಲ್ಲಿಸಿದ ಲಕ್ಷ್ಮೀಶನಗ್ರಜನಪ್ಪಣೆಯುಮೇಲೇ ॥ ೧೮ ॥ ಅನಿತರೊಳಗೈತಂದ ನಾರದ । ಜನಪದಕೆಯುದ್ದೊಂದಿಸಿದ ರಘು । ತನಯು ಭರವೇನೆನಲು ಕೇಳಿದೆ ಸಮುವಶರಣದಲೀ ॥ ನಿನಗೆ ಬಲಭದ್ರತ್ವ ನನುಜೆಂ । ಟನೆ

ಯಕೇಶವರೆಂದು ಮುನಿಯುಲಿ । ದನುವ ನಿನಗುಲಿ ಬಂದೆ ಕೇಳೀಗೆಂದನದರ ರ್ತ ॥೧೯॥ ಬಂದುದಾ ಬಲಪಡವಿ ನಿನಗೀ। ಗ್ಳುಂದೆ ದಶಮುಖ ನಂತ್ಯದೊಳು ಗೋ । ಏಂದಗೈತಹುದೋಸುದೇವತ್ಸೀಗ ನಿಂನೆಡೆಯಾ ॥ ಸಂದಬಲಬಲ ನಾಯಕರು ಹಯ। ದಿಂದ ಗಜರಥ ಖಗರು ವೆಂತರ। ರಿಂದ ಸರಿಯಾಯ್ತೆಸ ಗುಪದವಿಯು ಮೇರೆಯುನೆ ಮುನಿಪಾ ॥ ೨೦ ॥ ಲೆಕ್ಕವಿಡಬೇಕೆಂದುಪೀಠವ । ನಿಕ್ಕಿ ಮುನಿಗಾಸನದಿ ಕುಳಿತ। ಲ್ಪಕ್ಕಿವಾಹನನಾಸ್ಯ ವೀಕ್ಷಿಸುತೊಡನೆ ರಾಘವ ನಾ ॥ ಅಕ್ಕರಕೆ ಸರಿಯಾಗಿ ಸ್ಮರನ । ತ್ರಿಕ್ಕ ಲಕ್ಷ್ಮಿಯನೆಲ್ಲ ತಿಳಿದಿಂ । ತಿಕ್ಕಿ ದೊಂದನೆ ರಾಘವನಪದಕ ನಿಲನಂದನನೂ ॥ ೨೧ ॥ ತುರುಗ ನಾಲ್ಕೂವರೆಯು ಕೋಟಿಯು । ಕರಿಗಳಿಪ್ಪತ್ತೊಂದು ಲಕ್ಷ । ಲ್ಲಿರುವ ರಥಕರಿಯಷ್ಟೆ ಲಕ್ಷಂನೆ ರಡುಯೋಜನದಾ ॥ ಧರೆಯ ವೃತ್ತಾಕಾರ ಬಲಖಗ। ವರರು ವೆಂತರರಗಣೆ ಮಗುಟೋ । ದ್ಧರರು ಯಿಹರಿಂನೆಂಟು ಸಾಸಿರವೆಂದ ನಸಮಾಸ್ತ್ರಾ ॥ ೨೨ ॥ ಹೊಂದಿದೈ ಸಿರಿ ಹಲಧರಗೆ ಸರಿ । ಯೆಂದು ಸೂರ್ಯಾಂಕಿತದ ಪಟಹಗ । ಳಿಂದ ಶಂಖದ್ವಾದಶಗಳು ದ್ಭೇರಿಗಳು ಮೂರೂ ॥ ಸಂದ ಚಾಮರವೆಂಟುಭೂ ಛ। ತ್ರೊಂದು ಮುತ್ತಿನ ಆತಪತ್ರಿಂ। ನೊಂದು ವಿರಚನೆ ಗೈಸೆ ಲಕ್ಷ್ಮೀರಮಣ ಬೇಗದಲೀ ॥೨೩॥ ಹೊಡಸಿ ತ್ರೈಭೇರಿಗಳ ಶಂಖು | ದ್ಗಡಸಿ ಪಟಹಗಳುಲಿಸೆ ತ್ರೈಧರೆ। ಗಿಡಿದುದಸದಳ ವೀರ ಲಕ್ಷ್ಮೀಯ ಪೂಡವು ಯಿಂಮಡಿಸೇ ॥ ಕಡು ಗಿದವು ಕಹಳೆಗಳು ಭೂರುಗ। ಹಿಡಿದರಾ ಸ್ವರಪೂರಿಸದ ಬಿಡು। ಯಡೆಗಳಿಲ್ಲ ದೆ ಲೆಂಕೆ ಜರ್ಝರಿತಾಗಲವನೀಶಾ ॥ ೨೪ ॥ ಹೊರಟ ರಾಘವನೆಂದು ಆಶಾ। ಕರಿಗಳೆಚ್ಚರಗೊಳಲು ಫಣಿಪತಿ । ಸಿರವನೊದರಿಟ್ಟಗಿಸರದಿ ಬಲುಭಾರವನು ತಾಳಾ ॥ ಭರದಿಯಾನಕಧ್ವನಿಗೆ ಯದ್ಭುತ। ಗರೆವ ಸಮಯದಿ ವಾಲಿಯಾತ್ಮಜೆ। ರೊರಿಸಿ ಬರಲು ಸುತಾರೆ ಸುಕುಮಾರಿಯರು ವಾಲಗಕೇ ॥ ೨೫ ॥ ಮುತ್ತಿನಕ್ಷತೆಪಿಡಿದು ಮೋಹನ। ಮತ್ತದಂತಿಗಳಂತೆ ಬಿಂಕದ। ಬಿತ್ತುಗಳನಾಸ್ಥಾನ ರಕ್ಷಿಳೆಯೊಳಗೆ ಯುಪ್ಪಿಸುತಾ ॥ ಮುತ್ತು ರತ್ನದಗೊಂಬೆಗಳ ಚಲು। ವೆತ್ತ ಖಚರಿಯರೈದಿ ತಮತಮ। ಚಿತ್ತದೊಲ್ಲಭನೆದುರಿನೊಳು ನಿಂದಾಸ್ಯ ವೀಕ್ಷಿಸುತಾ ॥ ೨೬ ॥ ಇಟ್ಟು ಮುತ್ತಿನಶಾಸೆಯನು ತಳ। ದಿಟ್ಟ ಅಕ್ಷತೆ ವೈರಿ ಮದಕರಿ। ಗಿಟ್ಟ ಅಂಕುಶವೆಹಿತ ಶಾರ್ವರಿಗಬ್ಜಿನಿಯ ಪ್ರಿಯನಾ ॥ ದಿಟ್ಟದಿಂ ದಹಿತರನು ಸಂಹರಿ। ಸಿಟ್ಟು ದಿಕ್ಕರಿಗಳಿಗೆ ಶೃಂಗರಿ। ಸಿಟ್ಟು ಕೀರ್ತಿವಿಹಾರ ರತ್ನಾವಳಿಯು ಮೆರಸೆಂದೂ ॥ ೨೭ ॥ ಯುರಗಿದರ ಪಿಡಿದೆತ್ತಿ ಮುದ್ದಿಸಿ। ಕುರ

ಳನೇವರಿಸಲುಗಿ ಗಲ್ಲವ। ಸರಸದಲಿ ಬೀಳ್ಕೊಟ್ಟು ಸಿದ್ಧೇಭ್ಯನುತ ರಾಘವನೂ॥ ಕರದ ಖಂಡೆಯ ಝುಳಪಿಸೇಳುವ। ದರಿದ ಕ್ರಿಷ್ಣುತ್ರಿಪ್ಟಗೊಳುವಂ । ತರಲಿ ಹನುಮಾದ್ಯಖಿಳ ನಾಯಕರೆದ್ದರತಿವೇಗಾ॥ ೨೮ ॥ ಪಲ್ಲಿ ಬಲದೊಳಗುಲಿಯೆ ಘಟ್ಟಗ। ನಲ್ಲೆ ಮೊಲ್ಲೆಯ ಸರತುರಾಯ್ಪಿಡಿ। ದಲ್ಲಿ ಗೈತಂದಿತ್ತ ಳೀರ್ವರಿಗುಲಿಯೆ ಘಂಟೆಗಳೂ॥ ನಿಲ್ಲಿಸಿಹ ಹಿಡಿಗುದರೆ ಹೂಂಕರ। ದಲ್ಲಿ ಬಲಗಾಲಿಂದ ಲಿಳೆ ಕೆರೆ। ವಲ್ಲಿ ನಾರದನಾದಿ ಸಭೆ ಶುಭವೆಂದರವನೀಶಾ ॥ ೨೯ ॥ ಪೌರ ನಾರಿಯರೆಲ್ಲ ರತ್ನದ। ಆರತಿಯ ನಾಂತುಭಯ ಭಾಗವ। ಸೆರಿರಲು ಸಮಕಟ್ಟಿ ದಿಟ್ಟದಿ ವಾದ್ಯಬಂಭಾರಾ॥ ಭೋರಿಡಲು ವೈತಾಳಮಾಗದ। ರೀರುವರ ಕೆಲದಲ್ಲಿ ಸಾಂಪ್ರತ। ದೋರಿ ಬಿರುದಾವಳಿಯ ಹೊಗಳಿದರವನಿ ನಾಯಕನೇ ॥ ೩೦ ॥ ಏಳಲೊಡನಂಬರೆವೆ ಚಿತ್ರವ। ತಾಳಿತಮಲ ಕಿರೀಟ ರತ್ನೋಜ್ವಾಳ ಪ್ರಭೆ। ಯೊಳಗಾಶಗಳು ಕುಂಡಲದ ಪ್ರಭೆಯಿಂದಾ ॥ ತಾಳೆ ಜಾಂಬಾಲವನು ಧಜಗಳು । ಮೇಳಿಸಲು ನಭವೆಲ್ಲ ಶಶಿಸಂ । ಕೂಳದಂತೆಸದಿರ್ದವಲ್ಲಲ್ಲಾತ ಪತ್ರಗಳೂ ॥ ೩೧ ॥ ಅಲ್ಲಿ ನಿಮಿರೆ ಪತಾಕೆಗಳು ಬಹು। ಘಲ್ಲಿಸಿದರು ಪರಾಕುನೇತ್ರರ। ಸೊಲ್ಲುಗಳ ಸೊಗಸಿಂದ ತೆರಳುವ ರಾಘವೇಶ್ವರಗೇ॥ ಅಲ್ಲಿ ಸಿಂಹ ವರೂಥ ಖಗಕುಲ। ದೊಲ್ಲಭನ ತೇರಾನಿಸಲು ಕುಳಿ। ತೆಲ್ಲರೇರಿದರವರ ವಾಹನಜಯ ಸುಘೋಷದಲೀ॥ ೩೨ ॥ ಯದುರು ರಥದಗ್ರದೊಳು ನಾಟ್ಯದ। ಸುದತಿಯರು ನರ್ಥಿಸುತ ಹಿಮ್ಮಾ। ಳದಲಿ ಕಿವಿಗಿನಿದಾಗಿ ನೇತ್ರಾನಂದಗೊಳುತಿರಲೂ ॥ ಪದುಮನಾಭಗು ರಾಘವಗೆ ಮುನಿ। ಮುದದೊಳಾಶೀರ್ವಚನವಿತ್ತಿಜ। ಸದನಕೈದಿದ ನತ್ತ ರಾಘವ ತೆರಳುವೆಡೆಯೊಳಗೇ॥ ೩೩ ॥ ಆರತಿಯ ನಾರಿಯರಿಗುಚಿತ ವಿ। ಚಾರು ಭೂಷಣಗಳನು ಯಾಚಕರ। ಗಾರದೊಳಗಮರಾಂಗ ಕುಜಗಳ ನಿಲಿಸಿ ಬಹುಜನಕೇ ॥ ಭೂರಿದಾನವಗೈಯ್ಯೆ ಮಂಗಲ। ದೋರೆ ಪಾಠಕರಷ್ಟಮಂಗಲ। ನಾರಿಯರ ನೂಪುರದ ನಾದಗಳಳಿಯರವದಾಗೇ॥ ೩೪ ॥ ಮುಂಗಡೆಯ ಪಿಡಿತರುವ ದರ್ಪಣ। ದಂಗನೆಯರುರುಕುಚವು ಕದಕದಿ । ಸಿಂಗುತಿರಲೆಡಬಲದಿ ಕರಿಣಿಗಳಗ್ರ ಖೇಚರರಾ॥ ಅಂಗನೆಯರೆಸಲೆಂಟು ಚಮರು। ತ್ತುಂಗಮುತ್ತಿನ ಆತಪತ್ರಸ್ಸಂ। ಗದಿಂಸಲೆ ಶೋಭೆಗೊಳೆ ರಘುವೀರ ನೋಟರಿಗೇ॥ ೩೫ ॥ ಪಟ್ಟೆ ಮೇಲ್ಕಟ್ಟನಲಿ ಸುಳಿವೆಲ। ರಿಟ್ಟ ಕೈಸನ್ನೆಯೊಲು ಪಿಂದನು। ಗೊಟ್ಟು ಬಹಖೇಚರರು ಮುತ್ತಿನ ತೋರಣಡಿಯೊಳಗೇ॥ ಪಟ್ಟವರ್ಧನ ರಾಘವನ ಬಲ। ತಟ್ಟನೊಳು ಚಂದ್ರಾ

ಸವನು ಶಳೆ । ದಿಟ್ಟು ಬರುತಿಹನಧಿಕ ಸತ್ತ್ವೋಪೇತ ಲಕ್ಷ್ಮಣನೂ ॥ ೩೬ ॥
ಇಂತು ವಿಭವದಿ ಬಂದು ಪುರಬಹಿ । ರ್ಗಂತು ಕುಲಪಿರಿಯಾರ್ಯ ರಾಶೀ ।
ರ್ವಾಂತು ಬೀಳ್ಕೊಟ್ಟೆಲ್ಲರನು ನಳನೀಲಗವಯಾಖ್ಯಾ ॥ ನಂತಬಲನು ಸುಷೇಣ
ಖಗನು । ದ್ದಂತನಾದ ಪ್ರಸನ್ನ ಕೀರ್ತ್ಯಾ । ದ್ಯಂತರಿಗೆ ಸೇನಾಪತಿತ್ವವ ನಿತ್ತ
ಸೌಮಿತ್ರೀ ॥ ೩೭ ॥ ಧುರಗಲಂಬರ ಜಾಂಬವನು ಬಲ । ಕರನು ಸುಗ್ರೀವ
ಮಿತಗತಿದು । ರ್ಧರನು ಸುರಹರಿ ಸಿಂಹಕೇತನ ಸತ್ಯಸಾಗರನೂ ॥ ಪರಮ
ಭೂತ ಪ್ರಮುಖ್ಯರಾದ್ಯಗ । ವರರ ರಾಘವನೆಡದ ಭಾಗದೊಳಿರಿಸಿದನು ಅವರ
ವರ ಚತುರಂಗಾವೃತದ ಬಳಿಕಾ ॥ ೩೮ ॥ ಅನುಪ ವಿಕ್ರಮದಂಷ್ಟ್ರ ವಿದ್ವ ।
ಕ್ತ್ರನು ವೀರಾಧಿತನು ಅಂಗದ। ಸನುತ ವಜ್ರದ್ವೇಗಘನ ನಾದ್ಬಭ್ರುವಾಹನನೂ॥
ಘನ ಪರಾಕ್ರಮಿ ವೀರಘೋಷಣ । ನೆನುವ ವಿದ್ಯಾಮುಖ್ಯರನು ರಘು । ತನ
ಯನುತ್ತಮಭಾಗಕಿರಿಸಿದನಂಗ ಸಂಗದಲೀ ॥ ೩೯ ॥ ಮಂದಮೇರು ಸಮಿಾ
ರಸಿಂಹ । ಸ್ಕಂಧಸಿಂಧು ಸುಧಾರ ಸುಮುಖ ಪ। ರಾಂಧಮುಖ ಕಮಟುಗ್ರ ಸೇ
ನುಗ್ರಾಸ್ಯನುಗ್ರರವಾ ॥ ಸಿಂಧು ಘೋಷಣ ಬಲಿವಿಶೇಷಣ । ರಿಂದ ಪ್ರಮುಖ
ಖಗೇಂದ್ರರನು ರಘು। ಪಿಂದಕಿರಿಸಿದ ಬಹುಬಲಾನ್ವಿತದಿಂದ ಸೌಮಿತ್ರೀ ॥೪೦॥
ಬಳಿಕ ಬಹು ವಿದ್ಯಾಧಿಪತಿಗಳ । ಬಳಿಸಿನಿಂ ರಾಘವ ಯಿಕ್ಕೆಲ । ದೊಳಗೆ ಸೌ
ಮಿತ್ರಾಂಜನೆಯರು ಅಂಗದನು ಕೂಡೀ ॥ ಬಳಸಿ ವೈಗಾಪಿಂದ ಹಯಗಜ।
ದೆಳೆವರಥ ಕಾಲಾಳಿಗಿಳೆ ಕಿರಿ । ದಳಿಸಿ ಕೇತುಪತಾಕೆ ಛತ್ರಕ್ಕಬ್ರ ಕಿರಿದಾಯ್ತೂ
॥ ೪೧ ॥ ತೊಳಪ ಶಸ್ತ್ರಾವಳಿಯು ದಿನಕರ। ಕಳೆಯ ಪಲ್ಲವಿಸವನಿ ನಭಗಳೆ।
ದಳಿಪವೆನೆ ರಾಘವನವಾಹಿನಿ ತುಳಿದಕೆಂದೂಳೂ ॥ ತುಳುಕಿದಗ್ವಲಯುಗಳನ
ಲ್ಲಿಂ। ನಳಿನ ಸಖ ಪರಿವೇಷ ಕರುಣಾ । ಕಳೆಗೆ ನಿಂತುದು ದಿನಕರುದಯಾಸ್ತ
ಸಮಯಕಾಲದಲೀ ॥ ೪೨ ॥ ಕರಿಯುರಗನಾದಿಯಲೆ ಬಲಕರ । ಗರೆದು
ಭಾರಕ್ರಾಂತದಲಿ ಶಿರ । ಕುರುಳಿದವು ಪೆಡೆಯೊಡೆದು ಖಿಡಿನುಸಗಾಯ್ತು ಪೆಡೆ
ವಣಿಯೂ॥ ಸಿರವಡೆದು ಸಿಂಧೂರವೆಸರಾ । ವರಿಸಿತಾಶಾ ಕರಿಗಳಿಗೆ ರಘು।
ವರನ ವಾಹಿನಿ ನಡೆವ ಭಾರವನೀಶನಾದರಿಸೂ ॥ ೪೩ ॥ ಅಂತ ಸಂಖ್ಯಾತಾದ
ವಾಹಿನಿ । ಯಾಂತು ದಕ್ಷಿಣಶರಧಿಯನು ಕಾ । ಣ್ವಂತು ಬರೆವೇಳಾಂಧ ವೆಸ
ರಿನ ಪರ್ವತಾಗ್ರದಲೀ ॥ ಸಂತವೇಳಾಪುರದ ತಡಿವಿ । ಶ್ರಾಂತಕಪ್ಪಣೆಯಿತ್ತ
ರಾಘವ । ನಿಂತನಲ್ಲೇಬಲಸಮೇತರಹಂತ ಸ್ಮರಣೆಯಲೀ ॥ ೪೪ ॥ ಕಲಿಲ
ಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲವಿನೀ

ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೪೫ ॥

ಅಂತು ಸಂಧಿ ೫೨ ಕ್ಕಂ ಪದನು ೩೦೬೨ ಕ್ಕಂ ಮಂಗಳಮಹಾ ಶ್ರೀ ಶ್ರೀ

ಐವತ್ತಮೂರನೆಯ ಸಂಧಿ.

ಸಮುದ್ರ ರಾಜನನ್ನು ಜಯಿಸಿದ ಸಂಧಿ.

ದಂಗದಗಂತ್ಯದೆಮನಂತೇ ॥ ೩೬ ॥ ಧರಿಸಿ ಭೀಷ್ಮಾವತಾರದಲಿ ಜ। ರ್ಜರಿಸಿ ದನುಜರಕೆಡಹುವರೆ ವನ । ಚರನೆಯದುರಾಗೆಂದ ನಿಂದ್ರಾರಿ ರಥಿಕಬಲವಂನೂ॥ ವರಿಸಿದಕ್ಷೋಹಿಣಿಯು ಮೂವ । ತ್ತರಲಿ ಬಂದಾಕಾಶದಿಕ್ಸಂ । ವರಿಸಿದನು ಪ್ರತ್ಯಂದ್ರನಂದವೊಳಂಗದನಮೇಲೆ ॥ ೩೭ ॥ ನೋಡೆ ತುರುಗಾಸುರರು ಯಲ್ಲೆ। ಲ್ಲೋಡೆ ಕೂಡಿ ಗಜಾಸುರರೆ ಕಂ । ಡಾಡುವನಿತರಲೆಲ್ಲ ವೈಮಾನಾಳು ರಾಕ್ಷಸರೇ॥ ಕೂಡಿ ಕವಚವ ಮುಚ್ಚಿದಂತೆಡೆ । ನಾಡು ದಿಕ್ತ್ತಿಳಿಯದೊಲು ಕೌವರ । ಗೂಡಿಸುರಿದರು ಸರಳಬಿರಿಮಳೆ ಅಂಗದನಮೇಲೇ ॥ ೩೮ ॥ ಸಿಗಿಯಲೆರಗುವ ಕೊಂತಕೈಕಾ । ಲ್ದಿಗೆವ ಕೈಚಕ್ರಂಗವನು ಚು । ಚ್ಚೊಗುವ ಸಾಂಗೆಡೆಗಡಿವ ಪರಶುಗಳಾದಿ ಬತ್ತೀಶಾ ॥ ಬಗೆಯಶಸ್ತ್ರಗಳೆಲ್ಲ ಚತುರಂ । ಗೆಗರಿಸಾರ್ಭಡಿಸಲ್ಕೆ ಪ್ರಳಯಾ । ಬ್ದೊಗೆದ ಸಿಡಿಲೆಂಬಂತೆ ತೋರಿತದಾಗ ನೋಟರಿಗೇ ॥ ೩೯ ॥ ಮುಳುಗಿದಂಗದನಂದು ಜರ್ಜ್ಜರ । ದಳೆಯೆ ನಿರ್ಜರನಿಕರ ಆನಕ । ವೊಳಗಿದವು ದೈತ್ಯಾನೀಕಿನಿಯೊಳಾಗ ಧೈರ್ಯವನೂ ॥ ತಳೆದು ಅಂಗದನರುಹನಂತರ। ದೊಳಗೆ ನಿಲಿಸೇರಿಸುತ ತಿರುವಾ । ಯಳೆದನದ್ಭುದ ದಕ್ಷಯಾಸ್ತ್ರವ ಬಿಟ್ಟನೆದುರಾಗೀ ॥೪೦॥ ತೊಡುವೆಡೆಯೊಳೊಂದಳೆದು ಬಿಡೆದಶ। ನಡೆಗೆ ನೂರ್ಸಾಸಿರದಮೇಲಿಂ । ಗಡಸಿ ಲಕ್ಷವು ಕೋಟಿ ಅರ್ಬುದವಾಗುತಾನೇಕಾ ॥ ವಡೆಯನಂತರ್ಭಾವಕರಸರಿ । ಗೊಡುತ ಬಹಶಸ್ತ್ರಗಳ ಖಡಿ ಖಡಿ । ದಡುಕಿ ಮೇಲಹಿತಾಂಗಗಳ ವಿಂಗಡಿಸಿ ತಾಕ್ಷಣದೀ ॥ ೪೧ ॥ ಬಿಟ್ಟ ಶರಕಿಂದಿಟ್ಟ ಶರಮುಂದಟ್ಟೆ ನಾನಾ ಶಸ್ತ್ರಗಳ ಖಡಿ । ದೊಟ್ಟೆ ಅಹಿತರ ಚಾತುರಂಗವನಟ್ಟ ಅಂಗಗಳಾ ॥ ಮುಟ್ಟಕೊಲ್ತಲೆಗೊರೆದು ನಡುತುಂ । ಡಿಟ್ಟು ಸುರಿಯುವರೊಳಗೆ ಲೋಹಿತ । ಕುಟ್ಟ ಬಿರಿಮಳೆಯಂತೆ ರಣಮಳೆಯಾಯ್ತು ನೋಳ್ಪರಿಗೇ ॥೪೨॥ ಕಾರಿತಂಬರಕಡೆಯಗಾಲದ । ಕ್ರೂರಮಳೆಯಂಬಂತೆ ಯೇನೊಪಿ । ಕಾರದಿಂದರೆಫಳಿಗೆ ಸೋರಲು ಬಂದಬಲದದ್ರ್ಭ ॥ ಹಾರಿತಾ ಅಂಗದನಯಸುಗೆ ಪಿ । ಶಾರದತ್ವವನಾವ ಬಂಣಿಪ । ಸೂರಿಧರೆಯೊಳಗೆಂದ ಗೌತಮುನವನಿನಾಯಕನೇ ॥ ೪೩ ॥ ದಿಕ್ಕುನಭಧರೆಯಂಬುದನು ಕಂ । ಣಿಕ್ಕಿ ಕಾಣ್ದಂತೋರಿಸಿದದ್ಭುತ । ರಕ್ಕಸರ ಶಸ್ತ್ರಾದಿಸಗಬಲವಂನು ಸಂಹರಿಸೀ ॥ ಮಿಕ್ಕವಾಹಿನಿಗೆರಗಲಾ ರಣ । ರಕ್ಕಸನ ಭಯಕಂಜಿ ಪಾರಾ । ಟಕ್ಕಿದಸದಳಸೇನೆಯರಿದಿಂದ್ರಾರಿ ಕೈಕಚ್ಚೀ ॥ ೪೪ ॥ ತೆಗೆದ ಪಲ್ಮೊಡನೆಡೆಯ ಲೋಹಿತ । ನೆಗೆದು ಗಗನವ ತಾಕಿ ಪೂರ್ವಪ । ರಗಳಲಿಳಿತರಲಬ್ಧಿ ಯಡ್ಡೈಸಲ್ಲೆ ಯಡೆಗಟ್ಟೀ ॥

ಖಗನವುದಯಾಸ್ತ್ರದಲಿ ತದ್ರುಚಿ । ಸೊಗಸುತಿಹುದಂದಿಂದ ಸಂಧ್ಯಾ । ಸೊಗಸನಾಥರಿಸತ್ತ ಬಂದಿಂದ್ರಾರಿ ಕೋಪದಲೀ ‖ ೪೫ ‖ ಕಣೆಯೊಕಣ್ಮನಕೆಣೆಯುಗೊಡದಿಹ । ಮಿಣುಗುಮಿಂಚಿನ ಚಣಕೆಗಳೊಸಂ । ದಣೆಯಮಿಾನ್ಗಳೊಸೂನ್ಯದಂಬುಧಿಯೊಳಗೆ ಹೊಳೆದೆಗರ್ವಾ ‖ ಹಣೆಯನೆತ್ತದ ರೀತಿಯೊಳು ಸಂ । ದಣಿಸಿದಸ್ತ್ರದ ಯದುರಿಗಿಷುಗಳ । ಬಣಬೆಯನು ಕೆದರೆರಚಿದಂಗದನಂಗ ಸಾಹಸಿಯಾ ‖ ೪೬ ‖ ತಗುಲಿದ ಲಘಲಗಲ್ಲಿ ಖಿಡಿಹೊಗೆ । ಯೊಗೆದು ಹೊಗೆಮೇಘದೊಳು ಸಂ । ಧಗಿತಕ್ಷಣ ರುಚಿಯಂತೆ ಖಿಡಿವೆಳಗೆಸೆಯ ಲಸ್ತ್ರಗಳ ‖ ಸುಗಿವರೊಗೆವರು ಬಗೆವಗೆಲುವಿಂ । ದಗಲದೀರ್ವರ ದ್ರಿಷ್ಟಿಪಲ್ಮಸೆ । ದಗಿವುತೀರ್ವರರಣವುಕೌತುಕವೆರಸೆ ಸುರತತಿಗೇ ‖ ೪೭ ‖ ಕೋಟಿಕೋಟಾಕೋಟಿ ಶರಸಂ। ಘಾಟವನು ಕಣ್ಮುಚ್ಚುವನಿತಕೆ । ಮಿಾಟುವರು ಖಿಡಿದೊಟ್ಟಹವಿಯಾಸ್ತ್ರದಲಿ ದಹಿಸುವರೂ ‖ ಕೂಟಗೈವರು ಪುನಹಲವನ । ದ್ರೂಟಗೈವರು ಅಂಗಕನುಸಂ। ತಾಟಪಭಿಲಾಷೆಯೊಳಗಿಂದ್ರಾರಂಗದರು ಕಡುಗೀ ‖ ೪೮ ‖ ಅಂಗದೋರ್ವನೆ ಪೋಗಿ ಅಹಿತರ । ಸಂಗರಕೆದೊರದೆಂದು ತಚ್ಚತು । ರಂಗ ವೆಂಟಕ್ಷೋಣಿದಳಮೇ ಗೊಡ್ಡಿನಂದದಲೀ ‖ ಸಂಗಡಿಸಲಾ ಕಾಲಮಾರಿಯ । ಜಂಗುಳಿಯನಿರ್ಮಿಸುತ ಲದಕೆದು । ರಂಗಮಿಸೆ ಯಿಂದ್ರಾರಿ ಖಗವಾಹಿನಿಯನಾವರಿಸೀ ‖ ೪೯ ‖ ಮುಚ್ಚಿಕೊಚ್ಚುತ ಶರಗಳಿಂಬದ । ಲಿಚ್ಚು ಕೈಕಾಲ್ತಲೆಗಳನು ನು । ಚ್ಚುಚ್ಚಿ ಹಾರಿಸಿ ಹೀರಿ ರಕ್ತವ ಕರುಳಮಾಲೆಗಳಾ ‖ ಸಚ್ಚರಿಸಿ ಕೊರಳಲ್ಲಿ ಪಲ್ಲಲಿ । ಕಚ್ಚಿ ಅಂಗದನಂಗವನು ಬೆ । ಬ್ಬಚ್ಚಿಸಲು ಯಸೆದನ್ಯ ವಿದ್ಯಾಹಾರಿಯಂಗದನೂ ‖ ೫೦ ‖ ಬಯಲಗೊಡಲಾ ವಿದ್ಯಶಬಲದ । ಭಯವ ಪರಿಹರಿಸಿಂದ್ರಜಿತು ನಿನ । ಕಯಿಗಳೊಲವರು ಹಾದುದೆಲೆ ದಾನವನೆ ನಿನಗಾಖ್ಯಾ ‖ ನಿಯತವಲ್ಲಿಂದ್ರಾರಿಯಂಬುದು । ಗಯಿಸಿತನ್ಯತನೆಂಬದಾಕ್ರಮು । ವಯಿಸಿತೆಂದಿಟ್ಟಂಗದನು ದಾನವನ ಪುಷ್ಪಕಕೇ ‖ ೫೧ ‖ ಪಿಡಿದುಪಿಂದ್ಯೆದಾರುಮಾರನು । ನಡಸೆಮೆಚ್ಚಂಗದನಸುಳ್ಳನ । ಕಡುವನಾಥರಿಸೆಂದು ಪುಷ್ಪಕಕಿಟ್ಟನಿಂದ್ರಾರೀ ‖ ಯಡೆಯಬಿಟ್ಟದಕೊಂದು ದಂಡೆ । ಚ್ನಡೆಯಲಸುರನ ಮೆಚ್ಚಿಯಂಗದ । ಕಡುಗಿಪಣೆಗೊಂಡೊಜ್ರ ಹಿಳುಕಿಟ್ಟಸ್ವಲ್ಪ ಚಂಚಲಿಸೇ ‖ ೫೨ ‖ ಸ್ವಲ್ಪದೊಳಗರಿದಂಗದನೆ ನಿನ । ಜಲ್ಪನೋಡಿದೆನೆನುತಲಾ ತೆರ । ಜಲ್ಪಿಸಿದನವನಿವನನಿಂತ್ಯೆಸೂಳುಚಂಚಲಿಸೇ ‖ ಸ್ವಲ್ಪ ನೀನಿನಗೇಕೆ ಕೈಸ । ದ್ಬಲ್ಪವೆನುತೆದುರಿಟ್ಟಶರಸಂ । ಕಲ್ಪಗೊಳಲಾವಾವ ದಿಕ್ಕಿಗೆ ಧರೆಯು ಗಗನಕ್ಕೆ ‖ ೫೩ ‖ ತವಿಸೆಬಾಣಾಕಾಶವನು

ನಿಸಿ | ತವಿಸಿತಸ್ತಮಯನುವ ತೆರರವಿ | ಯವಿರಳವಗೊಳಲಬ್ಧಿಯೊಳು ಕೆಡೆದಾ ಳುಹಯಕರಿಯು ‖ ನಿವಹದಿಂದಾಯುಧಗಳಿಂ ಪ್ರತಿ | ದಿವಿಯಿದೆರಡನೆ ಲೆಂಕೆ ಯಂಬಂ | ದವನು ತೋರಿಸಿ ತಿಂದ್ರಜಿತುವಂಗದನ ರಣ ಬೆಳೆದೂ ‖ ೫೪ ‖ ಬಹಳಬಲಹತಗೈದು ತಮಕೈ | ಸಹಸದಿಂ ಮೆರೆವ ಸುರನಂಗದ | ರಹರಯಿಂ ನೇಗೈವರೆಂದಾಗೀಕ್ಷಗೊಳೆಲಂಜೀ ‖ ವಹಿಸಿದಾ ಕತ್ತಲೆಯೊಳಗೆ ಕುಮು | ದ ಹಿತನಪರಾಂಬುಧಿಗೆ ಜಾರಿದ | ಗಹಿಸಲಾಗಲೆ ಧರ್ಮ ಗಹಳೆಗಳು ಭಯ ಬಲ ದಲ್ಲೀ ‖ ೫೫ ‖ ಅರಿಯದಸ್ತಮಯಾಗ ವಿಸ್ಮಯ | ಗರೆದು ನಿನ ಪುಣ್ಯಾಕರಕೆ ದಿನ | ಕರನು ಕೈಗೊಟ್ಟಿಲ್ಲದರಘಳಿಗೆಯೊಳು ನಿನಬಲ್ಪಾ ‖ ಮರಸುವೆನು ಯಿಂ ದೈದುನಾಳಿಂ | ನಿರುವದೆಂದಿಂದ್ರಾರಿ ಯಂಗದ | ತೆರಳಿದರು ನಿಜ ಕಟಕಕರುಹ ನಧ್ಯಾನಲೀನದಲೀ ‖ ೫೬ ‖ ಕಲಿಲಹರ ಮುನಿಸೂವ್ರತಾಂತ್ಯದಿ | ಚಲಿತ ರಾದಾ ರಾಮಲಕ್ಷ್ಮಣ | ರೊಲವಿನೀಕರ್ನಾಟ ಕಾವ್ಯಕೆ ಶ್ರೇಷ್ಠರನಿಸಿರುವಾ ‖ ಲಲಿತದಲಿ ಶ್ರೀಚಂದ್ರಸಾಗರ | ರೊಲಿದು ವಿರಚನೆ ಗೈದರಿದ ಮನ | ವೊಲಿ ದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ‖ ೫೭ ‖

ಅಂತು ಸಂಧಿ ೬೨ ಕ್ಕಂ ಪದನು ೩೬೨೦ ಕ್ಕಂ ಮಂಗಳಮಹಾ ಶ್ರೀ ಶ್ರೀ

ಅರವತ್ಮೂರನೆಯ ಸಂಧಿ.

ಇಂದ್ರಜಿತು ಜಗಳದ ಸಂಧಿ.

ರಣಕೆ ರಣತೂಳಿಂದ್ರಜಿತು ಕೈ | ಯಣಿಗೆ ಸರಿಯಾದಂಗದನು ಕಡೆ | ಗಣಿಸದಾಹವ ಗೈದರಮರನಿಕಾಯುರಾಶ್ಚರಿಸೇ ‖ಪಲ್ಲವಿ‖

ಧರಣಿಪತಿಯುವಧರಿಸು ಕಲ್ಪಾಂ | ತರದ ಸಾಹಸರೀರ್ವರಾದಿನ| ಕರನ ಗತ್ವಾಗತ್ವವರಿಯುದರೀತಿ ರಣರಂಗಾ ‖ ಗರೆದುನಿಳಯಕ್ಕೈದಿ ಆದಿನ | ದಿರು ಳನಿದ್ರೆಯಗೊಳದೆ ದಿನಕರ | ಬರುವ ದಾರಿಯಕಾಯ್ದು ಬಂದರು ರಣಕೆ ಪೂ ರ್ವದೊಲೂ ‖ ೧ ‖ ನಿಂದ ರಾಘವ ದಶಸಿರನ ಯಡೆ | ನಿಂದ ಶೂರರೊಳಿತ್ತ ಲಂಗದ | ನೆಂದ ನಿಂನೊಳಾದ ರಣಬೇಕೆನದೆ ಮಾರ್ಗದಲೀ ‖ ಸಂದಿಸಿತು

ಯಿಂದಿಂದ್ರಜಿತು ರಣ। ಕೆಂದು ನಿಶ್ಚೈಸಿರುವನಾ ಪೋಪೆಂದನಪ್ರತಿಮಲ್ಲ ಪಟು
ಭಟ ಕಾಲಭೈರವನೂ ॥ ೨ ॥ ಆಗನಿಮಿತಾಯನ್ನ ಕೈವಶ । ಕಾಗಿಕೊಟ್ಟೆಹಳ
ಸುರರಾಹವ । ಕಾಗಿ ಹೇಗೈದಿಸಲಿಯಂಗಜನಿಹನು ರಣಮುಖಕೇ ॥ ಸಾಗದಿ
ಹುದಂಗದನೆ ನೀನಿ । ಲ್ಲೀಗಲೆನಬೆಂಬಲಕೆ ಯಿಹುದೆನ । ತಾಗಪೇಳುವರಾಮ
ಗೊಹಿಲದೊಳೆಂದ ಪದ್ಮನಿಯಾ ॥ ೩ ॥ ಹೆತ್ತಳಹುದಾ ಪದ್ಮಮುಖಿ ನಿಮು ।
ಗಿತ್ತಳಾತ್ಮಜನೆಂದು ನೀವನು । ವೆತ್ತು ಸಾಕಿದಿರೀಗ ರಣಕೈಗೂಡಿದವಸರದೀ ॥
ಸತ್ತತೆರವಾನಿರಲು ನಿಮುಪದ । ಕೆದತ್ತದೇದುರ್ಯಶವು ಜಗಕಸ । ವೆತ್ತವಾಲಿ
ಜನೆನುವರೇ ರಘುಜಂಗನಂಗದನೂ ॥ ೪ ॥ ನೊಸಲ ಘಾಯದಿ ಸಾಯ್ವನೇ
ರಣ । ರಸಿಕಪೃಷ್ಟಕ್ಷತದಿ ಬಂದ್ಜೀ । ವಿಸುವನೇ ರಣಹೇಡಿಯಂಬೀ ಲೋಕ
ವಾಖ್ಯಲದೇ ॥ ಅಸದಳರು ನೀವ್ನಿಮಗರ್ಭದ । ಹಸುಳೆನಿಲುವನೆ ಬೇಡವೆನೆ
ಹೀ । ನೊಸತಿಗೊಳದೆ ಮೂರುಲೋಕದೊಳೆಂದನಂಗದನೂ ॥ ೫ ॥ ಸಂಗರ
ಕೆಹೊರಟನಿಗೆ ಬಹುಚತು । ರಂಗದೊಳು ಮಾರುತಿಯ ವ್ಯೆಗಾ। ಪೊಂಗೊಳಿಸಿ
ಮನವಲದಮನದೊಳು ಪೋಪುದೆನೆ ರಘುಜಾ ॥ ಸಂಗಡಕ್ಷೋಹಿಣಿಯುನೂರ
ರೊ । ಳಂಗಜನು ಹೊರಟೆನಲು ವಾಲಿಯ । ಅಂಗಸಂಭವಗುಂಟೆ ರಣಭಯ
ವೆಂದ ಜಾಂಬವನೂ ॥ ೬ ॥ ಆಗಲಂಗದನೊಡನೆ ಚತುರಂ । ಗಾಗೀಅಕ್ಷೋ
ಹಿಣಿಯು ಯಿಾರಾ । ರಾಗಿ ಹೊರಟೊಯ್ಮಾನವೇರಲು ಭೇರಿ ಪಟಹಗಳೂ ॥
ಕೂಗೆಕಹಳೆಯು ಪ್ರಳಯವಾರುಧಿ । ರಾಗದೊಳಗಿಂದಂಗದನು ರಣ । ಕಾಗಿ
ಬಹನೆಂದೊದರಂತರ ವೇತ್ರಧಾರಿಗಳೂ॥ ೭ ॥ ಲೋಕವನೆ ಜಲಗಾಡಿಸುವ ಶ।
ಕ್ರಾತ್ಯಕರನು ಕಲಿವಾಲಿಯಾತ್ಮಜ । ನೇಕ ಸಾಹಸಿಯಾದ ಅಂಗದನಿಂದಿನಾಜ
ವಕೇ ॥ ನೂಕಿ ಬಹನೆದುಗಾಗದಂತ । ವ್ಯಾಕುಲಿತೆ ಯೊಳಗೋಡಿರೆಂದತಿ।
ಭೀಕರದ ಕಹಳೆಗಳ ನೊದರಿಸುತ್ತೈದ ಲಂದಿನೊಳೂ ॥ ೮ ॥ ಕೇಳಿಯದನತ್ತಿಂ
ದ್ರಜಿತು ರಣ । ಬಾಳಲೋಚನ ನಿಂದಿನೊಳು ರಣ । ಕೇಳಿಗೈತಹ ನಹಿತ ರುಳು
ಹಿಲ್ಲೋಡಿ ದಿಗ್ದೆಸೆಗೇ ॥ ತಾಳದಲೆ ಭಯುವೈದಿದರೆ ರಣ । ತೂಳಗಾಹುತಿಯಿ
ಡುವೆನೆಂದು । ತ್ತಾಳಿಸಿದ ರಣಗಹಳೆಗಳನಾಸುರದಭರವಶದೀ ॥ ೯ ॥ ಬಂದು
ದಕ್ಷೋಹಿಣಿಯು ನೂರನು । ಬಂದಚತುರಂಗದಲಿ ಬೆಂಬಲ । ಕೆಂದು ಯಿದರಿ
ಪ್ಮಡಿಯು ಚತುರಂಗದಲಿ ಘಟಕರ್ಣ ॥ ನಿಂದಪಿಂಗಡೆಯುಲ್ಲಿ ಅಂಗದ । ನೊಂ
ದಿಗಕ್ಷೋಹಿಣಿಯು ನಾಲ್ವ । ತ್ತೊಂದಿ ಚತುರಂಗದಲಿ ಬಂದನು ಪುನಹ ಮನ್ಮ
ಥನೂ। ೧೦ ॥ ಯುತ್ತಿಕಪಿಕೇತನನ ಯಡೆನೊರ। ವೆತ್ತ ಆನಕದಿಂದಖಡಿಖಡಿ।

ವೆತ್ತ ತಮಟಗಳಿಂದ ರಣಗಹಳೆಗಳ ಅದ್ಭುತದೀ ॥ ವತ್ತಿಅಂಬರಹಳಚು
ತಿಹ ಪೊಳ । ವೆತ್ತ ಅಡ್ಡಾಯುದದ ಹೊಳವಿಲಿ । ಬಿತ್ತರಿಸೆ ಮಣಿ ಮೌಲಿಕಾಂ
ತಿಯ ಚಿತ್ರದಿಕ್ತಟವಾ ॥ ೧೧ ॥ ರಕ್ಷಸರಾನೀಕಿನಿಯೊಳಗೆ ಅ । ದೃಕ್ಷ ವೈಮಾ
ನಾಭರಣಮಣಿ । ದಿಕ್ಷುಗಳನಾವರಿಸಲಿಂದ್ರನ ಚಾಪದಂಡದಲೀ ॥ ಲಕ್ಷಗೊಳಿ
ಸುವಬಲದೊಳಗೆ ಸಿಂ । ಹೇಕ್ಷಣಧ್ವಜದೊತ್ತಿನೊಳಗನು । ಲಕ್ಷವಾದ್ಯತ್ರಯ
ವಿಭಾಜನಭುವನ ಭುಂಭುಗಿಸೇ ॥ ೧೨ ॥ ಅನಿತರೊಳಗಿಂದ್ರಾರಿತನವಾ । ಹಿ
ನಿಗೆ ಕೈಸನ್ನಿಸಲು ತನಿಗಣೆ । ಯನುಕರಿಸಿವತ್ತಸುರನಾಳ್ಗಳು ರೌದ್ರರೂಪಿನಲೀ॥
ವನಚರಧ್ವಜಸೇನೆಯನು ಕಂ । ಠೊನೆಯದಂತಾಸುರದ ಕಣೆಗಳ । ಸನಯ
ಗೈಲಂಗಾಂಗಸಂಗದ ರೋಮಕಾವರಿಸೇ ॥ ೧೩ ॥ ಕಡುವಿನಲಿ ಖಚರಾಳುಗ
ಳುಕೈ । ನಡಸಿಸರಳಿನ ತೆಕ್ಕೆಯೊಳಗಹಿ । ತಡಗುವಂತಾವರಿಸಿ ಮೇಲಾವರಿತ ಶ
ಸ್ತ್ರದಲೀ ॥ ಖಡಿದು ಕರಚರಣಂಗಶಾಖೆಯ । ಬಿಡಿಸಿ ದಾನವ ಬಲದಕೈನಡೆ ।
ಗೊಡದೆ ತತ್ತರಿಸುವದ ನೋಡಿದ ವಾಜಿವಾಹಕರೂ ॥ ೧೪ ॥ ಕುಣಿವಸಪ್ತಾ
ಶ್ವಗಳತೆರ ಸಂ । ದಣಿಸಲಿತರಶ್ವಗಳು ತದ್ವಿದ । ರಣಕೆ ಮುಂಕೊಳಲಾಲಿ ಹೊ
ಡೆದಾಡಶ್ವಜೋಧರರೂ ॥ ಕ್ಷಣಕೆ ಬಯಲೊಡಲಾನೆಗಳು ಯಿತ । ರಣಿಸಿ ಮಾ
ವತರರಿರಿದು ತದ್ಗಜ । ಕ್ಷಣಕೆ ವಿಸ್ಮಯಗೈದದರಿದೊಯ್ಮಾನ ಮುಚ್ಚುವೊಲೂ
॥ ೧೫ ॥ ಸರಳಮಾಲೆಯ ಸುತ್ತಿ ಸಂಗಾಂ। ಗರಿದು ಕರುಳ್ಗಳ ಕಿತ್ತು ಶಿರವಂ।
ಬರಕೆ ಹಾರಿಸಿ ಲೋಹಿತದ ಮಳೆಗರಿಸಿ ಪುಷ್ಪಕವಾ ॥ ತರಗೆಲೆಯ ರೀತಿಯೊ
ಳು ದಿಕ್ಕಾ । ವರಿಸಿ ಗಜದಚಲಶ್ವ ಮರಡಿಯ । ನೆರಹಿ ಚರರ ಸಮಿತಿಗಳನಾ
ರಣ ಶೂರರಂಕದಲಿ ॥ ೧೬ ॥ ವಟ್ಟ ಲಬ್ಧಿಯೊಳೆಲ್ಲ ಚಿತ್ರದ । ಬೆಟ್ಟದೋ
ಲಿಸೆದಿರಲು ಆಹತ । ವಟ್ಟ ಬಲವಲ್ನಾಲ್ಕು ಅಕ್ಷೋಹಿಣಿಯು ನಿಮುಷದಲೀ॥
ಕೆಟ್ಟುದರಿದಿಂದ್ರಾರಿ ಅಂಗದ । ರಟ್ಟೆ ಕಂಖಾರಿಸುತ ಸರಳಿನ । ಬೆಟ್ಟವನು
ಕಿತ್ತೆರಚಿದರು ಅವರಿವರ ಪಾಯ್ದಳಕೇ ॥ ೧೭ ॥ ಕವಿದ ಶಸ್ತ್ರದ ವಟ್ಟುಗಳು
ಬಲ । ನಿವಹದವಯವಗಳನು ತುಂಡಿ । ಟ್ಟವಿಯು ಪೊಕ್ಕಿಂದಣದ ಗೃಹದಂ
ತಿತರ ದಳಗಳನೂ॥ ಕವಿಸಲಬ್ಧಿಯೊಳುಳಿದ ದಳಮುಂ। ದವುಕಿ ವೈಮಾನಗಳು
ಯನ ಆ। ಹವಕೆ ಬಾರೆಂಧನುವ ಜೇಗೈಲಿತರ ನಾಯಕರೂ ॥ ೧೮ ॥ ನೀಳಿ
ಸಲು ಕಿವಿಗಳನು ಹಯಗಜ । ವಾಳುಗಳ ತೊಡೆ ನಡುಗೆ ಪುಷ್ಪಕ । ಘಾಳಿಪಟ
ದಂತಾಗ ಲಬ್ಧಿಯೊಳಿರ್ದ ಶಬದೊಟ್ಟೂ ॥ ಝಾಳಿಸಿದ ತೆರನಾಗಲಾ ರಣ ।
ತೂಳರತಿ ಬಲಕಮರತತಿ ಭಯ। ದಾಳಿ ಸ್ವಲ್ಪುಚ್ಚಳಿಸೆ ಬಹನೆಂದಂಬು ತಂಮ

ಡೆಗೆ ॥ ೧೯ ॥ ಅರಿದು ನಿನ್ನಿನೊಳ್ಳೈದುವರೆ ಘ। ಲ್ಗಿರಿದ ಕೇತನನೆನಲು ತೆರವಾ। ಯ್ದುರನೆ ಯೇಸ್ಸೈತಂದೆ ನಾಚದಲರಿದು ಯಂನೊಲವಾ॥ ಇರುಳ ಚರತರು ಚರನೆ ಯಿನ್ನೊಂ। ಮರಿತು ಪೋಪೆಯೊ ಯೀಗಲೇ ನೀ। ತೆರಳಿ ಬಲಕರರೈದಿಸುವೆ ಯಂದೆಚ್ಚನಾರಾಚಾ ॥ ೨೦ ॥ ಮುಸುರೆ ದಿಕ್ಚಕ್ರವನು ಧರೆಯಾ । ಗಸವ ನಾವರಿತಸ್ತ್ರಗಳ ಕಂ । ಡಸುರವಾಹಿನಿ ಖಗವರೂಥಿಸಿ ಬಿಟ್ಟು ತತ್ತಸ್ತ್ರಾ ॥ ದೆಸುಗೆ ಯಿಂಬಾಗಿರಲು ಆರಣ। ರಸಿಕ ರೆಚ್ಚಂಬುಗಳ ಕತ್ತರಿ । ಸೆಸೆವರೊಡನೊಡನಾದಿಗಧಿಕದ ಲೀರ್ವರಳುಕದಲೇ॥ ೨೧ ॥ ಚಿತ್ರಪುಂಖಿತೆ ಹಸ್ತವಿದ್ಯವಿ। ಚಿತ್ರಗಳಲೊಂದೈದು ದಶನೂ । ರತ್ರ ವಿನ್ನೂರಿನ್ನ ಯಿಾತೆರವಕ್ಷಯಾಸ್ತ್ರಗಳಾ॥ ಮಂತ್ರತಂತ್ರದೊಳೀರ್ವರಂಬಲ । ದತ್ರ ವಿಲದೆಂತೆಸೆದವನು ಖಡಿ । ದತ್ರಲು ದುರಿಸುತಿಹರು ಯಿಂದ್ರಾರಂಗದಾಹವದೀ ॥ ೨೨ ॥ ನೋಡು ಬಲಿಮುಖನಿನ್ನ ಶಸ್ತ್ರವ । ಪಾಡಗೆಡಸುವೆನೆಂದು ಶರಸಂ । ಧಾಡವನು ಸಂಹರಿಸಿ ಮೇಲಾಗಸ್ತ್ರ ಪಂಜರದೀ ॥ ಕೂಡಿ ಕುಲಿಕುಲಿರವದಿ ಬೊಬ್ಬೆಯ । ಮಾಡುವಸುರ ಕುಮಾರಕನ ಗೆಲು । ನೋಡಿ ಯಂಗದನೆಂದ ಕೇಳೆಲೊ ಸಿಂಹಸ್ಯಂದನನೆ ॥ ೨೩ ॥ ಆರಿದು ಯನ್ನಸ್ತ್ರಗಳ ಶರಪಂ । ಜರವ ಗೈದೆನಗಹುದೊ ರಣ ದು । ರ್ಧರನು ನೋಡ್ಡಿನ ಪಂಜರವನೆಂದಗ್ನಿ ಶರದಿಂದಾ ॥ ಪುರುಹ ಮೇಲೈತರುವ ವಿದ್ಯಾ। ಸರಳುಗಳ ನೆಡೆಗಡಿದು ಯಡಗೈ। ತರದರೀತಿಯಭಂಜಿಸಿದ ಕಲಿವೀರನಂಗದನೂ ॥೨೪॥ ನಿಲ್ಲಿಸಿಕೊ ನಿನ ಪುಷ್ಪಕವನೆಂ' ದಲ್ಲಿ ವಜ್ರಾಯುಧದಿ ಪಿಂನೆಡ ಸಲ್ಲಿಗೊತ್ತುವರಿಗಿವರ ವಡನುಯಿದಿಗೊ ನೋಡೆಂದೂ॥ ಬಿಲ್ಲನಾರಿಯಬತ್ತಳಿಕೆ ನೋ। ಡಲ್ಲಿಗೆಸೆವರು ಬಹಶರವನೆಡೆ। ಯಲ್ಲೆ ಖಡಿವರು ರಣವಿಶಾರದನಂಗದಿಂದ್ರಜಿತೂ ॥ ೨೫ ॥ ಕಕ್ಕಸದೊಳೋರ್ಮೋರ್ವರನು ಖಡಿ । ದಿಕ್ಕಲಾತುರದಿಂದಕಾಲ್ಪಡಿ । ದಿಕ್ಕಲಸ್ತ್ರವ ತೋರಿಯೊಗೆವರು ಮೌಳಿ ಮಸ್ತಕಕೇ ॥ ಕುಕ್ಕಲಾ ಧ್ವಜವನ್ನು ಶಳೆದಡಿ । ಗಿಕ್ಕುತೆಡೆ ಗೊದಗಿಸದೆ ನಡುತುಂ । ಡಿಕ್ಕುವರು ಮಧ್ಯಸ್ತರಲದಸಹಾಯಸಾಹಸರೂ ॥ ೨೬ ॥ ಇತ್ತಲೀಪರಿ ರಣ ಬಳಾಹಕ। ರೊತ್ತತಿರೆ ಪ್ರಾಹಸ್ತ ವೃತಗೊಂ । ಡಿತ್ತಲಾದಾಗಾಗಿ ನಾಜಿಯ ಕಾರ್ಯಲಘುಪರ್ಣೀ ॥ ಬಿತ್ತರಿಸೆ ನೇತ್ರಾಂಜನವ ಕ । ಣ್ಗೊತ್ತಿ ಕಾಣಿಸುತಿರಲು ಜಾನಕಿ । ಗತ್ತಲನು ಭವಗೊಳಿಸುತಿರಲಿನ್ನಿತ್ತ ಲೀರ್ವರೊಳೂ ॥ ೨೭ ॥ ಸಮಕೆ ಕಾದುವೆಯನಲು ಸತ್ವ। ದ್ಕ್ರಮಗೆಡುವು ದೆಂದಂತರಂಗು । ದ್ಗಮಿತ ಶಿಖಿಯಂಗಾಂಗದೊಳಗಿಂದ್ರಾರಿಯಂಗದನೂ॥ ಭ್ರಮೆಯ ಕೆಡಿಸುವ ಭರವಶದಿ ಶರ । ಗಮುಕದಿಂಬಿಟ್ಟ

ಜವ ಖಡಿಯುುವ । ಸವುತೆಯೊಳಗನಿತಿನಿತು ಶರವೆನದಂತೆ ಮುಚ್ಚವನೂ ॥ ೨೮॥
ಮುಚ್ಚಿದವ ಮಾರೆಚ್ಚು ಅವನಂ । ತಿಚ್ಚೆ ಮನದೊಳಗುದಿಸಿ ಬಹಶರ । ಕೊಚ್ಚಿ
ಬಿಲ್ಕೇತನವ ಮರಳಿಸಲಾ ತುರಂಗವನೂ ॥ ವುಚ್ಚದೇಕೋಕ್ತವನು ಪಲವಿಧ ।
ಯುಚ್ಚರದೊಳಿಡಲೆಡೆಗೆ ಬರದಂ । ತ್ಕೊಚ್ಚುತಿಹನಿಂದ್ರಾರಿ ಸತ್ವವದನಿತು ಯಿ
ನಿತಲ್ಲಾ ॥ ೨೯ ॥ ವೊಬ್ಬರೊಬ್ಬರ ಶಕ್ತಿಯೇಳ್ಗೆಯೊ । ಳಬ್ಬಿಸಿದ ಶರವೆರಡು
ಕೋಟಿಯ । ನುಬ್ಬಿಸಿದರಮಲಾಸ್ತ್ರ ವಲ್ಲದಲನಿತ ಶರಶರಧೀ ॥ ವುಬ್ಬಿ ಪ್ರತ್ಯ
ಹತೋರುತಿರೆ ಯುವೆ । ಯುಬ್ಬಿ ನೋಡಿದರವರ ತೊಡು ಬಿಡು । ಬನ್ಬರಿಗು
ಬೇರ್ವಡ ದುಚಿತ್ಕ್ರುತಿಯರಸಚಿತ್ರೈಸೂ ॥ ೩೦ ॥ ಹಿಡಿದ ಬಿಲ್ಲೆಡಗೈಲಿ ನಾ
ರಿಯ । ತೊಡಗಿ ಬಲಗೈ ಶರದಿ ಕಣ್ಣಿವೆ । ಯುಡದೆ ನಿತ್ತಡಿಯುಲ್ಲಿ ಕೈಯುತ್ತಂಗ
ವಲೆಯುದಲೇ ॥ ಶಡೆವ ಬೆಡಗಿನೊಳಿರದೆ ಯಿಷ್ಟರ । ನಡೆಯೊಳೊಂದ್ವರವಿಲ್ಲ
ವೀರ್ವರ । ಕಡುವ ನೋಡರಿಯುದಲೆ ಕೌತುಕ ಗೈಯ್ಯಲಮರತತೀ ॥ ೩೧ ॥
ಆತಗೀತಗೆ ಮಧ್ಯ ಶರಸಂ । ಜಾತವಲ್ಲದಲೈದಿ ಖಡಿಖಂ । ಡಾತವರಿಯುದಲೇಕ
ಸೇತುವೆಯಂತದಾವಾಗಾ ॥ ಲಾತು ಯುಸೆವರೊ ರಣಕೆ ಯುವರೆಯು । ಘಾತ
ರಾ ಕಾಲದಲಿ ಯುವರಿಂ । ದೋತು ಕಲಿವರು ಮಿಗಿಲನಾಯಕರೆಂದನಾ ಮುನಿ
ಪಾ ॥ ೩೨ ॥ ಹಸ್ತವುನ್ನೆಸ್ತಂಬುಗಳ ವಿಂ । ನೆಸ್ತಗೊಳಿಸುವರಲದೆ ತನುವಿಂ
ಗಿಸ್ತಸಮ ಚಳಕದಲಿ ಕಾದುವರರಿದ ದಶಕಂಠಾ ॥ ಮಸ್ತಕವ ನೊಲೆದಾಡಲಂ
ಗ । ದ್ವಸ್ತ ಕೋಪಾರೂಢದಲಿ ಸಮ । ಕುಸ್ತಿಯೇ ಕಪಿಗಸುರ ರೊಳಗೆಂದೈದೆ
ಘಟಕರ್ನಾ ॥ ೩೩ ॥ ಕಂಡುಕೂಡಲೆ ಪಂಚಶರಮುಂ । ಕೊಂಡು ಅಂಗದನೆ
ಡೆಗೆ ಬರುವನು । ಕಂಡು ಕೆವರತ್ಯುಗ್ರಕೋಪದಿ ಸರಳ ಕೆರೆ ಯೇರೀ ॥ ಕಂಡಿ
ಯಿಟ್ಟೊತ್ತಿಚೆತ್ತಿಸಿದ ತೆರ । ಕುಂಡಲಿಯು ರಾಜೀಕದಂತು । ದ್ದಂಡ ಶರಗಳ ಮು
ಚ್ಚಿದನು ಘಟಕರ್ನ ಮಾರುತಿಗೇ ॥ ೩೪ ॥ ಆವರಿತ ಶುಂಟುರೆಯು ತೆರಸು ।
ತ್ತಾವರಿತ ಘನ ಸರಳ ಸಾರವ । ಭಾವ ಗೆಡಸಿದನಸದಳಾಸ್ತ್ರವನಿಟ್ಟು ಮೇಲಾ
ಗೀ ॥ ಭಾವಜನು ಮುಚ್ಚಿದನು ವೈಮಾ । ನಾವರಿತ ಶರಪಂಜರವನುರೆ । ಪಾ
ವಕಾಸ್ತ್ರದಿ ಹರಿಸಿ ವೊರೆದನು ಶೂಲಧರಕರನೂ ॥ ೩೫ ॥ ಇಟ್ಟನಾರಣ್ಯಾಸ್ತ್ರ
ವನು ಮು । ಚ್ಚಿಟ್ಟ ತರುಗುಲ್ಮಾದಿಗಳ ದಹಿ । ಸೊಟ್ಟುತಿಹ ದಾವಾಗ್ನಿಯಿಂ
ದದ ಹಾರಿಸಸಮಾಸ್ತ್ರಾ ॥ ಇಟ್ಟು ಪಾಶುಪಥಾಸ್ತ್ರ ಕೆದುರಾ । ಗಿಟ್ಟ ನುರುಗ
ಪಥಾಸ್ತ್ರವದನಿದ । ಮುಟ್ಟೆ ಮದ್ಯ ದ್ರುಶ್ಯಗೊಳೆ ಘಟಕರ್ನ ಮಾರುತಿಯೂ
॥ ೩೬ ॥ ಮತ್ತೆ ವತ್ತಿ ವಿಯತ್ತಳನಿಲನು । ವೆತ್ತ ಕರಿಹರಿಶರಭನಾದಿ ಸ ।

ಮುತ್ತಿತಾಸ್ತ್ರಗಳಿಂದಲೋರೋರ್ವರಿಗೆ ಅಣಿಯದಲೇ ॥ ಯತ್ತಿದಸುರಾಕಾರ ದಲಿ ಯೇಕೋತ್ತರಭ್ರಾವನಿಗೆ ಆರ್ಭಡಿ। ಸುತ್ತ ಹೊಕ್ಕನು ಅರಿನಿಕಾಯವನಾಗ ಘಟಕರ್ಣ ॥ ೩೭ ॥ ಆತನದ್ಭುತ ರೂಪು ಬಲುಸುರ। ಭೀತಕನಿಲಾತ್ಮಜನ ದಳಸಂ। ಜಾತದೊಳಗಿಂನ್ಯೆದು ಅಕ್ಷೋಹಿಣಿಯು ಧಾತ್ರಿಫಲಾ ॥ ಭೂತಳಕೆ ವುದುರ್ವಂತೆ ಚತುರಂ। ಗೋತು ಮಲಗಿದನರಿದು ಅತ್ಯ। ದ್ಭೂತ ರೂಪಳ ವಡಿಸಿ ತೋರಿದನಿಂತು ನೋಳ್ಪರಿಗೇ ॥ ೩೮ ॥ ಯರಡು ಯೋಜನದುದ್ದತ ದ್ವ್ವ। ತ್ತಿಗಿರಿಯೆ ಭೂತಾಕಾರ ಕೈಕೊಂ। ಡೆರಡು ಕಟವಾಯ್ದಾಡೆ ಕೋಶೋ ಚ್ಛೇದವದರರ್ಧಾ ॥ ಬಿರಿವ ಕೆಂಗುಡ್ಡಿನಲಿ ತತ್ಕರ। ಚರಣ ಸಹಿತಾನೇಕ ವ ಜ್ರ। ದ್ಸರಧಿ ಯರಗಿದ ಕುಂಭಕರ್ನನ ದಳಕೆನನೆಗೋಲಾ ॥ ೩೯ ॥ ಮುಟ್ಟ ದೋರ್ವರ ಕರದಿ ಚರಣದಿ। ತಟ್ಟಿದೋರ್ವರ ನಾಸುರದಸರ। ವಿಟ್ಟು ಕೆಡ ಹಿದ ಹತ್ತು ಅಕ್ಷೋಹಿಣಿಯ ಭಯದಿಂದಾ ॥ ವಟ್ಟು ದಳದೊಳಗಳಿಯಲಿರ್ದ ರು। ಕೆಟ್ಟು ವೋಡಲು ಮಾರುತಿಯ ದಳ। ಬಿಟ್ಟು ವೋಡಿತು ರಾಮರಾವಣ ರೆಡೆಯ ಕಾಣ್ಬನಕಾ ॥ ೪೦ ॥ ಆತೆರದ ರೂಪಿನಲಿ ಶಿರಗಳ। ನಾತರ್ರ್ಯೆನೂರ ದಕೆ ಸರಿಕರ। ವಾತು ಶಸ್ತ್ರಾಂಬುಧಿಯ ತುಳುಕುತಲೆನ್ನ ವಾಹಿನಿಯಾ ॥ ಭೀ ತಗೊಳಿಸುವ ಶಕ್ತಿಯಾವ। ಲ್ಲಾತೆಯಲಿ ಕಪಿಯಸುರನೆಂಬು। ದ್ರ್ರಾತ ಕೋ ಪಾನಳರು ಸಂದಿಸಲತ್ತ ಲಾಹವಕೇ ॥ ೪೧ ॥ ಇವರು ಬರುವರೆಗಂಗದನು ಯಿಂ। ದ್ರವಿಷರೇಳ್ಗೂಳಬ್ಧಿ ಗಂತರ। ಕವಿಷಶಸ್ತ್ರಗಳಿಂದಲುಡ್ಡೀಣಪ್ಲೆ ಪ್ರೋ ಡ್ಡೀಣಾ ॥ ದವಿವಿಶಾರದ ಸಾಮಿನಲಿ ಯು। ಬ್ಬವರು ಬಾಗುವರವರ ಕಲಿ ವಿವ। ರವನು ಮಾಡಲಶಕ್ಯವಾಗಿರಲಲ್ಲಿಗಿವರ್ಯೆದೀ ॥ ೪೨ ॥ ತೋರುತಿಹ ತ ದ್ಭೀಕರದ ಅವ। ತಾರದಲಿ ಸಾಹಸ್ರ'ಕೈಗಳ। ಸಾರಿದನುಪಮ ಶಸ್ತ್ರ ಬತ್ತೀ ಶರಲಿ ಅಂಗದನಾ॥ ಮೇರುವರಿಯಲು ಕುಂಭಕರ್ನಿಂ। ದ್ರಾರಿ ಗಡರಿದ ಮಾರ ಶಸ್ತ್ರೋ। ದ್ಧಾರಗಳನಾವರಿಸಿ ಯವರಿವರಂಕ ಪುಂಖದಲೀ ॥ ೪೩ ॥ ಬಾಹು ಯರಡೆಲ್ಲಿನ್ನ ಸಾಹ। ಸ್ರಾಹ ಭುಜವೆಲ್ಲಸ್ತ್ರಗಳ ಸ। ನ್ನಾಹಗೊಂಡಂತರಲಿ ಹೆಣಗುತ ವಿದ್ಯಗೂರ್ವಣೆಯಾ ॥ ನೂಹಿಸಿದಲಿಂದ್ರಾರಿ ಮಾರಿಯ। ಯಾಹ ರಂಗದ ಕುಂಭಕರ್ನ। ವ್ಯೂಹಗೈದಸ್ತ್ರಗಳು ನೋಟಿಕದಿ ವಿಜರೆಡೆಗೈದೇ ॥೪೪॥ ತಾಳದ ಪ್ರತಿವಿದ್ಯವನು ಕೈ। ಯೇಳಿಗೆಯೊಳಹಿತಸ್ತ್ರಗಳ ಕಿ। ತ್ತೀಳುತಿರಲಂ ಗದನ ಸಾಹಕಿಳೆಯ ನುಂಗುವೋಲೂ ॥ ತಾಳಿಕೋಪಲ್ಲಸ್ತ್ರಗಳ ವ್ಯೆ। ಮೇಳ ಗೊಳಿಸರು ಹಿರದತೆರದೊಳು। ಬೀಳಲೆಚ್ಚ ತ್ರಿಶೂಲದೊಳು ಘಟಕರ್ಣ ವಾಲಿ

ಜನಾ ॥ ೪೫ ॥ ಬಿದ್ದಮೂರ್ಛೆಯೊಳಂಗದನು ಯೆನು । ತದ್ದೆ ಜಯಘೋಷ
ಸುರಸೇನೆಯು । ಬದ್ಧವಣ ರವಗೇಳಿ ಮಾರುತಿಯಿಂದ್ರಜಿತುಶಸ್ತ್ರಾ ॥ ದುದ್ಧತ
ಬ್ಧಿಯಹೀರಿ ಬಹುಶ । ಸ್ತ್ರೊದ್ದಿಸೊಜ್ರಾಸ್ತ್ರಿಟ್ಟ ಮೂರ್ಛಿಸೆ। ಬಿಟ್ಟನಿಂದ್ರಾರಂ
ದುಕೂಗಿದವಲ್ಲಿ ಕಹಳೆಗಳೂ ॥ ೪೬ ॥ ಇಟ್ಟು ಪಾಲಕಿಯೊಳಗೆ ಛಾದನ ।
ಗೊಟ್ಟು ಮೂರ್ಛಿತರಂದಣಕೆ ಹೆಗ । ಲಿಟ್ಟು ಸಾಗಿಸಲಾಪ್ತರೆಡೆಯೊಳಗಿರ್ದ ಆ
ಳುಗಳೂ ॥ ನೆಟ್ಟೆಸಿದನವನಿವನ ಸರಿಸಮು । ವಿಟ್ಟಶಕ್ತಿಗೆ ಬಲ್ಗಥೆಯ ನಳ ।
ವಟ್ಟು ಯಿಳಿದರು ಕೈಯ್ಯಸರಿಸಕೆ ಮಾರುತಸುರೇಂದ್ರಾ ॥ ೪೭ ॥ ಮೆಟ್ಟದಡಿ
ಯುಗಲದಲೆ ಗಥೆವಲೆ । ದಿಟ್ಟು ವೋರೋರ್ವಗ್ರದಲಿ ಶಳೆ । ದಿಟ್ಟಗಥೆಗಥೆಗಳ
ನು ತಾಗಿಸುತಗ್ರವುಟ್ಟೆಸದೇ ॥ ಕುಟ್ಟಿತಟ್ಟಿಟ್ಟಾಡಿ ಗಡೆಕಾ । ಯ್ದಿಟ್ಟ ಹಾರೆ
ಯೊಳೆಗೆದ ಖಿಡಿಹಾ । ರಿಟ್ಟವಾ ರಣಮಧ್ಯದಗಲದಿ ಮಿಂಚುಬುಳದಂತೇ॥೪೮॥
ಬೊಗ್ಗಿ ಜಗ್ಗಿಸಿ ಯುಗರಿ ಹಾರಡಿ । ನುಗ್ಗಿ ಹೊಳೆಹೊಳೆದೊಮ್ಮೆ ಮೇಲಿಂ।
ಬೊಗ್ಗಿ ಮಸ್ತಕಕಿಳುಹತತ್ತಲ್ಲಟ್ಟೆ ಕೈಕಾಲಾ ॥ ಕುಗ್ಗಿಯಡೆ ಮಸ್ತಕಕೆ ತೋ
ರೆಡೆ। ಬೊಗ್ಗಿ ಮಧ್ಯಕ್ಕೊಗೆವ ಸಾಹಸ। ರಗ್ಗಳವನೆವೆಯಲುಗದಮರರು ನೋ
ಡಿ ಮೆಚ್ಚಿದರೂ ॥ ೪೯ ॥ ಆಗ ರಣದೊಳು ಬಿದ್ದ ಹೆಣ ಸಂ । ಪಾಗಿ ತಿನು
ತಿಹ ಮರುಳು ತಂಡಗ। ಳಾಗಲಾ ರಣರಂಗದೊಳಗವರ್ಗಥೆಯ ಖಿಡಿಮುಚ್ಚೀ॥
ತಾಗಿಸಲಂಜೆಲ್ಲಮರುಳ್ಗಳು । ಬೀಗಿದವು ಅನಿತದ್ಭುತದ ಕೈ । ಸಾಗಿನೊಳು
ಹೊಡೆದಾಡೆ ಘಟಕರ್ನನಿಲನಂದನರೂ ॥ ೫೦ ॥ ಕಚ್ಚುತಿಹರ ವಡವಡಯು
ನಗಿವ । ನುಚ್ಚನಾದಿನ್ನಾವ ತೆರವಿವ । ನೆಚ್ಚ ಗೊಳಿಸುವೆನೆನುವರಾ ಗಥೆ ಸಾಮ
ಗ್ರೈಯ್ಯುತಲೇ ॥ ಗಚ್ಚಿಪಗು ಕೋಶಾಂತರಟ್ಟಾ । ಗಚ್ಚಿಸುವ ರೋರೋರ್ವ
ರನು ಬೆಂ। ಬುಚ್ಚಿಯಟ್ಟಾಡಿದರು ಅರೆಝಾವವನಿನಾಯಕನೇ ॥ ೫೧ ॥ ಮಿಂ
ಚದೋರ್ವರ ಹಸ್ತಗಳಿಗನು । ಸಂಚಿಸದೆ ಸಲೆ ವಿದ್ಯ ನಿಪುಣ। ಗೊರ್ಂಚಿ
ನಲಿ ಬೆಳಗರಿಯುದಾಹವ ಗೈಯ್ಯಲಾಖಿಡಿಯೇ ॥ ಚಂಚಲಿನ ರಶ್ಮಾಗಿ ಯಿರೆ
ರವಿ । ಮಿಂಚಿದೆನುತಿತ್ತೆರದ ಕಹಳೆಯು । ಚಂಚಲಿಪ ರವಗೇಳಿ ಚಿಚ್ಚವರೀ
ರ್ವರೀಕ್ಷಿಸುತಾ ॥ ೫೨ ॥ ವತ್ತುತಿಹ ನಿಸಿಯರಿದು ನಿನಪು । ಣ್ಯತ್ತ ಸಾಮ
ರ್ತ್ಯಂದು ತಾವನು । ಪೆತ್ತ ವೈಕೂರ್ವಣವನಪಹರಿಸಿಂದಿ ಗೈದೆಂದೂ ॥ ಚಿತ್ತ
ಕಿಂಚಿತ್ಸ್ವೈದು ತಮಬಲ। ದೊತ್ತಿನಲಿ ಮಹ ರಾಜರೊಡನೈ । ದುತ್ತ ಪೊ
ಕ್ಕರು ಬೀಡನರುಹಧ್ಯಾನ ಲೀನದಲೀ ॥ ೫೩ ॥ ಕಲಿಲಹರ ಮುನಿಸೂವ್ರತಾಂ
ತ್ಯದಿ। ಚಲಿತರಾದಾ ರಾಮಲಕ್ಷ್ಮಣ । ರೊಲವಿನೀಕರ್ನಾಟ ಕಾವ್ಯಕೆ ಶ್ರೇಷ್ಠ

ರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೫೫ ॥

ಅಂತು ಸಂಧಿ ೬೩ ಕ್ಕಂ ಪದನು ೩೬೭೪ ಕ್ಕಂ ಮಂಗಳಮಹಾ ಶ್ರೀ ಶ್ರೀ

ಅರವತ್ನಾಲ್ಕನೆಯ ಸಂಧಿ.

ತಾಟಕಿ ಜಗಳದ ಸಂಧಿ.

ಬಂದು ಆ ರಾತ್ರಿಯೊಳು ತಾಟಕಿ । ಹಿಂದೆಯಾಸುರೆ ಸೂರ್ಪನಖಿಸಹ। ಕೊಂದು ಬಹುದಳ ಕಟ್ಟು ವಡೆದರು ವಾಲಿಜನಿಲನಲೀ ॥ ಪಲ್ಲವಿ ॥

ಧರಣಿಪತಿ ಕೇಳರಘಳಿಗೆ ದಿನ । ಕರನು ಯಿರಲಿಲ್ಲೆಂಬ ಚಿಂತೆಯ । ನೆರೆದ ಮಾರುತಿ ಕುಂಭಕರ್ನರು ಕರ್ತುಗಳ ಕೂಡೇ ॥ ತೆರಳಿ ನಿಜಬೀಡಿನೊಳು ನೃಪರಿ । ತ್ತೆರದಿ ಕುಳಿತಳಿದುಳಿದ ದಳಕನು । ಗರೆದು ಭೂಷಾವಳಿಯ ಮನ್ನಿಸುತಿರಲು ಮತ್ತಲ್ಲೀ ॥ ೧ ॥ ಅಳಿದ ದಳವೆನಿತೆನಲು ಕಪಿವರ। ರೊಳಗೆ ಯೆಂಟಕ್ಷೋಣಿ ಯಿಂಮಡಿ । ಯೊಳಗೆ ರಕ್ಕಾನೀಕಿನೆಯೊಳಳಿದಧಿಕ ವಾಹಿನಿಗೇ ॥ ವಳಗೆ ಬಳಲಿದ ರಘುಜ ದಶಸಿರ । ಗಳವ ಕೊಡಹಿದನೆನಿತು ಅಸದಳ । ಕೊಳಗುಳಿಂದಿನೊಳೇನು ಫಲಪಿಲ್ಲೆಂದು ಮರುಗಿದರೂ ॥ ೨ ॥ ಆನಿತರೊಳು ತಿಳಿದೆದ್ದು ಮೂರ್ಛೆಯ । ವನಚರಾಧಿಪನಂಗದನು ರಘು । ಜನಿಗೆ ಪೇಳಿದನಿಂದು ಘಟಕರ್ನೈದಿ ಮೋಸವನೂ ॥ ಅನುಕರಿಸಿದಲದಿರಲು ಯಿಂದ್ರಹಿ। ತನನು ಸಂಹರಿಸದಲೆ ಬರೆನಾ । ಳಿನೊಳು ನೋಡಸುರಾರಿಯನಲಂಗದನು ಬಹು ಛಲದೀ ॥ ೩ ॥ ಆಗಲಿತ್ತಿಂದಾ್ರರಿ ಮೂರ್ಛೆಯ । ನೀಗಿ ಮಾರುತಿಬಂದು ವಿಸ್ಮಯ । ತಾಗಿಸಿದ ನಲ್ಲಂಗದನ ಹೆಡಕಟ್ಟು ಸಹವಾಗೀ ॥ ಸಾಗಿಸೈತಹೆನದರ ಸುದ್ದಿಂ। ನೀಗಲೇತಕೆ ನಾಳೆ ಆರಣ । ದಾಗಮುರುಹಕ್ಕೆಂದ ನಿಂದ್ರಾರಸುರ ನಾಯಕಗೇ ॥ ೪ ॥ ಮಾರುತಿಯು ಘಟಕರ್ನನಂದಿನು। ಧಾರಗೈದು ಗ್ರಾಹವದ ಕಡು। ವಾರಿಗನುವಡದಿಂದಿನೊಳಗೆಮ ಕುಲದ ಚತುರಂಗಾ ॥ ನಾರಿ

ಪುತ್ರಾದಿಗಳು ಸುಖ ಸ । ತ್ಕಾರಬಟ್ಟರೆ ಯಿಂದಿನಿರುಳೊಂ । ದ್ಕಾರಣಕ್ಕೆನೆ ಬ್ರಹ್ಮರಾಕ್ಷಸ ಕುರಿತು ಶಿಷ್ಯರನೂ ॥ ೫ ॥ ಭೂತಪ್ರೇತ ಪಿಶಾಚಶಂಖಿನಿ । ಜಾತಿಗಳಿಗಾ ಕರ್ತುಕೇಳ್ದುದ । ಕಾತೆವ್ಯೆ ಆಮೋದಿಂದಿನೊಳಗೀ ರಾತ್ರೆಯಾಹಾಂತಾ ॥ ಘಾತವೇನೆನಲುಲಿವ ಮಾತಿಂ । ನೇತಕೀಗೆಲ್ಲರಿವರೆಮಗಾ । ಮಾತು ಬೇಡೆಂದುಲಿವ ರಾಕ್ಷಸಗೆನಲು ಅವರಿಂತೂ ॥ ೬ ॥ ಕೇಳ್ವರಾರೆಮನಾರಿಗಾವಿಂ । ನ್ಪೇಳ್ವುದೇಕೀ ಸಂಶಯುವ ಮನ । ದಾಳ್ವರೇನಾವೆರವೆ ನಿಮಗನುಕೂಲವಾಗದಲೇ ॥ ಬಾಳ್ವರೇನಹೊ ಬ್ರಹ್ಮರಾಕ್ಷಸ। ಪೇಳ್ವುದೆನೆ ನಿಶಿಕಾಲಮರ್ಮವ। ಪೇಳ್ವದನುಚಿತವೆಂದ ರಾಕ್ಷಸಗವರು ಮತ್ತೆನಲೂ ॥ ೭ ॥ ಕೂಡಿದೀ ನಿಶಿಯೊಳಗೆ ಸಂಚರ । ಮಾಡುತಿಹರಾರೇನು ಮರ್ಮವ । ನಾಡುದೆನೆದಿವದಲ್ಲಿ ಕೈಗಳ್ಲೆಸಗೆ ನೀಕ್ಷಿಸುತಾ ॥ ಆಡುವದು ರಾತ್ರಂತರಂಗವ । ನಾಡಬಾರದ ನೀತಿಯುಂಟಾ । ಗಾಡಸಲ್ಲೆನೆ ಬ್ರಹ್ಮರಾಕ್ಷಸನಾಗ ಶಿಷ್ಯರಿಗೇ॥ ೮ ॥ ಇರಲಿ ನೀತಿಲ್ಯಾರು ಬಹರಿ । ಲ್ಲೊರೆವುದೆನಲಾ ಸೂರ್ಪನಖಿಯಾ । ವರಜೆ ಸಹ ರಣಕೈದಿ ಗೈವಳಗಾದ ಕಗ್ಗವನೂ ॥ ವರಗಿ ಬಹು ಕಪಿನಾಯಕರು ಪ। ರ್ವರಿಸುವುದು ನಮಗೆನಲು ಆರಣ । ಧರೆಯೊಳುರುಳಿದ ಶಬದಿ ಮೂರ್ಛಿತ ತಿಳಿದು ಅದಕೇಳೀ ॥ ೯ ॥ ಮೆಲ್ಲನೈದಂಗಜಗೆ ಆನುಡಿ । ಯಲ್ಲ ತಿಳಿಸಲು ದಳದ ಸನ್ನಹ। ದಲ್ಲಿ ತಿಳಿಸದ ದಾಶರಳಿಗಳಿಗಂಗದನು ಸಹಿತಾ ॥ ಪುಲ್ಲಶರನಿರಲತ್ತ ದನುಜೇ । ಶಲ್ಲರೊಳಗಾಹವದ ಮಾತುಗ । ಳಲ್ಲಿ ಯಿಂಲಲಿಗೈದೆ ನಾಸಚ್ಛೇದ ಸೂರ್ಪನಖೀ ॥ ೧೦ ॥ ತಂಗಿ ತಾಟಕಿ ಸಹಿತಲೊಂದಿಸಿ । ಹೆಂಗಳಾಖ್ಯನ ಬೇಡ ನೀನಿನ । ತಂಗಿಯರಿಗಿಲ್ಲಹಿತ ಭೀತೀರಾತ್ರಿಯೊಳಗೊಯಿರೀ ॥ ಅಂಗ ಸಿಸ್ಸಂಗಿಸುವೆ ನೀರಣ । ರಂಗಕಪ್ಪಣೆ ಯಾಕಬೇಕೆನು । ವಿಂಗಿತಕೆ ಪ್ರತಿಯೋಕ್ತವಿಡೆ ಮನಮುರುಗಿ ದಶಕಂಠಾ ॥ ೧೧ ॥ ಯಾರ ಲಕ್ಷಕೆ ತಾರದಿಹ ಯಿಂದ್ರಾರಿ ಘಟಕರ್ಣಾದಿಗಳಿಗೊಶ । ದೋರದಸದಳವೈರಿ ಸಂಗರ ವಶವೆ ನಿಮಗಲದೇ ॥ ಪೂರುವದ ರಣದೊಳಗೆ ನಾಸವಿ । ಹಾರಿಸಿಹ ರಾತ್ಮೇಶರನು ಸಂ । ಹಾರಿಸಿಹರನುಜಾತೆಯರೆ ಬೇಡಾನೆ ಸಾಲ್ವದಕೇ॥ ೧೨ ॥ ಸತ್ತ ಪ್ರಿಯರೊಡನೈದ ಬೇಕರಿ । ಕುತ್ತವರಿಯಲ್ಕಿರ್ದವೀಗಿನ । ಹೊತ್ತ ನೋಡಿದರೇಕೊ ಯಮ ವಶಕಿರ್ದ ಜಯಲಕ್ಷ್ಮೀ ॥ ಅತ್ತ ಸೇರುವೊಲಿಹಳು ಮರಣಿಂ । ನೆತ್ತ ತಪ್ಪದು ಕೀರ್ತಿ ಯೊಳಗಳು । ವೆತ್ತರೂ ಸರಿ ಸತ್ತರೂ ಸರಿ ಕಳಹು ಅಗ್ರಜನೇ ॥ ೧೩ ॥ ಅಪ್ರತಾಪಳೆ ರಣಕೆ ನಿನಗಿಂ । ದುಪ್ಪರಿಲ್ಲಹುದಾಗಿ ಯವರಿಂ । ನಪ್ರತಿಮರೊಶ

ವಾದ ಮಾರುತಿ ಅಂಗದಾದಿಯರಾ ॥ ಸಪ್ರಯುತದಿಂದಗ್ನಿಗನಿಲನ । ಕ್ಷಿಪ್ರವಾಗಿಹುದೇನೊನಿಮಮನ। ಕಪ್ರಪಂಚವನೋಡಿ ಗೈಯ್ಯನಲಸುರ ಭಗಿನಿಯೊಳೂ ॥೧೪॥ ತೆರಳುವದೆ ಸರಿಯೆಂದುಹೊರಟಾ । ವರಜೆಸಹಪ್ರಳಯಾಂಗಭೈರವಿ। ತೆರನು ಮಾರಿಯ ರೂಪನಳವಡಿಸೇಳು ಮಾರುಗಲಾ ॥ ತೆರದ ಬಾಯಾರಾರು ಮಾರುರು । ತರದ ಕೋರೆಗಳಗ್ನಿ ಭಾಸ್ಕರ । ಕರನ ನಯನತಿಕರಿಯ ವಿಗ್ರಹಕೆದರಕುಂತಳವೂ ॥ ೧೫ ॥ ಏಳುತಾಳೆಯಮರದವುನ್ನತ। ತಾಳಿ ಕಾಸಿಯ ಬಿಗಿದು ಹರಿಗೆಯ । ಬಾಳವನು ಕೈಕೊಂಡು ಪೇರೊರಲಿಂದಲರಿಬಲಕೇ ॥ ಘಾಳಿಪೊಕ್ಕಂತುಗ್ರಸತ್ವಾ । ಯ್ದಾಳಕೊಚ್ಚೊಳಪೊಕ್ಕು ಮಾರಿಯು ! ತೂಳಗೊಂಡೆಂತೆಲ್ಲ ಯಡೆಯೊಳು ಕುಣಿಯೆ ಭೂತಗಳೂ ॥ ೧೬ ॥ ಕೊಚ್ಚಿಕೆಲರನುಕೂಗಿನೊಳು ಬಹು । ಬೆಚ್ಚಿಸನ್ಯರನಗ್ನಿವಿದ್ಯೆಯು । ಹಚ್ಚಿಕೆಲರಿಗೆ ಗುಂಡು ಕೆಂಡದ ಮಳೆಯನಾವರಿಸೀ ॥ ಮುಚ್ಚುತಿಹ ಕೆಂದೂಳು ವಿಗ್ರಹ । ಬಿಚ್ಚುತಿಹ ಹರಿವ್ಯಾಘ್ರ ಅಟ್ಟ । ಟ್ಕಚ್ಚುತಿಹ ಅಹಿಸಾರಸಹ ನಿರ್ಮಿಸಿದರಾಕ್ಷಣದೀ ॥ ೧೭ ॥ ಅಹಿತ ದಳಕಪ್ರತಿ ವಿಘೂರ್ಣೆ । ಸಹಸದಿಂದಿರಿ ಹೊಗೆಯು ನಾನಾ । ಗ್ರಹಿತದಿಂ ಮೃತಮೂರ್ಛೆಗೊಳುತಿಹರಖಿಳ ದಳವೆಲ್ಲಾ ॥ ಸಹಿಸಲಾರದಲುಳಿದ ದಳವೋ । ಡುಹಡೆ ಮಾರ್ಗಿರದಕ್ಷಿಗಳ ಮು । ಚ್ಚುಹರದಲ್ಲದಲುಸುರುಹೊರಡಲಲ್ಲೆ ಕಂಗೆಡಲೂ ॥ ೧೮ ॥ ನೋಡಲೆಲ್ಲೆಲ್ಲುರಿಯೆ ಮೃಗಗಳ । ಕಾಡಿನಂತೆಲ್ಲೆಲ್ಲಿ ಅಜಗರ । ಬೀಡಿನಂತಾಷಾಢಮಾಸದ ಆಂತ್ಯದಂತೆಲ್ಲೀ ॥ ಗಾಢಸಂಗಟಕವಿದು ಆರ್ಭಟೆ । ಮಾಡಲನುವಿರದೆಲ್ಲ ತಳವಳ । ಮಾಡಿ ಪಾರಾಡುವರನಲ್ಲಲ್ಲರಿದು ಗಜಬಜೆಯಾ ॥ ೧೯ ॥ ತೃಣಗೃಹಕೆ ಆವರಿಸಿದಗ್ನಿಯ । ಕಣದ ಸಂಚಯದಂತೆವಾಹಿನಿ । ಬಣಬೆಗಡರಿದ ಬೇಗೆ ಅಚಲದ ಕಾಡಗಿಚ್ಚಿನೊಳೂ ॥ ಮುಣುಗಿವರಲುವ ಮೃಗಗಳೆನೆ ಸಂ । ದಣಿತವಾಹಿನಿ ಬಲ್ಸರವು ಕಪಿ । ಕುಣಿಗಳಾವರಿಸೈದೆ ಬಹರಿಗೆ ನೃಪರುದೂಸಿಳಿದೂ ॥ ೨೦ ॥ ಬರಲು ಬಹಿರಿಗೆ ದೂಸ ಬಿಟ್ರುಘು । ವರರು ಸೇನಾವನವ ದಹಿಸುವ । ವುರಿಯ ನೋಡತಿಮರುಗಿ ದಿಕ್ಕಿಲ್ಲೆಂಬರವಗೇಳೀ ॥ ಶರಧಿಸಹ ಲಂಕೆಯನೆ ದಹಿಸ । ಲ್ಬೊರೆದ ಕೋಪಾಕ್ಷಿಯಲಿ ಕಡು ಕೆಂ । ಡ್ತುರಗಲರಿದಣುಮಾನ್ಯನಂಗದ ಜಂಬುಸುಗ್ರೀವಾ ॥ ೨೧ ॥ ತಿಳಿದು ಮೊದಲೆ ಮದೋತ್ಥದಲಿ ದಳ । ಬಳಲಗೈಲಾವಾದುದೀ ನಿಶೀ । ಖಳರ ಕಾರ್ಯಸ್ಪರದು ದೇವರು ಕೋಪವನುಗೊಳಲೂ ॥ ತುಳಿಯೆವೇ ತಾಟಕಿಯ ರೆಂದಡಿ । ದಳೆದು ಮುಂದಕೆ ದೈತ್ಯ ವಿದ್ಯ । ದ್ದೊಳವನಪಹರ ಶರವನೆಸೆದರು

ದಿಕ್ಕುನಾಲ್ಕರಲೀ ॥ ೨೨॥ ಪೋಗಿವೊಂದೊಂದೆಸೆಗೆ ಪರವಿ । ದ್ಯೇಗಿಸುತಲಾ
ಗುಳಿದ ಜನಗಳ । ರಾಗಿಸುತಲಭಯಸ್ತ ವಚನವಿ ನೋಡಲೆಲ್ಲೆಲ್ಲಾ ॥ ಬಾಗಿ
ದಶ್ವಾಳಾನೆಚರಸಾ । ಪಾಗಿ ಮಲಗಿರಲಳಿದರೊಳು ಮೂ । ರ್ಭಾಗಿಹರತದ್ವಿದ್ಯ
ದೊಳಗೆಚ್ಚರಿಸುತೈತಂದೂ ॥ ೨೩ ॥ ನೋಡಲೆಲ್ಲಾ ವಿದ್ಯ ವಿಸ್ಮಯ । ಗೂಡಿ
ದೈತ್ಯಾನೀಕಿನಿಯ ವ್ಯೆ । ನೀಡಿದಂತೆಲ್ಲೆಲ್ಲು ಅದ್ಭುತದುಗ್ರಮಾರಿಯರಾ ॥ ನಾಡಿ
ನೊಳಗಟ್ಟುಳಿಯ ಬಡುತಿಹ । ಬೀಡನರಿದಕ್ಕಿಂಗರಿಯ ಗೋ । ಲ್ತೀಡಿದರುಕು
ಸುಮಾಸ್ತ್ರನಾದಿಯ ನಾಲ್ವರಸದಳರೂ ॥ ೨೪ ॥ ಅಟ್ಟೆ ಸರಳಿನಮಾಲೆಯನೆ
ವ್ಯೆ । ಗಿಟ್ಟು ಮುಚ್ಚಿದರಾಗಲವೆಗರಿ । ಗಟ್ಟಿದಂತೊಯ್ಯೂರ್ವಣ ಸುರೆಯಂಾ
ಲಿಜಾಂಬವನಾ ॥ ಮುಟ್ಟಿಬಿಡುತಿಹ ಸರಳುಗಳ ಖಡಿ । ದೊಟ್ಟಿ ಸುಗ್ರೀವನಿಗು
ಮೇಲ್ಕವಿ । ದಿಟ್ಟು ನುಂಗುವೆನೆಂದು ಬಂದರು ಬಿಟ್ಟ ಸೂಟಿಯಲೀ ॥ ೨೫ ॥
ಪಿಡಿದ ಖೇಟದೊಳಿಟ್ಟು ಬಾಣಗ । ಳಡಗಿಸುತ ಮಿಂಚಿದಪೆ ಖಡ್ಗದಿ । ಖಡಿದು
ಮಾರ್ಪುಲತ್ತೈದುತಿಹ ಮಾರಿಯರ ಸಾರುವೆಯಾ ॥ ಸೆಡಸಲಸದಳವಾಗಿ ತತ್ತ
ರ । ಗೊಡುತ ಪಿಂಮೆಟ್ಟಿದರಕಂಡ । ತ್ನಡೆದನಾ ಸೂರ್ಯೆಯನು ನಿಲಿರೆಲೆಮಾ
ರಿರೆಂದೆನುತಾ ॥ ೨೬ ॥ ಇಟ್ಟು ಪಿಂಗಡೆ ಜಾಂಬವರ ಮುಂ । ದಟ್ಟನಿಂದಂಗದ
ನು ಕೈಬಹು । ಪೆಟ್ಟಿಗಂತರಿಪಸುರೆಯರ ತದ್ವಿದ್ಯಭೇದಿನಿಯಾ ॥ ನಿಟ್ಟುಬಯು
ಲ್ಗೈಲೋರ್ವ ತಾಟಕಿ । ದಿಟ್ಟವರಿದಂಗದನು ನಿನಕ್ಕೈ । ಮುಟ್ಟಿಯೇಕೊಲಲ್ಯೆ
ದುಮಾತುಳನನುಜೆ ಯನೆಕೇಳೀ ॥ ೨೭ ॥ ನುಂಗುವೆನು ಸುಗ್ರೀವಜಾಂಬವ ।
ರಂಗುಳವ ಸೋಕಿಸದಲೆನ ರಣ । ರಂಗಕೇನುದ್ಯುಸ್ಯನೀಬರದರಿಯಂದದಲೀ ॥
ಪಿಂಗುದಾಯಾದ್ಯರನು ನೀನೇ । ಭಂಗಿಸುವದಲದೆನಗೆ ಅಡ್ಡೈ । ದಂಗಿಕರಿಪ
ರಿಕಂಟಕರಿಗೆನಲಸುರೆ ಯಂಗದಗೇ ॥ ೨೮ ॥ ಈ ನಡೆಯು ನಿಮ್ಮಲ್ಲಿ ನಿನಪ್ರಿ
ಯ । ಗಾನಿ ಬಂದಾರಣಕೆ ದಶಮುಖ । ನಾನು ಯನುತ್ತೈದರಿದು ಸೀತೆಯ ನಿ
ಮ್ಮನೊಪ್ಪಿಸಿದಾ ॥ ಹೀನಬುದ್ದೆನಗಿಲ್ಲವವರಿಂ । ದಾನುಯಂನಾಹವದಿ ಪ್ರಾಣ
ಭಿ । ಮಾನಹಾನ್ಯಾಕೈದು ತಾಟಕಿಯುಂದನಂಗದನೂ ॥ ೨೯ ॥ ನಿಂನಪುರುಶನ
ವಾಯ್ತುನಾಸಾ । ಭಿಂನೆಯಲ್ಲೆನಲೆಲ ಹಸುಳೆವ । ರ್ಮಾನುವುದ್ಘಾಟಿಪೆಯು
ಕೋಪಿಸಲೆನ್ನ ಕೈಸರಿಸಾ ॥ ಕನ್ನನಿಲುವೆಯಸಾಕು ನಡೆದಾ । ಗನ್ನಗತಕರಕೆ
ಳುಹು ಆಹಗೆ । ಯನ್ನು ಕಳವೆನು ದಾಶರಥಿಗಳನೆನಲು ತಾಟಕಿಯೂ ॥೩೦॥
ಅಕ್ಕನಾಗಿಹ ಸೂರ್ಪನಖಿಕಂ । ಣೆಕ್ಕಿ ನಾಶಚ್ಛೇದಗೈಸೇ । ನಿಕ್ಕುದೇನಿನಘನವು
ವರ್ನೋೀದ್ಘಾಟವಲ್ಲದಲೀ ॥ ಇಕ್ಕುದೇನಾ ರಾಘವರ ಬಳಿ । ಸೊಕ್ಕಮುರಿಸು

ವಯೋಗ್ಯಳೇ ಯಿ। ಲ್ಕುಕ್ಕೆನೇಯಲೆ ತಾಟಕಿಯೆವೋಡೆಂದನಂಗದನೂ॥೩೧॥
ಮುರಿವನೇರಘು ಸೊಕ್ಕ ನೀನೆಂ । ತೆರಳಿಪನೆ ಕಪಿ ನಿನ್ನ ಶೌರ್ಯದ । ತೆರನ
ತೋರೆಂದಾಕರಿಸಿ ಮೂಕೊರಚಿ ಅನುಜಾತೇ ॥ ಯರಗಿಸೀಳುವೆನೆಂದುಖಡ್ಗವ।
ಝುಗಿಸಿದಳ ಕೈಗಡಿಯಲೆಡಗೈ । ಧರಿಸಿ ಮೂಳರಿಯಂದು ಪಾರ್ದಳದೊಳಗೆ
ತೂರಿದಳೂ ॥ ೩೨॥ ವದೆದುಚರಣದಿ ಮುಂಡಗೈಯ್ಯೊಳ । ಗೆದೆಗೆತಿವಿದಸ್ತ್ರ
ದಲಿಕೊಚ್ರವ । ದದಿರಿಸುತ ಬಹುಸೇನೆ ಸಂಹರಗೈವ ತಾಟಕಿಯಾ ॥ ಯದು
ರೆಗೊದಗೆಲೆಕಳೆನಿನಕ್ಕೆ । ಯುದಟತೋರಿದೆ ಸಾಕು ಯನುವಂ। ತದನು ಕೇಳ
ಲ್ಲಿಂದ ಪಾರಿಡಳೇಕೆ ಬಂದೆಂದೂ ॥ ೩೩ ॥ ಅಟ್ಟಿದನು ಬೆಂನೊಡನೆ ದಳಬೀ।
ಡಿಟ್ಟ ಬಿಡುವಿನೊಳೋಡುತಿಹ ಕಳೆ। ಯಟ್ಟಿಬಿಗಿಡನು ನಾಗಪಾಶದಿಛಳಿತುಸಾ
ರಾಡೀ ॥ ಕಟ್ಟುವನಿತರಲೆರಡು ಅರ್ಭುದ । ಹೊಟ್ಟಗೈದಳು ದಳವನೆಲ್ಲೈರೆ ।
ಯಿಟ್ಟು ವೀರಾಧಿತನ ವಶದೊಳು ತಿರುಗಿದಂಗದನೂ ॥ ೩೪ ॥ ಹತಿಸಿವೈರಿಗ
ಳೆಂನಮುನಕನು। ಮತಿಯುಗೊಳಿಸುವೆನೆಂದು ಬಂದಿಹ । ರತುಳಗೆಡಿಸಿದನೆನುತ
ಲಿರ್ದ್ದಂತರದಿ ತಾಟಕಿಯಾ ॥ ಸುತನು ಸೌಂಧರನೆಂಬರಕ್ಷ । ದ್ಧತದೊಳ್ಳೆದಂ
ಗದನಮೇಲ್ವರಿ । ದತಿಕುಪಿತದೊಳು ಮುಚ್ಚಿದ ಬಿಚ್ಚ ಕಂತೆಗಳಾ ॥ ೩೫ ॥
ಕುಟ್ಟೆದಗ್ರದಿ ಕಣೆಗಳನು ಸೋ । ರಿಟ್ಟ ಚಕ್ರಾದ್ಯಲ್ಲಶಸ್ತ್ರಗ । ಳಿಟ್ಟು ಬೊಬ್ಬೆ
ಯನಿಟ್ಟು ಕೈಕಾಲಾಡದಂತಹಿತಾ ॥ ನಟ್ಟಬರಲಾತಿರುವ ಶಸ್ತ್ರದ । ಬೆಟ್ಟೆಯ
ವನಾರೆಂಬುದನು ಬಡ। ದಿಟ್ಟಸಂಶಯದಿಂದ ಮಹತಾಪೆತ್ತಿಸಂಗದನೂ ॥೩೬॥
ಕೂಡಲಿಟ್ಟನು ಪೂರ್ಣಬಿಂಬದ । ನೋಡಿಶರವನು ಕವಿದ ಕತ್ತಲೆ। ಯೋಡ
ಲಂತರದಿರುವ ತಾಟಕಿಸುತನು ಸೌಂಧರನೂ ॥ ನೋಡಿಕಳ್ಳೆಯಮುಗನೆಸಹಜೊ
ಡ। ಗೂಡುವದೆ ಖಳವಂಶವನು ನಿ। ರ್ಕ್ಕೊಡಿಯೋ ಜೀಗೋಡಿಯೋ ಹೇ
ಳೆಂದನಂಗದನೂ ॥ ೩೭ ॥ ಸತ್ತರೇನೆಲ ನಿನ್ನಹತಿಸದ। ಲೆತ್ತಲೊಲೆಯಂದ
ನುಪಮಾಸ್ತ್ರದ । ಮುತ್ತಿಗೆಯಗೈದಸುರ ಕೇಳ್ಕೈಮರೆದ ಸಮಯದಲೀ ॥ ಕ
ತ್ತಲೆಯು ಕೈಗೂಡಿ ನಿನಕ್ಕೆ। ಬಿತ್ತರರಿಸಿದೆ ಯಿಾಗನಿನಸಿರ। ವೆತ್ತುಗೊಡುವೆನೆ
ಮೂಳನರಿಯಂದಿಟ್ಟನಂಗದನೂ ॥ ೩೮ ॥ ಅಹಿತನಸ್ತ್ರದೊಳೊಂದುನೆಟ್ಟನೆ।
ಗಹಿಸವಂತಂತರದಿ ಹಾರಿಸಿ । ಗ್ರಹಿಸಿವೈಲೈತಹವ ಶರಮೂಡಿಗೆಯಕಾರ್ಮು
ಖವಾ ॥ ದಹಿಸಿ ಖರಕೇತನವ ಖಂಡಿಸಿ । ಗಹಿಸುವನೊ ಬಂದಡಿಗೆ ಆನತ।
ವಹಿಸಿ ಬದುಕವನೆಂದನಂಗದ ವಿರತಸೌಂಧರನಾ ॥ ೩೯ ॥ ಪಿಡಿದುಬದಲಾ
ಸ್ತ್ರದಲಿ ನಿನಕೆಡ । ಬಡಿವೆನೆಂದಡ್ಡಾಯುದರಿಗೆಯ । ಪಿಡಿದು ಬರಲಾ ಖಡ
ಗ

ಹರಿಗೆಯ ಹಸ್ತ ಖಂಡಿಸಲೂ ॥ ಅಡಿಯೊಳೊದೆವೆಂದ್ಯೆದೆ ತೊಡೆಗಳ । ಖಡಿಯ
ಲಾಲ್ಪಲ್ಲಿನಲಿ ಖಡಿವೆಂ । ದಡರುವನ ಯದೆಗಿತ್ತು ನಾಗಪತಾಕಶಸ್ತ್ರವನೂ॥ ೪೦॥
ನತ್ತಿಯುರದೊಲು ಡೊಂಬಲಾಘವ । ನೆತ್ತಿದತ್ತೈತಂದು ದಶಸಿರ । ನೊತ್ತಿ
ನೊಳುಕೆಡಹಲ್ಕೆ ಅಳಿಯನನೋಡಿ ಮರುಗುತಲೀ ॥ ಕಿತ್ತ ನಾಶರದೊಳಗೆ ಸೂ
ರ್ಯಜ । ಗೊತ್ತಿನಕ್ಷರಪಿರಲು ಯೇನಸ । ವೆತ್ತ ರಾಕಡೆಯಮಗೆ ದಿಕ್ಕಿಲ್ಲೆಂದ
ದೈತ್ಯೇಶಾ ॥ ೪೧ ॥ ತರುವೆ ಕಿಷ್ಕಿಂದಾದ್ರಿ ಕೌಶಲ । ಪುರಿಯನೆಂದಿಂದ್ರಾರಿ
ಘರ್ಜನೆ । ಗರೆದು ಯೇಳ್ವನಿತರಲಿಸಲದೀ ರಾತ್ರೆಯೊಳಗಾಜೀ ॥ ವರೆದನಾವ
ರಜೆಯರಿಗಾಗಲೆ । ಅರಿಯದೈದಿದರೊಡನೆ ಯಿಾಸೌಂ । ಧರನು ಪೋಗಿಂತಾ
ದನಿಲುಸುತನೆಂದನಾಚಕ್ರೀ ॥ ೪೨ ॥ ತಾಳಿಪಿತನೋಕ್ತವನು ದಿನಕರ। ಯೇ
ಳದಿರುವನೂ ರಾತ್ರೆವಿಸ್ಮಯ । ದಾಳದಿರುವದೊ ಕಾದಿಯಂಗದ ನಂಕಕಾಹು
ತಿಯಾ ॥ ನಾಳೆಕೊಡದಿರಲ್ಯೆದಿ ನಿಂನೆದು । ರಾಳೆಮುಖವಿಟ್ಟೆಂದು ಶವಥವ ।
ತಾಳಿದನು ಕಲಿ ಯಿಂದ್ರಜಿತು ರಣತೂಳ ಭೇರುಂಡಾ ॥ ೪೩ ॥ ಇತ್ತಲಂಗದ
ಸೌಂಧರನ ರಣ । ಬಿತ್ತಗೈದ್ಯೆ ತರುತಲಿರಲಿಂ । ನತ್ತಮೂಕೊರಚಿಯೊಳು ಮಾ
ರುತಿಕಾದಿ ಬಹುರೂಪಾ ॥ ಬೆತ್ತಳರಿದೋರೋರ್ವಳನೆ ಖಡಿ । ಯುತ್ತಲೋಸ
ರ್ವರನು ಯೇಕದಿ । ಕುತ್ತಲೋಕುಲಗೇಡಿಗಾಡುಲಿಯಂದನವನೀಶಾ॥೪೪॥
ಅರಿದನಾಸಿಕಕೀಗನಿಂನ್ಮೊ । ಕ್ಕೊರೆದು ಅಂಟೆಸಲ್ಯೆದಿದೀದು । ದ್ಧರದದೈತ್ಯೆ
ಯರರಿವ ಸಾಹಸವುಂಟೆ ಯಿಲದಿರಲೀ ॥ ವರೆದ ನುಡಿಯೇ ಸಾಕು ನಿನ ಶರ।
ತರುಣಿಯರ ಆಗ್ರಲದೆ ಯಿಾರಣ । ಕೆರವು ಅಂಗಜನೆಂದರೆಲ್ಲಾ ಮಾರಿಯರು
ವೊರೆದೂ ॥ ೪೫ ॥ ಅಂಬುಧಿಯ ವೊರವಾಗಿ ಮೇಘಾ । ಡಂಬರದಸರವ
ಜ್ರನಾದವಿ । ದೆಂಬ ರೀತಿಯೊಳಾಗೆ ನೋಡಾಮಾರಿರದ್ಭುತವಾ ॥ ಬಿಂಬಿಸುವ
ಖಡ್ಗರಿಗೆಗಳ ಹೊಳೆ । ದಿಂಬುಗೊಂಡರ ಮರುತ ಶರಕೊಳ । ತುಂಬಿ ಮಂತ್ರ
ವಬಿಟ್ಟು ಮನ್ಮಥನೊಲವನರಿರೆನುತ ॥ ೪೬ ॥ ತೂರಿತೆಲ್ಲಸುರೆಯರತರಗೆಲೆ ।
ಮಾರುತೆಳೆದಂದದಲಿ ಅಭ್ರದಿ । ಹಾರಿಸಲು ದಿಗ್ದೆಸೆಗೆ ಮೇಣಲ್ನಿಂತ ಆಘ್ರಾ
ಣಾ ॥ ಹಾರಿಯನು ನಾಗಾಸ್ತ್ರದೊಳು ಬಿಗಿ । ದೀರುವರ ವೀರಾಧಿತನ ವಶ ।
ಸೇರಿಸ್ಯೆತರಲಂಗಜಂಗದ ರಘುವರರಬಳಿಗೇ ॥ ೪೭ ॥ ಸತ್ತ ಸೌಂಧರನಂಬಿಕೆ
ಯುರನು । ಯಿತ್ತು ಕಾರಾಗಾರರೊಶಕವ । ರಿತ್ತಲ್ಯೆದಿದ್ಕಾರ್ಯವನು ಅವರೆಸ
ಗಿದದ್ಭುತವಾ ॥ ಬಿತ್ತರಿಸಲೆಲ್ಲವನು ರಘುಪುರು। ಷೋತ್ತಮರು ಕೇಳ್ದನುಭವ
ವಪರಿ । ದಿತ್ತ ರಾರೆಂದ್ಯೆದಿ ಬೀಡಿಗೆ ಅರುಹಸ್ಮರಣೆಯಲೀ ॥ ೪೮ ॥ ಕಲಿಲಹರ

ಮುನಿಸ್ತೂವ್ರತಾಂತ್ಯದಿ। ಚಲಿತರಾದಾ ರಾಮಲಕ್ಷ್ಮಣ। ರೊಲವಿನೀಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದುವಿರ ಚನೆಗೈಧರಿದಮನ।ವೊಲಿದುಲಾಲಿಸಿ ಮುಕ್ತಿಯರಸನಕಥೆಯಸದ್ಬುಧರೂ॥೪೯॥

ಅಂತು ಸಂಧಿ ೬೪ ಕ್ಕಂ ಪದನು ೩೭೨೩ ಕ್ಕಂ ಮಂಗಳಮಹಾ ಶ್ರೀ ಶ್ರೀ

0

ಅರವತ್ತೈದನೆಯ ಸಂಧಿ.
ಮಾರೀಚನ ಜಗಳದ ಸಂಧಿ.

ಬಂದ ಯಿಂದ್ರಾರಿಯನು ಹಿಂದಿ। ಟ್ಟಂದು ಗೈದತಿಸಮರ ಮಾರುತಿ। ಯಿಂದ ಬಿರ್ದಸಹಾಯ ಮಾರೀಚಂದಿನಾಹವದೀ ॥ ಪಲ್ಲವಿ ॥

ಲಾಲಿಸವನಿಪ ರಾತ್ರೆಯೊಳಗಾ। ಬಾಲೆಯರು ಬಹುದಳವಕೊಂದರೆ। ಕೀಲಿಸುತ ಶರೆಯಲ್ಲಿ ಆಲೋಕಿಸಲು ಬಂದಿದ್ದಾರ್ ॥ ಬಾಲಸೌಂಧರನಾದವಿಧಿ ಗೇ। ಕಾಲಗತಿಯ್ಯೆದಿಸಿತೊ ಅಪ್ರತಿ। ಕೂಲರೀ ತ್ರೈಜಗದೊಳೆನಲಾಗಾರ್ಯ ರೊಲವಿಂದಾ ॥ ೧ ॥ ಇಟ್ಟುಶರೆಯೊಳಗದನುವಂದನೆ। ಯಿಟ್ಟು ಸ್ಮರನಂಗ ದನಜಾಂಬವ। ರೊಟ್ಟಿನಲಿ ಸುಗ್ರೀವಸಹ ಶ್ರೀರಾಮಲಕ್ಷ್ಮಣರೂ॥ ಯಿಟ್ಟು ಗೃಹಕಡಿಪೊಗುವ ಸಮಯದಿ। ಹುಟ್ಟಿದಂಬುಜಮಿತ್ರನೀವದ। ಬಿಟ್ಟರಾಬೀ ಡೆನೆಂಬತೆರದೊಳು ಪೂರ್ವಭಾಗದಲಿ ॥ ೨ ॥ ಕೇತನವಪೊಗದಿತರಕಾ ರಘು। ಜಾತ ತಿರುಗಿದನೆಂದಿನೊಲು ರಣ। ಕಾತು ಬರಲಾಗಿತ್ತ ದಾನವನುದಯಕಾಲ ದಲೀ ॥ ಘಾತಗೊಂಡಳಿಯನುಜೆಯರು ಶರೆ। ಕೀತನೊಶವಾದರ್ಥವನು ಕೇ। ಳ್ದಾತನಿಂಕಡೆಗಾಲ ಚಕ್ರಿಯೊಲಾಗಲಾಚಕ್ರೀ ॥ ೩ ॥ ತಿಂಣಿಸಲು ತನಿಗೆಂಡ ಗಳ ವಿ। ಕ್ಕಂಣಿ ಬಹುದಳ ಸಹಿತಲಾಗೆಡೆ। ಯಂಣಗಳುಕಡುಗೈಸೆ ಭೇರಿಯ ಹೊರಟುದಶಕಂಠಾ ॥ ಬಂಣಿಸವ ಕೋಪಾಗ್ನಿಯೊಳು ರಣ। ಮುಂಣಿನೆಡೆಗೈ ಶಂದ ದಿನಕೊ। ಬ್ಬಂಣಗಳ ಪ್ರತಿಯಾಹುತಿಯು ನೀವೆಂಬರೀತಿಯೊಳೂ ॥೪॥ ಕೊಂದು ಸೌಂಧರನಂಬಿಕೆಯರನು। ಬಂದಿಸಿದರಾ ತಂದು ನಿಮುಪದ। ಕೊಂ ದಿಸದಲಿಂದ್ರಾರಿಯಲ್ಲೆಂದ್ಯಾವನದ ಜವನಾ ॥ ಕಂದನಂತೇಳ್ವನಿತರಲಿ ಯರ।

ಗೆಂದನಿಂದಿನರಣದಿ ನಾನೆಳ । ತಂದಪಹಿತರ ಬೆಸನ ದಯಮಾಡೆಂದ ಮಾರೀಚಾ ॥ ೫ ॥ ಸ್ವಲ್ಪಜನರವರೇನು ಸಾಹಸ । ಜಲ್ಪಿಸುವರರಿದಂತ್ಯದಲಿ ಸಂ । ಕಲ್ಪವಿಧಿಯಾಗೈವ ಸಮಯದೊಳಿಹುದು ನಿನಗೀಗಾ ॥ ತಲ್ಪರಲ್ಲವರೆನುವದೈತ್ಯನಿ । ಗೊಲ್ಪಿನಿಂದಾವೆಷ್ಟುಮಂನಿಳ । ಲಲ್ಪಬುದ್ಧಿಯಬಿಡರು ಆದರಿಂದೀಗತಹೆನೆಂದಾ ॥ ೬ ॥ ಹಸ್ತ ಪ್ರಾಹಸ್ತಾದಿಯರ ರಣ । ನೆಸ್ತಗೊಳಿಸಿದರಿಂದಿನಿರುಳತಿ । ದುಸ್ತರವನೊಡರಿಸಿದರಿಂನೆಷ್ಟಾವು ಸುಮನಿರಲೂ ॥ ಕುಸ್ತು ಬಹರಲ್ಲವರು ಬಹುಮದ । ಮಸ್ತರಾಗೊಂದೆರಡು ಕಾರ್ಯವು । ಹಸ್ತಗತದಿಂದಧಿಕ ಕೆಟ್ಟೈಹರೆಂದ ಮಾರೀಚಾ ॥ ೭ ॥ ತನ್ನಿಮಿತ್ಯದಿ ಕಾರ್ಯವನೆನೆ । ಸ್ತ್ರೆನ್ನಿಸುವೆನೆನಗನುವರವು ಕೈ । ಗಂನದಿರೆ ನೀಬರುವೆ ಸುರವೈರೆಂದು ಮಾರೀಚಾ ॥ ತಂನದಳವಕ್ಷೋಹಿಣಿಂನೂ । ರನ್ನು ಕೂಡಸುರೇಶ ಬೇಡೆನು । ವನ್ನುವದನನುಗೊಳದೆ ಹೊರಟನು ಕಾಲಗತಿಯೊಳಗೇ ॥ ೮ ॥ ಲೆಕ್ಕಿಸದಸೇನೆಯೊಳುವ್ಮೈಗಾ । ಪಿಕ್ಕಿ ಹೊರಟೆಂದ್ರಾರಿ ಘಟಕ । ರ್ನಕ್ಕಟದಿ ಮಾರೀಚನೈದಲು ರಣರಣಾಂಗಣಕೇ ॥ ದಿಕ್ಕರಿಪ ಮಾರುತಿಗೆ ಸನ್ನಹ । ದಿಕ್ಕಿದಂಗದನಾ ವಿಭೀಷಣ । ಪೊಕ್ಕರಾಹವ ಧರೆಗೆ ತಂಬಟ ಕಹಳೆ ಮೊರವಿನಲೀ ॥ ೯ ॥ ಧಾರುಣಿಯೊಳಿಹ ಮಾರಿಯರಿಗಧಿ । ಕಾರಿ ಮಾರೀಚಿಂದಿನೊಳು ರಣ । ಕೋರಿಸಿದನರಿಬಲದ ಸಾಹಸರಾದರೊಟ್ಟಾಗೀ ॥ ಮೋರೆಯಿಡರಾಹವದ ದೇವಿಯ । ಗಾರಸೇರಿಪೆನೆಂಬ ಕಹಳೆಗ । ಭೀರದೊಳಗೈತಂದು ನಿಂದನು ನಿಟಿಲನೇತ್ರನೊಲೂ ॥೧೦॥ ಭುವನದೊಳಗೆವಿಚಿತ್ರವಿದ್ಯ । ದ್ಭವನನಾದಣುಮಾನ್ಯ ನೆನಿಸಿದ । ಪವನಸಂಭವ ಪಂಚಬಾಣನು ಯಿಂದಿನಾಹವಕೇ ॥ ತವಕವಿಟ್ಟೈಣುರೇಣುತೃಣಕಾ । ಷ್ಟವನಿಯಂದ ದ್ದಹಿಪನೀ ದಿನ । ಭವರಕೈತರಬೇಡಿರೆಂದೂದಿಸಿದ ಕಹಳೆಗಳಾ ॥ ೧೧ ॥ ತಂಬಟದ ಕಡುಕಹಳೆರವ ದಿ । ಕ್ಕುಂಬಿನಿಯ ಕಿವಿಗಿಡಿಯಲಂಬರ । ತುಂಬಿದಮರನಿಕಾಯರಾಲೋಕಿಸಲು ತಮತಮ್ಮಾ ॥ ಅಂಬುಜಾಕ್ಷಿಯರೊಡನೆಯಿರೆ ಮರು । ಳೆಂಬವೆಲ್ಲೆಮುಗಿಂದು ರಣಹ । ಬ್ಬೆಂಬದಾಗೋಲಾಡಿ ಮುದ ಬಡುತಿರಲು ಮತ್ತಿತ್ತಾ ॥ ೧೨ ॥ ಹಲವು ಶಸ್ತ್ರವ ಕೆದರಿ ಜಳಜಳ । ಗಲಿಸಲಾಸೇನಾಂಬರದಿಸಂ । ಚಲಿಪಕ್ಷಣರುಚಿಯಂತೆ ಕೌವ್ವರೆಗೊಳಲು ಅಂಬಕಕೇ ॥ ಗಲಿಸೆರತ್ನಾಭರಣಪುಷ್ಪಕ । ದಲಿ ವಿರಾಜಿತರತ್ನರುಚಿಸಂ । ಕಲಿಸಲಂಬರರೋಹಣಾಚಲದಂತೆ ಮೆರೆಯುತಿರೇ ॥ ೧೩ ॥ ಪೂರ್ವಪಶ್ಚಿಮಜೋತಿರಾಂಗಣ । ದೀರ್ವಬಲರೈತಂದರೆಂಬಂ । ತೋರ್ವುತಿರೆ ದುಂದುಭಿನಿಕಾಯದ ಬಹಳರವದಿಂದಾ ॥

ರ್ವಿಯನೆ ಬುಂಭುಗಿಸುತಿರಲಾ । ಯಿರ್ವರೆಡೆ ಬಹುಬಲಕೆ ಕೈಸಂ । ದೋ
ಲಡರಿದು ದಾದಿಯ ಪರದ ಶರಧಿಯಡರ್ದಂತೇ ॥ ೧೪ ॥ ಕರೆವಶರತರಿತ
ರ ಚಕ್ರಂ । ಗ್ತುರುಗುತಿಹ ಸಾಂಗಿಟ್ಟ ಕೊಂತಗ । ಳೆರಗುತಿಹ ಧ್ವಜಕೇತು
ುದ್ಗರಡೆಂಕಣಿಗಳಾದಿ ॥ ನೆರೆದ ಬತ್ತೀಶಾಯುಧದದಿ ಹೊಡೆ । ದಿರಿದುಕೈಕೈ
ೂರಿಬಾಕಿನೊ । ಳಿರಿದು ಕೆಡಹೆ ಕಠಾರಿಗಳು ಲಾಗಿತರ ಸುಭಟರನೂ ॥೧೫॥
ಂಚಿಕೈಗುದ್ದಿನಲಿ ಕಾಲ್ತೊಡ । ರೊಂಚಿಯನುರಾಂಗಾಂಗವನು ವು । ಷ್ಟಿಂ
ಕಿತದೆದೆಗಿರಿದು ತಳಮೇಲಾಗಿ ಕೆಡಹುತಲೀ ॥ ಲುಂಚಿದಾಡಶ್ಮ್ರುಗಳಪಲ್ಲ।
ಂಚಿ ಸಾಹಸದಿಂದಲಾಹವ । ಮಿಂಚಿಗರೆದರು ವರಗಿನೆರೆದರು ವನರಣಾವನಿ
ಯಾ ॥೧೬॥ ವೊಬ್ಬರೊಬ್ಬರಹೆಟ್ಟ ಕುಟ್ಟುತ । ಲೊಬ್ಬರೊಬ್ಬರಮೆಟ್ಟ ಸಿಗಿ
ಯುತ । ಲೊಬ್ಬರೊಬ್ಬರ ಕರುಳ ಕೆದರುತ ಮಿದುಳ ಬಗೆಯುತಲೀ ॥ ವೊಬ್ಬ
ೂಬ್ಬರ ತಿರುಹಿಡುತ ಮೇ । ಲಬ್ಬಿಸಿದರಾಕಾಶವೇ ಶಬ್ದ ದೊಬ್ಬುಳಿಯನೆರ
ಾಗಲಾಗಲೆ ಬೆಸಲೆಯಾದಂತೇ ॥ ೧೭ ॥ ಕಡುಗಿ ಹಯ ಕುರುಪುಟದಿ ಕೆರೆ
ವ । ಗಡಿಸಿ ಖಡಿಖಡಿದುಗುಳ್ವ ರಕ್ತ । ಕುಡಿಯೊಳಾ ಹತಗೊಳುತಲಿರಲೇ
ರ್ದ ವಾಹಕರೂ ॥ ಕಡುಹು ಸಾಂಗಗಳಾದಿಯಲಿ ಕೆಡೆ । ಬಡಿದು ಅಡುಕಿದ
ಾದಿ ಯಾಳಿನ । ಡೆಯೊಳಶ್ವಶ್ವಾಹ ಕರಗಿಡದೆಡೆಯ ಗುಲ್ಮದೊಲೂ ॥ ೧೮ ॥
ಂದು ಮದಕರಿ ಘಟೆಗಳಿತ್ತೆರ । ದಿಂದ ಶುಂಡಿಲ ತೊಡಗಿದಂತಗ । ಳಿಂದಲಿ
ದಿರಿದಾಡೆ ಮಾವತರಂಬುಸಾಂಗಗಳಾ ॥ ಹಿಂದೆ ಕೊಂತಗಳಿಟ್ಟು ಸಾರಥಿ ।
ಂಧುರಗಳಂಗದಲಿ ತುಂಬಿಹ । ದಂದುಗವ ಪರಿಹರಿಸಿ ಗೈದರು ಜಲದ ತತ್ತಿ
ಳಾ ॥ ೧೯ ॥ ಯರಗಿ ವೈಮಾನಗಳ ಶರದು । ರ್ಧರದ ವರ್ಷಾವರಿಸಿಸಂಹ
। ನಿರಿಸಿ ಯಿಂದಣ ಭಾರದೊಲು ಶಿರಧಾತ್ರಿ ಫಲದಂತೇ ॥ ಸುರಿಸಿದರು ಮೇ
ಉಡುಗಣದರಥ । ಹರಿದತೆರದೊಳಗೆಲ್ಲ ದಿಕ್ಕಾ । ವರಿಸೆ ಚತುರಂಗಮರಲೋ
ಕೆ ದಾಳಿಯಿಡುವಂತೇ ॥ ೨೦ ॥ ಬೆದರಲಮರನಿಕಾಯದಾಳಿಯ । ಕೆದರಿಬ
ರಚತುರಂಗದೊಲು ನಭ । ಪುದಿದತೆರನಾಗಳಿವ ವಾಹಿನಿ ಮತ್ತು ಅಂಜದಲೇ॥
ರದಗಿಬಹ ಚತುರಂಗವೇಳ । ಬ್ಬುದಗಳಾಹತಗೊಳಲು ಅಬ್ಧಿಯೆ । ಸದಮ
ರಂಗೊಳೆ ಕುಣುಪ ರಕ್ತದಿ ಕುಣಿವಕಳೆವರದೀ ॥ ೨೧ ॥ ದಣಿದರಾಗಲೆವೀರ
ಸ್ವರ್ಗದ। ಗಣಿಕೆಯರು ವಿಟರಳಿದು ಬಹಸಂ। ದಣಿಗೆ ನಾನಾತೆರದ ಮರುಳಿಗೆ
ಸರ್ವಸಂತಸದೀ ॥ ದಣಿಸಿದರಚಿರಬಾಳಲೆನೆಕ್ಕೈ । ಕುಣಿಸಿಶಾಖಿನಿಬಾಣತಿಯರಿ।
ನ್ನಣಿಸಿ ಹೊಗಳಿದದಾದ ಕೌತುಕದಂಕದಂಕುರಕೇ ॥ ೨೨ ॥ ಅತಿ ವಿಚಿತ್ರದ

ವುಭಯುಬಲದಾ । ಹತಕೆ ಕಡಿತಲೆ ಸುಭಟಜನಸಂ । ತತಿಯು ಬಯಲ್ಗೊಡ ಲಾಗ ಕಡಿಗೆಮು ಕಲಹವಲ್ಲದಲೆ ॥ ಚ್ಯುತಿಸದಾಹವ ವೆರ್ಥದಲಿ ದಳ । ಹತಿಸಿ ದೆಂಬೊಳಕರುಣದಲಿ ಸಂ । ಗತಿಸಿದನು ವೈಮಾನ ಬಲಪಿಂದಿಕ್ಕಿ ಮಾರೀಚಾ ॥೨೩॥ ಬರುವಸೆಮುಯದೊಳಷ್ಟದಿಕ್ಕಂ । ತರವಿದಿಳೆಯುಂಬರಿಕೆಯುನು । ಮನ ಕಿರಿಸದಂತಾವರಿಸಿನಿಡುಗೋಲಿಹಿತ ಚತುರಂಗಾ ॥ ತುರುಗಗಜಚರರೆಂಬರಾಸಿ ಯ ! ನರಿಯುಬಾರದರೀತಿಯೊಳು ಕ । ತ್ತರಿಸಿ ಯಡಕಿದ ದೈತ್ಯರೆದುರೆಂದಹಿತ ವಾಹಿನಿಯೂ ॥ ೨೪ ॥ ಏಕತೆರದೊಳು ಕರಚರಣಶಿರ । ನೂಕುತಿಹಮೂರ್ತಿ ಗಳು ಲೋಹಿತ । ವಾಕಲಿತಮಳೆಯೊಳಗೆ ನಾನಾತೆರದ ಸಂಕಲಿತಾ ॥ ಭೀಕರ ವತೋರ್ವಂತೆ ಅಹಿತರ । ನೇಕಸಂಹರಗೈವ ದೈತ್ಯಾ । ನೀಕಿನೀಪತಿಗಂಜಿವಾ ನರದಳವು ಪಿಂದೆಗಲೂ ॥ ೨೫ ॥ ಕದನಕರ್ಕಶ ಭೀಮಭೈರವ । ರಥಟಮಾ ರೀಚಟ್ಟಿ ಬಂದಿಂ । ದುದಯುವಿಲ್ಲೆನಿಪಹಿತಸಂತತಿಜನಗಳೊಂದಾಗೀ ॥ ವೊದಗಿ ಬಂನಿಂನೆಲ್ಲ ಮಿತ್ರರ । ನುದುರಿಸೇಕೋತ್ತರದಿ ಪ್ರಿಯವಗ । ಲದಲೆ ಮಲಗಿಪೆ ನೆಂದು ಕೂಗಿಸೆ ಕಹಳೆ ಮಾರೀಚಾ ॥ ೨೬ ॥ ಇಟ್ಟುಕೆಡಹಿವನಹಿತಬಲಬಲ। ಮುಟ್ಟಕಾದುವದೀಕ್ಷಿಸದೆ ಬೆಂ । ನಟ್ಟಬಂದೆನ ಕರೆಯದಲೆ ಕಡುವೋಸದಾ ನವರಾ ॥ ಹುಟ್ಟುವಳಿಬೇರಹುದು ಯಂದಳ । ನಟ್ಟ ಭೀಷ್ಮಾಕಾರದಲಿ ಶ । ಸ್ತ್ರಟ್ಟಿಸಿದಮುಂದೊತ್ತಿ ವೈಮಾನಸದಳಸಮಾಸ್ತ್ರಾ ॥ ೨೭ ॥ ಮುಚ್ಚಿಸಿದ ದಿನ ಕರನಕರಕಾ । ಗಚ್ಚಿಸಿದತೆರನಾಗಿ ಕಣ್ಮನ । ಕಿಚ್ಚಿಸದ ಶರಸೇತು ಹರಿದಾನದ್ಧ ದುದ್ಯುದಕಾ ॥ ಹೊಚ್ಚಿದಂತಾನೀಕಿನಿಯ ವೈ । ಚುಚ್ಚಿರೋಮಾಂಚದಲಿಗರಿ ಮಾ । ಡಚ್ಚಯೇದುಗಳಂತೆ ಯುದುರುಲು ದೈತ್ಯಚತುರಂಗಾ ॥ ೨೮ ॥ ಆಳು ಹಯುಗಜಭೇದವನು ಮನ ! ತಾಳದಂತಂಬಿಸಲಿ ಬಂದನ । ಗೋಳಿಸಿದಮೂ ಡಿಗೆಯ ತೆರನಾಗಲ್ಪಮಾಹತ್ತಾ ॥ ತಾಳಿಯಿರುವದರಿಂದ ಭೇದಿಸಿ । ಹೇಳಲ ರುಹಲ್ಲದಲೆ ಬಾಣದಿ । ಹೂಳಿಸಿದ ನಸಮಾಸ್ತ್ರನೆವೆಯಲುಗಿನಲಿ ದಾನವರಾ ॥೨೯॥ ಅರಿಶರಭಭೇರುಂಡ ವಿದ್ಯಾ । ಧರವಿಶಾರದ ಕದನಕರ್ಕಶ । ಮರುತಸ ಖನಹಿತಾಂಧ ಭಾಸ್ಕರರಿಪು ಗಜಾಂಕುಶನೂ ॥ ಮರುತಸುತನಾಂಜನೆಯು ಭೀ ಮಾಕರನು ಪ್ರದ್ಯುಮ್ನನಿಪನಿಂದಿನ । ಧುರಕೆಬಹನಡಿಗೆರಗಿ ದಾನವರೆಂದುಹೊ ಗಳಿಸಿದಾ ॥ ೩೦ ॥ ದೈತ್ಯಶೇಷವ ನಿಂದಿನೊಳುಸಂ । ಹತ್ಯಗೊಳಿಸುವಕೋ ಪದಲಿ ರಣ ! ದೈತ್ಯಬಹನರಿಡಾಸುರವ ಪಿಂತಿರುಗವಾರೀಚಾ ॥ ದೈತ್ಯರಾಜನ ತೃಣಕೆಸಮವೆಂ । ಬುತ್ಯನಿಗೆ ನೀನೇತರವ ನೆಂ । ಬುತ್ಯ ಬಲ್ಲೆಂದೈದಿ ಕೆಡುವರೆ

ಯೆನುತಲೆದುರಾದಾ ॥ ೩೧ ॥ ಏನುಬಲ್ಲೆಲೆ ಕಪಿಯೆಕೇತನ। ದಾನವನಪ್ರಬಲತ್ವನಿನಸ। ನ್ಮಾನಗೊಳಿಸುವ ರೀತಿಗೊಳಿಸಿದೆ ಯವನ ಸೇವನೆಯಾ ॥ ಲೀನದೊಳು ಜೀವಿಸದೆ ನರಸಂ। ದಾನದೊಳು ಹತಲಿಖಿತ ನಿನಗಿ। ರ್ದ್ದೀನಯೋಕ್ತಿಗಳುದಿಸಿತೆನಲಾ ದೈತ್ಯಮಾರೀಚಾ ॥ ೩೨ ॥ ಆತಸನ್ಮಾನಿಸಲು ನೈನದ। ಮಾತ ತಿಳಿಸಿದ ನೀನು ನಿಮುವಲ! ವಾತು ಬದುಕುವ ನಾನು ಅಹುದೇ ಖಚರನಿನ್ನಂತಾ ॥ ಖ್ಯಾತರೆಷ್ಟೋ ಯಂನವಲಗೈ। ಯ್ಯಾತಮಂನಿಸದಿರಲು ಲೆಂಕನು। ಜಾತವಿಲ್ಲೆನಿಪೆಲವೊ ಮಾರೀಕೇತನರಿಯದಲೇ ॥ ೩೩ ॥ ವಂದುನಗರಾಧೀಶ ನೀನಿನ। ನಂದನೆಯ ಭಗಭಾಗ್ಯದಿಂದ್ಯೈ। ತಂದು ಖಾಂಡತ್ರಯದ ಐಸಿರಿತಿಂದುಆಡಗಿರದೇ ॥ ಬಂದವುನ್ಮದದಿಂದ ನೀನ್ಯೈ। ತಂದುಕೆಡುವರೆ ಮಾರಿಯನು ಹಾ। ಯಂದುನುಂಗುವ ಕಪಿಸತಾಕೆನದಂದೆನನೆಗೋಲಾ ॥ ೩೪ ॥ ನೋಡಲಾಗಮುಮಿರ್ವರೊಂದೇ। ವೋಡಿಭೈರವರಂತೆ ಮೂದಲೆ। ಗೂಡಿ ಶರದೆಸುಗಿಂದಪಿಂದಕೆ ನಿಲಿಸಿ ವಾಹಿನಿಯಾ ॥ ನಾಡನೊಳ ಕೊಳದುಗ್ರದಲಿ ಕಲಿ। ಗೂಡಿನಾರಿಯ ನೀವಿವಿಷುಸಂ। ಜೋಡಿಸಿದರಾಗದುರ ಲಮರನಿಕಾಯ ವೀಕ್ಷಿಸುತಾ ॥೩೫॥ ದಿವ್ಯಶರಗಳನಿಟ್ಟು ಗುಣಸಂ। ಭಾವ್ಯದೊಳು ಬಲಗೊಂಡುಶಾರವೆ। ಯವ್ಯಯಾಸ್ತ್ರವನಿಡಲು ಪೂರ್ವಾಪರದಭಾಗವನೂ ॥ ಗವ್ಯಗೊಳಲ್ಯೆತವಹ ಪ್ರತಿಶರ। ಸೇವ್ಯಗೊಳಿಸಿದರೊಂದು ನಿಡು ಸಂ। ಭಾವ್ಯ ವಿರದಂತಸುರಖೇಚರರವನಿನಾಯಕನೇ ॥ ೩೬ ॥ ಇಟ್ಟಶರದಿಂದ ಪರದೊಳು ತೊ। ಟ್ಟಟ್ಟಿಶರಮುಂಚುತಲಿ ಸರಳಿನ। ಬಟ್ಟೆಯೋ ಮಿಗಿಲಾಸ್ತ್ರಸಾಗಲು ಯಿಟ್ಟ ಸೇತುವೆಯೋ ॥ ಕಟ್ಟೆಪದ್ಮಾಕರದ ಯೇರಿಯ। ದಿಟ್ಟ ಗೈದಸ್ತ್ರಗಳ ಹವಿಸರ। ಳಿಟ್ಟುದಹಿಸುವರೆಂಮೆಯಲಿ ಮಾರೀಚಮುನ್ಮಥರೂ ॥ ೩೭ ॥ ಖಂಡಿಸುವ ದಿವ್ಯಾಸ್ತ್ರಗಳನು। ದ್ದಂಡಕೆಳಿಯುರುಗನಿಗೆ ವಿಷವನು। ಗೊಂಡರೀತಿಯಲಷ್ಟಕಷ್ಟಕೆ ಬಲಿವಕ್ರುದ್ಧಿಯೊಳೂ ॥ ಚಂಡತರ ಕೋಪದಲಿ ಯನಸನು। ಗೊಂಡುಕಾದುವನೀತ ರಣಕು। ದ್ದಂಡಸರಿಯುಂದಂತರಂಗದಿ ಮೆಚ್ಚು ತೀರ್ವರೊಳೂ ॥ ೩೮ ॥ ಬಿಲ್ಲುಬತ್ತಳಿಕಂಬುಕುಂಡಲ। ವಲ್ಲೆ ವಜ್ರಾಂಗಿಟ್ಟ ಸೀಸಕ। ವಲ್ಲಿ ಧ್ವಜಗಳಭೇದಿಸಲು ಸಂಕಲ್ಪಮನದಿಂದಾ ॥ ಬಿಲ್ಲಕರದಲಿ ಬಲ್ಲಹರು ಬಹು। ಖುಲ್ಲಲಲ್ಲೆಯೊಳುಲ್ಲಸದಿ ಕೈ। ನಿಲ್ಲದೆಸೆದಿಕ್ಕಡಿಸುವರುಯಡೆಗೈದಿಸದಲೊಂದಾ॥೩೯॥ ತೆರೆಯಹೊಯ್ಲಿನೊಳೆದ್ದ ಜಲಕಣ। ದಿರವಿನೊಳಗಂಬಂಬಸಂದಿಸಿ। ಮುರಿದಶರಚೂರಾಗಿ ಯಿರ್ವರ ಮಧ್ಯದೊಳು ಮುಸುಕೀ ॥ ಯರಗುತಿರ ಲೊಯ್ಯಾ

ನಗಳ ಪಿಂ। ತಿರುಗಿ ಪಾತುರ ಗರೆವರಲ್ಲದೆ । ಸರಿಸಕ್ಕೆ ತರಗೊಡರು ಕದನ ಕ
ಠೋರಶಾರದರೂ ॥ ೪೦ ॥ ನಿಂತರಿಲ್ಲೆಮಗೆದುರುಶರದೆದು । ರಾಂತುಬದುಕಿದ
ರಿಲ್ಲ ರಣಕಲಿ। ವಂತನೆಂದೊಯ್ಚಿತ್ರಶರಗಳ ತೆಗೆದು ಆಳವಡಿಸೀ॥ ಯಾಂತು
ಕಿವಿವರೆಗಿಡಲು ಭಗಣದ। ಸಂತತಿಯೆ ಕವಿತರಲು ಪ್ರತಿಶರ। ವಾಂತು ನಿಲಿಸ
ಸವಾಸ್ತ್ರನೆನೆ ಮಾರೀಚ ಪಲ್ಮೊಸೆದೂ ॥ ೪೧ ॥ ಚುಕ್ಕಿಗಳಲೇನಹುದು ವೆಳ
ಗನೆ। ಮುಕ್ಕುಳಿಪ ಮಧುಕಿರಣ ಶರದಿಂ। ದಕ್ಕುಳಿಪೆ ಮಾರೀಚನೋಡೆಂದಿ
ನಕರಾತಿಯನೂ॥ ಇಕ್ಕಲರಿದಲ್ಲಲ್ಲೆ ವಿಸ್ಮಯ। ವಿಕ್ಕಲುಡುಗಣ ದೈತ್ಯ ನೋ
ಡ್ಮನ। ದಕ್ಕರದಿ ನಿನ ಶರವದೇನಾಯ್ತೆಂದನಲರಂಬಾ ॥ ೪೨ ॥ ಕೂಗುತಿಹ
ವುದ್ರುತಕುತನ ಶರ। ನೀಗಿದಸದಳಕಧಿಕಕೃದ್ಧನು । ರಾಗಿಸುತನದ್ಯಾಸ್ತ್ರವಿಡ
ಲಾಸರಿತುಗಳೆಮುಚ್ಚೀ ॥ ಮೇಗವಿಸಲಲ್ಲಲಿಗೆ ಕಟ್ಟೆಯು। ತಾಗಿಸಲುತಟ್ಟಾದ
ಶರವನು। ರಾಗದಿಂ ನೋಡೆಂದನಲರಾಸ್ತ್ರ ಸುರನಾಯಕಗೇ ॥ ೪೩ ॥ ಸಿಕ್ತ
ಗೊಳಿಸಿದ ದಿವ್ಯಶರಕನು। ರಕ್ತಕ್ಷುದೆಯಿಂದೊಜ್ರಶರದಿಂ। ಮುಕ್ತಿಸುವೆನೆಂದ
ಸುರಸಾಲ್ವರಿಸಸ್ತ್ರಗಳಮುಧ್ಯಾ ॥ ವ್ಯಕ್ತಗೊಳದವನಂಬಕಕೆ ಪುನ। ರುಕ್ತದಿಂದಿ
ಟ್ಟ ಸಮುಶರಸಂ। ಕ್ಲಿಕ್ತದಿಂ ಹಾರಿಸಿದ ಮಾರೀಚಹಿತನೊಯ್ಮಾನಾ ॥ ೪೪ ॥
ಪಿಂದಕಡಿಯಿಡುವನಿತ ಕುಂಗುಟ। ದಿಂದ ತಾಂಕೊತ್ತಿಡೆಗೆ ಸೈಕಲಿ। ಯಂದು
ಶರಸೋರ್ಗರೆದು ಚರಮುಸ್ತ್ರೈದರಿಂದಿಟ್ಟೊ ॥ ಹಿಂದಕೊಗೆಸಿದನೇಳು ವಾರೈ।
ತಂದು ಭಾಪುರೆ ಪಂಚಶರನೀ। ನಿಂದುಮುಖಿಯರ ರಣಕೆಶೂರಹುದೆಂದ ಮಾ
ರೀಚಾ ॥ ೪೫ ॥ ಕುರಿಗಳಗ್ರದಿ ನಿನ್ನ ಸಾಹಸ। ಧುರದಿಕೊಳದಸವಾಸ್ತ್ರನಸ್ತ್ರ
ವ। ತೊರೆದರಾರವನಿಯಲಿ ಸರ್ವರ ಮೂರ್ಛೆಯನುಗೊಳಿಸಾ॥ ಶರವು ನಿನ
ಮೂರ್ಛಿಸದೆ ಯಾರಣ। ಪುರಷಗೊಂತುತ್ತೊಳಿಸೆನೇನಿ। ಷ್ಪುರದಶರವರಿಯಂ
ದನಸವಾಸ್ತ್ರಿಟ್ಟು ದೈತ್ಯನಿಗೇ ॥೪೬॥ ಮುಟ್ಟುವನಿತಕೆ ಶರದಪಂಜರ। ಗಟ್ಟಿ
ದವ ಖಡಿದೊಟ್ಟಿ ಮೇಲವ। ಗಿಟ್ಟಪಿಂಜರ ಭುಂಜಿಸುತ ಕುಲಿಕುಲಿನೆ ಕೂಗುತ
ಲೀ॥ ಕುಟ್ಟಿಹೆಟ್ಟೆನುಗೊಟ್ಟು ಚಿಟಿಚಿಟಿ। ಲಿಟ್ಟು ಮುತ್ತುವ ಶರಗಳನು ಬಗೆ।
ದೊಟ್ಟ ಯಿಟ್ಟಾಡಿದರು ಅಟ್ಟಟ್ಟಸುರನನಿಲಜರೂ ॥ ೪೭ ॥ ವಂದ್ಯೆದೆಂಬಸ್ತ್ರ
ಕ್ಲುಪ್ತಿಗ। ಳಿಂದಲಿಟ್ಟಾಡ ಸಮುಶರನನು। ಬಂದಮಾಯಾಕಾರವಿದ್ಯದಿ ದೈತ್ಯ
ಖೇಚರರಾ ॥ ಹಿಂದುಳಿಸಿದವನಾಗಿ ಬಹುಚತು। ರಿಂದಲೆಸೆದಾಡ್ವಲ್ಲಿ ಬಿಲ್ಲಿ।
ಟ್ಟೊಂದು ಯರಡಾಗಿಸಿದ ದೈತ್ಯನಹಸ್ತವಿಡಿವಿದ್ರ್ಪಾ ॥ ೪೮ ॥ ಬಿದ್ದಕಾರ್ಮು
ಖಕಸುರಬಹ ರೌ। ದ್ರೊದ್ಧಿ ಬದಲ್ಬನುವಿಡಿದದ ಖಡಿ। ದುದ್ಧತವಿ ಫಣೆಗಿಟ್ಟು

ಮೂರ್ಛಿಸೆ ಜಯಸುಘೋಷಣೆಯಾ ॥ ವುದ್ದಲಾಕಪಿಕೇತನರಬಳಿ । ಬಿದ್ದಮಾ
ರೀಚಂಬುದನು ಕೆ । ಳ್ತದ್ದಿಸೆಯನುರಿಸಗ್ನಿನೇತ್ರಾಕರಿಸುತಿಂದ್ರಾರೀ ॥ ೪೯ ॥
ಹಾಯನಲು ನಕ್ಷತ್ರಗಣ ನಿ । ರ್ದಾಯಗೊಳಲವನುದುರಿಗಿರಿ ಸಂ । ಪ್ರಾಯ
ದಪ್ಪುವೊಲಾಗಲದ್ಭುತದಿಂದ ಶರವಾದೀ ॥ ಸಾಯಕಳಾವರಿಸೀ ಬಹಗೆದು ।
ರಾಯವಿಡಲಂಗದನು ಮಾರುತಿ । ಗಾಯ ಸಾಗಿಹುದೆಂದು ಮುಂದೊತ್ತ ಸುರ
ನಾತ್ಮಜಗೇ ॥೫೦॥ ಕೂಗಿಮಾರಿಯ ಕರೆದನೋರ್ವೆದು । ರಾಗಿ ನೀನಾಹುತಿ
ಗೆಬರಬಹು । ದಾಗಿ ಲಿಪಿಯಿತ್ತೆಂದು ದಿನಕರ ಶರಗಳೈನೂರಾ ॥ ತೂಗಿ ಬಿಡ
ಲೆಲ್ಲೆಲ್ಲು ದಿನಕರ । ರಾಗಿ ನಿರ್ದರನಮಲಕಾಂತಿಯ । ದೀಗತೋರದೊಲಾಗ
ಲಾಯಿಂದ್ರಾರಿ ಕಲ್ಪಣೆಗೇ ॥ ೫೧ ॥ ನುಂಗಲಂಗದನೆಂದು ಸಿಳಿಮುಖ । ಸಂ
ಗಗಳ ನಡರಿಸುತ ಮೇಲ್ವರಿ । ದಂಗಿಸುವ ಯಿಂದ್ರಾರಿಯೊಡರಿಚಿದಮಲ ಭಾ
ಸ್ಕರರಾ ॥ ನುಂಗುತಿಹ ಕಡುಮೇಘದೊಟ್ಟನು । ಪೊಂಗಿಸುತಲಹಿತಾಸ್ತ್ರಗಳ
ನಿ । ಸ್ಸಂಗಿಸಿದ ಪ್ರತಿಭಾಸ್ಕರಾತ್ಮಜ ತುಂಗಸಾಹಸದೀ ॥ ೫೨ ॥ ನಿಪ್ಪಸರಗೈದ
ಸ್ತ್ರಗಳ ಯಂ । ನಪ್ಪಳಿಸಲಾರ್ಪೆಲವೊ ಕಪಿ ನಿಂ । ಮುಪ್ಪಗಸದಳವಾದ ಯಿಂ
ದ್ರಾರಿಯೊಳು ನೀಶಣಷೀ ॥ ನೆಪ್ಪಗೊಳುವೆಂದಮಲ ಶರಗಳ । ಕುಪ್ಪಳಿಸುತ
ಡರುವನ ಶರಕೆದು । ರಪ್ಪ ಶಸ್ತ್ರಾವರಿತದಲಿ ಮುಂಜಗಿಸುತಂಗದನೂ ॥೫೩॥
ಕೇಳು ಯಿಂದ್ರಾರೆಂಮ ಪಿತನೆದು । ರಾಳುನನೆ ನಿಂಮಪ್ಪನಣ್ಣನು। ತಾಳಿಪ್ರಾ
ಬಲನೆನಿಸಿದಲ್ಲದೆ ಕಲಹಮುಖನಾಗೆ ॥ ಪೀಳಗನಸಂಹರಿಪನೀನೆಂ । ತಾಳುಯಂ
ನೆದುರಾಗುವಡೆನಿ । ಲ್ಸೀಳುವೆಂದಡರಿದನು ಯರಚುತಲಸ್ತ್ರವಂಗದನೂ ॥೫೪॥
ವಿಾರಿ ಶರದೆಸುಗೆಯನು ಯದುರೊಳ । ತೂರಿ ಖಡ್ಗವ ಸಾರಿದರು ಕಂ । ಖಾರಿ
ಸುತ ಸೂರ್ಯಸಚಂದ್ರಾಸೆಂಬವೀತರದಲೀ ॥ ಹಾರಿತಾ ಯಿನಕಿರಣರಾತ್ರಿಯು।
ವಿಾರಿ ಪೂರ್ವಪರದಲಿ ಯಿನಶೆಸಿ । ತೋರುವಂವದಿ ನಿಂದು ಕೈಕೈಗರೆವ ಸಮು
ಯದಲೀ ॥ ೫೫ ॥ ಅತುಳರೀರ್ವರು ವಿಾರಿ ರಣ ಸಂ । ಗತಿಗೆ ನಿಂತರದೀಗ
ನಿಲ್ಲಿಪ । ಹಿತರದಾರಿಲ್ಲಾನು ನೀಕ್ಷಿಸಲಾರೆನೆನುತಾಗಾ ॥ ಗತಿಸೆ ಭಾಸ್ಕರನಪ
ರದಿಗ್ವದು । ರತಿಗೆ ರಾತ್ರೀಗಾಹನವ ಸಂ । ಗತಿಯುನಿಲಿಸೆಂದೊದರೆ ಕಹಳೆಗಳು
ಭಯಭಾಗವಲೀ ॥ ೫೬ ॥ ತಮ್ಮ ಕರಶಸ್ತ್ರಗಳ ಯಿನಶೆಸಿ । ಗಿಂಮಿಗಿಲ ಕಾಂ
ತಿಯೊಳಗಾಯಿನ । ಗಂಮನೈದಿದ ನರಿಯದಳೆ ಜೆರಗಾಗಿ ಯುವನಿವನಾ ॥ ಕು
ಮ್ಮ ಮಾತುರಪಡಿಲಿಕೆಂನೊಳ । ಗುಮ್ಮಿಪ್ರೇಕವಲಿ ಯಿತರರು । ಗಮ್ಮ ಸಾಲ
ಯಕೈದಿ ಬಂದರು ಜೆಳಗಿಲಾತೆರದೀ ॥ ೫೭ ॥ ನಿಂದರಾತಂಕವಲಿ ಯಿತ್ತೆರ ।

ದಿಂದುಮುಖಿಯರುಚಾಮರವನಲ | ವಿಂದಬೀಸುವರಂತರದಿ ಶ್ರೀರಾಮುದಶಮು ಖರೂ || ಹೊಂದಿದೆಡೆವೀರರೊಳುಪೂರ್ವರು | ಬಂದರಂಕದಕಣಕೆಬಹು ಬಲ| ದಿಂದತೂರ್ಯತ್ರಯದ ಬಿರಿದಿನಕಹಳೆನೊರವಿನಲೀ||೫೮|| ಅಂಗಜಂಗವರೆಂದಿ ನೊಲುರಣ | ರಂಗಕೈದಿದರೆಂದುಕಹಳು| ತ್ರಂಗಿಸಲುತದ್ವನಿಯನಾಲಿಸಿಬೇಗಲಿಂ ದ್ರಾರೀ || ಸಂಗರಕೆಬಹನೆಂದುಬಿರಿದಿತ| ರಂಗಳಲಿಕೀರ್ತಿಸಲು ಮೂರ್ಚೆಯ| ನಂಗಿಕರಿಸಿದನಪಹರಿಸಿಯ್ಯೆತಂದ ಮಾರೀಚಾ || ೫೯ || ಅರಿದುಬಹ ಮಾರೀ ಚರಿಗೆ ಸ್ಮರ | ನೊರೆದನೆಲೆದೈತ್ಯೇಶ ಪ್ರಾಣವ | ನಿರಿಸಿಯನುಗೊಳಿಸಿದರೆಮೂ ರ್ಚೆಯಮತ್ತುರಣಮುಖಕೇ || ಬರಲನಡ್ವನೊಕಾಲಗತಿಯಳ | ತರುವುದೋ ಯಿಂದ್ರಾರಿಯನು ಬಿ | ಟ್ಟರುಗಸೇರದ ನೋಡಿ ಬರುವಂತೆಂದನಬುಜಾಸ್ತ್ರಾ|| ನೋಡಲೆನಿಂದ್ರಾರಿಗೆ ತ್ರೈಜಗ | ನಾಡರೆದುರಿಲ್ಲಸುರ ಖೇಚರ | ರೀಡೆಯನಗೇ ಜಗಕೂಗುವ ನಿಂನೆ ಮೋಸದಲೀ || ಮಾಡಿದಜ್ಞಾನಿಂದು ಬಂದ್ಕೈ | ನೋ ಡುಹರಟಿಷ್ಟೆಂದು ಮುಂದೊಡ | ಗೂಡಿದನು ಮಾರುತಿಯ ಸಮರಕೆ ಶೂರ ಮಾರೀಚಾ || ೬೧ || ಕಂಡುವೋರೋರ್ವರನು ಪಲ್ಮಸೆ | ಗೊಂಡುಮುಂಗೈ ಖಡಿದಖತಿಮನ | ಗೊಂಡು ಶಸ್ತ್ರಗಳೊದರಿ ಕೆದರಿದರಷ್ಟ ದಿಕ್ಕುಗಳಾ || ಅಂಡಿ ಸಲು ಪ್ರತ್ಯಾಸ್ತ್ರದೊಳಗವ | ಬಂಡುಗೈದುದ್ದಂಡದಲಿ ಕೈ | ಚಂಡವಿಕ್ರಮಿ ವಿಶಿ ಖವಿರಚಿಸಲಾಗ ಕೌತುಕವಾ || ೬೨ || ಮುಚ್ಚಿ ತಮತಮುಗಲದೆಬಲಬೆ | ಬ್ಬಚ್ಚುವಂದದಿ ಸುತ್ತ ಮುತ್ತೊಳ | ಚುಚ್ಚುತಿಹ ದಿವ್ಯಾಸ್ತ್ರ ಕೈಬಲವಿದ್ಯ ಬಲ ದಿಂದಾ || ಯಚ್ಚಶರಕಂಣರಿವ ಧರೆಯಾ | ಗಚ್ಚಿಸಿರಲಾನೀಕಿನಿಗಳದ | ಕು ಚ್ಚನಡೆವಂತೆಸಗಲಾ ಸಾಹಸಿಗಳಂದಿನೊಳೂ || ೬೩ || ತೊಟ್ಟ ದಿವ್ಯಾಸ್ತ್ರಗಳ ಶಳೆಶಳೆ | ದಿಟ್ಟ ನಡುಮಧ್ಯದಲಿ ಖಡಿಖಡಿ | ದೊಟ್ಟ ದಹಿಸುತಲನಿತು ಯಿನಿ ತೆನಡಂತೆ ಸಾರುವೆಯಾ || ಕಟ್ಟುವರು ಕೈಮಿಂಚಿ ಬಿಲ್ಕವ | ಚಟ್ಟ ಕೆಡಹಲು ತೋರಿ ಅಡಿಗ | ಗ್ರಿಟ್ಟು ಕಂಖಾರಿಸುತ ಕುಲಿಕುಲಿನಾಲಿವೊರಯುತಲೀ ||೬೪|| ಗಣನೆಗಿಡದೋರೋರ್ವರನು ಸಿರ | ಮಣಿಯುದಾತಂಕವಲಿ ಕೈಸೆಂ | ದಣಿಯು ಲುರುಗಾಸ್ತ್ರಾದಿ ವಿದ್ಯಾವಿತರಣಾಸ್ತ್ರಗಳಾ || ಕುಣಿಸುವರು ಮಧ್ಯದಲಿಮಣಿಸ ವ | ರಣಕಗೈವರದೇನು ಕಲಿಗುಣ | ರಣ ಬಳಾಹಕರ ಸಮಶರ ಮಾರೀಚರೆ ಚ್ಚಾಡೇ || ೬೫ || ಬಿಟ್ಟಶರವನಿತಂತರದಿ ಖಡಿ | ದಿಟ್ಟಶರವನಿತೆಂಬುದಿಂನೆಡೆ| ಯಿಟ್ಟಶರವೆನಿತೆನುವದರುಹಿರದಂತೆ ಸಚ್ಚಳಕಾ || ವಿಟ್ಟುವೆಚ್ಚಾಡಳುಕದಲೆಬ ಹು | ಸಿಟ್ಟಿನೊಳುಯೋಚನೆಯುಗೈದಳ | ವಟ್ಟುರುದಿರೋದ್ಗಾರಿ ಗಧೆಗಳಬಿಟ್ಟು

ಬಿಲ್ಕೋಲಾ ‖ ೬೬ ‖ ಧರಿಸಿ ಗಧೆಯುಮನಂತೆ ಭೈರವ । ರಿರವ ತೋರಿದರೀ
ರ್ವರಿಗೆ ಸರಿ। ಧುರವದಲ್ಲದಲಾಗ ಲಾರಾಗೆದುರಿಗೈದಿದರೇ ‖ ಕರಗಿ ಪೋಗುವ
ರಗ್ನಿಯುಡೆಯೊಳ । ಗಿರುವ ನವನೀತದೊಲು ಆರೊಡ । ಗರೆಯುದಾಹವವನಿ
ನಾಯಕನೆಂದನಾಮುನಿಪಾ ‖ ೬೭ ‖ ತಾಳ್ದು ಭೀಮಾಕಾರದೊಳು ಮನ ।
ತಾಳ್ದ ರೌದ್ರಾಕಾರದೊಳು ಕೈ । ತಾಳ್ದ ರುಧಿರೋದ್ಗಾರಿಗಧೆಗಳ ನೊಲೆದಪಕ್ಷಿ
ಗಳಾ ‖ ಬಾಳ್ದಲೆಯುವುಡ್ಡೀಣ ಪ್ರೌಢ್ಢೀ। ಣಾಳ್ದು ಗೈದು ಗಧಾಯುದಂಕದ।
ತೂಳ್ವವಾಳೋಕಿತದೊಳಂಜಿವರುಭಯ ಬಲವರರೂ ‖ ೬೮ ‖ ನೋಡಿಯಿಂ
ದ್ರಾರಂಗದರು ಯುವೆ। ಗೂಡದೇವೆನುತಿರಲು ರಘುಜರು । ನೋಡಿಯಾಶ್ಚರಿ
ಸಂಗಜದಲಿಂ ನಾನು ತಾನೆಂಬಾ ‖ ರೀಡರೇ ಮಾರೀಚಗೆನುತಿರ । ಲಾಡಿದನು
ದಶಕಂಠನಂಗದ । ಕೂಡಿದರೆ ಸೈಗೈವ ಮಾರೀಚನುತಿರಲಲ್ಲೀ ‖ ೬೯ ‖
ಇಟ್ಟು ಡೊಗ್ಗಾಲರ್ಧ ಡೊಗ್ಗಾ । ಲಿಟ್ಟು ಸಸಿನದಿ ಹಾರಿ ಅಂತರ । ಬಟ್ಟೆ
ಯೊಳಗಬ್ಧಿಯನು ಮುಟ್ಟಲು ಯಿಳಿದುಸರಿ ಸಾಮಾ ‖ ಗೊಟ್ಟು ಆರೇಳ್ಸೂಳು
ತಮುಕೈ। ದಿಟ್ಟದಿಂ ಗದೆದಟ್ಟ ವಿಗ್ರಹ। ಮುಟ್ಟಸದೆ ಕೊಲುವಾತುರದೊ
ಳೊಲೆದಾಡಲಾಹವದೀ ‖ ೭೦ ‖ ಸಾಧ್ಯಗೊಡದಿರ ಲೋರ್ವರೋರ್ವರ ।
ಸಾಧ್ಯದುತ್ತಾಳದಲಿ ಕೈಯ । ತ್ತುದ್ಯಕೊಗೆವರು ತಟ್ಟುವರು ಮತ್ತೆತ್ತಿ ಕುಟ್ಟು
ವರೂ ‖ ಪದ್ಯಗಳಲೊದೆವೆಂದು ಆದ್ಯೀಸ । ದ್ಯಹತಗೈವಾತುರದಿ ನಭ ।
ಕುದ್ಯಗೊಳೆ ಮಾರೀಚ ಮಸ್ತಕ ಕಿಳುಹಲಾತುರದೀ ‖ ೭೧ ‖ ವೋರಿಸಿದ
ನುರು ತೊಡೆಗಳಿಗೆ ಗಧೆ। ಸೇರಿಸಲು ತುಂಡಾಗಿ ಬಲ್ರವ। ದೋರಿ ವಾರುಧಿ
ಗುರುಳಿ ಬಿದ್ದನು ಶೂರ ಮಾರೀಚಾ ‖ ಬೀರೆ ಜಯಘೋಷಸದಳನ ಸಂ। ಹಾ
ರವೀಕ್ಷಿಸಲಾರದಬ್ಧಿಯ । ಗಾರಸೇರಿದ ಪದ್ಮಬಾಂಧವನಪರ ಭಾಗದಲೀ‖೭೨‖
ಮಾತುಳನ ಅಳಿವರಿದ ಚಕ್ರವ। ನೀತಳವನೆತ್ತೊಗೆವ ಅತಿಕುಪಿ। ತಾತು ಯೀ
ಳ್ವನಿತರಲಿ ಯಿಂದ್ರಾರಂಗದನ ಮೇಲೇ ‖ ಪೂತುರೇ ಮುಜಭಾಪು ಯನುತತಿ ।
ನೂತನಾಸ್ತ್ರಗಳೆರಚಿಯುರಗ । ಲ್ಯಾತುಬರೆ ಘಟಕರ್ಣಮಾರುತಿಯುಗ್ರ ಘುಡಿಘು
ಡಿಸೀ ‖ ೭೩ ‖ ಬರಲುಬಹುದವ ವ್ಯಾಳ್ಯದಲಿ ದು। ರ್ದರದ ಸಾಹಸರೆಂದುಅ
ಡ್ಡೈ। ತರೆ ವಿಭೀಷಣ ಧರ್ಮಗಹಳೆಗಳುಲಿಯಲಿತ್ತೆರದೀ ‖ ಅರಿದುಜ್ಞಾತಿಗ
ಳಂಜಿನಿಜಕ। ರ್ತರುಗಳಿದ್ದೆಡೆಗೈದು ತನಘನ । ಚರಣ ಸ್ಮರಣೆಯೊಳತ್ತ ದಾನ
ವರಿತ್ತ ಖೇಚರರು ‖ ೭೪ ‖ ಕಲಿಲಹರ ಮುನಿಸೂವ್ರತಾಂತ್ಯದಿ। ಚಲಿತರಾದಾ
ರಾಮಲಕ್ಷ್ಮಣ। ರೊಲವಿನೀಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ‖ ಲಲಿತ

ದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆಗೈದರಿದಮನ । ವೊಲಿದುಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೭೫ ॥

ಅಂತು ಸಂಧಿ ೬೫ ಕ್ಕಂ ಪದನು ೩೭೯೮ ಕ್ಕಂ ಮಂಗಳಮಹಾ ಶ್ರೀ ಶ್ರೀ

ಅರವತ್ತಾರನೆಯ ಸಂಧಿ.

ಅಂಗದನ ಸಂಧಾನದ ಸಂಧಿ.

ಅಳಿದ ಮಾರೀಚನಿಗೆ ಮನಖತಿ । ದಳೆದ ದಶಕಂದರಗೆ ಜಾನಕಿ । ಕಳುಹು ಬೇಡೀಕಲಹವೆಂದ್ಯೈ ದುಲಿದನಂಗದನೂ ॥ಪಲ್ಲವಿ॥

ಕೇಳಿದೈ ರಾಜೇಂದ್ರ ಬಹು ಛಲ । ದಾಳಿ ಕಾದಿದರೀರ್ವರೊಳು ವು । ತ್ತಾಳನಾ ಮಾರೀಚನಾ ಹತಗೈದ ಮಾರುತಿಯಾ ॥ ಕೋಳಗೈಲಿಂದ್ರಾರಿಘಟಕ । ರ್ನಾಳುತನದಿಂ ಬರುವರನು ಕೈ । ತಾಳಿಸಿದನಬ್ಧಿನಿಯ ಪ್ರಿಯಸಹಿತಾವಿಭೀಷಣನೂ ॥೧॥ ನಿಲಿಸಲಂದಿನ ಕಲಹವನು ನಿಜ । ನಿಳಯಕೈದತಿ ದುಗುಡದಲಿ ಮನ । ದೊಲುಮೆಯೊಳು ರಘುರಾಮ ದಶಸಿರರಿರಲು ಮತ್ತತ್ತಾ ॥ ಲಲನೆಜಾನಕಿಗಾಗಿ ನಾಗಿನ । ಕಲಹವರುಹುತಲಂದು ಹತಗೊಂ । ಡಲಘುಸಾಹಸಿಯಾದ ಮಾರೀಚನಲು ಲಘುಪರ್ಣೀ ॥ ೨ ॥ ಅಳಿದನೇ ಮಾರೀಚನಾ ಹಾ । ತುಳಿಲ ಸಾಹಸಿಯೆನಿಸಿದನ ಕೆಡೆ । ದುಳಿದನೇ ಪಂಚಾಸ್ತ್ರ ಯೇವಿಂನಾತನಾತ್ಮಜೆಯೂ ॥ ಅಳಲುವಳೆ ದಿನದಿನಕೆ ದುಃಖವ । ಗಳಿಸಲೇ ನೆಸಗಿದನು ದಶಸಿರ। ತಿಳಿಯದೇ ಜನರೋಕ್ತ ಕೇಳದಲೆಂದಳೊಯ್ಯೇಹೀ ॥ ೩ ॥ ಇತ್ತ ಕಾರ್ಯಬಲಾಬಲಗಳರಿ । ಯುತ್ತಲಿರಬೇಕೆನುತಲಾಹವ । ದತ್ತಲೊಂದಾಳಿರಿಸಿದಾತ್ಮೈತಂದು ಆನತವಾ ॥ ನಿತ್ತು ಮಾರೀಚಿಂದಿನೊಳು ಹತ । ವೆತ್ತನೆನಲಾ ವಾರ್ತೆಯನು ಕೇ । ಳುತ್ತ ಮೂರ್ಛೆಯಗೊಳಲು ಮಂಡೋದರಿಯು ದುಃಖದಲೀ ॥೪॥ ಬಂದುಶ್ರೀಮಾಲಳಲಿ ಶೈತ್ಯಂಗ । ಳಿಂದಲೆಚ್ಚರಗೊಳಿಸಲತಿಬಳ । ಲಿಂದ ಹೊರಳುವ ಅಕ್ಕನೊಳಗಿಂತೆನಲು ಮೃದುವಿಂದಾ ॥ ಕೊಂದನಾವನು ಆತನಿಗೆಹತ । ವೆಂದರೇನಾಚರಸ ಮಾತ್ಕೇ । ಳೆಂದ ಅನುಜಾತೆಯನು ಕೈವಿಡಿದಾಗ ಮಯ

ತನುಜೇ ॥ ೫ ॥ ಹುಸಿಯನುಲಿವನೆ ಆಪ್ತ ನಿನಗು । ಬ್ಬಸವದೇಕವನಲ್ಲಿ ಮ
ತ್ತೊಂ। ಮುಸುರಿಸೆನೆ ಶ್ರೀಮಾಲೆ ಕೇಳ್ದಳು ನಿಶ್ಚಯದ ನುಡಿಯೋ ॥ ಹುಸಿ
ಯೊ ಪೇಳೆನಲಿಷ್ಟರೊಳು ಕಳ। ವಿಸುವದುಂಟೇ ನೀವು ಕರ್ತಾ । ಗುಸುರುವರೆ
ಮಹದೇವಿ ಯನಲಾ ದೂತನದಕೇಳೀ ॥ ೬ ॥ ಆವನಿಂಮರಣೆನಲುಅಸದಳ।
ಪಾವನಿಯನಿಂದೆನಲು ಆತಹಿ । ತಾವಲಂಬನನಾದನೇ ಯನಲನುಜೆ ಯೇನೆಂ
ದೂ ॥ ಭಾವಿಸದೆ ರಾಜೀಕವನು ಯೇ। ನೆವೆಪೇಳಲೀ ನಿನಗೆವಂಚನೆ। ಗಾವಿ
ಸರುಹಿದೆ ಖರನಧೂಷಣರೀರ್ವರಾ ಹತವಾ ॥ ೭ ॥ ಅಷ್ಟೆಯಲದಿಂನೇನುಅ
ಧಿಕದ। ರಿಷ್ಟವಾಗಿಹುದೆನಲು ನಮಗು । ತ್ಕೃಷ್ಟ ಕಷ್ಟೈದಿರುವ ಕಾಲದೊ
ಳೇನು ಬಚ್ಚಿಟ್ಟೊ ॥ ಶ್ರಿಷ್ಟಿಸುತೆ ಯೈದಿಸಿದ ಮಾರ್ಗವ। ದಷ್ಟಕಂಡಿರುವಷ್ಟೆ
ನಿಂನುಳಿ! ದಷ್ಟ ಪೇಳುವೆ ಕೇಳು ಅನುಜಾತೆನಲು ಮಯತನುಜೇ ॥ ೮ ॥
ಬಂದು ಸುಗ್ರೀವವನನಿಜೆಯ ಪ್ರಿಯ । ನೊಂದಿ ವಾಲಿಯ ಕೊಲಿಸಿ ದಾದಿಯ।
ದೊಂದನುಳಿಯದೆ ಪೇಳಿ ಅಂಗದನಾದಿ ಕಪಿವರರೂ ॥ ಬಂದು ಕೂಡಿಹರೆಂದು
ವಿಸ್ತರ। ದಿಂದ ತಿಳಿಸಲು ಅಗ್ರಜನ ಹತ । ಕಿಂದುಮುಖಿ ಶ್ರೀಮಾಲೆಯಳಲು
ತಬಳಲಿ ಕಳವಳಿಸೇ ॥ ೯ ॥ ಬೊಬ್ಬಿಡಲು ಶ್ರೀಮಾಲೆ ಮಯಸುತೆ। ರಬ್ಬರಕೆ
ರಾಜಾಂಗನೆಯರಳ । ಲುಬ್ಬಲಬ್ಧಿಯ ಘೋಷವಾ ಪ್ರಾರಂಭ ಶೋಕದಲೀ ॥
ನಿಬ್ಬರಿಸೆ ಮಯತನುಜೆ ಬೇಗ್ತಿಳಿ। ದುಬ್ಬಿ ಬಹದುಃಖವನು ತಂಬಿಸು। ತೊ
ಬ್ಬಳಿಯ ಸಖಿಯರಿಗೆ ಧೈರ್ಯವನುಲಿಪು ನಿಲಿಸಿದಳು ॥೧೦॥ ಆವ ಸಮಯ
ದೊಳೇನು ಸುಖಕ। ಷ್ಟಾವಲಂಬಿಪುದದಕೆ ಹಿತಸಂ । ಭಾವ ಬಡಬೇಕರಿದು
ಅಸ್ಥಿರವಿದಕೆ ದುಃಖವನೂ ॥ ಕಾವಿಸುವದೇಕಾದುದಾಗಲಿ। ಭಾವೆ ಜಾನಕಿ
ಮೂಲವನು ಸಂ। ಭಾವ ಕಾಲ್ಗತಿಗೆನಲು ಮಂಡೋಧರಿಯು ಮರುಗುತಲೀ॥
ಇರಲಿ ಹೀಗಿತ್ತಸುರನಾಯಕ। ಮರುಗಿದನು ಮಯನನುಜನಸದಳ। ಧುರಪ
ರಾಕ್ರಮಿಸತ್ತ ಪರಿತಾಪಾಕ್ರಮಿಸಿ ಮನಕೇ ॥ ವರೆದ ಘಟಕರ್ಣೆಂದ್ರಜಿತುದಿನ।
ಕರನು ಮಿಂಚಲು ಬಿಡದೆ ಮಾರುತಿ। ಹರಿಸುವದಕಾ ಧರ್ಮಕಹಳೆಯ ಧ್ವನಿ
ಯಗೇಳ್ನಿಂಮಾ॥೧೨॥ ಪದಕೆ ಬೇಸರು ಬಹುದ ಕುರಿತೈ। ದಿದುದೆಸರಿ ಯಾಗಿ
ತ್ತು ಬೆಸನದ। ರದಟನೋಡೆನಲೇನೊ ಜಯವಪಜಯಗಳಾರಿಚ್ಛೇ ॥ ಪದು
ಮಬಂಧೈತರಲಿ ಆಗಂ। ಗದನು ಅಂಗಜರಾಟವನು ನಿಮ। ಗೊದಗಿ ತೋರು
ವೆನೆಂದನಾ ಚಕ್ರೇಶಕೋಪದಲೀ ॥ ೧೩ ॥ ಮುಚ್ಚೆ ಬಲತ್ಕರದಿಂ ಕಂಡೆವೆ।
ಯುಚ್ಚುತಿಹವಳ ಸಂಗಟದೊಳಾ। ಗಚ್ಚವಾಲೋಕಿಸುತಲಿರೆ ದಿನಕರನ ದಾನ

ವರೂ ॥ ವಿಚ್ಚರರಬಲಕರ್ತುರ್ ಶ್ರೀರಘು । ಅಚ್ಚುತರು ಮಾರೀಚನಾ ರಣ। ವೆಚ್ಚನಾದುದಕತಿದುಗುಡದೊಳಗೆಂದರಿಂತೆಂದೂ ॥ ೧೪ ॥ ಸ್ವಾರ್ತ್ಥವಲ್ಲದ ಕಾರ್ಯನವಗವ। ಗೊರ್ತಿಸಿತು ದಾನವನ ವಂಶವ । ನರ್ಥದೊಳು ತೇಲುವ ದು ದಶಮುಖನರಿಯದಲೆ ಮೂರ್ಖ ॥ ವರ್ಥಿಯಾಗಿಹನಿಮಗೆ ಪೂರ್ವದೊ। ಳರ್ಥಿಬಾಂಧವರಂಕದೊಳಗೆ ಸ। ಮರ್ತಿಕಿಲ್ಲದೆ ಕೆಡುವಗೇ ಗತಿಯುಂದ ದಾಶರಥೀ ॥೧೫॥ ಅಂಜದರು ಸುತರೆಲ್ಲ ರಣಸಿರಿ। ಭುಂಜಕಾದರು ಹಸ್ತಪ್ರಾಹ। ಸ್ತಿಂಜಯರು ಯಿಂದ್ರಾರಿ ಘಟಕರ್ನಲ್ಲದಲ್ಲಿಂನೂ ॥ ಸಂಜೆನಿಸರಲ್ಲಿರ್ದರೊಳಗೆ ಪ್ರ। ಭಂಜನಾತ್ಮಜ ಹತಿಸದನೆ ರಣ। ಸಂಜಯೋದ್ರ್ರುಘನಂದು ಮುರುಗಿದ ಮತ್ತು ದಾಶರಥೀ ॥ ೧೬ ॥ ಹೇಗೆ ವ್ಯರ್ಥದೊಳೆಲ್ಲರನು ಸಮ। ನಾಗಿಕೊಂದ ಳಿವಸುರನಿಗೆ ತಿಳು। ಹಾಗೆಪೇಳುವರಿಲ್ಲ ಮೇಣುಲಿದೋಕ್ತವನುಕೇಳೀ ॥ ಬೀಗಲಾಗಿಹನಲ್ಲವೆನುತುಲಿ। ವಾಗ ನಂಗದನೆಂದ ನವಧರಿ! ಸೀಗಲೇನಾನ್ಯೆದಿ ತಿದ್ದುವೆನಸುರನಾಯಕನಾ ॥ ೧೭ ॥ ಕೇಳಿ ಯಂಗದನೋಕ್ತಕ ಪ್ರತಿ। ಹೇಳಲಾಗ ವಿಭೀಷಣನು ಮೂ। ರ್ಕಳುದಶಮುಖನೆಡೆಗೆ ಪೋಗಾರುಲಿಯೆ ನೀತಿಗಳಾ॥ ಕೇಳ ಮುಂದರಿಯದಲೆ ಕೆಡುಬಗೆ। ವಾಳು ಸರಿ ಯನಲಸಮಶರ ಸಂ। ಬಾಳಿಸುವ ನುಡಿಯಿಟ್ಟನಾ ರಘು ವಿಭೀಷಣಗೆ ಸಹಿತ ॥ ೧೮ ॥ ಆತ ಪ್ರಬಲಿಗನಹುದು ಪೂರ್ವವ । ನಾತ ಬಾಂದವರಾದರನುಚಿತ । ವಾತಕಾರ್ಯವ ಗೈದನಾದುದರಿಂದ ಲಂಕವನೂ ॥ ಆತು ನಿಲಬೇಕಾದುದಾಗೊಂ। ದ್ಮಾತಪೇಳಿರ್ದಂಗದೈದೊಂ । ದ್ಮಾತ ಪೇಳಲಿ ಹೀನವೇನದಕೆಂದ ನಬ್ಜಾಸ್ತ್ರಾ ॥೧೯॥ ನೀನು ಪೋಗಿದೊರ್ರರದೆನಾನವ। ಗೇನುತೆರದೊಳು ಪೇಳ್ದರೂತನ। ಹೀನಬುದ್ಧಿಯ ಬಿಡದ ಮೂರ್ಖಗೆ ಮತ್ತು ಸಂದಾನಾ ॥ ಕಾನುವರೆ ಯಿದಿನದ ರಣಸ। ನ್ಮಾನಗೊಳಿಪುದೆ ದಶಮುಖನಹಿತ। ವೇನು ಶಲವಿಲ್ಲನೆ ವಿಭೀಷಣಮುತ್ತು ಮಾರುತಿಗೇ ॥ ೨೦ ॥ ಭ್ರುಷ್ಟ ಜನರೊಳು ಸಲದು ಕರುಣವ । ರಿಷ್ಟವನೆಯೋಚಿಸಲು ಅವಸಂ। ತುಷ್ಟ ಬಡುವನು ಮೇಣು ಯಿಂದಿನೊಳಧಿಕಸಮುರವನೂ ॥ ಸ್ರುಷ್ಟಿಸಹನಂಗದನ ಕಳುಹಲ । ರಿಷ್ಟವೇಚಿಸಲವರು ನಮಗೊಂ। ದಿಷ್ಟು ಸಂಗಟವೆಂದ ರಾಘವಗಾಗ ಲಕ್ಷ್ಮಣನೂ ॥ ೨೧ ॥ ಜಾಂಬವನುನಳ ನೀಲಸುಗ್ರೀ। ವೆಂಬರೀಸಮಯದಲಿ ಅಹಿತನ। ನಂಬಿ ಅಂಗದನಟ್ಟಲಾಗದು ಮೇಣು ಯಿವನೋಕ್ತಾ ॥ ನಂಬಿ ಅಂಗೀಕರಸನೆನಲೆ। ಲ್ಲಂಬನಾತಿಗೆ ರಾಘವನು ಬೇ। ಡೆಂಬ ನುಡಿವಿಡಲಾಗ ಅಂಗದ ನಗುತಲಿಂತೆಂದಾ ॥ ೨೨ ॥

ಕೊಂದರೆದುರಾಗೊಧಿಸುವದೆ ನೃಪ । ರಂದವಲ್ಲದಲಹಿತನಾದನೆ । ಸಂದಿಗ್ಯೆತಂ
ದಾಗ ಸಮರವ ಗೈವೆನೆಂದೆಂಬಾ ॥ ಸಂದಿಗುಸುಕವನಲ್ಲ ಮೇಣ್ಬರ । ಲಂದು
ವನು ನಾನಲ್ಲವಿದನೀ । ಸ್ಸಂದೆಹಿಸ ಕೆಲಸಿಲ್ಲ ರಾಘವರೆಂದ ನಂಗದನೂ ॥೨೩॥
ಯನಗು ಕರುಣುಂಟುಚಿತ ಬಂದುಗ । ಳೇನುವದವ ಗೈದನ್ಯಯಕೆ ಮನ ।
ಮುನಿಸು ಬಹುದಿಂನೊಂಮೆ ಸನ್ರುಚಿ ಯುಲಿಯಲದಕಾತಾ ॥ ವಿನಯಗೊಳ
ಲುಚಿತಲದೆ ಕುನಯುವ । ನೆನೆದರತ್ಯುಚಿತವನ ಘಣಿಲಿಖಿ । ತೆನಿಸುವದೊಯೇ
ಮಾತ ಕೇಳ್ಬಹೆನೆಂದ ನಂಗದನೂ ॥ ೨೪ ॥ ನಿಂನೆ ಕಲಹಕೆ ಬೇಡವೆನೆ ಆ ।
ಗನ್ನು ಆಮಾತುಲಿದೆನಿಸಿ ಯುಹಿ । ತೆನ್ನದೈದುವೆನೆಂಬೆ ಯಣುಗನೆ ಹೇಗೆ ಕಳು
ಹಿರಲೀ ॥ ಯಂನೆ ರಘು ಪೂರ್ವಾರ್ಜಿತಕೆ ಪ್ರ । ತ್ಯಂನುವದೆ ಹುಸಿ ಕೃತಕ
ಗೊಳಲವ । ರನ್ನು ನಿಶ್ಯೆೀಷಿಸುವೆ ಬೆಸನೀಯಂದ ನಂಗದನೂ ॥ ೨೫ ॥ ತಕ್ಕ
ವಿದ್ಯಾಧರರ ಬೆಂಬಲ । ಕಿಕ್ಕಿ ಪೋಗೆನೆ ಸಾಲು ಪಂಜಿಂ । ಬಿಕ್ಕಿಸೇರಿ ವಿಮಾನ
ಮಹತಾಪುಜ್ವಲಂಗೈಸೀ ॥ ಗಕ್ಕನೈದಾಬರುವ ದಸುರನೊ । ಳಿಕ್ಕು ದೆಂದನು
ಜೀವಿಯನು ಕಳು । ಹೆಕ್ಕುಟಾನ ಕರವದಿ ಬಂದನು ಭಾಸ್ಕರಾತ್ಮಜನೂ॥೨೬॥
ಚರನ ನುಡಿಗೇಳ್ದಸುರನಾಯಕ । ಹಿರಿದ ಕತ್ತಿಯ ಪಾರಿಯಾಳ್ಗಳೊ । ಳಿರಿಸಿ
ಯಡದಲಿ ಯಿಂದ್ರಜಿತು ಘಟಕರ್ನ ಬಲದಲ್ಲೀ ॥ ಯರಡನೆಯ ಪರಿವೃಡನೊ
ದಂಡಾ । ಧರನ ಕುಪಿತದೊಳಿರಲು ಘಟಕ । ರ್ಣೋರೆದನವಬರಲುಕಾಣೇ
ನಿಲ್ಲೆಂದನಗ್ರಜಗೇ ॥ ೨೭ ॥ ಗುದ್ದಿ ಮುಖವೇ ಕಾಂತನುಡಿಗಳ । ಮುದ್ದೆಯ
ಹಿತರೊಳಧಿಕ ಅಹಿತನ । ಸುದ್ದಿನಮುಬಳಿಯಾಕೆ ರಣದೊಳಗಲ್ಲದೆನುತಾಗ್ರಾ॥
ವೆದ್ದಅನುಜಾತನಿಗೆ ರಣಸಂ । ಬದ್ದತಿದ್ದಗಳೊಳಗೆ ಸಮುಚಿತು । ರಿದ್ದನವನೇ
ಕ್ಷಾತ್ರಿ ಬರಲೇಳೆಂದ ನಸುರೇಂದ್ರಾ ॥ ೨೮ ॥ ಆನಿತರೊಳಗೈತಂದನೆರಡನೆ ।
ಮನುಮತನ ಸೊಬಗಿಂದ ಪುಷ್ಪಕ । ವನು ವಿಸರ್ಜಿಸಿ ಬಿಟ್ಟು ಸಹಯರ ಪೂ
ರ್ವನೀತಿಯೊಲೂ ॥ ದನುಜ ರಾಜನ ಚರಣಕೆರಗವ । ನನುಜ ಘಟಕರ್ನನಿ
ಗುತದ್ವಿದ । ವನುಕರಿಸಿ ಯಿಂದ್ರಾರಿ ಯಡೆಗೈತರಲು ಯಿದುರೆದ್ದೂ ॥ ೨೯ ॥
ತನುವನಾಲಿಂಗಿಸುತ ತಮುಸನು । ಮನವಗೊಳಲಿಡೆಯಲ್ಲಿ ಕಿರಿಯಾ । ಸನವ
ಕೊಡಿಸಲು ಕುಳಿತನಂಗದದ ದಶಸಿರನ ಬಳಿಯ ॥ ವನಿತೆಯುರಸಂಮುಂದದಲಿ
ಕರು । ಣನುಕರಿಸಿ ಯಿತರರಿಗು ನಯುನಾ । ಸ್ತ್ರೊರೆದವಾಗೆಂದಂಗದನು ಪ್ರಿಯ
ಮಾತುಳನಿಗಿಂತೂ ॥ ೩೦ ॥ ನೋಡಿ ಪಿತಗಧಿಕವನು ನಿನ್ನನು । ಗೂಡಿ ನಾ
ವಿರಲೆಮಗು ಹಾನಿಯ । ಮಾಡಿ ನಿನಗುದ್ರೇಕ ಸಂಗಟಕೂಡಿ ಬಹದೆಂದೂ ॥

ನೋಡದಾಚರಿಸುವರೆ ನಿನಗರೆ । ಗೂಡಿದ್ಯೈಸ್ವರ್ಯಾವುದ । ದನೀನಾಡಿತೋರಾ ತಿಳಿವತೆರನೆಂದುಲಿದನಂಗದನೂ ॥ ೩೧ ॥ ಯನ್ನ ದೆಸೆಯೊಳು ಹಾನಿ ನಿಮಗೆಂ। ತೆನ್ನ ಸಂಕಟಕಾದಕಾರಣ । ವನ್ನು ಆಚರಣೇನು ಸಟೆ ಯಿಂದ್ರಾರಿಗಧಿಕೆಂದೂ॥ ನಿನ್ನ ನೋಡಿರ್ದೆರವನಾಗಿಂ । ತೆನ್ನವರೆ ಸೂರ್ಯಜನೆ ಬಹುನ । ಙ್ಙನ್ನ ನೋಡದಲೆಂದನಸುರೇಶಾಗ ಅಳಿಯನಿಗೇ ॥ ೩೨ ॥ ದಟ್ಟಸದೆ ವಾಲಿಯನು ಸುಗ್ರೀ । ವಿಟ್ಟ ಮರೆಗೇಳದುದೆ ಯಮಗಿಂ । ನಿಟ್ಟ ಸಂಗಟ ನಿನಗೆ ಯೇನು ದ್ರೇಕ ಅಹಿತೆನಲೂ ॥ ನೆಟ್ಟ ಮುಳ್ಕಲ್ಗಳನು ಕಾಣದೆ । ಬಟ್ಟಯೊಳು ಬಹು ಮೃಗದ ನಿಚಯುವ । ನಿಟ್ಟಸದೆ ಪೋಪಂದ ನಡೆ ನಿನಗಾದುದೆಂಬುದನೂ॥ ೩೩॥ ಹೇಗೆಯನೆ ಪರನಾರಿಯೇ ಮು । ಳ್ಳಾಗಿ ಶಪಿತವೆ ಕವಣೆ ಕಲ್ಲುಗ । ಳಾಗಿ ಆಕೆಯ ಸಹಯರೇ ಮ್ರುಗವಾಗಿ ವ್ಯೆವರಿಸೀ ॥ ನೀಗುವವು ಅಲ್ಲೈದುವದ ಕಂ । ದಾಗಿ ಯಿರ್ದೆಂದೆಂಬ ಲೋಕೋ । ಕ್ತಾಗಿ ಯಿಹದಸುರೇಂದ್ರ ನೀನರಿಯೆಂದನಂಗದನೂ ॥ ೩೪ ॥ ಯಲ್ಲರಿಗು ಯೇನೇನೊ ಬುದ್ಧಿಯ । ಸೊಲ್ಲಿಪನಃ ನಿನಗೀಗಲದರರು । ಹಿಲ್ಲವೇ ದುರ್ವೋಹ ಮನವಿನ್ಸಹಜವಾಡಿಸದೂ ॥ ಯಲ್ಲ ನೀತಿಗಳಿರಲಿ ಬಹುದಿನ । ದಲ್ಲಿ ನೆಡೆದೆಮ ವಂಶದಲಿ ಪರ । ನಲ್ಲೆಯರಿಗಾ ವೆರಗಿದದ ತೋರೆಂದನಂಗದನೂ ॥ ೩೫ ॥ ಇರಲಿ ವರ್ಣವತಾರ ಜನರಿದು । ವರಿಗು ನೀನೆಂದಾನು ಯಿಾನಡೆ। ಗರೆದುದುಂಟೋ ವಲಿದು ಬಂದರಿಗುಲಿದುಪಾಯುವನೂ ॥ ತೆರಳಿಸಿದೊ ಆವಿವರವನು ಯನ । ಗೊರೆದು ಪ್ರಕಟಿಸಲ್ಲೈದುವೆನು ಯಿಲ । ದಿರಲು ನಾನುಲಿದಂತೆ ಲಾಲಿಪುದೆಂದನಂಗದನೂ ॥ ೩೬ ॥ ಯಾಕೆ ಬೇಕೆನರೆಯು ಪಿದ್ಯಾ । ಲೋಕೆಯರು ನಿನಗಿಲವೆ ವಲಿಯದ । ಳೇಕೆವರಿಸುವದಿಹದಿ ಪರದೊಳುಸುಖವನಾಶ್ರ್ಯಪಾ ॥ ದಾಕೆಲಸಗೈಯದಲೆ ಯಿಹದೊಳು । ಲೋಕವ್ಯೆರಂತ್ಯದಲಿ ಪರಸುಖ । ಕಾಕು ಬಡಲೀಗೇಕೆ ನಿಷ್ಠುರವೆಂದನಂಗದನೂ ॥ ೩೭ ॥ ಪರಸತಿಯು ರಥರಾದರಿಗು ಪರಿ । ಹರಿಪಸ್ಥಳಗುರು ಹಿರಿಯ ಮಿತ್ರರು । ಅರಸ ತಂನಾರೈವ ನಸದಳರಾದ ರರಸಿಯರಾ ॥ ತಿರುಗಿ ನೋಡಲು ಬಾರದೆಂಬೀ । ಪರಮ ನೀತಿಯ ತಿಳಿದ ಶೀಲನು । ಗರೆವರೇಯಿಾಕೆಲಸ ತರವಲ್ಲೆಂದ ನಂಗದನೂ ॥ ೩೮ ॥ ತರುವ ಸಮುಯದಿ ಕಳವಿನೊಳಗೈ। ತರಿಸಿ ಯಿಾಗವರೆದುರಿಗಾಹವ । ಗರೆವೆನೆಂಬುದು ಮಮುಳದಲ್ಲವೆ ಯಿಾಗಲೆನಮಾತೂ ॥ ಭರವ ಸಿರದಿರಲಿನ್ನು ಪ್ರಗ್ನ್ಯ । ಪ್ರೂರೆದ ತೆರ ನಿನಗೆನಗು ಸಮವದ । ಕರೆದುಃ ಕೇಳೇನುಲಿವಳಸುರೇಂದ್ರೆಂದ ನಂಗದನೂ ॥ ೩೯ ॥ ಸರ್ವಜ

ನಸಂಮುತವೊ ನಿನಗಿಂ । ತೋರ್ವಿದಂತೆ ಯೊಳಿರುವ ಸದಸಿಯ । ಳೋರ್ವ ಪೇಳಿದರದಕೆ ಸಂಮುತ ಬಾಲರಾದಿಯಲೀ ॥ ವೋರ್ವರಾಗಲಿ ಆಗಲೆಂಬದ। ತೋರ್ವಿಸಿದರಾನದಕೆ ಹಿತವನು। ಸಾರ್ವೆಬೇಡಶುರೇಶ ಲೋಕಹಿತೆಂದನಂಗದನೂ ॥೪೦॥ ಪೇಳುತಿಹ ಜನರೊಳಗೆ ಮರ್ಮವ । ದಾಳದಿರು ಪ್ರದ್ಯುಮ್ನ ನೀತಿಯು। ಹೇಳಿದರು ಮನಗೊಡದೆ ಮುರ್ಖತೆಗೊಳೆ ವಿಭೀಷಣನೂ ॥ ಕೇಳಿ ನಿನಗುಣವೇಕೆ ಯಿಾತೆರ। ಬೋಳಿಸಿದುದೆಂದುಲಿದರವನ । ಬ್ಬೇಳಿಸಿದೆಯಾಕಿಷ್ಟು ನಿಷ್ಟುರವೆಲ್ಲರೊಳಗೆಂದಾ ॥ ೪೧ ॥ ನೋಡಿ ಸಹಜನ ಜಾನಕಿಯು ಬಿ । ಟ್ಟೋಡಿಸಾ ರಘುಲಕ್ಷ್ಮಣರು ಖಗ । ನಾಡರನು ಕರೆತಹೆನು ನಿನ ಮನ ಪ್ರೀತಿಗೊಳುವಂತೇ॥ ಮಾಡುಕೈಗನು ಬಡದಕಾರ್ಯವ। ಮಾಡದಿರು ಬಹುಬಲರು ಅವರಿಂ । ಕೇಡು ಬರದಿರದ ಸುರನಾಯಕನೆಂದ ನಂಗದನೂ ॥೪೨॥ ಅಳಿವರೀಕ್ಷಿಸು ಹಸ್ತ ಪ್ರಾಹ। ಸ್ತಳಿದರೇ ಮಾರೀಚನಹಿತ । ಸ್ತೊಳಗು ಬಟ್ಟನೆ ಕುಂಭಕರ್ನನು ಯಿಂದ್ರಜಿತುವೆಂಬಾ॥ ರುಳಿದು ನಿನಸುತರೆಲ್ಲ ಗಾಬರಿ। ದಳೆದರೇ ಯಿನಿತೆಲ್ಲ ಕಾಠ್ಯ। ಕ್ಕೊಳಗು ನಾವಲದರು ಬಂದಿಲ್ಲೆಂದನಂಗದನೂ॥೪೩॥ ಮಿತ್ರರಾಗಾವಾವೆ ರಣಮುಖ। ಕೊರಿಸಲು ಬೇಕಾದುದನು ಭವ।ದೊತ್ರವೋ ಕಾಲಗತಿಯೊ ನಿಂನಡವಳಿಯ ಪ್ರಕೃತಿಯಾ ॥ ಚಿತ್ರವೋ ವೋರ್ದಂಡಲಾಗಿ। ದ್ದತ್ರಲೇ ರಘುಜಾತ ರಿಹ ವೈ। ಚಿತ್ರವೇನಸುರೇಶ ಕೇಳೋಕ್ತೆಂದ ನಂಗದನೂ ॥ ೪೪ ॥ ಮುದ್ರಿಕೆಯ ತಂದಿರ್ದ ವನವನು । ಪದ್ರಿ ಸಗ್ನಿಯ ತೋರಿಲೆಂಕೆಯ। ಭದ್ರವೆನಿಸಿದ ಮಾರುತಾಗಲೆ ಜಾನಕಿಯನೊಯ್ವಾ ॥ ಕ್ಷುದ್ರ ಬುದ್ಧಹುದ್ಯೊನದೊಳು ನಿನು। ಸದ್ರುವಂಗ್ಯೆಲೆಂದು ಬಿಟ್ಟದ। ನದ್ರುವೆನದಿರುಲಕ್ಷ್ಮವೇನವಗೆಂದ ನಂಗದನೂ ॥ ೪೫ ॥ ಅಲ್ಲಿ ಪರಿಯಂತರದಿ ನೀವೈ। ಲಿಲ್ಲವೆ ನುತಿರ್ದಾ ಪರೀಕ್ಷೆಯೊ। ಳಿಲ್ಲಿಗೈದರಿದ ವನಿಜೆಯು ಮನಮುರಿದುನಿನಗಹಿತಾ॥ ರಲ್ಲಿನಿಂತಂಗಜನು ನೀಮುಹ । ಬಲ್ಲಿದಹುದಾಗೀಗಲೀ ನಷೆ। ಸಲ್ಲದಾ ಮುಹೇಂದ್ರಿಯೈದಿಸುದೆಂದ ನಂಗದನೂ ॥೪೬॥ ನುಂಗುವನು ಮಾರೀಚನಹಿತರ। ಜಂಗುಳಿಯನಾ ಶೂರನನುಕ। ಣ್ಕೆಂಗಣೆಸಿದ ಸಹಾಯ ಮಾರುತಿಗುಳಿದ ದಾನವರಾ ॥ ಸಂಗರವೆ ಆಹಸ್ತ ಪ್ರಾಹ। ಸ್ತಂಗರನು ನಳನೀಲರು ಸುರೊಳ। ಗಿಂಗಿಸಿದರಸುರೇಶ ಶಕ್ತಿಲ್ಲೆಂದನಂಗದನೂ ॥ ೪೭ ॥ ಕೆಡುವುವೆಲ್ಲಾ ಪಿದ್ಯಭುಜಬಲ। ದೊಡತಿ ನಡೆನಳು ಕಂಣುಮುಂಜನ । ಗಡಿಸುವವು ನಿಜಬುದ್ಧಿ ಚಸಲವ ತೊಡಗಿ ತತ್ತರವಾ ॥ ಬಡಿಸುವದು ಅನ್ಯಾಯವೆಂಬ। ದೃಡವಜೇಷ್ಟಾದೇವಿ

ಆಶ್ರಯ | ಗೊಡುವಳೀ ಪರನಾರಿಗಳವಿಂದೆಂದ ನಂಗದನೂ ‖ ೪೮ ‖ ಕೊಲ್ಲು
ವರೆ ನಾವಸುರನಾಯಕ | ರಲ್ಲಿ ಕೈಯ್ಯಾಟಗಳೆ ಅಪಜಯ | ವಲ್ಲ ವಹುದೆಂಬು
ದನು ನೋಡಿನ್ಮುಳಿದು ಮುವ್ವರೊಳೂ ‖ ಯಲ್ಲಕಾರ್ಯಹುದುಳಿದಜನರಿಂ |
ನೆಲ್ಲಿಯಿರೆ ಸರಿಬೇಡ ನಿಮಗವ | ರಲ್ಲಿ ಕೈಕೊಳದಸುರನಾಯಕನೆಂದನಂಗದನೂ
‖೪೯‖ ಕಳುಹಿ ಸೀತೆಯ ರಾಮರೊಳು ಸಂ | ಮಿಳಿತ ಗೊಳಲಾಗೆ ಮಗು ನಿಜ
ಗೃಹ | ದೊಳಗಂಗನೆಯರಿಗೆ ಸುಹೃದಯಹುದು ಯಿಂತಿದಕೇ ‖ ಮಿಳಿತ
ಗೊಳು ನಿಂನಾತ್ಮಜರೊಳಾ | ನೊಳಗ ತಿಳಿದುತ್ರೀಯದಿರಲೇಂ | ತಿಳಿವೆ ಮಾ
ತುಳನೆಂದನಂಗದನೆರಗಿ ಪುನರುಕ್ತಾ ‖೫೦‖ ಮುದ್ದುಮಾತಿನ ವೈನಭಕ್ತ್ಯನು|
ಬದ್ಧಕೆತ್ತಾಲಿಂಗಿಸುತ ಮೊದ | ಲಿದ್ಧನೆಲೆಯೊಳಗಿರಿಸಿ ಯಲೆ ಸುಕುಮಾರ ನೀ
ನುಲಿದಾ ‖ ಬುದ್ಧಿ ಯನ ಮೆಚ್ಚಾದುದೊಡಬಡ | ದಿದ್ದ ಸಮಯದಿ ಕಳುಹ
ಬೇಕಾ | ಗಿದ್ದುದೀ ಗೈದಿಸಲು ಬಾರದು ಯಂದ ಸೀತೆಯನೂ ‖೫೧‖ ಸಾಲನೆ
ಯಿಂದ್ರಾರಿ ವೈರಿಯ | ಮೂಲವನು ಕಿತ್ತಿಡಲು ಪ್ರಳಯದ | ಕಾಲನಲ್ಲವೆ
ಕುಂಭಕರ್ನನು ನಾನೆ ಅಹಿತರಿದೇ ‖ ಶೂಲನಲ್ಲವೆ ಕದ್ದುವೈಯಂ | ದಾಲಲನೆ
ಪ್ರಜ್ಞಪ್ತಿ ಪೇಳಿವ | ಕಾಲಯದಿ ಶಕ್ತಿಲ್ಲವೆಂಬೆ ಯನಂಗದನಲಸುರಾ ‖೫೨‖
ತಂನಿಮಿತ್ಯದಿ ಅವರಬಲಕರ | ವನ್ನು ನೋಡುವೆ ಹಸ್ತ ಪ್ರಾಹ | ಸ್ತೆಂನುವರು
ಮೈಮರೆದ ಮುದದೊಳಗಳಿದರಿಂದೆಲ್ಲಾ ‖ ರನ್ನ ತಿಳಿದಂತೆಸಗೆ ಮೋಸದೊ |
ಳಿನ್ನು ಮಾರೀಚನನು ಜಯಸಿದ | ನಿನ್ನ ಮನಕರುಹಿಲ್ಲವೆ ಯಂಗದ ನಂದನಾ
ಚಕ್ರೀ ‖ ೫೩ ‖ ಆಗಿಯುಮು ಬಂಧುಗಳು ನರರಾ | ಳಾಗಿ ಬಾಳುವ ನೊಸಲ
ಲಿಪಿಯನು | ಲಾಗಿಸುವದಸದಳವು ನೀಯೇಗೈವೆನಾಳಿನೊಳೂ ‖ ತಾಗಲಾರಘು
ಲಕ್ಷ್ಮಣರ ಕೈ | ನೀಗಲೀಕ್ಷಿಸ ಅಹುದ ಅಲ್ಲೆಂ | ದಾಗ ಪೇಳುವೆ ನೀಗಲೇನಂ
ಗಡನೆ ಹೋಗೆಂಡಾ ‖ ೫೪ ‖ ಯಂನಪ್ರಬಲಕೆ ತರಲು ಬಾರದ | ಚನ್ನೆಯ್ಯೆ
ದಿಸಿದಾಗಲೇ ಬಿಡ | ದಿನ್ನು ಯಾಗೈದಿಸಲು ಪಂದೆಗನೆ ನರೆನೋಡಿದರೂ ‖ ಯಿ
ನ್ನುವಂದೆರಡಾಹವದಿ ಹಗೆ | ಯನ್ನು ಸಂಹರಿಸೈದಿಸುವೆ ನೀ | ಗಂನು ಬಿಡಸ
ಲ್ಲಂಗನೆಯ ಕೇಳೆಂದನಸುರೇಂದ್ರಾ ‖ ೫೫ ‖ ಮೊದಲು ವೊಂದೆರಡಾಹಪದಿ
ಜಯ | ವದಗಿಹುದೆ ಬಿಡಬಹುದುಅಪಜಯ | ದೊದವಿಗಂಜಿದನೆ ನರೆಬೇಡಂ
ಗದನೆ ಯಿಂದಿನಲೀ ‖ ಅದಯಗೊಳದೈದಿಂದು ನಾಳ್ಸೂ| ಹೃದಯವಹೆಮಾ
ರಘುಜಪನು ಬಿ | ತ್ತಿದರೆ ರಣಧರೆಗೆಂದನಸುರೇಂದ್ರಾಗ ಅಳಿಯನಿಗೇ ‖೫೬‖
ಇರುವದೋ ಯಾಗರ್ವ ಅರಿಸಂ | ಹರಕೆ ಮನದಂಕುರವು ಕಾಲ್ಗತಿ| ದೊರೆದ

ನುಡಿಯುಂತಿರಲಿ ಮೊದಲಂಗಜನ ಕೂಡಿಂತೂ ॥ ವರೆಯಲಿಲ್ಲವೆ ಆಗಲೊಂದೆ ರ। ಡರಿದು ಕಳುಹುವೆನೆಂದ ಮಾತುಳ । ತೆರಳು ನೀನೆಂದೈಸಿದನರಿಯಂದ ನಂಗದನೂ ॥ ೫೭ ॥ ಹಿಂದೆ ಪೇಳಿದದುಂಟು ಜಯಃವೈ । ತಂದಿರಲು ಬಿಟ್ಟೈ ದಿಸುವೆ ನಾ। ಳಂದುವದು ಕಾರ್ಯಮಗೆ ಆಗಲಿದಂತೆ ಕೇಳುವೆನೂ॥ ಇಂದಿ ಗೈದೆನೆ ನಿಮಗೆ ಅಪಜಯು । ಬಂದರೆಂತೆನೆ ಬರದುಮೇಣ್ಬರ। ಲಿಂದಿರಾಂಬಕಿ ಕಡೆಗುಬಿಡೆ ನಡೆಯಂಗದೆನಲಸುರಾ ॥೫೮॥ ಹಾಗೆ ಮೊದಲೆನಬಾರದೇಮು। ಕ್ತಾಗೆ ನೀವೆಲ್ಲಾಗಲೆಮವಶ । ವಾಗಿ ಲೆಂಕೆಯಬಿಡುವುದೇ ನಿನಕೇಳ್ವದಂತ್ಯೋ ಕ್ತಾ ॥ ವಾಗಿ ತೋರುವದಕಟ ವಂಶವ । ನೀಗ ಬೇಡತಿಮೂರ್ಖನೆಂಬನು। ರಾಗವೈಸದಿರೆಂಪ ನಂಗದ ಮರುಗಿ ಮಾತುಳಗೇ ॥ ೫೯ ॥ ಅದಕೆ ಬದಲಡ ದಿರಲು ಮೃತ್ಯುಂ । ತೊದಗಿತೀತನಿಗಿಂದ್ರಜಿತು ತಿ। ಳಿದದನು ಪೇಳ್ಕಿರಿವಾವ ನೀನೇನೆಂಬೆ ಯನಲದಕೆ ॥ ವುದಯುದಾಹವಪರಿವತನಕೆ । ತ್ತದಲೆ ಪೋಗಿಂ ನೈನಲು ಯಲ್ಲ । ಕ್ಕೊದಗಿತೆಮ್ರುತವೆನುತ ಪೋದರಹಂತಸ್ಮರಣೆಯಲಿ॥೬೦॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲ ವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ। ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೬೧ ॥

ಅಂತು ಸಂಧಿ ೬೬ ಕ್ಕಂ ಪದನು ೩೮೬೧ ಕ್ಕಂ ಮಂಗಳಮಹಾ ಶ್ರೀ ಶ್ರೀ

0

ಅರವತ್ತೇಳನೆಯ ಸಂಧಿ.

ಇಂದ್ರಜಿತು ಬಂಧನದ ಸಂಧಿ.

ಮಾರುತಿಯು ಸಮರದೊಳು ಕದನಕ । ಠೋರ ಯಿಂದ್ರಾರಿಯನು ಕಾರಾ । ಗಾರವನು ಸೇರಿಸಿದ ಪೆಡಗಟ್ಟಿಕ್ಕಿ ಸೌಮಿತ್ರೀ ॥ಪಲ್ಲವಿ॥

ಅರಸ ಕೇಳಂಗದನು ನಾನಾ । ತೆರದ ಅನುಸರಣೆಯಲಿ ನಣ್ಪನು । ಕುರಿತು ಬೇಡಿದರೈದಿ ಬಂದಾಯುಷ್ಯದನುಸರಣೇ ॥ ಗರೆಯುಗೊಡದಿರೆ ಮರುಗಿ

ಫಣೆಲಿಖಿ | ತಿರುವದನುಭವಿಸೆಂದು ಬಂದಂ | ತೆರಳಿದನು ನಿಜಕಟಕಂದಿನ ಸು ಪ್ರಭಾತದೊಳೂ ||೧|| ಕಂಡು ರಾಘವನೊಳಗೆ ಆಕಡು | ಭಂಡನುಲಿದೋ ಕ್ತವನು ವಿಸ್ತರ | ಗೋಡು ಪೇಳಲು ಅಕಟ ಕೆಡುವನೆ ಮೂರ್ಖ ದಶವಕ್ತ್ರಾ || ಲಂಡತನದೊಳಗೆನಲು ಯಾತೆರ | ಗೊಂಡಾವ್ಯತಲಿಖಿತರಲು ಅರಿತ | ಗಂಡ ಪಸುರೇಂದ್ರೆಂದ ನಗ್ರಜಗಾಗ ಸೌಮಿತ್ರೀ || ೨ || ವುಲಿದವಾಗರುಹಾಲಯ ಗಳೊಳು | ಲಲಿತ ತೂರ್ಯತ್ರಯಗಳುದಯದ | ಗಲಭೆ ವೈತಾಳಿಗರುಪಾಡಿ ದರಾಗ ಲಲಿತದಲೀ || ಚಲುವ ಕೌಶಲ್ಯೇ ಯನಯ್ಯೋ | ದ್ವಲಯಪತಿ ರಘು ರಾಮ ಸೀತಾ | ಲಲಿತ ಲಕ್ಷ್ಮೀರಮಣನಗ್ರಜ ಯೇಳುಬೆಳಗಾಯ್ತು || ೩ || ಮೂಡಿದಬ್ಜಿನಿಪ್ರಿಯನು ಕುಕ್ಕುಟ | ಪಾಡುತಿವೆ ತಂಘಾಳಿ ಸುಳಿಸುಳಿ | ದಾಡು ತಿದೆ ದನುಜೇಶನೆಡೆಯೊಳಗಾನಕ ಧ್ವನಿಯಾ || ಮೂಡುತಿವೆ ಚತುರಂಗ ದಳ ಮುಂ | ಗೂಡಿ ವಿದ್ಯಾನಾಯಕರು ಜತೆ | ಗೂಡಿಬಂದಿಹರೇಳು ರಾಘವನೆನಲು ಮಾಗದರೂ || ೪ || ಯಾದ್ದುರಾಘವ ನಿತ್ಯಕೃತ್ಯವ | ನೊದ್ದಿಮಾಧವನೊಡನೆ ಭೋಜನ | ತಿದ್ದಿ ಸಿಂಹಧ್ವಜ ವಿಮಾನವನೇರೆ ಗರುಡಾಂಕಾ || ಹೊದ್ದಗರುಡ ವಿಮಾನವನು ಖಗಿ | ಲಿದ್ದರೆಲ್ಲೇರಿದರು ತಮತಮ | ಗಿದ್ದ ವೈಮಾನಗಳನಾನಕ ಭುಗಿಲುಬುಂಭುಗಿಸೇ || ೫ || ಬಂದು ಪೂರ್ವಾಕಾರದೊಳ ಗ | ಲ್ನಿಂದ ರಾ ಘವನಿತರದೊಳಗೈ | ತಂದು ನಿಂದನು ದನುಜನಾಯಕ ತಮುಟಕಹಳೆಗಳೂ || ಮುಂದುವರಿಯಲು ಯಿಂದ್ರಜಿತು ಬಹ | ನಿಂದಿನಾಹವಕೆಂದು ಬಹು ಬಲ | ದಿಂದ ಬಂದನು ಬಹನು ಆವೆದುರೆಂದು ಹೊಗಳಿಸಿದಾ || ೬ || ಗತದಿನದಿ ಮಾರೀಚಗಹಿತವ | ಜತಿಸಿದವನಾವವನಜತೆ ಸಂ | ಗತಿಸುವೆನು ಬಹುದಾತ ನಲದನ್ಯರನು ತದರಂತ್ಯಾ || ಗತಿಸುವಿರಿ ಮುಂದಾತ ಬರಲೆಂ | ಬುತಲಿ ಕೂ ಗುವ ಕಹಳೆ ರವದು | ದ್ಧತದಿ ಬಂದನು ಅಂಕಕಣಕಿಂದ್ರಾರಿ ವೇಗದಲೀ ||೭|| ಅವಗೆ ವೈಗಾಪಾಗಿ ಚತುರಂ | ಗವನು ಸಂವರಿಸಂತ್ಯ ವೃತ್ಯುವೆ | ಬವರ ಕೈತರುವಂತೆ ಬಂದನು ಬೇಗ ಘಟಕರ್ಣಾ || ಕವಿದ ಕಾರ್ಮುಗಿಲಂತೆ ದಾನವ| ನಿವಹದೊಳು ಹೊಳೆವಸ್ತ್ರ ಕಾಂತಿಯು | ಗವಿಸಲೆಲ್ಲಾ ದೆಸೆಗೆ ವಾದ್ಯರುವಣೆ ಯ ಸಹಯುದಲೀ || ೮ || ನಿಂದರನು ನೋಡಿತ್ತ ಮಾರುತಿ | ಯಂದ ನೆನ ಬಯಸುವನು ಬಯಕೆಯ | ನಿಂದೆ ತೀರಿಪೆನೆಂದು ರಘುಜಗೆ ಪೇಳಿ ಚತುರಂ ಗಾ || ಹಿಂದೆ ಬರೆ ರಣಭೀಮನಾಹವ | ಕೆಂದು ಬಹನಿಂದ್ರಾರಿಯನೆ ಕಳು | ಹೆಂದು ಕಹಳೆಯು ಮೊರಸುತ್ತೈದಿದ ರಣಕೆ ಪಂಚಾಸ್ತ್ರಾ || ೯ || ಆತನಿಗೆ ಮೈ

ಗಾಪಿನಾಶ್ರಯ । ವಾತು ಲಕ್ಷ್ಮೀಧರನೆ ಬಹು ಬಲ । ವಾತು ರಘುಜನ ಬೆಸ
ದಿಹೊರಟನು ಸೂರ್ಯಜನ ಸಹಿತಾ ॥ ಭೂತಳವನಾಶ್ರೈಸೆ ಭೇರಿಯು । ಘಾ
ತರವದೊಳು ವೈನತೇಯನ। ಕೇತು ನಡೆದನು ಆಹವದಧರೆಗಂದಿನೊಳಗರಸಾ
॥ ೧೦ ॥ ಅತ್ತರಕ್ಷ ಧ್ವಜಗಳಾಸುರ । ವೆತ್ತು ಕಪಿಗರುಡಾಂಕರನು ನುಂ ।
ಗುತ್ತಲಿವೆ ಯಿಾ ದಿನದೊಳೆಂಬಂತೊಲೆಯತಿರಲತ್ತಾ ॥ ಬಿತ್ತರದ ಕಪಿಕೇತು
ಗರುಡಾಂ । ಕೊತ್ತಿನುಂಗುವೊಲಸುರರನು ತೂ । ಗುತ್ತಲೆಸೆದಿರಲಾಗ ನಾರದ
ಲೆಂಕೆಗೈತಂದೂ ॥ ೧೧ ॥ ಪೋಗಲರಮನೆಗೆರಗಿ ದಯವೀಗಾ । ಗಾಗಲೇನ್ಸ
ದ್ದಕ್ಯವೆನೆ ಕೇ । ಳೀಗ ಮಂಡೋಧರಿಯೆ ದಾನವ ದೈತ್ಯಸಂಹರಗೇ ॥ ತಾಳಿ
ದಾಹವಗೇಳ್ದು ನಿನ್ನಳಿ । ವಾಗಿ ಪಿತ್ರುವ್ಯೈದಿದದಕೇ । ನಾಗುವುದೊ ಯಿಂ
ದೆಂದು ಬಂದೆನು ನೋಡಲೆನೆ ಮುನಿಪಾ ॥ ಹಸ್ತ ಪ್ರಾಹಸ್ತಾದಿಯರ ನಿಂ ।
ಬಿಸ್ತರಿನ್ನೇನಹುದೊ ಕದನವ । ನೆಸ್ತಗೊಳಿಸಾ ಸೀತೆಯನು ಕಳುಹೆಂದು ಬಹು
ವಿಧದೀ ॥ ಬೆಸ್ತಿನಾ ಬಹುಜನರು ಪೇಳ್ವದ। ಕಸ್ತು ಬಡದಲೆ ಹಾನಿಯನೆ ಘಳಿ।
ಸಿಸ್ತ ಪ್ರಿಯ ನೀವಾದರೂ ತಿಳುಹೆಂದಳಿಂದುಮುಖೀ ॥ ೧೩ ॥ ವೊದಲು
ಬಂದಿರ್ದಾಗಲೆ ಯಿಂ। ತಿದನು ಪರಿಹರಿಸೆಂದು ನಾನಾ । ವಿಧದಿ ಪೇಳಿದರಸ್ತು
ಬಡಲಿಲ್ಲಾಗ ಮೂರ್ಖತೆಯಾ ॥ ನೊದಗಿದೀಗಿನ್ನುಲಿದರೇನದ । ಸದಯಗೈ
ಯ್ಯ ನೀನುಲಿ । ದದನು ಕೇಳ್ವನೊ ಯಿಲ್ಲವೋ ನೋಡೆಂದ ನಾರದನೂ॥೧೪॥
ಆದಿಯೊಳಗಾನುಲಿದೆನದಕನು । ಮೋದಗೊಡಲಿಲ್ಲೀಗ ಉಲಿವದ । ನಾಧರಿಪ
ನಹುದಲ್ಲವೆಂಬುದಕಾನು ಯಿಲ್ಲಾತಾ ॥ ಪೋದರಣಮುಖಕೆನಲು ನೀಪೋ ।
ಗೋದುದೆನಲಾ ಯಡೆಗೆ ಪೋಗಲ । ದಾದುದಲ್ಲೆನಗೆನಲು ಮಂಡೋಧರಿಯು
ನಾರದಗೇ ॥೧೫॥ ಚಿಂತೆಯೇನಂಮಾಜಿನೀನಡೆ । ವಂತಕನುಮಾನಿಸಲುನಾಬರು।
ವಂತೆ ಮಾಡುವೆನೆನೆಲು ನಾರದನಾಗಲಿಂದಿನೊಳು ॥ ಯಂತೊ ರಣವಾರ್ತೆಯ
ನು ಕೇಳಿಂ । ನಂತೆ ಗೈವೆನೆ ತಾಯೆ ನಿನಸುತ । ನಾಂತ ರಣಮುಖಕತ್ತನಿನ್ನಳಿ
ಯಂದ ನಾರದನೂ ॥ ೧೬ ॥ ನಿನ್ನಸುತನಿಗೆ ಕುಂಭಕರ್ನನು । ಬೆನ್ನವತ್ತ್ರೈದಿ
ಹನು ಮಾರುತಿ । ಗನ್ನ ವನಮಾಲ್ಯೆದಿ ಬಂದಿಹ ನಂಗದನು ಸಹಿತಾ ॥ ಭಿನ್ನ
ವಪ್ಪುದು ಕಾರ್ಯವೆನೆ ಯಿವ । ರನ್ನು ಜಯುಸುವರುಂಟೆಯನೆ ನಿಮ । ಗನ್ನ
ಅಪಜಯಕಾಲ ಮಯಸುತೆಯೆಂದ ನಾರದನೂ ॥ ೧೭ ॥ ಮುನಿಯೆ ಮಾಧವೆ
ಭೂಮಿಯನು ಯ । ತ್ತೊನೆದು ಬಿಸುಡನೆ ಮಾರುತಿಯು ನಿಮ । ಜನಕ ನಾ
ಹವಗೈದವನ ಸತ್ವಾದಿ ನೀಬಲ್ಲೇ ॥ ಇವನ ಮೊಮ್ಮೆಂತಹನು ನಿನ್ನಂ । ತನುವ

ರವಗೈದಾಗಲೆ ರಾ। ತ್ರಿನಲೆ ಬಂದನು ಸಂದಿಗಸುರೇಶ್ವರನ ಸನ್ನಿಧಿಗೇ ॥ ೧೮ ॥
ಇರಲಿಅದಕನುಗೊಡವೆ ನಿನಪ್ರಿಯ। ಮುರಿದನಾಬಗೆ ಶೂರರವರಂ। ತಿರಲಿ ನಿನ
ಬಾಂಧವರು ಕಲಿಗಳೆ ರಣಕೆ ಅದಕೂನಾ ॥ ಧರಣಿಜೆಯ ಶಾಪಾಕೆಯನು ಪರಿ।
ಹರಿಸೆ ನೀನುಲಿದಂತೆ ಸರಿ ಯಿಲ। ದಿರಲು ನಾನೊರೆದಂತೆ ಮಂಡೋಧರಿಯೆ
ಯೆನೆ ಮುನಿಪಾ ॥ ೧೯ ॥ ಬಿಡನು ಯಾಗಾಕೆಯನು ಕೈಕೈ । ತೊಡಗಿದಾ
ಹವದಿಂದಿನೊಳು ಜಯ । ವಡೆದ ಮೇಲಾಮಾತು ಮೊದಲಾಹವದೊಳಸದಳ
ವೂ ॥ ತೊಡಗಿತೆಮಗಿಂದ್ರಾರಿಯಾರ್ಕಡೆ । ಬಡಿವನೋ ತಾಳೆನಲು ನಿನಗವ।
ಗಡಿಸಿತೆ ಪ್ರಿಯ ನುಚ್ಚು ಮಂಡೋಧರಿಯೆ ಯನೆ ಮುನಿಪಾ ॥ ೨೦ ॥ ಹೀಗೆ
ನುಡಿವಿಡುತಿರಲು ರಣಕನು । ವಾಗಿ ಬಹಯಿಂದ್ರಾರಿ ಮಾರುತಿ । ತೂಗಿದರು
ನಿಡುದೋಳ ಬಲವೆರಡೇರಿ ಲೆಗ್ಗ ಯನೂ ॥ ತಾಳಿದರು ಬಹು ಶಸ್ತ್ರಗಳ ಮುಂ।
ತೂಗಿದರು ಆಳಾನೆ ಹಯಗಳ । ನೀಗಿದರು ಬಹುಕಡುವಿನಲಿ ಕಪಿದಾನವಾಳು
ಗಳೂ ॥ ೨೧ ॥ ಆರಣದಸಿರಿಯಡಿಗೆ ಗಿಂದಣ। ಭಾರಗಳ ಖಡಿದೊಟ್ಟುತಿರುವ
ಕು । ಠಾರಶಸ್ತ್ರಗಳಿಂದಲಿ ತರದ ಸುಭಟಸಂದೋಹಾ ॥ ಮಾರಣಿಸಿದರಿವಾಹಿ
ನಿಯ ಸಂ। ಪೂರಿಸಿದ ರಂಬುಧಿಗೆ ಕದಸವು । ಧಾರರವರಲದಿಲ್ಲವಾಗಿ ನೊಳರ
ಸಚಿತ್ರೈಸೂ ॥ ೨೨ ॥ ಮಡಿದುದೆಂಟಕ್ಷೋಹಿಣಿಯು ಫಡೆ। ಕಡನೆಗೊಡ
ಲಿಲ್ಲಾಕೆ ಯನೆ ಏ । ಕ್ಕಡೆಯ ಬಲಬರದಂತು ಗಣಿತಕನೇಕವಾದುದರಿಂ ॥
ಪಡೆಯದ್ರವ್ಯನಿಸಿತ್ತು ಲಯಗೊಡ । ದಡಗದಿರೆ ಕಡಲೊಳಗೆ ಬೆಳೆತಹ। ಪಡೆ
ಯಕೇಡರಿದಿಂದ್ರಜಿತು ಮುಂಕೊಂಡನಾರ್ಭಡಿಸೀ ॥ ೨೩ ॥ ಬಾರೆಲವೊ ಪಂ
ಚಾಸ್ತ್ರ ಬಲಸಂ । ಹಾರಿಸಲು ಫಲವೇನು ನಿನಕೈ । ತೋರುದೆಂ ದಿವ್ಯಾಸ್ತ್ರ
ಗಳನಾವರಿಸೆ ದಿಗ್ದೆಶೆಗೇ ॥ ಹಾರುತಿರ್ದೆನು ನಿನ್ನ ಭರಮನೊ । ಹರವಾಯ್ತಾ
ಗೆಂದು ಶಸ್ತ್ರದ । ಸಾರುವೆಯನುದ್ಧರಿಸಿ ಬಂದಸಮಾಸ್ತ್ರ ನೆದುರಾಗೀ ॥ ೨೪ ॥
ಮುರಿದು ಯಿಂದ್ರನ ಸೊಕ್ಕ ತ್ರೈಖಾಂ । ಡರಸರನು ಕೆಡೆನೆಟ್ಟ ತಾನೇ। ಧರೆಗೆ
ಬಲ್ಲಿದನೆನಿಪ ಚಕ್ರಿಯರತ್ನವೆನಿಸಿದರ್ಾ ॥ ಅರಸಿ ಮಂಡೋಧರಿಯ ಗರ್ಭಜ ।
ನುರುಪರಾಕ್ರಮಿ ಮಾರುತಿಯ ಸಂ । ಹರಿಪನಿಂದಿಲಿ ಕಾಯ್ದುವದೆಂದ್ಯೊಗಿಸಿದ
ಕಹಳೆಗಳಾ ॥ ೨೫ ॥ ವೊತ್ತಿ ವಿದ್ಯಾಧರರ ಕೈಯಿಂ । ದೆತ್ತಿ ಕಪ್ಪವ ವಾರು
ಣನ ಕೆಡೆ। ಕುತ್ತಿ ದಾನವ ಚಕ್ರವರ್ತಿಯ ಮಗಳ ಮೆಚ್ಚಿಸಿದಾ ॥ ಚಿತ್ತಜನಿ
ಲಜನಾಂಜನೆಯನೆಂ । ದ್ಯುತ್ತು ವಿಂದ್ರಾರಿಯನು ಕಾಯ್ಲುಸ । ವೆತ್ತ ರೈತಹು
ದೆಂದು ಹೊಗಳಿಸೆ ಭೀಮಕಹಳೆಗಳಾ ॥ ೨೬ ॥ ಹೊಗಳಿಸಲು ಬಹುಢಪರದಲಿ

ಮುಂ। ನೆಗಳಲರಃಹಕ್ಕೆಂದು ಕೋಲ್ಗಳ। ನುಗಿಸಿದರು ಮೊದಲಸ್ತ್ರ ಬೆಟ್ಟದೊಳು ದಿತ ಮಳಲಂತೇ ॥ ಸೊಗುಸುತಿರೆ ಮಿಗಿಲಾಸ್ತ್ರದಲಿ ತುಂ ' ಡೊಗೆದು ರಾಸಿಯು ಗೈದು ಮತ್ತವ । ನೆಗರಿಪರು ಮರುತಾಸ್ತ್ರ ಸಾಹಸದಿಂದಲಿತರಿತರಾ ॥ ೨೭ ॥ ಗೆಲುವನಾರೈಸುತಲಿ ಕೈಚಳ । ಕಲಘನಲಿ ಬಹು ಕುಪಿತ ಛಲಬೆಂ। ಬಲಿಯು ತಲಿ ವರುಣಗ್ನಿ ಗಿರಿವಜ್ರಾಬ್ಧಿ ವಾಡಬನಾ ॥ ಚಲಿಸಿ ಗಜಹರಿಣಿ ತಮಕೈ। ಗಲಿಸಿ ಮೂದಲಿಸೇನು ನಿನತನ । ಸಲಿಗೆಕೊಳದಿಲ್ಲೆನುತಲೆಚ್ಚಾಡಿದರಃ ಮೈದುನರೂ ॥೨೮॥ ಬೊಬ್ಬಿಡುವರಸ್ತ್ರಗಳ ಮೇಲಿಂ। ನಬ್ಬಿಸುವರಸ್ತ್ರಸ್ತ್ರದಲಿ ಖಡಿ। ದಿಬ್ಬ ರಿಡೆಗೈದಿಸದೆ ವೈಮಾನಗಳ ಪಿಂದೊಗಿಪಾ ॥ ನಿಬ್ಬರದ ಕಡುಕೊಬ್ಬಿನಲ್ಲಿ ಕೈ । ಯುಬ್ಬರದಿ ಹಾರಿಸುತಲಲ್ಲ। ಲ್ಲಿಬ್ಬಗಿಪರಲದೈದ ಗೊಡರೊಂದಸ್ತ್ರ ವೆದುರಾಗೀ ॥೨೯॥ ಕುಟ್ಟುವರು ಸರಳಿನಲಿ ಸಾಂಗವ । ನಟ್ಟ ಮುದ್ಗರಕೊಂತಗಳಲಿಂ। ನಿಟ್ಟು ಕೈಚಕ್ರದಲಿ ಕೇತುಪತಾಕ ಶಾಸ್ತ್ರದಲೀ ॥ ಕುಟ್ಟುವರು ಪ್ರತಿಯಸ್ತ್ರದೊಳಗಿ । ಟ್ಟಟ್ಟುವರು ತೊಡೆಭುಜಗಳನು ಹೊಡೆ । ದಿಟ್ಟು ಮಿಾಸೆಯ ತಿದ್ದುತಿ ಹರನು ವರದಚಸ್ನಿಗರೂ ॥ ೩೦ ॥ ತಾಳಿದೆನು ಯಿದುವರಿಗೆ ಮೈದುನ । ಬಾಳಲೆಂಬದ ಕುರಿತು ಯಿನ್ನರಿ ! ತೇಳು ಅಂಗಜನರಗೆ ನೀನೇನಾದೆ ಮಾಸಾಳೂ ॥ ಹೀಳಿಸುವ ಜನರರಿಯದಲೆ ಕೆಡು । ಬಾಳ ಗೈವುದಕಿಂದವನವಾ। ಸಾಳಲತಿಲೇಸೆಂದನಸದಳ ಶೂರನಿಂದ್ರಾರೀ ॥೩೧॥ ಸತ್ಯನೀನುಲಿವಾಕು ಜನರ। ಸ್ತುತ್ಯವರಿಯದಲನ್ಯ ದಾರಾ। ಮೃತ್ಯುವಿಗೆ ಮನವಿಟ್ಟನಾತ್ಮಜನಾಗುವುದುಕಿಂದಾ ॥ ಸತ್ಯವಂತರ ಭೃತ್ಯನಾಗುವ । ದುತ್ಯವೆಲೆ ಮೈದುನನೆ ನಿನಜೀ । ಹತ್ಯಗೊಳಿಸದೆ ಬಿಟ್ಟೆ ಬೇಗೈದೆಂದನಂಗಜನೂ ॥ ೩೨ ॥ ಕಳುಹು ನಿನಕಿರಿಯೆಯ್ಯುನೊಳು ಕುಳ। ಗುಳವ ರಚಿಸುವೆ ನೀನು ಯನ ಸಮ । ದಳೆದನಲ್ಲಿಂದ್ರಾರಿಯನ ಸಮಾಸ್ತ್ರನಡ ಕೇಳೀ ॥ ನಳಿನಲೋಚನನಿಂದಿನೊಳು ಕೊಳು । ಗುಳಕೆ ಪಡಲಿಡಲೈದಿ ಬಂದೆನು। ನೊಳಗೆ ನಿಸ್ನಾಟಗಳೆ ಸ್ಮರ ನಡೆಯುಂದನಿಂದ್ರಾರೀ ॥೩೩॥ ಹೊಳೆಯೊಳಗೆ ಮುಳುಗೇಳುತಬ್ಧಿಯ । ತಳುವೆನೆಂಬೆಳೆ ಪೈತ್ಯನೊಲು ನಿಂ । ನೊಳವು ಯಿಂದ್ರಾರೆಂದನಸಮಾಸ್ತ್ರಾಲು ತಂತದಕೇ॥ ತಿಳಿಯನೀರಿನಲೀಜದವ ಬಲು । ಸುಳಿಯೊಳೈದುವೆನೆಂಬಗಾವಿಲ । ನೊಳವು ನಿನದಸಮಾಸ್ತ್ರನೆಂದ ಸಹಾಯನಿಂದ್ರಾರೀ ॥ ೩೪ ॥ ಯಿತ್ತೆರದ ನುಡಿವಾಚಗಳು ಕಿವಿ । ಗೊತ್ತರಿಸೆ ಕುಪಿತಾಗ್ನಿ ಗಾಜ್ಯವ । ಬಿತ್ತಿದಂತಾಗಂಗಜನೆ ಯಿಂದ್ರಾರಿ ನಿಮಗಿನಿತೂ ॥ ಯತ್ರಜೊಳ ಧೈರ್ಯೆಂದು ಪುಜ್ಜುಗಿ। ಪತ್ತರಲ್ರ್ಪಿ ಯಿಂದ್ರಾರಿ ಅಣುವಾ। ನ್ಮೊತ್ತಿ

ವೈಮಾನಸ್ತ್ರಗಳ ಮುಚ್ಚೊಚ್ಚುತಾರ್ಭಡಿಸೀ ‖ ೩೫ ‖ ಇಟ್ಟುತೆರೆಶರೆಮರೆಯೊ
ಳಗೆ ಬೆಂ । ನಟ್ಟ ಬಹುಶರಗರೆದು ಹೂಂಕರ । ವಿಟ್ಟು ಮುಂದೊತ್ತೊತ್ತಿ ಬಿ
ಲ್ಕೈತ್ಕವಚಗಳ ಖಡಿವಾ ‖ ಸಿಟ್ಟದಿಟ್ಟನುಗೊಟ್ಟ ಮನವಿಂ । ಬಿಟ್ಟ ಶರಕು
ಟ್ಟೆಟ್ಟು ಸಿಗಿಖಡಿ । ದೊಟ್ಟು ಮಲತಹಿತೆಂದು ವತ್ತಿದರಂಕಶಾರದರೂ ‖೩೬‖
ಸುರಿವಶರವೆನಿತೆನಿತೊ ಸಿಂಹರ । ಗರೆವ ಶರವೆನಿತೆನಿತೊ ಮೂದಲೇ । ಗರೆವನು
ಡಿಯನಿತೆನಿತೊ ಮಾರ್ಮಲತೊತ್ತು ವಡಿಯನಿತೋ ‖ ಶರದಯಸುಗೆಯಮಿಂ
ಚಿಸಾಂಗದಿ । ತುರುಗಿ ಯರೆಯುತ ಶಕ್ತಿಗಳಲಿ। ಟ್ಟೆರಗಿದರು ಅವನಿವನನಿಕಟಕೆ
ಸ್ಮರನು ಯಿಂದ್ರಾರೀ ‖೩೭‖ ವತ್ತಿ ನಿಕಟಕೆ ಪಾದಪಿಯಪಿಡಿ । ದೆತ್ತಿರಕ್ಷೋ
ದ್ರೇಕದಲಿ ಆ । ಉತ್ತ ಹೊಡೆದೊಡೆದಾಡಿ ಶಾಖೆಗಳುದುರಿ ಯೇಕತೆರಾ ‖
ವೆತ್ತಗಧೆಯೊಲ್ನಿಂದ ಬುಡದಂ । ಡೆತ್ತಿ ವತ್ತೊತ್ತೆಸೆದ ಮರ ಚೂ । ರೆತ್ತಲದ
ಬಿಟ್ಕೊಳುವರಿಂನೊಂದಂಕ ಭೂತದೋಲು ‖ ೩೮ ‖ ಮತ್ತು ಆಪಾದಪಿಗಳ
ದುರು ವೊ । ಲೆತ್ತಿ ಯಿಾಸಾಡಿಟ್ಟು ಉವಬದ । ಲೆತ್ತಿ ಮತ್ತಾತೆರದಿ ಕಾದುತ
ಲಿಂತು ದಶವಾರಾ ‖ ಕಿತ್ತಮರದಿಂ ಕಾದುತಿರೆ ಮುಂ । ದೊತ್ತಿ ವೈಮಾನವ
ನುಸರಳಿಂ । ಬೊತ್ತಿ ಸುರಿಯುತಬಂದ ವಾಯುಜನಗ್ರಘಟಕರ್ನಾ ‖ ೩೯ ‖
ರಕ್ಷರೆದುರೊಳಗೊತ್ತಿ ಕದನ । ದ್ಯಕ್ಷಗೊಡುವೆಯ ಕಪಿಯೆ ನಿನಗಿ । ಪ್ಪಕ್ಷಕಿವಿ
ಯುಂಟೇಕಬಾಣದಿ ಹತಿಪನಿಂದ್ರಾರೀ ‖ ಈಕ್ಷಿಸನುಜೆಯ ನಿನ್ನಕೊಲದೆ । ಸ್ವ
ಪಕ್ಷದಿಂ ಕಾಯ್ದಿರ್ದ ಕರುಣ ನಿ । ರೀಕ್ಷಿಸಿದ ಲಾಲುವರೆ ನಿಲ್ಲೆಂದೆಸೆದ ಘಟಕ
ರ್ನಾ ‖೪೦‖ ಇಟ್ಟು ಯಿಂದ್ರಾರಿಯನು ಪಿಂದನು । ಗೊಟ್ಟು ಘನಶರೆದೊರು
ಷವನು ಮುಂ । ದಟ್ಟ ಮುಟ್ಟೈತರುವ ಘಟಕರ್ನನಿಗೆ ಯದುರಾಗೀ ‖ ತೊ
ಟ್ಟು ಶರಗಳ ಕಾರ್ಮುಖವ ನಳ ! ವಟ್ಟು ಶಸ್ತ್ರಗಳೆರಚಿ ಮೈದುನ । ನಿಟ್ಟು
ಕೊಲಲಾರದಲೆ ವುಳುಹಿಯೆನೆಂದ ಪಂಚಾಸ್ತ್ರಾ ‖ ೪೧ ‖ ದನುಜರೆಂಬರದೇನು
ಕಪಿಗಳು । ಮನಕೆ ತಹವೆಲ್ಕೆಂದು ತದ್ಬಲ । ಜನಿಸಿದನು ನಾಲ್ಕಾರ ಬೆಟ್ಟಗ
ಳಾಂತ ಕಪಿಸೇನೇ ‖ ಕೊನೆಯು ವೊದಲೀ ಕ್ಷಣಕೆ ನೆಲೆಗೊಡ । ದನಿತು ಬಲಿ
ಮುಖ ರಕ್ಷಬಲವನು । ತಿನುತಲಿರೆ ನಾನಾವಿಚಿತ್ರದ ಶಸ್ತ್ರದಾಹುತಿಗೇ ‖೪೨‖
ಬಂದುಃಘಟಕರ್ನಸಮುಶರಗನು । ಬಂದಿಸಲು ಸ್ವನರ್ಾಹ್ವಯದ ಕಣೆ। ಯಿಂದ
ಲೆಸೆಯುತಲೆರಗೆ ಗರುಡಧ್ವಜನು ಯಿಂದ್ರಾರೀ ‖ ಗಂದಿನಾಹವದಲಿ ಚಮ
ತ್ಕರ । ದಿಂಪಲಾಸರಳುಗಳ ಪ್ರತಿಶರ । ದಿಂದಲಟ್ಟಾಡುತಲಿ ಬಂದನುಃ ಯಿಂದ್ರ
ಜಿತುಮುಳಿದೂ ‖ ೪೩ ‖ ವಿದ್ಯವಿದ್ಯಾಧರರಿಗಂಕಮು । ವೇದ್ಯದಿಂ ಸಂದಿಸುತ

ಲೀರ್ವರ । ಭೇದ್ಯದಿಂದೊಡೆ ಹಾಯ್ದು ಕಾದುವರೆಡೆಗೆನೀ ಬಂದೂ ॥ ಅದ್ಯ
ಸಿಕ್ಕುವರೆಲವೊ ನರನೆಯ। ಸಾಧ್ಯನಡೆ ಕಂಕ್ನರಿ ಚಮೂರನ। ಹೊದ್ಯರುಚಿಗಂ
ಗ್ಧಹಿತ ತೆರನೆಂದಾಗಲಿಂದ್ರಾರೀ ॥ ೪೪ ॥ ಹರಿಸಿವಾಲಿಯ ಕೃತ್ರಿಮದಿಳಿನು।
ಸರಸಿ ಬೇಡಂಗದನ ಮೂಲದಿ । ಮಾರುತಿಯನು ಹಿತಗೈದು ಸೀತೆಯ ಬಿಡಿಸಿ
ಕೊಡುವಂತೇ ॥ ಕರವ ಮುಗಿದವರಿಂದ ಲಭಯುವ । ಧರಿಸಿ ನಮನಮುಗಂ
ಕವನು ಕೈ। ಗರಸಿ ಜೀವಿಸಲಾರದ್ಯೆದುವರೆಂದ ನಿಂದ್ರಾರೀ ॥ ೪೫ ॥ ನಿನ್ನನೀ
ಗಲೆಹತಿಸಿದರೆ ರಘು । ತಂನ ತಾನೇ ಸಾವನಮನನು। ಗನ್ನು ಸ್ವಸ್ಥಹುದೆಂದು
ದಿವ್ಯಾಸ್ತ್ರಗಳ ತೊಟ್ಟಟ್ಟು ॥ ಪನ್ನಗಾರಿಧ್ವಜಗೆ ಪಂಜರ । ವನ್ನುಕಟ್ಟಿದನಿಂ
ದ್ರಜಿತು ಗೆಲು । ವನ್ನು ಕಂಡೆಳೆ ನಗೆಯೊಳುಲಿದನು ಅಸುರಸಂಹಾರೀ ॥೪೬॥
ವುಂಟು ನೀನುಲಿವಾಕು ಯಮಕ್ಕೆ । ಭಂಟಿಕೆಯ ನೀನರಿಯೆ ಪೂರ್ವನು ।
ಜಂಟಿಸಿದ ರನುಭವಗಳಲ್ಲದೆ ಬಿದ್ದಪಾಟುಗಳಾ ॥ ತುಂಟ ಬಲ್ಲನೆ ಬಿಟ್ಟೆ ಗಂಡ
ನಿ। ಗುಂಟು ಯಂಬಂದದಲಿ ನಿನತನು । ವಂಟಿ ತಿನಿಸಿದರಕ್ಕುದಾಗ ರುಹೆಂದ
ಗರುಡಾಂಕಾ ॥ ೪೭ ॥ ಗಳಹುತಿಹ ಸ್ವಾನರಿವುದೇಕೋ । ಲೆಳೆದುಹೊಡೆವ
ನಕುಚಿತ ನುಡಿ ನಿನ । ಗೊಳಿತು ಕೊಡವೆಂದಿಂದ್ರಜಿತು ಬಿಟ್ಟಸ್ತ್ರಗಳನೆಲ್ಲಾ ॥
ಇಳುಹಿ ಅವನೊಯ್ಮಾನವನು ಮು । ಚ್ಚಳಿದು ಸಿಂಹಧ್ವಜನ ತುಂಡಿ। ಟ್ಕಳೆ
ದು ಅಿದ್ಯೆದಿಂದ್ರಜಿತು ಯಿನ್ನೆಂದನಸುರಾರೀ ॥ ೪೮ ॥ ಪೋದಸಿಂಹಧ್ವಜವ
ಕಾಣದೆ। ವೇಧಿವೇಧಿಪಶಸ್ತ್ರಗಳ ಸಂ। ವಾದವಸದಳವಾಗಿ ಹೆಣಗುವಯಿಂದ್ರ
ಜಿತು ನಿನಗೇ ॥ ವೊದವಿಕೆ ಸ್ವಲ್ಪಿನ್ನು ನೀಬಲು । ಸಾಧನೆಯ ಗೈದೈದು ಪೋ
ಗೆಂ। ದಾದಲಸತ್ಕಲೆಗಾಧರಿಸಿ ಮಾರಿಯೊಲು ಯಿಂದ್ರಾರಿ ॥೪೯॥ ಆರುಯಿಂ
ದ್ರಾರೆನಲು ನೀನವಿ । ಚಾರಿಯೇ ಬಲ್ಪಗರು ಸಾಧನೆ। ತೋರಿಸಿದ ಕೈಚಳಕ
ದೊಳು ಮೆಳ್ಳಾಡಿದರೆ ನೀನೂ ॥ ಶೂರನೆ ರಣಕೆಂದು ಧ್ವಜವುಂ । ನೇರಿಸಾ
ಲಕ್ಷ್ಮಣನಧಜವನು। ಮೂರು ಮುಮ್ಮಡಿಚಿಟ್ಟ ಶರಗಳಮುನಿದು ಯಿಂದ್ರಜಿತೂ
॥೫೦॥ ಇಟ್ಟಶರಗಳ ಕೊಚ್ಚಿ ಹರಿಮೇ । ಲಿಟ್ಟು ಧ್ವಜವನು ಸೇರಿಸಿದೆರಣ।
ದಿಟ್ಟ ನೀನಹುದಿಂದ್ರಜಿತು ನಿನಶಕ್ತ್ಯೊನಾಸಡಲೂ ॥ ಗೊಟ್ಟದೊಯಿಂನೊಮ್ಮೇ
ನೋಡೆಂ। ದೊಟ್ಟು ಶರಗಳನಿಟ್ಟು ಧಜಕಡಿ । ದಿಟ್ಟ ನಿಂನದನೇರಿಸಿಂದ್ರಾರೆಂ
ದನಸುರಾರೀ ॥ ೫೧ ॥ ಅಸುರಸಂಹರನಸ್ತ್ರಗಳ ಖಂ। ಡಿಸುತಧಜನೇರಿಸಲು
ಮತ್ತದ। ಕೆಸೆದು ಕೆಡಹುತಲೇಳು ಸೂಳಿಂತೇರಿಸಲುಗೊಡವೇ ॥ ರಸಿಕನಹು
ದುಳಿದರಿಗೆ ಯುನಗೆದು । ರೆಸವನಲ್ಲೆಲೊ ಮರುಳ ನೀಸಡೆ । ದಸುರಪತಿಕಳು

ಹೆಂದನಾ ರಣಭೀಮನಸುರಾರೀ ॥೫೨॥ ಐಯ್ಯೋಐಯ್ಯೋ ಯಾಸಂಭ್ರಮು। ಗೈಯುವೆಯ ನಿನನೀನೆ ನಿನಗೆಂ। ವ್ಯೆಯ್ಯ ಬರಲೇಕೊಂದು ಶಪ್ಪದಿಬಿಗಿದುನಿನ ಕೆಡಹೀ॥ ವೈಯ್ಯದಿರನೆಂದ್ಯೆದಿ ನಿಂವ:। ಣ್ಣೈಯ್ಯನೈದಿಸ ಮೊದಲು ನೀನೆಸ। ಕೈಯ್ಯ ಭರವರಿತಿಲ್ಲ ವೆನುತೆಸೆದಿಂದ್ರಜಿತುಹರಿಗೇ॥ ೫೩॥ ಕಟ್ಟದಿರಲಾಶಪ್ಪ ದೊಳು ನಿನ। ದಿಟ್ಟತೊರುವೆಯುಂದು ಗರುಡಾ। ಸ್ತ್ರಟ್ಟ ಕಣ್ವಿಡದಂತೆ ಗೈದಾ ಲೋಮಬಾಣವನೂ॥ ಬಿಟ್ಟು ನೋಡೆಂಬನಿತರಲಿಸು। ತ್ತಿಟ್ಟ ಶೂಕರನಂತೆ ಪೆಡಗ। ಟ್ಟಟ್ಟು ಕೆಡಹೆದುದಿಂದ್ರವೈರಿಯ ಕಾಮುಚಾಂಡಾಳೀ॥ ೫೪॥ ಕೂಡೆ ಗಚ್ಛಾಗಚ್ಛಶರದಿಂ। ತೀಡೆ ಕಟ್ಟದಲಿರ್ದನನು ಪಿಡಿ। ದೋಡಿ ಬಂದಲ್ಲಿರ್ದ ವೀರಾಧಿತವಶಕೀಯಲೂ॥ ಮಾಡಿ ಶರೆಯನು ಜಯಪತಾಕೆಯ। ರೂಢಿಸಿದ ನರಿದಲ್ಲೆ ಪಲ್ಬಡಿ। ದಾಡಿ ಮಾರುತಿ ಪಿಡಿಯಲುತ್ತಾಳಿಸಿದ ಘಟಕರ್ನಾ॥೫೫॥ ಖಡಿದು ಮಾರುತಿಯಸ್ತ್ರಗಳ ಮು। ಚ್ಚಡಕಿ ಬಹು ಸರಳಿಟ್ರಶೂಲದಿ। ಯಿಡ ಲುನೊಸಲಿಗೆ ತಾಗುವನಿತರಲ್ಯೆದಿ ಸೌಮಿತ್ರೀ॥ ಪಿಡಿದನೆಡಗೈಯಿಂದ ಶೂಲವ। ನಡರಿಬಹ ಶಸ್ತ್ರಗಳ ಖಡಿಖಡಿ। ದಡುಕಿ ಮುಚ್ಚಿದ ಕುಂಭಕರ್ನಗೆ ಕ್ಷುದ್ರ ಶರ ಗಳನೂ॥ ೫೬॥ ಸರ್ಪಹರಿ ಕರಿರೂಪುಗಳ ಸಂ। ದರ್ಪಗೈದಸ್ತ್ರಗಳು ಯಡ ಗೈ। ತರ್ಪುವೀಕ್ಷಿಸಿ ಗೈದು ಪ್ರತಿಯಾತೆರ ವಿಘೂರ್ನಣೆಯಾ॥ ದರ್ಪಗೆಡಿಸಲು ಯಿತರರಾವುಂ। ನೇರ್ಪಿನೊಳು ದಿವ್ಯಾಸ್ತ್ರಗಳನು ಸ। ಮರ್ಪಿಸೆಚ್ಚಾಡಿದರು ಹರಿಘಟಕರ್ನರಾಹವದೀ॥ ೫೭॥ ಆಗಿನವಸರದೋರ್ವ ರೋರ್ವಗೆ। ಬೀ ಗದಲೆ ಬಹುಶಸ್ತ್ರಗಳ ಮು। ನೀಗಿ ಮುಂಗೈಖಡಿದು ಚಕ್ರಾದ್ಯಲ್ಲರಿಂದಿಟ್ಟೊ॥ ಮೋಗಿಸದೆ ಕೈಲಾಗದೊಳು ಸಮ। ನಾಗಿ ಖಂಡಿಸಿ ಮೇಲೆಮೇಲ್ಲೂ। ಗ್ಗೊ ಗಿ ಯಸೆದೆಸೆದರಿವ ಮುರಿವಾಸಿರುವ ಸಮಯದಲೀ॥೫೮॥ ಅಂಗದನು ಮರು ತಾತ್ಮಜೀ ರಣ। ರಂಗವೆಷ್ಟರದಾವುಯಿರೆ ಮುಂ। ಜುಂಗಿಸುವ ದೇಕೆಂದು ಬರಲಸುರಾರಿ ಸಂನೆಯಲೀ॥ ಹಿಂಗಿಸುತ ಕೈಪುಂಖದಲಿ ಶ। ಸ್ತ್ರಂಗಳಿಗೆ ವೋ ರೋರ್ವರಿಟ್ಕಡಿ। ವಂಗಿನಲಿ ಕಾತರಿಪ ಸಮಯದೊಳಸ್ತಮಿಸೆದಿನಪಾ॥೫೯॥ ಧರ್ಮಕಹಳೆಗಳುಭಯ ಶ್ರೇಣಿಯ। ಲುರ್ಮಿಸಲು ದಿಗ್ಭ್ರಮೆಯೊಳಾದಿನ। ಶರ್ಮನಾಲೋಕಿಸಲು ಪಶ್ಚಿಮದರುಣ ತೆರೆಯೊಳಗೇ॥ ಮರ್ಮಗೊಂಡನ ನೋಡಿ ಸಿಮ ಪು। ಣ್ಯಾರ್ಮಿಸಿತು ಯಂದ್ಯೆದಿದರುಹಿತ। ದುರ್ಮನದೊ ಳಸುರಾರಿ ಘಟಕರ್ನರುಹ ಸ್ಮರಣೆಯಲೀ॥ ೬೦॥ ಕಲಿಲಹರ ಮುನಿಸೂ ಪ್ರತಾಂತ್ಯದಿ। ಚಲಿತರಾದಾರಾಮಲಕ್ಷ್ಮಣ। ರೊಲವಿನೀ ಕರ್ನಾಟಕಾವ್ಯಕೆ

ಶ್ರೇಷ್ಠರೆನಿಸಿರುವಾ ॥ ಲಲಿತದಲಿಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದ ರಿದಮನ। ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥೬೧॥

ಅಂತು ಸಂಧಿ ೬೭ ಕ್ಕಂ ಪದನು ೩೯೨೨ ಕ್ಕಂ ಮಂಗಳಮಹಾ ಶ್ರೀ ಶ್ರೀ

ಅರವತ್ತೆಂಟನೆಯ ಸಂಧಿ.

ಕುಂಭಕರ್ಣನ ಸಮರದ ಸಂಧಿ.

ತನಯನಾಕ್ರಮಿಸಿದನ ಕೈಶರೆ। ಯನು ಕರಿಸಲೈತಂದ ಘಟಕ। ರ್ಣನಿಗೆ ಅಸದಳ ಮೂರ್ಛೆಗೊಳಿಸಿದ ರಘುಜನೊಜ್ರದಲೀ ॥ ಪಲ್ಲವಿ ॥

ನೋಡಿದೈ ನೃಪಜಗತಿ ತಿಸರಿಯ। ನಾಡಿಸಸುರಾತ್ಮಜನ ಕೈಶರೆ। ಮಾಡಿದನು ಮುರವೈರಿಯಾಗನಿಲಾತ್ಮಜಂಗದರಾ ॥ ಪಾಡುಗೆಡಿಸುವನಷ್ಟರಲಿ ಮುಂ। ಗೂಡೀ ಲಕ್ಷ್ಮಣನುಳುಹಿದ ಕೃತ। ಮಾಡು ಸುಕ್ರುತವಿತ್ತಲತ್ತೆನ ಲಾ ಮುಮುಕ್ಷುಗಳಾ ॥ ೧ ॥ ಸಂಧಿಸಿದ ಘಟಕರ್ನ ಲಕ್ಷ್ಮಣ। ರಂದಿನಾಹ ವದಲ್ಲಿ ಪ್ರಾಣವ ! ಕೊಂದು ಬಿಡದಿರರೋರ್ವರೋರ್ವರ ಬಂದ ರೋಷದಲೀ ॥ ಯಂದು ಯಿನನಪರಾಂಬುಧಿಯ ಮರೆ। ಹೊಂದಿದಾ ಯಿಂ ದ್ರಾರಿ ಮುಖ ಕಳೆ। ಯಂದದೊಳಗಾಗುಲಿದ ಧರ್ಮೋಕ್ತಗಳನವಧರಿಸೀ ॥ ೨ ॥ ತಿರುಗಿದರು ತಮ ನೃಪರ ಬಳಿಗೈ। ತರುತಲಿಂದ್ರಾರಿಯನು ಕೈಶರೆ। ಗರೆದ ಯಿರವನು ಸಿಕ್ಕಿದಿರವನು ಖಚರ ರಾಕ್ಷಸರಾ ॥ ಚರರೊಳರಿದಾನಂದ ಶರ ಧಿಯೊ। ಳುರಿಯ ಕೇಳಿಯೊಳತ್ತಲಿತ್ತಲು। ಹರುಷ ವಿರಸವಗೊಳಲು ರಾಘ ವನಸುರನಾಯಕನೂ ॥ ೩ ॥ ವುಳಿದ ದಳದೊಳಗೈದಿ ತಮತಮ। ನಿಳಯ ದೊಳು ಕುಳಿತಿಂದ್ರವೈರಿಯ। ಬಳಿಗೆ ಕರಸಿದ ಬಿಡಿಸಿ ಕಟ್ಟನು ರಘುಜ ಕರುಣ ದಲೀ ॥ ಕುಳಿಸಿ ಯಡೆಯೊಳು ತಿದ್ದಿಮೌಲಿಯ। ಬಳಸಿ ವೈ.ಕೈಯೊಳಗೆ ಲ ಲಿತದ। ನಳಿನಶರನೆಂದೊತ್ತಿ ಗಲ್ಲನನುಲಿದು ಪ್ರೀತಿಯನೂ ॥ ೪ ॥ ಯಲೆ ಕು ಮಾರನೆ ನಿಂಪುಪಿತ ದು। ಶ್ಚರಿತನಾಗೆಮಗಹಿತನಾದಿ। ದ್ರೋಲೆಯರೆಲ್ಲೆಮಗಾ ಪ್ತರೇ ಸರಿಯರಿಯದಾಹವಕೆ ॥ ಗಲಸುವರೆ ನೀನೀವಿಭೀಷಣ। ನಿಲಯದೊ

ಳಗಿರುವಲ್ಲೆನೆಂದರೆ । ಚಲಿಸು ನಿಮುಪುರಕೆಂದ ಗುಣಚಿನ್ಮಯರಾಘವನೂ ॥೫॥ ಹಿಡಿದುಂ ಅಹಿತನ ಸಾಹದಿಕೆಡೆ । ಬಡಿವರಲ್ಲದೆ ಮುದ್ದಿಸುಚಿತದಿ । ಬಿಡುವ ಸಾಹಸಕರುಣರುಂಟೇ ಕಾರ್ಯವಿರ್ದಂತೇ ॥ ಪೊಡವಿಗಾಶ್ಚರಿ ಜೀಯದೇವರ। ನಡೆಯನರಿಯದೆ ಕೆಡುವದಶಸಿರ । ಪಡೆದ ಪೂರ್ವಾರ್ಜಿತದೊಳೆಂದನು ಜಾಂಬವೆಲ್ಲರಿಗೇ ॥ ೬ ॥ ಬಿಟ್ಟರಿವಸುಮುನಿಹನೆ ಪುನರೆದು । ರಿಟ್ಟು ಬಹನೆನೆನೀಲ ಕೃತಫಲ । ವಟ್ಟದರೆ ಬರಲೇಳು ಖಗಪತಿಯನಲು ಸೌಮಿತ್ರೀ ॥ ಬಿಟ್ಟುಮುತ್ತಿನೊಲಾಸ್ರುಗಳು ಪುದು । ರಿಟ್ಟಕರುಣದಿ ಕಂದನಾಲಿಂ । ಗಿಟ್ಟುಕುಳ್ಳಿರಿಸಿದ ವಿಭೀಷಣನಂಕದಗ್ರದಲೀ ॥೭॥ ನಿನ್ನ ಪೆಸರ್ಗೊಳಲಹಿತ ದಳದೊಳ । ಗನ್ನು ಹಯಗಜನೀರ್ಗೆ ಬಾಯ್ಬಿಡ । ಲನ್ನು ಭಯಗೊಳುತಿರುವ ಯೇಕೋಲೋಕ ವೀರನಿಗೇ॥ ಬಂನವೆಡೆಗೈಸಿದನು ಪರಹಿತ । ವನ್ನು ಕುರಿತೈತೆಂದ ನಿನ ಕೈ । ಗನ್ನು ಲಕ್ಷ್ಮಣ ಸಿಕ್ಕಲೇಗೈವೆನೆ ವಿಭೀಷಣನೂ ॥ ೮ ॥ ತೆಗಸಿ ಜರ್ಮವಭೇರಿಬಾಯ್ಮು । ಚ್ಚಿಗೆಯ ಮಾಡಿಸುವೆನಲು ನಿನ ಗುಣ । ದೆಗೆದೆಯಾರಿಂದ್ರಾರಿಯನೆ ಪಿತ್ರುವ್ಯನಂಗದನೂ ॥ ಅಗಲಿ ನಡೆ ಯಾಗಾಹವಕೆ ಮು । ಜಂಗಿಸಲರಿಪೆನೆ ರಾಮುಹರಿನಸು । ನಗಲು ಸರಿಗುಣವೆಂದ ಜಾಂಬವನಂಗಜನುಸಹಿತಾ॥ ಹೀನಮಾನಗಳೆಂಬ ವರಿತನಿ । ಧಾನರಲ್ಲೀ ಜನರೊಳಗೆ ಪ್ರೀ । ತ್ಯಾನುಕೂಲ ವಿರೋಧವೆನೆ ಸುಗ್ರೀವ ನಿಂನೊಂಮೇ ॥ ಆನಲಾಹವಕೆನುತ ಹಸುಳೆಯೋ । ಳೇನುಬಿಡಿರೆನೆ ಅಹಿತಶಾರ್ವರಿ । ಭಾನು ಬಲಗೋಪಾಲ ಖಗರೊಳಗೆನಲು ನಸುನಗುತಾ ॥ ೧೦ ॥ ಅತ್ತಲಾಸಮುಯದಲಿ ಆಗಾ । ಗುತ್ತಲಿಹ ವರ್ತನವ ತಿಳಿದುಳಿ । ಯುತ್ತಲಿಹ ಲಘುವರ್ಣಿ ಗತದಿನದೊಳಗೆ ಮಾರೀಚಾ ॥ ಸತ್ತದರುಹಿಂದಿಂದ್ರಜಿತು ಶರೆ । ವೆತ್ತನಿಂದಿನವೆನಲು ಪಾಪಳಿ । ಹೊತ್ತಿಗೆಲ್ಲರ ನುಂಗಿಸಗುವನೆನಲು ವೈದೇಹೀ ॥ ೧೧ ॥ ಇಂದಿನೊಳಗೇನಹುದೊ ಯನುತಿರ । ಲಂದಿನಾಹವ ವಾರ್ತೆಚರನೈ । ತಂದು ಮುಂಡೋಧರಿಗೆ ಪೇಳಲು ಯರಗಿ ಹಂಮೈಸೀ ॥ ಸಂದಿ ಮೂರ್ಛೆಯೊಳವನಿಗುರುಳಿದ । ಳಂದು ಶೋಕಾಬ್ಧಿಯನು ತುಳುಕಿದ । ರಿಂದುಮುಖಿಯರು ಶೈತ್ಯದಿಂದೆಚ್ಚರಿಸೆ ಶ್ರೀಮಾಲೇ ॥ ೧೨ ॥ ಕಂದನಗಲಿನ ಅಗ್ನಿವುದರನು । ಬಂದದಿಂತನು ದಹಿಸುವಾಶ್ರುಗ । ಳಿಂದಲಾರಿಸುವಂತೆ ಶೋಕಾಬ್ಧಿಯನು ತುಳುಕುತಿಹಾ ॥ ಅಂದಕೆಲ್ಲುದ್ವೇಕಿಸಲು ತಾಳೆಂದ ಶ್ರೀಮಾಲುಲಿದಳಿದ ಕೇ । ಳೆಂದು ಮುಂಡೋಧರಿಗೆ ನೇತ್ರಗಳೊರಿಸಿ ಪ್ರುದವಿಂದಾ ॥ ೧೩ ॥ ಹರಿಸಿ ವಾಲಿಯ ನಂಗದನ ಬಿಗಿ । ದಿರಿಸಲುಳಿದಿಹ

ನೆಂಬ ತೆರತಿಳಿ । ಹರಿಸಿ ಮಾರೀಚನನು ಯಿಂದ್ರಾರಿಯನು ಶರವಿಡದೇ ॥ ತರಿ
ದರೇ ಗೈವೆಮಗೆ ಗೆಲು ಬಂ । ದೊರೆದರೂ ಸರಿ ಮೇಣು ಅಪಜಯ । ಬರಲು
ಬಹನಾಲೋಕಿಸಲು ಬಹದಕ್ಕನೆನಲನುಜೇ ॥ ೧೪ ॥ ಕೊಲ್ಲದುಳುಹಿದರಾಪ್ತ
ರೆಂವರಿ । ದೆಲ್ಲಿಯಿರೆ ಜೀವಿತವೆ ಮುಖ್ಯಂ । ದೆಲ್ಲ ಅಳಲುಳಿದಿನ್ನು ಮುಂದ್ಯಾ
ರಾರು ಹತವಹರೋ ॥ ನಿಲ್ಲಿಸಲು ಯುತ್ನಿಸಿದರರುಬಹು । ಬಲ್ಲವಿಕೆಯಲದ್ವೈದಿ
ದಾಪ । ತ್ತೆಲ್ಲ ಕೊಂದೇ ಅಳಲು ಕಡೆಮುಟ್ಟೆಂದಳಿಂದುದುಖೀ ॥ ೧೫ ॥ ಶಕ್ತಿ
ವೆಕ್ತಿಸಿತಿಂದ್ರಜಿತು ಕಂ । ಡುಕ್ತವೇತಕೆ ನಾರದರಸೈ । ಯುಕ್ತದೊಳಗೈದಸು
ರನಾಯಕಗುಲಿದು ಬೋಧನೆಯಾ ॥ ಮುಕ್ತಗೊಳಿಸಾ ಸೀತೆಯೊಳಗನು। ರಕ್ತಿ
ಯನು ಹರಿಸೆಂದು ಶ್ರೀವಾ । ಲುಕ್ತಿಸಲು ಸೈಯಂದು ನಾರದ ಪೇಳ್ದ ಮಯ
ಸುತೆಗೇ ॥ ೧೬ ॥ ಅಸದಳಾಹವ ಯಿಂದಿನೊಳಗೆಂ । ದುಸುರಲಾಸ್ಯವ ಗೈದೆ
ನಾಳಿಂ । ಬಿಸುವ ದುಃಖೇನೇನೊ ಮಂಡೋಧರಿಯೇ ನೀನೀಗ ॥ ಅಸುರನೆಡೆ
ಗೈದೇಳು ಯನಲು । ಬ್ಬಸದಿ ಯೇರೊಯ್ಯಾನವನು ಅ । ಗಸದಿ ಬಂದಳು ಕ
ಳುಹಿ ಮುಂದನುಚರನ ಮುನಿಯೊಡನೇ ॥ ೧೭ ॥ ಬಹಳುಮಗನಳಲಿಂದಲೆಂ
ಬನು । ಗ್ರಹಿಕೆಗೊಳುವ ಸುರೇಶನಿಗೆ ಸಂ । ದಹಿತ ವಿಗ್ರಹ ಕಂದಿಕಂದಿಸಿತಾ
ಕರವನುಗೊಂಡು ॥ ಬಹಳ ಕೋಪದೊಳಿರುವ ನೆಡೆಗೈ । ತಹ ಮುನೀಶನಿಗೆ
ರಗಿ ನಿರವ । ದ್ಯಹ ವಿಶಾಲದಪೀಠದೊಳು ಕುಳ್ಳಿರಿಸಿದಸುರೇಂದ್ರಾ ॥ ೧೮ ॥
ಅಂಗನಾಮಣಿಯುಪ್ಪಲವನಾ । ಲಿಂಗನದಿ ತನುಕಂದಲೀರ್ವರಿ । ಗಂಗವೇ
ಕೋಮೇರೆಯಾದುದನರಿದ ಮುನಿನಾಥಾ ॥ ಹೆಂಗಸಿನ ಮೂಲದೊಳ ಗೀತಾ ।
ಸಂಗಿಕರಿಸಿಹುದಾಕೆಯನೆ ಪೆರ । ಪಿಂಗಿಸೈದಿರು ಸ್ವಸ್ಥಚಿತ್ತದೊಳೆಂದ ದಶಸಿರಗೆ
॥೧೯॥ ಮುದ್ದಿಸಂಗನೆ ತೊಡೆಯೊಳಗೆ ಅನು । ಬದ್ಧಗೊಳಿಸಲು ಕಾಯ್ದು ತಾ
ಪ್ತನು । ಬದ್ಧ ಕಬ್ಬಿಣಕರುವಿನಂದದಿ ತೋರಲಾ ಸಭೆಗೇ ॥ ತಿದ್ದುತಂಗನೆ ಕು
ರುಳ ದಿನಕರ । ಬಿದ್ದ ನಷ್ಟರಲಲ್ಲದಿರೆ ರಿಪು । ಸುದ್ದಿಯಡಗಿಪೆ ಮುನಿಪನೆಂದ
ಸುರೇಂದ್ರದುಗುಡದಲೀ ॥ ೨೦ ॥ ಬಿಡುವುದೇ ಜಾನಕಿಯ ನಾಳಿನೊ । ಳಡ
ಗಿಸೆಲ್ಲರನಾಕೆಯನು ಸರ । ಗೊಡಲುವಡಂಬಡೆ ನಿರಲು ಮೇಣಾನಳಿವ ಸಮ
ಯದಲೀ ॥ ಖಡಿದು ಕೆಡಹುವೆನೆಂದು ಛಲ । ಖಿಡಿಯೊಡೆದ ದೈತ್ಯನ ನೋಡಿ
ನೀನನು । ಬಡಿಸು ಯುಂದಂವಾಜಿ ನೋಡಿಹುದೆಂದ ನಾರದನೂ ॥ ೨೧ ॥
ಬೇಡನಲ್ಲನೆ ಆದಿಯಿಂದೆನು । ಕೂಡಿ ತಪಜಯವೇಕವಹಿತರ । ಕೂಡಲಿಲ್ಲೀ
ರೌದ್ರವನು ಪರಿಹರಿಸಿ ಶ್ರೇಯವನೂ ॥ ನೋಡಿ ಕೇಳೆನಮಾತನಾ ಸತಿ । ಮಾ

ಡುತಿಹ ಶೋಕಗಳಲು ಶಾಪೊಡ । ಗೂಡಿ ಫಲಿಸದು ಕಾರ್ಯವೆಮಗರಸೆಂದ ಳಿಂದುಮುಖೀ ॥ ೨೨ ॥ ಇರಲಿಕಾರ್ಯಗಳಾಕೆಯನುಪರಿ । ಹರಿಸಿ ಧುರಗರೆ ವೈರಿಗಳ ಸಂ । ಹರಿಸಿತಿರುಗೈತರಿಪೆ ಕಂದನ ತಿಳಿದು ಯಿಂತಿದಕೇ ॥ ಕರುಣ ವಿಡು ಯನಗಿಂದುಪಗಲಾ । ಗಿರುವ ಸಪ್ನತಿಕಷ್ಟವೆಮಗೈ। ತರಲಿರದಕಟ ಕಟಾ ಬೇಡುವೆನೆಂದಳಿಂದುಮುಖೀ ॥ ೨೩ ॥ ಚಿಂತೆಯಳಿ ಸುಕುಮಾರಕನ ಬಲ । ವಂತಗೈದಿಹರಷ್ಟೆಪಿತ್ರು । ವ್ಯಂತವನ ಬಿಟ್ಟವನೆಯಿಹನು ವಿಭೀಷಣೊತ್ತಿನಲೀ॥ ಕಾಂತೆಯನು ಪರಿಹರಿಸುವದಕಿಂ । ನೆಂತ ಸಪ್ನುಲಿಯಂದ ಪ್ರಿಯಕೇ । ಳಂತ ರದಿ ರವಿಶಶಿಗೆ ರಾಹುಗ್ರಸ್ತವನು ಕಂಡೇ ॥ ೨೪ ॥ ಇಟ್ಟ ಕರ್ಣಾಭರಣನಾಸ ದೊ । ಳಿಟ್ಟ ಮಣಿಜಗುಳುವದ ಕಂಡ್ಕೈ । ಪಟ್ಟುವತ್ತುವೆನೆಂಬುವನಿತರಲಿ ರದೆ ವಿಸ್ಮಯವಾ ॥ ಗೊಟ್ಟವೇ ಗತಿಯೆಂದು ಕಳವಳ । ಹುಟ್ಟುವನಿತಕೆಹಾ ರಸರಗಳ । ಬೊಟ್ಟುವುದುರುವ ಕನಸ ಕಂಡರಸೆಂದ ಳಿಂದುಮುಖೀ ॥ ೨೫ ॥ ಯಲ್ಲಿ ಪೋದವೆನುತ್ತ ನಾನಳು । ವಲ್ಲಿ ಷೋಡಶಸಾಸಿರಂಗನ । ರೆಲ್ಲರಳಲುವ ಸಮುದ್ರದೊಳು ಗೃಹದೇವಿ ಹೊರಹೊಂಟೂ ॥ ಇಲ್ಲಿ ಬಹುಶೋಕಾಯ್ತು ನಾನಿರ । ಸಲ್ಲದಿದಕಿಂದವನಿಜೆಯ ಶರೆ । ಯಲ್ಲಿ ಪರಿಣಯವೆಂದು ಪೋದಳು ಯಂದಳಿಂದುಮುಖೀ ॥ ೨೬ ॥ ಇನಿತು ಮೊದಲಾದಿನ್ನು ದುಸ್ವ । ಪ್ನನಗೆ ಮಧ್ಯಾಹ್ನದೊಳು ಕಂಡೀ ! ಕನಸು ಕೈಯೊಡಫಲಿಸದಿರದದರಿಂದ ಕಾರ್ಯ ವನೂ ॥ ನೆನೆಯದಾ ಕೋಮಲೆಯ ಕಳುಹೆಂ । ಬೊನಿತೆ ಕೇಳೀ ಸ್ವಪ್ನಫಲ ಶಸಿ । ದಿನಪನುನಿಬಗೆಯಾಯ್ತು ಮಾರೀಚಿಂದ್ರಜಿತ್ಸುತಗೇ ॥ ೨೭ ॥ ಯಲ್ಲರ ಳಲಿದುದಾಭರಣ ನಿನ । ಗಿಲ್ಲದಿಹುದಾ ರಘುಜರಳುವಿಂ । ಗಿಲ್ಲೆಸೂಚನೆ ಕೇತ ನಾಂಗನೆ ಸೀತೆಯಡೆಗೈದೀ ॥ ದೆಲ್ಲದುಗುಡವ ಕಳೆದು ಆಕೆಯ । ನಿಲ್ಲಿಗೈದಿಪ ಸೂಚನೀಫಲ ! ವೆಲ್ಲ ನಮಕೂಟೆಂದ ಮಂಡೋಧರಿಗೆ ದೈತ್ಯೇಶಾ ॥ ೨೮ ॥ ಬಿಡುವುದಿಂನ್ಸಂದೇಹ ನಮಕೈ । ಬಡುವುದಿಂ ನೀಕಂಡಕನೆ ವರ । ಪಡೆದ ಪೂರ್ವಾರ್ಜಿತವು ಪ್ರತ್ಯೆಕ್ಷಾಗಿ ತೋರುವದು ॥ ಹಿಡಿಯದಿರು ಸಂದೇಹ ನಾ ಳಿನ । ಪಡೆಯೊಳರಿವೆಂದಂಗನೆಯ ಮು । ದ್ದಿಡುತದಯಮಾಡೆಂದ ನಾರದಗಾಗ ದೈತ್ಯೇಶಾ ॥ ೨೯ ॥ ಇಂದು ನಿಂನಿನೊಳಾದ ಫಲಿತಲೆ । ಮುಂದೆನಾಳೀಕುಂಭ ಕರ್ಣನ । ಹಿಂದೆ ನಿನಗಿಹುದಾದ ವೃತ್ತಾರುಲಿಯಲನುಬಡಿಸಾ ॥ ದೆಂದುನಾರ ದ ಮಗಳೆ ನಿನದುಃ । ಕೆದಿಗೆಡೆ ಯಿಲ್ಲೆಂದು ಪೋದಿಂ । ತೆಂದನಾಗಡಲಾಲಯಂ ಗನೆಗಲ್ಲಪಲುಗುತಲೀ ॥ ೩೦ ॥ ಕಟ್ಟ ಅಹಿತರ ದ್ದಾವಣೆಯ ಬೆಂ । ನಟ್ಟತಹೆ

ನಾಳಿಂನಸಂಪ್ರಿಯ । ವಟ್ಟು ನೋಡುವೆ ಯನಲು ದೈತ್ಯೇಶಾಗಘಟಕರ್ನಾ ॥ ಬಿಟ್ಟು ಸಂಗಟವತ್ತಿಗೆಯೆ ಹಿತ । ದಿಟ್ಟು ಯಿಹುದಾನಿರ್ದ್ದು ಚಿಂತೊಳ। ಬಟ್ಟ ಪರೆ ನಾಳ್ಗೋರ್ವನಂಕದೊಳೆಂದಸಾಹಸವಾ ॥ ೩೧ ॥ ವುಲಿದನುಡಿಗನುಸರಿಸ ದಲೆ ಬಹು । ಛಲವನುಲಿವ ಸುರೇಶನಿಗೆ ತನ । ಗೆಲುವ ತೋರುವ ಕುಂಭ ಕರ್ನನು ತಲೆಗೆ ಕಾಲೊಣೆಯೂ ॥ ಛಲವೆ ಹೊಣೆಯುದಕೆಂಬ ಶಾಸ್ತ್ರವ । ಗ ಲಸಿದನೊ ನೋಡಿಂನುಬಹುವಾ । ತುಲಿಯಲುಚಿತಲ್ಲೆಂದು ಮಂಡೋಧರಿಯು ಮರುಗುತಲೀ ॥ ೩೨ ॥ ಸೀತೆಯಂಬದ ಕೇಳುತೊಕ್ಷೋ । ಜಾತಗಳು ಕಡು ಹಿಗ್ಗಿಪಯ ಸಂ। ಜಾತಗೊಳಲಾ ಲೋಕಿಸುತ ಲೊಡನಾಶ್ರ ಪುಳಕಿತದೀ ॥ ಪ್ರೀತಿಯುಂ ಮಳಿಸಾತ್ಮಜೆಯು ಹಿತ । ವಾತು ಬಂದಿಹುದಾರೋ ಅಕಿಂ । ನೇತರದೊ ಯನಗೊಲವು ಪ್ರಿಯಕೇಳೆಂದಳಿಂದುಮುಖೀ ॥ ೩೩ ॥ ಭವಸಂ ಮಂದವೊಅಗ್ಬಿಟ್ಟನು । ಭವೆಯೊ ನಿಶ್ಚಯವಾಗಿ ತನುಸಂ। ಭವೆಯೆಸರಿಯಂ ಬಂದಜನಿಸಿಹುದೆನಗೆ ಅದಕುರೆತೂ ॥ ತವಗುಸಮನೆಂತಿಳಿದು ಯಿಾಗಾ । ಅವ ನಿಜೆಯ ಹರಿಸೆನಲು ನೀಪೆಂ । ಣವಳಪೆಂಣಾಗುದಿಸಿತಾ ಕರುಣೆಂದ ದೈತ್ಯೇಶಾ ॥೩೪॥ ಯಿಂನು ಸಂಶಯವೇಕೆ ಘಟಕ । ರ್ನಂನುವದ ತಿಳಿದುದಯವಾಗಲಿ । ನಿನ್ನಪ್ರೀತ್ಯಾಕರಿವುದೆಂಬನಿತರಲಿ ಬಹುಬೀರಾ ॥ ವನ್ನು ಕೊಚ್ಚುವರೇಕೆ ತಡವೆ ನ । ದನ್ನುತ್ತೈದಿದ ಪದ್ಮಪ್ರಿಯವೆಳ । ಗನ್ನು ಕಂಡೈತಂದರೆಂದಿನೊಲಿತರ ರಾಹವಕೇ ॥ ೩೫ ॥ ತಮಟಭೇರಿಯು ಕಹಳೆಬಲಬಲ । ರಮಣರಾಗಲ್ಲಂತ್ಯ ಕಾಲ। ಕ್ರಮಕೆ ಸರಿಗೊಡುತಿರುವ ಸಮಯದೊಳತ್ತ ಘಟಕರ್ನಾ ॥ ಅಮಿ ತಬಲದೊಡನಿಂದ್ರಜಿತು ರಿಪು। ಕ್ರಮುಗೆಡಿಸಲೈತರುವ ನಿಂದಿನ। ಸಮರಕೈತರ ಬೇಡಿ ಖಗವರರೆಂದು ಹೊಗಳಿಸಿದಾ ॥ ೩೬ ॥ ಇಂದಿನೊಳು ಘಟಕರ್ನನಾ ರ ಣ। ಸುಂಧರೆಗೆ ಕೈಗರೆವ ದಶಸಿರ । ನಿಂದು ನೋಡ್ನಾಳ್ನಿಂನ ಅನುಜನ ಬಳಿಗೆ ಕಳುಹಿಸುವೇ ॥ ನೆಂದು ಲಕ್ಷ್ಮೀರಮಣ ಕಹಳಿಗ। ಳಿಂದಲೂದಿಸಲಾ ವಿಭೀ ಷಣ। ನೆಂದನಿಂದಿಗೆ ಪೋಪೆನಾ ಘಟಕರ್ನಗೆದುರಾಗೀ ॥ ೩೭ ॥ ಬೇಡಕರಿ ವರೆ ಬೀಗರಿಗೆ ಕೈ। ಗೂಡಿತಾದಿಪ್ಪೇ ಸಾಕು ನಾನೇ । ನೋಡುವೆನೆ ಲಕ್ಷ್ಮ ಣಗೆ ಮಾರುತಿ ಸುಗ್ರೀವಾಂಗದರೂ ॥ ಆಡಿದರು ನಾವಿರ್ದು ವೆರ್ತನು । ಗೂಡಿ ಕೈದಿದಮೇಲೆ ನೀವೆನೆ। ನೋಡಿ ಪೌಜಿನೊಳಿಹುದು ನೀವೆಂದಾ ॥ ೩೮ ॥ ನಿಮ್ಮ ಸಹಯದಿ ಸಕಲ ಕಾರ್ಯಗ। ಳೆಂಮ ಕೈಗುಡಿತಾದರೀಗಾ। ನೊಂಮೆ ನೋಡುವೆನಸದಳ್ಳೈದಿದರಾಗಲಿಂ ಮತ್ತೂ ॥ ನಿಮ್ಮದಿರಲೆಂದಾಹವಕೆಮುಂ।

ದ್ಗುಂಮುತಿಹ ತಮುಟಗಳ ರಣಗಹ । ಳೊಂಮಿಸುತ ನಡೆತಂದ ದಶರಥನಗ್ರ ಭವನನುಜಾ ॥ ೩೯ ॥ ಮೂರುಲೋಕದಗಂಡ ಕಲಿಗುಣ । ಧೀರ ರಿಪುಸಂಹಾರ ನತರೋ । ದ್ಧಾರ ಸರಸ ವಿಚಾರ ಶೂರನು ರಕ್ಷನಂದನಕೇ ॥ ಕ್ರೂರತರದಕಠಾರ ಕದನಕ । ಠೋರ ಲಕ್ಷ್ಮ್ಯೇನೀರನಿಂದಿನ । ಲೀ ರಣಾಗ್ರಕೆ ಬರುವನೆಂದೊದರಿಬಿದ ಕಹಳೆಗಳಾ ॥ ೪೦ ॥ ಖಾಂಡಮೂರರಗಂಡ ರಣಕು । ದ್ದಂಡ ಹರಿಭೇರುಂಡ ಅಹಿತರ । ಹಿಂಡುತಿಹ ದೋರ್ದಂಡ ದಶಸಿರನಾನುಜನು ಯಂಬಾ ॥ ಚಂಡವಿಕ್ರಮಿ ಕುಂಭಕರ್ಣನು । ಗೊಂಡು ನಿಂದಿನ ರಣಕೆ ಯದುರಣ। ಗಂಡರಿಲ್ಲೋಡೆಂದು ಹೊಗಳಿಸುತೈದಲಾಹವಕೇ ॥೪೧॥ ಇತ್ತಲಂಗದಮುದನ ಜಾಂಬವ । ನೊತ್ತಿನಲಿ ಸುಗ್ರೀವ ರಣಕನು । ವೆತ್ತ ಕಹಳೋಜ್ವಲಿಸಿ ಬಹು ಬಲದೊಡನೆ ನಿಂದಿರಲೂ ॥ ಅತ್ತಲಿಂದ್ರಹಿತಾನುಜರು ಕಡು । ವೆತ್ತ ನವಸಪ್ತಷ್ಟ ಪಂಚ । ತ್ರೈತ್ತ ಪೆಸರಿನರೈದೆ ಬಹುಬಲದಿಂದಲೊಂದೆಶೆಯಾ ॥ ೪೨ ॥ ಬಂದರಾ ಕಪಿಕೇತನರಿಗೆದು । ರಿಂದ ದೈತ್ಯಾತ್ಮಜರು ಕೂಡ । ಲ್ಲೊಂದು ಸಾಸಿರ ಸಾಸಿರೆರಡಿನ್ನೂರು ನಾಲ್ಕಾಗೀ॥ ಮುಂದಿ ಕುದುರೊಯ್ಮಾನ ಗಜಸಾ । ಲಿಂದಕಂಖಾರಿಸುತ ಶರಸಂ । ಮುಂದ ಸಕಲಾಸ್ತ್ರಗಳ ಮುಚ್ಚುತ ತುಚ್ಚನುಡಿವಿಡುತಾ ॥ ೪೩ ॥ ನಾಯಿ ಜೀವವ ಹೊರೆವ ತೆರ ಖಗ । ನಾಯಕರು ನರನಾಜ್ಞೆಯೊಳು ಸಂ । ಜಾಯರಂತೊತ್ತುಕ್ಕಟ್ಟಿ ಹೆಟ್ಟಿಸಿ ಕೊಂದು ಬಿದ್ದಿರುವಾ ॥ ರಾಯತವೆ ರಣಕೆನುತಲಸ್ತ್ರನಿ । ಕಾಯವೈದಿಸುತಾಗ ದೈತ್ಯನಿ । ಕಾಯ ಮೇಘಾಕ್ರುತಿಯೊಳಾವರಿಸೊತ್ತಿ ಮುತ್ತಿದರೂ ॥ ೪೪ ॥ ಹಟ್ಟಿಸಗಣಿಲಿ ಜೀವಸಾಸಿರ। ಬಟ್ಟ ಹರುಷೇನಷ್ಟೆ ಮೃತಕರ। ವಿಟ್ಟ ತೆರಮಧ್ಯಾನದೊಳಗೆಂಬಂತೆ ದಶಸಿರನಾ॥ ಹೊಟ್ಟೆಯನುತೊಳದಷ್ಟೆ ಯಿತ್ತಡಿ । ಯಿಟ್ಟು ನೋಡೆಂದಂಗಜಂಗದ । ರೊಟ್ಟನಲಿ ಸುಗ್ರೀವ ಜಾಂಬವರಿಟ್ಟರಸ್ತ್ರಗಳಾ ॥ ೪೫ ॥ ಆಗನಾಲ್ಸಾಸಿರರು ವಂದ್ಸಮ । ನಾಗಿ ವಯರೂಪಧಿಕ ಶಕ್ತಿಸ । ರಾಗ ಕಲಿತದಿ ಕಲಿತಗೈದಾನೇಕ ಶಸ್ತ್ರಗಳಾ॥ ವೋಗಿಸುತ ಬಹು ಖಚರದಳಪ । ಲ್ನೀಗುತಿಹರೊಂದೊಂದು ಸಾಸಿರ । ಕಾಗಿ ತಗುಲಿದರೊಬ್ಬರೊಬ್ಬರು ಡೇಗೆಯುಂದದಲೀ ॥೪೬॥ ಬಿಟ್ಟು ಅಕ್ಷಯ ಶರಗಳನು ಖಡಿ । ದೊಟ್ಟುತಹಿತಾಸ್ತ್ರಗಳ ಮುಂದಡಿ । ಯಿಟ್ಟು ಬಹ ಪಂಚಾಸ್ತ್ರನಗ್ರದಿ ಸಾಸಿರಾತ್ಮಜರೂ॥ ಬೆಟ್ಟಗಳ ನೊಡೆಹಾಯ್ವ ಶರಸಂ। ಘಟ್ಟವಾವರಿಸವನು ಖಂಡಿಸು । ತಟ್ಟ ಬರಲತಿ ಬೆದರಿ ಕೊಂತಿಟ್ಟ ಕ್ರಗಳಲಿಡಲೂ ॥ ೪೭ ॥ ಕತ್ತರಿಪವಲ್ಲದಲೆ ಮೇಲಂ । ಗೊತ್ತಿದವಲಕ್ಷ್ಮಿಡದೆ ವಜ್ರಾಂ । ಗೆತ್ತ

ನಾಗೈತಂದು ಯುರಗುವರೊಜ್ರದಾರ್ಭಟೆಯಾ ॥ ನೊತ್ತಿ ಕೂಗುತ ಸಿಂಹರೂಪನು । ವೆತ್ತು ಧರೆಗಗನಾಂತರುದ್ಧವ । ಬೆತ್ತು ನುಂಗಿದ ಸಾವಿರಾತ್ಮಜರೊಂದೆ ತುತ್ತಾಗೀ ॥ ೪೮ ॥ ಯಾತನುಗ್ರದ ರೂಪಿಗಾದನು । ಜಾತರೆಲ್ಕಣ್ಮುಚ್ಚಿದರನುಂ । ಗೀತ ಬರುವನಿತರಲಿ ಅಂಗದನಾಪಿ ಪೀಲಗಳಾ॥ ಭೂತಳದೊಳೆಸೆವಂತೆ ರೌದ್ರೋ । ದ್ಧಾತ ಕೈಕೂಗಿನಲಿ ಹೊರಳಿಸಿ । ದಾತಗೋಚಯದಂತೆ ತರುಬೈತಂದ ಸಾಸಿರರಾ ॥ ೪೯ ॥ ಧರೆಗೆ ಬಲ್ಲಿದ ಜಾಂಬವನ ಯುದು । ರಿರಿವರೇ ತ್ರೈಲೋಕ ಜನರವ । ಕರುಣ ಕಾರಣನಾ ಬರಲಿಲ್ಲಾಗೀ ಸಂಗರಕೇ ॥ ಮೆರೆದ ತೆರವೈತಂದನಿಗೆ ಸಾ । ಏದರು ಮಕ್ಕಳಿಸಿಕ್ಕ ಬಹುದಾ । ಕುರಿಗಳೆಳತಂದಂತೆ ಬೆದರಿಸಿ ತಂದ ನಿಜಬಲಕೇ ॥ ೫೦ ॥ ಅತ್ತಲೊತ್ತಟ್ಟನಲಿ ಸಾಸಿರ । ರೊತ್ತು ತೀತೆರ ಗಂಡು ಬಹುಬಲ । ಮುತ್ತು ಆಕರ್ಷಿಸುತ ಸುಗ್ರೀವಾಗ್ರ ಶಸ್ತ್ರಗಳಾ ॥ ಮುತ್ತಿಸೊತ್ಕಡುವೆತ್ತು ಆರ್ಭಡಿ । ಸುತ್ತ ಬಹರಗ್ರದಲಿ ಶರದಿಂ । ಬಿತ್ತು ಯುರಚಿದನೆದುರ ಶಸ್ತ್ರಗಳರಿದು ಸುಗ್ರೀವಾ ॥ ೫೧ ॥ ತುರುಗಗಜ ವೈಮಾನ ಜೋದನು । ಚರರರೆಲ್ಲರ ಶಸ್ತ್ರಸನ್ಯಾ । ಸ್ಗರೆದ ರೀತಿಯಗೈದು ಸಾಸಿರರೊರುಣ ಪಾಶದಲೀ ॥ ಕರಗಳನು ಕಟ್ಟಾವಣೆಯ ತೆರ । ಗರೆದು ತರುಬಲು ಆಗಲವನು । ತ್ಕರಕೆ ಸುಗ್ರೀವಾಜ್ಞೆಯೆನಿಸಿತು ಲೋಕವಿಖ್ಯಾತೀ ॥ ೫೨ ॥ ತರಲು ಮೂಸಾ್ಸಿರ ಕುಮಾರರ । ಶರೆಯ ಪರಿಹರಿಸಾ ವಿಭೀಷಣ । ನಿರಿಸಿದಿಂದ್ರಾರಿಯ ಸಮೀಪದಿ ಸಿಂಹನುದರವಿಹಾ ॥ ತರಳರದೊ ಭಾಗದಲಿ ಹೊರಡಿಸಿ। ಮರುತಿ ನಿಜರೂಪ್ಗೊಳಲು ಕೈಪರೆ । ಗರೆದು ನಗಲಲ್ಲಿರ್ದರೆಲ್ಲರು ಮಿನುಗೆ ರಾಘವನೂ ॥ ೫೩ ॥ ಸಿರವ ಬೊಗ್ಗಿಸಲಿಂದ್ರಜಿತು ನೀ । ನರಿಯಸ್ಮರ ಮಾಯವ ಮೇಣ್ಬಹು । ಸರಸ ರಸಿಕನುಭಾವನೆದುರೊಳು ಹಾಸ್ಯವನುಗರೆದಾ ॥ ವಿರಸ ವ್ಯಾಕವನಲ್ಲಿ ನಮಗಪ । ಕರನು ಯಿವನಲ್ಲ ಶಿರೆಂಬದ । ನಿರಿಸು ಸುಕುಮಾರೆನೆ ವಿಭೀಷಣ ಕೈಲಿಕುಸ್ತರಿಸೀ ॥ ೫೪ ॥ ಮೊರೆಯೆ ದುಸ್ವರ ನಾಲ್ಕುಸಾಸಿರ। ತರಳರನು ಶರೆವಿಡಿದರೆಂಬ । ಬ್ಬರಕೆ ವಡೆಹಾಯ್ದೈದೆ ಪ್ರಳಯದ ಮಾರಿಯುಂದದಲೀ ॥ ಮರಳ ಯುರಚಿದ ತೆರದಿ ಶರಸೋರ್ಗ। ರೆದು ಬಹ ಚಕ್ರೇಶನಿಗೆ ರಘು । ವರನು ಬಂದೆದುರಾದ ಶಸ್ತ್ರದ ಶರಧಿಯುಬ್ಬಿಸುತಾ ॥ ೫೫ ॥ ಹುಟ್ಟಿದತಿ ಸಿಟ್ಟಿನೊಳು ಖಡಿಖಡಿ । ದೊಟ್ಟೆ ಶಸ್ತ್ರದಸಾಲು ಸಾಲಿದು । ರಿಟ್ಟು ಹಳಚಳಚುತಲಿಹ ಮಂತ್ರಾಸ್ತ್ರಗಳತೊಟ್ಟೊ ॥ ಬೆಟ್ಟಬೆಟ್ಟಗಳಾನು ವೊಲುಸಂ । ದಿಟ್ಟದಿಂದೆಸೆವಸ್ತ್ರಗಳ ಕ। ಣ್ಬಿಟ್ಟು ನೋಡರುಹಾಗದಂತಾತುರದಿ ಕಾದಿದರಾ॥

ಬಿಡುವ ಶರ ತೊಡುವೆಡೆಗಡಿನ ಶರ । ದಡವು ಮೀರಲು ತ್ರಿದಶರಿಗೆ ಬಹು । ಗಡಣವಾಯ್ತಾರಾಮರಾವಣಯುದ್ಧವೆಂದೆಂಬಾ ॥ ನುಡಿಗಳಾಶ್ರಯಗೊಡಲು ಆಹವ । ಕಡು ಸಮರ್ಥರು ಸಮರ ಭೈರವ । ಮೃಡನ ತೆರಕಾ ಯೋರ್ವರಾಹವಗೈಯ್ಯುತಿರಲತ್ತಾ ॥ ೫೭ ॥ ಮಕ್ಕಳನು ಶರೆಹೊಯ್ದರನು ಕೊಂ । ದಿಕ್ಕುವಾತುರದಿಂದ ಘಟಕ । ರ್ನುಕ್ಕಿ ಶಸ್ತ್ರದ ಮೇಘವಹಿತರ ಅಂಗ ಚತುರಂಗಾ ॥ ಮುಕ್ಕುಳಿಸುತ್ತೈತಂದನಸ್ತ್ರದ । ಚಿಕ್ಕಟದಿ ಆರ್ಭಟೆಯೊಳಗೆ ಕೊಂ । ದಿಕ್ಕಿದನು ಹದಿನಾರು ಅಕ್ಷೋಹಿಣಿಯ ನಿಮಿಷದಲೀ॥ ೫೮ ॥ ನೋಡಿ ಆಹತ ಲಕ್ಷ್ಮಣನು ತಿರು । ಹೂಡಿಶಾರ್ಙ್ಗಯ ಪಿಡಿದು ದಿವ್ಯಾ । ಸ್ತ್ರವಿ ಬಿಟ್ಟಕ್ಷಯದ ಸರಳಿಂ ಮೇಲು ಮೇಲಾಗೀ ॥ ತೀಡುತಿಹುದನು ಗೂಡುತಿಹವ । ಲ್ಲೋಡಿ ಕಾಡುವ ಶರವ ನಿರ್ನಯ । ಮಾಡಲಪದಳವಾಗಿ ಕೊಂದನು ರಕ್ಷನಾಯಕರಾ ॥ ೫೯ ॥ ವಂದೆ ಕಣ್ಣೆವೆ ಯಿಡುವಸಿತಕ । ಲ್ಲೊಂದೆ ನೂರಕ್ಷೋಹಿಣಿಯ ಕೊಂ । ದೆಂದು ಹೊಗಳಿದರಾಗ ನಿರ್ಜರರೆಲ್ಲ ಲಕ್ಷ್ಮಣನಾ ॥ ಹಿಂದೆ ಮರುಳುಗಳವನ ಆಯುಷು ಕುಂದ ಬ್ಯಾಡೆಂದೀ ತೆರದಿ ದಿನ । ವಂದಕಪ್ರತಿ ಯಸಗಲೆಂದರು ಹರಸಿ ಮಾಧವನಾ ॥ ೬೦ ॥ ತುಂಬಲಬ್ಧದತಿಶಬದಿಳೆ ಕೊಳ । ದೆಂಬ ಕುಪಿತೋದ್ರೇಕದಲಿದಿ ! ವ್ಯಾಂಬುಗಳ ಸಂದಾನಿಸುತಲಸುರಾರಿ ಘಟಕರ್ನಾ ॥ ಕುಂಭಿನಿಯೆ ಅದುರ್ವಂತೆ ಕೂಗ್ದಿ। ಕ್ಕುಂಭಿನಿಗಳೊಲೆವಂತೆ ಪದಭರ । ದಿಂಬಿನಲಿ ಯಚ್ಚಾಡಿದರು ರಣರಾಜಮಂಜುಳರೂ ॥ ೬೧ ॥ ಮುಟ್ಟಿ ಬರಗೊಡದೆಡೆಗೆ ನಡುದ್ದಿಕ್ಕಟ್ಟಿ ಶರಸಂಕೂಳ ಚೂರ್ಣವ । ನಿಟ್ಟು ವುದುರುವದಲಪೆ ತುಂಡೆರಡಾದ ಶರವಲ್ಲೀ ॥ ಬಿಟ್ಟರಲ್ಲಾ ಯಿರ್ವರೇ ರಣ । ದಿಟ್ಟರೋ ಅಣಿಮಣಿಯದಲೆ ಕಲಿಗೊಟ್ಟು ಕಂಖಾರಿಸುತ ಕಾದಿದರಂಕದಂಕುಶರೂ ॥ ೬೨ ॥ ಬಿಲ್ಲಶರಕೇತ್ಕವಚಗಳ ಖಡಿ । ವಲ್ಲಿ ಗಾತುರದಿಂದ ತಳಮೇ ! ಲಲ್ಲಿಗಸ್ತ್ರವತೋರಿ ವೈಮಾನಗಳ ಪಿನ್ನೆಗಸೀ ॥ ಘಲ್ಲಿಸುವ ಧನಿಯಿಂದ ನೋಡೆಂ । ಬಾಲ್ಲಸಗಳಿಂದಸ್ತ್ರದಿಗ್ಧಿಶೆ । ಗೆಲ್ಲ ಮುಚ್ಚುವೊಲೆರಚುವರು ಮತ್ತೆಲ್ಲ ಖಂಡಿಪರೂ ॥ ೬೩ ॥ ಮತ್ತೆ ಸುತ್ತಿಪರಸ್ತ್ರಗಳ ನಡೆ । ಗೊತ್ತಿ ಪುಷ್ಪಕಗಳನು ಮುದ್ಗರ । ಯತ್ತಿ ಯಸೆರದುಸಾಂಗ ಕೊಂತಿಟ್ಟೆಗಳಸಂಗತಲೇ ॥ ವೊತ್ತಿ ಬಿಡುತೊಮ್ಮೊಮ್ಮೆ ಸಿಡುಗೋ । ಲ್ಬಿತ್ತುವರ ಕೈಚಕ್ರದಲಿ ಖಡಿ । ದೆತ್ತುವರು ಯದುರೆದುರ ಸೇನೆಯರಸಕೋವಿದರೂ ॥೬೪॥ ಬಿತ್ತರಿಪರಳವಲ್ಲದಸಲ್ಲದಳ ! ವೆತ್ತಸತ್ವೋಪೇತರಾಹವ। ದೊತ್ತಿಬಿಡುತಿಹಕನಕಸೂತ್ರದಿ ಬಿಗಿದಕಣೆ ನಭಕೇ ॥ ಮುತ್ತುಗೊಳಲೀ ಕೌತುಕದ ಕಡು।

ವೆತ್ತಿ ಕಾದುವರೆಂದಿಗೂ ಕಾ। ಣುತ್ತಲಿರಲಿಲ್ಲೆಂದರಾ ಚತುರಂಗನಿಜರರೂ॥೬೫॥ ಇರಲಿ ವೋರೋರ್ವರನು ಸಂಹರ। ಗರೆವ ಆತುರದಿಂದ ಮುಂದೊ। ತ್ತರಿಸಿ ಬಿಟ್ಮ್ಯಾನಗಳ ನಿಡಃಚಂದ್ರಹಾಸಗಳಾ ॥ ಧರಿಸಿ ಬಂದಿತ್ತೆರದ ಸಾಮಿನ। ತೆರಗಿ ಹರಿನಾದದಲಿ ಕೈಕ್ಕೈ। ಗರೆದು ಸವ್ಯಾಪಸವ್ಯಹಾರಿಕೆಗೈದು ಬೊಗ್ಗುತಲಿ ॥ ೬೬ ॥ ನೆಗೆದು ಮಸ್ತಕಕಿಳುಹಲಾತಂ। ಕಗಳಲಂತರ ಕಡಿಗೆ ಹಾರ್ತೂ। ರೊಗೆವ ಬಿಂಕದ ಪಂಕಪುಂಖದ ಚತುರ ಕೈಚಳಕಾ ॥ ಸೊಗಸಿನಲಿ ಬೀಳ್ವಸಿ ಗಳಿಗೆ ಮೈ। ದೆಗೆಯ ದೆಡೆಗೈಯೇಣ ಶೃಂಗಗ। ಳಗಿಸಿ ತಟ್ಟುತ ಶಣಸುತಿಹ ಸಮಯದಲಿ ಲಕ್ಷ್ಮಣನೂ॥ ೬೭ ॥ ಮಿಂಚಿ ಬರಲೊತ್ತೊತ್ತಿ ಘಟಕ। ನಿಂ ಚು ತಿರಲರಿದಸುರನಾಯಕ । ಸಂಚಿಸಿದ ಕ್ಷಣ ರುಚಿಯತೆರದೊಳು ಬಿಟ್ಟು ರಾಘವನ॥ ಹಿಂಚೆ ತನಸಾಮ್ಯಕ್ತಿ ಕೊಂತದಿ । ಮುಂಚಿಸಿಡಲುಳ್ಕಿನೊಲು ಬಹದೆದು। ಸಂಚಿಸಿದ ಸ್ವಯಂಕರದ ಶಕ್ತಿಯ ಬೇಗ ಲಕ್ಷ್ಮಣನು ॥೬೮॥ ಶಕ್ತಿಯುಕ್ತಿಯಲೆರಡು ಮಧ್ಯನು। ರಕ್ತಿಯಲಿ ಹೊಯ್ದಾಡಿ ವೊಂದೊಂ। ದ್ಯುಕ್ತಿಪನಿತರಲಸುರನೆಸಗಿದ ಕೃತ್ತಿಮಕೆ ರಘುಜಾ ॥ ವ್ಯಕ್ತಿಸಿದ ಕೋಪದಲಿ ಶರ ಸಂ। ಯುಕ್ತಗೊಳಿಸುತ ಸಿಡಿಲಗಮುಕಸು। ವೆಕ್ತಿಯಲಿ ಬಂದಿಟ್ಟ ದನುಜಾ ನುಜನ ವಜ್ರದಲೀ ॥ ೬೯ ॥ ಬಂದ ವಜ್ರದ ಗುಂಡು ಆರುಹಿರ । ದಂದ ಹೃದಯ ಕಡಕಿಸೆ ಮೂರ್ಛೆಯೊ । ಳೊಂದುತಿಹ ಘಟಕರ್ಣನೆಡೆ ವೈಗಾಪಿ ನಾಳುಗಳೂ॥ ತಂದು ವೈಮಾನದೊಳು ಪ್ರಚ್ಛನ। ದಿಂದ ಮಲಗಿಸುವನಿತರಲಿ ಪರ। ಸಿಂಧುವನು ಮರೆಗೊಳಲು ದಿನಕರ ಧರ್ಮರವಚರಿಸೇ ॥ ೭೦ ॥ ಸಲ ದು ಸತ್ಪುರುಷರಿಗೆ ಶಾರ್ವರಿ। ಚಲಿತ ದಾಹನವೆನಲದೀರ್ವರು। ನಿಲಿಸಿದರು ದಶಕಂಠ ಲಕ್ಷ್ಮೀಧರನು ಕೈಗಳನು॥ ಬಲದಬಳಿಗೈತಂದು ತಮತಮ। ನೆಲೆಗೆ ಬರುತರಹಂತನಡಿಗಳ । ಲಲಿತದೊಳು ಕೊಂಡಾಡಿ ಬಂದರು ರಾಮರಾವಣ ರೂ ॥ ೭೧ ॥ ಕಲಿಲಹರ ಮುನಿಸೂವೃತಾಂತ್ಯದಿ। ಚಲಿತರಾದಾ ರಾಮ ಲಕ್ಷ್ಮಣ। ರೊಲವಿನೀ ಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದ ಮನ। ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೭೨ ॥

ಅಂತು ಸಂಧಿ ೬೮ ಕ್ಕಂ ಪದನು ೩೯೯೪ ಕ್ಕಂ ಮಂಗಳಮಹಾ ಶ್ರೀ ಶ್ರೀ

ಅರವತ್ತೊಂಭತ್ತನೆಯ ಸಂಧಿ.

ಕುಂಭಕರ್ನನ ಬಂಧನದ ಸಂಧಿ.

ಆಹವದ ಕಲಿಕುಂಭಕರ್ನನ । ಸಾಹಸವ ಕೆಡೆಮೆಟ್ಟಿ ಮೂರ್ಛೆಯ । ಗ್ರಾಹಿಸಿದನಸಹಾಯ ಕದನದೊಳಿಂದ್ರಜಿತುವೈರೀ ॥ ಪಲ್ಲವಿ ॥

ನೋಡಿದೈ ರಾಜೇಂದ್ರ ಯಿರ್ವಲ । ಬೀಡಿಗೈ ತರಲುಳಿದ ಬಲಕನು । ಗೂಡಿದೊಳಿತೊಸ್ತ್ರಖಿಳ ಭೂಷಾವಳಿಯ ಮನ್ನಣೆಯಾ ॥ ಮಾಡಿ ರಘುಜಾಸ ನದಿ ಕುಳಿತೊಡ । ಗೂಡಿ ಕುಳಿತಿಹ ಖೇಚರರೊಳಿಂ । ತಾಡಿದನು ಯಿಂದಾದು ದಿಂ ನಿಂನೇನೊ ನಾಳಿನೊಳೂ ॥ ೧ ॥ ಪಡದ ಲಿಖಿತವು ದೇಹವಡೆದರ । ಬಿಡ ದು ಯನುತಿರಲಂದಿನೊಳು ಶರೆ । ಹಿಡಿದನುಜಾತ್ಮಜರು ನಾಲ್ಸಾಸಿಲವು ಅಲ್ಲ ದಲೇ ॥ ಪಡೆಯ ಮೂರ್ಛೆಯ ಕುಂಭಕರ್ನನು । ನಡೆದರಿಂದಸುರಾರಿ ರಾ ಘವ । ರೊಡನೆ ಯಿಾಕರ್ತೆನಲು ಸೀತೆಯೊಳಾಗ ಲಘುಪರ್ನೇ ॥ ೨ ॥ ಹೆಚ್ಚಿ ದಾಹವವಿಂದಿನೊಳು ಕೈ । ಗಚ್ಚಿಸಿತೆ ನಾಳ್ನಾಡಿದಕೆಬಿ । ಬ್ಬಚ್ಚಿಸುವರೆನ ಬಂ ದು ವೆನುವಾನಂದಗೊಳೆ ಸೀತೇ ॥ ಮುಚ್ಚಿದಾಚ್ಛಾನವ ತೆಗೆದುಸು । ರೆಚ್ಚರದಿ ಘಟಕರ್ನನಿಗೆ ಶೈ । ತ್ಯಚ್ಚೆಯಿಂದೆಬ್ಬಿಸಿದರಿತ್ತಸುರೇಂದ್ರ ನನುಮತದೀ ॥೩॥ ಬಹಳ ನಿದ್ರೆಯ ಮತ್ತಿನಿಂಬಿ । ರ್ದಿಹನ ಬೆಂನೊಯ್ದುಯ್ದು ಆರ್ಭಟಿ । ಗಹ ಳಲೆಬ್ಬಿಸಿದಂತೆ ಶೈತ್ಯವನಿತ್ತುದಲ್ಲದಲೇ ॥ ಸಹಸರೆಲ್ಲಾರ್ಭಡಿಸಿ ವೈತಟ್ಟುಹಗ ಳಿಂದೆಚ್ಚರಿಸೆ ತೂಗಡಿ । ಸುಹುತಲೆದ್ದನು ಕುಂಭಕರ್ನನು ತಿಳಿದು ಮೂರ್ಛೆಯ ನು ॥ ೪ ॥ ಯದ್ದ ಅನುಜನ ನೋಡಿ ಸಂತಸ। ಹೊದ್ದುವನಿತರಲಂಗನಾಮಣಿ ಮುದ್ದು ಮಂಡೋಧರಿಯು ವಳಗಿಂದೈದುತಿರೆಕಂಡೂ ॥ ಯುದ್ದು ಪ್ರಿಯ ನಾಲಿಂ ಗಿಸುತಲೆಡೆ । ಮುದ್ದುಗೊಳಿಸಿರಿಸಿದ ನಿಗೀದಿನ । ಸುದ್ದಿ ಯೇನಾಯ್ತೆಂದು ಕೇ ಳ್ದಳು ರಣದ ವಾರ್ತೆಯನೂ ॥ ೫ ॥ ವುಲಿಯದಿರೆ ದಶಕೀರ್ತಿ ಮುಖನ । ತ್ತೊಲೆಯೆ ಘಟಕನರ್ಾಯಸದಿ ಬಳ। ಲೊಲೆವನಾಲೋಕಿಸುತ ಹಂವ್ಯೈಸೊರಗೆ ಮೂರ್ಛೆಯಲೀ ॥ ನಿಲಿಸೆ ಸೈತ್ಯದಿ ಯದ್ದು ಮೈದುನ । ಗಲಸಿಗೇ ನಿನ್ನೇನೊ ದುರ್ಧರ । ಫಲಿಸಿ ತೊರೊಯಂದಾಶ್ರುಗರೆದಳದಾಗ ವುನ್ಮುಖಿಯುೂ ॥ ೬ ॥ ಹೊಗರುತಿಹ ಮುಖವಂಬಕದಿ ಜೋಂ । ನುಗುಳುತಿಹ ತಿಂದಡಗದುಕ್ಕುವ । ಬಗೆಯ ನೀರಾಳಾಪಗೊಳುತಿಹ ಪದ್ಮಗಂಧಿನಿಯಾ ॥ ಮಿಗದಗಂಗಳೆ ನಿಲಿಸು

ದುಃಖವ । ಜಗಳದಾಗಮ ಪೇಳ್ವೆನೆನುತಾ । ನಗಧರಾರಿಯು ಪೇಳ್ದನಂದಿನ
ತೆರನದೆಲ್ಲವನೂ ॥ ೭ ॥ ಸಿಕ್ಕಿದರೆ ನಾಲ್ವಾಸಿರಾದೆನ । ಮುಕ್ಕಳಿಂದಿನಲಿಂದ್ರ
ಜಿತು ನಿಂ । ದಕ್ಕಿದನೆ ಅಹಿತರಿಗೆ ಲೋಕವನೆಲ್ಲ ಸ್ವಾಸದಲೀ ॥ ಮುಕ್ಕಳಿಪ
ತ್ರೈಶೂಲಿಯನು ಸೊ । ಕ್ಕಿಕ್ಕಿದರೆ ಆರಾಮರಿಗೆ ಯದು । ರಿಕ್ಕಲಿನ್ಯಾರಕಟವೇ
ಗತಿಯನಲು ಮಯತನುಜೇ ॥ ೮ ॥ ಆಗ ತನುಶರಧಿಯನು ದುಃಕೊಡ । ಬಾ
ಗಿ ಹೀರುತ ಬರಲು ತಳವೆಳ । ಗಾಗಿ ಹೊರಳುವ ನಲ್ಲೆಯನು ಸ್ವಸ್ಥಿಸಲು ಶ
ಕ್ಯಿಲದೇ ॥ ಬೇಗ ಶೂಲಿಯನೋಡಲನುಸರಿ । ಸಾಗತನ ಸಂಗಟವನತ್ತಿಗೆ ।
ಗಾಗವುಲಿದನು ತಾಯೆ ಚಿತ್ತೈಸೆನ್ನ ಬಿನ್ನಹವಾ ॥ ೯ ॥ ಅಸುರಹರನೊಳಗಾ
ನು ರಣ । ದೆಕ್ಕಸವೊಳಿರಲೈತಂದು ಮೋಸದೊ । ಳೆಸೆದನೊಜ್ರದ ಗುಂಡಿನಲಿ
ಗುಂಡಿಗೆಗೆ ಅದನರಿಯೇ ॥ ಹೊಸಕಿ ಬಿಸುಡುವೆನಾಳೆ ನಿಂನು । ಬ್ಬಸವಪರಿಹ
ರಿಪಂತೆ ಅಹಿತರ । ಬೊಸಿದುತಹೆ ತನುಜಾತರೊಂದಾಗೆಂದ ಘಟಕರ್ಣ॥೧೦॥
ಸೈರಿಸು ದಯಾಂತ್ಯೊಂದೆ ಝಾವದಿ । ವೈರಿಗಳ ಸಂಹರಿಸದಿರೆ ನಿನ । ಸೈರವಿ
ದ್ಧಂತಾಗಲದು ವರಿಗಾನು ಬೇಡುವದಾ ॥ ಕ್ರೋರಬೇಡೆನಲದಕೆ ಆಕಿಂ । ದೈ
ರಿಸೆಂದಳು ಶೂಲಿಕಡೆ ಸಂ । ಹಾರನೆಂದರಿತಿರ್ದೆ ನೆಂದಿಂತೆಂದಳಿಂದುಮುಖೀ
॥೧೧॥ ದ್ವಾದಶಾಷ್ಟಮ ಜನ್ಮಗ್ರಹಕನು । ವಾದ ಶನಿಯಂತವನಿಜೆಯವಲ ।
ವಾದುದೆಲ್ಲಾ ಶಕ್ತ್ರಿವಿದ್ಯವ ಕಂಣುಗಳಮುಚ್ಚೀ ॥ ವೇದೆಗಾಲಯುಗೈವಳನುಬಿ
ಟ್ಟೀಧುರಕೆ ಯರಗಾರು ನಿನಗೆದು । ರಾದರುಳುಹಿರದೆಂದಳಾ ಮಯತನುಜೆ
ಮೈದುನಗೇ ॥ ೧೨ ॥ ರಾಹುಗ್ರಸ್ತದ ಬಿಂಬದೊಲ್ನಿನು । ಸಾಹಸೆನಲವಳಿಂ
ದಲೀದು । ದ್ದಾಹವವಳಿಕ್ಕಡಿಪೆನೆಂದೆಳೆ ದಿಂದುಹಾಸವನೂ ॥ ಗಾಹಿಲಿಂದೇ
ಳ್ದಸುರನಾಯಕ । ನೋ ಹೊ ತಾಳೆಂದಂಗನಾಮಣಿ । ದೇಹವಾಲಿಂಗಿಸುತ
ಮೋಹದೊಳುಲಿದಳಿಂತೆಂದೂ ॥ ೧೩ ॥ ಹತಿಸೆ ಸತಿಯುರಮುಂದೆ ಭವಸಂ ।
ತತಿಯೊಳೆಡೆ ಬಿಡದಂತದುಃಖನು । ಗತಿಸುತಿಹುದೀಗೇನೊ ಗೈದಹಿತದಲಿ ಯಿ
ದುಬಂದೂ ॥ ಜತಿಸಿತಿಷ್ಟೇಸಾಕು ಆಕೆಯು । ಹತಿಸಲಿರಿಸಿರಲೊಂದೆರಣಸಂ ।
ಗತಿಯು ಬೆಂಬಿಡದಂತ್ಯ ತನಕೆಮಗೆಂದ ಳಿಂದುಮುಖೀ ॥ ೧೪ ॥ ಸ್ವಸ್ಥದೊ
ಳು ಬಿಡು ಬಿಡವಲಾಕಿ । ದ್ದಸ್ಥಳದಿ ಯಿರಲೆರಡರೊಳಗೊಂ । ದಸ್ತ್ರ ವಿಸ್ತ್ರಯ
ಸರಿಪತನಕಲದಾಕೆ ಸುಡಿಸಿದರೇ ॥ ಹಿಸ್ತುನಾಲಿಗೆ ದೇಹ ನಿನಮುಂ । ದಸ್ತುಬಿ
ಡುವೆನೆ ಕದಪಲುಗಿ ಸಂ । ಬಿಸ್ತ ಮಂಡೋಧರಿಯೆ ತಿಳಿದಂತಾಗಲೆಂದಸುರಾ
॥ ೧೫ ॥ ನೋಡಿ ವಂದೆರಡಾಹವದಿ ಆ । ಕೇಡಗಿತ್ತಿಯು ಬಿಡುವೆ ನಮ್ಮ ।

ಗೂಡದಿರಲೆಂದಂಗನೆಯ ಕುಸ್ತರಿಸುವನಿತರಲೀ ॥ ಮೂಡಿದನು ರವಿಯಸುರ ನಿಗೆ ಮೇ । ಲ್ಮಾಡನೀವೀಧರೆಯ ನಿನಗೈ । ಗೂಡಿಸುವೆ ರಘುವೆಂಬತೆರದೊಳ್ ಗರಿದನಾವೆಗಳಾ ॥ ೧೬ ॥ ಅಂದಿನೊಳಗೈತಂದ ಬಲವೆ । ಷ್ಟೆಂದುದಿಲ್ಲಾಗು ದತೂರ್ಯನಿ । ತೆಂದು ಗೊತ್ತಿರದಬ್ಧಿಘೋಷಣೆ ಮೇಘಘರ್ಜನೆಯಾ ॥ ಹಿಂ ದುಗೈವೋಲಾಗಲವನೇ । ರ್ವಂದರಥಕಿಂನೂರು ಸಾಸಿರ । ಸಿಂಧುರಗಳಳವ ಸಿದನು ಚಕ್ರೇಶನೇರಿದನೂ ॥ ೧೭ ॥ ಭಾಸ್ಕರನ ಮಂಡಲದ ಕಾಂತಿಯ । ತಸ್ಕರಿಪ ವೈಮಾನಕಳಸೈ । ದಿಸ್ಕಲಿತಸಾರೋಟ ಕನಕಾಚಲವ ಕಿರಿದೆನಿಸೀ । ಮಸ್ಕರಿಪದೇರೈದುವನ ಬಲ । ದಿಸ್ಕಲಿತ ಸಾಹಸ್ರ ಕಿರಣನು । ವಿಸ್ಕ ಚಕ್ರವ ಬರಲು ಬಂದನು ಚಕ್ರಿ ವೈಭವದೀ ॥ ೧೮ ॥ ಪಿಡಿದ ಮುತ್ತಿನ ಛತ್ರವಿತ್ತೆರ ಕೊಡುಹುತಿಹ ಯಿಾರೆಂಟು ಚಾಮರ। ಬೆಡಗಿನಲಿ ಪರಿವೃಢನ ವೈಭವಕಧಿಕ ಶೀವಿಯಲೀ ॥ ಕಡಲಗೃಹನೈತರಲು ಅಗ್ರಜ। ನೆಡದ ಭಾಗದೊಳರ್ದ ವೈ ಭವ ।ದೊಡನೆ ಬಂದನುಪೇಂದ್ರನೊಲು ಘಟಕರ್ನ ಕೌತುಕದೀ ॥೧೯॥ ಇತ್ತ ರಾಮನಿಗೆಂಟು ಆ ಪುರು । ಷೋತ್ತಮನಿಗೀರೆಂಟು ಚಾಮರ । ವತ್ತಿ ಬೀಸುವ ರಿತ್ತೆರ ವಿದ್ಯಾಂಗನೆಯರಿಂದಾ ॥ ಹತ್ತಿ ಕೇಸರಿ ಗರುಡ ವೈಮಾ । ನೆತ್ತಿದಾತಪ ಛಾಯದೊಳು ಖಗ। ರೊತ್ತಿನಲಿ ನಡೆತಂದರಂಕಾವನಿಗೆ ಬಹುಬಲದೀ ॥೨೦॥ ಕಡುಕಡುಗುತಿಹ ಕಹಳೆತಂಬಟ। ಗಿಡಿವ ದಿಗ್ಭೇರಿಗಳು ಬುಂಬುಕ । ಗೊಡುವ ಶಂಖದ್ರವದಿ ಪ್ರಳಯಾಕಾರಭೈರವರಾ ॥ ಕಡುವಿನೊಳಗೈದಿಹರು ಅಹಿತೆದು। ರಿಡದಲೋಡೆಂದುಲಿವವೀತ್ಯ । ಗ್ಘಡಣೆಯೊಳಗೆದುರಾಗಿ ನಿಂದರು ರಾಮು ರಾವ ಣರೂ ॥೨೧॥ ಇತ್ತರದ ಖಗನಾಯಕರ ಬಲ । ದೊತ್ತಿನೊಳಗಿರಿಸಾಗ ಧನು ಗಳ। ನೆತ್ತಿದರು ದನುಜೇಂದ್ರಗೆದುರಾಗಿತ್ತ ರಾಘವನೂ ॥ ಮತ್ತೆ ಕೇಶವ ಕುಂಭಕರ್ನರು । ಯೆತ್ತಿ ಶಾರ್ಙ್ಗಯ ಕಾರ್ಮುಖಕೆ ಸರ। ಳೊತ್ತಿ ನಿಂದರು ಭಾಸ್ಕರನತೆರತುಹಿನಕರರಂತೇ ॥ ೨೨ ॥ ಸಾಸಿರದೊಳೊಂದ್ಬಾಗ ಬಲರಿಪು । ವಾಸವಿರದಿರಲಾಗಿ ಕಡಲನಿ । ವಾಸಗೈದಿದಕೋಪದಿಂದೆದುರಾದಅಹಿತರನೂ। ಬಾಸಿತಹುದೆದುರೊಡ್ಡಲಿವರೇ । ನ್ನಾಸಿಗರೆಯೆನುತ ಸುರಪತಿ ಕೈ। ಬೀಸುವನಿ ತರಲೆರಗಿದರು ಖಗರಗ್ರರಾಕ್ಷಸರೂ ॥೨೩॥ ಮುಚ್ಚುತಂಗಚತುಷ್ಟಯವುಗ । ರ್ಬುಚ್ಚುವಂತಾರ್ಭಟೆಯೊಳಗೆ ಶ। ಸ್ತ್ರೋಚ್ಚಿ ಖಗವಾಹಿನಿಯ ಕೊಚ್ಚುತಚುಚ್ಚಿ ಖಂಡಿಸುತಾ ॥ ಬಿಚ್ಚುತಂಗನು ಶಾಖೆಗಳ ನೆದು । ರೆಚ್ಚ ಶಸ್ತ್ರಗಳರಿದು ಬಲ ಬೆ। ಬ್ಬಚ್ಚುವಂದದಿ ಸುರಿದರಂಬಿನ ಮೇಘವನು ಕಿತ್ತೂ ॥ ೨೪ ॥ ಸಿರವ

ನೆತ್ತದೆ ಕೈಗಳನು ತ । ತ್ತರಿಪ ದಳಗಂಡ ಸುರಹರ ರಘು । ವರರು ವಜ್ರಾ
ವರ್ತಶಾರ್ಙ್ಗಯ ನಾರಿಯನು ಸೀವೀ ॥ ಸರಳನಳವಡಿಸ ರುಹನಂಘ್ರ । ಸ್ಮ
ರಣೆಯಲಿ ಕಿವಿವರೆಗೆ ಸೇದುರು । ತರದಿ ಬಿಟ್ಟರು ಪುಂಖ ಪುಂಖದ ಬಿಂಕವಿಶಿ
ಖದಲೀ ॥ ೨೫ ॥ ಶರಗಳಿಗೆ ಶರಮುಚ್ಚುವೊಲು ಚಮು । ತ್ಕರದಿಂ ವಿದ್ಯಾಸ್ತ್ರ
ಗಳಂನೂ । ಕರಗಿಸಕ್ಷಯ ದಿವ್ಯಸರಳನುಸಾರ್ಚಿ ಅನಿತಬಲಾ ॥ ಗರೆವ ಶಸ್ತ್ರ
ಗಳೆನಿತೊ ಮೇಲೈ । ತರುವ ಮಿಗಿಲಾಸ್ತ್ರನಿತೊ ತತ್ತ ! ತ್ತರಿದು ಕೆಡಹುತಬ
ರಲು ಬಲಕೇಶವರು ಕೌತುಕದೀ ॥ ೨೬ ॥ ದಿಕ್ಕುನಾಲ್ಕರೊಳಳ್ಳನಿತು ಬಿಡು ।
ಹಿಕ್ಕದಂತಾವರಿತ ಬಲವಿದು । ರಿಕ್ಕುತಿಹ ಬಹುಶಸ್ತ್ರಸಹ ದಿನಕರನ ಕಾಂತಿಯ
ನೂ ॥ ಸಿಕ್ಕಿಸಂತರದಲ್ಲಿ ಶಾರ್ವರಿ । ಚಿಕ್ಕಟದಿ ಮುಸುಕಿಕ್ಕಿದಹಿತರ । ಸೊಕ್ಕ
ಹಾರಿಸುತಿರುವ ರಘುಜರ ಮೌಲಿ ರವಿಯಾಗೇ ॥ ೨೭ ॥ ಹೊಳೆವನೆಳಗಿನೊಳೆ
ಳೆದ ಕರವೆಡೆ । ಯೊಳಗಣಸ್ತ್ರವ ಕೊಳ್ವ ಧನುಶರ । ಗಳ ವಿಸರ್ಜನೆ ಆರಿಗರು
ಹಾಗೆದೊಲು ಪುತ್ಥಳಿಯಾ ॥ ಕಳೆಯೊಳಗೆ ಕವಿತರುವ ಶಸ್ತ್ರಗ । ಳಿಳೆಬಿಡುವ
ಚತುರಂಗವನು ದಳ । ದುಳದಿ ಸೋರಿಸುತಿರ್ದರಾ ರಣಧರೆಯ ಅಗಲದಲೀ
॥೨೮॥ ಖಡಿವದಲ್ಲದೆ ಶಸ್ತ್ರಗಳ ನವ । ಗಡಿತದೈತ್ಯಾನೀಕಿನಿಯ ತನು । ಹಿಡಿದ
ಶಾಖನುಶಾಖೆಗಳನಿಂಗಿಂಗಡದಿ ಬಿಡಿಸೀ ॥ ವಡನೆ ಸೋರಿಸೆಲಾನೆ ಹಯಪದ ।
ನಡೆಗರಸ್ತ್ರಗಳೆಂಬ ವಿಂಗಡ । ಗೊಡದ ರೀತಿಯ ಖಡಿದು ಮುಚ್ಚಿದರಂಬು ನಿಧಿ
ಯಂನೂ ॥ ೨೯ ॥ ಮುಚ್ಚಿಕಡಲೆಲ್ಲನಿತು ಯಿನಿತುಂ । ಬೆಚ್ಚುವುದಕಾಗ್ರೇಕ
ಯೋಜನ । ಹೆಚ್ಚಿ ಸರಿಸಮನಾಗೆ ತೀರಕು ಲೆಂಕೆಗೇಕದಲೀ ॥ ಹೊಚ್ಚಿಯಿರ
ಲದನೀಗಲೇಸೈ । ಲಚ್ಚ ಸೇತುವೆಯಂಬರರಿಯ । ದ್ಗಚ್ಚವೆಂತಾ ಗಗನಗಾಮಿ
ನಿವಿದ್ಯೆಯಿಂದರಸೇ ॥ ೩೦ ॥ ಈ ತೆರದ ಶರಸೇತುವೆಯ ತ । ದ್ವೀತಗೈದರು
ನಿಮಿಷದೊಳು ವಿ । ಖ್ಯಾತರಳವಡಿಸಿರ್ದ ಕೋದಂಡಗಳಿಗನುಕೂಲಾ ॥ ವಾತ
ಸ್ವರ್ಣದ ಕಿಂಕಿಣಿಯು ರಘು । ಜಾತನಿಗೆ ಹದಿನಾಲ್ಕು ಲಕ್ಷ್ಮೀ । ನಾಥನಿಗೆ
ಹದಿನಾರು ತದ್ನಿರ್ಣಯವನಾಧರಿಸೂ ॥೩೧॥ ಹಿಂದೆಅಕ್ಷೋಹಿಣಿಯಲೆಖ್ಖನು।
ಬಂದವಹುದಂತೈದು ಮಡಿದರೆ । ವಂದು ಅಪಮೂರ್ದ್ನಾಡುವದು ನರ್ತನವ
ನಾಘಂಟೀ ॥ ವಂದುದನಿಗೊಳು ಏಷ್ಟುಅಳಿದರೆ । ಸಂದಘಂಟಿಗಳೆಲ್ಲಅಕ್ಷಣ।
ದಿಂದ ಸರಗೊಳುವಷ್ಟು ಬಲವಾಹತಿಸಲವನೀಶಾ ॥ ೩೨ ॥ ಅಳಿದದಿಷ್ಟಿಂನು
ಳಿದ ದಳನೆಲೆ । ಗೊಳದೆ ಬಹದನು ಖಂಡಿಸುತ ಮು । ತ್ತುಳಿದು ವುಳಿದರಹರ
ಹಿಹಿರಿದರು ಬಣಬೆತೃಣದಂತೇ ॥ ಯಳೆಯಲಬ್ಧಿಗೆ ಮುಚ್ಚಿಬಂಧ್ಧನ । ದಳ

ವುಬಯಲ್ಗೊಡಲಾ ದಿನಕರ । ತೊಳಗಿದನು ಥಳಥಳನೆ ರಘುಜರ ಕೀರ್ತಿ ವಾ
ರ್ತೆಯೊಲೂ ॥ ೩೩ ॥ ಹಾರಿತಾ ಬಲಬಲದ ನಿಶಿತೆರೆ । ವಾರಿಸಿದ ತೆರ ದಶ
ಮುಖನ ಸಿರಿ । ಜಾರುವಂದದಿ ಜಾನಕಿಯ ಚಿತ್ತಾತಕರದ ಚಿಂತೇ ॥ ವಾರಿಸಿ
ದ ತೆರನಾಗಿ ರಿಪುಸಂ । ಹಾರಿಗಳು ರವಿಶಸಿಯು ತೆರದಿಂ । ದಾ ರಣಾಂಗಣದಿರ
ಲು ಕಂಡ್ಪುಲ್ಮಸೆದ ರಾಕ್ಷಸನೂ ॥ ೩೪ ॥ ಅಂಟಿದನು ಘಟಿಕರ್ನದೈತ್ಯರಿ । ಗಂ
ಟಿದನು ದಶವಕ್ತ್ರ ರಘುಸಂ । ಘಂಟಿನಲಿ ಕರೆದಸ್ತ್ರಗಳ ಖಂಡಿರಿಸಿಮೇಲೊರಸೀ॥
ಯಿಾಂಟುವರು ಶರಶರಧಿಯನೆ ಕೈ । ಭಂಟನಲಿ ಮತ್ತೆಸೆದು ಯಡೆಗೈ । ದಂಟ
ಸದ ಲಿಕ್ಷಡಿಪರೆಡೆಯೊಳು ದಾನ ವಾನರರೂ ॥ ೩೫ ॥ ಯಾಕೆ ನಿನಗಿಷ್ಟೆಂದು
ಘಟಕ । ರ್ನಾಕಲಿತ ರೌದ್ರಾವತಾರದಿ । ನೂಕಿ ಶರ ಸೇತುವೆಯ ನಕ್ಷತ್ರುದು
ರುವಂದದಲೀ ॥ ಆಕರಿಸಿ ಕೂಗುತಲಿ ಕೈಮೋ । ಸಾಕಲಿತದಿಂ ಮೂರ್ಛೆಯ
ನು ವ್ಮೈ । ತಾಕಿಸಿದ ಸಿಂಮುಂಣ ಬಂಡ್ಮೊಡ್ಲಿಂದು ಯನುತೈದೀ ॥ ೩೬ ॥
ಮುಚ್ಚಿ ವೈಮಾನವನುಮೇಲ್ಮೇ । ಲೆಚ್ಚುಲಕ್ಷ್ಮಣನಾಯುಧನ ಖಡಿ । ದೆಚ್ಚು
ಕೆಡಹಲ್ಮುಳ್ಳ ಶರವುಳಿಯಲಘು ಯರೆಯುಸ್ತ್ರಾ ॥ ಗಚ್ಚಿಸಾತುರಬಡುವನಿಗೆ ಪ್ರ
ತ್ಯುಚ್ಚುತಾಸ್ತ್ರಗಳೆಸೆದು ಖಡಿಖಂ । ಡುಚ್ಚಿಸಿದ ತ್ರೈಶೂಲಿಯಾಸ್ತ್ರಗಳಾಗಕಂ
ಖರಿಸಿ ॥ ೩೭ ॥ ಕೆಟ್ಟಶರಗಳನರಿದು ಮೇಲೆದು । ರಿಟ್ಟು ಬಿಡುವಸುರೇಶನೇ
ನಿನ । ಗುಟ್ಟಲಿಲ್ಲವೆ ಸಿಗ್ಗು ನಿಂನೆಯೊಳೊರಗಿ ಮೂರ್ಛೆಯಲೀ ॥ ಹೆಟ್ಟುಗೆಯ
ತೆರನಾಗಿ ಬರೆ ರಣ । ದಿಟ್ಟ ಸರಿಯನುತವನ ಪುಷ್ಪಕ । ಕಿಟ್ಟು ತಿರ್ರನೆತಿರುಹೆ
ಕುಲಿಶಾಸ್ತ್ರದಲಿ ಸೌಮಿತ್ರೀ ॥ ೩೮ ॥ ಯನ್ನ ದೈತ್ಯವಿಘೂರ್ವಣಲದಿಂ । ಮುಂ
ನಲಸದಳಶಕ್ತಿ ಸಹತಿ । ಟ್ಟಿಂನುತಿರುಹಿದನೀತ ಕದನೋದ್ಧಾರ ಸರಿಯಂದೂ ॥
ತಂನಮುನದೊಲು ಮೆಚ್ಚಿ ಯಲೆ ನರ । ನಿನ್ನ ಶಕ್ತಿಯೊಳೀ ಶರವನಿಲ್ಲಿ । ಸೆಂನು
ತೆಸೆದತ್ರಿಶೂಲಿ ಘನಸರ್ಪಾಸ್ತ್ರವನು ಮೊರೆದೂ ॥ ೩೯ ॥ ಧರಿಸಿಸಾಸಿರಪೆಡೆಯ
ವಿಷದುರಿ । ಯರಡುಸಾಸಿರಜಿಹ್ವೆಯಲಿ ಸೋ । ರ್ಗರೆದು ಭೋರಿಡುತವನಿಗ
ಬ್ರಕೆ ಪೂರ್ವಪಕ್ಷಿಮುಕೇ ॥ ವುರುತರದ ನೀಳದಲಿ ಬಹು ಭೀ । ಕರಕೆನಿರ್ಜರ
ರು ಭಯದಳಯವೆ । ಯೊರಿಸಿದರು ಅದ ನೋಡಿ ನಕ್ಕನುಪೇಂದ್ರನಿಂತೆಂದೂ ॥
ಹರಿಣಿಹರಿಯುಗ್ರದಲಿ ದಾಳಿಯ । ಗರೆದ ತೆರನಂದಚ್ಚುತನು ವುರು । ಗರಿಯ
ಶರವನು ತೊಟ್ಟು ನಿನ್ನುರುಗಾಸ್ತ್ರ ಶಿರಗಳನೂ ॥ ಕೊರೆಯಲೀ ಕೊಂದೊಂದ
ನೇಕೋ । ತ್ತರದೊಳರಿಯಲೊ ಯಂದು ಶಳೆದಿಡ । ಲೆರಗಲಾ ತಲೆಯಷ್ಟು
ಗರುಡಗಳಟ್ಟಿ ಮುಟ್ಟುತಲೀ ॥ ೪೧ ॥ ಕಚ್ಚುವನಿತಕೆ ಶಿರಗಳನು ಚೆ । ಬ್ಬ

ಚ್ಚಿ ಸದ್ರುಶಗೊಳಲು ಮತ್ತಿಂ । ನೇಚ್ಚು ತೋರಿರ್ದ್ದೆಲ್ಲ ಸಾಹಸದಂತ್ಯದೊಳ
ಗೊಂದೇ ॥ ಬಿಚ್ಚ ಶರದೊಳು ನಿನಗೆ ಹಾನನು । ಗಚ್ಚಿ ಪೆಂಬಚ್ಚುತನಮೇಲತಿ।
ಮಚ್ಚರದಿ ಶಾರ್ವರಿಯ ಶರದಿಂದೆಚ್ಚ ದೈತ್ಯೇಶಾ ॥ ೪೨ ॥ ಬುದ್ಧಿದೈತ್ಯರಿಗಿಲ್ಲ
ವೆಂಬದು । ಸಿದ್ಧ ಸರಿ ಹೇಗೆನಲು ನಾನೇ । ರಿದ್ದುದೇ ವುರುಗಾರಿ ಮೇಣಾ
ತರುಣಿಯನ್ವಯನಾ ॥ ಸುದ್ದಿಯೇ ನಿನ್ನಸ್ತ್ರಗಳಿಗಿಂ । ನಿದ್ದದೆಶೆಯಲೊ ಮರು
ಳೆನೆನುತುಸು । ರಿದ್ದನಾ ಘಟಕರ್ನನಿಗೆ ರಣ ಕಲಿಭೀಮ ಸೌಮಿತ್ರೀ ॥ ೪೩ ॥
ಲಕ್ಷವಿಲ್ಲೀ ನರರು ಆಮಹ । ರಕ್ಷರಿಗೆ ತತ್ಕಾಲ ಹರಿ ಪ್ರ । ತ್ಯೆಕ್ಷ ಹರಿಯಾಗಾಂ
ತರಲದಿಂನಾರು ಲೋಕದಲೀ ॥ ನೀಕ್ಷಿಸುವರಿಲ್ಲವನಿಪತಿ ವಿ । ಪ್ಪಕ್ಷ ಮೂದ
ಲಿಕೆಯಲಿ ಬಲದ । ದ್ಯಕ್ಷಕೊಳಗಾನಂದಗೈವರು ಶೂಲಿ ಶೂಲಾರೀ ॥ ೪೪ ॥
ಸಾಹಸೌದೆದುರಾಗಿ ನೀನಿ । ರ್ವಾಹಗೈದೆಂದೊಮ್ಮೆಯಲಿ ಕೈ । ಸಾಹಸರಿ
ಸುತಲಸುರಹರ ನೊಯ್ಯಾನ ಪಿಂಜೆಗಿಪಾ ॥ ವೂಹೆಗೊಳುತಡಿ ಮೇಲಿಗನುಗೈ ।
ದಾಹಳುಕ ನಂತಂತರದಿ ಪ್ರ । ತ್ಯಾಹಗೊಳಿಸುತಲಘಣೆಯಲಿ ಯಸುರಾಂತಕೆ
ಸೆಯುತಿರೇ ॥ ೪೫ ॥ ತನ್ನ ಶಸ್ತ್ರದ ಸಂತತಿಯ ಕಲಿ । ಪನ್ನಗಾರಿಧ್ವಜನು
ಪರಿಭವಿ । ಪಿನ್ನು ಯಸೆವದನೋಡಿ ಯದೆಗೆಚ್ಚೆಚ್ಚಿ ಕೋಪದಲೀ ॥ ಭಿನ್ನ
ಗೊಳಬಲು ವಿದ್ಯದೊಳಗೆ ಪ್ರ । ಸನ್ನನೆಂದಿನಹಾಸವನು ಪಿಡಿ । ಧಿನ್ನು ಮುನ್ನಿ
ನೊಲ್ಲೈದೆ ಘಟಕರ್ನಚ್ಯುತನಿಗೆದುರಾ ॥ ೪೬ ॥ ನೋಡಿಯಾದಿಯಲದನೆ ಬ
ಯಕೆಯ । ಮಾಡಿದೆಲೊ ತ್ರೈಶೂಲಿ ಮುಂದಡಿ । ಯೂಡು ನಿನ್ನಾಟವನು
ತೋರಿಪೆನೆಂದು ಶಂಭುಕನೂ ॥ ಬೇಡುತಿದ್ದಪಿವಿಡಿದು ರಣಕಡಿ । ನೀಡಿದಚ್ಚುತ
ನೆಗೆದು ಲಂಘನೆ । ಮಾಡಿ ಬರುವನಿತರಲಿ ನಿಂದಡಿಮೆಟ್ಟೆ ಘಟಕರ್ನಾ ॥೪೭॥
ಮೆಟ್ಟೆದಡಿಯನು ಚದರದಲೆ ಹೊಳೆ । ದಿಟ್ಟುತಟ್ಟುತ ಕಾಲತಲೆ ಖಡಿ । ದೊ
ಟ್ಟಲಡಿಮೇಲ್ಸಾಧಕದಿ ಮೇಣೊವ್ಮೆ ಪಿಂನೆಗೆದೂ ॥ ಮುಟ್ಟೆ ಬಹರಿನ್ನೇನು ಆ
ಯ್ತೆಂ । ದಟ್ಟುತಲಿ ಯಸುರಾರಿಯಗ್ರಕೆ । ಕುಟ್ಟೆದನ ಘಟಕರ್ನ ಹಿಂಬೊಗ್ಗ
ಸ್ತ್ರ ನೆಲಕಿಳೆಯೇ ॥ ೪೮ ॥ ಮತ್ತು ಯೆತ್ತವನಿತರಲಿ ಶಳೆದವ । ನುತ್ತಮಾಂಗವ
ಖಡಿಯಲಾದರೆ । ಯತ್ತಣಗಲದಿ ರಕ್ತ ಬಿಂದುಗಳೊಗೆಯ ಲನಿತೆಲ್ಲಾ ॥ ಬೆತ್ತು
ಘಟಕರ್ನಾಕ್ರುತಿಯ ಶೂ । ಲೆತ್ತಿ ಕೋಟಾಕೋಟಿ ರಕ್ಷ । ದ್ವತ್ತರಾರ್ಭಟೆ
ಪಿರಿದುಗೊಳಲಾಲೋಕಿಸಸುರಾರೀ ॥ ೪೯ ॥ ನೋಡಿ ಆಮಾಯವನು ವಿಸ್ಮ
ಯು । ಗೂಡುವನಿತಕೆ ಬಂದುತತ್ತೆರ । ಕ್ರೀಡಘಾತಮರೇಶ ಬೆಸಸಿದ ರಕ್ತಬಿಂ
ದಿನಿಯಾ ॥ ಮಾಡಿದೀಕ್ರುತ ರಕ್ತಬಿಂದಿನಿ । ತೀಡು ಬೇಗನೆ ಲಕ್ಷ್ಮಣನು ಸಂ।

ಜೋಡಿಸಿದ ಲದಕೆಲ್ಲವದ್ರುಶವಾಗೆ ರೂಪುಗಳೂ ॥ ೫೦ ॥ ನಿಂತ ಘಟಕರ್ನ
ನಿಗೆ ಲಕ್ಷ್ಮಣ್ರೀ । ಕಾಂತನೆಂದೆಲೆ ನೀಚ ನೀನೇ । ನೆಂತವನು ಗರ್ವಿಸಲು ಬಿಡೆನೆಂ
ದಾಲಿ ಚಂದ್ರಾಸಾ ॥ ವಂತಿರುಹುತ್ತೈ ತರುವನಿಗೆ ಯದು । ರಾಂತುತದ್ವಾಮಿ
ನಲಿ ನೆಗೆನೆಗೆ । ದಂತರಡಿಯೊಳು ನುಸಿದು ಖಡಿದಾತುರದಿ ಶಣಸುತಲೀ ॥೫೧॥
ಯತ್ತಿ ಸಿಂಹಾಕ್ರುತಿಯ ತತ್ಕಲಿ । ತೊತ್ತರಿಸಿ ಶತ ಕೋಟಿ ಕೇಸರಿ । ಯೊತ್ತಿ
ಬರಲಾರ್ಭಡಿಸಿ ಶರಭಾಕ್ರುತಿಯ ಶರವೆಸೆದೂ ॥ ಮುತ್ತಿಸಿದನಾ ಹರಿಗಳೊಂ
ದೊಂ। ತುತ್ತಗೊಳಿಸದ್ರುಶ್ಯ ಗೈಲ । ಲ್ನಿತ್ತ ಘಟಕರ್ನನಿಗೆ ಶಕ್ತಿಯಲೆಸೆದ
ನಸುರಾಂತಾ ॥ ೫೨ ॥ ನೋಡಿ ನಾನಾ ವಿದ್ಯದಲಿ ವಲೆ । ದಾಡುತಿಹನೆದೆಗಿ
ಡಲು ಶಕ್ತಿಯ । ಮೂಡಿ ಮೂರ್ಚೆಯಲೊರಗಿಸಿತು ರಣಶೂರ ಘಟಕರ್ನಾ ॥
ಪಾಡಳಿದನೆಂದೊದರೆ ದುಸ್ವರ । ಕೂಡಲಸುರೇಶ್ವರನ ಕರ್ನಕೆ । ಕೇಡ ಸಿಡಿ
ಲಂತೆರಗಿದನ ಬೆನ್ನಟ್ಟ ಬರೆ ರಘುಜಾ ॥ ೫೩ ॥ ಅಟ್ಟಬಹನೆದುರಿಟ್ಟ ಶರಗಳ
ತಟ್ಟ ಬರೆ ಪಿಂಮೆಟ್ಟ ಘುಡಿಘುಡಿ । ಸಿಟ್ಟು ಮುಂದಟ್ಟಸುರ ಲಕ್ಷ್ಮಣನೆದುರಿ
ಗೈತಂದೂ ॥ ಇಟ್ಟ ಮೂದಲೆ ಧರೆಗೆ ಅಸದಳ । ಜಟ್ಟಿ ನಿನ್ನಡಿಮೆಟ್ಟ ಸೀ
ಳದೆ । ನಲ್ಲೆ ಬಿಟ್ಟಂಬನಿತರಲಿ ದಿನಕರನು ಹಸ್ತಮಿಸೇ ॥ ೫೪ ॥ ವುರಿವ ಮಾ
ರಿಗಳಂತೆ ಲಕ್ಷ್ಮಣ್ರೀ । ಧರನು ದಶಶಿರ ತಗುಲುವನಿತರ । ಲೆರಗಿಸಾಳವ ಲಾವು
ಗೆಯ ಹೊಡೆವಂತೆ ರಘುವೀರಾ ॥ ಚರಮ ಗಧೆಯೊಳಗುತ್ತಮಾಂಗಕೆ । ಭರದಿ
ಕುಟ್ಟಲ್ಮೌಲಿ ಚೂರ್ಣಿತ । ಗರೆಯಲಿಟ್ಟ ಕಿರೀಟ ಬದಲಾಗಸುರನಾಯಕನೂ
॥ ೫೫ ॥ ಮೋಸದೊಳಗೆಟ್ಟೈದಿ ನಿನ ಕೈ । ಬೀಸಿನಿಂದಾ ಸಿಟ್ಟ ಮೌಲಿಯ
ಘಾಸಿಸದೆ ನಿನಶಕ್ತಿಸರಿ ಯಾತುಂಟಲಕ್ಷ್ಮಣನಾ ॥ ಕೂಸಿನಂದದಿಹೊಸಕಿಬಿಡ
ಲೆಂ । ಬಾಸುರದ ಸಮಯದಲಿ ಕದನಿಂ । ಬಾಸಿರೆಂಬಾರ್ಭಟದ ಕಹಳೆಗಳೊದ
ರಲುಭಯದಲೀ ॥೫೬॥ ಸತ್ಯಯುತರವರಾಗಿ ಕೈಸರಿ । ಹೃತ್ಯಗೈದಾವುಭಯ
ಬೀಡಿಗ । ಗತ್ಯನಡೆದರು ಬಲದಬೆಂಬಳಿ ರಾಮರಾವಣರೂ ॥ ಸ್ತುತ್ಯಗೊಳುತ
ರಹಂತರಡಿಯುನ । ವತ್ಯಕೃತ್ಯವ ಗೈದುರವಿಯಾ । ಗತ್ಯನೋಡುತಲೆಶೆದರನಘ
ಧ್ಯಾನಲೀನದಲೀ ॥೫೭॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ
ರಾಮಲಕ್ಷ್ಮಣ । ರೊಲವಿನೀ ಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತ
ದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು
ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೫೮ ॥

ಅಂತು ಸಂಧಿ ೬೯ ಕ್ಕಂ ಪದನು ೪೦೫೨ ಕ್ಕಂ ಮಂಗಳಮಹಾ ಶ್ರೀ ಶ್ರೀ.

ಎಪ್ಪತ್ತನೆಯ ಸಂಧಿ.

ದಶಾನನ ಸಮರದ ಸಂಧಿ.

ಕದನ ಪಟು ಭಟ ಮಲ್ಲ ದಶಶಿರ । ಗೆದುರು ಕಲಿಹರಿ ಗಂಡಭೇರುಂ । ಡದಟ ಲಕ್ಷ್ಮೀರಮಣ ರಾಹವಗೈದರದ್ಭುತದೀ ॥ ಪಲ್ಲವಿ ॥

ಅರಸ ಕೇಳಾದಿನದ ಕದನು । ತ್ಕರವನೊರೆಯಲಶಖ್ಯ ಸಂಪೂ । ರ್ಣ ರಲಿ ಶರಧಿಯನೀಜುವಂದದೊಳಾದ ದೆನಗೆಷ್ಟೊ ॥ ದೊರೆದ ಮಾತ್ರವೊ ಕಾಲು ವೆಯನು । ತ್ತರಿಸಿದಂತೊರದಿಹೆನು ಗೃಹಕ್ಕೈ । ತರುತ ಕುಳಿತರು ಖಚರ ನಾಯಕರೊಡನೆ ಶೇಖರರೂ ॥ ೧ ॥ ಅಂಗಜಂಗದರಾದಿ ಖಗರು । ತ್ತುಂಗ ಸಾಹಸರೆಲ್ಲರೀದಿನ । ಸಂಗರವನೆಂದಾದರರಿತಿಲ್ಲರಿದು ಕೇಳಿದರಾ ॥ ಸಂಗಡಿರವಿಲ್ಲೆಮಗೆ ಮೈಪ್ರ । ಗ್ನಂಗಳೇನಾಗಿರ್ದವೋ ಸುರ । ರಿಂಗಿತಕೆ ಅವಗೋಚರೆಂದರು ಬಲಿಮುಖ ಧ್ವಜರೂ ॥ ೨ ॥ ಅತ್ತ ಬೀಡಿಗೆ ಪುಗಲು ಸತಿಯಳ ' ಲುತ್ತಲಿಹಳೆಂದರ್ಧ ಪಥದಲಿ। ಹೊತ್ತುನೋಡುತನಿಂತ ದೈತ್ಯೇಶ್ವರನು ರಥದಲ್ಲೀ॥ ಇತ್ತು ಶೈತ್ಯವನೆದೆಗೆ ಪನ್ನೀ । ರೊತ್ತಿ ಬಿಜ್ಜಣಿಗೆಯಲಿ ಸುಳಿಯಲ । ರೊತ್ತೆ ಸರ್ವಾಂಗದಲಿ ಮೂರ್ಛೆಯ ತಿಳಿದು ಘಟಕರ್ನಾ ॥ ೩ ॥ ಮೆಲ್ಲನೆಲ್ಲಸದಳವ ಕಳೆದೊಳ । ಬಲ್ಲವಿಕೆ ಬಲದಿಂದ ಕೈಖಡಿ । ದಲ್ಲಿ ಚಲ್ಲಿದರಕ್ತ ಕಾರಂಜಿಯನು ಕುಪಿತದಲೀ ॥ ನಿಲ್ಲದೇಳುವನಗ್ರಜನು ಯೇ । ನೆಲ್ಲಿಗೆನಲಿಂದವರ ತಲೆಗಳ । ಚಲ್ಲದಿರಲೆನ ತಲೆಯ ನೀಡಾಡ್ವೆಂದು ಮುಂನಡೆದಾ ॥ ೪ ॥ ವುಗ್ರವುಗ್ರಾಕಾರ ದನುವಿಂ । ದುಗ್ರಜುಲಿವದನಾಲಿಸದೆ ಲಯ। ದುಗ್ರಜುಲವದನಾಲಿಸದೆ ಲಯ । ದುಗ್ರ ಲೋಚನನಂತೆ ಹೊಕ್ಕನು ಅರಿ ಪತಾಕಿನಿಯಾ ॥ ಕುಗ್ರಹಿಸಿದಾರ್ಭಟೆಯೊಳಹಿತಸ । ಮಗ್ರ ಚತುರಂಗವನು ಶಸ್ತ್ರ । ದ್ವೆಗ್ರದಲಿ ಸಂಮೂರ್ಛೆಗೊಳಿಸಿದನೇಕ ಕೋಟಿಯನೂ ॥ ೫ ॥ ಕಡೆಯ ಕಾಲವತಾರವನು ಅಳ । ವಡಿಸಿ ಅಹಿತರ ನುಂಗಲಾ ಬಲ । ಕೆಡೆದು ಮೊಡಹಾರಳ್ಯೆಯ್ಯೊ ಮಾರಿಯ ಮುಸುಡಿಗೆಮನಿಟ್ಟೊ । ಕೆಡಿಸುವರೆ ರಘುಲಕ್ಷ್ಮಣರೆ ನಿಂ । ಮಡಿಯನಂಬೈತಂದ ರೊಪ್ಪಿಸಿ । ಬಿಡುವರೇ ಯಂದೊರಲದೇನೆಂದ್ಯೆದೆ ಬಾಹಿರಕೇ ॥ ೬ ॥ ನಿಂದು ನೋಡಲು ಸೇನೆ ಘೂರ್ಣನೆ । ಸಿಂಧು ಪ್ರಳಯಾಬ್ಧಗಳು ಘುಡಿಘುಡಿ । ಸಂದ

ಕಸುರಾ ಲೋಕ ತೀರ್ಥಪ್ರಾಯವನುಗೈವಾ ॥ ಲಂದಿಲೊದಗಿದ ಕೋಪದಲಿ
ರಘು । ವಿಂದಲಪ್ಪಣೆಗೊಳುತಲಾಗ ಮು । ಕುಂದ ಹೊರಟನು ನಿಲಿಸಿ ಅಂಗ
ಜನಾದಿ ಸಾಹಸರಾ ॥ ೭ ॥ ಸಂದಿಸಿದ ಪ್ರಳಯಾಗ್ನಿಯನು ಅನು । ಬಂದಿಸಿದ
ಸಿಡಿಲಂತೆ ಕದನ ಮು । ದಾಂದ ಭಾಸ್ಕರ ಭಕ್ತವತ್ಸಲ ಹಲಿವರನುಜಾತಾ ॥
ಅಂದಿನಾಹವದೊಳಗೆ ಮೂರ್ಛೆಗೆ । ಸಂದ ಘಟಕರ್ನಂಬುದನು ಕಂ । ಡೆಂದ
ನೆಲೆ ದಾನವನೆ ಮನ್ನಿಸಲರಿಯದ್ಯೆದುವರೇ ॥ ೮ ॥ ತಕ್ಕ ಶಿಕ್ಷೆಯ ಗೈಯ್ಯದಲೆ
ಬಿಡ । ಲುಕ್ಕುವೆಯವೆಂದೆರಡು ಮೂರ್ಛೆಯ । ಸಿಕ್ಕಿಸಿದರರಿಯದಲೆ ನಾಚಿಗೆ
ಗೆಟ್ಟ ಕೆಟ್ಕೊಡೀ ॥ ಸೊಕ್ಕ ಮುರಿವೆಂದೊಜ್ರ ಗದೆ ಮೇ । ಲಕ್ಕೆ ಯೆತ್ತತಿ
ವೆಳಗ ಮಹತಾ । ಪುಕ್ಕಿಸುತ ಘಟಕರ್ನ ನಿಲ್ಲೆಂದ್ಯೆದೆ ಮುರಮಥನಾ ॥ ೯ ॥
ಪಿಡಿದು ವಜ್ರದ ಗಧೆ ಗಧೆಯ ಕೈ । ಬೆಡಗಿನಲಿ ಕಾಲ್ಚೆಳಕದಿಂ ಹೊಡೆ । ಹೊ
ಡೆದ ಗಧೆಗಳೊಳುದರೆ ಕಣ ಬಿಂದಗ್ನಿ ಮುಸಕದಲೀ ॥ ಬಡಿಯಲೋರೋರ್ವ
ರನು ತಲೆ ಕಾ । ಲ್ನಡುಗಳಿಗೆ ವಗೆವಾತುರದೊಳಿ । ಕ್ಪಡೆಯ ಬಲ್ದುರರಾಗ
ಗೈಯ್ಯೆ ಗಧಾಯುದುದ್ದದಲೀ ॥ ೧೦ ॥ ಗೈಯ್ದು ಬಲ್ಸಂಗರದಿ ಕೈಕೈ । ಹೊ
ಯ್ದು ಕರ್ಕಶದಿಂದಲಿತರರ । ಹೊಯ್ದು ಕೆಡಹಲ್ಬಗೆದ ಸಾಮಾವ್ಯಖಿಳ ವಂಚ
ನೆಯಾ ॥ ಗೈದು ನೆಗೆದನು ಅರಿಯ ಮಸ್ತಕ । ಕೊಯ್ದು ಕೆಡಹಲು ಕುಂಭ
ಕರ್ನನು । ಗೈದಹದವರಿದಣಗೆ ಲಕ್ಷ್ಮಣ ಚೀಮೆಯಂದದಲೀ ॥ ೧೧ ॥ ನೆಗೆ
ದನವನಿಗೆ ಬೊಗ್ಗಿ ಅಹಿತನ । ವಗೆಯಲಲ್ಕಾಣದಲೆ ಯಡಬಲ । ಕೊಗೆಯೆ
ದ್ರಿಷ್ಟಿಗಳೆಗರಿ ಲಕ್ಷ್ಮಣ ಬೆನ್ನನಪ್ಪಳಿಸೇ ॥ ನಗವೆ ಕೆಡವಂತಂಕದಲಿ ಮೂ ।
ರ್ಚೆಗೆದು ಬೀಳ್ವನ ನಾಗಪಾಶದಿ । ಬಿಗಿದು ತಂದನು ಕುಂಭಕರ್ನನ ಯಿಂದ್ರ
ನಾವರಜಾ ॥ ೧೨ ॥ ನಿಂತ ರಾಘವನಡಿಯೊಳಗೆ ವಿ । ಶ್ರಾಂತಿಸಿದ ಅನುಜಾ
ತನೊಳಗನು । ವಾಂತು ಬಿಚ್ಚಿಸಿ ಕುಂಭಕರ್ನನ ಕಟ್ಟ ಮೂರ್ಛೆಯನೂ ॥
ಹಿಂತೆಗಸಿ ಯಿಂದ್ರಾರಿ ಯಿರ್ದೆಡೆ । ಗಂತವನ ಸೇರಿಸಲು ಆನತ । ದಿಂತಿದನು
ಗೈತೆಂದು ಮರುಗಿದನಾ ವಿಭೀಷಣನೂ ॥ ೧೩ ॥ ಬೇಡಿಕೊಂಡೆನಗಾಂಡು ಗುದಿ
ಗೆಯ । ತೀಡು ಬಾರೆಂಬಂದಗ್ರಜನೆ । ಮಾಡಿವೆಲ್ಲರ ಕಡೆಗೆ ಯೇನಹೆನೆನೆ ವಿಭೀ
ಷಣನೂ ॥ ಪಾಡುಗೆಟ್ಟರು ನುಡಿಯದಲೆವಾ । ರ್ಮಾಡೆ ಮುಖಗಳ ಮಾನ
ಭಂಗಕೆ । ಹೇಡಿಸಿದರೀಕ್ಷದಲಿ ನೊಂದ ವಿಭೀಷಣವನೀಶಾ ॥ ೧೪ ॥ ಕಳಸ
ಕನ್ನಡಿವಿಡಿದು ತ್ರೈಖಾಂ । ಡಿಳೆಯ ಸಿರಿ ರಘುಲಕ್ಷ್ಮಣರನೆದು । ರ್ಗೊಳಲು
ಬರುವಂಗನೆಯ ಮುಖದರ್ಪಣದತೆರನಾಗೀ॥ ನಳಿನಸಖನಷ್ಟರೊಳುಗುದಯುವ।

ದಳೆದನಾ ಯಡೆಯಿಂದಲೇ ಕೊಳು । ಗುಳಕೆ ತಿರುಗಿದ ದಾಶರಥಿ ಖಗವರರ ಬಳಸಿಂದಾ ॥ ೧೫ ॥ ಅಪರ ದಿಗ್ಭಾಗಂಬುಧಿಯೆ ಮೇ । ಣುಪರಿಸಿತೊ ಯಂಬಂತೆ ಬಹು ಬಲ । ದಪರಮಿತ ಕಹಳೆಗಳ ತಂಬಟ ಭೇರಿಗಳ ನಿನದಾ ॥ ಗುಪಿತಿಸಿತೊ ಲೋಕವನೆ ಯಂಬೊ । ಲ್ಕಪಿಪತಾಕರ ಬಳಸಿನಲಿ ಕಡು । ಕುಪಿತದೊಳಗೈತಂದ ನಿಂದರು ರಣದಿ ರಘುವರರೂ ॥ ೧೬ ॥ ಅತ್ತಬಹ ದಶಶಿರನ ಬೇಡೆಂ । ಬುತ್ತ ಕೈವೀಸುವೊಲು ರಘುಹರಿ । ಯೆತ್ತಿಸಿದ ಹರಿಗರುಡಕೇತನನನಿಲ ಭರದಿಂದಾ ॥ ಬಿತ್ತರಿಸಲಾಗವನ ಮೌಲಿಗೆ । ಮುತ್ತೆ ಜೇನ್ನೊಣ ಹದ್ದು ಬಡಿದಿಂ । ನೆತ್ತಿದುತ್ಕೇತನವು ಭಗ್ನಿಸಿತಾತ ಬರುವಲ್ಲೀ ॥ ೧೭ ॥ ಪಿಡಿದ ಬೆಳ್ಗೊಡೆ ಕಳಸ ಮುತ್ತ । ಲ್ಕಿಡೆದು ಹಯಗಜ ನಯನದೊಳು ನೀ । ರಡಿಸಿ ಬಿರಿ ಘಾಳೊತ್ತಿ ಕೆಂದೂಳೆರಗೆ ವಾಹಿನಿಗೇ ॥ ವರಲೆ ವಿದ್ಯಾಂಗನೆಯರಂತದ । ನರಿದ ಮಯ ಮಾತುಳನುದುಶ್ಯಕು । ನೆರಗಿದ ವನಿಂದ್ರನ್ನಿಸೆಂದಾ ಸುದರ್ಶನಾಕರಗೇ ॥ ೧೮ ॥ ಶೂಲಕಾಸನವಿರಿಸಿ ಶಕುನಿಯ । ಮೇಲೆ ಬೆಸಗೊಳ್ವಂದವೀ ನುಡಿ । ಪಾಲನಾ ಕಾಲುಂಟೆ ಮಾತುಳ ಮಿಂಡನೆದುರಾಗೀ ॥ ಶೂಲದಂತೈದಿಹನು ಪುಣ್ಯನು । ಕೂಲವಿರ್ದಂತೆನುತ ಚಕ್ರದಿ । ಪಾಲ ಬಂದನು ನೋಡದವ ಶಕುನಂಗಮುದದಿಂದಾ ॥ ೧೯ ॥ ವಿದ್ಯ ವಿತರಣ ಶಕ್ತಿ ಬಲಚ । ಕ್ರುದ್ಯ ಪ್ರಾಬಲ್ಯದಲಿ ಯಿಾ ಶಕು । ನಾದ್ಯವೇಗೈ ಬಲ್ಲವಹಿತನಿಗಲ್ಲದೆನಗಿಲ್ಲಾ ॥ ಸದ್ಯ ತೋರುವೆ ನೋಡುದೆನಕೈ । ಸಾಧ್ಯಸಾಧ್ಯಗಳೆನುತಲೈದನು । ಸಾಧ್ಯರೆದುರಾಗ್ನಿಂತನಾಹವ ಮೃತ್ಯುವೊಲು ದೈತ್ಯಾ ॥ ೨೦ ॥ ಬೇಡವೆಂಬರ ನುಡಿಯನೆನುಸರ । ಮಾಡಿಸದು ಅವಶಕುನವನು ಮುಂ । ನೋಡಿಸದು ಕಾಲ್ಗತಿಯುವಡಗೂಡೆಳೆವ ಸಮಯದಲೀ ॥ ಕೂಡಿಸುವುದೆದೆಗೆಚ್ಚ ಲಕ್ಷ್ಮಣ । ಮಾಡದನು ಸಾಧ್ಯಗಳ ತದ್ವಿಧ । ಗೂಡಿ ಬಂದನು ಚಕ್ರಪಾಣಿಯು ರಣಕೆ ಮುಂಕೊಂಡೂ ॥ ೨೧ ॥ ಹೊಡೆವ ತಂಬಟ ಭೇರಿ ಕಹಳೆಯ । ಕಡುವು ದಿಗ್ಭರಿತದಲಿ ದಶಶಿರ । ನಡೆದ ಬಲವೆಲ್ಲವನು ಪಿಂದಿಕ್ಕಾಹವದ ಧರೆಗೇ ॥ ತೊಡಗಿ ವಜ್ರಾವರ್ತವನು ಅಡಿ । ಯಿಡುವ ಕೋದಂಡಪ್ಪಾಣಿಯಲಿ ಬೆಸ । ನೊಡೆದು ಲಕ್ಷ್ಮೀರಮಣಬಂದನು ವಿಲಯಮೃಡನಂತೇ ॥ ೨೨ ॥ ನೋಡಿ ಲಕ್ಷ್ಮೀಧರನ ಅಹಿತಿಂ । ತಾಡಿದೆಲೊ ನಿಮ್ಮಣ್ಣನನು ಮುಂ । ಗೂಡಿ ಸೇನೆಗೆ ಸಮಾನವಲ್ಲಿವಿಮ್ಮರ್ದರೊಳು ಶ್ರೇಷ್ಠಾ ॥ ಗೂಡಿದನೆ ಯವನಾದಿಯಲ್ಲಿ । ಟ್ನೋಡಲಿನ್ನೋರ್ವಿಲ್ಲ ನೀತಡ । ಮಾಡಿಯೈದಿಸುದಃತನೆನೆ ಚಕ್ರೇಶ ಲಕ್ಷ್ಮಣಗೇ ॥ ೨೩ ॥ ಮೂರುಮಳ ಕಲ್ಯ

ವನು ಹಾರಲು । ಧಾರವಿಲ್ಲದನಬ್ಧಿಯನು ವು । ತ್ತಾರಿಸುವನೆಂಬಾವಿಲನ ತೆರ ನಾಗಿ ನೀನೆನ್ನಾ ॥ ಮೇರೆಯರಿಯದಲುತನೊಳಃ ಸಮ । ದೋರಲೆಂಬಮರೇಶ ನಿಗುಮಿಗೆ । ಮಿೀರಿದನು ಕೋದಂಡಪಾಣಿನ್ಮೊದಲು ನೋಡೆಂದಾ ॥ ೨೪ ॥ ಸಮನೊಸಮು ಕತಿಕ್ರಮನೊ ಯಂಬದ । ಕಮರಿ ನೋಡಾಹವಕೆ ನಿನ ಸಂ । ಭ್ರಮುವಸಲಿಸುವೆನೀಗ ಪುಣ್ಕೆಡೆಗೈದಿ ಜಯಲಕ್ಷ್ಮೀ ॥ ನಿಮುನ ಬಿಡುವೀ ಸಮ ಯದೊಳು ಕೈ । ಗಮಿಸದೆಂದರಿದ್ಯೆದಿ ಸೀತಾ । ರಮುಣನಂಘ್ರಿಯ ಸಾರುಕೆಡ ಬೇಡೆಂದ ಲಕ್ಷ್ಮಣನೂ॥ ೨೫ ॥ ಅಡಿಗಳನು ಕಡಲೊಳಗೆ ಹೂಣುವ । ಯಡೆ ಯೊಳಗೆ ಕೈಕಾಲ ಹಿಡಿದರು। ಬಿಡುವನೇ ಶಕ್ರೇಶ ಸೀತಾನಾಯಕಿಯ ಕಾಣ್ಕೇ॥ ಪಿಡಿದು ಬೆಸಗೈಲಾಗ ಕರುಣಿನ । ಗೊಡದರುಳುಹುವೆ ರಘುವರನ ಕೈ । ನಡಸು ನೋಡುವೆನೆಂದ ಚಕ್ರೇಶಾಗ ಲಕ್ಷ್ಮಣಗೇ ॥ ೨೬ ॥ ಬಿತ್ತು ಸೀತಾನಾಯಕಿ ಯ ಮುಡಿ । ಗಿತ್ತು ನಿನಬಲಿಯನ್ನು ಯೇಳಿಸ । ಲಿತ್ತ ಬಂದಿಹ ರಘುಜನಾ ಸತಿಯಡಿಗೆ ಪೊಡಮಟ್ಟೊ ॥ ಸಿತ್ತರಿಸು ನಿನಸಿರಿಯನಲದಿರೆ । ಕಿತ್ತು ಬಿಸುಡು ವೆನಾಯುಷವ ಸರ । ಳೆತ್ತಿ ನೋಡಸುರೇಶ ನೆನುತಾಗ್ಮಿಡಿದ ಶಾರ್ಙ್ಗಯನೂ ॥ ೨೭ ॥ ಗಡಗಡಿಸಗಲಿಳೆ ಕಡಲು ತುಂತುರ । ವಡೆದು ವುಡುಗಣ ಕೆಡೆಯೆ ದೈತ್ಯರ । ಪಡೆಯು ಬೆಚ್ಚುವೊಲಾಗಲದ್ಭುತವರಿದ ಚಕ್ರೇಶಾ ॥ ಹುಡುಗನೆನು ತಿರ್ದೆಲವೊ ನೀರಣ । ಕಡುವ ಸರಿ ಕೈನಡಸಿ ನೀ ವೃತ । ವಡೆಯಲ್ಲಾಗಡಿ ಹಿಡಿವ ರಾಘವನೀಗ ಬರನೆಂದಾ ॥ ೨೮ ॥ ತೀಡಿ ಕಾರ್ಮುಖ ನಾರಿಯನುರವ। ಗೂಡಲುಭಯಾನೀಕಿನಿಯುವೊಲೆ । ದಾಡಿಗಿರಿ ಪುಟನೆಗೆವ ಅದ್ಭುತವಾಗಲನುವ ರಕೇ ॥ ಜೋಡಿಸ್ಯೆ ರಣದೊಳಗೆ ನೀಹತ । ಗೂಡಿದರೆ ರಘುಜಾತನಡಿಗಳ । ಬೇಡಿಕೊಳ್ಳುವನಾರು ದೈತ್ಯೇಶನಲು ಲಕ್ಷ್ಮಣನೂ ॥ ೨೯ ॥ ಕುರಿತು ಅದನಿಂ ನೋರ್ವ ಸಮರಥ । ನಿರಿಯ ಬಲ್ಲನ ಕಳುಹಿ ನೋಡೆಂ । ದೊರೆದ ಲಕ್ಷ್ಮೀ ಧರನು ಕನಕಾಂಚಿತದ ಕಣೆಗಳನೂ ॥ ತ್ವರಿಯಿಸಿದ ತತ್ಯರಕೆ ಸರಿಬಂ । ಧುರದ ಹಿಳುಕಿಟ್ಟೆಡೆಯೊಳಗೆ ವು । ತ್ತರಿಸಿ ಮೇಲಾವರಿಸಿದನು ದೈತ್ಯೇಶ ಲಕ್ಷ್ಮಣಗೇ ॥ ೩೦ ॥ ಅಡರಿ ಬಹಶಸ್ತ್ರಗಳ ಮಧ್ಯದಿ । ಗಡಿದು ಕೆಡಹುತಲೆನ್ನ ಶರವಿ । ಕ್ಷಡಿಪನೇ ನೀತಾನು ಮುಚ್ಚಿನ್ಸಾಕುಯಂದ್ಬಿಲ್ಲಾ ॥ ಖಡಿಯಲೆಂಬಾತಂಕದಲಿ ವಿ । ಕ್ಷಡಿಯ ಶರಗಳ ನೋಡಿಪಲ್ಬಡಿ । ದಿಡುವರೆಚ್ಚುವರೊಚ್ಚಿ ಮುಚ್ಚುವ ರೊಲೆವರಾಲುವರೂ ॥ ೩೧ ॥ ಹೀಗೆ ಯಸೆದೆಸೆದಸ್ತ್ರಗಳ ಬಹು । ನೀಗಿ ವಿಷ್ನ ವಿನಾಯಕಾಸ್ತ್ರವ । ತೂಗಿ ಬಿಡಲಸುರೇಶನದಕನು ಸಿದ್ಧಬಾಣವನೂ ॥ ಕೂಗಿ

ಬಿಡಲೆಡೆಯಲ್ಲೆ ಖಂಡಿಸ। ಲಾಗ ಬಿಟ್ಟನು ಶಾರ್ವರಿಯ ಶರ। ವಾಗವಿಸ್ಮಿಸ
ಲೆಲ್ಲ ಜಗತಿಯ ಮುಚ್ಚಿನಕ್ತದಲೀ॥೩೨॥ ಕಣ್ಣಯವೆಯಲುಗರಿಯು ಬಾರದ।
ತಿಣ್ಣಿಸಿದ ನಿಶಿಗಾಗ ವಿಸ್ಮಯ। ದಣ್ಣಿಸಿಹದರಿದೊಡನೆ ತೆಗೆದಿಡೆ ಭಾಸ್ಕರಾಸ್ತ್ರವ
ನೂ॥ ಕಣ್ಣತೆರೆದಂತಾಗ ರವಿ ನಿಶಿ। ಸಂಣಿಸಲು ಮತ್ತುರುಬೆಯಲಿ ರಾ।
ವಂಣ ನೆಸಿಯುತಲಿರ್ದ ವಿದ್ಯಾಶಾಸ್ತ್ರಗಳ ಮತ್ತೆ॥೩೩॥ ಅಲ್ಲಿ ಮಯನಿರ್ದಾ
ಗ ದಶಮುಖ। ನಲ್ಲಿ ಜೆಸನಾಂತಿದಕೆ ಸಹಯುಗ। ಳಲ್ಲಿ ಕಸತಂದೀ ಕಪಿಧ್ವಜ
ರೆಮಗೆ ವೈರಲದೇ॥ ಸಲ್ಲದಿವರೊಳಗವರ ಹರಿಸಿದ। ರೆಲ್ಲರೋಡುವರೆಂದು ಆ
ಖಗ। ರಲ್ಲಿಗೆರಗಿದ ಲಾವುಗೆಯು ಕಂಡ್ಗಿಡಗನಂದದಲೀ ॥೩೪॥ ಮಯನ
ಶಸ್ತ್ರಗಳೆಂಬ ವೃಕಗಳ। ಭಯದೊಳೋಡುವ ಮೇಷಗಳ ಸಂ। ಚಯದ
ರೀತಿಯಲೋಡುತಿಹ ಚತುರಂಗ ದಳವರಿದಾ॥ ಲಯದ ಭೈರವ ವಾಯುಜನು
ನಿ। ಶ್ರಯವ ಗೊಳಿಸುವೆ ನೆಂಬನಿಗೆನಿ। ಶ್ಚಯದಿನಾ ಪೋಪೆಂದು ಬರೆಸುಗ್ರೀವ
ಮುಂಕೊಂಡೂ॥೩೫॥ ಅಟ್ಟಿದನು ಅನುವಾದನಾರಾ। ಚಟ್ಟಿದನು ಯಮು
ನಸ್ತ್ರಗಳ ಖಡಿ। ದೊಟ್ಟಿದನು ಮೇಲಹಿತನೊಯ್ಮಾನವನು ಮುಚ್ಚಿಡಲೂ॥
ಕುಟ್ಟಿದನು ಧ್ವಜಕೇತುಗಳ ಸಂ। ಘಟ್ಟಸಸ್ತ್ರಗಳಾಲಿ ಬೊಬ್ಬಿ। ಟ್ಟಟ್ಟು ಸು
ಗ್ರೀವನ ಪರಾಕ,ಮಕಾಮಯಾಶ್ಚರಿಸೇ॥೩೬॥ ಆವದೆಸೆಯಿಂದೀ ಪರಾಕ್ರ
ಮ। ವಾಪಲಂಬಿಸಿತೆನಗೆ ಯುದುರಾ। ಗೀವರಣ ಕಲಿವಂತ ಧೈರ್ಯನೆ ಸಾಕು
ಸುಗ್ರೀವಾ॥ ಸಾವಕಾಲಕೆ ಕೇಡು ಶಕ್ತಿಂ। ನಾವಲಂಬಿಸಿತೆಂದು ಕಲಿಸಂ।
ಜೀವನವನಸ್ತ್ರಗಳ ಖಂಡಿಸಿ ವೋಡು ಬೇಡೆಂದಾ॥೩೭॥ ವೋಡು ಯಂಬವ
ನೀನು ಶರಕಂ। ಜೋಡುವವನಾ ನಿನಗೆ ಅಂತ್ಯೊಡ। ಗೂಡಿ ಬಂದಿಹದರಿಯ
ದಲೆ ನಡೆವಾಗಮದ ನುಡಿಯಾ॥ ನಾಡಿಕೆಡುವರೆ ಮಯನೆ ನಿಂನ। ಸ್ರಾಡ
ನೋಡೆಂದಿಟ್ಟು ರಥಕನು। ಗೂಡಿಸಿದ ನಾನಾವಿಚಿತ್ರದ ತೋರಣದ ತೇರದೀ
॥೩೮॥ ಕಂಡೆ ಸೈಯ್ನಿಂನ್ಕೈಯ್ಯ ಬಹಳು। ದ್ದಂಡ ನಹುದೆಂದಸ್ತ್ರಗಳ ನಿ।
ಕ್ಕಂಡಿಸೊಂದೊಂದಾಗಿ ಮೇಲೈತರುವ ಬಾಣಗಳಾ॥ ದಿಂಡುಸಹಗಡಿದಸದಳ
ವನವ। ಗಂಡಿಸುವದರಿದಂಗದನು ಮುಂ। ಕೊಂಡು ನಿಲಿಸಿದ ಮಯನಶಸ್ತ್ರ
ದಸಾರ ಕಣೆಗಟ್ಟೀ॥೩೯॥ ಬಂದು ನಳನಾತ್ಮಜನೆ ನೀನಿ। ಲ್ಲೆಂದು ಮುಂ
ಕೊಳಲಹುದೊ ನೀಗಂ। ಡೆಂದು ಶರಶರಕೋತ ಬಿಲ್ಕವಚಾದಿಗಳ ಖಡಿಪೂ॥
ಮುಂದುವರಿದೈತರುವನಿಗೆ ಯಮ। ರಿಂದ ನೀಲೈತಶಲು ರೋಮಗ। ಳೊಂದಿ
ದರೆ ರಜ್ಜ ಹವೆ ಯಂಬಂತಾಗಿ ಮಯಮುಳಿದೂ॥೪೦॥ ನೀಲನಸ್ತ್ರಗಳರಿದು

ಮೇಲ್ಕೈ | ಕಾಲುಗೆಡುವಂತಟ್ಟುತಿರೆ ಕಂ | ಡಾಲಿ ವಾಲಿಜನೈದಿ ಅಡ್ಡಾಗ್ನಿ ಲ್ಲುಮಯನಿನ್ನಾ || ಸಾಲವಂದಿಹುದೆನಗೆ ಯದಕನು | ಕೂಲಗೊಳಿಸುವೆನೆಂದು ಶಸ್ತ್ರದ | ಜಾಲವೇಗಿಸಿದಷ್ಟ ದಿಕ್ಕಾವರಿಪತೆರನಾಗೀ ||೪೧|| ದಿಕ್ಕುದಿಕ್ಕಿಗೆ ಚಲ್ಲುತಿಹ ಶರ | ಕಿಕ್ಕಿ ಯದುರಾಸ್ತ್ರಗಳ ಖಡಿಖಡಿ | ದಿಕ್ಕಿ ಮಯ ಮುಂದ್ವರಿಸಲಂಗದನಹಿತನಸ್ತ್ರಗಳಾ || ಕುಕ್ಕಿ ಪ್ರತಿಶರದಿಂದ ತನಗವ | ನಿಕ್ಕಿ ಸೇತುವೆಯಪರಬಿಲ್ಪಡಿ | ದಿಕ್ಕುವಾತುರಗೈವ ಅಂಗದನಿರವನರಿದು ಮಯಾ || ೪೨ || ಸೀಳಿ ಬಹುಶಸ್ತ್ರಗಳ ಸೇತುವೆ | ಹೂಳಿಯಂಗದನಿಡುವ ಮೇಲಾ | ಸ್ತ್ರಾಳಿಯುನು ಸಂಹರಿಸಿ ಕೋದಂಡವನು ಖಂಡಿಸುವಾ || ಏಳಿಗೆಯೊಳೆತ್ತಿತ್ತ ಶರಸಂ | ಕೂಳಗಳನೈದಿಸುತ ಬಹು ಕೈ | ಕೋಳ ತೋರುವ ಮಯನ ಪುರುವಣೆಯಾಗಲದ್ಭುತವೂ || ೪೩ || ಯಲ್ಲಿಮಯನಸ್ತ್ರಗಳೆ ದಿಗ್ದೆಸೆ | ಯಲ್ಲಿ ಧಜವೈಮಾನಹಯಸಂ | ಫುಲ್ಲಿಸುವ ವೈಚಿತ್ರಕಾವನು ನಿಲುವನಾಸಮಯಾ || ದಲ್ಲಿಯಂಗದನಲದಲಿಂನೆ | ರ್ದೆಲ್ಲರೇನೇನಾಗುವರೊ ಆ | ಗಿಲ್ಲವಿಂನವಗೆದುರು ಶ್ರೀರಮಣೀಶನಾಧರಿಸೂ || ೪೪ || ಮುಳಿದು ಮಯನೆಲ್ಲರನು ಭಂಗಿಸಿ | ತುಳಿವ ವಾಲಿಜನೆನುತ ನಿರ್ಜರ | ರಳುಕುತಿರಲಾಗುಲಿಯಲಾನಕ ರಕ್ಷರೆಡೆಯೊಳಗೇ || ಬಳಲುತಿರೆ ಖಗಸೇನೆ ಆಕ್ರೋಳು | ಗುಳ ಸುಧೀರನು ಯಲವೊ ಮಯಜನ | ರಳುಕಿಸಿದ ಕೈಬೆಡಗತೋರುವರೆಂದು ಮುಂದ್ವರಿದಾ || ೪೫ || ಹಳುಕನೆಲ್ದೆಸೆಗೆಡಪಿ ಮೇಲಿಂ | ಬಳಪಿ ಬಹದಲ್ಲಲ್ಲೆ ಚರಿಸ | ಲ್ಲೆಗೆದು ತೊಡುವಸ್ತ್ರಗಳ ಖಂಡಿಪಿಪಿಡಿದ ಕಾರ್ಮ್ಮುಖವಾ || ಕಳೆದುಐಗೋಲಿನಲಿ ಧಜಕವ | ಚಳುಹಿಬಂದಡಿಗೆರಗುವೆಯೊ ಬಂ | ತುಳಿಯುಲೋ ಮಯನೆಂದು ಘರ್ಜಿಸಲಸಮನಂಗದನೂ || ೪೬ || ಪಿಡಿದು ಖಡ್ಗವ ನೆರಡುಹೋಳಿ | ಕ್ಕಡಿಪೆನೆಂಬನರಥಕೆ ಮೂರ್ನೆಗ | ತಿಡುತ ಕಾಲಲ್ಲೊಲೆದು ಕಾಪಿಯುಶಳೆದು ಪಿಡಿ ಗೈಯ್ಯಾ || ಮಡಿಸಿಕಟ್ಟಲಿ ಮರಿಯುವಾಳನು | ಹಿಡಿದರೀತಿಯೊಳೈದಿ ರಾಘವ | ನಡಿಗಳಿಗೆ ಅಚ್ಚಾದಗೊಳಿಸಿದ ಮಯನನಂಗದನೂ || ೪೭ || ಮುದ್ದಿಸಾವಾಲಿಜನಮುಂದ್ಕೆಡೆ | ಬಿದ್ದ ನೆಡಗಟ್ಟೊಡೆದು ವ್ಮೈತಡ | ಹಿದ್ದ ರಾಘವ ನುಡಿದ ಕೇಳೆಲೊ ಮಯನೆ ಅಂಗದನೂ || ಗೆದ್ದನಲ್ನಿನಗೀಕ್ಷ್ಣಿ ಪೆಳೆಯದ | ಮುದ್ದು ವೊಂಮುಗ ಗೈದನಿದಮನ | ಕೊದ್ದದೆನಗೆಯುಜಮಾನ ನಾಗಿಹುದೆಂದ ಗುಣರತ್ನ || ೪೮ || ಅನಿತರೊಳು ಜಯಘೋಷ ಕಪಿಕೇ | ತನರ ಬಳಿಯೊಳಗೊಲೆಯೆ ದುಸ್ವರ | ನಿನದಗೊಳೆ ದೈತ್ಯರಲಿ ಕೇಳ್ವಾ ಮಯನ ತನುಜಾತಾ || ಘನ ಪರಾಕ್ರಮಿ ವೀರ

ಮಾರೀಚನು। ವನೊಳಹೊಕ್ಕಹಿತ ವಾಹಿನಿ। ಯನು ವಿಹಾರಿಸಿ ಬೊಬ್ಬೆ ಯಿಡಿಸಿದ ಬುದ್ಬುದಾಹತದೀ ॥ ೪೯ ॥ ಹೊಕ್ಕು ಮಾರೆಮ್ಮೆಲರನು ಗುಟುಕಿಕ್ಕು। ತಿಹುದೇರಾದರೂ ಯಮು। ದಿಕ್ಕರಿರಲುಳುಹೆಂದು ನೊರೆಯಿಡಲಂತ್ಯದಂಬುಧಿಯೇ ॥ ಮಿಕ್ಕು ಬಹವೊಲಾಗಲದ ಕೇ। ಳಿಕ್ಕಸದಕಲಿ ಅಂಗಜನು ಮ। ದ್ದಿಕ್ಕನೈದೆದುರಾದ ಸಿಡಿಲನು ಸಿಡಿಲು ತಾಗವೊಲೂ ॥ ೫೦ ॥ ಬಿಟ್ಟ ಸೂಟಿಯೊಳವನು ಕೈಗು। ದ್ದಿಟ್ಟು ಕಾಲಲಿತುಳಿದು ಆರ್ಭಟೆ। ಯಿಟ್ಟು ಸಂಹರಗೈಯ್ಯುತಿರಲಂಗಜನು ಬರಿಗೈಲೀ ॥ ಮುಟ್ಟೆಯುಟ್ಟೆದ ಕೈಯಿಕೈಗಳ। ತಟ್ಟಿ ಕುಟ್ಟಿದರಂಗವನು ಆಮು। ರಿಟ್ಟು ಜಟ್ಟಿಗಳಂತೆ ಸ್ಮರಮಾರೀಚ ಕಾದಿದರು ॥ ೫೧ ॥ ಹಿಡಿದು ಮುಷ್ಟಿಯ ಹೆಟ್ಟೆ ಕೈಕೈ। ಹಿಡಿದು ಬೊಗ್ಗಿಸಿ ಕಾಲ್ಗಳನು ಯ। ತ್ಕಿಡಹಲಾತುರದಿಂದ ಶಣಸುವ ಮಯನಸುತನಡಿಯಾ ॥ ಪಿಡಿದು ಭೋಂಕನೆಯೆತ್ತಿ ತಳಮೇ। ಲೋಡುತ ತಿರ್ರನೆ ತಿರುಹಿದ ದಶಸಿರ। ನೆಡೆಗೆ ಯಸೆದನು ವೀರವೀರರಗಂಡಭೇರುಂಡಾ ॥ ೫೨ ॥ ಕೆಟ್ಟ ಮಯನಾತ್ಮಜನು ಯಂದುಲಿ। ಪಟ್ಟಜಯದುರ್ಜಯದ ಸ್ವರವಿ। ತ್ತಿಟ್ಟನಲಿ ಪರಿದಾಡಿ ಮಯಘಟಕರ್ನ ರಕ್ಷಿಯೊಳೂ ॥ ತೊಟ್ಟಿಡಲು ದುಃಕುದುಕರಘು ಹರಿ। ಗಿಟ್ಟವಾನಂದ್ಬಿಂದು ಆ ಸುತ। ನಟ್ಟಿಯಾಲೋಕಿಸಿದ ದಶಸಿರಗಾಯ್ತು ಬಹುರೋಷಾ ॥ ೫೩ ॥ ಕದನಕೊಡುತಿಹ ಲಕ್ಷ್ಮಣನ ಪ। ಲ್ಲುದುರುಗುಟ್ಟುವ ಶಿಟ್ಟಿನಲಿ ರಣ। ದದಟತೊಟ್ಟನು ಪ್ರಳಯಕಾಲದ ವಜ್ರಬಾಣವನೂ ॥ ಹೆದೆಯನೆಳೆದಾಕರ್ಣ ಪರಿಬಿ। ಟ್ಟದರ ಆರ್ಭುದ ಸಿಡಿಲನೇ ತನು। ಗದಿಸಿ ಬರುವಂತ್ಯೈದಲದ ಕೊಂದ್ರೋಮವಧಿರದಲೀ ॥ ೫೪ ॥ ಬಿಟ್ಟು ಪ್ರತಿ ವಜ್ರಾಸ್ತ್ರ ಮಧ್ಯದಿ। ಕುಟ್ಟಿ ಕೆಡಹಿದ ಲಕ್ಷ್ಮಣನರಣ। ದಿಟ್ಟಕೆಲೆಯಸುರಾರಿಯುನ ಶರಗಳನು ತುಂಡಾಗೀ ॥ ಕುಟ್ಟಿ ಕುಟ್ಟಿನಗುಗ್ರವನೆ ಸಂ। ದಟ್ಟಿಸುವೆ ನಿನಗಂತ್ಯವೋ ಯನ। ಗಿಟ್ಟು ವಂದನೆ ಪೋಪೆಯೋ ಪೇಳೆಂದ ದಶಕಂಠಾ ॥ ೫೫ ॥ ಇನ್ನು ವಂದನೆಯಿಟ್ಟರೂ ನಿನ। ನನ್ನು ಕೊಲದುಳಿಯೆಂಡ ಲಕ್ಷ್ಮಣ। ಪನ್ನಗೇಶನು ಕೊಟ್ಟು ಶಕ್ತಿಯಬಿಟ್ಟರೇಗೈವೇ॥ ಯನ್ನಲದಕೆದುರಾದ ಶಕ್ತಿಯ। ನನ್ನು ಪಡದಿಹೆ ಮೂಳನೇ ಬಿ। ಟ್ಟನ್ನು ತಿಳಿಯದನೆಂದ ಶ್ರೀರಾಜೇಂದ್ರನಾಯುಕನೂ ॥೫೬॥ ಚಿಕ್ಕ ವಿಜಯುಕ್ಷೊಲಿದ ಶಕ್ತಿಯೊ। ಳಿಕ್ಕಿ ರಕ್ಕಸನಾಕೆಗಿಂ ಪಿರಿ। ಯಕ್ಕ ಪ್ರಜ್ಞಪ್ತೊಲಿದಿಂಲು ಆಶಕ್ತಿಯೊಳು ಹರಿಯಾ ॥ ಇಕ್ಕಲವರೆದುರಾಗಿ ನಿಜರೂ। ಪಿಕ್ಕಿ ನಕ್ಕಕ್ತಂಗಿರದ್ರುಶ। ವಿಕ್ಕಲರಿದಾಶ್ಚರಿಸಲುಭಯಾನೀಕಿನೀ ನೃಪರಾ ॥ ೫೭ ॥ ಹಿಂದೆ ಸ್ವಯಂವರದೊಳ

ಪಲಬರ। ಕೊಂದು ಶಕ್ತಿಯು ಲಕ್ಷ್ಮಣಗೆ ಯಿದ। ಕೆಂದು ಬೆಸಗೈದಿರ್ದ ದಿನ ಕಪರಾರ್ಜಿತದ ಪುಣ್ಯಾ॥ ವಂದೆ ಕಾರಣ ನೃಪತಿ ಕೇಳ್ತನ। ಸಂದ ಶಕ್ತಿಯು ಸಹಿತ ವಿದ್ಯಗ। ಳಂದಗೆಡೆ ಚಕ್ರೇಶ ತಾಳಿದ ಮತ್ತು ಧೈರ್ಯವನೂ॥ ೫೮॥ ಮುಚ್ಚಿದನು ಬಹುಶರವನದ ನೋಡ। ಚ್ಚುತೆಂದೆಲೆ ಮರುಳೆ ನೀಕಡು। ನೆಚ್ಚಿದ ಸ್ತ್ರಾಹವಕೆ ಸಮರಥರಾಪ್ತಜನರೆಲ್ಲಾ॥ ವೆಚ್ಚವೈದಿದರಿನ್ನು ಛಲ ಬಿ। ಬ್ಬಚ್ಚಿನಲಿ ಕೆಡಬೇಡ ಯರಗೆನ। ಗಿಚ್ಚೆಗೊಳು ಸಂಪತ್ಸಮಾಜವನೆಂದನೊಲವಿಂದಾ॥ ೫೯॥ ನೋಡು ಕಡೆಯೊಳು ಲೋಕವನೆ ಸುಡ। ಲಾಡುತಿಹ ಚಕ್ರವನು ನಿ। ನ್ನೊಡಿದಾ ನೀಕಾಪ್ತರೆಲ್ಲರನೇಕ ಸಮಯದಲೀ॥ ತೀಡಿ ಬಿಸುಡುವದೆಂದು ಪಲ್ಪಡಿ। ದಾಡಿ ಬಿಟ್ಟಸ್ತ್ರಗಳ ಹುಡಿಹುಡಿ। ಮಾಡುತಿರೆ ಲಕ್ಷ್ಮಣನ ಪರಶರಧಿಯನು ರವಿಪೊಕ್ಕಾ॥ ೬೦॥ ಸಲ್ಲವೀ ಸಮಯದಲಿ ರಣವೆಂ। ದುಲ್ಲಸುಸ್ವರಗೊಳಲು ಕೈಯ್ಯ। ಲಲ್ಲೆ ನಿಲಿಸಿದರೇನು ಸತ್ಯರದೆನಿತು ಸಾಹಸರೋ॥ ಅಲ್ಲೆ ವಿಶ್ರಮಗೈದು ಖಗಬಹ। ದಲ್ಲಿ ನೀಕ್ಷಿಸುತರುಹನಂಘ್ರಿಗ। ಳಲ್ಲಿ ನಿಶ್ಚಲಧ್ಯಾನರಾದರು ರಾಮರಾವಣರೂ॥ ೬೧॥ ಕಲಿಲಹರ ಮುನಿಸೂವ್ರತಾಂತ್ಯದಿ। ಚಲಿತರಾದಾ ರಾಮಲಕ್ಷ್ಮಣ। ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದ ಮನ। ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ॥ ೬೨॥

ಅಂತು ಸಂಧಿ ೭೦ ಕ್ಕಂ ಪದನು ೪೧೧೭ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ತೊಂದನೆಯ ಸಂಧಿ.

ಲಕ್ಷ್ಮಣನಿಗೆ ಚಕ್ರಸಾಧ್ಯದ ಸಂಧಿ.

ಚಕ್ರದೊಳಗಿಡಲದನೆ ಪಿಡಿದು ತ್ರಿ। ವಿಕ್ರಮನು ಬಿಡಲೈದಿ ರಾಕ್ಷಸ। ಚಕ್ರಿಯನು ಸಂಹರಿಸಿ ಬರಲದು ಲಕ್ಷ್ಮಣನ ಬಳಿಗೇ॥ ಪಲ್ಲವಿ॥

ಅರಸ ಕೇಳಾಶಕ್ತಿ ತ್ರಿಕರಣ। ಹರುಷದೊಳು ನೆಚ್ಚಿರ್ದನದ ಕು। ತ್ತುರಿಸಲಾದೀ ಪುಣ್ಯಕಾಶ್ಚರಿಗೊಳುತ ನಿರ್ಜರರೂ॥ ಯರವು ಯಿರ್ದಂನೆಲ್ಲಕಥೆ

ವು । ಣ್ಯೆರುವ ವೆರಡೆಂದಾಡುತಿರಲ । ತ್ತೆರಡುದಳ ಸಂಘಟಿತ ಹರುಷ ವಿಷಾದ ಗೊಳುತಿರಲೂ ॥ ೧ ॥ ಅಲ್ಲಿಗತಿದೂರಿರುವ ಬೀಡೆಡೆ । ಯಲ್ಲಿಯಿಹ ಮಯ ನಾತ್ಮಜೆಗೆ ತಿಳು । ಹಿಲ್ಲದೋಲಾಗ್ನಿಖರೆ ಜನಕೆಲ್ಲಸುರನಾಯಕನೂ ॥ ನಲ್ಲೆ ಕಳ ವಳ ಪುಟ್ಟೆ ರಾತ್ರಿಯೊ । ಳಿಲ್ಲಿಗೈತರಲಿಲ್ಲ ವೇನೇ । ನಲ್ಲಿಯಾಗಿಹುದೆಂದು ಮಿ ಡುಕುತಲೋರ್ವ ನೈದಿಸಲೂ ॥ ೨ ॥ ಆತ ತಿಳಿದೈತಂದು ಬಹುಭಯ । ವಾ ತು ಪೇಳದಲಿರಲು ಯಿಾತೆರ । ವೇತರದು ಯನಲಾಗ ಅವಲೋಕಿನಿಯು ಬೇಗದಲೀ ॥ ಆತೆರವನುಸುರಿದಳು ನಿನ್ನನು । ಜಾತ ಘಟಕರ್ನಿಂದು ಮಯ । ನೊ । ತ್ತಾತರನು ಬಂದಿಸಲು ಕಾರಾವಾಸದೊಳಗರಸೀ ॥ ೩ ॥ ನಿನ್ನ ಸೋ ದರದಳಿಯ ನಪ್ರತಿ । ಪನ್ನ ರಣಕಲಿಶೂರ ಮಾರೀ । ಚನ್ನುವನ ಸಂಹರಿಸಿ ಬಿಟ್ಟರದಿನಿತು ಸಿಗ್ಗಿನಲೀ ॥ ನಿನ್ನ ಬಳಿಗೀ ಸುದ್ಧಿ ಮುಟ್ಟಿಸ । ದಿನ್ನು ಬರದ ಲ್ಲಿಹನು ಪ್ರಿಯನೆನೆ । ಕನ್ನೆಕಂಠಾಭರಣೆ ಮಂಡೋಧರಿಯು ಕೇಳ್ದಳಲೀ ॥೪॥ ನುಡಿನುಡಿಗೆ ಮಾರ್ಮಲತು ಯಲ್ಲರ । ಕೆಡಿಸಿತಾ ಕಡೆ ಮುಟ್ಟ ಕೆಢ್ಳಲಿಂ । ದಡಿಸಿ ದನೆ ದೈತ್ಯೇಶ ವುಳಿದಂ ನಾದರಾಹವದಾ ॥ ಬಿಡನೆ ಪೊಡವಿಜೆಯಾರು ದಟ್ಟಿ ಸಿ । ನುಡಿವರಿಲ್ಲವೆ ಅಕಟ ನಾನೇ । ಪಡಪೆ ನೋಯಂದಳಲುತಿರೆ ಚಂಡೋಧ ರಿಯ ತನುಜೇ ॥ ೫ ॥ ಸಿಕ್ಕಿದನು ಘಟಕರ್ನ ಮಯನಿಂ । ದಕ್ಕಿದನು ತತ್ಸು ತನ ಕೊಂಬ್ಲುಘ । ವಿಕ್ಕಿಸಿದರಿಂ ನಾಳೆ ದಶಕಂದರನ ಅಪ್ಸರೆಯಾ ॥ ಪಕ್ಕಗೈ ವರು ಯನುತ ಲಘುಪ । ರ್ಣಿಕ್ಕಲೊಚನವನಿಜೆಯು ಕೇಳ್ವಿಂ । ನಕ್ಕಳಾ ಯಿತೆ ದನುಜಪತಿಯವತಾರ ಸಂಪೂರ್ಣಾ ॥ ೬ ॥ ಯಂಬ ಹರುಷೋತ್ಕರ ದೊಳಿರಲಿ । ತ್ರಂಬುಜಾಂಬಕಿ ಮಯನ ಸುತೆಯಳ । ಲೆಂಬವು ಧರಾನಲನ ವುರಿ ಕೊಚ್ಚಂಗ ನಂದನವಾ ॥ ತುಂಬಿ ಸುಡುವದಕಾಶ್ಯ ಘೃತವಾ । ಗಿಂಬಿಸಲು ಆಜ್ವಾಲೆಯನು ವಳ । ಕೊಂಬ ಶಕ್ತಿರದಾಗ ನಡೆದಳು ಪ್ರಿಯನ ಸನ್ನಿಧಿಗೇ ॥ ೭ ॥ ಕಾಂತೆ ಬಹವಾರ್ತೆಯನು ಚರನುಲಿ । ದಂತದಕೆ ತಾನೆದುರುಗೊಳ ಲನುವಾಂತ ದಶಮುಖನಂಗನಾಮಣಿಯಪ್ಪಿ ಮುದ್ದಿಸುತಾ ॥ ಕುಂತು ವೈಮಾ ನದಲಿ ಕಡುನಿಶಿ । ಯೊಂತಿನಲಿ ಬರಲೇಕೆ ನಾಳಿರು । ವಂತ ಅಹಿತರನೆಲ್ಲ ಬಾಯ್ಚೆಹೆನೆಂದ ಕುರುಳೊತ್ತೀ ॥ ೮ ॥ ವಡಲನೊಡೆ ಹಾಯ್ದಿದ್ದ ಶೋಕವ । ಹಿಡಿಯನಳೆ ನಾಳ್ಗದ್ಗಳದಿಂ ' ನುಡಿವಳಕ್ಕಳು ಬಿಕ್ಕುಳಿಸುತಲಿ ಕಾಂತಕೇ ಳ್ನಿನ್ನೇ ॥ ನಡೆದ ವರ್ತನವೇನು ಯಿಂದವ । ಗಡಿಸಿದಿರವೇನೆಂದಳನು ಕೈ । ಹಿಡಿದು ಪೇಳಿದನಸುರನಾಯಕ ದುಗುಡ ಮನದಿಂದಾ ॥ ೯ ॥ ಚಿತ್ತದೊಲ್ಲಭೆ

ಕೇಳು ಅವರಸ । ವೆತ್ತರಾಗಿವರೆಲ್ಲರನು ಝಡಿ । ಯುತ್ತ ಕಾರಾವಾಸಗೈದರ ದೆಲ್ಲರನು ಬಿಡಿಸೀ ॥ ವತ್ರಿತಹೆನಾ ರಾಮಲಕ್ಷ್ಮಣ । ರುತ್ತಮಾಂಗವ ತರಲೊ ಜೀವದೊ । ಳಿತ್ತತರುಬಲೊ ತರುಣಿಮಣಿ ಪೇಳೆಂದ ಚಕ್ರೇಶಾ ॥ ೧೦ ॥ ಆದಿರೀ ಹದಿನೇಳುದಿನ ಜಗ । ಳಾದರೊಳಗಾರಾರ ಪಿಡಿದೊ । ತ್ತಾಧರಿಸಿಕೊಂಡಿಹರಿ ನಾಳಿಂನಾರ ಪಿಡಿತಹರೀ ॥ ಸಾಧನೆಯ ಮಾತಿಲ್ಲ ವುಳಿದರ । ಭೇದನಲ್ಲ ದಲಿಲ್ಲ ಪುಣ್ಯರು । ಗಾದುದಂಗಪ್ರಿಯನೆ ಯೇಪೇಳ್ವೆಂದಳಿಂದುಮುಖೀ ॥ ೧೧ ॥ ವಂದು ದಿನ ಕದನದಲಿ ನಿಮಕೈ । ಸಂದಿಸಿದ ಕಾರ್ಯೇನುಯುಮಗೈ । ತಂದು ದೇ ಅವಮಾನವಪಜಯುವರಿದು ಆರುಲಿದಾ ॥ ದೊಂದು ಮಾತನು ಸರಿಸದಲೆ ಪೋ । ಪೆಂದು ಭಾವಿಸದಗ್ರಬಹದಿಂ । ತೆಂದು ನೋಡದೆ ಚರಿಸಲಿಂತಾಯ್ತೆಂದ ಳಿಂದುಮುಖೀ ॥ ೧೨ ॥ ನಂಟುರತ್ನಗಳೆರಡನುಳಿಸುವ । ಭಂಟ ಚತುರನೆಂಬ ನ್ಯಾಯದೊ । ಳುಂಟು ಮೇಣವಕಾಶ ಕೊಡದಿರಲೆರಡರೊಳಗಿಂದಾ ॥ ನುಂಟ ಮಾಡುವ ಮಧ್ಯಮುಭಯುವಿ । ಗಂಟನದವೆಂಬಾಗಮಕೆ ಸರಿ । ಗಂಟಪಡು ವರೆ ಪ್ರಾಣನಾಯಕನೆಂದಳಿಂದುಮುಖೀ ॥ ೧೩ ॥ ಪುರು ಜಿನೇಶನ ಮುಖದೊ ಳುದಿಸಿದ । ಸರಸೆ ನುಡಿ ನಿರ್ನಯದ ಶಾಸ್ತ್ರದೊ । ಳೊರೆದ ತೀರ್ಥಕಚಕ್ರ ಧರ ಬಲಕೇಶವಪ್ರತಿಯಾ ॥ ಹರಿಗಳೊಳು ಚವ್ವೀಶ ಪನ್ನೆರ । ಡೊರಚಿ ನವ ನವನವಶಲಾಕದ । ಪುರುಷರೇ ಪೌರಾಣತ್ರೈಷಷ್ಟೆನಿಸಿಕೊಂಬುವರೂ ॥೧೪॥ ವುಂಟೆ ಯಿವರಾಖ್ಯಗಳ ನೀ ತಿಳಿ । ದೆಂಟನೆಯ ಕೇಶವಗೆ ಆಪ್ರತಿ । ಭಂಟನೀ ನಿನಗೊಯ್ರಿ ಲಕ್ಷ್ಮಣನೆಂಬುದಾಧರಿಸೀ ॥ ನಂಟುಗೈಯ್ಯವನಿಂದ ನಿನಗೆಡೆ । ಗಂಟಕೆಂಬದ ತಿಳಿದು ಜಯಕೈ । ಗಂಟಸದು ಶ್ರೀಯರಸ ಬೇಡುವೆಯುಂದ ಳಿಂದುಮುಖೀ ॥ ೧೫ ॥ ಇದುವರಿಗು ನೋಡಿದರು ಸೀತೆಯ । ಹೃದಯ ವಂದೇ ಸಮನುಸಲ್ಪವು । ಆದಿರದಿಹಳಾ ಪದ್ಮಗಂಧಿನಿಸುತೆಯೆ ಸರಿಮೇಣಾ॥ ಬದಲಸತಿಯಲ್ಲಪರಭವ ಜಠ । ರುದಯಳೇ ನಿಶ್ಚಯುವದಲ್ಲದ । ಲುದಿಸಬಲ್ಲದೆ ಕ್ಷೀರಕುಚಗಳೊಳೆಂದಳಿಂದುಮುಖೀ ॥ ೧೬ ॥ ಯನ್ನ ಬೆಸಲೆಯ ಕಾಲವೆಂದೀ। ಗುನ್ನಿತವೆ ಪಯುವಾಕೆ ನೆನಹಿನ। ಲಿನ್ನು ಮುಂಬಲಿಸೋರುತಿಹವೆಂದಿಟ್ಟ ಕಂಚು ಕಿಯಾ ॥ ನನ್ನು ಪ್ರಿಯಕರ ಸ್ಪರ್ಶನದಿ ಸಟೆ । ಯನ್ನದುಳಿದಾ ಕೋಮಲೆಯ ಕಳು । ಹೆನ್ನು ತೆರಗಿವಳಸುರನಾಯಕನಡಿಗೆ ಮನಮರುಗೀ ॥ ೧೭ ॥ ನಂದ ನೆಯ ಸದ್ಭಾವ ಮೇಣಹ । ತೆಂದು ಭಾವಿಸಿ ಆಕೆಯುನು ಬಿ । ಟ್ಟಂದಿಯುನು ಗೈನೀನು ವಲದಿರಲೆಮ್ಮನನು ಕುರಿತೂ ॥ ಹಿಂದು ಮುಂದಾಲೋಚಿಸದೆ ಸೋ।

ಕೆಂದುನಿಶ್ಚೈಸಸುರನಾಯಕ । ನೆಂದು ಮಂಡೋಧರಿಯು ಬೇಡುವಳೆತ್ತಿ ಕದಪ ಲುಗೀ ॥೧೮॥ ನೋಡಿದೆನು ನಾನಾಕೆದೃಢವ। ಲ್ಲಾಡದಿಹುದಿದುವರಿಗು ಯನ ಮೆ । ಚ್ಯೂಡುತಿಲ್ಪರ ಬಿಡುವದೇಸರಿ ನಿನ್ನ ಭಾವನೆಯೇ ॥ ಕೂಡಿತೆನ್ನೊಳಗಾ ದರಿಂನೊಂ । ದಾಡುವೆನು ಕಮಲಾಕ್ಷಿ ಅನುಸರ । ಗೂಡು ಯನ್ನೊಚಕಿಡದೆ ಬದಲೆಂದಸುರನಾಯಕನೂ ॥ ೧೯ ॥ ಯಾತಕೆನೆ ಸಾಹಸ್ರಯಕ್ಷೆಯ । ರಾತ ಚಕ್ರುಂಟ ಭೃವನೆಯ । ಚ್ಚೀತಳಕೆ ತಹಶಕ್ತಿ ವುಂಟಾಗನುಸರಿಸಿಕೊಡುವಾ॥ ಮಾತುಹೀನವರೊತ್ತಿ ಹಿಡಿದಿ ! ನ್ನಾತಗೆಲ್ಲೊಪ್ಪಿಸುವೆ ಕ್ಷಣವಿಂ । ನಾತುನಾ ಳ್ನೋಡೆಂದ ರಾತ್ರಿಂಚರನು ಪ್ರಿಯಸುತೆಗೇ ॥ ೨೦ ॥ ಹೊತ್ತು ಅನುಸರಿಸೈದಿ ಬಂದಿಹ । ವುತ್ತರಲ್ಲದಲೇನು ಸ್ವಾರ್ಥವಿ । ದೆತ್ತಿದಂತಲ್ಲುಲಿದು ಪತಿಭಕ್ತಿಕೆಯ ಮಿಾರುಳಿಪಾ ॥ ದೆತ್ತ ಕಾಣುವುದಿಲ್ಲ ಪ್ರಿಯ ನಿನ । ಚಿತ್ತ ವಿರ್ದಂತಾಗಲೆನು ತ । ತತ್ತಲೊಲಗಿದಳಾಗ ಮಂಡೋಧರಿಯು ಮನನೊಂದೂ ॥ ೨೧ ॥ ವೀರ ಯಿಂದ್ರಾರೆನಿಪ ಕಿರಿಯ ಕು । ಮಾರನಿಗೆ ನಾಳಾಹಕದನ ಕ । ಠೋರದೊಳಗು ಳುಹಾದರಾವಾರ್ತಳಿದ ರಂಗಗಳಾ ॥ ಸಾರಿ ಬಹುದೆಂದಿರಿಸಿ ಗುಣಗಂ । ಭೀರೆ ಲೆಂಕೆಗೆ ಪೊಕ್ಕು ನಿಜಅ । ಗಾರವನು ಸೇರಿದಳು ಕುಳ್ಳಿರಲೊಂದು ಪೀಠದಲೀ ॥ ೨೨ ॥ ದುಡುಕು ಮನದುದ್ರೇಕಭಾವದ । ಕಡುವ ನೋಡ್ಸಹಚರಿಯರುಲಿ ಸದೆ । ಮಿಡುಕುತಿರಲೈತಂದು ಯಡೆಯೊಳುಕುಳಿತು ಶ್ರೀಮಾಲೇ ॥ ಪಡೆಯೊ ಳಾದ ವಿಚಾರವೇನೆನೆ । ತೊಡರಿಗಳವನು ದುಃಖಿಸುವ ಪಿರಿ । ಯೊಡತಿಯಾ ಚರವರಿದು ಹಂಮ್ಮೈಸೇನು ವುಲಿಯನಲೂ ॥ ೨೩ ॥ ಪೇಳ್ದೆ ನಾನಾ ತೆರದೊ ಳೆನಮಾ । ತ್ಕೇಳ್ದುದಿಲ್ಲಾಹವದಿ ಸರ್ವರ । ತೂಳ್ದು ಪಿಡಿದರು ಶರೆಯನಹಿ ತರು ನಾಳಿನೊಳಗೆಮ್ಮಾ ॥ ನಾಳ್ದನೋರ್ವೇನಹನೊ ಕಾರ್ಯವ । ಕೇಳ್ದು ಫಲವೆನನುಜೆ ನಾನದ । ಪೇಳ್ದರೇನ್ಸಂಪತ್ತು ಸರಿಯಾಯ್ತೆಂದಳಿಂದುಮುಖೀ ॥ ೨೪ ॥ ಅಳಲೆ ನಾರಿಯರಾಶ್ರೃಗಳು ಕಿರಿ । ಹೊಳೆಯ ರೀತಿಯು ಪರಿಯುತಿರೆ ಪೇ । ಹೆರ್ಗಳೆಯು ನಾಳಹುದದನು ತೋರುವೆನೆನುವೊ ಲಬ್ಜನಿಯಾ ॥ ಕೆಳೆ ಯನಾದಿಯಲುದಿಪ ಸಮಯುವ । ತಿಳಿದ ರಘುದಶಕಂಠ ಪೂರ್ವದ । ಕೊಳು ಗುಳಕೆ ನಡೆತಂದು ನಿಂದರು ಚಂದ್ರಸೂರ್ಯರೊಲೂ ॥ ೨೫ ॥ ಮೊಳಗಿದವು ರಣಭೇರಿ ಯಾ ಕೊಳು । ಗುಳಕೆ ಬಹ ನಿಸ್ಸೀಮನಾವನು । ಘಳಿಲನೈತರಲೆಂ ದು ಹೊಗಳಿಸಲತ್ತ ದಶಕಂಠಾ ॥ ತಿಳಿದು ಲಕ್ಷ್ಮಣ ಹೊಗಳಿಸಿದ ನಿನ । ಗಳಿವು ಯಿಂದಿನಲೆಂದು ಶರವು । ಚ್ಛಳಿಸಿದನು ದಶಕಂಠನಗ್ರಕೆ ಸಾಗ್ರವಿವಂತೇ॥ ೨೬॥

ಏರಿ ಬಹ ಬಹುಶಸ್ತ್ರಗಳ ನಿ। ಟ್ಟೋರಿಸುತಲಿಲೆ ಲಕ್ಷ್ಮಣನೆ ಕೈ । ಸೇರಿದರ ಬಿಟ್ಟೆಂದು ಕಾಣ್ಕೆಯನಿಟ್ಟು ಯನಪವಕೇ ॥ ಸಾರುವೆಯೊ ಬಹು ಸಖವ ನಿನ ತಲೆ । ಬೀರುವೆಯೊ ರಣದೊಳಗೆ ನಿನ್ನವಿ । ಚಾರವಾವುದು ಬೆಸಸು ಬೇಗದೊಳೆಂದನಾ ಚಕ್ರೀ ॥ ೨೭ ॥ ಸಾರಲಡಿಯನು ಕಾಯ್ವೆ ಶಕ್ತಿಯ । ದೋರಲಾಹವದೊಳಗೆ ತಲೆಯನು । ಬೀರುತಿಹೆ ನಿನಗಾವುದೊಪ್ಪೆರಡರಲಿ ಬೇಗದಲೀ ॥ ತೋರು ದಶಸಿರನೆಂದ ಪೇಳ್ಕಂ । ಖಾರಿಸುತ ನಾರಾಚಗಳ ವಿ। ಸ್ತಾರಿಸಿದ ನಿಸ್ಸೀಮ ರಣಕಲಿಭೀಮ ಸೌಮಿತ್ರೀ ॥ ೨೮ ॥ ಮುಚ್ಚಿ ಬರೆ ವೈಮಾನವನು ಯೆದು । ರೆಚ್ಚು ನಾರಾಚಗಳ ಖಡಿವೆಡೆ। ಕೊಚ್ಚಿ ಸಾಮಾನ್ಯಸ್ತ್ರಗಳಲಸಾಧ್ಯವೆಂದಿತರಾ ॥ ಯಚ್ಚು ದಿವ್ಯಾಸ್ತ್ರಗಳ ನೀಗುತ । ಲೆಚ್ಚರಕ್ಷಯ ಬಾಣಗಳ ಮನ । ಮೆಚ್ಚಿ ದಿಕ್ಪಡಿಸಿದರು ಕದನ ಕಠೋರ ಭೈರವರೂ ॥ ೨೯ ॥ ಬಿಟ್ಟು ಪುಲಿಯಾಸ್ತ್ರವನು ಸಾರುವೆ । ಕಟ್ಟಿದಂತೈತರುವವನು ಖಡಿ। ದೊಟ್ಟು ಲಕ್ಷ್ಮಣನೆಂದು ಘರ್ಜಿಸಲಸುರನಾಯಕನಾ ॥ ಕಟ್ಟು ಯದೆಗಿಚ್ಚರಿದ ಲಕ್ಷ್ಮಣ। ಬಿಟ್ಟ ಶೂಕರಶರವನಾ ದಂ । ಡಟ್ಟ ಖಡಿಹೊಡೆದಾಡಿಯದೃಶ್ಯಗೊಳಲು ಮಧ್ಯದಲ್ಲೀ ॥ ೩೦ ॥ ಅಪ್ರಸನ್ನಗೊಳಲು ಯಡೆಯಲಿ । ಕ್ಷಿಪ್ರದಿಂ ಗಜಬಾಣವನು ಮೇ । ಲುಪ್ಪಿಸಲು ಮಾತಂಗಚಯ ಬ್ರುಂಹಿತವ ನುರೆಗೈದೂ॥ ಸುಪ್ರಸಿದ್ಧದೊಳೆತ್ತಿ ಶುಂಡಿಲ । ಸುಪ್ರಹತಿಸಲು ಬಹವನೋಡೆಂ । ದು ಪ್ರಕೀರ್ಣವ ಗೈದಕೇಸರಿಹಿಂಡ ಸೌಮಿತ್ರೀ ॥ ೩೧ ॥ ಅಡರಿ ವೊಂದೊಂದಾನೆಗಳ ಮಿದು । ಳೊಡೆದು ಸೀಳ್ದರ್ವಿಸುವ ಕೇಸರಿ । ಹಿಡಿವ ಶರಭಾಸ್ತ್ರವನು ಬಿಟ್ಟನು ದೈತ್ಯನಾಯಕನೂ ॥ ಕಡುಗಿ ಹರಿಗಳ ಪಿಡಿಯಲುದ ಕಂ । ಡಿಡಲು ಭೇರುಂಡಾಸ್ತ್ರವನು ಬಂ । ತೊಡಗಿ ಯರಗಿದವಂತರಿಕ್ಷಕೆ ಸಾಲು ಸಾಲಾಗೀ ॥ ೩೨ ॥ ಕರಿಯ ತೊಡಗಿದ ಹರಿಯು ಪಿಡಿದಿಹ । ಶರಭಗಳ ಪಿಡಿದಿರ್ದ ಭೇರುಂ । ಡೆರಗಲಂಬರಕರಿದು ಶರಗಳ ನಗಲು ನಿರ್ಜರರೂ ॥ ಯರಡು ಬಲಬಲನಾಯಕರು ಕೈ । ಪರೆಯ ಗುಟ್ಟೋಲೆದಾಡಲಾಶ್ಚರಿ । ಗರೆವ ಕಡು ಚಪಲತ್ವದೋರಿದರ ಸುರನಸುರಾರೀ ॥ ೩೩ ॥ ಸಕಲ ವಿದ್ಯಾಸ್ತ್ರಗಳು ಮುನ್ನತಿ । ಚಕಿಸದಂತರದಲ್ಲೆ ಖಂಡನೆ । ಯಕುವವೀಕ್ಷಿಸಿ ಕೊಂತ ಮುದ್ಗರವಾದಿ ಶಸ್ತ್ರಗಳಾ ॥ ನಿಕರವನು ವಡೆಹಾಯ್ಸಲಲ್ಲ । ಲ್ದಿಕುದಿಕುನೆ ದಂದಹಿಸಿ ಮಾರ್ಮಲ । ತಕಲಕಲಿಕಂಠೀರವಾರಿಗಳೆಸಗಲದ್ಭುತವಾ ॥ ೩೪ ॥ ಬಿಟ್ಟ ಶರಕಪರಿಟ್ಟ ಶರಮುಂ। ದಟ್ಟ ಯಟ್ಟುವ ಭರವಶದಿ ತೊಡೆ । ದಟ್ಟ ಮಿಸೆಯಮುಟ್ಟ ಭುಜಯುಗದಟ್ಟ

ಸಿಟ್ಟಿನಲೀ ॥ ಬಿಟ್ಟ ಬತ್ತೀಶಾಯುಧವ ಖಡಿ। ದೊಟ್ಟ ಶಸ್ತ್ರದ ಬೆಟ್ಟವನು ಅಡಿ। ಗೊಟ್ಟಯಂತರಕಬ್ಧಿಗೇಕವ ಗೈದರವನೀಶಾ ॥ ೩೫ ॥ ತನ್ನ ಸಸಾ ನಾಗಾಹವದ ವಿ। ಪ್ಪಂನತೆಯೊಳಿಟ್ಟಸ್ತ್ರಗಳ ಕು। ಟ್ಟನ್ನಿಸುವ ಸೌಮಿತ್ರಿ ವಯವುಚ್ಛೇದವನು ನೋಡೀ ॥ ಇನ್ನು ಯಳೆವಯ ವಂದೆ ಗೇಣು। ದ್ದನ್ನ ನೋಡಲು ನಿನ್ನಹಣೆಬರಿ। ಕೆನ್ನವಲವಿಂಗಾನುವೆಲೆ ನರನೆಂದು ಚಕ್ರೇಶಾ ॥೩೬॥ ವಂದೆ ಕ್ಷಣದೊಳು ನಿನ್ನೊಕ್ಕಲದಿರು। ವಂದನಲ್ಲಾನಸ್ತ್ರ ಸರಸಿಗ। ಳಿಂದಕಾದರಿಸಿದರೆ ತಿಳಿಯದೆ ಗುಂಡುಗಾಳಗವಾ ॥ ಸಿಂಧುರದಿ ಗೈದಂತೆ ನಿನಗೈ। ತಂದ ಅಂತ್ಯದಬುದ್ಧಿ ಬೇಡದ । ನಿಂದು ನೋಡು ಸುದರ್ಶನವನೆಂದಸುರನಾಯಕನೂ ॥ ೩೭ ॥ ಒಬ್ಬ ವಿದ್ಯಾದೇವಿ ದಿನಕರ। ನಬ್ಬರವನೆಸಗುವಳು ಸಾಸಿರ। ರೊಬ್ಬುಳಿಯು ಕೂಡಿರುವ ಚಕ್ರದಕಾಂತಿ ಕಿರಣಗಳಾ ॥ ದುಬ್ಬರವ ನೆರೆ ವರ್ಣಿಸಲು ಕೈ। ಗಬ್ಬದೈ ತ್ರೈಲೋಕವನೆ ಕೊಳ। ಉಬ್ಬರಾಗಿಹ ಚಕ್ರರತ್ನವನರಿದ ಸೌಮಿತ್ರೀ ॥ ೩೮ ॥ ಯಿಲ್ಲ ವುಚ್ಛೇದನಿಗೆ ಯಳೆ ವಯು। ದಲ್ಲಿ ಸಂದರ್ಭಿಸಿದ ರಣ ನಿಂ। ನಲ್ಲಿ ಹೇಗೆನೆ ಅಚಲನೀ ಕುಲಿ ಶಂಕುರವೆನಾನೂ ॥ ಯಲ್ಲ ತಮನೀನೆಳೆಯ ರಪಿನಾ । ನಲ್ಲೆ ಚಕ್ರಕೆ ಚಕ್ರಧರನೆಂ। ದೆಲ್ಲ ತಿಳಿದೈವೆರಗು ಕೇಡಬೇಡಸುರನೆನೆ ಕ್ರಿಷ್ಣಾ ॥ ೩೯ ॥ ನಂಬದಿರು ಚಕ್ರವನು ನಿನ್ನನು ವಿ। ಡಂಬಿಸುವದೈತಂದು ಯನಗವ। ಲಂಬಿಸುವದೆಲೆ ದಾನವೇಶನೆ ಮಾರಿ ಯದುರಾಹಾ ॥ ದೆಂಬನಿತರಲಿ ಖಡಿದು ಕೆಡಹುವ। ನೆಂಬದರಿದುದ್ರೇಕ ವುಳಿಗೆಲು। ವೆಂಬದೇಕೆಲ್ಲರನು ಕಳೆದಿನ್ನೆಂದ ಸೌಮಿತ್ರೀ ॥ ೪೦ ॥ ಪೋದರೆಲ್ಲರ ಚಕ್ರ ಸೂತ್ರದಿ ಸಾಧಿಸುವೆ ನೋಡೆಂದು ಹವಿಯ। ಸ್ತ್ರಾದಿಯುಲಿ ತೊಟ್ಟಡಲು ಪ್ರಳಯಾಗ್ನುರಿಯ ಮುಕ್ಕುಳಿಸೀ ॥ ವೇದಿಸಲು ಬಹದರಿದು ತನಕೈ। ಸಾಧನೆಯೊಳೊರುಣಾಸ್ತ್ರವಿಡೆ ಸಂ। ಪಾದ ಮಳೆಯಾರಿಸಲು ನೋಡೆಂದ್ಮೊರೆದ ಸೌಮಿತ್ರೀ ॥ ೪೧ ॥ ಕೆಡಲು ಹವಿಯಾಸ್ತ್ರಗ್ನಿಯೇ ವೈ। ಯ್ಯಾಡೆದ ರೀತಿಯೊಳ ಸುರಶಸ್ತ್ರದ। ಗಡಲನೆರಚಿದ ಕಿನಿಸು ಅದಿರದೆ ವಡಬ ಶಸ್ತ್ರದಲೀ ॥ ಕೆಡಸಿ ಮೇಲ್ಬಹ ಸರಳನಲ್ಲ। ಲ್ಬಡಿಸಿ ತೊಡುವದ ಖಡಿದು ತೆಗೆವವ । ಕಿಡುತ ಕೈ ತತ್ತರಿಸೆ ದೈತ್ಯೇಶ್ವರನ ಸೌಮಿತ್ರೀ ॥ ೪೨ ॥ ಪಿಡಿಯುಲೊತ್ತಹದರಿದು ಯಡೆಬೆದ। ರಿಡುತ ಚಕ್ರೇಶ್ವರನು ಚಕ್ರದ। ಕಡೆಗೆನೋಡಲು ಸಿಡಿದು ಸಾಹಸ್ರಾರ ಸಿಡಿಲಿನೊಲೂ ॥ ಅಡಲನುರರು ನೋಡಿ ಕೈಕೈ। ಒಡಿಸು ಲಕ್ಷ್ಮಣಗೇನುಗತಿಯಂ। ದ್ಮಿಡುಕುತಿರೆ ಪಂಚಾಸ್ತ್ರನಾದಿಯ ಸ್ವಬಲ ಚಂಚಲಿಸೇ ॥ ೪೩ ॥

ನೋಡಿ ರಾಘವನದಕೆ ಸಂಶಯ। ಮಾಡುತಿರೆ ಘಟಕರ್ಣನಾದಿಯ। ರಾಡು
ತಿರೆ ಸಂತೋಷ ನುಡಿಗಳ ದೈತ್ಯಪಡೆಯೊಳಗೇ॥ ಮೂಡಿದವು ಜಯಘೋಷ
ಯುದೆಯುದಿ। ರಾಡವಲೆ ಲಕ್ಷ್ಮಣನು ವಜ್ರಾ। ಸ್ತ್ರಾಡಿ ಯುಸೆದನು ಕೂಡೆ ಕೂ
ಡಕ್ಷಯುಗಳೈದಿಸಲೂ॥ ೪೪ ॥ ಚಕ್ರಕೆದುರೇ ಯುಡರಿ ಬಹಶರ। ಚಕ್ರವನೆ
ದಂಡಹಿಸಿ ಬಹದರ। ನು ಕ್ರಮುವನರಿದಿರಿಸೆ ಧರ್ಮಶ್ಚಕ್ರವಂತರದೀ॥ ವಿಕ್ರ
ಮುದೊಳೈತಂದು ಮೂಸರ್ೂ। ಳಕ್ರದಲಿ ಬಲಗೊಂಡು ಬಲಗಡೆ। ಚಕ್ರನಿಲೆ
ಸೂರ್ಯಾಂಕಿತದ ಸೊಗಸಿಂದ ಹರಿಯಡೆಯಾ॥ ೪೫ ॥ ನಕ್ಕರಾಗಲೆ ಕಪಿವ
ರರು ಹರು। ಷುಕ್ಕಿತಾ ಶ್ರೀರಾಮನಿಗೆ ವೊರೆ। ವಿಕ್ಕಲಾನಕನೆತ್ತ ದೈತ್ಯೇಶ್ವರನ
ಪಡೆಯೊಳಗೇ॥ ಸೊಕ್ಕುತಿರೆ ಮಿಡಿಕನಿತರೊಳು ಧೈ। ರ್ಯಕ್ಕಿ ಚಂದ್ರಾಸ
ವನು ಕೈಹೊಳೆ। ದಿಕ್ಕಲಾಗರುಗುಲಿ ವಿಷಾದಾಹದ ಮರಣ ಸಮಯದಲೀ
॥ ೪೬ ॥ ವಲಿದ ಚಕ್ರವನರಿದು ಲಕ್ಷ್ಮೀ। ಲಲಿತನಂತಃಕರುಣದೊಳು ಯಿಂ।
ತುಲಿದನೆಲೊ ದೈತ್ಯೇಶ ರಾಜ್ಯದಲಕ್ಷ್ಮೀ ವಶ್ಯೆಯೊಲು॥ ವಲಿವಳೊಲವಾದರಿಗೆ
ಆರಿಗು। ನೆಲೆಯುಳಲ್ಲದರಿಂದ ಸೀಚಲ। ತೊಲಗಿ ಸನ್ಮತನಾಗು ಯುವ್ಮೊಳ
ಗೆಂದ ಮೃದುವಿನಲೀ॥ ೪೭ ॥ ಯಿದ್ದು ನಿನ್ನೊಳು ಕೆಲವು ದಿನವೆನ। ಗೊದ್ದಿ
ತೀ ತೆರವಾದಿಯಿಂದನು। ಬದ್ಧ ಸಹಜದೊಳವನಿನಾಯಕರೆಲ್ಲ ನಿನ್ನಡಿಗೇ॥
ಬಿದ್ದ ತೆರಕೆನಗೆರಗಿಸುವುದೀ ಸಿ। ದ್ಧಚಕ್ರದ ನಡತೆ ಸರಿಸಮ। ಸಿದ್ಧಗೊಳು
ನಿನಗೆನಗೆ ದಶಶಿರನೆಂದನೀ ಚಕ್ರೀ॥ ೪೮ ॥ ತನ್ನ ಆಯುಧಸಾಲೆಯೊಳಗು।
ತ್ಪನ್ನ ಚಕ್ರವೆ ತನ್ನ ಪ್ರಾಣವ। ನನ್ನು ಹರಿಸುವದಿತ್ತು ಸುಖವಾದಿಯಲ್ಲಿ ದುಃ
ಖಂತ್ಯಾ॥ ವೆನ್ನುವುದು ಆರಾರಿಗೂ ಬಿಡ। ದಿನ್ನು ತಿಳಿದೆವ್ಮೊಳಗೆ ಅ। ನ್ಯೋ
ನ್ಯನ್ನು ಭಾವಿಸು ಪ್ರಥಮ ಚಕ್ರೆನಲಾಗ ಚಕ್ರೇಶಾ॥ ೪೯ ॥ ಬಂದು ಪಾ
ರುಂಬಳೆಯು ನಿನ್ನೆಡೆ। ನಿಂದರೇನೋ ಸ್ವರ್ಗವನೆ ಕಂ! ಡಂದ ನಿನಗುಂಟಾಗಿ
ಹಲುಬುತಲಾಗಲೆನ ಸಮಕೇ॥ ಬಂದೆನೆಂಬೆಯು ಆದಿನೀತಿಗ। ಳಿಂದಲುಳಿಯು
ಲು ಪೇಳ್ವೆಯಾ ಅದ। ರಿಂದಲೇನರೆಯಾಯ್ತೆ ಭುಜಬಲವೆಂದು ದೈತ್ಯೇಶಾ
॥ ೫೦ ॥ ಝಡಿದು ಚಂದ್ರಾಸವನು ರಣಕಡಿ। ಯಿಡುವನರಿದಕಟಕಟ ಆರಿ
ಗು। ಬಿಡದ ಕಾಲ್ಗತಿಗೇನೊ ನಿರ್ನಯುವದಕೆ ದೈತ್ಯೇಶಾ॥ ಹಿಡಿದಭಲ ಬಿಚ
ದಳಿದನೆಂದ್ಬಲ। ಗಡೆಯ ಚಕ್ರವ ನೋಡಲೆವೆ ಯಿಡು। ಗೊಡುವಡಿದದವ
ಕಾಶವೆರಗಿನ್ನಸುರನಾಯಕನಾ॥ ೫೧ ॥ ವುತ್ತಮಾಂಗವ ಪಿಡಿದು ನಭದ।
ತ್ತಿತ್ತಿಯೊಗೆದೈತರುವರೆಗೆ ಸುರಿ। ಯುತ್ತ ಪೂಮಳೆಯುಮರರಾ ಸೌಮಿತ್ರಿಯ

ನು ಹೊಗಳ್ಳೀ ॥ ಹತ್ತಿದರು ತಮುಲೋಕವನು ಪುರು । ಷೋತ್ತಮನು ಮುಕ್ತೀ
ಶನ ಸ್ಮರಿ । ಸುತ್ತ ಬಂದಸ್ತಮಯ ಸಮಯ ಸುದರ್ಶನವು ಸಹಿತಾ ॥ ೫೨ ॥
ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲವಿ
ನಿಃ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ ।
ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆ
ಯ ಸದ್ಬುಧರೂ ॥ ೫೩ ॥

ಅಂತು ಸಂಧಿ ೭೧ ಕ್ಕಂ ಪದನು ೪೧೬೯ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ತೆರಡನೆಯ ಸಂಧಿ.

ಲಕ್ಷ್ಮಣನ ಪಟ್ಟಾಭಿಷೇಕದ ಸಂಧಿ.

ಅಳಲಿ ಮಂಡೋಧರಿಯು ಜಾನಕಿ । ಮಿಳಿತವಾಗೈ ತರಿಸಿ ರಘುಜರ ।
ನಿಳಯಕ್ಕೈದಿಸಲೆಲ್ಲ ಲಕ್ಷ್ಮಣಗೆಸಗೆ ಪಟ್ಟವನೂ ॥ ಪಲ್ಲವಿ ॥

ಕೇಳಿದೈ ರಾಜೇಂದ್ರ ಲಕ್ಷ್ಮಣ । ನಾಳುತನವೆಷ್ಟುಸುರನಾಯಕ । ನೇ
ಳಿಗೆಯ ನಿಲ್ಲಿಸಿದನಸಾಮರ್ಥ್ಯವನು ಕಾಣುತಲೀ ॥ ಬೀಳಲಬ್ಧಿಗೆ ರವಿಯು ಪ್ರ
ಜ್ವಲ । ದಾಳಿದವು ಮಹತಾಪು ಧರ್ಮ । ದ್ಕೋಳು ಕಹಳೆಯು ರವದಿ ಬಂದ
ಗ್ರಜನ ಸನ್ನಿಧಿಗೇ ॥ ೧ ॥ ಯರಗಿದನ ಪಿಡಿದೆತ್ತಿ ಆನಂ । ದ್ಭರಿತಲೀ ಬಿಗಿ
ಯಪ್ಪಿ ಮುದ್ದಿಸಿ । ಸುರಿನ ಹರುಷಾಶ್ರುನಲಿ ರಣ ಮುಡಿತಟ್ಟ ಪರಿಹರಿಸೀ ॥
ವರಜನೆಡೆಯೊಳಗಾಲಯಕೆ ರಘು । ವರನು ಬಂದಾಸನದಿ ಕುಳಿತಿರ । ಲೆರಗಿ
ದರು ಪಂಚಾಸ್ತ್ರನಂಗದನಾದಿ ಖಗವರರೂ ॥ ೨ ॥ ಹೊಗಳಲಳವಡವಂತಶಕ್ತಿ
ಯ । ನೆಗಳಿದತಿ ಪುಣ್ಯಾಂಗ ಲಕ್ಷ್ಮಿಯ । ಬಗಲ ನೊಲವಾಶ್ಚರಿಸಿ ಕೊಂಡಾ
ಡಿದರು ಸರ್ವಜನಾ ॥ ಮಿಗೆ ಹರುಷದೊಳಗಾ ವಿಭೀಷಣ । ನಗಧರನ ಸನ್ನಿ
ಧಿಗೆ ಬರುವನ । ಬಗೆಯ ನೋಡಿದರೆರಗುವಂತಿರ ಲಿರಿದ ಸೌಮಿತ್ರೀ ॥ ೩ ॥

ಯುದ್ದು ಆಲಂಗಿಸ ತ ಕೈನಿಡಿ । ದಿದ್ದು ಕುಳ್ಳಿರಿಸಿರಲು ಶರಯೊಳ । ಗಿದ್ದ ತಾಟಕಿ ಸೂರ್ಪನಖಿ ಸಹಿತಾ ವಿಭೀಷಣನಾ ॥ ಹೊದ್ದಿಸಿದ್ದಿಂದ್ರಾರಿ ಸಹಿತ । ಲ್ಲಿದ್ದರೆಲ್ಲರ ಕರೆಸಿ ತಂನೆಡೆ । ಯಿದ್ದ ಸಿಂಹಾಸನಗಳಲಿ ಕುಳ್ಳಿರಿಸಿದಾಶರಥೀ ॥ ೪ ॥ ಯಲ್ಲ ರಕ್ಷಿಗಳಲ್ಲಿ ನೀಹೋರ । ಚಲ್ಲುತಿರೆ ನಿರ್ನಯುವ ವಿಚಾರುವ । ರಿಲ್ಲ ಲೋಕದೊನವಕೆ ಸಂದೇಹಿಸದಲಗ್ರಜನಾ ॥ ವುಲ್ಲಸೀ ಲಕ್ಷ್ಮಣನ ಭಾದ್ಯವ । ನಿಲ್ಲಿಸಾಳಂವದಲಿ ನೀವಿರು । ವಲ್ಲಿ ಸಂಶಯುಬೇಡವೆನೆ ಘಟಕರ್ನನಿಗೆ ರಘುಜಾ ॥ ೫ ॥ ಯಿನ್ನು ಸಂಶಯುವೇಕೆ ಸಕಲೋ । ತ್ಪನ್ನ ಸುಖರಾವಣಿಗೆ ನೀನೆರ । ವೆನ್ನುವದು ನಮಗಿಲ್ಲ ಕೈಮುಗುಚಿದೊಲು ನಮ ಸಿರಿಯೋ ॥ ನಿನ್ನ ವಶವಾಯ್ತೆಂದು ಘಟಕ । ರ್ನನಿತಕ್ಷಿಯು ಸಾರದೊಳು ಪೇ । ಳ್ವಂ ನೆಗಿತ್ಯಾದಿರ್ದರವವನು ಶೂರಯಿಂದ್ರಾರೀ ॥ ೬ ॥ ಅಳಿದ ಪಿತನರಿದಕ್ಷಿಯೊಳು ಘುಳು । ಘುಳಿಪ ನೀರಿಂದಂಗಸಿರ ಸಂ । ವಿಳಿತದೊಳು ತರಿಸಿರ್ದು ವಿನ್ಯೆಯೊಳಿರಸಿ ಪುಷ್ಪಕದೀ ॥ ಘಳಿಲ ನೈತರುತಿರಲು ಯತ್ರೂ । ರೊಳಗೆ ಮಂಡೋಧರಿಗೆ ಅಬ್ಜಿನಿ । ಕೆಳೆಯುನಸ್ತಂಗತದಿ ಕಳವಳಪುಟ್ಟಿ ವೈಬೆಮರೇ ॥ ೭ ॥ ಅರಿಯುಲಿಲ್ರಣ ವಾರ್ತೆಯೇನೊ। ತ್ತರವೊ ಯಿಂದಾರೈದಲಿಲ್ಲೆಂ । ದರಸಿ ಬಂದಾಸ್ಥಾನಶಾಲಗೆ ವೇಗ ಚರರೈದೀ॥ ಅರಿದು ಬಹುದೆನುವರೆಗೆ ಸುತತಂ । ದಿರಿಸಲಾ ತಲೆ ಮುಂಡಗಳ ನೋ । ಡೊರಗೆ ಯದೆ ಹಾರಿನಲಿ ಮಂಡೋಧರಿಯು ಮೂರ್ಛೆಯಲೀ ॥ ೮ ॥ ಪುಟ್ಟಿತಾಸುದ್ಧಾಲಯದೊಳಿ । ದೊರ್ಷ್ಟು ಸತಿಯರು ಬಂದು ಕೆಡದಿ । ದಟ್ಟಿ ಶಿರಗಳ ಕಡಲೊಡದಂತೆ ಶೋಕಿಸುತಾ ॥ ಕೊಟ್ಟು ಶೈತ್ಯದಿ ಮೂರ್ಛೆಯನು ಪರಿ । ದಿಟ್ಟು ಮಂಡೋಧರಿಯು ಯದ್ದಳ । ವಟ್ಟಳಾ ಖಡಿಗಳನು ಮುದ್ದಿಸಿ ಮುಖದಿ ಮುಖವಿಟ್ಟೊ ॥ ೯ ॥ ನಲ್ಲನೇ ದೈತ್ಯಾದ್ಯರೊಳು ಚಲು । ವುಲ್ಲ ಬಾಣನೆ ಪುಣ್ಯಕೋಶದ । ನಲ್ಲೆಯರು ಪದಿನಾರುಸಾಸಿರರೊಲನನೀಕ್ಷಿಸುವಾ ॥ ರೆಲ್ಲಿ ಬಂದಾವ್ರತದಿ ಸುತ್ತಿಹ । ನಲ್ಲೆಯರನತಿ ಪ್ರೀತಿಗೊಳಿಸದ । ಲಿಲ್ಲಿ ನೆಲದೊಳಗೇಕೆ ಮಲಗಿದೆ ಯನಲು ಆನುಹಿಷೀ ॥ ೧೦ ॥ ಪಿಡಿದು ಗಲ್ಲವನೊತ್ತಿ ಚುಂಬನ । ಗೊಡುತ ವಕ್ಷಸ್ಥಳದೊಳಗೆ ಮಿಡಿ । ಮಿಡಿನ ಕುಚಕುರುಪುಟನ ಕುಣಿಸುವ ಸ್ಥಾರಪೀಧಿಯುನು ॥ ಪೊಡವಿಯೊಳು ಚಲ್ಲುವರೆ ತೂಲಿಯು । ನಡರಲಿಲ್ಲೇನಾಯ್ತು ಭೋಗವ । ಬಿಡುವರೇ ಹರಿವೈರಿಯುಂವೊರಲಿದಳು ಮಯು ಸುತೆಯೂ ॥ ೧೧ ॥ ಛತ್ರಚಾಮರ ಶಂಖಭೇರಿಯು । ವತ್ರವೆಬ್ಬೈಳೈಲೆಯು ನಾರಿಯು । ರತ್ರಕಾದಿಹಯರ್ನಕೆ ಕೊಳಲಿಲ್ಲಾಲಿ ವಬ್ಬಲಿನಾ ॥ ಚಿತ್ರವವನೆಯುರೆಲ್ಲಿ

ನೀಪ್ರತಿ। ಯುತ್ರವೀಯದ ಕಾನುಗೈದ ಪ। ವಿತ್ರವೇನುಲಿಯಂದು ಮಂಡೋ
ಧರಿಯು ಶೋಕಿಸಲೂ ॥ ೧೨ ॥ ಶೋಕನಿಲುಕಡೆ ಯಿರದಳೆಡೆಬ । ವ್ಯಾಕು
ಲಿಪ ಸ್ತ್ರೀಯರೊಳು ಪಿರಿತನ । ದಾಕೆ ಚಂದ್ರಿಕೆ ಪ್ರವರೆ ಚಂದ್ರಾನನೆ ಸುಚಂ
ದ್ರಾಭೆ ॥ ಲೋಕಸೌಂಧರನಂಗಸೌಂಧರಿ। ನಾಕಸೌಂಧರಿ ವಿಮಲಸೌಂದರ।
ನೇಕ ಸೌಂಧರಿ ರತ್ನಸೌಂಧರಿ ಪದ್ಮ ಶ್ರೀಮಾಲೇ ॥ ೧೩ ॥ ಇವರು ಮೊದ
ನೇರೆಂಟುಸಾಸಿರ। ಯುವತಿಯರು ಬಹುಶೋಕದಿ ಹೊರಳು। ವರ ನೋಡಿ
ನ್ಯಾರು ಧೈರ್ಯವ ಪೇಳ್ವರಿಲ್ಲೆನುತಾ ॥ ತನಗೆ ತನ ಧೈರ್ಯದಲಿ ಕಷ್ಟನು।
ಭವಿಸದಲೆ ಬಿಡದೆಂದು ಮಯಸಂ। ಭವೆಯು ಪೇಳ್ದಳು ಕೇಳಿ ತಂಗಿಯರೆಂದು
ನಸುನಗುತಾ ॥೧೪॥ ಕಷ್ಟ ಸುಖವೆರಡೀಗ ಲೋಕರಿ। ಗಿಷ್ಟವಾಗಿಹವಲ್ಲಿ ಅನು
ಭವ। ನೆಷ್ಟೊವಷ್ಟಕೆ ತ್ರುಪ್ತಿ ಬಡಬೇಕಲ್ಲದಳಲಿದರೇ ॥ ಭ್ರುಷ್ಟರಾಗುವದಲ್ತೆ
ಯೇನು ಅ। ಭೀಷ್ಟ ಸಲುವುದು ಯಿನ್ನು ನಮಪ್ರಾ। ಣೇಷ್ಟ ಬರುವನೆ ದುಃಖ
ವಾರಿಸಲೆಂದಳಿಂದುಮುಖೀ ॥ ೧೫ ॥ ತನ್ನಿಮಿತ್ಯದೊಳೆಲ್ಲನಗೆ ಮುಖ। ವನ್ನು
ಗೊಳುವುದಿದೆಲ್ಲವದ್ರುವ । ವನ್ನು ವದನೆರೆ ಭಾವಿಸೆಲ್ಲಿಷ್ಟೆಂದ ಮೈದುನರೂ ॥
ಯನ್ನುವದೆ ಮರುಳಾಟ ಆಸತಿ। ಗನ್ನು ತ್ರುಪ್ತಿಯ ಮಾಡಿಸಲು ಬೇ। ಕೆನ್ನುತಾ
ಶಬಸಾಗಿಸಲು ಗೀರ್ವಾಣರಮಣೊನಕೇ ॥ ೧೬ ॥ ನೋಡಿ ಸೀತೆಯು ನಿನಗೆ
ಸಂತಸ। ಗೂಡಿತೇನೌ ಅಹಿತನಿಖ್ಖುಡಿ। ನೋಡು ಯನಸುಕುಮಾರಿ ನಿನಪ್ರಿಯು
ನೆಡೆಗೆ ಕಳುಹಿಸುವೇ ॥ ಮಾಡಬೇಡನುಮಾನವೇಳೆಂ। ದಾಡಿಯುಪಚರವಚನ
ದಲಿ ಯಲು । ಗಾಡಿ ಗಲ್ಲವನೆಬ್ಬಿಸಪ್ಪಿದಳಾಗ ಮಯತನುಜೇ ॥ ೧೭ ॥
ಯುಬ್ಬಿ ಮಲೆವಾಲಂಗವನೆ ಸಂ। ಲಬ್ಬಿಸಲು ತಪ್ಪಯದಿ ಮುಳಗಿಂ। ನೊಬ್ಬ
ರೊಬ್ಬರು ಹರುಷಗೈದರು ಮಾತೆ ಸುತೆಯಂತೇ ॥ ಯುಬ್ಬಲೇ ಕಾರಣವೊ ಪೂ
ರ್ವದೊ। ಳಿಬ್ಬರೇನಹೆವಸುರನಾಯಕ। ನಿಬ್ಬಗಿಸಲೀನ್ವೊರ ಸಿನಗವಳೆಂದಳಿಂ
ದುಮುಖೀ ॥ ೧೮ ॥ ನುಡಿಯುತೀತೆರಮಲಯಜದ ಸಮಿ । ತಡಕಿಸಾಪ್ರಿಯು
ಶಬವ ಸಂಸ್ಕರ। ಗೊಡಿಸಲೀರಿಂದ್ರಾರಿ ಜಾನಕಿ ಸತಿಯುರೊಡನೈದೀ ॥ ತೊಡಿಸಿ
ಬಹು ಭೂಷಣವನಂಬರ। ವುಡಿಸಿ ಫಲಪತಿಪ್ರತದಿ ಸರಿಬಹ। ಮಡದಿರಿಲ್ಲೀ
ಯುಗದಿ ನಿನ ಬಿಟ್ಟೆಂದಳಿಂದುಮುಖೀ ॥ ೧೯ ॥ ಕುಳಿತು ಸಿಂಹಾಸನದಿ ತೊ
ಡೆಯ। ಗ್ರಳೆಯುಳನು ಕುಳ್ಳಿರಿಸಿ ಖಗರೆಮ। ಬಳಗ ಸರಿಯುಂಗಜನು ಅಂಗದ
ರೀಗಲೆನ ಭಗಿನೀ ॥ ನಳಿನಮುಖಿ ಶ್ರೀಮಾಲಿಯುಳಿಯರು। ಬಳಸಿದರು ನಿಮ
ನಡತೆಗೆ ಮದು। ಬೆಳಗೆ ಆಲಸಿದರೆಂದು ಮಂಡೋಧರಿಯುಪೇಳ್ದೆಲ್ಲಾ ॥೨೦॥

ಬರೆ ವಿಭೀಷಣನಂಗಜಂಗದ। ವೆರಸು ಸುಕುಮಾರಕನ ಕಳುಹಿದ । ನರಿದು ಬೆಸಸಿದರತ್ತಿಗೈತರ ಹೇಳಿ ಕಳುಹಿಸಿದಾ ॥ ತೆರನ ರಾಘವನಲ್ಲಿ ಪೋಗೆಂ । ದೊರೆಯಲೈತಂದಾಗ ಮಂಡೋ । ಧರಿಯ ಪದಕಾನವ್ರುಗೈದರನೆತ್ತಿ ಕುಳ್ಳಿರಿಸೀ ॥ ೨೧ ॥ ಈತ ವೈದ ವಿಭೀಷಣನು ವಿ। ಖ್ಯಾತನಂಗದ ಸ್ವರ್ಗವನೆ ಸುಡು। ವಾತ ನಂಗಜನೀತ ತ್ರೈಲೋಕ್ಯವನೆ ತಿರುಹಿಡುವಾ ॥ ನೀತನೇ ನಿನಗುಂಗುರ ವತಂ । ದಾತವನ ಕಿತ್ತೂರ ಸಟ್ಟುವ । ನೀತ ಜಾನಕಿಯನಲು ಮಂಡೋಧರಿಯು ಮುದ್ದಿಸುತಾ ॥ ೨೨ ॥ ಇನಿತು ಸಾಹಸ ಶಕ್ತರೆಲ್ಲೆಮು । ನೆನೆಯ ದೊಶವಾಗ್ನಿಮಗೆ ನಮಗಿಂ । ತನುವಗೊಳಿಸಿದರೆನಲು ತಿಳಿದಾಗ್ಸೀತೆಯಂಬುದನೂ ॥ ವಿನಯದೊಳಗೆದ್ದೊಂದಿಸಾರೆಂ । ದೆನುವ ಅನುಮಾನಿತ್ತು ನಿಜಮ । ಜ್ಜನನಿಯಂದೆತ್ತಂಜಲಿಯಲಿರಲರಿದು ವೈದೇಹೀ ॥ ೨೩ ॥ ಯನಗೆ ಮಂಡೋಧರಿಯೆ ನಿಜಮಾ । ತೆನುವೆ ನೀಚಿಕ್ಕೈಯ್ಯನಿವರೆನ । ತನಯರೆಂದೈಕೈವಿಡಿದು ನಿಕಟದೊಳಿರಿಸಿ ಜಾನಕಿಯಾ ॥ ವಿನಯ ಗುಣಕಾಚ್ಚರಿ ಜಗನ್ಮಾ । ತೆನುತ ಕೊಂಡಾಡುವರಿಗತ್ತಿಗೆ । ವನಿತೆಯನುವೈದಿತ್ತು ರಾಘವನೈದಿಸುವುದೆನಲೂ ॥ ೨೪ ॥ ಕಳುಹುವರೆ ಸುಕುಮಾರಿಯನು ಮನೆ । ಗಳಿಯನೈತರಿಸದಲೆ ಯನವಿಳೆ । ಯಳೆಯಳನು ಮುದ್ದಾಡಿ ಮಂಡೋಧರಿಯು ಯಾಗುಣವಾ ॥ ತಿಳಿಯದಳಿದಸುರೇಶನೆಂದ್ಕಳ । ವಳಿಸೆ ಸನ್ರುಚಿಗೊಳೆ ವಿಭೀಷಣ । ನಳಿಯರಾನಂದ್ಗೊಳಲು ಸೀತೆಯಭೇದ ಭಾವನಿಗೇ ॥ ೨೫ ॥ ಸತಿಯರೊಲವೇ ಬೇರೆ ಯುಗಪತಿ । ವ್ರತೆಯು ಮಂಡೋಧರಿಯು ಜಾನಕಿ । ನಿತರರಿರ್ದೆಲ್ಲೆನುತ ವಂದಿಸುತಾ ವಿಭೀಷಣನೂ ॥ ಆತನಂಗದ ಸಹಿತ ನಿಮು ಸಂ । ಮತವೆ ಪರಿಣಾಮೆಂದು ಲಕ್ಷ್ಮಿ । ಪತಿಗಳೆಡೆಗೈದೆರಗಿ ಪೇಳ್ದರದೆಲ್ಲ ವರ್ತನವಾ ॥ ೨೬ ॥ ಹೇಗೆ ಮಂಡೋಧರಿಯು ಸಂತಸ । ವಾಗಿ ತೊಡೆಯೊಳಗಿರಿಸಿ ಸೀತೆಯ । ನೀಗಕರದೊಯ್ಯನಲು ಅಳಿಯನಕರಸದಾಲಯಕೇ ॥ ಹೋಗು ಯನಲಾಪೋಗೆನೆಂಬನು । ರಾಗಗೊಂಡಳೆ ಜಾನಕಿಯಹಿತ । ಹೇಗೊ ಹಾಗೆನಗೆನುತ ರಾಘವನೆಳ್ದನಲವಿಂದಾ ॥ ೨೭ ॥ ಯದ್ದ ಕೇಶವ ನೀಳನಳಗವ । ಯದ್ದ ಜಾಂಬವ ಕಪಿಕುಲಾಗ್ರಣಿ । ಯದ್ದ ಸುಗ್ರೀವಾದಿ ಖೇಚರವೃಂದ ಸಹವಾಗೀ ॥ ಯದ್ದ ರಾಗಿಂದ್ರಾರಿ ಘಟಕ । ರ್ನೆದ್ದ ಮಯುಸುಕುಮಾರರನು ಸಂ । ಬದ್ಧದಿಂದೈತಂದ ರಾಘವನೇರಿ ಸಿಂಧುರವಾ ॥ ೨೮ ॥ ರಕ್ಷಪತಿ ಯೇರಿರ್ದ ತ್ರಿಜಗ । ದ್ಯಕ್ಷಭೂಷಣ ಹಸ್ತಿಯನು ವಿ । ಪ್ಪಕ್ಷ ಚಕ್ರೇರಿದನು ಬಲದಿ ಸುದರ್ಶನೈತರಲೂ ॥ ಸಾ

ಕ್ಷತಮರರ ಸಭೆಯೊ ಯೆನುವನು। ಲಕ್ಷಿಸುತಲಾ ಲಂಕೆಗೈದುವ । ರೀಕ್ಷಿಸಿದ ರಾ ಪೂರನಾರಿಯರೆಲ್ಲ ಮಧಿಲೇರೀ॥ ೨೯ ॥ ಆಲಲಿತ ಲಾವಣ್ಯ ಯಳೆವಯ। ಬಾಲರವಿ ಶಶಿಯಂತೆ ವಿದ್ಯಾ । ಲೋಲರೊಡನೀರೆಂಟುಯುಂಟೊಲಿದೆಸೆವ ಚಾಮರದಾ॥ ಬಾಲೆಯರ ಮಧ್ಯದಲಿ ಬಹರಧಿ। ಪಾಲರೆಂಬದವೇತ್ರಿಗರ ನುಡಿ ಯಾಲಿಸಾಶ್ಚರಿಯಿಂದ ನೋಡಿದರೂರ ಜನರೆಲ್ಲಾ ॥೩೦॥ ಮೊರೆವ ಶಂಖೀರೆಂಟು ತಂಬಟ । ತರಣಿ ಶಂಖಿಂನಾರು ಭೇರಿಯ । ಸ್ವರದಿ ಖಗರಾವ್ರತದಿ ಬರುವರೆ ರಾಮಲಕ್ಷ್ಮಣರೂ ॥ ಅರರೆ ಯೇಪರಿಚಂನಿಗರು ಅರಿ। ಕರಿಣಿ ಹರಿ ಭೇರುಂಡರೀ ಬಂಧುರರೊಳೀಕೆಸಗಹಿತವಳಿದಸುರೇಶನೆನೆಲೆಲ್ಲಾ ॥ ೩೧ ॥ ಅತಿ ವಿಚಿತ್ರರು ಖೇಚರರ ಸಂ। ವೃತದೊಳೈದಿ ವಿಮಾನವನು ಬಿ। ಟ್ಟತನುವಂದದಿ ಬರುವರಾ ಪೂರಂಗನೆಯರಕ್ಷೀ ॥ ವಿತತ ಕುಸುಮಾರ್ಚನೆಗಳೊಳವ। ರತಿಶಶಯದ ನಯನಾರ್ತಿಗಳ ಬೆಳಗುತಲಿ। ಯಿಹರಂತರದಿ ಬಂದರು ಬಲಸುಕೇಶವರೂ ॥ ೩೨ ॥ ಅರಸು ಬಂದನುಭಾವಿಸುವ ಜನ। ಪರುಷ ಬಂದನು ಅಹಿತಜನ ಸಂ। ಹರನು ಬಂದನು ಸರಸ ಸದ್ಗುಣಸಾರಸೂ ಹೃದಯಾ ॥ ಧಃನು ಕೌಶಲೆ ತರಳ ಲಕ್ಷ್ಮೀಧ। ರನ ಅಗ್ರಜ ಜಾನಕಿಯ ಮನೊ । ಹರನು ಬಂದನು ರಾವಣನ ಅರಮನೆಗೆ ವಹಿಲದಲೀ ॥ ೩೩ ॥ ಬಂದು ಸಿಂಹಾಸನದಿ ಕುಳಿತರ। ವಿಂದನಾಭನು ಸಹಿತಲಾವೃತ । ದಿಂದ ಜಾಂಬವನಾದಿ ಖೇಚರವೃಂದ ಕುಳಿತರಲೂ ॥ ಯಿಂದುಮುಖಿ ಜಾನಕಿಯ ಬಹುತೆರ। ದಿಂದ ಶೃಂಗರಗೈದು ಮದವತಿ। ಯಂದದೊಳಗೈದಿಸಿದರಸುರನ ನಂದನೆಯರೆಲ್ಲಾ ॥೩೪॥ ರಾವಣನ ಸುಕುಮಾರಿರಗ್ರಜೆ। ಭಾವದವಲಂಬನದೊಳಾ ಸಿರಿ। ದೇವಿಯನು ಕರತಂದು ರಾಘವನೆಡೆಯ ಕುಳ್ಳಿರಿಸೀ॥ ಭಾವೆರೆಲ್ಲರು ಮುತ್ತಿನಕ್ಷತೆ। ಯಾವರಿಸಿ ನಡೆವಲ್ಲಿ ಲಕ್ಷ್ಮಣ। ದೇವನೆರಗಲು ಯೆತ್ತಿ ಸಂತಸಗೊಳಲು ವೈದೇಹೀ ॥ ೩೫ ॥ ಯನ್ನ ದೆಶೆಯಿಂದಮಮ ಬಹುಕ। ಷ್ಟನ್ನುಬಟ್ಟರಿ ತಂದೆಕುಳ್ಳಿಹು। ದೇನ್ನಲದಕ ಹೋಮಾತೆ ಕೇಳ್ನಿನ್ನಿಂದಲೀ ಪದವೀ ॥ ಮುನ್ನಲಿಲ್ಲೆಂದ್ನಗುತ ಲಕ್ಷ್ಮೀ! ರನ್ನ ಕುಳಿತಿರೆ ಸೀತೆಯಾಲೊ। ಕ್ಕುನ್ನಿಸಲು ಹರುಷಾಶ ಪ್ರಿಯಗಾತೆರದಿ ಸತಿಗಾಯ್ತೂ ॥ ೩೬ ॥ ಪುಳುಕೆ ರೋಮಾಂಚದಲಿ ಬಿಡುಘು। ತ್ತುಳಿಕಿದಂತಾನಂದದಲಿ ರಘು। ನಳಿನಮುಖಿ ಸಹಿತಿರ್ದು ಮಂಡೋಧರಿಯ ಕೇಳೆಂದೂ ॥ ಕಳುಹಲ್ಪೈದಿ ವಿಭೀಷಣನು ಕೈ। ಗಳನು ಮುಗಿದತ್ತಿಗೆಗೆ ಪಟ್ಟವ। ಗೊಳಿಸಲಾರಿಗೆ ಕೇಳಿಬಾರೆಂದೆನ್ನ ರಾಘವನೂ ॥ ೩೭ ॥ ಯನಲು ಕೇಳ್ಳನ

ಬಂದರಿಗೆ ಮಾ। ಡೆನಲು ನಿನ ಪ್ರಿಯಗೈದ ಹೀನಿಂ। ನಿನಗೆ ಸಮ್ಮತವುಂಟೆ ಬಿಡು ಆದುಬ್ಬಿ ಗುಣಕೆರವಾ ॥. ನೆನೆಯದುಲಿಯನಲಿಂದ್ರಜಿತು ವೈ। ದುನನು ಮಕ್ಕಳು ಮಯನಕರ ಸಂ। ತನುವ ನೊರೆಯುಲು ಸಾಕು ನಮಗೆಂದೊರೆದರವರೆಲ್ಲಾ ॥ ೩೮ ॥ ಹೀಗೆ ವುಲಿಯನಲೈದಿ ಪೇಳ್ದನಿ। ಗಾಗ ಪಟ್ಟವಗೊಳಿಸಿ ಖಗ ನೃಪ। ರೀಗಲೇಬರಲೆಂದು ಕಳುಹಿದ ರಘುಜಮುದ್ರಿಕೆಯಾ ॥ ಸಾಗರದ ಯಡೆಯಿರ್ದ ದಳಸಹಿ। ತೀಗ ಬರುವಂತಭ್ರಗಾಮಿಗ। ಳಾಗ ಕಳುಹಿದ ನೃಪಶಿಖಾಮಣಿ ಜಾನಕೀರಮಣಾ ॥ ೩೯ ॥ ಭರತ ಶತ್ರುಘ್ನರಿಗು ನಡೆದೀ। ವರಿಯು ವರ್ತನ ವುಲಿದು ಕರತರ। ಲರಿಕೆಯರನೈದಿಸಲು ತದ್ವಾರ್ತೆಯನು ಕೇಳ್ದೆಲ್ಲಾ ॥ ಧರಣಿ ತ್ರೈಖಾಂಡರಸುಗಳು ಸ। ಚ್ಚರಿತ ವಸ್ತುಗಳಾತ್ಮಜೆಯರನು। ವೆರಸಿ ಹೊರಟರು ಖಚರನಾಯಕರೊಡನೆ ಪುಷ್ಪಕದೀ ॥ ೪೦ ॥ ಅತ್ತಲೀಪ್ರಥಿತವಾದ್ವಿಜಯಾ। ದುರ್ತ್ತರದ ಶ್ರೇಡಿಯಲಿ ಬಹು ಚಲು। ವೆತ್ತ ಕುಂಜರಪುರದ ದ್ರೋಣಾಮುಖನ ಮದನತಿಯೂ ॥ ವೃತ್ತವಕ್ಷಜೆ ಕಮಲಮುಖಿ ಸೊಂ। ಪೆತ್ತ ಕುವರಿ ವಿಶಾಲ್ಯ ಸೌಂಧರಿ। ಪೆತ್ತಳಂತರ ನೂರು ಮಂದಿಯ ಬರಯ ಸ್ತ್ರೀಯ್ಯರೆನೆ ॥ ೪೧ ॥ ಆಕುಮಾರಿ ವಿಶಾಲ್ಯಸೌಂಧರಿ। ಶ್ರೀಕರನು ಲಕ್ಷ್ಮಣಗೆ ಭವಬ। ದ್ಧಾಕೆ ಪಟ್ಟಸ್ತ್ರೀಯು ಯಂಬಂತಿರಲು ನಿರ್ಣಯವೂ॥ ಆಕೆ ಸಹಿತಣುಗೆಯರನೂರ್ವರ। ನಾಕರದೊಳಬ್ಯಗ್ರ ಪಯಣವ। ನಾಕಲಿತ ಬಲದಿಂದ ಹೊರಟನು ದ್ರೋಣ ಖಚರೇಂದ್ರಾ ॥ ೪೨ ॥ ಮಿಗಿಲ ವಿದ್ಯಾಧರರು ತಮತಮ। ಸೊಗಸಿನಿಂ ಬಹು ಕಾಣ್ಕೆ ತನುಜೆಯ। ರುಗಳು ಸಂಕಲಿತದಲಿ ಬಿರುದಾವಳಿಯ ಬೆಡಗಿನಲೀ ॥ ಭಗಣಗಣ ತೆರಳಂತೆ ಬಹುಕಾಂತಿ। ಗಳ ಆಭರಣದಲಿ ನಭದಿ। ಕ್ಕಿಗಿಲಿಸುತಲೈತರಲು ಲೆಂಕೆಗೆ ಸಕಲ ವೈಭವದೀ ॥೪೩॥ ಭರತ ಶತ್ರುಘ್ನರನು ಸಹಿತಾ। ವರಿತ ನೃಪಖಗರಾದ್ಯರನು ಬಂ। ಧುರದಿ ಮನ್ನಿಸಲುಲಿಯಲಾನಕ ಮುಚ್ಚುವೊಲುದಿಕ್ಕಾ ॥ ತರಿಸಿ ಪದಿನಾಲ್ಕ್ನದಿಯ ಗಂಗೆಯ। ನೆರೆದು ಲಕ್ಷ್ಮೀಧರಗೆ ಪಟ್ಟವ। ಗರೆದರಾ ತ್ರೈಖಾಂಡವಂಗಜನಾದಿ ಖೇಚರರೂ ॥ ೪೪ ॥ ವಡನೆ ಚಕ್ರದ ಪೂಜೆಯದಕನು। ದೊಡಗುವಾಗರಹಂತರಪಚಯ। ಗೊಡುತಲೆಲ್ಲನನೆಸಗಿ ಶಾಸ್ತ್ರೋಕ್ತದಲಿ ಕಾಣ್ಕೆಯನೂ ॥ ಇಡುತಲಲ್ಲಲ್ಲಿರ್ದ ಪೂರ್ವದ। ಮಡದಿಯರ ಬರಿಸಾಗಲವರಿಗೆ। ಕೊಡಲು ಕನ್ಯಾರತ್ನಗಳ ಖಗರಾದಿ ಧರಣಿಪರೂ ॥ ೪೫ ॥ ಆನನೀಚರಿಯರದೆಂಟು ಸಾಸಿರ। ಪವನಚರಿಯದರೆಂಟುಸಾಸಿರ। ದ್ವಿವಿದದಿ ಪದಿನಾರುಸಾಸಿರ ಸ್ತ್ರೀಯರು

ಲಕ್ಷ್ಮಣಗೇ ॥ ಅವನ ಅಗ್ರಜ ಗನತರರ್ಥದ । ಯುವತಿಯರು ಸರಿಯಾದ ರಾವರಿ। ಗವರ ಸಂಪದದಿಂದಲೆಸೆದರು ರಾಮಕೇಶವರೂ ॥ ೪೬ ॥ ಮೂರು ಖಾಂಡದ ಖಚರ । ಭೂಚರ ಧಾರುಣಿಪರೀರೆಂಟು । ಸಾಸಿರ ಸಾರಿದನೆಸಗಚಕ್ರಿ ಯೆನಿಪ ಮುರಾರಿ ಲಕ್ಷ್ಮಣಗೆ ॥ ಆರಘುಜಗದರರ್ಥವೈ ಸ । ತ್ಕಾರದಲಿ ಸಾಮ್ರಾಜ್ಯ ಪದವಿ। ಸ್ತಾರವಾಗಿರೆ ಲೆಂಕೆಯೊಳಗರಹಂತ ಸ್ಮರಣೆಯುಲೀ ॥ ೪೭ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ। ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೫೩ ॥

ಅಂತು ಸಂಧಿ ೭೨ ಕ್ಕಂ ಪದನು ೪೨೧೭ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ಮೂರನೆಯ ಸಂಧಿ.

ಅಯೋಧ್ಯಾ ಪ್ರವೇಶದ ಸಂಧಿ.

ಮಾತೆಯರ ಪೊಂಬಲಿಕೆಯನುಜರ । ಮಾತಿನೊಳಗಾಲಿಸುತ ನೃಪಸಂ। ಜಾತದೊಳಗೈತಂದ ಕೌಶಲಪುರಿಗೆ ದಾಶರಥೀ ॥ ಪಲ್ಲವಿ ॥

ಧರಣಿಪತಿಯುವಧರಿಸು ಸಂಪ । ತ್ಕರವನೊರ್ಣಿಸೆ ಸೂರಿಗಳಿಗನು। ಸರದ ಪದವಿಯೊಳಿರುತ ರಾಘವ ಲಕ್ಷ್ಮಣನು ಸಹಿತಾ ॥ ಪರಮಮಿತ್ರ ವಿಭೀಷಣನ ಕರೆ। ದೊರೆದ ಘಟಕರ್ನಿಂದ್ರಜಿತು ಯ। ತ್ವರಿಸು ಬೇಡಿದರಾಜ್ಯ ಸಂಪದವೀವೆನೆಂದೆನುತಾ ॥ ೧ ॥ ಬಂದು ಅಗ್ರಜ ಮಾತುಳಗೆ ರಘು। ವೆಂದ ನುಡಿಯುಲಿದಿಂದ್ರಜಿತು ಬಾ। ರೆಂದು ಕರೆಯಲು ಯಾಕೆ ಯಿನ್ನೆರವ್ಯಾರು ನಮನಿಮಗೇ॥ ಸಂದ ಧರೆಯಾರಾಳಲನುಬಾ। ಧ್ಯಂದ ನೀನಿದನಾಳು ತಪದವ। ಸುಂಧರಾಳುವೆನೆಂದ ಘಟಕರ್ನನುಜನನು ನೋಡೀ ॥ ೨ ॥ ಪಟ್ಟಕಿರಿಸಿಂದ್ರಾರಿಯು

ನು ಅನು। ಬಟ್ಟು ಪೋಗುವೆವೀಗಿನವಸರ। ಬಿಟ್ಟು ಯಿಹುದೆಂಬನುಜನಾಲಿಂಗಿಸುತ ಘಟಕರ್ನ೯॥ ನೆಟ್ಟನಿರ್ದಾನತಿಸುವರೆ ಕೈ। ದಿಟ್ಟರಾಗಮವಲ್ಲ ನೀಬದ। ಲಿಟ್ಟರೆನ್ನಾಣೆಂದು ಹೊರಟನು ಶೂರನಿರ್ದಪನೇ॥ ೩॥ ಯಲ್ಲರಳ್ಕಾಡಿಸಿದ ಮಯ ನಿ। ನ್ನಲ್ಲಿ ನಿಲ್ವನೆ ಯಿಂದ್ರಜಿತು ಅಡಿ। ಯಲ್ಲಿ ಬಾಳ್ವನೆ ಆತನನು ಜರಿಗಿಲ್ಲವೇ ಛಲವೂ ॥ ಯಲ್ಲರೊಂದಾಗ್ಯೆದುವೆಡೆ ಮನ। ನಿಲ್ಲುವದೆ ಮಯಸುತೆಗೆ ಬಿಟ್ಟಂ। ನೆಲ್ಲರಿರುವರೆ ತೆರಳಿತಾ ನಿಕುರುಂಬ ವಂದಾಗೀ॥ ೪॥ ಆಗಲಂತಃಪುರದ ಸೇನೆವಿ। ರಾಗದಲಿ ಶಾಂತೀಶನಾಲಯು। ಕಾಗಿ ಬರಲಾ ಪೂರಬಹಿರುದ್ಯಾನ ವನಕಾಗೀ॥ ಶ್ರೀಗಣೇಶರು ಯಂಬ ಮುನಿವರ। ರಾಗ ನಾಲ್ಸಾಸಿರರು ಸುಹೃತ। ರಾಗಿ ಬರಲಾ ಚೈತ್ಯನಿಳಯಕೆ ಪುಣ್ಯಕನುವಾಗೀ॥೫॥ ಮಯನು ಮೊದಲಾದೆಲ್ಲರಾಯತಿ। ಚಯಕೆ ವಂದಿಸಿ ತಮ್ಮ ಭವಗಳ। ನಿಯತವಾಧರಿಸಾ ಮುಮುಕ್ಷುಗಳೆಂದಲಾಶ್ರಮವಾ॥ ನಿಯುತಗೊಳೆ ಶ್ರೀಮತಿಯರಿಂತಪ। ಮಯನಸುತೆ ಮೊದಲಾದ ಬಹುಜನ। ಸ್ತ್ರೀಯರು ಗ್ರಹಿಸಿದರೊಂದೆ ಸಮುಂದಿ ಹೊಗಳೆ ಸುರಸಮಿತೀ॥ ೬॥ ಹಿಂದೆ ಘಟಕರ್ನಿಂದ್ರಜಿತುಗಳ। ಸುಂಧರಿಯರಾದೆಲ್ಲರಾ ಯತಿ। ಯಂದ ವಡೆದುಗ್ರೋಗ್ರ ತಪದಿಂ ತಪಿಸಿ ದೇಹಗಳಾ ॥ ಸಂದ ಘಟಕರ್ನಿಂದ್ರಜಿತು ಯಮ। ರಂದು ಮುಕ್ತಿಗೆ ಮಿಗಿಲ ಜನಸತಿ। ವೃಂದ ಸಂದರು ಸ್ವರ್ಗಗಳ ತತ್ಫಲಕೆ ಸರಿಯಾಗೀ॥ ೭॥ ಸತಿಯು ಮಂಡೋಧರಿಯು ಸಹಿತಿಂ। ನತಿಶಯದರೇಣ್ಭರಿಗುತ ದ್ರೂ। ಚುತಿಸಿ ಪುರುಷಾಕೃತಿಯ ಪಡೆದಚ್ಯುತದಿ ಜನಿಸಿದರೂ॥ ಹಿತವೆ ಧರ್ಮಾಧರ್ಮವಾತ್ಮನ। ಗತಿಗೆ ನೋಡಾರಕ್ಷವಂಶ। ಲ್ಲತುಳ ಸ್ವರ್ಗೋಕ್ಷೆಲ್ಲಿ ನೃಪತಿಯೆ ಯಂದ ಗೌತಮನೂ॥ ೮॥ ಯಿತ್ತಲಂಗಜನಾದಿಯರ ಸು। ವೃತ್ತರಾಗೊಡ್ಡೋಲಗದಿ ಮುದ। ವೆತ್ತು ಬಲಕೇಶವರು ಕೈಕೊಳುತ್ತೈದಿ ಬಹುಕಪ್ಪಾ ॥ ದತ್ತಣವನಿಪರೋಲಗಿಪ ಸಂ। ಪತ್ತಿನೊಳಗಿರುತೊಂಬದಿನ ಕರೆ। ದೊತ್ತಿಲಿರಿಸುತ ಭರತ ಶತ್ರುಘ್ನರನು ರಘುವೀರಾ॥ ೧೦॥ ಕ್ಷೇಮವೇ ಅವ್ಮಾಜಿಯರು ಸು। ಪ್ರೇಮವೇ ಜನಗೆಲ್ಲ ಪುರದೊಳ। ಗಾಮಹತ್ತರು ಮುಖ್ಯನಾಯಕರೆಲ್ಲ ಪರಿಣಯವೇ॥ ಸ್ವಾಮಿಯುಪಚಯ ಪೂರ್ವದೊಳಭಿ। ರಾಮವೇ ಯನಲೆಲ್ಲ ಸಂಪ್ರಿಯ। ಧಾಮರಾಗಿಹರೆಂದ ಭರತಗ್ರಜಗೆ ಕೈಮುಗಿದೂ॥ ೧೧॥ ದೇವರಂಕಿತ ಮುದ್ರೆಯನು ಯಂ। ನಾವಲಂಬನ ಗೈದಿರವರ। ಜ್ಞಾವಲಂಬನನಾಗಿ ಸ್ವಾಮಿಯ ಪೂಜೆ ಮೊದಲಾಗೀ॥ ನೀವು ನಡೆಸುವ ಮೇರೆಯೇ ನಡ। ಸೂವೆ

ನಂತರವಿರದೆ ಸರ್ವಸು। ಖಾವಲಂಬನ ರಾಜಮಂದಿರ ಹೊರತುಯನೆ ಭರತಾ ॥ ೧೧ ॥ ಏನು ಹಾಗೆನಲದಕೆ ಮಾತಾ। ಮಾನುನಿಯರನ್ನೋದಕವು ನಿ। ದ್ರಾನುರಾಗವಕಳುಹಿ ನಿನ್ನೊಡನಂದು ಮೊದಲಾಗೀ ॥ ಏನೊ ಆತ್ಮಸ್ಥಿತಿ ನಿಮಿತ್ತೀ। ನಾನು ಫಲಹಾರದಲಿ ವಿಗ್ರಹ। ಲೀನಗೊಂಡಿಹರೆಂದ ಭರತನು ರಾಮಚಂದ್ರನಿಗೇ ॥ ೧೨ ॥ ಈಗಲೆನಬರಹೇಳಿ ಅಪ್ಪಣೆ। ಯಾಗಲದ ಬಿನ್ನೈಸಿದರೆಸ್ವ। ಲ್ಪಾಗಿ ನಕ್ಕರು ಕೇಳಿ ನಿಮ್ಮತಿಶಯದ ಹರುಷದಲೀ ॥ ಹಾಗೆ ಮೂರ್ಛಿತರಾಗೆ ಕಾಣ್ವಂ। ತಾಗಿ ತೋರುವುದಿಲ್ಲವೆನುತನು। ಹಾಗಿ ಶೈತ್ಯದಿ ಹಂಬಲಿಸುತಿಹರಗ್ರಜನೆ ಭರತಾ ॥ ೧೩ ॥ ನೋಡಿದನು ಸೌಮಿತ್ರಿ ಮುಖವದ। ಕಾಡಿದನು ಯಿನ್ನರುಗುಲಿಯ ತನ। ಮಾಡಲನುಚಿತವನ್ನ ವುಣದಿಹರೆಂಬುದನು ಕೇಳೀ ॥ ಕೂಡಿತೆಲ್ಲಾ ರಾಜ್ಯ ಭರತನ। ನಾಡಿಗತ್ವವು ತೀರಿತಿಂ ದಯು। ಮಾಡಬೇಕಹೊ ದೇವನೆಂದನು ಭಕ್ತಿಲಗ್ರಜಗೆ ॥ ೧೪ ॥ ಸಂದುದೀರಾರೋಷವೀದಿನ। ಕೆಂದು ವಿಜ್ಞಾಪಿಸಲು ಭರತನ। ವಂದಿ ಶತ್ರುಘ್ನೆಂದ ನಮುಗಾವಾವ ಭವಕರ್ಮಾ॥ ದಿಂದ ನಿಮ್ಮಗಲಿಕೆಯು ಧರೆಯನು। ಬಂದರೆಂಬಪಕೀರ್ತಿಯನು ನಮು। ಗೊಂದಿಸಿತೊ ಸಾಕಗಲಿಸಲು ಬೇಕೆಂದನಗ್ರಜಗೇ ॥ ೧೫ ॥ ದೇವರಿಲ್ಲದ ಗುಡಿಯು ಕಳಸವಿ। ಭಾವಮದಿಲಾಘ್ರಾಣ ಹರಮುಖ। ಭಾವವದೊಳಗಾಪೀರ್ವರವನಿಯನಾಳ್ದ ತೆರಕಾಗಾ ॥ ನೀವುದಯುಗೈದಬ್ಧಿಗಳು ಪರಿ। ಭಾವಿಸಿದವಿಂನಾದರೂ ದಯ। ವೀವುದಗ್ರಜನೆನುತಲೆರಗಲು ಭರತಶತ್ರುಘ್ನಾ ॥ ೧೬ ॥ ಯತ್ತಿ ಯಡೆಯೊಳಗಿರಿಸಿ ಗಲ್ಲವ। ನೊತ್ತಿ ದಶಶಿರನೊಧೆಯುಕಾರಣದತ್ತಣಿಂದಮ್ಮಾಜಿ ಧರೆಯನು ಬೇಡಿದಳು ನಿಮಗೇ ॥ ಇತ್ತರಾರ್ನವನಿತ್ತ ನಡೆಯಂ। ದೊತ್ತಲಾರೇನೇನೊ ಕ್ರುತಬೆಂ। ಬತ್ತಿ ಬಹದಾರೇನು ಕರ್ತರೆ ಯನಲು ರಘುವೀರಾ ॥ ೧೭ ॥ ಬೇಡಿ ಸಂಶಯನಾಲ್ವರೊಂದೇ। ನೋಡಲವನಿಗೆ ಮೇಣು ಜನವಾ। ಕ್ಯಾಡುವರು ಹಿರಿಕಿರಿದು ಭೇದವದಷ್ಟೆಯಲದೆಮಗೇ ॥ ಬೇಡವಾಹೆಚ್ಚಾರಿಕೆನಲದ। ಕಾಡಿದನು ಶತೃಘ್ನ ಪಿತಸಮು। ನೋಡದಿರಲಗ್ರಜನವಿನ್ನೇ ಪಾಪವೇಕೆಂದಾ ॥ ೧೮ ॥ ತಂದೆ ನೀ ಲಕ್ಷ್ಮಣಗೆ ಭರತಗೆ। ತಂದೆಯುವನಾ ಭರತರಾಜಮು। ತಂದೆ ಯಿಾಮುರ್ಯಾದೆಯೊಳಗಿನ್ನಾವನೊ ತೀರ್ಸಿದಾ ॥ ಲೊಂದು ಯೋಚನೆಗೈವನಾರಕ। ನೆಂದು ಭಾವಿಪುದೆಲ್ಲೆ ಬೇರಿಂ। ನೊಂದು ಭಾವನೆಸಲದು ಅವನೊಳಗೆಂದ ಶತ್ರುಘ್ನಾ ॥ ೧೯ ॥ ಅಲ್ಲಿಯಿದ್ದಿರ್ವಿನಿಯೋಗ ಜನರಿಂ। ನೆಲ್ಲ ರಾಘವನೋಲಗಿಸುತಿರು। ವಲ್ಲಿ ಬೃಹಸ್ಪತಿಯೆಂಬ

ಪೌರೋಹಿತನು ಆಸನುಯಾ ॥ ದಲ್ಲಿ ಪೇಳಿದನೀಗಲೇ ಬಹು । ಬಲ್ಲಿದಾಗಿಹ ತಾರೆಮಾತೃಗ । ಳಲ್ಲಿ ಗೈದುವ ಸಮುಯವಾಯ್ತೆನಲಾಗ ರಘುವರಗೇ ॥೨೦॥ ನೋಡಲಂಗಜನಾಸ್ಯವನು ಧನಿ । ಮಾಡಿಸಿದನು ಪ್ರಯಾಣಭೇರಿಯು । ಕೂಡಿತೆಲ್ಲಾ ಖಚರ ಭೂಚರರಾಜ ನಿಕರುಂಬಾ ॥ ನಾಡನಾಕ್ರಮುಗೈವಬಲವುಂ । ಗೂಡಿ ಬರಲಾ ದಿಗ್ಗಜಗಳೊದ । ಲಾಡಿದವು ಕಿವಿಗಿಡಿವ ವಾದ್ಯಧ್ವರಕೆ ಮೈಬೆಚ್ಚೀ ॥ ೨೧ ॥ ಯತ್ತನೋಡಲ್ ಧ್ವಜಪತಾಕೆಗ । ಳೆತ್ತನೋಡಲು ಛತ್ರ ಚಾಮರ । ವೆತ್ತನೋಡಲು ಆಳುಹಯ ವೈಮಾನಗಜನಿಕರಾ ॥ ಯತ್ತನೋಡಲು ಭೇರಿಮುರಜಗ । ಳೆತ್ತನೋಡಲು ಕಹಳೆ ತಂಬಟ । ವೆತ್ತ ನೋಡಲು ವೇತ್ರಪಾಠಕರುಲುಹಿ ನೊತ್ತರನೇ ॥ ೨೨ ॥ ಮುಚ್ಚಿತೆಲ್ಲಾಕಾಶ ಬಲನಿಸಿ । ಹೊಚ್ಚಿತೆಲ್ಲಾವನಿಗೆ ಶ್ರೀರಾ । ಮುಚ್ಯುತರು ಹರಿಗರುಡವಾಹನಕಿಡಲು ಪಾದಗಳಾ ॥ ವಿಚ್ಚ ರವನಿಜರೆಲ್ಲ ತಮ ಮನ । ಮೆಚ್ಚಿ ದೋಹನವೇರಲಾರ್ಭಟಿ । ಹೆಚ್ಚಿ ತಾನಕರವಕೆ ಲೋಕವೆ ಅದುರುವಂತಾಗೆ ॥ ೨೩ ॥ ನಾರಿಯರು ರಥವೇರಿದರು ಪದಿ । ನಾರುಸಾಸಿರ ವೆಂಟುಸಾಸಿರ । ಚಾರು ಕೋಮಲೆಯರ ವಿಮಾನಗಳಿರಲು ಪಿಂಗಡೆಯಾ ॥ ಧಾರುಣಿಜೆ ಶ್ರೀರಾಮನೆಡೆ ಖಗ । ನಾರಿಯಾದವಿಶಾಲ್ಯ ಸೌಂಧರಿ । ವಾರಿಜಾಂಬಕನೊತ್ತಿ ನೊಳಗೊಪ್ಪಿರ್ದರವನೀಶಾ॥೨೪॥ ಬಿಟ್ಟುಲೆಂಕೆಯ ನಭಕೆಧಾಳಿಯ । ನಿಟ್ಟಿಸಿಧೇಭ್ಯನುತ ನಮುಸ್ಕರ । ವಿಟ್ಟುಬಲ ಕೇಶವರ ಬೆಂಬಳಿಯೇರಿ ಖಚರೇಂದ್ರಾ ॥ ರೊಟ್ಟಿನೊಳಗಹಿಲೋಕಸಹಬಾಂ। ಬಟ್ಟೆ ಗೈದಿದನಂತನೆನೆ ಲ । ಕ್ಷಿಟ್ಟು ತೋರಿದ ರಾಮುಚಂದ್ರನುನೊಳ್ಪಜನಕೆಲ್ಲಾ ॥೨೫॥ ದಕ್ಷಿಣಾವನಿಯುತ್ತರಕೆ ಬಹ । ಲಕ್ಷದೋರುವ ರೀತಿಯೊಳಗ । ದೃಕ್ಷರೈತರಲೆಲ್ಲ ಮೇಘಚ್ಛಾಯಸಂವರಿಪಾ ॥ ಲಕ್ಷಣಕೆ ಜನರೆಲ್ಲರಾಶ್ಚರಿ । ಸೀಕ್ಷಿಸಲು ನಭಬೆಸಲೆಯಾದವಿ । ಚಕ್ಷಣೆಯೊಳೈತರುತ ರಾಘವನಧಿಕಸಂತಸದೀ ॥೨೬॥ ಅನುಜನರಪಿ ವಿಶಾಲ್ಯ ಸೌಂಧರಿ । ಯನು ನಡಪುತಿಹ ನಿಪುಣಮತಿಯುಂ । ಬೊನಿತೆಗೆಲ್ಲವ ತಿಳುಹಿ ಮಾತೆಯರೆಡೆಗೆ ನೀನೈದೀ ॥ ಯನ ಬರವನರುಹೆನಲು ರಾಘವ । ನನುವಿನಿಂದೈತಂದು ಕೌಶಲೆ । ಯನುವಳಡಿಗೆರಗಿದಳು ಕೈಮುಗಿದೆದ್ದು ನಿಂದಿರಲೂ ॥ ೨೭ ॥ ಆರು ನೀನೆನಲಮ್ಮ ನಿಮ ಸುಕು । ಮಾರ ರಘು ತನ್ನಾಗಮುವ ವಿ । ಸ್ತಾರದೊಳು ನಿಮುಗರುಹಲೈದಿಪಿದೆನಲು ಮೈಯುಬ್ಬೀ ॥ ತೋರೆ ಮುತ್ತಿನ ಹಾರವನು ಕೊ । ಟ್ಟೊರಗೆಯ ಸೌಮಿತ್ರೆ ಕೈಕೆಯ । ಸಾರಿ ಲಕ್ಷ್ಮಣೆ ಕರಸಿ ಪೇಳ್ದಳು ದಾದೆಬಂದಿರವಾ ॥ ೨೮ ॥ ಹಿಂದೆ ಅಜ್ಞಾನದಲಿ ನಾನುವ

ಸುಂಧರಾಕ್ರಮಿಸಿದೆನು ಅರುಗುಲಿ । ಕಂದರ್ಪೈತಹರೆಂದು ಲಕ್ಷ್ಮಣನೆ ಗೂಡಿ ಕೈಕಿ ಲೆಯೂ ॥ ವಂದಿಸಗ್ರಜೆಯೊಡನೆ ಯೇರಿದ । ಳಂದು ಪೊಂಮುದಿಲವನು ಆಗ್ರ ದಿ । ನಿಂದು ನೋಡಿದರಾಗ ನಾಲ್ವರುಬಹ ಮಹಾಧಳವಾ ॥ ೨೯ ॥ ಕತ್ತನೆತ್ತಿ ತ್ತೊಲೆದು ನೋಡಿದ । ರೆತ್ತಲೂ ಚತುರಂಗವೇ ಧ್ವಜ । ಮೊತ್ತಸಂಕೀರ್ಣದಲಿ ಚಾಮರಛತ್ರದಾಭರಣಾ ॥ ದುತ್ತಮದಮನಿವೀಚಿನಭಹಳ । ಚುತ್ತಲಿರೆ ನಕ್ಷ ತ್ರಲೋಕವೆ । ಯಿತ್ತಬಹ ವೋಲಾಗೆನೋಡ್ವೆರಗಾದ ರರಸಿಯರೂ ॥ ೩೦ ॥ ಪ್ರಜ್ಞೆಯಿರದಾಲೋಕಿಸುವರಾ । ರಾಜ್ಞೆಯರಿಗಾನಿಪುಣಮತಿಆ । ಸೈಜ್ಞೆವಿಜ್ಞಾ ಪಿಸಿದಲಂಜಲಿ ತಾಳಿಯಿಂತೆಂದೂ ॥ ಪ್ರಜ್ಞಿಸಲು ನಿಮಗೆಲ್ಲರಾ ನೃಪ । ಭಿಜ್ಞೆ ಗಳನನ ಕಳುಹಿ ಅಣಸುಗು । ಣಜ್ಞ ಶ್ರೀರಘುವೆನುತ ಮತ್ತುಲಿದುಲಿದು ಪೇಳಿ ದಳೂ ॥೩೧॥ ತರಣಿಕಿರಣಗಳಡಗಿಸುವ ವುರು । ತರದ ಸಿಂಹಧ್ವಜ ವಿಮಾನ ದೊ । ಳಿರುವನೆ ಶ್ರೀರಾಮನಾತನ ಬಲದಭಾಗದಲೀ॥ ಬರುವನೆಪ್ರತಿಸೂರ್ಯ ನೆಂಬಂ । ತಿರುವಗರುಡಧ್ವಜನೆ ಲಕ್ಷ್ಮೀ । ಧರನು ಕೇಳೆಂದೊರೆದಳೆಲ್ಲವ ಪಡೆ ದಕಾರಣವಾ ॥ ೩೨ ॥ ಸೀತೆರಾಘವನೆಡೆಯ ಕುಳಿತಿಹ । ವಾತೆಸಹಿತಿಂನೆಂಟು ಸಾಸಿರ । ನೂತನೆಯರವನರಸಿಯರ ವೈಮಾನಗಳನೋಡೂ ॥ ಈತಳೀಗವಿಶಾ ಲ್ಯಸೌಂಧರಿ। ಯಾಕೆ ಸಹಿತೀರೆಂಟುಸಾಸಿರ। ರಾತಲಕ್ಷ್ಮಣನ ನೋಡು ಅವರೊ ಯ್ಮಾನಕೌಶಲ್ಯೆ ॥ ೩೩ ॥ ಅದರೊಳಗಿರ್ದ ವನಿತೆಯರು ಖಗ । ಸುದತಿಯ ರುಮಿಗಿಲಿರ್ದ ತಮತಮ । ಗಧಿಕರೂಪೆಯರೊಲವ ನೋಡಂಮಾಜಿವಯದವ ರೂ ॥ ಪದುಮನಾಭನ ಬಳಿಯೊಳಿಹನಂ । ಗದನು ರಾಘವನೆಡದೊಳಗೆಬಹ । ನದಟನಂಗಜನೆಂದು ಪೇಳ್ದಳು ಅವರವಿವರಸಹಾ ॥ ೩೪ ॥ ಆತನೆಜಾಂಬವ ನು ಅವನೊ । ತ್ತಾತನೇ ಸುಗ್ರೀವ ನಳನೆಂ । ಬಾತನೀಲಿವಗವಯವೀರಾಧಿತರೆ ಅವರೀಗಾ ॥ ಭೂತಳತಿಶಯದವರು ಸಾಹಸ । ರಾತರೇ ಕಿಷ್ಕಿಂಧಧರ ಕಪಿ । ಕೇತನರು ಯಾಕಾರ್ಯಕನುಕೂಲೆಂದ ಳಿಂದುಮುಖೀ ॥ ೩೫ ॥ ವುಂಗುರವ ನೊಯ್ದಿತ್ತು ದಾದಿಯ । ನಂಗನುದ್ಧವಚರ್ಯವನು ಮೇ । ಲಂಗದನಸಾಹವ ನೊಂದೊಂದಾಗೀವಿಸ್ತರಿಸೇ ॥ ಸಂಗಡಲೆ ತೋರಿದಳು ರಕ್ಷೋ । ತ್ತುಂಗ ದಶ ಸಿರನನುಜನಿವ ರಣ । ರಂಗಭೀಮ ವಿಭೀಷಣನು ಕೌಶಲ್ಯೆಯನೆದಾದೇ ॥೩೬॥ ಅಮಿತರಾಕ್ಷಸಬಲವನೋಡವ । ಸುಮನಸೇಂದ್ರನಿಗಪ್ರತಿಯ ಸಂ । ಭ್ರಮನು ತಾನಾಗೊಲಿದು ಬಂದಾವಿವರವೆಲ್ಲವನೂ ॥ ಕ್ರಮದೊಳರುಹಿಂನಿರ್ದ ಖೇಚರ। ರಮಣರವನಿಪರೆಲ್ಲಸ್ತ್ರೀಯರ। ಕ್ರಮವೆಸರಿಕೇಳವರಬಲವಾಕಾಶತುಂಬಿಹುದೂ॥

ಮುತ್ತುಕೆತ್ತಿದ ಬೊಂಬೆಗಳ ಸಂ । ವೃತ್ತವತಿಯರು ಯೆಂಟು ಯಿಾರೆಂ । ಬೆತ್ತಿ ಬೀಸುವಚಾಮರದ ಮಧ್ಯಿನಪಹಿಮಕರರಾ ॥ ಚಿತ್ತರದ ಛತ್ರಡಿಯೊಳಗೆಕಳೆ। ವೆತ್ತ ಬಲಕೇಶವರು ಪುಣ್ಯನು। ವೆತ್ತದರಿ ಕೌಶಲ್ಯೆಸೌಮಿತ್ರೆನಲು ನಿಪುಣಮತೀ ॥೩೮॥ ಮುಂದೆಬರುವ ಆಗಾಡಿಯೊಳು ನಿಮ । ಕಂದರವರೇ ಭರತ ಶತ್ರು । ಘ್ನಂದುಸಾವಿಸ್ತಾರವರಿಸಿದ ನಿಪುಣಮತಿಗೆಲ್ಲಾ ॥ ಸೌಂಧರವಗ್ಗೆದಾತ್ಮಜರಸಿರಿ। ಯಂದಬಂಧುರಕಾಶ್ಚರಿಸಿ ನಯ। ನೇಂದಿರಗಳಲಿ ಸುರಿಯೆಸಂತೋಷಾಶ್ರು ಕೌಶಲೆಗೇ ॥೩೯॥ ನೋಡಿಸುತರಾನಂದಶರಿಧಿಯೊ । ಳಾಡಿದಳ್ಃಸೌಮಿತ್ರೆ ಹರುಷವ । ಗೂಡಿ ಕೈಕಾದೇವಿ ಲಕ್ಷ್ಮಣೆನಲಿವ ಸಮಯದಲೀ ॥ ಮಾಡಿಸಿದ ಭರತೈದಿಶೋಭೆಯ । ನಾಡುಸಹಿತಯೋಧ್ಯೆಯನುಹೋಗ। ರಾಡಿಸಿದಮೇಲ್ಕಟ್ಟು ತೋರದಷ್ಟಶೋಭೆಯಲೀ ॥ ೪೦ ॥ ಲೆಂಕೆಮೊದಲಾದ್ವಗರಪಟ್ಟಣ । ಬಿಂಕದೊಳಗಿರಲವಕೆ ಸರಿಪುರ ! ದಂಕುರಿಲ್ಲೆಂದಿರೆ ವಿಭೀಷಣನಂಗಜಂಗದರಾ॥ ಶಂಕೆಹಾರಿತಯೋಧ್ಯೆಯಿಹ ಸ್ವ । ರ್ನಾಂಕಿತದ ರತ್ನಾವಲಂಬನ। ಜೇಂಕರಿಸೆ ಕಣ್ಣನಕೆ ಆವೂರೆಂದು ಕೇಳಿದರೂ ॥ ೪೧ ॥ ನಕ್ಕರಾಘವನೀಸೊಬಗುಸ್ವ । ರ್ಗಕ್ಕೆ ಅರಿದಾದೀಶ್ವರನ ಜನ । ನಕ್ಕೆ ವಿಬುಧೇಶ್ವರನು ನಿರ್ಮಿಸಿಲಾದುದದರಿಂದಾ ॥ ಮಿಕ್ಕದೆಲ್ಲಾನಾಡಸಿರಿಗೆಂ । ಬಕ್ಕರಾಡಿದರಂಗಜಾದಿಯ । ಪಕ್ಕಿಚರರಾದ್ಯಖಿಳ ಭೂಭುಜಸೇನೆ ಸಹವಾಗೀ ॥ ೪೨ ॥ ನಿಲಿಸಿನಭಗಾಮಿಗಳ ನಂತರ । ನಿಲಿಸಿಯಿಳೆಗಾಮಿಗಳ ಧರೆಯೊಳು । ಕೆಲವು ನೃಪರಾಪ್ರಾಣ ಮಿತ್ರರೊಳಿಳಿದು ಪುಷ್ಪಕವಾ ॥ ಬಲಹರಿಗಳಿಳೆಯಾಣ್ಮೆ ಸೌಂಧರಿ । ಲಲನೆಯರೊಳರಮನಿಗೆಬರಸತಿ । ಬಲವೆಬಂದರು ಯಿಳಿದುವೈಮಾನವರ ಬೆಂಬಳಿಯಾ ॥ ೪೩ ॥ ಪೊಕ್ಕುವುರು ಪರಮೇಶನಾಲಯ । ಲಿಕ್ಕಿವಂದನೆಯನ್ನು ಚತುರ್ಭವ । ಸೊಕ್ಕು ಮುರಿದತಿಶಯದಕೇವಲಿಯರುಹ ಪರಮಾತ್ಮಾ ॥ ಚೊಕ್ಕಮುಕ್ತೀಶಮಲ ಕಾಂತಿಯ । ನಿಕ್ಕಿದನುಪಮ ಚಿನ್ಮಯನೆಯಮ । ನಿಕ್ಕುದಾಸುಖದಲ್ಲಿ ಯಂದರುರಾಮಕೇಶವರೂ ॥೪೪॥ ಅರಮನೆಯಬಾಗಿಲಿಗೆ ಬರುವನಿ । ತರಲಿಕೌಶಲೆಮಿತ್ರೆಯರುಅನು। ಚರಿಯರಿಂದಾರತಿಯಲಿಡಿಸಿಳಿತರಲು ಸಂತಸದೀ ॥ ಬರುವರಡಿದಾವರೆಗೆ ಮೌಲಿಯ। ವರರತುನತುಂಬೆಗಳ ನೆರಗಿಸಿ । ದರನು ಯೆತ್ತಾಲಿಂಗಿಸಾನನ ತೊಳೆದರಾಶ್ರುವಿಲೀ ॥ ೪೫ ॥ ಸುತರೈಶ್ವರ್ಯಾಬ್ಧಿಯೊಳು ಮುಳು । ಗುತಲಿಶೇಲುವ ಮಾತೆಯರನುಂ । ನತದಸಿಂಹಾಸನದಿಕುಳ್ಳಿರಿಸೆರಗೆಮುತ್ತೊಮ್ಮೇ ॥ ಜತೆಯಕಿರಿಮಾತೆಯರ ಪದಕನು । ಮತಿಯೊಳೆರಗಿದರಪ್ಪಿಮುತ್ತೊಂ । ದತಿಶಯಾನ್ವಿತಪೀ

ಠದೊಳು ಕುಳ್ಳಿರಿಸೆ ಮಾತೆಯರೂ ॥೪೬॥ ಸ್ಮರನಸಿಂಧೂರದೊಲು ತೂಗುತ। ಧರಣಿಜೆಯು ನಡೆತರಲು ಲಕ್ಷ್ಮಣ। ನರಸಿಯಾದ ವಿಶಾಲ್ಯ ಸೌಂಧರಿ ಸಹಿತಲ ತ್ತೆಯರಾ ॥ ಚರಣಕೊಂದಿಸಿದರನುಕಾರಣ। ಪುರುಷಿಯರು ನೀವೆಂದುಆಲಿಂ। ಗರೆದು ಕುಳ್ಳಿರಿಸಿದರು ಬಲಹರಿ ಬಲದ ಭಾಗದೊಳೂ ॥ ೪೭ ॥ ಬಂದರೊಧು ಗಳು ಗುಂಪುಗಂಪುಗ। ಳಿಂದಲತ್ತೆಯರಡಿಗೆ ವಂದಿಸಿ। ಬಂದು ಕುಳಿತರು ರಾ ಮಣಕ್ಷ್ಮಣರೆಡೆಯೊಳೆಡಬಲದೀ ॥ ವಂದುಜಾವಹವರಿಗೆ ಆಸತಿ। ವೃಂದವಂ ದನೆಯಾಯ್ತು ವೋರ್ವರಿ। ಗಿಂದಲೋರ್ವರು ಚಲುವೆಯರು ನೋಡೆಲ್ಲ ಬೆರ ಗಾಗೇ ॥ ೪೮ ॥ ಅಷ್ಟರಗ್ರ ವಿಭೀಷಣನು ಖಗ। ಶ್ರೇಷ್ಟ ಜಾಂಬವಸೂರ್ಯ ಜಂಗಜ। ನಿಷ್ಟ ಸುಗ್ರೀವಾನುಜರು ನಳನೀಲಗವಯಾದೀ ॥ ಶ್ರಿಷ್ಟಿಗತಿ ಶಯ ರೂಪುಬಲವು। ತ್ಕೃಷ್ಟ ವೈಭವರೈದಿವಂದಿಸಿ। ದಿಷ್ಟರನುವಿವರಿಸಲು ವೇತ್ರಿ ಗರಾಗ ಕೌಶಲಿಗೇ ॥೪೯॥ ಅವರುಮಾಡಿದ ಕಾರ್ಯಸಹಿತನು। ಭವವಗೊಳಿ ಸಲು ನೋಡಿ ಹರುಷದಿ। ದಿವಿಜವರರಿವರೆಂದು ಆಶ್ಚರಿಸಂಗಜನ ನೋಡೀ ॥ ಅವನ ಕರದೊತ್ತಿನಲಿ ಕೈವಿಡಿ। ದವನಿಜೆಯ ಸುತನಾಗಿ ನೀನೆನ। ಕುವರರನು ಗೆಲಿಸಿದೆಯ ಜಗವೀರೆಂದಳಿಂದುಮುಖೀ ॥ ೫೦ ॥ ಅಪರದಾರ್ಜಿತ ಕಂದನೀ ಗಿನಿ। ತುಪಚರವನುಡಿದ ಪರೆಯುವರಿಂ। ಸುಪವಿತರ ಕಾರಣದಿ ರಘುವರ ನೂ ಳಿಗಾಶ್ರಯವೂ ॥ ಲಪಿಸಿತೆಂಬನು ಸಹಿತಲಲ್ಲ। ಲ್ಲುಪರಿಪೀಠದೊಳಿರಿಸಿ ಆಸ್ತ್ರೀ ಯು। ಪರಜನಸಹಿತಿಡಿಸೆಶಾಸೆಯ ಮಾತೆ ಕಂದರಿಗೇ ॥ ೫೧ ॥ ಮುತ್ತಿನಕ್ಷತೆ ತಳಿಸಿ ಆರತಿ। ಯೆತ್ತಿಸಾ ಸ್ತ್ರೀಯರೊಳು ಪಟ್ಟವ। ನಿತ್ತು ನಾಲ್ಕೆಂಟ್ಟನಕೆ ದಿ ವಿಜಾಂಗನೆಯೊರಿಂದ್ರರೊಲೂ ॥ ಬಿತ್ತರಿಪರೀಕ್ಷಿಸಪರಿಗೆಮುಮ। ತೆತ್ತುದಲ್ಲದೆ ಹದಕೆನಿಲದಿಂ। ದತ್ತಲೀಕ್ಷಿಸಲ ರುಹನಡಿಗಳ ಧ್ಯಾನಿಸುತಲೆಲ್ಲಾ ॥ ೫೨ ॥ ಕಲಿಲಹರ ಮುನಿಸೂವ್ರತಾಂತ್ಯದಿ। ಚಲಿತರಾದಾ ರಾಮಲಕ್ಷ್ಮಣ। ರೊಲ ವಿನೀ ಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದಮುನ। ಮೊಲಿದುಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೫೩ ॥

ಅಂತು ಸಂಧಿ ೭೩ ಕ್ಕಂ ಪದನು ೪೨೭೩ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ನಾಲ್ಕನೆಯ ಸಂಧಿ.

ರಾಮ ಕೇಶವರ ಆಸ್ಥಾನದ ಸಂಧಿ.

ವಾಲಗಿಪ ನೃಪ ಖಗರು ಸುತ್ತ ನೃ। ಪಾಲರೈದಿಪ ಕಾಣ್ಕೆ ಕೈಕೊಳು। ತೋಲಗದೊಳೆಸದಿರ್ದ ರಮರೇಂದ್ರರೊಲು ರಘುವರರೂ ॥ ಪದನೂ ॥

ಭೂಮಿಪತಿಯುವಧರಿಸು ಆರಘು। ರಾಮ ಲಕ್ಷ್ಮಣ ಯಿನಸೆಸಿಯರೆಡೆ। ಭಾಮೆ ಸೀತೆ ವಿಶಾಲ್ಯಸೌಂಧರಿ ಭಾಯೆ ರೋಹಿಣಿಯಾ ॥ ರಾಮನೋಹರ ರಾವೃತದಲಭಿ। ರಾಮೆಯಂತಾರಾ ಪ್ರಕೀರ್ಣ ಸು। ನಾಮೆಯರೊಲಿರಲತ್ತಿ ಯರು ಸಂಪೆತ್ತ ಮುದಗೊಳಲೂ ॥ ೧ ॥ ಇರಲು ಯಾತೆರದಲ್ಲಿ ಭರತನಿ। ಗೊರೆದ ರಾಘವನೆಲ್ಲಿ ನೃಪ ಖಗ। ವರರ ಸಂತೈಸೆನಲು ಆಕ್ಷಣವೆಲ್ಲ ಜನಕೆಲ್ಲಾ ॥ ಅರಮನೆಗಳುಲುಪುಚಿತಗಳವಿ। ಸ್ತರದಿ ಮಾಡಿತೆಲ್ಲರನು ಸ। ತ್ಕರಿಸಿದನು ಶತ್ರುಘ್ನಸಹ ಭರತೇಶ ಸಂಪ್ರಿಯದೀ ॥ ೨ ॥ ನೋಡೆ ನಳನಾಕ್ಷಣವೆ ಖಗರಿಗೆ। ಜೋಡಿಸಿದನತಿಶಯಗಳನು ಕೈ। ನೀಡಿದಂತಾ ಕಲ್ಪಕುಜ ಸುರಧೇನು ಬಲದಿಂದಾ ॥ ಮಾಡಿಸಿದ ರಾಘವನ ಪುಣ್ಯವ। ನಾಡಲುಂಟೇ ನರರು ಸುರರೊನೆ। ದಾಡಲಸದಳವೆಂದ ಗೌತಮ ಚೇಳಿನೀಪ್ರಿಯಗೇ ॥ ೩ ॥ ಅಂದಿನೊಳಗೆಲ್ಲರ ಸ್ವಸ್ತಿಸಿ। ಮುಂದಣುದಯದಿ ನಿತ್ಯ ಕರ್ಮದ। ಹಿಂದೆ ದಿವಿಜಾಭರಣವಾಲಂಕ್ರುತ ವಿರಾಜಿಸುತಾ ॥ ಬಂದ ಲಕ್ಷ್ಮಣ ಭರತ ಶತ್ರು। ಘ್ನೊಂದಿನಲಿ ಶ್ರೀರಾಮಚಂದ್ರನು। ಅಂದಿನೋಲಗಸಾಲೆ ಚಲುವಿಕೆ ಕೇಳು ರಾಜೇಂದ್ರಾ ॥ ೪ ॥ ಭಿತ್ತಿನೀಲದಿ ವಜ್ರದೊಳು ಪೊಳೆ। ವೆತ್ತ ಕಂಭಗಳಗ್ರ ಪದಳದಿ। ಬಿತ್ತರಿಪ ಬೋದಿಗೆಯ ಮರಕತ ತೊಲೆಯು ಕುರುವಿಂದಾ ॥ ಕೆತ್ತಿದನುಪನು ಮುಚ್ಚಳಗಳಿಂ। ಬಿತ್ತಮುತ್ತಿನ ಲಂಬಣದಿ ಮೇ। ಲೆತ್ತಿ ಪೀತಾಂಬರದಮೇಲ್ಕಟ್ಟಾಗ ರಂಜಿಸಿತೂ ॥ ೫ ॥ ಕಸ್ತುರಿಯ ಸಾರಣೆಯು ಸಹ ಕಂ। ಪೆಸ್ತ ಜೌವಾದಿಯಲಿ ಕಾರಣೆ। ವಿಸ್ತರಿಸಿದೊಡ್ಡೋಲಗಾಲಯ ಜನರ ನೇತ್ರಗಳಾ ॥ ಅಸ್ತ್ರಿಸಿತು ತನ್ನಲ್ಲಿಯಮರದಿ। ದುಸ್ತರೆನಿಸಿರಲದರ ಮಧ್ಯದಿ। ವಿಸ್ತರದ ಸಿಂಹಾಸನಲಂಕೃತ ಗೈದುದತಿಸೊಗಸೆ ॥ ೬ ॥ ಕೆತ್ತಿ ನವರತ್ನಗಳ ಮಿಸುನಿಯ। ವೊತ್ತಿದಿಂ ಪಂನೊಂದು ನೆಲೆಯ। ಗ್ರೆತ್ತಿ ಮುತ್ತಿನ ಆತಪತ್ರವು

ರತ್ನಕಲಶದಲೀ ॥ ಹೊತ್ತಿ ನೊತ್ತರನಂಗಕಾಂತಿಯ । ನೊತ್ತಿ ಮೆರೆಯುತಲಿ ರುವದನು ಪುರು । ಷೋತ್ತಮನು ಸಹಿತೇರಿದನು ರಘುಜೇಂದ್ರನೊಯ್ಯವದೀ ॥ ೭ ॥ ಕುಳಿತರಗ್ರದಿ ಬಲದಿ ಲಕ್ಷ್ಮಣ । ಕುಳಿತ ನೆಡದಲಿ ಸೀತೆ ಕುಳಿತಿರೆ । ನಳಿನನಾಭನ ಬಲದಭಾಗ ವಿಶಾಲ್ಯಸೌಂಧರಿಯೂ ॥ ಕುಳಿತರೆಡೆ ರತ್ನಾಭೆ ತಾರಕಿ । ಮಿಳಿತ ಸುಪ್ರಭೆ ಸಹಿತ ನಾಲ್ವರು । ಬಳಸಿ ಕುಳಿತರು ರಾಘವನಬಳಿ ಪಟ್ಟನಾರಿಯರೂ ॥ ೮ ॥ ಕುಸುಮಮಂಜರಿ ಲಕ್ಷ್ಮಿ ಮೇನಕಿ । ಬಿಸಜಮು ಖಿ ಶ್ರೀಮಾಲೆ ಜಿತಪ । ದ್ಮೆ ಸರಸತಿ ಕಲ್ಯಾಣಮಾಲೆಯು ಮತ್ತೆ ರತಿಮಾಲೇ ॥ ಪೆಸರ ಪಟ್ಟದ ಮಹಿಷಿರಷ್ಟದಿ । ಬಿಸಜನಾಭೆಸದಿರಲು ಆಗೀ । ಕ್ಷಿಸುವರಿಗೆ ನಯನಾಮೃತದ ಸೊಂಪಾಗಲವನೀಶಾ ॥ ೯ ॥ ನೀಡುತಿಹ ಬೆಳ್ಳಲೆಯಸತಿ ಯರ । ಗಾಡಿಡಿಗ್ಗಿಸುತಿಹುದು ಸಭೆಯರ । ತೀಡುತಿಹಯುಲರಾಲಿ ವಟ್ಟಲು ಯೇಲಜಾಫಲವಾ ॥ ನೀಡುವರುಚಿಲಿಪಾಲು ಪಂನೀ । ರೂಡುವರ ಆಭರಣ ರವದಲೆ । ದಾಡಿಸಿತು ಆಸಭೆಯ ನೃಪವರರುತ್ತಮಾಂಗವನೂ ॥೧೦॥ ಹತ್ತ ನೆಯ ನೆಲೆಯೊಳಗೆ ಭರತನ । ವತ್ತಿನಲಿ ಶತ್ರುಘ್ನರಿಂನೊಂ । ಬತ್ತನೆಯನೆಲೆ ಯಲ್ಲಿ ಆಸದಳನಾವಿಭೀಷಣನೂ ॥ ಮತ್ತೆ ಜಾಂಬವ ಕಪಿವರೇಶ್ವರ । ರೊತ್ತಿ ನಲಿ ನಳನೀಲಗವಯಡಿ । ಯೊತ್ತಿನಲಿ ವೀರಾಧಿತನು ಅನಿಲಜನ ಮೈದುನನೂ ॥೧೧॥ ಹೀಗೆ ಕ್ರಮದಿಂ ಮುಖ್ಯರನು ಯಿರಿ । ಸಾಗ ಖೇಚರರನ್ನು ಬಲಗಡೆ। ಗಾಗಿ ಭೂಭುಜರೆಡದ ಭಾಗದಿ ನಿಲಿಸೆ ರಾಘವನೂ ॥ ಮೇಗಣಂಗಜನಂಗದ ರನೆದು । ರಾಗಿ ಸಕಲ ವಿಚಾರಣೆಗೆ ಗೊ । ತ್ತಾಗಿ ನಿಲಿಸಿದತನಗೆ ಸಮಗಜನ್ವೈರಿ ಪೀಠದಲೀ ॥ ೧೨ ॥ ಮಿಗಿಲವಿನಿಯೋಗಜರು ತಮಗೊ । ತ್ತಗಳಲನುಸರಪಿರ ಲು ಕವಿಗಮಕಿಗಳು ವಾದಿಯು ವಾಗ್ಮಿ ಪಾಠಕ ವೇತ್ರಧಾರೆಗಳೂ ॥ ಹೊಗಳು ತಿಹರಿಂನಿರ್ದಸಭೆವರ । ರಗಣಿತಾಗಿರಲಾಗ ನರ್ತನ । ಸೊಗಸೆಯರು ನರ್ತಿ ಸಲು ಗೀತ ಮೃದಂಗರಾಗದಲೀ ॥ ೧೩ ॥ ಗೊತ್ತು ಪದಿನಾರೆಂಟು ಸಾಪಿರ । ದತ್ತಣಂತರ್ಭಾಗದೊಳಗರು । ವತ್ತು ನೂರಾಸ್ಸಾಸಿರವು ರಾಜಾದಿ ಪದ್ಧತಿ ಯಾ ॥ ಸುತ್ತಿದವನಿಪರಲದೆ ಬಹು ವಿದ । ವೆತ್ತ ನಾನಾ ಜಾತಿ ಜನಕಿಂ । ಬಿತ್ತುದೊಡ್ಡೋಲಗದ ಸಾಲೆಯು ರಾಮನೈಯ್ಯವದಾ ॥ ೧೪ ॥ ಅದರ ಅ ಗಲುಚ್ಛೇದವನು ಪೇ । ಳ್ವದಕೆ ಅನುಗೊಡದಾತ ಗಿರುವಂ । ತದನು ಪೇಳುವ ಶಕ್ತಿ ಕವಿ ಗುಂಟಿದನು ಗುಣಿಸಿಂನೂ ॥ ಸದನ ನಿರ್ನಯಗೈಲು ಗಮಕಿಗೆ। ವ ದಗುವದು ಅದರಿಂದಲೀನಾ । ಲ್ವದರಗುಣ ಬೇರಾದುದವನೀನಾಥಚಿತ್ರೈಸೂ॥

ಕವಿಯು ಮಾಡಲು ಬಲ್ಲನದರ | ರ್ಥವನು ಭೇದಿಪ ಗಮಕಿ ತಂನೋ | ಕ್ತ್ರವನು ಗೆಲಿಸುವನವನೆ ವಾದಿಯು ಸರ್ವರನು ಮೇಚ್ಚೀ || ಸುವನೆ ವಾಗ್ಮಿಕನೆಂಬ ನಾಲ್ವಿದ | ದವರು ಸಹಿತಿಂನಿರ್ದ್ದಚಕ್ರಿಯ | ಸವಿನಯ ದೊಳೆ ಸೆದಿರ್ದ ರಾಘವನಂನೋಲಗದೀ || ೧೬ || ಆಸಮಯದೊಳ ಗಮರಯುತಿ ತನು | ಭಾಸಗೊಳಿಸುತಬರಲು ಆಬಲ | ವಾಸುದೇವೆದುರೆದ್ದು ಗದ್ದುಗೆ ಕೊಡಿಸಿವಂದಿಸುತಾ || ಈಸುದಿನವೆಲ್ಲಿರ್ದಿರೆಮಕದ | ನಾಸುರದ ತರವರಿಯಲಿಲ್ಲೆನ| ಲಾಸಮಯ ಬಂದಿರ್ದ್ದೆನೆಂದುಸರಿರ್ದನೆಲ್ಲವನೂ ||೧೭|| ಕಟ್ಟೆ ಕಾಶಿಯ ನಾರಿಯರು ನೆಲ | ಮುಟ್ಟೆ ಮುಟ್ಟದರೀತಿಯೊಳು ಲಘು | ವಿಟ್ಟು ನಾಂಟ್ಯವನಾಡುತಿಹ ಗಂಧರ್ವರಂದದಲೀ || ವಟ್ಟೆ ಹಿಮ್ಮೇಳಗಳು ಕೂಡನು | ಬೊಟ್ಟು ನೋಡುವರಿಂಗೆ ಮನಕಡೆ | ಮುಟ್ಟಲಿಲ್ಲಾ ಸೊಗಸ ನೋಡುತಲೆಸೆದ ಶ್ರೀರಾಮಾ ||೧೮|| ದೀನಯಾಚಕರಾಲಯದಿ ಸುರ | ಧೇನುಗಳನಾವರಿಸಿ ಕಾಮಸು| ಧೇನುವೆನಸಿರಲೀವರಲ್ಲದ ಯಾಚಕಾವಾಚಾ|| ಮಾನಿಸಿದ ಜಲ್ಮಾಂತರಕುಅದ| ಕಾನರಾಧಿಪನಾಳ್ವ ರಾಜ್ಯಭಿ | ದಾನವಾಯಿತು ರಾಮರಾಜ್ಯವನೀಶ ಚಿತ್ತೈಸೂ ||೧೯|| ಕೊಡುವರಲ್ಲದೆ ದಾನಕನು ಕೈ | ಗೊಡದಲಾದಿ ಬ್ರಾಹ್ಮಣರು ಇರ | ಲಡವಿಯೊಳಗಿಹ ಪರಶುರಾಮನ ಕಾಲದೊಳಗಾದಾ || ನಡತೆ ರೇಣುಕಿಯಂಬಳನು ಕೈ | ಹಿಡಿದು ತಾಪಸವಂಶವೆನಿಸಿದ | ನಡಸಿದನು ಜಮದಗ್ನಿನಕುಲರ ಬ್ರಹ್ಮಕುಲವೆನಿಸೀ || ೨೦ || ಇರಲಿ ಯಿತ್ತಿದು ರಘುಜನೆಡೆಗೈ | ತರುವ ತ್ರೈಖಂಡವನಿಪರ ಗೊ | ತ್ತಿರದೆ ಬಹರನವರತಲಾತೆರಕೈದಿ ಸಾಷ್ಟಾಂಗಾ || ವೆರಗೆದರೆ ರಘುಲಕ್ಷ್ಮಣರುದಿಂ | ಬೊರಗಿ ನೋಡುವರಲ್ತೆ ಪ್ರತಿಯು| ತ್ತುರಗಳಿಲ್ಲಾ ನೃಪಪದ್ಧತಿಯಂದನಾ ಮುನಿಪಾ ||೨೧|| ಪ್ರೀತಿಯೊಳಗೇನಾದರೂ ಗ್ಕೆ | ವಾತರಲ್ಲದಲವರ ವೈಭವ | ಕಾತೆರಕೈಮುಗಿಯದಾನತಗೈವ ಬಂದ್ಕಟ್ಟೊ || ಭೂತಳೇಶರದಿನ್ನು ಕಪ್ಪವ | ನೀತಳದಿ ಬಹರೊಂದು ದಿಕ್ಕಿಂ | ಬಾತು ಬಹದು ಸಹಸ್ರಭಾರವು ನಿತ್ಯ ಪ್ರತಿಯಲ್ಲೀ || ೨೨ || ಭಾರವಂದಕೆ ಹೇರುವಿಂಶ | ತ್ಕೇರೆಯಲಿ ಗಜವೋಷ್ಟ್ರಗಳ ಹೊರೆ | ಹೇರಿ ಬರುದೀಮೇರೆ ದಿಕ್ಕೆಂಟರಲಿ ದಿನ ದಿನದೀ || ಧಾರುಣೀಶರು ಕಳುಹುತಿಹದನು | ದಾರಿಸುತ ಬಲಕೇಶವರು ಹಯ | ತೇರುವಾ ರಣಪಾಯ ದಳವಾರ್ರೈವುತಿಹ ರರಸಾ ||೨೩|| ಕೋಟಿ ನಾಲ್ವತ್ತೆರಡು ಲಕ್ಷದ | ಕೂಟ ಗಜತೇರನಿತೆ ಹಯನವ| ಕೋಟಿ ಯಿಪ್ಪತ್ನಾಲ್ಕು ಯೋಜನ ಯಿಳಿವ ಪಾಯ್ದಳದಾ || ಕೂಟ

ಚತುರಂಗ್ವ್ಯಂತ್ರ ಖಗಸಂ । ಕೂಟದಿಂದ ಷಡಂಗಬಲಕನು। ಕೂಟದಿಂದಾ
ರೈವನೃಪಸೇಖರರ ಅನವರತಾ ॥ ೨೪ ॥ ಇನಿತುಬಲ ಲಕ್ಷ್ಮಣಗೆಯಿದರ ।
ರ್ದಿನುವ ಪದ್ಧತಿ ರಾಮನಿಗೆ ಯಿವ । ರೆನಿಸುವರು ಬಲವಾಸುದೇವರು ಯಂಬ
ರಿತರಾಗಾ ॥ ದನುಜಪತಿ ಪ್ರತಿವಾಸುದೇವನು । ಯೆನಿಸುತಿಹನಿವಗಾ ಸುದ
ರ್ಶನ। ಜನಿಸಿದಾಗಿಂನೆಲ್ಲ ಪದ್ಧತಿ ವಿಸ್ತರಾಗಿಹುದೂ ॥ ೨೫ ॥ ತಿಳಿವುದೀ
ಕ್ಷತ್ರಿಯರ ನಿರ್ನಯು । ಗಳಲಿ ತ್ರೈಖಾಂಡಾಳುತಿಹ ಬಲ । ನಳಿನನಾಭರಿಗೆಲ್ಲ
ಪದ್ಧತಿಯೇಕಮಾರ್ಗವದೂ ॥ ತಿಳಿಯಪಟ್ಟುದೆ ಮೂರುಖಾಂಡವು । ನಳಿನ
ಲೋಚನಗಾಬಲಗೆ ಸಂ । ಮಿಳಿತವಲ್ಲದಲಿಲ್ಲ ಬೇರಿಂನವನಿನೃಪರುಗಳಾ॥ ೨೬ ॥
ಯಲ್ಲ ವೈಭವವರ್ಧ ನೃಪಧರೆ । ಯಲ್ಲವಂದೇ ಮೂರುಖಾಂಡಗ । ಳಲ್ಲೆಹಂ
ಚಿಕೆ ಪೂರ್ವದಿಂ ಬಲಕೇಶವರ ಮೇರೇ ॥ ಯಲ್ಲಿ ಯಾಳುತಲಧಿಕ ಸಂಪದ ।
ದಲ್ಲಿಯಿರುತಾ ಲೆಂಕೆಯನೆಕೊ । ಟ್ಟಲ್ಲಿ ಗೈದಿಸಲಾ ವಿಭೀಷಣನೊಂದುದಿನದಲ್ಲೀ
॥ ೨೭ ॥ ಯಿನ್ನು ಯಿರ್ವನಿಪರ ನೆಲೆನೆಲೆ । ಗನ್ನು ಖರವರರವರ ಪಟ್ಟಣ ।
ಕನ್ನು ಕಳುಹಿದ ರಾಮ ಲಕ್ಷ್ಮಣರಂಗಜನ ನೋಡೀ ॥ ನಿನ್ನಬಿಟ್ಟರಲಾರೆನೆನೆ
ಪೋ । ಗೆನ್ನಲಾ ಪೋಗೆನಲು ಮಿತ್ರತೆ। ಗನ್ನು ಸಂತ ಸಗೈದು ಕೊಟ್ಟರು ವಾರ
ಣಾಸಿಯನೂ ॥ ೨೮ ॥ ಭರತನಿರ್ಮಿತ ಭರತಪುರದೊಳ । ಗಿರಿಸುತಂಗದ
ನಾದಿ ದಶರಥ । ಗರಸಿದಾಯೋಧ್ಯೆಯಲಿ ಜಾಂಬವನನುಜ ಸುಗ್ರೀವಾ ॥
ನಿರಿಸಿ ಶತ್ರುಂಜಯದೀ ನಳನಾ । ವರಜ ಸಹಿತಿರಿಸಿದನು ಕಿಷ್ಕಿಂ । ಧ್ಪುರದಿ
ಹಂಚಿದರೆಲ್ಲರಿಗೆ ಧರೆ ರಾಮಲಕ್ಷ್ಮಣರೂ ॥ ೨೯ ॥ ಭಾಗ ನಾಲ್ಕರೊಳೊಂ
ದು ಅಂಗಜ । ಗಾಗಲೆಂಟರೊಳಂಗದಗೆ ಯಿಾ। ಯಾಗಮದಿ ಮಿಗಿಲರಿಗೆ ಕೊ
ಟ್ಟರು ಪಾಲು ಸರಿಯಾಗೀ ॥ ಆಗಲವರವರಂಗನೆಯರನು। ರಾಗದಿಂಕರಸಲ್ಲೆ
ಯಿರುತಿರ । ಲಾಗ ತಂಮಯ ಮಂತ್ರಿಗಳ ಕಳುಹಿರ್ದರಾ ಸ್ಥಳಕೇ ॥ ೩೦ ॥
ಕೊಟ್ಟು ಅವರವರನು ಸರಿಗೆಸರಿ। ಗೊಟ್ಟು ವಡ್ಡೋಲಗದಿ ಲಾಸ್ಯವ। ನಿಟ್ಟೆ
ಸುತ ಸಂಗೀತ ಶಾಸ್ತ್ರಗಳಾದಿ ಹಾಸ್ಯಗಳಾ ॥ ನಿಟ್ಟೆಸುತತಟಗರಾನೆ ಕು। ಕ್ಕುಟ
ಜಟ್ಟಿಗಳ ಭಾರಣೆಯು ಮೊದಲಾ । ದೊಟ್ಟುಗಳಲಾ ಕಾಲವೆಸ್ರುಜ್ಜಿಸುವರಾ
ನೃಪರೂ ॥ ೩೧ ॥ ಇರದೆ ವಂದಿನ ಬಂಜೆನಿತ್ಯವು । ಗರೆವ ಷಟ್ಕರ್ಮಗಳು
ವಿದ್ಯಾ। ಧರರನೆರವಿಯಲೆಲ್ಲ ಧರೆ ಚೈತ್ಯಾಲ್ಯ ದರುಶನವಾ ॥ ಗರೆವರೊನಜಲ
ಕ್ರೀಡೆಯನು ವಿ। ಸ್ತರಿಸುತಿಹರ ನವರತ ಲಕ್ಷ್ಮೀ । ಧರರು ಬಿಡದರೆಘಳಿಗೆ
ಯಗಲದಲಂಗಜಂಗದರಾ ॥ ೩೨ ॥ ದೇವ ನರ ವುರುಗೇಂದ್ರರಿಗೆ ಸಮ ।

ಭಾವಭೋಗೆನುತಿಹರು ಜನಸಂ । ಭಾವತೋರದು ನೇತ್ರಕಗ್ರಧಲೋಕ ಭೋ ಗಗಳೂ ॥ ಈ ವಿದವೆ ಅವಕುನ್ನತದಿ । ಪ್ರತಿಗಾವದಿಂ ನೀರಾಮಲಕ್ಷ್ಮಣ । ದೇವರೇ ತ್ರೈದೇವರೆನುವರು ಲೋಕನಾಯಕರೂ ॥ ೩೪ ॥ ನಿಲುಕಡಿಲ್ಲದ ಭೋಗದಲಿ ಬಹು । ಲಲಿತರಾಗಿರಲರಸರವನಿಜೆ । ಕಲಿಲಹರನಪಚಯವು ಮೊದಲಾದಾರು ಕರ್ಮಗಳಾ ॥ ನಲವಿನಲಿ ಪ್ರಿಯಗುಣದ ಕಾದಿಯ । ಜಲವ ಕೊಳ್ಳದ ಭಕ್ತಿಯಲಿ ನಿ । ಶ್ಚಲಿತಳಾಗಿಹಳೆಲ್ಲ ಸತಿಯನಿಸಿಹಳು ಜನಜನಿತಾ ॥೩೫॥ ಆಗಲವರಾಚಾರ ಭೋಗದ । ಸಾಗರದಿ ಕೊಡನೀರ ತಂದಂ । ತಾಗಿ ಪೇಳಿಹೆನೊಬ್ಬ ಸತಿತುತ್ತನ್ನ ವಂದೊಸ್ತಾ ॥ ಸಾಗಿನಲಿ ಸಂತವಿಪರೆಷ್ಟೊ ಸ । ರಾಗದಲಿ ಜನರೆಲ್ಲರಾ ತೆರ । ವಾಗಿ ಯಿಹರೊರ್ನಿಸಲು ಬಾರದೆ ಮರ್ತ್ಯಕವಿ ಗಳಿಗೇ ॥ ೩೬ ॥ ಇರಲಿ ಯಾತೆರದಿಂದ ತ್ರೈಧರೆ । ಗರಿದು ಯೆನಿಪಸಹಾ ಯಸತ್ವದ । ಪರಮುಸತ್ವದಿ ಸರ್ವ ನೃಪರನು ಮಿತ್ರರಂದದಲೀ ॥ ನೆರವಿಯೊ ಳಗೆರವಿರದೆ ಹಿಮಕರ । ನಿರವಿಯೊಳು ಜನರಕ್ಷಣೆಯನನು । ಕರಿಸಿ ಲಕ್ಷ್ಮೀ ರಮಣರೆಸೆದರು ಅರುಹ ಸ್ಮರಣೆಯಲೀ ॥ ೩೭ ॥ ಕಲಿಲಹರ ಮುನಿಸೂವ್ರ ತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನಿಃ ಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿಡಮನ । ಮೊಲಿದುಲಾಲಿಸಿ ಮುಕ್ತಿಯರಸನ ಕಥೆಯಸದ್ಬುಧರೂ ॥೩೮॥

ಅಂತು ಸಂಧಿ ೭೪ ಕ್ಕಂ ಪದನು ೪೨೫೮ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ತೈದನೆಯ ಸಂಧಿ.

ಭರತನ ವೈರಾಗ್ಯದ ಸಂಧಿ.

ಭರತನ್ವೈರಾಗ್ಯವನು ನಿಲಿಸಿ । ಅರಸ ಶತ್ರುಘ್ನನಿಗೆ ಬೇಡಿದ ।
ಪುರವಕೊಟ್ಟನು ಕಾದಿ ಗೆಲಿದನು ಮಧುಮಹಾಸುರನಾ ॥ ಪದನೂ ॥

ಅರಸ ಕೇಳೊಯ್ಖುವದಿ ರಾಘವ । ತರುಣಿಮಣಿಯರ ನೆರವಿಯಲಿಭೂ।
ವರರ ವಿದ್ಯಾನಾಯಕರ ಸಂಗತಿಯೊಳೆಲ್ಲರಲೀ ॥ ಸರಸಸತ್ಕಲೆವೆರಸು ಲಕ್ಷ್ಮೀ
ಧರನು ಸಹಿತಾನಂದಶರಧಿಯ । ತೆರೆಯೊಳೋಲಾಡುವರು ದಿನಚರಿಸತ್ಕಲಾಪ
ದಲೀ ॥ ೧ ॥ ಇರಲು ಭೋಗುಪಭೋಗದಲಿ ಸಕ । ಲರಲಿತಾವೇ ಮರ್ತ್ಯ
ಲೋಕಕೆ । ವರಶಿಖಾಮಣಿಯಾದ ರಾಘವನೊಳಗೆ ಸೌಮಿತ್ರೀ ॥ ವರೆದಭರ
ತಗಯೋಧ್ಯೆಪುರವರ । ದರಸುತನ ಬೇಡಿದನು ಶತ್ರು । ಘ್ನರಿಗೆ ದಯಮಾಡೆಂ
ದನಲವಿನೊಳೊಂಧುದಿನದಲ್ಲೀ ॥ ೨ ॥ ಹಾಗೆ ಯೋಚನೆಗೈದು ರಾಘವ । ನಾ
ಗಲನುಜಗೆ ಪೇಳ್ದನಾ ಬರುವಾ । ಗಲೇ ಯವರೊಶಕೆ ।ಸೇನೆಯನೊಪ್ಪಿಸಿದೆವ
ಲ್ಲಾ ॥ ಆಗಲವರೊಶಸೇನೆನಾವಡಿ । ಯಾಗಲಿಲ್ಲವೆ ಬದಲುಆಡಳಿ । ತಾಗಿಯಿ
ಹದೇನೆಂದ ಲಕ್ಷ್ಮಣನೊಡನೆ ದಾಶರಥೀ ॥ ೩ ॥ ಇತ್ತು ಅವಸಿಯಸೆಲ್ಲರಿಗೆ
ಕಳೆ । ಯೆತ್ತಿಸಿದ ನಮ್ಮಣುಗರಿಗೆ ಸಂ । ಪತ್ತಕೊಡಲಿಲ್ಲೆಂಬ ಸಂಗಟವವರ
ಮಾತೆಯರಾ ॥ ಚಿತ್ತದೊಳಗಿಹುದಾಗಿ ತೋರ್ಪುದ । ಕಿತ್ತುಮಂನಿಸಲುಚಿತ
ವೆನೆ ಪುರು । ಷೋತ್ತಮಗೆ ಹಾಗಾಗಲೆಂದನು ರಾಮನೊಂದಿನದೀ ॥ ೪ ॥
ಗರೆದುವಾಲಗವುುಂದೆ ಕುಳಿತಿಹ । ಭರತ ಶತ್ರುಘ್ನರಿಗೆ ಕೌಶಲ । ದರಸುತನ
ಯುವರಾಜಪದವಿಯ ಗೊಳಿಸಬೇಕೆಂದೂ ॥ ವರೆದು ಪೂರ್ವದೊಲಾವು ಅವ
ರಡಿ । ಯಿರುವರೇ ಸರಿಯುಂದ ಲಕ್ಷ್ಮೀ । ಧರಗೆ ವರೆದನು ನೀಲವಸ್ತ್ರಾಭರಣ
ರಾಘವನೂ ॥ ೫ ॥ ಹಾಗೆ ಮಾಡಿಸಲುಚಿತವೆನಲದ । ಕಾಗಿ ಭರತನುಯುದ್ದು
ಆನತ । ನಾಗಿ ಯುದ್ದಂಜಲಿಯ ತಾಳಿಂತೆಂದ ಪಿತನೊಡನೇ ॥ ಪೋಗುತಿರಲಿ
ನಗಡ್ಡಿಯನು ನೀ । ವಾಗಿ ಮಾಡಿದರಂಮುಕೈಕಿಲಿ । ಗಾಗಬೇಸರವೆಂದು ನಿಂ
ದೆನು ದೇವರೆನೆ ಭರತಾ ॥ ೬ ॥ ನೀವು ಬರುವರೆಗಾನು ಅಸಕೀ । ತ್ಯಾಗವ
ಲಂಬನನಾಗಿ ಬದುಕಿದ । ಜೀವನವೆ ಸಾಕೆನಗೆ ನಿಮುಥರೆ ನಿಮುಗೆವೊಪ್ಪಿಸಲೂ॥

ಈವರಿಗೆ ಕಾದಿರ್ದೆ ನಿನುಸಾ । ದಾವಲಂಬನಗೀಗಲೇ ಗತಿ । ಗಾವಿಸಂದೆವ
ದೆರಗಿ ಹೊರಟನು ಭರತರಾಜೇಂದ್ರಾ ॥ ೭ ॥ ಬೇಡವೆನುವಗ್ರಜನನುಡಿ ಕಿವಿ
ಗೂಡದಲೆ ನಡೆಯುತಿರೆ ಅನುಜನ । ನೋಡಲೆದ್ದನು ಚಕ್ರಿ ತ್ರಿಜಗದ್ಭೂಷಣಸ್ತ್ರಿ
ಯನೂ ॥ ಹೂಡಿರುವ ಪರಿಯಂತರದೊಳೊಡ । ಗೂಡುವರಿಗಾ ಕೈಕೆಯರ
ಬರ । ಮಾಡಿ ಯನುಜನಿಗಡ್ಡನಿಂದನು ಭರತಗೆನುವರೆಗೇ ॥ ೮ ॥ ಮೂರುಸಾ
ಸಿರವಯುದಕೋಮಲ । ನೀರೆಯರು ಭರತೇಶನ್ನೈದುವ । ದಾರಿಗಡ್ಡೈಸೊತ್ತಿ
ಮುತ್ತಿದರಂಗಕೋಂಟೆಯನೂ ॥ ಸೂರೆಗೊಂಡುವಿರಾಗಮನಮದ । ವಾರಣವ
ಸೀಳುವರ ಕುಚದಕ । ಠಾರಿಗಳ ಘಾಯದಲಿ ಸೊಕ್ಕಿದಅನುಜಗಿಂತೆಂದಾ॥೯॥
ಜ್ಯೇಷ್ಟನೇ ಪಿತನೆಂದು ಲೆಂಕೆಯೊ । ಳಿಷ್ಟನುಡಿ ಯಿಟ್ಟೊಡನೆ ಮೀರುವ । ದಿ
ಷ್ಟವೇ ನಿನಗಾಗಬಾರದು ಮಾತೆಗುಬ್ಬಸವಾ॥ ನಿಷ್ಟಗೊಳಿಸುವುದುಚಿತವಲ್ಲೆಂ ।
ಬಷ್ಟರಲಿ ನಿಜಮಾತೆ ಬಂದು । ತ್ಕೃಷ್ಟಶೋಕಾಲಿಂಗಿತದಿ ಪ್ರತಿಬಂಧಿಸಲು
ಸುತನಾ ॥ ೧೦ ॥ ಪಿಡಿದು ಲಕ್ಷ್ಮಣಗೈಯ್ಯ ರಘುವರ । ನಡಿಯ ಅನುಸರ
ಗಾಯ್ವುದೇ ನಮ । ನಡತೆಗಳವೆ ಸದ್ಗತಿಗೆ ಸೋಪಾನಲದೆ ಬೇರಿಂನೂ॥ ವ
ಡೆವುದೇ ನಿಂನೆರಡುದಿನ ಮನ । ಹಿಡಿವುದೆಮ್ಮೆಬ್ಬೆಟ್ಟ ದಪಕೀ । ರ್ತ್ತಿಡಪಿತೆಂ
ಬಾವೈದಲೊಡ ನಿನ್ನೆಡೆಯಲೆಮಗಿಲವೇ ॥ ೧೧ ॥ ಪೋಗದಿಹುದೀಗೆಂದುಬೇ
ಡುವ । ನಾಗಿ ಲಕ್ಷ್ಮಣ ಸ್ತ್ರೀರುದುಃಖಿಪ । ರಾಗಿ ಅಳಲುವ ಮಾತೆಗಪ್ರತಿಯು
ತ್ತರವ ಕೊಡಲೂ ॥ ಸಾಗದಿರುವಾ ಭರತನು ಚ । ನ್ನಾಗಿ ತ್ರಿಜಗದ್ಭೂಷಣ
ಸ್ತ್ರೈನು । ವಾಗಿ ನೋಡುತ ಕೀರಿಬ್ರುಂಹಿತಗೊಳುತಲೊಲೆದಾಡೇ ॥ ೧೨ ॥
ತೂಗಿ ನಿಗಳಸ್ತಂಭವನು ಮುರಿ । ದಾಗ ಭರತನಯಡೆಗೆ ಬಂದನು । ರಾಗದಿಂ
ಶುಂಡಿಲದಿ ನೀವಳಿಸಾಶ್ರುಗಳ ನಿಡುವಾ ॥ ನಾಗವೀಕ್ಷಿಸುತನುಜನಗ್ರಜ । ವೇಗ
ತಲೆಯೊಲೆದಾಡಿದರು ಕೈ । ಕಾಗವಿಸ್ಮಯ ಸ್ತ್ರೀಯರೇನೀ ಚರ್ಯವೆಂದೆನುತಾ
॥ ೧೩ ॥ ಯಂದಿನದೊ ನಿನಗಿದಕೆ ಯಿಾಯನು । ಬಂದ ಮಿತ್ರತೆಯದನು ಕೇ
ಳ್ಪೋ । ಪೆಂದು ವಡಬಡಿಸನುಜನಂಬಿಕೆ ಸ್ತ್ರೀಯರನು ಕಳುಹೀ ॥ ಸಿಂಧುರ
ದನ್ವೈತಡಹಿ ಅದಬಿ । ಟ್ಟೆಂದಿರಾಂಬಕ ಭರತಸಹಿತನು । ವಿಂದಬಂದನು ರಾಘ
ವನ ಸಂನಿಕಟದಲಿ ಕುಳಿತೂ ॥ ೧೪ ॥ ಭರತರಾಜನಿಗುಲಿದುದನು ಮುದ ।
ಕರಿಗೆ ಜನಿಸಿದ ಪ್ರೀತಿಯನು ವಿ । ಸ್ತರಿಸಿ ಯಿರಲಾ ಆನೆ ಆದಿನ ಕವಳ ವುದಕ
ವನೂ ॥ ತೊರೆದುನಿಂದಿರೆ ಮಾವತಿಗನದ । ನೊರೆಯಲರಸನು ಕೇಳಿವಿಸ್ಮಯ।
ಗರೆದು ನಿಗಳವಿಸ್ರುಜ್ಯಗೊಳಿಸಿಂನಂದಿನುದಯದೊಳೂ ॥೧೫॥ ನೋಡಿಭೇಷಜ

ರನಲು ಔಷಧ । ಮಾಡಿದರೆ ಬಾಯ್ತೆರೆಯದಿರಲದ । ನೋಡಿಮರುಗುತಲಿರಲ್ಕು ವಂದೆರಡಾಹ್ನಿಕದಿ ನಿಲಲೂ ॥ ಕೂಡದಲೆ ಬಳಲಿಂದ ಕಾಲ್ಮಡಿ । ಯೂಡಿಕುಳಿತಿಹ ಗಜದಯಿರವನು । ನೋಡಲೈದಿದ ರಾಮ ಲಕ್ಷ್ಮಣರನುಜರೊಡಗೂಡಿ ॥ ೧೬ ॥ ಬರುತಲಿಹ ಗಜದಿರವ ನೀಕ್ಷಿಸು । ತೊರೆದ ಅನಶನಕೀಗ ಸದ್ಗತಿ । ದೊರೆವುದೆಂದುಪದೇಶಗೊಳಿಸುತ ಸ್ವಾರ್ಥದೇಹವಿದು ॥ ಧರೆಗೆಸುಪವಿತ್ರೆಂದು ನಾನಾ । ತೆರದ ಫಲಪುಷ್ಪದಲಿ ಅಪಚಯು । ಗರೆಸೆ ಬಲಕೇಶವರು ಅದು ಧರೆಗೆಲ್ಲ ಪಸರಿಸಲೂ ॥ ೧೭ ॥ ಬಂದು ಕೌಶಲ್ಯಾದಿ ನೃಪಸತಿ । ವೃಂದ ಪುರಜನ ದೇಶಜನರೈ । ತಂದು ರಾಘವನೆಸಗುತಿಹ ಪೂಜೆಯನು ಮನಮೆಚ್ಚೀ ॥ ಸಿಂಧುರವ ಪೂಜಿಪನೆಯೇ ಮಹಿ । ಮಿಂದ ಮಾಡುವನೆಂದು ಜನಸಂ । ಮಂದಿಸೆಸಗಿದರೆಲ್ಲ ಕರಿಮುಖನೆಂದು ಪೂಜೆಯನೂ ॥ ೧೮ ॥ ಪಂಚ ಭಕ್ಷ್ಯಗಳಾದಿ ಪೂಜಾ । ಸಂಚಿತದಿಯುಪಚರಿಸಿ ಫಲತೆರ । ದಿಂ ಚತುರ ಕೊಂಡಾಡುತಿರಲೈದನೆಯ ದಿನದಲ್ಲೀ ॥ ವಂಚಿಸಾತನುವಾತ್ಮ ಸ್ವರ್ಗಕೆ । ಸಂಚಿಸಲು ಜಯಘೋಷದಲಿ ಶಬ । ಸಂಚಕರಿಸಿದರೆಲ್ಲ ಕ್ರಮದೊಳು ರಾಮಲಕ್ಷ್ಮಣರೂ ॥೧೯॥ ಕೂಡೆ ಕರಿಮುಖನೆಂದು ವಿಗ್ರಹ । ಮಾಡಿಸಾ ಯಡೆ ಗುಡಿಯೊಳಗೆ ಬಿಜ । ಮಾಡಿಸಪಚಯುಗೈಸಲೆಲ್ಲಾ ನಾಡಜನರೆಲ್ಲಾ ॥ ಮಾಡಲಾತೆರವೇನು ಭರತನ। ನೋಡಿ ಮರುಕೆನೆ ಶ್ರೇಣಿಕನೆ ಮುಂ । ದಾಡುವರು ತದ್ಭವವನೀಗಿರಲೆಂದ ಗೌತಮನೂ ॥ ೨೦ ॥ ಈ ತೆರವನೇಕೆಸಗಿದನು ರಘು । ಜಾತನೆನೆ ನಾರದನನುಡಿಗನು । ಸೋತು ನಡೆವನು ಲಕ್ಷ್ಮಣನನುಡಿ ಪೂರದಗ್ರಜನೂ ॥ ಯಾತಕಾದರು ಮುನಿಯೆ ಮುಖ್ಯವ । ನೀತಳದೊಳಾ ಕಾಲಕವರನು । ವಾತನದರಿಂದಾಯ್ತು ಕೇಳ್ಮಂದೆನಲು ಮುನಿನಾಥಾ ॥ ೨೧ ॥ ಇದ್ದುವಾಲಗದಲ್ಲಿ ವಮೌಲಿಯು। ತಿದ್ದಿ ಭರತನಯನ್ನ ನುಡಿಗನು । ಬದ್ಧಗೊಳುದೆನೆ ರಾಜ್ಯಭಾರವನುಳಿದು ಯಿಂನೇನೂ ॥ ಬುದ್ಧಿಯುಪ್ಪಣೆಯಾದ ರೀತಿಯೊ । ಳಿದ್ದು ಜೀವಿಪೆನೆನಲು ಅನುಜನ। ಶುದ್ಧ ವೈರಾಗ್ಯವನು ಮೆಚ್ಚಿದ ರಾಮನೊಳಿಂತೆಂದಾ ॥ ೨೨ ॥ ಭರತನಾಖ್ಯದಿ ಪೌದನಾಪುರ । ವಿರಲಿ ಯೆನುತಾ ಕಿರಿಯ ಶತ್ರು । ಘ್ನರನು ನೀಕ್ಷಿಸಿಪೇಳ್ದ ನಿನಗೀವೂರಪಟ್ಟನನೂ ॥ ಗರವೆನೆನಲೊಲ್ಲೆನಲು ಮತ್ತೀ । ಪುರವುಬೇಕೆನಲೊಲ್ಲೆನೊಂದಾ । ಗಿರುವೆ ನಿಮ್ಮಡಿಯನಲು ರಾಘವನೋಡಿಯಿಂತೆಂದಾ॥೨೩॥ ಆಗಲಾತೆರ ನಿನ್ನಹೆಸರಿನೊ । ಳೀಗಲೊಂದಿರಲಾವ ಪುರಬೇ । ಕೀಗವಿಯನೆ ದೇವರೀತೆರಕೇಳ್ದ ಬಳಿಕೆನಗೇ ॥ ರಾಗವಿಡಿ ಮಧುರೆಯನು ಯನಲದ । ರಾಗಿ

ಅನುಮಾನಿಸಿದರಾಘವ । ನಾಗದದು ಮತ್ತೊಂದ ಬೇಡೆನಲದನೆ ಬೇಕೆನಲೂ॥ ಅದರೊಳಿಹ ದಶಶಿರನ ಅಳಿಯನು। ಅದಟಲವಣಾರ್ನವನು ಯಂಬನಿ । ಗೆದುರ ರಿಲ್ಲೀಲೋಕದೊಳಗವನೈಯ್ಯ ಮಧುವಿಂಗೇ ॥ ತ್ರಿದಶಪತಿ ಶೂಲವನು ಕೊಟ್ಟ ಹ । ಸದೆದು ಸಾಹಸ್ರರನು ಬಹದಂ । ತದರ ಕಾರಣ ಬೇಡವೆನೆ ಶತ್ರುಘ್ನಗವನೀಶಾ ॥ ೨೫ ॥ ಮತ್ತು ಅದನೇ ಬೇಡಲಾ ಪುರು । ಷೋತ್ತ ಮಿತ್ತು ಅಭೇದ್ಯಕವಚಸ। ವೆತ್ತ ಶಾರ್ಙ್ಗಯು ಅಗ್ನಿಶರಸಹಿತಧಿಕ ಬಲಗೂಡೀ ॥ ವತ್ತಿಗಸ ದಳಭರತನು ಬೆಂ । ಬತ್ತಿಗೈದಿಸಲಾಗ ಶತ್ರು । ಘ್ನತ್ತನಡೆದನನೇಕವಾದ್ಯದ್ಮೊರವಿನೊಳಗರಸಾ ॥ ೨೬ ॥ ತಳುವದೈದಿಸು ಪುಣ್ಯಭಾಗೆಯ । ಹೊಳೆಯನುತ್ತರಿ ಸಿಳಿಸಿಬೀಡನು । ಬಳಿಕಕಟ್ಟಾಪೌಜಿನೊಳಗಾ ಭರತಶತ್ರುಘ್ನಾ ॥ ದೊಳವು ತಿಳಿಯದ ರೀತಿಯಲಿ ಮೂ । ವ್ವಳಸಿದರು ಬೇಗೈದಿ ಬಾಣದ । ಮಳೆಯ ಸುರಿದರು ಸುತ್ತಗಜಿಬಜಿಯಾಯ್ತು ಪುರದಲ್ಲೀ ॥ ೨೭ ॥ ಆತನುಂನತಬಲವು ಬಂದಿದು । ರಾತರುತ್ತರಿಸುತಲಿ ಭರತನು । ಜಾತನಿಲಲೊನದಲ್ಲಿ ಮಧುಜಲಕ್ರಿಡೆಯನುಗೈವಾ ॥ ಮಾತಕೇಳುತ ಚರಣಮೂಲದೊ । ಳಾತನಿದ್ದೆಡೆಗೈದಿ ಬಹುಕದ । ನಾತುರದಿ ಮುತ್ತಿದನು ನಂದನವನವನಾಭರತಾ ॥೨೮॥ ಬಹಳ ಕದನವ ಮಾಡಿ ಬಲಬೆಂ । ನಹದನರಿದೂರೆಲ್ಲ ಬೊಬ್ಬೆಯ । ಗಹಿಸಲಾರ್ಭಟೆ ಯೇನುಯನೆ ಲವಣಾರ್ನವಸುರೇಶಾ ॥ ಗಿಹ ಚರಿತ್ರವಪೇಳಲಾ ಮನೆ । ಗುಹೆಯನುಳಿದ ಗಜಾರಿಯುಂಬೋ । ಲಹಿತ ಸಂಹರ ಹೊರಟ ಸರಳಿನ ಹನಿಯನೆರಚುತಲೀ ॥ ೨೯ ॥ ಪುರದಜನ ಕಂಗೆಟ್ಟು ಅಹಿತರ । ಶರದ ತಾಟೂತೂಟನಲಿ ಮುಂ। ದೊರಗುತಿಹರಟ್ಟೈದಿ ಬರುತಿಹ ಸಹಸ ಭಟರುಗಳಾ ॥ ನೆರವಿಗೆಲುವನು ಕಂಡು ಶರವಾ । ವರಿಸಿ ಕರಚರಣುತ್ತಮಾಂಗವ । ತೊರಿಸಿ ವಿಗ್ರಹವಟ್ಟ ಬಹ ಲವಣಾರ್ನವದ್ಭುತದೀ ॥ ೩೦ ॥ ಬಿಟ್ಟ ಶರಮುಂದಿಟ್ಟು ಬಹದಪ । ರಿಟ್ಟ ಶರಸಂಘಟ್ಟವನು ಅ । ಟ್ಟಟ್ಟೆ ಬಹರಿಪುವಾಹಿನಿಯ ಸವ್ಯಾಪಸವ್ಯದಲೀ ॥ ಕುಟ್ಟಿ ಬಹ ಜನರಟ್ಟೆಗಳಹರ । ಹಿಟ್ಟು ಪುರಹೊರ ಬಹಿರಿಗನು ಖಡಿ। ದಟ್ಟ ಬಹ ಲವಣಾರ್ನವನ ಶೂರರಿದು ಭಯದಿಂದಾ ॥ ೩೧ ॥ ವಂದು ದಿಕ್ಕಲಿ ಮುರಿದ ಬಲವರಿ । ದಂದು ಲಗ್ಗೆಯಪಿಡಿದ ಬಲಭಯ । ದಿಂದ ದಿಕ್ಕೆಂಟರಲಿ ಯಿಳಿದೋಡಿದರು ಕೋಂಟೆಯನೂ ॥ ಕೊಂದನೆರಡಕ್ಷೋಹಿಣಿಯ ಸಾ । ಪಿಂದ ಮಲಗಿಸಿ ಬರುವನರಿದೈ । ತಂದರೊರಲುತ ತಿರುಗಿನೋಡುತ ದಿಕ್ಕುಯಿಲವೆನುತಾ ॥ ೩೨ ॥ ಭರತ ಶತೃಘ್ನರನು ಬಹು ಬಲ । ಕರರು ಯೆನುತೈದಿದೆವು

ಆರಘು । ವರಜರೆನುವದ ಬೇತಕೆಮರಾಕ್ಷಸರ ಬಲಿಗಿಟ್ಟೊ ॥ ತೆರಳಿದರೊ ಯಂತೆಂಬ ನುಡಿ ಸಟಿ । ವರನು ಕೃತಮುಖ ಕೇಳಿ ಮುಂದೊ । ತ್ತರಿಸಿ ಬರೆ ಶತ್ರುಘ್ನನಿಂ ಬೀಳ್ಕೊಂಡು ಯ:ದುರಾಗೀ ॥ ೩೩ ॥ ನಿಲ್ಲು ಲವಣಾರ್ನವನೆನಿನ ಕೈ । ಯಲ್ಲರಗ್ರಲದಿವರ ಯದುರೊಳ । ಗಿಲ್ಲವೆಂದುದುರಿಸುತ ಬಹುಶಸ್ತ್ರಗಳ ನೈತರುವಾ ॥ ನೆಲ್ಲೆಯನೊ ನೀ ಮಾವನೊಯ್ರ್ರಗ । ಳಲ್ಲಿ ಯಾರೆನಲವರ ಸೇನಾ । ವಲ್ಲಭೆನೆ ನೀನ್ನೈದಿ ಕಳುಹವರೆಂದನಸುರೇಂದ್ರಾ ॥ ೩೪ ॥ ಯಾತಕೆನೆ ಕುದ್ಭಾದೆಗೋಸ್ಕರ । ರಾತೆರದಿ ಬಿದ್ದಿಹನಕೂಡೆ । ನ್ನಾತುರವೆ ಆನಾಲ್ವರೊಳ ಗಾವೈದಿ ಬಂದಿಹನಾ ॥ ಈತಳಕೆ ಕಳುಹಾತನೊಳಗೊಂ । ದ್ಮಾತನಾಡುವೆನೆಂಬ ಮಧತನು । ಜಾತಗಾ ಕೃತವಕ್ತ್ರನೆಂದನು ನಗುತಲವಸೀಶಾ ॥ ೩೫ ॥ ವೃಶ್ಚಿಕದ ವಿಷ ವಿಳಿಸಲರಿಯದೆ । ಗಚ್ಚಿಪೆನು ಗರುಡಾರಿ ವಿಷವೆಂ । ಬುಚ್ಚನೋಲೊಂತುತ್ತನುಂಗಲು ಸಂಗಟವಗೊಳ್ವಾ ॥ ನಿಚ್ಚಿಸಿದ ಗಿರಿಯರಗಿಸುವೆನೆಂ। ದುಚ್ಚುವರೆಬಿಡು ನುಡಿಯನಿಲ್ಲೆಂ । ದೆಚ್ಚನಾಕೃತವಕ್ತ್ರ ಲವಣಾರ್ನವನ ಮೂದಲಿಸೀ ॥ ೩೬ ॥ ಸ್ವಲ್ಪನುಡಿಯಿಟ್ಟಂನಸತ್ವದ । ವಲ್ಪ ಕೊಂಡಾಡುವನೊಳಹಿತನು । ಜಲ್ಪದಿಂ ಬಹು ಸಮರವನು ಗೈದಸುರನಾತ್ಮಜನಾ ॥ ಬಲ್ಪನೋಡೆಳೆಗೋಲಿನಲಿ ಸಂ । ಕಲ್ಪಗೊಡದಸ್ತ್ರಗಳ ಜನನವಿ । ಕಲ್ಪಗೊಳಿಸುವ ನೆಡೆಗೆ ಬರೆ ಶತ್ರುಘ್ನ ಖತಿಯಿಂದಾ ॥ ೩೭ ॥ ನಿಲ್ಲು ಮಂತ್ರಿಯೆ ಯಂನ ಕೋರಿದ ನಲ್ಲಿ ನಾನೋಳ್ಪೆಂದುಮುಂದೈ । ದೆಲ್ಲರಿಗೆಕಿರಿಯಾತನಾ ಶತ್ರುಘ್ನನೆಂನೊಡನೇ॥ ಸೊಲ್ಲಿಸುವೆನೆಂದದನುತೋರಿಂ। ನೆಲ್ಲಿ ನೋಡುವೆನೆಂಬನಾ ವೃತ । ದಲ್ಲಿ ಮುಚ್ಚಿದಸರಳನ ಸುರಸುಕುಮಾರ ಮೇಲ್ವಾಯ್ದು ॥ ೩೮ ॥ ಬಂದವಂ ಖಂಡಿಸುತ ಮೇಲೈ । ತಂದವಂ ತಿರುಗಿಸುತ ತೊಡುವೆಡೆ । ಕೊಂಮಕೋಶವ ಖಡಿದು ಧ್ವಜಬಿಲ್ಕೊಲನಿಖ್ಖಡಿಸಿ ॥ ನಿಂದಸೀಸಕ ಕವಚವನು ಮಾ । ರ್ಕೊಂದು ಅಗ್ನ್ಯಸ್ತ್ರದಲಿ ಆದನು । ಜೇಂದು ಶಿರವನು ಖಡಿದ ಶತ್ರುಗ್ನೊಂದೆ ಬಾಣದಲೀ ॥೩೯॥ ಮೊರೆಯೆ ಜಯಘೋಷ ಹಿತಸೇನೆಗೆ । ಗರೆದು ಭರವಶ ವೂರಠಾಣ್ಯಕ್ಕಿರಿಸಿ ಮಂತ್ರಿಯ ಭರತನೆಡೆಗೈತರಲು ಶತ್ರುಘ್ನಾ ॥ ಪರಮುಬಲ ಮಧುಸಮರದಲಿ ವ । ತ್ತರಿಪ ಭರತನ ಸಾಹಸಕು ಸುತ । ನೊರಗಿದೆಂಬಾ ಕಹಳೆ ರವ ಶೂಲಿರದಲೊತ್ತಿನಲೀ ॥ ೪೦ ॥ ಯಾತಕೆಮಗೈಶ್ವರ್ಯ ತೀರಿದ । ರೀತೆರದ ಹತದಿಂದ ಗತಿಗೆಡು । ವಾತನೀತ ಚಚ್ಚ ಚ್ಚ ದಶಶಿರನೆಂದು ವೈರಾಗ್ಯಾ ॥ ವಾತುಭರತನ ಶಸ್ತ್ರಸನ್ಯಾ । ಸಾತತನೆವಿನೀಡಾಡಿ ಸ್ವರ್ಗನಿ । ಕೇತನವ ಸೇರಿದನು

ಮಧುಸನ್ಮಾರ್ಗಕರಿದುಂಟೇ ॥ ೪೧ ॥ ಗೆದ್ದು ಆತನ ಬಲ ಸಹಿತ ಬರು । ತಿದ್ದ
ಅಗ್ರಜಗೆರಗಿದನಯ । ತ್ರಿದ್ದುರ್ಗ ಪುತ್ತ್ರರಮಧುರೆಯೊಳಗಿರಿ ಸನುಜನಾಭರತ॥
ಬದ್ಧವಣರವದಿಂದಲೈತಂ । ದಿದ್ದ ಸುದ್ದಿಯನರುಹಿದನ ರಘು । ಮುದ್ದುಗೊಳಿಸಿ
ದಕೇಶವಾನಂದಿಸಲು ಅದಕೇಳಾ ॥ ೪೨ ॥ ಕೇಡಿಗರೊಳವನೋರ್ವನೇಬ ।
ಲ್ಕೇಡಿಗನು ಯಿಂನೋರ್ವನಿಹಹಂ । ಟ್ಕೋಡಿಯನೆ ನಾರದನು ರಾಘವ ನೋ
ಡಿ ಅವನಾವಾ ॥ ನಾಡಪತಿಯನೆ ವಿಜಯಗಿರಿಯಿ । ತ್ನಾಡಶ್ರೇಡಿಯ ರತ್ನಪುರ
ಕನು । ಜೋಡನವನಿಗೆ ರತ್ನಧರನೆಂಬಾಖ್ಯವಾತನಿಗೇ ॥೪೩॥ ಇಂದುಮುಖಿ
ಯಂಬಂಗನೆಯ ಬೊಸು । ರಿಂದ ಮನೋರಮೆ ಯಂಬಳುದಿಸಿದ । ಳಂದಚಂದ
ದಬೆಡಗು ಬಿಂಕವ ಪೇಳ್ವಡರಿದೆಂದಾ ॥ ವಂದು ದಿವಸಲೈದಲಾರೋರ । ನೆಂದ
ಖಗನೊಳು ಲಕ್ಷ್ಮಣನೆ ಸರಿ । ಯಂದೆನದ ಕುದ್ರೇಕಿಸುತ ಪೊರಮಡಿಸಿದೆನ ಖ
ಚರಾ ॥೪೪॥ ಯಾತಕೆನೆ ದೈತ್ಯೇಶನನು ಕೊಂ । ದಾತ ನಾದುದಕೆಂದಡದು
ನಿನ । ಗೇತಕೆನೆ ತನಮಿತ್ರನೆಂದವನುಳಿದು ತ್ರೈಖಾಂಡಾ ॥ ದಾತರಹಿತಿಲ್ಲೆನ
ಲು ಮುನಿಬೆಸ । ನಾತು ಬಂದತಿಸಮರದೊಳು ಪಿಡಿ । ದಾತಸಹ ಮನೊರಮೆ
ಯತಂದನು ಚಕ್ರಿಗೆದುರ್ರ್ಯಾರೂ ॥ ೪೫ ॥ ಕಟ್ಟು ಸಹಿತಿಡಲಂಣನಡಿಯೊಳು ।
ಬಿಟ್ಟು ಮೈದಡಹಾತನನು ಸರ । ವಿಟ್ಟು ಲಕ್ಷ್ಮಣಗಾ ಮನೊರಮೆ ಯುದ್ವಹ
ವಾಗೈದಾ ॥ ದಿಟ್ಟ ರಾಘವ ಸಹಿತ ಲಕ್ಷ್ಮಣ । ಗಿಟ್ಟು ವಃದನೆ ಮೂರು ಖಾಂ
ಡನು । ಬಟ್ಟ ನೃಪರಿಂದೆಸೆದರೊಂದಾನೊಂದು ಶುಭದಿನದೀ ॥ ೪೬ ॥ ಇಂದು
ವದನೆ ವಿಶಾಲ್ಯಸೌಂಧರಿ । ಹಿಂದೆ ಮನೊರಮೆರೂಪವತಿ ಯರ । ವಿಂದಮುಖಿ
ವನಮಾಲೆಲಕ್ಷ್ಮಣೆ ಅಭಯಮತಿಯಂಬಾ ॥ ಳೊಂದಿನಲಿ ಕಲ್ಯಾಣಮಾಲೆಯು।
ರಿಂದಜಿತಪದ್ಮೆಂಬರೇಣ್ಬರಿ । ಗಂದುಪಟ್ಟವಗೈದ ಲಕ್ಷ್ಮೀರಮಣನೋಹಿಲದಲೀ
॥೪೭॥ ಇವರು ಮೊದಲೀರೆಂಟುಸಾಸಿರ । ಯುವತಿಯರ್ಗಧಿಪತಿಯುಲಕ್ಷ್ಮಣ।
ನವನ ಅಗ್ರಜ ರಾಮದೇವಗೆ ಸೀತೆ ಶ್ರೀಕಾಂತೇ ॥ ಯವಳ ಹಿಂದಲೆ ರತಿಪ್ರ
ಭಾವತಿ । ಯುವತಿಯರು ನಾಲ್ವರಿಗೆ ಮಹಿಷ । ತ್ಸವರು ಸಹಿತಿಂನೆಂಟುಸಾಸಿರ
ಸ್ತ್ರೀಯರು ರಾಮನಿಗೆ ॥ ೪೮ ॥ ಇರಲು ಕೆಲದಿನ ಸುಖದಿ ಪಿರಿಸೌಂ । ಧರಿಗೆ
ಶ್ರೀಧರಪೃಥ್ವಿತಿಲಕನ । ವರಜನರ್ಜುನ ವಿಮಲರಾಮಾನುಜನುಅಭಯಮತೀ॥
ವರಜ ದಶರಥ ಪಾರ್ಶ್ವನೆಂಬೇ । ಣ್ಬರುಲಕುಮಾರರು ಪಟ್ಟವರ್ಧನೆ । ಯರಿಗೆ
ಲಕ್ಷ್ಮೀಧರಗೆ ಜನಿಸಿದರಾಗ ಕ್ರಮದಿಂದಾ ॥ ೪೯ ॥ ಇರಲು ಯಾಕ್ರಮದಿಂದ
ತ್ರೈಖಾಂ । ಡರಸುತನದಲಿ ನಾರಿಯರ ಮನೊ । ಹರದಿ ನಿತ್ಯೋಡ್ಡೋಲಗದಿ

ಜಲಕ್ರೀಡೆ ಮೊದಲಾದಾ ‖ ಹರುಷದಲಿ ಬಲಕೇಶವ ಸ್ಮರ । ತರುಣಿ ಜನ ಮಿತ್ರತೆಯೊಳನಘನ । ಸ್ಮರಣೆಯೊಳಗೆಸದಿರ್ದರಾ ಕೌಶಲ್ಯ ನಗರದಲೀ ‖೫೦‖ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ‖ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ‖ ೫೧ ‖

ಅಂತು ಸಂಧಿ ೭೫ ಕ್ಕಂ ಪದನು ೪೩೫೭ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ತಾರನೆಯ ಸಂಧಿ.

ಕುಶಲವರ ಜನನದ ಸಂಧಿ.

ಬಿಡಲು ಸೀತೆಯ ವಜ್ರಜಂಘನು । ಯಿಡಲು ಗೃಹದೊಳು ಕುಶಲವರನ । ಲ್ಪಡದಳಿರ್ದಳು ಪುಂಡರೀಕಿಣಿ ಪುರದೊಳೊಲಹಿದಲೀ ‖ಪದನೂ‖

ಅರಸಕೇಳಾ ರಾಘವನು ಸ । ಚ್ಚರಿತೆಯರೊಳೊಲವಿರಲು ಲಕ್ಷ್ಮೀ । ಧರನು ರತಿಯಾನಂದದೊಳು ಸನ್ಮಿತ್ರರೊಲವಿನೊಳೂ‖ ಧರಣಿಪರ ಮರ್ಯಾದೆ ಕಾಣ್ಕೆಯ । ತರುವರನು ಮಂನಿಸುತ ಮಂಗಳ । ಕರದಿ ಧರ್ಮಾನಂದರಾಗಿರಲೊಂದುದಿನದಲ್ಲೀ ‖೧‖ ಸೀತೆ ರುತುಮತಿಯಾಗಿ ಸಾನವ । ನಾತು ಮೌಕ್ತಿಕ ಭೂಷಣವು ಸಹಿ । ತಾ ತಳೋದರಿ ಶುಭ್ರವಸನವನುಟ್ಟು ತದ್ದಿರುಳೂ ‖ ಪ್ರೀತಿಯೊಳು ರತಿಕೇಳಿ ಸುಖಸಮ । ನೂತನದೊಳಿರ್ದಿಷ್ಟನೊಳು ನಿ । ದ್ರಾತುರದೊಳಿರಲಾಯ್ತು ಬೆಳಗಿನ ಝಾವದೊಳು ಸ್ವಪ್ನಾ ‖ ೨ ‖ ಶರಭವೆರಡೊದನವನು ಪೊಗುವದು । ಮರುತಮಾರ್ಗದಿ ಪೋಗುತವನಿಗೆ । ಪುರುಳಿ ಬಿರ್ದ್ದುದ ಕಂಡು ಯಚ್ಚತ್ತಿಷ್ಟನೊಳಗದನೂ ‖ ವರೆಯಲೀರ್ವಕುಮಾರಕರುಬ । ಲ್ದುರ ಪರಾಕ್ರಮುರಾಹವಂತರ । ತೆರಳು ತುರುಳಿದುದೇನೊ ಕಷ್ಟೆಂದುಲಿದತತ್ಫಲವಾ‖ ಕೇಳಿ ಹರುಷ ವಿಷಾದದೊಳಗಾ । ನೀಳಕುಂತಳೆಯಿರಲು ದಿನಕು । ತ್ತಾಳಗೊಳಲಾ ಗರ್ಭದೋಹಳವಾಗಲೀತೆರದೀ ‖ ತಾಳಿದಳು ನಿರ್ವಾಣ ಕ್ಷೇತ್ರವ । ನೀಕ್ಷಿಸಲುಜೀವಾದಿತತ್ವವ । ಕೇಳಲಾಹಾರಾದಿದಾನವಕೊಡುವುದಾದಿಯಲೀ ‖೪‖

ಸನುತವತಿ ತನುಗೊಳಲು ಪ್ರಿಯನೇ । ನೆನುತ ಬೆಸಗೊಳಲಿರ್ದ ತೆರ ಪ್ರಿಯ ।
ದನುಗೊಳಿಸಲರುಹಾರ್ಚನಾದಿ ಸುಚಾರುದಾನಗಳಾ ॥ ವಿನಯದಿಂಮಾಡಿಸುತ
ಶಾಸ್ತ್ರನ । ನೆನೆಯಿಸುತ ಸದ್ಭವ್ಯರಾಶ್ರಯ । ವನುಗೊಳಿಸುತಿರೆ ಪ್ರಿಯೆಗಾ
ಪ್ರಿಯನು ವಹಿಲದಲೀ ॥೫॥ ಇರಲು ಯಿಂತೊಂದಾನುದಿನ ಸ । ಚ್ಚರಿತೆ ಸೀ
ತೆಗೆ ಪೂರ್ವಕರ್ನೋ । ತ್ತರಿಸಿ ಕೂಡಿದರೆಲ್ಲ ಪುರಜನರೊಳು ಮಹಾಜನರೂ॥
ಗರೆದು ಮಂತಣವನ್ನು ನಿಶ್ಚಯ । ಗರೆದು ಪೌರೋಹಿತನು ವಿಜಯಂ। ಧರನು
ಯೆಂಬನಕೂಡಿಬಂದರು ರಾಮನೋಲಗಕೇ ॥ ೬ ॥ ಆನತಿಸಿನಿಂದಿರಲು ಬಂ
ದಿಹ । ದೇನು ಹರುಬೆನಲೋರ್ವರುಲಿಯದೆ। ಮೌನಗೊಂಡಿರೆ ರಾಮಸಂಶಯ
ಗೊಳುವ ಸಮಯದೊಳೂ ॥ ದಾನವನು ಕೊಂಡೊಯ್ದುಳನು ವನಿ। ದಾನಿಸ
ದಲಿರಿಸಿರಲು ನಿಮಗಿದು। ಮಾನವಳ್ಗೆಂದುಲಿಯ ಬಂದಿಹರೆನೆ ಪುರೋಹಿತನೂ
॥೭॥ ಕಟ್ಟರಸ ನೀನಾಕೆನಡವಳಿ । ತಿಟ್ಟವಾಥರಿಸದಲೆ ಸುಮನೊಳ। ಗಿಟ್ಟ
ರಾಯಿತೇ ಮಿಗಿಲ ಜನರೇನೆನುತಳತಳಕಾ ॥ ಬಟ್ಟರೂ ಸರಿಯನಲುಮುಖಕಿರಿ।
ದಿಟ್ಟ ರಾಘವನದಕೆ ಕಣ್ಬಿಡಿ। ಯಿಟ್ಟ ಲಕ್ಷ್ಮೀರಮಣ ಆಯರ ನುಡಿವ ಜನರ
ಗ್ರಾ ॥೮॥ ನೇತ್ರಸೈಜ್ಞೆಯೊಳ ನುಜನುಗ್ರದ। ವಕ್ತ್ರವನು ನಿಲಿಸಾಜನರನುಡಿ।
ಮಾತ್ರದೊಳ ಗೈದಿಸಿದ ಮಂನಿಸಿ ಸಭೆಯರನು ಕಳುಹಿ ॥ ಅತ್ರಕುಳಿತೇಕಾಂತ
ದಲಿ ಶತ । ಪತ್ರನೇತ್ರನ ಕರೆದು ಜನರವಿ । ಚಿತ್ರವನು ನೋಡೇನು ಯೇನೇ
ನೆನುವರೆನೆ ರಾಮಾ ॥ ೯ ॥ ಯನ್ನ ಸಂಮುಖದೊಳಗೆ ಯಿಾನುಡಿ । ಯನ್ನು
ವರು ಪಿಂದೇನುಚಿತ್ರಗ। ಳೆಂನುವರೊ ಯಿಷ್ಟಾದ ಬಳಿಕಿಡಸಲ್ಲ ಜಾನಕಿಯಾ॥
ಭಿಂನವಪ್ಪವು ಮಾನಸತ್ಯಗ। ಳೆಂನುವಗ್ರಜ ನರಿಯದಾಡಿದ । ರನ್ನ ಅಗ್ನಿಸ
ದುಲಿವರೀ ತೆರನೆಂದ ಸೌಮಿತ್ರೀ ॥ ೧೦ ॥ ಶರದಿಗಾಚ್ಛಾದನವೆ ಜನ ನುಡಿ ।
ಮರೆಯಗೊಳಿಸುವರುಂಟೆ ಸಂಶಯ । ಗರೆವರಗ್ರದಿ ಕೋಪಗೊಂಡಾರಾರನಾ
ಗ್ನಿಸಲೂ ॥ ಮರೆಯದೀ ನುಡಿ ಯದಕೆ ಸೀತೆಯ। ತೆರಳಿಸಲು ಬೇಕೆಂಬ ರ
ಘುಜನೊ। ಳೆರೆದ ಸುರಿವಾಶ್ರುವಿನೊಳಗಾ ಶತಪತ್ರಲೋಚನನೂ ॥ ೧೧ ॥
ಜನರನುಡಿಗಳ್ಕುವರೆ ಅಸ। ದ್ವನಿತೆ ನಡೆಯರಿಯದರೆ ನಾಯ್ಗಳ। ಧನಿಗೆ ಗಜ
ಬೆದರಿಡುವ ತೆರವೀಲೋಕಜನನಿಯೊಳೂ ॥ ಸನುತವಲ್ಲದೆ ಕುನಯವೆಂಬದ।
ಕನಸುಗಾಣಲು ಆಕೆಯೊಳು ನಿಮ । ಮನವಿಕಲ್ಪವೆ ದೇವಬಿಡಿ ಸಂಶಯವನೆನ
ಲನುಜಾ ॥ ೧೨ ॥ ಕೇಳಿ ಕಿವಿಯೊಳ ವಾಚವನು ಮನ । ತಾಳುವದೆ ನಿರ್ಧ
ರವ ಮೇಣ್ನೆರ। ಯೇಳುವದೆ ಜನರಗ್ರವಿನಿತುಪರಿಟ್ಟು ಜಾನಕಿಯಾ ॥ ಬಾಳು

ವರೆ ಹೀನಾಯಕನು ಪರಿ । ಪಾಳಿಯಲ್ಲವೆ ಯಷ್ಟು ಪತಿವ್ರತ । ವಾಳಿದರುಶರ
ವಲ್ಲ ಲಕ್ಷ್ಮಣನೆಂದ ರಾಘವನೂ ॥ ೧೩ ॥ ಜನರ ನುಡಿಗಂಜದಿರೆ ಪಾತಕ ।
ವೆನುವರೀ ಪತಿವ್ರತೆಯು ಬಿಡೆಪು । ಣ್ಯೆನುವದೋ ಮೇಲಾಕೆ ಗರ್ಭೋದಯದ
ಕಾಲದಲೀ ॥ ನೆನೆಯಬೇಡಿಂತೆಂದು ಪದವಿಡಿ । ದೊನಜಲೋಚನನೆತ್ತಿಮುದ್ದಿ
ಸು । ತೆನಗೆ ಬದಲೋಕ್ತಿಡದಲೀಗೇಕೆಂದನಾ ರಾಮಾ ॥ ೧೪ ॥ ಸತ್ಯವತಿಜಾ
ನಕಿಯ ಪಾತಿ । ವ್ರತ್ಯಕೂರಾಜೀಕನುಡಿಯ ಅ । ಗತ್ಯಕೂ ಸಮನುಂಟೆ ಯಿಾ
ತೆರದಲ್ಲಿ ಬದಲಿಡಲೂ ॥ ಭೃತ್ಯಗಿಲ್ಲಾಪತಕವು ಯಿದನು ಅ ! ಗತ್ಯಬಿಡಬೇಕೆಂ
ಬನಿಗೆ ಅವ । ಸತ್ಯವಾಣೀನುಲಿಯೆ ನೀ ಬದಲಿಡುವುದೆನೆ ರಾಮಾ ॥ ೧೫ ॥
ತಂನಿಮಿತ್ಯದೊಳಾನುಗ್ರೈವದ । ಕನ್ನ ಅನುಬಡಬೇಕು ಯನೆ ಮಾ । ತಿನ್ನಹ
ತವೆಂದೆನುತ ಮಲಗಿದ ಮಂಚವೊಳು ಚಕ್ರೀ ॥ ಪಂನಗಾರಿಧ್ವಜನದುಃಖವ ।
ನನ್ನ ಪ್ರಿಯಕರ ಜಾನಕಿಯ ಗುಣ । ವನ್ನ ಭಾವಿಸಗೊಡದಲಾಕೆಯ ಕರ್ಮ
ರಾಘವನಾ ॥೧೬॥ ಕರೆದು ಜಾನಕಿ ತೊಡೆಯೊಳಗೆ ಕು । ಳ್ಳಿರಿಸಿ ಕದಪುಗಳ
ಲುಗಿ ಚುಂಬನ । ಗರೆದು ಮುಂಗುರುಳೊತ್ತಿ ಕರ್ಮಕ್ಷಯದ ಭೂಮಿಗಳಾ ॥
ಪರಮಪುರುಷರ ಪಾದ ದರುಶನ । ಗರೆವ ಬಯಕೆಯ ತೀರಿಸೆನೆ ಪ್ರೀಯ । ನೆರ
ಕಾನಂದಿಸುತ ಲಾರೊಡನೆನಲು ವೈದೇಹೀ ॥ ೧೭ ॥ ಆರು ಬರಲೇನೆನಲು
ಪೋಗುವ । ಡಾರೆನೆನಲೆಂತೆನುಲು ಮತ್ಪಿತ । ವಾರಿಜಾಂಬಕರೊಡನೆ ಪೋಪೆನ
ಲೀಗ ಪೋಗ್ಬರಲೂ ॥ ಆರುಬರಲೇನಿದಕೆ ಚಕ್ರಿಯ । ಕೋರುವರೆ ಯನಗಾ
ಪ್ತನಲದರ । ತೋರುವೆನೆ ನಿನಗೆಂದು ಮೃದು ಗೈದೊನಿತೆ ರಾಘವನೂ ॥೧೮॥
ಸಂತಸವಗೊಳುವಳನು ಮೊದಲೆ ಕೃ । ತಾಂತನೆಂಬಗೆ ಬೆಸಸಿಯಿರ್ದ್ದೀ। ಗಂತು
ತೋರ್ಪೆದೆಂಬ ಮುಖಸ್ತುತಿಯಿರಿದ ಪೋಗೆನಲೂ ॥ ಕಾಂತನಡಿದಳಕೆರಗಿಪುಷ್ಪ
ಕ । ವಾಂತಳನು ತೆರಳಿಸಿದ ನಸದಳ । ವಾಂತ ಭೀಮಾಟವಿಯ ಮೇಗಡೆಗಾಗ
ಕೃತವಕ್ತ್ರಾ ॥೧೯॥ ನೋಡಿ ಕೆಳಗದ್ಭೂತ ವಿಪಿನದೊ । ಳಾಡುತಿಹ ಬಲ್ಮೃ
ಗಗಳಿಗೆ ಬಯ । ಗೂಡಿ ಯಿಾಕ್ಷಿಸಲಾ ಕೃತಾಂತನ ತಲೆಯ ಬಾಗಿಸುತಾ ॥
ಹೇಡಿಗೊಳಲಿದೆ ಭುಗಿಲುಭುಗಿಲೆಂ । ದಾಡಿದಳು ಯಲೆಸುತನೆ ದರುಶನ । ಮಾ
ಡುವೆಡೆ ಯಲ್ಕಾಡುಯಲ್ಲುಲಿ ಯಂದಳಿಂದುಮುಖೀ ॥೨೦॥ ಇಂನುಮುಂದುಂ
ಟೆನಲು ಜನಪದ । ದುಂನತಿಲ್ಲವೆ ಮಾರ್ಗವೆನೆ ಬಡ । ಲನ್ನ ನುಡಿಯದಲಲ್ಲೆ
ನಿಲಿಸೊಯ್ಮ್ಯಾನವದಿರುವನಾ ॥ ರಂನೆ ನೋಡಭ್ರನವೆ ಮೇಗವಿ । ದನ್ನ ಚಿಂ
ತಿಸಿ ಯೇನು ಕೃತಕವ । ನನ್ನಗ್ರಹಿಸಿಹರೆಂದು ಧೈರ್ಯವ ತಾಳಿ ಕೇಳಿದಳೂ॥

ವದಗಿದಾಪತ್ತಿನಲಿ ಧೈರ್ಯದ । ಹೃದಯವಿಡಿದನೆ ಪ್ರಹುಡನೆಂಬಂ । ತೊದ
ವಿನಲಿ ನಾಕಂಡ ಸ್ವಪ್ನದಫಲಕೆ ಸರಿಯಾಗಿ ॥ ವದಗಿ ಬಂದಿಹುದಿದಕೆ ಸೊಲ್ಪ
ವು । ಹೆದರದುಲಿಯೇನೆಂಬ ಯೋಚನೆ । ವದನನೊಳಗೈದಿಸದನೆಂದಳು ಮರು
ಗಿಮಹಿಳೇಂದ್ರೀ ॥ ೨೨ ॥ ಪೇಳಲೇನಂಮಾಜಿ ರಘುವರ । ಹೇಳಿದಾರಣ್ಯ
ದಲಿ ಬಿಡಲು । ದ್ಕೇಳಿ ಕಳವಳಿಸಂತರಂಗವಿ ಧೈರ್ಯ ಕೂಡದಲೇ ॥ ತಾಳಿವಿ
ಸ್ಮಯತೊಟ್ಟ ಶೈತ್ಯ । ದೋಳೇಳಿಸಲು ಅವಡಗಿದ ನೇತ್ರದಿ । ಬೀಳುವಾಶ್ರು
ಗಳಿಂದಲಾ ಕೃತವಕ್ತ್ರನೀಕ್ಷಿಸುತಾ ॥ ೨೩ ॥ ಪಡೆವ ಪೂರ್ವಾರ್ಜಿತವು ಆರಿಂ
ಗಡಗವೀ ಯಂತ್ಯದಲಿ ಧೈರ್ಯವ । ಬಿಡಲು ದಿಕ್ಕಿಲ್ಲೆಂಬ ನಿಶ್ಚಯಗೈದುಯಾ
ಗೇನೂ ॥ ತೊಡರಗೈದಾಳೋಚನೆಯ ಭಯ । ವಡದೆ ಪೇಳೆನಲೆರಗಿಅಂಜಲಿ ।
ತೊಡಗಿ ನುಡಿದನು ಬಿಕ್ಕುತಾಶ್ರು ವಿರಿಸುತ ಕೃತವಕ್ತ್ರ ॥ ೨೪ ॥ ನಗರಜನರೈ
ತಂದು ರಕ್ಷರ । ಹಗರಣಕೆ ಸಿಕ್ಕಿರ್ದ ವನಿತೆಯು । ಸುಗುಣದುರ್ಗುಣ ನೋಡ
ದಿರಿಸಿಹುದುಚಿತವಲ್ಲೆನಲೂ ॥ ಮೊಗವ ಬಗ್ಗಿಸೆ ರಾಮನದ ಕಂ । ಡೊಗೆದ
ಕೋಪನನರಿದು ಸೈಗ್ನಿಸಿ । ನಗಧರನ ನಿಲಿಸೈದಿಸೆಲ್ಲರ ಪೇಳ್ದನಿಂತೆಂದೂ ॥೨೫॥
ಅಲ್ಲದೊಚನವಕೇಳಿ ಸೀತೆಯು । ನಿಲ್ಲಿಸುವದುಚಿತಲ್ಲ ವೆನುತವ । ರಲ್ಲಿನಡೆದಾಡ
ಳಿತ ವುಸುರಲು ಕೇಳುತೆಲ್ಲವನೂ ॥ ತಲ್ಲಣಿಸಿ ರಾಘವನೆ ಗುಣವ । ತಿಲ್ಲವೇ
ಕೈವಿಡಿದವಿನನೊದ । ಲಿಲ್ಲಿಸರಿಯಂತೀಗ ಜನನುಡಿಗಂಜಿ ಯನಬಿಡಲೂ॥೨೬॥
ಹೇಗೆಮನಸ್ಸೈರಿಸಿತು ಕಳುಹಿಸು । ವಾಗ ಕಳವಳ ಯದೆಯೊಳಗೆ ಹೊ । ಕ್ಕಾ
ಗಲಿಲ್ಲವೆ ಅಕಟ ಕಾಂತನೆ ವಂದುದಿನವೆನ್ನಾ ॥ ರಾಗಬಿಡದಂತಿರ್ದ ಪರಿಭವ।
ಕೇಗುವರೆ ಶ್ರೀಕಾಂತ ಯಿಾಮನ । ಕೇ ಗತಿಯು ಬಂದೊದಗಿತೆಂದಳೂ ಹಲು
ಬುತಿಂದುಮುಖಿ ॥ ೨೭ ॥ ತಂದೆ ಲಕ್ಷ್ಮಣಗೆನ್ನ ನೈದಿಸ । ಲೆಂದರೆನೆಂದಿರ್ದ
ರಾಘವ । ನೆಂದನೇ ಬಿಡು ಯಂಮ ಅಡವಿಗೆ ಯಾತರೊಳಗೆನ್ನಾ ॥ ಕುಂದ
ನೊಂದಿನಿಸಾದರೂ ಕಂ । ಡೆಂದನೆ ಅಯ್ಯಯ್ಯೋ ಯಿಾಗುಣ। ಬಂದುದೆ ಶ್ರೀರಾ
ಮಬಾಣಕೆ ಯಂದಳಿಂದುಮುಖೀ ॥೨೮॥ ರಮಣನಿಗೆ ಯರವಾಗಿ ಲಕ್ಷ್ಮೀ ।
ರಮಣನಿಗೆ ಪರವಾದವಿಗ್ರಹ । ಯಮನಕ ಬಳಿಡುವೆಂದು ಬಿಟ್ಟ್ರೋಯ್ಯಾನಕಚ್ಚ
ವಡಾ ॥ ದುಮುಕಲವನಿಗೆ ಖಗನು ಹಾಯಂ । ದ ಮರಿದಜ್ಞಾನದಲಿಯಿರಲಿ।
ಲ್ಲಘುತಗುಣ ಬೀಳ್ವಾಗ ತಿಳಿದೊನದೇವಿ ಯವಧಿಯಲೀ ॥ ೨೯ ॥ ತೊರದಾ
ಯಾಪನಿತು ಮೇಲನಾ । ನಾರಿಯನು ನೆಲಕೆಳಿಸುವರೆಗಾ । ಕ್ರೂರವಕ್ತ್ರೈತಂ
ದುನಿಲಲೆದುರೊಳಗೆ ವಿಗ್ರಹಕೆ ॥ ಬಾರಲಿಲ್ಲಿದವಲ್ಲುಮಕಣವ । ತೋರಲಿಲ್ಲ ಸ

ಹಯಯಿಂನೇ ! ಕಾರಣದ ಕಷ್ಟಿಹುದೊ ಕೃತವಕ್ತ್ರಂದ ಳಿಂದುಮುಖೀ ॥೩೦॥
ಆರಿಗೀಭವದಪಕೃತಿಯ ಮನ । ವಾರೆ ಮಾಡಿದಳಲ್ಲ ಪಿಂದಾ । ಚಾರಫಲವಿಂ
ನೇನೊ ಕೃತವಕ್ತ್ರನ್ನ ಅಡವಿಯಲೀ ॥ ಸೇರಿಸಲು ಆಶ್ಯೆಸಿದತ್ಫಲ । ದೋರಿತೆ
ನಿಮಮನದಭೀಷ್ಟತೆ । ಸಾರಿತೇಸಾಗಿಂನು ಯಲ್ಲೇನೆಂದುಮತ್ತೆನಲೂ ॥೩೧॥
ಹೀಗೆಗೈವದು ರಮಣ ವೈದುನ । ಗೀಗುಣಾಗುವದರಿದ ರಾಗಿಂ । ನಾಗಲೇ
ಸಂಹರಿಪೆ ವಿಗ್ರಹ ಬಹಳ ಕಷ್ಟವನೂ ॥ ನೀಗಿವುಳಿದಳ ನೀಗಲಡವಿಗೆ । ಸಾಗಿ
ಪರೆ ನೀನಲ್ಲದನ್ಯರ । ನೀಗ ನೋಡಿದಳಲ್ಲ ರಾಘವನೆಂದ ಳಿಂದುಮುಖೀ ॥೩೨॥
ಪೆರರ ಚಲುತೆರರೆಂದರಾ ಸತಿ । ಗೆರವು ಯಿಾ ಭವದಲ್ಲಿ ನೀ ಪ್ರಿಯ । ಕರನೆ
ಹೊರತಿನ್ನೆಲ್ಲರಾತ್ಮಜರೆಂಬ ಭಾವನೆಯಾ ॥ ನೆರವಗೈದರೆ ನಿಂನ ಪದಯುಗ ।
ಶರಣೆ ಯಲ್ಲಾ ಲಕ್ಷ್ಮಣ ನಮಗ । ಳಿರವೆ ಕಡೆಗಾನಾರಕೆಂದಳು ಅಳುತಲೊ
ಯ್ಬೀಹೀ ॥ ೩೩ ॥ ಯರೆಯ ರಾಘವ ಸುತನೆ ಲಕ್ಷ್ಮಣ । ಹೊರತುಯಿಲ್ಲ
ವರುಣದೆ ತೃಷೆಗುದ । ಕೆರೆದಳಲ್ಲೊಂದಿನವು ಮುನಿಭಕ್ತರುಹನರ್ಚನೆಯೂ ॥
ತೊರೆದಳಲ್ಲೆನ ಬಿಟ್ಟುನೇನಾ । ಗರೆವ ಚಾತುರ್ದಾನವನು ಬಿಡ । ದಿರವುದೆಂ
ದೊರೆ ಮರೆಯುದೆಲೋ ಕೃತವಕ್ತ್ರನೆನೆ ಸೀತೆ ॥ ೩೪ ॥ ಬಿಟ್ಟರೇನೇನೆಂಟು ಸಾ
ಸಿರ । ಬಟ್ಟ ಕುಚೆಯರ ನೋಡಿ ಯನವುರೆ । ದೊಟ್ಟು ಸುಖನಾಗೆಂದು ರಘು
ಜಗೆ ಪೇಳು ಲಕ್ಷ್ಮಣಗೇ ॥ ಬಿಟ್ಟು ಯನ್ನಾಳೋಚನೆಯ ನಲ । ವಿಟ್ಟು ಶ್ರೀಕ
ರನಾಗಿ ಸಾಸಂ । ದಿಟ್ಟು ಯಿರಲೆಂದುಲಿಯ ಪೋಗೆಲೆ ಖಚರನೆನೆಸೀತೇ ॥೩೫॥
ಯನಗೆ ಭಯವಿಲ್ಲೆಂನಚಿಂತೆಯ । ನೆನೆಯುವೈದೆಂನಾಣೆ ಯಿಾಮೃಗ । ತಿನವೆ ಬಿ
ಡವೀಗಿಲ್ಲ ರಾತ್ರಿಗೆ ಸರಿಯುಪಸರ್ಗ ॥ ಯನಗೆ ಪ್ರಾಹರವಾಗುವರೆ ಗನ । ಶ
ನವಕೊಳುವೆನೆನುತ ಕೃತವಕ್ತ್ರ । ನನು ಬೀಳ್ಕೊಟ್ಟಾಗ ಲನುಪ್ರೇಕ್ಷೆಗಳ ಭಾವಿ
ಸುತಾ ॥೩೬॥ ರಾಮರಾಮನೆ ದಶರಥ ರಾಮ । ರಾಮರಾಮನೆ ಕೌಶಲರಾಮ ।
ರಾಮರಾಮನೆರಾಮ ಸೀತಾರಾಮ ರಘುರಾಮಾ ॥ ಈ ಮನವನೇಗ್ರಹಿಸಿದೋ
ಸು । ಪ್ರೇಮಳಲ್ಲವೆ ನಿನಗೆ ಆಹಾ । ರಾಮರಾಮಾ ಯಂಮ ಮೊರದಳೊಸುಂ
ಧರಾಕಂದೇ ॥ ೩೭ ॥ ಅನಿತರೊಳು ಸಂಚರಿಸುವಾ ಮೃಗ । ವನಿತೆಯನು ಕಂ
ಡ್ಯೆದಿ ವೈರವ । ನೆನೆಯುದಾಹಾರವನು ಕೊಳ್ಳದಲೆತ್ತಿ ಗೋಣುಗಳಾ ॥ ವಿನಯ
ಗೊಳೆ ಹರಿಹರಿಯು ಹರಿಹರಿ । ಯೆನುತವಾ ಜಾನಕಿಯು ಹರಿಹರಿ । ಯನು
ತಹರಿಗ್ರಜನಾ ನೆನೆದಳು ಮನವದಾಃಳಿಡುತಾ ॥ ೩೮ ॥ ಶಿವನುಶಿವಶಿವ ಶಿವನು
ಶಿವಮಯ । ಶಿವನ ಛಾಯದೊಳಿರುವ ಶಿವೆ ಕಂ । ಡ ವಿಚಳದಿ ಕಾಯ್ದಂತೆ

ಮುತ್ತಿದಮೃಗವ ನೋಡುತಲೀ ॥ ಭುವನಪುತೆ ಶಿವಶಿವನೆ ಶಿವನಿ । ರ್ಭವನೆ
ರಕ್ಷಿಸುರಕ್ಷಿಸೆಂದೆಂ । ದನರ ಪದವಂತರಂಗದೊಳಿರಿಸಿದ ಳುದಿತ ಶಾಂತದಲೀ
॥೩೯॥ ಬಿಟ್ಟರಾಘವ ಪ್ಯೈದುನನು ಮರೆ । ದಿಟ್ಟನಾವೃತ ಗೊಳಲು ಬರದಳ
ನಿಟ್ಟಿಸುವರೇ ಹರಿಚಮೂರಗಳೀಗ ಚರ್ಪಿಸಿರೀ ॥ ಅಟ್ಟಿಬಹದೇ ಕಷ್ಟನಡನಳ ।
ವಟ್ಟಿ ಬಾಳುವಶಕ್ತಿ ಯಂನೊಳು । ಹುಟ್ಟಲಿಲ್ಲೆನ ಭಕ್ಷಿಸೆಂದಳಲಿಟ್ಟ ಳಬುಜಾ
ಕ್ಷೀ ॥ ೪೦ ॥ ನಿಮುಗುತಿನ ಸೈರಿಸದೆ ಯನತನು । ರಮಣಗಹಿತಾವಾಯ್ತು
ವೈದುನ । ಭ್ರಮೆಯನುಳಿಧನೆ ಯಿಾಯ್ಯನಿಷ್ಟಾಂಗವನು ಸಂಹರಿಸಾ ॥ ಕ್ರಮ
ವುದೊರೆಯದೆ ದೇವಸೀತಾ । ರಮಣ ಮರದೆಯಂದು ಯದೆಯಾಯೆಂ । ದು
ಮುಕುವಕ್ಷುದಕದಲಿ ಮೂರ್ಛಿಸಲಾಗ ವೈದೇಹೀ ॥೪೧॥ ಯಿತ್ತಕೃತವಕ್ರ್ಯದಿ
ಸೀತುಲಿದುತ್ತರವ ರಘುಜಂಗೆ ಬೆಸಸಿದ । ರೊತ್ತಿ ದೊತ್ತರದಂತೆ ಹಾಹಾ ಸೀತೆ
ಸಂಪ್ರೀತೇ ॥ ಯತ್ತಿದರುಣಾಕೃತ್ತಿಮುವ ನಿನ । ಚಿತ್ತವಿಭ್ರಮಿಸದಲೆ ಯನ
ಸಂ । ಪತ್ತಿಗೂತನ ಧರ್ಮಬಿಡಳೇಂದ್ರಘುಜ ಮೂರ್ಛಿಸಲೂ ॥ ೪೨ ॥ ಮರೆ
ದುಯನೈಶ್ವರ್ಯದೊಳು ಬಂ । ಧುರದೊಳಿಹುದೆಂದೆನ್ನ ವೈದುನಿ । ಗೊರೆವು
ದೆಂದಳು ಯನಲುಲಕ್ಷ್ಮಣ ಕೇಳುನಿಜವೂತೇ ॥ ತೊರೆದರೂ ನಾನೆನ್ನ ಸಂಪ
ತ್ಪರವಹಾರುವ ಲೋಕ ಜನನಿಗೆ । ಸರಿಯೆ ಲೋಕದಿ ವರಿಯರಿಲ್ಲೆಂದೊರಗೆ
ಮೂರ್ಛಿಸಲೂ ॥ ೪೩ ॥ ಸೀತೆಅಡವಿಗೆಬಿಟ್ಟ ನುಡಿ ಪ್ರ । ಖ್ಯಾತಿಗೊಳಲನು
ಚರಿಯರಳಲಿಂ । ಬಾತ ಪುರಜನ ನೊರೆಯೆ ಪ್ರಳಯಾಬ್ಧಿಗೆ ಕೌಶಲೆಯೂ ॥
ಭೂತಳದೆ ಶೈತ್ಯದಲಿ ಮೂರ್ಛೆಯು । ಧಾತುಗೆಡಿಸಲು ಸೀತೆ ಜೀವನ । ವಾತು
ಯಿರುವಳೆ ಯನಲು ಯಿಲ್ಲೆನೆ ರಘುಜಗಾಖಚರಾ ॥ ೪೪ ॥ ಅನನಿಜೆಯುಅಳ
ಲಗ್ನಿ ರಘುಸಿರಿ । ಭವನ ಸರ್ವಾಂಗವನು ದಹಿಸುತ । ಲವರು ಯಿರಲತ್ರೊರೆದ
ಜಾನಕಿಗಿತ್ತು ಶೈತ್ಯವನೂ ॥ ತವಿಸಲೊನದೇವಿಯರು ನೆಲೆಗೊಡ । ದವಳು
ಶೋಕಾತುರದೊಳಿರಲೊಂ । ದವನಿಯೊಳಗಿಹ ಪುಂಡರೀಕಿಣಿ ನಗರಕಿಂನತ್ತಾ॥
ಧರಣಿಪತಿ ಶ್ರೀವಜ್ರಜಂಘನ । ತರುಣಿ ಲಕ್ಷ್ಮೀಮತಿಗೆ ಪುಟ್ಟಿದ । ತರಳನೆಂಬ
ನು ವಜ್ರನಾಭಿಯು ಸಹಿತಲಿರುತೊಂದೂ ॥ ತರಣಿಯುದಯದಿ ಗಜದ ಬೇಂಟೆ
ಗೆ । ಬರುತ ಮೃಗಚಕ್ರವನು ಕಂಡಾ । ಶ್ಚರಿಸಿ ಬಾದೊಳಪೊಕ್ಕು ಕಂಡನು
ಕಮಲಲೋಚನೆಯಾ ॥ ೪೬ ॥ ದೇವಿಯೋ ಗಂಧರ್ವ ಜನ ಸಂ । ಜೀವಿಯೋ
ವಿದ್ಯಾವಿನೂತನ । ಭಾವೆಯೋ ಭಾವಜನ ಪಟ್ಟದ ಪದ್ಮಗಂಧಿನಿಯೋ ॥
ಆವಳೆಂಬಾಶ್ಚರ್ಯದಲಿ ಮನು । ದೇವ ಕೇಳಿದನಾವ ನಿನಗಿಂ । ನೀವಸತಿಗೇ

ಕಾರಣೆಂದನು ವುದಯಕರುಣದಲೀ ॥ ೪೭ ॥ ಗಲ್ಲಕರದಿಂ ಬೊಗ್ಗಿ ಶಿರ ಕಂ।
ಣಲ್ಲಿಸುರಿವಾಶ್ರುಗಳಹಾರಗ। ಳಲ್ಲಿಮಂಗಲೆಯಾದಳೀಕ್ಷಿಸಿ ನೋಡದಿರಲದಕೇ॥
ಪುಲ್ಲಲೋಚನೆ ಅರಸುತೆ ನಿಂ। ನಲ್ಲನಾರೌ ತಂಗಿ ಮಾತಿ। ಟ್ಟಲ್ಲಿಹೀ ನಿಲ್ಲುಲಿ
ವುದೆಂದನು ವಜ್ರಜಂಘನೃಪಾ ॥ ೪೮ ॥ ನೋಡಿ ಕರುಣಾಸಾರ ಸಿರವೆ। ತ್ನೋ
ಡಿ ಜನಕಾತ್ಮಜೆಯು ರಘುಜನ। ಕೂಡಿದಳು ಯನ ಪೂರ್ವಕೃತವಿಹಾರ ಗೈತೆ
ನಲೂ ॥ ಮಾಡಿಯಾಶ್ಚರ್ಯವನು ರಘು ನಿನ। ಕಾಡಿಗೆಂತೈಸಿದ ಲಕ್ಷ್ಮಣ।
ನೋಡುತಿರ್ದನದೇನು ಸೋಜಿಗವೆಂದ ರಾಜೇಂದ್ರಾ ॥ ೪೯ ॥ ಆಗಲೌಯನ
ಭಗಿನಿ ಪೂರ್ವದ। ಬೀಗರಾವಿಂನುಗ್ರವಂಶಜ। ರಾಗಿಯಿರೆ ತವುರಾಲಯದಿ
ಸಂದೇಹವೇನೆಂದೂ ॥ ರಾಗದಲಿ ಜಾನಕಿಗೆ ಕವಿದು। ಬ್ಬೇಗವನು ಪರಿಹರಿಸಿ
ರಥದೊಳ। ಗಾಗ ಕುಳ್ಳಿರಿಸಿದನು ಯಕ್ಷೇಶ್ವರಿಯ ತೆರದಿಂದಾ ॥ ೫೦ ॥ ಬಹ
ಳಚತುರಂಗದಲಿ ತೂರ್ಯದ। ಬಹಳರವದಲಿ ದೇವತೆಯ ವೆ:ರ। ಸುಹೊಲು
ಕರತರಲೊಜ್ರಜಂಘನು ನಿಜನಿಕೇತನಕೇ ॥ ಗೃಹದಜನ ನೆಲೆಯರಿದು ಕಳವಳಿ
ಸಹುದು ಬೆಸಲೆಗೆ ಬಂದತೆರಕಾ। ಮಹಿಳೆಜೆಯ ನಾರೈವುತಿರ್ದರು ಸಕಲ ವು
ತ್ಸಹದೀ ॥ ೫೧ ॥ ಒಂದುದಿನ ಶುಭತಾರೆಯೊಳಗರ। ವಿಂದಲೋಚನೆ ರವಿ
ಶಸಿಯು ಸನು। ದಿಂದಲುದಿಸಿದ ತೆರದಿ ಪೆತ್ತಳು ಅಮಳ ಕೂಸುಗಳಾ ॥ ನಂ
ದುಕರೆದನು ಕುಶಲವತಿಸುತ। ರೆಂದು ಕುಶಲವರೆಂದು ಬಾಲ್ಯದ। ನಂದು
ನೋಡಾನಂದಗೈದರು ಮಾತೆಮಾತುಳರೂ ॥ ೫೨ ॥ ಕಲಿಸಿಅಕ್ಷರಶಸ್ತ್ರಶಾಸ್ತ್ರವ।
ಕಲಿಸಿ ಮಂತ್ರಾದ್ಯಸ್ತ್ರಗಳ ಸಂ। ಕಲಿಸಿ ಸಿದ್ಧಾರ್ತನಿಪ ಬಿಲುಶಾಸ್ತ್ರಿಕನ ಕೈಯಿಂ
ದಾ ॥ ಕಲಿತವಯ ರೂಪಾ್ಗಡಿವೋಡಿಯ। ಲಲಿತದಲಿ ಶೂರದಲಿ ರಘುಹರಿ।
ವಲವತೋರುವ ಅಳಿಯರನು ಮೆಚ್ಚೊಜ್ರಜಂಘನೃಪಾ ॥ ೫೩ ॥ ನಂದನೆಯು
ಸೆಸಿಚೂಳೆ ಮೊದಲಾ। ದಿಂದುಮುಖಿಯರು ಲಲಿತಲಾವ। ಣ್ಯೇಂದಿರೆಯುರಾಗಿ
ರಲು ಬತ್ತೀಶಳಿಯನಾಕುಶಗೇ ॥ ಹೊಂದಿಸಿದನುದ್ವಹದಿ ಕಿರಿಯನಿ। ಗೊಂದು
ದಿನ ಕನ್ಯಾರ್ಥವನು ನೆನೆ। ದಂದು ಕಳುಹಿದ ವಜ್ರಜಂಘನು ಕುಲಶಿಖಾಮಣಿ
ಯೂ ॥೫೪॥ ಇರಲು ಪೃಥುನಗರದಕೆ ಪೃಥುವೆನಿ। ಪರಸನಂಗನೆ ಪೃಥ್ವೀ
ದೇವಿಗೆ। ತರಳೆ ಕನಕಪ್ರಭೆಯು ವುದಿಸಿದಲೆರಡನೆಯ ರತಿಯಾ ॥ ತೆರದ
ಕನ್ನಿಕೆ ಬೇಡೆ ತಾನೆಲೆ। ಯರಿಯುದಗೆ ಕೂಸಿತ್ತು ಕೆಟ್ಟೆನ। ಬೆರಸಿ ಕೊಳಕಳು
ಹಿದನೆ ಕೊಡೆಹೋಗೆಂದ ಪೃಥ್ವೀಶಾ ॥ ೫೫ ॥ ಹೀನಗೈದೈದಿಸಿದ ವಾರ್ತೆಗೆ।
ಮಾನವೇಶನುಮುಳಿದುಬಲಸಂ। ದಾನದಿಂವೈದೆಸಗಿಕದನನಬೀಗಿ ಬೆಂಬಲಕೇ॥

ಸೂನುವನು ಬರಹೇಳಲಿರಿವಿಂ । ನ್ನೇನೆ ಸಹಿತೈತಂದು ಕುಶಗಿಂ। ನೀನು ಯಾಕೈತಂದೆಯುನೆ ನಿಜಮಾನಗೆರಗೆಂದಾ ॥ ೫೬ ॥ ಬಿನುಗುಜನ ರವರೋರಗೆ ಯುರ। ಲ್ಲಿನಗೆಯುಂದತ್ಕ್ಯೋಪಿಸಲು ಬಂ । ದೆನಲು ಬೇಡವಶೂರ ನಿನಗಾಸ ಮರಸೈವಡವೂ ॥ ಯನಲು ತರಣಿಗೆ ತನುವೆ ಕೇಸರಿ । ತನುಜಗಾನೆಯ್ಯ ಭಯುವೆ ನಿಂನಳಿ । ಯನಿಗೆ ನೃಪರಿಷ್ಟೆಂದು ಮುಂಕೊಂಡೈದಲಾ ಕುಶನೂ ॥೫೭॥ ಧರಣಿಜೆಯುಸುತ ವಜ್ರಜಂಘನ। ಅರಸಿ ಲಕ್ಷ್ಮೀಮತಿಯು ಅಳಿಯನು। ಧುರ ಪರಾಕ್ರಮಿ ಕುಶನುಯಂಬವ ಬಂದಸಾಹನಕೇ ॥ ತರುಣಿಮಣಿ ಯಿತ್ತಾನತಿಸಿ ಬಂ। ಧುರವ ಗ್ರಹಿಸೆಂದ್ಕಹಳೆಯ ರವವು। ಚ್ಚರಿಸುತೈದಿದ ವೀರವೀರಾಗ್ರಣಿ ಯು ರಣಮಲ್ಲಾ ॥ ೫೮ ॥ ಅದಕೆ ಪೃಥ್ವೀಧರನ ಅಳಿಯನು। ಕದನಕರ್ಕಶ ವ್ಯಾಘ್ರರಥನಾ। ಸುದತಿಯುದ್ವಹ ಗೊಳ್ವನಾಹವ ಮಲ್ಲ ಪ್ರತಿಮಲ್ಲಾ ॥ ಗೆ ದುರುವದಗಳಿಯುವಲೆ ಪಾರೆಂ। ದೊದರಿಸುತ ಕಹಳೆಗಳ ಮುಂದೊ। ತ್ತಿದನು ಶರಸೋರ್ಗರೆವುತಾ ಶೂರಾಗ ಕುಶಗೆದುರೂ ॥ ೫೯ ॥ ನಿನಗೆ ರಣದೇವತೆಯ ನುದ್ವಹ। ಕನಕಮಾಲೆಯು ಲವಗೆ ಕೊಡುವೆಂ । ದೆನುತ ಬಹ ಶರಗಡಿದು ಬಿ ಲ್ಕೋಲ್ಪಿಡಿದು ವ್ಯಾಘ್ರಗಳಾ ॥ ತನುವ ಖಂಡಿಸಿ ಪೋಗುಯನೆಮ। ತ್ತನುವ ಪಿಡಿದಳವಡಿಸಿ ಹಯಗಳ। ತನಿಗಣೆಯು ಸುರಿವೈದುತಿಂತೆಂದಾಗ ವ್ಯಾಘ್ರರಥಾ ॥೬೦॥ ನಿಂನ ನೆಮುಪುರಕೈದಿಸಾ ನೆಮ । ಕಂನೆ ಬಾದ್ಯಹನೆನುವನಿಗೆ ಕುಪಿ। ತನ್ನ ಬರೆ ಲೋಕವನೆ ದಹಿಸುವ ಶೂರನಿಗೆನಾಯಾ ॥ ಕುಂನಿ ನೀನೆದುರೆಂದು ಬಿಲ್ಕೋಲನ್ನು ಖಂಡಿಸಿ ಕಂಣ ಹೊಯ್ವರೆ । ಗುಂನತಾಂಗವ ಖಡಿದು ಕುಗಿದ ಕುಶನು ಪುಲಿರಥನಾ ॥ ೬೧ ॥ ಮೇಲೆ ಮುಚ್ಚಿದ ಅಹಿತ ಸೇನಾ। ಜಾಲಕಾ ಕುಶನಂಬುಗಳೆ ವೈ । ವಾಲವಾಗಂಜೋಡುತಿರೆ ಬಲಮುರಿದು ಅಳಿಯಳಿದಾ॥ ಕಾಲಿ ಪೃಥ್ವೀಶೈದಿ ಅಂಬಿನ। ಜಾಲವನು ತೆರಳಿಸಲು ನಗುತಿಳೆ। ಪಾಲನಿದ ಕಂಡ್ಬರಲನಡ್ವನೊ ಸಂದಿಗ್ಧೈದುವೆಯೋ ॥ ೬೨ ॥ ಅರಸ ಕೇಳ್ನೀನಾಬಿನೃಪರೆ। ಲ್ಲಿರಸತೃಣದೆಂತೆನಗೆ ನೋಡೆಂ । ದ್ವರುವ ಸರಳರಿವರಿದು ಬಿಲ್ಕವಚಗಳ ನಿಂ ನೇನೂ ॥ ತರಳೆಯಿಾವನೊ ಯಿಲ್ಲನೆನೆ ಅಸಿ। ಧರಿಸುವನ ರಥಕೇಗರಿಕಟ್ಟಿದ। ಭರದಿಮೂರ್ನೆಗತದಲಿ ಕುಶಪೃಥ್ವೀಶನಾಕಣದಿ ॥ ೬೩ ॥ ಪಿಡಿದುಬಹ ಕುಶ ನಧಿಕಸತ್ವದ। ನಡೆಗೆಮೆಚ್ಚಿದ ವಜ್ರಜಂಗಡಿ। ಯಿಡುತ ಬರಲೆದುರಾಗಿ ಬೀಜ ದಬಲಿಯುವೆಂದೆನುವಾ ॥ ನಡಿಗಳಾಚ್ಛಾದಿಸಿ ಆಳಿಯನ । ಪಿಡಿದು ಮುದ್ದಿಸಿ ನೃಪನ ಪಿಂಗ। ಟ್ಟೊಡೆದು ಪೇಳಿದ ಬೇಡನಿನಸುತೆ ಹೋಗುಪೃಥ್ವೀಶಾ॥೬೪॥

ಯಂದದಾಲಿಸಿ ಚಪಲನರಿಯುವ । ಡೆಂದು ಮಾಡಿದೆಲವಗೆ ಯೋಗ್ಯವ । ದಿಂದಿರಾಂಬಕಿಯಂದು ಆವನಾಕ್ಷಣದಿ ಬರಗೈದೂ ॥ ಹೊಂದಿಸುದ್ವಹ ಬಳಿಯ ಸಖಿಜನ । ವೃಂದ ಸಹಿತಾ ಕನಕಲತೆಯು ವ । ಸುಂಧರೇಶನಕೂಡಿ ಕಳುಹಿದ ನಗುತ ಪೃಥ್ವೀಶಾ ॥ ೬೫ ॥ ಗೆದ್ದು ಕನ್ಯಾರತ್ನವನು ಆನು । ಬದ್ಧವಣರವ ದಿಂದ ಹರುಷವ । ನೊದ್ದಿಬರೆ ಶ್ರೀವಜ್ರಜಂಘನು ಪುಂಡರೀಕಿಣಿಗೇ ॥ ಮುದ್ದು ಸತಿಯರ ಕೇಳಿಯೊಳಗನು । ಬದ್ಧದಿಂ ಕುಶಲವರು ಸಹಿತ । ಲ್ಲಿದ್ದ ಮುಕ್ತಿರ ಮಣನಡಿಸ್ಮರಣೆಯಲಿ ರಾಜೇಂದ್ರಾ ॥ ೬೬ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೀಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿಯರಸನ ಕಥೆಯು ಸದ್ಬುಧರೂ ॥ ೫೧ ॥

ಅಂತು ಸಂಧಿ ೭೬ ಕ್ಕಂ ಪದನು ೪೪೨೬ ಕ್ಕಂ ಮಂಗಳಮುಹಾ ಶ್ರೀ ಶ್ರೀ

ಎಪ್ಪತ್ತೇಳನೆಯ ಸಂಧಿ.

ಲವ ಕಪ್ಪವ ತಡದ ಸಂಧಿ.

ಚಕ್ರಿಗೈತಹ ಕಪ್ಪವನು ಅತಿ । ವಿಕ್ರಮಿಯು ಲವ ತಡೆಯಲಾತನ । ಆಕ್ರಮಿಸಲೈತಂದ ಶತ್ರುಜ್ಞಸಿಗೆ ಅರಿದಾಗೇ ॥ ಪದನೂ ॥

ಅರಸ ಕೇಳಾ ಪುಂಡರೀಕಿಣಿ । ಪುರದಿ ಸುಖವಿರಲವನಿಪತಿಗಳ । ಮುರಿದು ಕಪ್ಪವತಹೆವು ಯಂಬಳಿಯರನು ಬಿಡದೆಸೆಯಾ ॥ ಇರಸಿ ಯಿರಲಾವಜ್ರಜಂಘನು । ನಿರುತ ಹಯ ಗಜ ಸಾಧನೆಯ ಬಂ । ಧುರವೊಳೆಸೆದರು ಶೂರ ಮಾರರು ಜಾನಕಿಯಸುತರೂ ॥ ೧ ॥ ವಂದು ದಿನ ಲವ ತುರುಗಸಾಧನೆ । ಯಿಂದ ಪುರಬಹಿರಿರಲು ಬಹುಕಾ । ಪಿಂದ ಬಹಯಿಶಾನ್ಯದಿಕ್ಕಿನ ಕಪ್ಪಕರಭಗಳಾ ॥ ಸಿಂಧುರಗಳರಿದೇನು ಯಾರಿಥ । ವಿಂದ ಬಹನೆಂದವರ ಕೇಳಿದ । ರೆಂದರೆಲೊಸುಕುಮಾರ ನಿನಗೇಕೆಂದು ಕಾಪಿನರೂ ॥ ೨ ॥ ಕಂಡು ಮಾರ್ಗದಿ ಕೇಳಿದರೆ ವು । ದ್ದಂಡ ನುಡಿಸಾಡುವಿರಿ ಸಂನುತ । ಗೊಂಡು ಪೇಳೆನಲಾರು

ನೀನೆನಲರಸನೀನಾಡಾ ॥ ಪುಂಡರೀಕಿಣಿಗೆನಲು ಕಪ್ಪವ । ಕೊಂಡು ನಡೆಯಂ ದಾಳಘರ್ಜನೆ । ಗಂಡು ಲವನಾರ್ಗೆನಲು ಪೇಳ್ದರು ರಾಘವನ ತೆರನಾ ॥ ೩ ॥ ಕೇಳಿ ಮೊದಲಿಂದವರ ಸತ್ವದ । ಯೇಳಿಗೆಗೆ ಆಶ್ಚರಿಸಿ ಬಲಕರ । ದಾಳ ರಣ ಗಿಸದುಂಟೆಯಸವೆಂದರಿದು ಯಿಾ ಬಾಳಾ, ॥ ಬಾಳಿದರೆ ಅವರಾಳುತನದಿದ । ಹೇಳುವಿರ ಯಿಾಗಾನು ನಿಮಗ । ಡ್ಡಾಳವಿಲ್ಲವೆಯುಂದ ಲವನಿಳಿದಾಗವಾಜಿಯ ನೂ ॥೪॥ ಕಟ್ಟಿ ರಣಕಾಸಿಯನು ಕಪ್ಪವ । ಬಿಟ್ಟು ಪೋಗಾರಾಮನಿಗೆ ದೂ। ರಿಟ್ಟುಬಿಡಿರೆನಲಸ್ತ್ರ ಧನುಕರನಾಗಿ ಲವನಾಗಾ ॥ ಇಟ್ಟ ನಗೆಯುವರೆಲ್ಲ ನಿನನಿ। ಸ್ಸಿಟ್ಟು ಪೊಗುವರ್ಯಾರು ಯಂದ ! ಟ್ಟಟ್ಟಬಹರರಿದಾಗ ಸುರಿದನು ಬಲಕೆ ಶರ ದೂರುಷ ॥೫॥ ಮಾಣವಕ ನೀನೋರ್ವನೆಮಗು । ತ್ರಾಣದೋರ್ವನೆ ಸಾಕು ನಡೆ ನಿನ । ಪ್ರಾಣವಾರೈಯುಂದು ಕೊಚ್ಚ ಸ್ತ್ರಗಳ ಮೇಲಾಗೀ ॥ ಹೂಣುವರ ಶಸ್ತ್ರಗಳು ಸಹಿತೊಳ । ಪ್ರಾಣವನು ರಿಪುವಾಹಿನಿಯ ಕೈ । ತ್ರಾಣವನು ನಿಲಿಸೆ ಸೆದ ಲವನೆ ಸತ್ವನಾಹವಕೇ ॥ ೬ ॥ ಹೊಕ್ಕನಂಬುಗಳ ರಿಪತಾಕಿನಿ । ತುಕ್ಕಿ ಕರಚರಣಂಗಗಳ ಖಡಿ । ದಿಕ್ಕಿ ಹಯುಗಜಕೆಲ್ಲ ಮುಚ್ಚಿದ ವಾಲಕೂಪದಲೀ ॥ ಹೊಕ್ಕು ಸಿಕ್ಕಿದರಿಕ್ಕಿ ಲೋಹಿತ । ಮುಕ್ಕುಳಿಸಿ ಕರುಳಂಗಮಾಲೆಯ । ನಿಕ್ಕಿ ಪಾರಾಡಿದವು ಲವನಸ್ತ್ರಾಹವದೊಳೆಲ್ಲಾ ॥ ೭ ॥ ಪಾರಿದರಿಗರೆಘಾಯ ಯದು ರಿಗೆ । ತೂರಿದರೆ ನಾಲ್ಕೆಂಟು ಘಾಯದಿ । ಮಾರಣವೆ ಮೇಣೆಲದೆ ಮೂರ್ಚೆ ಯೊಳೆಲ್ಲ ಆಹವದಾ ॥ ದಾರಿಯನು ಮುಚ್ಚಿದನು ಹಯುಪದ । ಚಾರವಾರಣ ರೆಲ್ಲ ಸತ್ತರು । ಸೇರಿದರು ಯಮಪುರಿಗೆ ಲವನುರುರಭಸ ದೆಸುಗೆಯಲೀ ॥೮॥ ಕಂಡು ರಥಿಕರು ಆರೆಲವೊ ಯಮ । ದಂಡ ಭಂಡಿಸನೆಂದು ರಥಮುಂ । ಕೊಂಡು ಶರಸಂದೋಹ ವೈದಿಪುತೈದುವರ ಲವನೂ ॥ ಕಂಡುಯಿಂತಳಿದ್ಧರನು ನಿಮನೆಳ । ಕೊಂಡು ಬಹದೋ ವೃತ್ಯುವೆನುತು । ದ್ದಂಡರಥದಜ್ಯಾಲೆಸಾರಿಥಿ ಧ್ವಜಗಳಿಕ್ಕಡಿಸೆ ॥ ೯ ॥ ಬಿದ್ದುರಥದಿಂ ನೆಲಕೆ ಚೇತರಿ । ಸೆದ್ದುನಾಸ್ಕೈಕಾಲು ಪಡದೊಗು । ತಿದ್ದ ರಕ್ತವನೊರಸಿ ದೂಳ್ತೆಳ್ಗೊತ್ತಿಯೋಡುವರ ॥ ಗುದ್ದಿಶಸ್ತ್ರ ದಿ ಅಟ್ಟ ಬರುವ ಪ್ರ । ಸಿದ್ಧ ಸತ್ವನ ಕಂಡು ಹಾಸರ । ಬಿದ್ದು ಕೊಲಬೇಡೆನ ಪೇಳ್ದರು ಕೇಳ್ವೆವೆನೆ ಲವನಗೆ ॥ ೧೦ ॥ ನಕ್ಕು ಕೈನಿಲಿಸೆಲ್ಲ ದ್ರುವ್ಯವ । ನಿಕ್ಕಿ ನಂಮೊಡೆಯಲ್ಲಿ ನಿಮಗಾ । ದ್ದಿಕ್ಕರಿರೆ ಪೇಳ್ವೆದಿರೆನಲಾ ಲವನ ಕಡುತರದಾ ॥ ಸೊಕ್ಕನೋಡೆಲೊ ಹಸುಳೆ ನಿನಗಿದು । ತಕ್ಕದಲ್ಲಾ ಚಕ್ರಿಗಳ ಹಗೆ । ಯಿಕ್ಕಿ ಬದುಕುವರುಂಟೆ ಲೋಕದಿ ಬೇಡವೆನಲಾಳೂ ॥ ೧೧ ॥ ತೆತ್ತು ಬಮುಕುವ

ನಿಂಮ ಪಿತನೀ । ನೊತ್ತಿ ಬದುಕುವೆನೆಂಬ ಭ್ರಮೆಯಿಂ । ಸತ್ತು ಸಕಲರಕೆಡಿಪ ಯತ್ನವ ಮಾಡದಿರು ನೀನೂ ॥ ಕುತ್ತಿದವರೊಳು ಪೇಳದಲೆ ಅಡ । ಗೊತ್ತಿ ಬಿಡುವೆಂಬಾಳುಗಳನೋ । ಡಿತ್ತ ಲವನುತ್ತರವ ಸಾಕಾಚಕ್ರಿಬರಲೆಂದೂ॥೧೨॥ ಅಂಜಿಸೆಲ್ಲರ ವಸ್ತುತರಿಸದ । ಭುಂಜಿಸುತ ಕಾಲವನು ಕಳೆವರ । ಹಿಂಜಗಿಸಲೀ ಶೌರ್ಯ್ಯಗೈದಾಡುವಿರೋ ಅವರಿಂಗೇ ॥ ಅಂಜುವರೊ ನಾವವರ ಸಾಹಸ । ಗುಂಜಿ ಬಿಸುಡುವೆನೆಂಬ ಲವನಿಂ । ನೇಂಜಯನೊ ರಣಭೀಮನೊಚಕಾಜನರು ಅಶ್ಚರಿಸೀ ॥ ೧೩ ॥ ಹಸುಳೆ ಅರಿಯದನೆಂದು ನಾವಿಂ । ತುಸುರಿದರೆಯುಮ ಜಯಸಿದುದೆ ನಿನ । ಗೆಸಕವಾಗಂ ಕೃತಿಯೊಳಾಡುವ ವಚನವವರೆದುರಾ ॥ ವುಸುರಲರುಹಕ್ಕೆಂದು ಲವನೆಡೆ । ಬಿಸುಟು ದ್ರವ್ಯವ ವೇಗಚರರು ! ಬ್ಬಸದಿ ವೋಡಿದರಲಪಿಕೆಯ ನೋಡದಲೆ ಕೌಶಲಕೇ ॥ ೧೪ ॥ ಪೊಕ್ಕುಸದುರೆದುರಾಗಿ ವುಬ್ಬಸ । ಏಕ್ಕುತೈತಹ ಚರರನೋರ್ವ್ವಗ । ಏಕ್ಕಿನೋಡುತ ರಾಮಲಕ್ಷ್ಮಣರೇನುರಾಜೀಕಾ ॥ ಬಕ್ಕುದಿಲ್ಲೈತರುವ ಕಪ್ಪಕೆ । ಚಿಕ್ಕಟಲ್ಲಿಂನೇನು ಅವಸರ। ಏಕ್ಕಲಿಲ್ಯಾಕೆಂದು ಯೋಚನೆಗೊಳುವರೆಡೆಗೈದೀ ॥ ೧೫ ॥ ತತ್ತರಿಪಿ ಆನತಿಸದಲದಲೆ ಕೈ । ಯತ್ತದೇಉಸುರಿಂದ ಬಿಕ್ಕುವ । ರತ್ತ ನೋಡೇನೆಂದರಾಘವ ಬೆನ್ನತಟ್ಟಿಸುತಾ ॥ ಕಿತ್ತು ತುಟಿಗಳ ತೋರಲುದಕವ । ನಿತ್ತರಿಗೆ ಕಳವಳವ ತಮಿಸುತ । ಬಿತ್ತಲಾಹವ ತೆರನ ವಿಸ್ತರವಾಗಿ ಕೇಳ್ದಿಲಾ ॥ ೧೬ ॥ ಹೇಗೆ ಮತ್ತೊಮ್ಮೆ ಯಲಿ ಪೇಳೆನ । ಲಾಗ ಕೈಗಳನೆತ್ತಿ ಅದ ಚಂ । ನಾಗಿ ಆಧರಿಸೆಂದುಪೇಳ್ದರು ಪುಂಡರೀಕಿಣಿಯಾ ॥ ಭಾಗದೊಳು ಬರಲೋರ್ವನೆಮುಕಂ। ಡಾಗ ಕೇಳಿದನೇನು ಯನುತವ । ಗಾಗಿ ನಿಮ ಪ್ರಖ್ಯಾತಿ ಪೇಳಲುರೇಗಿದನ ನೋಡೀ॥ ಆರುಯನಲೀವೂರ ನರಪಕು । ಮಾರಲವನೆಂಬಾಖ್ಯ ಬಿಟ್ಟದ । ದಾರಿವಿಡಿರೆನಲಾವು ಕೋಪದಿ ಘರ್ಜಿಸಲು ಶರವಾ ॥ ತೂರಿಸಿದನಾವವನೆಧುರಕೈ । ದೋರಿಚಾತುರ್ದ್ದಂತ ಬಲವನಿ । ವಾರಿಸಿದನೊಂದೆರಡು ಲಕ್ಷವ ಕೇಳು ರಾಘವನೇ ॥ ೧೮ ॥ ಯಸಗೆ ಬಹುಸಮರವನು ಕೈಬಂ । ದಿಪವ ನಾಲ್ಕಾಘೌಯದಲಿಬಿಪಿ । ಬಿಸಿಯರಕ್ತದಿ ಮೂರ್ಚೆಯೇ ಮೇಣೆಲ್ಲ ಕಳವಳದೀ ॥ ಕುಸಿದರವರೊಳುನಾವೆ ಯಾವು । ಬ್ಬಸವ ನೋಡವೆ ಬಂದೆವವನ । ಗ್ರೆಸಗುವಡೆ ನಡಿರಾಹವಕೆ ಬಲಕೇಶವನೆ ಭಟರೂ ॥ ೧೯ ॥ ನಡೆಯದಿರೆ ನೀವವಗೆ ಕಾಣ್ಕೆಯ । ಕೊಡುವುದೇ ಮತವೆನಲು ಕಾಲಾ । ಗ್ನಡಪ ಲಕ್ಷ್ಮಿಯುಲಾಗ ಬಲ ಮುರಹರನಿಗಡ್ಡಾಗೀ ॥ ಹುಡುಗನರಿಯದೆ ಮಾಡಿದನ ಪಿಡಿ । ದಡಿಗೆ ವಪ್ಪಿಪೆನವನ ಪಿತ

ನಂ। ಮಡಿಯೊಳಿಹನೀವೇಕೆ ಪೋಗುವದೆನಲು ಶತ್ರುಘ್ನಾ ॥ ೨೦ ॥ ನಂದು ನಿಲಿಸಗ್ರಜರ ಬಹುಬಲ । ದಿಂದ ಹೊರಡಲು ಆಗಲಿಳೆಪೆ। ತ್ತಂದವಾಗಷ್ಟಗ ಲಸೀಳದಿ ಬಲವೆತೂರ್ಯರವಾ ॥ ಸಿಂಧುವನು ತುಳುಕಾಡುವೊಲು ವೊರ । ವಿಂದ ಬಹ ಶತ್ರುಘ್ನನರಿದ ವ। ಸುಂಧರೇಶರು ಕಾಣ್ಕೆಕಪ್ಪದಿ ನಡೆಯೆ ಮುಂದಂಡೂ ॥ ೨೧ ॥ ಬರುತಲಿರಲತ್ತತ್ತ ಲವನೊ । ಸ್ತರಿಸಿ ವನದೊಳು ತಕ್ಕ ಕಾವಲ। ಗರೆದು ಅಂಜಗ್ರಜಗೆ ಮಾತುಳಗರಿಕೆ ಯಿರದಂತೇ ॥ ಹೊರಗೆ ಹಯಸಾಧನೆಯ ನೆವದೊಳ । ಗಿರುತಲರಿಬಹನೆಂಬ ವಾರ್ತೆಯ । ಮರುತ ನಾಚರದಿಂದ ಕೇಳ್ವಿಕ್ಕಾಣದಿರುವಾಗಾ ॥ ೨೨ ॥ ತಡೆಯುಗಡಿವಕ್ಕಲಿಗನೋಡ್ಬಹ। ನೆಡೆಯೊಳಡ್ಡೈಸೇನು ಯನೆ ಬಲ । ದೊಡನೆ ಶತ್ರುಘ್ನಾಹವಕೆ ಬಹದರುಹಲರಸನಿಗೇ ॥ ನಡೆವೆನೆನಲವರೆನಗೆ ತೋರಿಸು । ನಡೆವುದೆನುತವನೊಡನೆ ಲವಬಂ । ದ್ವಡೆಯುಕಂಡನು ತಾರಕನಪಡೆ ಗುಹನು ಕಂಡಂತೇ ॥ ೨೩ ॥ ಕೊಟ್ಟು ಹಯ ದೂರದಲಿಕುಡಿಯನ। ಬಿಟ್ಟು ಬಲಕೆದುರಾಗಿ ಯಿತ್ತಡಿ। ಯಿಟ್ಟು ನೋಡೆನ ಲೇತಕೆನಲೆನು ಸೀಮೆಯನು ಬಿಟ್ಟೊ ॥ ಬಟ್ಟೆಬೇರ್ಗೈರೆನಲು ಹೊಡೆ ಕು। ಟ್ಟಿಟ್ಟ ಮೂಳಿವನೇರುಬೇಡೆಂ । ಬಟ್ಟೆಗಗನೆಂದೊತ್ತಿದರ ಕೈಖಡಿದನಾ ಲವನೂ ॥ ೨೪ ॥ ಮತ್ತು ಮುಚ್ಚಿದ ಬಲವನರ್ದ್ದ । ರ್ದ್ದುತ್ತರಿಸಿ ಮೇಲ್ಬಲದ ಶಸ್ತ್ರಗ । ಳೊತ್ತಿ ಅರಿಸೇನ ಭ್ರಮದೇಕಾಲಕಿಯ ತೆರದೀ ॥ ಯತ್ತನೋಡಲು ಲವನೆ ಮತ್ತಿಂ । ನೆತ್ತನೋಡಲು ಅವನ ಶಸ್ತ್ರಗ। ಳೊತ್ತರಕೆ ಬೆಂನಿತ್ತವಾಹಿನಿಯುಂದ ಶತ್ರುಘ್ನಾ ॥೨೫॥ ಯಾತಕೀಬೆದರೆನಲು ನಮಕೊಂ। ದಾತ ನೇಮಿಯದಂಡಿನೆದುರೊ । ತ್ಘಾತಿಸುವನೆಮಲಕ್ಷ ಕಿಡುವನನೇಕಅರ್ಬುದವೂ ॥ ಭೀತಿಯೊಳು ಪುಲಿ ಗಂಡಮೃಗ ಸಂ। ಜಾತದಂತೋಡುವರ ನೋಡೆಂ। ದಾತನನು ತೋರಿದರು ನೋಡಿದನರಸ ಶತ್ರುಘ್ನಾ ॥ ೨೬ ॥ ವೊತ್ತಿಸೊಂದೇರೆಡೆಗೆ ತಾಕಂ । ಣೆತ್ತಿನೋಡಮಮೇನುಚಲ್ವಿಕೆ । ಯತ್ತ ನೊಯೇ ಮಾತೆ ಪೆತ್ತಳೊ ಯೇನುಪುಣ್ಯದಲೀ ॥ ಬೆತ್ತನೋ ಯಾಸತ್ವಬಹವರ। ಹೆತ್ತುಫಲವೇನೋರ್ವ ಸಾಕೆಂ। ಬುತ್ತ ಮಸ್ತಕವಲೆದುಕೇಳಿದನಂತುಶತ್ರುಘ್ನಾ ॥೨೭॥ ಅರೆಲವೊ ಸುಕುಮಾರ ನಿನಗೀ। ದಾರಿಕಲಹವಿದ್ಯಾಕೆ ನೀನಿ । ನಾರನಂದನ ಹಸುಳೆಗಲ್ಲೀಕಾಲವೆಮಕೂಡೇ ॥ ತೋರಲಾಹವಕೀಗಗೈದವು। ಧಾರಕಾಂ ಮೆಚ್ಚಿದೆನು ಸಾಕ್ಕೆಲ । ಸಾರಿ ಕಳುಹಾ ದ್ರವ್ಯವೆಂದನು ನಗುತ ಶತ್ರುಘ್ನಾ ॥೨೮॥ ಆರೆನಾನಾತಾವಾಣೆ ಕೂ । ಮಾರಬೆಟ್ಟವ ನೊಡೆವವುಳಿಯೇ ।

ತೋರವಿಹುದಾವಸ್ತು ಮರೆದುಳಿದಿರುವನಾಗಿರಲೂ ॥ ಸಾರು ಪದಯುಗವಲ್ಲ
ದಿರೆ ಕೈ । ತೋರು ನಿನ ಸಂಪದಕೆ ಮೆಚ್ಚಿದ । ನಾರಘುಜಗಪಕೀರ್ತಿತರಬೇ
ಡಾರು ನೀನೆಂದಾ ॥ ೨೯ ॥ ರಾಮನನುಜರೊಳೀತನೇ ಕಿರಿ । ಯಾವುಹಾ
ಶತ್ರುಗ್ನ ರಣನಿ । ಸ್ಸೀಮನೀಯುಗ ಭೀಮನೆಂದರು ವೇತ್ರಧಾರಿಗಳೂ ॥ ಈಮ
ಹನೆ ಮುಂದಾಗಿ ಕಡೆಗಿಂ । ನಾಮಹರು ಐತಹರೊಯಾಯಶ । ನಾಮ ವುಳಿ
ಪನೋಕಾದಿ ನೀನಿರ್ನ್ನಾಮವಾಗುವನೋ ॥ ೩೦ ॥ ಯಂದು ರಣಕಾಸಿಯನು
ಬಿಗಿದರ । ಏಂದಮುಖಿಯಾತ್ಮಜನು ಬಿಲ್ಕೋ । ಲಿಂದನಿಂದನಗಾಡಿವೋಡಿ
ಯ ವೀರವಿತರಣವಾ ॥ ಇಂದಿರಾಂಬಕಿ ವೈದನೋಡೇ । ನಿಂದು ಪೇಳಲಿ ಕಾ
ದರಿರಲಿಂ । ನಿಂದ ಧೈರ್ಯಕೆ ಸರಿಯೆ ಯಿವಗೆದುರಿನ್ನು ಲೋಕದಲೀ ॥೩೧॥
ಅಮಮ ಯಮ ಬಲವನ್ನು ಪಿಂದ । ಟ್ಟಿಮಗೆದುರಾಹವಕೇನುಡಿನಡೆ । ಯು
ಮರಿನಲಿಮೇಲ್ವಾಯ್ದು ಶೂರಕ್ಕಮರಲೋಕದಲೀ ॥ ಸಮರೆಹಪುಳೆಯನೋಡಿ
ಕೈಯಮ । ಗಮರದೊಸ್ತ್ರವಬಿಡನು ವುಲಿದಂ । ತಮಿಸದೀಕದನುಳಿಯಬಾ
ರದುಯಂದು ಶತ್ರುಘ್ನಾ ॥ ೩೨ ॥ ಬೇಡಬೇಡಾತ್ಮಜನೆ ನಿಮಪಿತ । ಕೂಡಿನ
ಡಕೊಳ್ವಾಗಿ ನಾಕೈ । ಮಾಡಲಾರ್ನ್ನಿನ್ನಗ್ರ ಪೋಗಾ ವಜ್ರಜಂಘನನೂ ॥
ಕೂಡಿಬಹುದೆನೆ ನ್ರುಪನವುದರದಿ । ಮಾಡಿದನೆ ಚಕ್ರಾಹನೆಂಬ । ತ್ತಾಡಿನೋ
ಡೆನ್ನಲ್ಲಿ ಸರಸವನೆಂದನಾಲವನೂ ॥ ೩೩ ॥ ಇಷ್ಟು ಪಿತ ಮರ್ಯಾದೆಯೊಳು
ಕರು । ಣಿಷ್ಟಗೊಳ್ವರಿಗಾನು ಅನುಸರ । ನಪ್ಪೆಸದ್ಯೆಯ್ಯದಲೆ ಕಾಣ್ಕೆಯನಿಟ್ಟು
ಕೈಮುಗಿದೂ ॥ ಶ್ರೇಷ್ಟವನೆ ವುಳಿಸೈದು ಆಕ್ರ್ಕಾ । ಣ್ದುಷ್ಟರೊಳಗೇಕೈದಿಪೋ
ದೆಂ । ಬಿಷ್ಟರಲೆ ಶತ್ರುಘ್ನಬೇಗೆಂಡಾಗ ಲವನಗುತಾ ॥೩೪॥ ಮಾತು ಮಾತಿನ
ಮುದ್ದಿಗವನಿಹ । ನೂತನಕೆ ಕಡುಮರುಕ ಬಹದಿಂ । ನಾತು ನಿಂತದಕೈದುಕು
ಪಿತಿಂತೆನ್ನನೆರಗೆಂಬಾ ॥ ಮಾತು ತೊದಲೊಚನೆಂದು ಕೈಬಲ । ವಾತಗರಿಸೈದಿ
ಸಲು ಬೇಕೆಂ । ದಾತನೆದುರಾ ಬಿಲ್ಲ ನಾರಿಯ ಮಿಡಿದ ಶತ್ರುಘ್ನಾ ॥ ೩೫ ॥
ಆದುರಿಧರೆಯ:ಲ್ಲಾಗಲುಡುಗಣ । ವುದುರುವದ್ಭುತವಾಗಲದಕಂ । ಡದಟನೋ
ಶತ್ರುಘ್ನನೀನಿಂತಿರ್ದ್ದರೇ ಬಲರೋ ॥ ಅದರಕಾರಣ ಲೆಂಕೆದಶಸಿರ । ನದುರಿಸಿ
ದ ಶಕ್ತಿಯನು ವೆಕ್ತಿಸಿ । ಕೆದರಬೇಡಪಹಾಸ್ಯ ಯೆದುರಾಗೆಂದನಾ ಲವನೂ॥
ವಂದೆವೂರರಸಾನು ಯನನೀ । ಕೊಂದರೇ ಕೀರ್ತನುಮುನಿದರೆ । ಹಿಂದು
ಯೇನೆನಕೂಡೆ ಕದನವಮಾಡಿ ನೀಸೋತಾ ॥ ನೆಂದರದು ಹೀನಾಯುವದನರಿ
ದೊಂದು ಮಾತಿನಲೈದು ಜಾಗ್ರತೆ । ಯಿಂವಲಿ ಮುಖಾಗಲವೆ ಸೈರಿಸೆನೆಂದ

ಸುಕುಮಾರ ॥೩೭॥ ನೋಡಿ ಸಿಷು ಕೊಲಲಾರದಲೆ ಮಾ । ತಾಡಿದಷ್ಟೃಷ್ಟ ಬ್ಬುತಿಹೆ ನೀ । ಮಾಡುತಿಹ ಸಾಹಸವ ತೋರೆಂಬನಿತರಲಿ ರಥಕೆ ॥ ಹೂಡಿದ ಶ್ವಾಚ್ಚಮ್ಮ್ರಟಿಗ ಸಹ । ಕೂಡುತೆಮುಪುರಕೆನ್ನ ಶೌರ್ಯವ । ನೋಡಿದೋ ಶ ತ್ರುಘ್ನ ತೊಡುಯಿನ್ಬಾಣವೆನೆ ಲವನೂ ॥೩೮॥ ಹೂಡಿ ಬದಲಾಶ್ವಾಘೆಯನು ಸಹ । ಜೋಡಿಸಿನ್ನೆಳೆಯನಲು ಮೋಸವ । ಮಾಡುವನೆ ಸರಿಯಂದು ದಿವ್ಯಾ ಸ್ತ್ರಗಳನಳವಡಿಸೀ ॥ ತೀಡುವನಿತಕೆ ವ್ಯಡನು ಯಂಬು । ದ್ರಾಫಡ ಸೇನಾನಾ ಯಕನು ನಾ । ನೋಡುವೆಷ್ಟೆನುತ್ತೈದಿ ಬಂದನು ಲವನಿಗೆದುರಾಗೀ ॥೩೯॥ ಸಿಡಿಲಗಂಜದಗೀಗ ಕೊಳ್ಳಿಯ । ಕಿಡಿಯದೇ ಲಕ್ಷ್ಮೆಂದು ರಥಹಯ । ಗಡಿದು ಸಾರಥಿಗಡಿದು ಅವನಿಟ್ಟಸ್ತ್ರಗಳ ಖಡಿದೂ ॥ ಪಿಡಿದಬಿಲ್ಕೋಲ್ಬಡಿದು ತತ್ತರ । ಬಡಿಸಲಾರಥವಿಳಿದು ಚಕ್ರಡೆ । ಯಡಗಿದನ ನೋಡ್ಬಲಕೆ ಕೈಬೀಸಿದನು ಶತ್ರು ಘ್ನಾ ॥೪೦॥ ಇಟ್ಟನುಡಿ ಬಂದಟ್ಟದಲೆ ಕೈ । ದಿಟ್ಟವನು ಯದುರಿಟ್ಟ ತೋ ರುವ । ದಿಟ್ಟನೀ ಹಸುಳಸಮ ರಣಮುಖಕೆಂದು ಹೂಂಕರವಾ ॥ ನಿಟ್ಟನೃಪ ನಾಗ್ನೆಯಲಿ ಬಲಬೆ । ನ್ನಟ್ಟಿದರು ಮೂರಾರು ಅರ್ಭುದ । ವಿಟ್ಟು ಶರಗಳ ಲವನಮೇಲಿದ್ದಸ್ತ್ರವನು ಮುಚ್ಚೀ ॥೪೧॥ ಬಹಳಬಲ ಚತುರ್ದಿಕ್ಕಿನಲಿಮು । ಚ್ಚುಹರು ಕರೆವಸ್ತ್ರಗಳ ತನಪುಂ । ಖಹಿತದಲಿಸವ್ಯಾಪಸವ್ಯದಿ ನೆಗೆದುಹೊಳೆ ದೊಳೆದೂ ॥ ನಿಹಿತಗೊಡದೊಂದೆಡೆಯೊಳೆಲ್ಲ । ಲ್ಲಹರವರಿದೆಲ್ಲವನುಖಡಿಖಡಿ। ದಹಿತಸದಮುದರಾಸಿಗೈದನುಚಾತುರಂಗವನೂ ॥ ಕರಿತುರಗಕಾಲಾಳುಸ್ಯಂದನ। ವರಿದು ಚಿಂಣಿಯುಗೈದು ಯೇಕೋ । ತ್ತರಕೆಬತ್ತೀಶಾಸ್ತ್ರಸಮಿತಿಗಳೊಟ್ಟಿ ಖಡಿ ಖಡಿದೂ ॥ ತಪತರದಿ ಕವಳಿಗೆಯ ಗರೆದಂ । ತಿರಿಸಿದನು ಹರಿಸಿದನು ಮುಂ ಧುರ । ಕೆರಗಿದರವರಗಿದರನಾ ಲವನೆಸುಗೆ ರಭಸದಲೀ ॥೪೩॥ ಸತ್ತರಡಿಯೊ ಳು ಮೆಟ್ಟಿಮೇಲೆಂ । ದೊತ್ತಿ ಸುರಿದಸ್ತ್ರಗಳ ಖಡಿ ಹೊದೆ । ದುತ್ತರಿಸು ಕತ್ತರಿ ಸುಹುಡುಗನಿಗೇತಕೀಚಾಪ್ಪೇ ॥ ಕುತ್ತು ಖಡಿತಿವಿ ಕರುಳ ಬೆನ್ನೊಳ । ಗೆತ್ತು ದೆಂಬರಯದುರಿಗೋಕ್ತ್ರವ । ನೆತ್ತದುತ್ತರಿ ಪಾತುರವೊಳಿರ್ದೇನು ಬಳರಣಕೇ ॥೪೪॥ ಏನುಸಾಹಸಿಯಕಟ ಅರಿದಳ । ಜೇನನೋಣದಂತಾಲಿ ಶಸ್ತ್ರದಸೋ । ನೆಯುನು ಕುಡಿವಗ್ನಿ ಮೊಳಕೆಯ ತೆರದಿ ಶಸ್ತ್ರಗಳಾ ॥ ಲೂನಿಸುತಲಾ ಮಶಕಗ ಳವುರಿ । ಗಾನಿಸಿದತೆರನಾಗಿ ಸರ್ವರ । ಹಾನಿಸಿದನೇ ಸತ್ವನೋ ರಣಕಾಮುಹಾ ಲವನೂ ॥೪೫॥ ಕಿಡಿಯು ಅಡವಿಯು ಸುಡುವತೆರ ಕರಿ । ಪಡೆಯುಪಡಲಿಡಿಸಿ ದನು ಮರಡಿಗ । ಳಿಡೆಯೊರಗಿದ ಗಿಡಪ ಗುಲ್ಮದತೆರದ ಕರಿತುರುಗಾ ॥ ದೆಡೆ

ಯಸುಭಟರ ಕರಚರಣ ಬಿಡಿ। ಗಡಿದುಹರಹುತ ಸರಳ ಸಮಿತಿಯ। ನಡುಕಿದ
ನು ನಡುನಡುವೆ ಲವ ಕಡುಚಪಳತರವೆರಸೀ ॥೪೬॥ ಪೇಳುವನಿತಲ್ಲಾ ಲವನ
ರಣ। ದಾಳುತನವನಿತ ಹಿತವಾಹಿನಿ। ಬೀಳಲೆಚ್ಚನು ಬಯಲಗೈದನು ಮಂ
ಜುದಿನಮಣಿಯಾ॥ ಕೋಳಿಗಂಜಿದತೆರದಿ ಮಿಕ್ಕರು। ಬೀಳಲರಿಯದಲೋಡು
ತಿರೆಕ। ಟ್ಟಾಳು ಅಟ್ಟುವದಿಟ್ಟವರಿದೈತಂದ ಶತ್ರುಘ್ನಾ ॥೪೭॥ ಸತ್ತದಳವೆನ
ಸತ್ವವನು ಕಂ। ಣೆತ್ತಿನೋಡಿನ್ನಸದಳಿವ ಕಲಿ। ವೆತ್ತನೆಂದಡಿಗೆರಗಿಕಾಣ್ಕೆಯ
ನಿಟ್ಟು ಕೈಮುಗಿದೂ॥ ಯೆತ್ತದೇಕೋಕ್ತವನು ವಿಗ್ರಹ। ಹೊತ್ತುಹೋಹನೊ
ರಣಕೆಬೀಜವ। ಬಿತ್ತಿಹೋಹನೊ ಹೇಳುಶತ್ರುಘ್ನೆಂದ ಲವ ಬೇಗಾ ॥೪೮॥
ಇಷ್ಟು ಬಲಸಂಹರಿಸಿದನ ಮೈ। ರಿಷ್ಟುಕ್ಷತವಿಲ್ಲೆನ್ನ ನೀಕ್ಷಿಸಿ। ದಷ್ಟುರೇಗುವ
ನಕಟ ಯಿಾತೆರ ಕಲಿಯು ಕಲ್ಪದೊಳೂ॥ ಶ್ರುಷ್ಟಿಯಿಲ್ಲಿವನೆಂತು ಕೊಲಲೆಂ।
ಬಿಷ್ಟಗೊಳುವನ ನೋಡಿ ಕೈಗೊಡ। ದಷ್ಟರಲೆ ಯದೆಹಾರುವರೆ ಶತ್ರುಘ್ನನೆನೆ
ಲವನೂ॥ ೪೯॥ ಆರಿದರರಿಯಿಷ್ಟರಲೆ ಮೇಣ್ಬಲ। ವಿರಲು ನಡಸೊಂದೆರ
ಡುಕೈಗಳ। ತರವು ತಿಳಿವುದು ನಿನಗೆ ಯನಗಾಗಾರು ವಿಮುಖವನೂ॥ ತಿರು
ಹುವರೊ ಸಂದಾನವಾಗೆಂ। ದೊರೆದ ಲವನಿಡುಸರಳುಗಳ ಮು। ಚ್ಚರಿಸಿದನು
ಶತ್ರುಘ್ನತೊಡು ಸುಮನಿರಲು ಬೇಡೆಂದೂ ॥೫೦॥ ಹತಿಸಲಾರದೆ ಹಸುಳೆ
ಯಂಡಾ। ನುತಿಸಿ ತಡದರೆ ತವಕಬಡುತಿಹೆ। ಸುತನೆ ನೋಡೆಂದಿಟ್ಟಶತ್ರುಘ್ನ
ಸ್ತ್ರರಾಸಿಯನೇ॥ ಅತಳಸುರತಳ ದಿಕ್ಕುಗಳನರಿ। ವತುಳರಿಲ್ಲದತೆರದಿಸಂಕುಳ।
ಜತಿಸಿತೇನುರುವಣೆಯೊ ರಣಕಲಿ ರಾಮನನುಜಾತಾ ॥೫೧॥ ಬಂದಿಸಾಕಾಶ
ಗಳಗಿಡಿ। ದಂದಕನುರರು ನೋಡಲೈತಂ। ದೊಂದು ಬೆದರಿಕೆಗೊಳಲು ಕೈಚಿ
ತ್ಕಾರಶತ್ರುಘ್ನಾ ॥ ಮುಂದೆ ತೋರಿದಮೇಲೆ ಬಹುಸರ। ಳಿಂದ ಪಂಜರಗೈದು
ಬಿಲಖಡಿವೆಂದು ಆತುರಗೈದು ಅಡಿಮೇಲೀಕ್ಷಿಸೆಸೆದಸ್ತ್ರಾ ॥೫೨॥ ಆರೆಲವೊ
ಶತ್ರುಘ್ನ ನಿನಗೀ। ದಾರಿತೋರಿದನಹಿತನಸ್ತ್ರವಿ। ಧಾರಿಸಿತ್ಬದಲಾಗಿ ಸಮರಸ
ದಲ್ಲಿ ಕಾದುವನೂ॥ ಧೀರನವನೇಸರಿಯು ರಣಕೆವು। ಧಾರನದಬಿಟ್ಟಳತನದಿ
ಯಾ। ದಾರಿಗೈದರೆ ರಾಮುಗೂನಾಯ್ತೆಂದನಾ ಲವನೂ ॥೫೩॥ ಹಸುಳೆನಾ
ನೆಂದೆನ್ನ ಕೈಬಿ। ಟ್ಟೆಸೆಯೆ ನಿಮ್ಮಪ್ಪನಿಗೂ ಸಾಧ್ಯ। ಲ್ಲೆಸೆವನೇ ನೀ ನನ್ನಸರಳಿನ
ತೆರನೋಡೆಂದೂ॥ ಗಸಣೆಗೊಂಡವನಲಿದು ಮೇಲ್ಮೈ। ಲೆಸೆದು ಬಹ ಸರಳರಿ
ದು ಕೈಬಂ। ದಿಸಲು ಸಾಹಸಗೈದ ಲವನರಿದನುರರಾಶ್ಚರಿಸೇ ॥೫೪॥ ಕತ್ತ
ರಿಸಿಶತ್ರುಘ್ನತಮಶರ। ಕೆತ್ತಿ ಹೊಡೆದನ ಶಾರ್ವರಿಯೆ ಮು। ಚ್ಚುತ್ತ ಬರಲಳು

ಕವಲೆ ಸೂರ್ಯಾಸ್ತ್ರಿಟ್ಟು ಲವನೊರೆದೂ ॥ ಕತ್ತಲೆಯನಪಹರಿಸಿ ನಿನಸ । ತ್ವಿ ತ್ತಶರವೆನಾಯ್ತು ಯಿಸ್ನಿಹ । ವೆತ್ತುಬೇಗೈಶ್ರುಘ್ನನೆನೆ ಲವದಟ್ಟೆತೊಡೆಭುಜವಾ ॥೫೫॥ ಕೆಟ್ಟೆಶೆರಕವಡೊತ್ತಿಯನಶರ । ಬಿಟ್ಟುಕೆಡಹುವ ಶಕ್ತನೇ ನಿನ । ಹೊಟ್ಟೆ ಯನು ಸೀಳ್ವೆಂದು ಯಿಡಲಜ್ಞಾಸ್ತ್ರವಾಃವನಿಯಾ ॥ ಸುಟ್ಟು ಬರಲದ ಕೊರುಷ ಶರವೆದು । ರಿಟ್ಟು ತಂಪಿಸಲಿನ್ನು ಕಡುಸಿ । ಟ್ಟುಟ್ಟೆ ಶತ್ರುಘ್ನೆಸೆವನಾರಿಸುತಿರ ಲು ಲವನತ್ತಾ ॥ ೫೬ ॥ ತುರುಗಗಾಪಿನ ಚರನುಬಹುಧುರ । ಬೆರಸಿತೀಸು ತವೋಸಬರಲೆನ । ಗರಸುಮುನಿದಪನೆಂದು ಹಯವಲ್ಬಿಟ್ಟು ಬೇಗೋಡೀ ॥ ಯರಗಿಲವ ಕಡೆನಾಡಿನೊಳು ಸಂ । ಗರವ ಶತ್ರುಘ್ನನೊಳು ಮಾಡುವ । ನರಿತ ಬಿನ್ನಹಗೈದೆನೆನೆ ಕೆಳ್ದೊಡ್ರುಜಂಘನೃಪಾ ॥ ೫೭ ॥ ನೋಡಲಾಸಭೆಯತ್ತಲೋ ರ್ವಿಂ । ತಾಡಿದನು ತಡೆದಿರ್ದ ಕಪ್ಪವ । ಗೂಡಿಸಿಹವನದಲ್ಲಿ ಕಾಪಿನಜನರಬಡಿ ದಟ್ಟೇ ॥ ನೋಡಿದಾನಿಂತೆನಲು ಬಲರೊಳು । ಮಾಡಿ ಕಲಹವನಳಿವ ಲವ ನೆಮು । ಕೇಡಮಾಡಿದನೆಂದು ಮರುಗುವ ನೃಪಗೆಕುಶನೆಂಗೀ ॥ ೫೮ ॥ ಬರ ದುಲವಗಪಮೃತ್ಯು ಮೇಣ್ಬರ । ಲುರವನಿಬ್ಬಗಿಪಾ ಕೃತಾಂತಸಿ । ಗೊರಿಸಿಬರೆ ನಿರ್ಜರರ ದಹಿಸುವೆ ನರಸುಗಿರಸುಗಳಾ ॥ ತೆರನುಲಕ್ಷ್ಕೆಬಲವೆನಲು ಸೈ । ಯ್ಯ ರತಗೊಡುವವರಿಗೆ ನೀ ಮನ । ಕೊರಗದಿರು ನಿಜಮಾತುಳೆಂದನು ಹೊರಟನಾ ಕುಶನೂ ॥ ೫೯ ॥ ಇತ್ತ ಬೀಳ್ಕೊಳುವನಿತರೊಳಗಿಂ । ನತ್ತ ದಿವ್ಯಾಸ್ತ್ರಗಳಲಿ ಟ್ನೇ । ಗುತ್ತಲವಗೆದುರಾಗಿನಡೆಯದೆ ಶಕ್ತಿಶಸ್ತ್ರಗಳೂ ॥ ಬತ್ತಿಬರೆರಾಘವನ ಸತ್ಯಿಂ । ನೆತ್ತಚಲಿಸಿತೊ ಯಂನಧೃತಿಪರ । ವೆತ್ತುದೇನರಹಂತನೆನುತಲಿ ಮ ರುಗಿಶತ್ರುಘ್ನಾ ॥ ೬೦ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿ ತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದಮನ । ಮೊಲಿದುಲಾ ಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೬೧ ॥

ಅಂತು ಸಂಧಿ ೭೭ ಕ್ಕಂ ಪದನು ೪೪೮೮ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ತೆಂಟನೆಯ ಸಂಧಿ.

ಭರತನ ಜಗಳದ ಸಂಧಿ.

ಕೇಳಿ ಕೊಳುಗುಳದೊರ್ತನವ ರಣ | ತೂಳ ಭರತೈದಾಹವದಿ ಮರೆ | ವಾಳಿದರು ಶತ್ರುಘ್ನಸಹ ಕುಶಲವರ ಕೈಯಿಂದಾ || ಪದನೂ ||

ಅರಸಕೇಳಾಹವದಿ ಕೈಬಲ | ಕರವು ಸಾಗದೆ ಹಲವುಯೋಚನೆ | ಗರೆ ವಶತ್ರುಘ್ನನ ವಿಲೋಕಿಸಿ ದಿಕ್ಕನೋಡಿದರೇ || ಅರಿಯು ಬಿಡುವನೆ ಯಿರಲು ಸಾಹಸ | ಗರೆವುದಿಲದಿರೆಯರಗಿ ಪೋಗೆಂ | ದೊರೆವ ಲವನಾಲೋಕಿಸುರಿ ಯುತ್ತಿರಲು ಯಿಂನಲ್ಲೀ || ೧ || ಇದ್ದ ಮುಖ್ಯರಿದೇನೊ ಅಪಜಯ| ಹೊದ್ದು ವಂತಿಹುದೆಂದು ಚರರೀ | ಸುದ್ದಿ ಮುಟ್ಟಿಸಿ ವೇಗ ರಾಘವನಗೆಂದು ಐದಿಸಿದಾ || ಸುದ್ದಿಯನು ಶತ್ರುಘ್ನಗರುಹ | ಲ್ಲಿದ್ದಸಮಯದಿ ಕುಶನು ಬಲಸಂ | ಬದ್ಧವಣರ ವದಿಂದ ಬಂದನು ರಣಕೆರಣಧೀರಾ || ೨ || ಅರಿದುಕುಶ ಬಹಳಿವಿಯನುಯಿ ವ | ಗುರುತರಾಗಿಹನೇವೆನೆಂಬಂ | ತಿರುವ ಶತ್ರುಘ್ನನನು ಬಿಟ್ಟಹ ಅಗ್ರಜನ ಬಳಿಗೇ || ತೆರಳಿ ಆನತಿಸುವನರಥವಿಳಿ | ದೆರಕದಿಂದೊಪ್ಪವಗೆ ಯನಭಯ| ಕರಿಕೆಗೈಲಿಲ್ಕಾಯ್ದುದೆಂದನು ಲವನುಕೈಮುಗಿದೂ || ೩ || ಅರಿಗಳುರುತರಕೇಳಿ ಮನೆಸೈ | ವರಿಸದೆಸಗಿದೆನೆಂದು ಭಯಬೆಂ| ಗರೆವನೆಳೆ ಕದಪೊತ್ತಿ ಪೇಳಿದನ ನುಜಕೇಳಿದನೂ || ಧುರವಗರೆವಡೆ ಗಜದಿ ಲೂಟಿಯ | ಗರೆಯಬೇಕ್ಬಂಡಾರ ಸತ್ತರು | ಯಿರುವನವನವನಿಯಲಿ ಕೀರ್ತಿಯೊಳೆಂದನಾ ಕುಶನೂ || ೪ || ವೊತ್ತಿದೆವು ಅತ್ತಿತ್ತರಣಸರ | ಕಿತ್ತಹುಲುಮಾತ್ರಿಗರೊಳೆಶಬೆಂ | ಬತ್ತುವದೆ ಚಕ್ರೇಶನಗ್ರದಿ ರಾಮಬಾಣಗಳಾ || ನೊತ್ತಿದರೆ ಯಮಕೀರ್ತಿಲೋಕವ | ನೊತ್ತುವದು ಆವಾಗಬಹವೆಂ| ಬುತ್ತಲಿರ್ದುಚಿತೆಂದು ಬಂದನು ಕುಶನುರಣಮು ಖಕೇ ||೫|| ಕೊಟ್ಟು ಅನುಜನಿಗೊಂದು ರಥದೊಳ | ಗೊಟ್ಟಿದಸ್ತ್ರದರಾಸಿಬಲ ಬೆಂ | ನಿಟ್ಟು ಬಹನಿಡು ಕಲಿಗಳೆಡೆಯೊಳಗಾನಕ ಧ್ವನಿಯಾ || ಮುಟ್ಟುತಿಹು ದಾಶಾಶಗಳನೊಡೆ | ದಿಟ್ಟದಹಿತರ ಧುತಿಯುನಾ ರಭ | ಸಿಟ್ಟುಬರುತಸಹಾ ಯಕುಶ ಶತ್ರುಘ್ನನಿಂತೆಂದಾ || ೬ || ಯಿದೆಯೊ ನಿನದಳ ನೀನೆಶತ್ರು | ಘ್ನದ ಟಬಲಕೇಶವರ ಅನುಜೆನಿ | ಸಿದನು ನೀನೆಯಹುದೊ ಶತ್ರುಂಜಯನು ಯನಿಸಿ ದನೂ || ಕದನ ಕರ್ಕಶನಹುದು ನಿನಕ್ಕೆ | ಚದುರನರಿದಿಂನ್ಯೆದಿ ಕಳುಹುವ |

ರೆದೆಯ ನೋಡುವೆ ಸಾಕು ನಿಲದೆದುರೆಂದನಾಕುಶನೂ ॥ ೭ ॥ ಅವರವಾತಿನ ಮೋಡಿಗಾಡೆಳೆ । ಯುವದಕಲಿತನವೀಕ್ಷಿಸಲು ನಂ । ಮವರಹೋಲಿಕೆ ಕಾಣ್ಬ ದಿಂನೆಂತಾಕೆ ಪಡೆದಿಹಳೋ ॥ ಅವನಿಗಾಶ್ಚರಿಯವು ಯೆನುತಿರೆ । ಬವರವಾರ್ತೆಯ ಆಳುಗಳು ರಾ । ಘವನಸಂನಿಧಿಗೈದಿ ಯರಗಿದಪೇಳೆ ಲಾಲಿಸುತಾ॥೮॥ ಯಲವೆಲವೊ ಶತ್ರುಘ್ನನಿಗೆ ಯವ । ಮಲತನೆನಲಾಶ್ಚರ್ಯ ನೆಮುಬಲ । ದಲಿವಿನೋದವೆ ಹಸುಳೆಯೋರ್ವನೆ ಕೊಂದು ಬಹುಬಲವಾ ॥ ಛಲದಿ ಮೆರೆವೆನಲೀನುಅವಭೂ । ವಲಯ ಕರಿದಾದೆಂದು ಲಕ್ಷ್ಮೀ । ಲಲಿತನಡಸುತ ಖಿಡಿಯನೇತ್ರದೊಳೀಳ್ವ ಸಮಯದಲೀ ॥ ೯ ॥ ಧರಣಿಯನೆ ಮರಳಿಸುವ ಸತ್ವದ । ಧುರಪರಾಕ್ರಮಿ ಭರತನಾನತ । ಗರೆದು ಪೇಳಿದನರ್ಥಚಕ್ರಿಗೆ ಹಸುಳೆಯಗ್ರದಲೀ॥ ಕರವಗೈಲಾರದಲೆ ಶತ್ರು । ಘ್ನರಲು ದಳಹತಗೈದನಲದಾ । ವರಜಗೆದುರಾವ ನಿಯೊಳಿಲ್ಲೆಂದಾನು ಪೋಪೆಂದಾ ॥೧೦॥ ಹಾಗೆ ಗೈಯಂದಧಿಕಬಲವಿ । ತ್ತಾಳಕಳುಹಲುಪೇಂದ್ರನನುಜಂ । ಬಾಗಮುವನಾ ಧರಿಸಿದವನಿಪರೈದಿಭಕ್ತಿಯಲೀ॥ ಬಾಗಿನುಂಚೂಣಿಯೊಳು ನಡೆತರು । ವಾಗಲಾನಕ ಮೊರವುಕಿವಿಗಿಡಿ । ವಾಗಬೆಂಬಲಬಹದ ತಿಳಿದನುಬೇಗ ಶತ್ರುಘ್ನಾ ॥೧೧॥ ಹಿಗ್ಗಿನಗೆಮುಖಗೊಳುವದಪರದಿ । ಯಗ್ಗಳದಿ ಬಹಬಲವ ಕಂಡ್ನಿನ । ಗುಗ್ಗಿತೆದ್ರುತಿಸುಗ್ಗಿಯವ ಬರಲೀರ್ವರೊಂದಾಗೀ ॥ ನೆಗ್ಗಿಬಿಸುಡುವೆನೆಂಬ ಕುಶನೇ । ನಗ್ಗಳನೊ ನೋಡವನಿಸತಿರಣ । ಕಗ್ಗಲಲ್ಲನೆ ಅತ್ತಬರುತಿಹ ಭರತಹೊಗಳಿಸಿದಾ ॥ ೧೨ ॥ ತಪ್ಪದಿಹರಾಂಬಾಣಧರನಾ । ಗಿಪ್ಪ ರಾಘವನನುಜ ಚಕ್ರಿಯೆ । ನಿಪ್ಪ ಲಕ್ಷ್ಮೀಧರನು ಆವರಜಾದ ಭರತೇಂದ್ರಾ ॥ ನಪ್ಪನೇ ಕಲಿಲೋಕದೊಳಗಿಂ । ನಿಪ್ಪರೊಳಗೆಂದ್ಕಹಳೆಗಳನುಡಿ । ಯುಪ್ಪಳಿಸುತೈತರುವ ಭರತನಕಂಡು ಲವಮುಳಿದೂ ॥೧೩॥ ನೋಡಲಗ್ರಜನಾಸ್ಯವನು ತಡ । ಮಾಡು ಯಿರ್ವರನೊಂದೆಸಮುಗೈ । ದೋಡಿಸುವೆವೆಂದಾಗ ಮುಂಕೊಂಡ್ಬರುವ ಭರತನಿಗೇ ॥ ಆಡಿದನು ಯಿ ನುಡಿಯುನಿಲುವಂ। ತಾಡಿಸಿದೊಗಾಳ್ಗಿಟ್ಟಸೊಡರಿನ । ಹಾಡೊ ಬೇಗುಲಿಯಂದಕುಶಕೂರಂಬ ತೋರಿಸುತಾ ॥೧೪॥ ಇಟ್ಟು ರಾಮುಸ್ತ್ರದೊಲು ನಾನುಡಿ । ಯಿಟ್ಟುದೆನೆನೀಮುರಿದಳವರೆದು । ರಿಟ್ಟು ಬರದಿರರಾಗ ರಾಮನ ಬಾಣ ಲಕ್ಷ್ಮಣನಾ ॥ ದಿಟ್ಟಚಕ್ರದ ಬಾಳುಯೇಯೇ । ಬಟ್ಟೆಯಾಗುವದರಿವೆ ನಿನಕ್ಕೈ । ದಿಟ್ಟ ವರಿಸೆಂದಿಟ್ಟಭರತನಶ್ಯಂದನಾಶ್ವಗಳಾ ॥ ೧೫ ॥ ಕತ್ತರಿಸಿ ಬೀಳ್ವನಿತರಲಿ ಬದ। ಲೊತ್ತುವಿಡಿದತಿವಾಹಿನಿಗೆ ಸೈ । ಗ್ನಿತ್ತುಹೂಂಕರಸುತ್ತ ಭರತನಕಡುವನೋಡುತಲೀ॥

ಮುತ್ತುತೆತ್ತತ್ತಾಳು ಹಯಗಜ। ವೊತ್ತವೊತ್ತವೆ ಸ್ಯಂದನದ ಸಾ । ರೊತ್ತಿಕು
ಶನಗ್ರದಲಿ ಸುರಿದರು ಸರಳಿನುರುಮಳೆಯಾ ॥ ೧೬ ॥ ಹಿಂದೆಬಹುಬಲವನುಜ
ನಾಸ್ತ್ರವು। ತಿಂದುದೆದುರೊಳು ತಂದು ಅವರೆನೆ! ಕೊಂದು ನೀನುಳಿದ ಪೆಯ
ಬಲವನುಬಿಟ್ಟು ಪಿಂಗಡೆಗೇ ॥ ಮುಂದುವರಿಯಂಬಗ್ರಜನೆ ನಿನ। ಗೊಂದಿಗಲ್ಲ
ವನೊಡನೆಯನ ಕಳು । ಹೆಂದು ಲವಮುಂಕೊಂಡು ಸುಟ್ಟನು ಅಹಿತವಾಹಿನಿ
ಯಾ ॥೧೭॥ ಅರಿಪತಾಕಿನಿಕರೆವ ಶಸ್ತ್ರದ। ಕುರಿಗಳನು ಲವನಸ್ತ್ರ ವೃಕ ಸಂ ।
ಹರಿಸಿದಂದದಿ ಸೇನೆ ಸಹಿತಷ್ಟಷ್ಟ ಹರವರಿಸೀ ॥ ಧುರಧರೆಯೊಳೊರಗಿಸುತ
ಬರೆಬಲ। ವರೆಯು ಗೊಡಲಟ್ಟಟ್ಟ ಗುಂಪನು । ತರಿದು ಸೇನೆಯ ಮಧ್ಯಪಾ
ರಾಡಿಸಿದ ಲವರಥವಾ ॥೧೮॥ ಲವನರಥಸಂಚರವದಾವೆಡೆ । ಲವನ ಶಸ್ತ್ರದ
ಪೀಡೆಗಳೆ ಅರಿ । ನಿವಹದೊಳಗೆಲ್ಲೊತ್ತಿ ಕಾಡುವ ಕಾಟಕಾರದಲೇ ॥ ಬವರ
ದೊಳಗುಳಿದಾಳು ನೀವಿ । ರ್ದಿವನಕೈಗಿತ್ಕೊಲಿಸುವೀಸಂ। ಭವಿತವೀಕ್ಷಿಸ ಬಂ
ದಿರೆಂದರು ರಘುಜನನುಜರಿಗೇ ॥ ೧೯ ॥ ಮತ್ತು ಮುಳಿದ ಸಹಾಯ ಶತ್ರು ।
ಗ್ನೊತ್ತಿಬರಲಾ ಕುಶನು ಅವಗೆದು । ರೊತ್ತಿನಿಲಲಾದಿಯಲಿ ಮುರಿದಗ್ರಜನಧೈ
ರ್ಯದಲೀ ॥ ವತ್ತುವರೆ ಸತ್ತವನತೆರಕಿ। ನ್ನತ್ತಬಿದ್ದಿರದೆಂದು ಶರಕವ। ಚೊ
ತ್ತಿಶತ್ರುಘ್ನನಿಗೆ ಮೊರೆದನು ಸಿಂಹನಾದವನೂ ॥ ೨೦ ॥ ಗೈದಸಿಂಹಧ್ವನಿಗೆಬಲ
ಪಿಂ। ದೈದಿ ಯುದುರಾಡಿದರು ಶತ್ರು । ಘ್ನೈದಿ ಮುಂದಕೆ ಖಡಿದು ಕವಚಾಕಾ
ರದಸ್ತ್ರದಗಳ ॥ ಕೈದುಗಳ ನೈದಿಸಿದ ತನಗೆದು। ರೈದಿ ಬಹವಲ್ಲಲ್ಲೆ ಖಂಡನೆ।
ಗೈದು ಕುಶಶತ್ರುಘ್ನರೆಚ್ಚಾಡಿದರು ಸತ್ವರದೀ ॥ ೨೧ ॥ ಅಳುಕದೋರೋರ್ವ
ರಿಗೆ ತಮಕೈ। ಚಳಕದಿವ್ಯಾಸ್ತ್ರಗಳ ಹಾವಳಿ। ಗಳಲಿ ಯವನಿವನೊತ್ತಿಜಯಸು
ವಕಾತುರಾತುರದೀ ॥ ಬಳಲದಲೆ ಛಳಿಯದಲೆ ಬಹುಳ। ಸ್ತ್ರಳಲಿನೀಗುತ ಕುಶ
ನೊಡನೆ ಕೊಳು । ಗುಳವ ಶತ್ರುಘ್ನೆಸಗುತಿರಲಿಂನತ್ತಲಾ ಲವನೂ ॥ ೨೨ ॥
ಬಹಳಬಲವನು ಕೊಂದು ಮತ್ತುಳಿ । ದಿಹರನಟ್ಟಟ್ಟಾಡಿ ನಿಲಗೊಡ। ದಹಿತ
ರನು ಸಂದಹಿಸಿ ರಣದಾಕಾಶಮಧ್ಯದಲೀ ॥ ಗಹಿಪ ತರಣಿಯತೆರದಿ ಅಟ್ಟ ।
ಟ್ಟಹನಭಯಕಾರದಲೆ ನಕ್ಷ । ತ್ರಹಗಳಂತಲ್ಲಲ್ಲಿ ಸರಿವರಕಂಡು ಕಲಿಭರತಾ॥
ನಿಲ್ಲುನಿಲ್ಲೆಲೊ ಲವನೆ ಯನತೆರ । ದಲ್ಲಿ ಶತ್ರುಗ್ನಿರಲು ನೀಬಲ। ವೆಲ್ಲ ಸಂಹರ
ಗೈದೆಧೀರತೆ ತೋರಿದಿನ್ನಿಲ್ಲೀ ॥ ಸೊಲ್ಲತೋರದಲೋಡು ಬೇಗೆಂ। ದಲ್ಲಿಗೊ
ತ್ತೊಂದೇರಸೋರಿಸಿ। ದಲ್ಲಿ ಮೇಘವುಹರಿದತೆರ ಶರಮಳೆಯಭರತೇಶಾ॥೨೪॥
ಹೋಮಕನುವಹ ದರ್ಭೆಯೊಳು ನಿನ। ನಾಮ ಸಂದರ್ಭಾಹತದವಿ। ಸ್ತೋಮ

ಸಮಿತಿಯಚಿತಕೆ ನಿನನರ್ಪಿಸುವೆನೆಂಬನಿಗೇ ॥ ಅಮಹಾ ಲವಣಾರ್ಣವಭಿನಿನ। ನಾಮುಭರತಿಳಿತದಲಿಯಿಲ್ಲಿನ। ಗೂಮುದಾಗರುಗೆಂದ ಲವಲವಿಕಾವಮುಹಸತ್ವಾ ॥೨೫॥ ಬಂದು ನೋಡಿತ್ತಿತ್ತ ನಿನಬಾ। ಳೆಂದು ಭರತನಸ್ಯಂದನವ ಸ। ರಳಿಂದಬಂದಿಸಲಂಟಿ ಕೀಲ್ಕಿಲಗಡಿದು ಹೊಂದೇರ ॥ ನೊಂದ ಕೆಡಹಲ್ಲಾ ಲವನ ಶರ। ವಿಂನೊಂದನೆರಾ ಹುಡುಗನೇರಿ। ದಸ್ಯಂದನವ ಬಂದಿಸಿದ ಸರಳಿಂದ ಕಲಿ ಭರತಾ ॥ ೨೬ ॥ ಏರಿಬಹಕಣೆಗಳನು ಕಂಡೊಳ । ತೂರಿಸಿದ ದಿವ್ಯಾಸ್ತ್ರದಲಿ ಖಡಿ। ದಾರಿಸಿದ ಅಹಿತಸ್ತ್ರ ಕಾಲಾಗ್ನಿಯನು ಕಲಿಲವನಾ ॥ ವೀರಕವನಿಹಚಾರುತರಕಲಿ। ನೀರಕಾಶ್ಚರಿಸಾಭರತನಿವ। ನಾರಸುತನೇ ನಿರ್ಭಯಂದನುರಣಕೆ ಮನಸಿನಲೀ ॥ ೨೭ ॥ ಹೊಡೆದು ಮೇಲೆಪಚಾಡಿಸುಲಿಯನೆ। ನುಡಿವನಲ್ಲದೆ ಸಹಜದಲಿ ನುಡಿ। ವಿಡುವನಲ್ಲೆಂದಭ್ರ ಶರವನುಮಂತ್ರಿಸಿಡೆ ಭರತಾ ॥ ಕಡೆಯ ಕಾದಂಬಿನಿಯೊಲೋಕವ। ನಡಸಿ ನುಂಗುವೊಲ್ಯೆದಲಾ ಲವ। ತೊಡಗಿ ಬಿಡೆ ಮರುತಾಸ್ತ್ರ ಹಾರಿಸಿತೆಲ್ಲ ಮೇಘವನೂ ॥೨೮॥ ಕಂಡೆಯಾ ಅರಿಭರತನಿನವು। ದ್ದಂಡಶರವೇನಾಯ್ತು ಯಿನ್ನಿಹ। ವಂಡಿಸದೆ ತೊಡು ಬೇಗ ಶತ್ರುಘ್ನನಿಗೆ ಕುಮುಕಾಗೀ ॥ ದಂಡಕೊಂಡ್ಯೆತಂದೆ ನಿನಬಾ। ಳ್ಗಂಡುದೆಲ್ಲೆಲ್ಲಸ್ತ್ರಗಳ ಮುಂ। ಕ್ಕೊಂಡು ಬಿಟ್ನೋಡೆಂದ ನಿನಿಸದಿರದಲೆ ಲವಲವಿಸೀ ॥ ೨೯ ॥ ಅತಿ ಲಘುವಗಂಡಾಸ್ಯನುಡಿಸಂ। ಗತಿಪ ಬಿಡಿಯಕು ಸತ್ವಕಾ ಭರ। ತತುಳತರದುದ್ರೇಕಕುಪಿತದಿ ತೊಟ್ಟು ಅಚಲಾಸ್ತ್ರಾ॥ ಗತಿಶಲಾಗರಿಸಾರುವೆಯೆಕವಿ। ಚುತಲುಬರಲಾಗೊಜ್ರಶರ ಸಂ। ಗತಿಸಿದನು ಲವನದಕೆಯದ್ರುಶಗೊಳಲು ಗಿರಿಸಾರಾ॥ ೩೦ ॥ ಇಟ್ಟದಿವ್ಯಾಸ್ತ್ರಗಳ ನೆಣಿಸದೆ। ಕುಟ್ಟಬಿಸುಡುವ ಸತ್ವವೆಲ್ಲಳ। ವಟ್ಟನೀಯಳಿಯದಲಿ ಯೇನೇನೆತ್ನವನು ಮಾಡೀ ॥ ಮುಟ್ಟಲಿಸೆವಂ ಬೆಡೆಯೊಳಗೆ ಖಡಿ। ದೊಟ್ಟುವೆನ ಹೊಂದೇರ ತಾಮುರಿ। ಯಿಟ್ಟನಲ್ಲದ ಲವನತೇರಿಡಲಿಲ್ಲವೆನೆ ಭರತಾ ॥ ೩೧ ॥ ಇನಿತು ಅಸದಳನಾಗಿ ಶತ್ರು। ಘ್ನನನು ಲಕ್ಷ್ಯಕೆತಾರದನ ಮೊ। ಟ್ನೆನೆಯದಾ ನ್ಯೆದಾದುಃದಪಕೀರ್ತಿಸ್ತು ತರವಿರಲೂ ॥ ಅನುಜನೇ ಪಿಡಿತರುವನಿವಗಿ। ನ್ನೆನೆವದೇನೆಂದಂತರಂಗದಿ। ಕುನಯಕೊಳುತಿರಲತ್ತ ಕುಶನೊಳು ಕಾದಿ ಶತ್ರುಘ್ನಾ ॥೩೨॥ ಅಗಣಿತಸ್ತ್ರಗಳೊಗೆದು ಅವನುಗಿ। ಬಗಿಸಲಾರದೆ ತನ್ನಶರವವ। ಸಿಗಿಯುತಿರೆ ಮುಹಮಂತ್ರಶರ ವೊದಲಾಗಿ ಬತ್ತೀಶಾ ॥ ಬಗೆಯಸಾಮಿನೊಳೆಲ್ಲ ಚಾತು। ರ್ಯಗಳಮಾಡಿದರವನ ರಥಕಿನಿ। ಸೊಗಸಲಿಲ್ಲದೆ ಸತ್ತರೂಸರಿಯುಂಬ ಕೋಪದಲೀ ॥ ೩೩ ॥ ಇಟ್ಟು ಅಮಲಾಸ್ತ್ರಗಳ ಸೇತುವೆ। ಗಟ್ಟಿ

ಕೈಪುಂಖಿತದಿ ಕಣ್ತೆರ । ದಿಟ್ಟೆಸರಿಯಲು ಬಾರದತಿ ಚಿತ್ಕಾರದಲಿ ಶರದಾ ॥ ಬೆಟ್ಟವನೆ ಕುಶನಸ್ತ್ರದಲಿ ಕೆದ । ರೊಟ್ಟೆಪಿಡಿಯಲ್ಕಾತುರದಿ ತರ । ಳಟ್ಟೆಬಹಶತ್ರುಘ್ನನಾತುರವರಿದ ಕುಶಬೇಗಾ ॥ ೩೪ ॥ ಖಡಿದುಶರಸೇತುವೆಯ ಮೇಲಡ । ರಿಡುವ ಶಸ್ತ್ರದಮೊತ್ತಗಳ ಬಿಡಿ । ಗಡಿದು ತೊಡುವೆಡೆ ಗಡಿದು ಬಿಲ್ಕೋಲಿನ್ನು ಬದಲಾಸ್ತ್ರ ॥ ಹಿಡಿಯಗೊಡದಿಹ ನರಿದು ಬಲ್ಗಧೆ । ತೊಡಗಿ ಬರೆ ಶತ್ರುಘ್ನ ರಥದಿಂ । ಪೊಡವಿಗಿಳಿವನ ಕಂಡು ತದ್ವಿದದಿಂದ ಬರೆ ಕುಶನೂ ॥೩೫॥ ಅಸುರ ಜಟ್ಟಿಗಳಂತೆ ಖಿಡಿಖಿಡಿ । ಮುಸಕದಲಿ ಶತ್ರುಘ್ನ ಗಧೆಕೈ । ದಿಸಿರಿಯೊಲೆಯುತಲವನು ಸತ್ವಾಗೆನ್ನ ಕೈನಿಲಿಸೀ ॥ ದಸುಳೆಗೆಣೆಯೇ ನೀನು ನಿನತನು । ವುಸುರಹೊರಡಿಪೆನೆಂದು ಆರ್ಭಡಿ । ಸಸಮ ಬರಲಾಲೋಕಿಸೆಂದನು ಕುಶಲ ಕಲಿಕುಶನೂ॥ ಯನ್ನಕೈಕೆಳಗವನುಸಾಧನೆ । ಯುನ್ನು ಕಲಿತನಿಗಾರದಲೆಯ । ನ್ನಂನುಲಕ್ಷಕೆತಾರದಿಹನೆರೆ ಮರುಳಶತ್ರುಘ್ನಾ ॥ ನಿನ್ನನೊಸಲಕ್ಕರವು ಸರಿಯಾ । ಯ್ತೆನ್ನುತಾ ಕುಶಹೊಳೆದು ಗಧೆಬಹ । ನನ್ನು ನೋಡೆರಗಿದನು ಲಾವುಗೆ ಪಿಡಿವ ಗಿಡುಗನೊಲೂ ॥೩೭ ॥ ಯರಗಿಬಹ ಶತ್ರುಘ್ನಗಧೆಯೆ । ತ್ತೊಗೆಯಲಿತರನು ತಟ್ಟೆಮತ್ತವ । ನೊಗೆವನವನಂಗವನು ಸೋಕಿಸದಂತರಂತರದೀ ॥ ತಗುಲಿ ಗಧೆಗಧೆಗಳಲಿಖಿಡಿಖಿಡಿ । ಯೊಗೆದು ಮಿಂಬುಳದಡವಿಯನೆ ಕ । ಣ್ತೆಗೆಯದಂತಾಗ ವಿಸಲಾರಣರಂಗಭೂಮಿಯಲೀ ॥೩೮॥ ಬೆಟ್ಟಬೆಟ್ಟಗಳಂತೆ ಮೂದಲೆ । ಯಿಟ್ಟುನಿನತನದೇನು ನೋಡಡಿ । ಮೆಟ್ಟಸಿಗಿವೆಂದಿಟ್ಟ ಗಧೆ ವಿಗ್ರಹವ ಮುಟ್ಟಸದೇ ॥ ತಟ್ಟೆತಲೆಕಾಲ್ಗಳಿಗೆ ತೋರ್ನ್ನಡು । ಏಟ್ಟು ಖಂಡಿಪೆನೆಂಬಭ್ರಮೆ ಕೈ । ಗೊಟ್ಟುಬಾರದೆ ಬಹಳ ಹೆಣಗುತಲೆಗರಿ ಶತ್ರುಘ್ನಾ ॥ ೩೯ ॥ ಮಸ್ತಕವನಿಬ್ಬಗಿಸಲಾಗುಂನೆಸ್ತಗಧೆಯಿಂದಿಡಲು ಚಂಚಲ । ವೆಸ್ತ ಕುಶಕಣ್ಮುಚ್ಚಿ ಬೇಗೆಚ್ಚತ್ತುಶತ್ರುಘ್ನಾ॥ ನಸ್ತಳದಸತ್ವೆಂದು ಅವಗಧೆ । ಗಸ್ತನೀಡುವ ಸಮಯಕವನುರು । ಮಸ್ತಕವನಪ್ಪಳಿಸಿ ಮೊರೆದನು ಕುಶನು ವಿಸಿಖದಲೀ ॥ ೪೦ ॥ ಮಲಗಿದನು ಮಹಶೂರ ಶತ್ರು । ಘ್ನಲಸಿ ಮೂರ್ಚೆಯಲಾಗ ಜಯರವ । ದುಃಖಃಹುಕೇಳಿದ ಲವನು ಭರತನಮೇಲೆ ಮೇಲ್ವಾಯ್ದೂ ॥ ಕುಲಿಶ ಶರಗಳ ಹೊಚ್ಚಿ ಅಹಿತಿಡು । ವಲಘುಕಡುಹುಡಿಗೈದು ಕೈವಿಡಿ । ವಲಘನಲ್ಲಿಖ್ಖಡಿಸಿ ಕಾರ್ಮುಖಗಡಿದು ಬದಲಾಸ್ತ್ರ ॥೪೧॥ ಹಿಡಿಯಗೊಡದಪನೊಕ್ಷಕೊಜ್ರದೊ । ಕಿಡಲು ಸಂಮೂರ್ಚೆಯಲಿ ಭಭರತನು । ಪೊಡವಿಯೊಳಗಾ ಸರಿಸಿ ಬೀಳಲು ಮೊರೆಯೆ ಜಯಘೋಷಾ ॥ ಪಿಡಿದ ಶರದಿರುಹೆಡದ ಕಕ್ಷದಿ । ತೊಡಿಸಿ ಬಿಟ್ಟೊರಾಹವಕೆ ಮುಂ । ದಡಿಯುನಿ

ಡುವರಕಾಣದಲೆ ಕುಶಲವರುವಹಿಲವಲೀ ॥ ೪೨ ॥ ಬಂದು ನಿಜಕಟಕದಲಿವು ರಕತ। ದಿಂದ ರಚಿಸಿದ ದೂಸಿನೊಳು ಕುರು । ವಿಂದಪೀಠದಿ ಕುಳಿತ ಸಮಯದಿ ಆಪ್ತಭಟರುಗಳಾ ॥ ನಂದುದಂಡಿಗೆಸುತ್ತ ಪಾರಿಯು । ಹೊಂದಿಸರುಹಧ್ಯಾನ ದಲಿ ಮನ । ಸಂದು ಕುಳಿತರು ಚಿತ್ರಪುತ್ಥಳಿಯಂತೆ ಕುಶಲವರೂ ॥ ೪೩ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮುಲಕ್ಷ್ಮಣ । ರೊಲ ವಿನೀ ಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದಮನ । ವೊಲಿದುಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೪೪ ॥

ಅಂತು ಸಂಧಿ ೭೮ ಕ್ಕಂ ಪದನು ೪೫೩೨ ಕ್ಕಂ ಮಂಗಳಮಹಾ ಶ್ರೀ ಶ್ರೀ

ಎಪ್ಪತ್ತೊಂಭನೆಯ ಸಂಧಿ.

ರಾಮ ಲಕ್ಷ್ಮಣರ ಜಗಳದ ಸಂಧಿ.

ಅಸದಳದಿ ಕುಶಲವರ ಸಮರದಿ । ಯಸೆದ ಶರವೆಡೆಗಡಿಯೆ ಲಕ್ಷ್ಮಣ । ನೆಸೆದ ಚಕ್ರೈತಂದುನಿಲೆ ಬಲಭಾಗದೊಳು ಕುಶನಾ ॥ ಪದನೂ ॥

ಅರಸಕೇಳಾಹನದಿ ಕಾದುವ । ರಿರದೆದೂಸಿಗೆಬಂದು ಕುಶಲವ । ರಿರಲು ಆಸಮಯದಲೆ ಬಂದಾಪ್ತರುಗಳೊಂದಾಳಾ ॥ ಕಿರಿಸಿಮೂರ್ಛಿತ ಭರತಶತ್ರು । ಘ್ನರನು ನಿಜಬಲಕೊಯ್ದು ಶೈತ್ಯವ । ಗರೆದುತಿಳುಹಲು ಮೂರ್ಚೆಯನುವ್ಯೆ ಮುರಿಯುತೆದ್ದುಕುಳಿತೂ ॥ ೧ ॥ ಬೀಗಿಪೋಗುವಡಾಗವೆದುರಿಗೆ । ತಾಗಿನಿರ್ವೈ ಸುವಡೆ ಸತ್ವೆಮ । ಗಾಗಲಿಲ್ಲದರಿಂದಲೀ ದೂರಗ್ರಜರ ಬಳಿಗೇ ॥ ಸಾಗಿಸೆನ ಲೀವರಿಗೆ ಕೌಶಲ । ತಾಗುವಂತಾಳ್ವೈದಿಸಿದೆವೆನ । ಲಾಗಿಲವರಾಪ್ತಿಗರೊಳಿರೆ ಭ ರತೇಶಶತ್ರುಘ್ನಾ ॥೨॥ ಇತ್ತ ಬಂದನುಚರರು ಮೂರ್ಚೆಯೊ । ಳೊತ್ತಿಕೆಡಹಿ ದರೀರ್ವರನು ಬೆಂ । ಬತ್ತಿಬಾರದಲಿರರು ಬೇಗೈದಿದರೆ ನೀವೆಂದಾ ॥ ರತ್ತಣು ಲುವಿಗೆ ರಾಘವನು ಕ । ತ್ತೆತ್ತಿ ದಿಕ್ಕಾಲೋಕಿಸುತ ಮರ । ವೆತ್ತರಂತಾಳೋ ಚಿಸಿದನದಕೆತ್ನ ತೋರದಲೇ ॥ ೩ ॥ ಖಿಡಿಯನುಗುಳಿಸುತಕ್ರಿಯುಲಿ ಕೈ ।

ತೊಡಗಿ ಹಿಡಿದನು ಪಂಚಜನ್ಯವ । ನಡುಗಲಿಳೆ ಪಗಲುದುರೆ ನಕ್ಷತ್ರನಿತು ಅ
ದ್ಭುತವೂ ॥ ನಡೆಯಲಾ ಧ್ವನಿಗೇಳಿ ಯೇಕಾ । ರ್ಯಡಸಿತೆನುತೈತಂದ ಬಲ
ಮುಂ । ಗಡೆಯುನಿಲಲಾಹನವದ ಸಮಕಟ್ಟನಲಿ ನೃಪರರಿದೂ ॥ ೪ ॥ ಯೇಳು
ವನಿತರಲಬ್ಧಿಯೇ ವು। ತ್ತಾಳಗೊಂಡಂ ತಾನಖ ಧ್ವನಿ । ಕೇಳಿಗೊಳಲೈತಂದು
ನಿಲೆ ಹರಿಗರುಡ ಹೊಂದೇರೂ ॥ ತಾಳಿ ಸಿದ್ಧೇಭ್ಯಾಖ್ಯವನು ಬಹು । ತೂಳ
ದೊಳಗೇರೈದೆ ಬಲಭರ । ತಾಳದಡಗಿತು ಪೆಡೆಯು ಫಣಿ ದಿಗ್ಗಜಗಳಲುಗಾಡೇ
॥೫॥ ಮುಚ್ಚುತಿಹ ಕೆಂದೂಳಿಗಿನನಭ । ಕೆಚ್ಚಗಾಗಲು ವಾಧ್ಯದುರವಣೆ ' ಹೊ
ಚ್ಚಿತೇಣ್ಡೆಸೆಗೆಲ್ಲ ಅವನಿಯು ಮುಚ್ಚಿ ಬರೆಸೇನೆ ॥ ಅಚ್ಚುತನು ಅಣುಮಾನ್ಯನಾ
ದಿಪಿ । ಯಚ್ಚರರೊಳಂತರದಿ ಬರೆಬೆಂ । ಬಚ್ಚಿದರು ಯಡಬಲದ ರಾಜನಿಕಾ
ಯವಿದನರಿದೂ ॥ ೬ ॥ ಉಳಿದು ದಿಗ್ವಿಜಯವನು ಕಾರ್ಯವ । ತಿಳಿಯಲಿಲ್ಲ
ವರಿಂಗೆ ಯಾತೆರ । ದೊಳಗೆ ಬಠಲೀನಾರ ಪೇಳ್ದೈದುವರೊ ಯಂಹಂಜೀ ॥
ಬಳಿಕ ಕೈಗಾಣ್ಕೆಗಳು ಸಹ ರಘು । ಮಿಳಿತದಲಿ ನಡೆವಾಗಲಾ ಕಾ । ರ್ಯಿಳೆ
ಯುನಾವರಿಸಿತ್ತು ನಡೆವರು ನಿಲದಲೊಂದೆಡೆಯಾ ॥ ೭ ॥ ದಾರಿದಾರಿಯೊಳಲ್ಲಿ
ಗಲ್ಲಿಗೆ । ತೋರಣವು ನವರತ್ನಗುಡಿ ಯಳೆ । ನೀರು ಫಲಹಾರಾದಿ ಪಾನದ್ರ
ವ್ಯಸೌರಭವಾ ॥ ಪಾರಿಜಾತಸ್ರಜಗಳನು ಕೈ । ದೋರಲವನನುಭವಿಸಿ ಜನ
ಕುಪ । ಚಾರಿಸುತ ನಡೆತಂದ ರಾಘವನಿಲದ ಕಾತುರದೀ ॥ ೮ ॥ ಬಂದು ಆ
ದಿಯಕಟಕದೆಡೆ ಗೋ । ವಿಂದನಿಳಿವನಿತರಲಿ ನೆಲನಭ । ಹೊಂದಿದಂತಡಿ ಮೇ
ಲೆಬಹದಳದದ್ಭುತವ ಕಂಡೂ ॥ ಸಂದಬಲನನೆ ಗರುಡನಾಕರ । ದಿಂದನಿಲಿಸ
ಲ್ಲಲ್ಲಿ ಸುಭಟರ । ನಿಂದಿರಿಸಿ ಕುಶನಿಂದ ಲವಸಹಿತದರ ಚುಂಚುವೆಡೇ ॥ ೯ ॥
ಯೆತ್ತಿವ್ಯಾಘ್ರಧ್ವಜದಬಳಿ ವೊರ । ಸುತ್ತ ಭೇರಿನಿನಾದವನು ಯೆದು। ರೊತ್ತಿ
ನಿಂದರಕಂಡು ಕಮಲಾಕ್ಷನಿಗೆ ಲೋಕವನೇ ॥ ಕಿತ್ತು ಬಿಸುಡುವ ಕೋಪ ಬರೆ
ಕೈ । ಯೆತ್ತಿ ಹೂಂಕರಿಸಿದನು ಬಲಗೋ । ಚಿತ್ತತಹುದೆನಲಾತ್ಮವಾಹಿನಿಯ
ಡರಿತದ್ಭುತದೀ ॥ ೧೦ ॥ ಯರಳೆ ವಂದಕೆ ವೇಘ್ರಗಳುಸಾ । ಶಿರಗಳೊಚ್ಚಿ
ದತೆರದಿ ರಿಪುಬಲ । ಕೆರಗಿ ಸುರಿವಸ್ತ್ರಗಳ ಹತಿಯಲಿ ಚರಣ ಹತಿಯಿಂದಾ ॥
ಮುರಿದುವರಗಿಸಲೆಲ್ಲ ಬಲಸರಿ । ಸರಿದು ಬಯಲ್ಗೊಡಲೀರ್ವರೆ ಶಶಿ । ತರಣಿಗ
ಳತೆರನಾಗಿನಿಲೆ ಕುಶಲವರು ಧೈರ್ಯದಲೀ ॥ ೧೧ ॥ ನೆನೆದುಮಾತೆಯು ಬಿಲು
ವಿಶಾರದ । ರೆನಿಸಿದನ ಮಾತುಳನ ತ್ರೈಜಗ । ಜನಕನಡಿ ಸ್ಮರಣೆಯಲಿ ಮ
ತ್ತೊಂದ್ಗೊಲಿಯು ನನುಗೊಳಿಸ ॥ ತನಿಗಣೆಗಳಾ ವರಿಸಿ ಬಹುವಿದ । ವೆನವ

ಶಸ್ತ್ರದ ಮುತ್ತಿಗೆಯ ಹನ । ಹನನಗೊಳಿಸುತಲೆಸೆದ ರರಿವಾಹಿನಿಗೆ ಕುಶಲವ
ರೂ ॥ ೧೨ ॥ ಯಲ್ಲದಿಸೆಯೊಳು ಮುಚ್ಚಿ ಬಹ ಬಲ । ದಲ್ಲಿ ರಥವಂದೆಡೆಯ
ನಿಲಿಸದ । ಲಲ್ಲಿಗಲ್ಲಿಗೆ ಹಾರಿಸಶ್ವಗಳ ಪರಕೆಡಬಲಕೇ ॥ ಚಲ್ಲುತಸ್ತ್ರಗಳರಿಪತಾ
ಕಿನಿ । ಯಲ್ಲಿ ಹೊರಟಾಯುಧವು ಸಹಿತಿಂ । ನೆಲ್ಲ ಚತುರಂಗವನು ಖಂಡನೆ
ಗೈದು ಕುಶಲವರೂ ॥ ೧೩ ॥ ಬಿಡಿಸಿ ವೊಂದೊಂದಾಗಿ ಕೈಕಾ । ಲಡಕಿಯಂ
ಗವ ಮೇಲೆ ಸಾಗರ । ಗೆಡಹಿ ತಲೆಗಳನಿರಿಸಿ ಯಗ್ರದಿ ಸಮರ ಶೂರನಿಗೇ ॥
ಬಡಿಸಿ ಯಡೆಗಳ ಲೋಹಿತದ ಕಂ । ಪಿಡಿದ ಘೃತವೆರೆದಾಗ ಮರುಳಿನ । ಪಡೆ
ಗೆ ತೃಪ್ತಿಯಗೊಳಿಸುತಿರೆ ಕುಶಲವರು ವಿಸಿಖದಲೀ ॥ ೧೪ ॥ ಆಬಗೆಯ ಬಲ
ದಲ್ಲಿ ಸತ್ತರ । ಕಾಬರುಂಟೇ ನೆಲನು ದಿಕ್ಕೆನು । ವಾಬಗೆಯ ತೋಚದೊಲು
ಮುಚ್ಚಿದ ಬಲದಲಷ್ಟಷ್ಟಾ ॥ ಗಾಬರಿಸಲಷ್ಟಾಗಿ ಯಿಷ್ಟಾ । ಗಾಬಯಲಗೊ
ಡುತ್ತೈದಲಿಂನಿ । ದರ್ಾಬಲಕೆ ವತ್ತಿದರು ರಥಗಳ ರಣವಿಶಾರದರೂ ॥ ೧೫ ॥
ವತ್ತಿಬಹದರಿದಾಗ ತಮುಬಲ । ಸತ್ತದರಿದಾ ಹಸುಳೆಗಳ ಭಯ । ಹತ್ತಿ ಪಾರಿ
ದರೆಮುಗೆ ದಿಕ್ಕಿಲ್ಲೇಕೆ ಕೊಲಬೇಡೀ ॥ ನಿತ್ತರಿಸಿ ನಿಮು ಪದಕಾನತ । ವಿತ್ತಪೆ
ತ್ತ್ರೋಡಿದರೊ ಬಲಪುರು । ಷೋತ್ತಮರು ಯಂದುಳಿದ ದಳದೊರ ಲಾಲಿಸುತ
ನಕ್ಕ್ರೊ ॥೧೬॥ ಕೊಲ್ಲೆವಿಂನಾಭಯವಬಿಟ್ಟವ । ರೆಲ್ಲಿ ತೋರಿಸಿರಾಮಲಕ್ಷ್ಮಣ।
ರಿಲ್ಲಿ ಗೈದಿಹದುಂಟೆಯೆನುತಾ ಲಾಲಿ ಮುಂದೊತ್ತೀ ॥ ಲಲ್ಲೆಯೊಳಗೈತರುವ
ರಾಕೃತಿ । ಯಲ್ಲಿ ಯಡಗಿದ ಮದನಹಸ್ತಗ । ಳಲ್ಲಿ ಯಡಗಿದ ಯಿಂದ್ರಗಾಶ್ಚ
ರಿಸಿದರು ರಘುವರರೂ ॥ ೧೭ ॥ ವೀರ ಪುರುಷನ ಯದೆಯೊಳಗೆ ವಿ । ಸ್ತಾರ
ಗೊಳಿಸಿದ ಶಿಶುಗಳನು ಕಂ । ಡಾರೆ ನೋಡಶ್ಚರಿಸುತಿರಲಾರೆಂಬ ಸಂಶಯದೀ ॥
ವಾರಿಜಾಕ್ಷನು ಸಹಿತಬಹ ರಘು । ವೀರನಾಲೋಕಿಸುತಲವರಾ । ಕಾರಕಾಶ್ಚರಿ
ಬಟ್ಟು ನೋಡಿದರಾಗ ಕುಶಲವರೂ ॥ ೧೮ ॥ ನೋಡು ಛತ್ರಗಳೆಂಟು ಯಾ
ರೆಂ । ಟಾಡುತಿಹ ಚಾಮರಗಳೆಡೆ ಕಡು । ಗಾಡಿಕಾರರೆ ರಾಮಲಕ್ಷ್ಮಣರೇನು
ಕೌತುಕರೋ ॥ ನೋಡು ಭೇರಿಗಳಲ್ಲೆ ಶಂಖಗ । ಳಾಡುತಿವೆ ಮುಂಗಡೆಯ
ಚಕ್ರವ । ನೋಡು ಅಗ್ರಜ ಯಿವರಿಗಾರ್ಸರಿಯುಂದನಾ ಲವನೂ ॥ ೧೯ ॥
ಏಪರಿಯಬಲವೆನಲು ಬಹುದಿಂ । ನೀಪುರುಷರೆಡಬಲದಿ ಬಹರಕ । ಲಾಪವರ್ಣ
ಪರಾರು ಯಾಯುಗದಲ್ಲಿ ಯಿವರಿಂಗೇ ॥ ಆಪರಾರಿಲ್ಲರಿಯದೆಂವೊಳು । ಕೋ
ಪಗೈದಿಹರಿವರ ಕೊಲ್ಲದೆ । ದೂಪಿಸೈದಿಪುದೆಂದ ಲವನಗ್ರಜನಿಗೊಲವಿಂದಾ ॥
ವುದಯವೆಂದಿವರೆಲ್ಲ ಲೋಕವ । ಸದುರಿನೊಳಗಿಟ್ಟೈಹರು ಶಾರಗ । ಲದಲಿ

ನಾವಿಹರಿರಲಿ ಸ್ಥಿರದೊಳಗವರನೋಡುತಲಿ ॥ ಸದಯ ಪುಟ್ಟುವುದೆನಗೆ ಯೀ
ಭವ । ಮುದವೊ ಅದರಿಂದಾಗಿ ಅವರೊಧಿ । ಸದಲೆ ಕಾಯೆಂದುಲಿದ ಕುಶನೊ
ಳುಲವನು ಮರುಕದಲೀ ॥ ೨೧ ॥ ಈತೆರದ ನುಡಿಗೇಳಿ ಭರತನು । ಜಾತ
ಸಹಿತಗ್ರಜರಿಗೀತೆರ । ವಾತರೆಮಲಕ್ಷ್ಮಿಡುವರೇಸಿಮನಿಂತು ನುಡಿವಾಗಾ ॥ ಮಾ
ತುಮಾತಿನಶೂರರೇ ಅದ । ನೇತಕಾಡುವುದೆಂಬರೊಚಕೊಲ । ವಾತು ರಥ
ಮುಂನಡಸಿದರು ಕುಶಲವರಿಗಿದಿರಾಗೀ ॥ ೨೨ ॥ ನೋಡಿ ಸನಿಹದಿ ಶಕ್ತಿಗಾಡಿ
ಯ । ಮೋಡಿಯನು ಸುಕುಮಾರಕರೆ ನಿಮ । ನೋಡಿ ರಣಗೈಲಾರೆವಾವದ
ರಿಂದಲೆಂಮೊಳಗೇ ॥ ಮಾಡದಿರಿ ಕಲಹವನು ನೀವೀ । ನಾಡಿಗರ ತೆರನಲ್ಲ
ನೀವೇ । ನ್ಬೇಡಿರಾ ನೀವೆಂದ ಲಕ್ಷ್ಮೀರಮಣನತಿಮುದದೀ ॥ ೨೩ ॥ ಕೊಟ್ಟು
ಬೇಡುವಜನರ ರಕ್ಷಿಸ । ದಿಟ್ಟ ಬಿರಿದವನೀಶರಿಗೆ ತಡ । ದಿಟ್ಟ ದ್ರವ್ಯವ ಬಿಡಿ
ಸಿರಾ ಬಳಿಕಾಡಿರೀನುಡಿಯಾ ॥ ಸುಟ್ಟುವುರುಹುತಲಿಹರೊಳಗೆ ಹಿತ । ವಿಟ್ಟು
ಶಲವೇನೆಂಮುಚಲುವಿಕೆ । ದಿಟ್ಟವಿರಲೆಲ್ಲೋರಿ ನಿಮಕೈಯಂದನಾಕುಶನೂ॥೨೪॥
ಈರುವರು ಸಮುಚಲುವರೊರ್ನದಿ । ಬೇರೆತೋರುವರೊಳಗೆ ಬಲಹರಿ । ಯಾ
ರುನಾನೇ ಕುಶನು ಪಿರಿಯಾತನುಜನೀ ಲವನೂ ॥ ಕಾರಣಾತ್ಮಕರಾಗಿ ಹಿರಿ
ನಿಮ । ಗೀರಣಾಯತವಲ್ಲವೆಂಬ ಕು । ಮಾರನೊಚಕಾನಂದಿಸುತಲಿಂತೆಂದ
ಗೋವಿಂದಾ ॥ ೨೫ ॥ ಶ್ರೀಪತಿಯು ರಾಘವನು ಯಿವ ಲ । ಕ್ಷ್ಮೀಪತಿಯೆ
ನಾನೆನಲು ಲಕ್ಷ್ಮಣ । ನೇ ಪತಿವ್ರತೆಗೈದ ತಪಸಿನಫಲದಿ ನಿಂಮಂತಾ ॥ ಚಾ
ಪಲತ್ವರ ಪಡೆದರವನಿಯ । ಲಾಪರಿಲ್ಲಿಮಗೆಮಗೆ ಸಮುದಕ । ಲಾಪರಲ್ಲೈ
ದೆಂದಕುಶನೆಳೆನಗೆಯ ಮಿನುಗುತಲೀ ॥ ೨೬ ॥ ಗಿರಿಯನಲುಗಿಪೆನೆಂಬ ಶಕ್ತಿ
ಗು । ಸರಸತರ ಲಾವಣ್ಯಧೈರ್ಯದ । ಸುರಗಿರಿಗಳಿಡುವೈನಮಾತಿನ ಮುದ್ದು
ನುಡಿಗೇಳೀ ॥ ಹರುಷದೊಳಗಿವರಾವಮಾತೆಯ । ತರಳರೋ ಸುರ ಪಾರಿಜಾ
ತದ । ಮರಿಗಳೋ ಯೇನಧಿಕರೆಂದರು ರಾಮಕೇಶವರೂ ॥ ೨೭ ॥ ಹಿಂದೆನೀ
ತಡದಿರುವ ದ್ರವ್ಯವ । ನಿಂದುಂಮೆಚ್ಚೀವದರೊಳಗೆಮ । ಸಂದು ಪೋಪೆಯ
ಕುಶನೆ ಯನೆ ಗೋವಿಂದನೀನಿಂತೂ ॥ ತಂದರಾನತಿಸೈದುಯನೆ ಕುಶ । ನೆಂದ
ಹಂಕ್ರುತಿಗಾಗ ಹರಿಗೈ । ತಂದ ಕೋಪದಿ ಮಿಡಿದ ಶಾರ್ಙ್ಗಯ ಮತ್ತೆ ಬೊಗ
ಳೆಂದೂ ॥೨೮॥ ನಡುಗೆ ತ್ರೈಭುವನಾಗಲುಡುಗಣ । ಕಡೆದು ಕಡಲುಕ್ಕ ಚಲ
ವಲುಗೆಡೆ । ಪಡೆಯು ಗಡಗಡ ನಡುಗಲಾ ಕುಶಲವರವೈವಾಲಾ ॥ ದೊಡನೆ
ಯೇಕದುರದಲೆ ನಿನಕೈ । ಕಡುವಿಗಾಂ ಮೆಚ್ಚಾದೆ ವಿಕ್ರಯ । ನಡೆವುದಿಷ್ಟರ

ಲೆಂದ ಕುಶನಾಥವನ ನೀಕ್ಷಿಸುತಾ ॥ ೨೯ ॥ ಏನು ಶೌರ್ಯವ ತೋರಿದರು
ಮ । ತ್ರೇನು ವೈನವನುಡಿದರದಕಿನಿ । ಸಾನುಸದುಗೊಡರ ಮನು ಯಿಾಸುಕು
ಮಾರಕರು ಮೃತವಾ ॥ ನಾನಲವನಿಯಲಿರ್ದರೇ ಸರಿ । ಸೂನುವಲ್ಲಿವರೀಗ
ಕುಲಿಶದ । ಚಾನಗಳೆ ಸರಿಯುಂದು ಲಕ್ಷ್ಮಣ ತೊಟ್ಟ ನಿಡುಸರಳಾ ॥ ೩೦ ॥
ಹೇಮಸೂತ್ರವ ಬಿಗಿದಕಣೆಯುಸು ! ನಾಮ ರಣನಿಸ್ಸೀಮನಾಯುಗ । ಭೀಮ
ರೂಪಿನಕಾಮ ಲಕ್ಷ್ಮೀರಮಣನಳವಡಿಸೀ ॥ ಕೋಮಲನೆ ಕುಶನೋಡಿ ನೀನೆ
ದು । ರೂಮಿಸೆಂದಸ್ತ್ರಗಳನಿಟ್ಟಭಿ । ರಾಮುಗೈದನುಲೋಕವೆಲ್ಲಕೆ ದಿಕ್ಕುಮುಚ್ಚು
ವೊಲೂ ॥೩೧॥ ಯಚ್ಚಸದರಗ್ರದಲಿ ಮಿಂಬುಳ । ಗಚ್ಚಿಸಿದಕೆರನಾಗಿ ಆಲವ।
ಗೊಚ್ಚಿಸಿದ ಅಸಿಪಂಜರದ ತೆರನಾಗಿ ಅಚ್ಚುತನೂ ॥ ಯಚ್ಚ ವಿಶಿಖಾಸ್ತ್ರಗಳ
ನೋಡ್ಕುಶ । ನುಚ್ಚಮಾಡೆಡೆಯಲ್ಲಿ ನಿನಕೆ । ಚ್ಚಚ್ಚರವು ಯಿದೆಯೇನೊ ಲಕ್ಷ್ಮ
ಣನೆಂದು ಘರ್ಜಿಸುತಾ ॥ ೩೨ ॥ ತೊಟ್ಟು ವಜ್ರಾಸ್ತ್ರವನು ಬಹುಸೇ । ದಿಟ್ಟ
ಡಾಲಕ್ಷ್ಮಣನ ಕೇರೆಡೆ । ಬಿಟ್ಟು ಪಿಂದುಂಳುವದ ಮೆಟ್ಟಗ್ರಜಗೆ ಸೈಗ್ನೆಯನೂ॥
ಇಟ್ಟು ಬಲಕರನೆಂದುಃ ನೀನಳ । ವಟ್ಟರಥ ನಿನಶಕ್ತಿಸಹ ಪಿಂ । ದಟ್ಟಿಸಿದಬಲ
ವರಿದು ತಿರುಗೈದೆಂದನಾಲವನೂ ॥ ೩೩ ॥ ಅರಿತರಲ್ಲೀವಿಂನು ಯಮಕೈ ।
ಪರಿಯು ನಿಮಕೈಲೋಕದೊಳು ಸಂ । ಚರಿಸಿದಗಣೆಯಲಿಟ್ಟು ಯಮಗೆದುರಿರ್ದ
ಪೂಜ್ಯವನೂ ॥ ಚರಿಸದಿರಿ ನಿಮಶಕ್ತಿಬಲ್ಲರಿ । ತೆರವು ಕೈಗುಂಡಿನೊಲು ಯಮ
ಶ । ಕ್ತರಿತುನಡೆ ಶ್ರೀರಾಮಲಕ್ಷ್ಮಣರೆಂದನಾಲವನೂ ॥ ೩೪ ॥ ಒಬ್ಬಗೊಬ್ಬನ
ಚಪಳತೆಯ ಶ । ಕ್ತುಬ್ಬಿಸವರಲ್ಲದಲೆ ಅನುಸರ । ಯಿಬ್ಬರೊಳಗಿರದೇನುಸತ್ವ
ರೊ ಯಂನಶಸ್ತ್ರಗಳಾ ॥ ಹಬ್ಬುಗೆಯ ಹರಿಸೆನ್ನ ರಥಪಿಂ । ದಬ್ಬಿದಸದಳನಗ್ರ
ಕುಪಿತೆ । ದ್ದಬ್ಬರದಿ ದಿವ್ಯಾಸ್ತ್ರ ವೆಸೆದನು ಮುರಹರಾಕುಶಗೇ ॥ ೩೫ ॥ ಇನ್ನು
ತೊಡು ಲಕ್ಷ್ಮಣನೆ ನಿನಸರ । ಳೆನ್ನುವಾರಣ್ಯವನು ದಹಿಸದ । ಲೆನ್ನ ಬದಲಾ
ಖ್ಯದೊಳು ಕರೆನೀನೆಷ್ಟು ಹೇಳಿದರೂ ॥ ಸನ್ನೆಯರಿಯುವನಲ್ಲ ಕೋಣನು ।
ಕಿನ್ನರಿಯ ಸ್ವರವರಿವದೇನೋ । ದೆನ್ನುತಾ ದಿವ್ಯಾಸ್ತ್ರಗಳ ಖಂಡಿಸಿದ ಕುಶಮ
ತ್ರೇ ॥ ೩೬ ॥ ಹೊಡೆವ ಶರಬಿಡುಗಡಿವ ಶರಮೇಲಿಡುವ ಶರವವನಿವನಸ
ನಿಹಕೆ । ನಡೆಯಗೊಡದಂತರದಿ ಖಡಿಖಡಿ ದಡುಕಿದೊಟ್ಟುಗಳಾ ॥ ಸುಡುವರ
ಗ್ನ್ಯಾಸ್ತ್ರದೊಳು ಗೆಲುವನು । ಹಡೆಯಲಭಿಲಾಷೆಯೊಳು ಕೈಚಳ । ಕಿಡು
ತಸಮಸತ್ವವಲಿ ಕುಶಲಕ್ಷ್ಮಣರು ಕಾದಿದರೂ ॥ ೩೭ ॥ ಹುಲ್ಲಿಗಿಂದತ್ತ ದಿವ್ಯಾ।
ಸ್ತ್ರೆಲ್ಲವುತ್ತರಿಸಾಲುತಿಹಕುಶ। ಗೆಲ್ಲೆಯದುಯಿಾಶಕ್ತಿಚಕ್ರಿಯುಸಮುಕೆಕೈಗೊಟ್ಟೊ॥

ನಿಲ್ಲಲೆಂಬ ಸಹಾಯ ರಾಮನ । ಸೊಲ್ಲಗೇಳುತಲವನು ನಾವಿ । ರ್ದಿಲ್ಲಿಫಲವೇ ನೆಸಗು ಕದನವನೆಂದ ಬಿಗುಹಿನಲೀ ॥ ೩೮ ॥ ಹಿಂದೆ ನೀಬಹುಕಾರ್ಯವೂ ಡಿದ । ನೆಂದು ಹೊಗಳಿಸುವೈಸೆ ಕೈಯುವು । ಮುಂದೆ ತೋರೆಲ್ಲೆಂದು ನೀನೆಜ ಮಾನ ನಿನಪದಕೇ ॥ ವಂದನಾದಿಯಲೆಂದು ಯರಡಂ । ಬಿಂದ ಪದಯುಗಕೆಸೆ ದು ಹಯಗಳ । ನೊಂದೆಶರದಲಿ ಖಡಿದುಕೂಗಿದ ಲವಕುಮಾರಕನೂ ॥ ೩೯ ॥ ಜೋಡಿಸಶ್ವವ ಲವನಶಕ್ತಿಯು । ನೋಡಿ ರಾಘವ ಮೂಡಿಗೆಗೆ ಕೈ । ನೀಡುವನಿ ತರಲಸದಳಾಹವವೆನಲು ಸುರವಾಣೀ ॥ ಮಾಡಿ ಸಂಶಯುವೋರ್ವರೋರ್ವರ। ನೋಡಿ ಲವಗೆದುರಾಗಿ । ಶರಗಳ ತೀಡಿದನು ರಣವಿಕ್ರಮಾಂಕನು ರಾಮಚಂದ್ರ ಮನೂ ॥೪೦॥ ಬಿಟ್ಟು ಬಹುಶಸ್ತ್ರಗಳನೆಡೆ । ಖಡಿದೊಟ್ಟೆ ಮೇಲವುಲಾಸ್ತ್ರಗಳ ನಿ । ಟ್ಟಟ್ಟು ರಾಘವನೆಸೆವ ವಿಶಿಖಾಸ್ತ್ರಗಳನಾಯ್ವಾಯ್ದೂ ॥ ವಟ್ಟುತಿಹ ಲವ ನೇನು ಆಹವ । ದಿಟ್ಟನೋ ನೋಡರಸ ಲೋಕವ ! ಸುಟ್ಟರಾಬಲವೆಲ್ಲಿ ಅ ಜ್ಞಾತಿಸಿತು ಯನೆ ಮುನಿಪಾ ॥ ೪೧ ॥ ವಂದೆ ರಾಮನ ಕೈಯ್ಯಬಾಣವು । ಕೊಂದು ಅಕ್ಷೋಹಿಣಿಯ ಮತ್ತೈ । ತಂದು ನಿಲುವಂತವುಲಶರವೆಷ್ಟೆಷ್ಟೊ ಚಲಿಸುತಿಹಾ ॥ ವಂದು ಲವನೆದುರಿರದಲಿರವೇ । ನೆಂದು ಕೇಳಿದರಾಮಹಾಸತಿ । ಯಂದು ಬಿಟ್ಟುದರಿಂದ ಪಾಪಾತ್ಮಜರೊಳೆಸಗಿಸಿತೂ ॥ ೪೨ ॥ ನೋಡಿಖಗವ್ಯಂತರರು ನಿಮುಗನು । ಜೋಡುಕೂಡಿದ ಹುಡುಗರನು ಯಿಾ । ಡಾಡಿಬಿಡುವೆಂದೆರಗೆ ಸಾಳ್ವನಬಹಳಪೌಜಿನೊಲು ॥ ತೀಡುತಿಹ ಸರಳಾದಿ ಶಸ್ತ್ರದ । ನಾಡವೋ ಲಾವರಿಸಿ ಕಡುಘನ । ಕೂಡಿ ಯಿನಬಿಂಬವನು ಹೊಚ್ಚಿದ ತೆರದಿ ಮೇಗಲಿಸೇ ॥೪೩॥ ಮುತ್ತುತಿಹ ಬಹಶಸ್ತ್ರಗಳ ಖಡಿ । ದೊತ್ತುತಿಹ ಮಹಸೇನೆಯನುಬೆಂ। ಬತ್ತಿಸುತ ಕರಚರಣಶಿರಗಳ ಸಂಗಏಂಗಡಿಸೀ ॥ ವತ್ತಿ ಯಶೆದಂಗಾಲಿನೊಳು ನಡು । ನೆತ್ತಿಯೊಳು ಹೊರಟಂಬುವೌಲಿಯು । ಹೊತ್ತುಮೆರೆದವು ಪೆಡೆಯುಮಣಿಭೋಗಾವನಿಯತೆರದೀ ॥ ೪೪ ॥ ವುದುರುತಿಹ ಕೈಕಾಲುತಲೆಯೊಡ । ನುದುರುತಿಹ ಅಪಮೂರ್ಧ್ನಿ ಕರುಳಿನ । ಮಿದುಳಸಾರವೆ ಖಂಡಕೆಂಡದಿ ಲೋಹಿತದವರುಷಾ ॥ ವದಗಿಸುರಿಯಲು ಮರುಳಶಾಖಿನಿ । ಸುದತಿಯರು ಸುತಗೂಡಿ ಮಿಂದಾ । ಕದನಲಂಪಟಮಲ್ಲರಾ ಕುಶಲವರಹೊಗಳಿದರೂ ॥೪೫॥ ಹಿಂದೆದಶಶಿರನಾಹವದಿ ಗೋ । ವಿಂದನೆಮತೃಪ್ತಿಸಿದನೀಗೀ । ನಂದನರುಚಿರಬಾಳಲೆಂದರುಶಾಖಿನೀಸ್ತ್ರೀಯರು ॥ ಬಂದುಮುತ್ತಿದ ಖೇಚರವೆಂತರ । ರಂಡಗೆಡಿಸಷ್ಟಷ್ಟು ಹಿಂಜರಿ । ಮಂದಕೈಚೀತ್ಕೃತಿಯು ನಡಸಿದರಾಗ ಕುಶಲವರೂ ॥ ೪೬ ॥

ಆಹಸುಳೆಗಳ ಸಾಹಸಕೆಬಹು । ದೇಹಗಳಕಗರುಚಿಯುವುಳಿದರು । ಗಾಹಿಲವಿದಿಕ್ಕೆಟ್ಟುವೋಡಿದರಲ್ಲಿಗಲ್ಲಟ್ಟ ॥ ಬಾಹರಿಗೆ ಯದುರಾಗಿ ಹಲಧರ । ಶ್ರೀಹರಿಯು ಮಂತ್ರಾಸ್ತ್ರಗಳ ನಿ । ಟ್ಟಾಹವಕೆ ನಕ್ಕರು ಕುಶಲ ಕುಶಲವರೂ ॥ ೪೭ ॥ ನೋಡಿ ಮುರಿಮುರಿದೋಡುವರ ನೀ । ಡಾಡಿ ಮುಂದಪರದಲಿ ನೀವೊಡ । ಗೂಡವಾಚರರಾವಳೆಲ್ಲರ ತೀರಿಸಂತ್ಯದಲೀ ॥ ಕಾಡಸೇರಿದತೆರದಿ ನಿಮಕ್ಕೆ । ಗೂಡುವದು ಮಾಡಿದರಿಗಾಫಲ । ನೀಡು ಭಿಕ್ಷವನೆಂಬ ಲೋಕಾಖ್ಯಾದುದನೆ ಕುಶನೂ ॥೪೮॥ ಯಂದು ಬಹಬಹಳಾಸ್ತ್ರಗಳನೊಂ । ದೊಂದನಾಯ್ದಾಯ್ದೊಟ್ಟೆಶರದವ । ಸುಂಧರಾ ಧರಗೈದು ನಿಮುಮುತ್ಕಾರಕಣೆಗಳಿಗೇ ॥ ಸಂದಿಸುವೆಹವಿನೋಡಿ ನಿಮಕಂ । ಣಿಂದಲೆಂಡಗ್ನ್ಯಸ್ತ್ರದಲಿ ಯವ । ದಂದಹಿಸಿ ಅನಿಲಾಸ್ತ್ರದಲಿ ತೂರಿಟ್ಟು ಕುಶಲವರೂ ॥ ೪೯ ॥ ಮೊದಲು ರಾಕ್ಷಸರಾಹವದಿ ಬಿ । ಟ್ಟದನು ಬಿಡಿ ಹುಲುಮಾತ್ರ ಶರವೆನು । ಗೆದುರೆ ನೋಡುವೆವೆಲ್ಲಿ ಆ ಶರವಿದ್ಯಶಕ್ತಿಯನೂ ॥ ಕೆದರಿರೆಂಮುಗ್ರದೊಳು ನಮಕ್ಕೆ । ಯದುರಿಸಿದರಹುದೆನುವೆವಲದಿರ । ಲದನೆ ನಿಮುಗಾಕವಿಪೆವೆಲ್ಲೆಲ್ಲೆನಲು ಕುಶಲವರೂ ॥ ೫೦ ॥ ಆಮುದ್ದುನುಡಿರಣಕೆ ಕಲಿನಿ । ಸ್ಸೀಮತನವಾ ಧೈರ್ಯಶರನಿ । ಸ್ಸಾರ್ಮುಗ್ಯೆವದಕತಿವಿಷಾದತಿ ಹರುಷಮನದಿಂದಾ ॥ ರಾಮನುರುಬೆಯು ಲಕ್ಷ್ಮಣನ ಚಪ । ಲಾ ಮಹತ್ತ್ವನು ತೋರುತಿಹರದ । ಕಾಮುಗುವುಗಳುಗಣನೆಗಿಕ್ಕದೆ ಕಾದುತಿರಲತ್ತಾ॥೫೧॥ ಅಂಗಜಂಗದರಾದಿ ಖಗರು । ತ್ತುಂಗಸಾಹಸರೈದಿ ಶಿಷುಗಳ । ಸಂಗರವೆನಿವಗಾವು ಪಿಡಿತಹೆವೆಂದು ಮುಂಕೊಂಡೂ ॥ ಸಂಗಡಿಸೆ ಹರಿಯುರಗ ಪುಲಿಮಾ । ತಂಗಕೆಂಡದ ಗುಂಡಿನೊರುಷವ । ಸಂಗಡಲೆ ಬಿರಿಘಾಳಿ ಕೆಂದೂಳಾದಿ ನಿರ್ಮಿಸುತಾ ॥೫೨॥ ವಾನರಧ್ವಜಸಹಿತಲಾ ಖಗ । ಸೇನೆರಕ್ಷನಿಘೂರ್ವಣೆಯಸಂ। ದಾನಿಸೈದಲು ಕಂಣತೆರೆಯದ ಬಾರದಾರ್ಭಟೆಯಾ ॥ ಲೀನದೊಳು ಸಿಕ್ಕಿರ್ದ್ದಲವಗಿದು । ದಾನವರ ವಿದ್ಯವನು ರಚಿಸಿಹ । ರೇನು ಭಯಬೇಡಣುವನಾದಿಯರೆಂದಕುಶಬೇಗಾ ॥೫೩॥ ಅಸುರವಿದ್ಯಾಚ್ಛೇದಿನಿಯ ಶರ । ವೆಸಯಲಾಕ್ಷಣ ಕಾವಿಘೂರ್ವಣೆ । ಮಸುಳೆಬಲ್ಲಿದರೆಂದು ಅಂಗಜನಂಗ ದಾಡುತಲೀ ॥ ಮುಸುಕಿಸಿದರತಿಯದ್ಭುತವ ಶರ । ವಿಸಿಖುಗೈಲವನೆಲ್ಲ ಕುತ್ತರ । ವೆಸೆದುಕೆಡಿಸಿದ ಹಸುಳೆಗಳ ಕಂಡೆಂದನಂಗಜನೂ ॥ ೫೪ ॥ ಸಾಕುಸುಕುಮಾರಕರೆ ನಿಮಕ್ಕೆ । ನೂಕದೆನ್ಮ್ಮದುರಿದುವರಿಗು ಗೈ । ದಾಕಡುವ ಮಿಗಿಸೈದಿರೆನುವಂಗಜನ ಸೀಕ್ಷಿಸುತಾ ॥ ನೀಕುಶಲರೂಪಿನಲಿ ಯಡಬಲ । ದಾಕಲಿಗಳಿನ್ನಾರು ನಿಮಗೀ । ಗೇಕೆ

ಯಾಕಗ್ಗಕಟಬೇಡೈದೆಂದನಾ ಲವನೂ ॥೫೫॥ ಮಾರುತಿಯು ಅವನೀಗವಾಲಿ
ಕು । ಮಾರನಿವ ಸುಗ್ರೀವ ಜಾಂಬವ । ಶೂರನಳನಿವ ನೀಲಗವಯಾದ್ಯಖಿಳ
ಖೇಚರರೂ ॥ ಮಾರಸಮುದಾಕಾರ ಕದನವ್ರುಧಾರ ರಾರಾವಣನ ವಂಶವಿ ।
ಹಾರರೆನೆ ವೇತ್ರಿಗಳು ಕುಶಲವರಿಂಗೆ ಕೈಯೆತ್ತೀ ॥ ೫೬ ॥ ಹಿಂದೆರಕ್ಷರಹರಿಸಿ
ರುವಮುದ । ದಿಂದಲೈತಂದಿಹರೊ ಆದಿನ । ಸಂದುದೆಂಮೆದುರಾಗ ದಾಬಲ
ಲೋಕರಂದದಲೀ ॥ ತಂದು ಕುಶಲವರನ್ನು ಕೆಡಬೇ । ಡೆಂದು ಯಿನ್ನೊಮ್ಮೆಂ
ದುಬಿಡಿಯ । ಲ್ಲಿಂದ ಬರಲಾಬಲ್ಲೆನೆನೆ ಕುಶವೇತ್ರಧಾರಿಗಳಾ ॥ ೫೭ ॥ ನೋ
ಡಿದಂಗದನವರ ಕೆಚ್ಚಿನೊ । ಳಾಡುತಿಹ ನುಡಿಯಾರಲಕ್ಷಕೆ । ಮಾಡರೆಂದಾ
ವರಿಸಲಸ್ತ್ರದ ಹಿಂಡುದಂಡ:ಗಳಾ ॥ ಕೂಡಿ ತಮುಶರಶರೆಯ ಗೃಹದೊಳು ।
ನೋಡಿದಂಗಜ ನಿನ್ನಕೈಲಿಹ । ವಾಡಿಸೆನೆ ಶರಗೊಂಬೆಗಳ ನರಿವೆಂದಕಲಿಕುಶನೂ
॥೫೮॥ ತೊಡಿರಿಬಾಣಗಳೆಲ್ಲ ವೋಸದಿ । ಹೊಡೆದರೆನದಿರಿರೆಂದು ಹನುಮಗೆ ।
ತೊಡಿಸಿದರು ಯಿರ್ವೈದು ಅಂಗದಗೆಂಟು ಜಾಂಬವಗೇ ॥ ಅಡಸಿಪದಿನ್ನೈದೆಲ್ಲಕೆ
ರಡೆರ । ಡಿಡುತ ಸುಗ್ರೀವನಿಗೆ ಆರಳ । ವಡಿಸಿದರು ಕುಶಲದಲಿ ಕುಶಲವರಧಿಕ
ಸತ್ವದಲೀ ॥ ೫೯ ॥ ಕಂಡಿರೆಲೊ ಖಗವರರೆ ಕೈಯು । ದ್ದಂಡ ವಿಂನುದಿರೆಂದು
ತನುತುಂ । ಬಂಡಿಸಾತಿದ ಸಿಂಹನಾದಕೆ ಲೋಕತಲ್ಲಣಿಸೇ ॥ ಭಂಡುಮಾಡಿದ
ರಾದಿಯಲೆ ಮುಂ । ಕೊಂಡು ಫಲವಿಲ್ಲೆಂಬರೆಡೆ ನುಡಿ । ಗಂಡುಶರಗಳ ಕೆಡಹಿ
ರಾಕ್ಷಸನಾದನಂಗಜನೂ ॥ ೬೦ ॥ ಗಗನದೂಪಿನಕಂಭದಂತು । ದ್ದೊಗೆದು
ಭೂರುಹಶಾಖೆಗಳ ತೆರ । ಕೊಗೆದಕೈಕಾಲೇಳುಪುರದಗಲದಲಿ ಬಾಯ್ದೆರೆದೂ॥
ಆಗಲಿದಕ್ಷಿಯೊಳುದುರ್ವಕೆಂಡದ । ಹೊಗೆಯುನಾಸದಿ ಗಿರಿಗಳೇಳೆಂಟ್ನೆ । ಗಹಿ
ಬಂದನು ಭೀಮನಣೆಕಲ್ಲಾಡುತೆದುರಾಗೀ ॥ ೬೧ ॥ ಯಲವೊ ಮಾರುತಿರಕ್ಷ
ವಿದ್ಯ । ಕ್ಕಲಸುವರೆ ರಿಪುವನ ಕುಠಾರರ । ಬಲಗೆಲುವನರಿಯದಲೆ ನರರಂಜ
ಸಿದತೆರನಾಗೀ ॥ ಕಲಿತಗೈವರೆ ನಿನ್ನವಿದ್ಯವ । ಚಲಿಪೆನೋಡೆಂದಸುರಬಿಂಧಿನಿ ।
ಯಲಘನಿಡಲದ್ರುಶ್ಯಗೊಳಲಾರೂಪ ಮಾರುತಿಯಾ ॥೬೨॥ ಬೇಡಶಾಕೆಂಬಂ
ಗದನನುಡಿ । ನೋಡದಲೆ ತಾನರಿತವಿದ್ಯದಿ । ನೋಡಿ ಸಾಧ್ಯಕೆ ಬಾರದಿರೆ ಕಾ
ಲ್ಗತಿಯುಸುತರಿವರೂ ॥ ಕೇಡು ಬಹಕಾಲದಲಿ ವಿದ್ಯೆಯು । ರೋಡಿಶಕ್ತಿಯು
ಬತ್ತಿತೆಂದು ತ್ತೋಡಿವನು ಖೇಚರರಬಳಿಸಿಲಿ ಶೂರ ಮಾರುತಿಯೂ ॥ ೬೩ ॥
ಪೋಗಿರಾಘವನೆಡೆಗೆ ಅವರೊಳು । ಸಾಗದಾಹವ ಸಂದಿವಿಗ್ರಹ । ಕಾಗಿಕಳುಹೆನೆ
ಚಕ್ರಿಗಳಿಗದು ಮಾನವಲ್ಲೆಂದೂ ॥ ಸಾಗಿಬರುವರ ನೋಡಿ ನಿಮಬಳ । ಸಾಗಿ

ಯಿಹನೃಪರ್ಯಾಕೆ ಕದನವ । ತಾಗಲಾಗದೆಯೆಂದು ಸರಳಾವರಿಸೆ ಕುಶಲವರೂ ॥೬೪॥ ಮುಚ್ಚಲಾ ನುಡಿಗುಡುಗಣವೆ ಮೆ । ಲೊಚ್ಚಿದೋತ್ಸಾಲೀಸಿ ಸಾಸಿರ। ನಿಚ್ಚದಳನೃಪ ಮಗುಟವರ್ಧನರಂಬಿನತಿವರುಷಾ ॥ ಹೊಚ್ಚಿಬಹರಸ್ತ್ರಗಳ ಮಧ್ಯದೊ । ಳೆಚ್ಚುರೋವುದ ಕೂಪಗಳಿಗೆ। ಚ್ಚೆಚ್ಚು ಮುಚ್ಚಿದರಸಮ ಕುಶಲವರವರು ಬೆದರುವೊಲೂ ॥ ೬೫ ॥ ಪಿಡಿಯಗೊಡದಸ್ತ್ರಗಳ ವೈಯ್ಯೊಳ । ಗಡಕಿತತ್ತರಬಡಿಪ ಹುಡುಗರ । ಕಡುವನೋಡ್ಕಲ್ಕ್ಯೋವತಾರಿಗಳೆಂದು ಬೆಂಕೊಂಡೂ ॥ ಪಡೆಯೆಮುರಳಲು ಅಟ್ಟಬಹರೆದು। ರಡಸುತಸ್ತ್ರಗಳಾಗ ಬಲಹರಿ। ನಡೆವರೆದುರಿಗೆಬಂದು ಕೂಗಿದರಿಂತುಕುಶಲವರೂ ॥೬೬॥ ಇಂತುಕಂಡಿನ್ಯಾಕೆ ಸಾಹಸ। ವಂತಿಕೆಯ ಬಳಸುವಿರಿ ದಶಶಿರ। ನಂತ್ಯದಲಿ ನೀವೈಸಿ ನಿಮಸಿರಿಬಂದುಯಮುಬಳಿಯಾ ॥ ನಿಂತಳೆಂದರಿದಃನತಿಸಿ ನಡೆ। ವಂತದುಚಿತರಿರೆಂದು ಕೈಸಾ । ರ್ವತ್ತ್ರಕುಶನುದ್ದಂಡಕೇಗೈಲೆಂದ ಲಕ್ಷ್ಮಣನೂ ॥ ೬೭ ॥ ಸಾವದುಚಿತನುಸರಿಸಿಬಾಳುವ। ಜೀವನಕೆ ಯಂದವುಲಶರ ರಘು । ದೇವ ಮುಚ್ಚಿದ ಲವಗೆ ಲಕ್ಷ್ಮಿರಮಣ ಕುಶನಗ್ರಾ ॥ ಕಾವರಿಸಲಾಕಾಶವರಗಿದ। ಭಾವದೊಳುಶತ್ಯುಕ್ತಿವಿದ್ಯು । ತ್ಕೇವಲವನೊಡರಿಸಿದರಾ ಕುಶಲವರಿಗದ್ಭುತದಿ ॥ ೬೮ ॥ ಅರಿಗಳುರುತರಶರಗಳನು ಹುಡಿ । ಗರೆದು ಮೇಲ್ಬಹವರಿದು ತೊಡುವೆಡೆ। ಶರವ ಶರಕೋಶಗಳ ಖಂಡಿಪಯತ್ನದೊಳಗೈದೀ ॥ ಬರುವ ಕುಶಲವರರಿದು ಬಹುತ । ತ್ತರಿಸಿ ಮುಂಗೈಖಡಿದು ಚಕ್ರವ । ಹರಿಯು ನೋಡಲು ಕೋಟಿಸಿಡಿಲಾರ್ಭಟೆಯೊಳೆರಗಲದೂ ॥ ೬೯ ॥ ತತ್ತರಿಸೆ ದಿಕ್ಪಾಲನಿರ್ಜರ। ರೊತ್ತಿನಾನೀಕಿನಿಯು ಆಪುರು। ಷೋತ್ತಮನಿಗೆಂತೈದಿತಕಟಕಟೆಳೆಯರಗ್ರದಲೀ ॥ ಬಿತ್ತಲಾಚಕ್ರವನ್ನುಚಿತವೆ। ನುತ್ತಲಿರಲಾರ್ಭಟೆಯ ನೋಡ । ಸ್ತೊತ್ತ್ರಿಬಿಡಲಳುಕದಲೆ ಕುಶಲವರಧಿಕಸತ್ವದಲೀ ॥೭೦॥ ಬರುವಶರಗಳ ದಹಿಸಿ ಬಹವುರು । ತರುವನೋಡನುಜಾತ ಪ್ರತಿಕ। ರದೊರೆಯುದಿದಕರಹಂತಸ್ಮರಣೆಯ ಚಕ್ರವನು ಧರಿಸಿ ॥ ಇರುವದೆನೆ ಬಂದಾ ಸುದರ್ಶನ । ತಿರುಗಿ ಕುಶನ ಪ್ರದಕ್ಷಣೆಯನಿಲ। ಲೊರಕರಾಗ್ರದ ಭಾಗದಲಿ ದೀಧಿತಿಯ ಪ್ರಜ್ವಲಿಸೀ ॥ ೭೧ ॥ ನಿಂದಚಕ್ರವ ನೋಡಿಯಲೊಗೋ। ವಿಃದ ಯಿನ್ನೇಗೈವಡದ ತೋ। ರೆಂದ ಕುಶನೊಚಕಾಗ ರಘುಜರು ತಲೆಯ ಬಾಗಿಸಲೂ ॥ ವಂದಿಸಿದ ಲವನವರಕೊಲಬೇ । ಡೆಂದು ಅಗ್ರಜನವರ ಮೇಲನು । ವಿಂದ ಹೂಮಳೆಗರೆದು ಪೋವರು ದಿವಿಜರಾಲಯಕೇ ॥ ೭೨ ॥ ಕಲಿಲಹರ ಮುನಿಸೂನ್ರತಾಂತ್ಯದಿ । ಚಲಿತರಾದಾ ರಾಮ

ಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ಮೊಲಿದು ಲಾಲಿಸಿ ಮುಕ್ತಿಯರಸನ ಕಥೆಯ ಸದ್ಬುಧರೂ ॥ ೭೩ ॥

ಅಂತು ಸಂಧಿ ೭೯ ಕ್ಕಂ ಪದನೂ ೪೬೦೫ ಕ್ಕಂ ಮಂಗಳಮಹಾಶ್ರೀ ಶ್ರೀ.

ಎಂಭತ್ತನೆಯ ಸಂಧಿ.

ಸೀತಾ ಅಗ್ನಿಪ್ರವೇಶದ ಸಂಧಿ.

ಆಲುತಿಹ ಹವಿಕುಂಡದೊಳು ಸೀ । ತಾಲಲನೆ ನೆರೆಬೀಳಲಮರರು । ಮೇಲುರತ್ನದ ಸಿಖರಗೈದಿರಿಸೆಸಗೆ ಪೂಮಳೆಯಾ ॥ ಪದನೂ ॥

ಆವನಿಪತಿ ಕೇಳಾ ಸುದರ್ಶನ । ಭುವನದಹಿಸುವೊಲ್ಯೈದಿ ಆರಘು । ಕುವರರಾದುದರಿಂದನಿಲೆ ಬಲಗಡೆಯ ಕುಶನೋಡೀ ॥ ಬವರಜಯುವಪಜಯ ವುಪುಣ್ಯ । ರ್ದ್ವವರಿಗನುಪುಣ್ಯರಿಗೆ ಸರಿಯಂ । ತವಕೆ ಸಂಶಯವೇಕೆ ಸೋತೆ ನುತ್ಯೈದುದೆನೆ ಕುಶನೂ ॥ ೧ ॥ ಕೊಡುವೆಚಕ್ರವನಿಮ್ಮಗೆ ಕಾಣ್ಕೆಯ ನಿಡುವೆ । ನಾನತಸಹಿತವೆಂಮೊಳು । ಬಿಡು ಮದಹಿತವ ಮೂರುಖಾಂಡದ ರಾಜರಾತ್ಮಜ ರಾ ॥ ನಡೆಯು ಸರಿಯುಂದಲ್ಲಿ ನೀವೇ । ಪಡೆದ ಸುತರಾವೆಂದು ತಪ್ಪನು । ಕೊಡರದಿಂನ್ಯೈದೆಂದ ಲವನತ್ಯಂತಕರುಣದಲೀ ॥ ೨ ॥ ಅನಿತರೊಳಗೀವರ್ತನ ವಕೊಂ । ಡನುಚರರು ಪೋಗೊಜ್ರಜಂಘಗೆ । ವಿನಯಿಸಲು ಕೇಳ್ದಾಗಜಾನಕಿ ಯೊರಗೆವ್ಯೈಮರೆದೂ ॥ ಸನುತ ವಸ್ತುಗಳಿಂದಲೆಚ್ಚರಿ । ಸೊನಿತೆಕುಳಿತಿಂನೊವ್ಕೆ ಪೇಳೆಂ । ದೆನುತ ಕಳವಳಗೊಳುವ ಸಮಯಕೆ ಬಂದ ನಾರದನೂ ॥ ೩ ॥ ವಂದಿಸಿದ ಶ್ರೀವಜ್ರಜಂಘನ । ಯಿಂದುಮುಖಿ ಬಳಬಳಲುತಲಿ ನಡೆ । ತಂದು ವಂದಿಸಿದಳಿಗೆ ಹರಸಿಂತೆಂದ ನಾರದನೂ ॥ ಅಂದು ರಾಘವನಟವಿಗಟ್ಟದ । ರಿಂದ ನಿನನಂದನರು ನಿಲಿಸಿರು । ವಂದವರಿ ನಡೆಭಯುವು ಯಿಲ್ಲವರಿಂಗೆ ಅಳು ಬೇಡಾ ॥೪॥ ಸತಿಯುನನ್ಯಾಯದಲಿದುಃಖಿಸಿ । ದತಗೆಬಂದಿರುಹೊತ್ತನೀಕ್ಷಿಸ । ಗತಿಸುಜಾನಕಿ ವಜ್ರಜಂಘನೆ ಕರದು ತಾರೆಂದೂ ॥ ಯತಿಪತಿಯ ಬಾಂಬಟ್ಟಿಯೊಳು ರಘು ' ಪತಿಯು ಬಳಿಗೈತರಲು ವಂದಿಸಿ। ದತರಹರಸಿತ್ತುಲಿದ ನಾರದ

ನಿಂತು ಕೇಳೆಂದೂ ॥ ೫ ॥ ನಿನ್ನ ಸುತರಿವರೆನಲು ಅದುಯಂ । ತೆನ್ನಲವನಿಜೆ ಯುದರದೊಳಗು । ತ್ಪನ್ನರಾದಾಗಮುವ ವಿವರಿಸಿ ಲೋಕದೊಳು ನಿಮ್ಮಾ ॥ ನನ್ನು ಕೆಣಕುವರುಂಟೆ ಆಸತಿ । ಗನ್ನ ನೀವನ್ಯಾಯುವೆಸಗಿದ । ಕಂನುನಿಂಮಣು ಗರಲೆ ಯುಸಗಿಸಿತೆಂದ ನಾರದನೂ ॥ ೬ ॥ ತನಯರೆಸಗಿದ ಸಾಹಸವ ನಿಮ । ಮನಕೆ ಸಂತಸವಿಡುವುದೇನಂ । ದೆನುತಲೆನೆ ಚಕ್ರಿಗಳ ಗೆದ್ದುರಿಗೆದುರೆ ಲೋಕ ದೊಳೂ ॥ ಮನುಕುಲಾಂಬರ ಸೂರ್ಯರಿವುರೆವು । ಘನಕೆಯೋಗ್ಯಿತರೆಂದು ಕ್ರೋಧವ । ನೆನೆಯದಿರಿ ಬಹಳದಿಗೊ ಜಾನಕಿಯಂದ ನಾರದನೂ ॥ ೭ ॥ ಯೆತ್ತಿಸಿರವನು ನೋಡೆಜಾನಕಿಯ । ಅತ್ತ ರಥದೊಳಗೈದುವದ ಕಾ । ಣುತ್ತ ಲಕ್ಷ್ಮೀರಮಣ ನಿಳಿತರಲಾಕೆ ರಥವಿಳಿವೂ ॥ ವೆತ್ತನೈತರುವಳಿಗೆ ವಂದಿಸ । ಲೆತ್ತಿಯಲೊ ಅಪ್ಪಾಜಿಕ್ಷೇಮುವೆ । ನುತ್ತ ಬಂದಳು ಹಸ್ತಲಾಘವ ಕೊಡಲು ಲ ಕ್ಷ್ಮಣನೂ ॥ ೮ ॥ ಅರಿಯದೆವು ಪಿತರೆಂಬುದನು ಯಾ । ತೆಸವಗರೆದರುಗು ಲಿಗಳೊಳು ಕ್ಷಮೆ । ಗರೆದು ಪಾಲಿಪುದೆನುತ ಜನನಿಗೆ ಯುರಗೆ ಕುಶಲವರೂ ॥ ಹರುಷದೊಳು ಪಿಡಿದೆತ್ತಿ ವತ್ತಿಲಿ । ಬರಿಷುವಣುಗರ ರಾಘವನಪದ । ಕೆರಗಿಸಿದ ಶ್ರೀವ ಜ್ರಜಂಘನತಿಸಿ ಕೈಮುಗಿದೂ ॥ ೯ ॥ ಭೂಮಿಜೆಯು ತನಗೊಡಗಿದ ನುಕು । ಪ್ರೇಮದಿಂದೀಯಣುಗರಾದಭಿ । ರಾಮುವನು ವಿಸ್ತಾರವರಿಸಿದ ಸಮ ಯದೊಳು ಸೀತೇ ॥ ಯಾಮುಹಾಹವವರಿಕೆಯಿಲ್ತೆಮು । ಗಾಮುಗುಗಳಲಿಯು ದಲೆಮಾಡಿದ । ಕೂಮಿಸದೇ ದುಶ್ಚಿತವಾರ್ಯೆರೆನಲು ಕೈಮುಗಿದೂ ॥ ೧೦ ॥ ಯರಗಿದಣುಗರನೆತ್ತಿ ತೊಡೆಯೊಳ । ಗಿರಿಸಿ ಬಲಕೇಶವರು ಆತ್ಮಜ । ರುರುತ್ತ ರಕೆ ಆನಂದಗರೆದಾಶ್ರುವಿಲಿವಾರ್ಜನೆಯಾ ॥ ಗರೆದು ರಣಮುಡಿಚಟ್ಟಪರಿಹರಾ ಗರೆದು ಮುದ್ದಾಡಾತ್ಮಜರ ಪೇ । ರ್ವರೆಗೆ ಕರಗುವರರುಗುಲೆಂದರು ನೋಡಿ ಸೀತೆಯನೂ ॥ ೧೧ ॥ ಮುಂನಿಸುತಲಾ ವಜ್ರಜಂಘನ । ನಿಂನಸುತರಾರ್ಯೆವದೇನಿ ತ್ಯಂನತಲ್ಲಾನೆಸಗಿದ ಕೃತ್ಯವನು ಯೇಣಿಸದಲೇ ॥ ಮುಂನಿನೋಲ್ಬೆಸಗೈದು ನೀನೀ । ಗೆನ್ನ ಪಾಲನೆಗೈದರದುಪು । ತ್ಪಂನಕೀರ್ತ್ಯಾವರಿಸು ಜಾನಕಿಯಂದನಾ ರಾಮಾ ॥ ೧೨ ॥ ಇಳಿದುಅಗ್ನಿಯಕುಂಡದೊಳು ಶೀ । ಲೊಳಪ ಜನಜನಿತೆಸಗಿ ಆಬಳಿ । ಕುಳಿದ ಮಾತಾಡಷ್ಟುದು ನಡಿಕೌಶಲ್ಯಕೆನೆಸೀತೇ ॥ ವಳಿತುಯುನುತೊ ಯ್ಯಾನದೊಳು ರಘು । ನಳಿನನಾಭನು ಕುಳಿತು ಖಗವರ । ಬಳಸಿನೊಳು ಬರ ಹೇಳಿ ಸೇನೆಯ ನಡೆಯಲಭ್ರದಲೀ ॥ ೧೩ ॥ ಇರಿಸಿ ಮಕ್ಕಳುಸಹಿತತೆರಳಲು । ಧರಣಿಜೆಯು ಶ್ರೀವಜ್ರುಜಂಘನ । ವರಿಸಿ ನಾರದನಡೆದನಾಕೌಶಲ್ಯಪಟ್ಟಣದಾ॥

ಹೊರೆಯೊಳಿಹ ಮಾಹೇಂದ್ರವನಕವ । ತರಿಸಿ ಸಾಸಿರಮುಖದ ಚಾವಡಿ । ಗರಸ
ಪೊಕ್ಕನು ಬಹಳನೃಪ ಖೇಚರರ ಬಳಸಿಂದಾ ॥ ೧೪ ॥ ಅಲ್ಲಿ ರವರತ್ನಾಸನದಿ
ಬಲ । ದಲ್ಲಿ ಲಕ್ಷ್ಮಣನೆಡೆಯೊಳನುವಾ । ದ್ಯಲ್ಲಮಿತ್ರರು ಯಡದಿ ಭರತೇಶ್ವ
ರನುಶತ್ರುಘ್ನಾ ॥ ನಲ್ಲೆ ಮುಂಗಡೆ ಕುಶಲವರು ಯಿರ । ಲಲ್ಲಿ ಅಂಗಜನೆಂದ
ನಿಮಸುತ । ರಲ್ಲದೆಮಭಂಗಿಪರೆ ಲೋಕದೊಳಿರ್ದರೆನೆ ನಗುತಾ ॥೧೫॥ ಭರತ
ನಾದಿಯರೆಲ್ಲರಿವರೀ । ನರರೊಳೊರಗೆ ಯಲ್ಲವಿದ್ಯಾಧ । ರರಹೋಲಿಸಸಲ್ಲದಿವಿ
ಜರೊಳುಂಟೋ ಯಿಲವೆಂಬಾ ॥ ದರಿಯಬಾರದು ನಮಗೆಯಂದಣು । ಗರನು
ಬಹುಮುದ್ದಾಡಿ ಮತ್ತ । ಲ್ಲಿರಿಸಿದರು ಅಂಗದನು ಮೊದಲಾದೆಲ್ಲಮುದ್ದಿಸುತಾ॥
ಕರೆಯೆ ಸೀತೆಯನಲ್ಲಿಗಾನೃ । ತರುವಳಲ್ಲೆಂದರಸಗೆದುರಾ । ಗಿರುವಶೋಕೆಯ
ವೃಕ್ಷದಡಿ ವೈದೇಹಿ ಕುಳಿತಿರಲೂ ॥ ಮರುತಿಯಾಲೋಕಿಸಲು ತಮಗೆದು ।
ರಿರುವ ನಿರ್ಮಳಸ್ಥಳದಿ ಕುಂಡವ । ಗರಸಿದಿಪ್ಪಲ್ಬಿಲ್ಲಿನುದ್ದದರರ್ದಯಾಮದಲೀ
॥೧೬॥ ಶಡೆದು ಬೆಳದಟವಿಜಗಳನು ಖಡಿ । ಖಡಿದು ಕುಂಡದೊಳೊಟ್ಟೆ ಅಗ್ನಿ
ಯ । ನಿಡಲು ಬೆಂದಿಂದಣವುನಕಮಕದಲ್ಲಿ ಜ್ವಾಲೆಗಳೂ ॥ ಅಡುನಾಲಗೆಸವ
ರುತಿರಲಂ । ತ್ಯೊಡಿಯತೆರದೊಳು ಕಾಯ್ದು ನೆಲಕೆಂ । ಪಡಸಿತದಕತಿದೂರ
ಲಡಿಯಿಡಲಾಗಲಸದಳದೀ ॥ ೧೮ ॥ ಪೇಳುವನಿತಲ್ಲಗ್ನಿಕುಂಡದ । ಕೋಳನೀ
ಕ್ಷಿಸಲಾಗದಲೆ ಜನ । ಘಾಳಿಸೊಡರಾಗಂಗನಾಮಣಿಮಿಂದು ಆದ್ರೊರ್ರ್ಸನಾ ॥
ತಾಳಿಭೂಷಣಗೊಂಡು ಶೀಲನು । ದಾಳಿಜಾನಕಿ ಕುಂಡವೆಡೆ ಕೈ । ತಾಳಿನಿಂದ
ಳುಅಪ್ಸರೆಯ ತೆರದಿಂದಲಾಗಲ್ಲೀ ॥ ೧೯ ॥ ಸೀತೆಗೈವ ಪ್ರತಿಜ್ಞೆಯನುಮಾನ ।
ಸೋತುನೋಡಲು ರಾಜ್ಯವನೆ ಪಿಡಿ । ದಾತಳಕೆ ತಂದಿರಿಸಿದಂದದಿ ಜನರುಸೈ
ವರಿದೂ ॥ ಆತು ಹಯಗಜವೋಷ್ಟ್ರಗಳ ಸಂ । ಜಾತವೃಕ್ಷಗಳಂತ್ರವೆಂತರ ।
ಜಾತನಿಂದರು ಕಂಣುಮನವರಿವಗಲನೀಳದಲೀ ॥ ೨೦ ॥ ಇರಲಿಯಿದು ವಿಜ
ಯಾರ್ಧದಕ್ಷಿಣ । ಧರೆಯ ಗುಂಜಾಪುರವನಾಳುವ । ಅರಸ ಹರಿವಿಕ್ರಮಗೆಸತಿ
ಶೀದೇವಿಯಂಬಳಿಗೇ ॥ ಸ್ಮರನಮರಸಿದ ಸಕಲಭೂಷಣ । ತರಳನಾಗಿರಲವಗೆ
ಸತಿಯರು । ಕಿರಣಮಂಡಲೆಯಾದಿ ಖಚರಿಯರೆಂಟುಸಾಸಿರವೂ ॥ ೨೧ ॥
ಚಲುವೆಯರು ಅವರೊಬ್ಬರೊಬ್ಬರ । ಗೆಲುವ ಲಾವಣ್ಯಾಂಗಿಯರು ಬಿರಿ ।
ಲಲನೆಬಾಳುವಳಷ್ಟು ಜನವಿಕ್ರಯದ ಲಲಿತವನೂ ॥ ಅಲರಶರನಧಿದೇವಿಯಹ
ಕೋ । ಮಲೆಯ ಮಾತುಳನನುಜನಾತ್ಮಜ । ಚೆಲುವನೆನಿಸಿಹ ಖಚರನಾಡಿಗೆ
ಹೇಮಮುಖನೆಂಬಾ ॥ ೨೨ ॥ ವೆಂದುದಿನವಗ್ರಜನನಿಳಯಕೆ । ಬಂದುನಾಲ್ಕಿನ

ಏರ್ದುಪೋದವ । ನಂದವರಿದಿಂನಿರ್ದ ನಾರಿಯರೆಲ್ಲ ವಂದು ದಿನದಿ ॥ ಇಂದು ಮುಖಿ ನಿನವ್ಮೈದುನಗೆ ಸರಿ ।, ಬಂದರಿಲ್ಲತಿರೂಪಿನಲಿ ನಿನ । ಗಿಂದಕುಶಲೆಯು ರಿಲ್ಲಚಿತ್ರಾದಿಯಲ್ಲಿ ಬರಿಯನಲೂ ॥ ೨೩ ॥ ಆಡುವರೆ ಯೀ ಮಾತನನ್ಯರ । ಗಾಡಿಯನು ಕೊಂಡಾಡಲಹಿತವ । ಮಾಡುವರು ತವುಪ್ರಿಯರು ಚಿತ್ರವಬರೆದ ರಾಕ್ಷಣವೇ ॥ ನೋಡರಾನನವೆನಲು ಜಾಣ್ಮೆಯ । ನೋಡುವಡೆ ಬರಿಯನಲು ಪತಿವ್ರತ । ವೋಡಿತೇ ಪುರುಷಿಲ್ಲ ವೂರೊಳು ಬರೆವುದೆಂದೆಲ್ಲಾ ॥೨೪॥ ವತ್ತಿ ದೊತ್ತಂಬವಲಿ ದೃತಿಕಳ । ವೆತ್ತಚಿತ್ತದಿ ಬರೆಯುತಿರಲಾ । ಹೊತ್ತಿನಲೆ ನಡೆ ತಂದು ಕಂಡನು ಸಕಲಭೂಷಣನೂ ॥ ಚಿತ್ತಪ್ರಿಯೆನಡವಳಿಗೆ ಆನನ । ಬತ್ತ ಲಾಗಲೆ ಕಿರಣಮಂಡಲೆ । ಚಿತ್ತವಿಭ್ರಮೆಗೊಳಲು ಮಿಗಿಲಾದೆಂಟುಸಾಹಸ್ರಾ ॥ ನಾರಿಯರು ವತ್ತಂಬಿಸನನಾ । ಕಾರವಾರೂಪಿಸಿದೆವಲದಾ । ನೀರೆಯೊಳಗಿಲ್ಲಿ ನಿತುದೋಷಗಳೆಂದು ಸಂಶಯವಾ ॥ ಹಾರಿಸಿರೆ ಸ್ವಪ್ನದೊಳು ಹೇಮಕು । ಮಾರನೇ ಚಲುವೆಂಬ ಕನವರ । ದೋರಿ ಹಂಬಲಿಸಿದಳು ವಂದಿನ ಕಿರಣಮಂ ಡಲೆಯೂ ॥ ೨೬ ॥ ಆಗಲೆಚ್ಚತ್ತಿರ್ದ ಪ್ರಿಯಕೇ । ಳ್ವಾಗಲೀತೆರಪೊಂಬಲಿಸು ವಳಿ । ಗಾಗ ಬರೆಯಲಚೋದ್ಯವಲ್ಲರಿಗನೆಯರಂತರದಾ ॥ ರಾಗಬೇರೆಂದವನು ಪ್ರಕಟಿಸು । ತಾಗ ಹೊರಟಾಶ್ರಮವನಿಷ್ಪೃಹ । ನಾಗಿಧರಿಸಿದ ಸಕಲಭೂಷಣ ಖಗಯತೀಶ್ವರನೂ ॥ ೨೭ ॥ ಘೋರ ತಪಸನುಗೈದು ವೃದ್ಧಿಯು । ಸಾರಿ ಶುಕ್ಲಧ್ಯಾನದೊಳಗಾ । ನಾರಿಸೀತಿಹವನದಿ ಮುಂತ್ರೊಂದೆಡೆಯುನಿಂದಿರಲೂ ॥ ನಾರಿ ನಿಷ್ಕಾರಣದಿ ಯನಪ್ರಿಯ । ದೂರವಮಾಡಿದನೆಂಬಶಲ್ಯವ । ಸಾರಿಸತ್ತು ದಿಸಿದಳು ಭೂತಾರಣ್ಯದೊಳಗಿತ್ತಾ ॥ ೨೮ ॥ ವೆಂತರಿಯು ಶ್ರೀದೇವಿಯೆಂಬಾ । ಖ್ಯಾಂತು ಯಿರಲೊಂದಾನುದಿನ ಬರು । ತಂತರದಿ ವೈಮಾನ ಕೀಲಿಸಲರಿದು ಆಮುನಿಯಾ ॥ ಪಿಂತಣ್ವೈರದಿ ಯರಡುಸಾಸಿರ । ಕಾಂತೆರೂಳಿಗರಿಂದಲಿವನ। ತ್ಯಂತಹಿಂಸೆಯಮಾಡಿರೆನಲಾವೇವಿಯಾಗ್ನೆಯಲೀ॥೨೯॥ ವುರುಗವುಲಿಹರಿಶರಭ ಕರಿದನು । ಜರವಿಘೂರ್ವಿಸಿ ಹಲವು ಹಿಂಸೆಯ । ಗರಿಸಿಕೆಂಡದಗುಂಡಿನೊರುಷ ವಗರೆದು ಕಾರ್ಬೊನ್ನಾ ॥ ವಿರಚಿಸಾಭರಣವನು ತಪ್ತವ । ಗರಸಿ ತೊಡಿಸೊದಿ ರ್ನಿಸಲುಶ । ಕ್ರೈರದಿರವ ಹಿಂಸೆಯುಗೈಯಲೆಡೆ ಬಿಡದೇಳುದಿನತನಕಾ ॥೩೦॥ ಯತಿಯಮನನಿಶ್ಚಲವೊಳಿರೆ ದಧಿ । ವ ಥಿತಘ್ರುತದಂತಮಲಜ್ಞಾನು । ತೃಪ್ತಿ ಸೆಬಿಲ್ಲೈಸಾಸಿರಂತರಕೊಗೆದು ನಿಲಿದೇವ ॥ ನತಿಶಯವಕಂಡಂಜಿವೆಂತರೆ ।ಗತಿಸ ಲಾಸನಕಂಪದಲಿಸುರ । ಪತಿಯುನಿರ್ಜರರೊಡನೆ ಬರಲಾದೇವನಪಚಯಕೇ ॥

ಕಂಡು ಅಂತರದಿಂದಲಾ ಹವಿ । ಕುಂಡವದರೆಡೆನಿಂತ ಸೀತೆಯ । ಗಂಡುಯಿಾ
ಯುಗಕಿರುವಪತಿವ್ರತೆ ಯಿಾಕೆಯಿಾಶಪಥಾ ॥ ಗೊಂಡಿಹಳುರಕ್ಷಿಸಲು ಅದ್ಭುತ ।
ಗೊಂಡುಯಿರು ನೀನೆಂದುವುಲಿದು । ದ್ದಂಡ ಮೇಘಧ್ವಜನ ಯಿರಿಸೈದಿದನು
ಅಸುರೇಂದ್ರಾ ॥ ೩೨ ॥ ಇತ್ತ ಸೀತೆಯು ಕುಂಡದೆಡೆ ಕೈ । ಯತ್ತಿ ರಾಘವ
ಕೇಳು ಜನ್ಮ । ತ್ಪತ್ತಿ ಇಂದ್ಯೈದೊರುಷದೊಳಗುತ್ಪತ್ತಿ ಸುಜ್ಞಾನಾ ॥ ದತ್ತಣಿಂ
ನೀಗೆನಲುವವರೆಗಿಂ । ನತ್ತಲೀದಿನತನಕಯುನಚಿ । ತ್ತತ್ತಲಿತ್ತಲುಗಿಲ್ಲನೀನೇನರಿ
ದೆಯನವಳವಾ ॥ ೩೩ ॥ ನಿಂನಜ್ಞಾನೀತೆರಗೊಳಲಿಹ । ರನ್ನು ಆಡುವಡೇಕೆಜನ
ತಮ । ಭಿನ್ನರುಚಿಯರದೇನನರಿವರು ಆರುಅರಿತೇನೂ ॥ ತಂನ ಸತ್ಯವೆತನದು
ಆರ । ಲ್ಲೆನ್ನಲೇನಹುದೆಂದರಾಗುಣ । ವುನ್ನಿಪುದೆ ತನ್ನಡಯ ಗುಣತನದೆಂದಳಿಂ
ದುಮುಖೀ ॥ ೩೪ ॥ ಇರಲಿಗತಿ ನೀನಲ್ಲದನ್ಯರ । ಕರವ ಸೋಕಿದಳಲ್ಲದಲಿ
ಪ್ರಿಯ । ಕರದಿ ನಿನಸೋಂಕನ್ಯರನು ಸುತಭಾವಸೋಂಕಲದೇ ॥ ಮರದೆನಾದಡೆ
ದೇವನಿನಪದ । ಶರಣೆಯಲ್ಲಾ ಲಕ್ಷ್ಮಣನಗರ್ಭ । ತರಳೆಯಲ್ಲಾ ನಾರಕಿಯೆ
ಕಡೆಗೆಂದಳಿಂದುಮುಖೀ ॥ ೩೫ ॥ ಸತ್ಯನೆರವೆನಗನ್ಯಧರ್ಮ । ಸ್ತುತ್ಯಳಲ್ಲರ
ಹಂತಯಿನಶಸಿ । ನಿತ್ಯಲಿಹಧರೆ ಬಲ್ಲದೆನ್ನಂತರದ ಶೀಲವನೂ ॥ ನಿತ್ಯವಿರದೀ
ಲೋಕರಿಗೆ ಅನು । ಪತ್ಯವಾಗಿರಲಗ್ನಿಶೀಲವ । ಗತ್ಯ ತೋರುವುದೆಲ್ಲರಿಗೆ ನೋ
ಡೆಂದಳಿಂದುಮುಖೀ ॥ ೩೬ ॥ ಉಚ್ಚರಿರದೀಲೋಕನಡೆ ಬಿ । ಬ್ಬಚ್ಚೆಸದೆವುಂ
ಟೇನೊ ಅರುಹೆನ । ಗೆಚ್ಚರಿಲ್ಲಾ ಬಲ್ಲಳಾಗಿಹಳೊರ್ವ ವೈದೇಹೀ ॥ ಸಚ್ಚರಿತೆ
ಯಿಾಯುಗದಿ ಅದನೆಂ । ತೆಚ್ಚರಿಪೆಯನಲಗ್ನಿಯೂತನ । ಬಚ್ಚಳಂತಾರೈದರರಿ
ರೆಲ್ಲೆಂದಳಿಂದುಮುಖೀ ॥ ೩೭ ॥ ನೋಡಿ ವೆಂತರ ನಿರ್ಜರರೆ ಯಿದ । ನೋಡ
ಬಂದಿಹರೆಲ್ಲಮರಸದೆ । ನೋಡಿರೊಂದೇಮನದಿ ರಾಘವಲಕ್ಷ್ಮಣರೆ ನೋಡೀ॥
ನೋಡಿರೆನಮೈದುನರೆ ಕೌಶಲೆ । ನೋಡಿ ಚಿಕ್ಕತ್ತೆಯರೆ ರಘುವರ । ಮಾಡಬ
ಹುದೆನ್ನಲ್ಲಿ ಸಂಶಯವೆಂದಳಿಂದುಮುಖೀ ॥ ೩೮ ॥ ಆದಡವನೇಗೈವನಾಕೃತ।
ವಾದಫಲವೆನಶೀಲಗೋಪಾ । ಲಾದಿ ಜನವಿಖ್ಯಾತಿ ಗೈಲೆಂದೆಲ್ಲಕನುಸಾದ್ಯಾ ॥
ವಾದಕೆಲಸವ ತೊಡಗಿದೆನು ಯಿಂ । ದಾದಿ ಜಾನಕಿ ಸೀಲೆಯೆಂಬುದ । ಮೇಧಿ
ನಿಯುಸಮಕಿರಲಿ ಶಾಸ್ವತವೆಂದಳಿಂದುಮುಖೀ ॥ ೩೯ ॥ ವರೆದುಯಲ್ಲವ ನಗ್ನಿ
ವೈಶ್ವಾ । ನರನೆ ವಹ್ನಿರ್ವೀತಿಹೋತ್ರನೆ । ವುರಿವನಲಪಾವಕ ಧನಂಜಯು ಕೃ
ಪೀಠನಿಜ್ವಲನಾ ॥ ಯುರವನರಿಯದ ಮಾಯಕಾರನೆ । ಪರಮಸತಿಯಾಗಿರ್ದ
ಡೆನ ನಿನ । ತರಳೆಯೊಲು ಕಾಯುಂದು ಬಲವಂದಾಗ ಕುಂಡವನೂ ॥ ೪೦ ॥

ಧರೆಯೊಳಗೆ ಧರಣೇಂದ್ರಿಯೇಸ। ಚ್ಚರಿತೆ ಸರಿಯಂದುರಿಯೊಳಗೆ ನೆಗೆ। ದುರುಳಲುರಿ ನವರತ್ನಮಂಟಪಸ್ಗೈದು ಮಧ್ಯದೊಳೂ ॥ ಇರಿಸಿ ಸಿಂಹಾಸನವಸಿರಿವೆಂ। ತರಿಯ ತೆರದೊಳಗಿರಿಸಿ ಪೂಮಳೆ। ಗರೆದು ಪತಿವ್ರತೆಯಂದು ಪೊಗಳಿದನು ದಿವಿಜಕೊಂಡಾಡೀ ॥ ೪೧ ॥ ತಲ್ಲಣಿಸೆಹಾಯಂದು ಜನರದ। ರಲ್ಲಿ ದುಮುಕುವಸಮಯಕೆವೆಯಿಡು । ವಲ್ಲಿಯದ್ರುಶವಗ್ನಿ ಸಹಿತಾ ಕುಂಡವೇನಾಗೀ ॥ ಯಲ್ಲಿ ಬಂತೀಮಂಟಪದೊಳಿಹ। ಕೆಲ್ಲೆಜಾನಕಿ ಯೇನುಪೂಮಳೆ। ದೆಲ್ಲೆಪತಿವ್ರತಹಿಂದೆಬಲ್ಲವ ರುಯನೆಜನರೂ ॥ ೪೨ ॥ ಜನರುಜನಜನಿತಾಗಿ ಮಹಸತಿ। ಯೆನುತಲಿರೆ ಸುರಪಾರಿಜಾತದ। ಹನಿಯಬಸಹ ಜಗನ್ಮಾತೆಜಯಜಯವೆಂದು ದುಂದುಭಿಯ ॥ ಧ್ವನಿಯ ಗೊಳಿಸೈದಿದರು ನೋಡುವ। ಡೆನುತ ಬಂದಿರ್ದಮರರದಜನ। ಪುನಹ ಕಂಡಾಶ್ಚರಿಸಲರುಹಧ್ಯಾನ ಲೀನದಲೀ ॥ ೪೩ ॥ ಕಲಿಲಹರಮುಸಿಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನಲಿ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದಮನ। ನೊಲಿದು ಲಾಲಿಸಿ ಮುಕ್ತಿಯರಸನಕಥೆಯ ಸದ್ಬುಧರೂ ॥ ೪೪ ॥

ಅಂತು ಸಂಧಿ ೮೦ ಕ್ಕಂ ಪದನೂ ೪೬೪೯ ಕ್ಕಂ ಮಂಗಳ ಮಹಾ ಶ್ರೀ ಶ್ರೀ

ಎಂಭತ್ತೊಂದನೆಯ ಸಂಧಿ.

ಧರ್ಮೋಪದೇಶದ ಸಂಧಿ.

ಸಕಲತತ್ವದ ನಿರ್ಣಯವಮುನಿ । ಯುಕುತಿಸಲು ಜನರಾದಿಯಲಿರಘು। ಮುಕುಲಿತಾಂಜಲಿಯಿಂದ ಕೇಳಲು ದೀಕ್ಷೆಗೊಳೆ ಸೀತೆ ॥ಪದನೂ॥

ಧರಣಿಪತಿಯವಧರಿಸು ಸುರವರ। ತರುಣಿಯುಂದದಿ ರತ್ನಸಿಖರದೊ। ಳಿರುವ ಶ್ರೀದೇವಿಯನು ಕಂಡಿರ್ದೆಲ್ಲ ಜನಜನರೂ ॥ ಪರಮಸತಿ ಪತಿಭಕ್ತೆಪತಿವ್ರತೆ। ಸರಸೆಸದ್ಗುಣೆ ಸತ್ಯವತಿ ಗಂ। ಭೀರಳು ನೀನೆಂದಾಡುತಿರಲೆಲ್ಲಾ ಕೆಯಾಕ್ಷಿಸುತ ॥೧॥ ಸೀತೆಯಾಪ್ಯವ ನೋಡುತಿಹರ। ತ್ಯಾತಕಕ್ಷಿಮುನಿಡದೆ ಜನಸಂ।

ಜಾತವಿರಲಾರಾಘವನು ಕಣ್ಬಿಟ್ಟ ತೆರದಿಂದಾ ॥ ಲಾತೆ ಯಿಾಕ್ಷಿಸುತಾತ್ಮಜರು ಖಗ। ಜಾತ ಲಕ್ಷ್ಮಣ ಭರತ ಶತ್ರು'। ಘ್ನಾ್ಯತ ದ್ರಿಷ್ಟಿಯೊಳಿರಲು ಪ್ರಜ್ಞೆಯ ಮರೆದ ತೆರನಾಗೀ ॥ ೨ ॥ ನೋಡುತಿರಲರೆ ಘಳಿಗೆ ಲಕ್ಷ್ಮಣ। ನೀಡಿ ಕೈಗಳ ಸೀತೆಯನು ಕೊಂ। ಡಾಡುತಿಹರೀ ಲೋಕವಿನ್ನಾ ಸತಿಗೆ ಸರಿಬಹರಾ ॥ ನೋಡಲಿನ್ನಾಕೆಯನು ದಯ। ಮಾಡಿಸುವ ಯತ್ನೇನೊತದ್ದೊಡ। ಗೂಡಿರೆ ನಲುಸ್ಸೆಂದು ರಾಘವನಾಡಿದದಕಿಂತೂ ॥ ೩ ॥ ಹೇಗೆ ಲಕ್ಷ್ಮಣ ಸೀತೆಗಾರಡಿ। ಯಾಗರವನಾಗೈದೆ ನೀತೆರ। ನಾಗಿಯಿಹಳೊಲವರಿಯದಜ್ಞಾನದಲಿ ಕರ್ಮಬಲಾ ॥ ವಾಗಿ ಕೂಡಿದರಿಂದಲೀಗೆಂ। ತಾಗಿ ನುಡಿವಳೊ ಹೇಗೆ ಆಯಡೆ। ಗಾಗಿ ಪೋಗುವದಕಟಧೈರ್ಯರದೆಂದನಾರಾಮಾ ॥ ೪ ॥ ಯಂತುಯನಲೀ ನಾಗತಿಳಿಯದ। ಲಿಂತು ಹೆಸರಾಯ್ತಾದುದಡಗಿಸು। ವಂತದಲ್ಲೇನಾದರಾಯಿ ಪೋದಯೋಚನೆಗೇ ॥ ಚಿಂತೆಗೈಲೇನಿನ್ನು ಆಸತಿ। ಯಂತಕೈದೆಂದಾಗಲಕ್ಷ್ಮೀ। ಕಾಂತವಂದನೆಗೈದನಗ್ರಜನೆದ್ದನಲ್ಲಿಂದಾ ॥ ೫ ॥ ಸುತರುಮುಂಗಡೆಭರತಶತ್ರು। ಘ್ನಿತರ ಅಂಗಜನಾದಿ ಖಗನರ। ಪತಿಗಳಾವೃತ ಹಸ್ತಲಾಗವ ಹಿಡಿದು ಲಕ್ಷ್ಮಣನಾ ॥ ಸತಿಯವಕ್ತ್ರವ ನೋಡುತಲಿ ರಘು। ಪತಿಯು ಮೇಲನೈತರಲು ಸೀತುಂ। ನತಿಸದಿರೆ ಭಯದಿಂದ ಕುಳಿತನು ನಿಕಟಕೆದುರಾಗೀ ॥ ೬ ॥ ಯನ್ನಕರ್ಮ್ಮದಯದಲಿ ನಿನಬಿಡ। ಲೆನ್ನಮನವಂಕುರಿಸಿತದಕನು। ಜನ್ನಬೋಧನೆಗೈದಬೇಡೆನಲರಿಸದಜ್ಞಾನಾ ॥ ನಿಂನೊಳಹಿತವಜನಿಸಿತದ ಮನ। ಕನ್ನುತಾರದೆ ಪೂರ್ವಮೇರೆಪ್ರ। ಸನ್ನಗೊಡು ಕಾಯ್ದೆನ್ನ ಅಪರಾಧವನು ಯನೆ ರಾಮಾ ॥೭॥ ಬಿಟ್ಟಕ್ಷಣದಲೆ ಆಶ್ರಮಕೆ ಮನ। ಏಟ್ಟೆ ಗರ್ಭಳ್ಕಿನಲಿ ಅದತಡೆ। ಬಟ್ಟೆಗೈದೈದುವಡೆ ಮೋಹಿನಿ ಮಕ್ಕಳನು ಬಿಡದೇ ॥ ಇಟ್ಟೆತಾ ಬಳಿಕೆನ್ನ ಸತ್ಯದ। ಬಟ್ಟೆಯಾಲೋಕಿಸಲು ಮನಬಿಗಿ। ದಿಟ್ಟಳಿನ್ನಿಹಳಲ್ಲಜಾನಕಿ ಯಂದಳಾಸೀತೇ ॥೮॥ ಬಿಡುವ ಸಮಯದೊಳಿರ್ದಮನ ನೀ। ನಡಿಯಿಡಲು ಬೇರಾಗಿ ನಿನಬಿ! ಟ್ಟುಡಿದಖಗನೊಡದಗ್ನಿ ದಹಿಸಂಗವನು ನಿನಕಂಡೂ ॥ ಅಡಗಿತಾಹವದಂತ್ಯನಿನ್ನಿನೊ। ಳೊಡನೆಸುಡದಾರೈದು ಕೀರ್ತಿಯ। ನಡಸುಜಾನಕಿ ಸೀತೆ ಜನಕಜೆ ಸೀಲೆಯನೆ ರಾಮಾ ॥೯॥ ಬರುವೆದೀಕ್ಷಾಗ್ರಹಣಪಥವಾ। ಧರಿಸದಿರೆ ಮಿಗೆಲೆಂಟುಸಾಸಿರ। ಸರಸಿಜಾಕ್ಷಿಯರುಂಟು ನಿನಗೇನರೆಯು ನಾನಿನ್ನೂ ॥ ಬರೆನುಬಿಟ್ಟವಳೈದಗತಿಗೆ। ಟ್ಟರಿಕನೆನರೇ ಜನರು ಅದಕೆನ। ಮರೆವುದೆನೆ ಮೋಹನೆಯು ಜಾನಕಿ ನಗುತ ರಾಘವಗೇ ॥ ೧೦ ॥ ಇರಲಿ ಅಂಗನರೆನಿತು ನಿನ್ನೊಳ। ಗೆರಕಬೇರೆನಲದಕೆ

ನನ। ಬಿಟ್ಟಿರದೆ ಬಂದಾರಣ್ಯವಾಸಕೆ ಯನಲು ಜಾನಕಿಯೂ ॥ ದುರುಳರಾಕ್ಷ
ಸನೊಯ್ಯೆ ಸಾಹಸ। ಗರೆಯಲಿಲ್ಲವೆಯನಲು ಯಿದೆಪ್ರತಿ। ಕರವಗೈದೋಕೂಡೆ
ಹಿತವಿರಲೆಂದಳಿಂದುಮುಖೀ ॥ ೧೧ ॥ ಅಗಲೆ ನಿನ್ನಾ ಕ್ಷಣವೆ ಯಮೃತ। ಮಿ
ಗಿಲಸತಿಯರಹಿತಕೆ ಯನಮನ। ಸೊಗಸದತಿ ಸಾಹಸದಿ ನಿನತರಲಿಲವೆ ಯನೆ
ರಾಮಾ ॥ ಖಗಪನೊಯ್ಯಲು ನಿನ್ನ ಕ್ಷೇಮದ। ಬಗೆಯುಗಾಣ್ದನ್ನಪಾನವ।
ಬಗಸದತಿ ತಪಗೈಯ್ಯಲಿಲ್ಲವೆ ರಕ್ಷನುಪಟಳದೀ ॥ ೧೨ ॥ ನಿನಗೆಯನಗತಿಹಿತ
ವುಕೂಡಿ। ರ್ದನಿತರಲಿ ಯನಗಾಗಿ ನೀನಿನ। ಗೆನುತ ನಾನೇನು ಕಷ್ಟಬಟ್ಟಿರು
ಕಾಣಲಿಲ್ಲಾಗಾ ॥ ದನುಜರುಪಟಳ ಹಿಂಸೆಗಾರದೆ। ಬಿನುಗುಗೊಳೆ ನಿನಪದಕೆ
ಅಪಕೀ। ರ್ತನುಗೊಳಿಪುದೆಂಬುದನು ನೋಡಿದೆ ಪ್ರಿಯನೆ ಯನೆ ಸೀತೆ ॥೧೩॥
ಯನ್ನಪತಿವ್ರತ ನಿಂನವಂಶಕೆ। ಭಿನ್ನಗೊಳಿಸದೆ ಬಹಳ ಕಷ್ಟವ। ನನ್ನು ತಾಳಿದೆ
ಮಿಗಿಲಸ್ತ್ರೀರಾರಕ್ಷರದ್ಭುತಕೇ ॥ ಮುನ್ನಜೀವವ ಬಿಡುವರದನಾ। ನನ್ನನೋ
ಡಿದರಾಮನೆನಬಿಡ। ಲೆನ್ನಲೆಂತುದಿಸಿಹುದೇ ನಿನಚಿತ್ತೆಂದಳಿಂದುಮುಖೀ॥೧೪॥
ಬಿಟ್ಟುದುಪಕೃತಿ ಶೀಲಪ್ರಕಟವ। ನಿಟ್ಟುಜಾಗ್ರದಿ ಸದ್ಗತಿಗೆ ನಳ। ವಟ್ಟು ಬಿಡಿ
ಸಿವೆ ನೀನೆ ಸಂಸೃತಿ ಹರಿಸಿಹಿತಕರವಾ ॥ ಪಟ್ಟವರ್ಧನೆಯಾದುದಕೆ ಯಿ।
ಗಟ್ಟಬಂದಪರದಲಿ ನೀನೇ। ಬಟ್ಟೆಯೋ ನಾನಾವ ದಾರಿಯೊ ಯಂದಳಿಂದು
ಮುಖೀ ॥೧೫॥ ಆರುನೀಭವಭವದಿಬಂದವ। ತಾರವೇನೇನೊಂದುಭವಪ್ರಿಯ।
ಕಾರನಿನಗೆನಗೈಸೆ ಹಲವೋಕ್ತದಲಿಫಲವೇನೂ ॥ ಸಾರುನಿನದಾರಿಯನು ಯನ
ಮನ। ಕಾರ ಬೇಡೆನಲಾಕೆ ನುಡಿಗೆ ಏ। ಕಾರವನವಂಕುರಿಸಿ ಕಳವಳನಾವ
ಶ್ರೀರಾಮಾ ॥ ೧೬ ॥ ಕೂಡೆಲಕ್ಷ್ಮಣನೆದ್ದು ವಂದನೆ। ಮಾಡಲಾತ್ಮಜರಾಶ್ರು
ಗಳಬ। ಟ್ಟಾಡಿಸಲು ಅಣುಮಾನ್ಯ ಅಂಗದರಾದಿಯರು ಕೆಡೆದೂ ॥ ಬೇಡು
ವರ ನೋಡೆತ್ತಿ ನಗಧರ। ನೋಡೆಲಕ್ಷ್ಮಣ ಅಣುಗರನು ಪ್ರಿಯ। ಗೂಡಿಆರೈ
ಯಂದು ಪ್ರಿಯಸುತನಾದ ಮನ್ಮಥಗೇ ॥ ೧೭ ॥ ಆಡದಿರುಬದಲಾಗಿ ಅಂಗದ।
ಕಾಡಿವರು ಆತ್ರನುವೆ ಸರಿಯೆ। ನಾಡಲೊಡಬಡೆನರುಹ ಸಾಕ್ಷಿಯೊಳೆನಲು ಬೇ
ಗವಲೀ ॥ ಕೂಡೆ ರಾಘವ ನೆದ್ದು ಕೈಗಳ। ಜೋಡಿಸಲು ಸಿದ್ಧೇಭ್ಯಾಯೆನು।
ತೊಡನಾಡಿ ಕುರುಳುಚ್ಚಿತ್ತು ಯದ್ದಳು ಸೀತೆ ನಿಶ್ಚಲದೀ ॥೧೮॥ ಸಿಕ್ಕಿ ಸಂಶ್ರು
ತಿಯೊಳಗೆ ಯೆನಪ್ರಿಯ। ಮಕ್ಕಳಲ್ಲದಲುದಿಸಿದ್ವೈರಾ। ಗ್ಯಕ್ಕೆನೀವೆನಾ
ಗುವಿರಿ ನೀವೆಲ್ಲೆಂದು ಮುಂವಡಿಯು ॥ ನಿಕ್ಕಲಾಸಭೆಸಹಿತಬಲಹರಿ। ಕಕ್ಕಸದಿ
ಹಿಂದೈದೆ ಜಿನಸಭೆ। ಪೊಕ್ಕು ವಂದಿಸೆ ಸಕಲಭೂಷಣದೇವನಡಿದಳಕೇ ॥೧೯॥

ಗಂಧಕುಟಿಯನು ನೋಡಲೊಡನಾ । ನಂದ ಪುಟ್ಟಲು ರಾಘವನಗೆನಗೆ । ಬಂದು ಗೈದರು ತ್ರಿಪ್ರದಕ್ಷಿಣೆ ಸೀತೆ ಸಹವಾಗೀ ॥ ವಂದಿಸರುಹನಿಗೆದುರು ಕುಳಿತರ । ವಿಂದನಾಭನು ಸಹಿತ ರಘುಜನಿ । ಗೆಂದು ದಿವ್ಯಧ್ವನಿಯೊಳನುಪಮಧರ್ಮ ಲಕ್ಷಣವಾ ॥ ೨೦ ॥ ಕುಳಿತರೆಲ್ಲಾ ನೃಪರು ಖಗ ಸಂ । ಕುಳವು ಸಭೆಯರು ಕೇಳ್ವ ತೆರ ನುಡಿ । ಗಳ ವಿರಾಜಿಸೆ ಶಾಸ್ತ್ರಸಾರಗಳಲಿ ಅಣಗಾರಾ ॥ ದೊಳವನುಳಿದಿರ ಶ್ರಾವಕರಿಗನು । ಗೊಳಿಪ ಸಾಗಾರಾಗಮುವ ನಿ । ರ್ಮಳದಿ ತಿಳಿಸಿದರಿಂತು ಮೃದುನುಡಿ ಮಧುರ ತರದಿಂದಾ ॥ ೨೧ ॥ ಇಹವು ನೆಲೆ ಪನ್ನೊಂದು ಅಣುವ್ರತ । ವಹವು ಐದಲ್ಮೂರು ಗುಣವ್ರತ । ಕಹವು ಶಿಕ್ಷಾ ವ್ರತವು ನಾಲ್ಕೆಂದೆಲ್ಲ ಭವ್ಯರಿಗೇ ॥ ಸಹಜ ಲೋಕದೊಳೆಲ್ಲ ಪದವಿಗ । ಳಹವು ಯಿವರಿಂದಿವರ ಭೇದವ । ಗ್ರಹಿಸು ತದ್ಭವ ಮೋಕ್ಷಗಾಮಿಯೆ ರಘುಜನೆನೆ ದೇವಾ ॥ ೨೨ ॥ ದರುಶನಿಕನು ವ್ರತಿಕ ಸಾಮಾಯಿಕ ನಂ । ತರದಿ ಪ್ರೋಷದುಪವಾಸಿ ಸಚಿ । ತ್ತವಿರತಿ ರಾತ್ರಿಭುಕ್ತಿ ವ್ರತ ಬ್ರಹ್ಮಚಾರಿಆರಂಭಾ ॥ ವಿರತಿ ಪರಿಗ್ರಹ ವಿರತಿ ನುನುಮತ । ವಿರತಿಹರ ವುದ್ದಿಷ್ಟ ನೆಂದೆಂ । ಬಿರುವನೆಲೆ ಪಂನೊಂದು ಭೇದವಕೇಳು ವಿವರಗಳಾ ॥ ೨೩ ॥ ಮೂರು ಮೂಢಗಳೆಂಟು ಮಲವಿ । ನ್ನಾರನಾಯತ ವಷ್ಟಮದಗಳ । ಬೇರುಪಡಿಸಲು ದರುಶನೀಕನು ಯೆನಿಪನೊಳಗಿನ್ನೂ ॥ ಕ್ರೂರಮಧು ಫಲನುದ್ಯವೆನಿಪವು । ಮೂರು ಪಾಲ್ಮರ ಪಂಚುಪಂಚವಿ । ಚಾರ ಸಹಗುಣವೆಂಟು ಮೂಲಗಳೆನಿಪರೊಳು ಭೇದಾ ॥ ೨೪ ॥ ಇರುಳುಭೋಜನ ಗಿಂಣುಬೆಂಣೆಯು । ನಿರುತವುಪ್ಪಿನಶಾಖ ಶೋಧಿಸ । ದಿರುವ ಜಲ ವಣಬೆಗಳು ಸೆಗರೆಯದತ್ತಧಾನ್ಯಗಳು ॥ ವಿರತಿ ದರುಶನಿ ಕೊಲೆ ಹುಸಿ ಕಳವು ಪರರರಸಿ ಯತಿಕಾಂಕ್ಷೆಗಳ ಸಂ । ಹರಗಳೈದಣುವ್ರತಗಳೆಂಬಿವ ಕೇಳು ರಾಘವನೇ ॥ ೨೫ ॥ ಪಿರಿದು ದಿಗ್ಭೋಗೋಪಭೋಗದ । ಪರಿಮಿತೊರಕಂದ್ಮಡ್ಗಶ್ರುಂಖಕೆ । ವೆರಸಿದಾಯುಧನರ್ಥದಂಡದ ತೊರವಿಗುಣವ್ರತವೂ ॥ ಯಿರುವವಿಂ ದೇಶಾವಕಾಶಿಕ । ನಿರುತಸಾಮಾಯಿಕನು ಪ್ರೋಷದ । ನಿರಶನೊಯವ್ಯಾಪೃತ್ಯ ಸಿಕ್ಷಾವ್ರತಗಳೀನಾಲ್ಕು ॥ ೨೬ ॥ ನೋಡುಅಣುವ್ರತವೈದುಯಿದಕೊಡ । ಗೂಡಿ ಗುಣವ್ರತ ಮೂರು ನಾಲ್ಕೊಡ । ಗೂಡಿ ಸಿಕ್ಷಾವ್ರತವು ಶಹ ಪಂನೆರಡನುಳ್ಳವನೂ ॥ ಕೂಡಿವನೆ ಸವ್ವ್ರತಿತನವ ನೀ । ಡಾಡಿಗತಿಶಯ ಜಪವ ತ್ರೈಕಾ । ಲ್ಮಾಡುವನೆ ಸಾಮಾಯಿಕನಿಪುವ ಕೇಳು ರಾಘವನೇ ॥ ೨೭ ॥ ಪಿರಿಮ ವುಪವಾಸಂತ್ಯಬ್ರುಂಹ । ಶ್ಚರಿಸನೇತಲಿ ಪಾರಣೆಯನನು । ಕರಿಪ

ಪ್ರೋಷಧುಪವಾಸಿಯನಿಸುನೆಳೆಯುಕಾಯ್ದಿ ಗುರು ॥ ನಿರುತನು ಪ್ರಾಸುಕನುಪ
ಕ್ಷವ । ತೊರೆದ ಫಲಜಲವಾದಿಯನು ಕೊಳ । ದಿರುವನೇ ಸಚ್ಚಿತ್ತ ವಿರತ್ಯೈದನೆ
ಯನೆಲೆಯುವನೂ ॥ ೨೮ ॥ ಯಿರುಳಿನೊಳಗಿಂನನ್ನ ಪಾನವ । ನೊರಿಪಖಾ
ದ್ಯಲ್ಲೇಹಪಹ ನಾ । ಲ್ದಿರದ ಭೋಜನ ವಿರತಿ ಯಾಹನುಪಗಲೊಳನವರತಾ॥
ತರುಣಿಯುರ ಸಂಭೋಗದೂರನು । ಧರೆಯೊಳತಿಶಯ ಪುಣ್ಯಭಾಜನ । ಕರನು
ರಾತ್ರಿಭುಕ್ತ್ಯ್ವರತೆನಿಸುವ ಕೇಳು ರಾಘವನೇ ॥ ೨೯ ॥ ಚಾರು ಶೀಲನುಗುಣಿ
ಯೂ ನಿರ್ವಿ । ಕಾರ ಸ್ತ್ರೀಸಂಭೋಗವಿರತನು । ಸಾರಭನ್ಯೆನಿಪೇಳನೆಯನೆಲೆ
ಯುವನು ಆರಂಭಾ ॥ ದೂರನೆಂಟನೆಯುನ ಕ್ರುಷಿವ್ಯಾ । ಪಾರರಹಿತನು ಗುಣಿ
ಯು ಬಹುಗಂ । ಭೀರನವನೇ ಕೇಳು ರಾಘವನೆಂದನಾದೇವಾ ॥ ೩೦ ॥ ಪಿರಿ
ದುಬಾಹ್ಯಾಭ್ಯಂತರೆನಿಸುವ । ವೆರಡುತೆರದ ಪರಿಗ್ರಹವ ಪರಿ । ಹರಿಸಿದನೆ ತ
ದ್ಯೋಗ್ಯನೆನಿಪೊಂಭತ್ತನೆಲೆಯುವನೂ ॥ ಕುರಿತು ತನಗಡುವಡಿಗೆ ಮೊದಲಾ ।
ಗಿರುವಕನುಮತಿ ಗೊಡದಲಿಹ ಸ । ತ್ಪುರುಷನನ ಹತ್ತನೆಯು ನೆಲೆಯುವಶೀಲ
ಭೂಷಣನೂ ॥ ೩೧ ॥ ಖಂಡ ವಸ್ತ್ರವು ಕೈಪುಲೋಚಕ । ಮಂಡಲವು ಪಿಂ
ಛಾದಿಯಿವ ಕೈ । ಕೊಂಡು ಯಿಹನಾವಾಗ ರಾತ್ರಿಯ ಕಾಲದೊಳಗೆಲ್ಲಾ ॥
ಮಂಡಿತಪ್ರತಿಮಾದಿ ಯೋಗದಿ । ಖಂಡಿತನು ವುದ್ದಿಷ್ಟ ವಿರತು । ದ್ದಂಡನ
ವನೀಧರೆಗೆ ಶ್ರೇಷ್ಠನು ಕೇಳು ರಾಜೇಂದ್ರಾ ॥ ೩೨ ॥ ಇಂತು ಯೇಕಾದಶದ
ನೆಲೆ ಸಿ । ದ್ಧಾಂತ ಸಾರದ ತತ್ವ ಜಗಹಿತ । ವಂತಕಿದು ಲೋಕಾಗ್ರಪದವಿಗೆ
ಕಾರಣೆನಿಸಿರುವಾ ॥ ಚಿಂತಿತಾರ್ಥದ ರತ್ನಗಳಿಗುಂ । ನಂತವಿಲ್ಲೆಲೊ ರಾಘವನೆ
ಶೀ । ಕಾಂತನಾಥರಿಸೆಂದ ತ್ರೈಲೋಕೇಶನನಘೇಂದ್ರಾ ॥ ೩೩ ॥ ಮುಕ್ತಿ
ಮಾರ್ಗವೆನಿಪ್ಪ ಧರ್ಮ । ದ್ವ್ಯಕ್ತಿಯನು ಶ್ರೀಮುಕ್ತಿನಾಯಕ । ನುಕ್ತಿಯೊಳ
ರಿದೆಲ್ಲ ಖಗನೃಪ ಶ್ರಾವಕರು ಸಹಿತಾ ॥ ರಕ್ತಿಯೊಳಗಿಹ ರಾಘವಗೆ ಹರಿ ।
ಯುಕ್ತಿಸಿದ ಜಾನಕಿಯು ಬಂದ । ವಿರಕ್ತಿಯನು ಶ್ರೀದೇವಗುಲಿಯೆಂದಾಗ
ಕೈಮುಗಿದ ॥ ೩೪ ॥ ನಕ್ಕು ರಾಘವ ಜಾನಕಿಯೆ ನಿ । ನ್ನಕ್ಕರೆನ ಸನ್ಮತವು
ಹಿತಕರ । ವಕ್ಕುದೀ ಸಂಸಾರಸಾರದಿ ಹೇಯನೆಂಬೆಂಬಾ ॥ ಸಕ್ಕರೆಯು ಮುಕ್ಕ
ವನೆ ಶಿವಪ । ದ್ಯಕ್ಕೆ ಸಾರಾತ್ಮಹನು ನಿನಸರಿ । ಬಕ್ಕರಾರೀ ಹರೆಯದೊಳು
ವೈರಾಗ್ಯಕೆನಲಾಗಾ ॥ ೩೫ ॥ ಬಿಟ್ಟು ಮಹ ಸಂಪತ್ತ ತೃಣಕೆಣೆ । ಗಟ್ಟಿ ಭೋ
ಗುಪಭೋಗಗಳ ಜಗ । ಜಟ್ಟಿಯೆನಿಸುವ ಸುತರ ನೋಡವೆ ತೊರೆದು ಯಲ್ಲನ
ನೂ ॥ ಯಿಟ್ಟ ಭೂಷಣ ಹೊಟ್ಟೆಗನುಸರ ಗಟ್ಟಿ ಕಟ್ಟುಯತವನಯುದೊಳು ।

ಬಿಟ್ಟೆಯಾ ಲಲಿತಾಂಗದಾಸೆಯು ಕೋಮಲೆನೆ ರಾಮಾ ॥ ೩೬ ॥ ಪುರಿಯೊಳು ರುಳಲಿ ಬಹುಬು ಹುಲಿಗೆದು । ರಿರಿಯುಬಹುದಸದಳದ ಕೇಸರಿ । ತರಿಯುಬ ಹುದೀ ವಿಷಯುಮೋಹನದೇಹದಾಸೆಯುನೂ ॥ ತೊರೆವದಸದಳ ಜೈನತಪವೆಂ। ಬುರಿವ ಕಿಚ್ಚಿಗೆ ತನುವ ಸಾರ್ಚಿದ । ವರಶಿಖಾಮಣಿ ಸ್ತ್ರೀಕುಲಾಗ್ರಣಿಯುಂದನಾ ರಾಮಾ ॥೩೭॥ ಹೀಗೆ ಜಾನಕಿ ಶೀಲ ಬಹುತೆರ । ನಾಗಿ ಪೇಳುತಲಿರಲು ರಾ ಘವ । ನಾಗದಿವ್ಯಧ್ವನಿಯು ಮೊಳಗಿತು ಸೀತೆಗಾಶ್ರಮವಾ ॥ ಬೇಗ ಕೊಡು ವಿಮಲಾರ್ಯ್ಯೆಯರೆ ಯನ । ಲಾಗ ಭೂಷಣವನ್ನು ದಿಕ್ಷೆ । ಕ್ಕಾಗಿ ಕಿತ್ತೀಡಾಡಿ ದಳು ತೃಣಕಿಂದ ಕಡೆಯಾಗೀ ॥ ೩೮ ॥ ಪುಲಿಯೆ ಶೋಭಾನಗಳ ಕಿಂನರ । ಲುಲನೆಯು ಧವಳೋಧ್ಯಗಳ ಕುರು । ಳಲುಗಿ ತೆಗೆದಾಶ್ರಮವಕೊಡೆ ಸೀತಾ ರ್ಯೆನಿಜ್ಜಳದಾ ॥ ಚಲುವ ಪುತ್ಥಳಿಯಂತೆ ಕಂಗಳಿ । ಗೊಲೆವುತಿರಲೆರಗಿದರಿ ಗಾಶಿಯು । ವುಲಿದಳೊಲವಿಲಿ ಸಕಲಭೂಷಣರಡಿಯು ಸ್ಮರಣೆಯಲಿ ॥ ೩೯ ॥ ಕಲಿಲಹರ ಮುಸಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲ ವಿನಲಿಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದಮನ । ಮೊಲಿದು ಲಾಲಿಸಿ ಮುಕ್ತಿಯರಸನಕಥೆಯು ಸದ್ಬುಧರೂ ॥ ೪೦ ॥

ಅಂತು ಸಂಧಿ ೮೧ ಕ್ಕಂ ಪದನೂ ೪೬೮೯ ಕ್ಕಂ ಮಂಗಳ ಮಹಾ ಶ್ರೀ ಶ್ರೀ-

ಎಂಭತ್ತೆರಡನೆಯ ಸಂಧಿ.

ಭವಾವಳಿ ಸಂಧಿ.

ಸಕಲ ಜನರುಪರಾಗವು ಮನು । ತ್ಪ್ರಕಟಿಸಲು ಕೇಳ್ದೆಲ್ಲ ಮನಸಂ । ಚಿಕಿತ ಸಮಯದಿ ಭರತ ದೀಕ್ಷೆಯತಳೆದ ತವಕದಲೀ ॥ಪದನೂ॥

ಅರಸಕೇಳಾ ಜಾನಕಿಯು ತಪ । ಧರಿಸೆಪೊಸಕಾಂತಿಯೊಳು ಶ್ರೇಷ್ಟದಿ। ಮೋರೆವಳಾಲೋಳಿಸುತಲೀಕೆಯು ದಶಸಿರೊಯ್ಯುವಡೇ ॥ ತೆರನು ಯೇನೆಂದಂ ತರದಿ ಕೈ । ಗರೆದು ಕೇಳಿದಗಾಗ ದಿವ್ಯ । ಸ್ವರವು ಪುಟ್ಟಿತು ಕೇಳು ವಿವರಿಪೆ ನೆಂದಗೌತಮನೂ ॥ ೧ ॥ ಇವಲಿತ್ರಿಜಗದ್ಭೂಷಣಾಖ್ಯದ । ಕರಿಯು ಭರತನ

ಕಂಡು ಮೋವನು । ತೊರೆಲೆಯಲೇಕಾರಣವದಾದಿಯ ಲುಸುರಿಮುಂದೆಂವೂ ॥
ತೆರನಬೆಸಸುವುದೆನಲು ಅದವಿ । ಸ್ತರಿಸಿದರು ಯೇಕಾಗ್ರದಲಿ ರಘು । ವರನೆಕೇ
ಳೆಂದವುಲಬೋಧಸಂಯುತರೂ ॥ ೨ ॥ ಭರತನಾಲೋಕಿಸಲು ಜಲ್ಮಾಂ ।
ತರದ ಜಾತಿಸ್ಮರಣೆಯಿಂದುಣ । ತೊರೆದುದೆನಲದರಿವನ ಸಂಮಂದವನು ಬೆಸ
ಗೊಳಲೂ ॥ ಹರಿಯೆ ಕೇಳೀಕೌಶಲೆಯೊಳಿಹ । ಪರದಸುಪ್ರಥನಾತನಂಗನೆ ।
ಸರಸವತಿ ಪ್ರಹಲ್ಲಾದೆ ಯಂಬಳಿಗೀವ-ನಂದನರು ॥ ೩ ॥ ಜನಿಸೆ ಸುರ್ಯೋ
ದಯನು ಯಂಬನ । ಅನುಜ ಚಂದ್ರೋದಯನು ಸಹವುರು । ಜನನೊಳಾಶ್ರ
ಮಗೊಂಡು ಕೂಡಿದರಾ ಮರೀಚಿಯನೂ ॥ ಕುನಯುದೊಳಗಾಚರಿಸಿಸಂಶ್ರುತಿ
ವನಧಿಯೊಳಗಾಳ್ದೇಳ್ದು ಬಂದೆ । ತ್ತನುವಿನಿಂ ಕುರುಜಾಂಗಣಾವನಿ ಹಸ್ತಿನಾ
ಪುರದೀ ॥೪॥ ಧರಣಿಪತಿ ಹರಿಮತಿಗೆ ಗಂಧಿಲೆ । ತರುಣಿಗಾ ಚಂದ್ರೋದಯ
ನು ಬಂ । ದುರುಕುಲಂಕರನೆಂಬನಾದನು ರಾಜ್ಯಪದವಿಯಲೀ ॥ ಇರಲು ವಿ
ಶ್ವಾವಸುವನೆಂಬಿಳೆ । ಸುರಗೆ ಶಶಿನೆಯನಾಮ ಸತಿಗು । ತ್ತರಳ ಸೂರ್ಯೋದ
ಯನು ಮೂಢಶ್ರುತಿಯ ಪೆಸರಿನಲಿ ॥ ೫ ॥ ಇದ್ದು ಪೌರೋಹಿತದಿ ಮಿಥ್ಯರ ।
ಹೊದ್ದಿ ಹಿಂಸಾನಂದವನಕೂ । ಡಿದ್ದುಡಂಬಕ ತಪಸರಾಶ್ರಯಗೈದರೀತಿಯಲೀ ॥
ತಿದ್ದಿಯಿರೆ ನೃಪನರಸಿ ಮನಬಂ । ದಿದ್ದರೊಳು ರತಿಗೈವುತಿರಲಾ । ಸುದ್ದಿಗತಿಹಿಂ
ಸೆಯನು ಬಡಿಸಲು ಕುಲಟೆಯೊಂದುದಿನಾ ॥ ೬ ॥ ಇರಲುಯಿವರೆನಗಿಲಸ್ವತ
ಹಂ । ತರವು ಯೆನುತರಸಾ ಪುರೋಹಿತ । ಗಿರದೆ ವಿಷವಿಕ್ಕೊಲಲುತಿರ್ಯಗ್ಗ
ರಧಿಯೊಳುತಿರುಗೀ ॥ ಬರುತ ರಾಜಗ್ರುಹದಿ ಧರಣೀ । ಸುರನುಬಹ್ವಾಸನಿಗು
ಳೂಕಿನಿ । ತರುಣಿಗುದಿಸಿದಾ ಮೂಢಮತಿ ವಿನೋದ ಪೆಸರಿನಲೀ ॥ ೭ ॥
ಕಿರಿಯರಮಣಾಖ್ಯದಲಿ ಆಕುಲಂ । ಕರನು ಜನಿಸಿರ್ದೊಯದಿ ದೇಶಾಂ । ತರಕೆ
ಪೋಗಲ್ಕಲಿತುವೇದವ ಬರುತ ಬಹಿರೊಳಗೇ ॥ ತರಣಿ ಚರಿಸಲು ಕತ್ತಲೆಯು
ಸಂ । ವರಿಸಲಲ್ಲೊಂದರುಹಕೇತನ । ವಿರಲು ದರುಶನಗೈದು ಮಲಗಿರಲಲ್ಲಿ ರಾ
ಘವನೇ ॥ ೮ ॥ ಆವಿನೋದನಸತಿಯು ಪಾದರ । ಕಾವಸತಿಗೈತಂದು ಕಂಡ
ವ । ರಾವಿಟನ ಕೈಯಿಂದ ಕೊಲಿಸಲು ಸತ್ತುದಿವದೊಳಗೇ ॥ ದೇವತನವು
ಸುಭಾವನೆಯ ಸಂ । ಭಾವದೊಳು ಬಂದಲ್ಲೆಯಾಯುವು । ತೀವಿಬಂದಿಲ್ಲಾದೆ
ಭರತ ವಿನೋದಚರದೇವಾ ॥ ೯ ॥ ಸತ್ತು ಆರ್ತದಿ ರಮಣದೇವು । ತ್ಪತ್ತಿತ್ರಿ
ಜಗದ್ಭೂಷಣಾಖ್ಯವ । ಚಿತ್ತ ಗಜವಾಗಿರ್ದು ಭರತನ ಕಂಡು ಕನವರದೀ ॥
ಚಿತ್ತತೆರವಾಗಿರಿದು ಜಾತು । ತ್ಪತ್ತಿಸ್ಮರಣೆಯೊಳದಕೆ ವೈರಾ । ಗ್ಯತ್ತಿತಹೊ

ರಾಘವನೆತಿಳಿ ಬನಮಾಲೆಯನೆ ದೇವಾ ॥ ೧೦ ॥ ಹಿಂದೆ ನಿಮಪಿತನಾದ ಸುಪ್ರಭ। ಸಂದು ಸದ್ಗತಿಯೊಳಗೆ ತಿರುಗೈ । ತಂದು ಶತ್ರುಘ್ನಾದನದರಿಂದಿವರಿಗನ್ಯೋನ್ಯಾ ॥ ಬಂಮದೆನಲಾ ರಘುಜಹರಿ ಭರ । ತೊಂದುಸಂತೋಷವನು ತಾಳಿದ। ರೆಂದಿಗೀಭವಮಾಲೆ ಪರಿಹರವೆಂಬವಲ ಸಹಿತಾ ॥ ೧೧ ॥ ಕೇಳಿ ಭವಮಾಲೆಯನು ಹೇಯವ। ತಾಳಿ ಭರತಗ್ರಜನ ಪಾದಕೆ। ನಿಳಿಸಂಗವ ಹಿಂದೆನಾಗೈದುವನ ಬಲತ್ಕರದೀ ॥ ತಾಳಿಸಿದೆ ನೀನೀಗೆಕೈಕೊ । ಟ್ಟೇಳಿಸಿಂನಿತರುಲಿವನಾದಡೆ। ಕೇಳೆನೆಂದಾ ಭರತನತ್ತೈವ್ರರಾಗ್ಯಕಾಶ್ಚರಿಸೀ ॥ ೧೨ ॥ ಅಸ್ತು ಯನಲಾಕ್ಷಣವೆ ಜನಶುಭ। ಮಸ್ತು ಯನಲಮರೇಂದ್ರನೇತನ। ಹಸ್ತದಿಂದಾಶ್ರಮವನಿತ್ತನು ಭರತಗಣಪದಕೇ ॥ ನೆಸ್ತಗೊಳೆ ತ್ರೈಸಾಸಿರವನಿಪ । ರಸ್ತುಬಡಲಾಭರತಮುನಿಸಹಿ। ತೆಸ್ತರನುಪಮ ಜಾತರೂಪಿನೊಳೆಲ್ಲಯೋಗಿಗಳೂ ॥ ೧೩ ॥ ನೋಡಿ ಆತ್ಮಜನಾಗಲೇ ಖತಿ। ಗೂಡಿ ತ್ರೈಸಾಸಿರವು ಭರತನ । ಗಾಡಿ ಕಾತಿಯರೊಡನೆ ಕೈಕಿಲೆ ನಡೆದು ಆಶ್ರಮವಾ ॥ ಮಾಡಿಕೊಳಲಾ ರಾಜರರಸಿಯು । ರೂಢಿತಪಸನು ಸರ್ವರೊಂದನೆ। ಮಾಡಿ ಬಲಕೇಶವರು ಕುಳಿತರಿಗೆಂದನಾದೇವಾ ॥ ೧೪ ॥ ಭರತವಿಷಯದಿ ಯಕ್ಷಪುರದೊಳು । ಪರದ ನಯದತ್ತನಿಗೆ ನಂದೆಯು। ತರುಣಿಗುದಿಸಿದ ಪ್ರಥಮಸುತ ಧನದತ್ತನೆಂಬವನೂ ॥ ಪರಮಧರ್ಮದಿನಡೆಮ ಮೃತದು । ತರದಿ ಸೌಧರ್ಮದಲಿ ಪುಟ್ಟಿ। ಲ್ಲಿರುವ ಸುಖದಂತ್ಯದಲಿ ಸ್ರಾವಸ್ತ್ಯೆಂಬ ನಗರದಲೀ ॥ ೧೫ ॥ ಪರದ ಮೇರುವನೆಂಬಗಾ ಮನೋ। ಹರಿ ಧಾರಿಣಿಯಂಬಳಿಗೆ ಬಂ। ಧುರದಿ ಜನಿಸಿದ ಪದ್ಮರುಚಿನೆಸರಿಂದಲಲ್ಲಿಂದಾ ॥ ಧರಿಸಿ ತಪಸೀಶಾನಕಲ್ಪದಿ। ಸುರಪನಾಗಿರ್ದ ಪರಭಾಗದ। ಧರಣಿಧರ ವಿಜಯಾರ್ಧ ನಂದ್ಯಾವರ್ತ ನಗರದಲೀ ॥ ೧೬ ॥ ನಂದಿವರ್ಧನಖಗಪನಿಗೆ ಅರ । ವಿಂದಮುಖಿ ಕನಕಾಭೆಗಾ ಅರ । ವಿಂದನೆಂಬಣುಗಾಗಿ ಖೇಚರಸುಖವನನುಭವಿಸೀ ॥ ಸಂದುಮಾಹೇಂದ್ರದಲಿ ಜನಿಸ। ಲ್ಲಿಂದ ಪೂರ್ವವಿದೇಹದೊಳು ಚಲ । ವಿಂದಲಿಹ ಸುಕ್ಷೇಮಪುರಕಿಳಿತಂದ ನಾಪುರಕೇ ॥ ೧೭ ॥ ಅರಸ ವಿಪುಳಾರೋಹನಿಗೆ ಮನೊ । ಹರಿಯು ಪದ್ಮಾವತಿಗೆ ಜನಿಸಿದ । ತರಳ ಶುಭಚಂದ್ರಾಖ್ಯದಲಿ ಬಹುಕಾಲ ಪುರವಾಳೀ ॥ ಗುರುಸಮಾದಿಯಗುಪ್ತರಿಂ ತಪ । ಧರಿಸಿ ಬ್ರಂಹೋತ್ತರದಿ ಪುಟ್ಟಿ । ತಿರುಗಿ ಬಂದಿಲ್ಲಾದೆ ನೀ ರಘುಜಾತನೆನೆ ಮುನಿಸಾ ॥ ೧೮ ॥ ಇಂನುಲಕ್ಷ್ಮಣನೊಲವ ಕೇಳೆಂ । ದಂನುನೀ ಧನಪತ್ತನಾಗಿರೆ । ನಿಂನ ತಂನೊ ಸುವತ್ತನಾಗಿರ್ದಳಿಮ ಬಾವೊಂದೂ ॥

ಚುನುವಡೆದ ಮ್ರುಣಾಳಪುರದರ । ಸಿಂನು ಶಂಭುಕನಾತನರಮನೆ । ಗಂನು ಪೌರೋಹಿತನು ಶ್ರೀಭೂತಾಖ್ಯನಾಗಿರಲೂ ॥ ೧೯ ॥ ಸುತೆಯುಕಥನದಿ ಶಂಭುಕನ ಕೈ । ಹತದಿ ಸುರಗತಿವಡೆದು ಬಂದಿ । ಲ್ಲತಿಶಯದ ಪ್ರತಿಷ್ಟಪುರಪತಿಯಾದ ಖಗಪತಿಯೂ ॥ ನುತಪುನರ್ವಸುವಾಗಿ ತಪಗೈ । ದತುಳಸ್ವರ್ಗದಿ ಪುಟ್ಟಿ ಆಯು । ಚ್ಯುತಿಯೊಳೈದಿಲ್ಲಾದ ಲಕ್ಷ್ಮಣನರ್ಧಚಕ್ರೇಶಾ ॥ ೨೦ ॥ ಯಿಂನುದಶಸಿರನಾಗಮುವ ಕೇ । ಳ್ಮಂನ ಪೇಳ್ದ ಮುಣಾಳಪುರಕರ । ಸಿನ್ನು ವಿಜಯಧ್ವಜಗೆಸತಿಯುಹ ರತ್ನಮಾಲಿನಿಗೇ ॥ ಮುಂನ ಪೇಳಿಡ ಶಂಭುಕನೆ ಸುತ । ನಿಂನು ದುಶ್ಚಾರದಲಿ ನಡೆದು । ತ್ಪಂನನಾರಕ ತಿರಿಕನಾಗೆತ್ತಾನುಪಶಮುದೀ ॥ ೨೧ ॥ ಬಂದು ಕೇಶವನೆಂಬ ದ್ವಿಜನಿಗೆ । ಕಂದಕುಂಡಲನಾಗಿ ಮುನಿವರ । ರಿಂದದೀಕ್ಷೆಯನಾಂತು ನಿಷ್ಟೆಯೊಳಿರ್ದು ಅಲ್ಲಿಂದಾ ॥ ವಂದನೆಗೆ ಸಂಮೇದಗಿರಿಗೈ । ತಂದ ಸಮುಯದಿ ಕನಕಖಗನೈ । ತಂದನತಿವೈಭವದಿ ಅದನಾಮುನಿಪ ನೀಕ್ಷಿಸುತಾ ॥ ಮನದಿ ಬಯಸಂತ್ಯದಲಿ ನಡೆದ। ತ್ತ್ಯಜನಿಸಿ ಕಲ್ಪ ಸನತ್ಕುಮಾರದಿ । ಸನುತನಾಗಿದ್ದೈದಿ ಲಂಕಾದ್ವೀಪಕರಸಾಗೀ ॥ ದನುಜಪತಿ ದಶಕಂಠನೆಂಬಾ । ಖ್ಯನುಕರಿಸಿಯಿಹ ನಿಂನು ಸೀತೆಯ । ಜನನ ಕೇಳಾ ಯಕ್ಷಪುರದೊಳಗೋರ್ವ ವಾಣಿಜ್ಯಾ ॥೨೨॥ ಯಿರಲು ಸಾಗರದತ್ತನೆಂಬನ। ತರುಣಿ ರತ್ನಪ್ರಭೆಗೆ ಗುಣವತಿ। ತರಳೆಯಾಗಿರ್ದ್ದಸಗಿ ಮಿಥ್ಯಾಚಾರ ಕಹಗತಿಯಾ ॥ ತಿರಿಗಿ ಬಂದೆತ್ತಾನುಪಿಡಿಯಾ । ಗಿರುತ ನೀರಿಗೆ ಬಂದು ಗಂಗೆಯ । ಹೊರೆಯುಪಂಕದಿಸಿಕ್ಕಿ ನರಳುತಲಿರಲು ಅದನೋರ್ವಾ ॥ ೨೩ ॥ ಖಗಪಕಂಡು ತರಂಗತಮನೈ । ದೊಗೆದ ಕರುಣದಿ ಮಂತ್ರವನು ಕಿವಿ । ಯೊಗಿಸಲಳಿದಾ ಫಲದಿ ಬಂದ್ವಿ ್ರೀಭೂತಿಯುಂಬವನಿಗೇ ॥ ಬಗಸೆಗಂಗಳೆಸರಸೆಯುದರದೊ । ಳೊಗೆದುನಾಮುದಿವೇದವತಿಯಂ। ದ್ಮಿಗಿಲರೂಪಿನೊಳಿರ್ದು ಮುನಿಗಳನಿಂದ್ಯವನು ಗೈಯ್ಯೇ ॥ ೨೪ ॥ ಕಂಡು ಪಿತಭಾರಿಸಲು ಸನ್ಮನ । ಗೊಂಡು ಸದ್ಧರ್ಮವನೆ ಕೇಳ್ಕೈ । ಕೊಂಡು ಯಿರಲಾಪುರದ ಶಂಭುಕ ಬೇಡೆ ಶ್ರೀಭೂತೀ ॥ ಮಂಡಲೇಶಗೆ ಕೊಡಲಿರೆ ವು । ದ್ದಂಡದಿಂದವನೊಧಿಸಲಾ ಖತಿ । ಗೊಂಡುಶಪಥವ ಗೈಯ್ಯೆ ಪಾರ್ವತಿಕೊಲಿಪೆನೆಂದೆಂಬಾ ॥೨೫॥ ಮನದಿಗೈದು ನಿದಾನದೊಳು ಸ । ತ್ತ್ಜನಿಸಿ ಬ್ರಹ್ಮೋತ್ತರದಿ ಬಂದಿ । ಲ್ಲೊನಿತೆ ಚಿತ್ತೋತ್ಸವೆಯು ಆಗಿರ್ದಳಿದು ವೈದೇಹೀ ॥ ತನುಜೆ ಸೀತಾದೇವಿಯಾದಳು । ದನುಜ ವಿಭೀಷಣನು ವಸುದ । ತ್ತನುವನಿಗೆ ಮಿತ್ರಗ್ನಿವಲ್ಕಾಗಿರ್ದನಾಗಿನಲೀ ॥ ೨೬ ॥ ಮುಂನಿ ನನುಬಂದದಲಿ ನಿಂಮೆಡೆ । ಗಂನು ಬರ

ಲಾಯ್ತುವನು ಸುಗ್ರೀ । ವಿಂನು ವೃಷಭಾ ಪದ್ಮರುಚಿಯಿಂ ಕೇಳ್ದು ಬೋಧನೆ
ಯಾ ॥ ಸಂನುತಾಗಿಹ ನಿಮಗೆ ಆಗಿನೊ । ಳಂನು ಪಿತ ನಯದತ್ತನೇ ಬಂ ।
ದಿನ್ನು ಮಾರುತಿ ಮಾತೆಯುಂಗದರಾದರೈ ರಘುಜಾ ॥ ೨೮ ॥ ಹಿಂದಣನುಬಂಧ
ದಲಿ ನಿಮುಗವ । ರೊಂದಿಕಿಂನಾ ರಕ್ಷನಿಗೆ ಹಗೆ । ಬಂದಕಾರಣಕೇಳು ಗುಣವತಿ
ಯಾದ ಭವದಲ್ಲೀ ॥ ತಂದೆ ಧನದತ್ತನಿಗೆ ಕೊಡಬೇ । ಕೆಂದುಯಿರೆ ಶ್ರೀಕಾಂ
ತನೃಪತನ । ಗೆಂದು ಅಡ್ಡಿಸಲವನಯಿರಿದೊ ಸುದತ್ತವನದಲ್ಲೀ ॥ ೨೯ ॥
ಇರಿಯಲಾತನ ನೃಪನಚರಹತ । ಗರೆದ ಶ್ರೀಭೂತಾಗಿ ಲಕ್ಷ್ಮೀ । ಧರನೆ ವಸು
ದತ್ತಾದ ಶ್ರೀಕಾಂತಾಗಿ ಶಂಭುನೃಪಾ । ನೊರಗಿ ದಶಮುಖನಾದ ಗುಣವತಿ ।
ತರಳೆಯೇ ತಾವೇದವತಿಯಾ । ಗೊರಗಿ ಸೀತಾದೇವಿಯಾದಳು ಕೇಳು ರಾಘ
ವನೇ ॥೩೦॥ ಆತನುದರದೊಳುದಿಸಿ ನಿನಗಧಿ । ನಾತೆಯಾದಳುಲಕ್ಷ್ಮಣನಕೈ।
ಘಾತವಡೆದನು ದನುಜ ದಶಶಿರನಂದಿನ್ವೈರದಲಿ ॥ ಈ ತೆರನ ಮಾಡಿಸಿತು ವೈ
ರದ । ಮಾತನುಡಿಸಲ್ಲೆಂದು ಲಕ್ಷ್ಮೀ । ನಾತ ನುಡಿದನು ಸಕಲಭೂಷಣದೇವ
ರಾಘವರ್ಗೇ ॥ ೩೧ ॥ ಯಂದಿಗೀಭವಮಾಲೆ ಕಡೆಬ । ಟ್ಟೆಂದುಬಲಕೇಶವರು
ಯೋಚನೆ । ಗೊಂದಣದೊಳಿರಲಲ್ಲಿ ವಿದ್ಯಾಧರರು ಸಹವಾಗೀ ॥ ಸಂದರಾಶ್ಚ
ರ್ಯದಲಿ ಯಿನಿತನು । ಬಂಧವಿರದಿರಲೆಮಗೆ ಅನ್ಯೋ । ನ್ಯೊಂದುವುದೆ ರಘು
ಜಾತನೊಳಗೆನಲಂಗಜಂಗದರೂ ॥ ೩೨ ॥ ನೋಡಿತಮತಮ ಮುಖವಸಂತ
ಸ। ಗೂಡಿ ಅವರನ್ಯೋನ್ಯದಲಿ ನಲಿ । ದಾಡುತಿರುವಾಗೆರಗಿ ಕೈಮುಗಿದೆಂದಕೃತ
ವಕ್ತ್ರಾ ॥ ಕಾಡ ಸಂಸಾರಾಗ್ನಿಯೊಳು ಹೊರ । ಳಾಡಿ ಬೆಂದೆನು ನೊಂದೆನೆನಗ
ನು । ಗೂಡಿ ರಕ್ಷಿಸುತೆಂದ ರಾಘವ ತಪಸಗೊಡಿಸೆಂದಾ ॥ ೩೩ ॥ ಬೇಡನಾ
ಲ್ದಿನದಿರ್ದು ಯವ್ಮೊಡ । ಗೂಡಿ ತಪಗೊಳ್ವೆಂಬ ಬೋಧನೆ । ಮಾಡುತಿಹಬಲ
ಕೇಶವರಿಗೆದುರಾಡಿದಿವನೆಂಬಾ ॥ ನಾಡನುಡಿ ಹೊರಿಸದಲೆ ಸಮಯವ । ನೋ
ಡಿರಕ್ಷಿಸಿರೆಂದು ಕಡಿವಿಡಿ । ದಾಡುವನ ಕಡುಹೇಯವರ ಚಕ್ರೇಶರೀಕ್ಷಿಸುತಾ ॥
ಬಿಟ್ಟುಹೋಗುವದುಚಿತವೇ ನಿನ । ಬಿಟ್ಟುಯಿರಲೆಂತೆನಲು ಪದಗಳ । ಮುಟ್ಟಿ
ಸಾಕ್ಷಿಯಗೈಯ್ಯೆ ಮೌನವನಿಡಲು ರಘುಜಾತಾ ॥ ಜುಟ್ಟು ಸಹ ಕೇಶಾಭರಣ
ಕಿ। ತ್ತಿಟ್ಟನಿಗೆ ಭರತೇಂದ್ರಮುನಿ ಕೈ । ಮುಟ್ಟಿ ದೀಕ್ಷೆಯುಗೊಡಲು ಜಯುಜಯ
ವೆನಲು ಸುರರೆಲ್ಲಾ ॥ ೩೪ ॥ ಕಂಡು ಅಕೃತವಕ್ತ್ರನಾಶ್ರಮು । ಗೊಂಡುದೇ
ವೈರಾಗ್ಯಕಾರಣ । ಗೊಂಡು ವಿದ್ಯಾಧರರಿಗುಲಿದುಚಿತೋಕ್ತಕೆಲದಿವಸಾ ॥ ಗಂ
ಡುಬಳಿಕೆಲ್ಲಾಶ್ರಮುವ ಕೈ । ಕೊಂಡು ಪೋಗುವೆನೆಂದು ಮೋಹನ । ಗೊಂಡು

ನಿಲಿಸಿದ ರಾಘವೆಲ್ಲರನವನಿನಾಯಕನೇ ॥೩೬॥ ಹೀಗೆನಿಲಿಸನುರಾಗದಲಿ ಜಿನ। ಗಾಗವಂದಿಸಿ ದೇವನೀವುನ ರಾಗಮುವದಯುಗ್ಯೆವು ಸೆಂದಲ್ಲಿರ್ದ ಸೀತಾರ್ಯೆ॥ ಗಾಗಲಿಚ್ಛಾಕಾರ ನುಡಿಯನು । ವಾಗಿ ಬೀಳ್ಕೊಂಡ್ಯೆದುವೆಡೆ ಬಹು । ರಾಗ ತೂರ್ಯತ್ರಯಗಳಿಂದಲಿ ಸಕಲನೈಭವವೀ ॥ ೩೭ ॥ ಬಂದು ಖಗನೃಪರಾದಿ ಬಹುಬಲ । ದಿಂದ ಪೊಕ್ಕನಯೋಧ್ಯೆಯೊಳು ಸುಖ । ದಿಂದಲಿರೆ ಪಲಕಾಲ ಬಲಕೇಶವರು ಮತ್ತಿತ್ತಾ ॥ ಸಂದಸೀತಾರ್ಯೆಯರು ನಿಷ್ಠೆಗ । ಳಿಂದಲಾಚ ರಿಸಂತ್ಯ ಸನ್ಯಸ । ದಿಂದ ಲಚ್ಚುತಕಲ್ಪದೊಳಗೆ ಪ್ರತೀಂದ್ರನಾಗಿರಲೂ ॥೩೮॥ ಸರಿಯೆಶೀಲಕೆ ಸತಿಯರೂಪನು । ಹರಿಸಿ ಅಚ್ಚುತಕಲ್ಪದೊಳು ಸುರ । ತರುಣಿ ಯರಭೋಗದೊಳಗಿರಿಸಿತು ಸೀತೆತಪಮೆಂಬಾ ॥ ಪರುಷ ರತ್ನಕೆ ಸರಿಯೆಯಿರ ಲಿ। ತ್ತುರುವಿಲಾಸದೊಳಿರಲು ಬಲಹರಿ । ಯರುಗಳೊಂದಿನವತ್ತ ಕಾಂಚನನಗ ರದಧಿಪತಿಯೂ ॥ ೩೯ ॥ ಮತ್ತೆ ರತ್ನವರೂಥನಿಗೆ ಚಲು । ವೆತ್ತ ವಿಮ್ಮನ್ಮಾಲೆ ಯುದುರು । ತ್ಪತ್ತಿ ಮಂದಾಕಿನಿಯು ಚಂದ್ರಾನನೆಯರೆಂದೆಂಬಾ ॥ ಮತ್ತಕಾಸಿ ನಿಯರ ಸಯಂವರ । ದತ್ತ ಕೂಡಿದ ರಾಜಸುತರೆಡೆ । ಗಿತ್ತಣಿಂ ಬಲಕೇಶವಾ ಣುಗರೈದಿಯಿಂಲರಸೇ ॥ ೪೦ ॥ ನೋಡಿ ನೃಪಸುತರಿಚ್ಚಿಸಿದೆ ಮನ । ಗೂಡಿ ಕುಶಲವರಿಂಗೆ ಮಾಲೆಯ । ಸೂಡೆ ಮಂದಾಕಿನಿಯುಲವನಿಗೆ ಕುಶಗೆ ಚಂದ್ರಾ ಸ್ಯೇ॥ ಸೂಡಿದುದಕತಿನಾಚಿ ಹೇಯವ । ಗೂಡಿ ಕೃಷ್ಣನ ಮಕ್ಕಳೇಣ್ಬರು । ಮಾಡಿಕೊಂಡರು ತಪಮಹಾಬಲ ಮುನಿಪರಡಿಯಿಂದಾ ॥ ೪೧ ॥ ವಂದಿಸಾಮು ನಿಗಳಿಗೆ ಗೆದ್ದರ । ವಿಂದಮುಖಿಯರು ಸಹಿತ ಸಂಪದ । ದಿಂದ ಬಂದರುಪುರಕೆ ಕುಶಲವರೊಕ್ಕು ಮಂದಿರದೀ ॥ ಸೌಂಧರಾಂಗಿಯರೊಳಗೆ ರತಿಸಂ। ಮಂದ ಸುಖದೊಳಗಿರುತ ಮೋಕ್ಷಪು । ರಿಂದಿರೆಯಪ್ರಿಯಚರಣ ಸ್ಮರಣೆಯೊಳೆಸೆದರತಿ ಮುದದೀ ॥೪೨॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನಲಿಕರ್ನಾಟಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರಸಾಗರ । ರೊಲಿದು ವಿರಚನೆ ಗೈದರಿದಮನ । ಮೊಲಿದು ಲಾಲಿಸಿ ಮುಕ್ತಿಯರಸನಕಥೆಯ ಸದ್ಬುಧರೂ ॥ ೪೩ ॥

ಅಂತು ಸಂಧಿ ೮೨ ಕ್ಕಂ ಪದನೂ ೪೭೩೨ ಕ್ಕಂ ಮಂಗಳ ಮಹಾ ಶ್ರೀ ಶ್ರೀ

ಎಂಭತ್ತೊಮ್ಮರನೆಯ ಸಂಧಿ.

ಜಲಕ್ರೀಡೆ ಸಂಧಿ.

ಸತಿಯರೊಡನಾನಂದದಲಿ ರಘು । ಪತಿಯು ಲಕ್ಷ್ಮಣನಾಗ ವನಜಲ। ದತುಳ ಕೇಳಿಯನಾಡಿದರು ಸಂತೋಷಕರದಿಂದಾ ॥ ಪದನೂ ॥

ಅರಸ ಕೇಳವರವರ ಸತಿಯರ । ಸರಸಕೇಳಿಯೊಳಿರಲು ರಘುವರ । ನುರುವಿಲಾಸದೊಳಿರಲು ಬಂದ ವಸಂತಕಾಲದಲೀ ॥ ತುರುಗೆನಂದನ ಮದನ ನುರುತರ । ಶರವಿಲಾಸದ್ಯುತಿಯೊಳಳಿ ಬಂ । ಧುರದ ರಾಗದೊಳೆಸೆದುದಾ ಮನ್ಮಥನಶಾಲೆಯೊಲೂ ॥ ೧ ॥ ಬೀಸೆ ಟೆಂಕಣಯಲರು ಸುರಭಿಯ । ಸೂಸಿ ತಾರಾಮದಲಿ ಪರಿಮಳ । ವಾಸವೆಸಿಸಿದ ಪಂಚಶರನಸ್ತ್ರಗಳ ಸೊಂಪುಗಳೂ ॥ ಬೀಸಿದವು ಗರಿಯೊದರಿ ಅದಕಳಿ । ಸೂಸಿದವು ಝೇಂಕಾರಗೊಳಲಿಂ । ನಾ ಸುಮಂಗಲೆವಾಸವೆನಲಾ ರಾಮನೊಸೆದಿತ್ತೂ ॥ ೨ ॥ ಕಳಿಕೆಪಲ್ಲವಗಳನುಕಾಣುತ । ಫಳಿಲನೊನವಾಲೆತ್ತಿ ಪಟ್ಟಣ । ಗೊಳಿಸಿ ಬಂದಾಸ್ಥಾನದೊಳು ಬಹು ನೃಪರಬಳಸಿಂದಾ ॥ ಕುಳಿತ ರಾಘವನಡಿಗೆ ಆನತ । ಗೊಳಿಸಿ ಪಟ್ಟಣವಿರಿಸಿ ಬಿಂನಹ । ಗೊಳಿಸಿ ಚೂತರವಿಂದ ಮಲ್ಲಿಗಶೋಕೆ ನೈದಿಲೆಯೂ ॥ ೩ ॥ ಯೆನಿಪ ಸ್ಮರಶರ ವೈದನುಕೂ । ರೆನಿಸಿ ಮಸದಿಹ ನಂಗಚೂಣಿಯ । ಜನವ ಮುಂಬರಿಸಿತ್ತು ಕಾಮುಖರೆದೆಯ ಬಿರಿವಂತೇ ॥ ಧ್ವನಿಯಗೈವೋಲ್ಭೇರಿಕೋಕಿಲ । ನಿನದ ಶುಕಪಿಕದುಲುಹು ಆರಸಂ । ಚೊನೆವನರ್ತನದಿಂದ ಚಲುವಾಯ್ತಾಗ ಮಧುಮಾಸಾ ॥ ೪ ॥ ಹರಿವನಧಿಯನು ಹೊಗಲು ಗಂಗೆಯ । ಗೊರವಪೊಕ್ಕನು ಸರಸಿಜಾಲಯ । ಸರಸಿಜವ ಮರೆಗೊಂಡನೆಂಬಂತಂಕಮಾಲಿಯನೂ ॥ ಬರೆದ ಸುರಪನ ಅಂಗದೊಳು ಮದ । ನರಸೆನಾದ ವಸಂತರಾಜನ । ಅರಮನೆಗೆ ಯನೆ ಕೇಳಿ ರಾಘವ ಹರುಷಮನನಾಗೀ ॥ ೫ ॥ ಕೊಟ್ಟವನಪಾಲಸಿಗೆ ಭೂಷಣ । ಗೊಟ್ಟು ಸುರಭಿಯನಿತ್ತು ನೀರನು । ಬಿಟ್ಟು ಕ್ರೀಡೆಯ ಕೊಳಕೆ ಪರಿಮಳದ್ರವ್ಯವನು ಕದಡೀ ॥ ಬಿಟ್ಟ ವನವನು ಶುಚಿಯಗೈಯ್ಯಂ । ದಟ್ಟ ವನಪಾಲಕನ ಮುಂಗಡೆ । ಕುಟ್ಟಿಸದನಾನಂದಭೇರಿಯ ರಾಮಚಂದ್ರಮನೂ ॥ ೬ ॥ ಕೂಡಿ ಬರೆ ಜನರೆಲ್ಲ ಬಲಮುಂ । ಗೂಡಿ ಬರಲಾ ರಘುಜಹರಿ

ಸಹ । ಜೋಡು ಮದಗಜನೇರಿದರು ನಿಜ ಮಹಿಷಿಯರ ಕೂಡೇ ॥ ನೋಡಿ ಮಿಗಿಲಾಂಗನರು ಪಾಲಕಿ । ಗೂಡಿ ನಡೆದರು ಗಜದ ಪಿಂಗಡೆ । ರೂಡಿಯೊಳು ನಾರಿಯರು ಬಂದರು ಬಹಳರವದಿಂದಾ ॥ ೭ ॥ ಯೆಲ್ಲಿ ನೋಡಲು ಛತ್ರ ಚಾಮರ । ವೆಲ್ಲಿ ನೋಡಲು ನಾರಿಯರೆ ಮ । ತ್ತೆಲ್ಲಿ ನೋಡಲು ರಾಜಸುಕುಮಾರಕರ ಮುಂಗಡೆಯಾ ॥ ಬಲ್ಲಿದರು ಕುಶಲವರು ನೃಪರೆಡೆ । ಯಲ್ಲೆ ಶತ್ರುಘ್ನ ಭೃಂಗಜಂಗದ । ರಲ್ಲೆ ಸುಗ್ರೀವಾದಿ ಖೇಚರ ವೃಂದ ಬಂಧುರದೀ ॥ ೮ ॥ ಇಂದುವದನೆಯರಂತರದಿ ಪೂ । ರ್ಣೇಂದುವೆನೆ ಬಲಕೇಶವರು ಬಹ । ರಿಂದ ಚಂದ್ರನನಾಡೆ ಬಹದೆಂಬಂತೆ ಬರಲಳಿಯಾ। ದೊಂದುಗಾನದಿ ಕೀರಕೋಳುಗ। ಳಿಂದ ಪಿಕಚಪ್ಪರಣೆ ಕಿವಿಗಲೆ । ವಂದದಿಂ ಸೌರಭದ ಸೊಗಸಿನೊಳಿಳಿದು ವಾಹನವಾ ॥ ೯ ॥ ಬರುತ ನೋಡಲು ತಳಿರು ವಿಧ್ರುಮ । ತೆರೆಯಮಾಲೆಲ ಗೊಂಚಿ ಪೂಮಂ । ಜರಿಗಳಿಂಪೇನಾಳದಿಂ ಜಲಧರವೊ ಮೇಣಲದೇ ॥ ಶರಧಿಯೋಲಾರಾಮ ಸೊಗಸುತ । ಲಿರಲು ತತ್ಕಿಸಲಯದ ಕಾಂತಿಯು । ತುರುಗೆ ನಭದೊಳು ಕವಿದ ಖಾಂಡಾವನದ ತೆರನಾಗೇ ॥ ೧೦ ॥ ಕೊಳದ ತಡಿಯೊಳಗುದುರೆ ಕರ್ಪುರ । ಪಳುಕ ಪಾರಾಗದಲಿ ಹಂಸೆಯು । ಬಳಗ ಸಂಚರಗೋಲಲು ತಣ್ಪಳಿಲೊಳಗೆ ಪಸೆಯಗ್ರಾ ॥ ಕುಳಿತ ವನದೇವತೆಗೆ ಶುಕಪಿಕ। ದಳಿಯಗರಿವರ ಮೇಳ ಹಂಸೆಯ । ಬಳಗಲಾಸ್ಯದೊಳೊಪ್ಪಿ ತಾವನ ನೋಳ್ಪರಂಬಕಕೇ ॥ ೧೧ ॥ ಸರಸಿಜದ ಕಿಂಜಲ್ಕವನು ಜಲ । ತರುಣಿ ತೆರೆಗೈಯಿಂದ ಪರಪಿದ । ತೆರದ ಪಾರಾಗದಲಿ ಹಂಸೆಯು ನರ್ತನವಗೊಳಿಸೇ ॥ ಬರೆದ ಸ್ವಸ್ತಿಕದಂತ್ಪಿಕ ಮಾ । ಮರದ ತಳಿರನು ಹಾಸಿ ಪಸೆಗೈ । ಲರಳ ಸುಮನಸಜವನಿಕೆಯ ಗೈದಸಿಲ ನರ್ತಿಸಲು ॥ ೧೨ ॥ ರನ್ನ ಕಳಸದೊಳಿಟ್ಟ ಘುಸ್ರುಣ । ವೆನ್ನುತಿಹ ರಸದಂತೆ ಚೂತಫ । ಲಿನ್ನು ಶೋಭಿಸೆ ಕೌಂಗು ಫನಸಿನ ಕದಳಿ ಪೂಗೆಲೆಯಾ ॥ ಹೊನ್ನ ಕಿಂಶುಕ ಪಚ್ಚೆ ನೆಲಗ । ಟ್ಟೆನ್ನುಲಿಹ ಕೇತಕಿಯು ಚಂಪಕ । ದಿನ್ನು ಸೊಗಸುವ ನಂದನವ ನೆರೆನೋಡುತ್ತೈದಿದರೂ ॥ ೧೩ ॥ ಪಟ್ಟಸತಿಯರ ಹಸ್ತಲಾಘವ । ನಿಟ್ಟು ಮಿಗಿಲಂಗನೆಯರೆಡಬಲ । ಮುಟ್ಟಿ ಬರೆ ಕುಸುಮಾಸ್ತ್ರರಂದ ವಿನೋದ ಸತಿಯರಲೀ ॥ ದಿಟ್ಟಿಸಿರಿ ಕೇತಕಿಯ ಕವಳಿಗೆ। ಯಿಟ್ಟ ಪುಸ್ತುಕದಂತೆ ತೋರುವ। ದಿಟ್ಟವನು ನೋಡೆಂದು ತೋರಿಸಿ ಪಟ್ಟಸತಿಯರಿಗೇ ॥ ೧೪ ॥ ಸುರಗಿ ನಂದ್ಯಾವರ್ತ ಮಾಮರ । ಸಿರಸ ಪಾದರಿ ಕರ್ಣಿಕಾರದಿ । ಕುರುವ ಕರವೀರ್ತೆಂಗು ಫನಸಂಜೂರ ಬಕುಳಗಳಾ ॥ ವರಿಸಿ

ಪೂಗೆಲೆವಳ್ಳಿ ನೇರಿಲೆ। ಮರನು ಚಂಪಕ ಮೊಲ್ಲೆ ಮಲ್ಲಿಗೆ। ಸರಸಿಜವು ಮುಡಿ ವಾಳು ಪಚ್ಚೆಯ ತೆನೆಗಳಾದಿಯಲೀ ॥ ೧೫ ॥ ಯಲ್ಲಿ ನೋಡಲು ಪೂತವನ ದೊಳ। ಗೆಲ್ಲ ತಳಿರೆಳೆಗಾಯಿ ಕುಸುಮಗ। ಳೆಲ್ಲಿ ಮಂಜುಳವಾದವನು ನೋ ಡಿದರು ವಂದೆಡೆಯಾ॥ ನಲ್ಲರನು ಕುಳ್ಳಿರಿಸಿ ವನದೊಳ। ಗೆಲ್ಲ ಚಲ್ಲಾಡುತಲಿ ದೂಪಿಸು। ತೆಲ್ಲ ನಾರಿಯರಿಟ್ಟು ಕಾಸಿಯಕೊಯ್ಯೆ ಪೂಸಣ್ಣಾ ॥ ೧೬ ॥ ಯೆ ತ್ತು ಮೆಟ್ಟುಗಳಿಂದ ಕೊನೆಗಳ। ನೊತ್ತಿಬಗ್ಗಿಸಿ ಊರ್ದಮುಖವನು। ನೆತ್ತಿ ಕಣ್ಪಿಂಗಳಿಸಿ ವುಗುರುಗಳೊತ್ತಿ ಪಣ್ನೋಡೀ ॥ ಕಿತ್ತು ವುಡಿಯೊಳಗಿಡುವರಿಗೆ ವುಸು। ರೊತ್ತಿ ಮುಖಬೆಮರೆತ್ತು ಶರಗೆಳೆ। ಯುತ್ತ ಜಾರುವುದೇಳೆವುತೆಸೆದರು ಮತ್ತು ನೀರೆಯರು ॥ ೧೭ ॥ ಅಡರಿ ಕೆಲರಲ್ಲಲ್ಲಿ ಕೊನೆಕೊನೆ। ದೊಡಗಿ ಕೆಲರಲ್ಲಲ್ಲಿ ರೋಟಿಯು। ಹಿಡಿದು ಕೆಲರಲ್ಲಲ್ಲಿ ಅಡಿಯೊಳಗೊಡ್ಡಿ ಮಡಲುಗಳಾ॥ ಪಿಡಿದು ಪಣ್ಗಳತಂದು ಪ್ರಿಯರಿಗೆ। ಕೊಡುವರೊದನವ ಪಿಡಿದು ಮುದ್ದಿಸಿ। ಕಡಿದು ಅದರವ ಬಾಯ್ಗೆ ಪಣ್ಣಿಡುತಿಹರು ರಘುವರರೂ ॥ ೧೮ ॥ ಬಳಲಿ ದೂ ಪಿಸಿ ಪಣ್ಗಳನು ತಹ। ನಳಿನ ಮುಖಿಯರನಪ್ಪಿ ಮೇಲುದ। ನೆಳೆದು ಬೆವರ ನು ವರಿಸಿ ಬೀಸುತಲೆಲರ ಬಿಜ್ಜಣೆಯಿಂ ॥ ಕಳಸ ಕುಚಗಳ ಮೇಲೆ ಹಸ್ತವ। ಬಳಸಿ ತೊಡೆಯೊಳು ಮಲಗಿಸುತ ತುಟಿ। ಗಳನು ಕಚ್ಚುತ ಪಣ್ಣ ಮೆಲಿಸುತಲೆ ಸೆದರಾ ಪ್ರಿಯರೂ ॥ ೧೯ ॥ ಮಿಗಿಲ ಸತಿಯರು ಪಲವುತೆರ ಕುಸು। ಮಗಳ ಕೊಯ್ಯುತ ಶರಗ ಶಳೆದಿಳೆ। ದೆಗೆವ ಕೊನೆಗಳನೋರಿ ಸಂಗವ ಗೀರುತಿಹ ಕೊ ನೆಯಾ ॥ ನಗಲಿಸಲ್ಲಲ್ಲುಸುರಗಿ ಮಲ್ಲಿಗೆ । ಮಿಗಿಲ ಚಂಪಕ ಜಾಜಿ ಸುರಬಂ। ದುಗೆಗಳಾದಿಯ ಹೂವ್ವತಂದರು ಪದ್ಮಗಂಧಿಯರೂ ॥ ೨೦ ॥ ಸಿರಸ ಚಂಪಕ ಪದ್ಮನೈದಿಲೆ। ಕುರವ ಬಂದುಗೆ ಮೊಲ್ಲೆ ಕೇತಕಿ। ಮರಕತದ ತೆನೆ ಜಾಜಿ ಕು ಸುಮಗಳಾದಶೋಕೆಗಳಾ ॥ ತರುಣ ಪಲ್ಲವಗಳನು ತಂದಿಹ। ತರುಣಿಯರೊ ತದ್ವೃಕ್ಷಲತೆಗಳ। ತೆರನೊ ತಿಳಿಯದು ನೋಳ್ಪರಕ್ಷಿಗೆಯುರಸನವಧರಿಸೂ ॥ ೨೧ ॥ ವಂದು ಪೂವಿನ ಮೊನೆಯೊಳಗೆ ಅರ। ವಿಂದನಾಭನನಿರಿಸಿ ಮತ್ತಿ। ನ್ನೊಂದು ಗೃಹದೊಳಗಿರಿಸಿ ರಾಘವನನವರ ಚಲುವೆಯರೂ ॥ ತಂದ ಪೂವ್ಗಳ ಬಾಳೆಲೆಯೊಳಿರಿ। ಸೊಂದು ಯಳೆವಾಳೆಗಳ ತಂತುವಿ। ನಿಂದ ಹಾರ ತುರಾಯಿ ಚಂಡ್ಗಳಗೈದು ನಲ್ಲರಿಗೇ ॥ ೨೨ ॥ ಮುಡಿಸಿ ಹಾರ ತುರಾಯಿಗಳ ಕೈ। ಹಿಡಿದ ಚಂಡುಗಳಿಂದ ಹೂಂಕರ। ವಿಡುತ ಸುತ್ತಿದರೊತ್ತಿ ಮುತ್ತುತ ಹಾಕು ಹಾಕೆನುತಾ ॥ ಇಡುತಲೆಲ್ಲೆಲ್ಲಸುರ ಪೇಚರ। ಪೊಡವಿಜರ ನಂಜಿಸಿದ ಕೈಗಳ।

ನಡಸಿ ನೋಡುವೆನೆಂಬ ಸಖಿಯರ ನೋಡಿ ನಗುತಲಿರೇ ॥ ೨೩ ॥ ಅಲ್ಲಿ ಯಿಲ್ಲಂಜಿಸಿದ ತೆರಗಳ। ನಿಲ್ಲಿ ತೋರದೆ ಸುಮ್ಮನೇ ಕುಳಿ । ತಲ್ಲಿ ಯಿರ್ದ್ದೀ ಚಂಡಿನೊತ್ತರ ಸೈರಿಸಿದರುಚಿತಾ॥ ಇಲ್ಲದೇ ಆ ಹೆಮ್ಮೆಯೊಳು ವಲೆ। ದಲ್ಲಿ ನೋಡೆಂದೆಲ್ಲ ಚಂಡುಗ। ಳಲ್ಲಿ ಯಿಡುವರ ಚಂಡು ತಟ್ಟುತ ನೋಡಿ ನಸುನಗುತಾ ॥ ೨೪ ॥ ಸುತ್ತಿ ನಾರಿಯರೆಂಟು ಸಾಸಿರ। ವತ್ತ ಷೋಡಶ ಸಾಸಿರಂಗನ। ರೊತ್ತಿ ಕೈಬೀಸೆಸೆವ ಚಂಡುಗಳೊಂದ ವಿಗ್ರಹಕೇ ॥ ಹತ್ತಿಸದಲಷ್ಟಾವದಾನದಿ। ಯಿತ್ತು ನುಡಿಗುತ್ತರವ ಬಹಚಂ। ಡೊತ್ತಿ ಯಸೆದರು ಕಾಮಿನಿಯರೊಕ್ಷಜದ ಚಂಡುಗಳಾ ॥ ೨೫ ॥ ನೋಡಿ ವಕ್ಷಜಗಳಿಗೆ ಚಂಡನು । ತೀಡುತಿಹ ಪ್ರಿಯರೊಲವಿಗನುನಗೆ। ಗೂಡಿ ಯಿಷ್ಟ್ಯಕಿವಾರಿಗಹೊ ನೀಲಾಂಬಕಿಯರೆಲ್ಲಾ ॥ ಕೂಡಿ ವೃಂದಾವನದ ಮಧ್ಯದಿ । ತೀಡಿ ಚಂಡುಗಳಿಂದ ಬೇಗೊಡ। ಗೂಡಿರೆಂದೊತ್ತುವರ ನೋಡಿದ ಪ್ರಿಯರುನಲವಿಂದಾ ॥ ೨೬॥ ಯೆದ್ದು ಬಹರನು ನೋಡಿ ಚಲಪಿನಲಿ। ಯೆದ್ದು ನೆಗೆನೆಗೆದೊತ್ತಿ ಚಂಡ್ಗಳ। ಗುದ್ದಿಸುತ ಬಹರೊಬ್ಬರೊಬ್ಬರ ಶಳೆದು ವಕ್ಷಜವಾ ॥ ನುದ್ದಿ ಬೆರಳಿಲಿ ಕವಪುಗಳನೊ। ತ್ಮದ್ದಿಸಾಲಂಗಿಸುತಲೆಲ್ಲರಿ। ಗೊಡ್ಡಿಸಿದ ರಾಹಸ್ಯ ಸರಸದಿ ಪ್ರಿಯ ನಗಿಸುತಲೀ ॥ ೨೭ ॥ ಮುಡಿಸಿ ಪೂವ್ಬಲೆಗಳನು ಮುಡಿಗಳಿ। ಗಿಡುತಪ್ರಜಗಳಗಳಕೆ ಶೃಂಗರ। ವಿಡುತ ಮುತ್ತೊಂವೆಯಲಿ ಪಣ್ಗಳನಿಡುತ ಬಾಯ್ಗಳಿಗೇ॥ ಕೊಡುತಚಂಬನ ವರ್ಧವರ್ದವ। ಕಡಿಮುಕೊಳ್ಳುವ ರಘುಜಕ್ರಿಷ್ಣರ। ಬೆಡಗೆ ಮುರಸಿತು ಮದನ ವೋಹನನಾಗಲವನೀಶಾ ॥ ೨೮ ॥ ನಾರಿಯರ ದಂಡಿನೊಳು ಮದನ। ಕುಮಾರರಂದದಿ ಕೇಳಿಯನು ವಿ। ಸ್ತಾರಗೊಳಿಸಲ್ಲಿಂದ ಕರ್ಪೂರ ವಿಳ್ಯವನು ಸವಿದೂ ॥ ಸಾರಿ ಕೈಕೈಯಕ್ಷಕರ್ಧಮ । ಪೂರಿ ಸಂಗದಿ ವಿಶ್ರಮುವನಾ ನಾರಿಯರು। ಸಹಿತೆಸಗಿದರು ಆ ರಾಜಶೇಖರರೂ ॥ ೨೯ ॥ ಆಡಿವನ ಕೇಳಿಯನು ಮತ್ತುಂಪಿ। ಗೂಡಿ ಬಹತಮ ಪುರುಷರೆಡೆ ಕಡು। ಗಾಡಿಕಾತಿಯರೈದುತಿರೆ ಬೆಂಬಿಡದೆ ಅಳಿವಿಂಡೂ ॥ ಮಾಡಿ ಝೇಂಕರವನ್ನು ಬರುತ । ಲ್ಲೂಡಿಕರ್ಧಮ ಸೌರುಭದಹದ। ಗೂಡಿಯಿಹ ಜಲಕ್ರೀಡೆ ಕೊಳದೆಡೆಗೈದುತಿರವಲ್ಲೀ ॥ ೩೦ ॥ ಯರಿಕೆತೂಣಿರವಾಗಿ ವನಮಯ। ಶರಮುಯದಿ ಸರಸಿಜದ ಸಿರಿವಾ। ನರದ ಸೈನಿಕರಾಮಲಕ್ಷ್ಮಣರಂತೆ ನಭದಂತೇ ॥ ಮೆರೆವ ಕೋಕನ ದನುಮಿಷರ ಸಂ। ಭರಿತಭಾಸುರಶುಕ್ಲಪಕ್ಷದ। ನರಪನಾಲಯ ದನುಜವಂಶದೊಲೆಸೆದುದಮುಮೇಣೂ ॥ ೩೧ ॥ ಮತ್ತೆ ವನಮಾಲಿಯೊಲು ಬ್ರಹ್ಮನ। ಪೆತ್ತಳಂದದಿ ಲಕ್ಷ್ಮಿಗಾವಾ।

ಸೆತ್ತಿ ಚಕ್ರಿಯೊಲೆನಿಸಿ ಮಂಗಲೆ ವಿಭವಕೆಡೆಯಾದಾ ॥ ವುತ್ತಮದ ಸೌಭಾಗ್ಯವನು ಸಲೆ । ಚೆತ್ತ ಗ್ರಾಹಸ್ತನೊಲು ಗರಳವ । ಹೊತ್ತು ಮೆರೆಯುತಲಲ್ಲ ಫಣಿಪತಿಯೆನಿಸಿ ಮೆರದಿಹುದೂ ॥ ೩೨ ॥ ಇರಲು ಕಳಹಂಸೆಗಳು ಕಲಹರ । ನೆರವಿಯಲ್ಸವುದಯದಿ ಖಲ ಜನ । ನೆರವಿಯೋಚನೆಯಲ್ಲಿ ಭಂಗದಿಮುರಿದ ಆಳಲ್ಲಾ ॥ ಸ್ತಿರವು ಅಲ್ಲಸ್ತಿರವು ತನಗಿ । ಲ್ನೆರವಿಯಿಲ್ನೆರವಿಲ್ಲದಿರಲಿ । ಲ್ಸರಸಿ ಸೌಂಧರದಿಂಪು ಸೋಂಪನು ನೋಡುತಿರಲಲ್ಲೀ ॥ ೩೩ ॥ ನಳಿನಮುಖಿ ಕೂರ್ವಾಂಗ್ರಿಯುತ್ಪಲ' ಗಳ ವಿಲೋಚನೆ ಹಂಸೆಗಾಮಿನಿ । ನಳಿನ ಕುಟ್ಮಳ ಕುಚೆಯು ಶುಕಪಿಕವಾಣಿ ಭ್ರಮರಾಳೀ ॥ ಸುಳಿಗುರುಳೆ ಫಣಿವೇಣಿ ಪೊರವಾ । ರ್ಪುಳಿನೆ ಕಿಸಲಯ ಬೆರಳೆ ಪೆಡೆಹ । ಸ್ತ್ನಳ ನಳಿಪನಾಳ್ಬೋಳೊಳೆಸೆದಳು ಆಕೊಳಾಂಗನೆಯಾ ॥ ೩೪ ॥ ಆವಯದ ವನಸಿರಿಯ ವಕ್ತ್ರದ । ಭಾವವೋ ಮೇಣಾಕೆನಾಭಿಯ । ಭಾವವೋ ಆದರ್ಶವೆನಲೊಪ್ಪಿರ್ದ ಸರಸಿಯೊಳೂ ॥ ತೀವಿಯಿರುತಿಹ ಯಕ್ಷಕರ್ದಮ । ದಾವರಿತ ಸೌರಂಭದೋ ಕುಳಿ । ಗಾವಧುಗಳೊಡನಿಳಿದ ಬಲಹರಿಬೇರೆ ಕೊಳಗಳಿಗೇ ॥ ೩೫ ॥ ನಿಂತು ದಿಕ್ಕೆಂಟರಲಿ ನಡುಗಡೆ। ಕಾಂತರರಿಸಾವೃತದಿ ಸತಿನಿಕ । ರಾಂತ ರನ್ನದ ನೀರ ಕೋವಿಗಳಿಂದ ಪರಿಮಳದಾ ॥ ನಾಂತ ವುದಕವನೆಳೆದು ಧೈರ್ಯವ । ನಾಂತು ಯಿರಿ ಬಲಕೇಶವರೆತಾ । ಳಂತು ಕಾಣುವುದೆಂದು ಯಸೆದರು ಸುರಭಿ ನೀರಿಂದಾ ॥ ೩೬ ॥ ವತ್ತಿಯಸೆಯುತಲಾಗ ಸೋಪಾ । ನೊತ್ತಿ ಯಿಳಿಯುತ ನೀರ ಕೈಯಿಂ । ದೆತ್ತಿಯರಚುತ ಯರಚು ಯರಚೆಂದೊತ್ತಿ ಗಲಬೆಗಳಾ ॥ ಮುತ್ತಿ ಬಹವೋಹನೆಯರಿಗೆ ಯದು । ರೆತ್ತಿ ಚಿಮ್ಮಲಗೋವಿಯಲಿ ಯಸೆ । ಯುತ್ತ ಕೈಪುಂಖಿತೆಯ ತೋರಿದರಾಗ ರಘುವರರೂ ॥ ೩೭ ॥ ವೊತ್ತಿ ಬಹರನು ನೋಡಿ ಸುರಭಿಗ । ಳೆತ್ತಿ ನೋಡೊಕ್ಷಜಗಳನು ಗುರಿ । ಗಿತ್ತು ಹೊಡೆವರ ಮೇಲುವರಿಸಲು ಕೋಮಲಾಂಗಿಯರಾ ॥ ನೆತ್ತಿ ಯೋರೋರ್ವರನು ನೀರೊಳ । ಗೊತ್ತಿ ಕೈಶಳೆಯುತ್ತ ಬಹರೆದು । ರೆತ್ತಿ ಯುಗ್ಗಿದರೆರಡು ಕೈಯೊಳು ನೀರ ಪ್ರೀಯರಗಾ ॥ ೩೮ ॥ ಅಲ್ಲಿ ನಿಮಃಶೌರ್ಯರಸುಗಳ ಬಳಿ। ಯಲ್ಲ ದಿಲ್ಲಿಲ್ಲೋಹೊಕ್ಕೈನ। ಲ್ಲಲ್ಲೆನಿಲ್ಲಿಸು ಸಾಕು ಮುಖವಾರ್ದಿರುಹರೆಮ್ಮೆದುರೂ॥ ಸಲ್ಲವೆಂದಾವ್ರತದಿ ಕಿಂಕಿಣಿ। ಘುಲ್ಲುಘುಲ್ಲೆನುತುಗ್ಗಿ ನೀರನು । ಚಲ್ಲುವರ ನೆಳೆದೆಳೆದಃ ಹೊರಳಿಸಿನೀರೊಳೆದ್ದುವರೂ ॥ ೩೯ ॥ ಸುರಭಿಯನು ಯೆತ್ತೆತ್ತಿ ಶಿರದೊಳು । ಸುರಿದು ಯಲ್ಲರು ವಿಳಿತದೊಳು ಪುರು । ಷರನು ಯಳೆದುರುಚಿರಗಳಿಗೆ ತೋಳ್ಪಾಶಗಳ ಬಿ

ಗಿದೂ ॥ ಬರಶಳದು ನೀರೊಳಗೆ ಕೆಡಹುತ। ತರುಣಿಯರ ಹಿಂಡಿಂಡುಗಳಚಾ। ಚ್ಚುರುಗಿ ಸುರಭಿಯೊಳೆದ್ದಿ ಮುದ್ದಿಸಿ ವತ್ತಿವಕ್ಷಜವಾ ॥ ೪೦ ॥ ಕಚ್ಚಿಕದವು ಗಳೊಕ್ಷಜದಿ ವುಗು । ರುಚ್ಚಿ ಚಚ್ಚರದಿಂದ ನಾಚಿಸಿ। ಯಿಚ್ಚೆಯಿರ್ದಂತಾಡಿ ದರು ಸ್ತ್ರೀಪುರುಷರೊಂದಾಗೀ ॥ ಗಚ್ಚಿಸಾ ಜಲಕ್ರೀಡೆಯನು ಬಿ। ಬ್ಬಚ್ಚಗೊ ಳಿಸಲ್ಸುದ್ಧ ಜಲವೊಳು। ಸ್ವಚ್ಛಗೈದಂಗಗಳಿಗೊಸ್ತ್ರಾಭರಣಲಂಕೃತಿಸೇ॥೪೧॥ ಬಂದು ಲತೆ ವೋಡವೊಳು ಕುಳಿತರ । ಏಂದವುುಖಿಯರು ಸಹಿತಲೊಸ್ತುಕ। ದಂಬದಿಂ ಫಲಹಾರ ಗೈದೆಳನೀರು ವೊದಲಾದಾ ॥ ಬಂಧುರದ ಪಾನಾದಿಗ ಳಸವಿ। ಯಿಂದ ಕರ್ಪೂರವೀಳ್ಯವನು ಕೊಂ । ಡಂದು ಕೊಟ್ಟರು ಸಕಲ ಮಿತ್ರರಿಗಾ ಫಲಾರಗಳಾ ॥ ೪೨ ॥ ಹೀಗೆ ಸಂಧ್ಯಾಸಮಯಪರಿಯಂ । ತಾಗಿ ವನಜಲಕೇಳಿಯೊಳು ಅನು । ರಾಗವೆರಸಿದ್ವಾಗ ಮದಗಜವೈದಿಕಲು ತೂರ್ಯಾ ॥ ಕೂಗಿದವು ದಿಕ್ಕುಂಬಿ ಕಿವಿಗಿಡಿ। ವಾಗುವುದವೊಳೆಲ್ಲ ಬಲವ ನು। ವಾಗಿ ಬರವೇರಿದರು ಸಿಂಧೂರಗಳ ರಘುವರರೂ ॥ ೪೩ ॥ ಮಾರುತಿ ಯುವೊದಲಾದ ಮಿತ್ರರು । ಯೇರಿ ವಾಹನಗಳನು ಪಟ್ಟದ । ನಾರಿಯರೊ ರೆಡಬಲದಿ ನಡೆದರು ಮದನದಿಗ್ವಿಜಯಾ ॥ ಸಾರಿಬಹ ತೆರದೊಳಗೆ ಪಾಲಕಿ। ಯೇರಿ ನಾರಿಯರೆಲ್ಲ ತಮಕೇಳೆ । ನಾರಿಯರೊಳೈತಂದರಾ ಪುರಮಾರ್ಗವನೂ ಪಿಡಿದೂ ॥೪೪॥ ಇಂದ್ರಗಿಲ್ಲೀವೈಭವವು ತುಹಿ। ನೇಂದ್ರಗಿಲ್ಲಿಸಂಪದವುಧರ । ಣೇಂದ್ರಗಿಲ್ಲೀ ನಾರಿಯರು ಸ್ಮರರಾಜಗೀತೆರದ ॥ ಸಾಂದ್ರವಿಲ್ಲಾರಿಂಗೆಆದಿವ। ಸೇಂದ್ರಗಿಲ್ಲುರುತೇಜವಂತೆನ । ರೇಂದ್ರ ರೈದಿದರೂರವೀಥಿಯೊಳರಸ ಚಿತ್ರೈ ಸೂ ॥ ೪೫ ॥ ಪುರದನಾರಿಯರೆಲ್ಲ ನಾನಾ। ತೆರದ ಆರತಿವಿಡಿದರಿಗೆ ಬಂ । ಧುರದ ವಸ್ತುಗಳೀವುತರಮನೆ ಬಾಗಿಲೆಡೆಯಿಳಿದೂ ॥ ಅರಸರವರಾಲಯಕೆ ಕಳುಹಿಸಿ । ತರುಣಿಯರ ನೆರವಿಯಲಿ ಅರುಹ । ಸ್ಮರಣೆಯೊಳಗಾಲಯವ ಪೊಕ್ಕರು ರಾಮಲಕ್ಷ್ಮಣರೂ ॥ ೪೬ ॥ ಕಲಿಲಹರ ಮುನಿಸೂವ್ರತಾಂತ್ಯದಿ। ಚಲಿತರಾದಾ ರಾಮಲಕ್ಷ್ಮಣ । ರೊಲವಿನಲಿ ಕರ್ನ್ನಾಟ ಕಾವ್ಯಕೆ ಶ್ರೇಷ್ಠರೆನಿಸಿ ರುವಾ ॥ ಲಲಿತದಲಿ ಶ್ರೀಚಂದ್ರಸಾಗರ। ರೊಲಿದು ವಿರಚನೆ ಗೈದರಿದವುನ। ವೊಲಿದು ಲಾಲಿಸಿ ಮುಕ್ತಿಯರಸನಕಥೆಯ ಸದ್ಬುಧರೂ ॥ ೪೭ ॥

ಅಂತು ಸಂಧಿ ೮೩ ಕ್ಕಂ ಪದನೂ ೪೭೭೯ ಕ್ಕಂ ಮಂಗಳ ಮಹಾ ಶ್ರೀ ಶ್ರೀ-

ಎಂಭತ್ತನಾಲ್ಕನೆಯ ಸಂಧಿ.

ಚಂದ್ರಿಕಾ ವಿಹಾರದ ಸಂಧಿ.

ವಿಟವಿದೂಷಕನಾಗಲೀಕನು । ಪಟುವನಾಗಿಹ ಪೀಠವರ್ಧನ । ಜಟಿತ ದೊಳಗೆ ವಿಹಾರಗೈದರು ರಘುಜ ರಿರುಳಿನಲೀ ॥ ಪದನು ॥

ಅರಸ ಕೇಳಾ ಸ್ತ್ರೀಯರ ತಾರಾ । ನೆರವಿಯೊಳಗಿನ ಶಶಿಗಳಂದದೊ । ಳರಮನೆಯ ನೊಳಪೊಕ್ಕು ಸತಿಯರನುಳಿದು ವಾಲಗಕೇ ॥ ತೆರಳಿ ಕನಕಾಸ ನದಿ ನೃಪರಾ । ಕರದಿ ಖೇಚರರೊಡನೆ ರಾಘವ । ನುರುವಿಲಾಸದಿ ಕುಳಿತ ನಿಂದ್ರ ಸುಪೇಂದ್ರನೊಡನಾಗೀ ॥ ೧ ॥ ಯಿರಲು ಸಂಧ್ಯಾರಾಗ ಸಮಯವು। ಬರಲು ಖಗನಪರಾಂಬುರಾಸಿಗೆ । ತೆರಳಿದನು ನಭವೆಂಬ ಕೋಕನದವನು ಹದಗೈದೂ ॥ ಮಿರುಗುತಿಹ ಬೆಳ್ದಾವರೆಗಳನು । ಪರಪಿಪೋದನೊ ಕುಡಿಯ ನೆಂಬಂ । ತರಣಿ ಕಿರಣನು ನಡೆದನಪರಾಂಗನೆಯ ಸನ್ನಿಧಿಗೇ ॥ ೨ ॥ ನಳಿನ ಸಖಿಯರಿಗಾ ವಿಯೋಗದ । ಬಳಲನೋಡಿದ ಕೈರವಾಂಗನ । ರೆಳಸಿ ನಗು ತಿರೆ ಭ್ರಮರ ಕಾಪತ್ತ್ಯೈದಲದ ಕಂಡೂ ॥ ಕಳಕಳಿಸಿ ಕೋರಕಗಳೊಲಿಯು । ಕಳುಹುತಿರಲಾವರಿಸಿ ತತಿತಮ । ಬಳಸಿ ಬರೆಲೋಕವನು ನರ್ತಿಸಿಲಾಸ್ಯೆಯಂದ ದಲೀ ॥ ೩ ॥ ವರುಣ ನೃಪ ನಿಜಕರಿಯ ಮಸ್ತಕ । ವೆರಸಲಾತನ ಮೌಲಿ ಯಂಬೋ । ಲ್ಮಿರಗುತಿಹ ಕೆಂಬೆಳಗಿನಲಿ ಯಸ್ತಸ್ತಗಿರಿಯಲ್ಲೀ ॥ ವರುಣದಿಗ್ವ ಧುಕೊರಳ ತಾತಿಯೊ । ಕರದು ಮುಖರವೊ ಫಣಿಯ ಕುಂಕುಮ । ಮೆರು ಗೊದಾವಾಸಿಖಿಯೊ ನೋಡಾಯಿನನಬಿಂಬವನೂ ॥ ೪ ॥ ಶರಧಿಯೊಳಗೊಗೆ ದಿರ್ದ ಕೆಂದಾ । ವರೆಯೊ ಬಹದಿನಕರನ ಯದುಗೊರ್ಂ । ಡೆರಕದೊಳಗಪ್ಪಿ ದನೊ ವಾಡಬನೆಂಬ ವೋಲಲದೇ ॥ ಧರಣಿ ಸತಿಸಂಗದಲಿ ಕಾಂತಿಯು । ತೆರಳಿತಾದಿನಕರಗೆ ಪರಸತಿ । ಯರುಗಳಾ ಶಕ್ತ್ಯೈದನೇ ಲಘುವೆಂಬ ತೆರನಾಗೀ ॥ ೫ ॥ ದಿನದಸತಿ ಪದ್ಮಿನಿಗೆ ನೃಪಬಂ। ಧನವು ಬರಲೆನ ತೇಜಕಹಿತನು । ವಿನಲಿ ಯಿರಿಸಲ್ಲೆಂಬ ಹೇಯದಿ ಪಶ್ಚಿಮಾಬ್ಧಿಯೊಳು ॥ ದಿನಪ ಮುಣುಗಿದ ನರಿದು ಆವಿ । ಗ್ವನಿಕೆ ಕುಂಕುಮ ಲೇಪ ಪೊಂದೊಡ । ವಿನಲಿ ಬಂದಂತೆಸೆಯೆ ಸಂಧ್ಯಾರಾಗನವಸರದಲೀ ॥ ೬ ॥ ಜಲಧಿಯೊಳು ರವಿಮುಳುಗೆ ಜಗಕ । ತ್ತಲೆ ಯು ಮುಸುಕಲು ಕಂಡು ಕಲಕಲ । ಗಲಘೆಯೊಳು ಹಾರಿವವು ಖಗನಿಕರಾದಿ ದಿಗ್ವಧುವೂ ॥ ಲಲಿತಗೊಂಡಾವೋದ ಕತ್ತಲೆ । ಯೊಲವೊ ಯನಲಾವರಿಸು

ತಿರೆ ಪರ। ಲಲನೆ ಕೂಡಿದನಲ್ಲನೆಂದ್ಕಣ್ಮುಚ್ಚೆ ಪದ್ಮಿನಿಯೂ ॥ ೭ ॥ ಕಮಲ
ಮಿತ್ರನು ವರುಣ ಮರೆಗೊಳೆ । ತಿಮಿರರಾಜನ ಭೃತ್ಯರೆಂಬೋ । ಭ್ರಮರ
ಸುತ್ತುತ ಮುತ್ತಿಕೊಂಡವು ಪದ್ಮಪದ್ಮಗಳಾ॥ ರಮಣನೈದಲು ಹೊಚ್ಚಿ ಪಡಿ
ಗಳಿ। ಗಮರಿಸಿದ ಜತುಮುದ್ರೆಯೊಲು ಆ। ಕ್ರಮಿಸಿದವು ದುರುದುಂಬೆ ಸಲೆ
ಪದ್ಮಾಳಿಗಳಿಗೆಲ್ಲಾ ॥ ೮ ॥ ಆಸಖ ವಿಯೋಗದಲಿ ತಲೆಗಳ । ಬೀಸಿತಾಟಾ
ಡಿಸುವ ತೆರಕನಿ। ಲಾ ಸುಳುಹಿನಿಂದೊಲೆಯು ಲಜ್ಜಗೊಳಿಸರ್ವ ಕಂಬಿನಿಯಾ ॥
ಸೂಸಿ ಗದ್ಗದ ರವದಿಗಳ ಕೊಂ। ಕಿಸುತಲೀ ಕೋರಕಗಳಲ್ಲ। ಲ್ಲೋಸಗೈದವು
ಪ್ರಿಯನ ಆಗಲಿನೊಳರಸ ಚಿತ್ತ್ರೈಸು ॥ ೯ ॥ ಧರೆ ನಡುಗೆ ದಿಕ್ಕರಿಯು ಬೆದ
ರಲು। ಶರಧಿಗಳು ತುಳುಕಾಡುವಂದದಿ । ಮೊರಿಯೆ ಭೇರಿಯನಾದ ತ್ರಿಜಗ
ದ್ದೇವನಾಲಯದೀ ॥ ಯರೆಯನಗಲಿಕೆಯರನು ನುಡಿಸಲು । ಮರುತಮಲ
ಯಜ ಗಿರಿಯನಿಳಿದೈ। ತರುವ ತೆರನಾಗೊಲೆದು ಬೀಸಿದ:ದಾಗ ತಂಫಾಳೀ ॥
॥ ೧೦ ॥ ಸರಸಿಯನು ಪೊಕ್ಕಾಡಿತಡಿಕ। ರ್ಪುರದ ಪಾಳೆಯನೌಂಕಿಪರಿಮಳ।
ವೆರಸಿ ಕಮಲದ ರೇಣುವನು ಕೆದರಾಡಿ ಮಾರುತನೂ॥ ಬರಲು ಬೀದಿಯೊಳ
ನಿಲರಾಜನ। ಪರಿಚರರ ತೆರನಾಗಿ ಆಳಿಬಂ। ಧುರದಿ ಮೊರೆದವು ಯಲ್ಲ ಪುರ
ವನದಲ್ಲಿ ಯೆಲ್ಲೆಲ್ಲೀ ॥ ೧೧ ॥ ವಾರಸತಿಯರ ನೆರಿಯುಕೆದರುತ । ಜಾರಿಸುತ
ಮೇಲುದನುವಕ್ಷಜ। ನಾರಿ ಪುರವನುಪತ್ತಿ ವಿಟನಂದದಲಿ ತಳ್ಕಿಸುತಾ ॥ ಮಾ
ರುತನು ಮುನಿಸಿರುವ ಸಲೆವಿಟ । ಗಾರರಂಗವ ಸುಡುವ ವಿರಹಾ।ಗ್ನಾರಿಸಲು
ಸ್ಮರದೂತನಂತಾವರಿಸೆ ತಣ್ಗೆದಿರು ॥೧೨॥ ಮೂಢನೆದೆಮನೆಯಂತೆ ದೇವಕಿ।
ಗೂಡಗರ್ಭವೊ ಮೇಣು ಕರಡಿಯ । ನಾಡೊ ಕಸ್ತುರಿ ಭರಣಿಯೋ ಮೇಣಳಿ
ಯೊ ಕುಂತಳವೋ ॥ ಕೂಡಿ ಬಹದೆತ್ತೆತ್ತ ಕಂಣ್ಬೆ । ಟ್ಟೋಡಲೊಂದೇಸಮ
ದಿ ಕಾಡಿಗೆ । ಗೂಡಿ ನಂತೆಸದಂಧಕಾರವದೆತ್ತ ಲವನೀಶಾ ॥ ೧೩ ॥ ಸುರಟಿ
ದೆಲೆಗೋಟಡಿಕೆ ಬಾಯೊಳ । ಗಿರಿಸಿ ಚೂರ್ಣವನುದುರಿಸುತ ಪುರ । ವರದ
ವೀಧಿಯೊಳೊರಲಿ ತಿರುಕರು ದ್ವಾರದ್ವಾರಗಳ ॥ ಚರಿಸಿಅಂನವ ಬೇಡುತಿಹರಾ।
ವಿಟವಿಟೆಯರನು ಬೆಂಬಳಿಯರಸಿ। ತಿರಗುವರಲ್ಲಿ ರತಿಯಾತುರದ ಮನದಿಂ
ದಾ ॥೧೪॥ ನೋಡಿ ಬೆಳಗಿನ ಝಾವವನು ವಡ । ಗೂಡಿ ಬಹಸಖರಿಂದಮು
ತ್ತನು। ಜೋಡಿಸಿದ ಚಾವಡಿಗೆ ನಡೆದನು ಕಳುಹಿ ನೃಪಸುತರಾ ॥ ಜೋಡಿ
ಸಿದರಾವಿರಿತವನು ಈ। ಡಾಡಿ ನಿಚ್ಚಾಭರಣದೊಳು ಕಳೆ । ಗೂಡಿ ನಡೆದರು
ರಾಮಲಕ್ಷ್ಮಣರವರ ಮಂದಿರಕೇ॥ ೧೫ ॥ ಹೋಗಿ ತಮತಮ ಸತಿಯರೊಳು

ರತಿ । ರಾಗರಸದೊಳು ಕೇಳಿಯನು ಅನು । ರಾಗದಿಂ ವಿರಚಿಸುತ ವಿಶ್ರಮ ಕಾಲವನು ನೋಡಿ ॥ ಹೂಗಣೆಯರರಸಿಯರ ಪಕ್ಕದೊ । ಳಾಗ ಮಲಗಿದ ತೆರದಿ ಮಲಗುತ । ಲಾಗಲರುಹಸ್ಮರಣೆ ಗೈದರು ರಾಮಲಕ್ಷ್ಮಣರೂ ॥ ೧೬ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮಲಕ್ಷ್ಮಣ । ರೊಲವಿನಲಿ ಕರ್ನಾಟಕ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀಚಂದ್ರ ಸಾಗರ । ರೊಲಿದು ವಿರಚನೆ ಗೈದರಿದ ಮನ । ವೊಲಿದು ಲಾಲಿಸಿ ಮುಕ್ತಿ ಯರಸನ ಕಥೆಯ ಸದ್ಬುಧರೂ ॥ ೧೭ ॥

ಅಂತು ಸಂಧಿ ೮೪ ಕ್ಕಂ ಪದನೂ ೪೭೪೬ ಕ್ಕಂ ಮಂಗಳ ಮಹಾ ಶ್ರೀ ಶ್ರೀ

ಎಂಭತ್ತೈದನೆಯ ಸಂಧಿ.
ನಿರ್ವಾಣ ಕಲ್ಯಾಣದ ಸಂಧಿ.

ಕಂಡು ಅನುಜನ ಮೃತಕೆ ಹೇಯ್ಗುವ । ಗೊಂಡು ರಾಘವನಾಶ್ರಮವ ಕೈ । ಕೊಂಡು ನಡೆದನು ಲೋಕದಗ್ರಕೆ ಮುಕ್ತಿಸಂಪದಕೇ ॥ಪದ॥

ಕೇಳಿದೈ ರಾಜೇಂದ್ರ ನಿದ್ರೆಯೊ । ಳಾಳುತಿಹ ರಘುವರರ ಸತಿಯರ । ತೋಳಪಾಶದಿ ಬಿಗಿದು ಕಾಲ್ಗಳ ತೊಡರಿನಿಂ ಕೆಡಹೀ ॥ ಏಳಗೊಡದಿಹ ಸಮಯದೊಳು ಕಲೆ । ಯೇಳಿಗೆಯನುಳಿದಿರ್ದ ಶಶಿತಾ । ರಾಳಿಹಾರವಹರಿದತೆರ ಸರಿದಿರ್ದವಲ್ಲಲ್ಲೀ ॥ ೧ ॥ ಕರವಪಿಡಿದೆಳದಂತೆ ವಾರುಣಿ । ಶರಧಿಯಡೆಗೈದಿದನು ಶಶಿಕಳೆ । ತೊರೆಯೆ ನಕ್ಷತ್ರಗಳು ಗೃಹದೇವತೆಯು ಕೈಬಿಟ್ಟಾ ॥ ತೆರದಿ ಚರಿಸುತಲಿರಲು ಪಕ್ಕವ । ಮುರಿದು ವದರೊದರೆದ್ದು ಕುಕ್ಕುಟ । ವರಲಿದವು ಗೋಣೆತ್ತಿತೀಡಿದುದಾಗ ತಂಘಾಳೀ ॥ ೨ ॥ ಅರೆಬಿರಿದ ಅಬ್ಜಸಳ ಬಿಚ್ಚ । ಲ್ಲಿರುವ ಮಕರಂದದೊಳು ಹೊರಳುತ ಮರುತಬಂದುರು ಶೈತ್ಯಸೌರಭಸಹಿತ ಸಂಚರವಾ ॥ ಗರೆವ ಸಮಯದಿ ಪಕ್ಷಿಗಳುಯ । ಚ್ಚರದಿ ಚಿಲಿಮಿಲಿಯೆನುತ ಕಲಕಲ । ಸರವಗರೆಯಲು ಯದ್ದರಲ್ಲಲ್ಲಾಲಯದ ಜನರೂ ॥ ೩ ॥ ಕೀರ ಸುಸ್ವರ ಕೋಕಿಲೆಯು ಬ । ಲ್ಗಾರವಗಳ ಕೇಳಿ ಕಣ್ಬಿಡೆ । ಪೂರುವದಿ ನಸುಗೆಂಪುಮೋರಲು ಕಂಡು ಕುಲಟೆಯರೂ ॥ ಗಾರುಗೊಂಡತ್ತಿತ್ತ ನೋಡುತ ।

ಜಾರುವರ ಬೆಂಬಿಡದೆ ಅಳಜೇಂ। ಕಾರಗೊಂಡೈದಿದವು ನೀಲದ ಸೀರೆ ಹೊದೆದಂತೇ ॥ ೪ ॥ ಕಡೆಯ ಕಂಣಿಡೆಯಾಡಿಸುತ ಮುಸು । ಕಿಡುತಬಹರರಿದೋರೆವದನವ ! ನಿಡುತಬೇಗೈದುವಡೆ ಕುಚಪೂರವಾರು ಬಲ್ಮುಡಿಯಾ ॥ ಜಡಿತಕಾರದಿ ಜಗ್ಗಿಸುತಲಡಿ । ಯಿಡುವ ಪಾಣ್ಬೆಯರಗಲಲಾರದ । ಲಿಡುತಚುಂಬನಪ್ರಿಯರ ಚುಂಬಿಸಿ ಪೋಗುತಿಹರಲ್ಲೀ ॥ ೫ ॥ ಪಾತಕನು ರವಿಗೇನು ಅವಸ। ಯಾತಕೈದಿದನಿಂದು ಪ್ರಿಯರನು। ವಾತು ನಡೆದರು ಯಲ್ಲಗೃಹಗೃಹದಲ್ಲಿ ರತಿಕೇಳೀ ॥ ಯಾತಸಮಯದಿ ದೀಪಗಳು ನಿಬ। ಯಾತುನುಂಗುಗುಳಿದವೊಯನೆಕಡೆ । ಯಾತು ಕಜ್ಜಲವುದ.ರಲವನೀನಾಥ ಚಿತ್ತೈಸೂ ॥ ೬ ॥ ಮಂದಸ್ವಾಸು ಸ್ವಾಸ ಅರೆ ಮುಗು। ಳಂದ ಮಂದಸ್ಮಿತದ ಮುಖ ಪೂ । ರ್ಣೇಂದುಬಿಂಬದೊಲಿರಲು ಮಲಗಿಹ ರಾಮಲಕ್ಷ್ಮಣರೂ ॥ ಹೊಂದಿ ಸತಿಯರು ಯಿರಲು ಆಗರ। ವಿಂದಗಳಿಗಾನಂದ ಜೇಂಕರ। ದಿಂದಲೆದ್ದವು ತುಂಬೆವಿಂಡುಗಳರಸ ಚಿತ್ತೈಸೂ ॥ ೭ ॥ ಜಾರೆ ಕತ್ತಲೆ ಕೋಕಚಯಕನು । ದೋರೆ ವಿರಹವು ಕುಮುದಿನಿಯನಗೆ। ಹಾರೆ ರವಿತಲೆದೋರೆ ಕಿರಣಗಳೆಂಬ ಚುಂಚುವಿಲೀ ॥ ತಾರೆಯನಿಪಕ್ಷತೆಗಳಾಯ್ತು ಸ। ತಾರ ಕುಕ್ಕುಟನೆಂಬ ಖಗಸಂ। ಚಾರದೊಳು ಭೋರ್ಗರೆಯೆ ಚೈತ್ಯಾಗಾರದೊಳು ತೂರ್ಯಾ ॥ ೮ ॥ ಸುರಪತಿಯಮಣಿಮಕುಟರತ್ನವೊ । ತರುಣಿ ಪಿಡಿವಿಹ ರನ್ನಕಂನಡಿ । ಯಿರವೊ ಸುರಕರಿಸಿರದ ಸಿಂಧೂರದೊಲು ತೋರುತಿಹಾ ॥ ತರಣಿಕಿರಣವು ರಾಮಚಂದ್ರನ। ಪರಮಕೀರ್ತಿಯತೆರದಿ ನಭಕೆಂ । ಪೆರಸಿಮೆರೆಯಲು ಪಾಠಕಾವಳಿಬಂಮು ಬಾಗಿಲಿಗೇ ॥ ೯ ॥ ದೇವರಘುಕೇಶವರೆ ನಿಮಪದ । ದಾವಲಂಬನಗಾಯ್ತು ತ್ರೈಖಾಂ। ಡಾವನಿಪರೈದಿಹರು ಕೈಗಳಮುಗಿದು ಬಾಗಿಲೊಳೂ ॥ ಸೇವೆಗೊಳಿಸುವಡಂತರಂಗದ । ಭಾವವೆನಲೆಸದಿರ್ಪನಾದಿನ । ದೇವನುದಯಿಸಿದೇಳಿರೆಂದರು ಪಾಠಕಾವಳಿಯೂ ॥ ೧೦ ॥ ಅರಸ ನೀನುಪ್ಪವಡಿಸಾ ದಿನ । ಕರನುಕೆಂಪಿನ ತೆರೆಯಮರೆಯೊಳು । ಬರುತಲಿಹ ಚತುರಂಗಬಲ ಖಗ ವೆಂತರಾದಿಯರೂ ॥ ನೆರೆದು ಕೈಗಳತಾಳಿ ನಿನಭರ । ಹರುಷಗೊಳುತಿಹರೆಲ್ಲ ಸಖ್ಯರು । ನೆರೆದುಬಂದರು ಸಾಮಿ ರಾಘವತಳೆವುದೆಚ್ಚರವಾ ॥ ೧೧ ॥ ಬಂದು ಅವರವರಿಷ್ಟವನುಮನ । ಸಂದು ದಯಮಾಡೆಂಬ ವೇತ್ರುಲು । ಹಿಂದಸುಳಿವೆಲರಿಂದ ಪಕ್ಷಿಯುಗಲಬೆಗಳಕೇಳೀ ॥ ಇಂದಿರೆಯಪ್ರಿಯ ರಾಘವರನೊಲ । ವಿಂದಲಪ್ಪಿದ ಸ್ತ್ರೀಯರಲತೆತೊಡ । ರಿಂದ ಮೆಲನನುಸರಿಸಿ ಯೆದ್ದರು ಸ್ಮರನಲಘನೊಲೂ ॥೧೨॥

ಗೈದುಸ್ನಾನವ ನಿತ್ಯಕರ್ಮವ । ಗೈದು ಷಡುರುಚಿ ಸ್ತ್ರೀಯರೊಡನನು । ಗೈದು
ಬಂದರು ಯಿಟ್ಟಭೂಷಣ ವಸನವನು ತೊಟ್ಟೂ ॥ ಮೈದುಳುಕುವನುರಾಗದಲಿ
ಸಭೆ । ಗೈದಿ ರತ್ನಾಸನದಿ ಕುಳಿತರಿ । ಗೈದಿ ಯರಗಿದ ನೃಪರು ವಿದ್ಯಾಧರರು
ಕುಳಿತಿರಲೂ ॥ ೧೩ ॥ ತೀಡುತಿಹ ಚಾಮರಗಳೆಡೆಯನು । ಗೂಡಿ ಬೀಸುವ
ಆಲಿವಟ್ಟಲ । ಗಾಡಿಕಾತಿಯರೆಡೆಯ ವೀಳ್ಯವರಾಳಜಾಫಲದಾ ॥ ಕೂಡೆಕೊ
ಡುತಿಹ ಯೇಲಕರ್ಪುರ । ಸೂಡುತಿಹ ಪನ್ನೀರುಸ್ರಜದೊಡ । ಗೂಡಿ ಮೋ
ಹನರಾಜಶೇಖರರಂತೆ ಯಸದಿರಲೂ ॥ ೧೪ ॥ ಇರಲು ಯಿಾತೆರದಿಂದ ಬಹು
ದಿನ । ಸ್ಮರವಿಲಾಸದಿ ರಾಮಕೇಶವ । ರರಸುಗೈಯುತ್ತಿರಲು ಸೌಧರ್ಮ್ಮೇಂ
ದ್ರನೆಡೆಯಲ್ಲೀ ॥ ಇರುವ ದೇವನಿಕಾಯದೊಳು ಪುರು । ಪರಮಜಿನನಾಸ್ಯ
ದೊಳು ಪೃಚ್ಚರಿ । ಸಿರುವ ಧರ್ಮವನೊರೆವುತಿರೆ ಸೌಧರ್ಮಪರಿವೃಢನೂ॥೧೫॥
ಇತ್ತ ಸೀತಾರ್ಯೆಯುರು ಬಹುವಿದ । ವೆತ್ತ ತಪದೊಳು ಕೆಲದಿನವು ಕ । ರ್ಮೊ
ತ್ತರಿಸಿ ಪಂಚತ್ವದಿಂದಾ ಆರ್ಯರವತರವಾ ॥ ನೊತ್ತಿ ಅಚ್ಯುತ ಕಲ್ಪದಲಿ
ಪ್ರತಿ । ಪತ್ತಿ ಇಂದ್ರತ್ವದಲಿ ಯಿರಲಿ । ನ್ನತ್ತ ಕೃತವಕ್ತ್ರೈದಿದನು ತಪದಿಂದ
ವಸುಖಕೇ ॥ ೧೬ ॥ ಅತ್ತ ಸೌಧರ್ಮೇಂದ್ರ ಧರ್ಮವ । ಬಿತ್ತರಿಸಲದಕೇಳೀ
ಸದ । ರ್ಮೊತ್ತಮೆನಿಪ ವಿಭಾವಸಂಬನುಮಿಷನು ಕೈಮುಗಿದೂ ॥ ವುತ್ತಮಾ
ಗತಿಯಲದೆ ಮಿಗಿಲನು । ವೆತ್ತ ಜನ್ಮೃತ್ಕ್ರುಷ್ಟವೋ ಯಂ । ಬುತ್ತ ಬೆಸಗೊಳ
ಲು ಲಿದ ಯಿಂದ್ರನು ಶ್ರೇಷ್ಠ ಮನುಜಗತೀ ॥ ೧೭ ॥ ಹೇಗೆ ಯನಲಲ್ಲಿಂದ
ಮುಕ್ತಿಗೆ । ಸಾಗುತಿಹರಲದಾವ ಯಡೆಯೊಳ । ಗಾಗದದರಿಂದೆನಲು ಅದಕೆ
ವಿಭಾವ ಸಮರೇಂದ್ರಾ ॥ ಮೇಗಡೆಯೊಳಿಹ ಬ್ರಹ್ಮ ಕಲ್ಪಜ । ನಾಗಿ ಬಂದಿ
ಲ್ಲಾಗಿ ರಘುವರ । ಗಾಗದೇಕೆ ವಿರಾಗನಂತಿರಲೆಂದನದ ಕೇಳೀ ॥ ೧೮ ॥
ಅನುಜ ಲಕ್ಷ್ಮಣನಗ್ರದೊಳು ಸಂ । ಜನಿತ ಜನ್ಮಾಂತರ ಸ್ನೇಹದಿ । ನೆನೆಯ
ನ್ವೈರಾಗ್ಯವನು ಮಾರುವರುಂಟೆ ಬನಬದ್ಧಾ ॥ ವನುಕರಿಸಿತಾ ರಘುಜನಗಲಿಕೆ
ಜನಿಸಿದಾಕ್ಷಣ ಮರಣ ಲಕ್ಷ್ಮಣ । ಗೆನುತಲಮೆ ವೈರಾಗ್ಯ ರಾಘವನೆಂದನಾ
ಯಿಂದ್ರಾ ॥ ೧೯ ॥ ಅದನು ಕೇಳ್ದು ಜಟಾಯು ದೇವನು । ಹೃದಯಸಖ
ಕೃತವಕ್ತ್ರ ಸುರಹರಿ । ಗೊದಗಿದಾಯುವ ಕೇಳಿ ಬಂದರು ರಾಮನರಮನೆಗೇ॥
ವಿದವ ತೋರಿಸದದ್ರುಶದಿ ಮೃತ । ವದಗಿಸಲು ರಾಘವಗೆ ಮೂರ್ಛೆಯೊಳು
ದುರಿದನು ಯಿತ್ತಪದ್ಮಪೀಠವಿ ಕಂಡರಲ್ಲೆಲ್ಲಾ ॥ ೨೦ ॥ ಕೊಡಲು ಶೈತ್ಯವ ತಿಳಿ
ಯುದಿರೆ ಬೊ । ಬ್ಬಿಡಲು ಅಂತಃಪುರಿಯರದ ಕೇ । ಳ್ದೊಡನೆ ಲಕ್ಷ್ಮಣ ಬಾದು

ನೋಡಂಗಾಂಗ ಧಾತುಗಳಾ ॥ ಕೆಡೆದನಾಹಾ ಅಗ್ರಜನೆಬಿ । ಟ್ನಡೆಯುಬಹು ದೆಂದಳಲಿದಾಕ್ಷಣ । ವಿಡಲುದೇಹವನಾತ್ಮನಾ ಪೆಣನಲ್ಲಿ ಬಿದ್ದಿರಲೂ ॥ ೨೧ ॥ ಘಳಿಲನೆಚ್ಚರಗೊಳಿಸೆ ಸುರರಘು । ನಳಿನನಾಭನ ಕುಣಪನನು ತೊಡೆ । ಯೊಳಗೆ ಕುಳ್ಳಿರಿಸಿತ್ತು ನಾನಾಶೈತ್ಯ ಭೈಷಜದೀ ॥ ತಿಳಿಯದಿರಲಾಲಾಪದೊಳು ಮುಳು । ಮುಳುಗುತಿರಲಲ್ಲಿರ್ದ ಸತಿಯರ । ಬಳಗ ಸಹ ನೃಪರೆಲ್ಲ ಅತಿಶೋಕವನು ಗೈಯ್ಯುತಿರೇ ॥ ೨೨ ॥ ಮುದ್ದಿಸನುಜನ ಮೂರ್ಛೆಯೊಳು ಹೊರ । ಗೆದ್ದು ರಾಘವ ಮೂರು ಸೂಳನು । ಬದ್ಧ ಸ್ನೇಹದಿ ಬಾಚಿ ಪಿಡಿದೊಂದೆರಡು ಘಳಿಗೆಯೊಳು ॥ ಯದ್ದು ಬರದಿರೆ ತಮ್ಮನಗ್ರದಿ । ಬಿದ್ದು ಶೋಕಿಸುತಿರಲು ನೃಪರನು । ಬದ್ಧಧೈರ್ಯದಸ್ಥಿರವನುಲಿದರು ದೇಹಸಂಸಾರಾ ॥ ೨೩ ॥ ಹಿಂದೆ ಯಾರೇರೇನು ಆಗಿಹ । ರಂದಿನೋಲಲ್ಲದಲೆ ನಮಗಿ । ನ್ನೊಂದು ಕಾಲಾಗಿಹುದೆ ಬದುಕಿರಲಿಲ್ಲ ಪರಿಯಂತಾ ॥ ಹಿಂದುಳಿಯದಾಹತವು ಅದನರಿ । ದಿಂದು ದುಃಖವ ನಿಲಿಸಿ ಬೇಡಿ । ನ್ನೆಂದನಂಗದ ನೀಲ ನಳ ಸುಗ್ರೀವ ಜಾಂಬವನೂ ॥ ೨೪ ॥ ಬಂದನಾಗ ವಿಭೀಷಣನು ಯ್ಯೆ । ತಂದ ನಂಗಜ ಬಹಳಬೋಧನೆ । ಯಿಂದಲೊಲಿಯದಿರ್ಪುದಿ ಕುಶಲವರುಲಿದ ನುಡಿಗಳಿಗೇ ॥ ಸಂದು ಗೊಡದಿರಲಾಗ ಕೌಶಲೆ । ಬಂದು ಬೋಧಿಸೆ ಕೇಳದಿರಸ್ವ । ಬಂಧು ಶತ್ರುಘ್ನೈದ ಪೇಳಿದನಗ್ರಜನಿಗಿಂತೂ ॥ ೨೫ ॥ ಪಿತಪಿತಾಮಹರಾದಿ ಬಹಸಂ । ತತಿಯರೆಲ್ಲಿಹರೆಲ್ಲ ಮೃತಸಂ । ಗತಿಯುರಲ್ಲವೆ ಬೇಡವೀದುರ್ನೋಹದಿಂದಿರ್ದಾ ॥ ಗತಿಯಗೇಡೆಂಬಾಗಮವ ತಿಳಿ । ದತುಳಗೀ ಜ್ಞಾನ್ಯಾಕೆ ವುಳಿಯಂ । ಬುತಲಿ ಪೇಳ್ದರು ಸರ್ವಜನಸಹಿತಾಗ ರಘುವರಗೇ ॥ ೨೬ ॥ ಇಟ್ಟು ಶಬವನು ದುಃಖಿಸಲು ಕಡೆ । ಮುಟ್ಟುವದೆ ಬಿಡು ಸಂಸ್ಕರಿಸಿ ಬರ । ಲಟ್ಟೆಯನುತದ ತೆಗೆಯು ಬಹರನು ಬೈದು ಹೊಯ್ದುಟ್ಟೇ ॥ ಮುಟ್ಟುಗೊಡದಿರಲದ್ರುಶದೊಳದ । ನಿಟ್ಟಿಸುವ ನಿರ್ಜರರು ನಿಜರೂ । ಹಿಟ್ಟು ನಿಂದರು ಸಕಲಜನ ರಘುವರನ ಮುಂಗಡೆಯಾ ॥ ೨೭ ॥ ಅಡಗಿ ತೊಡದಿನಕರನ ತಣ್ಬಿಸಿ । ಉಡರೆ ದಿವ್ಯಾಂಗಗಳ ಕಾಂತಿಯ । ಬೆಡಗಿನಲಿ ಭೂಷಾಂಶು ಹೊಳವನು ಬೆಳಗುತಿಹದಿವರಾ ॥ ಬೆಡಗಿಗಾಶ್ಚರಿಯಾಗಿ ಜನರ । ತ್ತಿಡಲು ಅಕ್ಷಿಗಳೆಲ್ಲ ನಗೆ ಮುಖ । ದೊಡಗಿದರು ಕತ್ತೆತ್ತಲಿಲ್ಲಾ ರಘುಜನವರತಾ ॥ ೨೮ ॥ ನೋಡಿಯಾತನ ಮೋಹಕಾಶ್ಚರಿ । ಮಾಡಿ ಮಹಾಸ್ವಾಮಿ ನೀನೆಮ್ಮ । ನೋಡಲಿಲ್ಯಾಕೆನಲು ಕೇಳದರೀತಿ ದುಃಖವನೂ ॥ ಮಾಡುತಿರಲಾ ರಘುಜ ಪೂರ್ವದ । ಗಾಡಿಯುಲಿ ಆಭರಣ

ಸಹನಲಿ । ದಾಡುತ್ತೈದೆ ಜಟಾಯು ಪಕ್ಷಿಯು ದೇವನದ ತಾಳ್ದಾ ॥ ೨೯ ॥
ಉಳಿದ ದೇವಕೃತಾಂತ ವಕ್ತ್ರನ । ಕೆಳೆಯ ತಾಳಲು ಸರ್ವರಾಶ್ಚರಿ । ಗೊಳು
ತಲಿರೆ ಕೇಳೆಲವೊ ರಾಘವ ದೈತ್ಯನೊಧೆಯಿಂದಾ ॥ ಬಳಲಿ ಕಂಠಗತಾಯುವಿಲಿ
ಅರೆ । ಘಳಿಗೆಯೊಳಗುಪದೇಶದಿಂದಿವ । ದೊಳಗೆ ಪುಟ್ಟಿಸಿದೆನ್ನ ನೋಡು
ಜಟಾಯುವೆನೆ ದೇವಾ ॥ ೩೦ ॥ ನಿನ್ನೆ ನಿನ್ನೊಡಂ ಬಡಿಸಿ ದೀಕ್ಷೆ । ಯೊಳಿ
ನ್ನುಪಡದೆನು ದೇವಗತಿಗಿ । ನ್ನುಂನತವೆ ನರಕೀಟಕಾಂಗವು ನಾನೆಕೃತವಕ್ತ್ರಾ॥
ನನ್ನು ನೋಡೆಮುದೇಹವೆಲ್ಲಾ । ವಿನ್ನು ಯಿಹರೂಪೆಲ್ಲಿ ನಿನಗವ । ಗನ್ನು ಯಿಹ
ವರಿಗಲದೆ ಸ್ನೇಹವು ಸತ್ತ ಬಳಿಕುಂಟೇ ॥ ೩೧ ॥ ಹಿಂದಣನ್ವಯದ್ವಂದದೊ
ಳುನಿಮ । ಗೆಂದು ಮುಂದಿನ್ನಾಹಗತಿಬೇ । ರೆಂದು ತದ್ಭವ ಮೋಕ್ಷಗಾಮಿ
ಯು ನೀನುಯಂಬುದನೂ ॥ ಅಂದೆ ಸೀತಾದೀಕ್ಷೆಯೊಳು ಕೇ । ಳಿಂದು ಹಂ
ಬಲಿಸುವಡೆ ಭ್ರಮೆ । ನೆಂದು ನಗರೇಜನರು ರಾಘವನೆಂದ ಕೃತವಕ್ತ್ರ ॥೩೨॥
ಹಿಂದೆ ಜಾನಕಿಯೆದುರಿನೊಳು ಕುಣಿ । ದಂದ ಕಿಂಕಿಣಿರವದಿ ರಘುಜನ ।
ಮುಂದೆ ಕುಣಿವ ಜಟಾಯುದೇವನ ನೋಡಿ ಜನರೆಲ್ಲಾ॥ ಬಂದುರವಗೊಳುತಿರ
ಲುಅದಕಂ । ನಿಂದ ರಾಘವನೋಡುತಿರೆ ಹರಿ। ಯಂದಗೊಳಲಾ ಪಕ್ಷಿಶಾರ್ಜ್ಞ
ಯನಾಂತು ನಿಂದಿರಲೂ ॥ ೩೩ ॥ ಅದನು ಕಂಡೆನತಂನು ಲಕ್ಷ್ಮಣ । ನಿದಿ
ಗೊಹೆಣನಾರೆಂದು ವುರುಳಿಸಿ । ಸದಯಗೊಂಡ್ಬಹ ರಘುಜನೆದುರಿಗೆ ಭರತನಂ
ತಾದಾ ॥ ಅದಕು ಅದಕಾಶ್ಚರಿಸುತಿರೆ ಜನ । ರದನು ಬಿಟ್ಟ ಶರಥನರೂಪನು।
ವದಗಿಯಾದನು ದೇವರೂಪನು ಜನರು ಆಶ್ಚರಿಸೇ ॥ ೩೪ ॥ ಯವೆಯನಿಡು
ವರಿಗಿಷ್ಟು ರೂಪನು । ದಿವಿಜ ತೋರಲು ಜನರು ತಲೆಯೊಲೆ । ಯುವದ
ನೋಡಿದ ರಘುಜನಿಂದೆಡೆಯುಲ್ಲೆ ಬೆರಗಾಗೀ ॥ ಶ್ರವಕೆ ಬದಲಿಟ್ಟಗರುಲಕ್ಷ್ಮೀ।
ದವನ ಶಬವತ್ತ್ರೈದಿ ಸಂಸ್ಕರಿ । ಸವರು ಬರಲಾಕ್ಷಣಕೆ ರಘುಜನು ದಿವಿಜರಿದ್ದೆ
ಡೆಗೇ ॥ ೩೫ ॥ ನೋಡಿ ಯಮುನಾಲೋಚನೆಯ ನೀ । ಮಾಡಸಲುವುದೆ
ಯನುವಸೇವರ । ನೋಡಿ ನೀನೆ ಜಟಾಯು ಕೃತವಕ್ತ್ರೀತನೀತೆರವಾ ॥ ಮಾ
ಡಿತೋರಿದಿರೆಂದು ಮೋಹಿನಿ । ಗಾಢತಮ ಸುಜ್ಞಾನ ದಿನಕರ । ಮಾಡಿಕೆಡಿ
ಸಿದ ರಘುಜನೆದೆಯೊಳು ಸರಿಯೆ ಜಾಣರಿಗೇ ॥ ೩೬ ॥ ತಿರುಗಿತಾರಘುಜಂಗೆ
ಸುಜ್ಞಾ । ನರೆಘಳಿಗೆಗಾ ಶಬವಸಂಸ್ಕರ । ಗರೆವುವೆನೆನಗೆವೆರಪಿನ್ವೈದಂತೆಸಗ
ಲಾವೆಡೆಯಾ ॥ ಹರಿಯ ಪೀಠವಿ ಕುಳಿತು ಖಗನೃಪ । ತರುಣಿನಾತೆಯರಾ
ತ್ಮಜರಿಗ । ಸ್ತಿರದ ಅನುಪ್ರೇಕ್ಷೆಗಳ ಪೇಳಿದ ಮುಕ್ತಿರಮೆರಪಿಕಾ ॥ ೩೭ ॥

ಅಟ್ಟೆಭ್ರಾಂತಿಯಹೇಯವನು ಮನ । ತಟ್ಟೆಸುತ ತ್ರಿಪಿವಿಷ್ಟರೆಮಗನು । ರಿಟ್ಟೆವುಪದೇಶದೊಳು ಲಕ್ಷ್ಮಣನಾಯು ಸಂಪೂರ್ಣಾ ॥ ವಟ್ಟುದೆನುತೆಲ್ಲವನು ವಿಸ್ತರ । ವಿಟ್ಟು ರಘುವರನಿಂದಲಪ್ಪಣೆ । ಬಟ್ಟು ನಡೆದ ಜಟಾಯು ಕ್ರುತ ವಕ್ರಮರರಂತರಕೇ ॥ ೩೮ ॥ ಅತ್ತಲಮರರ ಕಳುಹಿ ತನುಧನ । ಪೆತ್ತಸುತ ಸತಿ ಆಯುಯೌವ್ವನ । ದತ್ತಮಿತ್ರರುಮಿಂಚು ಘನದೊಡ್ಡಿನೊಲು ಅಸ್ಥಿರವೂ । ಮತ್ತೆ ಗಿರಿನಗರಾದಿ ಚತುರ್ದಳ । ವೆತ್ತತಾನೆತ್ತೈದೆ ವೃತಬಂ । ದತ್ತಕಾಯ್ವರುದಾರು ನಂಬಿರಲಾಗದೆನೆ ರಘುಜಾ ॥ ೩೯ ॥ ಪಡೆದ ದ್ರವ್ಯವನುಣಲು ನಂಟರು । ಮಡದಿಸುತರಾದ್ಯಲ್ಲರುಂಟಂ । ತ್ಯಡಸೆ ನಿರಯದ ಹಿಂಸೆಯಡೆಗೇರಿಲ್ಲ ತಾನಲದೆ ॥ ಪಡೆದು ಸಲಹಿದರೆಲ್ಲ ಕಣ್ಕ । ಣ್ಬಿಡುವರಾತ್ಮನ ಹೊಂದಿದೊಪುಬಿಡು । ಗಡೆಯೊಳಿಹವಘ ಪುಣ್ಯವೆರಡಲದಿಲ್ಲವನ್ಯೋಸ್ತ್ರೂ ॥ ೪೦ ॥ ನೆರೆದ ಮಲ ದುರ್ಗಂಧ ಮೂತ್ರದ । ನೆರವಿ ಮಾಂಸದಿ ಸಪ್ತಧಾತುಗ । ಳೊರಿಸಿದಂಗೆತ್ತಾತ್ಮನಿಹ ನಿರ್ಮಲವು ತಾನೆತ್ತಾ ॥ ಅರಿಯು ಮಿತ್ರನು ಪಿತನು ಸುತಮಾ । ತರರು ಸತಿ ಬಂಟೊಡೆಯನೀಯುವ । ತರದ ಸಂಸಾರಾಬ್ಧಿಹಗರಣ ಬಡುವನೀಯಾತ್ಮಾ ॥ ೪೧ ॥ ದುರಿತದಿನ್ನಾರಕನು ಪುಣ್ಯಾದಿ । ಸುರನು ಸಮನೀಮರ್ತ್ಯಕಿಂಚಿ । ದ್ದುರಿತ ಪಿರಿದಾಗಾಹ ತಿರುಕನು ನಿರುತಲೀಯಾತ್ಮಾ ॥ ನಿರಿಸದೀತನು ವಾಗ್ಮನವ ಸಂ । ಚರಕೆ ಬಿಟ್ಟುದರಿಂದ ಚತುರ್ಗತಿ । ಶರಧಿಯೊಳುಗಾಳಾಪಿಸುವ ಕುಶಕೇಳುಯನೆ ರಘುಜಾ ॥ ೪೨ ॥ ತೊಡಗಿ ಗುಪ್ತಿಯ ಮೂರು ಸಮಿತಿಗ । ಳಡಸಿಯೈದೈದಾಮುಹಾವ್ರತ । ತೊಡಗಲೇನಾಶ್ಚರಿಯೆ ಪಂಚಮಗತಿಯು ಆತ್ಮನಿಗೇ ॥ ಬಿಡದೆ ಚಿತ್ತಿನ್ನೆತ್ತಲಾತ್ಮನೊ । ಳಡಸಿ ಮುತ್ತಳಿಯಂತೆ ಧ್ಯಾನ । ತೊಡಗಿ ಕುಳಿತಿರೆ ಕರ್ಮನಿರ್ಜರೆಯುಂಗದೆನೆ ರಘುಜಾ ॥ ೪೩ ॥ ಆದಿಯಿಂದಾತ್ಮನನು ಕರ್ಮವು । ವೇಧಿಸುವದನು ಹರಿಸೆ ಜೀವದ । ಯಾದಿಸದ್ಧರ್ಮಲದೆ ಬೇರಿಲ್ಲೊಂದು ಪರಯತ್ನಾ ॥ ಬೋಧೆಯರುಹಾಗ್ನಿಯಲಿ ನಿಷ್ಠುರ । ವಾಡ ಕರ್ಮೇಂಧನವ ದಹಿಸಲು । ಆದಪುದು ಸಾಯೋಜ್ಯ ಕೇಳಣುಮಾನ್ಯನೆನೆ ರಘುಜಾ ॥ ೪೪ ॥ ಇಂತು ಅನುಪ್ರೇಕ್ಷೆಗಳ ಪನ್ನೆರ । ಡಂತು ಭಾವಿಸಿ ಜನಕೆ ಹಿತಕರ । ವಂತಿಕೆಯುನನುಗೊಳಿಸಿ ವೈರಾಗ್ಯವನು ಮನದಲ್ಲೀ ॥ ಚಿಂತಿಸಿದನಣುಮಾನ್ಯನಾದಿಯ । ರಂತರಿಸದೀಕ್ಷಿಸಲು ಹೇಯುವೆ । ಚಿಂತಿತಾರ್ಥಮಣಿಯೇ ಶುಭಮಸ್ತೆನಲು ಜನರೆಲ್ಲಾ ॥ ೪೫ ॥ ಕರೆದು ಕುಶಲವರನ್ನು ರಾಜ್ಯವ । ಧರಿಸಿರೆನೆ ನಿಮಗಿಂದಮುನ್ನವೆ । ತೆರಳುವರೆ ಸರಿಯನಲು ನೋಡಲು

ಪೇಳ್ದ ಶತ್ರುಘ್ನಾ ॥ ಇರೆನು ನಾನೆಲಂಕುಶನ ಮಗ । ಗೊರಿಸಿ ಭಾರವ ಸರ್ವ
ಜನ ಸಹ । ತೆರಳಿ ಸೂವ್ರತರಲ್ಲಿ ದೀಕ್ಷೆಯ ಧರಿಸೆ ರಾಘವನೂ ॥ ೪೬ ॥
ಅನಿಲಸುತ ಸುಗ್ರೀವ ಜಾಂಬವ । ಯಿನಜ ನಳ ನೀಲಾವಿಭೀಷಣ । ಕೊನೆಯ
ಶತ್ರುಘ್ನಾ್ಯದಿ ವೀರಾಧಿತನು ತನುತನ್ಮಾ ॥ ತನಯರಿಂಗಿಳೆ ಯಿತ್ತು ಕುಶ
ಲವ । ರನುಪನಿಂದಾಶ್ರಮುವ ಕೊಳಲವ । ರೊನಿತೆಯರು ಕೌಶಲ್ಯೆ ಸಹ ಕೈಕೊ
ಳಲು ದೀಕ್ಷೆಯನೂ ॥ ೪೭ ॥ ವಿನುತ ಶ್ರೀಮತ್ಯಾರ್ಯೆಯಲಿ ಹರಿ । ವನಿತೆ
ರಾದಿಯರೆಲ್ಲರಾಶ್ರಮು । ವನುಕರಿಸಲಲ್ಲಿನ್ನು ಬಹುಜನ ತಪವನನುಕರಿಸೇ ॥
ಮುನಿಪರಾಘವನಾಗ ಮುದಸಾ । ರನುವಿನೊಳು ಮೂಲೋತ್ತರದ ಗುಣ ।
ದನುವು ಶೀಲಾಚಾರದೊಳಗುತ್ಕೃಷ್ಟನಾಗಿರಲೂ ॥ ೪೮ ॥ ಸಮಿತಿಗುಪ್ತಿಗ
ಳಾಮುಹಾವ್ರತ । ಮುಮುರಿದೋಷವಹರಿಸಿ ಪರುಮಾ । ಗಮುವನನುಕರಿಸಿಕ್ಷು
ಚಾಪನ ಹಮ್ಮನಡಿಗಿಸಲೂ ॥ ಕಮಲಬಾಣನಿಗೇಕೆನೆ ಬಿ । ಲ್ಸು
ಮುನಸಃಖ್ಯಯೋಗಿಯನು ಕ್ರಮು । ತಮಿಸಲಾರದರೆಂದರಾಲೋಕಿಸಿದ ಜನ
ರೆಲ್ಲಾ ॥ ೪೯ ॥ ಮೂಲಗುಣ ದಶಧರ್ಮವನು ಕೊ । ಟ್ಟಾಲಿತದ ಶ್ರೀ
ಮುಕ್ತಿಬಾಣದಿ। ಕೀಲಿಸಿದ ಪರಿಷಹದ ಭಟಸಂತತಿಯುಜಾಳಗಳು॥ ಪಾಲಿಸಿದ
ಸನ್ಮಾರ್ಗದೊಳು ಕಡು । ಶೀಲನೆನಿಪ ರಾಮುಯತಿ ಮುನಿ । ಜಾಲತಾರಾಂ
ಗಣದ ಚಂದ್ರನಾಕಾಶ ವೀಚಿಯಲಿ ॥ ೫೦ ॥ ಕೇವಲಜ್ಞಾನವನು ತಾಳುವ ।
ಭಾವವರಿಪುವ ತೆರದಿ ದ್ರವ್ಯಸು । ಭಾವ ಸರ್ವಾವಧಿಯು ಪುಟ್ಟಿತು ರಾಮು
ಯತಿಪತಿಯೂ ॥ ಆವಕಾರಣ ಲಕ್ಷ್ಮಣಗು ಯುನ । ಗೀವಿನೋದವುಯುಂದು
ಭವಬಂ । ಧಾವಲಂಬನ ತಿಳಿದು ನೋಡಿದನಾತನಾಯುಷವಾ ॥ ೫೧ ॥
ಕುಂದಿದಿಪ್ಪತ್ತೊಂದು ಅಬ್ಧವ । ಸಂದ ಪನ್ನೆರಡ್ಸಾಸಿರವರ । ವಿಂದನಾಭನ
ಆಯು ಪೂರ್ವದ ವಾಸುದೇವರೆಡೇ ॥ ಸಂದದರಿದುಗ್ರೋಗ್ರದಲಿ ಮನ ।
ಸಂದು ಯಿಾರಾರನಶನದಿ ಬರ । ಲಂದು ಪಾರಣೆಗೆಂದು ನಂದನವೆಂಬ ನಗರ
ದೊಳೂ ॥ ೫೨ ॥ ಪುರದ ಜನರಾಮುನಿಯು ತಪದುರು । ತರನ ತನುಕಾಂತಿ
ಯನು ಆಶ್ಚರಿ । ಗರೆದು ನೋಡುತಲಿರಲು ರಾಮುಯತೀಂದ್ರ ಭಾವಲಿಗೇ ॥
ಬರುವದರಿದಾನಂದಿವರ್ಧನ । ಧರಣಿಪತಿಯು ದುರ್ವರಲು ಅನ ಬರು । ವರೆಗೆ
ಕ್ರಮುವರಿಯದರು ಕರೆದನು ಪುಣಲು ಬನ್ನೆನುತಾ ॥ ೫೩ ॥ ಆಗೆ ಚರ್ಯಾ
ವಿಘ್ನಮುತ್ತಾ । ಯೋಗಿ ಪನ್ನೆರಡನಶನನ ತಾ । ಳ್ದಾಗ ಪುಗೆ ಜನಪದವ
ಕಾಂತಾಚರ್ಯವಲದೆಂದೂ ॥ ಯೋಗನೊಳಗಿರೆ ನಂದಿವರ್ಧನ । ನಾಗ

ವಿಷಮಾಶ್ಚೈಯ್ಯಲೊಂದಿನ। ವಾಗಹನಕವನರಸಿ ಬಂದಳು ಸಖಿಯರೊಡ ನರಸೀ ॥ ೫೪ ॥ ಬರುವ ಸಮಯದಿ ಜಿನರಿಗಪ್ರತಿ । ಗರೆದು ಪೂಜಿ ಸುತಿರಲು ಪ್ರಿಯನಿರ । ವರಿದು ಅಡಿಗೆಯನಾಡಿಪಿದಳಾ ಕನ್ನೆ ಕುಲರನ್ನೇ॥ ಗುರುಗಳಿಪ್ಪತ್ನಾಲ್ಕು ದಿನದಂ । ತರದಿ ಪಾರಣೆಗೆಂದು ಬರುವದ । ನರಿದ ಳಾಸತಿ ಪ್ರಭಾವತಿ ಬೇಗ ಶುಚಿಯಾಗೀ ॥ ೫೫ ॥ ಬರುವರೀಕಾಂತಾರ ಚರ್ಯದ । ಗುರುಗಳೆನಲಾ ನಂದಿವರ್ಧನ । ನರಿದು ಕ್ರಮದೊಳಗೀಯ್ಯ ಲಾಹಾರವನುರೈವರುಷಾ॥ ಅರಲಮಳೆ ದುಂದುಭಿಯುರವಬಂ । ಧುರದ ಮಾರುತ ಜಯ ಜಯ ಸ್ವನ । ವೆರಸು ಪಂಚಾಶ್ಚರ್ಯವಾಗಲು ಪಾತ್ರದ ತಿಶಯಕೇ ॥ ೫೬ ॥ ಹೊಗಳೆ ಧಾತ್ರುವ ನಿರ್ಜರರು ಪದ । ಯುಗಲ ಕೊಂದಿಪಿ ನಂದಿವರ್ಧನ । ನಗರಕೈದಲು ರಾಮಯತಿ ಸಂಚರಿಸುತಿರುತತ್ತಾ॥ ನಗಧರೆತ್ತಿದ ಸಿದ್ಧಶೈಲದಿ । ಮಿಗಿಲ ಶುಕ್ಲ ಧ್ಯಾನದಲಿ ಪದ । ಯುಗವನ ಗಲದೆ ನಿಂತ ಕೈಯಿಳೆಬಿಟ್ಟು ಯೋಗೀಂದ್ರಾ ॥ ೫೭ ॥ ಅರಿದು ಸೀತೇಂದ್ರ ವಧಿಯಲಿ ಮುನಿ । ವರರು ಚರಿಸಲು ಖಚರಸ್ತ್ರೀಯ್ಯರ । ನೆರವಿಯಲಿಜಾ ನಕಿಯರೂಪಿನೊಳೈದಿ ಆಗೆನಗೇ ॥ ಇರದೆನೀದೀಕ್ಷೆಯನು ಧರಿಸದೆ । ತೊ ರೆದು ಬಂದದನೆನ್ನ ಭೋಗವ । ನೆರೆದು ಕೂಡೀ ದಿವ್ಯನಾರಿಯರೆಂದು ಮುದ್ದಿ ಸುತಾ ॥ ೫೮ ॥ ಇನ್ನು ಯೌವ್ವನವುಂಟು ಮುಂದಿದ । ನನ್ನುಸಾಧಿಸ ಬಹುದು ಯಿಾತಪ । ಸನ್ನ ಬಿಡು ಪ್ರಿಯನೆಂದು ನಾನಾ ಬಗೆಯ ವಿಕಳತೆ ಯಾ ॥ ನನ್ನು ಪುಟ್ಟಿಸಲಂತರದಿ ಸುರ । ನೆನ್ನುವದ ತಿಳಿದಿಟ್ಟು ಮೌನವ। ಭಿನ್ನಗೊಡದಿರೆ ಮೆಚ್ಚಿ ಮುನಿಗಳ ಧೈರ್ಯಕಾದೇವಾ ॥ ೫೯ ॥ ಬಿಟ್ಟು ಕನ್ಯಾರೂಪ ಆಮುನಿ । ಗಿಟ್ಟುವಂದನೆ ಅಚ್ಯುತನು ದಿವ । ಪಟ್ಟಣಕೆನಡೆ ದಿತ್ತ ಶುಕ್ಲಧ್ಯಾನನಿಷ್ಠೆಯೊಳೂ ॥ ಬಿಟ್ಟಸೂಡಿಯೊಳಿರಲೂ ಆಗಡಿ। ಯಿಟ್ಟು ಬರಲಾ ಮಾಘಮಾಸದ । ಮೊಟ್ಟ ಮೊದಲಾಗಿರ್ದ ದ್ವಾದಸಿಯ ಪರರ್ಝಾ ವದೊಳೂ ॥ ೬೦ ॥ ಪಿಡಿದ ಘಾತಿಕ್ಷಯದಿ ಸುಜ್ಞಾ । ನೊಡೆದು ಬಿಲ್ಲೈ ಸಾಸಿರಂತರ । ನಡೆದು ದಿನಕರ ಕೋಟಿಭಾಸದಿ ಪೊಳೆಯೆಲನಘೇಂದ್ರಾ ॥ ನಡುಗಲಾಸನ ಸುರರು ಸಹ ಪರಿ । ವೃಡನು ಯೈತಂದ್ಗಂಧಕುಟಿಯನು । ತೊಡಗಿ ದ್ವಾದಶಗಣವ ವಿರಚಿಸುತದರ ಮಧ್ಯದಲೀ ॥ ೬೧ ॥ ಇರುವ ತ್ರೈಮೇಖಲೆಯ ಪೀಠಾ । ಗ್ರಿರುವ ಸರಸಿಜದಂತರದಿ ಜಗ । ಧೆರೆಯತೇ ಜೋಮಯದಿ ಶೋಭಿಸುತಿರಲು ಚತುರ್ವಿಧದಾ ॥ ಸುರರು ಪೂಜೆಯುಗೈದು

ಆನತ । ಗರೆದು ಭೇರೀ ನಾದನನು ವಿ । ಸ್ತರಿಸೆ ಕೇವಲಬೋಧನಾದ
ನು ಲೋಕಪಾವನನೂ ॥ ೬೨ ॥ ಚರಿಸಿ ಲೋಕದಿ ಗಂಧಕುಟಿಸ ।
ಚ್ಚರಿತ ಭವ್ಯಾಮೃತವ ಜನಕಾ । ವರಿಸುತಿರೆ ಕೆಲವಗಲು ಆತನಿಗಿನ್ನು
ವುಚ್ಛೇದಾ ॥ ಇರಲು ಬಿಲ್ಲೀರೆಂಟು ಆಯುಷ । ವಿರಲು ಮೂರ್ಸಾಸಿರ
ವು ಸ । ಚ್ಚರಿತೆ ಯೊಳಗೊರ್ತಿಸಿದನಾ ರಘುದೇವ ದೇವೇಶಾ ॥ ೬೩ ॥
ಚರಿಸಿ ಬಹುದಿನ ಆಯುಷವು ಸಂ । ವರಿಸಿ ಬರುವರೆಗಿರ್ದು ತುಂಗಿಯ।
ಗಿರಿಯೊಳಗೆ ಸೂಕ್ಷ್ಮತ್ವಯೋಗದಿ ಗಂಧಕುಟಿಯನ್ನೂ ॥ ತೊರೆದು ಕೆಡಸಿ
ಯಘಾತಿಕರ್ಮವ । ನೆರೆದ ನಿರ್ವಾಣಾಂಗನೆಯ ಭ । ತ್ರಿರವಿನೊಳಗಿಹ
ಮೋಕ್ಷಪುರಿಯೊಳನಾಮಿ ಸರ್ವಜ್ಞಾ ॥ ೬೪ ॥ ಇತ್ತಲಂಗಜನಾ ವಿಭೀ
ಷಣ । ನುತ್ತಮಂಗದನಾದಿ ಮುನಿಗಳು । ವತ್ತಿ ಘಾತಿಯಘಾತಿಯನು
ಶಿವಸೌಖ್ಯ ನೆಲೆಯನ್ನೂ ॥ ಪತ್ತಿದರು ಕೌಶಲ್ಯೆ ಮೊದಲನು । ಮೆತ್ತಬಹ
ಳಾರ್ಯೆಯರು ಸುರಷಂ । ಪತ್ತನೈದಿದರೆಸಗಿದುತ್ತಮ ತಪಕೆ ಸರಿಯಾಗೀ
॥ ೬೫ ॥ ಅರಿದು ದೇವೇಂದ್ರವಧಿಯಲಿ ಸುರ । ನೆರವಿಯೊಳಗೈತಂದು
ತತ್ಕ್ರಮ । ವೆರಸಿದಾ ನಿರ್ವಾಣಕಲ್ಯಾಣವನು ವಿರಚಿಸುತಾ ॥ ಗರೆದು
ನಾಟ್ಯವ ಮೂರು ಲೋಕದ । ಯರೆಯಜಿನ ಸರ್ವಜ್ಞ ಚಿದ್ಗುಣ । ನರುಹ
ಕೇವಲಿಯೆಂದು ಹೊಗಳ್ಯೆದಿದನು ದೇವೇಂದ್ರಾ ॥ ೬೬ ॥ ಅಲ್ಲಿ ಸಿದ್ಧಾವ
ನಿಯ ನಿರ್ನಯ । ದಲ್ಲಿ ಯಾಹನಂತ ಚತುಷ್ಟಯ । ದಲ್ಲಿ ಚಿದ್ಗುಣ ನಿರಘ
ನಿಶ್ಚಲ ನಿತ್ಯ ಸಿದ್ಧತ್ವಾ ॥ ದಲ್ಲಿ ನಿಂದಿಹ ಸ್ವಾಮಿಃಯನು ಭಜಿ । ಸಿಲ್ಲಿ
ಸುಖ ಸತ್ಕೀರ್ತಿ ಕಡೆಗೆನ । ಗಲ್ಲಿ ಸಂಪದವೀಯ್ಯಲೆನುತವನೀಶ ಕೇಳೆಂ
ದಾ ॥ ೬೭ ॥ ಕೇಳಿದ್ಯೆ ಶ್ರೇಣಿಕನೆ ರಘುಜ । ಬಾಳಿ ಮುಕ್ತಿಯಪಡೆದ
ಕಥೆಯಿದು । ಹೇಳಿಹುದು ಯಂಭತ್ತ್ರಿದಧ್ಯಾಯದಲಿ ಸಂಪೂರ್ಣ ॥
ತಾಳಿದನುಪಮ ಕಥೆಯ ಕೇಳಿದ । ಪೇಳಿ ಬರೆವರಿಗಹುದು ಮುಕ್ತಿಯು ।
ಮೇಳವೆನೆ ಗೌತಮರು ಸಂತಸದಾಳಿ ಶ್ರೇಣಿಕನೂ ॥ ೬೮ ॥ ಯದ್ವಾ ಆ
ಮಹವೀರ ಸಲೆಸುಖ । ಬದ್ಧ ಹರಿಹರ ಜಿಷ್ಣು ಚಿನ್ಮಯ । ಶುದ್ಧಕೇವಲ
ಜ್ಞಾನ ಲೋಚನ ವಿಶ್ವತೋಮುಖನೇ ॥ ಸಿದ್ಧ ರಕ್ಷಿಪುದೆಂದು ಆನತಿ ।
ಸಿದ್ದು ಗೌತಮರಡಿಗೆ ವಂದಿಸಿ । ಮುದ್ದು ಚೇಳಿನಿ ಸಹಿತ ನಗರಿಗೆ ಬಂ
ದನೊಯ್ಯುವದೀ ॥ ೬೯ ॥ ಮಂಗಲವು ಚವ್ವೀಸ ತೀರ್ಥಕ । ಪುಂಗ
ವರಿಗೆದ ರಚಿಸಿ ವಾಣಿಗೆ । ಮಂಗಲವು ಶ್ರೀಮುನಿ ಮಹಾತ್ಮರಿಗಿದನು

ರಕ್ಷಿಸುವಾ ॥ ಶ್ರೃಂಗರದ ಯಕ್ಷರಿಗೆ ಯಿನ ಶಶಿ । ರಂಗು ಯಿರುವರೆಗೆಲ್ಲ ಜನಜನ । ರಂಗಣದಿ ವಿಸ್ತಾರ ಮೆರೆಯಲಿ ಕಾವ್ಯ ಮಂಗಲದೀ ॥ ೭೦ ॥ ಕಲಿಲಹರ ಮುನಿಸೂವ್ರತಾಂತ್ಯದಿ । ಚಲಿತರಾದಾ ರಾಮ ಲಕ್ಷ್ಮಣ । ರೊಲವಿನೀ ಕರ್ನಾಟ ಕಾವ್ಯಕೆ ಶ್ರೇಷ್ಠರೆನಿಸಿರುವಾ ॥ ಲಲಿತದಲಿ ಶ್ರೀ ಚಂದ್ರಸಾಗರ । ರೊಲಿದು ವಿರಚನೆ ಗೈದರಿದ ಮನ । ನೊಲಿದು ಲಾಲಿಸಿ ಮುಕ್ತಿಯರಸನ ಕಥೆಯು ಸದ್ಬುಧರೂ ॥ ೭೧ ॥

ಅಂತು ಸಂಧಿ ೮೫ ಕ್ಕಂ ಪದನೂ ೪೮೬೭ ಕ್ಕಂ ಸಂಪೂರ್ಣಂ
ಮಂಗಳಮಹಾ ಶ್ರೀ. ಶ್ರೀ. ಶ್ರೀ.

—॥ ಶ್ರೀ ಮುನಿಸುವ್ರತಾಯ ನಮಃ ॥—

ಪ್ರಾಗಾಸೀ ದ್ಧರಿವರ್ಮನಾಮ ನೃಪತಿ ರ್ಲಬ್ಧ್ವಾ ತಪೋಬದ್ಧವಾ ।
ನ್ನಾಮಾಂತ್ಯಂ ಬಹುಭಾವತಶ್ಚ್ಯುಚಿ ಮೃತಿರ್ಯಃಪ್ರಾಣತೇಂದ್ರೋ ಭವತ್ ॥
ಚ್ಯುತ್ವಾಸ್ಮಾನ್ಮುನಿಸುವ್ರತೋ ಹರಿಕುಲ ವ್ಯೋಮಾಮಲೇಂದು ರ್ಜಿನೋ ।
ಭೂತ್ವಾ ಭವ್ಯ ಕುಮುದ್ವತೀಂ ವ್ಯಕಸಯ ಲ್ಲಕ್ಷ್ಮೀಂ ಪ್ರದಿಶ್ಯಾತ್ಸವಃ ॥ ೧ ॥

ಯಕ್ಷೌ ತೌ ಬಹುರೂಪಿಣೀಚ ವರುಣೋ ಗಶ್ಚಂಪಕೋ ಮುಕ್ತಿಭೂ ।
ಸ್ಸಂಮೇಧಃಶ್ರವಣೋಭ ಮುನ್ನತಿರಥೋ ಕೋದಂಡಕಾವಿಂಶತಿಃ ॥
ಪದ್ಮಾವತ್ಯಭಿದಾಂಬಿಕಾ ಸರಸಿಜಂ ಚಿಹ್ನಂ ಸುಮಿತ್ರೇಟ್ಪಿತಾ ।
ಯಃ ಷಷ್ಠ್ಯಸಾ ವಸಿತೋಸ್ತು ರಾಜಗೃಹರಾಣ್ನಸ್ಸುವ್ರತೇಶಶ್ಶ್ರಿಯೈಃ ॥ ೨ ॥

ಅಷ್ಟಮ ಬಲದೇವ ರಾಮಚಂದ್ರ ಭವಾವಳಿ.

ಇಹಸಚಿವತನೂಜ ಶ್ಚಂದ್ರ ಚೂಳಸ್ಯ ಮಿತ್ರಂ ।
ವಿಜಯ ವಿದಿತನಾಮಾ ಜಾಯತಸ್ವಸ್ತೃತೀಯೇ ॥
ಕಥಿತ ಕನಕಚೂಳೋ ಲಾಲಿತೋ ದಿವ್ಯ ಭೋಗೈ ।
ರಭವದಮಿತ ವೀರ್ಯ ಸ್ಸೂರ್ಯ ವಂಶೇಸರಾಮಃ ॥ ೧ ॥

ಅಷ್ಟಮ ವಾಸುದೇವ ಲಕ್ಷ್ಮಣನ ಭವಾವಳಿ.

ಆಸೀದಿ ಹೈವ ಮಲಯೇ ವಿಷಯೇ ಮಹೇಶ ।
ತುಶ್ಚಂದ್ರಚೂಳ ಇತಿ ದುಶ್ಚರಿತ ಸ್ಸಮಾಸ್ಯ ॥
ಪಶ್ಚಾತ್ತಪೋ ಜನಿಸುರಸ್ಸ ಸನತ್ಕುಮಾರೇ ।
ತಸ್ಮಾದಿಹೈತ್ಯ ಸಮಭೂ ದ್ವಿಭುರರ್ಧಚಕ್ರೀ ॥ ೧ ॥

ಅಷ್ಟಮ ಪ್ರತಿವಾಸುದೇವ ರಾವಣನ ಭವಾವಳಿ.

ದೇಶೇಸಾರ ಸಮುಚ್ಛಯೇ ನರಪತಿ ರ್ದೇವೋ ನರಾದಿಸ್ತ್ವತ ।
ಸ್ಸೌಧರ್ಮೇ ನಿಮಿಷೋ ಭವತ್ಸುಖನಿಧಿ ಸ್ತಸ್ಮಾಚ್ಚ್ಯತೋಽಸ್ಮಿನಭೂತ್ ॥
ಆಕ್ರಾಂತಾಖಿಲ ಖೇಚರೋಜ್ವಲಶಿರೋ ಮಾಲೋವಿನಮ್ಯನ್ವಯೇ ।
ಸ್ತ್ರೀಲೋಲೋ ನಿಜವಂಶಕೇತು ರಹಿತಾ ಚಾರಾಗ್ರಣೀ ರಾವಣಃ ॥ ೧ ॥

Sri Bharati Bhavana Press, Chamarajnagar-1939.